EGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಸಚ್ಛಾಸ್ತ್ರಸೀಮಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪಠಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೫ನೇ ಜನವರಿ ೧೯೪೨ [ಸಂಚಿಕೆ ೩೬

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ॥

ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ದಿವ್ಯ ಪ್ರಭಾವ

ಲೇ— ಶ್ರೀ ಪಟ್ಟದ ಸ್ವಾಮಿಗಳು ಹಿರೇಮಠ, ಕೊಣ್ಣೂರು

ಸಮುದ್ರವು ಉಕ್ಕೇರುವದೂ ಮತ್ತು ಇಳಿಯುವುದೂ ಸೂರ್ಯನ ಪ್ರಕಾಶವು ಪ್ರಾತಃಕಾಲದಿಂದ ಮಧ್ಯಾಹ್ನದವರೆಗೆ ಏರುತ್ತ ಹೋಗಿ ಅಲ್ಲಿಂದ ಇಳಿಯುತ್ತ ಹೋಗುವದೂ ಎಲ್ಲರಿಗೂ ತಿಳಿದ ವಿಷಯವಾಗಿದೆ. ಪರಿವರ್ತನೆಗಳು ಸೃಷ್ಟಿಯ ನಿಯಮದಂತೆ ಕ್ರಮವಾಗಿ ನಡೆಯುವವೆಂದು ಗೊತ್ತಾಗುವುದು. ಅದರಂತೆಯೇ ಮತಧರ್ಮಗಳು ಸಹ ಒಂದು ಕಾಲದಲ್ಲಿ ವೃದ್ಧಿಯನ್ನೂ ಒಂದು ಕಾಲದಲ್ಲಿ ಹ್ರಾಸವನ್ನೂ ಹೊಂದುವುದು ಸ್ವಾಭಾವಿಕವಾಗಿದೆ. ಪೂರ್ವಕಾಲದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರ ಉಪದೇಶದಿಂದ ರಾಜಾಧಿರಾಜರೂ ಕೂಡ ಲಿಂಗಧಾರಿಗಳಾಗಿದ್ದರೆಂದೂ, ಹಿಮಾಲಯದಿಂದ ರಾಮೇಶ್ವರದವರೆಗೂ ವೀರಶೈವರು ವ್ಯಾಪಿಸಿದ್ದು ಎಲ್ಲಮತಗಳಲ್ಲಿ ವೀರಶೈವಮತವು ಅಗ್ರಸ್ಥಾನವನ್ನು ಹೊಂದಿತ್ತೆಂದೂ, ಆಗ್ಗೆ ೮ ಕೋಟಿ ಜನ ವೀರಶೈವರಿದ್ದರೆಂದೂ "ವೀರಶೈವತಂತ್ರ" ಎಂಬ ಗ್ರಂಥದಿಂದ ತಿಳಿದುಬರುತ್ತದೆ. ಇತ್ತೀಚಿಗೆ ಬೌದ್ಧ, ಜೈನ, ವೈಷ್ಣವಾದ್ಯನೇಕ ಮತಗಳುಂಟಾಗಿ ವೀರಶೈವಮತದ ಪ್ರಸಾರವು ಕಡಿಮೆಯಾಯಿತು.

೧೨ ನೆಯ ಶತಮಾನದಲ್ಲಿ ಬಸವನೆಂಬವನು ಜನಿಸಿ ನಿಜತತ್ತ್ವವನ್ನು ಮೂಲೆಗೊತ್ತಿ ಜಾತಿಸಾಂಕರ್ಯವನ್ನು ಬೋಧಿಸುವ ಅಮಂಗಲ ವಚನಗಳನ್ನು ಪ್ರಚಾರಮಾಡುತ್ತ ಕೆಲಕೆಲವು ಊರುಗಳಲ್ಲಿ ಹೊಸದಾಗಿ ಮಠಗಳನ್ನು ಕಟ್ಟಿಸಿ, ಆ ಮಠಗಳಿಗೆ ವಿರಕ್ತಮಠಗಳೆಂದು ಹೆಸರಿಟ್ಟನು. ವಿರಕ್ತಮಠಗಳು ಬಸವನ ಕಾಲದಲ್ಲಿಯೇ ಹುಟ್ಟಿದವು. ಬಸವನಿಗಿಂತ ಮೊದಲು ವಿರಕ್ತಮಠಗಳು ಇದ್ದವೆಂದು ಯಾವ ಗ್ರಂಥದಲ್ಲಿಯೂ ಯಾವ ಶಿಲಾಲೇಖದಲ್ಲಿಯೂ ಶಾತ್ರಿ ಸಗಡೆಯನ್ನು ಹಾಕಿ ಹುಡುಕಿದರೂ ದೊರೆಯುವದಿಲ್ಲ. ಗುರುವರ್ಗದ ಮಠಗಳು ಮಾತ್ರ ಪ್ರತಿಯೊಂದು ಊರುಗಳಲ್ಲಿ ಅನಾದಿಕಾಲದಿಂದ ಇಂದಿನವರೆಗೂ ಇದ್ದೇ ಇರುತ್ತವೆ. ಇವುಗಳ ಬಗ್ಗೆ ಅನೇಕ ಗ್ರಂಥ ಮತ್ತು ಶಾಸನಗಳ ಆಧಾರಗಳು ದೊರಕುತ್ತವೆ. ಪ್ರತಿಯೊಂದು ಮಠಕ್ಕೂ ಬ್ರಹ್ಮಚಾರಿಗಳಾದ ಗುರುಮೂರ್ತಿಗಳು ಇದ್ದೇ ಇರುತ್ತಾರೆ. ಇವರು ವಿದ್ಯೆಯನ್ನು ಕಲಿಯದೆ ದಡ್ಡರಾಗಿ ತಮ್ಮ ಶಿಷ್ಯರ ಮನೆಗಳಿಗೆ ಹೋಗಿ ಧರ್ಮದ ತತ್ತ್ವಗಳನ್ನು ಉಪದೇಶಮಾಡದೆ ತಮ್ಮ ಪಾಳ ಹತ್ತಿದ ಹಾಳುಮಠದಲ್ಲಿಯೇ ಕುಳಿತುಬಿಟ್ಟರು. ನೂತನವಾಗಿಬಂದ ವಿರಕ್ತರು ಅಲ್ಪಸ್ವಲ್ಪ ವಿದ್ಯೆಯನ್ನು ಕಲಿತು ದೇಶಸಂಚಾರಮಾಡುತ್ತ ಗುರುವರ್ಗದವರ ಶಿಷ್ಯರ ಮನೆಗಳಿಗೆ ಹೋಗಿ ವಾಚಾಳತ್ವದಿಂದ ಅವರಿಗೆ ನಾವೇ ಗುರುಗಳೆಂದು ಹೇಳಿ ಮೋಕ್ಷದಾಯಕವಾದ 'ಪಂಚಾಕ್ಷರ' ಮಹಾಮಂತ್ರವನ್ನು ಬಿಟ್ಟು ಶಾಸ್ತ್ರವಿರುದ್ಧವಾದ ಅಬದ್ಧ 'ಬಸವ' ಮಂತ್ರವನ್ನು ಉಪದೇಶಿಸಹತ್ತಿದರು. ಅಲ್ಲದೆ ಅಲ್ಲಿಯ ಪ್ರಮುಖ ಜನರನ್ನು ಕೂಡಿಸಿ ನಾವು ಪಾಠಶಾಲೆಯನ್ನು ಸ್ಥಾಪಿಸಿ ಅನ್ನದಾನ ಮಾಡುತ್ತೇವೆ. ವರ್ಗಣಿಯನ್ನು ಮಾಡಿಕೊಡಬೇಕು ಎಂದು ಹೇಳಿ ಮಾಡಿಸಿಕೊಂಡು ಊರಿಗೆ ಹೋಗಿ ತಮ್ಮ ಉದರಪುಷ್ಟಿಕವನ್ನು ಸಾಧಿಸಹತ್ತಿದರು. ಸಂಚಾರಮಾಡುವವರ ಪ್ರಚಾರವು ಹೆಚ್ಚಿತು. ಸುಮ್ಮನೆ ಮಠದಲ್ಲಿ ಕುಳಿತವರ ಪ್ರಚಾರವು ಹೇಗೆ ಆಗಬೇಕು? ಹೀಗಾಗಿ ಕಲವು ಕಡೆಗಳಲ್ಲಿ ಗುರುವರ್ಗದವರ ಹೆಸರೇ ಲೋಪವಾಯಿತು. ಶಿಷ್ಯರನ್ನು ನಿಮ್ಮ ಗುರುಗಳು ಯಾರು ಎಂದು ಪ್ರಶ್ನೆ ಮಾಡಿದರೆ ಇಂಥ ಊರು ವಿರಕ್ತಸ್ವಾಮಿಗಳು ಎಂದು ಹೇಳಲಿಕ್ಕೆ ಹತ್ತಿದರು. ಇದು ಈಗ್ಯೂ ಕೆಲವು ಶಿಷ್ಯರಲ್ಲಿ ಇದೆ. ವಿರಕ್ತರು ಬಹಳ ಚಾಣಾಕ್ಷರಾಗಿರುತ್ತಾರೆ. ವಿರಕ್ತರಿಗೆ ಶಿಷ್ಯರಿಲ್ಲದಿದ್ದರೂ ನಾವು ಪೂರ್ವದ ಸ್ಥಲದವರೆಂದು ಇಲ್ಲಸಲ್ಲದ್ದೊಂದು ಹೇಳಿ ಇಡೀ ಊರಲ್ಲಿಯೇ ವರ್ಗಣಿಮಾಡಿಸಿಕೊಂಡು ಬರುತ್ತಾರೆ. ಆಚಾರದಲ್ಲಿ ಪಕ್ಕಾ—[illegible] ವಡಿಯೆಂದ [illegible] ಮಾಡಿ ನಮ್ಮ [illegible] ರೆಂದು ಒಳಗೆ [illegible] ಕಚ್ಚಾಮಡಿಯವರನ್ನು ಹೊರಗೆ ಕುಳ್ಳಿರಿಸಿ ತಾವು ಒಳಗಡೆ [illegible] ಬೇಸನ್ನು ಬುಂದೆ, ಜಿಲೇಬಿ, ಸಜ್ಜಿಗೆ ಅನ್ನ ಮುಂತಾದ ಉತ್ತಮವಾದ ಆಹಾರವನ್ನು ಸ್ವೀಕರಿಸಿ, ಕಚ್ಚಾಮಡಿಯವರಿಗೆ ಗೋಧಿರೊಟ್ಟಿ ಬೆಲ್ಲದಬೇಳೆ ದೊಡ್ಡ [illegible]ನ್ನ ಒಡಿಸುವರು. ಇದು ಪಕ್ಕಾ ಮಡಿ ಮಾರಿದ ಸ್ಥಲದವರ ಆಚರಣೆಯಾಗಿದೆ. ದೊಡ್ಡ ಮನುಷ್ಯರು ಸತ್ತರೆ ಪಾದವನ್ನಿಡಲಿಕ್ಕೆ ಹೋಗುವರು. ಶುಭಕಾರ್ಯಗಳಲ್ಲಿ ಪಂಚಕಲಶಗಳನ್ನು ಸ್ಥಾಪಿಸುವವನ್ನು ಬಿಟ್ಟು ಶಾಸ್ತ್ರವಿರುದ್ಧವಾಗಿ ಷಟ್‌ಕಲಶಗಳನ್ನು ಸ್ಥಾಪಿಸಬೇಕೆನ್ನುವರು. ಲಗ್ನಕ್ಕೆ ಹೋಗುವರು. ಪಾದೋದಕವನ್ನು ಕೊಡುವರು. ಪ್ರಾಯಶ್ಚಿತ್ತ ಸಂಸ್ಕಾರವನ್ನು ಮಾಡಲಿಕ್ಕೆ ಹೋಗುವರು. ವಿರಕ್ತರು ಇವೇ ಮೊದಲಾದ ಗುರುವರ್ಗದವರ ಕಾರ್ಯದಲ್ಲಿ ಕೈಹಾಕಿ ಶಾಸ್ತ್ರವಿರುದ್ಧವಾಗಿ ವರ್ತಿಸುತ್ತಿರುವದನ್ನು ಕಲವು ಪಂಡಿತರು ನೋಡಿದ್ದರೂ ಇದನ್ನು ಪ್ರತಿಭಟಿಸಲಿಕ್ಕೆ ಯಾರೂ ಪ್ರಯತ್ನ ಮಾಡಲಿಲ್ಲ. ಸರ್ವರೂ ಸ್ವಸ್ಥರಾಗಿ ತಮ್ಮ ಪ್ರಪಂಚದಲ್ಲಿಯೇ ಮಗ್ನರಾಗಿದ್ದರು.

ಧರ್ಮದ ನಿಜವಾದ ತತ್ತ್ವಗಳನ್ನು ಪ್ರಕಟಿಸುವದಕ್ಕಾಗಿಯೂ, ಗುರುವರ್ಗದವರನ್ನು ಎಚ್ಚರಗೊಳಿಸುವದಕ್ಕಾಗಿಯೂ, ಭಗವಂತನೇ ಈ ನಮ್ಮ ಧರ್ಮಾಧಿಪತಿಗಳಾದ ಪಂಡಿತವರ್ಯರನ್ನು ಅವತಾರ ಮಾಡಿಸಿದನು. ಸೂರ್ಯನು ಉದಯವಾದ ಕೂಡಲೆ ಕತ್ತಲೆಯು ಓಡಿಹೋಗುವಂತೆ ಸದರಿ ಮಹಾಪುರುಷರ ಅವತಾರದಿಂದ ವೀರಶೈವರಲ್ಲಿದ್ದ ಅಜ್ಞಾನಾಂಧಕಾರವು ನಾಶವಾಗಿ, ಸುಜ್ಞಾನವೆಂಬ ಪ್ರಕಾಶವು ಜಗತ್ತಿನಲ್ಲಿ ಹರಡಲಿಕ್ಕೆ ಆರಂಭವಾಯಿತು. ಇವರು ತಮ್ಮ ತಾಯಿಯವರ ತವರೂರಾದ ಗದಗ ತಾ॥ ನಾರಾಯಣಪುರದಲ್ಲಿ ಜನ್ಮತಾಳಿ ಅಲ್ಲಿಯೇ ಬಾಲ್ಯವನ್ನು ಕಳೆದು ಕನ್ನಡ ಅಭ್ಯಾಸವನ್ನು ಪೂರ್ತಿಗೊಳಿಸಿದರು. ಅಲ್ಲಿಂದ ಗುರುವಂಶಕ್ಕೆ ಮುಖ್ಯವಾದ ಸಂಸ್ಕೃತಾಭ್ಯಾಸವನ್ನು ಅಬ್ಬಿಗೇರಿ ಸೊಲ್ಲಾಪುರ ಗ್ರಾಮಗಳಲ್ಲಿರುವ ಪಾಠಶಾಲೆಗಳಲ್ಲಿ ಮಾಡಿದರು. ಅಲ್ಲಿಂದ ಹೆಚ್ಚಿನ ಪಾಂಡಿತ್ಯವನ್ನು ಸಂಪಾದಿಸುವದಕ್ಕಾಗಿ ಕಾಶೀಕ್ಷೇತ್ರಕ್ಕೆ ಪ್ರಯಾಣಮಾಡಿದರು. ಅಲ್ಲಿ ಕೆಲವು ವರ್ಷ ಅಭ್ಯಾಸಮಾಡಿ ಕಲಕತ್ತಾ ಗವರ್ನಮೆಂಟ್ ಕಾಲೇಜಿನಲ್ಲಿ ಪರೀಕ್ಷೆಗಳನ್ನು ಕೊಟ್ಟು ಉತ್ತೀರ್ಣರಾಗಿ ತಮ್ಮ ಸ್ವಸ್ಥಾನವಾದ ನಾಗನೂರಿಗೆ ಬಂದರು. ಈಗಿನ ಪಂಡಿತರಂತೆ ಈ ನಮ್ಮ ಪಂಡಿತ ಮಹಾಪುರುಷರು ಲಗ್ನವಾಗಿ ಪ್ರಪಂಚಮಾಡುತ್ತ ಸ್ವಾರ್ಥಪರಾಯಣರಾಗಲಿಲ್ಲ. ಲಗ್ನವಾಗಿ ಒಂದು ಉಪಾಧಿಯನ್ನು ಗಂಟುಹಾಕಿಕೊಂಡರೆ, ನಮ್ಮ ಸಮಾಜಸುಧಾರಣೆಗೆ ಆತಂಕವಾಗುವದೆನ್ನುವದನ್ನರಿತು ವಿವಾಹಕಾರ್ಯವನ್ನು ಧಿಕ್ಕರಿಸಿ ಶ್ರೇಷ್ಠವಾದ ಬ್ರಹ್ಮಚರ್ಯಾಶ್ರಮವನ್ನು ತಾಳಿದರು. ಇವರು ಹಗಲು ರಾತ್ರಿಯೆನ್ನದೆ ಯಾವಾಗಲೂ ನಿಸ್ವಾರ್ಥ ಬುದ್ಧಿಯಿಂದ ನಮ್ಮ ವೀರಶೈವ ಮತವು ಎಂದು ಉನ್ನತಸ್ಥಿತಿಗೆ ಬಂದೀತು! ಮತ್ತು ವೀರಶೈವ ಮತಕ್ಕೆ ಶಿಖಾಮಣಿಯಂತಿರುವ ಗುರುವರ್ಗದವರು ಪಂಡಿತರಾಗಿ ಸುಧಾರಿಸಿ ತಮ್ಮ ಕರ್ತವ್ಯಕರ್ಮವನ್ನು ಎಂದು ಮಾಡ್ಯಾರು ಎಂದು ಚಿಂತಿಸುತ್ತಿದ್ದರು. ಊರಿಗೆ ಬಂದನಂತರ ಮಠದಲ್ಲಿ ಸುಮ್ಮನೆ ಕುಳಿತುಕೊಳ್ಳದೆ ಶಿಲಾಶಾಸನ, ಪ್ರಾಚೀನಗ್ರಂಥಗಳನ್ನು ಶೋಧಿಸುವದಕ್ಕಾಗಿ, ಸರ್ವತ್ರ ಸಂಚಾರಮಾಡಿಕೊಂಡು ಬಂದರು. ಇನ್ನು ಧರ್ಮದ ನಿಜವಾದ ತತ್ತ್ವಗಳನ್ನು ಬಾಯಿಂದ ಬೋಧಿಸುವದಕ್ಕಿಂತಲೂ ವೃತ್ತಪತ್ರಿಕೆಯ ದ್ವಾರಾ ಪ್ರಚಾರಮಾಡಿದರೆ ಹೆಚ್ಚು ಪರಿಣಾಮವಾಗುವದೆಂದು ನಿಶ್ಚಯಿಸಿದರು. ಇವರೀ ಪವಿತ್ರ ಕಾರ್ಯಕ್ಕೆ ಅನೇಕ ಜನ ಭಕ್ತಮಾಹೇಶ್ವರರು ತಮ್ಮ ಶಕ್ತ್ಯನುಸಾರವಾಗಿ ದ್ರವ್ಯದಾನಮಾಡಿದರು. ಪೀಠಾಚಾರ್ಯರು ವಿಶೇಷವಾಗಿ ಆಶೀರ್ವದಿಸಿದರು. ಈ ಮಹಾಕಾರ್ಯಕ್ಕೆ ಧರ್ಮರಾಜ್ಯವೆನಿಸಿದ ಮೈಸೂರು ರಾಜಧಾನಿಯೆ ಯೋಗ್ಯವೆಂದು ತಿಳಿದು ಅಲ್ಲಿಯೇ ಕಾರ್ಯಾಲಯವನ್ನು ಸ್ಥಾಪಿಸಿದರು. ಅಲ್ಲಿಂದಲೇ ಪಂಚಾಚಾರ್ಯಪ್ರಭಾ ಪತ್ರಿಕೆಯನ್ನು ಹೊರಡಿಸಲು ಸಕಲ ಏರ್ಪಾಟುಗಳನ್ನು ಮಾಡಿದರು. ಈ ಪತ್ರಿಕೆಯಲ್ಲಿ ಪ್ರಕಟವಾಗುವ ಧಾರ್ಮಿಕ ತತ್ತ್ವಗಳನ್ನು ಕಂಡು ಸ್ವಮತ ಪರಮತದವರು ಸಹ ಚಂದಾದಾರರಾದರು. ಸೂರ್ಯನು ಉದಯವಾದ ಕೂಡಲೆ ಕಮಲಗಳು ಅರಳುವಂತೆ ಪತ್ರಿಕೆಯೊಳಗಿನ ಮಹತ್ತ್ವದ ಲೇಖಗಳನ್ನು ಓದಿ ಯಾವತ್ತು ಗುರುವರ್ಗ ಭಕ್ತವರ್ಗದವರ ಮುಖಕಮಲಗಳು ಅರಳತೊಡಗಿದವು. ಹೆಸರಿಗೆ ತಕ್ಕಂತೆ ಪ್ರಭೆಯು ತನ್ನ ಪ್ರಕಾಶವನ್ನು ಇಡೀ ಜಗತ್ತಿಗೆಲ್ಲ ಹರಡಿತು.

ಈ ಪತ್ರಿಕೆಯು ಜನ್ಮವೆತ್ತಿ ಇಂದಿಗೆ ೧೫ ವರ್ಷಗಳಾದವು. ತನ್ನ ಧರ್ಮಬೋಧೆಯನ್ನು ಯಥಾಪ್ರಕಾರವಾಗಿ ಸಾಗಿಸುತ್ತಿದೆ. ಗುರುವರ್ಗದಲ್ಲಿ ಕೆಲವರಿಗೆ ತಮ್ಮ ಗೋತ್ರ ಸೂತ್ರಗಳು ಗೊತ್ತಿದ್ದಿಲ್ಲ. ವೈದಿಕ ಕರ್ಮವನ್ನು ಹೇಗೆ ಮಾಡಬೇಕೆಂಬುದು ಗೊತ್ತಿದ್ದಿಲ್ಲ. ಇವೆಲ್ಲ ಲೋಪಗಳನ್ನು ಹೋಗಲಾಡಿಸುವದಕ್ಕಾಗಿ ಎಲ್ಲರಿಗೂ ಸ್ಪಷ್ಟವಾಗಿ ತಿಳಿಯುವಂತೆ ಕನ್ನಡದಲ್ಲಿ ಪ್ರತಿಯೊಂದು ಕರ್ಮದ ವಿಧಿಗ್ರಂಥಗಳನ್ನು ಪ್ರಿಂಟ ಮಾಡಿದ್ದಲ್ಲದೆ ಅನೇಕ ಧಾರ್ಮಿಕ ತತ್ತ್ವಗಳನ್ನು ತಿಳಿಸುವ ಗ್ರಂಥಗಳನ್ನು ಪ್ರಿಂಟುಮಾಡಿದರು. ಅವು ಇಂದಿಗೆ ೪೦ ೫೦ ಗ್ರಂಥಗಳಾಗಿವೆ. ನಮ್ಮ ಆಚಾರ್ಯರ ಹಾಗೂ ಆಚಾ

ರ್ಯರು ಮಾಡಿದ ಲೀಲೆಗಳ ಭಾವಚಿತ್ರಗಳನ್ನು ಉತ್ತಮ ಚಿತ್ರಕಾರರಿಂದ ಬರೆಯಿಸಿ ಅವುಗಳ ಬ್ಲಾಕ್ ಮಾಡಿಸಿ ಪ್ರತಿಯೊಬ್ಬರ ಮನೆಯಲ್ಲಿಯೂ ಫೋಟೋಗಳು ಮೆರೆಯುವಂತೆಮಾಡಿದರು ಈ ಮಹಾಪುರುಷರ ಪ್ರಯತ್ನವಿಶೇಷದಿಂದ ಇತ್ತೀಚೆಗೆ ಗುರುವರ್ಗದವರು ತಮ್ಮ ಕರ್ತವ್ಯ ಕರ್ಮದಲ್ಲಿ ನಿರತರಾದರು ಧರ್ಮತತ್ವಗಳು ಗೊತ್ತಾದವು ಭಕ್ತರಿಗೆ ನಮ್ಮ ಗುರುಗಳು ಯಾರು ? ಮತ್ತು ನಮ್ಮ ಮನೆಯಲ್ಲಿ ನಡೆಯತಕ್ಕ ಶುಭಾಶುಭ ಕರ್ಮಗಳನ್ನು ಮಾಡತಕ್ಕವರು ಯಾರು ? ಎಂಬುದು ಎಲ್ಲರಿಗೂ ಗೊತ್ತಾಯಿತು ಆಗ್ಗೆ ವಿರಕ್ತರ ಆಟವು ನಿಂತಿತು ನಮ್ಮ ಹುಸುಕನ್ನು ಹೊರಗೆಡವಿ ನಮ್ಮ ಆಟವನ್ನು ಬಂದು ಮಾಡಿದರೆಂದು ಪಂಡಿತರ ಮೇಲೆ ವಿರಕ್ತರು ಭಯಂಕರ ಸಿಟ್ಟಾಗಿ ಕೋಲಾಹಲವನ್ನು ಎಬ್ಬಿಸಿದರಲ್ಲದೆ ಅನೇಕ ಊರುಗಳಲ್ಲಿ ವಿಶೇಷ ತ್ರಾಸು ಕೊಟ್ಟರು ಆದರೂ ಪಂಡಿತರು ಧೈರ್ಯಗೆಡದೆ ತಮ್ಮ ಕಾರ್ಯವನ್ನು ಯಥಾ ಪ್ರಕಾರ ಸಾಗಿಸಿದರು ಆತ್ಮಶಕ್ತಿಯ ಬಲದ ಮುಂದೆ ಕುಟಿಲರ ಕುಂಟಶಕ್ತಿಯ ಆಟವು ಎಂದಾದರೂ ನಡೆದೀತೇ ? ಎಂದೂ ನಡೆಯಲಾರದು ಈಗಲೂ ಕೆಲವು ವಿರಕ್ತರು ಹಾಗೂ ಅವರ ಪಾರ್ಟಿಯ ಜನರು ದುರಭಿಮಾನದಿಂದಲೋ ಅಥವಾ ಅಜ್ಞಾನದಿಂದಲೋ ಪಂಡಿತರನ್ನೂ ಹಾಗೂ ಅವರು ರಚಿಸಿದ ಗ್ರಂಥಗಳನ್ನೂ ತಿರಸ್ಕರಿಸುತ್ತಿರುವರು ಇದು ಮೂರ್ಖತನವಲ್ಲದೆ ಬೇರೆಯಲ್ಲ ಇದೇ ವಿಷಯವು ನಿಜಲಿಂಗಶತಕದಲ್ಲಿ ಉನ್ನತೋನ್ನತ ಪಂಡಿತರನು ಹಳಿವ ಪವನ ಗರ್ವಿ ಎಂದು ಬರೆಯಲ್ಪಟ್ಟಿದೆ ಪಂಡಿತರ ಯೋಗ್ಯತೆಯು ಈ ಪಾಮರರಿಗೆ ಹೇಗೆ ಗೊತ್ತಾದೀತು ? ಇವರು ಎಷ್ಟೇ ದೂಷಿಸಿದರೂ ಪಂಡಿತರಿಗೂ ಅವರು ಬರೆದ ಗ್ರಂಥಗಳಿಗೂ ಕುಂದು ಬರಲಾರದು ಜ್ವರ ರೋಗದಿಂದ ಪೀಡಿತನಾದವನು ಹಾಲನ್ನೂ, ಕಪ್ಪೆಯು ಕ್ಷೀರಪದ್ರವನ್ನೂ, ವ್ಯಭಿಚಾರಿಣಿ ತನ್ನ ಪತಿಯನ್ನೂ, ಗೂಗೆಯು ಸೂರ್ಯನನ್ನೂ, ಕ್ಷುದ್ರ [illegible] ಯನ್ನೂ, ಹೆಬ್ಬೆಗುರುಡನು ಕನ್ನಡಿಯನ್ನೂ, ಪಾಮರರು ಉತ್ತಮವಾದ ಕಾವ್ಯವನ್ನೂ ನಿಂದಿಸಿದರೆ ಅವುಗಳಿಗೆ ಕುಂದುಬರಲಾರದೆಂದು ಷಡಕ್ಷರಕವಿಗಳು ತಾವು ರಚಿಸಿದ ಶಬರಶಂಕರವಿಳಾಸ ಪ್ರಬಂಧದಲ್ಲಿ ಹೇಳಿದ್ದಾರೆ ಪಂಡಿತರ ಹಾಗೂ ಅವರ ದಿವ್ಯ ಪ್ರಕಾಶವನ್ನೂ ಅವರು ರಚಿಸಿದ ಗ್ರಂಥಗಳ ಪ್ರಭಾವವನ್ನೂ ನೋಡಿ ಅವರ ಹಾಗೂ ಆ ಗ್ರಂಥಗಳ ಪ್ರಕಾಶವನ್ನು ಕಡಿಮೆ ಮಾಡಬೇಕೆಂದು ಕುಹಕರು ಬೇಕಾದಷ್ಟು ಸಾಹಸಪಟ್ಟರೂ, ಅವರ ದಿವ್ಯ ತೇಜಸ್ಸು ಮತ್ತು ಆ ಗ್ರಂಥಗಳ ಪ್ರಕಾಶವು ಮತ್ತಷ್ಟು ಹೆಚ್ಚುತ್ತಿರುವುದಲ್ಲದೆ ಕಡಿಮೆಮಾತ್ರ ಎಂದೂ ಆಗಲಾರದು ಇದೇ ಅಭಿಪ್ರಾಯವನ್ನು ಷಡಕ್ಷರಕವಿಗಳು “ಕನ್ನಡಿಯ ಪ್ರಕಾಶವನ್ನು ಕಡಿಮೆಮಾಡಬೇಕೆಂದು ದುಷ್ಟರು ಅದಕ್ಕೆ ಬೂದಿಯನ್ನು ಹಾಕಿ ತಿಕ್ಕಿದರೆ ಆ ಕನ್ನಡಿಯ ತೇಜಸ್ಸು ಮತ್ತಷ್ಟು ಹೆಚ್ಚುವದಲ್ಲದೆ ಕಡಿಮೆಯಾಗಲಾರದೆಂದು ಹೇಳಿದ್ದಾರೆ

ಒಟ್ಟಿಗೆ ಹೇಳುವದೇನಂದರೆ—ನಮ್ಮ ಪಂಡಿತಮಹಾಶಯರ ಪ್ರಭೆಯೂ, ಅವರ ಧರ್ಮಗ್ರಂಥಗಳ ಸಂಖ್ಯೆಯೂ, ಮತ್ತು ಅವುಗಳ ಬೆಳಕೂ ಇನ್ನೂ ನೂರ್ಮಡಿ ಹೆಚ್ಚಲೆಂದೂ, ಶ್ರೀ ಜಗದ್ಗುರು ಪಂಚಾಚಾರ್ಯರು ಸದರಿ ಪಂಡಿತರಿಗೆ ಆಯುರಾರೋಗ್ಯ ಐಶ್ವರ್ಯಾದಿಗಳನ್ನುಂಟು ಮಾಡಲೆಂದೂ ಆ ದಯಾನಿಧಿಯಾದ ಶಂಕರನನ್ನು ಪ್ರಾರ್ಥಿಸುತ್ತೇನೆ

ಸೂಕ್ತಿ ಮಾಲೆ

ಲೇ—ಮಲ್ಲಿಕಾರ್ಜುನಾರಾಧ್ಯ, ರಾಣೇಬೆನ್ನೂರು ಮಳೆಮಠ ಮುಬೇನೂರು.

(ಹಿಂದಿನಿಂದ ಮುಂದೆ ಸಾಗಿದುದು.)

೪೫ ನಿತ್ಯವಸ್ತುವಾದ ಆತ್ಮನ ಜ್ಞಾನವನ್ನು ಪಡೆಯದವರಿಗೆ, ನಿತ್ಯವಸ್ತುವಿನ ವಿಕಾರಗಳೆನಿಸುವ ಬಾಹ್ಯವಸ್ತುಗಳ ನಿಜವಾದ ಜ್ಞಾನವು ಹೇಗಾಗಬೇಕು? ತನ್ನ ಜ್ಞಾನವೇ ತನಗಿಲ್ಲದವನಿಗೆ ಅನ್ಯರ ಜ್ಞಾನವಾಗಬಹುದೆ? ಮೂಲ ವಸ್ತುವಿಗಿಂತಲೂ ಮೂಲ ವಸ್ತುವಿನ ವಿಕಾರದ ಕಡೆಗೆ ಜಗತ್ತಿನ ಒಲವು ವಿಶೇಷವಾಗಿರುವುದು ಬಂಗಾರಕ್ಕಿಂತಲೂ ಬಂಗಾರದ ಒಡವೆಗಳಲ್ಲಿ ಅತ್ಯಾಸಕ್ತಿಯಿರುವಂತೆ, ಹತ್ತಿಗಿಂತಲೂ ಹತ್ತಿಯಿಂದಾದ ಮನೋಹರ ವಸ್ತ್ರಗಳಲ್ಲಿ ಹೆಚ್ಚು ಆಸಕ್ತಿ ಇರುವಂತೆ, ಮೂಲವಾದ ಆತ್ಮವಸ್ತುವಿಗಿಂತಲೂ ಆತ್ಮದ ವಿಕಾರಗಳೆನಿಸುವ ಸೃಷ್ಟಿಪದಾರ್ಥಗಳಲ್ಲಿ ಲೋಕದ ಆಸಕ್ತಿ ಮಿಗಿಲಾಗಿರುವುದು ವಸ್ತ್ರಾಲಂಕಾರಗಳಲ್ಲಿ, ಸಂತತಿ ಸಂಪತ್ತು ವಿಷಯಭೋಗ ಇತ್ಯಾದಿಗಳಲ್ಲಿ ಅತ್ಯಂತಾಸಕ್ತರಾದ ಸ್ತ್ರೀ ಪುರುಷರಿಗೆ ಸಂಸಾರವಾಸನೆಯು ವಜ್ರಲೇಪದಂತೆ ಅಂಟಿರುವುದು ಅವರಿಗೆ ವೇದಾಂತ ಶ್ರವಣವು ರುಚಿಸುವುದಿಲ್ಲ ಮತ್ತು ದೇಹಾದಿ ಬಾಹ್ಯವಸ್ತುಗಳ ವಿಚಾರದಲ್ಲಿಯೇ ಜನರು ಕಾಲಹರಣ ಮಾಡುತ್ತಿರುವುದರಿಂದಲೂ, ಅನುಭವದಿಂದ ನಶ್ವರವಾಗಿರುವ ವಸ್ತು ಜಾಲಗಳ ಪ್ರಾಪ್ತಿಯಲ್ಲಿಯೇ ಮನಸ್ಸು ಸದಾ ರಮಿಸುತ್ತಿರುವುದರಿಂದಲೂ ಶಾಶ್ವತ ವಸ್ತುವಿನ ವಿಚಾರದ ಕಡೆಗೆ ಜನರ ಮನಸ್ಸು ತಿರುಗುವುದೇ ಇಲ್ಲ ಜಾಣನಾದವನು ಈ ಲೌಕಿಕಾಸಕ್ತಿಯಿಂದ ವಿಮುಖನಾಗಿ ನಿತ್ಯವಸ್ತುವಿನ ಜ್ಞಾನವಂ ಸಂಪಾದಿಸಬೇಕು ಜಗತ್ತಿನ ಈ ನಡೆವಳಿಕೆಯನ್ನು ನೋಡಿ ಶ್ರೀ ಶಂಕರಾಚಾರ್ಯರು

ಬಾಲಸ್ತಾವಕ್ರೀಡಾಸಕ್ತಃ । ತರುಣಸ್ತಾವತ್ತರುಣೀಸಕ್ತಃ ॥
ವೃದ್ಧಸ್ತಾವಚ್ಚಿಂತಾಸಕ್ತಃ । ಪರೇ ಬ್ರಹ್ಮಣಿ ಕೋಪಿ ನ ಸಕ್ತಃ ॥

ಬಾಲಕರು ಆಟಪಾಟಗಳಲ್ಲಿಯೇ ಆಸಕ್ತರಾದರು ತರುಣರು ತರುಣಿಯರಲ್ಲಿಯೇ ಲೀನರಾದರು ಮುದುಕರು ಚಿಂತೆಯಲ್ಲಿಯೇ ಹೊರಳಾಡುತ್ತಿದ್ದಾರೆ, ಪರಬ್ರಹ್ಮವಿಚಾರದಲ್ಲಿ ಒಬ್ಬರೂ ಆಸಕ್ತರಾಗಲಿಲ್ಲ ಎಂದು ಹೇಳಿರುವರು

೪೬. ಕತ್ತಲೆ ಬೆಳದಿಂಗಳೆರಡೂ ಒಂದು ರಾತ್ರಿಯಲ್ಲಿಯೇ ಇರುವಹಾಗೆ ಪಾಪ ಪುಣ್ಯಗಳೆರಡೂ ಕರ್ಮಮಾರ್ಗವೊಂದರಲ್ಲಿಯೇ ಇರುವವು ರಾತ್ರಿಯಲ್ಲಿ ಆ ಕತ್ತಲೆ ಬೆಳದಿಂಗಳು ಹಬ್ಬಿಕೊಂಡಿರುವ ಹಾಗೆ ಹಗಲು ಅವುಗಳಿರುವುದಿಲ್ಲ ಸೂರ್ಯನ ಪ್ರಕಾಶವು ಆ ಕತ್ತಲೆ ಬೆಳದಿಂಗಳೆರಡನ್ನೂ ಓಡಿಸಿ ತಾನೇ ತಾನಾಗಿ ನಿಂತುಕೊಳ್ಳುವಂತೆ ಶಿವಭಕ್ತಿಯು ಪಾಪಪುಣ್ಯ ಕರ್ಮಬಂಧವಂ ತೊಲಗಿಸಿ ತಾನೇ ತಾನಾಗಿ ನಿಲ್ಲುವುದು

೪೭. ಸೂರ್ಯೋದಯವಾಗುವುದಕ್ಕೂ ಕತ್ತಲೆ ಹರಿಯುವದಕ್ಕೂ ಮಧ್ಯಕಾಲ ವಿಳಂಬವಿಲ್ಲದಿರುವಂತೆಯೂ, ಸಿದ್ಧರಸವು ಸೋಂಕುವುದಕ್ಕೂ ಕಬ್ಬಿಣದ ಸ್ವರೂಪವು ಅಳಿವುದಕ್ಕೂ ಮಧ್ಯೆ ತಡವಿಲ್ಲದಿರುವಂತೆಯೂ ಗುರ್ವನುಗ್ರಹವಂ ಪಡೆದಂತವನಿಗೆ ನಿಜಸ್ವರೂಪವಳವಡಲು ತಡವಾಗುವುದಿಲ್ಲ “ಮುಕ್ತಿಮೂಲಂ ಗುರೋಃ ಕೃಪಾ” ಎಂಬಂತೆ ಮುಕ್ತಿಗೆ ಮೂಲವಾದ ಗುರುಕೃಪೆಯನ್ನು ಸರ್ವರೂ ಸಂಪಾದಿಸಬೇಕು ಇದು ಪ್ರಾಜ್ಞಶಿರೋಮಣಿಗಳಿಗೆ ಸಮ್ಮತವಾದ ಮಾತು

೪೮ ದೇಹದಲ್ಲಿ ನಡೆಯುತ್ತಿರುವ ನಿಶ್ವಾಸಪ್ರಶ್ವಾಸಕರ್ಮವು ದೇಹಕ್ಕೂ ಜೀವಕ್ಕೂ ಇರುವ ಹೊಂದಿಕೆಯನ್ನು ಬಿಚ್ಚಿಹಾಕಿ ಬೇರ್ಪಡಿಸುವುದಕ್ಕೆ ಸಾಧಕವಾಗಿ ಗರಗಸದಂತೆ ಕೊರೆಯುತ್ತಿರುವುದು ಅಂತಹ ಪ್ರಾಣವೂ, ದೇಹವೂ, ಜೀವವೂ ಅಗಲದೆ ಕೂಡಿಕೊಂಡಿರುವಂತೆ ಮಾಡುವ ರೀತಿಯನ್ನು ಆತ್ಮಜ್ಞಾನಿಯ ಹೊರತು ಮತ್ತಾರೂ ತಿಳಿಯಲಾರರು

೪೯. ಸಚ್ಛ್ರದ್ಧೆ, ಸದಿಚ್ಛೆ, ಸದ್ವಚನ, ಸದ್ವರ್ತನ, ಸನ್ಮಾರ್ಗ, ಸತ್ಪರಿಶ್ರಮ, ಸಚ್ಚಿಂತನ, ಸನ್ನಿಶ್ಚಯಗಳೆಂಬ ಎಂಟು ಧರ್ಮಗಳನ್ನು ಪ್ರತಿಯೊಬ್ಬನೂ ಪಾಲಿಸಬೇಕೆಂಬುದೇ ಧರ್ಮದ ಬೋಧೆಯು

೫೦ ಹುಟ್ಟುವಿಕೆಯೇ ಕಾಮವು, ಸ್ಥೂಲ ಸೂಕ್ಷ್ಮ ಕಾರಣಗಳೆಂಬ ಶರೀರತ್ರಯದ ಸ್ಥಿತಿಯೇ ತ್ರಿಪುರವು, ಮರಣವೇ ಕಾಲನು ಈ ಮೂರರ ನಾಶವೇ ತ್ರಿಪುರ-ಕಾಮ-ಕಾಲ ನಾಶವು, ಅಂದರೆ ಮನಸ್ಸಿನ ಬಯಕೆಯನ್ನು ಅಳಿವುದೇ ಕಾಮ ವಿಜಯವು ತನುತ್ರಯದ ವಾಸನೆಯನ್ನಳಿಯುವುದೇ ತ್ರಿಪುರವಿಜಯವು ಪರಶಿವನಲ್ಲಿಟ್ಟ ದೃಷ್ಟಿಯು ಚಲಿಸದಿರುವುದೇ ಕಾಲವಿಜಯವು ಈ ಸ್ಥಿತಿಗೆ ಬಂದವನು (ಶುಭಾಶುಭಕರ್ಮಲೇಪವಿಲ್ಲದೆ ಶುದ್ಧವಾದ ನಡತೆಯುಳ್ಳವನು) ಸಾಕ್ಷಾತ್ ಪರಶಿವರೂಪನಾಗುವನು. ಇವನು ಇಂದ್ರಿಯ ವಿಷಯಗಳಲ್ಲಿ ಸುಳಿದಾಡುತ್ತಿದ್ದರೂ, ಲೌಕಿಕರಂತೆ ಆಹಾರ-ವಿಹಾರ-ವ್ಯವಹಾರಗಳನ್ನು ನಡೆಯಿಸುತ್ತಿದ್ದರೂ ಸಹ ಅವುಗಳ ಬಂಧಕ್ಕೆ ಸಿಲ್ಕದೆ ಜೀವನ್ಮುಕ್ತನಾಗಿರುವನು.

ನಿಖಿಲಕರ್ನಾಟಕ ಆಯುರ್ವೇದ ಸಮ್ಮೇಳನದ
೧೨ ನೇ ಅಧಿವೇಶನದ
ಮತ್ತು
ಮೈಸೂರು ಸಂಸ್ಥಾನದ
ಆಯುರ್ವೇದ ಸಮ್ಮೇಳನದ ಪ್ರಥಮ ಅಧಿವೇಶನದ
ಪ್ರಾರಂಭೋತ್ಸವವನ್ನು
ಮೈಸೂರಿನಲ್ಲಿ ನೆರವೇರಿಸುತ್ತ ಆರೋಗ್ಯ
ಮತ್ತು
ಸ್ಥಳೀಯ ಸಂಸ್ಥೆಗಳ ಶಾಖೆಯ ಸಚಿವರಾದ
ಶ್ರೀಯುತ ಹೆಚ್. ಬಿ. ಗುಂಡಪ್ಪಗೌಡರು
ಅಪ್ಪಣೆ ಕೊಡಿಸಿದ
ಭಾಷಣ

೧೯೪೧ನೇ ಡಿಸೆಂಬರ್ ೨೮ನೇ ತಾರೀಖು, ಭಾನುವಾ

ಸ್ವಾಗತ ಸಮಿತಿಯ ಅಧ್ಯಕ್ಷರೇ, ಮಹಿಳೆಯರೇ ಮತ್ತ ಮಹನೀಯರೇ,

ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ ೧೨ ನೇ ಅಧಿವೇಶನದ ಮತ್ತು ಮೈಸೂರು ಸಂಸ್ಥಾನ ಆಯುರ್ವೇದ ಸಮ್ಮೇಳನದ ಪ್ರಥಮ ಅಧಿವೇಶನ ಪ್ರಾರಂಭೋತ್ಸವವನ್ನು ನೆರವೇರಿಸಲು ನನಗೆ ಅವಕಾ ವನ್ನು ದೊರಕಿಸಿಕೊಟ್ಟದಕ್ಕಾಗಿ ನಿಮ್ಮೆಲ್ಲರನ್ನ ಹೃತ್ಪೂರ್ವಕವಾಗಿ ವಂದಿಸುತ್ತೇನೆ ಈ ಸಮ್ಮೇಳನದ ಭಾಗವಹಿಸಿ, ಆಯುರ್ವೇದದಲ್ಲಿ ನನಗಿರುವ ನಂಬಿ ಯನ್ನು ವ್ಯಕ್ತಪಡಿಸುವ ಸುಯೋಗವು ಲಭ್ಯವಾದುದ ನನಗೆ ಬಹಳ ಸಂತೋಷವುಂಟಾಗಿದೆ ನಿಖಿಲ ಕರ ಟಕ ಆಯುರ್ವೇದ ಮಂಡಲವು ೧೯೨೮ ರಲ್ಲಿ ಸ್ಥಾಪಿ ವಾಗಿ ಕಾರ್ಯರಂಗಕ್ಕಿಳಿದು, ಪ್ರಾಚೀನವಾದರೂ ಕಾ ಲಾಂತರಗಳಿಂದ ಹೀನಸ್ಥಿತಿಗೆ ಇಳಿದಿರುವ ಆಯುರ್ವೇ ಶಾಸ್ತ್ರವನ್ನುದ್ಧಾರಮಾಡಿ, ಜನರಿಗೆ ಅದರ ವಿಚಾರದ ಹೆಚ್ಚು ಆದರಭಾವನೆಯುಂಟಾಗುವಂತೆ ಮಾಡುತ್ತಿ ವುದು ನಿಜವಾಗಿಯೂ ಸಂತೋಷಕರವಾದ ವಿಷಯ ಆದರೆ ಈಗ ನಡೆದಿರುವ ಕೆಲಸವು ತೀರ ಸ್ವಲ್ಪವೆಂ ದನ್ನೂ ಇನ್ನೂ ಹೆಚ್ಚಾದ ಕೆಲಸವನ್ನು ನಿರ್ವಹಿ ಆಯುರ್ವೇದದ ಮಹತ್ವವು ನಮ್ಮ ಜನರಿಗೆ ಗೊತ್ತಾ ವಂತೆ ಮಾಡಬೇಕಾಗಿದೆಯೆಂಬುದನ್ನೂ ತಾವುಗ ಮರೆಯಲಾಗದು

ಆಯುರ್ವೇದವೆಂದರೆ “ಅಕಾಲಮೃತ್ಯುವನ್ನು ಹರಿ ಆಯುಸ್ಸನ್ನು ಕೊಡತಕ್ಕದ್ದು” ಎಂಬುದಾಗಿ ಪಂಡಿತ ಅರ್ಥ ಮಾಡಿದ್ದಾರೆ ಆಯುರ್ವೇದವು ಭಾರತವರ ದಲ್ಲಿ ಪ್ರಾಚೀನಕಾಲದಿಂದಲೂ ಹೆಸರುವಾಸಿಯಾಗಿರು ಶಾಸ್ತ್ರ ವೇದಗಳಂತೆ ಇದೂ ಕೂಡ ದೇವದತ್ತವಾ ದೆಂದು ನಮ್ಮ ಪೂರ್ವಜರು ಅಭಿಪ್ರಾಯಪಟ್ಟಿದ್ದಾ ಧನ್ವಂತರಿ, ಚರಕ, ರಸಾರ್ಣವ, ಸಿದ್ಧವಿದ್ಯಾ, ಶುಶ್ರು ಮೊದಲಾದ ಮಹಾಮಹಿಮಾನ್ವಿತ ಪಂಡಿತರ ಹೆಸ ಗಳು ಇಂದೂ ಭಾರತಭೂಮಿಯಲ್ಲಿ ಮನೆಮಾತಾಗಿ ಇಷ್ಟು ಉನ್ನತಸ್ಥಿತಿಯಲ್ಲಿದ್ದು ಭಾರತೀಯರ ಕೀ ಪ್ರತಿಷ್ಠೆಗಳನ್ನು ಹೆಚ್ಚಿಸಿದ್ದ ಈ ಶಾಸ್ತ್ರವು ಇಂದು ಹೀ ವಾಗಿರುವುದಕ್ಕಾಗಿ ವ್ಯಸನಪಡದೆ ಇರುವ ದೇಶಾ ಭಿಮಾನಿಯೊಬ್ಬರೂ ಇಲ್ಲವೆಂದೇ ನನ್ನ ನಂಬಿ ಪಾಶ್ಚಾತ್ಯ ವೈದ್ಯಶಾಸ್ತ್ರದ ಆಘಾತಕ್ಕೆ ಸಿಕ್ಕಿ ಸರ ಗಳಿಂದಲೂ ಸಾರ್ವಜನಿಕರಿಂದಲೂ ಹೆಚ್ಚು ಪ್ರೋ ಹವು ದೊರೆಯದೆ ಇದ್ದ ಸಂದರ್ಭಗಳಲ್ಲಿಯೂ ಕೂ ಈ ದೇಶೀಯ ವೈದ್ಯಶಾಸ್ತ್ರವು ತೀರ ನಾಶವಾಗ ಯಥಾಶಕ್ತಿ ಸೇವೆ ಮಾಡುತ್ತಿರುವುದನ್ನು ನೋಡಿದ ಈ ವೈದ್ಯದ ಮಹತ್ವವೆಷ್ಟೆಂಬುದು ವ್ಯಕ್ತಪಡುವುದ ಅದರಲ್ಲಿ ಎಷ್ಟು ಸತ್ವವಡಗಿದೆಯೆಂಬುದು ಗೋಚ ವಾಗುವುದು

ಇಷ್ಟು ಉನ್ನತಸ್ಥಿತಿಯಲ್ಲಿದ್ದ ಆಯುರ್ವೇದ ಇಂದು ಸಾಕಷ್ಟು ಪ್ರೋತ್ಸಾಹವಿಲ್ಲದೆ ಬೂ ಮುಚ್ಚಿದ ಕೆಂಡದಂತೆ ಇರಲು ಕಾರಣವೇನೆಂಬುದನ ಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿದೆ ಪಾಶ್ಚಾ ಚಿಕಿತ್ಸಾಪದ್ಧತಿಗಳಿಗೆ ನಮ್ಮ ದೇಶದಲ್ಲಿ ಹೆಚ್ಚು ಪ್ರೋ ಹವು ದೊರೆತು ಸರ್ಕಾರಗಳಿಗೂ, ಪ್ರಜಾವರ್ಗ

ಅದರಲ್ಲಿ ವ್ಯಾಮೋಹ ಹುಟ್ಟುತ್ತಾ ಬಂದದು ಮೊದಲನೆಯ ಕಾರಣ. ಮಹಾಜನರೂ, ಸರ್ಕಾರದವರೂ ದೇಶೀಯ ವೈದ್ಯಚಿಕಿತ್ಸಾಕ್ರಮವನ್ನು ಉಪೇಕ್ಷೆ ಮಾಡುತ್ತಾ ಬಂದು ಅದಕ್ಕೆ ತಕ್ಕ ಪ್ರೋತ್ಸಾಹ ಕೊಡದೆ ಹೋದುದು ಎರಡನೆಯ ಕಾರಣ. ಪಾಶ್ಚಾತ್ಯ ದೇಶಗಳಲ್ಲಿ ವೈದ್ಯರು ವೈದ್ಯಶಾಸ್ತ್ರವು ಸರ್ವತೋಮುಖವಾಗಿ ಮುಂದವರಿಯಬೇಕೆಂಬ ವಿಶಾಲದೃಷ್ಟಿಯಿಂದ ಸಂಶೋಧನೆಗಳನ್ನು ನಡೆಸಿ ಕಂಡುಹಿಡಿದ ಹೊಸ ಹೊಸ ವಿಧಾನಗಳನ್ನು ಆಚರಣೆಗೆ ತರುತ್ತಿರುವಂತೆ, ನಮ್ಮ ವೈದ್ಯರು ಮಾಡದೆ, ತಮಗೆ ಗೊತ್ತಿದ್ದ ವಿಷಯಗಳನ್ನು ಗುಟ್ಟಾಗಿಟ್ಟುಕೊಂಡುಬರುತ್ತ ಬಂದುದು ಈ ವೈದ್ಯಶಾಸ್ತ್ರವು ಬೆಳೆಯುವುದಕ್ಕೆ ಅವಕಾಶವಿಲ್ಲದೆ ಕ್ಷೀಣಿಸುವುದಕ್ಕೆ ಕಾರಣವಾಯಿತು. ಜನರಲ್ಲಿ ಇದರ ಮೇಲಿದ್ದ ವಿಶ್ವಾಸವು ಕಡಿಮೆಯಾಗುತ್ತ ಬಂದಿತು. ವೈದ್ಯಚಿಕಿತ್ಸೆಗೆ ಸಂಬಂಧಪಟ್ಟ ಗ್ರಂಥಗಳು ದೊರೆಯುವುದೇ ಅಪರೂಪವಾಗಿದೆ. ಇದರಿಂದ ವೈದ್ಯಚಿಕಿತ್ಸಾ ಜ್ಞಾನವು ಬೆಳೆಯುವುದಕ್ಕೆ ಸಾಧ್ಯವಿಲ್ಲವಾಯಿತು. ಪರಂಪರಾಗತವಾಗಿ ಬಂದ ವೈದ್ಯವೃತ್ತಿಯನ್ನು ಅವಲಂಬಿಸಿದವರಲ್ಲನೇಕರು ವೈದ್ಯಶಾಸ್ತ್ರದ ಬೆಳವಣಿಗೆಗೆ ಸಾಧಕವಾದ ಸಂಶೋಧನೆಗಳ ಕಡೆಗೆ ಹೆಚ್ಚು ಲಕ್ಷ್ಯ ಕೊಡದೆ ಕೇವಲ ಉದರಂಭರಣಕ್ಕಾಗಿ ಆ ವೃತ್ತಿಯನ್ನು ಅವಲಂಬಿಸುತ್ತಾ ಬಂದುದು ಕೂಡ ಈ ಶಾಸ್ತ್ರದ ಅವನತಿಗೆ ಒಂದು ಕಾರಣ. ಈ ಎಲ್ಲಾ ಕಾರಣಗಳಿಂದ, ಇಂದು ಆಯುರ್ವೇದವು ಕ್ಷೀಣಸ್ಥಿತಿಯಲ್ಲಿದ್ದರೂ ಇದು ತಲತಲಾಂತರದಿಂದ ಸಾಮಾನ್ಯ ಜನರಲ್ಲಿ ಹರಡಿ ರಕ್ತಗತವಾಗಿರುವುದರಿಂದ ಪೂರ್ತಿಯಾಗಿ ನಶಿಸಿಹೋಗುವುದಕ್ಕೆ ಅವಕಾಶವಾಗಲಿಲ್ಲ. ಇತ್ತೀಚೆಗೆ ಸ್ವದೇಶೀ ಭಾವನೆಯು ಜನರಲ್ಲಿ ಹರಡಿರುವುದರ ಪರಿಣಾಮವಾಗಿ ಆಯುರ್ವೇದಕ್ಕೆ ಮನ್ನಣೆಯೂ, ಪುರಸ್ಕಾರವೂ ದೊರೆಯುವುದಕ್ಕೆ ಅವಕಾಶವಾಯಿತು. ಪಾಶ್ಚಾತ್ಯ ವೈದ್ಯಚಿಕಿತ್ಸಾ ಕ್ರಮವನ್ನು ನಾವು ಅನುಸರಿಸುತ್ತಿರುವ ಮಾತ್ರದಿಂದಲೇ ತಲತಲಾಂತರದಿಂದ ಅನುಭವಸಿದ್ಧವಾಗಿ ಬಂದ ಆಯುರ್ವೇದವನ್ನು ಉಪೇಕ್ಷೆ ಮಾಡಬೇಕೆಂದು ಅರ್ಥವಲ್ಲ. ನಮ್ಮ ಪೂರ್ವಿಕರು ಕಷ್ಟಪಟ್ಟು ಗಳಿಸಿದ ಈ ಶಾಸ್ತ್ರದ ಅನುಭವಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಕ್ರೋಡೀಕರಿಸಿ ನಮ್ಮ ಆಯುರ್ವೇದವು ತನ್ನ ಗತವೈಭವವನ್ನು ಮತ್ತೆ ಗಳಿಸುವಂತೆ ಅವಕಾಶವಾಗಲೆಂದು ನನ್ನ ಅಭಿಲಾಷೆ.

ಆಯುರ್ವೇದವು ನಮ್ಮ ದೇಶದ ಸ್ಥಿತಿಗತಿ, ಮತಾಚಾರ ಸಂಪ್ರದಾಯ, ಹವಾಗುಣಗಳಿಗೆ ಅನುಗುಣವಾಗಿರುವ ಶಾಸ್ತ್ರ. ಗಿಡಮೂಲಿಕೆಗಳಿಂದ ತಯಾರಾಗುವ ಆಯುರ್ವೇದ ಔಷಧಿಗಳನ್ನು ಸುಲಭ ದರದಲ್ಲಿ ಬಡವರಿಗೂ ಬಲ್ಲಿದರಿಗೂ ದೊರಕಿಸಿ ಕೊಡಬಹುದು. 'ಅಲೋಪತಿಕ್' ಚಿಕಿತ್ಸಾ ಸೌಕರ್ಯಕ್ಕಾಗಿ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡುತ್ತಿದ್ದರೂ ಎಲ್ಲರಿಗೂ ಸಾಕಾದಷ್ಟು ಪ್ರಮಾಣದಲ್ಲಿ ಚಿಕಿತ್ಸಾ ಸೌಕರ್ಯಗಳು ದೊರೆಯುತ್ತಿಲ್ಲವೆಂಬ ಆಕ್ಷೇಪಣೆಗಳು ಕೇಳಿಬರುತ್ತಿವೆ. ಆ ಚಿಕಿತ್ಸಾ ಸೌಕರ್ಯಕ್ಕಾಗಿ, ಸರ್ಕಾರದವರು ಒಬ್ಬರಿಗೆ ಸರಾಸರಿ ಎಂಟಾಣೆಯಂತೆ ವೆಚ್ಚವಾಗುತ್ತಿದೆ. ಆದರೆ ದೇಶೀಯ ವೈದ್ಯಚಿಕಿತ್ಸೆಗಾಗಿ ಒಬ್ಬರಿಗೆ ಸರಾಸರಿ ಆರುಕಾಸಿಗಿಂತ ಹೆಚ್ಚು ಖರ್ಚಾಗಲಾರದು. ಹಳ್ಳಿಗಾಡುಗಳಲ್ಲಿ ವಾಸಮಾಡುವ ಲಕ್ಷಾಂತರ ಪ್ರಜೆಗಳು ದೇಶೀಯ ಔಷಧಿಗಳನ್ನೇ ಈಗಲೂ ಕೂಡ ಉಪಯೋಗಿಸುತ್ತಿದ್ದಾರೆ. ಘೋರ ಸಂಗ್ರಾಮವು ನಡೆಯುತ್ತಿರುವ ಈ ಸಮಯದಲ್ಲಂತೂ 'ಅಲೋಪತಿಕ್' ಔಷಧಿಗಳ ಬೆಲೆ ವಿಪರೀತವಾಗಿ ಏರಿ ಕೆಲವು ಸಂದರ್ಭಗಳಲ್ಲಿ ಅವುಗಳು ಸಿಗುವುದು ಕೂಡ ಕಷ್ಟವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ದೇಶೀಯ ವೈದ್ಯರು ಮುಂದೆಬಂದು ತಮ್ಮ ನವೃತ್ತಿಯಿಂದ ಮಹಾಜನರ ಸೇವೆ ಸಲ್ಲಿಸಿ, ದೇಶೀಯ ವೈದ್ಯವೃತ್ತಿಗೆ ಹೆಚ್ಚು ಪ್ರೋತ್ಸಾಹವನ್ನು ದೊರಕಿಸಿಕೊಳ್ಳಬೇಕಾಗಿದೆ.

ಆಯುರ್ವೇದ ಪಂಡಿತರ ಮೇಲೆ ಇಂದು ಅಪಾರವಾದ ಜವಾಬ್ದಾರಿ ಬಿದ್ದಿದೆ. ಆಯುರ್ವೇದ ಶಾಸ್ತ್ರದ ಘನತೆಯನ್ನು ಹೆಚ್ಚಿಸಿ ಅದರ ಮೊದಲಿನ ಸ್ಥಾನವನ್ನು ಅದಕ್ಕೆ ಗಳಿಸಿಕೊಡುವುದರ ಜೊತೆಗೆ ತಮ್ಮ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳುವುದಕ್ಕೂ ಅವರು ಇಂದು ಬಹಳ ಕೆಲಸಮಾಡಬೇಕಾಗಿದೆ. ಅವರು ಆಯುರ್ವೇದ ಶಾಸ್ತ್ರವನ್ನು ಚೆನ್ನಾಗಿ ಅಧ್ಯಯನ ಮಾಡಬೇಕಾಗಿದೆ. ಪಾಶ್ಚಾತ್ಯ ಚಿಕಿತ್ಸಾಕ್ರಮವನ್ನು ಸಶಾಸ್ತ್ರೀಯವಾಗಿ ಶಾಲಾ ಕಾಲೇಜುಗಳಲ್ಲಿ ಕಲಿಯುವಂತೆ, ಆಯುರ್ವೇದ ಶಾಸ್ತ್ರವನ್ನು ಕೂಡ, ಮೈಸೂರಿನಲ್ಲಿ ಏರ್ಪಡಿಸಿರುವಂತಹ ಆಯುರ್ವೇದ ಕಾಲೇಜಿನಲ್ಲಿ ಅಭ್ಯಾಸ ಮಾಡಬೇಕು. ಈ ರೀತಿ ಅಧ್ಯಯನಮಾಡಿ ಪದವಿಗಳನ್ನು ಪಡೆದವರು ಮಾತ್ರವೇ ಆಯುರ್ವೇದ ವೃತ್ತಿಯನ್ನು ಅವಲಂಬಿಸುವುದಕ್ಕೆ ಆಸ್ಪದವಿರುವುದಾದರೆ, ಈ ವೃತ್ತಿಯು ಉತ್ತಮಗೊಳ್ಳುವುದು, ಜನರಿಗೆ ನಂಬಿಕೆಯೂ ಹೆಚ್ಚುವುದು. ಶಾಸ್ತ್ರೀಯವಾದ ರೀತಿಯಲ್ಲಿ ಆಯುರ್ವೇದವನ್ನು ಅಭ್ಯಾಸಮಾಡಿ ಪದವಿಗಳನ್ನು ಪಡೆದವರಿಗೆ ಪ್ರೋತ್ಸಾಹಕೊಡುವ ಸಂದರ್ಭದಲ್ಲಿ ಆಯುರ್ವೇದ ಶಾಸ್ತ್ರದ ಘನತೆಗೆ ಲೋಪತಂದಿರುವ ಶಾಸ್ತ್ರವನ್ನರಿಯದ ಪಂಡಿತರಿಂದ ಮಹಾಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಅತ್ಯಾವಶ್ಯಕ. ಈ ದೃಷ್ಟಿಯಿಂದಲೇ ಮದರಾಸ, ಮುಂಬೈ ಮತ್ತು ಸಂಯುಕ್ತಪ್ರಾಂತಗಳ ಸರ್ಕಾರದವರು ಈ ವಿಷಯದಲ್ಲಿ ತಕ್ಕ ಕಾನೂನುಗಳನ್ನು ಮಾಡಿದ್ದಾರೆ. ಮೈಸೂರಿನಲ್ಲಿಯೂ ಕೂಡ ಆ ಬಗೆಯ ಕಾನೂನುಗಳನ್ನು ಮಾಡುವ ಅವಶ್ಯಕತೆ ಇದೆ. ಆದರೆ ಹಾಗೆ ಶಾಸನಮಾಡುವಾಗ, ಕಾಲೇಜುಗಳಲ್ಲಿ ವ್ಯಾಸಂಗಮಾಡಿ ಉತ್ತೀರ್ಣರಾದ ಪದವೀಧರರಿಗೆ ಪ್ರೋತ್ಸಾಹವನ್ನು ಕೊಡುವುದು ಮಾತ್ರವಲ್ಲದೆ ವಂಶಪಾರಂಪರ್ಯವಾಗಿ ವೈದ್ಯವೃತ್ತಿಯನ್ನು ಅವಲಂಬಿಸಿರುವ ಸಮರ್ಥರೂ ಅನುಭವಿಗಳೂ ಆದ ವೈದ್ಯರಿಗೂ ತಕ್ಕ ಪ್ರೋತ್ಸಾಹವು ದೊರೆಯುವುದಕ್ಕೆ ಅವಕಾಶವಿರುವಂತೆ ನೋಡಿಕೊಳ್ಳಬೇಕಾಗಿದೆ.

ಆಯುರ್ವೇದ ಶಾಸ್ತ್ರಜ್ಞರು, ತಮಗೆ ತಿಳಿದಿರುವ ಔಷಧಗಳನ್ನು ಹಿಂದಿನಂತೆ ತಮ್ಮಲ್ಲಿಯೇ ರಹಸ್ಯವಾಗಿಟ್ಟುಕೊಳ್ಳದೆ ಅವುಗಳನ್ನು ಗ್ರಂಥಗಳ ರೂಪದಲ್ಲಿ ಪ್ರಕಟಿಸಿ ಆ ಶಾಸ್ತ್ರದಲ್ಲಿರುವ ಮಹತ್ತರವಾದ ಅಂಶಗಳನ್ನು ಎಲ್ಲರಿಗೂ ತಿಳಿಸಬೇಕು. ಇದರಿಂದ ಶಾಸ್ತ್ರವು ಬೆಳೆಯುವುದಕ್ಕೆ ಅನುಕೂಲವಾಗುವುದು. ಸಂಸ್ಕೃತದಲ್ಲಿಯೂ ಇತರ ಭಾಷೆಗಳಲ್ಲಿಯೂ ಇರುವ ಆಯುರ್ವೇದ ಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಕಾರ್ಯಕ್ರಮವನ್ನು ಈ ಬಗೆಯ ಸಮ್ಮೇಳನಗಳೂ ಸಂಘಗಳೂ ಕೈಗೊಳ್ಳಬೇಕು. ಪಾಶ್ಚಾತ್ಯ ವೈದ್ಯಶಾಸ್ತ್ರವನ್ನು ಬಲ್ಲವರು ದೊಡ್ಡ ದೊಡ್ಡ ಸಂಘಗಳನ್ನು ಮಾಡಿಕೊಂಡು ಶಾಸ್ತ್ರದ ಉದ್ಧಾರದ ದೃಷ್ಟಿಯಿಂದಲೇ ಹಗಲಿರುಳೂ ಸೇವೆ ಸಲ್ಲಿಸುತ್ತಿರುವಂತೆ ನಮ್ಮ ಆಯುರ್ವೇದ ಪಂಡಿತರೂ ಕೂಡ, ಸಂಘಗಳನ್ನು ಸ್ಥಾಪಿಸಿಕೊಂಡು ಆಯುರ್ವೇದದ ಅಭಿವೃದ್ಧಿಗೆ ಸಹಾಯಕರಾಗಬೇಕು. ಗ್ರಂಥಗಳ ರಚನೆ, ವೈದ್ಯವೃತ್ತಿಗೆ ತಕ್ಕ ಪ್ರೋತ್ಸಾಹ ದೊರೆಯುವ ವಿಚಾರ, ವೈದ್ಯರು ತಕ್ಕ ಯೋಗ್ಯತಾ ಸಿದ್ಧತೆಯನ್ನು ಪಡೆದಿರುವ ವಿಚಾರವನ್ನು ಪರಿಶೀಲಿಸುವುದು, ದಾರಿತಪ್ಪಿ ನಡೆಯುವ ಪಂಡಿತರ ಮೇಲೆ ಶಿಸ್ತಿನ ಕಾರ್ಯಕ್ರಮವನ್ನು ಕೈಗೊಳ್ಳುವುದು—ಇವೇ ಮುಂತಾದ ಕೆಲಸಕಾರ್ಯಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಈ ಬಗೆಯ ಸಂಘಗಳು ಪರಿಶೀಲಿಸುವುದು ಒಳ್ಳೆಯದು. ಈ ಸಮ್ಮೇಳನದಲ್ಲಿ ಸೇರಿರುವ ವೈದ್ಯ ಮಹಾಶಯರೆಲ್ಲರೂ ಈ ಸೂಚನೆಗಳನ್ನು ನೆನಪಿನಲ್ಲಿಡುವರೆಂದು ನಾನು ನಂಬಿದ್ದೇನೆ.

ಆಯುರ್ವೇದ ಪಂಡಿತರು ರೋಗಾದಿಗಳನ್ನು ನಿವಾರಿಸುವ ವಿಚಾರದ ಕಡೆ ಲಕ್ಷ್ಯಕೊಡುವುದಲ್ಲದೆ ಆರೋಗ್ಯರಕ್ಷಣಕ್ರಮದ ವಿಚಾರದಲ್ಲಿ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದುದು ಅವಶ್ಯಕವೆಂಬುದನ್ನು ನಾನು ಒತ್ತಿ ಹೇಳಬೇಕಾಗಿದೆ. ರೋಗವು ಬಂದಮೇಲೆ ವಾಸಿಮಾಡುವುದಕ್ಕಿಂತ ಅದು ಬರದಂತೆ ತಡೆಯುವುದೇ ಮೇಲು. ಇಲ್ಲಿ ನೆರೆದಿರುವ ಪಂಡಿತರು ಈ ವಿಚಾರದಲ್ಲಿ ಹೆಚ್ಚು ಸಂಶೋಧನೆ, ಪ್ರಚಾರಗಳನ್ನು ಕೈಗೊಳ್ಳಬೇಕೆಂದು ನಾನು ಸೂಚಿಸುತ್ತೇನೆ. ಸಾಂಕ್ರಾಮಿಕ ವ್ಯಾಧಿಗಳನ್ನು ತಡೆಯುವ ವಿಷಯದಲ್ಲಿ ನೀವು ಹೆಚ್ಚು ಗಮನಕೊಟ್ಟಿಲ್ಲವೆಂದೇ ನನ್ನ ಭಾವನೆ. ಈ ರೋಗಗಳನ್ನು ತಡೆಯುವ ಬಗೆ, ಅವು ಬಂದರೆ ಅವುಗಳ ನಿವಾರಣೆಗೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳು—ಇವುಗಳ ವಿಚಾರದಲ್ಲಿ ಪಾಶ್ಚಾತ್ಯರಂತೆ ನೀವೂ ವಿಶೇಷ ಆಸಕ್ತಿಯನ್ನು ವಹಿಸಬೇಕಾಗಿದೆ. ಇತ್ತೀಚೆಗೆ ಸಾಂಕ್ರಾಮಿಕ ರೋಗಗಳ ದೆಸೆಯಿಂದ ನಮ್ಮ ದೇಶದಲ್ಲಿ ಬಹುಮಂದಿ ಸಾಯುತ್ತಿದ್ದಾರೆ. ಮಲೇರಿಯಾ ಮೊದಲಾದ ರೋಗಗಳನ್ನು ತಡೆಯುವ ಕಾರ್ಯಕ್ರಮವನ್ನು ಕೈಗೊಳ್ಳುವ ವಿಚಾರದಲ್ಲಿಯೂ ನಮ್ಮ ವೈದ್ಯರು ಬಹು ಆಸಕ್ತಿ ವಹಿಸಬೇಕಾಗಿದೆ. ಮಲೇರಿಯ ವ್ಯಾಧಿಯೊಂದರಿಂದಲೇ ದೇಶಕ್ಕೆ ಆಗುತ್ತಿರುವ ಅಪಾರ ಕಷ್ಟನಷ್ಟಗಳನ್ನು ನಾನು ಈ ಸಮಯದಲ್ಲಿ ನಿಮ್ಮೆಲ್ಲರ ಗಮನಕ್ಕೆ ತರಬಯಸುತ್ತೇನೆ. ಇಂಡಿಯಾ ದೇಶದಲ್ಲಿ ನಿಮಿಷಕ್ಕೆ ಇಬ್ಬರಂತೆ ಅಂದರೆ ವರ್ಷಂಪ್ರತಿ ೨೦ ಲಕ್ಷ ಮಂದಿ ಈ ರೋಗಕ್ಕೆ ಬಲಿಯಾಗುತ್ತಿದ್ದಾರೆಂಬುದಾಗಿ ಅಂಕಿ ಅಂಶಗಳಿಂದ ಗೊತ್ತಾಗಿದೆ. ಈ ರೋಗದ ದೆಸೆಯಿಂದ ನರಳುವ ಜನರ ಶಕ್ತಿಯು ಕುಗ್ಗಿಹೋಗಿ, ಅವರ ಸಂಪಾದನೆಯ ಮಟ್ಟವು ತಗ್ಗಿ, ದೇಶಕ್ಕೆ ಸುಮಾರು ೫೦ ಕೋಟಿ ರೂಪಾಯಿಗಳಷ್ಟು ಪ್ರತಿವರ್ಷವೂ ನಷ್ಟವಾಗುತ್ತಿರುವುದೆಂದು ನಿಪುಣರು ಅಂದಾಜು ಮಾಡಿದ್ದಾರೆ. ಮೈಸೂರು ದೇಶದ ಮಲೆನಾಡಿನಲ್ಲಿ ಈ ರೋಗವು ಹಿಂದಿನಿಂದಲೂ ಅನರ್ಥವನ್ನುಂಟುಮಾಡುತ್ತಿರುವುದರ ಜೊತೆಗೆ ಜಲಾಶಯಗಳು ನಿರ್ಮಾಣವಾಗಿ, ನಾಲೆಗಳ ಮೂಲಕ ನೀರನ್ನು ಜಮೀನುಗಳಿಗೆ ಒದಗಿಸುತ್ತಿರುವ ಕೆಲವು ಕ್ಷೇತ್ರದಲ್ಲಿ ಕೂಡ, ಈ ರೋಗವು ಇತ್ತೀಚೆಗೆ ಉಲ್ಬಣಾವಸ್ಥೆ ಹೊಂದಿರುವ ಅಂಶವು ನಿಮ್ಮ ಗಮನಕ್ಕೆ ಬಂದಿರಬೇಕು. ಇರ್ವಿನ್ ನಾಲಾ ಪ್ರದೇಶದಲ್ಲಿ ಈ ರೋಗದಿಂದ ರೈತರಿಗೆ ಆಗುತ್ತಿರುವ ಹಾವಳಿಯನ್ನು ತಪ್ಪಿಸಲು ಸರ್ಕಾರದವರು ವಿಶೇಷ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದ್ದಾರೆ. ಈ ರೋಗ ನಿವಾರಣೆಗೆ 'ಅಲೋಪತಿಕ್' ವೈದ್ಯಚಿಕಿತ್ಸಾ ಕ್ರಮದ ಪ್ರಕಾರ ಕ್ವಿನೈನ್ ಉತ್ತಮವಾದ ಔಷಧಿಯೆಂದು ಪರಿಗಣಿಸಲ್ಪಟ್ಟಿದೆ. ಈ ಔಷಧಿಯ ಸರಬರಾಯಿಗಾಗಿ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡುತ್ತಿದ್ದಾರೆ. ಆಯುರ್ವೇದ ಪಂಡಿತರು ಈ ರೋಗದ ನಿವಾರಣೆಗಾಗಿ ಇನ್ನೂ ಸುಲಭವಾದ ಮತ್ತು ಪರಿಣಾಮಕಾರಿಯಾದ ಚಿಕಿತ್ಸಾ ವಿಧಾನವನ್ನು ಕಂಡುಹಿಡಿದು ತೋರಿಸಿಕೊಟ್ಟಲ್ಲಿ ಬಹಳ ಉಪಕಾರಮಾಡಿದಂತಾಗುತ್ತದೆ. ಸರ್ಕಾರದವರು ಅಂತಹ ಸಂದರ್ಭಗಳಲ್ಲಿ ನಿಮಗೆ ವಿಶೇಷ ಪ್ರೋತ್ಸಾಹವನ್ನು ನೀಡುವುದರಲ್ಲಿ ಯಾವ ಸಂದೇಹವೂ ಇಲ್ಲ.

ಮಹನೀಯರೇ, ಮೈಸೂರು ಸಂಸ್ಥಾನದಲ್ಲಿ ದೇಶೀಯ ವೈದ್ಯಕ್ಕೆ ಸ್ವಲ್ಪ ಹೆಚ್ಚಾಗಿ ಪುರಸ್ಕಾರವಿದ್ದರೂ ಕೂಡ ಸ್ಥಿತಿಯು ಇತರ ಕಡೆಗಳಲ್ಲಿರುವಂತೆಯೇ ಇದೆ. ಮೈಸೂರು ಸರ್ಕಾರದವರು ಆಯುರ್ವೇದ ಕಾಲೇಜನ್ನು ೧೯೦೮ ರಲ್ಲಿ ಸ್ಥಾಪಿಸಿ ದೇಶೀಯ ವೈದ್ಯಕ್ಕೆ ಪ್ರೋತ್ಸಾಹವನ್ನು ನೀಡಿದರು. ಆದರೆ ಈ ಕಾಲೇಜಿನಿಂದ ಹೊರಬಿದ್ದ ಪದವೀಧರರಿಗೆ ಸರಿಯಾದ ಪ್ರೋತ್ಸಾಹ ದೊರಿಯದೆ ದೇಶಕ್ಕೆ ಅವರಿಂದ ಹೆಚ್ಚು ಪ್ರಯೋಜನವಾಗುತ್ತಿಲ್ಲವೆಂಬ ಆಕ್ಷೇಪಣೆಯೂ ಕೇಳಬರುತ್ತಿದೆ. ಪಾಶ್ಚಾತ್ಯ ಚಿಕಿತ್ಸಾ ವಿಧಾನದ ಕಾಲೇಜಿನಲ್ಲಿಯೂ ಶಾಲೆಯಲ್ಲಿಯೂ ಓದಿ ಉತ್ತೀರ್ಣರಾದ ವೈದ್ಯರಿಗೆ ಕೊಡುತ್ತಿರುವಷ್ಟು ಪ್ರೋತ್ಸಾಹದಲ್ಲಿ ಅರ್ಧ ಭಾಗವನ್ನು ಕೂಡ ಆಯುರ್ವೇದ ಕಾಲೇಜಿನಿಂದ ಹೊರಬೀಳುವ ಪದವೀಧರರಿಗೆ ಕೊಡುತ್ತಿಲ್ಲವೆಂಬ ಆಕ್ಷೇಪಣೆಗಳು ಬಂದಿವೆ. ಆಯುರ್ವೇದ ಕಾಲೇಜಿನಲ್ಲಿ ತೇರ್ಗಡೆಯಾದ ವೈದ್ಯರಿಗೆ ಸ್ಥಳೀಯ ಸಂಸ್ಥೆಗಳವರು ನೀಡುತ್ತಿರುವ ಪ್ರೋತ್ಸಾಹವು ಒಂದು ನಿರ್ದಿಷ್ಟಪ್ರಮಾಣ ರೂಪದಲ್ಲಿ ದೇಶವಾದ್ಯಂತವೂ ದೊರೆಯುತ್ತಿಲ್ಲವೆಂದು ಆಕ್ಷೇಪಿಸಲಾಗಿದೆ. ಸರ್ಕಾರದವರು ಈ ವಿಷಯವನ್ನು ಆಲೋಚಿಸಿ ತಕ್ಕ ಪ್ರೋತ್ಸಾಹವು ಅವರಿಗೆ ದೊರೆಯುವಂತೆ ಮಾಡಲು ಸಿದ್ಧರಾಗಿದ್ದಾರೆಂದೂ ನೇರವಾದ ಸಹಾಯವನ್ನು ಅವರಿಗೆ ನೀಡಲು ತೀವ್ರಾಸಕ್ತಿಯಿಂದ ಕೂಡಿರುವವರಾಗಿದ್ದಾರೆಂದೂ, ಈ ಸಂದರ್ಭದಲ್ಲಿ ನಾನು ಭರವಸೆ ಕೊಡುತ್ತೇನೆ. ಆದರೆ ಈ ಭರವಸೆಯನ್ನು ಅವರು ತಮ್ಮ ಸ್ವಸಾಮರ್ಥ್ಯದಿಂದ ಸಾರ್ಥಕಪಡಿಸಿಕೊಳ್ಳಬೇಕು.

ಮಹಾಶಯರೇ, ಇಷ್ಟು ಹೇಳಿ ನಾನು ನಿಖಿಲ ಕರ್ನಾಟಕದ ಆಯುರ್ವೇದ ಸಮ್ಮೇಳನದ ೧೨ ನೇ ಅಧಿವೇಶನದ ಮತ್ತು ಮೈಸೂರಿನ ಆಯುರ್ವೇದ ಸಮ್ಮೇಳನದ ಪ್ರಥಮ ಅಧಿವೇಶನದ ಪ್ರಾರಂಭೋತ್ಸವವನ್ನು ಸಂತೋಷದಿಂದ ನೆರವೇರಿಸುತ್ತೇನೆ. ನಿಮ್ಮ ಕಾರ್ಯಕಲಾಪಗಳು ಸುಗಮವಾಗಿ ನಡೆದು ತನ್ಮೂಲಕ ದೇಶಕ್ಕೆ ಫಲಕಾರಿಯಾಗಲೆಂದು ಹಾರೈಸುತ್ತೇನೆ.

ಪಂಚಾಚಾರ್ಯಪ್ರಭಾ.

೧೯೪೨ನೆಯ ಜನವರಿ ತಾ ॥ ೫ನೇ ಸೋಮವಾರ

ಮಂತ್ರಜಪ.

ಶಿವಲಿಂಗೇ ನ್ಯಸ್ತದೃಷ್ಟಿಂ ಶಿವಯೋಗಾತ್ತಮಾನಸಂ ।
ಶಿವಮಂತ್ರಪ್ರವೃತ್ತಂ ತಂ ಶಿವಜ್ಞಾನೀ ನ ಭಾಷಯೇತ್ ॥
ಜಪಕಾಲೇ ಚ ಜಪಿನಂ ಯೋ ಭಾಷಯತಿ ಮೋಹತಃ ।
ನ ತಸ್ಯ ನಿಷ್ಕೃತಿಃ ಶಕ್ಯಾ ಕರ್ತುಂ ವರ್ಷಶತೈರಪಿ ॥

ಅಂದರೆ—ಶಿವಲಿಂಗನಲ್ಲಿ ದೃಷ್ಟಿಯನ್ನಿಟ್ಟಂಥ, ಶಿವಯೋಗದಲ್ಲಿ ಮನಸ್ಸನ್ನು ಸ್ಥಿರಗೊಳಿಸಿದಂಥ ಹಾಗೂ ಶಿವಮಂತ್ರವನ್ನು ಜಪಿಸುತ್ತಿರುವಂಥ ಮನುಷ್ಯನನ್ನು ಯಾರೂ ಮಾತಾಡಿಸಬಾರದೆಂದೂ, ಯಾವನು ಜಾಪಕನನ್ನು ಜಪಮಾಡುವ ಸಮಯದಲ್ಲಿ ಅಜ್ಞಾನದಿಂದ ಮಾತಾಡಿಸುತ್ತಾನೆಯೋ, ಅವನಿಗೆ ನೂರುವರ್ಷಗಳಾದರೂ ಪ್ರಾಯಶ್ಚಿತ್ತವು ದೊರೆಯಲಾರದೆಂದೂ ಧರ್ಮಶಾಸ್ತ್ರಗಳು ಶಾಸನಮಾಡುತ್ತಿರುವವು. ಇದರಿಂದ ಜಪದ ಮಹತ್ತ್ವವು ಎಷ್ಟು ಧಾರಣವಾದುದೆಂಬುವನ್ನು ಬೇರೆ ಹೇಳಬೇಕಾಗಿಲ್ಲ. ಜಪಮಾಡತಕ್ಕವನು ಆದಿಯಲ್ಲಿ ದೀಕ್ಷಾಗುರುವಿನ ಕಡೆಯಿಂದ ಋಷಿ ದೇವತಾ ಛಂದಸ್ಸು ಬೀಜ ಶಕ್ತಿ ಕೀಲಕಾದಿಗಳನ್ನೂ, ಕರನ್ಯಾಸ-ದೇಹನ್ಯಾಸ ಅಂಗನ್ಯಾಸ ವಿಧಿಗಳನ್ನೂ ತಿಳಿದುಕೊಂಡು ಜಪಿಸಬೇಕು. ಆಶ್ರಮಾನುಸಾರವಾಗಿ ನ್ಯಾಸಾದಿಗಳಿರುವವಷ್ಟೆ ಸರ್ವರಿಗೂ ಒಂದೇರೀತಿಯಾಗಿರುವದಿಲ್ಲ. ಆದಿಯಲ್ಲಿ ದೀಕ್ಷಾಗುರುವು ದೀಕ್ಷಿತನಾದ ಬ್ರಹ್ಮಚಾರಿಗೆ ಸೃಷ್ಟಿನ್ಯಾಸಕ್ರಮವನ್ನು ಬೋಧಿಸಬೇಕು. ಕೆಲವು ದಿವಸಗಳು ಕಳೆದಮೇಲೆ ಆ ಬ್ರಹ್ಮಚಾರಿಯು ವಿವಾಹಿತನಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸುತ್ತಾನೆ. ಆಗ್ಗೆ ದೀಕ್ಷಾಗುರುವೇ ಪುನಃ ಅವನಿಗೆ ಗೃಹಸ್ಥಾಶ್ರಮಕ್ಕೆ ಯೋಗ್ಯವಾದ ಸ್ಥಿತಿನ್ಯಾಸವನ್ನು ಬೋಧಿಸಬೇಕು. ಕೆಲವು ದಿವಸಗಳು ಕಳೆದ ಮೇಲೆ ಕೆಲಕೆಲವರು ಸಂಸಾರದಲ್ಲಿ ಹೇಯಬುದ್ಧಿಯು ಹುಟ್ಟಿ ವಾನಪ್ರಸ್ಥ ಅಥವಾ ಸನ್ಯಾಸಾಶ್ರಮವನ್ನು ಸ್ವೀಕರಿಸುವರು. ಅವರಿಗೆ ಅದೇ ದೀಕ್ಷಾಗುರುವು ಆ ಆಶ್ರಮಗಳಿಗೆ ಯೋಗ್ಯವಾದ ಸಂಹಾರನ್ಯಾಸಕ್ರಮವನ್ನು ಬೋಧಿಸಬೇಕು. ಮತ್ತೆ ಕೆಲವರು ಬ್ರಹ್ಮಚರ್ಯಾಶ್ರಮದಲ್ಲಿ ವೇದೋಪನಿಷದಾದಿಗಳ ಅಭ್ಯಾಸದಿಂದಾಗಲಿ ಅಥವಾ ಪೂರ್ವಜನ್ಮಕೃತ ಪುಣ್ಯವಿಶೇಷದಿಂದಾಗಲಿ ಒಮ್ಮೆಲೆ ವೈರಾಗ್ಯಶಾಲಿಗಳಾಗಿ ಸನ್ಯಾಸಿಗಳಾಗುವದುಂಟು. ಅವರಿಗಾದರೂ ಈ ದೀಕ್ಷಾಗುರುವೇ ಅವರ ನಿಜವಾದ ಸನ್ಯಾಸವೃತ್ತಿಯನ್ನು ಪರೀಕ್ಷಿಸಿ, ಸಂಹಾರಕ್ರಮವನ್ನು ಬೋಧಿಸಬೇಕು. ಇದು ಶಾಸ್ತ್ರೀಯಪದ್ಧತಿಯಾಗಿರುತ್ತದೆ. ಶಾಸ್ತ್ರಸಂಪ್ರದಾಯವು ಹೀಗಿದ್ದರೂ ಸದ್ಯಃ ವೀರಶೈವಸಮಾಜದಲ್ಲಿ ಜಪಕ್ರಮವು ವಿಲಕ್ಷಣವಾಗಿಯೇ ನಡೆದಿರುತ್ತದೆ. ಇದಕ್ಕೆ ಗುರುವರ್ಗದವರ ಅಜ್ಞಾನವೇ ಮುಖ್ಯಕಾರಣವು. ಕೆಲವು ಗುರುಗಳು ಹೀಗೆ ಇರುತ್ತಾರಲ್ಲ! ತಮ್ಮ ಗುರುಗಳು ತಮಗೆ ಸೃಷ್ಟಿನ್ಯಾಸವನ್ನು ಹೇಳಿದ್ದರೆ, ತಾವು ಎಲ್ಲ ಆಶ್ರಮದವರಿಗೂ ಅದನ್ನೇ ಉಪದೇಶಮಾಡುತ್ತಾರೆ. ಸಂಹಾರಕ್ರಮವನ್ನು ಹೇಳಿದ್ದರೆ, ಅದನ್ನೇ ಉಪದೇಶಮಾಡುತ್ತಾರೆ. ಹೀಗಾದಮೇಲೆ ಆಶ್ರಮದ ಕಟ್ಟುಗಳು ಹೇಗೆ ಉಳಿಯಬೇಕು? ಹಾಗೂ ಆ ಆಶ್ರಮದವರು ಹೇಗೆ ಉದ್ಧಾರವಾಗಬೇಕು? ಆದಕಾರಣ ಎಲೈ ಗುರುಮೂರ್ತಿಗಳೇ, ಸಮಾಜೋದ್ಧಾರಕರಾದ ನೀವು ಯಾವತ್ತು ಕ್ರಮಗಳನ್ನು ತಿಳಿದುಕೊಂಡು, ಆಶ್ರಮಕ್ಕನುಗುಣವಾಗಿ ಬೋಧಿಸುವ ಕ್ರಮವನ್ನಿಟ್ಟುಕೊಳ್ಳಿರಿ; ಮನಸ್ಸಿಗೆ ಬಂದುದನ್ನೇ ಬೋಧಿಸಬೇಡಿರಿ; ಇದರಿಂದ ಸಮಾಜವು ಕ್ಷೀಣಾವಸ್ಥೆಯನ್ನು ಹೊಂದುವುದು. ನಮ್ಮ ಸಮಾಜದಲ್ಲಿ ವಿರಕ್ತರೆಂಬವರು ಮಂತ್ರೋಪದೇಶವನ್ನು ಮಾಡಲಿಕ್ಕೆ ಅನಧಿಕಾರಿಗಳಾಗಿದ್ದರೂ, ಧರ್ಮಶಾಸ್ತ್ರವಿರುದ್ಧವಾಗಿ ತಮ್ಮಲ್ಲಿ ಭಕ್ತಿಯುಳ್ಳ ಕೆಲಕೆಲ ಭಕ್ತರಿಗೆ ಸಂಹಾರಕ್ರಮವನ್ನು ಬೋಧಿಸಿ, ಅವರ ವಂಶವನ್ನೇ ನಾಶಮಾಡಲುದ್ಯುಕ್ತರಾಗಿದ್ದಾರೆ. ಈ ಮಹಾಶಯರು ಈಗ್ಗೆ ೭೦೦ ವರ್ಷಗಳಿಂದ ನೂತನವಾಗಿ ಕಲ್ಪಿಸಲ್ಪಟ್ಟು ಆಗಮಾದಿಗಳಿಗೆ ಅತಿ ವಿರುದ್ಧವಾದ ೧೨ ಅಕ್ಷರಗಳುಳ್ಳ ಬಸವಮಂತ್ರವನ್ನು ಬೋಧಿಸಿ ಸಮಾಜವನ್ನು ರಸಾತಲಕ್ಕೆ ತುಳಿಯಹತ್ತಿದ್ದಾರೆ. ಆಗಮಪ್ರಸಿದ್ಧವಾದ ಪ್ರಸಾದಪಂಚಾಕ್ಷರೀ ಮೊದಲಾದ ಪಂಚಪಂಚಾಕ್ಷರೀ ಮಂತ್ರಗಳನ್ನು ದೂರೀಕರಿಸಿ, ಕಲ್ಪಿತಮಂತ್ರದಲ್ಲಿ ಭಕ್ತಿಯನ್ನಿಟ್ಟು, ನಡೆಯುವ ಪುಣ್ಯಾತ್ಮರಿಗೆ ಯಾವ ಗತಿಯಾಗುವದೋ ತಿಳಿಯದು. ಅಸ್ತು! ಇನ್ನು ಜಪವು ವಾಚಿಕ ಉಪಾಂಶು-ಮಾನಸಿಕ ಭೇದದಿಂದ ಮೂರು ಪ್ರಕಾರವಾಗಿರುವದು. ತನ್ನ ಸಮೀಪದಲ್ಲಿರುವವರಿಗೆ ಮಾತ್ರ ಕೇಳಿಸುವಂತೆ ಜಪಿಸುವದಕ್ಕೆ ವಾಚಿಕಜಪವೆನ್ನುತ್ತಾರೆ; ಇದು ಕನಿಷ್ಠವು. ಬೇರೊಬ್ಬರಿಗೆ ಕೇಳಿಸದಂತೆ ತುಟಿಗೆ ತುಟಿಯು ಹತ್ತುವಂತೆ ಜಪಿಸುವದಕ್ಕೆ ಉಪಾಂಶುಜಪವೆನ್ನುತ್ತಾರೆ; ಇದು ಮಧ್ಯಮವು. ಜಿಹ್ವಾಗ್ರಚಲನೆಯು ಸಹ ಇಲ್ಲದೆ ಕೇವಲ ಮನಸ್ಸಿನಿಂದ ಜಪಿಸುವದಕ್ಕೆ ಮಾನಸಿಕ ಜಪವೆನ್ನುತ್ತಾರೆ: ಇದು ಅತ್ಯುತ್ತಮವು. ಮಂತ್ರವನ್ನು ಈ ಪ್ರಕಾರವಾಗಿ ಜಪಿಸಬೇಕೆಂದು ಶಿವಾಗಮಗಳು ಬೋಧಿಸುತ್ತಿದ್ದರೂ ಕೆಲ ಜನರು ಈ ಪವಿತ್ರಮಂತ್ರವನ್ನು ಬಹಿರಂಗವಾಗಿ ಪಠಿಸುತ್ತಿರುವರು. ಇದು ಶಾಸ್ತ್ರವಿರುದ್ಧವಾದುದು. ಮೋಕ್ಷದಾಯಕವಾದೀಪವಿತ್ರಮಂತ್ರವನ್ನು ರಹಸ್ಯವಾಗಿ ಜಪಿಸುವುದೇ ಶ್ರೇಷ್ಠವಾದುದು.

ಗುರುಸ್ತಂತ್ರಶ್ಚ ಮಂತ್ರಶ್ಚ ಗೋಪನೀಯಾಃ ಪ್ರಯತ್ನತಃ ।
ಪ್ರಕಾಶಾತ್ ಸಿದ್ಧಿಹಾನಿಃ ಸ್ಯಾದಿತ್ಯಾಹ ಭಗವಾನ್ ಶಿವಃ ॥

ಅಂದರೆ—ಗುರುವನ್ನೂ ಹಾಗೂ ಮಂತ್ರವನ್ನೂ ಅವಶ್ಯ ಗೋಪ್ಯವಾಗಿಡಬೇಕೆಂತಲೂ, ಪ್ರಕಾಶಮಾಡಿದಲ್ಲಿ ಸಿದ್ಧಿಯಾಗಲಾರದೆಂತಲೂ ಧರ್ಮಗ್ರಂಥಗಳು ಸಾರುವವು. ಆದುದರಿಂದ ಮಂತ್ರವನ್ನು ಪ್ರಕಾಶವಾಗಿ ಉಚ್ಚರಿಸದೆ ಮನಸ್ಸಿನಲ್ಲಿ ಜಪಿಸುವದೇ ಸದ್ಗತಿದಾಯಕವಾಗಿರುವದು. ಮಂತ್ರವನ್ನು ಜಪಿಸುವ ಕಾಲದಲ್ಲಿ ಸೀನು, ಆಕಳಿಸುವಿಕೆ, ಕ್ಯಾಕರಿಸುವಿಕೆ, ಸಿಟ್ಟು, ಗರ್ವ ಇವುಗಳನ್ನು ಬಿಡಬೇಕು. ಜಪಕಾಲದಲ್ಲಿ ನಾಯಿ ಬೆಕ್ಕು ಮೊದಲಾದ ಕೆಟ್ಟಪ್ರಾಣಿಗಳನ್ನೂ, ನೀಚಕುಲೋತ್ಪನ್ನರನ್ನೂ, ಆಚಾರಹೀನರನ್ನೂ, ಪತಿತರನ್ನೂ ನೋಡಬಾರದು. ಆಕಸ್ಮಾತ್ ನೋಡಿದರೆ ಆಚಮನವನ್ನು ಮಾಡಿ ಶಿವನನ್ನು ಸ್ಮರಿಸಬೇಕು.

ಶಿವತತ್ತ್ವಾತ್ಪರಂ ನಾಸ್ತಿ ಯಥಾ ತತ್ತ್ವಾಂತರಂ ಮಹತ್ ।
ತಥಾ ಪಂಚಾಕ್ಷರಾದನ್ಯನ್ನಾಸ್ತಿ ಮಂತ್ರಾಂತರಂ ಮಹತ್ ॥
ಜ್ಞಾತೇ ಪಂಚಾಕ್ಷರೀಮಂತ್ರೇ ಕಿಂ ವಾ ಮಂತ್ರಾಂತರೈಃ ಫಲಂ ।
ಜ್ಞಾತೇ ಶಿವೇ ಜಗನ್ಮೂಲೇ ಕಿಂ ಫಲಂ ದೇವತಾಂತರೈಃ ॥
ಬ್ರಹ್ಮಾದೀನಾಂ ಚ ದೇವಾನಾಂ ಜಗತ್ಸೃಷ್ಟ್ಯಾದಿಕರ್ಮಣಿ ।
ಮಂತ್ರಸ್ಯಾಸ್ಯೈವ ಮಹಾತ್ಮ್ಯಾತ್ಸಾಮರ್ಥ್ಯಮುಪಜಾಯತೇ ॥

ಶಿವತತ್ತ್ವಕ್ಕಿಂತಲೂ ಹೆಚ್ಚಿನ ತತ್ತ್ವವು ಹೇಗೆ ಇಲ್ಲವೋ ಹಾಗೆಯೇ ಪಂಚಾಕ್ಷರೀಮಂತ್ರಕ್ಕಿಂತಲೂ ಹೆಚ್ಚಿನ ಮಂತ್ರವಿರುವದಿಲ್ಲವೆಂದೂ, ಜಗತ್ಕಾರಣನಾದ ಪರಶಿವನನ್ನು ತಿಳಿದಿದ್ದಾದರೆ ಅನ್ಯದೇವತೆಗಳಿಂದ ಹೇಗೆ ಫಲವಿಲ್ಲವೋ, ಹಾಗೆಯೇ ಪಂಚಾಕ್ಷರೀಮಂತ್ರವನ್ನು ತಿಳಿದಿದ್ದಾದರೆ ಉಳಿದ ಮಂತ್ರಗಳಿಂದ ಯಾವ ಪ್ರಯೋಜನವಿಲ್ಲವೆಂದೂ, ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಿಗೆ ಜಗತ್ತುಗಳ ಸೃಷ್ಟಿ ರಕ್ಷಣಾದಿ ಕಾರ್ಯಗಳಲ್ಲಿ ಸಾಮರ್ಥ್ಯವು ಈ ಮಂತ್ರದಿಂದಲೇ ಪ್ರಾಪ್ತವಾಯಿತೆಂದೂ ಶ್ರೀಜಗದ್ಗುರು ರೇಣುಕಾಚಾರ್ಯರು ಬೋಧಿಸಿರುವರು. ಆದಕಾರಣ ಪ್ರತಿಯೊಂದು ಆಶ್ರಮದ ವೀರಶೈವರು ಶ್ರೀಮದಾಚಾರ್ಯಪಾದರ ಶಾಸನವಮೇರೆಗೆ ಈ ಮಹಾಮಂತ್ರದಲ್ಲಿ ಭಕ್ತಿಯನ್ನಿಟ್ಟು ಜಪಕ್ರಮವನ್ನು ಗುರುಮುಖದಿಂದ ಸಾಂಗವಾಗಿ ತಿಳಿದುಕೊಂಡು ತಮ್ಮ ತಮ್ಮ ಆಶ್ರಮಾನುಸಾರವಾಗಿ ನ್ಯಾಸಾದಿಗಳನ್ನು ಮಾಡಿ ಮುಕ್ತಿಭಾಗಿಗಳಾಗಬೇಕು.

ಸಿಂಗಪುರದ ಮೇಲೆ ವಿಮಾನದಾಳಿ

ಕಳೆದ ೧ನೆಯ ತಾರೀಖಿನದಿವಸ ಸಿಂಗಪುರದಮೇಲೆ ಶತ್ರುವಿಮಾನಗಳು ಎರಡುಸಾರೆ ದಾಳಿ ನಡೆಸಿದವು. ಸೈನಿಕ ಪ್ರದೇಶಗಳಲ್ಲಿ ಏನೂ ನಷ್ಟವಾಗಲಿಲ್ಲ. ಪುರಜನರಲ್ಲಿ 17 ಜನರು ಸಾವುನೋವುಗಳಿಗೆ ಒಳಗಾದರು. ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಸ್ವಲ್ಪ ನಷ್ಟವುಂಟಾಯಿತೆಂದು ತಿಳಿದುಬರುತ್ತದೆ.

ಯುದ್ಧವಾರ್ತೆ

ನಾರ್ವೆಯ ಮೇಲೆ ಬ್ರಿಟಿಷರ ದಾಳಿ

ನಾರ್ವೆ ತೀರದ ಮೇಲೆ ಬ್ರಿಟಿಷರು ಬಲವಾದ
ದಾಳಿಯನ್ನು ನಡೆಸಿದರು. ಈ ದಾಳಿಗೆ ಸಿಕ್ಕಿ 12
ಕ್ಕಿಂತ ಹೆಚ್ಚು ಜರ್ಮನರು ಮಡಿದರು. 95 ಜನರು ಸೆ
ಸ್ಕರು. ತೀರದಲ್ಲಿದ್ದ ಒಟ್ಟು 15650 ತೂಕದ
ಜರ್ಮನ್ ಹಡಗುಗಳು ನಾಶಮಾಡಲ್ಪಟ್ಟವು.

ಸಿಂಗಪುರದ ಮೇಲೆ ಮುತ್ತಿಗೆಗಳು

ಜಪಾನರ ಮುತ್ತಿಗೆಗಳಿಂದ ಸಿಂಗಪುರದ ಜನರು
ಬಳಲಿದ್ದಾರೆ, ಆದರೆ, ಎದೆಗೆಟ್ಟಿಲ್ಲ. ಬೆಳಗ್ಗೆ ಎಲ್ಲರೂ
ಕೆಲಸಕ್ಕೆ ಹೋಗುವರು. ಪಿನಾಂಗಿನ ಜನರು ಓಡಿ
ಹೋದಂತೆ ಸಿಂಗಪುರದಲ್ಲಿ ಓಡಿಹೋಗುವುದಿಲ್ಲ. ೩೧
ನೆಯ ತಾರೀಖಿನ ದಿವಸ ಜಪಾನ್ ವಿಮಾನಗಳು
ನಗರದಮೇಲೆ ಹಾರುತ್ತಲೇ ಇದ್ದವು. ವಿಮಾನಧ್ವಂ
ಸಕ ಫಿರಂಗಿಗಳ ಆರ್ಭಟದಿಂದ ಭೂಮಿಯು ನಡುಗು
ತ್ತಿತ್ತು. ಶತ್ರುಗಳ ಮುತ್ತಿಗೆಯಿಂದ ಪ್ರಜೆಗಳ ಆಸ್ತಿ
ಗಳಿಗೆ ನಷ್ಟವುಂಟಾಗಿವೆ. ೧೩ ಜನರುಸತ್ತ ಮತ್ತು
ಗಾಯಗೊಂಡ ವಿಚಾರವು ವರದಿಯಾಗಿದೆ.

ಸಿಂಗಪುರದ ರಕ್ಷಣೆಗೆ ಹೆಚ್ಚು ಬಲ ಬೇಕು

ಹಾಂಕಾಂಗ್ ದ್ವೀಪವು ಜಪಾನರಿಗೆ ಶರಣಾಗತವಾ
ದುದರಿಂದ ಸಿಂಗಪುರದ ರಕ್ಷಣೆಗಾಗಿ ಹೆಚ್ಚು ಸೈನ್ಯ
ವನ್ನು ಶೇಖರಿಸುವುದು ಅಗತ್ಯವೆಂಬುದನ್ನು ಬ್ರಿಟನ್ನೂ,
ಆಸ್ಟ್ರೇಲಿಯವೂ ತಿಳಿದುಕೊಳ್ಳಬೇಕೆಂದೂ, ಸಿಂಗಪುರಕ್ಕೆ
ಆಧುನಿಕ ಮಾದರಿಯ ವಿಮಾನಗಳೂ ಸುಶಿಕ್ಷಿತ ಯೋಧ
ರೂ ಬೇಕಾಗಿವೆಯೆಂದೂ ಅಲ್ಲಿಯ ಅಧಿಕಾರಿಗಳು ಅಭಿ
ಪ್ರಾಯಪಟ್ಟಿರುವರೆಂದು ಹೇಳಲಾಗಿದೆ.

ಫಿಲಿಪ್ಪೈನಿನಲ್ಲಿ ಪ್ರತಿಭಟನೆ

ಫಿಲಿಪ್ಪೈನಿನ ಪಾಗನ್ ಪ್ರಾಂತದಲ್ಲಿ ಅಮೆರಿಕ ಸೈನ್ಯಾ
ಧಿಕಾರಿಗಳು ತಮ್ಮ ಸೈನ್ಯವನ್ನೆಲ್ಲ ಪುನರ್ವ್ಯವಸ್ಥೆಗೊಳಿ
ಕೊಂಡು ರಣರಂಗದ ಉದ್ದವನ್ನು ಕಡಮೆ ಮಾಡಿಕೊಂ
ದ್ದಾರೆ. ಕಳೆದ ಕೆಲವು ದಿನಗಳಲ್ಲಿ ಶತ್ರುಗಳ ಕಡೆ
ಹಲವು ಕಾಲಾಳು ದಳಗಳೂ ಟ್ಯಾಂಕ್ ಪಡೆಗಳೂ ಕುದು
ಸವಾರರ ದಳಗಳೂ ಬಂದಿವೆ. ಆದರೂ ಅಮೆರಿಕನ್ನರು
ಭಯಪಡದೆ ಧೈರ್ಯದಿಂದ ಕಾದುತ್ತಿದ್ದಾರೆ. ಎರಡು
ಕಡೆಯೂ ಅಪಾರ ಹಾನಿಯಾಗಿದೆ.

ಮನಿಲಾಕ್ಕೆ ಭಯಂಕರ ವಿಪತ್ತು

ಫಿಲಿಪ್ಪೈನ್ ದ್ವೀಪಗಳ ರಾಜಧಾನಿಯಾದ ಮನಿಲಾ
ನಗರಕ್ಕೆ ಭಯಂಕರ ವಿಪತ್ತೊದಗಿದೆ. ಜಪಾನರು
ಅನೇಕ ಟ್ಯಾಂಕುಗಳನ್ನೂ ಡೈವ್ ಬಾಂಬರುಗಳನ್ನೂ
ರಣರಂಗಕ್ಕೆ ತಂದಿದ್ದಾರೆ. ಶತ್ರುಗಳ ಬಲವು ಅಪಾ
ವಾಗಿರುವುದರಿಂದ ಜ॥ ಮೆಕ್‌ಆರ್ಥರ್‌ರವರ ಕೈಕೆ
ರುವ ಅಮೇರಿಕನ್ ಮತ್ತು ಫಿಲಿಪ್ಪೈನ್ ಪಡೆಗಳು ಮೆ
ಮೆಲ್ಲಗೆ ಹಿಮ್ಮೆಟ್ಟುತ್ತಿವೆ. ಗಾಯಗೊಂಡ ಅಮೆರಿಕ
ಮತ್ತು ಫಿಲಿಪ್ಪೈ ಯೋಧರನ್ನೆಲ್ಲ ಮನಿಲಾದಿ
ಆಸ್ಟ್ರೇಲಿಯಾಕ್ಕೆ ಸಾಗಿಸಲಾಯಿತೆಂದು ಪ್ರಕಟಿಸ
ಗಿದೆ. ಅಮೆರಿಕಾ-ಸೆನೆಟ್ ಸಭೆಯ ವಿದೇಶ ವ್ಯವಹಾ
ಸಮಿತಿಯ ಅಧ್ಯಕ್ಷರಾದ ಶ್ರೀ ಕೊನ್ನಾಲಿಯವರು ಫಿ
ಪೈನ್ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತ
ಪಡಿಸುತ್ತ "ಫಿಲಿಪ್ಪೈನ್ ದ್ವೀಪವು ನಮ್ಮ ಆಸ್ತಿಯ
ವೆಂದೂ, ಸಾಲದ ಮೂಟೆಯೆಂದೂ ಭಾವಿಸಿದ್ದ
ರಿಂದಲೇ ಇಂದು ಮನಿಲಾನಗರದ ಪತನವಾಯಿ
ಫಿಲಿಪ್ಪೈನು ಅಮೆರಿಕದಿಂದ ಬಹಳ ದೂರದಲ್ಲಿರುವುದರಿ
ಅಲ್ಲಿಗೆ ಹೆಚ್ಚಿನ ಸೇನೆಯನ್ನು ಕಳುಹಿಸಲು ಸಾಧ್ಯವಾ
ಅಮೆರಿಕದ ಮಹಾಸೇನೆಯನ್ನುಶತ್ರುಗಳು ಎದುರಿಸಿದ
ನಮಗೆ ಜಯದೊರಕುವುದು. ಜರ್ಮನಿಯೂ ಜಪಾನ್
ಕತ್ತಿಯಿಂದ ಜೀವಿಸಲು ಹೊರಟಿವೆ. ಕತ್ತಿಯಿಂದ
ಅವುಗಳ ನಾಶವಾಗಬೇಕಾಗಿದೆ" ಎಂದು ಹೇಳಿದ

ರಷ್ಯಾದಲ್ಲಿ ಜರ್ಮನ್ನರಿಗೆ ವಿಶೇಷ ಅಪಜಯ

ಮಾಸ್ಕೋ ನಗರದ ನೈಋತ್ಯಕ್ಕೆ ೧೦೦ ಮೈಲಿ ಲ್ಲೂ, ಟುಲಾ ನಗರದ ಪಶ್ಚಿಮಕ್ಕೆ ೬೦ ಮೈಲಿ ಲ್ಲೂ ಇರುವ ಕಾಲುಗಾ ಎಂಬ ಊರನ್ನು ರಷ್ಯನರು ಡಿದರು. ಜರ್ಮನರು ಹಿಂದಕ್ಕೆ ಓಡುತ್ತಿದ್ದಾರೆ. ಸೆಂಬರ್ ೭ ರಿಂದ ೨೫ ರವರೆಗೆ ನೈಋತ್ಯ ರಂಗದಲ್ಲಿ ಷ್ಯನರು ೨೦,೦೦೦ ಜರ್ಮನ್ ಅಧಿಕಾರಿಗಳನ್ನೂ ಯೋಧರನ್ನೂ ಕೊಂದು ಹಾಕಿದರು; ಮತ್ತು ಗಾಯ ಳಿಸಿದರು. ನಾಶಮಾಡಿದ ಮತ್ತು ವಶಪಡಿಸಿಕೊಳ್ಳ ಟ್ಟ ಶಸ್ತ್ರಾಸ್ತ್ರಗಳಂತೂ ಅಪಾರವಾಗಿವೆ

ರಷ್ಯವು ಜಪಾನಿನ ಮೇಲೆ ಬೀಳಲಾರದು

ಜಪಾನಿನ ಮೇಲೆ ಯಶಸ್ವಿಯಾಗಿ ಕಾರ್ಯಕ್ರಮ ನ್ನು ಕೈಗೊಳ್ಳಲು ರಷ್ಯದ ಪೂರ್ವಗಡಿಯಲ್ಲಿರುವ ವ್ಲಾಡಿವೋಸ್ಟಾಕ್" ಒಳ್ಳೇ ಆಯಕಟ್ಟಿನ ಸ್ಥಳವೆಂಬ ಪ್ರಾಯವು ಎಲ್ಲರಿಗೂ ಇದ್ದರೂ, ರಷ್ಯವು ಜಪಾನಿನ ತ್ರರಾಷ್ಟ್ರವಲ್ಲವೆಂಬುದು ನಿಸ್ಸಂದೇಹವಾಗಿದ್ದರೂ, ರ್ವ ಏಷ್ಯದಲ್ಲಿರುವ ರಷ್ಯನ್ ಸೇನೆಯು ಮೀಸಲು ವಾಗಿ ಪರಿಗಣಿಸಲ್ಪಟ್ಟಿರುವದರಿಂದ, ಪಶ್ಚಿಮದಲ್ಲಿ ರ್ಮನಿ ಭಯವು ರಷ್ಯಕ್ಕಿರುವವರೆಗೂ ಪೂರ್ವದ ಈ ಸಲು ದಳವನ್ನು ಉಪಯೋಗಿಸಲು ರಷ್ಯವು ಹಿಂದು ಮುಂದು ನೋಡುತ್ತದೆಂದು ಹೇಳಲಾಗಿದೆ.

ಬ್ರಿಟಿಷರು ಇಪೋ ನಗರವನ್ನು ತ್ಯಜಿಸಿದರು

ಮಲಯಾ ಪರ್ಯಾಯದ್ವೀಪದಲ್ಲಿರುವ ಸಿಂಗ ಪುರ್, ಪಿನಾಂಗ್ ಮತ್ತು ಕೌಲಾಲಾಮ್‌ಪೂರ್ ಈ ಮೂರು ದೊಡ್ಡ ನಗರಗಳನ್ನು ಬಿಟ್ಟರೆ 40 ಸಾವಿರ ಜನ ಖ್ಯೆಯುಳ್ಳ ಟಿನ್ ಕೈಗಾರಿಕೆಯ ಕೇಂದ್ರವಾದ ಪೋ ನಗರವೇ ನಾಲ್ಕನೆಯದು. ಅಲ್ಲಿ ಸಿವಿಲ್ ಮಾನ ನಿಲ್ದಾಣವಿದೆ. ಇಂಥ ಮುಖ್ಯವಾದ ಪಟ್ಟಣ ನ್ನು ಶತ್ರು ವಶಮಾಡದೆ ರಕ್ಷಿಸಿಕೊಳ್ಳಬೇಕೆಂದು ಹಳ ಪ್ರಯತ್ನಪಡಲಾಯಿತು ಆದರೆ ಉತ್ತರ ಮತ್ತು ಶಾನ್ಯದಿಕ್ಕುಗಳಿಂದ ಜಪಾನರು ಮುಂದೆ ನುಗ್ಗಿ ಈ ರವನ್ನು ಸುತ್ತುಗಟ್ಟುವ ಭೀತಿಯುಂಟಾದ್ದರಿಂದ ್ರಿಟಿಷ್ ಸೇನೆಗಳು ನಗರವನ್ನು ತ್ಯಜಿಸಿ ಈ ಪ್ರಮುಖ ನ್ ಕೈಗಾರಿಕೆ ಕೇಂದ್ರದ ದಕ್ಷಿಣದಲ್ಲಿ ಹೊಸ ರಕ್ಷಣ ್ಯೂಹವನ್ನು ರಚಿಸಿಕೊಂಡಿವೆ. ಅಂದರೆ ಜಪಾನು ್ರಿಟಿಷರ ರಕ್ಷಣ ವ್ಯೂಹವನ್ನು ಭೇದಿಸಿದಂತಾಗಲಿಲ್ಲ. ್ರಿಟಿಷರ ಬಳಿ ಸಂಗ್ರಾಮ ಸಲಕರಣೆಗಳೂ ಯೋಧರೂ ತಪರಿಮಾಣದಲ್ಲಿರುವದರಿಂದ ರಕ್ಷಣೆಗೆ ಹೆಚ್ಚು ನುಕೂಲವಾದ ಭೂಪ್ರದೇಶವು ದೊರಕುವವರೆಗೆ ಂದಕ್ಕೆ ಸರಿಯುತ್ತ ಹೋಗಬೇಕೆಂದು ತೀರ್ಮಾನಿಸ ಾಗಿರುವದೆಂದು ತಿಳಿದುಬರುತ್ತದೆ.

ಶ್ರೀ ಚರ್ಚಿಲ್ಲರ ಹೇಳಿಕೆ

31 ನೆಯ ತಾ॥ ದಿವಸ ಶ್ರೀ ಚರ್ಚಿಲ್ಲರು ಒಟ್ಟಾವಾ ರಕಾರ ಭವನದಲ್ಲಿ ಪತ್ರಿಕಾ ಸುದ್ದಿಗಾರರ ಸಭೆಯಲ್ಲಿ ಾತನಾಡುತ್ತ—"ಇಟಲಿಯು ಬೇಗನೆ ಯುದ್ಧದಿಂದ ಹೊರಗಾಗುವುದೆಂಬ ಭರವಸೆ ನನಗಿಲ್ಲವೆಂದೂ, ಹಿಟ್ಲ ನು ಮುಸೂಲಿನಿಯ ಜುಟ್ಟವನ್ನು ಬಲವಾಗಿ ಹಿಡಿದಿರುವ ಂದೂ, ಸಿಂಗಪುರವನ್ನು ಶತ್ರುಗಳಿಗೆ ಒಪ್ಪಿಸುವುದಿಲ್ಲ ಂದೂ, ಮುಂದಿನ ಸಂಗ್ರಾಮ ಮಾರ್ಗವನ್ನು ರೂಜ್ ವೆಲ್ಟರೊಂದಿಗೆ ಮಾತನಾಡಲಾಗುವದೆಂದೂ, ಮಿತ್ರ ರಾಷ್ಟ್ರಗಳ ಸಂಕಲ್ಪವನ್ನು ಕೇವಲ ಮಾತುಗಳಲ್ಲಿ ತೋರಿ ದೆ ಕಾರ್ಯತಃ ತೋರಿಸುವುದಾಗುವದೆಂದೂ, ಕಳೆದ ತಿಂಗಳಲ್ಲಿ ಹಡಗುಗಳಿಗೆ ಆಗಿರುವ ನಷ್ಟವು ಅದಕ್ಕೆ ಂದಿನ ೬ ತಿಂಗಳಲ್ಲಿ ಆಗಿರುವ ನಷ್ಟದಲ್ಲಿ ಕೇವಲ ಂದು ಭಾಗವೆಂದೂ, ಈಗ ಅಮೆರಿಕಾ ಮತ್ತು ಕೆನಡಾ ಗಳು ಅಸಂಖ್ಯಾತ ಹಡಗುಗಳನ್ನು ಕಟ್ಟುತ್ತಿವೆಯೆಂದೂ, 942ರಲ್ಲಿ ಬ್ರಿಟನ್ನು ಸಮುದ್ರದಮೇಲೆ ಮತ್ತಷ್ಟು ಸುಲಭ ಾಗಿ ಚಲಿಸಲು ಸಮರ್ಥವಾಗುವುದೆಂದೂ" ತಿಳಿಸಿದರು.

ಹರ್ ಹಿಟ್ಲರವರ ಭಾಷಣ

ಹರ್ ಹಿಟ್ಲರರು ತಮ್ಮ ಸೈನಿಕರಿಗೆ ನೂತನವರ್ಷದ ಸಂದೇಶವೊಂದನ್ನು ಕಳಿಸುತ್ತ "ಯೋಧರೇ! ಪೋಲೆಂಡ್ ಕದನವು ಮುಗಿದಮೇಲೆ ನಾನು ಶಾಂತಿ ಸಲಹೆಯನ್ನು ಮುಂದಿಟ್ಟಂತೆಯೇ 1940ನೇ ಜುಲೈ ತಿಂಗಳಲ್ಲಿ ಪಶ್ಚಿಮರಂಗದಕದನಮುಗಿದಮೇಲೆ ಶಾಂತಿಸಲಹೆಯನ್ನು ಮುಂದಿಟ್ಟೆನು ಆದರೆ ಈ ನನ್ನ ಸಲಹೆಯನ್ನು ತಳ್ಳಿಹಾಕಲಾಯಿತಲ್ಲದೆ ನಾನು ದೌರ್ಬಲ್ಯವನ್ನು ವ್ಯಕ್ತಪಡಿಸುತ್ತಿದ್ದೇನೆಂದು ಹಳಿಯಲಾಯಿತು. ಇಂತಹ ಪರಿಸ್ಥಿತಿಯಲ್ಲಿ ಜರ್ಮನಿಗೆ ಬೇರೆ ದಾರಿಯೇ ಇಲ್ಲದೆ, ಹೊಡೆದಾಡಬೇಕಾಗಿಬಂದಿತು. 1941ನೇ ವರ್ಷದಲ್ಲಿ ನಾವು ಬಹಳ ಕಷ್ಟತರವಾದಂತಹ ನಿರ್ಣಯಗಳನ್ನು ಮಾಡಬೇಕಾಗಿಯಿತು. ರಕ್ತದ ಕಾಲುವೆಗಳು ಹರಿದವು ಆದರೆ 1941ನೇ ವರ್ಷವು ನಾಜಿಗಳ ಅದ್ಭುತ ವಿಜಯದ ವರ್ಷವೆನಿಸಿ ಇತಿಹಾಸ ಪ್ರಸಿದ್ಧವಾಯಿತು ರಷ್ಯಾರಂಗದಲ್ಲಿ ನಾಜಿಗಳು ಅನುಭವಿಸಬೇಕಾಗಿ ಬಂದ ಕಷ್ಟಗಳನ್ನು ವರ್ಣಿಸಿ, ಜರ್ಮನ್ ಯೋಧರ ಜಯವು ಪರಮಾದ್ಭುತವಾದುದೆಂದೂ ಈಗಿನ ಕದನಕ್ಕೆ ಯಹೂದ್ಯ ಬಂಡವಾಳಗಾರರೂ, ಯಹೂದ್ಯ ಬೋಲ್ಷೆವಿಕರೂ ಕಾರಣರೆಂದೂ ನುಡಿದರು ಶ್ರೀಚರ್ಚಿಲ್ಲರೂ ಮತ್ತು ರೂಜ್‌ವೆಲ್ಟರೂ ಯೂರೋಪನ್ನು ಬೋಲ್ಷೆವಿಕ್ ಮಹಾಭೂತಕ್ಕೆ (ಸ್ಟಾಲಿನ್ನರಿಗೆ) ಒಪ್ಪಿಸಿಬಿಟ್ಟಿದ್ದಾರೆ. 'ಬೋಲ್ಷೆವಿಜಂ'ನಿಂದ ಯೂರೋಪನ್ನು ಧ್ವಂಸಮಾಡಲು ಶ್ರೀ ಚರ್ಚಿಲ್ಲರಿಗೂ ಮತ್ತು ರೂಜ್‌ವೆಲ್ಟರಿಗೂ ಸಾಧ್ಯವಿಲ್ಲ ಆದರೆ ಅವರ ಜನಾಂಗಗಳೇ ಇಂದಲ್ಲ ನಾಳೆ ಆ ಭೂತದ ಬಾಯಿಗೆ ಬೀಳುವುದು ನಿಶ್ಚಯ. ಪೂರ್ವ ಯೂರೋಪಿನಲ್ಲಿ ಇನ್ನೂ ಹೊಡೆದಾಟವು ನಡೆಯುತ್ತಿದೆ. ಅದು ಕ್ರಮಕ್ರಮವಾಗಿ ಸ್ಥಿಮಿತಕ್ಕೆ ಬರುತ್ತದೆ ಆದರೆ, ಈಗ ಪೂರ್ವ ಏಷ್ಯಾದಲ್ಲಿ ಯುದ್ಧವು ಆರಂಭವಾಗಿದೆ 1940ರಲ್ಲಿ ಪಶ್ಚಿಮದ ಕದನವು ಮುಗಿದ ಮೇಲೆ ನಾನು ಶಾಂತಿ ಸಲಹೆಯನ್ನು ಮುಂದಿಟ್ಟೆನು ಆಗ ನನ್ನನ್ನು 'ಷಂಡ'ನೆಂದು ಕರೆದರು ಶಾಂತಿಗಾಗಿ ಮುಂದೆ ಬಂದ ನಾನು ಸಂಗ್ರಾಮ ಕೈಗಾರಿಕೆಗಳಲ್ಲಿ ತಾವು ಹಾಕಿರುವ ಬಂಡವಾಳದ ಶತ್ರುವೆಂದು ತಿಳಿಸಿದರು ಶ್ರೀ ಛೇಂಬರ್ಲೀನ್, ಶ್ರೀ ಚರ್ಚಿಲ್, ಶ್ರೀ ಏಡನ್ ಇವರಲ್ಲದೆ ರೂಜ್‌ವೆಲ್ಟರು ಸಹ 'ವ್ಯಾಪಾರ' ಮನೋಭಾವವನ್ನು ತೋರಿಸಿದರು ಪಶ್ಚಿಮದ ರಂಗದಲ್ಲಿ ಜರ್ಮನಿಯು ಸಫಲಪ್ರದವಾಗಿ ಸಂಗ್ರಾಮವನ್ನು ಮುಗಿಸಿದ ಮೇಲೆ ಸಹ ಯುದ್ಧವನ್ನು ಮುಂದುವರಿಸುವುದರಿಂದ ಲಾಭವಿದೆಯೆಂದು ಶ್ರೀಚರ್ಚಿಲ್ಲರು ಭಾವಿಸಿದರು 1941 ನೇ ವರ್ಷವು ಕಾಲಿಟ್ಟಿತು ವಿಶ್ವವು ಎಂದೂ ನೋಡದೆ ಇದ್ದಂತಹ ಮಹಾಕದನಗಳು ಆರಂಭವಾದವು. ಜೂನ್ 22ನೇ ತಾ॥ ದಿನ ಹೆಚ್ಚುಕಡಿಮೆ ಯೂರೋಪೆಲ್ಲವೂ ಎದ್ದುನಿಂತಿತು. ರಷ್ಯದೊಂದಿಗೆ ಕಾಳಗವು ಆರಂಭವಾಯಿತು ಜರ್ಮನ್ ಯೋಧರು ಇದುವರೆಗೆ ತೋರಿಸಿದ ಧೈರ್ಯ ಸಾಹಸಗಳಿಗಾಗಿ ನಾನು ಅವರನ್ನು ಅಭಿನಂದಿಸುತ್ತೇನೆ 1942ರಲ್ಲಿ ನಾವು ಮತ್ತೆ ಕದನವನ್ನಾರಂಭಿಸಿ, ಈ ಬೋಲ್ಷೆವಿಕ್ ಭೂತವನ್ನು ನಿರ್ನಾಮ ಮಾಡುವುದು ನಿಶ್ಚಯ ಪ್ರತಿ 20-25 ವರ್ಷಗಳಿಗೊಮ್ಮೆ ಜರ್ಮನಿಯನ್ನು ಯುದ್ಧಕ್ಕೆ ಎಳೆಯುವಂತಹ ಅಧಮರನ್ನು ನಾವು ಉಳಿಸಲಾರೆವು ಈಗ ಯೂರೋಪಿನಲ್ಲಿ ಹರಿಯುತ್ತಿರುವ ರಕ್ತದ ಕೋಡಿಯು ಇನ್ನೂ ಹಲವು ತಲೆಮಾರಿನವರಿಗೆ ಕಾಣಬರುವುದಿಲ್ಲವೆಂಬುದು ನಿಶ್ಚಯ" ಎಂದು ಹೇಳಿದರು.

ರಷ್ಯದಲ್ಲಿ ಹಿಟ್ಲರ್

ಹರ್ ಹಿಟ್ಲರರು ರೋಸ್ಟೋವ್ ರಣಕ್ಷೇತ್ರದ ಕಡೆಗೆ ವಿಮಾನ ಮೂಲಕ ಹೋಗಿರುವರೆಂದೂ ಅಲ್ಲಿನ ಸೈನ್ಯಗಳ ಮುಂದಾಳುತನವನ್ನು ತಾವೇ ಖುದ್ದು ವಹಿಸುವರೆಂದೂ ಕಲೂಗಾ ಪಟ್ಟಣವು ರಷ್ಯನರ ವಶವಾಗಿ ಜರ್ಮನರಿಗೆ ಪರಾಜಯವುಂಟಾದುದರಿಂದ ಹಿಟ್ಲರರು ಆ ಕಡೆ ಹೋದರೆಂದೂ ಅವರು ತಮ್ಮ ವಸತಿಯನ್ನು ಸ್ಮೊಲೆನ್ಸ್ಕ್ ಪಟ್ಟಣದಲ್ಲಿ ಏರ್ಪಡಿಸಿರುವರೆಂದೂ ತಿಳಿದುಬರುತ್ತದೆ.

ಜಪಾನರನ್ನು ಎದುರಿಸಲು ಚೀಣಾ ಸೈನಿಕರು

ಮಲಯ ಮತ್ತು ಫಿಲಿಪೈನ್ ದ್ವೀಪಗಳಲ್ಲಿ ಜಪಾನರು ಪ್ರಥಮ ದರ್ಜೆಯ ಅಸಂಖ್ಯ ಬಲವನ್ನು ಉಪಯೋಗಿಸುತ್ತಿದ್ದಾರೆ. ಫಿಲಿಪೈನ್ ಒಂದರಲ್ಲೇ ೩ ಲಕ್ಷ ಜಪಾನ್ ಯೋಧರು ಯುದ್ಧ ಮಾಡುತ್ತಿರುವರು. ಮಿತ್ರರಾಷ್ಟ್ರಗಳವ್ಯೂಹದಲ್ಲಿ ಮಲಯಾ ಮತ್ತು ಫಿಲಿಪೈನ್‌ಗಳೆರಡೂ ದುರ್ಬಲ ಸ್ಥಾನಗಳಾಗಿರುವದರಿಂದಲೂ, ಮಲೆಯಾದ ಕಡೆಯಿಂದ ಹೊರಡುವ ಬರ್ಮಾ ಚೀಣಾ ರಸ್ತೆಯೇ ಚೀಣರಿಗೆ ಈಗ ಮುಖ್ಯ ಸರಬರಾಜು ಮಾರ್ಗವಾಗಿರುವದರಿಂದಲೂ ಮಲಯಾ ಬರ್ಮಾಗಳ ರಕ್ಷಣೆಯಲ್ಲಿ ಚೀಣದ ಹಿತವೂ ಸೇರಿರುತ್ತದೆ. ಆದ್ದರಿಂದ ಚೀಣಾದಿಂದ ಸೈನಿಕರನ್ನು ಅಲ್ಲಿಗೆ ಕಳುಹಿಸಿ ಬಲಪಡಿಸಬೇಕಾದುದು ಅಗತ್ಯ. ಚೀಣರು 4 ವರುಷಗಳಿಂದ ಜಪಾನರೊಡನೆ ಹೊಡೆದಾಡಿ ಅವರ ಯುದ್ಧ ರೀತಿಗಳನ್ನು ಅರಿತಿರುವದರಿಂದ ಅವರು ಬರ್ಮಾದಲ್ಲಿಯೂ ಮಲಯಾದಲ್ಲಿಯೂ ಅಮೂಲ್ಯ ಸಹಾಯ ನೀಡಬಹುದೆಂದು ಯೋಚಿಸಲಾಗಿದೆ.

ವಿಮಾನ ದಾಳಿಯಬಗ್ಗೆ ಮೈಸೂರು ಸರ್ಕಾರದ ಪ್ರಕಟನೆ

ಮೈಸೂರಿಗೆ ಅನ್ವಯವಾಗುವ ಇಂಡಿಯಾ ರಕ್ಷಣ ಶಾಸನದ ೩೨ ನೇ ವಿಧಿಯ ೧ ನೇ ಉಪವಿಧಿ ಪ್ರಕಾರ ಮೈಸೂರು ಸರ್ಕಾರದವರು ಒಂದಾಜ್ಞೆಯನ್ನು ಹೊರಡಿಸಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿಯೂ ಆ ನಗರಗಳ ಸುತ್ತಮುತ್ತಲು ೧೫ ಮೈಲಿಗಳ ದೂರದಲ್ಲಿಯೂ ವಿಮಾನ ದಾಳಿ ಎಚ್ಚರಿಕೆ ಕಾರ್ಯಕ್ರಮಗಳನ್ನು ಈ ರೀತಿ ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ. ಆ ವಿಧಿನಿಯಮಗಳು ಈ ರೀತಿ ಇವೆ—

(೧) ಬೆಂಗಳೂರು ಮತ್ತು ಮೈಸೂರು ನಗರಗಳ ಸರಹದ್ದಿನೊಳಗೆ ಮತ್ತು ಅವುಗಳ ೧೫ ಮೈಲಿಗಳ ಸುತ್ತಳತೆಯ ಪ್ರದೇಶದೊಳಗೆ ಈ ಆಜ್ಞೆಯು ಕೂಡಲೇ ಜಾರಿಗೆ ಬರತಕ್ಕದ್ದು.

(೨) ದಾಳಿಯಾಗುವ ಸಂಭವವುಂಟಾದ ಸಂದರ್ಭದಲ್ಲಿ (ವಿಮಾನ ದಾಳಿ ಎಚ್ಚರಿಕೆ ಸೂಚನೆ ಇತ್ತಾಗ ಅಥವಾ ಅದನ್ನು ಕೊಡದೆ ಇದ್ದಾಗ) ಅಥವಾ 'ಬ್ಲಾಕ್ ಔಟನ್ನು ಆಚರಣೆಗೆ ತರುವ ಬಗ್ಗೆ ಸಾರ್ವಜನಿಕರಿಗೆ ಮುಂಚಿತವಾಗಿ ತಿಳುವಳಿಕೆ ಕೊಟ್ಟು ಎ. ಆರ್. ಪಿ. ಕಂಟ್ರೋಲರು ತಕ್ಕ ಏರ್ಪಾಟು ಮಾಡುವ ಸಂದರ್ಭದಲ್ಲಿ ಈ ಕೆಳಗೆ ಕಂಡ ನಿಯಮಗಳು ವಿಮಾನಗಳು ಹೊರಟುಹೋದ ಸೂಚನೆ ಕೊಡುವವರೆಗೂ ಅಥವಾ ಎಂದಿನಂತೆ ದೀಪವು ಬರುವವರೆಗೂ ಆಚರಣೆಯಲ್ಲಿರುತ್ತವೆ.

(೧) ಯಾವ ಕಟ್ಟಡದಲ್ಲಾಗಲಿ ಅಥವಾ ಯಾವ ಕಟ್ಟಡದ ಯಾವದೊಂದು ಭಾಗದಲ್ಲಾಗಲಿ ಅಥವಾ ಅದಕ್ಕೆ ಸಂಬಂಧಪಟ್ಟ ಆವರಣದಲ್ಲಾಗಲಿ ಒಂದು ಸಾಮಾನ್ಯ ದೀಪದ ಅಥವಾ ಮೇಣದ ಬತ್ತಿಯ ಬೆಳಕಿನ ಪ್ರಕಾಶಕ್ಕಿಂತ ಹೆಚ್ಚಾದ ಬೆಳಕಿನ ಪ್ರಕಾಶವನ್ನು ಉಪಯೋಗಿಸಲಾಗದು. ಮತ್ತು ಅಂತಹ ಬೆಳಕಿನ ಪ್ರಕಾಶವು ಕಟ್ಟಡದ ಹೊರಗಡೆ ಕಾಣಿಸಕೂಡದು.

(೨) ಯಾವದೊಂದು ಕಟ್ಟಡದ ಹೊರಭಾಗದಲ್ಲಾಗಲೀ ಅಥವಾ ಯಾವುದೊಂದು ರಸ್ತೆಯಲ್ಲಾಗಲೀ ಅಥವಾ ಬಹಿರಂಗ ಸ್ಥಳದಲ್ಲಾಗಲೀ ಯಾವ ದೀಪವನ್ನೂ ಪ್ರದರ್ಶಿಸಲಾಗದು.

(೩) ಪೋಲೀಸ್ ವಾಹನಗಳು, ಅಂಬ್ಯುಲನ್ಸ್‌ಗಳು, ಫೈರ್ ಎಂಜನ್ನುಗಳು ರೆಸ್ಕ್ಯೂಪಾರ್ಟಿ ಲಾರಿಗಳು ವಿಮಾನದಾಳಿ ಮುಂಜಾಗ್ರತೆ ಸಿಬ್ಬಂದಿಯವರ ವಾಹನಗಳು ಸ್ಯಾಲ್ವೇಜ್ ಕಾರ್ಪ್ಸ್ ವಾಹನಗಳು ಮತ್ತು ರಕ್ಷಣೆ ಪಡೆಗಳಿಗೆ ಸಂಬಂಧಪಟ್ಟ ವಾಹನಗಳು ಹೊರತಾಗಿ ಉಳಿದ ಎಲ್ಲಾ ವಾಹನಗಳ ದೀಪಗಳನ್ನೂ ಆರಿಸಬೇಕು. ವಿನಾಯಿತಿ ಪಡೆದಮೇಲೆ ತಿಳಿಸಲಾದ ವಾಹನಗಳು ಹಗಲು ಮತ್ತು ರಾತ್ರಿಯವೇಳೆ ಚೆನ್ನಾಗಿ ಕಾಣುವಂತಹ ಗುರುತುಗಳನ್ನು ಹೊಂದಿರಬೇಕು."

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಸೊಲ್ಲಾಪುರದಲ್ಲಿ ರಂಭಾಪುರೀ ಜಗದ್ಗುರುಗಳ ಪಾದಪೂಜಾವೈಭವ

ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಸೊಲ್ಲಾಪುರದ ಅಖಿಲ ಭಕ್ತಮಂಡಳಿಯ ಪ್ರಾರ್ಥನಾನುಸಾರವಾಗಿ ಸಕಲ ರಾಜಬಿರುದಾವಳಿಸಮೇತ ಛತ್ರಗಾಂದೋಲಿಕೋತ್ಸವದಿಂದ ಸೊಲ್ಲಾಪುರಕ್ಕೆ ವಿಜಯಂಗೈಸಿದ ಸಂಗತಿಯು ಸರ್ವತ್ರ ಸುಪ್ರಸಿದ್ಧವಾಗಿರುವದಷ್ಟೆ! ಮಹಾಚಾರ್ಯರ ಆಗಮನದಿಂದ ಸೊಲ್ಲಾಪುರದ ಭಕ್ತಮಂಡಲಿಗೆ ಉಂಟಾಗಿರುವ ಆನಂದವನ್ನು ವರ್ಣಿಸಲು ಆದಿಶೇಷನನ್ನು ಬಿಟ್ಟು ಇತರರಿಗೆ ಸಾಧ್ಯವಿಲ್ಲ. ಜಗದ್ಗುರುಗಳವರ ಪೂಜಾನುಷ್ಠಾನಪ್ರಭೆ. ಗುರ್ವಾಜ್ಞಾಪಾಲಕರಾದ ಸೊಲ್ಲಾಪುರದ ಭಕ್ತಮಂಡಲಿಯವರು ಅಪ್ರಾಜ್ಞಸಂಗಜನಿತ ಕಲ್ಮಷ ಪಂಕವನ್ನು ತೊಳೆದುಕೊಂಡು ಶುದ್ಧ ಚಿತ್ತಕಲಶದಲ್ಲಿ ಶ್ರೀಮನ್ಮಹಾಚಾರ್ಯರನ್ನು ಶಿವಾಗಮಗಳಲ್ಲಿ ಹೇಳಿದ ಪ್ರಕಾರ ಪೂಜಿಸಲು ಮಹಾಭಕ್ತಿಯಿಂದ ತಮ್ಮ ತಮ್ಮ ನಿಲಯಗಳಿಗೆ ಮಹೋತ್ಸವದೊಡನೆ ದಯಮಾಡಿಸಿಕೊಂಡುಹೋಗಿ ಪಾದಪದ್ಮಪೂಜೆಯನ್ನು ಮಾಡಿ ಪಾದೋದಕ ಪ್ರಸಾದಸೇವನೆಯಿಂದ ಪವಿತ್ರರಾಗಿ ಮನದಣಿಯುವಂತೆ ಕಾಣಿಕೆಯನ್ನಿತ್ತು ಮಾಹೇಶ್ವರರನ್ನು ತೃಪ್ತಿಗೊಳಿಸುತ್ತಿರುವ ಸಂಭ್ರಮವು ಅನ್ಯಾದೃಶವಾಗಿದ್ದು ಸುವರ್ಣಾಕ್ಷರದಿಂದ ಬರೆದಿಡತಕ್ಕಂಥದಾಗಿರುವದು. ಇಂತಹ ಮಹೋತ್ಸವವು ಈ ಹಿಂದೆ ಯಾವ ಕಾಲದಲ್ಲಿಯೂ ಜರುಗಿದ್ದಿಲ್ಲವೆಂದು ಸಕಲ ಮುದಿಯರು ಮುಕ್ತಕಂಠದಿಂದ ನುಡಿಯುತ್ತಿರುವದನ್ನು ನೋಡಿದರೆ ಮಹಾಚಾರ್ಯರುಗಳೇ ಬಂದಿದ್ದರೆಂದು ಹೇಳಲು ಅಭ್ಯಂತರವಿಲ್ಲ. ಕೈಲಾಸದಲ್ಲಿ ಪರಶಿವನ ದರ್ಶನಕ್ಕೆ ಚತುರ್ದಶ ಲೋಕದವರು ಬಂದು ಹೋಗುತ್ತಿರುವಂತೆ ಅನೇಕ ಕಡೆಯ ಗುರುದೇವತಾ ಭಕ್ತತತ್ಪರರು ಶ್ರೀಜಗದ್ಗುರುಗಳವರ ದರ್ಶನಾಶೀರ್ವಾದಗಳನ್ನು ಪಡೆಯಲು ವಿಶ್ರಾಂತಿಯಿಲ್ಲದೆ ಬರುತ್ತಿರುವ ವೈಖರಿಯು ವರ್ಣನಾತೀತವಾಗಿರುವದು. ಸೊಲ್ಲಾಪುರದಲ್ಲಿರುವ ಶ್ರೀ ಮನ್ಮಥಸ್ವಾಮಿಗಳವರ ಭಜನಮಂಡಳಿಯವರು, ಶೇಠ ಮುಖಿ ಬಿಂಬಾಸಾಹೇಬರು, ಮಲ್ಲಿಕಾರ್ಜುನಶೇಟಿ ಚಕ್ರಾವತಿ, ಮಲ್ಲಿಕಾರ್ಜುನಶೇಟಿ ಮಂಗಳವಾರಪೇಟೆ, ಶ್ರೀಮಂತ ಅಬ್ದುಲಪುರಕರ ನಾಗಪ್ಪನವರು, ಪಟುಣೆಸಿದ್ಧರಾಮಪ್ಪನವರು, ಲಿಂಗೈಕ್ಯ ಚನ್ನಬಸಪ್ಪನವರ ಧರ್ಮಪತ್ನಿ ಶ್ರೀಮತಿ ಪಾರ್ವತವ್ವನವರು, ಮಲ್ಲಯ್ಯಸ್ವಾಮಿ ಚಿಮ್ಮನಬಾವಿ, ವೇ॥ ವರದ ಸಂಸ್ಕೃತ ಪಾಠಶಾಲಾ ಪ್ರಧಾನಾಧ್ಯಾಪಕ ಸಾಹಿತ್ಯರತ್ನ ಜಗದೀಶ ಶಾಸ್ತ್ರಿಗಳವರು, ಬುಗುಡೆ ಸಿದ್ಧರಾಮಪ್ಪನವರು, ಪಾಲಿ ಸಿದ್ಧಪ್ಪ, ವೀರಬಸಪ್ಪನವರು, ಶಂಕರಪ್ಪನವರು ಚಾಕೋತೆ, ಬಾನಾಪುರೆ ಸಿದ್ಧರಾಮಪ್ಪನವರು, ಹಿರೇಹಬ್ಬು ರೇವಣಸಿದ್ಧಪ್ಪನವರು, ಅಪ್ಪಾಸಾಹೇಬರು ತೋಟದೆ, ಮಾಳಿಗೆ ಶಿವಲಿಂಗಪ್ಪನವರು, ಚಿಂಚೋಳಿ ಗುರುಬಸಪ್ಪನವರು, ಗೌರಿದಾಸಯ್ಯನವರು, ಗುಂಗೆಸಿದ್ಧರಾಮಪ್ಪನವರು, ಚಾರಿಹನುಮಂತಪ್ಪನವರು, ಇರಂತಯ್ಯನವರು, ಗುರುಪ್ಪ ಶಿವಪ್ಪ ಮಣೂರೆ, ಕಾಶಪ್ಪಯ್ಯನವರು ವಳಸಂಗ, ಬಸವಂತಿನಾಗಪ್ಪನವರು, ಅಕ್ಕೋಟಿಸಿದ್ಧರಾಮಪ್ಪನವರು, ಗಂಭೀರಮಲ್ಲಿಕಾರ್ಜುನಪ್ಪನವರು, ಭೀಮಶಂಕರಧರ್ಮರಾವ್ ತೋಟದೆ ಇವರ ಶಾಲಿಕೆಯರಾದ ಶ್ರೀಮತಿ ಸಿದ್ಧವ್ವಬಾಯಿಯವರು, ಧ್ರುಂಜೆ ವಕೀಲರು, ಕಾಶೀಕೋಟಿ ಚನ್ನಯ್ಯನವರು, ಶರಣಪ್ಪನವರು ತೋಳ್ಯಾಡಿ, ದೇಶಮುಖ ಡಾಕ್ಟರರು, ರೇಣುಕಸಂಘದವರು, ಗಡ್ಡಪ್ಪನವರು ಟಿಟಿ ಇವರೇ ಮೊದಲಾದವರು ಅಸಾಧಾರಣಭಕ್ತಿಯಿಂದ ಪಾದಪೂಜೋತ್ಸವವನ್ನು ನೆರವೇರಿಸಿದರು. ಇನ್ನೂ ಬಿನ್ನಹಗಳು ಆಗತಕ್ಕವು ಇರುತ್ತವೆ. ಶ್ರೀ ಜಗದ್ಗುರುಗಳ ವರ್ಧಂತ್ಯುತ್ಸವವನ್ನು ಬುಗಡೆ ಸಿದ್ಧರಾಮಪ್ಪನವರು ಸರ್ವಭಾರವನ್ನು ವಹಿಸಿ ನೆರವೇರಿಸಿದುದು ಅತ್ಯಂತ ಸ್ತುತ್ಯವಾಗಿರುತ್ತದೆ. ಗಂಭೀರೆ ಮಲ್ಲಿಕಾರ್ಜುನಪ್ಪನವರು ಶ್ರೀ ಜಗದ್ಗುರುಗಳವರನ್ನು ವಿಶೇಷ ವೈಭವದಿಂದ ದಯಮಾಡಿಸಿಕೊಂಡುಹೋಗಿ ದರ್ಬಾರ ನಡೆಯಿಸಿದರು. ಆ ಸಮಯದಲ್ಲಿ ಸಾಹಿತ್ಯರತ್ನ ವೇ॥ ಜಗದೀಶಶಾಸ್ತ್ರಿಗಳವರ ಮತ್ತು ಆಸ್ಥಾನ ವಿದ್ವಾನ್ ಪ್ರವೀಣರತ್ನ ಸುಣ್ಣಕಲ್ಲಬಿದರಿ ಬಸವಲಿಂಗಶಾಸ್ತ್ರಿಗಳ ಗುರುಭಕ್ತಿ ಪ್ರಭಾವದಮೇಲೆ ಉಪನ್ಯಾಸಗಳಾದ ಮೇಲೆ ಶ್ರೀ ಜಗದ್ಗುರುಗಳವರ ವಿಶಿಷ್ಟ ಧರ್ಮೋಪದೇಶವೂ ನಡೆದವು. ಆ ಸಮಯದಲ್ಲಿ ಶುಭೋದಯದ ಕೀರ್ತಿಮಲ್ಲ ಎಂಬ ಮಾರವಾಡಿ ಮಹಾಶಯರು ತಮ್ಮ ಶ್ರೀಮಂತಿಕೆಗೆ ತಕ್ಕಂತೆ ಕಾಣಿಕೆಯನ್ನು ಸಮರ್ಪಿಸಿ ಆಶೀರ್ವಾದವನ್ನು ಪಡೆದರು. ಈ ಪ್ರಕಾರವಾಗಿ ಸೊಲ್ಲಾಪುರದಲ್ಲಿ ಪಾದಪೂಜೋತ್ಸವಗಳು ಬಹು ಭಕ್ತಿಪೂರ್ವಕವಾಗಿ ನಡೆಯುತ್ತವೆ. ಜಗದಾಚಾರ್ಯರು ಗುರುಭಕ್ತಿತತ್ಪರರಾದ ಸರ್ವ ಮಹಾಶಯರ ಮನೋರಥಗಳನ್ನು ಪೂರೈಸಲೆಂದು ಪ್ರಾರ್ಥಿಸುವ,

ಓರ್ವ ಗುರುಭಕ್ತ

ಅಖಿಲಭಾರತ ವೀರಶೈವ ಮಹಾಸಭಾ ಚಿರಸ್ಥಾಯಿ ಫಂಡು

ಈ ಮೇಲ್ಕಂಡ ಫಂಡಿಗೆ ನಿಧಿಯು ೭೫೦೦೦ ರೂಪಾಯಿಗಳಿಗೆ ಮೇಲ್ಪಟ್ಟು ಮೂಲಧನವಾಗಿರುತ್ತದೆಂತಲೂ, ಸದರಿ ಫಂಡಿನ ದಾತೃಗಳೇ ಇದರ ಆಡಳಿತವನ್ನು ನಡೆಸುತ್ತಿರುವರೆಂತಲೂ, ಆಗಿನಿಂದ ಇವರ ಅಧ್ಯಕ್ಷರಾಗಿದ್ದ ಸರ್ ಪುಟ್ಟಣ್ಣಶೆಟ್ಟರವರು ಗತಿಸಿದಮೇಲೆ ಈ ಸಂಸ್ಥೆಯ ಆಡಳಿತವು ಕ್ರಮಬದ್ಧವಿಲ್ಲದೆ ಅವ್ಯವಸ್ಥೆಗೆ ಈಡಾಗಿರುತ್ತದೆಂತಲೂ, ಪತ್ರಿಕೆಗಳಮೂಲಕ ಜನಸಾಮಾನ್ಯಕ್ಕೆ ತಿಳಿದು ಒಂದು ತುಂಬಾ ವ್ಯಸನವನ್ನುಂಟುಮಾಡಿತ್ತು. ಇದನ್ನು ಸರಿಪಡಿಸಬೇಕೆಂದು ದಾತೃಗಳಪೈಕಿ ಕೆಲವರು ಅಂದರೆ:— ಮ॥ ರಾ॥ ಎಚ್. ಕೆ. ವೀರಬಸವಯ್ಯನವರು, ಬಿ.ಎ., ಬಿ.ಯಲ್ ರಿಟೈರ್ಡ್ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜರು, ಬೆಂಗಳೂರು. ವಗೈರೆ ಎಂಟುಜನ ದಾತೃಗಳು ಜನರಲ್ ಕಮಿಟಿಯ ಮೀಟಿಂಗನ್ನು ೧೪-೧೨-೪೧ ಕ್ಕೆ ಸೇರಲು ಕರೆದಿದ್ದರು.

ಸದರಿ ಮೀಟಿಂಗಿನಲ್ಲಿ ಏನಾಗುವುದೋ ಎಂಬ ಕುತೂಹಲವು ಸಮಾಜದಲ್ಲಿ ಉಂಟಾಗಿ ಎಲ್ಲರಿಗೂ ಕಳವಳವನ್ನುಂಟುಮಾಡಿತ್ತು. ಸದರಿ ಮೀಟಿಂಗಿಗೆ ದಾತೃಗಳು ಸೇರುವರೋ ಇಲ್ಲವೋ ಎಂಬ ಅನುಮಾನವೂ, ಮತ್ತು ಸೇರಿದಾಗ್ಯೂ ಸಭ್ಯತೆಯಿಂದ ಸುಸಜ್ಜಿತವಾಗಿ ನಡೆಯುವುದೋ ಇಲ್ಲವೋ ಎಂಬ ಭಯವೂ, ದೇಶದಾದ್ಯಂತದಲ್ಲಿ ಹರಡಿಕೊಂಡಿತ್ತು. ಈ ಸಂಸ್ಥೆಯ ದಾತೃಗಳು ಒಟ್ಟು ಮೂವತ್ತು ಮಂದಿ ಇರುತ್ತಾರೆ. ಈ ದಾತೃಗಳೇ ಈ ಫಂಡಿನ ಜನರಲ್ ಕಮಿಟಿ ಮೆಂಬರುಗಳಾಗಿರುತ್ತಾರೆ. ಈ ಪೈಕಿ ೧೮ ಜನಗಳು ಮುದ್ದಾಗಿ ೧೪-೧೨-೪೧ ರ ಮೀಟಿಂಗಿಗೆ ಬೆಂಗಳೂರು ರಾ॥ ಬ॥ ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ಹಾಜರಾಗಿದ್ದರು. ೬ ಜನಗಳು ಮ॥ ರಾ॥ ಎಚ್. ಕೆ. ವೀರಬಸವಯ್ಯನವರಿಗೆ ಪ್ರಾಕ್ಸಿಯನ್ನು ಕೊಟ್ಟು ಅವರ ಪ್ರಾತಿನಿಧ್ಯದಲ್ಲಿ ಹಾಜರಾಗಿದ್ದರು. ೩ ಜನ ಮೆಂಬರುಗಳು ದಿವಂಗತ ಟಿ. ಯಂ. ಷಡಕ್ಷರಪ್ಪನವರ ಮಕ್ಕಳು ಮ॥ ರಾ॥ ಟಿ. ಯಂ. ಸಿದ್ಧಾರಾಧ್ಯರಿಗೂ, ಒಬ್ಬರು ಮ॥ ರಾ॥ ಉರುವಕೊಂಡೆ ಚನ್ನಬಸಪ್ಪನವರಿಗೂ ಕಳುಹಿಸಿಕೊಟ್ಟಿದ್ದರು. ಒಟ್ಟಿನಲ್ಲಿ ೨೮ ಜನಗಳು ಈ ಮೀಟಿಂಗಿಗೆ [illegible] ಕೊಟ್ಟಂತಾಯಿತು. ಇನ್ನು ೨ ಜನ ಮಾತ್ರ ಯಾರಿಗೂ ಪ್ರಾತಿನಿಧ್ಯವನ್ನು ಕಳಿಸದೆ ಗೈರುಹಾಜರಾಗಿದ್ದರು.

ಮೀಟಿಂಗು ಸೇರುವುದಕ್ಕೆ ಒಂದು ದಿವಸ ಮುಂಚಿತವಾಗಿಯೇ ಸಮಾಜದ ಮಾನ್ಯ ಮುಖಂಡರುಗಳ ಪೈಕಿ ಕೆಲವರು, ಮತ್ತು ದಾತೃಗಳ ಪೈಕಿ ಕೆಲವರು ಮೀಟಿಂಗು ಸುಸೂತ್ರವಾಗಿ ನಡೆದು ಯಾವ ಒಡಕುಗಳಿಗೂ ಅವಕಾಶವಾಗದಂತೆ ಏಕಾಭಿಪ್ರಾಯದಿಂದಲೂ ಕ್ರಮಬದ್ಧವಾಗಿಯೂ ಇದರಂತೆ ಮಾಡಬೇಕೆಂದು ಹೊರಗಡೆ ಸಲಹೆಗಳನ್ನು ಕೊಟ್ಟು ವಿಷಯಗಳೆಲ್ಲವನ್ನೂ ಅಚ್ಚುಕಟ್ಟಾಗಿ ತಿಳಿದುಕೊಂಡರು. ಆದಾಗ್ಯೂ ಈ ಸಲಹೆಗಳು ವೃಥಾ ಚರ್ಚೆಯಲ್ಲಿಯೇ ಪರಿಣಮಿಸಿ ಭಿನ್ನಾಭಿಪ್ರಾಯಗಳೇ ಪ್ರಬಲವಾಗುವಂತೆ ಕಂಡುಬಂದವು. ಈ ಅಪಾಯಕರವಾದ ಸಂದಿಗ್ಧದಲ್ಲಿಯೇ ಹಾಜರಿದ್ದ ೧೮ ಜನ ದಾತೃಗಳು ಮೀಟಿಂಗಿಗೆ ಸೇರಿದರು. ಸದರಿ ಮೀಟಿಂಗನ್ನು ಸೇರಿಸಲು ಮುಂದಾಳುಗಳಾಗಿ ನಿಂತಿದ್ದ ಮ॥ ರಾ॥ ಎಚ್. ಕೆ. ವೀರಬಸವಯ್ಯನವರು ಸಭೆಗೆ ಮೆಂಬರುಗಳಾದ ಇಲ್ಲಿ ಸೇರಿರುವ ದಾತೃಗಳೇ ತಮ್ಮ ತಮ್ಮಲ್ಲೇ ಈ ಮೀಟಿಂಗನ್ನು ಏಕಮತ್ಯದಿಂದ ನಡೆಸಲು ಕೊನೆಯ ಪ್ರಯತ್ನವನ್ನು ಮಾಡಬೇಕೆಂತಲೂ, ಆ ವರೆಗೂ ಹಾಜರಿದ್ದ ಮಾನ್ಯ ಪ್ರೇಕ್ಷಕರು ದಯವಿಟ್ಟು ಹೊರಗಡೆ ಇರಬೇಕೆಂತಲೂ, ಈ ಪ್ರಯತ್ನವು ಸಫಲವಾಗದೆಯೋ ದಕ್ಷತೆಯಲ್ಲಿ ಪ್ರೇಕ್ಷಕಮಹಾಶಯರನ್ನು ಒಳಗಡೆ ಬರಮಾಡಿಕೊಂಡು ಅವರ ಸಲಹೆ ಮತ್ತು ಸಹಾಯಗಳನ್ನು ದಾತೃಗಳು ಪಡೆಯಬಹುದೆಂತಲೂ ಕೊಟ್ಟ ಸೂಚನೆಗೆ ಹಾಜರಿದ್ದ ದಾತೃಗಳು ಒಪ್ಪಿ ಮೀಟಿಂಗು ಉಪಕ್ರಮವಾಯಿತು. ಪ್ರೇಕ್ಷಕರೂ ಸಹ ಮ॥ ರಾ॥ ಎಚ್. ಕೆ. ವೀರಬಸವಯ್ಯನವರ ಸೂಚನೆಯನ್ನು ಮಾನ್ಯಮಾಡಿ ಹೊರಗಡೆ ಬಹಳ ಕುತೂಹಲದಿಂದ ಕಾದಿದ್ದರು.

ಒಳಗಡೆ ಮೀಟಿಂಗು ಉಪಕ್ರಮವಾದ ಕೂಡಲೇ ಸದರಿ ಮೀಟಿಂಗನ್ನು ನಡೆಸಲು ಅಧ್ಯಕ್ಷರಾಗಲು ಕೆಲವರು ಮ॥ ರಾ॥ ಉರುವಕೊಂಡೆ ಚನ್ನಬಸಪ್ಪನವರನ್ನೂ, ಮತ್ತೆ ಕೆಲವರು ಮ॥ ರಾ॥ ಎಚ್. ಕೆ. ವೀರಬಸವಯ್ಯನವರನ್ನೂ ಕ್ರಮವಾಗಿ ಸೂಚಿಸಿ ಅನುಮೋದಿಸಿದರು. ಈ ಎರಡು ಸೂಚನೆಗಳನ್ನು ಓಟಿಗೆ ಹಾಕುವುದಕ್ಕಿಂತಲೂ ಒಮ್ಮತದಿಂದ ಈ ಮೀಟಿಂಗಿಗೆ ಅಧ್ಯಕ್ಷತೆಯನ್ನು ಒಬ್ಬರಿಗೇ ವಹಿಸುವುದು ಯೋಗ್ಯವಾದದ್ದೆಂದೂ ಮ॥ ರಾ॥ ಎಚ್. ಕೆ. ವೀರಬಸವಯ್ಯನವರು ಅಭಿಪ್ರಾಯಪಟ್ಟು ಉರುವಕೊಂಡೆ ಮ॥ ರಾ॥ ಚನ್ನಬಸಪ್ಪನವರೇ ಅಧ್ಯಕ್ಷರಾಗಿರಲೆಂದು ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟರು.

ಈ ಔದಾರ್ಯವನ್ನೇ ಹಾಜರಿದ್ದ ಸರ್ವ ಸದಸ್ಯರೂ ಅನುಸರಿಸಿ ಒಬ್ಬರಿಗೊಬ್ಬರು ಸಹಕರಿಸಬೇಕೆಂದು ಮ॥ ರಾ॥ ಉರುವಕೊಂಡೆ ಚೆನ್ನಬಸಪ್ಪನವರು ಕೇಳಿಕೊಂಡು ಅಧ್ಯಕ್ಷತೆಯನ್ನು ವಹಿಸಿದರು.

ಅನಂತರ ಈ ಮೀಟಿಂಗನ್ನು ಕರೆಯಬೇಕಾದ ಅವಶ್ಯಕತೆ, ಈ ಹಿಂದೆ ನಡೆದುಹೋಗಿರುವ ನಡವಳಿಕೆಗಳ ಕ್ರಮ ಅಥವಾ ಅಕ್ರಮ ಹಾಗು ವಿಷಯಗಳು ಮತ್ತು ಮುಂದೆ ಯಾವ ರೀತಿಯಲ್ಲಿ ಕ್ರಮಬದ್ಧವಾಗಿ ಅಧಿಕಾರಿ ವರ್ಗವು ಮತ್ತು ಕಾರ್ಯಕಾರಿ ಮಂಡಲಿಯು ಪುನಃ ರಚನೆಯಾಗತಕ್ಕದ್ದು ಎಂಬ ವಿಷಯಗಳನ್ನು ಮ॥ ರಾ॥ ಎಚ್. ಕೆ. ವೀರಬಸವಯ್ಯನವರು ಅತ್ಯಂತವಾಗಿ ವಿವರಿಸಿ ಸುಮಾರು ಒಂದು ಗಂಟೆಯ ಮೇಲ್ಪಟ್ಟು ಸದಸ್ಯರಿಗೆ ತಿಳುವಳಿಕೆ ಕೊಟ್ಟರು. ಈ ವಿಷಯವನ್ನೇ ಪುಷ್ಟೀಕರಿಸಿ ಮ॥ ರಾ॥ ಗುರುಸಿದ್ಧಪ್ಪನವರು, ಮ॥ ರಾ॥ ಗೌಡರ ಗುರುಶಾಂತಪ್ಪನವರು ಸದರಿ ವಿಚಾರಗಳಿಗೆ ಬೆಂಬಲ ಕೊಟ್ಟರು. ಮತ್ತು ಈ ಫಂಡಿನ ಅಧಿಕಾರಿವರ್ಗವೂ, ಕಾರ್ಯಕಾರಿ ಮಂಡಲಿಯೂ ಪುನಃ ರಚನೆಯಾಗಬೇಕಾದುದು ಕ್ರಮಬದ್ಧವೆಂದು ದಾತೃಗಳೆಲ್ಲರಿಗೂ ಮನದಟ್ಟಾಗಿ ಅದೇ ಸರಿಯಾದ ಮಾರ್ಗವೆಂದು ಸರ್ವಾನುಮತದಿಂದ ತೀರ್ಮಾನವಾಯಿತು.

ಈ ಪುನರ್ರಚನೆಗಾಗಿ ಮೀಟಿಂಗಿನಲ್ಲಿ ಚುನಾವಣೆ ಮತ್ತು ಉಪಕ್ರಮಿಸುವುದಕ್ಕೆ [illegible] ಮ॥ ರಾ॥ ಎಚ್. ಕೆ. ವೀರಬಸವಯ್ಯನವರು ಎದ್ದುನಿಂತು, ಕಾರ್ಯಕಾರಿ ಮಂಡಲಿ ಮತ್ತು ಅದರಲ್ಲಿಯೂ ಮುಖ್ಯವಾಗಿ ಅಧಿಕಾರಿವರ್ಗವು ಸರ್ವಾನುಮತದಿಂದ ಚುನಾಯಿಸಲ್ಪಡುವುದು ಫಂಡಿನ ಘನತೆಗೆ ಯೋಗ್ಯವಾದದ್ದೆಂತಲೂ, ತಮ್ಮನ್ನು ಅಂದರೆ, ಮ॥ ರಾ॥ ಎಚ್. ಕೆ. ವೀರಬಸವಯ್ಯನವರನ್ನು ಅಧ್ಯಕ್ಷಸ್ಥಾನಕ್ಕೇ ಆಗಲಿ ಅಥವಾ ಮತ್ತಾವ ಅಧಿಕಾರ ಅಥವಾ ಕಾರ್ಯಕಾರಿ ಮಂಡಲಿಯ ಮೆಂಬರ ಸ್ಥಾನಕ್ಕೇ ಆಗಲೀ ದಯವಿಟ್ಟು ಸೂಚಿಸಬಾರದೆಂತಲೂ, ಈ ಸಂಸ್ಥೆಯ ಪ್ರಕೃತ ಸಂದಿಗ್ಧಸ್ಥಿತಿಯಲ್ಲಿ ಏಕಮತ್ಯದಿಂದ ವಿನಹ ಒಡಕಿನ ಹೆಸರಿನಿಂದ ಯಾರೂ ಅಧಿಕಾರಿ ವರ್ಗಕ್ಕೆ ಚುನಾಯಿಸಲ್ಪಡಬಾರದೆಂತಲೂ, ಮೆಂಬರುಗಳ ಪೈಕಿ ಯಾರೊಬ್ಬರು ಈ ಪುನಾರಚನೆಯಲ್ಲಿ ಭಿನ್ನಾಭಿಪ್ರಾಯಪಟ್ಟು ತಮ್ಮ ಅಸಮಾಧಾನವನ್ನು ತೋರಿಸಬಾರದೆಂತಲೂ, ಕೇಳಿಕೊಂಡರು. ದಾತೃಗಳ ಪೈಕಿ ಕೆಲವರು ಕಾರ್ಯಕಾರಿ ಮಂಡಲಿಯಿಂದ ಮ॥ ರಾ॥ ಎಚ್. ಕೆ. ವೀರಬಸವಯ್ಯನವರು ಸಂಪೂರ್ಣವಾಗಿ ಹೊರಗಾಗಬಾರದೆಂತಲೂ, ಅಧ್ಯಕ್ಷಸ್ಥಾನವನ್ನಾಗಲೀ ಅಥವಾ ಉಪಾಧ್ಯಕ್ಷಸ್ಥಾನವನ್ನಾಗಲೀ ವಹಿಸಿಕೊಳ್ಳಬೇಕೆಂದೂ, ಒತ್ತಾಯಪಡಿಸಲು ಹೊರಟರು. ಇದಕ್ಕೆ ಪ್ರತ್ಯುತ್ತರವಾಗಿ ಮ॥ ರಾ॥ ಎಚ್. ಕೆ. ವೀರಬಸವಯ್ಯನವರು ಈಗಿನ ಸಂಸ್ಥೆಯ ಸ್ಥಿತಿಯಲ್ಲಿ ವಾತಾವರಣವು ಒಬ್ಬರನ್ನೊಬ್ಬರು ಕಂಡು ಅನುಮಾನಿಸುವುದು ಹೆಚ್ಚಾಗಿ ಇದೆಯೆಂತಲೂ, ಈ ಸಂಶಯಗಳು ಬೇರೂರಿ ಪ್ರಬಲವಾಗದಂತೆ ನೋಡಿಕೊಳ್ಳಬೇಕಾದ್ದು ದಾತೃಗಳಾದ ನಮ್ಮೆಲ್ಲರ ಕರ್ತವ್ಯವೆಂತಲೂ, ಆದ್ದರಿಂದ ದಾತೃಗಳಪೈಕಿ ಯಾರೊಬ್ಬರೇ ಆಗಲಿ ಭಿನ್ನಾಭಿಪ್ರಾಯ ತೋರಿಸಿದರೆ ಉಳಿದ ಎಲ್ಲರ ಹೆಚ್ಚು ಅಭಿಪ್ರಾಯವೂ ಸಹ ಅಷ್ಟು ಸಮಂಜಸವಾದುದಲ್ಲವೆಂತಲೂ, ಈ ಸಂಶಯವು ಅಡಗಬೇಕಾದರೆ ಮುಂದಾಳುಗಳೇ ಮೊದಲು ಉದಾರಮನಸ್ಸಿನ ಮೇಲ್ಪಂಕ್ತಿಯನ್ನು ಹಾಕಬೇಕಾಗಿದೆಯೆಂತಲೂ, ಒತ್ತಾಯಪಡಿಸಿ, ಕಾರ್ಯಕಾರಿ ಮಂಡಲಿಯಲ್ಲಿಲ್ಲದಿದ್ದರೂ ಕೆಲವು ಕಾಲದವರೆಗೆ ಪ್ರತಿ ಮೀಟಿಂಗಿನಲ್ಲಿಯೂ ಹಾಜರಿದ್ದು ಸಹಕರಿಸುವುದಾಗಿ ಭರವಸೆಯನ್ನು ಕೊಟ್ಟರು. ಇದಕ್ಕಾಗಿ ಸದಸ್ಯರುಗಳೆಲ್ಲರೂ ಮ॥ ರಾ॥ ಎಚ್. ಕೆ. ವೀರಬಸವಯ್ಯನವರಿಗೆ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸಿ ಆ ಬಗ್ಗೆ ಒಂದು ರೆಜಲ್ಯೂಷನನ್ನು ಮಾಡಿದ್ದಲ್ಲದೆ ಈ ಕೆಳಗೆ ಕಂಡಂತೆ ಮ್ಯಾನೇಜಿಂಗ್ ಕಮಿಟಿಯು ರಚಿತವಾಯಿತು—

೧. ಮ॥ ರಾ॥ ಉರುವಕೊಂಡೆ ಚನ್ನಬಸಪ್ಪನವರು,
ಅಧ್ಯಕ್ಷರು, ಬಹುಮತದಿಂದ.
೨. ಮ॥ ರಾ॥ ಜಿ. ಸಿ. ಮಹಲಿಂಗಪ್ಪನವರು,
ಉಪಾಧ್ಯಕ್ಷರು, ಸರ್ವಾನುಮತದಿಂದ.
೩. ಮ॥ ರಾ॥ ಜಿ. ಗುರುಬಸಪ್ಪನವರು,
ಸೆಕ್ರೆಟರಿಗಳು, ಬಹುಮತದಿಂದ
೪. ಮ॥ ರಾ॥ ಬಿ. ಯನ್. ಮಲ್ಲಪ್ಪನವರು,
ಅಸಿಸ್ಟೆಂಟ್ ಸೆಕ್ರೆಟರಿ, ಸರ್ವಾನುಮತದಿಂದ

ಮೆಂಬರುಗಳು

೫ ಮ॥ ರಾ॥ ಗೌಡರ ಗುರುಶಾಂತಪ್ಪನವರು.
೬. ಮ॥ ರಾ॥ ಟಿ. ಯಂ. ಸಿದ್ಧಾರಾಧ್ಯರು
೭. ಮ॥ ರಾ॥ ಮುಂಡಾಸದ ಪುಟ್ಟಪ್ಪನವರು.
೮ ಮ॥ ರಾ॥ ಮುರುಕಲ್ ಮುರಿಗೆಪ್ಪನವರು.
೯ ಮ॥ ರಾ॥ ಹರಿಹರದ ಗುರುಸಿದ್ಧಪ್ಪನವರು
೧೦. ಮ॥ ರಾ॥ ಎ. ಎಸ್. ಶಿವನಂಜಪ್ಪನವರು.
೧೧. ಮ॥ ರಾ॥ ಜಿ. ಕೆ. ಮಲ್ಲಪ್ಪನವರು.
೧೨. ಮ॥ ರಾ॥ ಬಸವರಾಜಪ್ಪನವರು.

ಇಲ್ಲಿಗೆ ರಾತ್ರಿ ೯॥-೧೦ ಗಂಟೆ ಸಮಯವಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ಮೀಟಿಂಗು ಬರಖಾಸ್ತಾಯಿತು.

ಓರ್ವ ಸಮಾಜ ಹಿತೈಷಿ

ಭಾರತೀಯ ಸೈನಿಕರ ಚತುರತೆ

ಮಲಯದಲ್ಲಿ ಭಾರತೀಯರು ತೋರಿಸುತ್ತಿರುವ ಸ್ಥೈರ್ಯ ಧೈರ್ಯಗಳು ಎಲ್ಲರ ಗಮನಕ್ಕೂ ಬರುತ್ತಿವೆ. ಜಪಾನರ ಕೈಗೆ ಸಿಕ್ಕಿಬಿದ್ದ ಮೂವರು ಭಾರತೀಯ ಶಿಪಾಯಿಗಳಿಗೆ ಜಪಾನರು ಬಹುಮಾನದ ಆಶೆ ತೋರಿಸಿ ತಮ್ಮನ್ನು ಬ್ರಿಟಿಷ್ ಸೈನ್ಯಗಳ ಹಿಂಬದಿಗೆ ಗುಪ್ತವಾಗಿ ಕರೆದುಕೊಂಡು ಹೋಗಬೇಕೆಂದು ಕೇಳಿದರಂತೆ! ಅದಕ್ಕೆ ಭಾರತೀಯ ಸೈನಿಕರು ಒಪ್ಪಿದಂತೆ ನಟಿಸಿ, ಜಪಾನ್ ಸೈನಿಕರನ್ನು ಬ್ರಿಟಿಷ್ ಸೈನಿಕರು ಗುಂಡುಹಾರಿಸಲು ಸಿದ್ಧರಾಗಿದ್ದ ಬಳಿಗೆ ಕರೆದೊಯ್ದು ತಾವು ಉಪಾಯಾಂತರದಿಂದ ತಪ್ಪಿಸಿಕೊಂಡು ಬಂದು ಬ್ರಿಟಿಷರಿಗೆ ಸುದ್ದಿಕೊಟ್ಟರು. ಕೂಡಲೇ ಬ್ರಿಟಿಷ್ ಸೈನಿಕರು ಮುಂದೆನುಗ್ಗಿ ಶತ್ರುಗಳನ್ನೆಲ್ಲ ನಾಶಪಡಿಸಿದರೆಂದು ಹೇಳಲಾಗಿದೆ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ನಾದ ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ವರ್ಷಕ್ಕೊಮ್ಮೆ ತಪ್ಪು ವರ್ಷಕ್ಕೊಮ್ಮೆ ಒಂದುಸಾರಿ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿದೆ ಇದನ್ನು ನಿವಾರಿಸುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ಮುದ್ರಿಸಿಕೊಟ್ಟಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ಚನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕ ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ದ್ದಿಷ್ಟಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಕಸದಂತ ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು

ದಿ ಹೆಸರು	ತೊಲಿ	ಮೂಲ್ಯ
ಮಕರಧ್ವಜ	೧	೩೦—೦—೦
ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ಧೂರ	೧	೨—೦—೦
ಸಿಂಧೂರ	೧	೪—೦—೦
ಂಧೂರ	೧	೪—೦—೦
ಸಿಂಧೂರ	೧	೪—೦—೦
ವಂಗ	೧	೩—೦—೦
ಗ	೧	೧—೦—೦
ಭಸ್ಮಗಳು		
ಭಸ್ಮ	೧	೪೦—೦—೦
ಭಸ್ಮ	೧	೪—೦—೦
ಭಸ್ಮ	೧	೦—೮—೦
ಸಭಸ್ಮ	೧	೦—೧೨—೦
ಸ್ಮ	೧	೦—೮—೦
ಸ್ಮ	೧	೦—೮—೦
ಭಸ್ಮ	೧	೪೦—೦—೦
ಭಸ್ಮ	೧	೩—೦—೦
ಭಸ್ಮ	೧	೦—೮—೦
ಭಸ್ಮ	೧	೦—೮—೦
ಸ್ಮ	೧	೦—೮—೦
ರಭಸ್ಮ	೧	೦—೮—೦
ಮಕ್ಷಿಕಾಭಸ್ಮ	೧	೦—೧೨—೦
ಭಸ್ಮ	೧	೪೦—೦—೦
ಭಸ್ಮ	೧	೦—೮—೦
ಪ್ಪಿನ ಭಸ್ಮ	೧	೦—೮—೦
ದ ಕೋಡಿನ ಭಸ್ಮ	೧	೦—೮—೦
ಂತಿಹರತಾಲಭಸ್ಮ	೧	೦—೮—೦
(೧ನೇ ನಂಬರ್)	೧	೫೦—೦—೦
ತ ಸೂರ್ಯಪುಟ	೧	೧—೦—೦
ತ ಅಗ್ನಿಪುಟ	೧	೦—೮—೦

ೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,
ಆಯುರ್ವೇದ ರಸಾಯನಶಾಲಾ,
ೀಸ್, ಓಖಿಮಠ. ಜಿಲಾ ಗಡವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಾದ್ದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೨೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೨೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦ ೦ ೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ
ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ
ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ
ಗಳನ್ನು ಕೊಟ್ಟಿ
ರು ಪ್ರಸಿದ್ಧವಾದ
ನಶ್ಯದ ಪುಡಿಯು
ಸ್ವಸ್ಥವಾಗುವ
ಗಳು ಯಾವವೆಂ
ರೆ —ಪೀನಸಿ
ತಲೆನೋವು, ತಲೆ
ಬ್ಲಿಯ ರೋಗಗ
ಕಣ್ಣುಗಳಲ್ಲಿ ಉ
ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ
ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪ
ಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನ
ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾ
ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒ
ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವ
ವುದು ಇದನ್ನು ಅನೇಕಪ್ರಭುಗಳು ಉಪಯೋ
ತ್ತಾರೆ ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆ
ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ ಪಿ. ೬
ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[೨೧] ಪೋ. ಬಾ ೫೧೦, ಮದರಾ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಶಾಸ್ತ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವವು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 A
Speeches by Pandit Shri Kashinatha Shastriji *English*)	12 A
लिंगधारणचंद्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य–संस्कृत)	१
पुरुषसूक्तम् (वीरशैवप्राचीनभाष्योपेतम्)	४
नंदिकेश्वरकारिका (संस्कृत)	२

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ
೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು
ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೨ನೇ ಜನವರಿ ೧೯೪೨ [ಸಂಚಿಕೆ ೩೭

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಕೈ॥ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಧರ್ಮರಾಜ್ಯಭಾರಕ್ರಮ

(ಲೇ— ವಿರೂಪಾಕ್ಷಶರ್ಮಾ ದಾವಣಗೆರೆ ವಾಡದ ಸಂಸ್ಕೃತ ಪಾಠಶಾಲಾ, ಕೊಲ್ಲಾಪುರ)

ಜಗದಾದಿಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಶಿವಲಿಂಗಮುಖದಿಂದ ಅವತರಿಸಿ ವೀರಶೈವ ಸಾಮ್ರಾಜ್ಯವನ್ನು ಸ್ಥಾಪಿಸಿ, ಆ ಮತಧರ್ಮ ರಕ್ಷಣೆಗಾಗಿ ರಂಭಾಪುರೀ, ಉಜ್ಜಯಿನೀ, ಹಿಮವತ್ಕೇದಾರ, ಶ್ರೀಶೈಲ, ಕಾಶೀ ಕ್ಷೇತ್ರಗಳಲ್ಲಿ ಧರ್ಮಪೀಠಗಳನ್ನು ನೆಲೆಗೊಳಿಸಿ, ಆಯಾ ಶಿವಲಿಂಗದಲ್ಲಿಯೇ ದಿವ್ಯ ಪಂಚಧಾರಿಗಳಾಗಿ ಅಡಗಿದ ವಿಷಯವು ಸರ್ವರಿಗೂ ವಿದಿತವೇ ಇದೆ. ಆದರೆ ಕಾಲಪ್ರಭಾವದಿಂದ ಗುರುಪೀಠಗಳು ಹಿಂದೆಬಿದ್ದು ಮತಧರ್ಮಗಳು ವಿಶೇಷ ಹೀನಾವಸ್ಥೆಗೆ ಬಂದವು. ಸರ್ವತ್ರ ಧರ್ಮಾಂತರ ಮತ್ತು ಗುರುದ್ರೋಹಿಗಳ ಆರ್ಭಟವು ವಿಶೇಷವಾಗಿ ಹೆಚ್ಚಿತು. ಇಂತಹ ಕಠಿನ ಪ್ರಸಂಗದಲ್ಲಿ "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ" ಎಂಬ ವಾಕ್ಯಾನುಸಾರವಾಗಿ, ಪರಶಿವನು ಪವಿತ್ರವಾದ ವೀರಶೈವ ಧರ್ಮವು ಸ್ಥಾಪಿತ, ಪುರಾತನ ಜನರಿಂದ ಬಾಳಿಗೆ ತ್ರಿಪುರನ್ನು ಜ್ಞಾನದೃಷ್ಟಿಯಿಂದ ತಿಳಿದು ಈ ಮತದ ಪ್ರಸರದ್ವಾರಕೋಸ್ಕರ "ಸಿದ್ಧಲಿಂಗ" ಎಂಬ ಪುಣ್ಯಾಭಿಧಾನದಿಂದ ಒಂದು ಮಹಾವ್ಯಕ್ತಿಯನ್ನು ೧೪೯೦ ನೇ ಇಸ್ವಿಯಲ್ಲಿ ಚಿತ್ರದುರ್ಗ ಡಿ॥ ಬಂಗಾರದಗಾಳ ಕನಕಹಳ್ಳಿಯಲ್ಲಿರುವ ಗುರುಸ್ಥಲ ಮಠಾಧಿಕಾರಿಗಳ ವಂಶದಲ್ಲಿ ಅವತಾರಮಾಡಿಸಿದನು.

ಈ ಮಹಾತ್ಮರ ದಿವ್ಯ ತೇಜಸ್ಸನ್ನು ಕಂಡು ಆಗ್ಗೆ ಉಜ್ಜಯಿನೀ ಸದ್ಧರ್ಮ ಪೀಠವನ್ನಲಂಕರಿಸಿದ್ದ ಜಗದ್ಗುರುಗಳು ಮುಗ್ಧರಾಗಿ ೧೯೦೩ ನೇ ಇಸ್ವಿಯಲ್ಲಿ ಈ ಮಹಾತ್ಮರನ್ನು ಉಜ್ಜಯಿನಿಯ ಸದ್ಧರ್ಮ ರಾಜ್ಯದಲ್ಲಿ ಪಟ್ಟಾಭಿಷಿಕ್ತರನ್ನಾಗಿ ಮಾಡಿದರು. ಶ್ರೀ ಜಗದ್ಗುರು ಸಿದ್ಧಲಿಂಗ ಶಿವಯೋಗಿಗಳು ಸದ್ಧರ್ಮಪೀಠವನ್ನಾರೋಹಣ ಮಾಡಿದ ಮೇಲೆ ವಿಪುಲವಾದ ವೀರಶೈವ ಜಗತ್ತಿನಲ್ಲಿ ಸಧ್ಯಃ ಮತಧರ್ಮಗಳು ಹ್ರಾಸವಾಗುತ್ತ ನಡೆದಿವೆ, ಈ ಮತದ ಉತ್ಕೃಷ್ಟ ಧರ್ಮ ತತ್ವಗಳನ್ನು ಹೇಗೆ ಬೆಳೆಸಬೇಕು? ಇದರ ರಕ್ಷಣೆಯನ್ನು ಮಾಡುವ ಕ್ರಮವೇನು? ಎಂದು ದೀರ್ಘಾಲೋಚನೆಯನ್ನು ಮಾಡಿದರು. ಯಾವ ಮಹಾತ್ಮನ ನಾಮಶ್ರವಣಮಾತ್ರದಿಂದ ವೈರಿಗಳ ಹೃದಯವು ನಡುಗುತ್ತಲಿದೆಯೋ, ಯಾವ ವೀರಪುರುಷನ ವೀರವಾಣಿಯಿಂದ ಧರ್ಮರಾಜ್ಯದ ತತ್ವಗಳು ದಶದಿಕ್ಕುಗಳಲ್ಲಿ ನೆಲಸಿದವೋ, ಯಾವ ಬ್ರಹ್ಮತೇಜಸ್ವಿಯ ಕಾರ್ಯಪ್ರಭಾವದಿಂದ ವೀರಶೈವ ಧರ್ಮಧ್ವಜವು ಉನ್ನತ ಶಿಖರದಲ್ಲಿ ಮೆರೆಯುತ್ತಿರುವುದೋ, ಯಾವ ಸಚ್ಚರಿತ್ರನು ಧರ್ಮೋದ್ಧಾರಕನೆಂದು ಸತ್ಪುರುಷರ ನಾಲಗೆಯಲ್ಲಿ ನಲಿದಾಡುತ್ತಿರುವನೋ, ಅಂತಹ ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರೇ ಧರ್ಮರಾಜ್ಯ ಪಾಲನದಲ್ಲಿ ಶಕ್ತರೆಂದು ತಿಳಿದು ಅವರಿಗೆ ಮುಖ್ಯ ಮಂತ್ರಿಪಟ್ಟವನ್ನು ಕಟ್ಟಿದರು. ಪಂಡಿತರು ಮಂತ್ರಿ ಪದವನ್ನು ಸ್ವೀಕರಿಸಿದನಂತರ ಧರ್ಮರಾಜ ವಸತಿಯ ಮೈಸೂರು ರಾಜಧಾನಿಯನ್ನೇ ಪಂಚಪೀಠಗಳ ಮುಖ್ಯ ರಾಜಧಾನಿಯನ್ನಾಗಿ ಮಾಡಿಕೊಂಡು "ಪಂಚಾಚಾರ್ಯ ಪ್ರಭಾ" ಎಂಬ ಪಾರ್ಲಿಮೆಂಟನ್ನು ಸ್ಥಾಪಿಸಿದರು. ಈ ಪಾರ್ಲಿಮೆಂಟಿನಲ್ಲಿ ಕುಂದಗೋಳ ಬೃಹನ್ಮಠದ ಶ್ರೀಚರಮೂರ್ತಿಸ್ವಾಮಿಗಳ, ತರ್ಕತೀರ್ಥ ನ್ಯಾಯವಾಚಸ್ಪತಿ ಕೂಲಿ ಶ್ರೀ ನೀಲಕಂಠಶಿವಾಚಾರ್ಯರು, ವೇದಾಂತಾಚಾರ್ಯ ಶ್ರೀ ನೀಲಕಂಠಶಿವಾಚಾರ್ಯರು ಎಸ್ಸೂರ ಶ್ರೀ ರಾಚಲಿಂಗಶಿವಾಚಾರ್ಯರು ಪರಿಂತಕರ್ ಒತ್ತಿನ, ಶ್ರೀಗುರುಶಾಂತಶಿವಾಚಾರ್ಯರು ದೇವರಗಿ, "ಸಾಹಿತ್ಯರತ್ನ" ವೇ॥ ಪಂ॥ ಜಗದೀಶಶಾಸ್ತ್ರಿಗಳು, "ಧರ್ಮರತ್ನ" ವೇ॥ ಪಂ॥ ಉಮಾಪತಿ ಶಂಕರಶಾಸ್ತ್ರಿಗಳು, 'ಪುರಾಣರತ್ನ' ವೇ॥ ಪಂ॥ ಬಸವಲಿಂಗಶಾಸ್ತ್ರಿಗಳು ಸವಣಕಲ್ಲುಬಿದರಿ, 'ಧರ್ಮಭೂಷಣ' ವೇ॥ ಪಂ॥ ಹರೀಶ್ವರಶಾಸ್ತ್ರಿಗಳು ಸುಣಕಲ್ಲ ಬಿದರಿ, ಇವರೇ ಮೊದಲು ಮಾಡಿದವರ ಸದಸ್ಯರಾದರು. ಅನಂತರ ಪಂಚಾಚಾರ್ಯಪ್ರಭಾ ನಾಮಕ ಪಾರ್ಲಿಮೆಂಟಿನ ದ್ವಾರಾ ನಶಿಸಿಹೋಗುತ್ತಿರುವ ವೀರಶೈವ ಧರ್ಮರಾಜ್ಯ ತತ್ವದ ಕಾಯಿದೆ(ಲಾ)ಗಳನ್ನು ಜಾರಿಗೆ ತಂದು ವೀರಶೈವರಲ್ಲಿ ಜಾಗೃತಿಯನ್ನುಂಟುಮಾಡಹತ್ತಿದ್ದರು.

ಬಳಿಕ ಗುರುಸಾರ್ವಭೌಮರು ವೀರಶೈವ ಧರ್ಮದ ಕಾಯಿದೆಗಳನ್ನು ಆಚರಣೆಯಲ್ಲಿ ತರುವುದಕ್ಕಾಗಿಯೂ, ಜನಗಳಲ್ಲಿ ಧರ್ಮಬುದ್ಧಿಯನ್ನು ಉಂಟುಮಾಡುವುದಕ್ಕಾಗಿಯೂ ಗುರುವರ್ಗದ ಜಾಗೃತಿಗೋಸ್ಕರ ತನುಮನಗಳನ್ನರ್ಪಿಸಿ ಅಹೋರಾತ್ರಿ ಕೆಲಸಮಾಡುತ್ತಿರುವ ಧೀಮಂತ ಬ್ರಹ್ಮಚಾರಿ ಶ್ರೀ॥ ಷ॥ ಬ್ರ॥ ಗಂಗಾಧರಶಿವಾಚಾರ್ಯರು ಬೆಂಗಳೂರು, "ಯೋಗಿರಾಜ" ಬಾಲತಪಸ್ವಿ ಶ್ರೀ॥ ಷ॥ ಬ್ರ॥ ಚನ್ನವೀರಶಿವಾಚಾರ್ಯರು ಹೊಟಗಿ ವಿದ್ಯಾನಿಧಿ ಇತ್ಯಾದಿ ಬಿರುದಾಂಕಿತರಾದ ವೇ॥ ಪಂ॥ ವೀರಭದ್ರಶಾಸ್ತ್ರಿಗಳು ಈ ಮೂವರನ್ನು ಕನ್ನಡ, ಮಹಾರಾಷ್ಟ್ರ, ಆಂಧ್ರ ಈ ಮೂರು ಪ್ರಾಂತ್ಯಗಳಲ್ಲಿ ಮುಖ್ಯಾಧಿಕಾರಿಗಳನ್ನಾಗಿ ನೇಮಿಸಿದರು. ತರುವಾಯ ಈ ಗುರುಸಾರ್ವಭೌಮರು ವೀರಶೈವ ಧರ್ಮರಾಜ್ಯದಲ್ಲಿ ವಿರೋಧಿಗಳಿಂದ ಧರ್ಮಕ್ಕೆ ಆಘಾತವುಂಟಾದರೆ ಶಾಂತಿಯನ್ನುಂಟುಮಾಡಲು ಕೊಲ್ಲಾಪುರ, ಬಳ್ಳಾರಿ, ಬೆಂಗಳೂರು ಪಟ್ಟಣಗಳಲ್ಲಿರುವ ಸಂಸ್ಕೃತ ವಿದ್ಯಾಲಯಗಳಿಗೆ ಧನ ಸಹಾಯಮಾಡಿ ಧರ್ಮಶಾಸ್ತ್ರಾಭ್ಯಾಸದಿಂದ ತರಪೇತು ಮಾಡಲು ಗುರುನಾತೀಯ ಸೈನ್ಯವನ್ನು ಒಲಪಡಿಸಿದರು. ಎಂದೂ ನಶಿಸದ, ವೈರಿಗಳ ಹೊಡೆತಕ್ಕೆ ಸಿಕ್ಕದ ತಮ್ಮ ಉಜ್ವಲವಾದ ತಪಸ್ಸನ್ನೇ ವೀರಶೈವ ಜಗತ್ತಿನ ಸುತ್ತಲೂ ದಿವ್ಯವಾದ ಕೋಟೆಯನ್ನಾಗಿ ನಿರ್ಮಿಸಿದರು.

ಪಂಚರಾಜ್ಯಗಳಲ್ಲಿ ಒಂದಾದ ಶ್ರೀ ರಂಭಾಪುರೀ ವೀರಸಿಂಹಾಸನ ರಾಜ್ಯವು ಅನಾಯಕವಾದಾಗ ವೈರಿಗಳು ಆ ರಾಜ್ಯವನ್ನು ಕೈವಶಮಾಡಿಕೊಳ್ಳಲು ಬಹು ಪ್ರಯತ್ನ ಪಡಹತ್ತಿದರು. ವೈರಿಗಳು ಧನಬಲ, ಜನಬಲದಿಂದ ಕೂಡಿದ್ದರೂ, ಕುಟಿಲಕಾರಸ್ಥಾನಗಳಲ್ಲಿ ಮಹಾಶಕ್ತರಾಗಿದ್ದರೂ ಸಹ ಅದನ್ನು ಗಮನಿಸದೆ ಅಲ್ಪಸಂಖ್ಯಾತ ಜನರನ್ನೇ ಸೇರಿಸಿಕೊಂಡು "ಸತ್ಯಮೇವ ವಿಜಯತೇ" ಎಂಬ ಮಹಾವಾಕ್ಯವನ್ನು ಉಪದೇಶಿಸುತ್ತ ಶಾಮನ್ಯಾಗಗಳಿಂದ ಭಯಂಕರವಾದ ಬಾಳಾಂಬುಧಿಗುಡ್ಡದ ಗವಿಯಲ್ಲಿ ಆ ಪೀಠದ ಉದ್ಧಾರಕ್ಕಾಗಿ ೪ ತಿಂಗಳವರೆಗೆ ಉಗ್ರವಾದ ತಪಸ್ಸನ್ನಾಚರಿಸಿ ಆ ರಾಜ್ಯವನ್ನು ಕೈವಶಮಾಡಿಕೊಂಡು ವೀರಸಿಂಹಾಸನದಲ್ಲಿ ಬ್ರಹ್ಮತೇಜಸ್ವಿಗಳೂ, ಜಗದ್ವಂದ್ಯರೂ, ಆದ ಶ್ರೀ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯರೆಂಬ ರಾಜಯೋಗಿಗಳನ್ನು ಪಟ್ಟಾಭಿಷಿಕ್ತರನ್ನಾಗಿ ಮಾಡಿ ಆ ಪೀಠವು ರಾಜಾಧಿರಾಜರಿಂದ ಮಾನ್ಯವಾಗುವಂತೆ ಮಾಡಿ ಚಿರಸ್ಮರಣೀಯರಾದರು.

ಈ ಗುರುಸಾರ್ವಭೌಮರು ಶಿವನಲ್ಲಿ ಬೆರೆದು ೫ ವರ್ಷಗಳು ಸಂಪೂರ್ಣವಾದವು. ಈ ಮಹಾತ್ಮರ ಅಘಟಿತಘಟನಲೀಲೆಗಳನ್ನು ಸಾವಿರ ನಾಲಿಗೆಯುಳ್ಳ ಆದಿಶೇಷನಿಂದಲೂ ವರ್ಣಿಸಲಸಾಧ್ಯ. ಇಂತಹ ಮಹಾತ್ಮರು ನಮ್ಮ ಧರ್ಮರಾಜ್ಯದಲ್ಲಿ ಅವತರಿಸಿ ವೀರಶೈವ ಸಾಮ್ರಾಜ್ಯವನ್ನು ಉಜ್ವಲಗೊಳಿಸಲೆಂದು ಪೂರ್ವಾಚಾರ್ಯರನ್ನು ಅನಿತರಸಾಧಾರಣ ಭಕ್ತಿಯಿಂದ ಪ್ರಾರ್ಥಿಸುವೆನು.

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಪುಣ್ಯತಿಥಿ ಸಮಾರಂಭ ಹುವ್ವಿನಹಡಗಲಿ

ಬಳ್ಳಾರಿ ಡಿ॥ ಹುವ್ವಿನಹಡಗಲಿಯಲ್ಲಿ ವೀರಶೈವ ತರುಣಸಂಘದವರು ತಾ॥ ೬-೧-೪೨ ನೆಯ ಮಂಗಳವಾರ ದಿವಸ ಕೈ॥ ಶ್ರೀ ಜಗದ್ಗುರುಗಳವರ ಪುಣ್ಯದಿನವನ್ನು ಬಹು ವೈಭವದೊಡನೆ ನೆರವೇರಿಸಿದರು. ಆ ದಿವಸ ಪ್ರಾತಃಕಾಲ ೮ ಘಂಟೆಗೆ ಶ್ರೀ ಜಗದ್ಗುರುಗಳವರ ಭಾವಚಿತ್ರದ ಮೆರವಣಿಗೆಯು ಭಜನಾಸಂಘದೊಂದಿಗೆ ಗೋಣೀಬಸವೇಶ್ವರ ದೇವಸ್ಥಾನದಿಂದ ಹೊರಟು ಗ್ರಾಮದಲ್ಲೆಲ್ಲ ನೆರವೇರಿತು. ಸಾಯಂಕಾಲ ೬ ಘಂಟೆಗೆ ವಿದ್ಯಾರ್ಥಿನಿಲಯದಲ್ಲಿ ಸಭೆಸೇರಿತು. ಪ್ರಾಥಮಿಕ ಶಾಲಾಧ್ಯಾಪಕರಾದ ವೇ॥ ಬಿ ಎಚ್ ಎಂ. ಅಮರನಾಥಶಾಸ್ತ್ರಿಗಳನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಪ್ರಾರಂಭದಲ್ಲಿ ಬಾಲಕರ ಮಂಗಲಸ್ತೋತ್ರವಾದಮೇಲೆ ಅಧ್ಯಕ್ಷರು ಜಗದ್ಗುರುಗಳವರ ವಿಷಯದಲ್ಲಿ ಹೃದಯಂಗಮವಾದ ಭಾಷಣಮಾಡಿದರು. ಬಳಿಕ ವೇ॥ ಪುರಾಣಿಕಮಠದ ವಿರೂಪಾಕ್ಷಶಾಸ್ತ್ರಿಗಳ ಭಾಷಣವಾಯಿತು. ಆವೇಳೆ ವಿದ್ಯಾರ್ಥಿನಿಲಯದ ಸೂಪರಿಂಟೆಂಡೆಂಟರಾದ ಮ॥ ರಾ॥ ಸೊಪ್ಪಿನ ಗುರುಲಿಂಗಪ್ಪನವರು ಜಗದ್ಗುರುಗಳವರ ಅನಂತ ಮಹಿಮಾವಿಷಯಗಳನ್ನು ಮನೋಹರವಾಗಿ ಹೇಳಿದರು. ಈ ಸಮಯದಲ್ಲಿ ಮ॥ ರಾ॥ ಗುರುಶಂಕರ ಗುರುಲಿಂಗಪ್ಪನವರು ಪ್ರಭಾಪೋಷಣಕ್ಕೋಸ್ಕರ ೧ ರೂಪಾಯಿಯನ್ನು ಸಮರ್ಪಿಸಿದರು. ಬಳಿಕ ಜಗದಾಚಾರ್ಯರ ಮಂಗಲದೊಡನೆ ಸಭೆಯು ಸಮಾಪ್ತಿಗೊಂಡಿತು.

ಓರ್ವ ಗುರುಭಕ್ತ.

ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನಸಮಾರಂಭ, ಹುಣಸಿಕಟ್ಟಿ

ಕೊಟ್ಟೂರು ಕಟ್ಟೀಮನಿ ಬೃಹನ್ಮಠದ ಶ್ರೀ|| ಷ|| ಬ್ರ|| ಪಟ್ಟದ ಭೂತಭುಜಂಗಸ್ವಾಮಿಗಳವರ ಪಾಠಶಾಲಾ ಭಿಕ್ಷಾಟನಕ್ಕಾಗಿ ಕೊಟ್ಟೂರಿಗೆ ಸಮೀಪದಲ್ಲಿರುವ ಹುಣಸಿಕಟ್ಟಿ ಗ್ರಾಮಕ್ಕೆ ಆಗಮಿಸಿ, ಮಹಾತಪಸ್ವಿಗಳಾದ ಉಜ್ಜಯಿನಿ ಶಿವೈಕ್ಯ ಜಗದ್ಗುರುಗಳವರ ಪುಣ್ಯದಿನವನ್ನು ಸರ್ವರೂ ದೊಡ್ಡ ಹಬ್ಬವನ್ನಾಗಿ ಆಚರಿಸಬೇಕೆಂದು ಬೋಧಿಸಲು ಸರ್ವರೂ ಒಪ್ಪಿ ವಿಶೇಷ ವೈಭವದಿಂದ ನೆರವೇರಿಸಿದರು ಪುಷ್ಯ ಬ|| ೪ ಮಂಗಳವಾರ ದಿವಸ ತಳಿರು ತೋರಣ ರಂಭಾ ಸ್ತಂಭಾದ್ಯಲಂಕೃತವಾದ ಮಂಟಪದಲ್ಲಿ ಶ್ರೀ ಜಗದ್ಗುರುಗಳವರ ಭವ್ಯ ಭಾವಚಿತ್ರದ ಪೂಜೆಯು ವಿಧ್ಯುಕ್ತವಾಗಿ ನೆರವೇರಿತ ಬಳಿಕ ಪಲ್ಲಕ್ಕಿಯಲ್ಲಿ ಭಾವಚಿತ್ರವನ್ನಿಟ್ಟು ವಾದ್ಯ ವೈಭವದೊಡನೆಯೂ ಶ್ರೀ|| ಷ|| ಪಂ| ಭಜನಾಸಂಘದೊಡನೆಯೂ ಉತ್ಸವವು ಅಸಾಧಾರಣ ವೈಭವದಿಂದ ಸಾಗಿತು ಹೆಜ್ಜೆ ಹೆಜ್ಜೆಗೂ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾರಾಜಕೀ ಜೈ! ಷ|| ಶ್ರೀ ಕಾಶೀನಾಥಶಾಸ್ತ್ರೀ ಮಹಾರಾಜಕೀ ಜೈ! ಎಂಬ ಜಯಘೋಷಗಳಾಗುತ್ತಿದ್ದವು ಈ ರೀತಿ ಸಾಗುತ್ತ ಉತ್ಸವವು ಸ್ವಸ್ಥಾನಕ್ಕೆ ಬಂದು ತಲ್ಪಿತು ಈ ಉತ್ಸವ ಕಾರ್ಯಕ್ಕೆ ಗ್ರಾಮದ ಮುಖ್ಯ ಬಣಕಾರನಾದ ಚನ್ನವೀರಪ್ಪ ಯಜಮಾನನು ಎಲ್ಲಾ ಖರ್ಚನ್ನು ವಹಿಸಿದುದು ಸ್ತುತ್ಯವಾಗಿದೆ ಇವಕ್ಕೆಲ್ಲಾ ನೇರ್ಮೆಯಿಂದ ಶ್ರೀಗಳವರ ಬೋಧಾಮೃತವೇ ಮುಖ್ಯಕಾರಣವಾಗಿರುತ್ತದೆ ಈ ಗ್ರಾಮದ ಸಕಲ ಸದ್ಭಕ್ತರನ್ನೂ ಶ್ರೀ ಜಗದ್ಗುರು ಸಿದ್ಧಲಿಂಗೇಶನು ಅನುಗ್ರಹಿಸಲೆಂದು ಪ್ರಾರ್ಥಿಸುವ

ಶ್ರೀ ಜಗದ್ಗುರು ಪಾದಕಿಂಕರ,
ಸ್ಕೂಲ್ ಮಾಸ್ಟರ್ ಹೆಚ್ ಎಂ ಪ್ರಭಯ್ಯ

ಶ್ರೀ|| ಉಜ್ಜಯಿನೀ ಜಗದ್ಗುರುಗಳವರ ಪುಣ್ಯದಿನ ಮಹೋತ್ಸವ ಸೊಲ್ಲಾಪುರ

ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರು ಶಿವೈಕ್ಯರಾಗಿ ಪುಷ್ಯ ಬ|| ೪ ಮಿತಿಗೆ ೬ ವರ್ಷಗಳು ತುಂಬಿದವಷ್ಟೆ! ಆ ದಿವಸ ಸೊಲ್ಲಾಪುರದ ವೀರಶೈವ ಸದಾಚಾರ ಸ್ತ್ರೀ ಸಮಾಜದವರು ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪುಣ್ಯತಿಥಿ ಮಹೋತ್ಸವವನ್ನು ವಿಶೇಷ ವೈಭವದಿಂದ ಜರುಗಿಸಿದರು ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಸಭೆಸೇರಿ ಅನೇಕ ಸ್ತ್ರೀ ಪುರುಷರು, ಶ್ರೀ|| ಸಿದ್ಧಲಿಂಗ ಜಗದ್ಗುರುಗಳವರ ಅದ್ಭುತ ಲೀಲೆಗಳನ್ನು ಭಾಷಣರೂಪದಿಂದ ಹೇಳಿದರು ಆ ಮಹಾತ್ಮರ ಲೀಲಾತಿಶಯವನ್ನು ಕೇಳಿ ಸರ್ವರೂ ಸಂತುಷ್ಟಚಿತ್ತರಾದರು ಬಳಿಕ ಶ್ರೀ ಜಗದ್ಗುರುಗಳವರ ಮಂಗಲದೊಡನೆ ಸಭೆಯು ವಿಸರ್ಜನಗೊಂಡಿತು

ಪ್ರತ್ಯಕ್ಷದರ್ಶಿ

ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ

ಶಿವಮೊಗ್ಗಾ ಡಿ| ಹಾರನಹಳ್ಳಿಯಲ್ಲಿರುವ ವೇ|| ಗುಬ್ಬೀ ಶಿವಕಥಾ ಪಂಡಿತ ಶಿವರುದ್ರಶಾಸ್ತ್ರಿಗಳು ತಮ್ಮ ವಾಸಗೃಹದಲ್ಲಿ ಇದೇ ಪುಷ್ಯ ಬ|| ೪ (ತಾ|| ೬-೧ ೪೨) ಮಂಗಳವಾರ ಪ್ರಾತಃಕಾಲ ಶ್ರೀ ಭಗವತ್ಪಾದರವರ ಭಾವಚಿತ್ರವನ್ನು ತಳಿರು ತೋರಣ ಪುಷ್ಪಗುಚ್ಛಗಳಿಂದ ಲಂಕೃತವಾದ ಭವ್ಯಮಂಟಪದಲ್ಲಿ ಮೂರ್ತಗೊಳಿಸಿ ವಿಧ್ಯುಕ್ತವಾಗಿ ಪೂಜಿಸಿ, ವಂದಿಸಿ, ನುತಿಸಿ, ಸ್ಮರಿಸಿ, ಸ್ವವಿರಚಿತ ಮಹಾಗುರು ಮಂಗಲಪದ್ಯಮಂ ಪಾಡಿ ಕೊಂಡಾಡಿ, ಬೇಡಿ ಪ್ರಸಾದವನ್ನು ವಿನಿಯೋಗಿಸಿದ ಬಳಿಕ ಮಧ್ಯಾಹ್ನ ಸಂತರ್ಪಣೆಯು ನಡೆದು ಸಾಯಂಕಾಲ ಜಗತ್ಪೂಜ್ಯರ ಪಾವನ ಜೀವನಚರಿತ್ರೆಯನ್ನು ಓದಿ ಹೇಳಿ ಶ್ರವಣೇಚ್ಛುಗಳಾದ ಭಾವುಕರನ್ನು ಧನ್ಯರನ್ನಾಗಿ ಮಾಡಿದರು. ಓರ್ವ ಗುರುಸೇವಕ.

ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯದಿನಾಚರಣೆ

ಪ್ರತಿವರ್ಷದ ಪದ್ಧತಿಯ ಪ್ರಕಾರ ಈ ವರ್ಷ ಪುಷ್ಯ ಬ|| ೪ ಮಂಗಳವಾರ ಬಳ್ಳಾರಿ ಡಿ|| ಹೊಳಲಗುಂದಿ ಗ್ರಾಮದ ಮ|| ರಾ|| ಶ್ರೀಮಂತ ಗೌಡರಮನೆಯಲ್ಲಿ ಶ್ರೀಗಳವರ ಪುಣ್ಯದಿನಾಚರಣೆಯು ವೈಭವದಿಂದ ನೆರವೇರಿತು ಬಸವನಗೌಡ ಪಾಟೀಲ್ ಇವರು ಶ್ರೀಗಳವರ ಪಾದುಕೆಗಳನ್ನೂ ಮತ್ತು ಶ್ರೀಗಳವರ ಭಾವಚಿತ್ರವನ್ನೂ ಷೋಡಶೋಪಚಾರಗಳಿಂದ ಪೂಜಿಸಿದರು ಶ್ರೀಮಂತ ಸಿದ್ಧಪ್ಪನೋಕೆ ಇವರು ತಮ್ಮ ಮಂಜುಳಸ್ವರದಿಂದ ಮ|| ರಾ|| ಬಸವನಗೌಡರಿಂದ ರಚಿತವಾದ ಮಂಗಲವನ್ನು ಹಾಡಿದರು ಮಂಗಲಾನಂತರ ಗಣತೃಪ್ತಿಯಾಯಿತು ಭೋಜನಾನಂತರ ದರ್ಬಾರ್ ಭವನದಲ್ಲಿ ಮಂಡಿತವಾದ ಮಾಹೇಶ್ವರ ವೃಂದಕ್ಕೆ ಚಿ|| ಸಿದ್ಧನಗೌಡರು ದಕ್ಷಿಣತಾಂಬೂಲಾದಿಗಳನ್ನರ್ಪಿಸಿ ಮಂಗಲಾಶೀರ್ವಾದಗಳನ್ನು ಸ್ವೀಕರಿಸಿದರು ಭಕ್ತಾಗ್ರಗಣ್ಯರಾದ ಈ ಗೌಡರಿಗೆ ಇತೋಽಪ್ಯತಿಶಯವಾದ ಗುರುಭಕ್ತಿಯನ್ನೂ ಆಯುರಾರೋಗ್ಯಾದಿ ಸಕಲ ಸಂಪತ್ತನ್ನೂ ದಯಪಾಲಿಸಿ ಸಂರಕ್ಷಿಸಲೆಂದು ದಯಾಘನರಾದ ಶ್ರೀ ಸಿದ್ಧಲಿಂಗಶಿವಯೋಗಿಗಳನ್ನು ಪ್ರಾರ್ಥಿಸುತ್ತೇನೆ

ಗುರುಲಿಂಗಯ್ಯ ಹಿರೇಮಠ, ಹೊಳಲಗುಂದಿ

|| ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಗುರುತತ್ವಪ್ರಭಾಕರ.

ಲೇ—ಶಾ|| ಭಾಗೀರಥೀಬಾಯಿ ಕಟಾಪ, ಸೊಲ್ಲಾಪುರ.

(ಹಿಂದಿನಿಂದ ಮುಂದುವರೆದುದು)

ಸುಜ್ಞವಾಚಕರೇ! ಇನ್ನು ವೀರಶೈವ ಗುರುಗಳು ಹೇಗಿರಬೇಕು? ಅವರ ಲಕ್ಷಣವೇನು? ಇದನ್ನು ವಿಚಾರಿಸುವಾ! ಗುರುವಿನ ವಿಷಯವು ತಿಳಿಸಿ ಹೇಳಲಿಕ್ಕೆ ಗುರು (ದೊಡ್ಡ) ವಾಗಿದ್ದರೂ ಸದ್ಗುರುಕೃಪೆಯಿಂದ ಯಥಾಮತಿ ನಿವೇದಿಸುವೆನು

ಉತ್ಪತ್ತಿ ಲೋಕವಿಖ್ಯಾತಂ ಲೋಭಮೋಹವಿವರ್ಜಿತಂ |
ಆತ್ಮತತ್ವವಿಚಾರಜ್ಞಂ ವಿಮುಕ್ತವಿಷಯಭ್ರಮಂ ||
ಶಿವಸಿದ್ಧಾಂತತತ್ವಜ್ಞಂ ಛಿನ್ನಸಂದೇಹವಿಭ್ರಮಂ |
ಸರ್ವತಂತ್ರಪ್ರಯೋಗಜ್ಞಂ ಧಾರ್ಮಿಕಂ ಸತ್ಯವಾದಿನಂ ||
ಕುಲಕ್ರಮಾಗತಾಚಾರಂ ಕುಮಾರ್ಗಾಚಾರವರ್ಜಿತಂ |
ಶಿವಧ್ಯಾನಪರಂ ಶಾಂತಂ ಶಿವತತ್ವನಿವೇಶಿನಂ ||
ಲಿಂಗಧಾರಣಸಂಯುಕ್ತಂ ಲಿಂಗಪೂಜಾಪರಾಯಣಂ |
ಲಿಂಗಾಂಗಯೋಗತತ್ವಜ್ಞಂ ನಿರೂಢಾದ್ವೈತನಾಶನಂ ||
ಲಿಂಗಾಂಗಸ್ಥಲಭೇದಜ್ಞಂ ಶ್ರೀಗುರುಂ ಶಿವವಾದಿನಂ |
ಸೇವೇತ ಚರಮಾಚಾರ್ಯಂ ಶಿಷ್ಯೋ ಭಕ್ತಿಭಯಾನ್ವಿತಃ ||

ಪರಶಿವತತ್ವವನ್ನು ಪೂರ್ಣವಾಗಿ ಅರಿತವನೂ, ಸತ್ಕುಲದಲ್ಲಿ ಜನಿಸಿದವನೂ, ಆಗಮಶಾಸ್ತ್ರಗಳ ಯಾಥಾರ್ಥ್ಯವನ್ನು ಬಲ್ಲವನೂ, ಸಕಲ ವಿಷಯಗಳಲ್ಲಿ ಭ್ರಮರಹಿತನೂ, ಸತ್ಯಾದಿಸದ್ಗುಣಸಂಪನ್ನನೂ, ಪರಧರ್ಮಸಹಿಷ್ಣುವೂ, ಸ್ವಧರ್ಮನಿಷ್ಠನೂ, ದುರ್ಮಾರ್ಗಗಾಮಿಯಾಗದಿರುವವನೂ, ಗುರುವಂಶಾನುಕ್ರಮವಾಗಿ ಬಂದವನೂ, ಮಂತ್ರರಹಸ್ಯಜ್ಞನೂ, ಶಿವತತ್ವವಿವೇಕಿಯೂ, ಶಿವಜ್ಞಾನಪರನೂ, ಲಿಂಗಧಾರಣಯುಕ್ತನಾದವನೂ, ಲಿಂಗಾಂಗಸಾಮರಸ್ಯಜ್ಞಾನಿಯೂ ಆದ ಸದ್ಗುರುವನ್ನು ಶಿಷ್ಯನು ಭಯಭಕ್ತಿಯಿಂದೊಡಗೂಡಿ ಸೇವಿಸಬೇಕು ಸಂಸಾರಗಳಿಂದ ನೊಂದು, ಕಾಮಕ್ರೋಧಾದಿಗಳಿಂದ ಬೆಂದು, ಹುಟ್ಟುಸಾವುಗಳಿಗೆ ಸಿಡಿಮಿಡಿಗೊಂಡು ಕೆಡುವ ಒಡಲಿಗೆ ಒಗಡಿಸಿ, ಸಂಸಾರವು ನಿಸ್ಸಾರವೆಂದು ಮನವರಿಕೆಮಾಡಿಕೊಂಡು ನಿಜವಾಗಿ ಮುಮುಕ್ಷುವಾದ ಶಿಷ್ಯನು ಲಿಂಗಾಂಗಸಾಮರಸ್ಯಜ್ಞಾನಕ್ಕೋಸ್ಕರವಾಗಿ ಶ್ರೀಗುರುವನ್ನು ಹೊಂದಬೇಕು ಶ್ರೀಗುರುವು ಶಿಷ್ಯನನ್ನು ಅನೇಕ ವಿಧವಾಗಿ ಪರೀಕ್ಷಿಸಿ ಬೋಧೆಗೆ ಯೋಗ್ಯನಾಗಿ ಕಂಡರೆ, ತನ್ನ ಶಿವಯೋಗಪ್ರಭಾವದಿಂದಲೂ, ಶಿವಜ್ಞಾನಬಲದಿಂದಲೂ, ಅವನಿಗೆ ಶಿವದೀಕ್ಷಾಸಂಸ್ಕಾರಪೂರ್ವಕವಾಗಿ ಶಿವಪಂಚಾಕ್ಷರೀಮಂತ್ರೋಪದೇಶವನ್ನು ಮಾಡಿ ಮಾಂಸಪಿಂಡವಳಿದು ಮಂತ್ರಪಿಂಡವನ್ನಾಗಿಮಾಡಿ ಅಂಗತ್ರಯದಲ್ಲಿ ಲಿಂಗತ್ರಯವನ್ನು ಧರಿಸಿ ಅವುಗಳ ನೆಲೆಕಲೆಗಳನ್ನು ತಿಳಿಸಿ, ಅರ್ಚನಾನುಸಂಧಾನಗಳ ರಹಸ್ಯವನ್ನೂ ರೀಯನ್ನೂ ಅರುಹಿ ಆಚರಿಸಲಿಕ್ಕೆ ಹಚ್ಚುವನು. ಈರೀ ಅಲೌಕಿಕಕಾರ್ಯವನ್ನು ಮಾಡಿ ಅಲ್ಪಜ್ಞನಾದ ಜೀವನಲ್ಲಿ ಶಿವಶಕ್ತಿಯನ್ನು ವಿಕಾಸಗೊಳಿಸಿ ಆ ಜೀವನನ್ನು ಸರ್ವಜ್ಞನಾದ ಶಿವನನ್ನೇ ಮಾಡುವ ಅಘಟಿತಘಟನಶಕ್ತಿಯುಳ್ಳವನಾದ್ದರಿಂದ ಶ್ರುತಿದೇವಿಯು—

ನಗುರೋರಧಿಕಂ, ನಗುರೋರಧಿಕಂ, ನಗುರೋರಧಿಕಂ |
ಶಿವಶಾಸನತಶ್ಶಿವಶಾಸನತಶ್ಶಿವಶಾಸನತಃ ||

ಎಂದು ಉದ್ಘೋಷಿಸಿರುವಳು.

ವಾಚಕರೇ! ಹೀಗೆ ವೇದವು ಗುರುಮಹಿಮೆಯನ ಹೊಗಳುವ ನುಡಿಯೆತ್ತ? ಗುರುಗಳೆಂದು ಹೇಳಿಸಿಕೊಳ್ಳುವ ಅನಧಿಕಾರಿಗಳ ಆಡಂಬರದ ನಡೆಯೆತ್ತ? ಭೂಮ್ಯಾಕಾಶದಷ್ಟು ಅಂತರವಾಗಿದೆ.

ಗುರವೋ ಬಹವಸ್ಸಂತಿ ಶಿಷ್ಯವಿತ್ತಾಪಹಾರಕಾಃ |
ಶಿಷ್ಯಸಂತಾಪಹಾರಸ್ತು ಗುರುರೇಕೋ ಹಿ ದುರ್ಲಭಃ ||

ನಾನೇ ಗುರುವೆಂದು ಹೇಳಿಕೊಂಡು ಶಿಷ್ಯರ ದುಡ್ಡು ಸುಲಿಯುವ ಗುರುಗಳೇ ಈ ಕಾಲದಲ್ಲಿ ವಿಶೇಷ ಹೆಚ್ಚಿರುವರು ನಿಜವಾದ ಗುರುಗಳಾರೆಂಬುದನ್ನು ವಿಚಾರಮಾಡದೆ ಕಾಣಿಕೆಯೆಂದರೇನು? ಭಿಕ್ಷೆಯೆಂದರೇನು? ನಾವು ಕೊಟ್ಟ ಹಣದ ಉಪಯೋಗವು ಹೇಗಾಗುವುದು? ಈ ಮೊದಲಾದ ಸಂಗತಿಗಳನ್ನು ವಿಚಾರಿಸದೆ ಸುಮ್ಮನೇ ಆಡಂಬರಕ್ಕೆ ಅಥವಾ ಸೊಬಗಿಗೆ ಬೆರಗಾಗಿ ತಾವು ಬೆವರು ಸುರಿಸಿ ದುಡಿದ ದುಡ್ಡನ್ನು ನೀರಿನಂತೆ ಅನಧಿಕಾರಿಗಳ ಜೋಳಿಗೆಯಲ್ಲಿ ಸುರಿಯುವ ಜನರಾದರೂ ಬಹಳವಾಗಿದ್ದಾರೆ ದಾನತಕ್ಕೊಳ್ಳುವರಲ್ಲಿಯೂ ಕೊಡುವವರಲ್ಲಿಯೂ ವಿಚಾರವು ಬೇಕು. ಸತ್ಪಾತ್ರದಾನವೇ ಪುಣ್ಯಪ್ರದವಾದದ್ದು ಅದು ಶುಕ್ತಿಯಲ್ಲಿ ಸ್ವಾತೀಮಳೆಯ ಹನಿಯು ಬಿದ್ದು ಮುತ್ತಾದಂತೆ ಸಾರ್ಥಕವಾಗುವದು. ಅಪಾತ್ರದಾನವು ಕಾದಕಬ್ಬಿಣದಮೇಲೆ ಬಿದ್ದ ನೀರಿನ ಹನಿಯಂತೆ ವ್ಯರ್ಥವಾಗುವದು ಹೀಗಿದ್ದು ಶಿಷ್ಯರ ಮನಸ್ಸನ್ನು ಆಕರ್ಷಣಮಾಡಿ ಅವರವರ ಆಚಾರವಿಚಾರಗಳನ್ನು ತಿದ್ದಿ ಅವರಲ್ಲಿರುವ ಅಜ್ಞಾನಾಂಧಕಾರವನ್ನು ದೂರಮಾಡಿ ಜ್ಞಾನಜ್ಯೋತಿಯನ್ನು ಬೆಳಗುವ ನಿಜವಾದ ಗುರುಗಳನ್ನು ಮೂಲೆಗೆ ಒತ್ತಿ—

ಲೋಕಾ ಸಾಂಗೇ ಬ್ರಹ್ಮಜ್ಞಾನ ಆಪಣ ಕೋರಡೇ ಪಾಷಾಣ |

ಎಂಬ ತುಕಾರಾಮ ಸಾಧುಗಳ ವಚನದಂತೆ ತಾವು ಸ್ವತಃ ಶಾಸ್ತ್ರವಚನಗಳ ಪರಿಣಾಮಮಾಡಿಕೊಳ್ಳದೆ ಕಗ್ಗಲ್ಲಾಗಿ ಅರಮನೆಯ ರಾಜಭೋಗದ ಸುದ್ದಿಯನ್ನು ತಿರುಕನು ಮಾತಾಡುವಂತೆ ಬ್ರಹ್ಮಜ್ಞಾನದ ಸುದ್ದಿಯನ್ನು ಮಾತನಾಡುವ ವಾಚಾಳಿಗಳಾಗಿ ಮೆರೆಯುವವರಿಗೆ ಜ್ಞಾನಜ್ಯೋತಿಯ ಗೊತ್ತುಗುರಿ ಹೇಗಾದೀತು. ಗುರುಗಳಲ್ಲಿ ಸತ್ಪ್ರವೃತ್ತಿಭೇದದಿಂದ ಸಿದ್ಧಸಾಧಕರೆಂದು ಎರಡು ಭೇದ ಮಾಡಿದಂತೆ ಉದರಂಭರಣಪ್ರವೃತ್ತಿಯಿಂದಲಾದರೂ ಎರಡು ಪ್ರಕಾರವನ್ನು ಈಗ ಕಲಿಪ್ರಭಾವದಿಂದ ಕಲ್ಪಿಸಬಹುದು ಒಬ್ಬರು ಬಣಮೌನಿಗಳು ಒಬ್ಬರು ಬಣವಾಗ್ಮಿಗಳು ಇವರಿಬ್ಬರ ವರ್ತನಗಳು ಬೇರೆ ಬೇರೆ ಕಂಡರೂ, ಸು ಒಂದೇ ಆಗಿದೆ ಯಾವುದೆಂದರೆ ಜನರನ್ನು ಮರಳುಗೊಳಿಸುವದು. ರಣರಂಗದಲ್ಲಿ ಹೇಡಿಯಾದವನು ತನ್ನ ವೈರಿಯವರ ಬಲವಿರುವವರೆಗೂ, ವೀರನಂತೆ ಆರ್ಭಟಿಸಿ ಸೋಲಿನ ಸಮಯಬಂದರೆ ಹೇಗೆ ಕಡ್ಡಿಯನ್ನು ಕಚ್ಚಿ ಉಳಿದುಕೊಳ್ಳುವನೋ ಹಾಗೆಯೇ ಆಡಂಬರಕ್ಕಾಗಿ ಕಾವಿಯ ವೇಷವನ್ನು ಧರಿಸಿ ನಾವೇ ಗುರುಗಳೆಂದು ರುದ್ರಾಕ್ಷಿಮಾಲೆಯನ್ನು ಹಾಕಿಕೊಂಡು ಭಕ್ತರಮೇಲೆ ಅಧಿಕಾರವನ್ನು ತೋರಿಸುತ್ತ ಮೆರೆಯುವ ನಾಮಧಾರಿಗುರುಗಳಿಗೆ ಶಾಸ್ತ್ರಾರ್ಥಕ್ಕೆ ನಿಂತರೆ, ಅಥವಾ ಗುರುಗಳು ಆಹುದೋ ಅಲ್ಲವೋ ಎಂದು ನಿರ್ಣಯಮಾಡತೊಡಗಿದರೆ, ನಿಜಸ್ಥಿತಿ ಹೊರಬೀಳುವುದೆಂದು, ಎಲ್ಲಿಯೂ ಶಾಸ್ತ್ರಾಧಾರವು ಸಿಗುವದಿಲ್ಲ ನಮ್ಮ ಮುಂಗೈಜೋರಿನಿಂದಲೇ ನಡೆಯಬೇಕಾಗಿದೆ ಎಂದು ತಮ್ಮತಮ್ಮಲ್ಲಿಯೇ ಕದ್ದು ನಿರ್ಣಯಿಸುವವ ಈಗಿನಕಾಲಕ್ಕೆ ಕಾವಿಯ ವೇಷವೇ ಬೇಡಿದ್ದನ್ನು ಕೊಡುವ ಕಾಮಧೇನುವಾಗಿದೆ ನಮ್ಮ ಕೆಲವು ಮರುಳಭಕ್ತರಂತೂ ವೇಷಕ್ಕೆ ತಕ್ಕ ಅಧಿಕಾರ ಆಚಾರವಿಚಾರಗಳನ್ನು ನೋಡುವದೇ ಇಲ್ಲ. ಅಪ್ಪ ಅಪ್ಪ ಎಂದು ಕುಣಿಯುವದೊಂದೇ ಇವರಿಗೆ ಗೊತ್ತು. ಈ ಪ್ರಕಾರದ ಮರುಳಭಕ್ತರು

ಹೇಳ್ಳಾದಂತೆ ಇಂತಹ ವಿವೇಕಹೀನಗುರುಗಳು ಹೆಚ್ಚಾಗಿದ್ದಾರೆ. ಇಂಥವರಿಂದ ತತ್ವಜ್ಞಾನವಂತೂ ಒತ್ತಟ್ಟಿಗಿರಲಿ ಲೌಕಿಕಜ್ಞಾನವಾದರೂ ಮಂಕಾಗಿ ಸಮಾಜ ಅಥವಾ ದೇಶವೇ ದುಃಸ್ಥಿತಿಗೀಡಾಗುವದು. ಇಂಥವರಿಗೆ ಶಿಷ್ಯೋದ್ಧಾರಕಾರ್ಯಗಳು ಬೇಡ, ಶಾಸ್ತ್ರಶ್ರವಣಬೇಡ, ವೇದಾಗಮಗಳ ಪ್ರಚಾರಬೇಡ, ಸದಾಚಾರಬೇಡ, ಕೇವಲ ಆಡಂಬರವೇ ಆಡಂಬರ. ಅಂದಬಳಿಕ ಇವರಿಗೇ ಆಗಲಿ, ಇವರ ಅನುಯಾಯಿಗಳಿಗೇ ಆಗಲಿ, ಸದ್ಗತಿಯು ಅಥವಾ ಮೋಕ್ಷವು ಹೇಗೆ ಆಗಬೇಕು ?

ಪೂಜಿಸದೆ ಶರಣನನು ವಂದಿಸದೆ ದೇವನನು |
ಉಂಡಾಡಿ ಸ್ವರ್ಗವನೈದಲ್ಕೆ ಅದನೇನು ರಂಡೆಯಾಳುವಳೆ ಸರ್ವಜ್ಞ ||

ಎಂಬ ಸರ್ವಜ್ಞಕವಿಯ ವಚನದಂತೆ ಸತ್ಸಂಗತಿ, ಸದಾಚಾರ, ಸಮ್ಯಗ್‌ಜ್ಞಾನಗಳ ಬಲದಿಂದ ದೇಹವನ್ನು ಸವಿಸದೆ, ಇಂದ್ರಿಯಗಳನ್ನು ಬಿಗಿಯಾಗಿ ಹಿಡಿಯದೆ, ಸದ್ಗತಿಯು ಹೇಗಾಗುವದು ? ಈ ಗುಣಗಳು ಮೊದಲು ಅವರಲ್ಲೇ ಇಲ್ಲದೇ ಇರಲು ನಮ್ಮ ಮರುಳ ಶಿಷ್ಯರಿಗೆಲ್ಲಿಂದ ಬರಬೇಕು ? ಗುರುವಿಗೆ ಗುಟುಕುನೀರು ಶಿಷ್ಯನಿಗೆ ಮುಣುಗುನೀರು ಎಂಬಂತೆಯೇ ಸರಿ ! ಮೊದಲು ಗುರು ಎಂಬ ಶಬ್ದದ ಅರ್ಥವೇ ಇವರಿಗೆ ತಿಳಿಯದಿರುವಾಗ ಗುರುತ್ವಾಧಿಕಾರವು ದೂರೇ ಉಳಿಯಿತು. ಮಾತೃದೇವೋಭವ, ಪಿತೃದೇವೋಭವ ಎಂದು ಹೇಳಿದ ಶ್ರುತಿಯು ಆಚಾರ್ಯದೇವೋ ಭವ ಎಂದು ಹೇಳಿದೆ. ಆಚಾರ್ಯರನ್ನು ದೇವರಂತೆ ಭಾವಿಸಬೇಕೆಂದು ಇದರ ತಾತ್ಪರ್ಯ. ಆಚಾರ್ಯರೆಂಬ ಮಾತು ವೇದಗಳ ಎಲ್ಲಾ ರಹಸ್ಯಗಳನ್ನೂ ತಿಳಿಸತಕ್ಕವರಿಗಿರುವದು. ಆಚಾರ್ಯರನ್ನು ದೇವರಂತೆ ಭಾವಿಸಬೇಕೆಂದು ಹೇಳಿದಾಗ ವೇದರಹಸ್ಯವನ್ನು ಹೇಳುವವರನ್ನೇ ಅಲ್ಲದೆ ವೇದಾರ್ಥವನ್ನು ಗ್ರಹಿಸುವುದಕ್ಕೆ ತಕ್ಕದ್ದಾಗುವ ಹಾಗೆ ಮನಸ್ಸಿನಮೇಲೆ ಸಂಸ್ಕಾರಗಳನ್ನುಂಟುಮಾಡತಕ್ಕವರನ್ನೆಲ್ಲಾ ಆಚಾರ್ಯ ಎಂಬ ಮಾತಿನ ಅರ್ಥಕ್ಕೆ ಸೇರಿಸಿಕೊಳ್ಳಬಹುದು

(ಸಶೇಷ)

|| ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀ ಮುಕ್ತಿಮಂದಿರ ಗುರುಕುಲದಲ್ಲಿ ಶ್ರೀ ಗಂಗಾಧರಶಿವಾಚಾರ್ಯರ ತಪೋನುಷ್ಠಾನದ ಪರಿಸಮಾಪ್ತಿ, ಶಾಂತಿ ಮಂಗಲಮಹೋತ್ಸವ

ಮೇಲ್ಕಂಡ ಶ್ರೀಗಳವರು ಶ್ರಾವಣಮಾಸ ಮೊದಲುಗೊಂಡು ಚಾತುರ್ಮಾಸ ವ್ರತಾನುಷ್ಠಾನವನ್ನು ಕೈಕೊಂಡದ್ದು ಸರಿಯಷ್ಟೆ! ಇದು ಶ್ರಾವಣಮಾಸದಿಂದ ಅಶ್ವಯುಜ ಮಾಸದ ಮಧ್ಯದವರೆಗೆ ವೈಭವದಿಂದ ನೆರವೇರಿತು. ಶ್ರೀ ಮದ್ರಂಭಾಪುರೀ ಜಗದ್ಗುರುಗಳವರ ತಿರ್ಯಗಾಂದೋಲಿಕಾ ಮಹೋತ್ಸವವು ಸೊಲ್ಲಾಪುರದ ಗುರುಭಕ್ತರ ಪ್ರಾರ್ಥನೆಯಂತೆ ನಡೆಯಲು ನಿಶ್ಚಯವಾದುದರಿಂದ ಈ ಮಹಾಕಾರ್ಯಕ್ಕೋಸ್ಕರವಾಗಿ ಹೋಗಬೇಕಾಗಿ ಬಂದುದರಿಂದ ಗುರುಸೇವೆಯೇ ಶಿವನಸೇವೆಯೆಂದು ತಿಳಿದು ಅನುಷ್ಠಾನವನ್ನು ಅಷ್ಟಕ್ಕೆ ನಿಲ್ಲಿಸಿ ಸೊಲ್ಲಾಪುರಕ್ಕೆ ದಯಮಾಡಿಸಿದರು. ಅಲ್ಲಿಯ ಯಾವತ್ತು ಸೇವೆಯನ್ನು ಸಲ್ಲಿಸಿ ಮಹಾ ಜಗದ್ಗುರುಗಳವರಿಂದ ಆಶೀರ್ವಾದವನ್ನು ಪಡೆದುಕೊಂಡು ಬಂದು ಯಥಾರೀತಿ ಅನುಷ್ಠಾನವನ್ನು ಪ್ರಾರಂಭಿಸಿದರು. ಅನುಷ್ಠಾನದ ಪರಿಸಮಾಪ್ತಿಯ ಶಾಂತಿ ಮಂಗಲಮಹೋತ್ಸವವು ಮಾರ್ಗಶೀರ್ಷ ಬ|| ೧೨ (ತಾ-15 12 41) ನೇ ಸೋಮವಾರ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಮೊದಲೇ ಪ್ರಸಿದ್ಧ ಪತ್ರಿಕೆಗಳದ್ವಾರಾ ಪ್ರಕಟಿಸಿದ ಮಂಗಲಮಹೋತ್ಸವದ ಸುದ್ದಿಯು ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿತು. ಆದರೆ ಈ ಮಧ್ಯದಲ್ಲಿ ಈ ಮಂಗಲವಾರ್ತೆಯನ್ನುಕೇಳಿ ಸಹಿಸದ ಗುರುನಿಂದಾಗ್ರೇಸರರಾದ ಕೆಲವು ಕುತ್ಸಿತಜನರು ಶ್ರೀ ಸ್ವಾಮಿಗಳವರೇ ಶಿವಾಧೀನರಾದರೆಂಬ ಪೊಳ್ಳು ಸುದ್ದಿಯನ್ನು ಅಲ್ಲಲ್ಲಿ ಹರಡಿಬಿಟ್ಟಿದ್ದರು. ತಮ್ಮ ಸ್ವಭಾವಕ್ಕನುಸಾರವಾಗಿ ಬೊಗಳುವುದು ಗ್ರಾಮಸಿಂಹಗಳ ಕರ್ತವ್ಯವೇ ಆಗಿದೆ ಅಂದಮೇಲೆ ಅವುಗಳ ವಿಷಯವಾದರೂ ನಮಗೆ ಏತಕ್ಕೆ ಬೇಕು ? ಅಸ್ತು ! ಶ್ರೀಗಳವರು ಯಥಾರೀತಿ ಸೋಮವಾರ ಬ್ರಾಹ್ಮಮುಹೂರ್ತದಲ್ಲಿ ಅನುಷ್ಠಾನದಲ್ಲಿ ತೊಡಗಿದರು. ಆದಿನ ಶ್ರೀ ಗುರುಕುಲಾಶ್ರಮವು ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ, ಶ್ರೀ ಪಂಚಾಚಾರ್ಯರ ಪಂಚವರ್ಣ ಪತಾಕೆಗಳಿಂದಲೂ, ಅತ್ಯಂತ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದಿತಲ್ಲದೆ ಸಭೆಯ ಕಾರ್ಯಕ್ಕೋಸ್ಕರ ಅನೇಕ ವಿಧವಿಧ ಸೀನರಿಗಳಿಂದ ಭವ್ಯವಾದ ಒಂದು ಮಂಟಪವು ನಿರ್ಮಿಸಲ್ಪಟ್ಟಿದ್ದಿತು. ಆಬಾಲ ವೃದ್ಧ ವೀರಶೈವ ಸ್ತ್ರೀ ಪುರುಷರು ಪೂಜೆಗೋಸ್ಕರ ಮುಡಿಯಿಂದ ಕಿಕ್ಕಿರಿದು ನೆರೆದಿದ್ದರು. ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೂ, ಶ್ರೀ ಶಿವಲಿಂಗಮೂರ್ತಿಗೂ ವೇದೋಕ್ತವಾಗಿ ರುದ್ರಾಭಿಷೇಕವಾದನಂತರ ಶ್ರೀ ಲಿಂಗಮೂರ್ತಿಯ ಕರಕಮಲ ಪೂಜೆಯೂ, ಸಹಸ್ರ ಬಿಲ್ವಾರ್ಚನೆಯೂ, ಮಹಾಮಂಗಲಾರತಿಯೂ ನಡೆದವು. ಈ ಮಹಾಪೂಜೆಯಲ್ಲಿ ಒಂದುಕಡೆ ವೇದಘೋಷವೂ, ಮತ್ತೊಂದುಕಡೆ ಸುವಾಸಿನಿಯರ ಆಚಾರ್ಯರ ಸ್ತೋತ್ರಗಳೂ ಮಧ್ಯ ಮಧ್ಯದಲ್ಲಿ "ಶ್ರೀಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ" ಎಂಬ ಜಯಘೋಷಗಳೂ ಎಂಥ ನಾಸ್ತಿಕಶಿಖಾಮಣಿಯನ್ನಾದರೂ ಆಸ್ತಿಕಶಿಖಾಮಣಿಯನ್ನಾಗಿ ಮಾಡುವಂತಿದ್ದವು. ಅಷ್ಟೋತ್ತರ ಶತನಾಮಗಳಿಂದೊಡಗೂಡಿದ ಶ್ರೀ ಗುರು ಮಹಾ ಪಾದಪೂಜೆಯು ವಿಧ್ಯುಕ್ತವಾಗಿ ನಡೆದು ಸಕಲರಿಗೂ ತೀರ್ಥ ಪ್ರಸಾದವು ಕೊಡಲ್ಪಟ್ಟಿತು. ಶ್ರೀಗಳವರು ಪೂಜಾಕಾರ್ಯವನ್ನು ಪೂರೈಸಿಕೊಂಡು ಹೊರಗೆ ದಯಮಾಡಿಸಿದರು. ಅದೇ ದಿನವೇ ವಿವಾಹಕಾರ್ಯಕ್ಕೂ ಶುಭಮುಹೂರ್ತ ವಿದ್ದುದರಿಂದ ಹೆಂಬಾಪುರನಿವಾಸಿಗಳಾದ ಗದಿಗಯ್ಯ ಸಾಲಿಮಠ ಇವರ ವಿವಾಹ ಕಾರ್ಯವು ಶ್ರೀ ಮುಕ್ತಿಮಂದಿರ ಗುರುಕುಲದ ವತಿಯಿಂದಲೇ ಶ್ರೀ ಸ್ವಾಮಿಗಳವರ ನೇತೃತ್ವದಲ್ಲಿ ಧರ್ಮಾರ್ಥವಾಗಿ ನೆರವೇರಿಸಲ್ಪಟ್ಟಿತು. ಬಳಿಕ ಮಹಾಗಣಾರಾಧನೆಯು ನೆರವೇರಿತು. ಈ ಮಹೋತ್ಸವಕ್ಕಾಗಿ ಹುಬ್ಬಳ್ಳಿ, ಗದಗ, ಬಂಕಾಪುರ, ಶಿಗ್ಗಾವಿ, ಆಲೂರು ಮೊದಲಾದ ದೂರ ದೂರ ಪ್ರಾಂತಗಳಿಂದ ಆಗಮಿಸಿದ 8 10 ಸಾವಿರ ಜನಗಳಿಗೆ ಅನ್ನಸಂತರ್ಪಣೆಯು ನಡೆಯಿತಲ್ಲದೆ ಪರಮತೀಯರಿಗೂ ಸಹ ಊಟದ ವ್ಯವಸ್ಥೆಯನ್ನು ಮಾಡಲಾಗಿದ್ದಿತು. ಅನಂತರ ಪ್ರೋಗ್ರಾಮಿನಂತೆ ೫ ಘಂಟೆಗೆ ಸರಿಯಾಗಿ ಸಭೆಯು ಆರಂಭವಾಯಿತು. ಮೊದಲು ಶ್ರೀ ಶಂಕರಗಣೇಶ ಸಾಹುಕಾರ್ ಒಡ್ಡಿ ಇವರು ಸುಶ್ರಾವ್ಯವಾದ ಕೀರ್ತನವನ್ನು ಮಾಡಿದರು. ಆಮೇಲೆ ವೇದಪಾಠಶಾಲಾಧ್ಯಾಪಕರಾದ ವೇ|| ಪಿ ಎಂ ಗಂಗಾಧರಶರ್ಮ ಪರಶುರಾಮಪುರ ಇವರು "ಗುರುಮಹತ್ವ' ದ ಬಗ್ಗೆ ಉಪನ್ಯಾಸಮಾಡಿದರು. ಅನಂತರ ಶ್ರೀಯುತ ಯಲ್ಲಪ್ಪನವರು ಹಿರಲಾಪುರ ಇವರು "ಅನುಷ್ಠಾನ" ದ ಬಗ್ಗೆ ಭಾಷಣಮಾಡಿದರು. ಅನಂತರ ಶ್ರೀಗಳವರು ತಮ್ಮ ಅಮೃತವಾಣಿಯಿಂದ 'ಆರ್ಯಾವರ್ತಃ ಪುಣ್ಯಭೂಮಿರ್ಮಧ್ಯಂವಿಂಧ್ಯ ಹಿಮಾಲಯೋಃ" ಎಂದು ಆರಂಭಿಸಿ ಈ ಭರತಖಂಡವೆಲ್ಲವೂ ತಪೋಭೂಮಿಯಾಗಿದೆ. ಪ್ರಾಚೀನಕಾಲದಲ್ಲಿ ವಸಿಷ್ಠ ವಿಶ್ವಾಮಿತ್ರ ಮೊದಲಾದ ಮಹರ್ಷಿಗಳು ಲೋಕಕಲ್ಯಾಣಾರ್ಥವಾಗಿಯೇ ತಪಸ್ಸನ್ನಾಚರಿಸುತ್ತಿದ್ದರು. ಇದರ ಮೇಲೆ ಈ ತಪೋಭೂಮಿಯಲ್ಲಿರುವ ಪ್ರತಿಯೊಂದು ವಸ್ತುಗಳೂ ತಪಸ್ಸಿನ ಅಂಶಗಳೇ ಆಗಿವೆ. ಆದಕಾರಣವಾಗಿಯೇ ಗುರುಗಳು ತಪಸ್ಸನ್ನಾಚರಿಸಿ ಸಕಲರನ್ನೂ ಉದ್ಧಾರಮಾಡಬೇಕಾಗಿದೆ; ಎಂದು ಅನೇಕ ಶಾಸ್ತ್ರೋದಾಹರಣೆಗಳಿಂದ ಉಪದೇಶವನ್ನಿತ್ತು ಕೃತಾರ್ಥರನ್ನಾಗಿಮಾಡಿದರು. ಈ ಮಧ್ಯದಲ್ಲಿ ಗುರುಭಕ್ತಾಗ್ರೇಸರರಾದ ಪಶುಪತಿಹಾಳನಿವಾಸಿಗಳಾದ ಮ|| ರಾ|| ವಡಕಣ್ಣನವರ ಬಸಪ್ಪನವರು ಶ್ರೀಗಳವರು ಕೈಕೊಂಡ ಧರ್ಮಕಾರ್ಯಕ್ಕೆ ಶ್ರೀ ಮುಕ್ತಿಮಂದಿರದ ಕಟ್ಟಡಕ್ಕೋಸ್ಕರ ಭಕ್ತಿಪುರಸ್ಸರವಾಗಿ 500 ರೂಪಾಯಿಗಳನ್ನು ಸಭೆಯಲ್ಲಿ ವಾಗ್ದಾನಮಾಡಿದರು. [illegible]ವಾಗಿ ಮಾಡಿದ ಇದಲ್ಲವೇ ನಿಜವಾದ [illegible] ಭಕ್ತಿ ? ಈ ಎಲ್ಲಾ ಕಾರ್ಯಗಳನ್ನೂ ಹಿರಲಾಪುರ, ಲಕ್ಷ್ಮೇಶ್ವರ, ಸುಲ್ತಾನಪುರ, ಕಳಸ ಮೊದಲಾದ ಗ್ರಾಮಗಳವರು ಅತ್ಯಂತ ಶ್ರಮವಹಿಸಿ ನೆರವೇರಿಸಿದರು. ಈ ಮುಕ್ತಿಮಂದಿರ ಗುರುಕುಲಾಶ್ರಮವು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದರೂ ಶ್ರೀಗಳವರು ಇಲ್ಲಿಗೆ ದಯಮಾಡಿಸಿ ಅನುಷ್ಠಾನವನ್ನು ಕೈಕೊಂಡ 4-5 ತಿಂಗಳುಗಳಲ್ಲಿಯೇ ಇಂಥ ಮಂಗಲಮಹೋತ್ಸವ ಕಾರ್ಯಗಳು ನಡೆದು ಎಲ್ಲಾ ಕಡೆಯಲ್ಲಿಯೂ ಸಕಲ ಭಕ್ತರ ಹೃದಯವನ್ನೂ ಆಕರ್ಷಿಸುವಂಥದಾಗಿರುತ್ತದೆ. ಇಷ್ಟು ಶೀಘ್ರವಾಗಿಯೇ ಮುಕ್ತಿಮಂದಿರವು ಬೆಳಗಬೇಕಾದರೆ ಶ್ರೀಗಳವರ ಅನುಷ್ಠಾನ ಪ್ರಭಾವವೂ ಭಕ್ತರ ಭಕ್ತಿಯೂ ಮುಖ್ಯಕಾರಣವಾಗಿವೆ. ಇಲ್ಲಿ ಇನ್ನೂ ಇಂಥ ಎಷ್ಟೋ ಮಹತ್ಕಾರ್ಯಗಳು ನಡೆಯಬೇಕಾಗಿವೆ. ಅವುಗಳನ್ನು ನಡೆಸುವಹಾಗೆ ಸಕಲರಿಗೂ ಸದ್ಬುದ್ಧಿಯನ್ನು ಕೊಡಲೆಂದು ಜಗದಾಚಾರ್ಯರನ್ನು ಪ್ರಾರ್ಥಿಸುತ್ತೇನೆ.

ಕೆಂಚಪ್ಪ ರಾಮಣ್ಣಾ ಬಂಡಿವಾಡ

ಒಂದಾಗುವಿಕೆ

ಲೇ—ಚನ್ನವೀರಶಿವಾಚಾರ್ಯರು ಬಿಟ್ಟಾಶಿ.

ಒಂದಾಗುವುದೆಂದರೆ ಇಂದಿನ ಭೇದವನ್ನು ಮರೆತು ಒಂದುಗೂಡುವುದು ಅಥವಾ ಏಕಾಭಿಪ್ರಾಯವನ್ನು ಅಂಗೀಕರಿಸುವುದಕ್ಕಾಗಿ ಎಲ್ಲರೂ ಒಮ್ಮನಸ್ಸು ಮಾಡುವುದು ಎಂದರ್ಥ. ಮಾನವರ ಕುಲಜಾತಿಗಳ ಅಳಿವಲ್ಲ. ನನ್ನ ಕುಲನಿನ್ನ ಕುಲ ನನ್ನ ಮತ ನಿನ್ನ ಮತವೆಂದಮಾತ್ರಕ್ಕೆ ಜಾತಿ ಮತಗಳೇ ಅನೈಕ್ಯದ ಮೂಲವೆಂದು ಹೇಳಲು ಬರುವಂತಿಲ್ಲ. ಒಂದು ಪಕ್ಷ ಹಾಗೆಯೇ ಹೇಳುವುದಾದರೆ ಅಂತಹ ಭೇದಗಳ ಉದಾಹರಣೆಗಳು ಜಗತ್ತಿನಲ್ಲಿ ಹೇರಳವಾಗಿ ಸಿಕ್ಕುತ್ತವೆ. ಅವನ್ನೆಲ್ಲ ಸುಧಾರಕರು ಅಳಿದುಬಿಡಬೇಕಾಗಿ ಬರುವುದು. ನಾವು ಆರ್ಯಸಮಾಜದವರು, ನಾವು ಬ್ರಹ್ಮಸಮಾಜದವರು, ನಾವು ಕರುಣಾರ ಗುಂಪಿನವರು, ನಾವು ಗೆಳೆಯರ ಗುಂಪಿನವರು, ಮುಸಲ್ಮಾನರು ಕ್ರಿಶ್ಚಿಯನ್ನರು ಮೊದಲಾದವರಲ್ಲಿ ಅನೇಕ ಭಿನ್ನಾಭಿಪ್ರಾಯಗಳುಂಟಾಗಿ ಅಕಾಂಡ ತಾಂಡವವಾಡುತ್ತಿರುವದನ್ನು ಸುಧಾರಕರೆನ್ನುವರು ಯೋಚಿಸದೆ ಕೇವಲ ಕುಲಜಾತಿಗಳ ತಿಕ್ಕಾಟವಷ್ಟೇ ಇವರ ಕಣ್ಣಿನಲ್ಲಿ ಒತ್ತುವಂತೆ ತೋರುತ್ತದೆ. ಇದು ಆಶ್ಚರ್ಯವೇ ಸರಿ! ಮಾನವನ ಜೀವನ ಯಾತ್ರೆಯಲ್ಲಿ ಸಂಘ ಸಮಾಜ ಸಂಸ್ಥೆಗಳ ಆವಶ್ಯಕತೆಯಿದ್ದಂತೆ ಜೀವನದಲ್ಲಿಯೂ ಮತ್ತು ಜೀವನೋತ್ತರದಲ್ಲಿಯೂ ತೋರಿಬರುವ ಫಲಾಪೇಕ್ಷೆಯು ಕೈಗೂಡುವಿಕೆಗಾಗಿ ವರ್ಣಾಶ್ರಮಾದಿಗಳು ಅನಿವಾರ್ಯವಾಗಿ ಬಂದವೆಂದು ಆರ್ಯಮಹರ್ಷಿಗಳ ಸತ್ಯ ಸಂಕಲ್ಪವೆ ಗುಟ್ಟಾಗಿದೆ. ಹಳೆಯದಾಗಿಯೂ ಹೊಸದಾಗಿಯೂ ತೋರುವ ಒಡಕಿನ ತೊಡಕುಳ್ಳ ಕುಲ ಜಾತಿ ಸಂಘ ಸಂಸ್ಥೆಗಳನ್ನೆಲ್ಲ ಕಿತ್ತೊಗೆದು ಇಡೀ ಮಾನವ ಪ್ರಪಂಚವೆಲ್ಲವೂ ಏಕಪ್ರವಾಹವಾಗಿ ಹರಿಯಲೆಂದಿಟ್ಟುಕೊಳ್ಳುವಾ!

ಇದರಿಂದ ಎಲ್ಲೆಡೆಯಲ್ಲಿಯೂ ಸಮತಾವಾದದ ವಿಕಾಸವಾಗಿ ಐಹಿಕ ಸುಖ ಶಾಂತಿಗಳು ದೊರೆಯುವುದೇನೋ ನಿಜ. ಆದರೆ ಪ್ರಪಂಚದ ಗುಟ್ಟು ಏಕರೂಪವಾಗಬೇಕಾದರೆ ಅಸಾಧ್ಯ ಸಾಹಸವು ಬೇಕಾಗುವದು. ಭಿನ್ನ ಭಿನ್ನವಾದ ಬುದ್ಧಿಯನ್ನು ಪಡೆದಿರುವ ಮಾನವ ಕುಲದ ತಲೆಯಲ್ಲಿ ಒಂದೇವಿಧವಾದ ವಿಚಾರ ಕ್ರಾಂತಿಯು ಚಿರಸ್ಥಾಯಿಯಾಗಬೇಕಾದರೆ ಮಹಾ ಸಂಯಮದ ಶಕ್ತಿಯು ಬೇಕಾಗುವದು. ಇದು ಈ ಕಾಲದಲ್ಲಿ ಎಷ್ಟರ ಮಟ್ಟಿಗೆ ಸಾಧ್ಯವಾದೀತೆಂಬದನ್ನು ಪರಾಮರ್ಶಿಸುವಾ! ಆದರೆ ಇದೊಂದು ಸ್ವಾತಂತ್ರ್ಯದ ಕಾಲ! ಪ್ರತಿಯೊಬ್ಬನೂ ತಾನು ಗುಣವಿಲ್ಲದೆ ಹೆಣವಾಗಿದ್ದರೂ ಎಂತಹ ನಡತೆಯನ್ನಾದರೂ ಮನಬಂದಂತೆ ಆಚರಿಸುವುದಕ್ಕಾಗಿ ಹಿರಿತನವನ್ನು ಬಯಸುವನು. ಇದಲ್ಲದೆ ಪ್ರಚಾರ ಕಾರ್ಯವನ್ನೂ ಕೈಗೊಂಡು ಇಡೀ ನಾಡನ್ನೇ ತನ್ನ ಹಂಬಲಕ್ಕೆ ನಿಲ್ಲುವಂತೆ ಯತ್ನಿಸಲು ಬಯಸುವನು. ಯೋಗ್ಯಾಯೋಗ್ಯವಿಚಾರವಿಲ್ಲದೆ ಮುಂದೋಡುತ್ತಿರುವ ಇಂತಹ ವ್ಯಕ್ತಿಗಳಲ್ಲಿ ಚಿತ್ತೈಕಾಗ್ರತೆಯು ನೆಲೆಯಾಗಿ ನಿಲ್ಲುವುದು ಅಸಾಧ್ಯವಾದ ಮಾತಾಗಿದೆ. ಇವರು ಜಾತಿವಾದಿಗಳನ್ನು ಪಕ್ಷಪಾತಿಗಳೆಂದು ಕರೆಯುವರು. ಇದು ಮೂರ್ಖತನವಲ್ಲದೆ ಬೇರೆಯಲ್ಲ. ಮಾನವನ ಮನೋನಿಗ್ರಹವೇ ಆರ್ಯರ ಹೆಗ್ಗುರುತಾಗಿದ್ದಿತು. ಪವಿತ್ರವಾದ ಎಲ್ಲಾ ನದಿಗಳ ನೀರು ಸಮುದ್ರದಲ್ಲಿ ಏಕರೂಪವಾಗಿ ಕೂಡುವಂತೆ ನಿಗ್ರಹದಿಂದ ಪವಿತ್ರವಾದ ಎಲ್ಲರ ಮನಸ್ಸುಗಳೂ ಸದಭಿಪ್ರಾಯದಲ್ಲಿ ಹರಿದು ಕೂಡುವುದೇ ಆರ್ಯಸನಾತನಿಗಳ ಒಗ್ಗಟ್ಟು. ಇದನ್ನು ಬಿಟ್ಟು ಕೇವಲ ಊಟಕೂಟಗಳ ಒಗ್ಗಟ್ಟಿನಿಂದ ಜಗತ್ತಿಗೆ ಯಾವ

[೬ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ

೧೯೪೨ನೆಯ ಜನವರಿ ತಾ॥ ೧೨ನೇ ಸೋಮವಾರ

ಈಗಿನ ಘೋರಯುದ್ಧವು ಎಂದು ಶಾಂತವಾದೀತು?

ಈಗಿನ ಘೋರಯುದ್ಧವು ಪ್ರಾ[illegible] ವರ್ಷಗಳಾಗುತ್ತ ಬಂದವು. ಇಷ್ಟರಲ್ಲಿಯೇ ಪ್ರಪಂಚದಲ್ಲಿಯೂ ಉಲ್ಲೋಲಕಲ್ಲೋಲವಾಗಿ[illegible]ದಲ್ಲಿ ನಡೆದ ಯುದ್ಧವು [illegible] ಜನರಿಗೆ ಈ ವಿಪತ್ತಿನ [illegible] ಇಲ್ಲ. ಈಗಿನ ಯುದ್ಧದಲ್ಲಿ [illegible] ದುಃಸ್ಥಿತಿಯನ್ನು ವರ್ಣಿಸುವಂತಿಲ್ಲ. ಹಿಟ್ಲರನ ಕ್ರೂರ ದಬ್ಬಾಳಿಕೆಯಿಂದ ಎಲ್ಲ ರಾಷ್ಟ್ರಗಳೂ ಸ್ವತಂತ್ರ್ಯವನ್ನು ಕಳೆದುಕೊಂಡುಬಿಟ್ಟವು. ಇನ್ನು ಸ್ಪೇನ್, ಐರ್ಲೆಂಡ್, ಸ್ವಿಟ್ಜರ್ಲೆಂಡ್, ಸ್ವೀಡನ್, [illegible]ದೇಶಗಳು ಮಾತ್ರ ತಟಸ್ಥವೃತ್ತಿಯನ್ನವಲಂಬಿಸಿವೆ. ಈ ತಟಸ್ಥವೃತ್ತಿಯು ಎಷ್ಟುದಿನಗಳವರೆಗೆ ನಡೆಯುವುದೋ ತಿಳಿಯದಾಗಿದೆ. ಇವುಗಳು [illegible] ಇಂದಿಲ್ಲ ನಾಳೆ ಯುದ್ಧಜ್ವಾಲೆಯಲ್ಲಿ ಸೇರುವುದರಲ್ಲಿ ಸಂಶಯವಿಲ್ಲ.

ಹಿಟ್ಲರನು ಈ ಕ್ರೂರಯುದ್ಧವನ್ನಾರಂಭಿಸಿ ಎರಡು ವರ್ಷಗಳಾಗಿದ್ದರೂ ಈವರೆಗೂ ಸರ್ವತ್ರ ಜಯವನ್ನೇ ಸಂಪಾದಿಸುತ್ತ ಬಂದನು. ರಷ್ಯಾದೇಶವು ಸಮುದ್ರದಂತೆ ಹಿಟ್ಲರನ [illegible]ಕ್ಕೆ ತುತ್ತಾಗುವದೆಂದು ಎಲ್ಲರೂ ಭಾವಿಸಿದ್ದರು. ಆದರೆ ದೈವಲೀಲೆಯು ಬೇರೆ ಇದ್ದಂತಿರುವದು. ಏಕೆಂದರೆ—ಹಿಟ್ಲರನಿಗೆ ಇತ್ತೀಚೆಗೆ ರಷ್ಯಾದೇಶದಲ್ಲಿ ಭಯಂಕರ ಅಪಜಯವು ಉಂಟಾಗುತ್ತಿದೆ. ರಷ್ಯಾಸೈನಿಕರ ಉಗ್ರವಾದ ಏಟುಗಳನ್ನು ತಡೆಯಲಾರದೆ ಜರ್ಮನ್ ಸೈನಿಕರು ತಾವು ಹಿಡಿದುಕೊಂಡ ಸ್ಥಳಗಳನ್ನೆಲ್ಲ ಬಿಟ್ಟು ದಿಕ್ಕಾಪಾಲಾಗಿ ಓಡಹತ್ತಿದ್ದಾರೆ. ರಷ್ಯಾಯುದ್ಧದಲ್ಲಿ ಜರ್ಮನಿಯು ೪೦ ೫೦ ಲಕ್ಷಜನ ಆಯ್ದ ಸೈನಿಕರನ್ನು ಕಳೆದುಕೊಂಡಿತು. ಇನ್ನೂ ಕಳೆದುಕೊಳ್ಳುವುದರಲ್ಲಿಯೇ ಇರುವುದು. ತನಗುಂಟಾಗುತ್ತಿರುವ ಅಪಜಯಕ್ಕೆ ಜರ್ಮನ್ ಸೇನಾನಾಯಕರೇ ಮೂಲಕಾರಣರೆಂದು ಭಾವಿಸಿ ಹಿಟ್ಲರನು ಮುಖ್ಯಮುಖ್ಯ ಸೇನಾಧಿಪತಿಗಳನ್ನೆಲ್ಲ ವರ್ಗ [illegible] ತಾನೇ [illegible]ವನ್ನುವಹಿಸಿ ರಷ್ಯಾರಣರಂಗದಲ್ಲಿ [illegible] ನಡೆಸುತ್ತಿರುವನು. ಆದರೂ ಪ್ರತಿದಿವಸ ಹಿಟ್ಲರನಿಗೆ ಅಲ್ಲಿ ಅಪಜಯವೇ ಆಗುತ್ತ ನಡೆದಿರುವದು. ಇದು ರಷ್ಯಾದೇಶದಲ್ಲಿ ನಡೆಯುತ್ತಿರುವ ಅಪಜಯದ ವಿಚಾರ.

ಇನ್ನು ಆಫ್ರಿಕದ [illegible] ಕಠಿಣವಾದ ಸೋಲಾಗುತ್ತಿದೆ. [illegible] ಜರ್ಮನ್ ಸೈನಿಕರು [illegible] ಸಿರಿನೈಕಪ್ರಾಂತ್ಯದಲ್ಲಿ ಬ್ರಿಟಿಷ್ [illegible] ಹೋಗುತ್ತಿದ್ದಾರೆ. [illegible] ಸೈನಿಕರನ್ನು ಬ್ರಿಟಿಷ್ ಸೈನಿಕರು [illegible]ತ್ತಿದ್ದಾರೆ. ಈರೀತಿ ಜರ್ಮನಿಗೆ ರಷ್ಯಾ ಮತ್ತು ಆಫ್ರಿಕಾ ರಣರಂಗಗಳಲ್ಲಿ ಅಸಾಧ್ಯವಾದ ಅಪಜಯವು [illegible]ದಿರುವುದನ್ನು ನೋಡಿದರೆ ಜರ್ಮನರ ಮನೋಭೀಷ್ಟವು ಇನ್ನು ಮುಂದೆ ಸಿದ್ಧಿಸುವುದಿಲ್ಲವೆಂದು ಸ್ಪಷ್ಟವಾಗಿ ತೋರಿಬರುತ್ತದೆ.

ಅತ್ತ ಜರ್ಮನಿಯು ಸೋಲುತ್ತ ನಡೆದಿದ್ದರೆ ಇತ್ತ ಜಪಾನರು ಅಸಾಧ್ಯವಾದ ವೀರಾವೇಶದಿಂದ ಬ್ರಿಟಿಷರ ಮತ್ತು ಅಮೇರಿಕನ್ನರ ದ್ವೀಪಗಳನ್ನು ಆಕ್ರಮಿಸಿಕೊಳ್ಳಹತ್ತಿದ್ದಾರೆ. ಫಿಲಿಫೈನ್ ಮತ್ತು ಮಲಯಾದ್ವೀಪಗಳಲ್ಲಿ ಕೆಲವು ಭಾಗಗಳನ್ನು ಜಪಾನರು ಆಕ್ರಮಿಸಿ ಅಲ್ಲಿಯ ಜನರಿಗೆ ವಿಶೇಷ ತೊಂದರೆಗಳನ್ನು ಕೊಡಹತ್ತಿದ್ದಾರೆ. ಅಲ್ಲದೆ ಇಂಡಿಯಾದೇಶದಮೇಲೆ ಬೀಳಬೇಕೆಂಬ ದುರಾಶೆಯಿಂದ ಕೂಡಿ ಬರ್ಮಾದಮೇಲೆ ಬಾಂಬುಗಳನ್ನು ವಿಚಾರವಿಲ್ಲದೆ ಸುರಿಸಹತ್ತಿದ್ದಾರೆ. ಈ ವಿಧವಾದ ಕ್ರೂರಕೃತ್ಯವು ಎಷ್ಟು ದಿವಸ ನಡೆಯುವುದೋ ತಿಳಿಯದಾಗಿದೆ. ಆದರೂ ಬ್ರಿಟಿಷರು, ಅಮೇರಿಕನ್ನರು, ಚೀಣರು ಈ ಮೂವರು ಒಂದಾಗಿರುವದರಿಂದ ಇನ್ನು ಸ್ವಲ್ಪ ದಿವಸಗಳಲ್ಲಿಯೇ ಜಪಾನು ಹಣ್ಣಾಗುವುದರಲ್ಲಿ ಸಂಶಯವಿಲ್ಲ. ಬ್ರಿಟಿಷ್ ಮಹಾಪ್ರಧಾನರಾದ ಶ್ರೀ ಚರ್ಚಿಲ್‌ರವರು—

> ‘ ಸದ್ಯ, ಜಪಾನರು ನಮ್ಮ ದ್ವೀಪಗಳನ್ನು ಆಕ್ರಮಿಸಿದ್ದರೂ ಅದರಿಂದ ನಮಗೇನೂ ಭಯವಿಲ್ಲ. ಆ ದ್ವೀಪಗಳನ್ನು ಹಿಂದಿನಿಂದ ನಾವು ಸುಲಭವಾಗಿ ನಮ್ಮ ಸ್ವಾಧೀನಪಡಿಸಿಕೊಳ್ಳುತ್ತೇವೆ. ಮುಖ್ಯವಾಗಿ ಪ್ರಬಲ ವೈರಿಗಳೆಂದರೆ ಜರ್ಮನರು. ಅವರ ಗರ್ವಭಂಗವನ್ನು ಮಾಡಲಿಕ್ಕೆ ನಾವು ಮೊದಲು ನಮ್ಮ ಶಕ್ತಿಯನ್ನೆಲ್ಲ ಉಪಯೋಗಿಸಬೇಕಾಗಿದೆ ”

ಎಂದು ಹೇಳಿದ್ದಾರೆ.

ಮಹಾಪ್ರಧಾನರ ಈ ಹೇಳಿಕೆಯು ನಿಶ್ಚಯವಾದುದು. ಜರ್ಮನರ ಗರ್ವಭಂಗವಾದರೆ ಜಪಾನರು ಲೆಕ್ಕಕ್ಕೇ ಇಲ್ಲವೆಂದು ಹೇಳಬಹುದಾಗಿದೆ. ಒಟ್ಟಿಗೆ ಈ ಯುದ್ಧವು ಪ್ರಪಂಚವನ್ನೇ ವ್ಯಾಪಿಸಿ ಸರ್ವಜನಾಂಗವನ್ನು ಹಾಳುಮಾಡುತ್ತ ನಡೆದಿದೆ. ಇಲ್ಲಿಯವರೆಗೆ ಶಾಂತರಾಗಿದ್ದ ಇಂಡಿಯಾದೇಶದವರೂ ಸಹ ಯುದ್ಧವು ತಮ್ಮನ್ನು ಸಮೀಪಿಸಿತೆಂದು ವ್ಯಸನಾಕ್ರಾಂತರಾಗಿರುವರು. ಇವರ ವ್ಯಸನವನ್ನು ದೇವರೇ ದೂರಮಾಡಬೇಕಾಗಿದೆ. ಈಗಿನ ಪರಿಸ್ಥಿತಿಯನ್ನು ವಿಚಾರಮಾಡಿ ನೋಡಿದರೆ ಯುದ್ಧವು ಈ ವರ್ಷವೇ ಸಮಾಪ್ತಿಗೊಳ್ಳುವುದಿಲ್ಲವೆಂದು ತೋರುತ್ತದೆ. ಅಮೆರಿಕಾ ರಾಷ್ಟ್ರಾಧ್ಯಕ್ಷರಾದ ಶ್ರೀ ರೂಜ್‌ವೆಲ್ಟ್‌ರವರು ನೆನ್ನೆ ಮೊನ್ನೆ ಕೊಟ್ಟ ಒಂದು ಹೇಳಿಕೆಯಲ್ಲಿ—

> ‘ ಅನೇಕ ಜನರು ಯುದ್ಧವು ಎಂದುಮುಗಿಯುವುದೆಂದು ನನ್ನನ್ನು ಕೇಳುತ್ತಾರೆ. ಅಮೆರಿಕೆಯು ಈ ಯುದ್ಧವು ಎಂದು ಮುಗಿಯಬೇಕೆಂದು ಮನಸ್ಸುಮಾಡುವುದೋ ಅಂದು ಮುಗಿಯುವುದು. ಜರ್ಮನಿ ಇಟಲಿ ಜಪಾನ್ ದೇಶಗಳು ‘ ಮಿಲಿಟರಿಜಂ ’ ಎಂದು ಹೇಳಹೆಸರಿಲ್ಲದಂತೆ ನಾಶವಾಗುವುದೋ ಅಂದು ಮುಗಿಯುವುದು. ಈ ಯುದ್ಧಕ್ಕಾಗಿ ಅಮೆರಿಕೆಯಲ್ಲಿ ೧೯೪೨ನೆಯ ಇಸ್ವಿಯಲ್ಲಿ ೬೦೦೦೦ ವಿಮಾನಗಳನ್ನೂ, ೪೫೦೦೦ ಟ್ಯಾಂಕುಗಳನ್ನೂ, ೨೦೦೦೦ ವಿಮಾನಧ್ವಂಸಕ ಫಿರಂಗಿಗಳನ್ನೂ ತಯಾರಿಸಲಾಗುವುದು. ೧೯೪೩ನೆಯ ಇಸ್ವಿಯಲ್ಲಿ ೧೨೫೦೦೦ ವಿಮಾನಗಳನ್ನೂ, ೭೫೦೦೦ ಟ್ಯಾಂಕುಗಳನ್ನೂ, ೩೫೦೦೦ ವಿಮಾನಧ್ವಂಸಕ ಫಿರಂಗಿಗಳನ್ನೂ ತಯಾರಿಸಲಾಗುವುದು

ಎಂದು ಹೇಳಿದ್ದಾರೆ.

ಇವರ ಹೇಳಿಕೆಯನ್ನು ಪರಿಶೀಲಿಸಿದರೆ ಈ ಯುದ್ಧವು ಇನ್ನೂ ೨ ೩ ವರ್ಷಗಳವರೆಗೆ ಒಂದೇ ಸಮನೆ ನಡೆಯುವುದೆಂದು ತೋರುತ್ತದೆ. ಈರೀತಿ ನಡೆದರೆ ಪ್ರಪಂಚದಲ್ಲಿ ಪ್ರಜೆಗಳು ಯಾವರೀತಿ ಬದುಕಬೇಕೆಂಬುದೇ ಗೊತ್ತಾಗುವುದಿಲ್ಲ. ಒಟ್ಟಿಗೆ ಇದೆಲ್ಲವೂ ಈಶ್ವರನ ವ್ಯಾಕೋಪವೆಂದೇ ಹೇಳಬೇಕಾಗಿದೆ. ದೇವರು ಈ ವಿಧವಾದ ವ್ಯಾಕೋಪದಿಂದ ಭೂಭಾರವನ್ನು ಕಡಿಮೆ ಮಾಡಬೇಕೆಂದು ಸಂಕಲ್ಪಿಸಿರುವಂತೆ ತೋರುತ್ತದೆ. ದೃಢಸಂಕಲ್ಪವನ್ನು ಮೀರುವುದು ಯಾರಿಂದಲೂ ಸಾಧ್ಯವಿಲ್ಲ. ಈ ಘೋರ ವಿಪತ್ತಿನಿಂದ ಜನತೆಯನ್ನು ಕಾಪಾಡು ಎಂದು ಆ ಜಗನ್ನಾಥನನ್ನು ಪ್ರಾರ್ಥಿಸುವುದೊಂದೇ ಸರ್ವರ ಪ್ರಥಮ ಕರ್ತವ್ಯವಾಗಿದೆ.

ಯುದ್ಧವಾರ್ತೆ.

ಆಫ್ರಿಕದಲ್ಲಿ ಜರ್ಮನರ ಸೆರೆ

ಬಾರ್ಡಿಯಾವನ್ನು ಬ್ರಿಟಿಷರು ಹಿಡಿದಾಗ 7000 ಶತ್ರುಸೈನಿಕರು ಸೆರೆಹಿಡಿಯಲ್ಪಟ್ಟಿದ್ದಾರೆ. ಅವರಲ್ಲಿ 1000 ಜನ ಜರ್ಮನರಿರುವರೆಂದು ಹೇಳಲಾಗಿದೆ.

ಮಿಲಿಟರಿ ಸ್ಥಾನಗಳಿಗೆ ಏಟು

ಬುಧವಾರ ದಿವಸ ಬ್ರಿಟಿಷ್ ವಿಮಾನಗಳು ಥೈಲೆಂಡ್ ರಾಜಧಾನಿಯಾದ ಬಾಂಕಾಂಕ್ ನಗರದ ಮೇಲೆ ಮುತ್ತಿಗೆ ನಡೆಸಿ, ಮಿಲಿಟರಿ ಸ್ಥಾನಗಳ ಮೇಲೆ ಬಾಂಬುಗಳನ್ನು ಸುರಿಸಿದವು. ಇದರ ಫಲವಾಗಿ ಅನೇಕ ಕಡೆ ಪ್ರಳಯಾಕಾರದ ರೀತಿಯಲ್ಲಿ ಬೆಂಕಿ ಹತ್ತಿಕೊಂಡಿತು. ಅಗ್ನಿಜ್ವಾಲೆಯು ಬಹುದೂರ ಕಾಣಬರುತ್ತಿತ್ತು. ಬ್ರಿಟಿಷ್ ವಿಮಾನಗಳೆಲ್ಲವೂ ಸುರಕ್ಷಿತವಾಗಿ ಹಿಂತಿರುಗಿದವು.

ಹುನಾನ್ ಪ್ರಾಂತ್ಯದಲ್ಲಿ ಜಪಾನರು ಪೂರ್ಣವಾಗಿ ಸೋತರು

ಹುನಾನ್ ಪ್ರಾಂತ್ಯದಲ್ಲಿ ಜಪಾನರು ಸಂಪೂರ್ಣವಾಗಿ ಸೋತರೆಂಬುದಾಗಿ ಚಾಂಗ್‌ಷಾ ಕ್ಷೇತ್ರದಲ್ಲಿರುವ ಚೀಣಾ ದಂಡನಾಯಕರು ಚಂಗ್‌ಕಿಂಗಿಗೆ ತಿಳಿಸಿದ್ದಾರೆ.

ಚೀಣಾದಲ್ಲಿ ಜಪಾನರ ಸೋಲು

ಚೀಣಾದಲ್ಲಿ ಚಾಂಗ್‌ಷಾ ಆಕ್ರಮಣಕ್ಕಾಗಿ ನಡೆದ ಜಪಾನರ ಪ್ರಯತ್ನವು ನಿಷ್ಫಲವಾಯಿತು. ಅಲ್ಲಿ ನಡೆದ ಭಯಂಕರ ಯುದ್ಧದಲ್ಲಿ ಸುಮಾರು 50000 ಜಪಾನರು ಸತ್ತಿದ್ದಾರೆ ಮತ್ತು ಗಾಯಗೊಂಡಿದ್ದಾರೆ. ಜಪಾನರ ನಾಲ್ಕು ಡಿವಿಜನ್‌ಗಳು ಚೀಣರಿಂದ ಸುತ್ತುವರಿಯಲ್ಪಟ್ಟು ಸಿಕ್ಕಿಕೊಂಡಿವೆ. ಉಳಿದ ಸೇನೆಗಳು ದಿಕ್ಕೆಟ್ಟು ಓಡುತ್ತಿವೆ. ವಿಶೇಷವಾಗಿ ಮಳೆ ಸುರಿಯುತ್ತಿದ್ದರೂ ಕೂಡ ಚೀಣಾ ಸೈನಿಕರು ಜಪಾನರ ಮೇಲೆ ಬಿದ್ದು ಧ್ವಂಸ ಮಾಡುತ್ತಿದ್ದಾರೆ.

ಜಪಾನರಿಗೆ ಚೀಣರ ಉಗ್ರಪ್ರಹಾರ

ಚಾಂಗ್‌ಷಾ ನಗರದ ಬಳಿಯಿಂದ ಜಪಾನರನ್ನೆಲ್ಲ ಈಗ ಓಡಿಸಲಾಗಿದೆ. ಜಪಾನಿನ ಮೂಲಸೇನೆಗೆ ಸೇರಿದ ೪೦೦೦೦ ಮಂದಿ ಸೈನಿಕರು ನಗರದ ಉತ್ತರದಲ್ಲಿರುವ ಲೋಟೋ ನದಿಯನ್ನು ದಾಟಿ ಓಡಿಹೋದರು. ಅವರು ಈ ಕಾರ್ಯದಲ್ಲಿ ತೊಡಗಿದ್ದಾಗ ಚೀಣರು ಮೇಲೆ ಬಿದ್ದು ಅಪಾರಹಾನಿಯನ್ನುಂಟುಮಾಡಿದರು. ಜಪಾನರು ಲಾಟೋನದಿಯನ್ನು ದಾಟುವಾಗ ೬೦೦೦ ಯೋಧರನ್ನು ಕಳೆದುಕೊಂಡರೆಂಬುದಾಗಿ ಪ್ರಕಟನೆ ಹೊರಬಿದ್ದಿದೆ. ಲಾಟೋವಾ ಮತ್ತು ಮಿಲೋ ನದಿಗಳ ನಡುವೆ ಉಗ್ರಕದನವು ನಡೆಯುತ್ತಿದೆಯೆಂಬುದಾಗಿ ಆ ಪ್ರಕಟನೆಯು ತಿಳಿಸುತ್ತದೆ.

ಬ್ರಿಟಿಷ್ ಸೈನಿಕರು ಜಪಾನರ ಮೇಲೆ ತಿರುಗಿಬಿದ್ದಿದ್ದಾರೆ

ಕೌಲಾ ಸಲಂಗರ್ ಕ್ಷೇತ್ರದಲ್ಲಿ ಬ್ರಿಟಿಷರು ಶತ್ರುಗಳ ಮೇಲೆ ತಿರುಗಿ ಬಿದ್ದುದು ಪೂರ್ಣ ಫಲಪ್ರದವಾಗಿದೆ. ಕೌಲಾಸಲಂಗರನ್ನು ಹಿಡಿಯಲು ಮತ್ತೆ ಶತ್ರುಗಳು ಪ್ರಯತ್ನ ಪಡುವ ಸೂಚನೆಗಳೇ ಈಗ ಕಾಣಬರುವುದಿಲ್ಲ. ಕೌಲಾಸಲಂಗರಿಗೆ ಒದಗಿರುವ ವಿಪತ್ತನ್ನು ನಿವಾರಿಸುವುದರಿಂದಲೇ ತೃಪ್ತರಾಗದೆ ಬ್ರಿಟಿಷ್ ಸೇನೆಗಳು ಬರ್ನಾಮ್ ನದೀಕ್ಷೇತ್ರದಲ್ಲಿ [illegible]ದಿರುವ ಶತ್ರುಗಳನ್ನು ನಾಶಮಾಡುವದರಲ್ಲಿ ತೊಡಗಿವೆ. ಈ ಕ್ಷೇತ್ರದಲ್ಲಿ ಬ್ರಿಟಿಷರ ಚಟುವಟಿಕೆಯೇ ಗೊತ್ತಾಗುವಂತಿಲ್ಲ. ಅಲ್ಲಿಯ ಜೌಗುಪ್ರದೇಶದಲ್ಲಿಯೂ ಫಿರಂಗಿಗಳು ಮತ್ತು ಕೈಸಲ್ಲುಗಳು [illegible] ಆಗಾಗ್ಗೆ ಶೆಲ್‌ಗಳು ಹಾರಿ ಮರಗಳನ್ನೂ, ಮನುಷ್ಯರನ್ನೂ ಗಾಳಿಗೆ ತೂರಿಸುತ್ತವೆ ಮತ್ತು ನೆಲದಲ್ಲಿ ದೊಡ್ಡ ಕಂದಕವಾಗುವಂತೆ ಮಾಡುತ್ತವೆ.

ಜರ್ಮನ್ ಅಧಿಕಾರಿಯ ಮರಣ

ರಷ್ಯಾರಣರಂಗದಲ್ಲಿ ದಂಡನಾಯಕರೆನಿಸಿದ್ದ ಲೂಜರ್ ಜನರಲ್ ಜಾರ್ಜ ಬ್ರಾನ್‌ರವರು ರಷ್ಯನ್ನರ ಹೊಡೆತದಿಂದ ಮರಣಹೊಂದಿದರು.

ಸರ್ ಅಕಬರ್ ಹೈದರಿಯವರ ಮರಣ

ಬಹುದಿವಸಗಳಿಂದ ಹೈದರಾಬಾದ್ ರಾಜ್ಯದ ಮುಖ್ಯಮಂತ್ರಿಗಳಾಗಿದ್ದು, ಈಗ್ಗೆ 6 ತಿಂಗಳುಗಳ ಪೂರ್ವದಲ್ಲಿ ವೈಸ್‌ರಾಯರ ಮಂತ್ರಿಮಂಡಲದಲ್ಲಿ ವರ್ತಮಾನ ಶಾಖಾ ಸಚಿವರಾಗಿದ್ದ ಸರ್. ಅಕಬರ್ ಹೈದರಿಯವರು ಈ ತಿಂಗಳು 8 ನೆಯ ತಾರೀಖಿನ ದಿವಸ ದೆಹಲಿಯಲ್ಲಿ ಸ್ವರ್ಗಸ್ಥರಾದರು. ಅವಸಾನಕಾಲದಲ್ಲಿ ಅವರಿಗೆ 7 ವರ್ಷಗಳಾಗಿದ್ದವು. ಇವರು ಇಂಡಿಯಾ ದೇಶದಲ್ಲಿ ವಿಶೇಷ ಕೀರ್ತಿಯನ್ನು ಗಳಿಸಿದ್ದರು. ದೇವರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಶ್ರೀ ರೂಜ್‌ವೆಲ್ಟ್‌ರವರ ವೀರಸಂದೇಶ.

೬ನೆಯ ತಾರೀಖಿನದಿವಸ ಶ್ರೀ ರೂಜ್‌ವೆಲ್ಟ್‌ರವರು ಮೆರಿಕಾ ಕಾಂಗ್ರೆಸ್ ಮಹಾಸಭೆಗೆ ಒಂದು ಸಂದೇಶವನ್ನು ಕಳುಹಿಸುತ್ತ—“ಅಮೆರಿಕವು ೧೯೪೨ನೇ ವರ್ಷದಲ್ಲಿ ೬೦,೦೦೦ ವಿಮಾನಗಳನ್ನೂ, ೪೫,೦೦೦ ಟ್ಯಾಂಕುಗಳನ್ನೂ, ೨೦,೦೦೦ ವಿಮಾನಧ್ವಂಸಕ ಫಿರಂಗಿಗಳನ್ನೂ ನಿರ್ಮಿಸಲಾಗುವುದೆಂದೂ, ೧೯೪೩ರಲ್ಲಿ ೧೨೫,೦೦೦ ವಿಮಾನಗಳನ್ನೂ ೭೫,೦೦೦ ಟ್ಯಾಂಕುಗಳನ್ನೂ, ೩೫೦೦೦ ವಿಮಾನಧ್ವಂಸಕ ಫಿರಂಗಿಗಳನ್ನೂ ಮತ್ತು ೧ ಕೋಟಿ ಟನ್‌ಗಳಷ್ಟು ಹೊಗುವ ಹಡಗುಗಳನ್ನೂ ಸಿದ್ಧಮಾಡಲಾಗುವುದೆಂದೂ, ಮುಂದಿನ ವರ್ಷದಲ್ಲಿ ಅಮೆರಿಕವು ಸಂಗ್ರಾಮಕ್ಕಾಗಿ ೫೬ ಮಿಲಿಯನ ಡಾಲರುಗಳ ವೆಚ್ಚಮಾಡಲಿದೆಯೆಂದೂ, ಅಮೆರಿಕದ ಭೂ, ಜಲ, ವಾಯುಬಲಗಳನ್ನು ಬ್ರಿಟಿಷ್ ದ್ವೀಪಗಳಿಗೆ ಕಳುಹಿಸಿಕೊಡಲಾಗುವುದೆಂದೂ, ಎಲ್ಲ ರಂಗಗಳಲ್ಲಿಯೂ ಶತ್ರುವಿನೊಡನೆ ಹೋರಾಡಬೇಕಾಗಿದೆಯೆಂದೂ, ಕೆಲವು ಕಡೆ ಸ್ವಸಂರಕ್ಷಣೆ ಮಾಡಿಕೊಳ್ಳಬೇಕೆಂದೂ, ಮತ್ತೆ ಕೆಲವು ಕಡೆ ಮೇಲೆ ಬಿದ್ದು ಹೊಡೆಯಬೇಕೆಂದೂ’ ಹೇಳಿದರು ಜನರು ಯಾವಾಗ ಯುದ್ಧ ಮುಗಿಯುವುದೆಂದು ಪ್ರಶ್ನೆಯನ್ನು ಕೇಳುತ್ತಿದ್ದಾರೆ ಸಂಗ್ರಾಮವನ್ನು ಯಾವಾಗ ನಿಲ್ಲಿಸಬೇಕೆಂದು ಅಮೆರಿಕವು ಸಂಕಲ್ಪ ಮಾಡುವುದೋ ಆಗ ಮುಗಿಯುವದು. ಜರ್ಮನಿಯ ಇಟಲಿಯ ಮತ್ತು ಜಪಾನಿನ ‘ಮಿಲಿಟರಿಜಂ’ ಎಂದು ಹೆಸರಿಲ್ಲದ ಹಾಗೆ ನಾಶವಾಗುವುದೋ ಅಂದು ಸಂಗ್ರಾಮವು ಮುಗಿಯುವುದು’ ಎಂದು ಹೇಳಿರುವರು

ಅಮೆರಿಕದ ಕೆಲಸಗಾರರು ವಾರದಲ್ಲಿ ಏಳು ದಿನ ಕೆಲಸಮಾಡಬೇಕಾಗುವದೆಂದೂ, ಪ್ರತಿಯೊಂದು ಕಾರ್ಖಾನೆಯೂ ಸಂಗ್ರಾಮ ವಸ್ತುನಿರ್ಮಾಣದ ಕಾರ್ಖಾನೆಯಾಗಬೇಕೆಂದೂ, ಮೋಟಾರು ಕಾರ್ಖಾನೆಗಳನ್ನು ಸಹ ಸಂಗ್ರಾಮ ವಸ್ತುನಿರ್ಮಾಣಕ್ಕೆ ಪರಿವರ್ತಿಸಲಾಗುವುದೆಂದೂ ಹೇಳಿದರು

ಈಗ ನಡೆಯುತ್ತಿರುವ ಯುದ್ಧವು ಕೊನೆಮುಟ್ಟಲೇಬೇಕು. ಮಧ್ಯದಲ್ಲಿ ಶಾಂತಿಸಂಧಾನದ ಮಾತೇ ಇಲ್ಲ ಬೆಂಕಿ ನೀರನ್ನೂ ಒಟ್ಟುಗೂಡಿಸಲು ಸಾಧ್ಯವಿಲ್ಲ ದುಷ್ಟತನ, ನಿರಂಕುಶಾಧಿಕಾರ, ವಿಶ್ವದ ಆಕ್ರಮಣ ಇವು ಆಕ್ಸಿಸ್ ರಾಷ್ಟ್ರಗಳ ಉದ್ದೇಶವಾಗಿವೆ ಧರ್ಮ ಸ್ವಾತಂತ್ರ್ಯ ವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಇವು ಮಿತ್ರರಾಷ್ಟ್ರಗಳ ಉದ್ದೇಶವಾಗಿವೆ ಇವೆರಡು ಶಕ್ತಿಗಳನ್ನೂ ಒಂದುಗೂಡಿಸಲು ಸಾಧ್ಯವೇ? ಇವುಗಳ ಅರಳಾಗಿರುವುದನ್ನು ಸಂಪೂರ್ಣವಾಗಿ ಧ್ವಂಸಮಾಡುವುದೊಂದೇ ಈಗಿನ ದಾರಿ

ಹಿಟ್ಲರ್ ಮತ್ತು ನಾಜಿಗಳ ಸಾಮ್ರಾಜ್ಯ ದಾಹವನ್ನು ನೋಡಿದರೆ ಜಪಾನರ ಮತ್ತು ಇಟಾಲಿಯನ್ನರ ದಾಹವು ಕಡಿಮೆಯೆಂದೇ ಹೇಳಬೇಕು ೧೯೩೩ರಲ್ಲಿ ನಾಜಿಗಳು ಅಧಿಕಾರಕ್ಕೆ ಬರುವ ಮೊದಲೇ ಅವರು ವಿಜಯದ ಕಾರ್ಯಕ್ರಮವನ್ನು ಸಿದ್ಧಗೊಳಿಸಿದ್ದರು ವಿಶ್ವದ ಒಂದು ಭಾಗವನ್ನು ಜಯಿಸುವುದು ಅವರ ಉದ್ದೇಶವಲ್ಲ ಇಡೀ ವಿಶ್ವವನ್ನೂ ಮತ್ತು ಸಪ್ತಸಾಗರಗಳನ್ನೂ ಜಯಿಸುವುದೇ ಅವರ ಗುರಿ ಬರ್ಲಿನ್‌-ರೋಂ ಟೋಕಿಯೋ ಒಪ್ಪಂದವಾದಮೇಲೆ ಈ ಮೂರು ರಾಷ್ಟ್ರಗಳ ಸಾಮ್ರಾಜ್ಯವು ಒಂದಾಯಿತು ಈ ವ್ಯವಸ್ಥೆಯ ಪ್ರಕಾರ ಜಪಾನು ಉಗ್ರವರ್ತನಕ್ಕೆ ಕೈಹಾಕಿತು ಬ್ರಿಟಿಷ್ ರಷ್ಯಾ ಮತ್ತು ಚೀಣಾಗಳಿಗೆ ನಾವು ಶಸ್ತ್ರಾಸ್ತ್ರಗಳನ್ನು ಕಳಿಸಬಾರದೆಂಬುದೇ ಜಪಾನಿನ ಉದ್ದೇಶವಾಗಿತ್ತು ನಮ್ಮ ಕೈಗಾರಿಕೆ ಮತ್ತು ಮಿಲಿಟರಿ ಬಲವನ್ನೆಲ್ಲ ಪೆಸಿಫಿಕ್ ಸಾಗರದ ಕಡೆಗೆ ತಿರುಗಿಸುವಂತಹ ರೀತಿಯಲ್ಲಿ ನಮ್ಮನ್ನು ಬೆದರಿಸಬೇಕೆಂದು ಜಪಾನರು ಪೆರ್ಲ್ ಬಂದರದ ಮೇಲೆ ಬಿದ್ದರು. ಅವಕ್ಕೆ ನಾವೇನೂ ಎದೆಗುಂದಲಿಲ್ಲ ಈ ಕಾಂಗ್ರೆಸ್ ಮಹಾಸಭೆಯು ಇಂದು ಸೇರಿರುವದೇ ಅದಕ್ಕೆ ಗುರುತು ವಿಶ್ವವು ಮತ್ತೆ ನಾಜಿಗಳಿಂದ ಪೀಡಿತವಾಗದಂತೆ ಮಾಡಬೇಕೆಂದು ಅಮೆರಿಕನ್ನರು ಸಂಕಲ್ಪ ಮಾಡಿದ್ದಾರೆ.

ನಾವೀಗ ಬಹಳ ಕಷ್ಟದ ಪರಿಸ್ಥಿತಿಯನ್ನು ಎದುರಿಸಬೇಕಾಗಿರುವುದೇನೋ ನಿಜ. ವೇಕ್ ದ್ವೀಪದ ರಕ್ಷಣೆಗೆ ನಾವು ಸಹಾಯ ನೀಡದೆ ಹೋದುದು ವಿಷಾದಕರವಾಗಿದೆ ೧೦ ಲಕ್ಷ ಸೈನಿಕರನ್ನು ಒಂದು ಸಾವಿರ ಹಡಗುಗಳಲ್ಲಿ ತಂದು ಫಿಲಿಪ್ಪೈನ್ ದ್ವೀಪದಲ್ಲಿ ನಾವು ಇಳಿಸಲಾರದೆ ಹೋದುದು ಸಹ ವ್ಯಸನಕರವಾದುದು ಆದರೇನು ಅಮೇರಿಕದ ವಿಮಾನಗಳು ವೇಕ್ ದ್ವೀಪದ ಮೇಲೆ ಹಾರುವಂತೆ ಮಾಡಬೇಕೆಂಬ ಫಿಲಿಪ್ಪೈನನ್ನು ಜಪಾನರ ಬಂಧನದಿಂದ ಬಿಡಿಸಬೇಕೆಂಬ ನಮ್ಮ ಸಂಕಲ್ಪವು ಮತ್ತೂ ದೃಢವಾಯಿತು ಸಕಾಲದಲ್ಲಿ ನಾವು ಶತ್ರುಗಳ ಮೇಲೆ ಉಗ್ರರೀತಿಯಲ್ಲಿ ಬೀಳುವೆವು ವಾಷಿಂಗ್‌ಟನ್ನಿನಲ್ಲಿ ೨೬ ಜನಾಂಗಗಳು ಕುಳಿತು ಮಹಾ ತೀರ್ಮಾನಕ್ಕೆ ಬಂದಿವೆ ಶತ್ರುವನ್ನು ನಾಶಮಾಡುವ ಉದ್ದೇಶದಿಂದ ಮಿಲಿಟರಿ ಅಧಿಕಾರಿಗಳು ಇನ್ನು ಮುಂದೆಯೂ ಚರ್ಚೆಗಳನ್ನು ನಡೆಸುತ್ತ ಬರುವರು

ನಾವು ಎಲ್ಲಿ ಶತ್ರುಗಳನ್ನು ಪ್ರತಿಭಟಿಸಬಹುದೋ ಅಲ್ಲೆಲ್ಲ ಪ್ರತಿಭಟಿಸುವೆವು ಶತ್ರುವನ್ನು ನಮ್ಮ ತೀರಗಳಿಂದ ಬಹಳ ದೂರದಲ್ಲಿಯೇ ಇಟ್ಟಿರಬೇಕು ಯಾಕಂದರೆ ಶತ್ರುಭೂಮಿಯಲ್ಲಿಯೇ ಅವರನ್ನು ನಾವು ಸದೆಬಡಿಯಬೇಕು ಅಮೆರಿಕ ಸೇನೆಯನ್ನು ವಿಶ್ವದ ಯಾವ ಕಡೆಗೆ ಬೇಕಾದರೂ ಕಳಿಸಲು ಅವಕಾಶವಿರಬೇಕು ದೂರದ ಪೂರ್ವದಲ್ಲಿ ಅನೇಕ ಕಡೆ ಅಮೆರಿಕ ಪಡೆಗಳು ಕೆಲಸ ಮಾಡುವುವು ಹಡಗುಗಳ ಚಲನಕ್ಕೆ ಅಡಚಣೆಯಾಗದಂತೆ ನೋಡಿಕೊಳ್ಳಲು ಎಲ್ಲ ಸಮುದ್ರಗಳಲ್ಲಿ ಕೆಲಸ ಮಾಡುವುವು ಈ ವಿಶ್ವ ಸಂಗ್ರಾಮದಲ್ಲಿ ಎಷ್ಟು ಮುಖ್ಯವಾದ ಕೋಟೆಯೆನಿಸಿರತಕ್ಕಂತಹ ಬ್ರಿಟನ್ನಿನ ರಕ್ಷಣೆಗಾಗಿ ಅಮೆರಿಕದ ಭೂ, ಜಲ, ವಾಯು ಬಲವು ತೆರಳುವದು ಎಂದು ಹೇಳಿದರು

ಮೈಸೂರು ಭಾರತಕ್ಕೆ ಮಾದರಿ.

ಅಮೇರಿಕಾದ ಪತ್ರಿಕೆಯ ಪ್ರಶಂಸೆ

ಅಮೇರಿಕಾದ ‘ಲೈಫ್’ ಎಂಬ ವಾರಪತ್ರಿಕೆಯೊಂದು ೧೯೪೨ ನೇ ಇಸವಿ ಮೇ ೧೨ ನೇ ತಾರೀಖಿನ ದಿನ ಪ್ರಕಟಿಸಿದ ಸಂಚಿಕೆಯಲ್ಲಿ, ಮೈಸೂರು ಸಂಸ್ಥಾನವನ್ನು ಈ ರೀತಿ ಪ್ರಶಂಸಿಸಿದೆ—

“ಭಾರತವು ಬಹಳ ದೊಡ್ಡ ದೇಶ ಒಂದೇ ಬಾರಿ ಭಾರತದ ಹಲವು ವೈಶಿಷ್ಟ್ಯಗಳೆಲ್ಲವನ್ನೂ ನಮೂದಿಸಲು ಸಾಧ್ಯವಿಲ್ಲ ಕಲ್ಕತ್ತಾ ಮುಂಬಯಿ ನಗರಗಳು ದೊಡ್ಡ ಕೈಗಾರಿಕಾ ಕೇಂದ್ರಗಳು ಪ್ರಪಂಚದಲ್ಲಿ ಉಕ್ಕನ್ನು ತಯಾರಿಸುವ ದೇಶಗಳಲ್ಲಿ ಭಾರತವು 13 ನೆಯದು ಕಲ್ಲಿದ್ದಲು, ಮ್ಯಾಂಗನೀಸು, ಚಿನ್ನ, ಮೈಕ, ಕಬ್ಬಿಣ ಮತ್ತು ತಾಮ್ರ ಇವೇ ಮೊದಲಾದ ಖನಿಜಗಳು ದೊರೆಯುತ್ತವೆ ಸುಮಾರು 2000 000 ಮಂದಿ ಭಾರತೀಯರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ

ಭಾರತದಲ್ಲಿ ಮೈಸೂರು ಸಂಸ್ಥಾನವು ಅತ್ಯಂತ ಸುಂದರವಾದ ಪ್ರದೇಶವಾಗಿದೆ ಕಳೆದ ಒಂದು ಶತಮಾನದಿಂದ ಬ್ರಿಟಿಷರ ಮೇಲ್ವಿಚಾರಣೆಯಲ್ಲಿ, ಭಾರತೀಯರು ಸಂಪದ್ಯುಕ್ತವಾದ ಮತ್ತು ಉತ್ಸಾಹದಿಂದ ತುಂಬಿರುತ್ತಿರುವ ದೇಶವನ್ನು ನಿರ್ಮಿಸಿರುತ್ತಾರೆ ಈ ಸಂಸ್ಥಾನದಲ್ಲಿ 7,000 ಶಾಲೆಗಳೂ, ಒಂದು ವಿಶ್ವವಿದ್ಯಾನಿಲಯವೂ, 13 ಹೈಸ್ಕೂಲುಗಳೂ, ಮತ್ತು 457 ಮಾಧ್ಯಮಿಕ ಶಾಲೆಗಳೂ ಇವೆ. ನಿಮ್ನ ವರ್ಗದ ವಿದ್ಯಾರ್ಥಿಗಳಿಗೆ ಉಚಿತವಾದ ವಿದ್ಯಾಭ್ಯಾಸ ದೊರೆಯುತ್ತಿದೆ

ಮೈಸೂರಿನಲ್ಲಿ ಯಾವ ಬಗೆಯ ಜಗಳವಿಲ್ಲದಿರುವುದು ದೊಡ್ಡ ವೈಶಿಷ್ಟ್ಯವಾಗಿದೆ ನಿಮ್ನವರ್ಗದವರು ಸವರ್ಣ ಹಿಂದುಗಳನ್ನು ದ್ವೇಷಿಸುವುದಿಲ್ಲ ಸವರ್ಣ ಹಿಂದೂಗಳು ನಿಮ್ನವರ್ಗದವರನ್ನು ದ್ವೇಷಿಸುವುದೂ ಇಲ್ಲ ಶ್ರೀಮನ್ಮಹಾರಾಜರವರು ಹಿಂದುಗಳು ದಿವಾನರು ಪರ್ಷಿಯದ ಮುಸಲ್ಮಾನರು ಸ್ವಂತ ಕಾರ್ಯದರ್ಶಿಗಳು ರೋಮನ್ ಕ್ಯಾಥೋಲಿಕರು, ಇನ್ನೊಬ್ಬ ಉಪಕಾರ್ಯದರ್ಶಿಗಳು ಬ್ರಾಹ್ಮಣರು ಮಹಾಸ್ವಾಮಿಯವರ ಖಾಸಾ ವೈದ್ಯರು, ಆಸ್ಟ್ರಿಯದ ಯೆಹೋದ್ಯರು, ಕಾರ್ಯದರ್ಶಿಗಳು ಇಂಗ್ಲಿಷರು ಈ ಬಗೆಯ ವಿಶಾಲ ವರ್ತನೆಯ ಫಲಿತಾಂಶವು ಅಷ್ಟಿಷ್ಟಲ್ಲ ಮೈಸೂರಿನಲ್ಲಿ ಜನರು ಚೊಕ್ಕಟವಾಗಿರುತ್ತಾರೆ ದಕ್ಷರೂ ಮತ್ತು ಜಾಗ್ರತರೂ ಆದ ತರುಣರಿಂದ ನಾಡು ಶೋಭಿಸುತ್ತಿದೆ ಅನೇಕ ವೈದ್ಯಶಾಲೆಗಳೂ, ಸಮಾಜ ಸೇವಾ ಸಂಸ್ಥೆಗಳೂ ಇವೆ ವಿದ್ಯಾಭ್ಯಾಸಕ್ಕೆ 20,00,000 ಡಾಲರುಗಳನ್ನು ಪ್ರತಿ ವರ್ಷವೂ ವೆಚ್ಚ ಮಾಡುತ್ತಿದೆ ಸುಮಾರು 200 ಊರುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದೆ ಮೈಸೂರು ನಗರವು ಅಮೆರಿಕಾದ ಹಲವು ನಗರಗಳಿಗಿಂತ ಚೊಕ್ಕಟವಾಗಿಯೂ, ಶುದ್ಧವಾಗಿಯೂ ಇದೆ ಸಂಸ್ಥಾನದ ವ್ಯವಸಾಯವು ಕೆರೆಗಳ ಸಹಾಯದಿಂದ ನಡೆಯುತ್ತಿದೆ ಅಮೇರಿಕನ್ನರಿಂದ ನಿರ್ಮಿತವಾದ ಮೂರು ವಿದ್ಯುಚ್ಛಕ್ತಿಯನ್ನುತ್ಪತ್ತಿಮಾಡುವ ಕೇಂದ್ರಗಳಿವೆ

ಹೆಚ್ಚು ಕಡಿಮೆ ಪ್ರಪಂಚದಲ್ಲಿ ದೊರೆಯುವ ಗಂಧದೆಣ್ಣೆಯೆಲ್ಲವೂ ಮೈಸೂರಿನಲ್ಲಿಯೇ ದೊರೆಯುತ್ತಿದೆ ಕೋಲಾರದ ಚಿನ್ನದ ಗಣಿಯು ಪ್ರಪಂಚದಲ್ಲಿ ಅತ್ಯಂತ ಆಳವಾದುದು ಸುಮಾರು 400,000,000 ಡಾಲರುಗಳ ಬೆಲೆಬಾಳುವ ಚಿನ್ನವನ್ನು ಕೊಟ್ಟಿದೆ ಬೇಕಾದ ಹಾಗೆ ಕಬ್ಬಿಣವು ದೊರೆಯುತ್ತದೆ ಸಿಮೆಂಟ್ ಕಾರ್ಖಾನೆಯಲ್ಲಿ 2೫,000 ಟನ್‌ಗಳಷ್ಟು ಸಿಮೆಂಟು ತಯಾರಾಗುತ್ತದೆ. ಕಾಗದ, ಗಾಜು, ಪಿಂಗಾಣಿ ಸಾಮಾನು, ಬೈಸಿಕಲ್ಲುಗಳು, ಬೇಕಲೈಟು ಸಾಮಾನು, ಸೀಮೆ ಗೊಬ್ಬರ, ಸಾಬೂನು ಮತ್ತು ರೇಷ್ಮೆಗಳನ್ನು ತಯಾರಿಸಲು ಕಾರ್ಖಾನೆಗಳಿವೆ. ದಿವಂಗತರಾದ ಸರ್ ದೊರಾಬ್ಜಿ ತಾತಾರವರಿಂದ ಸ್ಥಾಪಿತವಾದ ವಿಜ್ಞಾನ ಪರಿಶೋಧನಾಲಯವು ಮೈಸೂರಿನಲ್ಲಿದೆ

ಬ್ರಿಟಿಷರಿಂದ ಪ್ರಾರಂಭವಾದರೂ, ಮೈಸೂರಿನ ಪ್ರಗತಿಯು ಪ್ರಶಂಸನೀಯವಾದುದು ಇಲ್ಲಿ ಹಿತಕರವಾದ ಹವಾಗುಣವೂ ದಕ್ಷರಾದ ಮುಖ್ಯ ಮಂತ್ರಿಗಳ ಆಡಳಿತವೂ, ಇದಕ್ಕೆ ಕಾರಣವಾಗಿರಬಹುದು ಭಾರತಕ್ಕೆ ಮೈಸೂರು ಆಶಾದಾಯಕವಾದ ಆದರ್ಶವಾಗಿದೆ. ಮೈಸೂರಿನ ಪ್ರಜೆಗಳಿಗೆ ಬ್ರಿಟಿಷ್ ಸರ್ಕಾರದವರು ಹೆಮ್ಮೆಪಟ್ಟುಕೊಳ್ಳಬಹುದಾಗಿದೆ

(ಮೈಸೂರು ಇನ್‌ಫರ್ಮೇಷನ್ ಬುಲೆಟಿನ್)

ಸ್ವೀಕಾರ.

ಬೆಂಗಳೂರು ಮಹಾಂತಿನ ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯರವರು ಹರ್ಲಾಪುರದ ಪತ್ತರನಿರುವ ಶ್ರೀ ಮುಕ್ತಿಮಂದಿರ ಗುರುಕುಲದಲ್ಲಿ ಅನುಷ್ಠಾನ ಸಮಾಪ್ತಿ ಸಮಾರಂಭವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಕಳುಹಿಸಿದ 1 ರೂ ಯು ವೇ|| ಸಿ ಯಂ ಗಂಗಾಧರ ಶರ್ಮರ ದ್ವಾರಾ ತಲ್ಪಿರುತ್ತದೆ

ಬಳ್ಳಾರಿ ಜಿ|| ಹುನ್ನಿನಹಡಗಲಿಯಲ್ಲಿ ಕೈ|| ಉಜ್ಜಯಿನೀ ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನವನ್ನಾಚರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಮ|| ರಾ|| ಗುರುಶೆಟ್ಟರ ಕೊಟ್ರಪ್ಪನ ಗುರುಲಿಂಗಪ್ಪನವರು ಸಮರ್ಪಿಸಿದ 1 ರೂ ಯು ಮ|| ರಾ|| ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತದೆ

ಧಾರವಾಡ ಜಿ|| ಶಿರೋಳಗ್ರಾಮದ ವಸ್ತ್ರದ ಕೈ|| ಚನ್ನಬಸವಯ್ಯನವರ ಧರ್ಮಪತ್ನಿಯವರಾದ ಶ್ರೀ ನೀಲಾಂಬೆಯವರು ಶಿವಾಧೀನರಾದ ಸಮಯದಲ್ಲಿ ಮೆ|| ಆರ್ ಎಸ್ ಹಿರೇಮಠ ರಿ|| ಕಲೆಕ್ಟರ್ ಇವರ ಧರ್ಮಪತ್ನಿಯವರಾದ ಸೌ|| ಪಾರ್ವತೀಬಾಯಿಯವರು ಮಾತೃಭಕ್ತಿಯಿಂದ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಯು ವೇ|| ಅರಳೆಲೆಮಠದ ತೋಟಪ್ಪ ಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ

ಈ ಸೌಖ್ಯಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

[೩ನೆಯ ಪುಟದಿಂದ ಮುಂದುವರಿದುದು]

ಲಾಭವೂ ಇಲ್ಲ ಮನೋರಾಜ್ಯವು ಶಾಂತಿಮಯವಾಗದ ಈ ದಾಂಭಿಕ ರಾಜ್ಯದಲ್ಲಿ ಶಾಂತಿಯು ನೆಲೆಗೊಳ್ಳುವದು ಸುಲಭವಲ್ಲ "ಜಣ್ಣಾ ತವ್ಯಂಗಿರ ವ ನವ್ರೊ ವಾರ್ಗದ್ದರ ಮನೆಯೊಂದೇ?" ಎಂಬ ಗಾದೆಯ ಮಾತು ಸೃಷ್ಟಿಯಲ್ಲಿ ನಾನಾಬಗೆಯಾಗಿ ತೋರುವ ಈ ಸೃಷ್ಟಿಯಲ್ಲಿ ಜೀವನದ ನಿರ್ವಾಹಕ್ಕಾಗಿ ನೃತ್ಯ ಟೀಬಿಗೀಗಾಗಿ ಜಾತಿ, ಮತ ಸಂಘ ಸಂಸ್ಥೆಗಳು ಬೇರೆ ಬೇರೆಯಾಗಿ ಕಾಣಿಸಿಕೊಳ್ಳುವುದು ದೇವರ ಸೃಷ್ಟಿಯಲ್ಲಿ ಸ್ವಭಾವಸಿದ್ಧವಾಗಿದೆ

ಸಮಾಶಾವಾನವನ್ನೊಪ್ಪುವ ಹೊಸಬರ ಮನೋಭೀಷ್ಟವು ಇಂದಿನ ಐಹಿಕ ಸುಖಾಸ್ವಾದಲ್ಲಿಯೇ ಪರ್ಯವಸಾನಗೊಂಡಿದೆ ಸಂಸಾರ ನಿರ್ವಾಹಕ್ಕಾಗಿ ಬರೀ ಆರ್ಥಿಕ ಸ್ಥಿತಿಯನ್ನು ಸರಿಪಡಿಸಿಕೊಂಡರೆ ಸಾಕನ್ನುವುದೇ ಇವರ ಪೂರ್ಣ ಬಯಕೆ ಸದ್ಯ. ಇದರಿಂದ ಜಗತ್ತಿಗಾದ ಲಾಭವೆಂದರೆ ಕೇಶಾದಿಗಳ ತಿದ್ದುಪಾಟಿನಿಂದಾದ ಥಳಕು ಮುರುಕು ಒನಪು ಒಯ್ಯಾರಗಳ ಮೊತ್ತವೇ ಉಚ್ಚ ಸಂಸ್ಕೃತಿಯೆಂದರಿದು ಜರೆದು ಸರ್ವದಾ ಸ್ವಾತಂತ್ರ್ಯ ಮಂತ್ರವನ್ನು ಸರಿಸುತ್ತಿರುವ ಪ್ರೇಯಸಿಯರ ಪ್ರಣಯದಾಟದ ಪರಮಾವಧಿಯನ್ನು ಕಾಣುವುದಾಗಿದೆ "ನೀರಡಿಸಿದ ಪಸುಪ್ಪನ ಜಲಭ್ರಾಂತಿಯಿಂದ ಬಿಸಲ್ಗುದುರೆಯ ಬಯಸಿದಂತೆ" ಈ ವಿಧವಾದ ಬಯಕೆಯಿಂದ ಜನಾಂಗಕ್ಕೆ ತೃಪ್ತಿಯಾಗವಂತಿಲ್ಲ ಹಿಂದಿನ ಬ್ರಹ್ಮನಿಷ್ಠ ಮಹರ್ಷಿಗಳ ನಮಗ ಹಾಕಿಕೊಟ್ಟ ಪದ್ಧತಿಯಲ್ಲಿ ಮುಂದಿನ ಶಾಶ್ವತ ತೃಪ್ತಿಯೆಂಬ ಗುರಿಯನ್ನು ಸಾಧಿಸುವುದಕ್ಕಾಗಿ ಇಂದಿನ ಸುಖಶಾಂತಿಮಯವಾಗಿಯೂ ಮತಜಾತಿಗಳಿಗನುರೂಪವಾಗಿಯೂ ಜೀವನೋಪಾಯಕ್ಕೆ ಸಲ್ಲುವುದಾಗಿಯೂ ಇರುವ ಶುದ್ಧಾಚಾರ (ಕಸಬುಗಳ) ತಂಡವನ್ನು ಕಂಡುಹಿಡಿದ ಇದರಲ್ಲಿ ಮಾನವರು ತಮ್ಮ ಜೀವನದ ಸುಗ್ಗಿಯನ್ನು ಇಂದು ಶಾಂತಿಮಯವಾಗಿ ಸಾಗಿಸಿಕೊಂಡು ಮುಂದೆ ನಿಚ್ಚಳವಾದ ಬೆಳಕಿನ ಬಳಗದಲ್ಲಿ ಬೆರೆದು ಸುಖಿಸುವರೆಂಬ ಭಾವ ತುಳುಕುತ್ತಿದೆ

ಈ ಮಾದರಿಯ ಸಂಯಮಶೀಲವಾದ ಉತ್ಕೃಷ್ಟ ವಿಚಾರಕ್ರಾಂತಿಯನ್ನು ಜನಾಂಗರಂಗದಲ್ಲೆಬ್ಬಿಸಿ ತನ್ನ ಬೆಳ್ಳಸವನ್ನೂ ಜಗತ್ತಿಗೆ ಹಿತವನ್ನೂ ಕೋರುವ ನಿಸ್ವಾರ್ಥಸುಧಾರಕ ಸಂಸ್ಥೆಗಳು ಬಹಳ ವಿರಳವಾಗಿವೆ

ಬುದ್ಧಿವಂತನಾದ ಪ್ರಚಾರಕನು ಯಾವುದಾದರೊಂದು ಸ್ವಾರ್ಥವನ್ನು ತನ್ನೆದೆಯಲ್ಲಿ ಹುಗಿದಿಟ್ಟುಕೊಂಡು ಅಜ್ಞ ಜನಾಂಗದಲ್ಲಿ ಪವಿತ್ರವಾದ ಆರ್ಯಧರ್ಮಕ್ಕೆ ವಿರುದ್ಧವಾಗಿ ಕೆಟ್ಟವಿಚಾರದ ಕ್ರಾಂತಿಯನ್ನು ಎಬ್ಬಿಸುತ್ತಾನೆ ಇದಕ್ಕೆ ಯಾವ ತಡೆಯೂ ಇಲ್ಲ ಕಡೆಯ ಫಲಿತಾಂಶವು ಮಾತ್ರ ಉತ್ತಮವಾಗಿ ಹೊರಡದೆ ನಗ್ಗಿದ ಸುಗ್ಗೀಕಾಯಿಯಂತೆ ಕೊರಗಬೇಕಾಗುವದು ಈ ಕೆಟ್ಟ ಚಳವಳಿಗಾರರು "ಕುಲ ಜಾತಿಯ ಕೊಳೆಯನ್ನು ತೊಳೆದುಕೊಂಡು ನೀವೆಲ್ಲ ಒಂದಾಗಿರಿ" ಎಂದು ಹಳ್ಳಿಗಳಲ್ಲಿ ಗಲಭೆಯನ್ನು ಎಬ್ಬಿಸಹತ್ತಿದ್ದಾರೆ. ಇವರು ನಾವು-ಆರ್ಥಿಕ ಸಂಕಟದಿಂದ ಗೋಳಿಡುತ್ತಲಿರುವ ಬಡವರ ಸಂಕಟವನ್ನು ದೂರಮಾಡುವುದಕ್ಕಾಗಿ ಹೊರಟ್ಟಿದ್ದೇವೆಂದು. ಹೊರಗೆ ಹಿತೋಕ್ತಿಯನ್ನು ಹೇಳುತ್ತ ಶ್ರೀಮಂತರಿಂದ ಹಣವನ್ನು ಸಂಪಾದಿಸಿ ಪಟ್ಟಣಗಳಲ್ಲಿ ವಿನೋದಕೂಟಗಳಲ್ಲಿ ಕಾಲಕಳೆಯುತ್ತಿರುವುದು ಸರ್ವರಿಗೂ ತಿಳಿದುದಾಗಿದೆ ಅಲ್ಲಲ್ಲಿ ನೆಲೆಯಾಗಿರುವ ಧರ್ಮಾಭಿಮಾನಿಗಳಂತೂ ಹೊರಗಡೆ ನಡೆಯುತ್ತಲಿರುವ ಮೇಲ್ತಂಡ ಪ್ರಚಾರದ ಕಡೆಗೆ ಕಣ್ತೆರೆದು ನೋಡದೆ ಔದಾಸೀನ್ಯ ಹೊಂದಿ ಮನೆಯಲ್ಲಿಯೇ ಕುಳಿತಿರುವುದು ವಿಷಾದಕರವಾದ ಸಂಗತಿಯಾಗಿದೆ "ಹಾದಿಹಿಡಿದು ಹೋಗುವ ದೆವ್ವವನ್ನು ನಾವಾಗಿ ಮನೆಹೊಗಿಸಿಗೊಳ್ಳುವುದೇಕೆ? ತಾನಾಗಿ ಹೊಕ್ಕರೆ ನೋಡೋಣ" ಎಂದು ಯೋಚಿಸುತ್ತ ಕೂಡ್ರುವುದು ಒಳಿತಲ್ಲ ಮುಂದೆ ಧರ್ಮಸಂಕಟಬಂದಾಗ ಹೋರಾಡಲೇ ಬೇಕಾಗುವದು ಇದು ಒಳ್ಳೇ ಚಟುವಟಿಕೆಯಕಾಲ, ಕೆಟ್ಟವರು ಸಾಹಸದಿಂದ ತಮ್ಮ ಆಕಾಂಕ್ಷೆಗಳನ್ನು ಪೂರೈಸಿಗೊಳ್ಳಲು ಮುಂದರಿಯುವಂತೆ ಒಳ್ಳೆಯವರು ಒಂದಾಗಿ ಅದನ್ನು ಹುರಿದುಂಬಿಸಿ ಒಳ್ಳೆಯದನ್ನು ಸಾಧಿಸಿಕೊಳ್ಳುವುದುಲೇಸು. ಕಾರ್ಯಕ್ಕೆ ತಕ್ಕಂತೆ ಫಲಕೊಡುವವನು ದೇವರಲ್ಲವೇ?

ವರ್ಣಾಶ್ರಮ ಜಾತಿಗಳೆಂಬ ಅಂಗಗಳಿಂದ ರೂಪುಗೊಂಡಿರುವ ಸನಾತನ ಧರ್ಮವೆಂಬ ಮಹಾಪುರುಷನು ಸರ್ವದಾ ತನ್ನ ಹಂಬಲಿಗರನ್ನು ಎತ್ತಿಕೊಂಡು ಲಲ್ಲೆಮಾಡುವ ಸ್ವಭಾವವುಳ್ಳವನಾಗಿದ್ದಾನೆ ಈತನನ್ನು ಅಂಗಹೀನನನ್ನಾಗಿ ಮಾಡುವ ದುಷ್ಟಹವ್ಯಾಸಕ್ಕೊಳಗಾಗಿರುವ ಅರೆಮನದವರನ್ನು ಹೇಗೆತಾನೆ ಪ್ರೀತಿಸುವನು? ಸೃಷ್ಟಿಕರ್ತನು ಮುನಿದರೆ ಮಾನವರನ್ನು ರಕ್ಷಿಸುವರಾರು? ಹುರುಳಿಲ್ಲದವರೊಂದಾಗಿ ಒಂದುಕಡೆಗೆ ಸುಧಾರಿಸಲು ಹೋದರೆ ಮತ್ತೊಂದು ಕಡೆಗೆ ಕೊಳೆ ಕಾಲರಾ, ಅನಾವೃಷ್ಟಿ ಮುಂತಾದ ಪಿಡುಗಿನ ಬಾಧೆ ಅಲ್ಲಿ ಸುಧಾರಿಸಲು ಹೋದರ ಅಲ್ಲಿಯೂ ದುರಂತಪೂರ್ಣ ಪರಿಸ್ಥಿತಿಯೇ ಅಂತು ಇಂತು ಬಡವರಿಗೆ ಗೋಳುತಪ್ಪಲಿಲ್ಲ ಯಾರು ಒಂದುಗೂಡಿ ಏನುಮಾಡುವರು? ಧರ್ಮಪ್ರಿಯನ ಒಲುಮೆಯು ತಪ್ಪಿದಮೇಲೆ, ಇಡೀ ಜಗತ್ತು ಒಂದಾಗಿ ಹೋರಾಡಿದರೂ ಸುಖಶಾಂತಿಗಳು ದೊರಕುವಂತಿಲ್ಲ, ದೇವರು ಮನುಷ್ಯರಿಗಾಗಿ ತೋರಿಸಿದ ರೀತಿಯಲ್ಲಿಯೇ ಅಂದರೆ ಧರ್ಮಬುದ್ಧಿಯಿಂದ ಇಂದ್ರಿಯಗಳನ್ನು ಬಂಧಿಸಿ ಮನೋನಿಗ್ರಹಮಾಡಿ ಒಂದುಗೂಡಿಸುವುದಾದರೆ ಅಭೀಷ್ಟವು ಸತ್ಯವಾಗಿ ದೊರೆಯುವುದು ಈ ಬಗ್ಗೆ ಇಂದಿನವರಿಗೆ ಎಷ್ಟೂ ವಿಶ್ವಾಸವಿಲ್ಲ ಯಾರು ಮಾಡುವುದೇನು? ಧರ್ಮಗುರುಗಳಾದರೂ ಏನುಮಾಡುವರು? ತಾನು ಸಧಾರಿಸಿರುವೆನೋ ಇಲ್ಲವೋ ಎಂಬ ಅರಿವು ತನಗಿಲ್ಲವಾದರೂ, ನಾನು ಜಗತ್ತಿನಲ್ಲಿ ಸಧಾರಕನಾಗಿ ಹೆಸರಿಸಿಕೊಳ್ಳಬೇಕೆಂಬ ಬವಲವಿಕೆ ಇಂದಿನವರಿಗೆ ಹೆಚ್ಚು ಇಂತಹ ತಪ್ಪನ್ನು ತಿದ್ದಿಕೊಳ್ಳದೆ ಅರೆಮನಸ್ಸಿನವರಾಗಿ ಒಂದುಗೂಡಿದಲ್ಲಿ ಏನೂ ಆಗುವಂತಿಲ್ಲ ಇಂದಿನವರು ಒಂದುಗೂಡಿ ಹೋರಾಡಿದರೂ ಸಾಧ್ಯವಾಗದ ವಿಚಿತ್ರ ಕೃತಿಗಳನ್ನು ಹಿಂದಿನವರು ತಮ್ಮ ಸಂಯಮದ ಬಲದಿಂದ ಒಬ್ಬೊಬ್ಬರೇ ಸಾಧಿಸಿಕೊಂಡಿರುವರು ಆ ಕಾಲದಲ್ಲಿ ಶವರೂ ಸ್ವತಂತ್ರರಾಗಿಯೇ ಬಾಳಬೆರೆತವರು ಈಬಗ್ಗೆ ಧರ್ಮಗುರುಗಳಾದ ಮಹಾಚಾರ್ಯರ ಉಪದೇಶವಿದೆ

> ಸರ್ವೇಂದ್ರಿಯಪ್ರವೃತ್ತ್ಯಾಜೆ ಬಹಿರಂತಶ್ಶಿವಂ ಯಜನ್ |
> ಸ್ವಚ್ಛಂದಚಾರೀ ಸರ್ವತ್ರ ಸುಖೀ ಭವತಿ ಸಂಯಮೀ ॥

ಈರೀತಿ ಸುಧಾರಿಸಿದ ಮಹಾನುಭಾವರ ಸಮುದಾಯವೊಂದು ಜಗತ್ತಿನಲ್ಲಿದ್ದರೆ ಇಡೀ ಪ್ರಪಂಚವೇ ಸುಖಮಯವಾಗುವುದೇನಾಶ್ಚರ್ಯವು?

॥ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥

ದುಃಖವಾರ್ತೆ

ಧಾರವಾಡ ಡಿ॥ ನರಗುಂದಪೇಠಾ ಶಿರೋಳಗ್ರಾಮದ ಸುಪ್ರಸಿದ್ಧ ಮನೆತನವಾದ ವಸ್ತ್ರದ ಚೆನ್ನಬಸವಾರ್ಯರ ಧರ್ಮಪತ್ನಿ 'ವೀರಾಂಬೆ" ಯವರು ತಮ್ಮ ಇಹಲೋಕಯಾತ್ರೆಯನ್ನು ಸುಗಮವಾಗಿ ಮುಗಿಸಿಕೊಂಡು ತಾ॥ ೨೯-೧೨-೪೫ ನೇ ಇಸ್ವಿ ಸೋಮವಾರ ಪ್ರಾತಃಕಾಲ ೮ ಘಂಟೆಗೆ ಶಿವಸಾಯುಜ್ಯವನ್ನು ಹೊಂದಿದರು: ಈ ಸಾಧ್ವೀಮಣಿಯಲ್ಲಿ ಪತಿಭಕ್ತಿ, ಬಂಧುಪ್ರೀತಿ, ಪರೋಪಕಾರ, ವಿನಯ, ತಾಳ್ಮೆ ಮೊದಲಾದ ಸದ್ಗುಣಗಳು ಮನೆಮಾಡಿಕೊಂಡಿದ್ದವು ಇವರು ತಮಗೆ ಪುತ್ರಸಂತತಿಯಾಗದ ಕಾರಣ ಬೇರೊಂದು ಲಗ್ನವಾಗಬೇಕೆಂದು ಪತಿಯನ್ನು ಪ್ರಾರ್ಥಿಸಿ ರೋಣ ತಾಲೂಕ ಅಬ್ಬಿಗೇರಿ ಅನ್ನದಾನಕವಿಗಳ ಸುಪುತ್ರಿ ಪಾರ್ವತಾಂಬೆಯೆಂಬ ಕನ್ಯಾಮಣಿಯೊಡನೆ ವಿವಾಹವನ್ನು ಮಾಡಿದರು ಆಕೆಯು ೧ ಗಂಡುಮಗನನ್ನು ಹಡೆದು ಸ್ವಲ್ಪೇದಿನಗಳಲ್ಲಿ ವಿಧಿವಶಳಾಗಲು ಆ ಶಿಶುವನ್ನು ಪ್ರೀತಿಯಿಂದ ಜೋಪಾನಮಾಡಿದಲ್ಲದೆ ಪುತ್ರಾಭಿಲಾಷೆಯು ಅದಿಕವಾಗಿದ್ದ ಇವರು ಮತ್ತೊಂದು ಲಗ್ನವನ್ನು ಮಾಡಿಕೊಳ್ಳಲಿಕ್ಕೆ ಗಂಡನಿಗೆ ವಿಧವಿಧವಾಗಿ ಬೇಡಿಕೊಂಡು ಮಹದೇವಿಯಕ್ಕನೆಂಬ ವಧುವನ್ನು ನಿಶ್ಚಯಿಸಿ ಲಗ್ನವನ್ನು ಪೂರೈಸಿದರು ಈ ಮಹಾದೇವಿಯಕ್ಕನಿಗೆ ಒಬ್ಬ ಗಂಡುಮಗನೂ, ನ [illegible] ಹೆಣ್ಣುಮಕ್ಕಳೂ ಜನಿಸಿದ್ದರಿಂದ ಇವರ ಆನಂದಕ್ಕೆ ಪಾರವೇ ಇಲ್ಲದಂತಾಗಿ ಮೊದಲಿನ ಪುತ್ರನಿಗೆ ಭದ್ರಯ್ಯನೆಂತಲೂ, ಎರಡನೇ ಪುತ್ರನಿಗೆ ಗಂಗಾಧರಯ್ಯನೆಂತಲೂ ಹೆಸರಿಟ್ಟರು. ಈ ಮಕ್ಕಳಿಬ್ಬರೂ ಪ್ರೌಢಾವಸ್ಥೆಗೆ ಬಂದಿರಲು ಈಗ ಐದುವರ್ಷದ ಕೆಳಗೆ ಇವರ ಗಂಡಂದಿರಾದ ಚೆನ್ನಬಸವಾರ್ಯರು ಶಿವಾಧೀನರಾದರು. ಅಂದಿನಿಂದ ವೀರಾಂಬೆಯವರು ಆಹಾರವನ್ನೇ ಕಡಿಮೆಮಾಡುತ್ತ

ಪತಿಧ್ಯಾನದಲ್ಲೇ ಮಗ್ನರಾಗಿ ಪ್ರಪಂಚದ ವ್ಯಾಪಾ
ರಕ್ಕೆ ಶರಣುಹೊಡೆದು ಹಾಸಿಗೆಯನ್ನು ಹಿಡಿದ
ಅದರೂ ತಮ್ಮ ನಿತ್ಯಶಿವಪೂಜೆ ತೀರ್ಥಪ್ರಸಾದ ಮು
ದವುಗಳನ್ನು ತಪ್ಪದೇ ನಡೆಸುತ್ತ ಬಂದರು. ಭದ್ರ
ಗಂಗಾಧರಯ್ಯ ಇವರೀರ್ವರೂ ತಮ್ಮ ಹೆತ್ತ ತಾಯಿ
ತಲೂ ಅಧಿಕವಾಗಿ ಮಾತೃಭಕ್ತಿಯಿಂದ ಸೇವೆಮಾಡ
ಬಂದರು ಅಜಮಾಸ ೮ ತಿಂಗಳಕೆಳಗೆ ಇವರ ವೈದ
ರಾದ ಗುರುಬಸವಾರ್ಯರ ಸೊಸೆಯಾದ ಪ್ರಭಾವ
ಯೆಂಬ ಸದಾಚಾರ ಸತಿಯು ಅಕಾಲದಲ್ಲಿ ಸ್ವರ್ಗ
ಳಾಗಲು ಆಗ ಶಿವಶಿವಾ! ಕೇವಲ ಎಂಟು ತಿಂಗ
ನಾನು ಹೋಗತಕ್ಕವಳಿದ್ದೆ ಅನಂತರ ನೀನು ಹೋ
ಬಾರದಿತ್ತೇ? ಎಂದು ಪ್ರಲಪಿಸಿ ದುಃಖಿಸಿದಳಂತೆ!
ಬಳಿಕ ತಮ್ಮ ಸ್ವರ್ಗಾರೋಹಣದ ಅವಧಿಯು
ಈ ಸಾಧ್ವೀಮಣಿಗೆ ಮುಂಚಿತವಾಗಿ ತಿಳಿದಿತ್ತೆಂ
ಇದರಿಂದ ಗೊತ್ತಾಗುವದು ಇವರಿಗೆ ೮೦ ವರ್ಷಗ
ಗಿದ್ದವು ಇವರ ಉಪಕಾರ ಸ್ಮರಣೆಯನ್ನು ಮಾಡ
ಇರುವ ಜನರೇ ಇಲ್ಲ. ಇವರ ಸ್ಮಶಾನ ಯಾತ್ರೆ
ಸಾವಿರಾರು ಜನರಿಂದ ನಿಬಿಡೀಕೃತವಾಗಿ ಬಟ್ಟೆ
ದಿಂದ ನೆರವೇರಿ ತಮ್ಮ ತೋಟದಲ್ಲಿರುವ ಪತಿ ಸಮಾ
ಧಿಯ ಎಡಭಾಗಕ್ಕೆ ಕೊಣ್ಣೂರು ಬೃಹನ್ಮಠಾಧ್ಯ
ಷ॥ ಬ್ರ॥ ಷಟ್ಸ್ಥಲದಸ್ವಾಮಿಗಳ ನೇತೃತ್ವದಲ್ಲಿ ಶಿರೋ
ಹಿರೇಮಠದ ಪರಯ್ಯ ವ ರಾಚಯ್ಯನವರಿಂದ ತಯಾ
ಲ್ಪಟ್ಟ ಕ್ರಿಯಾಸಮಾಧಿಯಲ್ಲಿ ಕಳೇಬರವು ಜಗದಾ
ರ್ಯರ ಜಯಘೋಷದೊಡನೆ ಸ್ಥಾಪಿಸಲ್ಪಟ್ಟಿ
ಇವರ ಆತ್ಮಕ್ಕೆ ಸರ್ವೇಶ್ವರನು ಚಿರಸೌಖ್ಯವೀಯಲಿ

ತೋ. ಚಿರಕೆಲೆಪ

ನಾಟಕಾವಲೋಕನದಿಂದ ಜನರಿಗಾಗುವ ಪ್ರಯೋಜನ

(ಕನ್ನಡಕವಿ, ಆಸ್ಥಾನವಿದ್ವಾನ್ ಅನವಟ್ಟಿ ರಾಮರಾಯರು

ಭಾರತೀಯರಲ್ಲಿ ಸುಪ್ರಸಿದ್ಧರಾದ ಪೂರ್ವಕವಿ
ಅನೇಕ ನಾಟಕಗಳನ್ನು ಬರೆದಿಟ್ಟಿರುವರೆಂಬುದು
ರಿಗೂ ತಿಳಿದ ವಿಷಯವಾಗಿದೆಯಷ್ಟೆ ಆದರೆ ಭಗವ
ನಲ್ಲಿ ಭಕ್ತಿಯನ್ನು ಹುಟ್ಟಿಸಿ, ವಿದ್ಯೆಯ ಮಹಿಮೆ, ನೀ
ಪೂರ್ವಿಕರ ಚರಿತ್ರೆ, ಜನರ ನಡವಳಿಕೆ ಮುಂತಾದ ಸ
ಣಗಳು ಜನಗಳಿಗೆ ತಿಳಿಯುವಂತೆ ಮಾಡಿ, ಜೀವ
ಕಾಲವು ಸರ್ವೋತ್ತಮವಾದ ದಾಗಿರಬೇಕೆಂಬುದೇ ನಾ
ಕಗಳ ಮುಖ್ಯೋದ್ದೇಶವಾಗಿರವುದೆಂದು ಚೆನ್ನಾಗಿ ಅರಿ
ಬೇಕು ಇಂತಹ ಮುಖ್ಯೋದ್ದೇಶಗಳು ಉದಾರ ಸ್ವಭ
ನಾದ ಉತ್ತಮ ಕವಿಯಿಂದಲ್ಲದೆ ಮತ್ತಾರಿಂದಲ
ಸಾಧ್ಯವಾಗಲಾರದು ನಾಟಕಗಳಲ್ಲಿ ಕವಿಗಳು ತಮ್ಮ
ನಾಟಕರಚನಾ ಕೌಶಲ್ಯವನ್ನು ತೋರಿಸುವುದೇ ನಾ
ಕದ ಮುಖ್ಯ ಅಂಗವಾಗಿರುತ್ತದೆ. ಆಂಗ್ಲೇಯ ಪಂಡಿ
ಶ್ರೇಷ್ಠನಾದ ಪ್ರೊಫೆಸರ್ ಬ್ಲಾಕಿ ಎಂಬಾತನು ನಾಟ
ವಿಷಯದಲ್ಲಿ ಬಹಳ ಮಟ್ಟಿಗೆ ಪರಿಶೋಧನೆಮಾ
ನಾಟಕ ರಂಗಸ್ಥಳವು ಪ್ರಜೆಗಳಿಗೆ ವಿದ್ಯಾಪೀಠವೆಂತಲ
ಅದರ ಸ್ವಾರಸ್ಯವನ್ನು ಗ್ರಹಿಸಿ ಸಂತೋಷಪಡದ
ವವನೇ ಬುದ್ಧಿಹೀನನೆಂತಲೂ ಬರೆದಿರುವನು. ಮುಖ್ಯ
ವಾಗಿ ವಿದ್ಯಾರ್ಥಿಗಳಿಗೆ ಪಾಠಶಾಲೆಯು ಹೇಗೋ ಹ
ಜನಸಮುದಾಯಕ್ಕೆ ರಂಗಸ್ಥಳವು ಇರುವುದೆಂದು ತಿಳ
ಬೇಕು. ಹೀಗಿರುವಲ್ಲಿ ನಾಟಕಾವಲೋಕನದಿಂದ ಜನ
ಕೆಡುತ್ತಿರುವರೆಂದು ಕೆಲವು ಮೂಢರು ಹೇಳಿಕೊಳ್ಳು
ತ್ತಿರುವುದನ್ನು ಯೋಚಿಸಿದರೆ ಆಶ್ಚರ್ಯವಾಗುವುದು
ನಾಟಕವನ್ನು ಒಂದು ಕನ್ನಡಿಗೆ ಹೋಲಿಸಬಹುದು
ಹೇಗೆಂದರೆ—ನೋಡಿಕೊಳ್ಳುವವರ ಆಕೃತಿಯು ದರ್ಪ
ಣದಲ್ಲಿ ಹೇಗೆ ಪ್ರತಿಫಲಿಸುವುದೋ ಹಾಗೆಯೇ
ನಾಟಕವು ಮಾನವನ ಹೃದಯದಲ್ಲಿರುವ ಸ
ಗಳನ್ನು ಹೊರಪಡಿಸಿ ತೋರಿಸಲು ಸಹಕಾರಿಯಾ
ವುದು ಶೃಂಗಾರ, ವೀರ, ಕರುಣಾ, ಅದ್ಭುತ, ಹಾ
ಮತ್ತು ಭಯಾನಕ ಮುಂತಾದ ನವರಸಗಳನ್ನು ಪಾತ್ರ
ಮುಖೇನ ಅಭಿನಯಿಸಿ ತೋರ್ಪಡಿಸುತ್ತಿದ್ದಾಗ್ಗೆ ಅ
ಗಳನ್ನವಲೋಕಿಸುವ ಪ್ರತಿಯೊಬ್ಬನಿಗೂ ಸುಖದು
ಗಳು ಮನಸ್ಸಿಗೆ ತಗುಲಿ ನಾಟಕ ಪಾತ್ರಗಳಿಗುಂಟಾ
ನಂತೆ, ಅವರಿಗೂ ಸುಖದುಃಖಗಳು ಪ್ರಾಪ್ತವಾಗುವ

ಖಂಡಿತವೆಂದು ಗ್ರಹಿಸಿ, ತಮ್ಮಲ್ಲಿದ್ದ ದುರ್ಮಾರ್ಗ, ದುರ್ನಡತೆಗಳನ್ನೆಲ್ಲ ಬಿಟ್ಟು ತಾನು ಮುಂದಕ್ಕಾದರೂ ಸನ್ಮಾರ್ಗದಲ್ಲಿ ನಡೆಯಬೇಕೆಂಬ ದೃಢಸಂಕಲ್ಪವುಂಟಾಗುವುದು. ವಿದ್ಯಾಶಾಲೆಯಲ್ಲಿ ಉಪಾಧ್ಯಾಯರು ಬಾಲಕರಿಗೆ ಹೇಳುತ್ತಿರುವ ಸದ್ಬೋಧೆಗಳನ್ನು ಬಾಯಿಪಾಠವಾಗಿ ಹೇಳಿಕೊಟ್ಟು ಸನ್ಮಾರ್ಗಗಾಮಿಗಳಾಗುವಂತೆ ಮಾಡುತ್ತಿರುವುದಕ್ಕನುಸಾರವಾಗಿ, ಕವಿಗಳು ತಮ್ಮ ಉದ್ದೇಶವನ್ನು ತಮ್ಮ ನಾಟಕಗಳ ಮೂಲಕವಾಗಿ ವಿಷಯಗಳನ್ನು ಪ್ರತ್ಯಕ್ಷವಾಗಿ ನಿದರ್ಶನಕ್ಕೆ ಬರುವಂತೆ ತೋರಿಸುವ ಉತ್ತಮ ನಾಟಕಶಾಲೆಗಳು ಪಾಠಶಾಲೆಗಳಿಗಿಂತಲೂ ಹೆಚ್ಚೆಂದು ಯಾರು ತಾನೇ ಹೇಳಲಾರರು? ಈ ಮರ್ಮವನ್ನರಿತ ವಿದ್ಯಾವಂತರೂ, ಕಾಲೇಜುಗಳಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳೂ ತಾವು ಓದಿದ ನಾಟಕಗಳನ್ನು ತಾವೇ ಅಭಿನಯಿಸಿ ಈಗಲೂ ತೋರಿಸುತ್ತಿರುವರಲ್ಲವೆ? ನಾಟಕಾವಲೋಕನವೇ ಸರಿಯಲ್ಲವೆಂದು ಹೇಳುವುದಾಗಿದ್ದರೆ ವಿದ್ಯಾವಂತರೂ ಪ್ರಜಾಪ್ರಮುಖರೂ ಸೇರಿರುವ ಸಭೆಯನ್ನು ಉಜ್ಜೀವಿಸಿರುವಂತೆ ಹಿಂದಣ ಮಹಾರಾಜರುಗಳು ಮಾಡುತ್ತಿರಲಿಲ್ಲ. ಆದುದರಿಂದ ನಾಟಕಶಾಲೆ ಎಂಬುದು ಜನಾಂಗವನ್ನು ಉತ್ತಮ ಸ್ಥಿತಿಗೆ ತರುವ ಒಂದು ಮುಖ್ಯ ಅಂಗವೆಂದು ಎಲ್ಲರೂ ಒಪ್ಪಿಕೊಳ್ಳಬೇಕಾಗಿರುತ್ತದೆ.

ಪ್ರಕೃತಕಾಲದಲ್ಲಿರುವ ನಾಟಕ ಸಂಘಗಳು ಸಂದಿಗೊಂದಿಗಳಲ್ಲಿ ಹೊರಟು ಸ್ವಲ್ಪ ಕಾಲದಲ್ಲಿಯೇ ನಾಶವಾಗಿ ಹೋಗುತ್ತಿರುವುವು. ನಾಟಕವೆನ್ನುವುದು ಹೇಗಿರಬೇಕು? ಪಾತ್ರಗಳ ಸದ್ಗುಣಗಳಾವುವು? ಅಭಿನಯಗಳು ಹೇಗಿರಬೇಕು? ಎಂಬೀ ಮೊದಲಾದ ವಿಷಯಗಳೊಂದನ್ನೂ ಯೋಚಿಸದೆ ಏರ್ಪಟ್ಟಿರುವ ನಾಟಕ ಸಂಘಗಳೇ ಹೆಚ್ಚು. ನಾಟಕ ಸಂಘಗಳಲ್ಲಿ ಸೇರಿರುವ ಜನಗಳು ವಿದ್ಯಾಹೀನರಾಗಿ ದುರ್ಗುಣಜಾಲದಿಂದ ತುಂಬಿರುವಾಗ್ಗೆ ಅವರು ಜನರಿಗೆ ಸಂತೋಷವನ್ನೂ ಸನ್ಮಾರ್ಗಾವಲಂಬನದ ದಾರಿಯನ್ನೂ ಹೇಗೆತಾನೆ ತೋರಿಸುವರು? ಪ್ರಕೃತದಲ್ಲಿ ನಾಟಕವೆನ್ನುವುದು ತಮಾಷೆಯಿಂದ ಕೂಡಿದ ಕಾರ್ಯಪ್ರದರ್ಶನವಾಗಿ ಪರಿಣಮಿಸಿದೆ. ಈ ವಿನೋದಕ್ಕೆ ಮನಸ್ಸನ್ನು ಕೊಟ್ಟು ಅವಿವೇಕಿಗಳು ಕಾಲಹರಣಮಾಡಿ, ದುಡ್ಡು ತೆತ್ತು ಕೆಟ್ಟ ವಿಷಯಗಳನ್ನು ಸಂಗ್ರಹಿಸಿಕೊಂಡು ದುರ್ಮಾರ್ಗಿಗಳಾಗುವುದರಲ್ಲಿ ಸಂಶಯವಿಲ್ಲ. ಯಾವಕಾಲದಲ್ಲಿ ಎಂತಹ ನಾಟಕಗಳನ್ನಾಡಬೇಕೆಂದು ಯೋಚಿಸದೆ ಧನಾರ್ಜನೆಗಾಗಿ ಶೃಂಗಾರ ರಸವೇ ಪ್ರಾಧಾನ್ಯವೆಂದು ತಿಳಿದು, ಅದರಿಂದ ತುಂಬಿ ತುಳುಕುತ್ತಿರುವ ಕಾಡು ಕಥೆಗಳನ್ನೇ ಪ್ರದರ್ಶಿಸಿಕೊಂಡು, ಹೆಂಗಸರನ್ನೂ ಸಹ ಸಂಘದಲ್ಲಿ ಅಭಿನಯಕ್ಕೆ ಸೇರಿಸಿಕೊಂಡಿರುವಾಗ್ಗೆ ಹೇಳತಕ್ಕದ್ದೇನಿದೆ? ನಾಟಕದಲ್ಲಿ ಪುರುಷನು ಸ್ತ್ರೀ ವೇಷವನ್ನು ಧರಿಸಬೇಕೇ ಹೊರತು, ಸ್ತ್ರೀಯೇ ಬಂದು ರಂಗಸ್ಥಲದಲ್ಲಿ ನಿಂತು ಅಭಿನಯಿಸಕೂಡದೆಂಬ ಶಾಸ್ತ್ರವಿಷಯವನ್ನು ಹೇಳಿದರೆ "ಈ ಕಥ ಮಾತು ನಮಗೆ ಬೇಡ" ಎಂದು ಹೇಳಿ ಹಾಗೆಯೇ ನಡೆಸುತ್ತಿರುವರು; ಹೀಗಿರುವಾಗ್ಗೆ ರಾಜನೇ ಬಂದು ರಾಜನ ಪಾತ್ರವನ್ನು ಏಕೆ ವಹಿಸಬಾರದು? ಎಂಬೀ ಮೊದಲಾದವನ್ನು ಮುಂದೆ ತಿಳಿಸುವೆನು. ಈ ರೀತಿಯಾಗಿ ಏರ್ಪಡಿರುವ ನಾಟಕ ಸಂಘಗಳು ಎಷ್ಟು ಕಾಲ ನಿಲ್ಲುವುವು? ಇವುಗಳಿಂದ ಪ್ರಜಾಸೇವೆಯನ್ನು ಎಷ್ಟರಮಟ್ಟಿಗೆ ಮಾಡಿದಂತಾಯಿತು? ಇಂತಹ ನಾಟಕವನ್ನು ನೋಡಲು ಹೋದ ವಯೋವಂತರ ಮನಸ್ಸೆಂಬ ಕುದುರೆಯು ವಿವೇಕವೆಂಬ ಕಡಿವಾಣವನ್ನು ಕಿತ್ತುಕೊಂಡು ನಾನಾ ಮಾರ್ಗಗಳಲ್ಲಿ ಸಂಚರಿಸಿ, ತನಗೂ ಇತರರಿಗೂ ಕೇಡುಂಟುಮಾಡುವುದರಲ್ಲಿ ಸಂದೇಹವೇನಿರುವುದು? ನಾಟಕದ ಕಂಪೆನಿಯವರು ಎಂತಹ ನಾಟಕಗಳನ್ನಾಡುವರೆಂಬುದನ್ನು ತಿಳಿದ ಹೊರತು ಸರಕಾರದವರು ಲೈಸೆನ್ಸನ್ನು ಕೊಡಬಾರದು. ಹಾಗಿಲ್ಲದಿದ್ದರೆ ಜನರು ಕೆಡುವುದಕ್ಕೆ ಸರಕಾರವು ಸಹಾಯ ಮಾಡಿದಂತೆ ಭಾವಿಸಬೇಕಾದೀತು. ಮಳೆಗಾಲ ಬಂದಾಗ್ಗೆ ಕಪ್ಪೆಗಳು ಒಟಗುಟ್ಟುವಂತೆ, ಪರ್ವ ಮಹೋತ್ಸವ ಕಾಲಗಳಲ್ಲಿ ಕೆಲಸಕ್ಕೆಬಾರದ ನಾಟಕಗಳನ್ನಾಡಿ ಪ್ರಯೋಜನವೇನು?

ನಮ್ಮ ಮಹಾರಾಜರು ಉತ್ತಮ ನಾಟಕ ಸಂಘವನ್ನು ಏರ್ಪಡಿಸಿದರೆ ಉತ್ತಮ ಕವಿಗಳು ಹೊರಪಟ್ಟು ಅವರ ಹೃದಯಾಂತರ್ಗತವಾದ ಅಮೋಘ ವಿಷಯಗಳು ಹೊರಪಟ್ಟು ಪ್ರಜಾವರ್ಗವು ಉತ್ತಮ ಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ; ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ ಪಿ ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಬೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮೀಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೨—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯ ಸಿಂಹಾಸನಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೬—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯ
ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನ
ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ
ಗಳನ್ನು ಕೊಟ್ಟಿರು
ರು. ಪ್ರಸಿದ್ಧವಾದ
ನಸ್ಯದ ಪುಡಿಯು
ಸ್ವಸ್ಥವಾಗುವ ವ್ಯಾ
ಗಳು ಯಾವವೆ
ದೆ :—ಪೀನಸಿ, ಒ
ತಲೆನೋವು, ತಲೆ
ಲ್ಲಿಯ ರೋಗಗಳ
ಕಣ್ಣುಗಳಲ್ಲಿ ಉಂಟಾ
ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ
ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಭಾ
ಗದ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ
ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರ
ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂ
ಚಿಟಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾ
ವುದು. ಇದನ್ನು ಅನೇಕಪ್ರಭುಗಳು ಉಪಯೋಗಿ
ತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ
ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[32] ಪೋ. ಬಾ. ೫೧೦, ಮದರಾ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸಹ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ.
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸಹ್ಯಾಶಾಸ್ತ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೭ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಸಿದ್ಧಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಪ್ತೋಭರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವುವು)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾನುವಾದ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri **Kashinatha Shastriji** *English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (**वीरशैवभाष्य-संस्कृत**) ...	१ रु
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ
೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ
ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ವರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸ್ಥಳೀಯವರ್ಗಿ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ. ಪರಸ್ಥಳವರ್ಗಿ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ನೇ ಜನವರಿ ೧೯೪೨ [ಸಂಚಿಕೆ ೩೮

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಕೈ|| ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಗುರುಗಳವರ ಪುಣ್ಯತಿಥಿಮಹೋತ್ಸವ, ಸೊಲ್ಲಾಪುರ.

ಯಾವ ಮಹಾತ್ಮನು ಸನಾತನಧರ್ಮಗಳಿಗೆ ಭಾಗಧೇಯರೂಪನಾಗಿ ಅವತರಿಸಿ ಶ್ರೀಮದುಜ್ಜಯಿನೀ ಸದ್ಧರ್ಮಪೀಠವನ್ನಾರೋಹಿಸಿ ಧರ್ಮೋದ್ಧಾರಪೂರ್ವಕವಾಗಿ ಅನಂತಾದ್ಭುತಲೀಲೆಗಳಿಂದ ದ್ವಿತೀಯ ದಾರುಕನೆಂದು ಜಗತ್ತನ್ನು ಬೆರಗುಗೊಳಿಸಿ ಕೈಲಾಸವನ್ನು ಸೇರಿ ೬ ವರ್ಷಗಳಾಗಿದ್ದರೂ ಇಂದಿಗೂ ಯಶಃಕಾಯದಿಂದ ಸರ್ವರ ಸ್ಮರಣಪಥದಲ್ಲಿ ಸಂಚರಿಸುತ್ತಿರುವನೋ ಅಂತಹ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಗುರುವರೇಣ್ಯರ ಪುಣ್ಯತಿಥಿಯ ಸಮಾರಂಭೋತ್ಸವವನ್ನು ಸೊಲ್ಲಾಪುರದ ಅಖಿಲ ಭಕ್ತಮಾಹೇಶ್ವರರು ಪುಷ್ಯ ಬ|| ೪ ತಾ|| ೬-೧-೧೯೪೨ ನೆಯ ಮಂಗಳವಾರದಿವಸ ನೆರವೇರಿಸಿದ ವಿಷಯವು ವರ್ಣನೀಯವಾಗಿರುವದು. ಈ ಮಹೋತ್ಸವ ಸಮಾರಂಭಕ್ಕೆ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಗುರುಗಳವರು ಸೊಲ್ಲಾಪುರದಲ್ಲಿ ಮುಕ್ಕಾಂಮಾಡಿರುವುದು ಬಂಗಾರಕ್ಕೆ ಕುಂದಣವನ್ನು ಕೊಟ್ಟಂತಾಯಿತು. ಇದು ಸೊಲ್ಲಾಪುರದ ಭಕ್ತಮಾಹೇಶ್ವರರ ಮಂಗಲಭಾಗ್ಯವೆಂದು ಹೇಳಲು ಆನಂದವಾಗುತ್ತಿರುವುದು. ಆ ದಿವಸ ಪ್ರಾತಃಕಾಲ ಶ್ರೀಜಗದ್ಗುರು ಮಹಾಸಂಸ್ಥಾನದಲ್ಲಿಯೂ ವಿಶೇಷ ಪೂಜೋತ್ಸವವಿದ್ದುದಲ್ಲದೆ ಪ್ರತಿಯೊಬ್ಬ ಭಕ್ತಮಾಹೇಶ್ವರರ ಮನೆಮಠಗಳಲ್ಲಿಯೂ ಕೈ|| ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಮೂರ್ತಿಗೆ ರುದ್ರಾಭಿಷೇಕಪೂರ್ವಕವಾಗಿ ಮಹಾಪೂಜೆಯೂ ಆ ಮಹಾಮಹಿಮನ ಅಷ್ಟೋತ್ತರಶತನಾಮಾವಳಿ ಪಠನವೂ ಅತಿಥಿಗಳಿಗೆ ಅನ್ನದಾನಸಂಭ್ರಮವೂ ಆನಂದಕರವಾಗಿ ನಡೆದಿತ್ತು. ಅಂದು ಶ್ರೀಮಾನ್ ಪಟೇಲ್ ದಾನಪ್ಪನವರೂ ಅವರ ಧರ್ಮಪತ್ನಿಯವರಾದ ಸೌ|| ಗಂಗಾಬಾಯಿಯವರೂ ಕೈ|| ಜಗದ್ಗುರುಗಳವರ ಪುಣ್ಯತಿಥಿ ಸೇವಾಸಮಾರಂಭವನ್ನು ಭಕ್ತಿಪೂರ್ವಕವಾಗಿ ತಮ್ಮ ಮನೆಯಲ್ಲಿಯೇ ನೆರವೇರಿಸಲು ಉತ್ಕಂಠಿತರಾಗಿ ಮೊದಲೇ ಬಿನ್ನಹವನ್ನು ಮಾಡಿಕೊಂಡಿದ್ದಂತೆ ಶ್ರೀ ರಂಭಾಪುರೀ ಜಗದ್ಗುರುಗಳನ್ನು ಅಖಿಲ ಬಿರುದಾವಳಿಗಳೊಡನೆ ಮಹೋತ್ಸವದಿಂದ ತಮ್ಮ ಗೃಹಕ್ಕೆ ಬಿಜಯಮಾಡಿಸಿಕೊಂಡುಹೋಗಿ ಬಂಧುಬಾಂಧವರೊಡನೆ ಮಹಾಪಾದಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ಸೇವಿಸಿ ಗಣತೃಪ್ತಿಯೊಡನೆ ಮಹಾಗುರುಕಾಣಿಕೆಯನ್ನು ಸಮರ್ಪಿಸಿ ಕೃತಾರ್ಥರಾದರು. ನಗರದೇವತೆಗಳಾದ ಶ್ರೀ ರೇವಣಸಿದ್ಧೇಶ್ವರ, ಶ್ರೀಮಲ್ಲಿಕಾರ್ಜುನ, ಶ್ರೀ ಸಿದ್ಧರಾಮೇಶ್ವರಮೂರ್ತಿಗಳಿಗೆ ರುದ್ರಾಭಿಷೇಕಪೂಜೆಗಳೂ ನೆರವೇರಿದವು. ಯಾವ ಪೇಟೆಯಲ್ಲಿ ನೋಡಿದರೂ ಕೈ|| ಜಗದ್ಗುರುಗಳವರ ಪೂಜಾನಾಮಾವಳಿಪಠನ ಲೀಲಾಸ್ಮರಣಸಂಕಥಾಕಥನಗಳೇ ಸಾಗಿದ್ದವು. ಮತಾಂತರದವರೂ ಸಹ ಮಹಾಮಹಿಮನ ಮಹೋತ್ಸವದಲ್ಲಿ ಭಾಗಿಗಳಾಗಿದ್ದುದನ್ನು ನೋಡಿದರೆ ಆ ಪ್ರಭುವಿನ ತಪಃಪ್ರಭಾವವು ಜಗದ್ವಂದ್ಯವೆಂದು ಹೇಳಲು ಅಡ್ಡಿಯಿಲ್ಲ. ಸಾಯಂಕಾಲಕ್ಕೆ ಶ್ರೀ ಮಲ್ಲಿಕಾರ್ಜುನಸ್ವಾಮಿಯ ಮಂದಿರದಲ್ಲಿ ಶ್ರೀ ೧೦೮ ಜಗದ್ಗುರು ರಂಭಾಪುರೀ ಮಹಾಚಾರ್ಯರ ಸನ್ನಿಧಾನದಲ್ಲಿ ಸಭೆಯು ಕೂಡಿತು. ಸಮಸ್ತ ಭಕ್ತರ ಪ್ರಾರ್ಥನೆಯಮೇರೆಗೆ ಶ್ರೀ ರಂಭಾಪುರೀ ಜಗದ್ಗುರುಗಳವರು ಸಂಸ್ಕೃತಪಾಠಶಾಲಾ ವಿದ್ಯಾರ್ಥಿಗಳ ವೇದಘೋಷದೊಡನೆ ಮಹೋತ್ಸವದಿಂದ ಸಭಾಸ್ಥಾನಕ್ಕೆ ದಯಮಾಡಿಸಿ ಸಿಂಹಾಸನವನ್ನಾರೋಹಿಸಿದರು. ಕಲಿಕಾಲದಲ್ಲಿಯೂ ಸದ್ಧರ್ಮವನ್ನು ಬಿಡದೆ ಅತ್ಯುತ್ಸಾಹದಿಂದ ಜರುಗಿಸುತ್ತಿರುವ ಸೊಲ್ಲಾಪುರದ ಭಕ್ತಮಂಡಳಿಯ ಉಲ್ಲಾಸವನ್ನು ನೋಡಿ ಪೂರ್ವದ ಸೇವಾಸತ್ಕಾರದ ಅನುಭವದಿಂದ ಆನಂದಿಸಬೇಕೆಂದು ಲೀಲಾಮೂರ್ತಿಗಳಾದ ಕೈ|| ಜಗದ್ಗುರು ಸಿದ್ಧಲಿಂಗಶಿವಾಚಾರ್ಯರವರು ದಯಮಾಡಿಸಿದ್ದಾರೆಯೋ ಏನೋ ಎನ್ನುವಂತೆ ಸಿದ್ಧರಾಮಪ್ಪ ವಾಕಳೆ ಇವರು ಭಕ್ತಿಪೂರ್ವಕವಾಗಿ ಬರೆಯಿಸಿದ್ದ ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯರ ದಿವ್ಯಪ್ರತಿಮೆಯು ಪ್ರತ್ಯಕ್ಷ ಗುರುವಿನಂತೆ ಮಹಾಲಂಕಾರದಿಂದಲಂಕೃತವಾಗಿ ಸಿಂಹಪೀಠದಲ್ಲಿ ಕಂಗೊಳಿಸುತ್ತಿತ್ತು. ಉಭಯ ಜಗದ್ಗುರುಗಳವರ ಮುಂಭಾಗದಲ್ಲಿ ಹೋಟಗಿ ಶ್ರೀಗಳು, ಬಾರ್ಸಿ ಪರಾಂಡೆಕರಸ್ವಾಮಿಗಳು, ಜೈನಾಪುರ, ಜೇವರಗಿ, ಸುತ್ತಗಟ್ಟಿ, ಮುಂತಾದ ಗ್ರಾಮಗಳ ಶ್ರೀ ಪಟ್ಟಾಧಿಕಾರಿಗಳು, ವೇ|| ಪಂಡಿತ ಸಂಸ್ಕೃತ ಪಾಠಶಾಲಾಧ್ಯಾಪಕ ಸಾಹಿತ್ಯರತ್ನ ಜಗದೀಶಶಾಸ್ತ್ರಿಗಳವರೂ, ಧರ್ಮರತ್ನ ಮಣೂರು ಮಲ್ಲಿಕಾರ್ಜುನಶಾಸ್ತ್ರಿಗಳವರೂ, ಸುಣಕಲ್ಲಬಿದರೆ ಆಸ್ಥಾನವಿದ್ವಾನ್ ಪುರಾಣರತ್ನ ಬಸವಲಿಂಗಶಾಸ್ತ್ರಿಗಳೂ ಮುಂತಾದ ವಿದ್ವನ್ಮಂಡಳಿಯು ರಾರಾಜಿಸುತ್ತಿತ್ತು. ಸೊಲ್ಲಾಪುರದ ವೀರಶೈವ ಸ್ತ್ರೀ ಪುರುಷ ಸಮಾಜವೆಲ್ಲವೂ ಆಗಮಿಸಿ ಸಭೆಗೆ ವಿಶೇಷ ಶೋಭೆಯನ್ನುಂಟುಮಾಡಿತ್ತು. ಆರಂಭದಲ್ಲಿ ಬಾಲಬಾಲಿಕೆಯರ ಸಂವಾದರೂಪ ಪ್ರಾರ್ಥನಾಗಾಯನವು ಆಯಿತು. ಬಳಿಕ ಶ್ರೀ|| ಷ|| ಬ್ರ|| ಪರಾಂಡೆಕರ ಸ್ವಾಮಿಗಳವರು, ವೇ|| ಸಂಸ್ಕೃತಪಾಠಶಾಲಾ ಪ್ರಧಾನಾಧ್ಯಾಪಕ ಸಾಹಿತ್ಯರತ್ನ ಜಗದೀಶಶಾಸ್ತ್ರಿಗಳವರು, ವೇ|| ಧರ್ಮರತ್ನ ಮಣೂರು ಮಲ್ಲಿಕಾರ್ಜುನಶಾಸ್ತ್ರಿಗಳವರು, ವೇ|| ಆಸ್ಥಾನವಿದ್ವಾನ್ ಪುರಾಣರತ್ನ ಸುಣ್ಣಕಲ್ಲಬಿದರೆ ಬಸವಲಿಂಗಶಾಸ್ತ್ರಿಗಳು, ವಿದ್ಯಾರ್ಥಿ ಮೊರಬದ ಬಾಲಬೃಹಸ್ಪತಿ ಶ್ರೀ ಗಂಗಾಧರಶಿವಾಚಾರ್ಯರು, ಸೌ|| ಭಾಗೀರಥೀಬಾಯಿಯವರು ಮೊದಲಾದವರು ಕೈ|| ಜಗದ್ಗುರುಗಳವರ ಅತುಲಕ್ರಿಯಾಸಿದ್ಧಿಪ್ರಭೆಯನ್ನು ಅನುಭೂತವಿಷಯಗಳಿಂದ ವರ್ಣಿಸಿದರು. ಅನಂತರ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ವೇದಾಗಮಸಮ್ಮತ ಸತ್ಕ್ರಿಯೆಯುಳ್ಳ ಮಹಾಮಹಿಮರ ಬ್ರಹ್ಮಚರ್ಯದಿಂದುಂಟಾದ ಕ್ರಿಯಾಸಿದ್ಧಿಪ್ರಭಾವವನ್ನು ಸಪ್ರಮಾಣವಾಗಿ ವರ್ಣಿಸಿ ಅಂತಹ ಕ್ರಿಯಾಸಿದ್ಧಿಯು ಕೈ|| ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರಲ್ಲಿತ್ತೆಂಬುದಕ್ಕೆ ಅವರ ಅನಂತಲೀಲೆಗಳೇ ಪ್ರಮಾಣಗಳಾಗಿವೆ. ಅಲ್ಲದೆ ಆ ಮಹಾಚಾರ್ಯರಲ್ಲಿ ಪೂಜಾನಿಷ್ಠೆ, ಸಹನಶಕ್ತಿ, ಕಾರ್ಯದಕ್ಷತೆ, ಧರ್ಮೋದ್ಧಾರಬುದ್ಧಿ, ಮಂದಹಾಸಮಾತ್ರದಿಂದಲೇ ದೀನೋದ್ಧಾರಣ, ಸತ್ಯಶೀಲತಾ ಮುಂತಾದ ದೈವೀಗುಣಗಳು ಮನೆಮಾಡಿಕೊಂಡಿದ್ದವು. ಆ ತಪೋನಿಧಿಗಳು ವೀರಶೈವರ ಮರವೆಗಾಸ್ಪದವಾಗಿದ್ದ ಶ್ರೀಕೇದಾರ ಜಗದ್ಗುರು ಪೀಠವನ್ನು ಜೀರ್ಣೋದ್ಧಾರಗೈದು ವಂದ್ಯರಾಗಿದ್ದುದಲ್ಲದೆ ನಾಲ್ಕು ವರ್ಷಗಳಿಂದ ಅನಾಥವಾಗಿದ್ದ ನಮ್ಮ ಪೀಠವೂ ಸಹ ಕುಟಿಲರ ಕುತಂತ್ರಗಳಿಂದ ಶೋಚನೀಯಸ್ಥಿತಿಗೆ ಬಂದುದನ್ನು ಕಂಡು ತಳಮಳಗೊಂಡು ಉಗ್ರವ್ರತವನ್ನಾಚರಿಸಿ ತದ್ದ್ವಾರಾ ಮೋಸಗಾರರ ಮಾಯೆಯನ್ನು ಬೈಲಿಗೆಳೆದು ಅವರನ್ನು ನಿಜೀವಶವಗಳನ್ನುಮಾಡಿ ದಿಗಂತವಿಶ್ರಾಂತಕೀರ್ತಿಯನ್ನು ಪಡೆದವಲ್ಲದೆ ಮೈಸೂರು ಶ್ರೀಮನ್ಮಹಾರಾಜ ಶ್ರೀಕೃಷ್ಣಪ್ರಭುವರ್ಯರಿಗೆ ತಮ್ಮ ತಪಸ್ಸಾಹಸವನ್ನು ಮನನಮಾಡಿಕೊಟ್ಟು ನಮ್ಮಗಳನ್ನು ಶ್ರೀಜಗದ್ಗುರು ಪೀಠವನ್ನಾರೋಹಣಗೈಸಿ ಜೀರ್ಣೋದ್ಧಾರವನ್ನು ಮಾಡಿದ ಸಂಗತಿಯು ಸುವರ್ಣಾಕ್ಷರಗಳಿಂದ ಬರೆದಿಡುವಂಥದಾಗಿರುವುದು. ಇಂತಹ ಗುರುಸಾರ್ವಭೌಮ ಕೈ|| ಜಗದ್ಗುರು ಸಿದ್ಧಲಿಂಗಶಿವಾಚಾರ್ಯವರ್ಯರ ಪುಣ್ಯತಿಥಿ ಮಹೋತ್ಸವದಲ್ಲಿ ನಾವು ಭಾಗಿಗಳಾಗಿರುವೆವೆಂಬುದು ಅತ್ಯಂತ ಆನಂದಕರವಾಗಿರುವುದು. ಶ್ರೀಮದ್ರಂಭಾಪುರೀ ವೀರಪೀಠವನ್ನಾರೋಹಿಸಿದ ಕಾಲ ಮೊದಲ್ಗೊಂಡು ಇದುವರೆವಿಗೂ ನಮ್ಮ ವಿಜಯಯಾತ್ರೆಯಲ್ಲಿ ಸುಳಿಯುತ್ತಿರುವ ಕುತ್ಸಿತರ ಕೌಟಿಲ್ಯಗಳು ಆ ತಪೋನಿಧಿಯು ಉಜ್ವಲಗೊಳಿಸಿದ ಧೈರ್ಯಸಾಹಸಾನುಷ್ಠಾನಪ್ರಭಾವದಿಂದಲೇ ಶಾಖೋಪಶಾಖೆಗಳಿಂದ ಹೀನಗಳಾಗಿ ನಾಶೋನ್ಮುಖತೆಯನ್ನು ಹೊಂದಲು ಅಭ್ಯಂತರವಿಲ್ಲ. ಅಂತಹ ಉಜ್ವಲ ತಪೋನಿಧಿಯೂ ಕರುಣಾಮೂರ್ತಿಯೂ ಆದ ಮಹಾಗುರುವಿನ ಪುಣ್ಯತಿಥಿಯ ಮಹೋತ್ಸವವನ್ನು ಮಾಡುವದರಲ್ಲಿ ಅತ್ಯುತ್ಸಾಹಿಗಳಾಗಿರುವ ನಿಮ್ಮಗಳಿಗೆ ಶ್ರೀಜಗದ್ಗುರು ಪಂಚಾಚಾರ್ಯವರೇಣ್ಯರು ವಿಜಯಾಯುರಾರೋಗ್ಯೈಶ್ವರ್ಯಗಳನ್ನಿತ್ತು ರಕ್ಷಿಸುತ್ತಿರಲೆಂದು ಆಶೀರ್ವದಿಸಿ ವೇಳೆಯಾದ್ದರಿಂದ ಸಭಾವಿಸರ್ಜನೆಗೆ ಅಪ್ಪಣೆಯನ್ನು ದಯಪಾಲಿಸಿದರು. ಅನಂತರ ಮಹಾಮಂಗಳಾರತಿಯಾಗಿ ಪಂಚಾಚಾರ್ಯರ ಜಯಘೋಷದಿಂದ ಸಭೆಯು ವಿಸರ್ಜಿತವಾಯಿತು. ತಾ|| ೭-೧-೪೨ ಬುಧವಾರ ಸಾಯಂಕಾಲ ಮಲ್ಲಿಕಾರ್ಜುನಸ್ವಾಮಿ ದೇವಾಲಯದಲ್ಲಿಯೇ ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಮಹಿಳಾಪರಿಷತ್ತು ಕೂಡಿತು. ಪೂರ್ವದಿವಸದಂತೆ ಅನೇಕ ಶ್ರೀಮಂತ ಹೆಣ್ಣುಮಕ್ಕಳೂ ಅನೇಕ ಮಹಾಶಯರೂ ಸಭೆಯನ್ನಲಂಕರಿಸಿದ್ದರು. ಆರಂಭದಲ್ಲಿ ರುದ್ರಮುನಿ ಮಾಳಗೆ ಸೌ|| ಸುಗ್ಗಲಾದೇವಿ ತಮಶೆಟ್ಟಿ ಇವರೇ ಮೊದಲಾದ ಬಾಲಕಬಾಲಿಕೆಯರ ಸಂವಾದರೂಪ ಪ್ರಾರ್ಥನಾಗಾನವೂ ಗಂಗಾಬಾಯಿ ಕಟಾಪ ಇವರೇ ಮೊದಲಾದ ಬಾಲಿಕೆಯರ ಟಿಪರಿ ಆಟವೂ ಆಯಿತು. ಆಮೇಲೆ ಶ್ರೀ|| ಷ|| ಬ್ರ|| ಬಾಲತಪಸ್ವ

ಹೊಟಗಿ ಶ್ರೀಗಳು, ಶ್ರೀ|| ಷ|| ಬ್ರ|| ಬಾರ್ಸಿ ಪರಾಂಡ ಕರಸ್ವಾಮಿಗಳವರು, ಶ್ರೀ|| ಷ|| ಬ್ರ|| ಜೈನಾಪುರ ಚರ ಪಟ್ಟಾಧ್ಯಕ್ಷರು ವೇ|| ಆಸ್ಥಾನವಿದ್ವಾನ್ ಪುರಾಣರತ್ನ ಬಸವಲಿಂಗಶಾಸ್ತ್ರಿಗಳು, ಸೌ|| ಭಾಗೀರಥೀಬಾಯಿಯವರು ಕಟಾಪ ಶ್ರೀಮತಿ ಗುರವ್ವಾಬಾಯಿ ಮರಪತ್ತಿ ಇವರ ಉಪನ್ಯಾಸಗಳಾದವು ಅನಂತರ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಸ್ತ್ರೀಧರ್ಮರೀತಿಗಳನ್ನು ಸಪ್ರಮಾಣವಾಗಿ ಉಪದೇಶಿಸಿ ಈ ಸದಾಚಾರ ಸ್ತ್ರೀಸಮಾಜವು ದಿನೇ ದಿನೇ ಅಭಿವೃದ್ಧಿಯನ್ನು ಹೊಂದಲೆಂದು ಆಶೀರ್ವದಿಸಿ ಸಭಾವಿಸರ್ಜನೆಗೆ ಅಪ್ಪಣೆಯನ್ನು ದಯಪಾಲಿಸಿದರು ಅನಂತರ ಮಹಾಮಂಗಳಾರತಿಯಾಗಿ ಆಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಓರ್ವ ಪ್ರೇಕ್ಷಕ

ಕೈ|| ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ ಮಹೋತ್ಸವ, ಕೊಟ್ಟೂರು.

೨೪/೧ ಡಿ|| ಕೊಟ್ಟೂರು ಪಟ್ಟಣದಲ್ಲಿರುವ ಶ್ರೀ ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆಯಲ್ಲಿ ಇದೇ ಪುಷ್ಯ ಬ|| ೪ ಮಂಗಳವಾರ ಉದಯ ೮ ಗಂಟೆಗೆ ಪಾಠಶಾಲಾಧ್ಯಾಪಕರಾದ ವೇ|| ಪಿ ಎಂ ಶಿವಪ್ರಸಾದಶಾಸ್ತ್ರಿಗಳು ವಿದ್ಯಾರ್ಥಿಗಳೊಡನೆ ಶ್ರೀ ಜಗದ್ಗುರುಗಳವರ ದಿವ್ಯ ಭವಚಿತ್ರಕ್ಕೆ ವಿಧ್ಯುಕ್ತವಾಗಿ ಅರ್ಚನೆಯನ್ನು ನೆರವೇರಿಸಿದರು ತರುವಾಯ ಸದರಿ ಪಾಠಶಾಲಾ ಸ್ಥಾಪಕರಾದ ಶ್ರೀ ಬೂತಭುಜಂಗಸ್ವಾಮಿಗಳವರು ಗ್ರಾಮದ ಪ್ರಮುಖರನ್ನೆಲ್ಲಾ ಕರಯಿಸಿ, ಶ್ರೀ ಜಗದ್ಗುರುಗಳವರ ಪುಣ್ಯದಿನವನ್ನು ಪ್ರತಿ ಸಂವತ್ಸರವೂ ತಪ್ಪದೆ ಆಚರಿಸಬೇಕೆಂದು ಬೋಧಿಸಿದರು ಬಳಿಕ ಪಾಠಶಾಲಾಧ್ಯಾಪಕರು ಶ್ರೀ ಜಗದ್ಗುರುಗಳವರು ನಾನಾರೂಪವಾದ ಮಹಿಮಾ ಪ್ರಭಾವಗಳನ್ನೂ ಮತ್ತು ರಂಭಾಪುರೀ ಪೀಠದ ನೂತನಾಧಿಕಾರವಾಗುವ ಕಾಲಕ್ಕೆ ಕೈ|| ಜಗದ್ಗುರುಗಳು ಮತ್ತು ಶ್ರೀಕಾಶೀನಾಥಶಾಸ್ತ್ರಿಗಳವರು ವಿಶೇಷ ಶ್ರಮವಹಿಸಿ, ಆ ಮಹಾಕಾರ್ಯವನ್ನು ದಿಗ್ವಿಜಯಗೊಳಿಸಿ ಲೋಕದಲ್ಲಿ ಪರಮ ಯಶೋನ್ವಿತರಾದ ವಿಷಯವನ್ನೂ ಹೇಳಿದರು ಅನಂತರ ಸರ್ವ ಭಕ್ತಾದಿಗಳೂ "ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾರಾಜಕೀ ಜೈ" ಎಂಬ ಜಯಘೋಷವನ್ನು ಮಾಡಿದರು ಬಳಿಕ ಸಭೆಯು ಸಮಾಪ್ತಿಗೊಂಡಿತು

ವೀರಶೈವ ಮಂಡಲಿ, ಕೊಟ್ಟೂರ

ಶ್ರೀಜಗದ್ಗುರು ಕೇದಾರಸಿಂಹಾಸನಕ್ಕೆ ಪೂರ್ವಕಾಲದಲ್ಲಿ ಜಹಗೀರಾಗಿದ್ದ ಗ್ರಾಮಗಳು.

(ಪ್ರಾಚೀನ ದಾಖಲೆಗಳಿಂದ ಶೋಧಿಸಿ ತೆಗೆದುದು.)

(೮೯—ಕೈಲಾಸಲಿಂಗಶಿವಾಚಾರ್ಯರು)

೧ ಉಷಾಮಠ
೨ ಬಟವಾಡೀ
೩ ಮಂಗೋಲಿ
೪ ಸೇಲಸಾರಿ
೫ ಸಟಾಳಿ
೬ ಜೂಸಿ
೭ ಕವಾಣಾ
೮ ಕನಾಲಾ
೯ ಡೂಂಗರ
೧೦ ಫೈಂಜ
೧೧ ರೇವಿಶಾ
೧೨ ಧಾರಶೀಮಾ
೧೩ ಕಂಥಾ
೧೪ ಧಕಲಾಸೀ
೧೫ ಬ್ಯೆಣಗಾಂವ
೧೬ ಓಸೀಜ ರಾ
೧೭ ಫೈಸಾರಿ
೧೮ ಗಿರಿಯಾ
೧೯ ಗುಪ್ತಕಾಶೀ
೨೦ ನಾಡೀ
೨೧ ಪಾಲೀ
೨೨ ದಿಲ್ಮೀ
೨೩ ರಡೂ
೨೪ ಆಶ್ರಮ
೨೫ ಸಾಂಕರೀ
೨೬ ಲೀಂಕ್
೨೭ ಬಾಜೀ
೨೮ ಬೂರ್ನಾ
೨೯ ಪಾವ
೩೦ ಗಜಪೂಡ
೩೧ ಕುಂಡಾಲ್ಯಾ
೩೨ ಹಪ್ರೋಸೀ
೩೩ ರಾವ
೩೪ ಛಾಪರಂಜ
೩೫ ಗಡಗೂ
೩೬ ಗೈತ
೩೭ ಗೊಂಡಾರ
೩೮ ಕಲಗೋಡಾ
೩೯ ಖುರಾನೀ
೪೦ ಜಗೀ
೪೧ ಫಲೀ
೪೨ ಸಾಧನಾ
೪೩ ಕಪಿಲ್ಟಾ
೪೪ ಬಿಹೌಲಾ
೪೫ ರೇಲ್
೪೬ ಸಿಮಲಿ
೪೭ ಕೊರಖೀ
೪೮ ಖಾಟ
೪೯ ಚಮೋಲಿ
೫೦ ಗವಾಹಾ
೫೧ ಖುನೇರಾ
೫೨ ಕೋಕೇಲೀ
೫೩ ಬಣಸೂ
೫೪ ತಿವದೀ
೫೫ ಸಂಲಾ
೫೬ ಗೈರ್
೫೭ ವಸ್ತೀ
೫೮ ಬಾರಾಕೋಟ
೫೯ ಪಾಡ್ಲೀ
೬೦ ಆಪೂಡ
೬೧ ಪೆಡವಾ
೬೨ ಹರಸೂಡ
೬೩ ಪಾಲ
೬೪ ಕಾಂಡೀ

ಇಷ್ಟು ಗ್ರಾಮಗಳು ಗಢವಾಲ ಜಿಲ್ಲೆಯಲ್ಲಿದ್ದವು.

೬೫ ಮುಖ್ಯಮಂಡಲ
೬೬ ನೃಣೀ
೬೭ ಉಷ್ಪಾಲಯ
೬೮ ಸಪಾದವ್ರೂ
೬೯ ಶಿರಾಡೀ
೭೦ ಬಧಾಣೀ
೭೧ ಗಾಡಖೇತ
೭೨ ಬಸೀಖೇತ
೭೩ ತ್ಯಾಗರಾವೂ
೭೪ ಬಡಾಣೀ
೭೫ ಮುಂಡಚೋರೀ
೭೬ ಲೇಟ್ಲೀ
೭೭ ಓಕುಡೀ
೭೮ ಕುಲಸಾರೀ
೭೯ ಹಿವಚಡಾ
೮೦ ಒಗೇಡ
೮೧ ಕಾಂಡೆ
೮೨ ಉಗರಾ
೮೩ ವಾಲೀ
೮೪ ದಪ್ರೋಲಾ
೮೫ ಪಾಯಿಸಾಬಗಡ
೮೬ ಬಲಗಡೀ
೮೭ ತೇಲಾಪದೀ
೮೮ ತ್ರಿಪಾಲೀ
೮೯ ರಿಖಾಣೀ
೯೦ ಗುರಿಯಾಣೂ
೯೧ ಅಮಾಡ
೯೨ ಚಟಗಲ್ಲ
೯೩ ಉಖರೋಡ
೯೪ ಜೋಗವಾಸ
೯೫ ರಣಕೋಟ
೯೬ ಖಿತಾಪುಲೋ
೯೭ ತಪಸೀಬಗಡ
೯೮ ಕಪ್ಯ
೯೯ ದೇವ್ರಾತಡೀ
೧೦೦ ವಟಯಾತಖೇತ
೧೦೧ ಮಡವಾನೀ
೧೦೨ ಅಸೀರೇತ
೧೦೩ ಕುನೋಲಗಾವ
೧೦೪ ಜಲಕಾಯಿ
೧೦೫ ಸ್ಯಾತಶಿಲಂಗೀ
೧೦೬ ಜಟೋರಿತೇಲಾ
೧೦೭ ಪೊಣಗಾಂವ
೧೦೮ ಕುಮಾವ್ರುಕುಡೊ
೧೦೯ ಮೊಲಾಧಾರ
೧೧೦ ಮುಜೇರ
೧೧೧ ಬಾರಾ
೧೧೨ ಸುಸತ್ಯಾನೀ
೧೧೩ ಕಲಿಕಾ
೧೧೪ ಡೊತಾಡೀ
೧೧೫ ಬಾಸ
೧೧೬ ಸದ್ಯಾಡಾ
೧೧೭ ಅಬಲಾಗಡ
೧೧೮ ತೋದಪುಡ
೧೧೯ ಸ್ಯಾಲಂ
೧೨೦ ಬೋರಾಕೋಟ
೧೨೧ ಬ್ಯಾಮಲೊ
೧೨೨ ಕಲ್ಯಾಣಪುರ

ಇಷ್ಟು ಗ್ರಾಮಗಳು ನೈನೀತಾಲ ಜಿಲ್ಲೆಯಲ್ಲಿದ್ದವು

೧೨೩ ದೇವೂಖಾಡ
೧೨೪ ಶ್ಯಾಡಾನೀ
೧೨೫ ಕಾಲೋರಿ
೧೨೬ ದ್ಯೋತಡೀ
೧೨೭ ದೋಲಡಿ
೧೨೮ ಬೆಲಕಡಿ

ಇಷ್ಟು ಗ್ರಾಮಗಳು ಕುಮಾವೂ ದಾನಪೂರ್ ಪರಗಣೆಯಲ್ಲಿದ್ದವು

೧೨೯ ವಾರೀ
೧೩೦ ಜೌಡೊ
೧೩೧ ತಿಮಿಲೊ
೧೩೨ ಮೈರಸಿ
೧೩೩ ಸುಲಿಯೊಡೊ
೧೩೪ ಮಸ್ತೋಲಿ
೧೩೫ ಮೌನ
೧೩೬ ಮುಥಾಲು
೧೩೭ ಪುನಡೊ
೧೩೮ ಗಾಡೊ
೧೩೯ ಮೊಜೊ
೧೪೦ ಖೈಕ
೧೪೧ ಬಾಸ
೧೪೨ ನದ್ಯಾಡಾ
೧೪೩ ಸಾತಸಿಲೇಗೀ
೧೪೪ ಕಾತೇಲಾ
೧೪೫ ಕುಮಾವೂಕೂಡೀ
೧೪೬ ಮೋಲಾಧರ
೧೪೭ ಮುಜೇರಖಾಂಡಿ
೧೪೮ ಬಾಸ
೧೪೯ ಜೋಲಬಕಡೊಂಗರಿ
೧೫೦ ಆಸ್ರೇತ್
೧೫೧ ಪತಾಡೀ
೧೫೨ ಲೋದಪುಡೊ
೧೫೩ ಸಾಖೋಲೀ
೧೫೪ ಪಾಲ್ಡಿಗಾಂವ
೧೫೫ ಮುಖ್ಯಮಂಡಲ
೧೫೬ ನೈಲಿ
೧೫೭ ಉಜ್ವಲದಾ
೧೫೮ ಘಾಸದೇವೂ
೧೫೯ ಸೌರಾಡೀ
೧೬೦ ಬಸ್ಯಾ
೧೬೧ ಗಾಯಖೇತ
೧೬೨ ಬಸಖೇತ
೧೬೩ ಶಾಲಾಗಾರಾ
೧೬೪ ಜಟಾಖಾ
೧೬೫ ಮುಡಿಚೌರು
೧೬೬ ಲೇಲ್ಯಾ
೧೬೭ ಪೈಕೂಡೀ
೧೬೮ ಕಲಸಾರೀ
೧೬೯ ಕೊವುಚಡಾ
೧೭೦ ಬಾಗಡ
೧೭೧ ಕಾಡಿ
೧೭೨ ಲುಗಾಡಾ
೧೭೩ ಧಪ್ರೋಲಾ
೧೭೪ ಮುಹಿಬಗಡ
೧೭೫ ಬಲಗಾಡಿ
೧೭೬ ತಿಲತಡೀ
೧೭೭ ತ್ರಿಫಾಲೀ
೧೭೮ ರೋಪಾನೀ
೧೭೯ ಗುವಾನೂ
೧೮೦ ಅಮತೇಡ
೧೮೧ ಚೋಟಗಲ
೧೮೨ ಉಖಗಡಿ
೧೮೩ ಜೋಗವಾಸ
೧೮೪ ರಸಮುಕೂಟ
೧೮೫ ಮಿತಾವಲಿ
೧೮೬ ತಪಸಿಬಗಡ
೧೮೭ ಖಿಟ್ಟೆ
೧೮೮ ದೇವತಡಿ
೧೮೯ ವೃಡಾರಖೇತ
೧೯೦ ಭಂಡಾರನಿ
೧೯೧ ಧಾಪಲಿ
೧೯೨ ಭೋಗಕೋಟ
೧೯೩ ಖರಾಯಾ
೧೯೪ ಅಬಲಾ

ಇಷ್ಟು ಗ್ರಾಮಗಳು ಕಾಲಕುಮಾವೂ ಪ್ರಾಂತದಲ್ಲಿದ್ದವು.

ಸದ್ಯಃ ಗಢವಾಲ ಡಿಸ್ಟ್ರಿಕ್ಟಿನಲ್ಲಿ ೭೦, ಆಲ್ಮೋರಾ ಡಿಸ್ಟ್ರಿಕ್ಟಿನಲ್ಲಿ ೪೩, ಡೆಹರಾಡೂನ್ ಡಿಸ್ಟ್ರಿಕ್ಟಿನಲ್ಲಿ ೨, ನೈನಿತಾಲ ಡಿಸ್ಟ್ರಿಕ್ಟಿನಲ್ಲಿ ೧, ಟೆಹರಿ ರಾಜ್ಯದಲ್ಲಿ ೨೬ ಗ್ರಾಮಗಳು, ಒಟ್ಟು ೧೪೩ ಗ್ರಾಮಗಳು ಮಾತ್ರ ಅನುಭವದಲ್ಲಿರುವವು.

ಶ್ರೀ॥ ಉಜ್ಜಯಿನೀ ಜಗದ್ಗುರುಗಳವರ ಪುಣ್ಯತಿಥಿ ಸಮಾರಂಭ, ಬಳೂರಗಿ

ಗುಲ್ಬರ್ಗಾ ಜಿಲ್ಲೆಯಲ್ಲಿರುವ ಬಳೂರಗಿ ಜಹಗೀರ ಗ್ರಾಮದಲ್ಲಿ ಮ॥ ರಾ॥ ಮಂಡಲಿಂಗಪ್ಪ ಮಾಸ್ತರ ಇವರ ಭವ್ಯಗೃಹದಲ್ಲಿ ಶ್ರೀಜಗದ್ಗುರುಗಳವರ ಪುಣ್ಯತಿಥಿಯ ಮಹೋತ್ಸವವು ಚಿಂಚೋಳಿ ಬೃಹನ್ಮಠಾಧ್ಯಕ್ಷರಾದ ಶ್ರೀರುದ್ರಮುನಿಶಿವಾಚಾರ್ಯರವರ ಅಧ್ಯಕ್ಷತೆಯಲ್ಲಿ ವಿಶೇಷ ಉತ್ಸಾಹದಿಂದ ನೆರವೇರಿತು. ಈ ಸಮಾರಂಭಕ್ಕೆ ಸ್ವರ ವೇ॥ ನೀಲಕಂಠಯ್ಯಸ್ವಾಮಿ ಪುರಾಣಿಕ ಮರ ನಿಂಬಾಳ್ಕರ್ ಇವರು ಆಗಮಿಸಿದ್ದರು. ಶ್ರೀಪಟ್ಟಾಧ್ಯಕ್ಷರಾದ ಶ್ರೀಸಿದ್ಧಲಿಂಗ ಜಗದ್ಗುರುಗಳ ಭಾವಚಿತ್ರವನ್ನು ಮಂಟಪದ ಮಧ್ಯಭಾಗದಲ್ಲಿ ಸ್ಥಾಪಿಸಿ ಎಡಬಲಭಾಗದಲ್ಲಿ ಹೋಟಗಿ ಶ್ರೀಗಳವರ ಮತ್ತು ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋಗಳನ್ನು ಇಟ್ಟಿದ್ದರು. ರುದ್ರಾಭಿಷೇಕವಾದಮೇಲೆ ಗಣಸಂತರ್ಪಣೆಯಾಯಿತು. ರಾತ್ರಿ 10 ಘಂಟೆಗೆ ಶ್ರೀಪುರಾಣಿಕವರ ನಿಂಬಾಳ್ಕರ್ ಇವರ, ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಕೀರ್ತನವನ್ನು ಬಹು ಮನೋಹರವಾಗಿ ಹೇಳಿದರು. ಈ ಕೀರ್ತನಶ್ರವಣಕ್ಕಾಗಿ ಗ್ರಾಮಾಧಿಕಾರಿಗಳಾದ ಮ॥ ಸೈಯ್ಯದ್‌ವಿಹಾರ್‌ಸಾಹೇಬ್ ಮುಕದಂಮಾಲಿ ಪಾಟೀಲ, ಶ್ರೀಮಾನ್ ಬಸವಂತರಾವ್ ಪೋಲೀಸ್ ಪಾಟೀಲ್, ಶ್ರೀಮಾನ್ ನಾಕೇದಾರ್‌ಸಾಹೇಬರು ಮೊದಲಾದವರು ಗ್ರಾಮದ ಎಲ್ಲ ಜನಸಮುದಾಯದೊಡನೆ ಕೂಡಿಕೊಂಡು ಬಂದ ಕೀರ್ತನವನ್ನು ಕೇಳಿ ಪರಮಾನಂದಭರಿತರಾದರು. ಮ॥ ಮುಕದಂ ಮಾಲಿ ಪಾಟೀಲರು ಕೀರ್ತನಕಾರರಿಗೆ ಸಂತೋಷದಿಂದ ಇನಾಮನ್ನು ಕೊಟ್ಟರು. ಇವರು ಮುಸಲ್ಮಾನರಾದಾಗ್ಯೂ ಹಿಂದುಗಳಲ್ಲಿ ವಿಶೇಷ ಮಮತೆಯುಳ್ಳವರಾಗಿರುವರು. ಕೀರ್ತನದ ಪ್ರಾರಂಭದಲ್ಲಿ ವೇ॥ ಶ್ರೀ ಚನ್ನಬಸವಯ್ಯಸ್ವಾಮಿ, ಬಸವಣ್ಣಪ್ಪ ಚೂಕೋಡಿ ಮತ್ತು ಧರ್ಮಣ್ಣಪ್ಪ ಅಳಸಂಗಕರ್ ಇವರು, ಸನಾತನ ವೀರಶೈವ ಧರ್ಮದಮೇಲೆ ಭಾಷಣಮಾಡಿದರು. ಬಳಿಕ ಗುರುಕಿಂಕರ ಮಂಡಲಿಂಗಪ್ಪ ಮಾಸ್ತರ್‌ರವರು ಶಿವಾವತಾರಿ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳ ವಿಷಯದಲ್ಲಿಯೂ ಶ್ರೀ। ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ವಿಷಯದಲ್ಲಿಯೂ, ಹೋಟಗಿ ಶ್ರೀಗಳವರ ಅನುಷ್ಠಾನದ ವಿಷಯಗಳಲ್ಲಿಯೂ ಮನೋಹರವಾಗಿ ಭಾಷಣಮಾಡಿ ಸರ್ವರಿಗೂ ಆನಂದವನ್ನುಂಟುಮಾಡಿದರು. ಬಳಿಕ ಸಿದ್ಧಪ್ಪ ಅಣ್ಣ ಕಲಶಟ್ಟಿ ಇವರು ಶ್ರೀಜಗದಾಚಾರ್ಯರ ಮಹತ್ವವನ್ನು ಕೇಳಿ ಹರುಷಭರಿತರಾಗಿ ನಾನು ನನ್ನ ಜನ್ಮವಿರುವವರೆಗೆ ಗುರು ಕೀರ್ತನೆಗಳಿಗೋಸ್ಕರ ಸಹಾಯ ಮಾಡುವೆನೆಂದು ವಾಗ್ದಾನಮಾಡಿದರು. ಈ ಗ್ರಾಮದ ಭಕ್ತರಿಗೆಲ್ಲಾ ಶ್ರೀ ಜಗದಾಚಾರ್ಯರು ಸಕಲ ಮಂಗಲಗಳನ್ನೀಯಲೆಂದು ಪ್ರಾರ್ಥಿಸುವ, ಬಸವಣ್ಣ, ಹಸರಗುಂಡಗಿ

ಶ್ರೀ॥ ಉಜ್ಜಯಿನೀ ಜಗದ್ಗುರುಗಳವರ ಪುಣ್ಯದಿನ ಮಹೋತ್ಸವ, ಹನುಮಸಾಗರ.

ತಾ॥ ೬-೧-೪೩ನೆಯ ದಿವಸ ನಿಜಾಮು ಇಲಾಖಾ ಹನುಮಸಾಗರ ಗ್ರಾಮದ ಶ್ರೀ ಕರಿಸಿದ್ಧೇಶ್ವರ ಜನರಲ್ ಲೈಬ್ರರಿಯಲ್ಲಿ ಗುರುಸಾರ್ವಭೌಮ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯದಿನವು ಒಳ್ಳೆ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಮಂಗಲಮಯ ಸನ್ನಿವೇಶದಲ್ಲಿ ಸಮಾಜ ಹಾಗೂ ಪುರಪ್ರಮುಖರೂ ಲೈಬ್ರರಿಯ ಮೆಂಬರರೂ ಭಾಗವಹಿಸಿದ್ದರು. ಮಹಾಚಾರ್ಯರ ದಿವ್ಯ ಭಾವಚಿತ್ರಕ್ಕೆ ಮಹಾಪೂಜೆಯಾದನಂತರ ಲೈಬ್ರರಿಯ ಸದಸ್ಯರಾದ ಮ॥ ರಾ॥ ಎಚ್ ಎ ಚನಿವಾಲರ ಇವರು ಈ ಓಜಸ್ವಿಮಹಾಚಾರ್ಯರ ದಿವ್ಯ ಕೃಪೆಯಿಂದ ವೀರಶೈವ ಮತವು ಪರಮತೀಯರಲ್ಲಿ ಒಂದು ವಿಶಿಷ್ಟಸ್ಥಾನವನ್ನು ಪಡೆಯಿತೆಂದೂ, ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಭಾವವು ಇಷ್ಟು ದೇದೀಪ್ಯಮಾನವಾಗಿ ಹೊಳೆದು ಬೆಳಗಲಿಕ್ಕೆ ಇವರು ಮೂಲ ಜೀವಾಳರಾಗಿದ್ದರೆಂಬ ವಿಷಯವನ್ನು ಮನೋಹರವಾಗಿ ಹೇಳಿ ಸರ್ವರನ್ನೂ ಧನ್ಯರನ್ನಾಗಿಮಾಡಿದರು. ಅನಂತರ ಮಂಗಲಾರತಿ ಹಾಗೂ ಜಯಜಯಕಾರದೊಡನೆ ಸಭೆಯು ಮುಕ್ತಾಯವಾಯಿತು.

ಗುರುಕಿಂಕರ

। ಶ್ರೀ ಗುರುಭ್ಯೋನಮಃ ॥

ಕಲಿಪ್ರಭಾವ

ಲೇ—ಶ್ರೀಪಟ್ಟದ ಸ್ವಾಮಿಗಳು ಹಿರೇಮಠ, ಕೊಣ್ಣೂರು.

(ಪೇಟಾ ನರಗುಂದ)

“ಸತ್ಯಂ ಜನವಿರುದ್ಧಂ ಚ ಅಸತ್ಯಂ ಜನರಂಜನಂ” ಎಂಬ ಆರ್ಯೋಕ್ತಿಯಂತೆ ಈ ಕಲಿಕಾಲದಲ್ಲಿ ವಿಶೇಷ ಜನರಿಗೆ ಸತ್ಯವು ವಿರೋಧವಾಗಿಯೂ, ಅಸತ್ಯವು ಒಳ್ಳೆ ಪ್ರೀತಿಕರವಾಗಿಯೂ ಹೇಗೆ ತೋರುವದೋ ಹಾಗೆಯೇ ಸತ್ಪುರುಷರಿಗೂ, ಸದ್ವಸ್ತುಗಳಿಗೂ, ಸತ್ಕಾರ್ಯಕ್ಕೂ, ಮನ್ನಣೆಯು ಸಿಗಲಾರದು. ದುರುಳ ವೇದಾಂತಿಗಳಿಗೆ, ದುಷ್ಟಕಾವ್ಯಕ್ಕೆ, ದುಷ್ಟಪದಾರ್ಥಗಳಿಗೆ, ದುಷ್ಟಕಾರ್ಯಕ್ಕೆ, ವಿಶೇಷ ಗೌರವವು ದೊರಕುವದು. ಇದರ ಬಗ್ಗೆ ಒಂದೊಂದನ್ನೇ ವಿಚಾರಿಸುವಾ.

ಸತ್ಪುರುಷರು ತಮ್ಮ ಸ್ಥಾನದಲ್ಲಿದ್ದುಕೊಂಡು, ಧರ್ಮೋಪದೇಶವನ್ನು ಮಾಡುತ್ತೇವೆ ಎಲ್ಲ ಜನರೂ ಬರಬೇಕೆಂದು ಕರೆಯಿಸಿದರೆ, ಅಲ್ಲಿಗೆ ವಿಶೇಷವಾಗಿ ಜನರು ಕೂಡುವದೇ ಇಲ್ಲ. ಏಕೆಂದರೆ ಅಲ್ಲಿ ಅವರಿಗೆ ಶರೆ, ಸಿಂದಿ, ಚಹಾ, ಕಾಫಿ, ಚಟ್ನಿ, ಎಲೆ, ಅಡಿಕೆ ಇವೇ ಮೊದಲಾದ ಪದಾರ್ಥಗಳು ಸಿಗುವದಿಲ್ಲ. ಮತ್ತು ಅವರಿಗೆ ಇವರ ಉಪದೇಶವು ರುಚಿಸುವದಿಲ್ಲ. ಇವರ ಉಪದೇಶವು ನಾನಾ ಪ್ರಮಾಣಗಳುಂಟು, ಜಾತಿಧರ್ಮಗಳೆಂಬ ದುಷ್ಟ ಚಟಗಳನ್ನು ಬಿಡಬೇಕು. ತಮ್ಮ ತಮ್ಮ ಧರ್ಮ ಪದ್ಧತಿಪ್ರಕಾರ ಸ್ನಾನವನ್ನುಮಾಡಿ ಮಡಿಯಿಂದ ನಿತ್ಯಕರ್ಮ ಪಾದ ಶಿವಪೂಜಾ, ಸಂಧ್ಯಾವಂದನಗಳನ್ನು ಮಾಡಿಕೊಂಡ ನಂತರ, ತಾನು ಭುಂಜಿಸತಕ್ಕ ಅನ್ನವನ್ನು ತನ್ನ ದೇವರಿಗೆ ಸಮರ್ಪಿಸಿ, ಅನಂತರ ತಾನು ಭುಂಜಿಸಬೇಕು. ಇದರಿಂದ ಪರಮಾತ್ಮನು ತೃಪ್ತಿಯನ್ನು ಹೊಂದಿ, ನಿಮ್ಮ ಇಚ್ಛಿತ ಫಲವನ್ನು ಅನುಗ್ರಹಿಸುವನು ಎಂದು ಬೋಧಿಸುವರು. ದುಷ್ಟ ಚಟಗಳನ್ನು ಮಾಡುತ್ತ ಸಿಕ್ಕಸಿಕ್ಕಲ್ಲಿ ತಿಂದು ವರ್ಣಾಶ್ರಮಗಳಿಲ್ಲ ಜಾತಿಧರ್ಮಗಳಿಲ್ಲ ಎನ್ನುವ ನಾಸ್ತಿಕರಿಗೆ, ಇವರ ಉಪದೇಶವು ಪ್ರತಿಕೂಲವಾಗುವದಿಲ್ಲವೆ? ಇದಲ್ಲದೆ ನಾವು ಒಂದು ಸತ್ಕಾರ್ಯವನ್ನು ಹಿಡಿದಿರುತ್ತೇವೆ, ಅದಕ್ಕೆ ದಕ್ಷಿಣೆ ಸಂಗ್ರಹ ವಿಶೇಷ ಬೇಕಾಗಿದೆ ನಿಮ್ಮಲ್ಲಿ ವರ್ಗಣಿ ಮಾಡಿ ಕೊಡಬೇಕೆಂದರೆ ಒಬ್ಬರೂ ಲಕ್ಷ್ಯಕ್ಕೆ ತೆಗೆದುಕೊಳ್ಳುವದಿಲ್ಲ. ಇವೇ ಮೊದಲಾದ ಕಾರಣಗಳಿಂದ ಸತ್ಪುರುಷರಿಗೆ ಗೌರವವು ಸಿಗುವದಿಲ್ಲವೆಂದು ಸ್ಪಷ್ಟವಾಗುತ್ತದೆ. ಮರುಳ ವೇದಾಂತಿಗಳು ಯಾರನ್ನೂ ಕರೆಯದಿದ್ದರೂ, ಜನರು ಅವರ ಕಡೆಗೆ ತಾವೇ ಹೋಗುತ್ತಾರೆ. ಅವರ ಉಪದೇಶ “ನಹಿ ಕರ್ಮಾಣಿ” ಅಂದರೆ ಕರ್ಮವನ್ನು ಮಾಡುವದು ಬೇಕಿಲ್ಲ ಎಲ್ಲಾ ಬ್ರಹ್ಮಸ್ವರೂಪವೇ ಇದೆ ಜಾತಿ ಭೇದವಿಲ್ಲ ವರ್ಣಾಶ್ರಮಗಳಿಲ್ಲ ‘ಅಹಂ ಬ್ರಹ್ಮಾಸ್ಮಿ’ ಅಂದರೆ ನಾನು ಬ್ರಹ್ಮನಿದ್ದೇನೆ ಎಂದು ಬೋಧಿಸುತ್ತ, ಶರೆ, ಸಿಂದಿ ಚಹಾ, ಕಾಫಿ, ಗಾಂಜ, ಎಲೆ, ಅಡಕೆ ಮೊದಲಾದ ಪದಾರ್ಥಗಳನ್ನು ತಾವು ಸೇವಿಸುತ್ತ, ಬಂದವರಿಗೂ ಅಜ್ಞಾನವರ ಪ್ರಸಾದವೆಂದು ಕೊಡುತ್ತ, ಸ್ವೇಚ್ಛಾಚಾರಿಗಳಾಗಿರುತ್ತಾರೆ. ಜನರಿಗೂ ಅದೇ ಬೇಕಾಗಿರುವದರಿಂದ ಜನರು ಅಲ್ಲಿಗೆ ಕೂಡುವದು ಸಹಜವಿದೆ. ಅವರಿಗೆ ಬೇಕಾದ್ದನ್ನು ಕೊಡುತ್ತಾರೆ. ‘ಸತ್ಯಂವದ’ ‘ಧರ್ಮಂಚರ’ ‘ಆಚಾರ್ಯದೇವೋ ಭವ’ ‘ಮಾತೃದೇವೋ ಭವ” ‘ಪಿತೃದೇವೋ ಭವ” ಇತ್ಯಾದಿ ಮಹಾವಾಕ್ಯಗಳನ್ನು ಪ್ರೀತಿಸುವದಿಲ್ಲ. ಇದರ ವಿರುದ್ಧವಾಗಿ ಬೋಧಿಸುವ ಗ್ರಂಥಗಳನ್ನು ಪ್ರೀತಿಸುವರು. ಮನುಷ್ಯರಿಗೆ ಆರೋಗ್ಯವನ್ನೂ ಪುಷ್ಟಿಯನ್ನೂ, ಕಾಂತಿಯನ್ನೂ, ಆಯುಷ್ಯವನ್ನೂ, ಬುದ್ಧಿಯನ್ನೂ ಹೆಚ್ಚಿಸುವ ಹಾಲು, ತುಪ್ಪ, ಮೊಸರು ಮೊದಲಾದ ಪದಾರ್ಥಗಳನ್ನು, ಮನೆ ಮನೆ ಹೊತ್ತುಕೊಂಡು ತಿರುಗಿದರೂ ಯಾರೂ ತೆಗೆದ ಕೊಳ್ಳುವದಿಲ್ಲ. ಅದೇ ಮನುಷ್ಯರ ಆರೋಗ್ಯವನ್ನೂ, ಕಾಂತಿಯನ್ನೂ, ಆಯುಷ್ಯವನ್ನೂ, ಬುದ್ಧಿಯನ್ನೂ ಕೆಡಿಸತಕ್ಕ ಶರೆ, ಸಿಂದಿ, ಚಹಾ, ಗಾಂಜ, ಇವೇ ಮೊದಲಾದ ದುಷ್ಟಪದಾರ್ಥಗಳಿಗೆ, ಜನರು ಪ್ರೀತಿಯಿಂದ ಮುಂಜಾನೆ ಸಾಯಂಕಾಲಕ್ಕೆ ಗುರುದೇವರ ದರ್ಶನಕ್ಕೆ ಹೋಗುವಂತೆ ತಪ್ಪದೆ, ಹೋಗುವರು.

ಎಲ್ಲಿಯಾದರೂ ಧಾರ್ಮಿಕ ಸಂಬಂಧದ ಕೀರ್ತನವಾಗಲಿ, ಉಪನ್ಯಾಸವಾಗಲಿ, ಪುರಾಣ ಪುಣ್ಯಕಥೆಗಳಾಗಲಿ ನಡೆದಿದ್ದರೆ, ಅಲ್ಲಿಗೆ ಜನರು ಹೋಗುವದು ಕಡಿಮೆ. ಒಂದು ವೇಳೆ ಹೋದರೂ, ಅಲ್ಲಿ ಅವರಿಗೆ ತೂಕಡಿಕೆ ಬರುತ್ತದೆ. ಮನಸ್ಸೂ ಇರುವದಿಲ್ಲ. ಮಂದಿಯು ಎದ್ದು ಹೋಗುತ್ತಾರೆ. ಇವುಗಳಮೇಲೆ ಪ್ರೀತಿಯಿರುವದಿಲ್ಲ. ಆದರೆ ಕಾಮ ವಾಸನೆಯನ್ನು ಬೀರುವ ನಾಟಕ ಸಿನಿಮಾಗಳಿಗೆ ಪರಮಾನಂದದಿಂದ ಹೋಗುತ್ತಾರೆ. ನೋಡುತ್ತಾರೆ. ಧನ ವ್ಯಯಮಾಡುತ್ತಾರೆ. ಮುಖ್ಯವಾಗಿ ಈ ಕಾಲದಲ್ಲಿ ಕೆಟ್ಟ ನಡತೆಗೂ ಸುಳ್ಳಿಗೂ ಬಹಳ ಗೌರವವಿರುತ್ತದೆ. ಈ ಬಗ್ಗೆ ಒಂದು ಇತಿಹಾಸವುಂಟು ಅದನ್ನು ಕೆಳಗೆ ಕೊಡುತ್ತೇವೆ. “ಒಬ್ಬ ಬ್ರಾಹ್ಮಣನು ಕಾಶೀಯಾತ್ರೆಗೆ ಹೊರಡಲು ಸಿದ್ಧನಾದನು. ತನ್ನಲ್ಲಿದ್ದ ಎರಡು ಅಮೂಲ್ಯ ರತ್ನವನ್ನು ಸಂಗಡ ತೆಗೆದುಕೊಂಡು ಹೋದರೆ, ಮಾರ್ಗದೊಳಗೆ ಯಾರಾದರೂ ತೆಗೆದುಕೊಂಡಾರೆಂಬ ಭಯದಿಂದ, ಆ ಊರ ಒಬ್ಬ ಸಾಹುಕಾರನಲ್ಲಿ ಇಟ್ಟುಹೋದನು. ಯಾತ್ರೆಯಾದ ಬಳಿಕ ತಿರುಗಿ ಬಂದು ತನ್ನ ರತ್ನವನ್ನು ಕೊಡು ಎಂದನು.

ಆಗ ಆ ಸಾಹುಕಾರನು ಆ ರತ್ನವನ್ನು ಅಪಹರಿಸಬೇಕೆಂಬ ಆಶೆಯಿಂದ, ನನ್ನಲ್ಲಿಟ್ಟಿಲ್ಲವೆಂದನು. ಅವರವರ ವಿವಾದವಾಗಿ ಪಂಚರಕಡೆಗೆ ಹೋಗಲು, ಅವರು ಆ ಬ್ರಾಹ್ಮಣನಿಗೆ ಈರೀತಿ ಹೇಳಿದರು. ಅಯ್ಯಾ ಬ್ರಾಹ್ಮಣನೇ! ನೀನು ನಿನ್ನಮಗನನ್ನು ಅಡ್ಡಹಾಕಿ ದಾಟಬೇಕು. ಅವನು ಸತ್ತರೆ ನೀನು ಆ ರತ್ನವನ್ನು ಇಟ್ಟದ್ದು ಸುಳ್ಳು. ಬದುಕಿದರೆ ಇಟ್ಟದ್ದು ನಿಜ, ಎಂದು ನಿರ್ಣಯಿಸಿದರು. ಆಗ್ಗೆ ಆ ಬ್ರಾಹ್ಮಣನು ಆ ಸಾಹುಕಾರನಲ್ಲಿ ಒಂದು ರತ್ನವನ್ನಿಟ್ಟದ್ದು ನಿಜವೆಂದು, ತನ್ನ ಮಗನನ್ನು ಅಡ್ಡಹಾಕಿ ದಾಟಲಾಗಿ, ಮಗನು ಸತ್ತನು. ಆಗ್ಗೆ ಸರ್ವರೂ ಈ ಬ್ರಾಹ್ಮಣನು ಸಾವುಕಾರನಲ್ಲಿ ರತ್ನವನ್ನಿಡದೆ, ಸುಳ್ಳು ಅಪವಾದ ಕೊಟ್ಟನೆಂದು ತಿಳಿದು, ಅವನನ್ನು ಧಿಕ್ಕರಿಸಿ ಮಾತಾಡಹತ್ತಿದರು. ಬ್ರಾಹ್ಮಣನಿಗೆ ರತ್ನ ಹೋದದ್ದು ಒಂದು ದುಃಖ, ಮಗನು ಹೋದದ್ದು ಒಂದು ದುಃಖ, ಜನರೊಳಗೆ ಅಪಮಾನವಾದದ್ದು ಒಂದು ದುಃಖ ಇಂತಿಷ್ಟು ದುಃಖಗಳಿಂದ ಕೂಡಿ ಮಗನನ್ನು ದಹನಮಾಡುವದಕ್ಕೋಸ್ಕರ ಸ್ಮಶಾನಕ್ಕೆ ಹೋದನು. ಕಲಿದೇವರು ಬಂದು ಪ್ರತ್ಯಕ್ಷನಾಗಿ

ಸತ್ಯಂ ಜನವಿರುದ್ಧಂ ಚ ಅಸತ್ಯಂ ಜನರಂಜನಂ ॥

ಎಂದು ನುಡಿದನು. ಅಯ್ಯಾ ಬ್ರಾಹ್ಮಣನೇ ನಾನು ಕಲಿದೇವನಿದ್ದೇನೆ. ಕಲಿಪ್ರವೇಶವಾದಬಳಿಕ ನಿಜವಾಡಿದರೆ, ನೀನು ಪಶ್ಚಾತ್ತಾಪಕ್ಕೆ ಗುರಿಯಾಗುವೆ. ಆದುದರಿಂದ ನೀನು ಅಲ್ಲಿಗೆ ಹೋಗಿ ಈ ಪ್ರಕಾರ ಹೇಳು. ನಾನು ಎರಡು ರತ್ನಗಳನ್ನು ಇಟ್ಟದ್ದು ಒಂದೇ ಎಂದು ಹೇಳಿ ಪ್ರಮಾಣಮಾಡಿದ್ದಕ್ಕೆ ನನ್ನ ಮಗನು ಸತ್ತನು. ಇನ್ನುಮೇಲೆ ಎರಡು ರತ್ನಗಳಿದ್ದವೆಂದು ಸತ್ತಮಗನನ್ನು ಅಡ್ಡಹಾಕಿ ಪುನಃ ದಾಟುತ್ತೇನೆ. ಅವನು ಬದುಕಿದರೆ ನನ್ನ ಎರಡು ರತ್ನಗಳನ್ನು ನನಗೆ ಕೊಡಿರಿ. ಇಲ್ಲದಿದ್ದರೆ ಬಿಡಿರಿ ಎಂದು ಹೇಳು. ಅವರು ಇದಕ್ಕೆ ಒಪ್ಪಬಡುತ್ತಾರೆ. ಆಮೇಲೆ ನೀನು ಅದರಂತೆ ಮಾಡು. ಅಂದರೆ ನಿನ್ನ ಮಗನು ಬದುಕಿ ನಿನಗೆ ಎರಡು ರತ್ನಗಳು ದೊರಕುತ್ತವೆ. ಹೀಗೆಂದು ಹೇಳಿ ಶವಸಹಿತ ತಿರುಗಿ ಕಳಿಸಲಾಗಿ, ಅವನು ಬಂದು ಅದರಂತೆ ಮಾಡುತ್ತಿರಲಿಕ್ಕೆ, ಆತನ ಮಗನು ಬದುಕಿದನು. ಆಗ್ಗೆ ಜನರು ಇಗೋ ಈ ಬ್ರಾಹ್ಮಣನು ಬಹು ಸಾತ್ವಿಕನು. ಎರಡು ರತ್ನಗಳನ್ನಿಟ್ಟು ಒಂದೇ ರತ್ನವೆಂದು ಹೇಳಿದ್ದರಿಂದ, ಮಗನು ಮೃತನಾದನು. ಆಮೇಲೆ ಸತ್ಯಹೇಳಲಾಗಿ ಮಗನು ಬದುಕಿದನು. ಹೀಗಿರಲಾಗಿ ಸಾಹುಕಾರನು ಆ ಒಬ್ಬ ಬ್ರಾಹ್ಮಣನು ಇಟ್ಟಿದ್ದ ರತ್ನಗಳನ್ನು ಅಪಹರಿಸಬೇಕೆಂಬ ದುರಾಲೋಚನೆಯಿಂದ, ಸುಳ್ಳುಮಾತಾಡಿದನು. ನಾವು ಇಂಥವನನ್ನು ಎಲ್ಲಿಯೂ ಕಾಣೆವು, ಎಂದು ತಮ್ಮ ತಮ್ಮೊಳಗೆ ಮಾತನಾಡಿ ಅವನಿಗೆ ಎರಡು ರತ್ನಗಳನ್ನು ಕೊಡಿಸಿ ಕಳುಹಿಸಿದರು. ಆದಕಾರಣ ಈ ಕಲಿಯುಗದಲ್ಲಿ ಸುಳ್ಳು, ಕಳವು, ಹಾದರ, ಅನೀತಿ, ಅಧರ್ಮ, ಇವುಗಳಿಗೆ ಮಾತ್ರ ಗೌರವವಿರುತ್ತದೆ.

ಹಡತಿಯ ಧಿಕ್ಕರಿಸಿ ಸರಸತಿಯ ಬಯಸುವರು |
ಪುಂಡಪೋಕರ ಸಂಗವನು ಮಾಡುವರು ॥

[೬ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೨ನೆಯ ಜನವರಿ ತಾ॥ ೧೯ ನೇ ಸೋಮವಾರ

ವೀರಶೈವರ ಧರ್ಮಾಚರಣೆ.

ಧರ್ಮದಲ್ಲಿ ಸಾಮಾನ್ಯಧರ್ಮಗಳು ಹಾಗೂ ವಿಶೇಷ ಧರ್ಮಗಳು ಎಂದು ಎರಡು ಪ್ರಕಾರವಾಗಿರುವವು ವೀರಶೈವನು ಈ ಉಭಯಧರ್ಮಗಳನ್ನೂ ನಿಷ್ಠನಾಗಿರಬೇಕು [illegible] ಬೇಕು [illegible] ಯಲ್ಲಿಯೂ [illegible] ಪ್ರಸಾದ [illegible] ಇಷ್ಟಲಿಂಗಧಾರಣೆಯಿಂದ ವೀರಶೈವತ್ವವನ್ನು ಪಡೆದು ಷಟ್ಸ್ಥಲಕ್ರಮವನ್ನು ತಿಳಿದು ಲಿಂಗಾಂಗಸಾಮರಸ್ಯಜ್ಞಾನವನ್ನು ಬೀರಿ, ಜೀವನ್ಮುಕ್ತಿ [illegible] ಮೋಕ್ಷಕ್ಕೆ ಅಧಿಕಾರಿಗಳನ್ನಾಗಿ ಮಾಡಿದ, ವೀರಶೈವಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಸಕಲಾಶ್ರಮಿಗಳೂ ತ್ರಿಕರಣಪೂರ್ವಕವಾಗಿ ಭಜಿಸಬೇಕು ವೇದೋಕ್ತ ಸತ್ಕರ್ಮಗಳನ್ನಾಚರಿಸಬೇಕು ಧರ್ಮವಿಧಿಗಳನ್ನು ಮೀರಿ ನಡೆಯಬಾರದು ಸತ್ಪಾತ್ರದಲ್ಲಿ ದಾನವನ್ನು ಮಾಡಬೇಕು ಪರದಾರಗಮನವನ್ನು ಮಾಡಬಾರದು ಪರದ್ರವ್ಯವನ್ನು ಅಪಹರಿಸಬಾರದು ಪರರಿಗೆ ದ್ರೋಹವೆಸಗಬಾರದು ಪರೋಪಕಾರದಲ್ಲಿ ನಿರತರಾಗಿರಬೇಕು ಶಿವನಿಂದೆ ಶಿವಕಥಾನಿಂದೆ ಗುರುನಿಂದೆಗಳನ್ನು ಕಿವಿಯಿಂದ ಕೇಳಬಾರದು ಶಿವನಲ್ಲಿಯೂ ಶಿವಶಾಸ್ತ್ರದಲ್ಲಿಯೂ ಭಕ್ತಿಯುಳ್ಳವರಾಗಿರಬೇಕು ಅತಿಥಿಗಳನ್ನು ಆದರಿಸಬೇಕು ತಾಯಿತಂದೆಗಳನ್ನು ರಕ್ಷಿಸಬೇಕು ಪ್ರಾಣಿಹಿಂಸೆಯನ್ನು ಮಾಡಬಾರದು ಪರರ ಆತ್ಮನಿಗೆ ಯಾವರೀತಿಯಿಂದಲೂ ದುಃಖವನ್ನುಂಟುಮಾಡಬಾರದು ನಿಷಿದ್ಧಾಹಾರವನ್ನು ಸೇವಿಸಬಾರದು ಹುರುಳಿ ಬದನೇಕಾಯಿ, ಬೆಳ್ಳುಳ್ಳಿ, ಉಳ್ಳಿಗಡ್ಡೆ ಮೊದಲಾದ ನಿಷಿದ್ಧವಸ್ತುಗಳನ್ನು ಸ್ವೀಕರಿಸಬಾರದು ನಿಂದ್ಯರೂ ಬಹಿಷ್ಕೃತರೂ ಪತಿತರೂ [illegible] ಇವರ ಮನೆಯ ಅನ್ನವನ್ನು [illegible] ಇವರ ಪಂಕ್ತಿಯಲ್ಲಿ ಭೋಜನವನ್ನು ಮಾಡಬಾರದು [illegible] ಪ್ರಾಣ [illegible] ದಿನಗಳಲ್ಲಿ ಭುಂಜಿಸುವ [illegible] ಬಾರದು [illegible] ಗುರ್ವಾಜ್ಞೆಯನ್ನು ಉಲ್ಲಂಘಿಸಬಾರದು [illegible] ಮರನ್ನು ಗುರುಪಿಸಂತೆ [illegible] ಜ್ಞಾನಿಯಾಗಬೇಕು [illegible] ನಂತೆ ಭಾವಿಸಬೇಕು. [illegible] ಅವಿವೇಕಿಯಾಗಿ ಅವಮಾನಕ್ಕೆ [illegible] ಬಾರದು. ಕೀರ್ತಿವಂತನಾಗ [illegible] ನಿರತನಾಗಿರಬೇಕು ಸತ್ಪುರುಷರ [illegible] ಬೇಕಲ್ಲದೆ ದುರ್ಜನರ ಸಹವಾಸವನ್ನು ಮಾಡಬಾರದು. ಪ್ರಾಣಿಗಳಲ್ಲಿ ದಯೆಯುಳ್ಳವನಾಗಬೇಕು [illegible] ಕಾಪಾಡಬೇಕು ಕ್ರಮತಪ್ಪಿ ನಡೆಯಬಾರದು ಭೋಗಿಗಳ ಮುಖಾವಲೋಕನವನ್ನು ಮಾಡಬಾರದು. ಕಾಮಾದ್ಯರಿಷಡ್ವರ್ಗವನ್ನು ಜಯಿಸಬೇಕ ವರೂ, ಕಾಮ ಪರನಾದ ಶಿವನಲ್ಲಿ ಕಾಮವನ್ನೂ, ಕೊಬ್ಬಿದ ಇಂದ್ರಿಯಗಳಲ್ಲಿ ಕೋಪವನ್ನೂ, ಶಿವಪ್ರಸಾದದಲ್ಲಿ ಲೋಭವನ್ನೂ, ಶಿವಭಕ್ತರಲ್ಲಿ ಮೋಹವನ್ನೂ, ದುರಾಚಾರಿಗಳಲ್ಲಿ ಮದವನ್ನೂ, ಶಿವಭಕ್ತಿಶೂನ್ಯರಲ್ಲಿ ಮತ್ಸರವನ್ನೂ ತಾಳಬೇಕು ಪರದೈವಕ್ಕೆರಗಬಾರದು ಅನ್ಯದೇವರಿದ್ದ ಮನೆಯನ್ನು ಬಿಡಬೇಕು ಶಿವೇತರದೇವತೆಗಳನ್ನು ಪೂಜಿಸುವವರನ್ನು ಶಿವಪೂಜಾಕಾಲದಲ್ಲಿ ನೋಡಬಾರದು ಸ್ವಧರ್ಮದಲ್ಲಿ ನಿಷ್ಠೆಯುಳ್ಳವನಾಗಿರಬೇಕು ಕ್ರಿಯಾಯುಕ್ತಜ್ಞಾನವುಳ್ಳವನಾಗಿರಬೇಕು ದಿವಾನಿದ್ರಾ, ದಿವಾಮೈಥುನಗಳನ್ನೆಸಗಬಾರದು. ಕಂಚಿನ ಪಾತ್ರೆಯಲ್ಲಿ ತೆಂಗಿನ ನೀರನ್ನೂ, ತಾಮ್ರದ ಪಾತ್ರೆಯಲ್ಲಿ ಹಾಲನ್ನೂ ಕುಡಿಯಬಾರದು. ಎಡಗೈಯಿಂದ ನೀರನ್ನೂ ಕುಡಿಯಬಾರದು, ಹಾಗೂ ಉಣ್ಣಬಾರದು. ಭೋಜನಮಾಡುವಕಾಲಕ್ಕೆ ಉಣ್ಣುವ ಪಾತ್ರೆಯಲ್ಲಿ ಕುಡಿಯುವ ನೀರು ಬಿದ್ದರೆ ಆ ಅನ್ನವನ್ನು ಉಣ್ಣಬಾರದು. ಒಬ್ಬನು ಕುಡಿದು ಉಳಿಸಿದ ನೀರನ್ನು ಮತ್ತೊಬ್ಬನು ಕುಡಿಯಬಾರದು ಮಣ್ಣಿನ ಪಾತ್ರೆಗಳನ್ನು ಅಡಿಗೆಗೆ ಉಪಯೋಗಿಸಬಾರದು ಸ್ತ್ರೀಯರು ಮುಟ್ಟಾದಾಗ್ಯೆ ಪಾಕವನ್ನು ಮಾಡಬಾರದು ಸ್ತ್ರೀಯರಿಗೆ ರಜಃಸೂತಕವು ಶಿವಪೂಜೆಯಮಟ್ಟಿಗೆ ಮಾತ್ರ ಇರುವದಿಲ್ಲ ಬಾಲಕರೊಡನೆ ಉಣ್ಣಬಾರದು ಒಡೆದ ಪಾತ್ರೆಯಲ್ಲಿ ಭೋಜನವನ್ನು ಮಾಡಬಾರದು ಕಂಚಿನ ಪಾತ್ರೆಯಲ್ಲಿ ಉಣ್ಣಬಾರದು ಜೂಜು ಮುಂತಾದ ದುಷ್ಕೃತಿಗಳನ್ನೆಸಗಬಾರದು ಮಠದೇವಾಲಯಗಳ ಜೀರ್ಣೋದ್ಧಾರಕಾರ್ಯದಲ್ಲಿ ತೊಡಗಬೇಕು ಚಂದ್ರಸೂರ್ಯರ ಗ್ರಹಣಕಾಲದಲ್ಲಿ ಉಣ್ಣಬಾರದು

ಸೂರ್ಯೇಂದುಗ್ರಹಣಂ ಯಾವತ್ತಾವತ್ಕುರ್ಯಾಜ್ಜಪಾದಿಕಂ ।
ನ ಸ್ವಪ್ಯಾನ್ನ ಚ ಭುಂಜೀತ ಸ್ನಾತ್ವಾ ಭುಂಜೀತ ಮುಕ್ತಯೋಃ ॥
[illegible] ಗ್ರಸ್ತಾವಸ್ತಂಗತೌ ಯದಾ ।
ದೃಷ್ಟ್ವಾ ತದಾನ್ಯದಿವಸೇ ಸ್ನಾತ್ವಾ ಭುಂಜೀತ ನಿತ್ಯಶಃ ।
ದೇವಾರ್ಚನಾದಿಕಂ ಕರ್ಮ [illegible] ಶಿವಾ ।
ಪೌರ್ಣಮಾಸ್ಯಾಮಮಾವಸ್ಯಾಂ ಗ್ರಹಣೇ ಚಂದ್ರಸೂರ್ಯಯೋಃ ॥
ಪಂಚಾಮೃತೈಃ ಸಂಸ್ನಾಪ್ಯ ಲಿಂಗಮ್ [illegible]
ಪೂಜಯೇನ್ ವಿಧಾನೇನ ಸರ್ವಪಾಪೈಃ ಪ್ರಮುಚ್ಯತೇ ॥

ಅಂದರೆ—ಚಂದ್ರಸೂರ್ಯರಿಗೆ ಗ್ರಹಣವು ಸಂಭವಿಸಿದಕಾಲದಲ್ಲಿ ಎಲ್ಲಿಯವರೆಗೆ ಗ್ರಹಣವಿಮುಕ್ತಿಯಾಗದೆಯೋ ಅಲ್ಲಿಯವರೆಗೆ ಜಪಾದಿಗಳನ್ನು ಮಾಡಬೇಕೆಂತಲೂ, ಆ ಕಾಲದಲ್ಲಿ ಮಲಗಬಾರದೆಂತಲೂ, ಭೋಜನವನ್ನು ಮಾಡಬಾರದೆಂತಲೂ, ಬಿಟ್ಟನಂತರ ಸ್ನಾನವನ್ನುಮಾಡಿ ಭೋಜನವನ್ನು ಮಾಡಬೇಕೆಂತಲೂ ಹಿಡಿದುಕೊಂಡೇ ಮುಳುಗಿದರೆ ಮರುದಿವಸ ಗ್ರಹಣ ಹಿಡಿದ ಸೂರ್ಯನನ್ನೇ ಆಗಲಿ ಅಥವಾ ಚಂದ್ರನನ್ನೇ ಆಗಲಿ ನೋಡಿ ಸ್ನಾನವನ್ನು ಮಾಡಿಕೊಂಡು ಮೌನಿಯಾಗಿ ಭೋಜನವನ್ನು ಮಾಡಬೇಕೆಂತಲೂ, ದೀಕ್ಷಾಬದ್ಧರು ಗ್ರಹಣಕಾಲಕ್ಕೆ ಶಿವಪೂಜಾದಿಗಳನ್ನು ಮಾಡಬೇಕೆಂತಲೂ ಹುಣ್ಣಿಮೆ ಅಮಾವಾಸ್ಯೆಗಳಲ್ಲಿ ಚಂದ್ರಸೂರ್ಯರಿಗೆ ಗ್ರಹಣವು ಸಂಭವಿಸಿದಾಗ್ಗೆ ಲಿಂಗರೂಪಧರನಾದ ಶಿವನನ್ನು ಯಾವನು ವಿಧಿಪೂರ್ವಕವಾಗಿ ಪಂಚಾಮೃತಗಳಿಂದ ಅಭಿಷೇಕ ಮಾಡಿ ಪೂಜಿಸುವನೋ, ಅವನು ಸರ್ವಪಾಪಗಳಿಂದ ಬಿಡುಗಡೆಯನ್ನುಹೊಂದುವನೆಂತಲೂ ಧರ್ಮಶಾಸ್ತ್ರಗಳು ಸಾರಿಸಾರಿ ಹೇಳುವವು. ಇದರಿಂದ ಗ್ರಹಣಕಾಲದಲ್ಲಿ ಪೂಜಾಜಪಾದಿಗಳಲ್ಲಿ ತೊಡಗಿರಬೇಕಲ್ಲದೆ ಅನ್ಯಕಾರ್ಯಗಳಲ್ಲಿ ತೊಡಗಬಾರದು ಗ್ರಹಣಕಾಲದ ದಾನಮಾಡುವದು ಬಹು ಪುಣ್ಯಕರವಾಗಿರುವದರಿಂದ ಅನ್ನ ಗೋ ಭೂಮಿಹಿರಣ್ಯಾದಿಗಳನ್ನು ದಾನಮಾಡಬೇಕು ಗ್ರಹಣಕಾಲದಲ್ಲಿದ್ದ ನೀರನ್ನು ಉಪಯೋಗಿಸಬಾರದು ಬಟ್ಟೆಗಳನ್ನು ಉಪಯೋಗಿಸಬಾರದು ಗ್ರಹಣವು ಬಿಟ್ಟವೇಳೆ ಸರ್ವವನ್ನು ತೊಳೆದು ಬಳಿದು ಹೊಸನೀರನ್ನು ಮಡಿಯಿಂದ ತಂದು ಪಾಕಾದಿಗಳನ್ನು ಮಾಡಬೇಕು ತ್ರಿಕಾಲಗಳಲ್ಲಿ ಲಿಂಗಪೂಜೆಯನ್ನು ಮಾಡಬೇಕು ಲಿಂಗಭೋಗೋಪಭೋಗಿಯಾಗಬೇಕು ಸ್ತ್ರೀಯರನ್ನು ಹಿಂಸಿಸಬಾರದು ಯಾವ ಮನೆಯಲ್ಲಿ ಹೆಣ್ಣುಮಕ್ಕಳು ಕಣ್ಣೀರನ್ನು ಸುರಿಸುವರೋ ಆ ಮನೆಗೆ ಅನಿಷ್ಟವೆಂದು ತಿಳಿಯಬೇಕು ಕನ್ಯಾವಿಕ್ರಯ (ತೆರವು ತೆಗೆದುಕೊಳ್ಳುವಿಕೆ) ವನ್ನುಮಾಡಬಾರದು [illegible] ಹಚ್ಚೆಯನ್ನು ಚುಚ್ಚಿಕೊಳ್ಳಬಾರದು ಶಿವಾಗಮಗಳಲ್ಲಿ ನಂಬಿಗೆಯಿರಬೇಕು ಅಸತ್ಯವನ್ನು ನುಡಿಯಬಾರದು ಆತ್ಮಪೌರುಷವನ್ನು ಮಾಡಿಕೊಳ್ಳಬಾರದು ನಿರರ್ಥಕವಾದ ಮಾತುಗಳನ್ನಾಡಬಾರದು ಸಜ್ಜನರು ಮೆಚ್ಚುವಂತೆ ನಡೆಯಬೇಕು ರೂಢಿಯಲ್ಲಿದ್ದರೂ ಶಾಸ್ತ್ರವಿರುದ್ಧವೆಂದು ಕಂಡುಬಂದಲ್ಲಿ ಅದನ್ನು ತ್ಯಜಿಸಿ, ಶಾಸ್ತ್ರೀಯವಾದ ಮಾರ್ಗವನ್ನು ಕೈಕೊಳ್ಳುವಲ್ಲಿ ಸಂದೇಹಪಡಬಾರದು ಆಶ್ರಮಾನುಸಾರವಾಗಿ ಗುರೂಪದಿಷ್ಟಪ್ರಕಾರ ಧರ್ಮಗಳನ್ನಾಚರಿಸಬೇಕು ಇವೇ ಮೊದಲಾದ ಶಾಸ್ತ್ರೀಯಧರ್ಮಗಳನ್ನಾಚರಿಸಿ, ಪರಮಾತ್ಮನ ಕೃಪೆಗೆ ಪಾತ್ರರಾಗಬೇಕು

ಜ॥ ವೇವಲ್ಲರು ಡಚ್ ಇಂಡೀಸ್‌ಗೆ ಬಂದರು

ಪೆಸಿಫಿಕ್ ಸಾಗರದಲ್ಲಿ ಮಿತ್ರಸೇನೆಗಳ ಮಹಾದಂಡನಾಯಕರಾಗಿ ನೇಮಿಸಲ್ಪಟ್ಟಿರುವ ಜ॥ ವೇವೆಲ್‌ರವರು ತಮ್ಮ ಪರಿವಾರದೊಂದಿಗೆ ಡಚ್ ಇಂಡೀಸ್‌ಗೆ ಆಗಮಿಸಿದ್ದಾರೆ.

ಯುದ್ಧವಾರ್ತೆ.

ಹಾಂಕಾಂಗಿನಲ್ಲಿ ೧೮೦೦೦ ಮಂದಿಯು ಸೆರೆ

ಹಾಂಕಾಂಗ್ ಕ್ಷೇತ್ರದಲ್ಲಿ ಜಪಾನರು ಒಟ್ಟು 18000 ಮಂದಿಯನ್ನು ಸೆರೆಹಿಡಿದಿದ್ದಾರೆಂದು ತಿಳಿದುಬಂದಿದೆ ಅವರನ್ನೆಲ್ಲ ಫಾರ್ಮೋಸಾ ದ್ವೀಪದಲ್ಲಿ ಇಡಬಹುದೆಂದು ಹೇಳಲಾಗಿದೆ

ಸಿಂಗೋರಾಮೇಲೆ ಬ್ರಿಟಿಷರ ಮುತ್ತಿಗೆ

ಬ್ರಿಟಿಷ್ ವಿಮಾನಗಳು 12-13ನೇ ತಾರೀಖಿನ ರಾತ್ರಿ ಸಿಂಗೋರಾ ವಿಮಾನ ನಿಲ್ದಾಣದ ಮೇಲೆ ಮುತ್ತಿಗೆ ನಡೆಸಿದವು ರೈಲ್ವೆ ಸ್ಟೇಷನ್‌ಬಳಿ ಇರುವ ಭವನಗಳ ಮೇಲೆ ಬಾಂಬುಗಳಮೇಲೆ ಬಾಂಬುಗಳು ಬಿದ್ದು ಸ್ಫೋಟನವಾಗುತ್ತಿದ್ದುದು ಕೇಳಿಬಂತು ಇತರ ವಿಮಾನಗಳು ಬಂದರುಗಳ ಮೇಲೆ ಮುತ್ತಿಗೆ ನಡೆಸಿ ಬೆಂಕಿಯನ್ನು ಆರಂಭಿಸಿದವು ಹಲವು ಟನ್‌ಗಳಷ್ಟು ಬಾಂಬುಗಳನ್ನು ಹಾಕಲಾಯಿತು

ನಾಜಿ ಅಧಿಕಾರಿಗಳಿಗೆ ಸೂಚನೆ

'ಹಿಂದಕ್ಕೆ ಹೋಗುವುದು ನಿಮ್ಮ ಅಧಿಕಾರಿಗಳಿಗೆ ಬಹಳ ವ್ಯಸನಕಾರಕವಾದ ಕೆಲಸವೆಂಬುದು ಗೊತ್ತು ನಮಗೆ ಅನುಕೂಲವಾದ ಸ್ಥಾನಗಳು ಹಲವಿವೆ ಅವುಗಳನ್ನು ನಾವು ಬಿಡಲಾಗದು ಶರಣಾಗತರಾಗುವ ಪ್ರತಿಯೊಬ್ಬ ಸೈನ್ಯಾಧಿಕಾರಿಯನ್ನು ಮಿಲಿಟರಿ ಕೋರ್ಟಿನ ವಿಚಾರಣೆಗೆ ಒಳಪಡಿಸಲಾಗುವುದು" ಎಂಬದಾಗಿ ರಷ್ಯನ್ ರಂಗದಲ್ಲಿರುವ ನಾಜಿ ಸೈನ್ಯಾಧಿಕಾರಿಗಳಿಗೆ ಜರ್ಮನಿ ಸರ್ಕಾರವು ಆಜ್ಞೆಮಾಡಿದೆ.

ಭಾರತದ ಸಹಾಯ ಪಡೆಯಬೇಕು

ಭರತಖಂಡದಲ್ಲಿ ಬ್ರಿಟನ್ನು ಪ್ರಚಂಡ ಸೇನೆಯನ್ನು ಕಟ್ಟಬೇಕು ಮಿತ್ರರಾಷ್ಟ್ರಗಳ ಸಹಾಯಕ್ಕಾಗಿ ಭರತಖಂಡವು 1 ಕೋಟಿ ಸೈನಿಕರನ್ನು ಕಳುಹಿಸುವಂತೆ ಮಾಡಲು ಬ್ರಿಟನ್ನು ಭರತಖಂಡಕ್ಕೆ ಎಲ್ಲ ರಿಯಾಯಿತಿಗಳನ್ನು ತೋರಿಸಬೇಕು ಭಾರತವನ್ನು ಅಧೀನರಾಷ್ಟ್ರವೆಂದು ತಿಳಿದು ವರ್ತಿಸುವ ಬ್ರಿಟನ್ನಿನ ನೀತಿಯನ್ನು ಯಾವ ದೃಷ್ಟಿಯಿಂದಲೂ ಮುಂದುವರಿಸಲು ಸಾಧ್ಯವಿಲ್ಲ ಭಾರತದ ಅಪೂರ್ವಸಾಧನ ಸಂಪತ್ತಿನ ಪೂರ್ಣಲಾಭವನ್ನು ನಾವು ಪಡೆಯಬೇಕಾಗಿದ್ದರೆ ಬ್ರಿಟನ್ನಿನ ನೀತಿ ಬದಲಾವಣೆ ಹೊಂದಲೇಬೇಕು ಎಂದು ನ್ಯೂಯಾರ್ಕ್ ಮಿರರ್ ಎಂಬ ಪತ್ರಿಕೆಯು ಪ್ರಕಟಿಸಿದೆ

ರಂಗೂನಿನಲ್ಲಿ ೧೦೦೦ ಮಂದಿ ಸತ್ತರು

ಕಳೆದ ಡಿಸೆಂಬರ್ 23 ನೆಯ ತಾರೀಖು ರಂಗೂನಿನ ಮೇಲೆ ನಡೆದ ಪ್ರಥಮ ವಿಮಾನ ಮುತ್ತಿಗೆಯಲ್ಲಿ 1000 ಜನರು ಸತ್ತರೆಂದೂ 950 ಮಂದಿ ಗಾಯಗೊಂಡರೆಂದೂ ಅಂದಾಜುಮಾಡಲಾಗಿದೆ. ಅಪಾಯಕ್ಕೊಳಗಾದವರಲ್ಲಿ ಬರ್ಮೀಯರೂ ಭಾರತೀಯರೂ ಸಮವಾಗಿರುವರೆಂದೂ ರಕ್ಷಣೆ ಸ್ಥಳಗಳಲ್ಲಿದ್ದವರು ಸುರಕ್ಷಿತವಾಗಿದ್ದರೆಂದೂ ಹೊರಗಡೆ ಓಡಿದವರು ಮಾತ್ರ ಅಪಾಯಕ್ಕೀಡಾದರೆಂದೂ ಪ್ರಕಟವಾಗಿದೆ

ತುರ್ಕಿಯಲ್ಲಿ ಯುದ್ಧ ಭೀತಿ

ತಮಗೆ ಹೆಚ್ಚು ಟ್ಯಾಂಕುಗಳನ್ನೂ, ವಿಮಾನಗಳನ್ನೂ ಮತ್ತು ಸೈನಿಕ ಶಿಕ್ಷಕರನ್ನೂ ಕಳಿಸಿಕೊಡಬೇಕೆಂದು ತುರ್ಕಿಯವರು ಕೇಳಿದ್ದಾರೆ ತುರ್ಕಿಯ ಮೂಲಕ ಕಕೇಶಿಯಾ ಮತ್ತು ಸೂಯೆಜ್‌ಗಳ ಮೇಲೆ ಜರ್ಮನರು ಬೀಳುವರೆಂಬುದಾಗಿ ಅವರು ತಿಳಿಸುತ್ತಾರೆ. ಅವರ ಶತಗಳು ಮೊದಲು ಮಾಲ್ಟಾ ದ್ವೀಪಕ್ಕೆ ಕ್ರೀಟ್ ದ್ವೀಪಕ್ಕಾದ ಗತಿಯನ್ನು ಉಂಟುಮಾಡುವರೆಂದು ತುರ್ಕಿಯವರು ನಂಬಿದ್ದಾರೆ.

ಏಷ್ಯನರು ಆಸ್ಟ್ರೇಲಿಯಾಕ್ಕೆ ಬರಲು ಪ್ರತಿಬಂಧಕವಿಲ್ಲ

ಏಷ್ಯನರು ಆಸ್ಟ್ರೇಲಿಯಾಕ್ಕೆ ಕಾಲಿಡಬಾರದೆಂದು ಹಾಕಿದ್ದ ಪ್ರತಿಬಂಧಕಾಜ್ಞೆಯನ್ನು ಆಸ್ಟ್ರೇಲಿಯಾದ ಸಂಗ್ರಾಮ ಮಂತ್ರಿಮಂಡಲವು ತೆಗೆದುಹಾಕಿದೆ ಪೂರ್ವದ ಕದನ ಕ್ಷೇತ್ರಗಳಿಂದ ಹೆಂಗಸರು ಮಕ್ಕಳನ್ನು ಆಸ್ಟ್ರೇಲಿಯಾಕ್ಕೆ ಕರತರಲು ಅವಕಾಶಕೊಡುವುದೇ ಇವರ ಉದ್ದಿಷ್ಟವೆಂದು ಶ್ರೀ ಕರ್ಟಿನ್‌ರವರು ತಿಳಿಸಿದರು

ಮಲಯದ ಭವಿಷ್ಯವು ೩ ವಾರಗಳಲ್ಲಿ ನಿರ್ಧರಿಸಲ್ಪಡುವುದು

ಬ್ರಿಟಿಷರು ಮಲಯಾವನ್ನು ರಕ್ಷಿಸಿಕೊಳ್ಳಬಲ್ಲರೇ ಅಥವಾ ತಮ್ಮ ಸೇನೆಗಳನ್ನೆಲ್ಲ ಹಿಂದಕ್ಕೆ ಕರೆಸಬೇಕಾಗಿರುವುದೇ ಎಂಬುದು ಮುಂದಿನ ಮೂರು ವಾರಗಳಲ್ಲಿ ನಿರ್ಧರಿಸಲ್ಪಡಲಿದೆಯೆಂದು ಮಲಯಾದಲ್ಲಿರುವ ಆಸ್ಟ್ರೇಲಿಯಾ ಸುದ್ದಿಗಾರರು ತಿಳಿಸುತ್ತಾರೆ ಮಲಯವನ್ನು ಆಕ್ರಮಿಸುತ್ತಿರುವ ಜಪಾನಿನ ಸೇನೆಗಳಿಗೂ ಮತ್ತು ಇಲ್ಲಿರುವ ಹಲವು ಮಂದಿ ಸಾಮ್ರಾಜ್ಯಯೋಧರಿಗೂ ಈಗ 'ರೇಸ್' ನಡೆಯುತ್ತಿದೆ ಈಗಾಗಲೇ ಜಪಾನರು ೧೫ ವಿಮಾನನಿಲ್ದಾಣಗಳನ್ನು ಹಿಡಿದಿದ್ದಾರೆಂದು ಹೇಳಲಾಗಿದೆ

ಜಪಾನರ ವಿರುದ್ಧವಾಗಿ ವರ್ತಿಸುವವರಿಗೆ ಮರಣದಂಡನೆ

ಮನಿಲಾನಗರದ ಜನರಿಗೆ ಜಪಾನರು ಈ ರೀತಿ ಆಜ್ಞೆ ಮಾಡಿದ್ದಾರೆ —ಜಪಾನೀಸ್ ಸೈನಿಕರಿಗಾಗಲಿ, ಜಪಾನೀಸ್ ಪ್ರಜೆಗಳಿಗಾಗಲಿ ಗಾಯವುಂಟುಮಾಡುವವರನ್ನು ಕೊಂದುಹಾಕಲಾಗುತ್ತದೆ ಘಾತಕರು ಸಿಕ್ಕದೇ ಹೋದರೆ ಕೃತ್ಯ ನಡೆದ ಬೀದಿಯಲ್ಲಿ ಪ್ರಭಾವಶಾಲಿಗಳಾದ 10 ಮಂದಿಯನ್ನು ದಸ್ತಗಿರಿಮಾಡಿ, ಬಂಧನದಲ್ಲಿರಿಸಲಾಗುತ್ತದೆ ಫಿಲಿಪೈನ್ ಯೋಧರು ನಮ್ಮ ಉದ್ದಿಷ್ಟಗಳನ್ನು ತಿಳಿದು ನಮ್ಮೊಂದಿಗೆ ಸಹಕರಿಸಬೇಕು ಜಪಾನ್‌ನ ವಿರುದ್ಧವಾಗಿ ಕೆಲಸಮಾಡತಕ್ಕಂತಹವರು ಯಾವುದೇ ಕುಲಗೋತ್ರಕ್ಕೆ ಸೇರಿರಲಿ, ಅವರಿಗೆ ಮರಣದಂಡನೆ ವಿಧಿಸಲಾಗುತ್ತದೆ

ನಾಜಿಗಳು ಹೊಸ ಬಲವನ್ನು ತರುತ್ತಿದ್ದಾರೆ

'ಎಲ್ಲ ರಂಗಗಳಲ್ಲಿಯೂ ರಷ್ಯನರು ಮುಂದೆ ನುಗ್ಗುತ್ತಿದ್ದಾರೆ ಇವರ ಮುಂದೋಟವನ್ನು ತಡೆಯಲು ನಾಜಿಗಳು ಹೊಸ ಬಲವನ್ನು ರಂಗಕ್ಕೆ ತರುತ್ತಿದ್ದಾರೆ ಒಂದು ಜಿ ಪಡೆಯನ್ನು ಸಂಪೂರ್ಣವಾಗಿ ವಿಮಾನಗಳ ಮೂಲಕ ಕೇಂದ್ರರಂಗಕ್ಕೆ ಕರೆತರಲಾಯಿತೆಂದು ಸೆರೆಯಲ್ಪಟ್ಟ ನಾಜಿಯೊಬ್ಬನು ತಿಳಿಸಿದನು ರಷ್ಯನರು ಮೊಜೈಸ್ಕ್ ಆಚೆಗೆ ಎರಡೂ ಪಾರ್ಶ್ವಗಳಿಂದ ಮುಂದುವರಿಯುತ್ತಿರುವುದರಿಂದ ಆ ನಗರದಲ್ಲಿರುವ ಭಾರಿ ಜರ್ಮನ್ ಸೇನೆಯು ನಾಶವಾಗುವ ಸಂಭವವಿದೆ ರಷ್ಯನರ ಜಯಕ್ಕೆ ಒಂದು ಹೊಸ ಬಗೆಯ ಫಿರಂಗಿಯೂ ಸಹ ಕೊಂಚಮಟ್ಟಿಗೆ ಕಾರಣವಾಗಿದೆ ಮಾಸ್ಕೋ ಕಾರ್ಖಾನೆಗಳು ಈ ಹೊಸ ಫಿರಂಗಿಗಳನ್ನು ಅಪಾರವಾಗಿ ತಯಾರಿಸುತ್ತಿವೆ" ಎಂದು ಮಿಲಿಟರಿ ವಿಮರ್ಶಕರೊಬ್ಬರು ತಿಳಿಸಿದ್ದಾರೆ

ವೈಸರಾಯರ ಮಂತ್ರಿಮಂಡಳದ ಸದಸ್ಯರಾಗಿದ್ದು ಮೃತರಾದ ಸರ್ ಅಕ್ಬರ್‌ಹೈದರಿಯವರ ಸ್ಥಾನಕ್ಕೆ ಬೇರೊಬ್ಬರನ್ನು ಆರಿಸುವಬಗ್ಗೆ ಪರಿಶೀಲನೆ ನಡೆಯುತ್ತಿದೆ ಸ್ಥಾನಕ್ಕೆ ಸರ್ ಮಿರ್ಜಾಇಸ್ಮಾಯಿಲರು ಬರುವರೆಂಬ ವದಂತಿ ಇತ್ತು. ಈಗ ಸರ್ ಮಿರ್ಜಾರವರು ಸಚಿವಪದವನ್ನು ಸ್ವೀಕರಿಸಲು ಇಷ್ಟವುಳ್ಳವರಾಗಿಲ್ಲವೆಂದೂ ಸಂಸ್ಥಾನಗಳಿಂದ ಒಬ್ಬರನ್ನು ನೇಮಿಸಬೇಕೆಂದು ವೈಸರಾಯರು ಅಪೇಕ್ಷಿಸಿರುವುದರಿಂದ ಛತ್ತಾರಿನವಾಬರನ್ನು ಸರ್ ಅಕ್ಬರ್‌ಹೈದರಿಯವರ ಸ್ಥಾನದಲ್ಲಿ ನೇಮಿಸಬಹುದೆಂದು ಹೇಳಲಾಗಿದೆ

ಮಲೆಯಾ ರಕ್ಷಣೆ ಬಗ್ಗೆ ಎಚ್ಚರಿಕೆ

ಮಲೆಯಾ ಯುದ್ಧರಂಗದಲ್ಲಿ ಏಟುಬಿದ್ದು ಹಿಂತಿರುಗಿದ ಆಸ್ಟ್ರೇಲಿಯಾ ಯೋಧರು ಮಲಯಾ ಪರಿಸ್ಥಿತಿಯ ಬಗ್ಗೆ ವಿವರಿಸುತ್ತಾ—"ಬೇಗನೆ ತಕ್ಕ ಕಾರ್ಯಕ್ರಮ ಕೈಗೊಳ್ಳದಿದ್ದರೆ ಕ್ರೀಟ್ ದ್ವೀಪಕ್ಕಾದ ಗತಿಯೇ ಮಲಯಾಕ್ಕೂ ಆಗುತ್ತದೆ ನಾವು ಮಲಯಾಕ್ಕೆ ತೆರಳಿದಾಗ, ಸಂಗ್ರಾಮ ಪರಿಕರಣಗಳಿಂದ ಕೂಡಿ, ದುರ್ಭೇದ್ಯವಾದಂತಹ ಗೃಹಕ್ಕೆ ನಾವು ತೆರಳುತ್ತಿದ್ದೇವೆಂದು ಅಧಿಕಾರಿಗಳು ತಿಳಿಸಿದರು 12 ತಿಂಗಳಾದ ಮೇಲೆ ಜಪಾನರು ಮುತ್ತಿಗೆ ಹಾಕಿದರು ಆದರೆ ಗೃಹವು ಮಾತ್ರ ಬರಿದಾಗಿದೆ! ವಾಯುಮಂಡಲದಲ್ಲಿ ಜಪಾನಿಗೆ ಇದಿರೇ ಇಲ್ಲ ಮಲಯಾದಲ್ಲಿ ಜಪಾನಿಗೆ ಸಮನಾದ ವಿಮಾನ ಬಲವನ್ನು ನಮ್ಮ ಸೇನೆಗಳಿಗೂ ಒದಗಿಸುವುದೊಂದೇ ಮಲಯವನ್ನು ಉಳಿಸಲು ಮಾರ್ಗ' ಎಂದು ಹೇಳಿದರು

ಮಲಯಾದಲ್ಲಿ ಬ್ರಿಟಿಷರ ಕಾರ್ಯಕ್ರಮ

ಮಲಯಾದಲ್ಲಿ ಬ್ರಿಟಿಷ್ ಸೇನೆಗಳು ಹಿಂದು ಹಿಂದಕ್ಕೆ ಸರಿಯುತ್ತಿವೆಯೆಂದೂ, ಹಿಮ್ಮೆಟ್ಟುವಾಗ ಹಿಂದೆ ಬಿಟ್ಟು ಬರಬೇಕಾದ ವಸ್ತುಗಳನ್ನೆಲ್ಲಾ ನಾಶಮಾಡಿ ಬರುತ್ತಿದ್ದಾರೆಂದೂ, ಅನೇಕ ಸೇತುವೆಗಳನ್ನೂ ಮತ್ತು ಪೂರ್ವ ಮಲಯದಲ್ಲಿದ್ದ ಬಹು ಮುಖ್ಯವಾದ ಒಂದು ಸುರಂಗವನ್ನೂ ನಾಶಪಡಿಸಲಾಯಿತೆಂದೂ, ರಾಯಲ್ ಎಂಜನೀರ್ಸ್ ಪಡೆಗೆ ಸೇರಿದ ಸೈನಿಕರು ಶತ್ರುಸೇನೆಯ ಹಿಂದೆ ಬಹಳ ಕಿರುಕುಳ ಕೊಡುತ್ತಿದ್ದಾರೆಂದೂ, ರಸ್ತೆಗಳನ್ನೂ ರೈಲ್ವೆ ಸೇತುವೆಗಳನ್ನೂ ಧ್ವಂಸಮಾಡುತ್ತಿದ್ದಾರೆಂದೂ, ಕೌಲಾಕಾಂಗ್‌ಸಾರ್ ಬಳಿ ಪೆರಾಕ್ ನದಿಗೆ ಕಟ್ಟಿದ್ದ ಇಸ್ಕಂದರ್ ಸೇತುವೆಯನ್ನೂ ಮತ್ತು ಕೆಲಂಟನ್ ನದಿಯ ಮೇಲೆ ಬರುವ ಪೂರ್ವ ತೀರದ ರೈಲ್ವೆಯ ಗಿಲ್ಲೆಮಾರ್ಡ್ ಸೇತುವೆಯನ್ನು ಧ್ವಂಸಮಾಡಲಾಗಿದೆಯೆಂದೂ ತಿಳಿದುಬಂದಿದೆ

ಜಪಾನರನ್ನು ಸೋಲಿಸಲು ಚೀಣರೇ ಸಮರ್ಥರು

ಜಪಾನಿನ ಮೇಲೆ ನಡೆಸುತ್ತಿರುವ ಸಂಗ್ರಾಮದ ವಿಜಯವು ಚೀಣರ ಕೈಯಲ್ಲಿದೆಯೆಂಬ ಅಭಿಪ್ರಾಯವು ಈಗ ಬ್ರಿಟನ್ನಿನಲ್ಲಿ ಬಲವಾಗುತ್ತಿದೆ ಚುಂಗ್‌ಕಿಂಗ್‌ನಲ್ಲಿ ಮೂರು ವರ್ಷಗಳಿದ್ದು ಬಂದಿರುವ ಶ್ರೀ ಫಾರ್ಮನ್ ಎಂಬುವರು 'ಸ್ಟಾರ್' ಪತ್ರಿಕೆಯಲ್ಲಿ ಬರೆಯುತ್ತ "ಕಳೆದ ೫ ವಾರಗಳಲ್ಲಿ ಜಪಾನು ಚೀಣಾ ಸಮುದ್ರದ ಮೇಲಿನ ಪೂರ್ಣ ಹತೋಟಿಯನ್ನು ತನ್ನ ಕೈಗೆ ತೆಗೆದುಕೊಂಡಿದೆ ಮುಖ್ಯ ಸ್ಥಾನಗಳನ್ನೆಲ್ಲ ಅದು ಹಿಡಿದಿದೆ ಡಚ್ ಇಂಡೀಸ್ ಜಪಾನಿನ ವಶವಾದರೆ ಅದು ಪಶ್ಚಿಮ ಪೆಸಿಫಿಕ್‌ಗೆ ಹೋಗಲು ಹೆಚ್ಚು ಮಾರ್ಗಗಳಿರುವುದಿಲ್ಲ ಜಪಾನ್ ನೌಕೆಗಳು ದ್ವೀಪಗಳ ಹಿಂದೆ ಅಡಗಿಕೊಳ್ಳಬಹುದು ಮಿತ್ರನೌಕೆಗಳು ಅವುಗಳ ಮೇಲೆ ಬೀಳಲು ಕಷ್ಟವಾಗುವುದು ಜಪಾನನ್ನು ಸೋಲಿಸಬೇಕಾದರೆ ಭೂಮಿಯ ಮೇಲೆ ಅದಕ್ಕೆ ಸರಿಯಾದ ಏಟು ಹಾಕಬೇಕು ಜರ್ಮನಿಗೆ ರಷ್ಯವು ಹೇಗೆ ಮೃತ್ಯುವಾಗಬೇಕಾಗಿದೆಯೋ ಹಾಗೆಯೇ ಜಪಾನಿಗೆ ಚೀಣವು ಮೃತ್ಯುವಾಗಬೇಕು ಈಗ ಬ್ರಿಟಿಷರು ಚೀಣಾ ಸೈನ್ಯಾಧಿಕಾರಿಗಳ ಸಲಹೆ ಪಡೆಯುವುದು ಮೇಲು ಇಂಡೋ ಚೀಣಾ ಮೂಲಕ ಬ್ರಿಟಿಷರು ಮೇಲೆ ಬೀಳಲು ಚೀಣರ ಸಹಾಯ ಪಡೆಯಬಹುದು" ಎಂದು ತಿಳಿಸಿದ್ದಾರೆ

ಮೊದಲು ಹಿಟ್ಲರನನ್ನು ಸೋಲಿಸಬೇಕು

ಅಮೇರಿಕದ ನೌಕಾ ಕಾರ್ಯದರ್ಶಿಗಳಾದ ಕ|| ನಾಕ್ಸ್‌ರವರು ಈಗಿನ ಸಂಗ್ರಾಮ ಪರಿಸ್ಥಿತಿಯನ್ನು ಕುರಿತು ವಿವರಿಸುತ್ತ "ಪೆಸಿಫಿಕ್‌ನಲ್ಲಿ ಈಗಲೇ ಅಮೇರಿಕ ನೌಕಾಬಲವು ಅಗಾಧ ಕದನವನ್ನು ನಡೆಸುವ ನಿರೀಕ್ಷೆಯಿಲ್ಲ ಮೊದಲು ನಾಶಮಾಡಬೇಕಾಗಿರುವುದು ಜಪಾನನ್ನಾಗಲಿ, ಇಟಲಿಯನ್ನಾಗಲಿ ಅಲ್ಲ ಹರ್ ಹಿಟ್ಲರನನ್ನು. ಉತ್ತರ ಮತ್ತು ದಕ್ಷಿಣ ಅಟ್ಲಾಂಟಿಕ್‌ನಲ್ಲೂ ಮತ್ತು ಪೆಸಿಫಿಕ್‌ನಲ್ಲೂ ಸಂಗ್ರಾಮವಸ್ತುಗಳನ್ನು ಸುರಕ್ಷಿತವಾಗಿ ಸಾಗಿಸುವುದು ಅಮೆರಿಕ ನೌಕಾಬಲದ ಪ್ರಥಮಕರ್ತವ್ಯ. ಅಮೆರಿಕದಸೇನೆಯು ಬೇಗನೆ ಜಯಭೇರಿಬಾರಿಸತಕ್ಕಂತಹ ಅಗಾಧ ಕಾರ್ಯವನ್ನು ನಡೆಸುವಂತಿಲ್ಲ. ಹರ್ ಹಿಟ್ಲರನ ನಾಶವಾಯಿತೆಂದರೆ ಆಕ್ಸಿಸ್ ರಚನೆಯೆಲ್ಲ ಕಳಚಿಬೀಳುವುದು ಆಗ ಜರ್ಮನಿಯ ಮಿತ್ರರನ್ನು ಸೋಲಿಸುವುದು ಸುಲಭ ಜಪಾನನ್ನು ಯುದ್ಧಕ್ಕೆ ಎಳೆಯುವುದರಿಂದ ಅಮೆರಿಕವು ಬ್ರಿಟನ್ನಿಗೂ ರಷ್ಯಕ್ಕೂ ಸಂಗ್ರಾಮವಸ್ತುಗಳನ್ನು ಕಳಿಸದಂತೆ ಮಾಡಬೇಕೆಂಬುದೇ ಹಿಟ್ಲರನ ಉದ್ದಿಷ್ಟ ಜಪಾನು ವರ್ತಿಸಿದಂತಹ ರೀತಿಯಲ್ಲಿ ರಾಷ್ಟ್ರವನ್ನು ಬಲಿಗೊಟ್ಟಿರುವ ಉದಾಹರಣೆಯು ಆಧುನಿಕ ಇತಿಹಾಸದಲ್ಲಿಯೇ ಇಲ್ಲ ಜರ್ಮನಿಯ ಒತ್ತಾಯದ ದೆಸೆಯಿಂದ ಜಪಾನು ಈಗ ಆತ್ಮಹತ್ಯಕ್ಕೆದಾರಿಮಾಡಿಕೊಂಡಂತಾಗಿದೆ" ಎಂದು ತಿಳಿಸಿದರು

ಫ್ರೆಂಚ್ ನೌಕೆಗಳನ್ನು ಹಿಟ್ಲರನು ವಶಪಡಿಸಿಕೊಳ್ಳಬಹುದು

ವಿಚಿಯ ಸ್ಥಿತಿಗತಿಗಳನ್ನು ನೋಡಿದರೆ ಮಾರ್ಷಲ್ ಪೆಟೆನ್ನರು ಇನ್ನು ಬಹಳಕಾಲ ಫ್ರೆಂಚ್ ನೌಕೆಗಳನ್ನು ಹಿಟ್ಲರರಿಂದ ಉಳಿಸಿಕೊಳ್ಳಲಾರರೆಂದು ಕಾಣಬರುತ್ತಿದೆ. ಫ್ರೆಂಚ್ ನಾವಿಕರು ತಮ್ಮ ನೌಕೆಗಳನ್ನು ಮಿತ್ರರಾಷ್ಟ್ರಗಳಿಗೆ ವಿರುದ್ಧವಾಗಿ ಸಂಗ್ರಾಮಕ್ಕೆ ಒಯ್ಯುವುದು ಅಸಂಭವವೆಂದು ನಂಬಲಾಗಿದೆ ಒಂದುವೇಳೆ ಹರ್ ಹಿಟ್ಲರನು ಫ್ರೆಂಚ್ ನೌಕೆಗಳನ್ನೆಲ್ಲ ವಶಪಡಿಸಿಕೊಳ್ಳುವುದಾದರೆ, ಅವುಗಳನ್ನು ನಡೆಸಲು ತರಪೇತು ಹೊಂದಿದ ನಾಜಿ ನಾವಿಕರು ಅನೇಕಮಂದಿ ಇದ್ದಾರೆ ಈಗ ಸಮುದ್ರಗಳಲ್ಲಿ ಜರ್ಮನಿಯ ಅನೇಕ ಸಬ್‌ಮೆರೀನುಗಳಿವೆ ನಾಜಿಗಳು ಬಹಳ ಆತುರದಿಂದ ಹೊಸ ಸಬ್‌ಮೆರೀನುಗಳನ್ನು ನಿರ್ಮಿಸುತ್ತಿದ್ದಾರೆ ಬಹುಶಃ ಅಟ್ಲಾಂಟಿಕ್ ಕದನವನ್ನು ಬಲಪಡಿಸಿ, ಮೆಡಿಟರೇನಿಯನ್‌ನಲ್ಲಿ ಹೆಚ್ಚಿನ ಚಟುವಟಿಕೆ ತೋರಿಸುವುದೇ ಇವರ ಉದ್ದಿಷ್ಟವಿರಬೇಕು ಈ ಮಧ್ಯೆ ಸಬ್‌ಮೆರೀನ್ ವಿನಾಶ ಕಾರ್ಯವು ಯಶಸ್ವಿಯಾಗಿ ನಡೆಯುತ್ತಿದೆ

ಸಿಂಗಪುರವನ್ನು ರಕ್ಷಿಸಿಕೊಳ್ಳಲಾಗುತ್ತದೆ

'ಸಿಂಗಪುರವನ್ನು ರಕ್ಷಿಸಿಕೊಳ್ಳಬೇಕೆಂದು ನಾವು ಸಂಕಲ್ಪಮಾಡಿದ್ದೇವೆ ಶತ್ರುವಿನ ಮೊದಲನೇ ಏಟನ್ನು ತಪ್ಪಿಸಿಕೊಂಡು ಮುಖ್ಯ ಕ್ಷೇತ್ರಗಳಿಂದ ಆದಷ್ಟುಮಟ್ಟಿಗೆ ಶತ್ರುಗಳನ್ನು ದೂರದಲ್ಲಿಟ್ಟಿರುವುದೇ ಬ್ರಿಟನ್ನಿನ ಕರ್ತವ್ಯ ಮಿತ್ರರಾಷ್ಟ್ರಗಳವರು ರಕ್ಷಿಸಿಕೊಂಡೇ ತೀರಬೇಕೆಂದು ಸಂಕಲ್ಪಿಸಿರುವ ಕ್ಷೇತ್ರಗಳಲ್ಲಿ ಸಿಂಗಪುರವೂ ಒಂದು ಇದುವರೆಗೆ ನಡೆಸಿಲ್ಲದಂತಹ ಉಗ್ರಮುತ್ತಿಗೆಯು ಸಿಂಗಪುರದ ಮೇಲೆ ಮುಂದೆ ನಡೆಯಲಿದೆ ಆದರೆ ನಾವು ಎದೆಗೆಡಬೇಕಾಗಿಲ್ಲ ಯೂರೋಪ್ ಮತ್ತು ಆಫ್ರಿಕಾಗಳಲ್ಲಿ ಅನೇಕ ದಿನಗಳಮೇಲೆ ಸಂಗ್ರಾಮವು ಶತ್ರುಗಳಿಗೆ ಯಾವ ರೀತಿ ಪ್ರತಿಕೂಲವಾಗಿ ಪರಿಣಮಿಸಿತೋ ಅದೇ ರೀತಿ ಪೆಸಿಫಿಕ್ ಸಾಗರದಲ್ಲಿಯೂ ಆಗುತ್ತದೆ ಅಮೆರಿಕ, ಆಸ್ಟ್ರೇಲಿಯ, ಬ್ರಿಟನ್, ಡಚ್ ಪೂರ್ವ ಇಂಡೀಸ್ ಮತ್ತು ಚೀಣಾ ದಳಗಳಿಗೆ ಜಯ ಖಂಡಿತ" ಎಂಬುದಾಗಿ ಜೆನ್ರಲ್ ಪೌನಾಲರು ಸಿಂಗಪುರ್ ರೇಡಿಯೋ ಮೂಲಕ ತಿಳಿಸಿದರು

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಪ್ರಯಾಣ

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ೧೪ ನೆಯ ತಾರೀಖು ಬುಧವಾರದಿವಸ ರಾಜಧಾನಿಯಿಂದ ಸೊಲ್ಲಾಪುರಕ್ಕೆ ಪ್ರಯಾಣಮಾಡಿದರು

ವ್ಯಾ.

[೩ನೆಯ ಪುಟದಿಂದ ಮುಂದುವರಿದುದು]

ದಂಡನೆಗೆ ಧನವನ್ನು ಕೊಟ್ಟು ವಂದಿಸುತಿಹರು |
ಕೊಂಡಾಡುವವರಿಗೆ ಕಾಸನ್ನು ಕೊಡರು ‖

ಕಾಣಬಂದಿತು ಕಲಿಯ ನಿಜತತ್ವವೀಗ ಮಾಣಿಸೆನ್ನನ |
ಪೊರೆಯೋ ಶ್ರೀ ವಿಶ್ವಗುರುವೇ ‖

ಎಂದು ಜ್ಞಾನಿಗಳು ಕಲಿಯ ನಿಜಸ್ಥಿತಿಯನ್ನು ಕೊಂಡಾಡಿರುವರು. ಶಿಷ್ಯರು ಗುರುಗಳಲ್ಲಿಯೂ, ಪ್ರಜೆಗಳು ರಾಜರಲ್ಲಿಯೂ, ಹೆಂಡತಿಯು ಗಂಡನಲ್ಲಿಯೂ, ಮಕ್ಕಳು ತಂದೆಯಲ್ಲಿಯೂ, ಸೇವಕರು ಒಡೆಯರಲ್ಲಿಯೂ, ಧರ್ಮದಿಂದ ಹೇಗೆ ನಡೆದುಕೊಳ್ಳಬೇಕೆಂಬ ಶಾಸ್ತ್ರಮಾರ್ಗವನ್ನು ಬಿಟ್ಟು ಅಧರ್ಮಯುಕ್ತವಾದ ಅಶಾಸ್ತ್ರೀಯ ದಾರಿಯನ್ನೇ ಹಿಡಿದಿರುತ್ತಾರೆ. ಎಲ್ಲಿ ನೋಡಿದರೂ ಕ್ರಾಂತಿಯ ಕಾಲವೇ ಕಾಲ!

ನಿರ್ವೀರ್ಯಾ ಪೃಥಿವೀ ನಿರೌಷಧಿರಸಾ ನೀಚಾ ಮಹತ್ವಂ ಗತಾಃ
ಭೂಪಾಲಾ ನಿಜಕರ್ಮಧರ್ಮರಹಿತಾ ವಿಪ್ರಾಃ ಕುಮಾರ್ಗೇ ರತಾಃ |
ಭಾರ್ಯಾ ಭರ್ತೃವಿರೋಧಿನೀ ಪರರತಾ ಪುತ್ರಾಃ ಪಿತುರ್ದ್ವೇಷಿಣಃ
ಹಾ ಕಷ್ಟಂ ಖಲು ವರ್ತತೇ ಕಲಿಯುಗೇ ಧನ್ಯಾ ನರಾ ಯೇ ಮೃತಾಃ ‖

ಅಂದರೆ ಪಾಪಮಯವಾದೀ ಕಲಿಯುಗದ ಪ್ರಾಬಲ್ಯದಿಂದ ಭೂದೇವಿಯು ಸತ್ವಶೂನ್ಯಳಾದಳು. ಗಿಡಮರ ಬಳ್ಳಿಗಳು ಒಣಗಲಾರಂಭಿಸಿದವು. ನೀಚರು ದೊಡ್ಡ ದೊಡ್ಡ ಸ್ಥಾನವನ್ನೇರಿದರು. ದುಷ್ಟಶಿಕ್ಷಕರಾದ ಮಹಾರಾಜರು ಧರ್ಮದಿಂದ ವಿಮುಖರಾದರು. ವೇದಶಾಸ್ತ್ರಪಾರಕರಾದ ಬ್ರಾಹ್ಮಣರು ದುಷ್ಟಮಾರ್ಗವನ್ನು ಹಿಡಿದರು. ಹೆಂಡತಿಯು ಪರಪುರುಷಾಸಕ್ತಳಾಗಿ ಗಂಡನನ್ನು ದ್ವೇಷಿಸುವಳು. ಮಕ್ಕಳು ಕಲಿಕಾಲದ ವಿದ್ಯೆಯನ್ನು ಕಲಿತು ತಂದೆತಾಯಿಗಳನ್ನು ಹಿಂಸಿಸುವರು. ಹಾಯ್ ಹಾಯ್ ಬಹಳ ಕಷ್ಟಪರಂಪರೆಯೊದಗಿದಂತಾಯಿತು. ಆದುದರಿಂದ ಇಂಥ ವಿಷಮ ಕಾಲವನ್ನು ನೋಡುತ್ತ ಬದುಕಿರುವುದಕ್ಕಿಂತಲೂ ಮರಣ ಹೊಂದುವುದೇ ಲೇಸೆಂದು ಒಬ್ಬ ಕವಿಯು ಈ ಕಲಿಯುಗದ ಪ್ರಾಬಲ್ಯವನ್ನು ವರ್ಣಿಸಿರುವನು. ಆದರೆ—

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ |
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ‖

ಧರ್ಮಕ್ಕೆ ಎಂದು ಹ್ರಾಸವುಂಟಾಗುವುದೋ ಅಂದು ಈಶ್ವರನೇ ಒಂದೊಂದು ರೂಪದಿಂದ ಅವತರಿಸಿ, ಭಾರತಮಾತೆಯ ಕೋಮಲವಾದ ಅಂಗದಲ್ಲಿ ಚುಚ್ಚಿಕೊಂಡಿರುವ ಅಧರ್ಮವೆಂಬ ಮುಳ್ಳುಗಳನ್ನು ಕಿತ್ತೊಗೆದು ಎಂದಿನಂತೆ ಭಾರತಾಂಬೆಯನ್ನು ಸಂತೋಷಪಡಿಸುವನೆಂಬ ಗೀತೋಕ್ತಿಯಂತೆ ಅನಿತರಸಾಧಾರಣ ಶಕ್ತಿಯುಳ್ಳ ದೈವಪುರುಷನು ಭಾರತಮಾತೆಯ ಗರ್ಭಾಂಬುಧಿಯಲ್ಲಿ ಹುಟ್ಟುವವರೆಗೆ ದೈವಭಕ್ತರು ಎಲೆಮರೆ ಕಾಯಿಯಂತೆ ಸಹಿಸಿಕೊಂಡಿರಬೇಕಾಗಿದೆ.

॥ ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಗುರುತತ್ವಪ್ರಭಾಕರ.

ಲೇ:—ಶ್ರೀ॥ ಭಾಗೀರಥೀಬಾಯಿ ಕಟ್ಟೀಮ, ಕೊಲ್ಹಾಪುರ.

(ಹಿಂದಿನಿಂದ ಮುಂದುವರೆದುದು)

ಗುರು ಎಂಬ ವಸ್ತುವಿನಲ್ಲಿ ದೇವರು ಯಾವ ಬಗೆಯ ಸಾಮರ್ಥ್ಯವನ್ನು ಇಟ್ಟಿದ್ದಾನೋ ತಿಳಿಯದು. ಗುರುವಿನ ಬೆಂಬಲವನ್ನು ಪಡೆದರೆ ವಿದ್ಯಾಸಿದ್ಧಿಯಾಗುವದಂತೂ ನಿಶ್ಚಯ. ದ್ರೋಣಾಚಾರ್ಯರು ಕೌರವ ಪಾಂಡವರಿಗೆ ಧನುರ್ವಿದ್ಯೆಯನ್ನು ಕಲಿಸುತ್ತಿದ್ದಾಗ ಏಕಲವ್ಯನೆಂಬ ಶೂದ್ರನು ತಾನೂ ಅದನ್ನು ಕಲಿಯಬೇಕೆಂಬ ಇಚ್ಛೆಯಿಂದ ಆಚಾರ್ಯರ ಬಳಿಗೆ ಹೋಗಲು, ಅವರು ಶೂದ್ರರಿಗೆ ಧನುರ್ವೇದವನ್ನು ಹೇಳುವದು ಸಂಪ್ರದಾಯಕ್ಕೆ ವಿರೋಧವೆಂದು ಅವನನ್ನು ನಿರಾಕರಿಸಿಬಿಟ್ಟರು. ಆಗ ಅವನು ಅಷ್ಟಕ್ಕೇ ನಿರಾಶನಾಗದೆ ಒಂದು ಏಕಾಂತಸ್ಥಳಕ್ಕೆ ಹೋಗಿ ಮಣ್ಣಿನಿಂದ ಆಚಾರ್ಯರ ಮೂರ್ತಿಯನ್ನು ಮಾಡಿ ಅವರು ತನಗೆ ಹೇಳಿಕೊಡುತ್ತಿರುವರೆಂಬ ಭಾವನೆಯಿಂದ ಧನುರ್ವಿದ್ಯೆಯನ್ನು ಅಭ್ಯಾಸಮಾಡಿದನಂತೆ! ಆಗ ಅವನಿಗೆ ಧನುರ್ವಿದ್ಯೆಯಲ್ಲಿ ಅರ್ಜುನನನ್ನು ಕೂಡ ಬೆರಗುಮಾಡುವಂಥ ಯೋಗ್ಯತೆಯುಂಟಾಯಿತೆಂದು ಕಥೆಯಿದೆ. ಗುರುವೆಂಬ ವಸ್ತುವಿನಲ್ಲಿ ಈ ಬಗೆಯ ಸಾಮರ್ಥ್ಯವಿರುವದರಿಂದ ಶಿಷ್ಯನಾದವನು ಗುರುವಿಗೆ ಶರಣುಹೋಗುವದೇ ಶ್ರೇಯಸ್ಕರವು. ಅರ್ಜುನನು "ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ" ನಿನಗೆ ನಾನು ಶಿಷ್ಯನಾಗಿ ಶರಣುಬಂದಿರುವೆನೆಂದು ಹೇಳಿದಮೇಲೆಯೇ ಶ್ರೀಕೃಷ್ಣನು ಆತ್ಮವಿದ್ಯೆಯನ್ನು ಅವನಿಗೆ ಉಪದೇಶಮಾಡಿದನು.

ಗುರುವೆಂಬ ಶಬ್ದಕ್ಕೆ ತೂಕವಾದ ವಸ್ತುವೆಂದರ್ಥ. ಇಲ್ಲಿ ತೂಕವೆಂದರೆ ದೇಹದ ತೂಕವಲ್ಲ. ಯೋಗ್ಯತೆಯ ತೂಕ. ಯೋಗ್ಯತೆಯೊಂದು ಹೆಚ್ಚಾಗಿದ್ದರೆ ಚಿಕ್ಕವರು ಕೂಡ ದೊಡ್ಡವರಿಗೆ ಗುರುಗಳಾಗುವರು.

ಅಧ್ಯಾಪಯಾಮಾಸ ಪಿತೄನ್ ಶಿಶುರಾಂಗೀರಸಃ ಕವಿಃ |
ಪುತ್ರಕಾ ಇತಿ ಹೋವಾಚ ಜ್ಞಾನೇನ ಪರಿಗೃಹ್ಯ ತಾನ್ ‖
(ಮನುಸ್ಮೃತಿ)

ಪ್ರತಿಭಾಶಾಲಿಯಾದ ಅಂಗೀರಸನು ಹಿರಿಯರಿಗೆ ಓದನ್ನು ಕಲಿಸುತ್ತಿರುವಾಗ ಅವರ ಜ್ಞಾನದ ಕೊರತೆಯ ಕಡೆಗೆ ಲಕ್ಷ್ಯವನ್ನು ಕೊಟ್ಟು "ಮಕ್ಕಳಿರಾ" ಎಂದು ಹೇಳಿದನಂತೆ! ಜ್ಞಾನರೂಪವಾದ ಯೋಗ್ಯತೆಗೆ ಈ ಅಧಿಕಾರವಿರುವದು ಯೋಗ್ಯವಾಗಿದೆ. ಏಕೆಂದರೆ ಲೋಕದಲ್ಲಿ ಬೇಕಾದಷ್ಟು ಐಶ್ವರ್ಯವನ್ನು ಸಂಪಾದಿಸುವದಕ್ಕೆ ವಿದ್ಯೆ ಬೇಕು. ಅಥವಾ ಹಿರಿಯರು ಗಳಿಸಿಟ್ಟಿರುವ ಧನರಾಶಿಯನ್ನು ಸಂರಕ್ಷಿಸಿಕೊಳ್ಳುವದಕ್ಕಾದರೂ ವಿದ್ಯೆಬೇಕು. ಆದ್ದರಿಂದ ವಿದ್ಯೆಯು ಸರ್ವಸಂಪತ್ತುಗಳಿಗಿಂತಲೂ ಮೇಲಾದುದು. ಶ್ರುತಿಯಲ್ಲಿ "ತತೋ ಮೇ ಶ್ರಿಯಮಾವಹ" ಎಂದಿದೆ. ಎಂದರೆ ನನಗೆ ಸಂಪತ್ತನ್ನು ಆಮೇಲೆ ಕೊಡು ಎಂದರ್ಥ. ಮನುಷ್ಯನು ಮೊದಲು ಜ್ಞಾನವನ್ನು ಯಾಚಿಸಬೇಕು. ಸಂಪತ್ತಿನ ಮಾತು ಆಮೇಲೆ. ಏಕೆಂದರೆ ಜ್ಞಾನವಿಲ್ಲದೆ ಎಷ್ಟು ಸಂಪತ್ತಿದ್ದರೂ ವ್ಯರ್ಥ.

ಜ್ಞಾನವು ಪುಸ್ತಕಮೂಲಕವಾಗಿ ಬರುವದಲ್ಲ. ಗುರುಮೂಲಕವಾಗಿ ಬಂದ ಜ್ಞಾನವೇ ಪ್ರಯೋಜನಕರವಾದುದು. ಈ ವಿಷಯದಲ್ಲಿ ಒಬ್ಬ ಕವಿಯು ಹೇಳಿರುವದೇನೆಂದರೆ—

ಯತ್ಸಾರಸ್ವತವೈಭವಂ ಗುರುಕೃಪಾಪೀಯೂಷಪಾಕೋದ್ಭವಂ |
ತಲ್ಲಭ್ಯಂ ಕವಿನೈವ ನೈವ ಹಠತಃ ಪಾಠಪ್ರತಿಷ್ಠಾಜುಷಾ ‖
ಕಾಸಾರೇ ದಿವಸಂ ವಸನ್ನಪಿ ಪಯಃಪೂರಂ ಪರಂ ಪಂಕಿಲಂ |
ಕುರ್ವಾಣಃ ಕಮಲಾಕರಸ್ಯ ಲಭತೇ ಕಿಂ ಸೌರಭಂ ಸೈರಿಭಃ ‖

ಕೋಣವು ದಿನವೆಲ್ಲಾ ಕೊಳದಲ್ಲಿದ್ದರೂ ನೀರನ್ನು ಕದಡಿ ಹೊಲಸುಮಾಡುವುದೇ ಹೊರತು ಸುವಾಸನೆಯನ್ನು ಪಡೆಯುವುದಿಲ್ಲ. ಆದ್ದರಿಂದ ಶಿಷ್ಯನು ಭಯಭಕ್ತಿಯಿಂದ ಗುರುವನ್ನೇ ಹೊಂದಬೇಕು. ಇಂಥ ಗುರುವಿನ ಯೋಗ್ಯತೆಯೇ ಗುರುತಿಲ್ಲದ ಗುರುನಾಮಧಾರಿಗಳಿಗೆ ಗುರುತ್ವಾಧಿಕಾರವು ಹೇಗೆ ಲಭಿಸೀತು?

ಚೈತನ್ಯಂ ಶಾಶ್ವತಂ ಶಾಂತಂ ವ್ಯೋಮಾತೀತಂ ನಿರಂಜನಂ |
ನಾದಬಿಂದುಕಲಾತೀತಂ ತಸ್ಮೈ ಶ್ರೀಗುರವೇ ನಮಃ ‖
" ಸ ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್ "

ಸಕಲ ಚರಾಚರಾತ್ಮಕ ಜಗತ್ತಿಗೆ ಚೇತನಭೂತವಾದುದೂ, ತ್ರಿಕಾಲಾಬಾಧಿತವಾದುದೂ, ಶಾಂತವಾದುದೂ, ಮಾಯಾರಹಿತವಾದುದೂ, ಬ್ರಹ್ಮಾದಿಗಳಿಂದ ದತ್ತವಾದುದೂ, ದೇಶಕಾಲವಸ್ತುಕೃತಪರಿಚ್ಛೇದಶೂನ್ಯವಾದುದೂ ಆದ ಯಾವ ತತ್ವವಿದೆಯೋ ಅದೇ ಗುರುತತ್ವವು. ಇದೇ ಆದಿಯಾದುದು. ಇಂತಹ ಗುರುತತ್ವಲಕ್ಷಣಗಳುಳ್ಳ ಗುರುಗಳಿಂದಲೇ ಮೋಕ್ಷವಾಗುವದೇ ಹೊರತು ಬೇರೆ ಇನ್ನಾರಕಡೆಯಿಂದಲೂ ಮೋಕ್ಷ ದೊರೆಯಲಾರದು. ಇಂಥ ಗುರುವೇ ಅನೇಕ ರೋಗಗಳಿಂದ ನರಳುತ್ತಿರುವ ರೋಗಿಗೆ ತಕ್ಕ ಚಿಕಿತ್ಸೆಯನ್ನು ಮಾಡಿ ಆರೋಗ್ಯಪಡಿಸುವ ಮಹಾವೈದ್ಯನಂತೆ ಭವರೋಗವನ್ನು ನಾಶಮಾಡತಕ್ಕವನಾಗಿರುವನು. ಚರಾಚರಾತ್ಮಕನಾದ ಈ ಬ್ರಹ್ಮಾಂಡಮಂಡಲವನ್ನು ತನ್ನಲ್ಲಡಗಿಸಿಕೊಂಡಿರುವ ಪರಶಿವನ ದರ್ಶನವನ್ನು ಮಾಡಿಸತಕ್ಕವನಾಗಿರುವನು. ತನ್ನ ಕೃಪಾಕಟಾಕ್ಷವೆಂಬ ಬಡಬಾಗ್ನಿಯಿಂದ ಬ್ರಹ್ಮಾಂಡವೆಂಬ ಬುದ್ಬುದಗಳಿಂದೊಡಗೂಡಿದ ಅತಿ ವಿಸ್ತಾರವಾದ ಈ ಮಾಯಾ ಸಮುದ್ರವನ್ನು ನುಂಗಿಬಿಡುವ ಅದ್ಭುತಶಕ್ತಿಯುಳ್ಳವನಾಗಿರುವನು, ಮತ್ತು ತನ್ನ ಉಪದೇಶವಾಣಿಯೆಂಬ ಸ್ವಚ್ಛವಾದ ಕನ್ನಡಿಯೊಳಗೆ ಮೋಕ್ಷಾಂಗನೆಯ
ಆಲಿಂಗನವಂ ಕೊಡುವಂತೆ ಮಾಡುವನು. ಮೋಕ್ಷಾಪೆ
ಕ್ಷೆಯಾದ ಮಾನವನು ಈ ಮೇಲ್ಕಂಡ ಲಕ್ಷಣಯುಕ್
ವಾದ ಗುರುವನ್ನು ಹೊಂದಿದರೆ ಅವನ ಭಾಗ್ಯಕ್ಕೆ ಎಣೆಯೆ
ಇಲ್ಲ.

(೩) ಪ್ರಶ್ನೆ—ಗುರುವಿನ ಆವಶ್ಯಕತೆ ಏನು?

(೩) ಉತ್ತರ—ಪರಮೇಶ್ವರನಿಂದ ಸೃಷ್ಟರಾದ ಮಾ
ವರು ನಾವಾರು? ಎಲ್ಲಿಂದ ಬಂದೆವು? ಇಲ್ಲಿಯ ಕಾ
ವ್ಯವೇನು? ಮುಂದಿನ ಗತಿ ಯಾವುದು? ಇತ್ಯಾ
ವಿವೇಚನೆಯೇ ಇಲ್ಲದೆ ಕೇವಲ ಪಶುವಿನತೆರದಿ ಅಜ್ಞಾ
ನವೆಂಬ ಕಗ್ಗತ್ತಲಲ್ಲಿ ತೊಳಲಿ, ಬಳಲಿ, ನಿರ್ಗತಿಕರ
ಸಂಕಟಪಡುತ್ತಿರುವರನ್ನು ಕರುಣಾಶಾಲಿಯಾದ ಪರಮೇ
ಶ್ವರನು ನೋಡಿ ಕನಿಕರಗೊಂಡು ಜ್ಞಾನೋದಯವನ್ನು
ಟುಮಾಡಿಸಿ ಉದ್ಧಾರಮಾಡುವ ಸಲುವಾಗಿ ಒಬ್ಬ ಮಹಾ
ಪುರುಷನನ್ನು ಕಳುಹಿಸುವನು. ಆ ಮಹಾಪುರುಷನೆ
ನಮ್ಮ ಸದ್ಗುರುವು. ಜನನಮರಣವೆಂಬ ಸಮುದ್ರದ ಅ
ಗಳ ಹೊಡೆತದಿಂದ ತಪ್ಪಿಸಿ ದಡಕ್ಕೆ ಸೇರಿಸುವ ರಕ್ಷಕನ
ಅಂದಮೇಲೆ ಆ ಗುರುವಿನ ಆವಶ್ಯಕತೆಯು ಇಷ್ಟೇ ಎಂ
ಹೇಳಲು ಸಾಧ್ಯವಿಲ್ಲ. ಇಂಥ ಪರಮಪವಿತ್ರ ಗುರುಗಳ
ಅನನ್ಯಭಕ್ತಿಯಿಂದಾಚರಿಸುವದೇ ಸಚ್ಛಿಷ್ಯನ ಕರ್ತವ್ಯ
ಭಕ್ತರಲ್ಲಿ ನಾಲ್ಕುವಿಧವುಂಟು:

ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ |
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ‖

ಎಂಬ ಗೀತಾವಾಕ್ಯದಂತೆ, ಭಕ್ತರಲ್ಲಿ, ಆರ್ತ, ಜಿಜ್ಞಾಸ
ಅರ್ಥಾರ್ಥಿ, ಜ್ಞಾನಿ ಎಂದು ನಾಲ್ಕು ಬಗೆಯುಂಟ
ದುಃಖಪರಿಹಾರಾರ್ಥವಾಗಿ ಶರಣುಬರುವವನು ಆರ್ತನ
ತತ್ತ್ವವನ್ನು ತಿಳಿದುಕೊಳ್ಳಲಿಚ್ಛಿಸುವವನು ಜಿಜ್ಞಾಸ
ಮನಸ್ಸಿನ ಕುತೂಹಲವನ್ನು ಕಳೆದುಕೊಳ್ಳಲಿಚ್ಛಿಸುವವ
ಅರ್ಥಾರ್ಥಿ; ಪರಮಾತ್ಮನ ಸ್ವರೂಪವನ್ನು ತಿಳಿದು ಬ
ಸುವವನು ಜ್ಞಾನಿ.

(ಸಶೇಷ)

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ಸೃಷ್ಟಿಮಹಿಮೆ

ಲೇ—ಮಲ್ಲಿಕಾರ್ಜುನಾರಾಧ್ಯ, ರಾಣೇಬೆನ್ನೂರು [illegible]
[illegible].

ಬ್ರಹ್ಮಾಂಡವನ್ನು ಭಗವಂತನು ಸ್ವಹಸ್ತದಿಂದ ಸಚಿ
ವಾಗಿ ಚಿತ್ರಿಸಿದ ಒಂದು ಪುಸ್ತಕವೆಂದು ಹೇಳಬಹು
ಭೂಮಂಡಲವೆಂಬುದು ಅದರಲ್ಲೊಂದು ಭಾಗ
ಸಣ್ಣ ಭಾಗವೇ ನಮ್ಮ ಭಾಗಕ್ಕೆ ಎಷ್ಟು ದೊಡ್ಡದು
ಎಷ್ಟು ಚಾತುರ್ಯದಿಂದ ಕೂಡಿದುದು!! ಯುಗಾಂತ
ಗಳೆಲ್ಲಾ ಕಳೆದು ಹೋಗುವವರಿಗೂ ಆಲೋಚನಾಪ
ರಾದವರೆಲ್ಲರೂ ಅನೇಕ ಸಂಗತಿಗಳಿಂದ ಕೂಡಿರು
ಮತ್ತು ಅನೇಕ ತತ್ವಾರ್ಥಗಳನ್ನು ಪ್ರಕಾಶಗೊಳಿಸುವ
ಪರಮಾತ್ಮನ ವರ್ಣಸಮಾಮ್ನಾಯವನ್ನು ಓದ
ಒಂದು ಸಲಕ್ಕಿಂತ ಇನ್ನೊಂದು ಸಲ ಮತ್ತಷ್ಟು ಜ್ಞಾ
ಪ್ರದವಾಗಿಯೂ ಸುಂದರವಾಗಿಯೂ ಮತ್ತು ಜ
ವ್ಯಾಪಾರವನ್ನು ಹೆಚ್ಚಿಸುವುದಾಗಿಯೂ ತೋರುತ್ತಿ
ವುದು. ಸಾಯಂಕಾಲದಲ್ಲಿ ನೀಲಿವರ್ಣದಿಂದ ವಿಸ್ತಾ
ವಾಗಿ ಕಂಗೊಳಿಸುವ ಆಕಾಶದಲ್ಲಿ ಕಾಣಬರುವ ಸೂ
ಮಂಡಲವನ್ನು ಯಾವನು ತಾನೆ ಸಮಗ್ರವಾಗಿ ಓ
ಬಲ್ಲನು. ಘೋರವಾದ ಅಲೆಗಳಿಂದ ಘೋರ್ಗರೆಯು
ರುವ ಸಮುದ್ರದ ಸೊಬಗನ್ನು ಯಾವನು ತಾನೆ ಸ
ಯಾಗಿ ತಿಳಿಯಬಲ್ಲನು? ವಸಂತಕಾಲದಲ್ಲಿ ಶೈತ್ಯಸ
ಭಮಾಂದ್ಯಗುಣಗಳಿಂದ ಕೂಡಿ ಇಂಪಾಗಿ ಬೀಸು
ಮಲಯಾನಿಲದಿಂದುಂಟಾಗುವ ಆನಂದಕ್ಕೆ ಯಾವ
ತಾನೆ ಪರಿಮಿತಿಯನ್ನು ಗೊತ್ತುಮಾಡುವನು? ಭೂಕ
ಪ ಉಂಟಾಗಿ ಗಿರಿಗುಹೆಗಳೆಲ್ಲಾ ಬಿರಿದು ಭೂಗರ್ಭ
ಲ್ಲವೂ ಕರತಲಾಮಲಕವಾಗಿ ಕಾಣಬರುವಾಗ ಪರಶಿ
ಸೃಷ್ಟಿಮಹಿಮೆಯನ್ನು ಯಾವನು ತಾನೆ ಚೆನ್ನಾಗಿ ಹ
ಮುಗಿಸಬಲ್ಲನು? ಪ್ರತಿಯೊಂದು ಸಂಯೋಗಭೇ
ವನ್ನೂ ವಿದ್ಯುಲ್ಲತೆಯ ಪ್ರತಿಯೊಂದು ಅದ್ಭುತವನ
ಪ್ರತಿಯೊಂದು ಯಾಂತ್ರಿಕ ಶಕ್ತಿ ವಿಶೇಷವನ್ನೂ ವಸ
ಗಳ ಪ್ರತಿಯೊಂದು ರೂಪಾಂತರವನ್ನೂ ಯಾವನು ಸ

ಕವಾಗಿ ತನ್ನೊಡನಾಡಿಗಳಿಗೆ ಮನಗಾಣಿಸಬಲ್ಲನೋ, ಅವನ ಜನ್ಮವು ಅವನ ಜನಾಂಗಕ್ಕೊಂದು ಕೀರ್ತಿಚಂದ್ರಿಕೆಯೇ ಸರಿ. ಪ್ರತಿಯೊಂದು ಅದ್ಭುತ ಶಕ್ತಿಗಳಲ್ಲಿ ಅಡಗಿಕೊಂಡಿರುವ ಮಹಾ ವಿಚಾರವನ್ನು ಕಂಡುಹಿಡಿಯುವುದನ್ನೂ, ಸೃಷ್ಟಿ ಕ್ರಮಕ್ಕೆ ಸಂಬಂಧಪಟ್ಟ ಆಲೋಚನೆಗಳ ಮೂಲತತ್ತ್ವಗಳನ್ನು ತಿಳಿಯುವುದನ್ನೂ, ಸೃಷ್ಟಿ ಮಹಿಮೆಯ ಮೂಲಕಾರಣಗಳ ಅನುಕ್ರಮಣಿಕೆಯನ್ನು ರಚಿಸುವುದನ್ನೂ ಸಾಧಿಸುವವರಿಗೆ ಪ್ರತಿಫಲವಾಗಿ ಲಭಿಸುವ ಕೀರ್ತಿಯು ಅವರ ಜೀವಮಾನವನ್ನು ಚಿರಕಾಲ ಬೆಳಗುವ ನಂದಾದೀಪವಲ್ಲವೇ ? ಶ್ರದ್ಧೆಯಿಂದಲೂ ಸ್ಥಿರಪ್ರಯತ್ನದಿಂದಲೂ ತನ್ನ ಬಳಿಗೆ ಬರುವ ವಿದ್ಯಾರ್ಥಿಗೆ ಈ ಭಗವಂತನ ಪುಸ್ತಕವು ಯಾವ ಮಹಾತತ್ತ್ವಗಳನ್ನೂ ಯಾವ ವಿಶೇಷ ಸಂಗತಿಗಳನ್ನೂ ತಿಳಿಸುವುದಕ್ಕೂ ಹಿಂಜರಿಯುವುದಿಲ್ಲ. ಕುತೂಹಲದಿಂದ ಓದಲಿಕ್ಕೆ ಬರುವವನಿಗೆ ತನ್ನ ಪುಟಗಳನ್ನು ತಾನೇ ಅಗಲಿಸಿ ತೋರಿಸುವುದು. ಅಷ್ಟೇ ಅಲ್ಲ ತನ್ನನ್ನು ಓದಬೇಕೆಂಬಾಶೆಯನ್ನು ಮನುಷ್ಯನಿಗೆ ಹುಟ್ಟಿಸುವುದು. ಬ್ರಹ್ಮಾಂಡವೆಲ್ಲೆಲ್ಲಾ ವ್ಯಾಪಿಸಿರುವ ಸೊಗಸೂ ಮಹಿಮೆಯೂ ಘನತೆಯೂ ಮತ್ತು ವೈಭವವೂ ಮನುಷ್ಯನ ಅಭಿರುಚಿಯನ್ನು ಮುಂದುವರಿಸುವುವು ಅವನ ಕುತೂಹಲವನ್ನು ಹೆಚ್ಚಿಸುವುವು.

ನಾವು ನಿಜವಾಗಿ ಜಾಣರಾಗುವುದಕ್ಕೆ ನಮಗೆ ಶಾಸ್ತ್ರೀಯ ಜ್ಞಾನವೂ ಅಲ್ಲದೆ, ಅದಕ್ಕಿಂತಲೂ ಹೆಚ್ಚಿನದೂ ಒಂದು ಬೇಕು. ಜ್ಞಾನದ ಜೊತೆಗೆ ವಿಜ್ಞಾನವೂ (ಕ್ರಿಯೆಯೂ) ಸೇರಿದರೆ ಮಾತ್ರ ಸಾರ್ಥಕವು. ವಸ್ತುಜ್ಞಾನವನ್ನು ಪಡೆಯುವುದರೊಂದಿಗೆ ಆ ಜ್ಞಾನವನ್ನು ನಮ್ಮ ಕಾರ್ಯಗಳಿಗೆ ಸಹಕಾರಿಯಾಗಿ ಮಾಡಿಕೊಳ್ಳಬೇಕು ಯಾವ ವಸ್ತುವೂ ಕೇವಲ ಅದರ ಮಟ್ಟಿಗೆ ಅದು ಇದ್ದುಕೊಂಡಿರಲೆಂದು ಸೃಷ್ಟಿಯಾಗಲಿಲ್ಲ. ಸೃಷ್ಟಿಯ ಸಂಪೂರ್ಣ ಉದ್ದೇಶವು ಯಾವ ಮನುಷ್ಯನಿಂದಲೂ ನಿರ್ಧರಿಸುವುದಕ್ಕೆ ಸಾಧ್ಯವಿಲ್ಲ. ಸೃಷ್ಟಿಯು ಬಹು ಸ್ವಾರಸ್ಯವುಳ್ಳ ವಿಷಯ. ಸೃಷ್ಟಿಯಲ್ಲಿ ಪ್ರತಿಯೊಂದು ವಸ್ತುವಿಗೂ ಪರಸ್ಪರ ಸಂಬಂಧವಿದ್ದೇ ಇದೆ ಒಂದರಿಂದ ಇನ್ನೊಂದಕ್ಕೆ ಏನಾದರೊಂದು ಬಗೆಯ ಸಹಾಯವಿದ್ದೇ ಇರುತ್ತದೆ

ಆದ ಪ್ರಯುಕ್ತ ಮನುಷ್ಯನಿಗೆ ಕಾಣಬರುವ ಪ್ರತಿಯೊಂದು ವಸ್ತುವೂ ಅವನಿಗೆ ಯಾವುದಾದರೊಂದು ಬಗೆಯಲ್ಲಿ ಶಿಕ್ಷಣ ಸಾಮಗ್ರಿಯಾಗಿರುವುದು. ಆದುದರಿಂದ ಜಾಣನಾದ ಪ್ರತಿಯೊಬ್ಬನೂ ಪ್ರತಿಯೊಂದು ವಸ್ತುವಿನಿಂದಲೂ ಏನಾದರೊಂದು ಶಿಕ್ಷಣವನ್ನು ಹೊಂದಿಯೇ ಹೊಂದುವನು. ನಾವೆಯನ್ನು ನಡೆಸುವವನಿಗೆ ಸಮುದ್ರದ ಆರ್ಭಟದಿಂದಲೂ ಚಂಡಮಾರುತದ ಬಿರುಸಿನಿಂದಲೂ ಎದೆಗೆಡದಂತೆ ಏಕಾಗ್ರಚಿತ್ತತೆಯೂ ಮತ್ತು ಸ್ಥಿರಬುದ್ಧಿಯೂ ಎಷ್ಟರಮಟ್ಟಿಗೆ ಉಂಟಾಗಿರುವುದು, ರೋಗಪೀಡಿತರಿಗೂ ಕಷ್ಟಸಹಿಷ್ಣುಗಳಿಗೂ ಪ್ರಶಾಂತವಾದ ವಸಂತಕಾಲವು ಎಷ್ಟರ ಕೃತಜ್ಞತೆಯನ್ನು ಹುಟ್ಟಿಸುವುದು ! ನದಿಯ ವೇಗವನ್ನು ತಡೆಯುವ ಸೇತುವೆಯನ್ನು ಕಟ್ಟುವಿಕೆಯು ಎಷ್ಟು ವಿಧವಾದ ವಿನಾಶಗಳನ್ನು ಸಹಿಸುವಂತೆ ಮಾಡುವುದು ? ಮತ್ತು ಮೇಲೆ ಮೇಲೆ ಬರುವ ವಿಘ್ನಪರಂಪರೆಗಳನ್ನು ಏಕಪ್ರಕಾರವಾಗಿ ಕಡಿದುಕೊಳ್ಳುವುದನ್ನು ಎಷ್ಟು ಚೆನ್ನಾಗಿ ಕಲಿಸುವುದು ! ರೈತನಲ್ಲಿ ಸುಗ್ಗಿಯ ಕಾಲದಲ್ಲಿ ಅಕ್ಕರೆಯೂ ಕೆಲಸವೂ ಒಂದಕ್ಕೊಂದು ಎಷ್ಟು ಹೊಂದಿಕೆಯನ್ನು ತೋರಿಸುವುವು ! ಪ್ರತಿಯೊಂದು ಸಂದರ್ಭದಲ್ಲಿಯೂ ಮರಣ ಮತ್ತು ದುರದೃಷ್ಟ ಮೊದಲಾದುವುಗಳು ಜೀವಕ್ಕೆ ಯಾವ ಸಮಯಕ್ಕೆ ಏನೊದಗುವುದು ಎಂಬಂಶವನ್ನು ಹೇಗೆ ಸ್ಪಷ್ಟಪಡಿಸುವುವು ! ಆದುದರಿಂದ ಸೃಷ್ಟಿ ಮಹಿಮೆಯು ನಿತ್ಯಾಚಾರ ಸಂಸ್ಕರಣ ವಿಷಯದಲ್ಲಿ ಶಾಸ್ತ್ರ ವ್ಯಾಸಂಗಕ್ಕಿಂತ ಯಾವ ಭಾಗದಲ್ಲಿಯೂ ಕಡಿಮೆಯಿಲ್ಲ.

ಹುನಾನ್ ಪ್ರಾಂತ್ಯದಲ್ಲಿ ಜಪಾನರ ನಾಶ

ಉತ್ತರ ಹುನಾನ್ ರಂಗದಲ್ಲಿ ಸೋತು ಹಿಮ್ಮೆಟ್ಟಿದ್ದ ಜಪಾನರನ್ನು ಕಟ್ಟಕಡೆಯ ಸಲ ಸುತ್ತುವರೆದು ೩೦೦೦ ಜನರನ್ನು ಕೊಂದುಹಾಕಿದುದಾಗಿಯೂ ಜಪಾನ್ ಸೇನೆಗಳು ದಿಕ್ಕಾಪಾಲಾಗಿ ಓಡುತ್ತಿರುವದಾಗಿಯೂ ಚುಂಗ್ ಕಿಂಗ್ ಸುದ್ದಿಯು ತಿಳಿಸಿದೆ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ; ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ ಬೆಲೆ ೧೨ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಬೇಕೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ಮಹತ್ತ್ವಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿಂಗಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುಕ್ತಿಯಕಡೆಗೆ ದೃಷ್ಟಿಯನ್ನಿಡುವ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ಒಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಿಭೀಷಣ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸದ್ಯಃ ಶೀಲಾಮೋಹನಮಾದಿರ್ಗಳು ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೨ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ಒಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ಒಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ರುದ್ರರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಒಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರ ಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ— ೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್— **ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು **ಉಪಯೋಗಿಸಿ** ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಟ್ಟು ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ತರ್ಜ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ. ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗು. ಗುಬಸವ ಅಂಡ್ ಕಂಪೆನಿ ಲಿಮಿಟೆಡ್.

[33] ಪೋ॥ ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ.
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಶಾಸ್ತ್ರವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವುವು)	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य—संस्कृत)	१ रु.
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೬ನೇ ಜನವರಿ ೧೯೪೨ [ಸಂಚಿಕೆ ೩೯

ಇತಿಹಾಸಕಾರರ ಸಮ್ಮೇಳನದ ಆರಂಭೋತ್ಸವದಲ್ಲಿ ಶ್ರೀಮನ್ಮಹಾರಾಜರವರು ಮಾಡಿದ ಭಾಷಣ.

ಶ್ರೀಮನ್ಮಹಾರಾಜರವರಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರು ೨೧ನೇ ತಾರೀಖಿನ ಬೆಳಗ್ಗೆ ಮೈಸೂರಿನಲ್ಲಿ ನಡೆದ ಇಂಡಿಯನ್ ಹಿಸ್ಟಾರಿಕಲ್ ರೆಕಾರ್ಡ್ಸ್ ಕಮಿಷನ್ನಿನ ೧೮ನೆಯ ಅಧಿವೇಶನ ಸಮಾರಂಭ ಸಂದರ್ಭದಲ್ಲಿ ಭಾಷಣಮಾಡುತ್ತಾ ಹೀಗೆ ಅಪ್ಪಣೆ ಕೊಡಿಸಿದರು—

ಇಂಡಿಯನ್ ಹಿಸ್ಟಾರಿಕಲ್ ರೆಕಾರ್ಡ್ಸ್ ಕಮಿಷನ್ನಿನ ಮಾನ್ಯ ಸದಸ್ಯರನ್ನು ಮೈಸೂರಿಗೆ ಸ್ವಾಗತಿಸಲು ಸಂತೋಷವನ್ನುಂಟುಮಾಡಿದೆ ಇತಿಹಾಸ ಸಂಶೋಧಕರ ಕಾರ್ಯ ಮಹತ್ತರವಾದುದು ಈ ಕಾರ್ಯದಲ್ಲಿ ಸದಸ್ಯರು ನಿರತರಾಗಿ ಈಗ್ಗೆ ೨೧ ವರ್ಷಗಳಾದವು ಅವರಲ್ಲಿ ಕೆಲವರು ಕಮಿಷನ್ನಿನ ಆರಂಭದಿಂದಲೂ ಅದರ ಸದಸ್ಯರಾಗಿರುವರು. ಭಾರತದ ಪ್ರತಿಯೊಂದು ಮುಖ್ಯ ಪ್ರಾಂತದಲ್ಲಿಯೂ ಸಭೆ ಸೇರಿಸಲಾಗಿದೆ ಒಂದು ದೇಶೀಯ ಸಂಸ್ಥಾನದಲ್ಲಿ ಸೇರುವುದು ಇದು ಮೂರನೆಯ ಸಾರಿ” ಎಂದು ತಿಳಿಸಿದರು ಅಧಿವೇಶನದಲ್ಲಿ ಲೇಖನಗಳನ್ನು ಓದುವುದೇ ಅಲ್ಲದೆ, ಪರಸ್ಪರ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುವುದರ ಜೊತೆಗೆ ನೀವು ಭೇಟಿ ಕೊಡುವ ಸ್ಥಳಗಳಲ್ಲಿ ಪರಿಶುದ್ಧಗೊಳಿಸಬೇಕೆಂದು ಅಪೇಕ್ಷಿಸುವ ಅಮೂಲ್ಯಲೇಖಗಳ ಬಗ್ಗೆ ಏನು ಪ್ರಶ್ನೆಗಳಿವೆ ಂಬುದನ್ನು ಕಂಡುಹಿಡಿಯುವ ಕಾರ್ಯವನ್ನು ನೀವು ಗೊಳ್ಳುವಿರೆಂದು ಅಪ್ಪಣೆಕೊಡಿಸಿದರು

ಮೈಸೂರು ಫಲವತ್ತಾದ ಪ್ರದೇಶವೆಂದು ೧೮೦೦ ೆ ಫ್ರೆಂಚ್ ಇತಿಹಾಸಜ್ಞರೊಬ್ಬರು ನುಡಿದಿರುವರೆಂಬು ನ್ನು ತಿಳಿಸಿ, ಮೈಸೂರು ಅಮೂಲ್ಯವಾದ ಲೋಹ ಂದ ಕೂಡಿದೆಯೆಂದೂ ಅದರ ಫಲವಾಗಿ ಇತಿಹಾಸ ಶೋಧನೆಗೆ ಹೆಚ್ಚು ಅನುಕೂಲವಾಗಿದೆಯೆಂದೂ ಳಿ ಈ ಬಗ್ಗೆ ಮೈಸೂರಿನ ಇತಿಹಾಸವನ್ನು ೧೬ ನೆಯ ಮಾನದ ಆದಿಭಾಗದಿಂದ ೧೮೮೧ ನೇ ಇಸವಿಯ ಗೆ ಸಂಕ್ಷಿಪ್ತವಾಗಿ ವಿಮರ್ಶಿಸಿದರು. ೧೫೨೬ರಿಂದ ೬೧ ರ ವರಗಿನ ಅವಧಿಯಲ್ಲಿ ಮೈಸೂರಿನಲ್ಲಿ ಕಲ್ಲಿನ ಮತ್ತು ಸ್ಮಾರಕಗಳು ಮಠಗಳ ಮತ್ತು ದೇವಾಲಯ ರೂಪದಲ್ಲಿ ಸವಿಸ್ತಾರವಾದ ರೀತಿಯಲ್ಲಿ ಅನೇಕ ಧಾರಗಳನ್ನು ನಾವು ಹೊಂದಿದ್ದೇವೆ ಆದರೆ ನಮ್ಮ ಾಚೀನ ಲೇಖರಕ್ಷಾಗಾರದಲ್ಲಿ ಕಾಗದ ಪತ್ರಗಳ ರೀತಿ ಲ್ಲಿ ಸ್ವಲ್ಪವನ್ನು ಮಾತ್ರ ಹೊಂದಿರಲಾಗಿದೆ ಎಂದರು ದೆ ನಮ್ಮ ಪೂರ್ವಿಕರು ಇತಿಹಾಸಕ್ಕೆ ಸಂಬಂಧಿಸಿದ ಗದಪತ್ರಗಳನ್ನು ಶೇಖರಿಸಿದ್ದರೆಂದು ಹೇಳಲಾಗಿದೆ ರೆ, ನಮ್ಮ ಇತಿಹಾಸದ ಸಂದಿಗ್ಧ ಪರಿಸ್ಥಿತಿಯ ಕಾಲ ೆ ಅವೆಲ್ಲವೂ ಮಾಯವಾದವು. ಓರಿಯಂಟಲ್ ಲೈಬ್ರರಿ ಲ್ಲಿ ಕಾಣಬರುವ ಶೇಖರಣೆಗಳಲ್ಲಿಯೂ ಮತ್ತು ಸೆಕ್ರೆಟೆರಿಯಟ್‌ನಲ್ಲಿರುವ ರೆಕಾರ್ಡ್ಸ್‌ಗಳ ಕೆಲವು ಕಾಗದ ಪತ್ರಗಳಲ್ಲಿಯೂ ಅನ್ವೇಷಣೆ ಮಾಡತಕ್ಕ ವಿಷಯಗಳು ಇನ್ನೂ ಕೆಲವಿವೆ ಅಲ್ಲದೆ, ಮಠಗಳ ಮತ್ತು ದೇವಾಲಯಗಳ ಸ್ವಾಧೀನದಲ್ಲಿ ಅನೇಕ ಆಧಾರಗಳು ದೊರೆಯಬಹುದೆಂದು ನಮಗೆ ನಂಬಿಕೆಯಿದೆ.

೧೭೬೧ ರಿಂದ ೧೭೯೯ ರ ವರೆಗಿನ ಎರಡನೆಯ ಅವಧಿಯಲ್ಲಿ, ರೆಕಾರ್ಡುಗಳ ಬಹುಭಾಗವು ಹೊರಗೆ ಹೋಗಿದೆ ಅವುಗಳಲ್ಲಿ ಬಹುಭಾಗವನ್ನು ಇಂಡಿಯಾ ಆಫೀಸಿನಲ್ಲಿಯೂ, ಗೌವರ್ನಮೆಂಟ್ ಆಫ್ ಇಂಡಿಯಾ ರೆಕಾರ್ಡ್ಸಿನಲ್ಲಿಯೂ ಇತರಕಡೆಗಳಲ್ಲಿಯೂ ಕಾಣಬಹುದು ಇನ್ನು ಕೆಲವು ಫ್ರಾನ್ಸು ಡಚ್ ಈಸ್ಟ್ ಇಂಡೀಸ್, ಗೋವ ಮತ್ತು ಹೈದರಾಬಾದು ಮುಂತಾದ ಅನೇಕ ಕಡೆಗಳಲ್ಲಿವೆ ೧೭೯೯ ರಿಂದ ೧೮೩೧ ರ ವರೆಗಿನ ಅವಧಿಯಲ್ಲಿ ಮತ್ತು ೧೮೩೧ ರಿಂದ ೧೮೮೧ ರ ವರೆಗಿನ ಅವಧಿಯಲ್ಲಿ ಕಂಡು ಬಂದ ರಿಕಾರ್ಡುಗಳು ಹಂಚಿಹೋಗಿವೆ ಆದರೆ ಬ್ರಿಟಿಷ್ ಕಮಿಷನ್ನಿನ ಅವಧಿಯ ಬಹುಭಾಗದ ರಿಕಾರ್ಡುಗಳು ನಮ್ಮ ರಿಕಾರ್ಡುಗಳಿಗೆ ವರ್ಗಾಯಿಸಲ್ಪಟ್ಟಿವೆ ಅವುಗಳೂ ನಮ್ಮ ಸ್ವಂತ ಕಾಗದಪತ್ರಗಳೂ ಸುರಕ್ಷಿತವಾಗಿ ಇರುತ್ತವೆ ಎಂದರು

ಅನಂತರ ಬಿ॥ ರೈಸ್‌ರವರಿಂದಲೂ ಪ್ರಾಕ್ತನ ವಿಮರ್ಶವಿಚಕ್ಷಣ ರಾವ್‌ಬಹದ್ದೂರ್ ಆರ್ ನರಸಿಂಹಾಚಾರ್ಯರಿಂದಲೂ ಪ್ರಕಟವಾದ ಗ್ರಂಥಗಳನ್ನು ಉದಾಹರಿಸಿದರು ಆರ್ಕ್ಯಾಲಾಜಿಕಲ್ ರಿಪೋರ್ಟುಗಳ ಮೂಲಕ ತಯಾರಿಸಲ್ಪಡುತ್ತಿರುವ ಗ್ರಂಥಗಳನ್ನು ತಿಳಿಸಿದರು

ಇತ್ತೀಚಿನ ಹಲವು ಪ್ರಕಟಣೆಗಳನ್ನು ಕುರಿತು ಮಾತನಾಡಿ ಸಂಸ್ಥಾನದ ಮುಖ್ಯ ಕೇಂದ್ರ ಕಛೇರಿಗಳಲ್ಲಿಯೂ ಜಿಲ್ಲಾ ಕಛೇರಿಗಳಲ್ಲಿಯೂ ಮಠಗಳು ಮತ್ತು ದೇವಾಲಯಗಳಲ್ಲಿಯೂ ವ್ಯಾಪಾರಕೇಂದ್ರಗಳು ಮತ್ತು ಖಾಸಗಿ ಗೃಹಗಳಲ್ಲಿಯೂ ಕಾಣಬಹುದಾದ ಅಮೂಲ್ಯ ಕಾಗದ ಪತ್ರಗಳನ್ನು ಪತ್ತೆ ಹಚ್ಚುವುದರಲ್ಲಿಯೂ ರಕ್ಷಿಸುವುದರಲ್ಲಿಯೂ ಭಾಷಾಂತರ ಮತ್ತು ಪ್ರಕಟಣೆ ಮಾಡುವ ವಿಚಾರದಲ್ಲಿಯೂ ನಮ್ಮ ಸರ್ಕಾರವು ಮಾಡಬಹುದಾದ ಕಾರ್ಯವು ಇನ್ನೂ ಬಹಳವಾಗಿದೆ ಎಂಬುದನ್ನು ನಾವು ಅರಿತಿದ್ದೇವೆ ಎಂದರು

ಅನಂತರ ಮೈಸೂರಿನ ಒಂದು ಹಿಸ್ಟಾರಿಕಲ್ ಮ್ಯೂಸಿಯಂ ಅಭಿವೃದ್ಧಿಕಾರ್ಯಯೋಜನೆಯನ್ನು ಪ್ರಸ್ತಾಪಿಸಿ, ತಕ್ಕ ಕಾಲವೊದಗಿದರೆ ಇದಕ್ಕೆ ಸೇರಿದಂತೆ ಒಂದು ರೆಕಾರ್ಡ್ಸ್ ಆಫೀಸನ್ನು ಪಡೆಯಲು ಅನುಕೂಲವಾಗುವುದೆಂದು ಹಾರೈಸಿದರು ಇದಲ್ಲದೆ ರಕ್ಷಣಾರೂಪದಲ್ಲಿ ಮಠಗಳೂ ದೇವಾಲಯಗಳೂ ಮತ್ತು ಖಾಸಗಿ ಜನರೂ ತಮ್ಮ ಪ್ರಾಚೀನ ಕಾಗದ ಪತ್ರಗಳನ್ನು ಆಧುನಿಕರೀತಿಯಲ್ಲಿ ಇಡಲು ಒಂದು ಏರ್ಪಾಡು ನಡೆಯಬಹುದೆಂದರು

ಜಗನ್ಮೋಹನ ಅರಮನೆಯಲ್ಲಿ ಶೇಖರವಾಗಿರುವ ಇತಿಹಾಸ ವಿಷಯಗಳನ್ನು ಅವಲೋಕಿಸಿ ಮಾನ್ಯ ಸದಸ್ಯರು ಅವರಲ್ಲಿ ಆಸಕ್ತಿ ವಹಿಸುವರೆಂದು ನಮಗೆ ನಂಬಿಕೆಯಿದೆ ಎಂದು ಹೇಳಿ, ಅಧಿವೇಶನವು ಜಯಪ್ರದವಾಗಿ ನೆರವೇರಲೆಂದು ಹಾರೈಸಿದರು

ಸ್ವೀಕಾರ.

ಚಿತ್ರದುರ್ಗ ಜಿ॥ ಹರಿಹರದಲ್ಲಿರುವ ಭಿಕ್ಷಾವೃತ್ತಿ ಮಠದ ವೇ॥ ಸಿದ್ಧಲಿಂಗಯ್ಯನವರ ಸುಪುತ್ರಿ ಚಿ॥ ಸೌ॥ ದಾಕ್ಷಾಯಣಿದೇವಿಯನ್ನು ಹರಪನಹಳ್ಳಿಯಲ್ಲಿರುವ ಹಣಿಯಮ್ಮನಹಳ್ಳಿ ಮಠದ ವೇ॥ ಗುರುಸಿದ್ಧಯ್ಯನವರ ಜ್ಯೇಷ್ಠಪುತ್ರ ಚಿ॥ ರಾ॥ ಮುಪ್ಪಿನಯ್ಯನೆಂಬ ವರನಿಗೆ ಕೊಡುವದಾಗಿ ನಡೆದ ವಿವಾಹನಿಶ್ಚಯ ಕಾರ್ಯಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ ೧ ರೂಪಾಯಿಯು ವೇ॥ ಹರಿಹರದ ಹೊಸಮಠದ ಚಂದ್ರಶೇಖರಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಮೈಸೂರು ಸಂಗ್ರಾಮನಿಧಿ ವಿನಿಯೋಗ

ಮೈಸೂರು ಸಂಗ್ರಾಮಸಮಿತಿಯ ಕಾರ್ಯನಿರ್ವಾಹಕ ಸಮಿತಿಯ ಸಭೆಯು ಕಳೆದ 24 ನೆಯ ತಾರೀಖು ಸಭೆಸೇರಿ ಬರ್ಮದಲ್ಲಿ ವಿಮಾನಮುತ್ತಿಗೆಗಳಿಗೆ ಒಳಗಾದ ಜನರ ಸಹಾಯಕ್ಕಾಗಿ 10,000 ರೂ ಗಳನ್ನೂ, ಸಿಂಗಪುರದಲ್ಲಿ ವಿಮಾನಮುತ್ತಿಗೆ ವಿಪತ್ತಿಗೆ ಒಳಗಾದವರ ಸಹಾಯಕ್ಕಾಗಿ 5000ರೂ ಗಳನ್ನೂ, ಸೈನಿಕರಿಗೆ ಬೇಕಾದ ವಸ್ತ್ರಗಳನ್ನು ಒದಗಿಸಿಕೊಡುವುದಕ್ಕಾಗಿ ಸ್ತ್ರೀ ಶಾಖೆಯ ಸಮಿತಿಗೆ 2000 ರೂ ಗಳನ್ನೂ, ಹೊರಗಡೆ ಹೋರಾಡುತ್ತಿರುವ ಮೈಸೂರು ಸೈನಿಕರಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಡಲು 1000ರೂ ಗಳನ್ನೂ, ಮೈಸೂರು ಸಂಸ್ಥಾನದ ಸೈನ್ಯಪಡೆಗಳಿಗೆ ಸೇರಿಕೊಳ್ಳುವ “ರಿಕ್ರೂಟ್ಸ್”ಗಳಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸಲು 1000 ರೂ. ಗಳನ್ನೂ, ಇರಾಕ್‌ನಲ್ಲಿರುವ ಭಾರತೀಯ ಸೈನಿಕರಿಗೆ ಬೇಕಾದ ಸಂಗೀತದ ಸಲಕರಣೆಗಳನ್ನು ಕಳುಹಿಸಿಕೊಡುವುದಕ್ಕಾಗಿ 1000ರೂ ಗಳನ್ನೂ, ಮಧ್ಯ ಪೂರ್ವದಲ್ಲಿರುವ ಸೈನಿಕರಿಗೆ ತಂಬಾಕನ್ನು ಒದಗಿಸುವುದಕ್ಕಾಗಿ ನವದೆಹಲಿಯ ‘ಅಮೆನಿಟೀಸ್ ಫಾರ್ ಟ್ರೂಪ್ಸ್’ ಫಂಡಿಗೆ 1000 ರೂ ಗಳನ್ನೂ, ಕೊಟ್ಟು ಉಳಿದಿರುವ ಹಣದಲ್ಲಿ 30,000 ರೂ ಗಳನ್ನು ಮೀಸಲಾಗಿರಿಸಿ, ಭಾರತದ ವಿಮಾನಬಲಕ್ಕೆ ಒಂದು ‘ಫೈಟರ್’ ವಿಮಾನವನ್ನು ಕೊಂಡುಕೊಡುವ ನಿಧಿಯನ್ನು ತೆಗೆಯುವುದಲ್ಲದೆ ಅದಕ್ಕೆ 30,000 ರೂ ಗಳನ್ನು ಸೇರಿಸಬೇಕೆಂದು ತೀರ್ಮಾನಿಸಲಾಯಿತು. ಭಾರತ ರಕ್ಷಣೆಗಾಗಿ ಶ್ರೀಮನ್ಮಹಾರಾಜರವರು 6½ ಲಕ್ಷ ರೂ ಗಳನ್ನು ಕೊಟ್ಟಿರುವುದಕ್ಕಾಗಿ ಅವರಿಗೆ ರಾಜಭಕ್ತಿಯುತವಾದ ಕೃತಜ್ಞತೆಯನ್ನು ಅರ್ಪಿಸುವ ನಿರ್ಣಯವಾಯಿತು.

॥ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥

ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ.

ಲೇ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರು

ಪ್ರಪಂಚದಲ್ಲಿರುವ ಸಮಸ್ತಮಾನವರು ಮಾನವತ್ವರೂಪವಾದ ಧರ್ಮದಿಂದ ಕೂಡಿದ್ದರೂ, ಗುಣಭೇದದಿಂದ ಉತ್ತಮ, ಮಧ್ಯಮ, ಅಧಮ, ಅಧಮಾಧಮ ಎಂದು ನಾಲ್ಕು ಭಾಗವಾಗಿರುವರು ಇವರಲ್ಲಿ ಆತ್ಮನು ಮನುಷ್ಯದೇಹವನ್ನು ಏತಕ್ಕಾಗಿ ಧರಿಸಿರುತ್ತಾನೆ? ಈ ದೇಹದಿಂದಾಗತಕ್ಕ ಕಾರ್ಯವೇನು? ಈ ದೇಹ ವಿಯೋಗವಾದನಂತರ ದೇಹದಲ್ಲಿ ಪ್ರವೇಶಿಸಿದ್ದ ಆತ್ಮನ ಅವಸ್ಥೆಯೇನಾಗುವದು ಎಂದು, ಪುನಃ ಪುನಃ ವಿಚಾರ ಶಕ್ತಿಯನ್ನು ಪಡೆದವನೇ ಉತ್ತಮ ಮಾನವನೆನಿಸಿಕೊಳ್ಳುತ್ತಾನೆ ಈ ವಿಚಾರವನ್ನು ಬಿಟ್ಟು ಅನ್ಯಾಯ ಮಾರ್ಗದಲ್ಲಿ ಪ್ರವೇಶಿಸದೆ ನ್ಯಾಯ ಮಾರ್ಗದಲ್ಲಿ ಪ್ರವೇಶಿಸುತ್ತ, ಪ್ರಪಂಚಕ್ಕೆ ಹಿತವನ್ನು ಕೋರುತ್ತ ದೇಹಪೋಷಣೆಯನ್ನು ಮಾಡಿಕೊಳ್ಳುತ್ತಿರುವವನೇ ಮಧ್ಯಮ ತರಗತಿಗೆ ಸೇರುತ್ತಾನೆ ನ್ಯಾಯಮಾರ್ಗವನ್ನು ಬಿಟ್ಟು, ಪರೋಪಕಾರದಿಂದ ದೂರನಾಗಿ ಸ್ವಕಾರ್ಯದಲ್ಲಿ ಧುರಂಧರನಾಗಿ, ಕೇವಲ ತನ್ನದೇಹಪೋಷಣೆಯಲ್ಲಿ ಆಸಕ್ತನಾಗಿರುವವನೇ ಅಧಮ ತರಗತಿಯಲ್ಲಿ ಸೇರುತ್ತಾನೆ ಯಾವಾಗಲೂ ಪರಹಿಂಸೆಯಲ್ಲಿ ನಿರತನಾಗಿ ದೇಹಪೋಷಣೆಯನ್ನು ಮಾಡಿಕೊಳ್ಳುತ್ತಿರುವವನೇ ಅಧಮಾಧಮವರ್ಗದಲ್ಲಿ ಸೇರುತ್ತಾನೆ ಈ ನಾಲ್ಕು ತರಗತಿಗಳೊಳಗೆ ಮೊದಲನೆಯವನೇ ಈಶ್ವರ ಪ್ರಿಯನೂ ಜಗನ್ಮಾನ್ಯನೂ ಆಗುತ್ತಾನೆ

ಎಲ್ಲ ದೇಹಿಗಳೂ ಇಂಥ ಉತ್ತಮ ಸ್ಥಿತಿಯನ್ನು ಹೊಂದಬೇಕೆಂಬ ಅಭಿಲಾಷೆಯಿಂದಲೇ ಪೂರ್ವಕಾಲದಲ್ಲಿ ಅನೇಕ ಜನ ಮಹಾತ್ಮರು, ಪರಮಾತ್ಮನ ಆಜ್ಞೆಯಿಂದ ಭೂಮಿಗೆ ಅವತರಿಸಿ ಲೋಕವನ್ನುದ್ಧರಿಸಿದುದರಿಂದ ಇವರೆಲ್ಲರೂ ಮತಾಚಾರ್ಯರೆನಿಸಿಕೊಂಡರು ಇವರು ದೇಹವನ್ನು ಬಿಟ್ಟು ಅಸಂಖ್ಯಾತ ವರ್ಷಗಳಾಗಿದ್ದರೂ ಇವರ ಯಶಸ್ಸು ಸೂರ್ಯ, ಚಂದ್ರರಿರುವವರೆಗೂ ಅಚ್ಚಳಿಯದಂತೆ ಉಳಿದುಕೊಂಡೇ ಬಂದಿರುವುದಲ್ಲದೆ, ಇವರ ಸ್ಥಾಪಿಸಿದ ಮತಗಳೂ ಸಹ ಜೀವಿಸಿಕೊಂಡೇ ಬಂದಿರುತ್ತವೆ ಈ ಮಹಾತ್ಮರೆಲ್ಲರೂ ಉತ್ತಮವಾದ ಮಾನವ ಜನ್ಮಧಾರಿಗಳು, ಪರಮಾತ್ಮನ ಪ್ರೀತಿಯನ್ನು ಸಂಪಾದಿಸಿ ಪುನಃ ಈ ಜನನಮರಣವೆಂಬ ಪ್ರವಾಹದಲ್ಲಿ ಬೀಳದೆ ನಿತ್ಯಸುಖದಿಂದ ಬಾಳಲೆಂಬುದ್ದೇಶದಿಂದಲೇ ಆ ಮಹಾತ್ಮರು ಭೂಮಿಗೆ ಅವತರಿಸಿದರಲ್ಲದೆ ಇನ್ನಾವ ಉದ್ದೇಶದಿಂದಲೂ ಅವತರಿಸಲಿಲ್ಲ ಇಂಥ ಮಹಾಸಂಕಲ್ಪವು ಅವರಿಗೆ ಇದ್ದುದರಿಂದಲೇ ಅವರು ಹೇಳುವ ಮಾರ್ಗವನ್ನು ಕೋಟ್ಯಂತರ ಜನಗಳು ಅವಲಂಬಿಸಿ ಈಗಲೂ ಆಯಾಯ ಮತೀಯರು ತಮ್ಮ ತಮ್ಮ ಮತದ ಮೂಲಪುರುಷರನ್ನು ಹಗಲಿರುಳೂ ಕೊಂಡಾಡುತ್ತ ಅವರನ್ನು ದೇವರಂತೆ ಭಾವಿಸಿ ನಡೆದುಕೊಳ್ಳುತ್ತಲಿದ್ದಾರೆ ಬೌದ್ಧಮತೀಯರು ಬುದ್ಧದೇವನನ್ನೂ, ಜೈನರು ಅರ್ಹಂತನನ್ನೂ, ಮಹಮ್ಮದೀಯರು ಪೈಗಂಬರನನ್ನೂ, ಕ್ರೈಸ್ತರು ಯೇಸುವನ್ನೂ, ದ್ವೈತಿಗಳು ಮಧ್ವಾಚಾರ್ಯನನ್ನೂ, ಅದ್ವೈತಿಗಳು ಶಂಕರಾಚಾರ್ಯನನ್ನೂ, ವಿಶಿಷ್ಟಾದ್ವೈತಿಗಳು ರಾಮಾನುಜಾಚಾರ್ಯನನ್ನೂ, ಶಕ್ತಿವಿಶಿಷ್ಟಾದ್ವೈತಿಗಳು ರೇಣುಕಾದಿ ಪಂಚಾಚಾರ್ಯರನ್ನೂ, ಪರಮಗುರುಗಳೆಂದು ಪರಿಭಾವಿಸುತ್ತಾರೆ

ಈ ಮಹಾತ್ಮರು ಸ್ಥಾಪಿಸಿದ ಮತಗಳಲ್ಲಿ ಒಂದೊಂದು ಮತವನ್ನು ಕೋಟ್ಯಂತರ ಮನುಷ್ಯರು ಅವಲಂಬಿಸಿ ನಡೆಯಬೇಕಾದರೆ, ಇವರೆಲ್ಲರೂ ದೈವಾಂಶೀಭೂತರಲ್ಲದೆ ಸಾಮಾನ್ಯ ಜೀವವರ್ಗದಲ್ಲಿ ಸೇರಿದವರಲ್ಲವೆಂದು ಧೃಢವಾಗಿ ಊಹಿಸಬಹುದಾಗಿದೆ ಪ್ರಪಂಚದಲ್ಲಿರುವ ಮಾನವರೆಲ್ಲರೂ ಒಬ್ಬ ಸ್ಥಾಪನಾಚಾರ್ಯನ ಮತವನ್ನು ಅವಲಂಬಿಸಲು ಎಂದೂ ಸಾಧ್ಯವಿಲ್ಲ ಏಕೆಂದರೆ ಒಬ್ಬ ಮನುಷ್ಯನ ಸ್ವಭಾವದಂತೆ ಇನ್ನೊಬ್ಬ ಮನುಷ್ಯನ ಸ್ವಭಾವವಿರುವದಿಲ್ಲ ಒಬ್ಬನ ರೂಪದಂತೆ ಇನ್ನೊಬ್ಬನ ರೂಪವು ಇರುವುದಿಲ್ಲ ಒಬ್ಬನ ಅಪೇಕ್ಷೆಯು ಒಂದಾದರೆ ಮತ್ತೊಬ್ಬನ ಅಪೇಕ್ಷೆಯು ಮತ್ತೊಂದು ವಿಧವಾಗಿರುತ್ತದೆ ಎಲ್ಲರ ಕಣ್ಣುಗಳು ಅಗ್ನಿತತ್ವದಿಂದ ಹುಟ್ಟಿದ್ದರೂ ಒಬ್ಬನು ಒಂದನ್ನು ನೋಡಲಪೇಕ್ಷಿಸಿದರೆ ಇನ್ನೊಬ್ಬನು ಅದನ್ನಪೇಕ್ಷಿಸುವುದಿಲ್ಲ ಎಲ್ಲರ ಕಿವಿಗಳು ಆಕಾಶತತ್ವದಿಂದ ಹುಟ್ಟಿದ್ದರೂ ಒಬ್ಬನು ಒಂದು ಶಬ್ದವನ್ನು ಕೇಳಲಿಚ್ಛಿಸಿದರೆ ಇನ್ನೊಬ್ಬನು ಅದನ್ನು ಕೇಳಲು ಬಯಸುವದಿಲ್ಲ ಎಲ್ಲರ ನಾಲಿಗೆಗಳು ಜಲತತ್ವದಿಂದ ಹುಟ್ಟಿದ್ದರೂ ಒಬ್ಬನು ಒಂದು ಪದಾರ್ಥವನ್ನು ತಿನ್ನಲಿಚ್ಛಿಸಿದರೆ ಇನ್ನೊಬ್ಬನು ಅದನ್ನು ತಿನ್ನಲು ಇಚ್ಛಿಸುವುದಿಲ್ಲ ಆದುದರಿಂದ 'ಭಿನ್ನರುಚಿರ್ಹಿ ಲೋಕಃ' ಎಂಬಂತೆ ಅವರವರ ಇಷ್ಟದಂತೆ ಒಂದೊಂದು ಮಾರ್ಗವನ್ನು ಅವಲಂಬಿಸಿ ಅವರವರ ಇಚ್ಛಾನುಸಾರವಾಗಿ ಶಿವ, ವಿಷ್ಣು ಮೊದಲಾದ ಅನಂತ ನಾಮಗಳನ್ನು ಹೊಂದಿರುವ ಧ್ಯೇಯವಾದ ದೇವರನ್ನು ಹೊಂದಿ ಸುಖವನ್ನು ಪಡೆಯಲೆಂಬ ಮಹಾಸಂಕಲ್ಪದಿಂದ ದೇವರು ಅನೇಕ ಆಕಾರಗಳಿಂದ ಭೂಮಿಗವತರಿಸಿ ಮುಕ್ತಿಸಾಧಕವಾದ ಅನಂತಮಾರ್ಗಗಳಲ್ಲಿ ಒಂದೊಂದು ಮತಕ್ಕೆ ಒಂದೊಂದು ಮುಕ್ತಿಸಾಧಕವಾದ ಧರ್ಮವನ್ನು ಬೋಧಿಸಿರುತ್ತಾನೆ

ಎಲ್ಲ ಮತಗಳಿಗೂ ಮಾರ್ಗಗಳು ಬೇರೆ ಬೇರೆಯಾದರೂ ಧ್ಯೇಯವು ಮಾತ್ರ ಒಂದೇಯಾಗಿರುವುದರಿಂದ, ತಮ್ಮ ತಮ್ಮ ಮತದ ಪರಮ ಗುರುಗಳು ಮೋಕ್ಷವೆಂಬ ರಾಜಧಾನಿಯನ್ನು ಸೇರಲು ತೋರಿಸಿಕೊಟ್ಟ ಮಾರ್ಗವನ್ನು ಆಯಾಯ ಮತೀಯರು ತಪ್ಪದೆ ನಡೆಯಿಸುತ್ತ ಆಯಾಯ ಪರಮಗುರುಗಳು ಮಾಡಿರುವ ಮಹೋಪಕಾರವನ್ನು ಸ್ಮರಿಸುತ್ತಿರುವುದೇ ಪ್ರತಿಯೊಬ್ಬ ಮಾನವನ ಧರ್ಮವಾಗಿದೆ ಹೀಗಿದ್ದರೂ ಅನೇಕರು ಇದನ್ನು ಮರೆತು ಮತಾಚಾರ್ಯರ ಮೇಲೆ ಆಕ್ಷೇಪವನ್ನು ಮಾಡಲು ಪ್ರಕ್ರಮಿಸಿದ್ದಾರೆ ಪೈಗಂಬರನನ್ನು ಆಕ್ಷೇಪಿಸುವವನನ್ನು ಮಹಮ್ಮದೀಯನೆಂದು ಹೇಳಬಹುದೆ? ಬುದ್ಧನನ್ನು ಆಕ್ಷೇಪಿಸುವವನನ್ನು ಬೌದ್ಧನೆಂದು ಹೇಳಬಹುದೇ? ಶಂಕರನನ್ನು ಆಕ್ಷೇಪಿಸುವವನನ್ನು ಅದ್ವೈತಿಯೆಂದು ಹೇಳಬಹುದೇ? ರಾಮಾನುಜನನ್ನು ಆಕ್ಷೇಪಿಸುವವನನ್ನು ವೈಷ್ಣವನೆಂದು ಹೇಳಬಹುದೇ? ಶ್ರೀರೇಣುಕಾದಿ ಪಂಚಾಚಾರ್ಯರನ್ನು ಆಕ್ಷೇಪಿಸುವವನನ್ನು ವೀರಶೈವನೆಂದು ಹೇಳಬಹುದೇ?

ಮಾನವ ಧರ್ಮದ ಸಾಫಲ್ಯವನ್ನು ಬೋಧಿಸುವುದಕ್ಕಾಗಿ ಅವತರಿಸಿದ ಆಚಾರ್ಯ ಭಗವತ್ಪಾದರ ಮೇಲೆ ದೋಷಾರೋಪಣೆಯನ್ನು ಮಾಡುವವನು ಕೇವಲ ದೈವದ್ರೋಹಿಯೂ ಗುರುದ್ರೋಹಿಯೂ ಆಗಿ, ತನಗೆ ಪೂರ್ವಾರ್ಜಿತ ಪುಣ್ಯವಿಶೇಷದಿಂದ ಬಂದ ಉತ್ತಮವಾದ ಮಾನವ ಜನ್ಮವನ್ನೇ ಹಾಳುಮಾಡಿಕೊಂಡಂತಾಗುತ್ತದೆ ಮನುಷ್ಯನಿಗೆ ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಚತುರ್ವಿಧ ಪುರುಷಾರ್ಥಗಳು ಬೇಕೇ ಬೇಕು ನಮ್ಮ ಆಚಾರ್ಯರ ತತ್ವದಂತೆ ನಡೆದರೆ ನಾಲ್ಕು ಪುರುಷಾರ್ಥಗಳು ಸಹಜವಾಗಿ ದೊರಕುತ್ತವೆ ಅವರ ತತ್ವದ ವಿರುದ್ಧವಾಗಿ ವರ್ತಿಸಿದ್ದಾದರೆ ಆ ಪುರುಷಾರ್ಥಗಳು ನಮ್ಮನ್ನು ಬಿಟ್ಟು ದೂರ ಸರಿಯುತ್ತವೆ ಈಗ ಸದ್ಯಃ ಕೆಲ ಜನರು ಕ್ಷಣಿಕವಾದ ಐಹಿಕ ಸುಖವನ್ನು ಕೊಡತಕ್ಕ ಅರ್ಥ ಕಾಮಗಳಲ್ಲಿ ಮಗ್ನರಾಗಿರುವರಲ್ಲದೆ, ನಿತ್ಯವಾದ ಪಾರಮಾರ್ಥಿಕ ಸುಖವನ್ನು ಕೊಡತಕ್ಕ ಧರ್ಮ, ಮೋಕ್ಷಗಳಿಗೆ ಮನಸ್ಸು ಹಾಕುವುದಿಲ್ಲ ಅಂದಮೇಲೆ ಅವರ ದುರ್ವ್ಯವಸ್ಥೆಯಲ್ಲಿ ನಮ್ಮ ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ಉಳಿದ ಮತಾಚಾರ್ಯರಂತೆ ತಂದೆ ತಾಯಿಗಳ ಗರ್ಭದಿಂದ ಜನಿಸದೆ, ಲಿಂಗಮುಖದಿಂದ ಅವತರಿಸಿದರೆಂದು ಅನೇಕ ಧರ್ಮಶಾಸ್ತ್ರಗಳು ಘಂಟಾಘೋಷವಾಗಿ ಸಾರಿ ಸಾರಿ ಬೋಧಿಸುತ್ತಿದ್ದರೂ ವೀರಶೈವರಲ್ಲಿಯೇ ಕೆಲ ಜನರು ಅಜ್ಞಾನದಿಂದಲೋ ಅಥವ ಅಸೂಯೆಯಿಂದಲೋ ಯದ್ವಾ ತದ್ವಾ ಮಾತಾಡಲಿಕ್ಕೆ ಹತ್ತಿದ್ದಾರೆ ಅದನ್ನು ವಿಮರ್ಶಿಸೋಣ— "ಕಲ್ಲನ್ನು ಒಡೆದು ಕಡೆದ ಮೂರ್ತಿಯು ಕಲ್ಲಾಗಿ ತೋರುವುದಲ್ಲದೆ ಚೇತನವಂತೆ ತೋರಲಾರದು" ಎಂದು ಬಡಬಡಿಸುವರು. ಪ್ರಾಣಪ್ರತಿಷ್ಠೆಯಿಂದ ಚೇತನಾತ್ಮಕವಾಗಿ ಮೋಕ್ಷದಾಯಕವಾಗಿರುವ ಶಿವಲಿಂಗಕ್ಕೆ ಕಲ್ಲು ಎಂದು ಮಾತಾಡಬೇಕಾದರೆ, ಇವರ ವರ್ತನವು ಯಾವ ರೀತಿಯಾಗಿರಬಹುದೆನ್ನುವುದನ್ನು ವಾಚಕರೇ ಯೋಚಿಸಬೇಕಾಗಿದೆ. ನಿಜವಾದ ಭಾರತೀಯನು ಶಿವಲಿಂಗ ಮೂರ್ತಿಯ ವಿಷಯದಲ್ಲಿ ಈತರಹದ ತುಚ್ಛವಾದ ಅಭಿಪ್ರಾಯವನ್ನು ಎಂದಾದರೂ ಮಾತನಾಡುವನೆ? ಶಿವಲಿಂಗಕ್ಕೆ ಕಲ್ಲೆಂದು ಮಾತಾಡುವ ಈ ಪುಣ್ಯಾತ್ಮರು ತಮ್ಮ ಎದೆಯ ಮೇಲೆ ಆ ಕಲ್ಲನ್ನು ಏಕೆ ಕಟ್ಟಿಕೊಂಡಿರುವರು? ಅದನ್ನು ತೆಗೆದುಹಾಕಬಾರದೇಕೆ? ಅದನ್ನು ತೆಗೆದು ಹಾಕಿದರೆ ಯಾವ ಲಿಂಗಧಾರಿಗಳೂ ಕೈಮೇಲೆ ನೀರು ಹಾಕಲಾರರೆಂದು ತಿಳಿದುಬಿಟ್ಟಿರಬಹುದೇನು? ಭಕ್ತಿ ವಿಶ್ವಾಸಗಳಿಲ್ಲದೆ ಸುಮ್ಮನೆ ಜನರಂಜನಕ್ಕಾಗಿ ಲಿಂಗವನ್ನು ಕಟ್ಟಿಕೊಂಡಿರುವುದು ಎಂದೂ ಭೂಷಣವಲ್ಲ! ಶಿವಲಿಂಗಮೂರ್ತಿಗೆ ಕಲ್ಲೆನ್ನುವವರು ಆ ಕಲ್ಲನ್ನು ಕಲ್ಲಿನಲ್ಲಿಯೇ ಹಾಕಿಬಿಡಬೇಕು ಇದು ಉತ್ತಮ ಪುರುಷರ ಲಕ್ಷಣ! ಹೀಗೆ ಮಾಡುವದನ್ನು ಬಿಟ್ಟು ಯಾವ ಕಾರಣದಿಂದಲೋ ಲಿಂಗವನ್ನು ಪೂಜಿಸುತ್ತ ಸಮಯವು ಬಂದಾಗ್ಗೆ ಅದನ್ನು ನಿಂದಿಸುತ್ತ ಸ್ವೇಚ್ಛೆಯಾಗಿ ಮಾತಾಡುತ್ತಿರುವುದು ಅತ್ಯಂತ ಹೇಯವಾಗಿದೆ ಭಾವನೆಯಿಲ್ಲದ ಧಾರಣದಿಂದಾಗಲಿ, ಪೂಜೆಯಿಂದಾಗಲಿ ಏನೂ ಉಪಯೋಗವಾಗಲಾರದು ಇದೇ ವಿಷಯವು ಸಿದ್ಧಾಂತ ಶಿಖಾಮಣಿಯಲ್ಲಿ—

ಅರ್ಥಹೀನಾ ಯಥಾ ವಾಣೀ ಪತಿಹೀನಾ ಯಥಾ ಸತೀ |
ಶ್ರುತಿಹೀನಾ ಯಥಾ ಬುದ್ಧಿರ್ಭಾವ ಹೀನಾ ತಥಾ ಕ್ರಿಯಾ ||೧೯||

ಚಕ್ಷುರ್ಹೀನೋ ಯಥಾ ರೂಪಂ ನ ಕಿಂಚಿದ್ವೀಕ್ಷಿತುಂ ಕ್ಷಮಃ |
ಭಾವಹೀನಸ್ತಥಾ ಯೋಗೀ ನ ಶಿವಂ ದ್ರಷ್ಟುಮೀಶ್ವರಃ ||೨೦||

(ಪರಿ ೧೬)

ಅಂದರೆ— ಅರ್ಥ ಶೂನ್ಯವಾದ ವಾಣಿಯೂ, ಪತಿರಹಿತಳಾದ ಸ್ತ್ರೀಯಳೂ, ವೇದ ಸಮ್ಮತವಲ್ಲದ ಜ್ಞಾನವೂ ಹೇಗೆ ಪ್ರಯೋಜನಕಾರಿಯಲ್ಲವೋ ಹಾಗೆಯೇ ಭಾವಶೂನ್ಯವಾದ ಕ್ರಿಯೆಯು ಪ್ರಯೋಜನಕಾರಿಯಾಗುವುದಿಲ್ಲ ಕಣ್ಣಿಲ್ಲದವನು ರೂಪವನ್ನು ನೋಡುವುದಕ್ಕೆ ಹೇಗೆ ಸಮರ್ಥನಾಗುವುದಿಲ್ಲವೋ, ಹಾಗೆಯೇ ಭಾವಶೂನ್ಯನಾದ ಯೋಗಿಯು ಶಿವನನ್ನು ನೋಡಲು ಸಮರ್ಥನಾಗುವುದಿಲ್ಲ ಎಂದು ಶ್ರೀರೇಣುಕರು ಅಗಸ್ತ್ಯ ಮಹಾಮುನಿಗೆ ಉಪದೇಶಿಸಿದ್ದಾರೆ ಮಹಾನುಭಾವರು ನೋಡಿಕೊಳ್ಳಬೇಕು, ಇವರು ಶಿವಲಿಂಗದ ವಿಷಯದಲ್ಲಿ ಮಾತಾಡುವ ಅಮಂಗಲವಾಕ್ಯವು ವೀರಶೈವರ ಮನಸ್ಸಿಗೆಲ್ಲಾ ವಿಶೇಷ ವ್ಯಸನವನ್ನುಂಟುಮಾಡುತ್ತಿರುವುದು. ಇವರ ಈತರಹದ ಹೇಯವೂ, ನಿಂದ್ಯವೂ, ತುಚ್ಛವೂ, ಅಮಂಗಲವೂ, ಮಹಾಪಾಪದಾಯಕವೂ, ದುಷ್ಟವೂ, ಭ್ರಷ್ಟವೂ ಆದ ಮಾತಾಡುವಿಕೆಗೆ ಭರತಖಂಡವಾಸಿಗಳಾದ ಶಿವಲಿಂಗಪೂಜಕರೆಲ್ಲರೂ ಧಿಕ್ಕಾರವನ್ನಿಡುತ್ತಿರುವರು ಪಾಪದಾಯಕವಾದ ಈ ಮಾತಾಡುವಿಕೆಗೆ ಶತಶಃ ಧಿಕ್ಕಾರವಿರಲಿ ಪ್ರಸಿದ್ಧನಾದ ವೇದವ್ಯಾಸನು ಶಿವನನ್ನು ತಿರಸ್ಕರಿಸಿ ಗರ್ವದಿಂದ ಕೇವಲ ಶಿವನನ್ನು ಮರೆತು ವಿಷ್ಣುವೇ ದೇವರು ವಿಷ್ಣುವಿನ ಹೊರ್ತು ಎರಡನೆಯ ದೇವರು ಇಲ್ಲವೆಂದುದಕ್ಕೆ ನಂದಿಯಿಂದ ತೋಳನ್ನು ಕತ್ತರಿಸಿಕೊಂಡು ದುಃಖಕ್ಕೀಡಾದನು ನಂತರ ಅದರ ದೋಷವನ್ನು ಕಳೆಯಕೊಳ್ಳುವುದಕ್ಕಾಗಿ ತನ್ನ ಹೆಸರಿನಿಂದ ಶಿವಲಿಂಗವನ್ನು ಸ್ಥಾಪಿಸಿ ಪೂಜಿಸಿ ತನ್ನ ಜೀವಮಾನವಿರುವವರೆಗೂ ಶಿವನೇ ಸರ್ವೋತ್ತಮನೆಂದು ಕೊಂಡಾಡಿರುವನಲ್ಲದೆ, ಆತನ ಮಹಾತ್ಮ್ಯವನ್ನು ಕುರಿತು ದಶಪುರಾಣಗಳನ್ನು ಬರೆದಿರುವುದು ಜಗತ್ಪ್ರಸಿದ್ಧವಾಗಿದೆ ಅವುಗಳನ್ನಾದರೂ ನೋಡಬಾರದೆ? ಅಂಥವರೇ ಪರಮಾತ್ಮನಿಂದ ಶಿಕ್ಷೆಗೆ ಪಾತ್ರರಾಗಿರುವಲ್ಲಿ ನಮ್ಮಂಥವರ ಪಾಡೇನು?

ಇನ್ನು ಈ ಮಹಾಶಯರು ಮಾತನಾಡುವ ಮತ್ತೊಂದು ಅಮಂಗಲ ವಿಷಯವನ್ನು ವಿಮರ್ಶಿಸೋಣ! ಕಲ್ಲಿನಲ್ಲಿ ಎಲ್ಲಿಯಾದರೂ ಹುಟ್ಟುವುದುಂಟೇ? ಅಥವಾ ಕಲ್ಲಿನಲ್ಲಿ ಹುಟ್ಟಿದ ಮಾತ್ರಕ್ಕೆ ಮಹತ್ವ ಬರುವದೇ? ಎಂದು ನೂತನ ಸುಧಾರಕರು ಮಾತಾಡುತ್ತಾರೆ ಅಹಾ! ನೂತನ ಸುಧಾರಕರೇ ಶ್ರೀ ಜಗದ್ಗುರು ರೇಣುಕಾದ್ಯಾಚಾರ್ಯರು ಕಲ್ಲಿನಲ್ಲಿ ಹುಟ್ಟಿದರೆಂದು ಯಾವ ಗ್ರಂಥಗಳೂ ಹೇಳುವುದಿಲ್ಲ ಶಿವಲಿಂಗ ಮುಖದಿಂದ ದಿವ್ಯದೇಹಧಾರಿಗಳಾಗಿ ಅವತರಿಸಿದರೆಂದು ಸಿದ್ಧಾಂತಶಿಖಾಮಣ್ಯಾದಿ ಪ್ರಾಚೀನ ಗ್ರಂಥಗಳು ಮುಕ್ತ ಕಂಠದಿಂದ ಸಾರುತ್ತವೆ ಈ ವಿಷಯವು ನಿಮ್ಮ ಮಬ್ಬು ಕಣ್ಣುಗಳಿಗೆ ಕಾಣದಿರುವುದು ಆಶ್ಚರ್ಯವಲ್ಲ! ಸ್ವಲ್ಪ ಮಟ್ಟಿಗೆ ಈ ಮಬ್ಬನ್ನು ಆಸ್ತಿಕ್ಯವೆಂಬ ಅಂಜನದಿಂದ ದೂರಮಾಡಿ ಶುದ್ಧ ಹೃದಯದಿಂದ ಓದಿ ನೋಡಿಕೊಳ್ಳಬೇಕು ಸುಪ್ರಭೇದಾಗಮದಲ್ಲಿ:—

ಮತ್ಪಂಚವದನೇಭ್ಯೋ ಜಾತಾಃ ಸರ್ವೇ ಶಿವ ಗುರೋತ್ತಮಾಃ |
ತಸ್ಮಾತ್ತೇಷಾಂಚ ಸರ್ವೇಷಾಂ ತತ್ಸಾಮರ್ಥ್ಯಂ ಕಥಂ ಭವೇತ್ |
ತಸ್ಮಾತ್ತ್ವಂಚ ವಿಧಾಚಾರ್ಯಾಃ ಪಂಚಪೀಠಾಧಿದೇವತಾಃ |
ಪಂಚಸಿಂಹಾಸನಾಧೀಶಾ ಜಗದ್ಗುರುತಮಾಸ್ಮೃತೇ ||

ಸ್ವಯಂಭುವಾಗಮದಲ್ಲಿ :—

ಪ್ರೋಕ್ತಾ ರಾಮೇ ರಾಮನಾಥಲಿಂಗೇ ಯುಗಚತುಷ್ಟಯೇ |
ಏಕೋರಾಮಸ್ಯ ಜನನಮಾವಾಸಸ್ತು ಹಿಮಾಲಯೇ ||೧೫||
ಸಿದ್ಧಕುಂಡಾಖ್ಯ ಸುಕ್ಷೇತ್ರೇ ಲಿಂಗೇ ಶ್ರೀಮಲ್ಲಿಕಾರ್ಜುನೇ |
ಜನನಂ ಪಂಡಿತಾರಾಧ್ಯಸ್ಯ ನಿವಾಸಃ ಶ್ರೀಗಿರೌ ಶಿವೇ ||೧೬||
ತಥಾ ರೇವಣಸಿದ್ಧಸ್ಯ ಕೊಲ್ಲಿಪಾಕಿ ಪುರೋತ್ತಮೇ |
ಸೋಮೇಶಲಿಂಗೇ ಜನನಮಾವಾಸಃ ಕದಳೀ ಪುರೇ ||೧೭||
ತಥಾ ಮರುಳಸಿದ್ಧಸ್ಯ ವಟಕ್ಷೇತ್ರೇ ಮಹತ್ತರೇ |
ಸಿದ್ಧೇಶಲಿಂಗೇ ಜನನಂ ಸ್ಥಾನೇ ಮುಜ್ಜಯಿನೀ ಪುರೇ ||೧೮||
ಕಾಶ್ಯಾಂ ವಿಶ್ವೇಶ್ವರೇ ಲಿಂಗೇ ವಿಶ್ವಾರಾಧ್ಯಸ್ಯ ಸಂಭವಃ |
ಸ್ಥಾನಂ ಶ್ರೀಕಾಶಿಕಾಕ್ಷೇತ್ರೇ ಶೃಣು ಪಾರ್ವತಿ ಸಾದರಂ ||೧೯||

ಓ! ಪಾರ್ವತಿಯೇ ಶ್ರೀಮತ್ಪಂಚಾಚಾರ್ಯರು ನನ್ನ ಐದು ಮುಖಗಳಿಂದ ಹುಟ್ಟಿರುತ್ತಾರೆ ಇವರೇ ಜಗದ್ಗುರುಗಳೂ, ಪಂಚಪೀಠಾಧಿಪತಿಗಳೂ ಆಗಿದ್ದಾರೆ ಇವರ ಸಾಮರ್ಥ್ಯವು ಯಾರಿಗೂ ಬರಲಾರದು ಇದಲ್ಲದೆ ಭೂಲೋಕದಲ್ಲಿ ರಾಮನಾಥ, ಮಲ್ಲಿಕಾರ್ಜುನ, ಸೋಮನಾಥ, ಸಿದ್ಧೇಶ್ವರ, ವಿಶ್ವನಾಥಲಿಂಗಗಳಿಂದ ಅವತರಿಸಬೇಕೆಂದು ಪರಶಿವನು ಉಪದೇಶಿಸಿದ್ದಾನೆ ಈ ವಿಷಯವನ್ನು ಕೈ|| ವಾರದ ಮಲ್ಲಪ್ಪನವರಿಂದ ಮುದ್ರಿಸಲ್ಪಟ್ಟ ವೀರಶೈವ ಸದಾಚಾರ ಸಂಗ್ರಹದ ೩೫ನೆಯ ಪುಟದಲ್ಲಿ ನೋಡಿಕೊಳ್ಳಬೇಕು. ಇದಲ್ಲದೆ ವಿಜಯಾಗಮ, ಸಿದ್ಧಾಗಮಗಳಲ್ಲಿಯೂ, ವೀರಾಗಮದ ಸಹಸ್ರಕೋಟಿ ಸಂಹಿತೆಯಲ್ಲಿಯೂ, ಪಾಶುಪತ ತಂತ್ರದಲ್ಲಿಯೂ, ವೀರಲಿಂಗೋಪನಿಷತ್ತಿನಲ್ಲಿಯೂ ಶ್ರೀ ರೇಣುಕಾದಿ ಪಂಚಾಚಾರ್ಯರ ಉತ್ಪತ್ತಿಯು ಸ್ಪಷ್ಟವಾಗಿ ಹೇಳಲ್ಪಟ್ಟಿರುತ್ತದೆ ನೋಡಿ ಭ್ರಾಂತಿಯಿಂದ ದೂರವಾಗಬೇಕು

ಇನ್ನು ಈಗಿನ ಪಂಡಿತರು ಬಹುಗಟ್ಟಿಯಾಗಿರುವ ಕಲ್ಲಿನಲ್ಲಿ ಹುಟ್ಟುವದು ಹೇಗೆ? ಎಂದು ಮನಸ್ಸಿಗೆ ಬಂದಂತೆ ಹೇಳುತ್ತಿರುವರು. ಇವರು ಸನಾತನ ಧರ್ಮದ ದೊಡ್ಡ ದೊಡ್ಡ ಪಂಡಿತರಲ್ಲಿದ್ದು ಗುರುಸೇವೆಯನ್ನು ಮಾಡಿ ನಿಜವಾದ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದರೆ ಹೀಗೆಂದಿಗೂ ಹೇಳುತ್ತಿದ್ದಿಲ್ಲ ಮೂರ್ತಿಪೂಜಾವಿರೋಧಿಗಳಾದ ಆರ್ಯಸಮಾಜದವರ ತತ್ತ್ವವನ್ನು ತಿಳಿದಿದ್ದರಿಂದ ಈರೀತಿ ತಪ್ಪುಮಾರ್ಗವನ್ನು ಹಿಡಿದಿದ್ದಾರೆ ಇರಲಿ! ವಾಚಕರೇ! 'ದುಷ್ಕರಂ ಕಿಂ ಮಹಾತ್ಮನಾಂ' ಎಂಬ ಆರ್ಯೋಕ್ತಿಯಿಂದ ಜೀವಧರ್ಮವಿಲ್ಲದೆ ಕೇವಲ ದೇವಾಂಶಸಂಭೂತರಿಗೆ ಯಾವುದು ತಾನೆ ಅಸಾಧ್ಯ! ಲೋಕದಲ್ಲಿ ಹೀನ ಜನ್ಮವನ್ನು ಧರಿಸಿದ ಪಿಶಾಚಿಗಳು ಸಹ ತಮ್ಮ ತಮ್ಮ ಇಚ್ಛಾನುಸಾರವಾಗಿ ಸ್ಥೂಲ-ಸೂಕ್ಷ್ಮಶರೀರಗಳನ್ನು ಧರಿಸಲು ಶಕ್ತಗಳಾಗಿರುವಲ್ಲಿ, ಇನ್ನು ಮಹಾತ್ಮರು ಸ್ವೇಚ್ಛಾಕಲ್ಪಿತ ವಿಗ್ರಹವನ್ನು ಧರಿಸಲು ಶಕ್ತರಲ್ಲವೆಂದು ಎಂಥ ಮೂಢಾತ್ಮರು ತಾನೆ ಹೇಳುವರು? ಯೋಗಿಗಳಾದವರು ಕಠಿಣವಾದ ಶಿಲೆಯಲ್ಲೇಕೆ? ಶಿಲೆಯನ್ನು ಭೇದಿಸತಕ್ಕ ವಜ್ರದಲ್ಲಿಯೂ ಸಹ ಪ್ರವೇಶಿಸಬಹುದೆಂದು ಯೋಗಶಾಸ್ತ್ರಜ್ಞರು ಯೋಗಶಾಸ್ತ್ರಗ್ರಂಥಗಳಲ್ಲಿ ವಿಶದವಾಗಿ ಪ್ರತಿಪಾದಿಸಿದ್ದಾರೆ. ಈ ಘನಪಂಡಿತರಿಗೆ ಯೋಗಶಾಸ್ತ್ರದ ಪರಿಚಯವೆಲ್ಲಿ? ಯೋಗಶಾಸ್ತ್ರಕರ್ತನಾದ ಪತಂಜಲಿ ಮಹರ್ಷಿಯು—

"ತತೋಽಣಿಮಾದಿಪ್ರಾದುರ್ಭಾವಃ ಕಾಯಸಂಪತ್ತ
ದ್ಧರ್ಮಾನಭಿಘಾತಶ್ಚ"

ಇತ್ಯಾದಿ ಸೂತ್ರಗಳಿಂದ ಯೋಗಿಯಲ್ಲಿ ಅಣಿಮಾದ್ಯಷ್ಟ ಸಿದ್ಧಿಗಳ ಮಹಿಮೆಯನ್ನು ಹೇಳಿರುವನು ಈ ಸೂತ್ರಗಳಿಗೆ ವೃತ್ತಿಯನ್ನು ಬರೆದ ಭೋಜದೇವನು ತನ್ನ ವೃತ್ತಿಯಲ್ಲಿ—

"ಯಃ ಪರಮಾಣುತ್ವಂ ಪ್ರಾಪ್ತೋ ವಜ್ರಾದೀನಾಮಪ್ಯಂತಃ
ಪ್ರವಿಶತಿ"

ಅಂದರೆ ಪರಮಾಣುತ್ವಸಿದ್ಧಿಯನ್ನು ಪಡೆದ ಯೋಗಿಯು ವಜ್ರಾದಿಗಳಲ್ಲಿಯೂ ಸಹ ಪ್ರವೇಶಮಾಡುವನು, ಎಂದು ಬರೆದಿದ್ದಾನೆ ಇದಲ್ಲದೆ 'ಅಣೋರಣೀಯಾನ್ ಮಹತೋ ಮಹೀಯಾನ್' ಎಂಬ ಶ್ರುತಿವಾಕ್ಯಾನುಸಾರವಾಗಿ ಅಣುವಿಗೆ ಅಣುಸ್ವರೂಪರೂ, ಮಹತ್ತಿಗೆ ಮಹತ್ಸ್ವರೂಪರೂ ಆಗಿಲು ಸಮರ್ಥರಾದ, ಶಿವಯೋಗಿಶಿಖಾಮಣಿಗಳೆನಿಸಿಕೊಂಡ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ಯೋಗಮಹಿಮೆಯಿಂದ ಶಿವಲಿಂಗಮುಖದಿಂದ ಅವತರಿಸುವುದರಲ್ಲೇನಾಶ್ಚರ್ಯವು? ಇದರಂತೆಯೇ ಮಹಾಯೋಗಿಗಳಾದ ಶಂಕರಾಚಾರ್ಯಾದಿಗಳು ಮಾನವಧರ್ಮವನ್ನು ಮೀರಿ ತಮ್ಮ ಅಪ್ರತಿಶಕ್ತಿಯನ್ನು ಪ್ರಪಂಚದಲ್ಲಿ ತೋರಿಸಿರುತ್ತಾರೆಂಬುದು ಅವರವರ ಇತಿಹಾಸಗಳಿಂದ ತಿಳಿದುಬರುತ್ತದೆ ಒಂದುವೇಳೆ ಮಹಾತ್ಮರನ್ನು ಅಲ್ಪಜ್ಞರಾದ ಮಾನವರಂತೆ ಭಾವಿಸಿ ಇಂಥ ಕುಯುಕ್ತಿ ಮಾತುಗಳನ್ನಾಡುವುದಾದರೆ, ಹನುಮಂತನು ಸಮುದ್ರವನ್ನು ಹಾರಿರುವುದೂ, ನರಸಿಂಹನು ಕಂಭದಿಂದುದ್ಭವಿಸಿರುವುದೂ, ಕೃಷ್ಣನು ಬೆಟ್ಟವನ್ನು ಮೇಲಕ್ಕೆತ್ತಿ ಹಿಡಿದುದೂ, ಶ್ರೀ ಶಂಕರಾಚಾರ್ಯರು ಶವಶರೀರವನ್ನು ಪ್ರವೇಶಿಸಿದುದೂ ಮುಂತಾದ ಅಂಶಗಳಿಗೆಲ್ಲ ತಿಲಾಂಜಲಿಯನ್ನು ಕೊಡಬೇಕಾಗುವದು ಆದ್ದರಿಂದ ಇಂಥ ಅದ್ಭುತ ಚರಿತ್ರೆಗಳು ಎಲ್ಲ ಖಂಡಗಳಲ್ಲಿದ್ದ ಮಹಾಪುರುಷರಲ್ಲಿಯೂ ಕಂಡುಬರುವುದರಿಂದ ಮಹಾತ್ಮರಮೇಲೆ ಇಂಥ ದುಷ್ಟ ಆಕ್ಷೇಪಗಳನ್ನು ಯಾರೂ ಮಾಡಬಾರದು ಅದರಲ್ಲೂ ವೀರಶೈವಸಿದ್ಧಾಂತವಾದರೂ ಯೋಗಶಾಸ್ತ್ರದ ನಿಕ್ಷೇಪಸ್ಥಾನವಾಗಿರುತ್ತದೆ ಪ್ರತಿಯೊಬ್ಬ ವೀರಶೈವ ಮುಮುಕ್ಷು ಪುರುಷನು ಜೀವನ್ಮುಕ್ತಿದಶೆಯನ್ನು ಹೊಂದಿ ಭೌತಿಕಶರೀರವನ್ನು ತನ್ನ ಇಚ್ಛಾನುಸಾರ ಅಣುರೂಪವನ್ನಾಗಿಯೂ, ಸ್ಥೂಲರೂಪವನ್ನಾಗಿಯೂ ಮಾಡಿಕೊಳ್ಳುವ ಶಕ್ತಿಯನ್ನು ಪಡೆಯಬಹುದಾಗಿದೆ ಈ ವಿಷಯವನ್ನು ಈ ನೂತನ ಸುಧಾರಕರು ಸ್ವಲ್ಪ ಮನಸ್ಸಿನಿಂದ ತಿಳಿದುಕೊಂಡು ಪವಿತ್ರಹೃದಯರಾಗಬೇಕು ಯಮನ ಬಾಧೆಯನ್ನು ತಡೆಯಲಾರದೆ ಶಿವಲಿಂಗವನ್ನಾಲಿಂಗಿಸಿ ಶಿವಲೀನಮನಸ್ಕನಾದ ಮಾರ್ಕಂಡೇಯನನ್ನು ಉದ್ಧರಿಸುವುದಕ್ಕೋಸ್ಕರ, ಶ್ರೀ ಪರಮೇಶ್ವರನು ಶಿವಲಿಂಗಮುಖದಿಂದಲೇ ಅವತರಿಸಿ ಯಮನ ಗರ್ವವನ್ನು ನಾಶಮಾಡಿದ ವಿಷಯವು ಈ ಮಹಾಪಂಡಿತರಿಗೆ ಗೊತ್ತಿರಲಿಕ್ಕಿಲ್ಲವೇ? ಚಿತ್ರಾದಿಗಳನ್ನು ತಿಳಿಯದಿದ್ದರೆ ಪ್ರತಿಯೊಬ್ಬರ ಮನೆಯಲ್ಲಿ ಪರಿಶೋಭಿಸುತ್ತಿರುವ ಫೋಟೋಗಳನ್ನಾದರೂ ನೋಡಬಾರದಾಗಿತ್ತೇ? ಇವನ್ನೆಲ್ಲಾ ನೋಡದೆ ಕಲ್ಲಿನಲ್ಲಿ ಹುಟ್ಟುವದು ಲೋಕವಿರೋಧವಲ್ಲವೇ? ಎಂದು ಮಾತಾಡುವುದು ಬೆಪ್ಪತನವಲ್ಲವೇ? ಅಘಟನಾಘಟನ ಸಾಮರ್ಥ್ಯಶಾಲಿಗಳಿಗೆ ಯಾವುದೂ ಅಸಾಧ್ಯವಿಲ್ಲವೆಂದು ಮೇಲೆ ಹೇಳಲ್ಪಟ್ಟಿದೆ ಲೀಲಾಮಾತ್ರದಿಂದ ಸೃಷ್ಟಿ-ಸ್ಥಿತಿ ಸಂಹಾರಾದಿಗಳನ್ನು ಮಾಡಬಲ್ಲ ಪ್ರಮಥಪುಂಗವರ ವಿಷಯದಲ್ಲಿ ಮನಬಂದಂತೆ ಮಾತಾಡುತ್ತಿರುವುದು ಅತ್ಯಂತ ಹೇಯವಾಗಿದೆ

ಪ್ರಪಂಚದಲ್ಲಿ ಮಠಾಚಾರ್ಯರು ಅವತರಿಸದಿದ್ದಲ್ಲಿ ಭಗವಂತನಲ್ಲಿ ಸೇರಲು ಅರ್ಹವಾದ ಪವಿತ್ರಾತ್ಮತತ್ತ್ವವೇ ಮಾಯವಾಗಿ, ಎಲ್ಲರೂ ವ್ಯಾಘ್ರಾದಿ ಜಂತುಗಳಂತೆ ಘೋರವಾಗಿ ವರ್ತಿಸಿ ಪುಣ್ಯಪಾಪಗಳ ವಿಚಾರವಿಲ್ಲದೆ ದ್ವಿಪಾದಪಶುಗಳೆನಿಸಿಕೊಳ್ಳಬೇಕಾಗುತಿತ್ತು ಆದ್ದರಿಂದ ಪ್ರಪಂಚದಲ್ಲಿರುವ ಪ್ರತಿಯೊಬ್ಬ ಆಚಾರ್ಯರೂ ದೇವರನ್ನು ತಿಳಿಸುವ ಮಾರ್ಗದರ್ಶಕರೇ

(ಸಶೇಷ)

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ತೃಪ್ತಿ

ಲೇ—ಮಲ್ಲಿಕಾರ್ಜುನಾರಾಧ್ಯ ರಾಚೋಟಿಸ್ವಾಮಿಗಳು ಹಿರೇಮಠ ಮುದೇನೂರು.

ವಯಮಿಹ ಪರಿತುಷ್ಟಾ ವಲ್ಕಲೈಸ್ತ್ವಂ ದುಕೂಲೈಃ |
ಸಮ ಇಹ ಪರಿತೋಷೋ ನಿರ್ವಿಶೇಷೋ ವಿಶೇಷಃ ||
ಸ ತು ಭವತು ದರಿದ್ರೋ ಯಸ್ಯ ತೃಷ್ಣಾ ವಿಶಾಲಾ |
ಮನಸಿ ಚ ಪರಿತುಷ್ಟೇ ಕೋಽರ್ಥವಾನ್ ಕೋ ದರಿದ್ರಃ ||

ತೃಪ್ತಿಯ ವಿಷಯದಲ್ಲಿ ಭರ್ತೃಹರಿಯು ಎಲೈ ರಾಜನೇ! "ಈ ಸಂಸಾರದಲ್ಲಿ ನಮಗೆ ನಾರುಬಟ್ಟೆಯಿದ್ದರೂ ಸಾಗುವುದು ಆದರೆ ನೀನು ಮಾತ್ರ ರೇಶಿಮೆಯ ವಸ್ತ್ರದಿಂದಲೇ ಸಂತುಷ್ಟನಾಗುವಿ ಹೀಗಿದ್ದರೂ ಉಭಯತಾಪಿ ತೃಪ್ತಿಯು ಏಕವಾಗಿಯೇ ಇರುವುದು. ಅದರಲ್ಲಿ ಭೇದವೇನೂ ಇಲ್ಲ. ದೀರ್ಘವಾದ ಆಶೆಯುಳ್ಳವನೇ ದರಿದ್ರನು ಮನಸ್ಸು ಸಂತುಷ್ಟವಿದ್ದರೆ ಈ ಜಗತ್ತಿನಲ್ಲಿ ಶ್ರೀಮಂತರು ಯಾರು? ಬಡವರು ಯಾರು"? ಎಂದು ಕೇಳಿರುವನು.

ಮನುಷ್ಯನ ಸುಖಕ್ಕೆ ಹಲವು ಸಾಧನಗಳಿರುತ್ತವೆ. ಅವುಗಳಲ್ಲಿ ಉದ್ಯೋಗ, ಮಿತವ್ಯಯ, ಪರೋಪಕಾರ ಇತ್ಯಾದಿಗಳು ಮುಖ್ಯವಾದವುಗಳು. ಆದರೆ ಇವುಗಳೆಲ್ಲಕ್ಕಿಂತಲೂ ಹೆಚ್ಚಿನ ಸುಖವನ್ನುಂಟುಮಾಡುವ ಸಾಧನವು ತೃಪ್ತಿಯೇ ಸರಿ. ತೃಪ್ತಿಯೆಂದರೆ ಪರಮಾತ್ಮನು ನಮಗೆ ಕೊಟ್ಟಿದ್ದರಲ್ಲಿಯೇ ಸಮಾಧಾನ ಪಡುವುದು. ಮತ್ತು ನಮ್ಮಲ್ಲಿಲ್ಲದ ವಸ್ತುಗಳ ಸಲುವಾಗಿ ಹಂಬಲಿಸದಿರುವುದು. ದೇವರು ಒಬ್ಬರಂತೆ ಮತ್ತೊಬ್ಬರನ್ನಿಟ್ಟಿರುವುದಿಲ್ಲ ಪ್ರತಿಯೊಬ್ಬರ ಅದೃಷ್ಟರೇಖೆಯು ಭಿನ್ನಭಿನ್ನವಾಗಿರುತ್ತದೆ ಜಗತ್ತಿನಲ್ಲಿ ಯಾವತ್ತೂ ಐಶ್ವರ್ಯಾಧಿ ಸುಖಸಾಧನಗಳನ್ನು ಯಾವನೂ ಸಂಪೂರ್ಣವಾಗಿ ಹೊಂದಿರುವುದಿಲ್ಲ ಎಂತಹ ಐಶ್ವರ್ಯವಂತನಿಗಾದರೂ ಏನಾದರೊಂದು ಕೊರತೆ ಇದ್ದೇ ಇರುತ್ತದೆ. ತಾನು "ಸುಖಿ" ಎಂದು ಹೇಳುವವರೇ ದುರ್ಲಭವು. ಒಬ್ಬನಿಗಿಂತ ಮತ್ತೊಬ್ಬನು ಶ್ರೀಮಂತನಿರುತ್ತಾನೆ ಆದರೆ ಬಡವನು ತನಗಿಂತ ಧನಿಕನಾದವನ ಸಂಪತ್ತನ್ನು ಕಂಡು "ನನಗಿಲ್ಲವಲ್ಲಾ" ಎಂದು ಮರುಗುವುದಕ್ಕಿಂತಲೂ ತನಗಿಂತ ಬಡವನಾದವನ ಸ್ಥಿತಿಯನ್ನು "ನನಗಿಂತಲೂ ಬಡವರಿರುತ್ತಾರೆ; ಅಂದಮೇಲೆ ಧನಿಕನ ಸಂಪತ್ತನ್ನು ಕಂಡು ನಾನೇಕೆ ಅಸೂಯೆಪಟ್ಟು ದುಃಖಿತನಾಗಬೇಕು' ಎಂಬ ವಿಚಾರವನ್ನು ಸಾವಧಾನದಿಂದ ಮನಸ್ಸಿನಲ್ಲಿ ತಂದು ಸಂತೋಷಿಸತಕ್ಕದ್ದು. ಅದರಿಂದಲೇ ಅವನು ಸುಖಿಯಾಗುವನು ಮತ್ತು ಪರಶಿವನಲ್ಲಿ ಕೃತಜ್ಞತೆಯನ್ನು ತೋರಿಸಿದಂತಾಗುವುದು ಈ ವಿಷಯದಲ್ಲಿ ಕನಕದಾಸರು "ಹೊನ್ನು, ಹೆಣ್ಣು, ಮಣ್ಣು ಮೂರನು ಮನ್ನ ಬಯಸಲಿಲ್ಲ, ಖಿನ್ನನಾಗಿ ಕಳವಳಿಸುವದೇತಕೆ' ಎಂದು ಹೇಳಿರುವರು ಆದ್ದರಿಂದ ನಾವು ಉಚ್ಚಸ್ಥಿತಿಯಲ್ಲಿಯೇ ಇರಲಿ, ನೀಚಸ್ಥಿತಿಯಲ್ಲಿಯೇ ಇರಲಿ, ಇಲ್ಲವೆ ಬೇರೆ ಯಾವ ಸ್ಥಿತಿಯಲ್ಲಿಯೇ ಇರಲಿ ಅದರಲ್ಲಿಯೇ ಸಂತುಷ್ಟರಾಗಿರಬೇಕು. ತೃಪ್ತಿಯಿಲ್ಲದವನ ಆಯುಷ್ಯವೂ ಐಶ್ವರ್ಯವೂ ವ್ಯರ್ಥವು! ವ್ಯರ್ಥವು!! ತೃಪ್ತಿಯುಳ್ಳವನ ಕಡುಬಡವನಾಗಿದ್ದರೂ ಅವನ ಜನ್ಮವು ಸಾರ್ಥಕವು!

ನಾವು ನಿರ್ಜನವಾದ ಪ್ರದೇಶದಲ್ಲಿಯೇ ಇರಲಿ, ಕಾಂಚನಪರ್ವತದಲ್ಲಿಯೇ ಇರಲಿ, ನಮ್ಮ ಅದೃಷ್ಟ (ದೈವ) ದಂತೆ ಅಲ್ಪ ಇಲ್ಲವೆ ಅಧಿಕ ಹಣವು ನಮಗೆ ಪ್ರಾಪ್ತವಾಗುವುದು ಸತ್ಯವಾದದ್ದು "ಹಣವಿದ್ದವನನ್ನು ಕೂಡಿದರೂ ಋಣವಿದ್ದಷ್ಟೇ! ಪಾಪಿ ಸಮುದ್ರ ಹೊಕ್ಕರೂ ಮೊಣಕಾಲು ತೋಯಲಿಲ್ಲ" ಎಂಬ ಗಾದೆಗಳೂ ಇರುವವು ಉದಾಹರಣಾರ್ಥ, ಒಂದು ಗಡಿಗೆಯನ್ನು ನೋಡಿರಿ ಅದನ್ನು ಬಾವಿಯೊಳಗಾಗಲಿ, ಕುಂಟೆಯೊಳಗಾಗಲಿ, ಸಮುದ್ರದೊಳಗಾಗಲಿ ಎಲ್ಲಿ ಮುಳುಗಿಸಿ ತುಂಬಿದರೂ ಸ್ವಪ್ರಮಾಣಾನುರೂಪ ಜಲವನ್ನಷ್ಟೇ ಸ್ವೀಕರಿಸುತ್ತದೆ, ಹೊರತು ಹೆಚ್ಚು ನೀರನ್ನು ಹಿಡಿಯುವುದಿಲ್ಲ ಆ ಕಾರಣ ನಮ್ಮ ದೈವದಿಂದೊದಗಿದ ಸ್ಥಿತಿಯನ್ನು ಯಾವ ಉಪಾಯಗಳಿಂದಾದರೂ ಪರಿಹರಿಸಲಿಕ್ಕೆ ಬಾರದಿದ್ದಪಕ್ಷದಲ್ಲಿ ನಾವು ಅದೇ ಸ್ಥಿತಿಯಲ್ಲಿರುವುದು ಪರಮಾತ್ಮನ ಸಂಕೇತವೆಂದು ತಿಳಿದು ಸುಖದಿಂದಿರುವುದೇ ನಿಜವಾದ ತೃಪ್ತಿಯ ಲಕ್ಷಣವು ತೃಪ್ತಿಯ ಲಕ್ಷಣವು ಹೀಗಿರುವುದರಿಂದಲೇ ತೃಪ್ತಿಯುಳ್ಳವನಿಗೆ ತನ್ನ ಅಂಗೈಯಲ್ಲಿರುವ ವಸ್ತುವಿನಲ್ಲಿಯೂ ಅಸಡ್ಡೆಯುಂಟಾಗುವುದು ಸ್ವಾಭಾವಿಕವಾಗಿದೆ

ತೃಪ್ತಿಯು ಎರಡು ವಿಧವಾಗಿರುವುದು ಮೇಲೆ ಹೇಳಿದಂತೆ ಪರಿಹರಿಸಲಿಕ್ಕೆ ಬಾರದಿರುವ ಸ್ಥಿತಿಯಲ್ಲಿಯೂ ಸಹ ಸಂತೋಷದಿಂದಿರುವುದು ಯೋಗ್ಯವಾದ ತೃಪ್ತಿಯು ಯಾಕೆಂದರೆ ನಮ್ಮ ಸ್ಥಿತಿಯನ್ನು ಬದಲಾಯಿಸಲು ನಮ್ಮ ಸಾಧನೋಪಾಯಗಳು ಫಲಪ್ರದವಾಗುವುದಿಲ್ಲವು. ಕದಾಚಿತ್ ಅವಿಚಾರದಿಂದ ಅದನ್ನು ಬದಲಾಯಿಸಲಿಕ್ಕೆ ಪ್ರಯತ್ನಿಸಿದರೆ ಅದಕ್ಕೋಸ್ಕರ ಯೋಚಿಸಿದ ಉಪಾಯಗಳೆಲ್ಲಾ ನಿಷ್ಫಲವಾಗಿ ಮನಸ್ಸಿಗೆ ವ್ಯಸನವು ಮಾತ್ರ ಆಗುವುದು, ಮತ್ತು ಜನರಲ್ಲಿ ನಗೆಗೀಡಾಗುವುದು. ಆದರೆ ಉದ್ಯೋ

[೬ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೨ನೆಯ ಜನವರಿ ತಾ॥ ೨೬ನೇ ಸೋಮವಾರ

ಧರ್ಮ

[illegible]

ಭಾರತಖಂಡವು ಸಕಲಸತ್ಕರ್ಮ ಸ್ಥಾನವೂ, ಧಾರ್ಮಿಕ ಭೂಮಿಗೆ ವೇದಾಗಮೋಪನಿಷತ್ಪುರಾಣಾದಿಗಳು ಪರಮ ಪ್ರಮಾಣಗಳಾಗಿವೆ ಧಾರ್ಮಿಕ ಉದ್ಧಾರಕರ್ತೃಗಳೆನಿಸಿದ ಅನೇಕಾನೇಕ ಆಚಾರ್ಯರು ಹಾಗೂ ಮಹರ್ಷಿಗಳು ಪೂರ್ವಕಾಲದಲ್ಲಿ ನಾನಾವಿಧ ಗ್ರಂಥಗಳನ್ನು ರಚಿಸಿದ್ದಾರೆ ತ್ರಿಕಾಲಜ್ಞಾನಿಗಳೂ ಜಗತ್ಕಲ್ಯಾಣಾಪೇಕ್ಷಿಗಳೂ ಆದ ಆ ಮಹನೀಯರು ತಾವು ರಚಿಸಿದ ಪ್ರತಿಯೊಂದು ಗ್ರಂಥದಲ್ಲಿಯೂ ಧರ್ಮದ ಸ್ವರೂಪವನ್ನು ತೋರಿಸಿ ಸರ್ವರೂ ಧರ್ಮಪರಾಯಣರಾಗಿ ಇಹಪರ ಸುಖಭಾಗಿಗಳಾಗಬೇಕೆಂದು ಬೋಧಿಸಿದ್ದಾರೆ ಪಾವನವನ ಉದ್ಧಾರಕಸ್ತೋತ್ರ ಸ್ನಾನ, ಅರ್ಚನೆ, ಪ್ರಸಾದ ಗ್ರಹಣ, ದಾನ ಮೊದಲಾದ ಸತ್ಕ್ರಿಯೆಗಳು ಸಾಧನೀಭೂತಗಳಾಗಿರುವುವು ಈ ಯಾವತ್ತು ಸತ್ಕ್ರಿಯೆಗಳನ್ನು ನಿರ್ಮಲಮನಸ್ಸಿನಿಂದ ವರ್ತಿಸುವವರು ಧನ, ಧಾನ್ಯ, ರೂಪ, ಆರೋಗ್ಯ, ಆಯುಸ್ಸು ಮೊದಲಾದವುಗಳಿಂದ ಪರಿಪೂರ್ಣರಾಗುವರೆಂದೂ, ಸದಾ ಧರ್ಮಪರಾಯಣರು ದೇವರ ಕೃಪೆಗೆ ಪಾತ್ರರಾಗುವರೆಂದೂ, ಆದುದರಿಂದ ಪ್ರತಿಯೊಬ್ಬ ವೇದಮಾರ್ಗಾವಲಂಬಿಗಳಾದ ಮಾನವರು ಮರಣಪರ್ಯಂತವಾಗಿ ಸ್ವಧರ್ಮಾಚರಣೆಯಲ್ಲಿಯೇ ಕಾಲವನ್ನು ಕಳೆದು ಪರಶಿವನ ಕೃಪೆಗೆ ಪಾತ್ರರಾಗಬೇಕೆಂದೂ ಶಾಸನ ಮಾಡಿದ್ದಾರೆ ಆ ಮಹರ್ಷಿಯರು ಮಾಡಿದ ಧರ್ಮದ ಕಟ್ಟಳೆಯೂ ಅನಾದಿಕಾಲದಿಂದ ಅವಿಚ್ಛಿನ್ನರೀತಿಯಾಗಿ ನಡೆದುಕೊಳ್ಳುತ್ತ ಬಂದು ಭಾರತೀಯರನ್ನು ಅತ್ಯಂತೋನ್ನತಾವಸ್ಥೆಗೇರಿಸಿತ್ತು ಆದರೆ ಆ ಕಟ್ಟಳೆಯು ಕಲಿಕಾಲದಲ್ಲಿ ಅತ್ಯಂತ ಶಿಥಿಲವಾಗುತ್ತ ಬಂದು ಈ ಕಾಲದಲ್ಲಂತೂ ಹೇಳಲಿಕ್ಕೆ ಬಾರದಷ್ಟು ಶೈಥಿಲ್ಯವನ್ನು ಹೊಂದಿ ಹೋಗಿದೆ ಪೂರ್ವಕಾಲದಲ್ಲಿ ವೈದಿಕಮಾರ್ಗಾವಲಂಬಿಯಾದ ಪ್ರತಿಯೊಬ್ಬ ಭಾರತೀಯನು ಸಂಸ್ಕೃತಾಭ್ಯಾಸವನ್ನು ಮಾಡಿ ಗುರುಸನ್ನಿಧಿಯಲ್ಲಿದ್ದುಕೊಂಡು ಗುರುಮುಖದಿಂದ ಸ್ವಧರ್ಮದ ಸಕಲ ನಿಯಮಗಳನ್ನು ತಿಳಿದುಕೊಂಡು ಅದರಂತೆ ಆಚರಿಸಿ ಪುಣ್ಯಮಾರ್ಗದಲ್ಲಿ ಮನಸ್ಸನ್ನಿಟ್ಟು ವರ್ತಿಸುತ್ತಿದ್ದನು. ಆದರೆ ಈ ಕಾಲದಲ್ಲಿಯ ಜನರು ಆ ಮಾರ್ಗಕ್ಕೆ ಬಹಿಷ್ಕಾರವನ್ನು ಹಾಕಿ ಗುರುವೆಲ್ಲಿ? ಶಿಷ್ಯನೆಲ್ಲಿ? ಧರ್ಮವೆಲ್ಲಿ? ಅಧರ್ಮವೆಲ್ಲಿ? ಪಾಪವೆಲ್ಲಿ? ಪುಣ್ಯವೆಲ್ಲಿ? ಎಂದು ನವೀನ ನಾಸ್ತಿಕರಂತೆ ನುಡಿಯುತ್ತ ವೇದಾಗಮಾದಿಗಳನ್ನೂ, ಮಹರ್ಷಿಗಳನ್ನೂ ಅಲ್ಲಗಳೆಯುತ್ತ ಸ್ವೇಚ್ಛಾಚಾರಿಗಳಾಗಿ ವರ್ತಿಸುವದನ್ನು ನೋಡಿದರೆ ಬಹು ವ್ಯಸನವೆನಿಸುತ್ತದೆ. ಪೂರ್ವಕಾಲದಲ್ಲಿ ಪ್ರತಿಯೊಬ್ಬ ಭಾರತೀಯನೂ ಬ್ರಾಹ್ಮಮುಹೂರ್ತದಲ್ಲಿ ಎದ್ದು ಶೌಚಾದಿಕ್ರಿಯೆಗಳನ್ನೂ ಸ್ನಾನವನ್ನೂ ತೀರಿಸಿಕೊಂಡು ದೇವತಾರ್ಚನೆಯನ್ನು ಮಾಡಿಕೊಂಡು ತಮ್ಮ ತಮ್ಮ ಉದ್ಯೋಗಗಳಲ್ಲಿ ತೊಡಗುತ್ತಿದ್ದರು ಆದರೆ ಈ ಕಾಲದ ಕೆಲಕೆಲ ಜನರು ಅದಕ್ಕೆ ಬದಲಾಗಿ ತಮ್ಮ ಧರ್ಮನಿಯಮಗಳನ್ನೇ ಬೇರೆಯಾಗಿ ನಿರ್ಮಿಸಿಕೊಂಡಿದ್ದಾರೆ ಕೆಲವರು ಎದ್ದ ಕೂಡಲೆ ದೇವಾಲಯಗಳಿಗೆ ಭಕ್ತಿಯಿಂದ ಹೋಗುವಂತೆ ಕಾಫೀ ಕ್ಲಬ್ಬುಗಳಿಗೆ ಹೋಗುತ್ತಾರೆ ಇವರಿಗೆ ಸ್ನಾನವೆಲ್ಲಿ? ದೇವಪೂಜೆಯೆಲ್ಲಿ? ಕಾಫೀ ಟೀ ದೇವತೆಗಳ ಪೂಜೆಯೇ ಪೂಜೆಯು ಇನ್ನು ಕೆಲಜನ ಧರ್ಮಲಂಪಟರು ಶೌಚಕ್ಕೆ ಹೋಗದೆ ಮುಖಪ್ರಕ್ಷಾಲನವನ್ನೂ ಸಹ ಮಾಡದೆ ಹಾಸಿಗೆಯಲ್ಲಿಯೇ ಟೀ-ಕಾಫಿಗಳನ್ನು ಕುಡಿಯುತ್ತಾರೆ ಆಮೇಲೆ ಶೌಚಾದಿಗಳನ್ನು ತೀರಿಸಿಕೊಳ್ಳುತ್ತಾರೆ. ಕಾಫಿ ಕ್ಲಬ್ಬುಗಳು ಸ್ವಚ್ಛವಿದ್ದರಾಯಿತು ? ಅವರು ಯಾವ ಜಾತಿಯವರಾದರೇನೆಂದು ಅನ್ಯತ್ರ ಜಾತಿ ತಾರತಮ್ಯವನ್ನು ವಿಚಾರಿ ಅವರಲ್ಲಿ ಹೋಗಿ ಕುಡಿದು ತಿಂದು ತೇಗುತ್ತಾರೆ ಈ ಧರ್ಮಭ್ರಷ್ಟರು ತಾವು ಕೆಡುವುದಲ್ಲದೆ ತಮ್ಮ ದುರುಪದೇಶದಿಂದ ಸದಾಚಾರಿಗಳನ್ನೂ ಸಹ ಧರ್ಮಭ್ರಷ್ಟರನ್ನು ಮಾಡಹತ್ತಿದ್ದಾರೆ. ಶೂದ್ರಾದಿಗಳು ಕುಡಿದಿಟ್ಟ ಪಾತ್ರೆಗಳಲ್ಲಿಯೇ ತಾವೂ ಕುಡಿಯುತ್ತಾರೆ. ಈ ತರದ ಸಾಂಸರ್ಗಿಕದೋಷದಿಂದ ಭರತಖಂಡದಲ್ಲಿ ಎಂದೂ ಕೇಳದ ಮತ್ತು ನೋಡದ ನಾನಾತರಹದ ನವೀನ ರೋಗಗಳು ತಲೆಯೆತ್ತಿ ಪ್ರತಿವರ್ಷ ಲಕ್ಷಾಂತರ ಪ್ರಜೆಗಳನ್ನು ಮರಣಕ್ಕೀಡು ಮಾಡುತ್ತಿವೆ ಈ ವಿಷಯವನ್ನಾದರೂ ಈ ಧರ್ಮಭ್ರಷ್ಟರು ವಿಚಾರಮಾಡಿನೋಡಿ ಧರ್ಮಮಾರ್ಗದಿಂದ ವರ್ತಿಸಿದರೆ ಭರತಖಂಡವನ್ನುದ್ಧರಿಸಿದ ಅಸಾಧಾರಣ ಪುಣ್ಯಕ್ಕೆ ಭಾಗಿಗಳಾಗುವರೆಂದು ಧಾರಾಳವಾಗಿ ಹೇಳಬಹುದಾಗಿದೆ ಇನ್ನು ಕೆಲಜನ ಲಂಡರು ಕಾಫೀ-ಟೀ ಮೊದಲಾದವುಗಳಿಗೆಲ್ಲ ಪ್ರಧಾನದೇವತೆಯೆನಿಸಿಕೊಂಡ ಬ್ರಾಂದಿ ದೇವತೆಯನ್ನು ಸೇವಿಸಹತ್ತಿದ್ದಾರೆ ಈ ಯಾವತ್ತು ಅಧರ್ಮ ಕೃತಿಗಳನ್ನು ಆಲೋಚಿಸಿದರೆ ಯಾವ ಭಾರತೀಯನಿಗೆ ವ್ಯಸನವೆನಿಸಲಿಕ್ಕಿಲ್ಲ? ಪಾಶ್ಚಾತ್ಯ ಶಿಕ್ಷಣ ಪ್ರಭಾವದಿಂದ ಪ್ರಾದುರ್ಭವಿಸಿದ ಈ ದುಶ್ಚಟಗಳ ಬಲೆಗೆ ಶಿಲುಕಿ ಭಾರತೀಯರು ಪ್ರತಿವರ್ಷ ಕೋಟ್ಯಂತರ ಧನವನ್ನು ಪರದೇಶದವರ ಬಾಯೊಳಗೆ ಚೆಲ್ಲಿ ಭರತಖಂಡವನ್ನು ಹಾಳುಮಾಡಿ ಪರದೇಶವನ್ನು ನಾನಾ ಸಂಪತ್ತುಗಳಿಗೆ ತವರುಮನೆಯನ್ನಾಗಿ ಮಾಡಹತ್ತಿದ್ದಾರೆ. ಇಂತಹ ಭಾರತಮಾತೃದ್ರೋಹಿಗಳಿಗೆ ಯಾವಗತಿಯಾಗುವದೋ ತಿಳಿಯದಾಗಿದೆ ಈ ಕಾಲದ ಜನರು ತಮ್ಮ ತಮ್ಮ ಧರ್ಮದ ಕಟ್ಟುಗಳನ್ನು ದೂರೀಕರಿಸಿ ತಾವೂ ಪಾಶ್ಚಾತ್ಯರಂತೆ ಆಗಬೇಕೆಂದು ಕೋಟು, ಪಾಟ್ಲೂನ್, ನೆಕ್ಟಾಯಿ, ಬೂಟ್ಸು ಮೊದಲಾದವುಗಳಿಂದ ರಂಜಿತರಾಗುತ್ತಾರೆ ಕೈಯಲ್ಲಿ ಒಂದುಕಾಸು ಸಹ ಇಲ್ಲದಿದ್ದರೂ ಎರವಿನೆಯವರಲ್ಲಿ ಸಾಲಮಾಡಿಯಾದರೂ ತಮ್ಮ ಚಟವನ್ನು ತೀರಿಸಿಕೊಳ್ಳುತ್ತಾರೆ ಮನೆಯಲ್ಲಿ ಹೆಂಡರು ಮಕ್ಕಳುಗಳು ಕೂಳಿಲ್ಲದೆ ಸಾಯುತ್ತಿದ್ದರೂ ಅದನ್ನು ಲಕ್ಷಿಸದೆ ನಾಲ್ಕಾಣೆಗಳು ಸಿಕ್ಕರೆ ಸಾಕು, ಅವುಗಳನ್ನು ಕಾಫೀ ಕ್ಲಬ್ಬಿನವರ ಬಾಯಲ್ಲಿ ಚೆಲ್ಲಿ ತಮ್ಮ ಚಟವನ್ನು ತೀರಿಸಿಕೊಂಡು ಕಾಮಣ್ಣನಂತೆ ತಿರುಗಾಡುತ್ತಾರೆ ಇವರ ಅನಾಚಾರಗಳನ್ನು ಕಂಡು ಸದಾಚಾರಿಗಳೇ ತಲೆಯನ್ನು ಬಗ್ಗಿಸಬೇಕಾಗಿದೆಯಲ್ಲದೆ ಇವರೇನೂ ಬಗ್ಗಿಸುವಂತಿಲ್ಲ ಹೀಗಾದ ಮೇಲೆ ವೈದಿಕ ಧರ್ಮವು ಉದ್ಧಾರವಾಗುವ ಬಗೆ ಹೇಗೆನ್ನುವದನ್ನು ಹೇಳಲು ಬಾರದಾಗಿದೆ ವೀರಶೈವರೂ ಸಹ ಇತ್ತೀಚೆಗೆ ನಿರ್ಭಯದಿಂದ ಈ ತರಹದ ಧರ್ಮವಿರುದ್ಧ ಕೃತಿಗಳನ್ನು ಮಾಡತೊಡಗಿದ್ದಾರೆ [illegible]ಕ್ಕೊದಗಿರುವ ಈ ದುಃಸ್ಥಿತಿಯನ್ನು ಜಗನ್ನಿಯಾಮಕನೇ ನಿವಾರಿಸಬೇಕಾಗಿದೆ ಭಾರತೀಯನೆನಿಸಿದ ಪ್ರತಿಯೊಬ್ಬನೂ ಅಧರ್ಮಾಚರಣೆಯ ಕಡೆಗೆ ಲಕ್ಷ್ಯವನ್ನೀಯದೆ ಧರ್ಮದಲ್ಲಿಯೇ ಲಕ್ಷ್ಯವನ್ನಿಟ್ಟು ಪೂರ್ವಾಚಾರ್ಯರು ಹಾಕಿಕೊಟ್ಟ ಧರ್ಮನಿಯಮಗಳಂತೆ ನಡೆದು ಪರಶಿವನ ಕೃಪೆಗೆ ಪಾತ್ರರಾಗಿ ಇಹಪರಸುಖಭಾಗಿಗಳಾಗಬೇಕೆಂದು ಹಾರೈಸುತ್ತೇವೆ

ಯುದ್ಧವಾರ್ತೆ.

ಪೆಸಿಫಿಕ್‌ನಲ್ಲಿ ಅಮೆರಿಕದ ಸಿದ್ಧತೆ

ನೈಋತ್ಯ ಪೆಸಿಫಿಕ್‌ನಲ್ಲಿ ಅಪಾಯದಿಂದ ಕೂಡಿರುವ ಪ್ರದೇಶಗಳಿಗೆಲ್ಲ ಸಂಯುಕ್ತ ಸಂಸ್ಥಾನದಿಂದ ಬಲವಾದಂತಹ ವೈಮಾನಿಕ ಮತ್ತು ನೌಕಾ ಪಡೆಗಳನ್ನು ಕಳುಹಿಸಲಾಗಿದೆ. ಹೀಗೆ ಕಳುಹಿಸಿರುವ ಸಹಾಯಗಳಲ್ಲಿ ಭಾರಿ ಬಾಂಬರ್ ವಿಮಾನಗಳ ಬಲವಾದ ತಂಡವಿದೆ ಅವುಗಳ ಜೊತೆಯಲ್ಲಿ ಬಹು ಸಂಖ್ಯೆಯಲ್ಲಿ ಫೈಟರ್‌ಗಳು ಕೂಡ ಹೋಗಿವೆ ಎಂಬುದಾಗಿ ಅಮೆರಿಕ ಸಂಯುಕ್ತಸಂಸ್ಥಾನದ ಸೈನ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ

ಭಾರತದಲ್ಲಿ ಅಮೆರಿಕದ ಕಾರ್ಖಾನೆ

ಭಾರತದಲ್ಲಿ ಅಮೆರಿಕದ ಆಶ್ರಯದಲ್ಲಿ ಸ್ಥಾಪಿಸಲ್ಪಡಲಿರುವ ಮೋಟಾರ್ ಕಾರ್ಖಾನೆಯ ವಿಷಯದಲ್ಲಿ ಭಾರತೀಯರ ಅಸಮಾಧಾನದ ವಿಷಯವನ್ನು ಪ್ರಸ್ತಾಪಿಸುತ್ತ ಅದು ಅಮೆರಿಕದ ಎರವು ಸಾಲಗಳ ವ್ಯವಸ್ಥೆಗೆ ಸೇರಿದುದೆಂದೂ ಅದನ್ನು ಬದಲಾಯಿಸಲಾಗುವದಾಗಿಲ್ಲವೆಂದೂ ಮಿ॥ ಎಮರಿಯವರು ತಿಳಿಸಿದರು.

ಸಿಂಗಪುರದಿಂದ ಜಪಾನೀ ಖೈದಿಗಳು

ನೂರಾರು ಮಂದಿ ಜಪಾನೀ ಖೈದಿಗಳನ್ನು ಸಿಂಗಪುರದಿಂದ ಕಲ್ಕತ್ತೆ ಮತ್ತು ಬೊಂಬಾಯಿಗಳಿಗೆ ಕರೆತರಲಾಗಿದೆ. ಜಪಾನೀ ಖೈದಿಗಳು ಬಂದಿರುವುದು ಇದು ಎರಡನೆಸಾರಿ. ಇಂಡಿಯಾದೇಶದ ಅನೇಕ ಭಾಗಗಳಲ್ಲಿರುವ ಬಂಧನ ಶಿಬಿರಗಳಿಗೆ ಈ ಜಪಾನೀ ಖೈದಿಗಳನ್ನು ರವಾನಿಸಲಾಗುವುದು.

ಜಪಾನ್ ಕ್ರೂಯಿಜರ್ ಮುಳುಗಿತು

“ಅಮೆರಿಕನ್ ಬಾಂಬರುಗಳು ಒಂದು ಜಪಾನೀಜ್ ಕ್ರೂಯಿಜರನ್ನು ಮುಳುಗಿಸಿದವು. ಇದಲ್ಲದೆ ಒಂದು ಎಣ್ಣೆ ಹಡಗಿನ ಮೇಲೆ ಸಹ ನೇರವಾಗಿ ಬಾಂಬುಗಳನ್ನು ಹಾಕಲಾಯಿತು. ಅದು ಹತ್ತಿಕೊಂಡು ಉರಿಯತೊಡಗಿತು ಫಿಲಿಪ್ಪೈನಿನಲ್ಲಿ ಜಪಾನರು ಮತ್ತೆ ಮನಿಲಾ ನಗರದ ವಾಯುವ್ಯದಲ್ಲಿ ಅಮೆರಿಕ ಸೇನೆಯಮೇಲೆ ಬಿದ್ದಿದ್ದಾರೆ” ಎಂದು ಅಮೆರಿಕದ ಪ್ರಕಟನೆಯು ತಿಳಿಸುತ್ತದೆ.

ಡಚ್ ಬೋರ್ನಿಯೋವಿನಲ್ಲಿ ಎಣ್ಣೆ ಭಾವಿಗಳನಾಶ

ಬೋರ್ನಿಯೋವಿನಲ್ಲಿಯ ಒಂದು ಭಾರಿ ಎಣ್ಣೆ ಗಣಿಯನ್ನು ನಾಶಗೊಳಿಸಿದೆ. ಇಲ್ಲಿ ನಾಶ ಗೊಳಿಸಲಾದ ಬಾವಿಗಳು ಈ ದ್ವೀಪಗಳಲ್ಲೆಲ್ಲಾ ಭಾರಿಯಾದವು ಇಲ್ಲಿ ೨೩೦೦೦ ಜನರು ಕೆಲಸ ಮಾಡುತ್ತಿದ್ದರು ಹೀಗೆ ಗಣಿಯನ್ನು ನಾಶ ಗೊಳಿಸುವ ಉದ್ದಿಶ್ಯವೇಂದರೆ, ಅಧಿಕ ಸಂಖೆಯ ಶತ್ರು ಸೈನ್ಯಗಳು ಬಂದು ಧಾಳಿ ನಡೆಸಬಹುದೆಂಬ ಹೆದರಿಕೆಯೇ ಆಗಿದೆ

ಜರ್ಮನಿ, ಇಟಲಿ, ಜಪಾನ್ ಒಪ್ಪಂದ

ಜರ್ಮನಿ, ಇಟಲಿ, ಮತ್ತು ಜಪಾನ್‌ಗಳಿಗೆ ಕಳೆದ ವಾರ ಬರ್ಲಿನ್ ನಗರದಲ್ಲಿ ಒಂದು ಮಿಲಿಟರಿ ಒಪ್ಪಂದವಾಯಿತು ಇದರ ಫಲವಾಗಿ ಬೇರೆ ಬೇರೆ ರಂಗಗಳಲ್ಲಿ ಅಕ್ಸಿಸ್ ರಾಷ್ಟ್ರಗಳು ಅಸಾಧ್ಯ ಮಿಲಿಟರಿ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದೆಂದು ಸ್ಪೈಯಿನ್ ಪತ್ರಿಕೆಗಳ ಬರ್ಲಿನ್ ಸುದ್ದಿಗಾರರು ತಿಳಿಸಿದ್ದಾರೆ ಜಪಾನರು ಪೆಸಿಫಿಕ್‌ನಲ್ಲಿ ಅನುಸರಿಸುತ್ತಿರುವ ಕದನ ವಿಧಾನವನ್ನು ಮೆಡಿಟರೇನಿಯನ್ನಿನಲ್ಲಿ ಜರ್ಮನರು ಅನುಸರಿಸುವಂತಿವೆ

೩ ಸಂಗ್ರಾಮನೌಕೆಗಳ ಆಗಮನ

ಸುಮಾರು ೩೦,೦೦೦ ಟನ್ ತೂಕವಿರುವ ಮೂರು ಸಂಗ್ರಾಮ ನೌಕೆಗಳು ಸಿಂಗಪುರಕ್ಕೆ ಆಗಮಿಸಿದವೆಂದು ಜಪಾನ್ ವೈಮಾನಿಕನೊಬ್ಬನು ವರದಿಮಾಡಿದ್ದಾನೆಂದೂ ಆ ಹಡಗುಗಳು ಅಮೆರಿಕದ್ದೇ ಅಥವಾ ಬ್ರಿಟನ್ನಿನದೇ ಎಂಬುದನ್ನು ಕಂಡುಹಿಡಿಯಲು ಆಗಲಿಲ್ಲವೆಂದೂ ಮಲಕ್ಕಾ ಜಲಸಂಧಿ ಬಳಿ ಇವು ಕಂಡುಬಂದವೆಂದೂ ಆ ವೈಮಾನಿಕನು ತಿಳಿಸಿದ್ದಾನೆಂದು ಸೈಗಾನ್ ರೇಡಿಯೋ ತಿಳಿಸುತ್ತದೆ

ಪಶ್ಚಿಮ ಮಲಯಾದ ಪರಿಸ್ಥಿತಿ

ಮಲಯದ ಪಶ್ಚಿಮ ಭಾಗದಲ್ಲಿ ಬಹಳ ವಿಪತ್ಕಾರಕ ಪರಿಸ್ಥಿತಿಯುಂಟಾಗಿದೆ. ಕೇಂದ್ರತೀರದಲ್ಲಿ ಗೇಮಾಸ್ ಪೂರ್ವ ತೀರದಲ್ಲಿರುವ ಬ್ರಿಟಿಷ್ ಸ್ಥಾನಗಳನ್ನು ಎದುರಿಸಲು ಶಕ್ತರಾಗಿವೆ ಆದರೆ ಮೂರ್ ನದಿಗೂ ಮತ್ತು ಬಾಟುಪಹಾಟ್‌ಗೂ ಮಧ್ಯೆ ಪಶ್ಚಿಮತೀರದಲ್ಲಿ ಜಪಾನರು ಇಷ್ಟಬಂದೆಡೆ ಇಳಿಯಲು ಸಾಧ್ಯವಾದುದರಿಂದ ಪಶ್ಚಿಮ ಪ್ರದೇಶದಲ್ಲಿ ವಿಪತ್ತು ಹೆಚ್ಚಾಗಿದೆ. 100 ಮಂದಿ ಯೋಧರು ಕೂಡುವಂತಹ ಬಾರ್ಜ್‌ಗಳಲ್ಲಿ ಯೋಧರನ್ನು ತುಂಬಿಕೊಂಡು ಬಂದು ಶತ್ರುಗಳು ಇಳಿಸುತ್ತಿದ್ದಾರೆ. ದೊಡ್ಡ ಮುತ್ತಿಗೆಗಾಗಿ ಮೂರ್‌ಸುತ್ತ ಜಪಾನರು ನೆರೆಯುತ್ತಿದ್ದಾರೆಂದು ತಿಳಿದುಬಂದಿದೆ ಜೋಹೊರ್ ಬಾಹ್ರು ಪಶ್ಚಿಮಕ್ಕೆ 27 ಮೈಲಿ ದೂರದಲ್ಲಿರುವ ಪೋಂಟಿಯನ್ ಬೇಸರ್ ಎಂಬಲ್ಲಿ ಜಪಾನರು ಬಂದಿಳಿದಿದ್ದಾರೆಂದು ವರ್ತಮಾನ ಬಂದಿದೆ. ಅಲ್ಪಮಂದಿ ಶತ್ರುಗಳು ಅಲ್ಲಿಗೆ ಬಂದಿದ್ದಾರೆ. ಎಂದು ಪ್ರಕಟವಾಗಿದೆ.

ಥೈಲೆಂಡ್ ಜಪಾನರೊಡನೆ ಕೂಡಿಕೊಂಡಿದೆ

ಬರ್ಮಾ ಥೈಲೆಂಡ್ ಗಡಿಯಲ್ಲಿರುವ ಮಿಯಾವಡ್ಡಿ ಂಬಲ್ಲಿಗೆ ಪೂರ್ವದಲ್ಲಿ ಥೈಲೆಂಡ್‌ಯೋಧರು ಬರ್ಮದ ಡೆ ನುಗ್ಗಿದ್ದಾರೆ. ಈಗ ಟೆನಾಸೆರಿಂ ಪ್ರಾಂತ್ಯದಲ್ಲಿ ಯುದ್ಧ ಡೆಯುತ್ತಿದೆ ಅಲ್ಲಿನ ಭೂಪ್ರದೇಶವು ಶತ್ರುಗಳು ಬಂದಿಯಲು ಅನುಕೂಲವಾಗಿದೆ. ಬಹಳ ಉದ್ದವಾಗಿಯೂ ಗಲ ಕಡಿಮೆಯಾಗಿಯೂ ಇರುವ ಈ ಭೂಭಾಗದ ಕ್ಷಣಾಕಾರ್ಯವು ಬಹಳ ಕಷ್ಟವಾಗಿದೆ ಥೈಲೆಂಡ್ ಕಡೆಯಿಂದ ಇಲ್ಲಿಗೆ ಅನುಕೂಲವಾದ ರಸ್ತೆಗಳಿರುವದರಿಂದ ತ್ರುಗಳು ಸುಲಭವಾಗಿ ಅಲ್ಲಿಗೆ ನುಗ್ಗಿರುವರು. ಟೆನಾಸೆರಿಂ ಪ್ರದೇಶದಲ್ಲಿದ್ದ ಬ್ರಿಟಿಷ್ ಮುಂಗಾವಲು ಸ್ಥಾನಗಳನ್ನು ಂದಕ್ಕೆ ವರ್ಗಾಯಿಸಲಾಗುತ್ತಿದೆಯೆಂದು ಹೇಳಲಾಗಿದೆ

ಜಪಾನರು ಆನೆಗಳನ್ನು ಉಪಯೋಗಿಸುತ್ತಿದ್ದಾರೆ

ಟೆನಾಸೆರಿಂನ ಈಗಿನ ಕಾರ್ಯಾಚರಣೆಯಲ್ಲಿ ಜಪಾನೀಯರು ಪರ್ವತ ಪ್ರದೇಶಗಳ ಮೇಲೆ ಸಾಮಗ್ರಿಗಳನ್ನು ಗಿಸಲು ಆನೆಗಳನ್ನು ಉಪಯೋಗಿಸುತ್ತಿದ್ದಾರೆ. ನದಿಗಳು ಮತ್ತು ಕಾಡುಗಳಿಂದ ಕೂಡಿದ ಈ ಮಾರ್ಗದಲ್ಲಿ ನೆಗಳ ಮೂಲಕವೇ ಸಾಮಾನುಗಳನ್ನು ಸಾಗಿಸಲು ಧ್ಯ ಜಪಾನೀ ಇಫೆಂಟ್ರಿ ಸೈನ್ಯಗಳ ಮುಂಭಾಗದಲ್ಲಿ ಜಪಾನೀ ಮತ್ತು ಸಯಾಮಿ ಸೈನಿಕರು ಆನೆಗಳಮೇಲೆ ಳಿತು ಹೋಗುತ್ತಿದ್ದುದನ್ನು ಕಾಣಬಹುದಾಗಿದ್ದಿತು ರೀತಿ ಈ ಪ್ರಾಣಿಗಳನ್ನೇ ಹೆಚ್ಚಾಗಿ ಉಪಯೋಗಿಸುವುದರೆ ಬ್ರಿಟಿಷ್ ಫೈಟರ್ ಮತ್ತು ಬಾಂಬರ್ ವಿಮಾನಗಳು ಸುಲಭವಾಗಿ ಅವುಗಳಮೇಲೆ ಧಾಳಿ ನಡೆಸಲು ವಕಾಶವಾಗುವುದು ಎಂದು ಹೇಳಲಾಗಿದೆ.

ಥೈಲೆಂಡ್‌ಮೇಲೆ ಬರ್ಮೀಯರ ಕೋಪ

ಥೈಲೆಂಡ್ ಸೈನಿಕರು ಜಪಾನರೊಂದಿಗೆ ಸಹಕರಿಸುತ್ತಿದ್ದಾರೆಂಬ ವಾರ್ತೆ ಕೇಳಿ ಬರ್ಮೀಯರಲ್ಲಿ ಅಸಾಧ್ಯ ಕೋಪವುಂಟಾಗಿದೆ. ಥೈಲೆಂಡ್ ಸೇನೆಗಳು ಬರ್ಮದಮೇಲೆ ಬೀಳಲು ಮತ್ತು ಜಪಾನರು ಬರ್ಮವನ್ನು ಪ್ರವೇಶಿಸಲು ಥೈಲೆಂಡಿನವರು ಅವಕಾಶಕೊಡುವುದಾದರೆ ಅವರಲ್ಲಿ ಆತ್ಮಗೌರವವಿಲ್ಲವೆಂದೇ ನಾವು ತಿಳಿಯಬೇಕಾಗುತ್ತದೆಂದು ಬರ್ಮಾ ಅಧಿಕಾರಿಗಳು ಹೇಳುತ್ತಿದ್ದಾರೆ ಥೈಲೆಂಡ್ ಸೈನಿಕರು ಜಪಾನರೊಡನೆ ಸಹಕರಿಸುತ್ತಿರುವುದು ಮೊಟ್ಟಮೊದಲನೇ ಸಾರೆ ಪ್ರಕಟವಾಗಿದ್ದರೂ ದಕ್ಷಿಣ ಬರ್ಮಾ ಮತ್ತು ಇತರ ಕಡೆ ಈ ಮೊದಲೇ ಅವರು ಜಪಾನರೊಂದಿಗೆ ಸೇರಿ ಹೊಡೆದಾಡಿರುವ ಸಂದರ್ಭಗಳಿವೆಯೆಂದು ಹೇಳಲಾಗಿದೆ.

ಚೀಣಾಪತ್ರಿಕೆಗಳ ಎಚ್ಚರಿಕೆ.

ಜರ್ಮನಿ, ಇಟಲಿ, ಜಪಾನ್‌ಗಳಿಗೆ ಹೊಸ ಮಿಲಿಟರಿ ಒಪ್ಪಂದವಾಯಿತಷ್ಟೆ ರಷ್ಯವನ್ನು ಎದುರಿಸುವುದೇ ಈ ಒಪ್ಪಂದದ ಗುರಿ-ಎಂಬುದಾಗಿ ಚೀಣಾ ಮಿಲಿಟರಿ ಪತ್ರಿಕೆಯೊಂದು ಬರೆದಿದೆ. ಜರ್ಮನಿ ಮತ್ತು ರಷ್ಯಾಗಳು ಏಕಕಾಲದಲ್ಲಿ ರಷ್ಯದಮೇಲೆ ಬೀಳುವುದಕ್ಕೆ ಮುಂಚೆಯೇ ರಷ್ಯವು ಜಪಾನಿನಮೇಲೆ ಬೀಳಬೇಕೆಂದು ಆ ಪತ್ರಿಕೆಯು ಸೂಚಿಸಿದೆ ಸಿಂಗಪುರದ ರಕ್ಷಣೆಗಾಗಿ ಹೊಡೆದಾಡುತ್ತಿರುವವರಿಗೆ ಸಹಾಯನೀಡಲೋಸುಗ ಚೀಣಾ ಸೇನೆಗಳು ದಕ್ಷಿಣ ಇಂಡೋ-ಚೀಣಾ ಮತ್ತು ಥೈಲೆಂಡ್‌ಗಳಮೇಲೆ ಬೀಳಬೇಕೆಂದು ಇನ್ನೊಂದು ಪತ್ರಿಕೆಯು ಸಲಹೆಮಾಡಿದೆ ಚಳಿಗಾಲವು ಕಳೆದೊಡನೆಯೇ ರಷ್ಯವನ್ನು ಮುತ್ತುವುದಾಗಿ ಜಪಾನು ಜರ್ಮನಿಗೆ ಭರವಸೆಕೊಟ್ಟಿದೆಯೆಂಬುದಾಗಿ ಸ್ಟಾಕ್‌ಹೋಂ ವರ್ತಮಾನವೊಂದು ತಿಳಿಸುತ್ತದೆ

ಟವಾಯ್ ಬಳಿ ಕದನ.

ಟವಾಯ್ ಕ್ಷೇತ್ರದಲ್ಲಿ ೧೦೦೦ ಜಪಾನ್ ಯೋಧರಿದ್ದಾರೆಂಬದಾಗಿ ನಂಬಲಾಗಿದೆ ಟವಾಯ್ ಕ್ಷೇತ್ರದಲ್ಲಿ ಶತ್ರುಗಳು ಕೈಗೊಂಡ ಕಾರ್ಯಕ್ರಮವನ್ನು ನೋಡಿದರೆ, ಬಂಗಾಳಕೊಲ್ಲಿಗೂ ಮತ್ತು ಸಯಾಂಕೊಲ್ಲಿಗೂ ನಡುವೆ ಇರುವ ಇಕ್ಕಟ್ಟಾದ ಭೂಪ್ರದೇಶದಲ್ಲಿ ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳುವುದೇ ಅವರ ಉದ್ದಿಶ್ಯವೆಂದು ಭಾವಿಸಲಾಗಿದೆ ದಕ್ಷಿಣ ಮಲಯಾದಲ್ಲಿ ಜಪಾನರ ಕೈ ಮೇಲಾದರೆ ಬರ್ಮಾದೊಳಕ್ಕೆ ಅವರು ನುಗ್ಗುವುದು ಖಂಡಿತ ಶತ್ರುಗಳ ಸಂಖ್ಯೆ ಅಧಿಕವಾಗಿದ್ದುದರಿಂದ ಬ್ರಿಟಿಷ್ ಸೇನೆಗಳನ್ನು ಟವಾಯ್‌ನಿಂದ ಹಿಂದಕ್ಕೆ ಕರೆಸಲಾಯಿತೆಂಬ ಸುದ್ದಿಯನ್ನು ನೋಡಿದರೆ ಮಲಯಾವನ್ನು ಮುತ್ತಿರುವ ಜಪಾನ್ ಸೇನೆಯ ಹಿಂಭಾಗವನ್ನು ಬಲಪಡಿಸುವುದೇ ಶತ್ರುಗಳ ಉದ್ದಿಶ್ಯವಾಗಿದೆಯೆಂದು ಊಹಿಸಲಾಗಿದೆ

ಸಿಂಗಪುರದ ರಕ್ಷಣೆಗೆ ಭಾರತೀಯರು ಮುಂದೆ ಬಂದಿದ್ದಾರೆ.

ಮಲಯಾ ಸಂಗ್ರಾಮವು ಸಿಂಗಪುರದಲ್ಲಿರುವ ೧ ಲಕ್ಷ ಭಾರತೀಯರಮೇಲೆ ಅಪೂರ್ವ ಪರಿಣಾಮವುಂಟುಮಾಡಿದೆ ಭಾರತೀಯರೇ ಸ್ವಂತವಾಗಿ ಎ ಆರ್ ಪಿ ವ್ಯವಸ್ಥೆಗಳನ್ನು ಮಾಡಿಕೊಂಡು, ಪರಿಹಾರಕೇಂದ್ರಗಳನ್ನು ಸ್ಥಾಪಿಸಿದ್ದಾರೆ ಅಧಿಕಾರಿಗಳೊಂದಿಗೆ ಸಂಪೂರ್ಣವಾಗಿ ಸಹಕರಿಸುತ್ತಿದ್ದಾರೆ ಜಪಾನರ ಮೇಲೆ ಅವರಿಗಿರುವ ವಿಶೇಷವಾದ ದ್ವೇಷವಾಗಲಿ, ಅಥವಾ ಬ್ರಿಟಿಷರ ವಿಚಾರದಲ್ಲಿ ಅವರಿಗಿರುವ ಅಪೂರ್ವ ರಾಜಭಕ್ತಿಯಾಗಲಿ, ಇದಕ್ಕೆ ಕಾರಣವಲ್ಲ ಕೇವಲ ತಮ್ಮ ಜವಾಬ್ದಾರಿಯನ್ನರಿತು ಅವರು ಈರೀತಿ ಮಾಡುತ್ತಿದ್ದಾರೆ ಸಿಂಗಪುರವು ಅವರ ಮನೆ ಈಗ ಜಪಾನರು ಅದನ್ನು ಮುತ್ತಿದ್ದಾರೆ ನಗರವನ್ನು ರಕ್ಷಿಸಲು ತಮ್ಮ ಕೈಲಾದುದನ್ನು ಮಾಡಬೇಕೆಂದು ಅವರು ನಿಶ್ಚಯಿಸಿದ್ದಾರೆ ಹಿಂದೆ ಅಧಿಕಾರಿಗಳೊಡನೆ ಕಚ್ಚಾಡುತ್ತಿದ್ದ ಭಾರತೀಯರು ಈಗ ತಾವೇ ಅಧಿಕಾರಿಗಳಿಗಿಂತ ಮುಂದೆ ಬಂದು ರಕ್ಷಣೆ ಏರ್ಪಾಡಿನಲ್ಲಿ ತೊಡಗಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ ಎಂಬುದಾಗಿ 'ಟೈಮ್ಸ್' ಪತ್ರಿಕೆಯ ವಿಶೇಷ ಸುದ್ದಿಗಾರರು ಸಿಂಗಪುರದಿಂದ ಸುದ್ದಿ ಕಳಿಸಿದ್ದಾರೆ

ಬರ್ಮದಲ್ಲಿನ ಭಾರತೀಯ ನಿರಾಶ್ರಿತರಿಗೆ ಪ್ರಯಾಣ ಸೌಕರ್ಯ

'ಬರ್ಮದಿಂದ ಭಾರತಕ್ಕೆ ಹೊರಡಲಿರುವ ಭಾರತೀಯ ನಿರಾಶ್ರಿತರಿಗೆ ಸೌಕರ್ಯಗಳನ್ನೊದಗಿಸಲಾಗುವುದು. ಹಡಗು ಮೂಲಕ ಪ್ರಯಾಣಮಾಡುವವರಿಗೆ ಬರ್ಮಾ ಸರ್ಕಾರವು ಹತೋಟಿಪೂರ್ವಕ ಸರಿಯಾದ ಅನುಕೂಲ ಮಾಡಿಕೊಡಲಿವೆ ಬರ್ಮದಲ್ಲಿರುವ ಇಂಡಿಯಾ ಏಜಂಟರಿಗೆ ಸಲಹಾ ಸಮಿತಿಯೊಂದು ರಚಿತವಾಗಿದೆ ಬರ್ಮದಿಂದ ಪ್ರಯಾಣಮಾಡುವ ಭಾರತೀಯರಲ್ಲಿ ಹೆಂಗಸರು, ಮಕ್ಕಳಿಗೆ ಮೊದಲು ಮುಪ್ಪಾದವರ ಪ್ರಯಾಣಕ್ಕೆ ಅನಂತರವೂ ತಕ್ಕ ಏರ್ಪಾಡು ಮಾಡಲಾಗುವದು ಪ್ರಯಾಣಿಕರಲ್ಲಿ ಪಕ್ಷಪಾತವೇನನ್ನೂ ತೋರಿಸುವದಿಲ್ಲ ಪ್ರಯಾಣಕ್ಕೆ ಟಿಕೆಟ್ ಪಡೆದುಕೊಂಡವರೆಲ್ಲ ಹೊರಡುವ ಮುಂಚೆ ಕೆಲವು ಗಂಟೆಗಳ ಕಾಲ ಒಂದು ಗೊತ್ತಾದ ಕ್ಯಾಂಪಿನಲ್ಲಿರಬೇಕು ಅವರುಗಳಿಗೆಲ್ಲ ಉಚಿತವಾಗಿ ಆಹಾರ ಕೊಡಲಾಗುವದು"ಎಂದು ಇಂಡಿಯಾ ಸರ್ಕಾರವು ತಿಳಿಸಿದೆ

ಜಪಾನ್ ಮಹಾಪ್ರಧಾನರ ಭಾಷಣ

ಜಪಾನಿನ ಮಹಾಪ್ರಧಾನರಾದ ಜ|| ಟೋಜೋರವರು ಶಾಸನಸಭೆಯಲ್ಲಿ ಮಾತನಾಡುತ್ತಾ "ಜಪಾನು ತನ್ನ ಉದ್ದಿಶ್ಯವನ್ನು ಸಂಪೂರ್ಣವಾಗಿ ಸಾಧಿಸಿದ ಹೊರತು ಶಸ್ತ್ರವನ್ನು ಕೆಳಗಿಡುವುದಿಲ್ಲ ಯುದ್ಧವು ನಡೆಯುತ್ತಿರುವಾಗ, ಜಪಾನು ತನ್ನ ಸಂಗ್ರಾಮ ಶಕ್ತಿಯನ್ನು ಬಲಪಡಿಸಿಕೊಳ್ಳಲೋಸುಗ ಮುಖ್ಯವಾದ ಬಲ ಮೂಲಗಳನ್ನು ಮತ್ತು ಸಾಂಪತ್ತಿಕ ಕ್ಷೇತ್ರಗಳನ್ನು ಹಿಡಿಯಲು ಪ್ರಯತ್ನಿಸುವುದು. ಜರ್ಮನಿ ಮತ್ತು ಇಟಲಿಗಳೊಂದಿಗೆ ಸಹಕರಿಸಿ ಇನ್ನೂ ಹೆಚ್ಚು ಉಗ್ರವಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಪರಸ್ಪರ ಸಂಪತ್ಸಾಧನೆಗೆ ಸಹಕರಿಸುವಂತಹ ದೇಶಗಳ ಗುಂಪೊಂದನ್ನು ಸೃಷ್ಟಿಸುವುದೇ ಜಪಾನಿನ ಗುರಿ. ಈ ಕಾರ್ಯಕ್ರಮದಲ್ಲಿ ಸಹಕರಿಸುವವರಿಗೆ ಸ್ವಾತಂತ್ರ್ಯವನ್ನು ಕೊಡಲಾಗುವುದು. ಮಂಚುಕೋ, ಚೀಣದ ರಾಷ್ಟ್ರೀಯ ಸರಕಾರ, ಇಂಡೋ-ಚೀಣಾ ಮತ್ತು ಥೈಲೆಂಡ್ ಸರಕಾರಗಳು ಇವೆಲ್ಲ ಜಪಾನಿನೊಂದಿಗೆ ಸಹಕರಿಸುತ್ತಿವೆ ಎಲ್ಲರೂ ಸಂಪತ್ಸಮೃದ್ಧಿಯಿಂದ ಜೀವಿಸಬೇಕೆಂಬುದನ್ನು ಫಿಲಿಪೈನಿನವರು ಅರಿತು ಸಹಕರಿಸುವುದಾದರೆ ಅವರ ಸ್ವಾತಂತ್ರ್ಯವನ್ನೂ ಆತ್ಮಗೌರವವನ್ನೂ ಉಳಿಸಲು ಜಪಾನು ಸಿದ್ಧವಾಗಿದೆ ಈ ಸಂಗ್ರಾಮದಲ್ಲಿ ಬ್ರಿಟನ್ನಿನ ಮತ್ತು ಅಮೆರಿಕದ ಸಾಧನ ಸಂಪತ್ತುಗಳ ಬಲವನ್ನು ಕಡೆಗಣಿಸುವುದು ಹುಚ್ಚುತನ ರಾಷ್ಟ್ರದ ಬಲವನ್ನು ಹೆಚ್ಚಿಸಿಕೊಳ್ಳಲು ಮತ್ತು ಈಗಿನ ಯುದ್ಧವನ್ನು ಕಟ್ಟಕಡೆಯವರೆಗೆ ನಡೆಸಲು ಜಪಾನ್ ಪಡೆಗಳಿಗೆ ಸಂಗ್ರಾಮವಸ್ತುಗಳನ್ನು ಸರಬರಾಜುಮಾಡಲು ಶಕ್ಯ ಕಾರ್ಯಕ್ರಮವನ್ನು ಕೈಕೊಳ್ಳಲಾಗುವುದು" ಎಂದು ತಿಳಿಸಿದರು ಅವರು ರಷ್ಯಾ-ಜಪಾನ್ ಸಂಬಂಧ ವಿಚಾರವನ್ನೇ ಎತ್ತಲಿಲ್ಲ.

ಮಸೀದಿ ಮತ್ತು ದೇವಾಲಯಗಳ ಮೇಲೆ ಜಪಾನರ ಬಾಂಬು

ಸಿಂಗಪುರದ ರೇಡಿಯೋ ತಿಳಿಸುವ ಮೇರೆಗೆ ಸಿಂಗಪುರದಲ್ಲಿ ಈಚೆಗೆ ನಡೆದ ಶತ್ರುವಿಮಾನಧಾಳಿಯಲ್ಲಿ ಸುಲ್ತಾನ್ ಮಸೀದಿಯ ಮೇಲೆಯೂ ಇತರ ಕೆಲವು ಪ್ರಾರ್ಥನಾಮಂದಿರಗಳ ಮೇಲೆಯೂ ಬಾಂಬುಗಳು ಬಿದ್ದು ಬಹಳ ಹಾನಿಯುಂಟಾಯಿತು ಮಸೀದಿಯ ಅಂಗಳದಲ್ಲಿ ಬಾಂಬುಗಳು ಬಿದ್ದವು ಪ್ರಾರ್ಥನೆಗಾಗಿ ಜನರು ಸೇರುತ್ತಿದ್ದ ಪ್ರದೇಶವು ನಾಶವಾಯಿತು ದೈವವಶಾತ್ ಯಾರಿಗೂ ಗಾಯವಾಗಲಿಲ್ಲ. ಕೌಲಾಲಂಪುರದಲ್ಲಿ ಜಪಾನೀಯರು ಸುಂದರವಾದ ಮಸೀದಿಯೊಂದರ ಮೇಲೆ ಬಾಂಬುಗಳನ್ನು ಹಾಕಿದರು ಪ್ರಾರ್ಥನೆ ಮಾಡುತ್ತಿದ್ದವರಲ್ಲಿ ಮೂವರು ಸತ್ತರು ಬಾಂಬು ಬಿದ್ದು ರೋಮನ್ ಕೆಥೋಲಿಕ್ ಕ್ರೈಸ್ತ ದೇವಾಲಯವೊಂದು ಬಹಳ ಜಖಂ ಹೊಂದಿತು

ಬ್ರಿಟನ್ನಿಗೆ 'ನ್ಯೂ ಸ್ಟೇಟ್ಸ್‌ಮನ್' ಪತ್ರಿಕೆಯ ಸೂಚನೆ

ಮಲಯದಲ್ಲಿ ಬ್ರಿಟಿಷರು ಕೈಗೊಂಡಿರುವ ರಕ್ಷಣೆ ಕಾರ್ಯಕ್ರಮ ಕುರಿತು ಉಗ್ರವಾದ ಟೀಕೆಗಳು ಇನ್ನೂ ಪತ್ರಿಕೆಗಳಲ್ಲಿ ಬರುತ್ತಿವೆ "ಡಚ್ ಇಂಡೀಸ್ ದ್ವೀಪವನ್ನು ಬಲವಾಗಿ ಹಿಡಿದ ಹೊರತು ಮತ್ತು ಸಿಂಗಪುರವನ್ನು ಕೆಲಸಕ್ಕೆ ಬಾರದಂತೆ ಮಾಡಿದ ಹೊರತು ಜಪಾನರು ಭಾರತದ ಮೇಲೆ ಕೈಮಾಡುವುದಿಲ್ಲ. ಈ ಕಾರ್ಯವನ್ನು ಶತ್ರುಗಳು ಪೂರೈಸಿದ ಮೇಲೆ ಭಾರತದ ಬಂದರುಗಳೊಂದಿಗೆ ಮತ್ತು ಪರ್ಷಿಯನ್ ಕೊಲ್ಲಿಯೊಂದಿಗೆ ನಮ್ಮ ಸಂಬಂಧವು ತಪ್ಪಿಹೋಗುವಂತೆ ಮಾಡಲು ಅವರು ಶಕ್ತರಾಗುವರು ಭಾರತಕ್ಕೆ ವಿಪತ್ತುಂಟಾಯಿತೆಂಬ ಸೂಚನೆ ಬಂದ ಕೂಡಲೇ ಭಾರತೀಯ ಜನಸಾಮಾನ್ಯರ ಮೇಲೆ ಎಂತಹ ಪರಿಣಾಮವುಂಟಾಗುವುದೆಂಬುದನ್ನು ನಾವು ತಿಳಿಯಬೇಕು. ಬ್ರಿಟಿಷರು ಈಗ ಸ್ವಪ್ರತಿಷ್ಠೆಯಿಂದ ತೆಪ್ಪಗೆ ಕುಳಿತಿದ್ದಾರೆ ಸುಶಿಕ್ಷಿತರಾದ ಭಾರತೀಯರು ಬ್ರಿಟಿಷರ ಆಳ್ವಿಕೆಯನ್ನೇ ಬಯಸಬಹುದು; ಭಾರತೀಯ ಜನಸಾಮಾನ್ಯವಾದರೋ? ಯಾರುಬಂದರೇನೆಂಬ ಔದಾಸೀನ್ಯ ತಾಳಿದ್ದಾರೆ, ಭರತಖಂಡದಲ್ಲಿ ಬ್ರಿಟಿಷರು ತೆಪ್ಪಗೆ ಕುಳಿತಿರುವುದಕ್ಕೆ ಒಳಜಗಳವೇ ಕಾರಣವೆಂದು ಹೇಳಲಾಗಿದೆ ಭಾರತದ ಹಿತಮಾತ್ರ ವಿಪತ್ತಿನಲ್ಲಿ ಇದ್ದಿದ್ದರೆ ನಾವು ಈ ರೀತಿ ತೆಪ್ಪಗಿರಬಹುದಾಗಿತ್ತು ಆದರೆ ಭರತಖಂಡ, ಮಲಯಾಗಳಲ್ಲಿ ನಮ್ಮ ಭವಿಷ್ಯವೇ ಈಗ ತಕ್ಕಡಿಯಲ್ಲಿ ತೂಗುತ್ತಿದೆ ಈಗ ನಾವು ತೆಪ್ಪಗಿರುವುದೆಂದರೆ ಆತ್ಮಹತ್ಯ ಮಾಡಿಕೊಂಡಂತೆಯೇ ಈಗ ಭರತಖಂಡದ ಬಿಕ್ಕಟ್ಟನ್ನು ಮುರಿಯಬೇಕು ಶ್ರೀಚರ್ಚಿಲ್ಲರಿಗೆ ಪ್ರಾರ್ಥನೆ ಕಳಿಸಿದ ಮಿತವಾದಿಗಳು ನಮಗೆ ದಾರಿ ತೋರಿಸಿದ್ದಾರೆ. ತಕ್ಷಣ ಭಾರತಕ್ಕೆ ರಾಷ್ಟ್ರೀಯ ಸರಕಾರವನ್ನು ಕೊಡಬೇಕು ಶಾಂತಿಸ್ಥಾಪನೆಯಾದ ಇಷ್ಟು ಕಾಲದೊಳಗಾಗಿ ಭರತಖಂಡವು ತನ್ನ ಆಡಳಿತ ವ್ಯವಸ್ಥೆಯನ್ನು ನಿರ್ಧರಿಸಿಕೊಳ್ಳತಕ್ಕದ್ದೆಂದು ತಿಳಿಸಿಕೊಡಬೇಕು" ಎಂದು "ನ್ಯೂ ಸ್ಟೇಟ್ಸ್‌ಮನ್" ಪತ್ರಿಕೆಯು ಸೂಚಿಸಿದೆ.

[೩ನೆಯ ಪುಟದಿಂದ ಮುಂದುವರಿದುದು]

ಗದಿಂದಲೂ ಸತತಪ್ರಯತ್ನದಿಂದಲೂ ಸುಧಾರಿಸಲಿಕ್ಕೆ ಬರುವಂತಹ ಹಲಕೆಲವು ಸ್ಥಿತಿಗಳಿರುತ್ತವೆ ಉದಾಹರಣಾರ್ಥ ನಾವು ದಿನವಹಿ ಸೇವಿಸುವ ಆಹಾರವೂ, ಉಡಿಗೆ ತೊಡಿಗೆ ಇತ್ಯಾದಿ ಪ್ರತಿದಿನದ ಒಡವೆಗಳೂ ನಮ್ಮ ಮನಸ್ಸಿಗೆ ತಕ್ಕವುಗಳಲ್ಲೆಂದು ಭಾವಿಸುವ ಆದರೆ ಅವುಗಳನ್ನು ನಮಗೆ ತಕ್ಕವುಗಳನ್ನಾಗಿ ಮಾಡಿಕೊಳ್ಳಲಿಕ್ಕೆ ಪ್ರಯತ್ನಮಾಡದೆ ನಾವು ಹಾಗೆಯೇ ತೃಪ್ತರಾದರೆ ಅದು ನಮ್ಮ ಮೂರ್ಖತನವೇ ಸರಿ ಈ ಜಗತ್ತು ಸೃಷ್ಟಿಯಾದ ಲಾಗಾಯ್ತು ಮನುಷ್ಯರೆಲ್ಲರು ಈ ರೀತಿಯಲ್ಲಿ ಹುಟ್ಟುತನದಿಂದ ತೃಪ್ತರಾಗಿದ್ದರೆ, ಮತ್ತು ಸೋಮಾರಿಗಳಾಗಿ ಉಪಾಯಗಳಿಂದ ದೂರಮಾಡಲಿಕ್ಕೆ ಬರುವ ವಿಪತ್ತುಗಳಿಗೆ ಒಳಗಾಗಿದ್ದರೆ, ಅವರಿಗೆ ಈ ವರೆಗೂ ಕಾಡುಸ್ಥಿತಿಯಲ್ಲಿಯೇ ಇರಬೇಕಾಗುತ್ತಿತ್ತು ಇದಕಾರಣ ಈ ತರದ ತೃಪ್ತಿಯು ಗರ್ಹ್ಯವಾದದ್ದು

ಇನ್ನು ತೃಪ್ತಿಹೊಂದದವರಿಗೆ ಮಹತ್ವಾಕಾಂಕ್ಷಿಗಳೆಂದೆನ್ನುವರು ಇಂತಹ ಅತ್ಯಾಶೆಯುಳ್ಳವರಿಂದ ಒಂದು ವೇಳೆ ಲಾಭದ ಕಾರ್ಯಗಳಾಗುತ್ತವೆಂಬುದೂ ನಿಜವು ಆದರೆ ಇಂತಹ ಜನರು ನಿಜವಾಗಿ ಸುಖಿಗಳಾಗುವುದಿಲ್ಲ ಯಾಕೆಂದರೆ ಅವರ ಆಶೆಗೆ ಮೇರೆಯೇ ಇರುವುದಿಲ್ಲ ಅವರು ಬಯಸಿದ್ದನ್ನು ಕೊಟ್ಟರೂ ತಮ್ಮ ಹತ್ತಿರವಿಲ್ಲದಿರುವ ಬೇರೆ ಪದಾರ್ಥಗಳನ್ನು ಬಯಸುತ್ತಾರೆ ಅವರು ಬೇಡಿದಂಥ ಅಧಿಕಾರಗಳನ್ನು ಕೊಟ್ಟರೂ, ಕೊಟ್ಟ ಅಧಿಕಾರಗಳಿಗಿಂತ ಹೆಚ್ಚಿನ ಪದವಿಗಳನ್ನು ಬಯಸುತ್ತಾರೆ ಇದು ಅವರ ಸ್ವಭಾವವೇ ಸರಿ ಗ್ರೀಕರ ಅರಸನಾದ ಅಲೆಕ್ಝಾಂಡರನು ಎಷ್ಟು ದೇಶಗಳನ್ನು ಗೆದ್ದರೂ, ತೃಪ್ತನಾಗದೆ "ಇನ್ನುಮುಂದೆ ಗೆಲ್ಲಲಿಕ್ಕೆ ದೇಶಗಳು ಯಾವವೂ ಉಳಿಯಲಿಲ್ಲವಲ್ಲ!' ಎಂದು ಉದ್ವಿಗ್ನನಾಗಿ ಮೇಲಕ್ಕೆ ಮುಖಮಾಡಿ ಅತ್ತನಂತೆ

ಸುಖವೆಂಬುದು ಯಾವಾಗಲೂ ದುಃಖಮಿಶ್ರಿತವಾಗಿರುವುದು ಮಹತ್ಸುಖವು ಮಹದಾಪತ್ತುಗಳಿಂದ ಕೂಡಿರುವುದು ಅಲ್ಪಸುಖವು ಅಲ್ಪದುಃಖದಿಂದ ಮಿಶ್ರಿತವಾಗಿರುವುದು. ಹ್ಯಾಗಾದರೇ ಇರಲಿ, ಸುಖವು ಬಹಳವಾಗಲಿ, ಕಡಿಮೆಯಾಗಲಿ, ಅದು ಯಾವಾಗಲೂ ದುಃಖಮಿಶ್ರಿತವಾಗಿರುತ್ತದೆಂಬುದು ಮಾತ್ರ ನಿರ್ವಿವಾದವಾದದ್ದು ಆದರೂ ತನ್ನ ಅದೃಷ್ಟದಿಂದೊದಗಿದ ಸ್ಥಿತಿಯಲ್ಲಿ ಸಂತಸದಿಂದಿರುವವನು ಬಡವನಾದಾಗ್ಯೂ, ಅಸಂತುಷ್ಟನಾದ ಶ್ರೀಮಂತನಿಗಿಂತಲೂ ಸಹಸ್ರಪಾಲು ಹೆಚ್ಚು ಸುಖಿಯೆನಿಸುವನು ಆದ್ದರಿಂದ ಸುಧಾರಿಸಬಹುದಾದ ನಮ್ಮ ಪರಿಸ್ಥಿತಿಯನ್ನು ನಾವು ಅವಶ್ಯವಾಗಿ ಸುಧಾರಿಸತಕ್ಕದ್ದು ಸುಧಾರಿಸಲಿಕ್ಕೆ ಬಾರದಂಥ ನಮ್ಮ ದೈವದಿಂದೊದಗಿದ ಸ್ಥಿತಿಯಲ್ಲಿ ನಾವು ಆನಂದದಿಂದಿದ್ದು ಸುಖಿಗಳಾಗಿರತಕ್ಕದ್ದು ಇದರಿಂದ ಪರಮಾತ್ಮನಲ್ಲಿಯೂ ಕೃತಜ್ಞತೆಯನ್ನು ತೋರಿಸಿದಂತಾಗುವುದು. ಇದು ಮನುಷ್ಯತ್ವದ ಲಕ್ಷಣವು

ಪುರುಷಸಿಂಹರೇ! ಆಶೆಯನ್ನು ತೊರೆದ ಬಳಿಕ ಬಡವನಾರು? ಬಲ್ಲಿದನಾರು? ಅದಕ್ಕೆ ಎಡೆಕೊಟ್ಟೆವಾದರೆ ಊಳಿಗವು ತಲೆಯಮೇಲೆ ಸಿದ್ಧವಾಗಿ ಕುಳಿತುಕೊಳ್ಳುವುದು ಬಯಕೆಗಳು ಹೆಚ್ಚುತ್ತ ಬಂದಹಾಗೆಲ್ಲ ಆಹುತಿಯಿಂದಗ್ನಿಯಂತೆ ಆಶೆಯೂ ವೃದ್ಧಿಯಂ ಹೊಂದುವುದು ಯಾವ ವಸ್ತುವನ್ನು ನಾವು ಬಯಸುವದಿಲ್ಲವೋ ಅದು ನಮಗೆ ದೊರೆತಂತೆಯೇ ಸರಿ ಅದಪ್ರಯುಕ್ತ ಆಶೆಗೆ ದಾಸರಾಗದೆ ನಮ್ಮ ದೈವದಿಂದೊದಗಿದ ಸ್ಥಿತಿಯಲ್ಲಿ ತೃಪ್ತರಾಗಿರುವುದು ವಿಹಿತಮಾರ್ಗವಾಗಿರುವುದು.

ಆಶಾಶಾಪರಮಂದುಃಖಂ, ನಿರಾಶಾಪರಮಂಸುಖಂ

ವ್ಯವಹಾರಜ್ಞಾನದ ಅವಶ್ಯಕತೆ

ಒಬ್ಬಾನೊಬ್ಬ ರಾಜ. ಆತನ ಆಸ್ಥಾನದಲ್ಲಿ ಕೆಲವು ಉದ್ದಾಮ ಪಂಡಿತರಿದ್ದರು ಒಂದು ದಿನ ರಾಜನಿಗೂ ಮಂತ್ರಿಗೂ ವಿದ್ವತ್ತಿನ ವಿಷಯವಾಗಿ ವಾಗ್ವಾದವುಂಟಾಯಿತು.

ರಾಜ—ಪ್ರಪಂಚದಲ್ಲಿ ವಿದ್ವತ್ತೇ ಎಲ್ಲಕ್ಕಿಂತ ಮಿಗಿಲಾದುದು ವಿದ್ಯಾವ್ಯಾಸಂಗಮಾಡಿ ಪಡೆದ ಪಾಂಡಿತ್ಯದ ಬಲದಿಂದ ಮನುಷ್ಯನು ಸುಖಿಯಾಗಿರಬಹುದು.

ಮಂತ್ರಿ—ಬರೀ ವಿದ್ವತ್ತು ಸಾಲದು ಪ್ರಪಂಚಜ್ಞಾನ ಬೇಕು ಬರೇ ವಿದ್ವತ್ತು ಯಾವ ಕೆಲಸಕ್ಕೆ ಬರುತ್ತದೆ?

ರಾಜನಿಗೆ ಮಂತ್ರಿಯ ಮಾತು ರುಚಿಸಲಿಲ್ಲ. ರಾಜನು ಮಂತ್ರಿಯ ಮಾತನ್ನು ಪರೀಕ್ಷಿಸಬೇಕೆನ್ನಲು ಮಂತ್ರಿಯು "ರಾಜರೇ, ಆಗಬಹುದು. ನಿಮ್ಮ ಆಸ್ಥಾನದಲ್ಲಿ ಸಕಲ ವಿದ್ಯಾಪಾರಂಗತರಾದ ಪಂಡಿತರಿದ್ದಾರೆ ಅವರು ಸುಖವಾಗಿರುವುದು ಅವರ ವಿದ್ಯಾಬಲದಿಂದಲ್ಲ ಇತರರು ಅವರಿಗಾಗಿ ಮಾಡುತ್ತಿರುವ ಸೇವೋಪಚಾರಗಳಿಂದ ಅವರೆಲ್ಲ ತಮ್ಮ ತಮ್ಮ ವಿದ್ಯೆಗಳಲ್ಲಿ ಪಂಡಿತರೇನೋ ಹೌದು ಆದರೆ ಅವರಿಗೆ ವ್ಯವಹಾರ ಜ್ಞಾನ ಕಡಿಮೆ ಅವರು ಒಂದು ದಿನವೂ ಕೂಡ ನೌಕರ ಚಾಕರರ ಸಹಾಯವಿಲ್ಲದೆ ಹೊಟ್ಟೆಯು ತುಂಬ ಊಟಮಾಡಲಾರರು ಇಷ್ಟವಿದ್ದರೆ, ನನ್ನ ಮಾತನ್ನು ಪರೀಕ್ಷಿಸಬಹುದು" ಎಂದು ಅರಿಕೆಮಾಡಿಕೊಂಡನು

ರಾಜನು ಮಂತ್ರಿಯ ಸಲಹೆಯಂತೆ ಆಸ್ಥಾನ ಪಂಡಿತರ ಪೈಕಿ ಒಬ್ಬ ಸಂಗೀತ ಶಾಸ್ತ್ರವಿಶಾರದ, ಒಬ್ಬ ಜ್ಯೋತಿಷಶಾಸ್ತ್ರಕೋವಿದ, ಒಬ್ಬ ತರ್ಕಶಾಸ್ತ್ರಪ್ರವೀಣ, ಒಬ್ಬ ವ್ಯಾಕರಣಶಾಸ್ತ್ರ ನಿಸ್ಸೀಮ ಈ ರೀತಿ ನಾಲ್ವರು ಪಂಡಿತರನ್ನು ಕರೆಸಿದನು ಅವರನ್ನೆಲ್ಲ ಸಂಬೋಧಿಸಿ, "ಪಂಡಿತ ಮಹಾಶಯರೇ ಒಂದು ಮಾತನ್ನು ಪರೀಕ್ಷಿಸುವ ಸಲುವಾಗಿ ನಿಮ್ಮ ಸಹಾಯವು ಬೇಕಾಗಿದೆ ನನ್ನ ಮಾತನ್ನು ಪಾಲಿಸಲು ಸಿದ್ಧರಿದ್ದೀರೊ" ಎಂದು ಕೇಳಿದನು

'ಆಶ್ರಯದಾತಾ, ತಮ್ಮ ಸೇವೆಯನ್ನು ಮಾಡುವ ಸೌಭಾಗ್ಯವು ನಮ್ಮದಾಗಿರುತ್ತದೆ ಅದೇನು ವಿಷಯ ಅಪ್ಪಣೆಕೊಡಿಸಿ" ಎಂದು ಪಂಡಿತರೆಲ್ಲರೂ ಕೇಳಿದರು

ರಾಜನು "ನಾಳೆ ಒಂದುದಿನ ಮಾತ್ರ ನೀವೆಲ್ಲ ಬೇರೆಯಾಗಿ ಒಂದು ಮನೆಯಲ್ಲಿ ಬಂದಿರಿ, ನೀವು ನಾಲ್ಕು ಜನ ಮಾತ್ರ ನೌಕರರು ಚಾಕರರು ಯಾರೂ ಇರುವುದಿಲ್ಲ ನಿಮಗೆ ಬೇಕಾದುದೆಲ್ಲವನ್ನು ತಂದುಕೊಳ್ಳಿ, ಎಲ್ಲಕ್ಕೂ ಏರ್ಪಾಡು ಮಾಡುತ್ತೇನೆ ಊಟೋಪಚಾರಗಳನ್ನು ತೀರಿಸಿಕೊಂಡು ಸಾಯಂಕಾಲ ದರ್ಬಾರಿಗೆ ಬನ್ನಿ" ಎಂದು ವಿಧಾಯಿಸಿದನು. ರಾಜನ ಮಾತಿನ ಮರ್ಮ ಪಂಡಿತರಿಗೆ ಮುಂದಟ್ಟಾಗಲಿಲ್ಲ. ರಾಜಾಜ್ಞೆಯನ್ನು ಮನ್ನಿಸಲು ವಚನವಿತ್ತು ತೆರಳಿದರು.

ಮಾರನೆಯ ದಿವಸ ನಾಲ್ವರೂ ಗೊತ್ತಾದ ಮನೆಗೆ ಬಂದರು ಸ್ನಾನವಾದಮೇಲೆ ಊಟದ ಯೋಚನೆ ಬಂತು ಮನೆಯಲ್ಲಿ ನೋಡಲಾಗಿ ಅಕ್ಕಿ, ಬೇಳೆಯಿತ್ತು. ೧೦ ರೂಗಳನ್ನು ಇಟ್ಟಿತ್ತು. ತುಪ್ಪ ಮತ್ತು ತರಕಾರಿ ಇರಲಿಲ್ಲ ನಾಲ್ವರು ಪಂಡಿತರೂ ಕೆಲಸವನ್ನು ಹಂಚಿಕೊಂಡರು. ಸಂಗೀತಗಾರನು ಅಡಿಗೆಯ ಭಾರವನ್ನು ಹೊತ್ತುಕೊಂಡನು ತರ್ಕಶಾಸ್ತ್ರಜ್ಞನು ತುಪ್ಪ ತರಲು ಹೊರಟನು. ವೈಯಾಕರಣಿಯು ತರಕಾರಿ ವ್ಯಾಪಾರಕ್ಕೆ ಹೊರಟನು ಜ್ಯೋತಿಷ್ಯನು ಸಂಗೀತಗಾರನಿಗೆ ಸಹಾಯಕನಾಗಿ ನಿಂತನು ಉಪ್ಪಿಲ್ಲದುದರಿಂದ ಸಂಗೀತಗಾರನ ಅಪೇಕ್ಷೆಯ ಪ್ರಕಾರ ಜ್ಯೋತಿಷ್ಯನು ಉಪ್ಪು ತರಲು ಹೊರಟನು

ಮನೆ ಬಿಟ್ಟು ೧೦–೧೫ ಗಜ ದೂರ ಹೋಗಿರಬಹುದು ಒಂದು ಬೆಕ್ಕು ಅಡ್ಡವಾಗಿ ಬಂತು ಹೊಸಲು ದಾಟುತ್ತಲೆ ಹೀಗೆ ಅಪಶಕುನವಾಗಲು ಜ್ಯೋತಿಷಿಯು ಹಿಂತಿರುಗಿ ಕೊಠಡಿಯಲ್ಲಿ ಕುಳಿತು ಶಿವ, ಶಿವ ಎಂದು ಜಪ ಮಾಡತೊಡಗಿದನು. ಸಹಸ್ರಾಷ್ಟೋತ್ತರ ಜಪ ಮಾಡಿ ಹೊರಗೆ ಬಂದರೆ, ಒಬ್ಬ ಹುಡುಗನು ಸೀತನು. ಮತ್ತೆ ಹಿಂತಿರುಗಿ ೫–೬ ನಿಮಿಷಗಳ ತರುವಾಯ ಹೊರಹೊರಡಲು ಒಬ್ಬ ವಿಧವೆಯು ಎದುರು ಬಂದಳು. ಜ್ಯೋತಿಷಿಯು ಮನೆಗೆ ಹಿಂತಿರುಗಿ ಕುಳಿತುಕೊಂಡು ಪಂಚಾಂಗದಲ್ಲಿ ಮುಹೂರ್ತ ಫಲವನ್ನು ನೋಡತೊಡಗಿದನು ಯಮಗಂಡವು ಪ್ರಾರಂಭವಾಗಿ ಆಗಲೇ ೧೫ ನಿಮಿಷಗಳಾಗಿಹೋಗಿತ್ತು "ನಾನು ಪಂಚಾಂಗವನ್ನು ನೋಡಿದ್ದೇ ಒಳ್ಳೆಯದಾಯಿತು ಇಲ್ಲದಿದ್ದರೆ ಎಂತಹ ಅನರ್ಥವುಂಟಾಗುತ್ತಿತ್ತೊ? ಯಾರಿಗೆ ಗೊತ್ತು ಇಂತಹ ಅಶುಭ ಮುಹೂರ್ತದಲ್ಲಿ ಉಪ್ಪು ತರಲು ಹೇಗೆ ಹೋಗುವುದು? ರಸ್ತೆಯಲ್ಲಿ ಏನಾದರೂ ಆಗಿಬಿಟ್ಟರೆ? ಆದರೆ ಉಪ್ಪು..ಕಡೆಗೆ ಒಂದು ದಿನದ ವಿಷಯ ತಾನೆ! ಸರಿ, ಹೇಗೋ ಆಗುತ್ತದೆ. ಉಪ್ಪೇ ಬೇಡ ಊಟಮಾಡಿಬಿಡುವುದು' ಎಂದು ನಿರ್ಧರಮಾಡಿಕೊಂಡನು.

ಇತ್ತಕಡೆ ತಾರ್ಕಿಕನು ಅಂಗಡಿಯಿಂದ ಒಂದು ದೊನ್ನೆಯಲ್ಲಿ ತುಪ್ಪವನ್ನು ತೆಗೆದುಕೊಂಡು ಬರುತ್ತಿದ್ದನು. ಬರುತ್ತಬರುತ್ತ ಅವನ ಮನಸ್ಸು ಕೆಲಸಮಾಡ ಪ್ರಾರಂಭಿಸಿತು. ದೊನ್ನೆಯು ಆಧಾರದ ಮೇಲೆ ತ ನಿಂತಿದೆಯೆ ತುಪ್ಪದ ಆಧಾರದ ಮೇಲೆ ದೊನ್ನೆ ನಿಂತಿದೆ ಎಂಬುದು ಸಂದೇಹಕ್ಕೆ ಇಟ್ಟುಕೊಂಡಿತು. ಯೋಚ ದಂತೆಲ್ಲ ವಿಷಯವು ಗಹನವಾಗತೊಡಗಿತು. ತನ್ನ ತಾರ್ಕಿಕ ಸಾಮರ್ಥ್ಯವನ್ನೆಲ್ಲ ಪ್ರಯೋಗಿಸುತ್ತ ಬರ ದ್ದಾಗ, ರಸ್ತೆಯಲ್ಲಿ ತನ್ನ ನಿರಂಕುಶತ್ವವನ್ನು ಪ್ರಕ ಸುತ್ತ ನಿಂತಿದ್ದ ಒಂದು ಹಸುವಿಗೆ ಢಿಕ್ಕಿ ಹೊಡೆದ ಕೈಯಲ್ಲಿದ್ದ ದೊನ್ನೆ ಕೆಳಕ್ಕೆ ಬಿತ್ತು ತುಪ್ಪವೆಲ್ಲ ಮಣ್ಣ ಪಾಲಾಯಿತು ಆದರೆ ಅತನು ಹೀಗಾಯಿತಲ್ಲ ಎಂದು ದುಃಖಿಸಲಿಲ್ಲ ಹರ್ಷೋತ್ಸಾಹದಿಂದ ಕುಣಿಯುತ್ತ ತನ್ನ ಸಮಸ್ಯೆಯು ಬಗೆಹರಿಯಿತಲ್ಲ ಎಂದು ಹಿಗ್ಗಿದನು. ತುಪ್ಪ ಹೋದರೆ ಏನಾಯಿತು, ದೊನ್ನೆಯು ಆಧಾರದ ಮೇ ತುಪ್ಪ ನಿಂತಿತ್ತೆಂಬ ಹೊಸ ವಿಷಯವು ಗೊತ್ತಾಯಿತ— ಒಂದು ಹೊಸ ವಿಷಯ ನಿಷ್ಕರ್ಷಿಸಲು ಜನರು ಎಷ್ಟ ಕಷ್ಟನಷ್ಟ ಸಹಿಸಬೇಕಾಗುತ್ತದೆ, ತನಗಾದರೂ ಅ ನಷ್ಟವೇನು! ಸ್ವಲ್ಪ ತುಪ್ಪ. ಅಷ್ಟುತಾನೆ—ಅಂದು ಕೊಂಡನು

"ಆದರೆ ತುಪ್ಪವು ಇಲ್ಲದೆ ಹೋಗುತ್ತದಲ್ಲ—ಇಷ್ಟು ದೂರ ಬಂದು ಬಿಟ್ಟಿದ್ದೇನೆ, ಇನ್ನು ಯಾರು ಅಂಗ ತನಕ ಹೋಗುವವರು ಕಡೆಗೆ ಒಂದೇ ದಿನದ ವಿಷ ತಾನೆ, ಸರಿ, ತುಪ್ಪವಿಲ್ಲದೆಯೆ ಊಟ ಮಾಡಿಬಿಡುವುದು' ಎಂದು ನಿಶ್ಚಯ ಮಾಡಿಕೊಂಡು ಮನೆಗೆ ಹಿಂತಿರ ಬಂದು ಕೋಣೆ ಹಿಡಿದನು

ಇತ್ತಲಾಗಿ ವೈಯಾಕರಣಿಯು ಮಾರ್ಕೆಟ್ಟನ್ನು ಸೇ ತರಕಾರಿ ಮಾರುವ ಹೆಂಗಸಿನ ಬಳಿಗೆ ಹೋಗಿ ವ್ಯಾಪಾ ಮಾಡುತ್ತ ವ್ಯಾಕರಣ ಶುದ್ಧವಾದ ಮಾತನ್ನು ಆಡುತ್ತ ಅವಳಾಡಿದ ವ್ಯಾಕರಣ ದೋಷಗಳನ್ನು ತಿದ್ದುತ್ತ ದೊಡ್ಡ ವ್ಯಾಖ್ಯಾನಕ್ಕೆ ಪ್ರಾರಂಭಿಸಿ ಬಿಟ್ಟಿದ್ದನು ಆ ಮಾರ್ಕೆಟ್ಟು ಮಹಾ ತಾಯಿಗೆ ಇವನ ಮಾತನ್ನು ಕೇಳಿ ಬೇಸರವಾಗಿ ಆತನನ್ನು ಹೀನಾಮಾನವಾಗಿ ವ್ಯಾಕರಣ ನಿರ್ಲಕ್ಷ್ಣ ಬೈದಳು. ವೈಯಾಕರಣಿಯು ಯತ್ನವಿಲ್ಲದೆ ಅಲ್ಲಿಂ ಸುರಕ್ಷಿತ ಸ್ಥಳಕ್ಕೆ ಹೋಗಿ, "ಹೀಗೆ ಅಶುದ್ಧ ಭಾಷೆಯ ಡುವವರ ಹತ್ತಿರ ಹೇಗೆ ತರಕಾರಿಯನ್ನು ಕೊಳ್ಳುವುದ' ಅವಳ ಮಾತು ಹೇಗೆ ಕೆಟ್ಟಿರುವುದೊ ಹಾಗೆ ಅವಳ ತ ಕಾರಿಯೂ ಕೆಟ್ಟಿರಬಹುದು. ಅಂತಹ ಕೆಟ್ಟ ತರಕಾ ಯನ್ನು ಕೊಳ್ಳದಿರುವುದೇ ಮೇಲು. ಕಡೆಗೆ ಒಂದು ದಿ ಷಯ ತಾನೆ, ಸರಿ, ತರಕಾರಿ ಇಲ್ಲದೇನೆ ಊಟ ಮಾ ಬಿಡುವುದು" ಎಂದು ಕೊಂಡು ಮನೆಗೆ ಬಂದು ನೋ ದನು. ತಾರ್ಕಿಕನೂ, ಜ್ಯೋತಿಷಿಯೂ ಮಲಗಿರುವುದನ್ನು ನೋಡಿ, ತಾನೂ ಒಂದು ಕಡೆ ಮಲಗಿಬಿಟ್ಟನು.

ಮನೆಯಲ್ಲಿಯೇ ಇದ್ದ ಸಂಗೀತಗಾರನು ತನ್ನ ಸ್ನೇ ತರಿಗೋಸ್ಕರ ಕೊಂಚಕಾಲ ಕಾಯ್ದು ಅವರು ಬರದಿರ ಅಕ್ಕಿ ಬೇಳೆಯನ್ನು ಬೇಯಿಸ ಬೇಕೆಂದು ಒಲೆಯ ಮೇಲಿ ಟ್ಟನು. ಸುಮ್ಮನಿರಲಾರದೆ ಯಾವುದೋ ರಾಗವನ್ನು ಹಾಡಿಕೊಳ್ಳುತ್ತ ಕುಳಿತಿದ್ದನು. ಸ್ವಲ್ಪ ಹೊತ್ತಿನಲ್ಲಿಯೇ ನೀರು ಕುದಿಯಲು ಉಪಕ್ರಮವಾಯಿತು. ರಾಗ ಹಾ ವುದನ್ನು ನಿಲ್ಲಿಸಿ, ಕಿವಿಗೊಟ್ಟು ಕೇಳುತ್ತಾನೆ ಕುದಿಯುವ ಪಾತ್ರೆಯಿಂದ "ಕೊತ್, ಕೊತ್" ಎಂಬ ಶಬ್ದವು ಹೊರಟಿತು ಅವನು ಸಂಗೀತ ಕಲಿಯುವ ಕಾಲದಲ್ಲಿ "ಸಂಗೀತ ಮಯಂ ಜಗತ್" ಎಂಬ ವಾಕ್ಯವನ್ನು ಕೇಳಿ ದ್ದನು. ಆದರೆ ಈ ಕೊತ್, ಕೊತ್ ಯಾವ ರಾಗಕ್ಕೆ ಸೇರಿತ್ತೋ ಅವನಿಗೆ ಗೊತ್ತಾಗಲಿಲ್ಲ. ಒಂದೊಂದುರಾಗ ವನ್ನು ಅದರೊಡನೆ ಹಾಡಿ ಪರೀಕ್ಷಿಸಿನೋಡಿದನು ಯಾ ವುದೂ ಸರಿಹೊಂದಲಿಲ್ಲ. ನಿರಾಶನಾಗಿ ಮತ್ತೊಮ್ಮೆ ರಾಗವನ್ನು ಕೇಳೋಣವೆಂದು ಒಲೆಯ ಹತ್ತಿರ ಬಂದು ನೋಡುತ್ತಾನೆ. ಅನ್ನವೆಲ್ಲ ಬೆಂದುಹೋಗಿದೆ. ಒಲೆ ಆ ಹೋಗಿದೆ ಒಳಗೆ ಬಂದು ನೋಡಿದನು, ಮೂರು ಜನ ಮಿತ್ರರೂ ಮಲಗಿ ನಿದ್ರಿಸುತ್ತಿದ್ದರು. ಅವನೂ ಒಂದು ಕಡೆ ಮಲಗಿ ಕೊಂಡನು

ಸಾಯಂಕಾಲವಾದರೂ ಈ ಪಂಡಿತರ ಸುಳಿವೇ ಇಲ್ಲ ಆಗ ರಾಜನು ಭಟರನ್ನು ಕಳುಹಿಸಿದನು. ಭಟರು ಬಂದ ಈ ನಾಲ್ಕು ಮಂದಿಯನ್ನು ಎಬ್ಬಿಸಿದರು ನಾಲ್ವರು ಪಂ ತರೂ ಘಾಬರಿ ಇಂದೆದ್ದು, ರಾಜಾಸ್ಥಾನಕ್ಕೆ ಓಡಿಹೋದ ರು. ಇವರ ಕಾಂತಿಹೀನ ಮುಖಗಳನ್ನು ನೋಡಿ ರಾಜನ "ತಮಗೆಲ್ಲ ಊಟವಾಯಿತೋ!" ಎಂದನು. ಪಂಡಿತ

ಮೌನವಾಗಿ ತಲೆಬಾಗಿ ನಿಂತರು. ರಾಜನು ತಿರುಗಿ ಕೇಳಲು ಪ್ರತಿಯೊಬ್ಬನೂ ತನ್ನ ವೃತ್ತಾಂತವನ್ನು ತಿಳಿಸಿದನು. ಇವರ ಅವಿವೇಕವನ್ನು ಕಂಡು ರಾಜನು ನಕ್ಕು ಅವರಿಗೆಲ್ಲ ಊಟೋಪಚಾರಕ್ಕೆ ಏರ್ಪಾಟು ಮಾಡಿದನು.

'ಬರೀ ಪುಸ್ತಕ ವ್ಯಾಸಂಗದಿಂದ ಏನಾಗುತ್ತದೆ? ಪುಸ್ತಕಜ್ಞಾನಕ್ಕಿಂತ ವ್ಯವಹಾರಜ್ಞಾನ, ಪ್ರಪಂಚಜ್ಞಾನ ಮುಖ್ಯವಾಗಿ ಬೇಕಾದುದು" ಎಂಬ ಮಂತ್ರಿಯ ಸತ್ಯವಾದ ಮಾತನ್ನು ರಾಜನು ಮೆಚ್ಚಿ ಮಂತ್ರಿಯನ್ನು ಪ್ರಶಂಸಿಸಿದನು.

(ವಿ. ಕ)

ಗೋವುಹಿಂಸೆ

—ಕನ್ನಡಕವಿ, ಆಸ್ಥಾನವಿದ್ವಾನ್ ಅನವಟ್ಟಿ ರಾಮರಾಯರು

ಸಾರವೇದದ ಸರಿತ ಬುಧರಿಂ ।
ರಿಸುಧೆಯಂ ಕೊಡುವ ಗೋವಿಂ ।
ರತಮುಣ ಶಾಶಿತ್ತ ವೇದಗಳಿಂ ಭೂಮಿಯೊಳು ॥
ವು ಸಾಧ್ವೀಮಣಿಯರಿಂದಂ ।
ರ್ಥಾತ್ಮಗಳಿಂದೆ ಸಂತತ ।
ರಿಣಿಯು ನಿಂತಿಹುದು ಮೆನ್ನುತೆ ಶಾಸ್ತ್ರವೊರೆಯುವುದು ||೧||

ವಿತತ ಜೀವಿಗಳೊಳಗೆ ಹರಿತಾ ।
ಶಯದೆ ಪರಿಪೂರ್ಣನಾಗುತೆ ।
ಸಿ ಧರೆಯ ಪಾಲಿಸುತ್ತಿಹತೆರದೆ ಸಂತತವು ॥
ಯೊಳೆಸೆವಾ ಗೋವ್ರಜಂಗಳು ।
ತ ಮಧು ತಕ್ರ ನವನೀತಗ ।
ಲಸನಾಗೀಯುತಲಿ ಧರೆಯಂ ಪಾಲಿಸುತ್ತಿಹವು ||೨||

ಆವಕಾಲದೆ ಬಾಲವೃದ್ಧರು ।
ಸಜೀವಿಯ ಪಾಲನೀಂಟುತೆ ।
ನಂ ರೋಗಿಗಳು ತೋಷದೆ ಜೀವಿಸುತ್ತಿಹರೊ ॥
ಪವಸ್ತುವ ನಿತ್ಯ ಕಳದಿಂ ।
ನವೆನಿಸಿ ಸುರರುಮೆರೆವಾ ।
ವು ಲೋಕದ ವೃದ್ಧಿಯೊಂದಿಸಿ ಜೀವಪಾಲಿಸುಗೆ ||೩||

ಜಪದೆ ಓಂಕಾರವನು ಪಠಿಸುತೆ ।
ಮ ಸತ್ಯವ ವಿಪ್ರಗೋವ್ರಜ ।
ವಂದಿಸಿ ಭಕ್ತಿಶ್ರದ್ಧಾದಿಗಳ ತೋರಿದೊಡೆ ॥
ಯಕಾಲದೆ ಭಕ್ತಿಯರಿವೆಯು ।
ರದೆ ನಾನಿತ್ತು ಮೋಕ್ಷವ ।
ತದೆ ಕುಡುವೆನು ಮೆಂದು ಪೇಳ್ದಿಹನಂದು ಮಾಧವನು ||೪||

ಗೋವು ಪೂಜಾದಿಗಳಿಗರ್ಹವು ।
ವನಾವಂ ಹನನಗೈಯುವ ।
ಪ್ರ ಲೋಕಕೆ ಮಾತೆಯಂತೆಯೆ ವರ್ತಿಸುತ್ತಿಹುದು ॥
ವಿನೊಳು ದೇವತೆಗಳೆರ್ಪರು ।
ವಿನೊಳು ನೆಲಸಿಹರು ಋಷಿಗಳು ।
ವು ಸರ್ವೋತ್ತಮವದೆನ್ನುತೆ ವೇದ ಘೋಷಿಪುದು ||೫||

ಧೇನುಗಳೊಳಗೆ ಕಾಮಧೇನುವು ।
ಮ ನಿಶಿತಾಯುಧಗಳಲ್ಲಿಯೆ ।
ನುತ ವಜ್ರಾಯುಧವು ನಾನಾಗಿ ಸಂತತಿಯ ॥
ಪರೊಳು ಮದನನಾಗಿಹ ।
ಸಲು ಫಣಿಗಳೊಳಗೊಳು ।
ನ ವಾಸುಕಿಯಾಗಿ ವರ್ತಿಪೆನೆಂದ ಶ್ರೀಕೃಷ್ಣ ||೬||

ವಿಮಲ ಗೋಸ್ತೋತ್ರವನು ಗೈಯುತೆ ।
ವ ವಚನ ಕಾಯ ಶುದ್ಧತೆಯಿಂ ।
ನಿಸಿಂ ಪೂಜಿಸುತೆ ಧುಂಚಿಕ ಮೇವನೀಯುತಲಿ ॥
ಜ ಪಾಲಿಸುತಿರ್ದೊಡಂತ್ಯದೊಳ್ ।
ಗಸು ಪವಿಪ ಸುಖವನಾಂತೆ ।
ಮುಕ್ತಿಯ ನಾಂಪುವುದರೊಳಗಿಲ್ಲ ಸಂಶಯವು ||೭||

ಧನಿಕನಾಗಲಿ ಬಡವನಾಗಲಿ ।
ಯು ಭಯ ಭಕ್ತಿಯಿಂ ಪಿತೃಗಳು ।
ತರದ ವೈತರಣಿ ನದಿಯಂ ದಾಟಿ ಮೋಕ್ಷವನು ॥
ನುತದೆ ಪಡೆಯುಳ್ಕೆ ನಲವಿಂ ।
ಸುಜ್ಞಾನಿಯುತವಿಪ್ರಂ
ಗೋದಾನ ಗೈವುದು ಶಾಸ್ತ್ರಸಮ್ಮತವು ||೮||

ಕರಮಾಗಿಹ ವಸ್ತುಚಯದಿಂ ।
ವ ಧರೆಯೊಳು ಗೋವು ಸೀದಿರು ।
ವ ಮಧುರಾಮೃತದೆ ಧರ್ಮಾರ್ಥ ಪರಮೋಕ್ಷಗಳ ॥
ವ ಸೀಡುತಲಿರ್ಪ ಕತದಿಂ ।
ನುಪೂಜ್ಯವಿದೆನಿಸಿ ಪಾವನ ।
ದ ಪಂಚಸುಗವ್ಯ ಪ್ರಾಯಶ್ಚಿತ್ತ ಗೈವವೆಲೆ ॥

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ; ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
...ಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ ..	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ರುದ್ರರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಸರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರನಾಥ ಸದನದ ಅತ್ಯಂತ ಸುಂದರವಾಗಿ ತೋರುವ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ಕೊಂಡುಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಟ್ಟು ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ ಮೂರುಚೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[34] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಷಟ್ಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯ ಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯ ಶತಕ ..	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ ..	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಷಟ್ಶಾಸ್ತ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು(ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳುಳ್ಳದ್ದು) ...	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ) ..	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ...	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ . .	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) ..	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत) . ..	३ रु
वीरशैवरत्न (मराठी) ...	१ रु
महानारायणोपनिषत् (वीरशैवभाष्य–संस्कृत)	१ रु
पुरुषसूक्तम् (वीरशैवप्राचीनभाष्योपेतम्)	४ आ
भक्तिकेश्वरकारिका (संस्कृत) ..	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M 2266

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ

ಬಿಡಿ ಪ್ರತಿ ೧ಕ್ಕೆ ೬ ಪೈ

ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨ನೇ ಫೆಬ್ರವರಿ ೧೯೪೨ [ಸಂಚಿಕೆ ೪೦

ಬ್ರಿಟಿಷ್ ಮಹಾಪ್ರಧಾನರ ಭಾಷಣ.

ಬ್ರಿಟಿಷ್ ಮಹಾಪ್ರಧಾನರಾದ ಶ್ರೀ ವಿನ್‌ಸ್ಟನ್ ಚರ್ಚಿಲ್‌ರವರು ಕಾಮನ್ಸ್ ಸಭೆಯಲ್ಲಿ ಭಾಷಣಮಾಡುತ್ತ 'ಈ ಸಭೆಯು ನನ್ನಲ್ಲಿ ನಂಬಿಕೆಯನ್ನು ವ್ಯಕ್ತಪಡಿಸುವುದರ ಮೂಲಕ ನನಗೆ ನೆರವಾಗಬೇಕೆಂದು ನಾನು ಕೇಳುತ್ತೇನೆ ಪೆಸಿಫಿಕ್ ಸಾಗರ ಕ್ಷೇತ್ರದಿಂದ ನಾವು ಇನ್ನೂ ಅನೇಕ ಕೆಟ್ಟ ಸುದ್ದಿಗಳನ್ನು ಕೇಳಬೇಕಾಗಿ ಬರಬಹುದು ಮುಂದೆ ಇನ್ನೂ ಹೆಚ್ಚಿನ ಕೇಡನ್ನು ನಾವು ಎದುರಿಸಬೇಕಾಗಿದೆ ಮಲಯಾದಲ್ಲಿರುವ ಬ್ರಿಟಿಷ್ ಸೇನೆಗೆ ಸಹಾಯಕವಾಗಿ ಕಳೆದ ವಾರದಲ್ಲಿ ಅಪಾರ ಬಲವನ್ನು ಕಳುಹಿಸಲಾಗಿದೆ ಹವಾಗುಣವು ಚೆನ್ನಾಗಿಲ್ಲದೇ ಇರುವ ಪ್ರಯುಕ್ತ ನಾವು ಎಂ ಸ್ಟಾಲಿನ್ನರಿಗೆ ಕೊಟ್ಟ ವಚನವನ್ನು ಸಂಪೂರ್ಣವಾಗಿ ಪಾಲಿಸಲಾಗಲಿಲ್ಲ ಕೊಂಚ ಲೋಪಕ್ಕೆ ಅವಕಾಶವಾಗಿದೆ ಫೆಬ್ರವರಿ ಆರಂಭದ ಹೊತ್ತಿಗೆ ಅದನ್ನು ಸರಿಪಡಿಸುವೆವು ಮಂತ್ರಿಮಂಡಲದಲ್ಲಿ ಬದಲಾವಣೆ ಮಾಡಬೇಕೆಂಬ ಸಲಹೆಯನ್ನು ಒಪ್ಪುವುದಿಲ್ಲ ಏನಾದರೂ ಲೋಪದೋಷಗಳು ಕಂಡುಬಂದರೆ ಅವರ ಜವಾಬ್ದಾರಿಯನ್ನು ಹೊರಲು ನಾನು ಸಿದ್ಧವಾಗಿದ್ದೇನೆ

ಆಸ್ಟ್ರೇಲಿಯಾ ಮತ್ತು ನ್ಯೂಜೀಲೆಂಡ್‌ಗಳಿಗೆ ಹೆಚ್ಚಿನ ಸೇನೆಗಳನ್ನು ಕಳಿಸಲು ಬ್ರಿಟನ್ನೂ ಮತ್ತು ಅಮೆರಿಕವೂ ತಕ್ಕ ಸಿದ್ಧತೆಗಳನ್ನು ಮಾಡುತ್ತಿವೆ ಬ್ರಿಟಿಷ್ ದ್ವೀಪಗಳ ಸಂರಕ್ಷಣಾ ಕಾರ್ಯದಲ್ಲಿ ಅಮೆರಿಕ ಸಂಗ್ರಾಮ ವಿಮಾನಗಳು ಭಾಗವಹಿಸುವುದಲ್ಲದೆ ಜರ್ಮನಿಯ ಮೇಲೆ ಮುತ್ತಿಗೆ ನಡೆಸುವ ಕಾರ್ಯದಲ್ಲಿ ಸಹ ಅವು ಭಾಗವಹಿಸುವವು ಅಮೆರಿಕದಿಂದ ಅಪಾರ ಸೇನೆಗಳು ಬ್ರಿಟಿಷ್ ದ್ವೀಪಗಳಿಗೆ ಬಂದಿಳಿಯಲಿವೆ ಜ॥ ಕ್ಯಾನೆಯವರು ಅಮೆರಿಕ ಸೇನೆಗಳ ದಂಡನಾಯಕರಾಗುವರು

ಬ್ರಿಟಿಷ್ ಸಂಗ್ರಾಮ ಮಂತ್ರಿಮಂಡಲದಲ್ಲಿ ಆಸ್ಟ್ರೇಲಿಯದ ಪ್ರತಿನಿಧಿಗೆ ಸ್ಥಾನವಿರಬೇಕೆಂದು ಆಸ್ಟ್ರೇಲಿಯವು ಕೇಳಿದೆ ಇದೇ ಹಕ್ಕನ್ನು ಆಸ್ಟ್ರೇಲಿಯಾಕ್ಕೆ ಮಾತ್ರವಲ್ಲದೆ ನ್ಯೂಜೀಲೆಂಡ್, ಕೆನಡಾ ಮತ್ತು ದಕ್ಷಿಣ ಆಫ್ರಿಕಾಗಳಿಗೆ ಸಹ ಕೊಡಲಾಗುತ್ತದೆ

ಮಹಾಸಂಗ್ರಾಮವು ಆರಂಭವಾಗಿ ಎರಡು ವರ್ಷಗಳು ಉರುಳಿ ಹೋದವು ಆದರೆ, ಈಗ ನಾವು ಮೆಲ್ಲಗೆ ನಮ್ಮ ವಿಜಯದ ಮಾರ್ಗದಲ್ಲಿ ಅಡಿಯಿಡುತ್ತಿದ್ದೇವೆ ನಾವು ಜಯಪಡೆಯುವೆವೆಂಬುದು ಎಂದಿಗಿಂತ ಇಂದು ಖಚಿತವಾಗಿದೆ ನಾಜಿ ನಾಯಕರಲ್ಲಿ ಒಬ್ಬರಾದ ಹರ್ ಹೆಸ್‌ರವರು ಬ್ರಿಟನ್ನಿಗೆ ಬಂದುದಕ್ಕೆ ಇನ್ನೇನೂ ಅರ್ಥವಿಲ್ಲ ಇಲ್ಲಿನ ಕೆಲವರೊಂದಿಗೆ ಸಂಬಂಧ ಬೆಳಸಿ, ನನ್ನನ್ನು ಮಹಾಪ್ರಧಾನ ಪದವಿಯಿಂದ ಇಳಿಸಿ ಓಡಿಸಬೇಕೆಂಬುದೇ "ಪರ ಉದ್ದಿಶ್ಯವಾಗಿತ್ತು ನಾನು ಮಹಾಪ್ರಧಾನ ಪಟ್ಟದಲ್ಲಿ ಇಲ್ಲವಾದರೆ ಜರ್ಮನಿ ಬ್ರಿಟನ್ನಿಗೆ ಶಾಂತಿಷರತ್ತುಗಳನ್ನು "ಹೇಳಿ ಬರೆಯಿಸಬಹುದೆಂದು ನಾಜಿ ನಾಯಕರು ಭಾವಿಸಿದ್ದರು" ಎಂಬುದಾಗಿ ಹೇಳಿದರು

ದೀರ್ಘಕಾಲದ ಯುದ್ಧವನ್ನು ಜಪಾನು ಎದುರಿಸಬಲ್ಲುದೇ?

ಜಪಾನೇನೋ ಪ್ರಬಲರಾಷ್ಟ್ರ ಸಮರಶಕ್ತವಾಗಿದೆ ಜನರು ಧೈರ್ಯಸ್ಥರು, ಸಾಹಸಿಗಳು ಆದರೆ ಎಷ್ಟು ಕಾಲ ಇದೆಲ್ಲ ಪ್ರಾಬಲ್ಯವೂ ಯಾವ ಆಧಾರವೂ ಇಲ್ಲದೆ ನಿಂತೀತು? ಆಧುನಿಕ ಯುದ್ಧವು ಕೇವಲ ದೌರ್ಜನ್ಯದ ಮೇಲೆ ನಿಂತಿಲ್ಲ ಆಯಾ ರಾಷ್ಟ್ರಗಳ ಸಹನ ಶಕ್ತಿ ಮತ್ತು ವಸ್ತುಸಂಪತ್ತಿನ ಮೇಲೆ ನಿಂತಿದೆ ಜಪಾನಿಗೆ ಈ ಸಹನಶಕ್ತಿ ಮತ್ತು ವಸ್ತುಸಂಪತ್ತಿನ ಶಕ್ತಿ ಇದೆಯೆ?

ಡೇವಿಡ್ ಜಿ ಜಿ ಸ್ಟರ್‌ರವರ ಜಪಾನಿನ ಈ ಸಮಸ್ಯೆಯನ್ನು ವಿಮರ್ಶಿಸಿರುತ್ತಾರೆ ಜಪಾನು ವರ್ಷಂಪ್ರತಿ ಶೇಕಡ 34ರಷ್ಟು ಅಮೆರಿಕ ಸಂಯುಕ್ತಸಂಸ್ಥಾನಗಳಿಂದಲೂ ಶೇಕಡ 20ರಷ್ಟು ಬ್ರಿಟಿಷ್ ಸಾಮ್ರಾಜ್ಯದಿಂದ ಮೂಲವಸ್ತುಗಳನ್ನು ಆಮದುಮಾಡಿಕೊಳ್ಳುತ್ತದೆ ಆದರೆ ಅಮೆರಿಕ ಸಂಯುಕ್ತ ಸಂಸ್ಥಾನಗಳು ಜಪಾನಿನಿಂದ ಶೇಕಡ 16ರಷ್ಟು ಬ್ರಿಟಿಷ್ ಸಾಮ್ರಾಜ್ಯದಿಂದ ಶೇಕಡ 20 ರಷ್ಟು ಮಾತ್ರ ಆಮದು ಮಾಡಿಕೊಳ್ಳುತ್ತವೆ ಜಪಾನು ಆಕ್ರಮಿಸಿಕೊಂಡಿರುವ ರಾಷ್ಟ್ರಗಳು ಜಪಾನಿಗೆ ಮೂಲ ವಸ್ತುಗಳನ್ನು ಒದಗಿಸುವುದಕ್ಕಿಂತ ಜಪಾನಿನ ತಯಾರಿಕೆ ವಸ್ತುಗಳನ್ನು ಹೆಚ್ಚಾಗಿ ಆಮದು ಮಾಡಿಕೊಳ್ಳುತ್ತವೆ ಮಂಚೂಕುವೊ, ಕ್ವಾಂಟುಂಗ್ ಮತ್ತು ಚೀಣಗಳು ಜಪಾನಿನ ರಫ್ತುವ್ಯಾಪಾರದಲ್ಲಿ ಶೇಕಡ 43ರಷ್ಟು ಕೊಂಡು ಕೇವಲ ಶೇಕಡ 21ರಷ್ಟು ಮಾತ್ರ ರಫ್ತುಮಾಡುತ್ತವೆ ಜಪಾನಿನ ಆಮದು ವ್ಯಾಪಾರವನ್ನಾದರೂ ನೋಡಿ 1937ರಲ್ಲಿ ಅದು ಪ್ರಕಟಿಸಿದ ಅಂಕಿ ಅಂಶಗಳ ಪ್ರಕಾರ ಜಪಾನು ಆಮದು ಮಾಡಿಕೊಂಡ ವಸ್ತುಗಳಲ್ಲಿ ಶೇಕಡ 25ರಷ್ಟು ಕಬ್ಬಿಣ ಮತ್ತು ಇತರ ಲೋಹಗಳು ಶೇಕಡ 17 ರಷ್ಟು ಹತ್ತಿ, ಶೇಕಡ 12ರಷ್ಟು ಪೆಟ್ರೋಲ್ ಜಪಾನಿನ ಆಮದು ವ್ಯಾಪಾರದಲ್ಲಿ ಒಟ್ಟು ಶೇಕಡ 70ರಷ್ಟು ಈ ರೀತಿಯಲ್ಲಿ ಮೂಲ ವಸ್ತುಗಳೇ ಆಗಿವೆ ಆದ್ದರಿಂದ ಹೊರರಾಷ್ಟ್ರಗಳಿಂದ ಜಪಾನ ಮೂಲವಸ್ತುಗಳನ್ನು ಆಮದು ಮಾಡಿಕೊಳ್ಳಲಾರದೆ ಹೋದರೆ ಅದರ ಕೈಗಾರಿಕೆ ಸಫಲವು ಜರುಗುವಂತಿಲ್ಲ

ಕಬ್ಬಿಣವೇ ಜಪಾನಿನ ಮುಖ್ಯ ದೌರ್ಬಲ್ಯ ವರ್ಷ ವರ್ಷ ಕೇವಲ ಎರಡೂವರೆ ಲಕ್ಷ ಟನ್‌ಗಳಷ್ಟು ಕಬ್ಬಿಣವು ಮಾತ್ರ ಸಿದ್ಧಗೊಳ್ಳುತ್ತಿದೆ ಕೆಲವರ ಲೆಕ್ಕಾಚಾರದ ಪ್ರಕಾರ ಜಪಾನಿನಲ್ಲಿರುವ ಎಲ್ಲ ಕಬ್ಬಿಣವನ್ನು ತೆಗೆದರೂ ಅಮೆರಿಕದಲ್ಲಿ ತಯಾರಾಗುವ ಒಂದುವರ್ಷದ ಉತ್ಪತ್ತಿಯಷ್ಟು ಕಬ್ಬಿಣವು ಗಿಟ್ಟುವುದಿಲ್ಲವೆಂದು ತೋರುತ್ತದೆ. 1939ನೆಯ ವರ್ಷವೊಂದರಲ್ಲೇ 3,03,700 ಟನ್‌ಗಳಷ್ಟು ಕಬ್ಬಿಣವನ್ನು ಜಪಾನು ಆಮದುಮಾಡಿಕೊಂಡಿತು ಜಪಾನು ಮುಖ್ಯವಾಗಿ ಭಾರತದಿಂದಲೂ ಅಮೆರಿಕ ಸಂಯುಕ್ತಸಂಸ್ಥಾನಗಳಿಂದಲೂ ಕಬ್ಬಿಣವನ್ನು ಕೊಳ್ಳುತ್ತಿದೆ ಸಿದ್ಧಗೊಳಿಸಿದ ಕಬ್ಬಿಣವನ್ನು ಕೊಂಡಿರುವುದಲ್ಲದೆ, 1939ರಲ್ಲಿ 22,50,000 ಟನ್‌ಗಳಷ್ಟು ಮುರಿದ ಕಬ್ಬಿಣದ ಮುಟ್ಟುಗಳನ್ನು ಕೊಂಡಿತು ಅದೇ ವರ್ಷ ಫಿಲಿಪ್ಪೈನ್ ಮತ್ತು ಮಲಯಗಳಿಂದ ಸುಮಾರು 32,00,000 ಟನ್‌ಗಳಷ್ಟು ಕಬ್ಬಿಣದ ಅದಿರನ್ನು ಆಮದು ಮಾಡಿಕೊಂಡಿತು ಮುಂದಿನ ವರ್ಷದಿಂದ ಅಮೆರಿಕವು ಈ ವ್ಯಾಪಾರವನ್ನು ನಿಲ್ಲಿಸಿಬಿಟ್ಟಿತು! ಹತ್ತಿಯೂ ಅಷ್ಟೆ, ಅಮೆರಿಕ ಭಾರತಗಳಿಂದ ಜಪಾನಿಗೆ ರಫ್ತಾಗಬೇಕು 1939ರಲ್ಲಿ 6,00,600 ಟನ್‌ಗಳನ್ನು ಜಪಾನು ಆಮದು ಮಾಡಿಕೊಂಡಿತು. 1937 39ನೆಯ ಮೂರು ವರ್ಷಗಳ ಅವಧಿಯಲ್ಲಿ 2 ಲಕ್ಷ ಟನ್‌ಗಳಷ್ಟು ಉಣ್ಣೆಯನ್ನು ಜಪಾನು ಕೊಂಡಿತು

ಎಣ್ಣೆ ತಾಪತ್ರಯ

ಎಣ್ಣೆಯು ಜರ್ಮನಿಗಿರುವಂತೆ ಜಪಾನಿಗೂ ದೊಡ್ಡ ತಾಪತ್ರಯ 1939ರಲ್ಲಿ ಜಪಾನೂ ಫಾರ್ಮೋಸವೂ 3,80,000 ಟನ್‌ಗಳಷ್ಟು ಎಣ್ಣೆಯನ್ನು ತೆಗೆದರೆ, ಅದರ 10ರಷ್ಟು ಎಣ್ಣೆಯನ್ನು ಅಮೆರಿಕದಿಂದ ಆಮದುಮಾಡಿಕೊಂಡಿತು ಬಹುಶಃ ಜಪಾನು ಈ ರೀತಿ ಎಣ್ಣೆಯನ್ನು ಅಗಾಧವಾಗಿ ಬಚ್ಚಿಟ್ಟಿರಬಹುದು ಆದರೆ ಲಂಬಿತ ಯುದ್ಧಕ್ಕೆ ಅದು ಹೇಗೆ ಸಾಕಾದೀತು? ಇಷ್ಟಲ್ಲದೆ ಜಪಾನು ತನಗೆ ಬೇಕಾದ ಮ್ಯಾಂಗನೀಸ್ ಪೈಕಿ ಶೇಕಡ 75 ರಷ್ಟನ್ನು ಇಂಡಿಯಾ, ಮಲಯ, ಫಿಲಿಪ್ಪೈನ್‌ಗಳಿಂದಲೂ ಮಿಕ್ಕವನ್ನೆಲ್ಲ ಕೆನಡದಿಂದಲೂ ತಾಮ್ರವನ್ನು ಕಾಲುಭಾಗ ಅಮೆರಿಕ ಫಿಲಿಪ್ಪೈನ್‌ಗಳಿಂದಲೂ ಸತುವಿನಲ್ಲಿ ಶೇಕಡ 60 ರಷ್ಟನ್ನು ಆಸ್ಟ್ರೇಲಿಯ, ಕೆನಡ, ಮೆಕ್ಸಿಕೋಗಳಿಂದಲೂ, ಶೇಕಡ 80 ರಷ್ಟು ಟಿನ್ನನ್ನು ಮಲಯ ಡಚ್‌ಈಸ್ಟ್‌ಇಂಡೀಸ್‌ಗಳಿಂದಲೂ, ಮುಕ್ಕಾಲುಪಾಲು ಸೀಸವನ್ನು ಅಮೆರಿಕ ಬರ್ಮಗಳಿಂದಲೂ, ಕಲ್ನಾರು ಪಾದರಸಗಳನ್ನು ಶೇಕಡ 90 ರಷ್ಟು ಅಮೆರಿಕಗಳಿಂದಲೂ ರಬ್ಬರನ್ನು ಥೈಲೆಂಡ್ ಇಂಡೋಚೀಣಗಳಿಂದಲೂ ಪಡೆಯುತ್ತಿದೆ

ಆಹಾರಕ್ಕೂ ತೊಂದರೆ

ಆಹಾರಕ್ಕೆ ಜಪಾನು ತಾಪತ್ರಯಪಡಬೇಕಾಗಿಲ್ಲ ಅಷ್ಟೊಂದು ಪ್ರಬಲ ಕೈಗಾರಿಕೆ ರಾಷ್ಟ್ರವಾಗಿದ್ದರೂ ಜಪಾನಿನ ಪ್ರಜಾಸಂಖ್ಯೆಯಲ್ಲಿ ಶೇಕಡ 45 ರಷ್ಟುಮಂದಿ ವ್ಯವಸಾಯವನ್ನು ಆರಂಭಿಸಿದ್ದಾರೆ ಆದರೆ ಜಪಾನಿನಲ್ಲಿ ಜನಸಂಖ್ಯೆ ಬಹಳ ಹೆಚ್ಚು ಬೇಸಾಯಕ್ಕೆ ಅನುಗುಣವಾದ ಭೂಮಿಯ ಪ್ರಮಾಣ ಬಹಳ ಕಡಿಮೆ ಆದ್ದರಿಂದ ರಸಾಯನಿಕ ಗೊಬ್ಬರಗೋಡುಗಳಿಂದ ಜಪಾನರು ತಮ್ಮ ವ್ಯವಸಾಯವನ್ನು ನಿರ್ವಹಿಸುತ್ತಿದ್ದಾರೆ ಈ ರಸಾಯನಿಕ ವಸ್ತುಗಳು ಅತ್ಯಧಿಕಭಾಗ ಅಮೆರಿಕ ಜರ್ಮನಿಗಳಿಂದ ಬರುತ್ತವೆ ಜಪಾನು ಜರ್ಮನಿಯಂತೆ ಕುಶಲಿಗಳ ರಾಷ್ಟ್ರ ಈ ಕುಶಲಿಗಳು ಕೃತಕವಸ್ತುಗಳಿಂದ ಬೇಕಾದ್ದನ್ನು ತಯಾರಿಸುತ್ತಿದ್ದಾರೆ ಆದರೂ ಇವೆಲ್ಲ ಕೆಲವು ಕಾಲದಮಾತು ದೀರ್ಘಕ್ಕೆ ಇಟ್ಟುಕೊಳ್ಳುವ ಯುದ್ಧಪರಿಸ್ಥಿತಿಗಳಲ್ಲಿ ಬಹುಮಟ್ಟಿಗೆ ಇದು ನೆರವಾಗುವುದಿಲ್ಲ

ಗುರುತತ್ವ ಪ್ರಭಾಕರ

ಲೇ—ಸೌ॥ ಭಾಗೀರಥೀಬಾಯಿ ಕಟಾಪ, ಕೊಲ್ಹಾಪುರ

(ಹಿಂದಿನಿಂದ ಮುಂದುವರೆದುದು)

ಆದರೂ 'ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ" ಎಂಬ ವಾಕ್ಯದಿಂದ ಅವರೆಲ್ಲರಲ್ಲಿ ನಿತ್ಯಯುಕ್ತನಾದ ಜ್ಞಾನಿಯೇ ಹೆಚ್ಚಿನವನೆಂದು ದೇವರು ಸ್ಪಷ್ಟವಾಗಿ ಹೇಳಿದ್ದಾನೆ ಏಕೆಂದರೆ ಆರ್ತ ಮೊದಲಾದವರಿಗೆ ಯಾವದಾದರೊಂದು ಬಗೆಯ ಪ್ರತಿಫಲದ ನಿರೀಕ್ಷಣೆ ಇರುತ್ತದೆ ಆದ್ದರಿಂದ ಅದು ವ್ಯಾಪಾರದ ಭಕ್ತಿ ಜ್ಞಾನಿಯದು ಹಾಗಲ್ಲ ಅವನು ಪರಮಾತ್ಮನ ಸ್ವರೂಪ ತಿಳಿದು ಅದಕ್ಕೆ ಕೇವಲ ಗುಣಲುಬ್ಧನಾಗಿ ಶರಣುಹೋಗುತ್ತಾನೆ ಪರಮಾತ್ಮನು ಎಂಥ ಅಪರಾಧಿಯನ್ನೂ ಕೂಡ ಉದ್ಧರಿಸುತ್ತಾನೆ ವಿಭೀಷಣನು ಶ್ರೀರಾಮನ ಪ್ರತಿಪಕ್ಷಿಯಾದ ರಾವಣನ ತಮ್ಮನಾಗಿದ್ದರೂ ಒಮ್ಮೆ ಅವನು ತನ್ನ ಪ್ರೇಮಪ್ರವಾಹವನ್ನು ಶ್ರೀರಾಮನ ಮೇಲೆ ಹರಿಸುತ್ತಲೇ ಅವನಿಗೆ ಆ ಅವತಾರಮೂರ್ತಿಯ ಸಾನ್ನಿಧ್ಯವು ದೊರೆತೇ ದೊರೆಯಿತು ವಿಭೀಷಣನು ಆಕಾಶಮಾರ್ಗದಲ್ಲಿ ನಿಂತು ತಾನು ಶ್ರೀರಾಮನಿಗೆ ಶರಣ ಬಂದಿದ್ದೇನೆಂದು ಹೇಳಿ ಪ್ರವೇಶಕ್ಕೆ ದಾರಿಯನ್ನು ಬೇಡಿದನು. ಶತ್ರುಪಕ್ಷದವನಾದ ವಿಭೀಷಣನನ್ನು ಒಳಗೆ ಬರಗೊಡಬಾರದೆಂದು ಎಲ್ಲರೂ ಅಭಿಪ್ರಾಯಪಟ್ಟರು ಆಗ ಶ್ರೀರಾಮನು—

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥

ಎಂದು ಹೇಳಿದ್ದಾನೆ ಒಮ್ಮೆ ಒಂದು ಶರಣೆಂದರೆ ಸಾಕು, ಅಂಥ ಸಮಸ್ತರಿಗೂ ಅಭಯವನ್ನು ಕೊಡುವುದೇ ನನ್ನ ವ್ರತವೆಂದು. ಇದರ ಅಭಿಪ್ರಾಯ ಇಷ್ಟೇ ಅಲ್ಲ ಪ್ರತ್ಯಕ್ಷವಾಗಿ ಅಪರಾಧವನ್ನು ಮಾಡಿರುವ ರಾವಣನೇ ಶರಣು ಬಂದರೂ ಕೂಡ ಒಡನೆ ಅವನಿಗೆ ಆಶ್ರಯವನ್ನು ಕೊಟ್ಟು ತನ್ನ ಅಯೋಧ್ಯೆಯ ಪಟ್ಟವನ್ನೂ ಅವನಿಗೇ ಕಟ್ಟುವೆನೆಂದು ಶ್ರೀರಾಮನ ಬಾಯಿಂದ ಹೊರಟಿರುತ್ತದೆ ಶರಣೆಂಬ ಮಾತಿನಲ್ಲಿರುವ ಪ್ರೇಮದ ಸೆಳೆತವು ಅಷ್ಟು ವೇಗವಾಗಿರುವುದು ಶರಣೆಂಬ ಮಾತಿನ ಸ್ವರವೇ ಅಷ್ಟು ಮನೋಹರವಾಗಿರುತ್ತದೆ ಈ ಶರಣೆಂಬ ಮಾತು ಮನುಷ್ಯನ ಹೃದಯದಿಂದ ಹೊರಡಬೇಕಾದರೆ ಆ ಹೃದಯದ ಮೇಲೆ ಎಷ್ಟು ಉತ್ತಮ ಸಂಸ್ಕಾರಗಳಾಗಿರಬೇಕಾಗುತ್ತದೆ. ಈ ವಿಷಯಕ್ಕೆ ಶ್ರೀ ರಾಮಕೃಷ್ಣ ಪರಮಹಂಸರು ಒಂದು ಉದಾಹರಣೆಯನ್ನು ಕೊಟ್ಟಿರುತ್ತಾರೆ ಹೆಚ್ಚಿನ ಸಂಸ್ಕಾರವನ್ನು ಪಡೆಯದೆ ಇರುವ ಒಂದು ಚರ್ಮವನ್ನು ನಗಾರಿಯಮೇಲೆ ಹಾಕಿ ಹೊಲಿದಿರುತ್ತಾರೆ ಅದರಮೇಲೆ ಕೋಲಿನಿಂದ ಹೊಡೆಯುತ್ತಲೇ "ಹಮ್, ಹಮ್, ಹಮ್" ಎಂದು ಸದ್ದಾಗುತ್ತದೆ ಹೀಗೆ ಯಾರ ಮನಸ್ಸಿನಲ್ಲಿ ಹೆಚ್ಚು ಸಂಸ್ಕಾರಗಳು ನಡೆದಿಲ್ಲವೋ ಅವರ ಹೃದಯದಲ್ಲಿ "ನಾನು, ನಾನು, ನಾನು" ಎಂಬ ಅಹಂಕಾರದ ಅಲೆಗಳೇ ಏಳುತ್ತಿರುತ್ತವೆ ನಗಾರಿಯ ಸದ್ದು ಗಾನಲೋಲನನ್ನು ಹೇಗೆ ಆಕರ್ಷಣಮಾಡಲಾರದೋ ಹಾಗೆ ಅಹಂಕಾರದ ಅಲೆಗಳುಳ್ಳವರ ಸ್ವರವು ದೇವರನ್ನು ಆಕರ್ಷಿಸಲಾರದು ದೇವರು ಗಾನಲೋಲನು ಆ ನಗಾರಿಯ ಚರ್ಮಕ್ಕೇ ಹೆಚ್ಚಿನ ಹದವನ್ನು ಕೊಟ್ಟು ಸಣ್ಣ ಎಳೆಗಳಾಗಿಮಾಡಿ ತಂಬೂರಿಗೆ ಕಟ್ಟಿ ಒಮ್ಮೆ ಮಿಡಿಯುತ್ತಲೇ "ತುಮ್, ತುಮ್, ತುಮ್" ಎಂದು ಅದು ಮೃದು ಸ್ವರವನ್ನುಚ್ಚರಿಸುವುದು. ಹಾಗೆಯೇ ಮನುಷ್ಯನು ತನ್ನ ಮನಸ್ಸಿನಲ್ಲಿರುವ ಅಹಂಕಾರದ ಸೊಕ್ಕನ್ನೆಲ್ಲಾ ತಿಕ್ಕಿ ಕಳೆದು ಹೆಚ್ಚಿನ ಹದವನ್ನು ಕೊಟ್ಟು ನುಡಿಸಿದರೆ ಅದು "ನೀನು, ನೀನು, ನೀನು" ಎಂದು ಪರಮಾತ್ಮನಿಗೆ ಶರಣುಬರುವ ಮಾತನ್ನೆತ್ತುವುದು. ನಾನು ನಾನೆಂಬುವರನ್ನು ರಕ್ಷಿಸಬೇಕೆಂದು ಯಾರಿಗೂ ಮನಸ್ಸಾಗುವುದಿಲ್ಲ; ಅಷ್ಟೇ ಅಲ್ಲ; ಅದು ತನ್ನ ಸಹಾಯಕ್ಕೆ ಬರುತ್ತಿದ್ದ ಇತರರನ್ನೂ ಕೂಡ ಹಿಮ್ಮೆಟ್ಟಿಸುವುದು. ಅಹಂಕಾರವಿಲ್ಲದ ನಿಜವಾದ ಭಕ್ತಿಯನ್ನು ಮಾಡುವುದೇ ಸದ್ಭಕ್ತನ ಲಕ್ಷಣವು. ತೋರಿಕೆಗಾಗಿ ಮಾಡುವ ಭಕ್ತಿಯು ಭಕ್ತಿಯಲ್ಲ. ಭಕ್ತಿಯೆಂದರೆ ಮುಂದೆ ಹೇಳಹೋಗುವಂತೆ ಕೀರ್ತನ ಸ್ಮರಣೆ ಮೊದಲಾದವುಗಳಾದರೂ ಅವು ಸಾಮಾನ್ಯವಾಗಿ ಎಲ್ಲರಲ್ಲಿಯೂ ಶುದ್ಧಸ್ವರೂಪದಲ್ಲಿರುವುದಿಲ್ಲ. ಪ್ರಪಂಚದಲ್ಲಿ ಆಸಕ್ತರಾದ ಅನೇಕರಲ್ಲಿ ಅದು ಬರೀ ತೋರಿಸಿಕೊಳ್ಳುವುದರಲ್ಲಿಯೂ ಒಂದು ಗುಣವಿದೆ. ಒಳ್ಳೆಯವನ್ನು ಅನುಕರಣ ಮಾಡುವದು ಎಂದಿಗೂ ಕೆಡುಕಲ್ಲ ಒಂದೂರಿನ ಒಬ್ಬ ರಾಜನು ಸನ್ಯಾಸಿಯನ್ನಾದರೆ ಮದುವೆಯಾಗುವೆನೆಂಬ ತನ್ನ ಮಗಳನ್ನು ವರಿಸುವ ಸನ್ಯಾಸಿಗೆ ಅರ್ಧರಾಜ್ಯವನ್ನು ಕೊಡುವೆನೆಂದು ಡಂಗುರವನ್ನು ಹೊಡೆಸಿದನು ಅದನ್ನು ಕೇಳಿದವರಲ್ಲಿ ಒಬ್ಬ ಕ್ಷುದ್ರಮನುಷ್ಯನು ಗಾಳಿಬಂದಾಗಲೇ ತೂರಿಕೊಳ್ಳಬೇಕೆಂದು ಕಾವಿಯನ್ನು ಧರಿಸಿ ಊರಹೊರಕ್ಕೆ ಹೋಗಿ ತಪಸ್ವಿಯಂತೆ ಕುಳಿತು ನಟನೆಮಾಡುವುದಕ್ಕಾರಂಭಿಸಿದನು. ನಮ್ಮ ದೇಶದ ಧರ್ಮಶ್ರದ್ಧೆಯ ಜನರಾಗಲೇ ಅವನ ಬಗ್ಗೆ ಭಕ್ತಿಯಿಂದ ನಡೆದುಕೊಳ್ಳುವುದಕ್ಕಾರಂಭಿಸಿದರು ನಮ್ಮವರಲ್ಲಿ ಒಳಗಣ ತಿರುಳನ್ನು ನೋಡುವಷ್ಟು ಅವಕಾಶವಿಲ್ಲ "ಕಾಷಾಯದಂಡಮಾತ್ರೇಣ ಯತಿಃಪೂಜ್ಯೋ ನ ಸಂಶಯಃ" ಎಂಬವಾಕ್ಯವು ಮುಂದೆ ಬಂದು ನಿಲ್ಲುವುದು. ಕಾಷಾಯದಂಡಗಳಿದ್ದರಾಯಿತು, ಇಷ್ಟರಿಂದಲೇ ಅವನಿಗೆ ಅಡ್ಡಬೀಳಲೇಬೇಕೆಂದು ಜನರರ್ಥ ಊರಹೊರಗೆ ಮಹಾಮಹಿಮನಾದ ಸನ್ಯಾಸಿ ಬಂದಿರುವನೆಂದು ಊರಲ್ಲೆಲ್ಲಾ ಸುದ್ದಿ ಹರಡಿತು ಈ ವರ್ತಮಾನವನ್ನು ಕೇಳಿ ರಾಜನು ತನ್ನ ಮಗಳಿಗಾಗಿ ಆ ಸನ್ಯಾಸಿಯನ್ನು ಒಲಿಸಿಕೊಳ್ಳಬೇಕೆಂದು ಪರಿವಾರದೊಡನೆ ಊರ ಮುಂದಕ್ಕೆ ಬಂದು ಶ್ರದ್ಧಾಭಕ್ತಿಯುಕ್ತನಾಗಿ ವಿನಯದಿಂದ ಆ ಸನ್ಯಾಸಿಗೆ ವಂದನೆಯನ್ನು ಮಾಡಿದನು ಯಾವ ರಾಜನ ದರ್ಶನವು ತನಗೆ ಸ್ವಪ್ನದಲ್ಲಿಯೂ ಅಶಕ್ಯವಾಗಿತ್ತೋ ಆ ರಾಜನು ತನ್ನ ಕಡೆಗೆ ಪಾದಚಾರಿಯಾಗಿ ಬಂದು ಅತಿವಿನಯವನ್ನು ತೋರಿಸುವದನ್ನು ನೋಡಿ ಆ ಸನ್ಯಾಸಿಯ ಮನಸ್ಸೇ ಬದಲಾಗಿ ಹೋಯಿತು ಬರೀ ವೇಷಕ್ಕೇ ಇಷ್ಟು ಗೌರವ ದೊರತ ಮೇಲೆ ನಿಜವಾಗಿ ವಿರಕ್ತನಾದರೆ ಇನ್ನೆಷ್ಟು ಗೌರವವಿರಬಹುದೆಂದು ಲೆಕ್ಕಹಾಕಿ ನೋಡಿ. ಆ ಕ್ಷುದ್ರ ಮನುಷ್ಯನು ಅಂದಿನಿಂದ ನಿಜವಾದ ಸನ್ಯಾಸಿಯೇ ಆಗಿಬಿಟ್ಟನು ತೋರಿಕೆಯ ರೂಪದ ವಿಚಾರವೂ ಕೂಡ ಈ ಬಗೆಯ ಪರಿಣಾಮವನ್ನುಂಟುಮಾಡುತ್ತೆಂದಮೇಲೆ ಒಳ್ಳೆಯದನ್ನು ಅನುಕರಣ ಮಾಡುವದರಲ್ಲಿ ಒಂದು ಗುಣವೂ ಉಂಟೆಂದಾಯಿತು ಆದರೆ ತೋರಿಕೆಗಾಗಿ ಮಾತ್ರ ಅದನ್ನು ಮಾಡಬೇಕೆಂಬ ಉದ್ದೇಶವು ಕೆಟ್ಟದು ಮೊದಮೊದಲು ಒಂದು ಯೋಗ್ಯತೆಯನ್ನು ಮೈಯಲ್ಲಿ ಅಳವಡಿಸಿಕೊಳ್ಳುವದಕ್ಕೆ ಎಡಬಿಡದೆ ಪ್ರಯತ್ನವನ್ನು ಮಾಡುತ್ತಿರಬೇಕು ತೋರಿಕೆಯು ನಮ್ಮ ಧ್ಯೇಯವಲ್ಲ. ತೋರಿಕೆಯೇ ಮುಂದೆ ಅದನ್ನು ನಮ್ಮ ಸ್ವಭಾವವಾಗಿ ಮಾಡಲೆಂದು ಸುಮ್ಮನಿರುವದು ವಿವೇಕವಲ್ಲ. ಅದು ಎಂದಿಗೆ ಸಾಧ್ಯವೋ? ಹೇಳುವದಕ್ಕೆ ಬರುವದಿಲ್ಲ ನಮ್ಮ ತೋರಿಕೆಯಿಂದ ಜನರನ್ನು ಮೋಸಗೊಳಿಸಿದಂತೆ ಮಾತ್ರ ಆಗಿಯೇ ಆಗುವದು ಇದು ಆಗಬಾರದು. ಈ ತೋರಿಕೆಯ ಭಕ್ತಿಯ ವಿಷಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ಹೇಳಿರುವದೇನೆಂದರೆ—

೧. ಪ್ರಾಪಂಚಿಕರು "ಹರ, ಹರ" ಎಂದು ನಾಮಸ್ಮರಣೆಯನ್ನು ಮಾಡುತ್ತ ಪ್ರಾಪಂಚಿಕ ಫಲಾಭಿಲಾಷೆಯಿಂದ ಬಗೆಬಗೆಯ ಧರ್ಮಕಾರ್ಯಗಳನ್ನು ಮಾಡುವರು. ಆದರೆ ಅವರಿಗೆ ಏನಾದರೊಂದು ಅಪಾಯವಾಗಲಿ, ದುಃಖವಾಗಲಿ, ಬಡತನವಾಗಲಿ, ಮರಣವಾಗಲಿ ಒದಗಿದರೆ ಅವರು ದೇವರನ್ನು ಮರೆತುಬಿಡುವರು. ಅವರು ಗಿಣಿಗಳ ಹಾಗೆ; ಹೇಗೆಂದರೆ ಗಿಳಿಗಳು ಯಾವಾಗಲೂ "ರಾಧಾಕೃಷ್ಣ, ರಾಧಾಕೃಷ್ಣ" ಎಂದು ಪರಮಾತ್ಮನ ನಾಮಗಳನ್ನು ಕೂಗುತ್ತಿರುತ್ತವೆ ಆದರೆ ಬೆಕ್ಕು ಹಿಡಿಯುವುದಕ್ಕೆ ಬಂದಾಗ ನಾಮಸ್ಮರಣೆಯನ್ನು ಮರೆತು ಅಕ್ಕಾ ! ಕ್ಕಾ !! ಕ್ಕಾ !!! ಎಂದು ಚೀರುತ್ತವೆ.

೨ ಒಂದು ಬಗೆಯ ಹಾಸಿಗೆ (Spring cushion) ಇರುತ್ತದೆ. ಅದನ್ನು ಕೂಗುವ ಹಾಸಿಗೆ ಎನ್ನಬಹುದು ಅದರ ಮೇಲೆ ಯಾರಾದರೂ ಕುಳಿತುಕೊಂಡರೆ ಅದು ಆ ಭಾರದ ದೆಸೆಯಿಂದ ಕುಸಿಯುತ್ತದೆ ಅವರು ಎದ್ದಕೂಡಲೇ ಅದು ಮೊದಲಿನಂತೆ ಆಗುತ್ತದೆ. ಪ್ರಾಪಂಚಿಕರ ಸ್ಥಿತಿಯೂ ಹಾಗೆಯೇ, ಅವರಿಗೆ ಧಾರ್ಮಿಕ ವಿಚಾರಗಳು ಕಿವಿಗೆ ಬೀಳುತ್ತಿರುವವರೆಗೂ ಅವರಲ್ಲಿ ಭಕ್ತಿಭಾವವೂ ಧರ್ಮಶ್ರದ್ಧೆಯೂ ತುಂಬಿರುವವು. ಆದರೆ ಅವರು ಪ್ರಪಂಚವ್ಯವಹಾರದ ದಿನಚರ್ಯೆಯನ್ನು ಕೈಕೊಳ್ಳುತ್ತಲೇ ಆ ಪೂಜ್ಯತಮವಾದ ವಿಚಾರಗಳನ್ನೆಲ್ಲಾ ಮರೆತು

೩. ಕಬ್ಬಿಣದ ಕಂಬಿಯು ಕುಲುಮೆಯಲ್ಲಿರುವವರೆಗೂ ಕೆಂಪಗೆ ಕೆಂಡವಾಗಿರುತ್ತದೆ. ಆದರೆ ಹೊರಕ್ಕೆ ತೆಗೆಯುತ್ತಲೇ ಅದು ಕಪ್ಪಾಗುತ್ತದೆ. ಪ್ರಾಪಂಚಿಕರು ಹಾಗೆಯೇ ಅವರಿಗೆ ದೇವರ ಸಾನ್ನಿಧ್ಯದಲ್ಲಿ ಸತ್ಪುರುಷರ ಸಹವಾಸದಲ್ಲಿ ಇದ್ದಾಗ ಮಾತ್ರ ಧಾರ್ಮಿಕ ಭಾವನೆ ಇರುತ್ತದೆ. ಆ ಸ್ಥಳಗಳನ್ನು ಬಿಟ್ಟುಬರುತ್ತಲೇ ಅವರು ಅವುಗಳನ್ನೆಲ್ಲಾ ಕಳೆದುಕೊಳ್ಳುತ್ತಾರೆ ತೋರಿಕೆಯ ಭಕ್ತಿಯನ್ನು ನಿಂದಿಸಿದಮೇಲೆ ನಿಜವಾದ ಭಕ್ತಿಸ್ವರೂಪವನ್ನು ವಿಚಾರ ಮಾಡಬೇಕಾಗುವದು. ಇನ್ನು ಅದರ ಸರಿಯಾದ ಸಾಧನವನ್ನಾರಂಭಿಸುವದಕ್ಕೆ ಮೊದಲು ಅದರ ವಿರುದ್ಧ ಪರಿಸ್ಥಿತಿಯನ್ನು ಕಳೆದುಕೊಳ್ಳುವದು ಅಗತ್ಯವಾಗಿದೆ. ಅದು ಯಾವದೆಂದರೆ ದುಸ್ಸಂಗ. ಇದರ ವಿಷಯದಲ್ಲಿ ನಾರದರು ತಮ್ಮ ಸೂತ್ರಗಳಲ್ಲಿ ಎಚ್ಚರಿಕೆಯನ್ನು ಕೊಟ್ಟಿರುವದೇನೆಂದರೆ—

"ದುಸ್ಸಂಗಃ ಸರ್ವಥೈವ ತ್ಯಾಜ್ಯಃ । ಕಾಮ ಕ್ರೋಧ ಮೋಹ ಸ್ಮೃತಿಭ್ರಂಶಬುದ್ಧಿನಾಶಸರ್ವನಾಶಕಾರಣತ್ವಾತ್ ॥" ಎಂದರೆ ಕೆಟ್ಟ ಸಹವಾಸವನ್ನು ಎಲ್ಲಾ ಬಗೆಯಿಂದಲೂ ಬಿಡಬೇಕು; ಏಕೆಂದರೆ ಕೆಟ್ಟ ಸಂಗವು ಆಸೆ, ಸಿಟ್ಟು ಭ್ರಾಂತಿ ಮರವೆ ಬುದ್ಧಿಯನ್ನು ಕಳೆದುಕೊಳ್ಳುವುದು. ಕೊನೆಗೆ ಎಲ್ಲವನ್ನೂ ಕಳೆದುಕೊಳ್ಳುವುದು ಇಷ್ಟಕ್ಕೆ ಕಾರಣವಾಗುವುದು. ಇದರ ವಿಷಯದಲ್ಲಿಯೂ ಉದಾಹರಣೆಗಳುಂಟು.

೧. ಹುಲಿಯಲ್ಲಿಯೂ ಪರಮಾತ್ಮನಿರುವನೆಂಬುದು ನಿಶ್ಚಯ. ಆದರೆ ನಾವು ಅದಕ್ಕೆ ಎದುರುಬಿದ್ದು ಸಿಕ್ಕುಕೊಳ್ಳಬಾರದು ಹಾಗೆಯೇ ದುರ್ಜನರ ಹೃದಯದಲ್ಲಿಯೂ ಪರಮಾತ್ಮನಿರುವನು. ಆದರೆ ನಾವು ಅವರೊಡನೆ ಸೇರುವುದು ಯೋಗ್ಯವಲ್ಲ.

೨. ಅದ್ಭುತ ವ್ಯಾಪಾರವನ್ನು ತೋರಿಸುವವರ ಬಳಿಗೆ ಹೋಗಬಾರದು ಅವರು ಸತ್ಯದ ದಾರಿಯನ್ನು ತಪ್ಪಿಸಿ ಅಡ್ಡದಾರಿಯನ್ನು ಹಿಡಿಸುವರು.

(ಸಶೇಷ)

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ॥

ಸಂಪತ್ತಿನ ವಿನಿಯೋಗ

ಲೇಖಕರು—ಶ್ರೀ ಪಟ್ಟದಸ್ವಾಮಿಗಳು, ಹಿರೇಮಠ, ಕೊಣ್ಣೂರು.

ಪ್ರಪಂಚದಲ್ಲಿ ಅನರ್ಘ್ಯಗಳಾದ ಮುತ್ತು-ಮಾಣಿಕ್ಯ ಪಚ್ಚೆ-ವಜ್ರ ವೈಢೂರ್ಯ ಮುಂತಾದ ಐಶ್ವರ್ಯಗಳು ವಿಶೇಷವಾಗಿದ್ದರೂ, ಸದುಪಯೋಗವಿಲ್ಲದಿದ್ದರೆ ಅವುಗಳೆಲ್ಲವೂ ದುಃಖದ ಭವನಗಳಾಗಿಯೇ ಪರಿಣಮಿಸುವುವಲ್ಲದೆ ಆತ್ಮೋದ್ಧಾರಸಾಧಕಗಳಾಗಿ ಪರಿಣಮಿಸಲಾರವು. ವಿವೇಕವಿಲ್ಲದೆ ಭೋಗ್ಯಪದಾರ್ಥಗಳನ್ನು ಎಷ್ಟೆಷ್ಟು ಅಪೇಕ್ಷಿಸುತ್ತ ಹೋಗುತ್ತೇವೆಯೋ ಅಷ್ಟಷ್ಟು ಆಶಾಪಾಶವು ಗಟ್ಟಿಯಾಗುತ್ತ ಹೋಗುತ್ತದೆ ಬೇಕಾದಷ್ಟು ದ್ರವ್ಯವು ನಮ್ಮಲ್ಲಿ ಸೇರಿರುವದು ಇನ್ನೇನೂ ಸೇರಬೇಕಾಗಿಲ್ಲವು ಎಂಬ ನಿರಾಶಾಬುದ್ಧಿಯನ್ನು ಮಾತ್ರ ಅವು ಎಂದೂ ಹುಟ್ಟಿಸಲಾರವು. ರೋಗಿಗಳಿಗೆ ರೋಗವು ಹೆಚ್ಚಿದಹಾಗೆಲ್ಲ ದಾಹವು ಹೆಚ್ಚುವಂತೆ ಸಿರಿಯು ಹೆಚ್ಚುತ್ತ ಹೋದಹಾಗೆಲ್ಲ ಆಶೆಯೆಂಬ ದಾಹವು ಎದ್ದು ಉಚ್ಚಸ್ಥಿತಿಯಲ್ಲಿರುವ ಮನುಷ್ಯನನ್ನು ನೀಚಸ್ಥಿತಿಗೆ ಒಯ್ಯುತ್ತದೆ. "ಆಶಾಪರಮಂ ದುಃಖಂ ನಿರಾಶಾಪರಮಂ ಸುಖಂ" ಎಂದು ಜ್ಞಾನಿಗಳು ಹೇಳುವ ಮಾತು ಅಕ್ಷರಶಃ ನಿಜವಿರುತ್ತದೆ. ವಿವೇಕಿಗಳು ಇಂಥ ಐಶ್ವರ್ಯವನ್ನು ಅಸ್ಥಿರವೆಂದು ತಿಳಿದಿದ್ದಾರೆಂದು ಹಿಂದಿನ ಲೇಖದಲ್ಲೊಮ್ಮೆ ಹೇಳಿದ್ದೇನೆ. ಇದೇಮಾತು ಷಡಕ್ಷರಕವಿಗಳು ತಮ್ಮಿಂದ ರಚಿಸಲ್ಪಟ್ಟ ಶಬರಶಂಕರವಿಲಾಸದಲ್ಲಿ—"ಎನ್ನೋಳ್ಮಗಳ್ಪುಟ್ಟಿಪಾರುವಾಯ್ತಾಳ್" ಅಂದರೆ ನನ್ನಲ್ಲಿ ಮಗಳಾದ ಲಕ್ಷ್ಮಿಯು ಹುಟ್ಟಿ ಓಡಿಹೋಗುವ ಸ್ವಭಾವವುಳ್ಳವಳು ಎಂದು ಸಮುದ್ರನೆ ಶೋಕವನ್ನು ಮಾಡುತ್ತಿತ್ತೆಂದು ವರ್ಣಿಸಿದ್ದಾರೆ. ಇದರ ಮೇಲಿಂದ ಲಕ್ಷ್ಮಿಯು ಅಸ್ಥಿರವೆಂದು ಇವರೂ ಕೂಡಾ ಹೇಳಿರುತ್ತಾರೆ ಆದುದರಿಂದ ಇದರ ತಾಪಕ್ಕೆ ಸಿಗದೆ ವಿವೇಕಿಗಳು ಆ ದ್ರವ್ಯವನ್ನು ಗುರು-ದೇವರ ಇಮಾರತಿಗಳನ್ನು ಕಟ್ಟಿಸುವದಕ್ಕೂ, ನಂದಾದೀವಿಗೆಯುರಲಿಕ್ಕೂ, ಧಾರ್ಮಿಕ-ಸಾರ್ವಜನಿಕ ಪಾಠಶಾಲೆಗೂ, ಸಾಧು-ಸತ್ಪು

ನ್ನ.ಕೂಲವಾಗುವಂತೆ ವಾಪೀ-ಕೂಪ-ತಟಾಕಗಳ ರಚನೆಗೂ, ಉಪಯೋಗಿಸುತ್ತ ತಾವು ಗಳಿಸಿದ ಆ ದ್ರವ್ಯದಿಂದ ಸ್ಥಿರವಾದ ಕೀರ್ತಿಯನ್ನು ಪಡೆದಿರುತ್ತಾರಲ್ಲದೆ, ಈಗಿನ ಕೆಲವು ಜನರಂತೆ ವ್ಯಭಿಚಾರ-ಜೂಜಾ ಚುಟ್ಟಾ-ಸೇಂದಿ ಮೊದಲಾದ ದುಷ್ಕಾರ್ಯಗಳಿಗೆ ದುಡ್ಡನ್ನು ಖರ್ಚುಮಾಡಿ ಅಪಕೀರ್ತಿಯನ್ನು ಹೊಂದಿಲ್ಲ. ಇನ್ನು ಕೆಲವರು ಯಾವಾಗಲೂ ಲಕ್ಷ್ಮಿಯು ತಮ್ಮ ಅಧೀನದಲ್ಲಿಯೇ ಇರುವಳೆಂದು ಅಹಂಕಾರದಿಂದ ಭ್ರಮಿಸಿ, ಲೋಭಬುದ್ಧಿಯಿಂದ ಅದನ್ನು ಯಾವದೊಂದು ಪುಣ್ಯಕಾರ್ಯಕ್ಕೆಗೂ ಉಪಯೋಗಿಸದೆ ತಾವೂ ಅದರ ಸುಖಾನುಭವ ಮಾಡದೆ ಇರುತ್ತಾರೆ. ಒಂದಾನೊಂದು ಸಮಯದಲ್ಲಿ ಆ ಲಕ್ಷ್ಮಿಯು ಸಿಟ್ಟಿಗೆದ್ದು ಅವರನ್ನು ಬಿಟ್ಟುಹೋಗುವಳು. ಇದೇ ಅಭಿಪ್ರಾಯವು ಹಂಸರಾಜಕೃತ ರತ್ನಾಕರಧೀಶ್ವರ ಶತಕದಲ್ಲಿ— "ಸತ್ಪಾತ್ರದಾನವಿವರ್ಜಿತಮಾಗಲ್ ಸಿರಿ ಸಂದಿದಿವರ್ಪುದರಿದೇ" ಅಂದರೆ ಯೋಗ್ಯಸ್ಥಳದಲ್ಲಿ ಮಾಡುವ ದಾನವು ಕಟ್ಟಾಗಲು ಐಶ್ವರ್ಯವು ಕಡಿಮೆಯಾಗುತ್ತ ಹೋಗುವದು ಆಶ್ಚರ್ಯವಲ್ಲವೆಂದು ಹೇಳಿದ್ದಾರೆ. ಹೀಗೆ ಲಕ್ಷ್ಮಿಯು ಕಡಿಮೆಯಾಗುತ್ತ ಹೋಗುವದರಿಂದ ಮೊದಲಿನಂತೆ ದರಿದ್ರರಾಗಿ ಹೋಗಿರುತ್ತಾರೆ. ಸೋಮೇಶ್ವರ ಶತಕದಲ್ಲಿ "ತೃಣವೇ ಪರ್ವತವಲ್ಲವೆ" ಅಂದರೆ ಹುಲ್ಲು ಕಡ್ಡಿಯೇ ಗುಡ್ಡವಾಗಬಹುದು; ಗುಡ್ಡವು ಹುಲ್ಲುಕಡ್ಡಿಯಾಗಬಹುದು; ಎಂದು ಹೇಳಿದ್ದಾರೆ. ಈಗ ಐಶ್ವರ್ಯವಂತನಾದವನು ನಾಳೆ ದರಿದ್ರನಾಗಬಹುದು; ಇಂದು ದರಿದ್ರನಾದವನು ನಾಳೆ ಐಶ್ವರ್ಯವಂತನಾಗಬಹುದು. ಐಶ್ವರ್ಯ ದಾರಿದ್ರ್ಯಗಳೆಂಬವುಗಳು ಯಾರಲ್ಲಿಯೂ ಸ್ಥಿರವಾಗಿ ನಿಂತಿರಲಾರವು. ನಳ-ಹರಿಶ್ಚಂದ್ರ-ಪಾಂಡವರು ಕೃಷ್ಣ ಮೊದಲಾದ ಪ್ರಾಚೀನ ರಾಜರ ಚರಿತ್ರಗಳಿಂದ ಸ್ಪಷ್ಟವಾಗಿ ಕಂಡು ಬರುವದಲ್ಲದೆ ಈಗಲೂ ಎಷ್ಟೋ ಪ್ರತ್ಯಕ್ಷ ನೋಡುತ್ತೇವೆ. ಪೂರ್ವಪುಣ್ಯವಿಶೇಷದಿಂದ ಲಕ್ಷ್ಮೀ ಕಟಾಕ್ಷವನ್ನು ಪಡೆದ ವಿವೇಕಿಗಳಾದ ಧನಿಕರು ತಮ್ಮಲ್ಲಿರುವ ದ್ರವ್ಯದಲ್ಲಿ ಕೆಲವು ಅಂಶಗಳನ್ನು ಪುಣ್ಯಕಾರ್ಯದಲ್ಲಿ ವಿನಿಯೋಗಿಸಿದ್ದಾದರೆ ಅವರ ಕೀರ್ತಿಲತೆಯು ದಿಕ್ತಿಗೆಲ್ಲಾ ವ್ಯಾಪಿಸಿ, ಪ್ರಪಂಚವಿರುವವರೆವಿಗೂ ಸ್ಥಿರವಾಗಿದ್ದು ಭಗವಂತನು ಅಂಥ ಪುಣ್ಯಾತ್ಮರಿಗೆ ಭೋಗಮೋಕ್ಷಗಳನ್ನು ದಯಪಾಲಿಸುವನು.

ದಾನಂ ಭೋಗೋ ನಾಶಸ್ತಿಸ್ರೋಗತಯೋ ಭವಂತಿವಿತ್ತಸ್ಯ ।
ಯೋ ನ ದದಾತಿ ನ ಭುಂಕ್ತೇ ತಸ್ಯ ತೃತೀಯಾಗತಿರ್ಭವತಿ ॥

ಪೂರ್ವಿಕರಿಂದ ದಾನ ಭೋಗ-ನಾಶ ಎಂದು ದ್ರವ್ಯಕ್ಕೆ ಮೂರು ಗತಿಗಳು ಕಲ್ಪಿಸಲ್ಪಟ್ಟಿವೆ. ಇವುಗಳಲ್ಲಿ ಮೊದಲನೆಯದು ದಾನವು, ಎರಡನೆಯದು ಭೋಗವು, ಮೂರನೆಯದು ನಾಶವು, ಇವುಗಳಲ್ಲಿ ಆತ್ಮೋದ್ಧಾರಸಾಧಕವಾದುದರಿಂದ ಮೊದಲನೆಯದೇ ಉತ್ತಮವು. ಐಹಿಕಸುಖಸಾಧಕವಾದುದರಿಂದ ಎರಡನೆಯದು ಮಧ್ಯಮವು. ಮೂರನೆಯದು ಅಧಮವು. ವಿವೇಕಮತಿಗಳಾದ ಆಸ್ತಿಕರು ತಮ್ಮ ದ್ರವ್ಯವನ್ನು ಬಹಳ ಮಾಡಿ ಪುಣ್ಯಕಾರ್ಯಕ್ಕೆ ವಿನಿಯೋಗಿಸುವರು. ಕೇವಲ ಐಹಿಕಾಪೇಕ್ಷಿಗಳು ತಮ್ಮ ದ್ರವ್ಯವನ್ನು ತಮ್ಮ ಭೋಗಕ್ಕಾಗಿ ಉಪಯೋಗಿಸುವರು. ಐಹಿಕಾಮುಷ್ಮಿಕಾಪೇಕ್ಷಿಗಳಲ್ಲದ ಲೋಭಿಗಳಲ್ಲಿರುವ ದ್ರವ್ಯವು ಎಷ್ಟು ಭದ್ರವಾಗಿ ಇಡಲ್ಪಟ್ಟಿದ್ದರೂ ಒಂದಾನೊಂದು ಕಾಲದಲ್ಲಿ ಇದ್ದೆಡೆಯಲ್ಲಿಯೇ ನಾಶವಾಗಿ ಹೋಗುವದು. ಇದೇ ವಿಷಯವನ್ನು ಘನಮಠಾಧೀಶ್ವರು ತಮ್ಮ ಕೈವಲ್ಯದರ್ಪಣದಲ್ಲಿ—

ಕೊಡು ಕೊಡು ಕೊಡು ಕೊಡು ಕೊಡು ಬೀನ ।
ಪಡೆಪೊಡವೆ ಶರಣಸಂತತಿಗೀನ ॥
ಕಡುಲೋಭದಿ ಗಳಿಸಳವಾಗ ೩ ।
ನ್ನೊಡನೆ ಬಾರವದರೊಳು ಹಾಗ ॥೫॥

ಸತಿಸುತ ಹಿತರಿಗೆ ಬೇಕೆಂದು ।
ವನಸ್ಥಳಿಯೊಳು ಗಳಿಸಿಮಡಿಯ ಮುಂದು ।
ಸತಿಪರಸತಿಗಡಕುವಳೆಂದು ।
ಅರಿಸುತನಾ ಹಿತರ ಹಿತರುಮೆಂದು ॥೦॥

ಧನವ ಭೂಮಿಯೊಳಗಿರಿಸಿದ ಬೀಜ ।
ಉಮಿಘಣಿ ಭೂತಂಗಳು ನೆಲಸಿಗಡ ।
ನಿನಗೆ ಸಾಧ್ಯವಾಗದೊ ಮೂಢ ಸು ।
ನ್ನನೆ ಕೆಡುವದು ನೀ ನೋಡನೋಡ ॥೩॥

ಉಣದೆ ಯುಡದೆ ಕೃಪಣತನದೊಳು ।
ಬಲುಹಣವ ಗಳಿಸಲೇಂ ಮೋನದೊಳು ॥
ಕಣಿಯೊಳಗಿಡುವ ವೇಳೆಯೊಳು ।
ಮಣ್ಣನೆ ತುಂಬುವರವಯವ ದೊಳು ॥೨॥

ಧರ್ಮಕಲ್ಲಿ ನೃಪ ತಸ್ಕರರು ।
ಬಲುವರ್ಮದಿಕಾರಿ ಭಾಗಾದಿಯರು ॥
ಧರ್ಮಹೀನನಾಗಿರಲಿವನು ।
ತನು ಜನ ನಷ್ಟಿ ಯಬಿಹರಿಸುವರು ॥೪॥

ಸಿಕ್ಕಿದಲ್ಲ ಪೀಸಾಯಿತು ।
ಹಿಂದೆ ಕರ್ಪರಾಗಿ ಹೋದದು ಸತ್ತು ॥
ಪ್ರತ್ಯಕ್ಷವಿಗಾಗುವ ನೀ ಕೊತ್ತು ।
ಸತ್ಪಾತ್ರದಾನ ಮರತೀ ಹೊತ್ತು ॥೫॥

ಶಿವನ ಸೊಮ್ಮು ಶಿವಶರಣರಿಗೆ ।
ಸೇವಿಸುವೇತರ ಸಂಚಕಟು ಏಗೆ ॥
ಜವನಭಟರು ತಮ್ಮೂರೊಳಗೆ ।
ಕಾಡುವರು ಹಂಗಿಸಂಗಿಸಿ ಕಡೆಗೆ ॥೬॥

ಧರೆಯೊಳಗೆ ಘನಮರದೀ ತನ್ನ ।
ಮಾಯರೆಂಬ ದ್ರವ್ಯದೇಳಾಕ ॥
ಪರಿಕಲ್ಪಿಸಿ ಮಾಡುವಮೋಕ ।
ಇವನರಿತು ಸುಜನರ್ ಮಾನೀಸ ॥೭॥

ಈ ಪ್ರಕಾರ ವರ್ಣಿಸಿದ್ದಾರೆ. ಆದುದರಿಂದ ವಿವೇಕಿಗಳಾದ ಮಾನವರ ಸ್ವಾಧೀನದಲ್ಲಿದ್ದ ದ್ರವ್ಯವು ಪರೋಪಕಾರಕ್ಕೂ ಆತ್ಮಭೋಗಕ್ಕೂ ಉಪಯೋಗವಾಗುವುದರಲ್ಲಿ ಸಂಶಯವಿಲ್ಲ. ಪುಣ್ಯಕಾರ್ಯಕ್ಕೂ ಆತ್ಮಸುಖಕ್ಕೂ ದ್ರವ್ಯವನ್ನು ಉಪಯೋಗವಾಡದ ಲೋಭಿಯನ್ನು ಸರ್ವಜ್ಞಕವಿಯು

ಉಣ್ಣ ಕೆಟ್ಟರೊಳಿದ್ದು ಉಣ್ಣದವ ನೋಡಿಹಾಲ ।
ಪುಣ್ಯವಮಾಡಿ ಉಣಲೊಲ್ಲದವನಿದ್ದು ।
ಉಣ್ಣನೂ ಕಷ್ಟ ಸರ್ವಜ್ಞ ॥೧೦॥

ಈ ಪ್ರಕಾರ ಲೋಭಿಯನ್ನು ತಿರಸ್ಕರಿಸಿದ್ದಾನೆ ಮತ್ತು ಈ ಲೋಭಿಯನ್ನು ನೀತಿಕಾರರು ನಪುಂಸಕನಿಗೆ ಹೋಲಿಸುತ್ತಾರೆ. ನಪುಂಸಕನಾದ ಮನುಷ್ಯನು ತನ್ನಲ್ಲಿರುವ ಭೋಗ್ಯವಸ್ತುವನ್ನು ತಾನು ಉಪಯೋಗಿಸುವದಿಲ್ಲ ಇನ್ನೊಬ್ಬರಿಗೆ ಕೊಡಲು ಇಷ್ಟಪಡುವದಿಲ್ಲ ತನ್ನದೆಂಬ ಅಭಿಮಾನದಿಂದ "ನನ್ನನ್ನೆ ನೋಡುತ್ತಿರುವಲ್ಲಿ ಆ ಭೋಗ್ಯವಸ್ತು ಯಾರಿಂದಲೋ ಅಪಹರಿಸಲ್ಪಡುವಂತೆ ಲೋಭಿಯೂ ಪೆಟ್ಟಿಗೆಯೊಳಗಿರುವ ಲಕ್ಷ್ಮಿಯ ಮುಖದರ್ಶನವನ್ನು ಮಾತ್ರ ನೋಡುತ್ತಿರುವನಲ್ಲದೆ ಅದನ್ನು ತೆಗೆದು ಪುಣ್ಯಕಾರ್ಯಕ್ಕಾಗಲಿ, ಆತ್ಮಭೋಗಕ್ಕಾಗಲಿ, ಉಪಯೋಗಿಸಲು ಶಕ್ತಿಯನ್ನು ಪಡೆಯದಿರುವದರಿಂದ ಇದ್ದೆಡೆಯಲ್ಲಿಯೇ ಆ ಲಕ್ಷ್ಮಿ ಯಾರಿಂದಲೋ ಅಪಹರಿಸಲ್ಪಟ್ಟುಹೋಗುತ್ತದೆ. ಮುಖ್ಯವಾಗಿ ತಾವು ಗಳಿಸಿದ ಸಂಪತ್ತನ್ನು ಹೇಗೆ ಉಪಯೋಗಿಸಬೇಕೆಂಬುದು ಗೊತ್ತಿಲ್ಲದೆ ಹೋದರೆ ಸುಖಕ್ಕೆ ಸಾಧನವೆಂದು ತಿಳಿದುಕೊಂಡ ಐಶ್ವರ್ಯವು ದುಃಖಕ್ಕೂ ಸಾಧನವಾಗದಿರದು. ಇದಕ್ಕೆ ಒಂದು ಇತಿಹಾಸವುಂಟು ಗ್ರೀಕ್ ದೇಶದ ಒಬ್ಬ ಮಹಾರಾಜನು ತನ್ನಲ್ಲಿರುವ ಸಂಪತ್ತಿಗೆ ತೃಪ್ತಿಪಡದೆ ಪ್ರಪಂಚದಲ್ಲಿ ತನಗೆ ಸಮಾನರಾದ ಧನಿಕರೇ ಇಲ್ಲವೆನಿಸಿಕೊಳ್ಳಬೇಕೆಂಬ ದುರಾಶೆಯಿಂದೊಡಗೂಡಿ, ಗಿರಿ-ಗುಹೆಗಳನ್ನು ಪ್ರವೇಶಿಸಿ ತಪಸ್ಸನ್ನು ಮಾಡಿ ದೇವರನ್ನು ಪ್ರತ್ಯಕ್ಷಮಾಡಿಕೊಂಡು ತಾನು ಕೈಯಿಂದೇನನ್ನು ಮುಟ್ಟುವನೋ ಅದೆಲ್ಲವೂ ಬಂಗಾರವೇ ಆಗಿಹೋಗುವಂತೆ ಆ ದೇವರಿಂದ ವರವನ್ನು ಪಡೆದನು. ಮುಟ್ಟಿದ ಪದಾರ್ಥವೆಲ್ಲವೂ ಭಂಗಾರವಾಗುವುದೆಂಬ ಸಂತೋಷದಿಂದ ತನ್ನ ಅರಮನೆಗೆ ಬಂದ. ಮೇಲಕ್ಕೆ ಹತ್ತುವಾಗ ಮೆಟ್ಟಲುಗಳ ಎರಡು ಪಾರ್ಶ್ವಗಳಲ್ಲಿ ನಿಲ್ಲಿಸಿದ್ದ ಕಬ್ಬಿಣದ ಸಲಾಕಿಗಳ ಮೇಲೆ ಕೈಯಿಡಲು, ಎರಡು ಸಲಾಕಿಗಳೂ ಆತನ ಹಸ್ತಸ್ಪರ್ಶದಿಂದ ಭಂಗಾರದ ಸಲಾಕಿಗಳಾದವು. ಆತನ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು ಮಹಡಿಯಮೇಲೆ ಅಲಂಕರಿಸಿದ್ದ ಕಬ್ಬಿಣದ ಮಂಚದಮೇಲೆ ಕೈಯಿಟ್ಟು ಕುಳಿತುಕೊಳ್ಳುವುದರೊಳಗಾಗಿ, ಆ ಮಂಚವೆಲ್ಲವೂ ಭಂಗಾರವಾಗಿಹೋಯಿತು ತಾನು ವಿಹರಿಸುವ ಉದ್ಯಾನವನಕ್ಕೆ ಹೋಗಿ ಒಂದು ಗುಲಾಬಿ ಹೂವನ್ನು ಕೈಗಳಲ್ಲಿ ತೆಗೆದುಕೊಂಡನು ಅದು ಸಹ ಆತನ ಹಸ್ತಸ್ಪರ್ಶದಿಂದ ಭಂಗಾರವಾಯಿತು ನೋಡುವುದಕ್ಕೆ ಮನೋಹರವಾದರೂ ಮೊದಲಿದ್ದ ಸುವಾಸನೆಯೆಲ್ಲವೂ ಹೊರಟುಹೋಗಿ ನಿರ್ಗಂಧಪುಷ್ಪವಾಗಿ ಪರಿಣಮಿಸಿದುದರಿಂದ ಸ್ವಲ್ಪ ಖೇದವೆನಿಸಿತು ಅಷ್ಟರಲ್ಲಿಯೇ ಆತನಿಗೆ ಬಹಳ ಹಸಿವು ಉಂಟಾಗಿ ಸಮೀಪದಲ್ಲಿರುವ ತನ್ನ ಪುತ್ರಿಯನ್ನು ಕರೆದು ಸೇವಕರಿಗೆ ಫಲಹಾರವನ್ನು ತರಲಿಕ್ಕೆ ಹೇಳಿದನು ತನ್ನ ಮುಂದೆ ತಂದಿಟ್ಟ ಫಲಹಾರವನ್ನು ಕೈಯಿಂದ ಮುಟ್ಟಿದಕ್ಷಣದಲ್ಲಿಯೇ ಆ ಫಲಹಾರಗಳೆಲ್ಲವೂ ಸುವರ್ಣದ ಗಟ್ಟಿಗಳಾದವು ಸ್ವಲ್ಪ ನೀರನ್ನಾದರೂ ಕುಡಿದು ಹಸಿವನ್ನು ನಿವಾರಣೆಮಾಡಿಕೊಳ್ಳಬೇಕೆಂದು ನೀರಿನ ತಂಬಿಗೆಯನ್ನು ಕೈಯಲ್ಲಿ ತೆಗೆದುಕೊಳ್ಳಲಾಗಿ, ಆ ತಂಬಿಗೆಯೂ ಮತ್ತು ನೀರೂ ಚಿನ್ನದ ಮುದ್ದೆಯಾದವು. ಅನಂತರ ತನ್ನ ಸಮೀಪದಲ್ಲಿರುವ ಪ್ರೇಮಪುತ್ರಿಯನ್ನಾದರೂ ಆಲಂಗಿಸಿ ಸ್ವಲ್ಪ ಸಂತೋಷಗೊಳ್ಳೋಣವೆಂದು ಪುತ್ರಿಯನ್ನಾಲಿಂಗಿಸಹೋದನು; ಕೂಡಲೇ ಆಕೆಯ ಶರೀರವೆಲ್ಲಾ ಭಂಗಾರದ ಮೂರ್ತಿಯಾಗಿ ಪರಿಣಮಿಸಿತು ಹೀಗೆ ಮುಟ್ಟಿದ್ದೆಲ್ಲವೂ ಸುವರ್ಣವಾದುದರಿಂದ ಹೊಟ್ಟೆಗೆ ಅನ್ನೋದಕವೂ ಸಹ ಇಲ್ಲದಂತಾಗಿ ಬಹಳವಾಗಿ ದುಃಖಪಡುತ್ತ, ದೇವರಿಗೆ ಮರೆಹೊಕ್ಕು ತನ್ನ ಕಷ್ಟವನ್ನು ಪರಿಹರಿಸಿಕೊಂಡನು. ಆದುದರಿಂದ ತನ್ನಲ್ಲಿ ದ್ರವ್ಯವು ಎಷ್ಟು ಹೆಚ್ಚಿದ್ದರೂ ವಿನಿಯೋಗದ ಕುಶಲತನವನ್ನು ಪಡೆಯದಿದ್ದರೆ ಅದೇ ದ್ರವ್ಯವು ತನಗೆ ದುಃಖವನ್ನುಂಟುಮಾಡದಿರಲಾರದೆಂಬುದಕ್ಕೆ ಈ ಕಥೆಯು ಒಂದು ದೊಡ್ಡ ಉದಾಹರಣೆಯಾಗಿದೆ. ಆದುದರಿಂದ

ಜನಯಂತ್ಯರ್ಜನೇದುಃಖಂ ತಾಪಯಂತಿ ವಿಪತ್ತಿಷು ।
ಮೋಹಯಂತಿ ಸಮೃದ್ಧೌ ಚ ಕಥಮರ್ಥಸ್ಸುಖಾವಹಾಃ ॥

ದ್ರವ್ಯವು ಗಳಿಸುವಾಗ ದುಃಖವನ್ನುಂಟುಮಾಡುತ್ತದೆ. ಕಳೆದುಹೋದರೆ ಸಂತಾಪವನ್ನುಂಟುಮಾಡುತ್ತದೆ. ಆ ದ್ರವ್ಯವು ಹೆಚ್ಚುತ್ತ ಹೋದರಾಗಲಿ ಮನುಷ್ಯರನ್ನು ಕರ್ತವ್ಯಾಕರ್ತವ್ಯವಿಮೂಢರನ್ನಾಗಿ ಮಾಡುತ್ತದೆ. ಆದುದರಿಂದ ಅತ್ಯಂತದಲ್ಲಿಯೂ ದ್ರವ್ಯದಿಂದ ಸುಖವೆಂಬುದು ಎಷ್ಟುಮಾತ್ರವೂ ಇಲ್ಲವೆಂದು ನೀತಿಕಾರನು ಹೇಳುತ್ತಾನೆ. ಇವನ್ನೆಲ್ಲಾ ಸೂಕ್ಷ್ಮದೃಷ್ಟಿಯಿಂದ ವಿಚಾರಮಾಡಿನೋಡಿದರೆ ಐಶ್ವರ್ಯವು ಸುಖಕ್ಕೆ ಸಾಧನವಾಗಿದ್ದರೂ ಅದೊಂದೇ ಜೀವಿತದ ಮುಖ್ಯಧ್ಯೇಯವೆಂದು ತಿಳಿಯುವುದು ವಿವೇಕಿಗಳ ಕರ್ತವ್ಯವಲ್ಲ. ದ್ರವ್ಯವನ್ನಾರ್ಜಿಸಿ ಅದರಲ್ಲಿ ಕೆಲವು ಭಾಗವನ್ನು ಲೋಕಕಲ್ಯಾಣ ಕಾರ್ಯಕ್ಕೂ, ಕೆಲವನ್ನು ತನ್ನ ಸುಖಾನುಭವಕ್ಕೂ, ಉಪಯೋಗಿಸುತ್ತ ಜಗತ್ತಿನಲ್ಲಿ ಪ್ರತಿಷ್ಠೆಯನ್ನು ಪಡೆಯುವುದರ ದ್ವಾರ ಭಗವಂತನ ಪ್ರೇಮಕ್ಕೆ ಪಾತ್ರರಾಗುವಂತೆ ಮಾಡಿಕೊಳ್ಳುವುದೇ ಸಂಪತ್ತಿನ ಫಲವಾಗಿದೆ ಇದಿಲ್ಲದೆ ತನ್ನ ಹೊಟ್ಟೆಗೂ, ಬಟ್ಟೆಗೂ, ಭಗವತ್ಸಂಬಂಧಿಯಾದ ಪುಣ್ಯಕಾರ್ಯಗಳಿಗೂ, ಯಾವುದೊಂದಕ್ಕೂ ಉಪಯೋಗಿಸದೆ ಹಗಲಿರುಳೂ ಕೇವಲ ಸಂಗ್ರಹದಲ್ಲಿ ಮಾತ್ರ ಲೋಲನಾಗಿದ್ದರೆ ಅಂಥವನು, ಸುರಾಪಾನದ ಅಭ್ಯಾಸವನ್ನು ಮಾಡಿದವನು ಎಷ್ಟು ಮದ್ಯವನ್ನು ಪಾನಮಾಡಿದರೂ, ಪುನಃ ಪುನಃ ಪಾನಾಸಕ್ತಿಯೇ ಹೆಚ್ಚುತ್ತ ಮಿತಿಮೀರಿದ ಮದ್ಯಪಾನದಿಂದ ಬುದ್ಧಿ ವಿವೇಕಾದಿಗಳು ಹಾಳಾಗಿಹೋಗಿ ಕಷ್ಟಕ್ಕೀಡಾಗುವಂತೆ, ದ್ರವ್ಯದ ಅಮಲಿನಲ್ಲಿರುವ **ಲೋಭಿಯೂ** ಸಹ ಒಂದುದಿವಸ ಲಕ್ಷ್ಮೀಕಟಾಕ್ಷದಿಂದ ದೂರನಾಗಿ ದುಃಖಕ್ಕೀಡಾಗದಿರಲಾರನು ದಾರಿಕಾರನು ಮುಂದಿನ ಬುತ್ತಿಯನ್ನು ಸಂಗ್ರಹಿಸಿಕೊಂಡು ದಾರಿಯಲ್ಲಿ ಅದರ ಸುಖವನ್ನನುಭವಿಸುತ್ತ ಸ್ವಸ್ಥಾನವನ್ನು ಆನಂದದಿಂದ ಮುಟ್ಟುವಂತೆ, ಶ್ರೀಮಂತರು ತಮ್ಮ ಜನ್ಮದ ಆತ್ಮೋದ್ಧಾರಸಾಧಕವಾದ ಧರ್ಮವೆಂಬ ಬುತ್ತಿಯನ್ನು ಸಂಗ್ರಹಿಸಿ, ಆನಂದದಿಂದ ಪರಮಾತ್ಮನ ಸಾನ್ನಿಧ್ಯವನ್ನು ಹೊಂದಬೇಕು ಮನುಷ್ಯನು ತಾನ ಬೇಕಾದಷ್ಟು ದ್ರವ್ಯವನ್ನಾರ್ಜಿಸುವ ಶಕ್ತಿಯನ್ನು ಪಡೆದಿದ್ದರೂ ಗಳಿಸಿದ ದ್ರವ್ಯವನ್ನು ವಿನಿಯೋಗಿಸುವ ಪ್ರೌಢಿಮೆಯನ್ನು ಪಡೆಯದವನು, ನಿಜವಾಗಿಯೂ ಮೋಸಹೋಗುವನು ಧನಿಕರಾದ ಪ್ರತಿಯೊಬ್ಬ ಮಾನವರೂ ಇಂಥ ಸ್ಥಿತಿಯನ್ನು ಎಂದೂ ತಂದುಕೊಳ್ಳಬಾರದೆಂದು ಸೂಚಿಸುತ್ತೇನೆ.

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಸಿದ್ಧಲಿಂಗಸ್ವಾಮಿಗಳವರ ಪುಣ್ಯತಿಥಿಮಹೋತ್ಸವ ಯಲಿವಾಳ.

ಧಾರವಾಡ ಡಿ|| ಜಮಖಂಡಿಸ್ಟೇಟ್ ತಾಲೂಕ ಕುಂದಗೋಳ ಪೈಕಿ ಯಲಿವಾಳಗ್ರಾಮದ ಸರ್ವಗುರು ಭಕ್ತರು ಪುಷ್ಯ ಬ|| ೪ ಮಂಗಳವಾರ ತಾ|| ೬-೧-೪೩ ದಿವಸ ಶ್ರೀ ಉಜ್ಜಯಿನಿ ೧೦೮ ಜಗದ್ಗುರು ಶ್ರೀ ಸಿದ್ಧಲಿಂಗಸ್ವಾಮಿಗಳವರು ಲಿಂಗೈಕ್ಯರಾದ ಪುಣ್ಯತಿಥಿಯನ್ನು ಪದ್ಧತಿಯ ಪ್ರಕಾರ ಬಹಳ ವಿಜೃಂಭಣೆಯಿಂದ

(೬ನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ

೧೯೪೨ನೆಯ ಫೆಬ್ರವರಿ ೨ ॥ ೨ನೇ ಸೋಮ ವಾರ

ಬ್ರಹ್ಮಚರ್ಯ

“ಬ್ರಹ್ಮಚರ್ಯಪ್ರತಿಷ್ಠಾಯಾಂ ವೀರ್ಯಲಾಭಃ’ ಎಂದು ಯೋಗಸೂತ್ರದಲ್ಲಿ ಹೇಳಿರುವಪ್ರಕಾರ ಪ್ರಪಂಚದಲ್ಲಿ ಯಾರು ಬ್ರಹ್ಮಚರ್ಯವನ್ನು ಅಭ್ಯಾಸಮಾಡುತ್ತಾರೆಯೋ ಅವರಿಗೆ ಬ್ರಹ್ಮಚರ್ಯದ ಮಹಿಮೆಯಿಂದ ಅತಿಶಯವಾದ ಸಾಮರ್ಥ್ಯವುಂಟಾಗುವುದು ಪ್ರಾಯಶಃ ವೀರ್ಯವನ್ನು ನಿಗ್ರಹಮಾಡುವುದೇ ಬ್ರಹ್ಮಚರ್ಯವೆನಿಸುತ್ತದೆ ಇದರಿಂದ ಮುತ್ತಿನಲ್ಲಿ ಒಂದು ನಿರ್ಮಲವಾದ ಹೊಳಪು ಹೇಗೆ ಇರುತ್ತದೆಯೋ ಹಾಗೆ ಶರೀರದಲ್ಲಿ ಒಂದು ನಿರ್ಮಲವಾದ ಬ್ರಹ್ಮತೇಜಸ್ಸು ಬರುತ್ತದೆ ಚಕ್ಷುರಾದಿ ಪಂಚಜ್ಞಾನೇಂದ್ರಿಯಗಳಲ್ಲಿಯೂ ವಾಗಾದಿ ಕರ್ಮೇಂದ್ರಿಯಗಳಲ್ಲಿಯೂ ಸ್ವಸ್ವಕಾರ್ಯಕರಣಪಟುತ್ವವು ಹುಟ್ಟುವುದು ಮನಸ್ಸಿನಲ್ಲಿ ಚಿತ್ತಸ್ಥೈರ್ಯವುಂಟಾಗುವುದು ರೋಗಾದಿಗಳು ತಲೆಹಾಕುವುದಿಲ್ಲವು ಆಯುಷ್ಯವು ವೃದ್ಧಿಹೊಂದುವುದು ಸದ್ಗುಣಗಳಲ್ಲಿ ಪ್ರೇಮವು ಹೆಚ್ಚುವುದು. ಪ್ರಜ್ಞಾಬಲವು ಬರುವುದು ಮಾನವಜನ್ಮವು ಸಾಫಲ್ಯವನ್ನು ಹೊಂದಬೇಕಾದರೆ ಈ ಬ್ರಹ್ಮಚರ್ಯವು ಒಂದು ಮುಖ್ಯಸಾಧನವಾಗಿದೆ ಇಂಥ ಅನರ್ಘರತ್ನದಂತಿರುವ ಬ್ರಹ್ಮಚರ್ಯವನ್ನು ಯಾರು ಕಳೆದುಕೊಳ್ಳುತ್ತಾರೆಯೋ ಅವರು ಸಾಮಾನ್ಯ ಪ್ರಾಣಿಗಳಂತೆ ಬುದ್ಧಿಹೀನರಾಗಿ ಹೀನಾವಸ್ಥೆಯನ್ನು ಅನುಭವಿಸುವರು. ವೀರ್ಯವನ್ನು ತಡೆಯುವ ಸಾಮರ್ಥ್ಯವು ಯಾರಿಗಿಲ್ಲವೋ ಅವರಿಗೆ ಜ್ಞಾನಬಲವೂ ದೇಹಬಲವೂ ಇಂದ್ರಿಯಪಟುತ್ವವೂ ಇಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಲೋಕದಲ್ಲಿ ಹೀಗೆ ವೀರ್ಯನಿರೋಧಮಾಡಿದವನನ್ನು ಜಿತೇಂದ್ರಿಯನೆಂದು ಕರೆಯುತ್ತಾರೆ ಜಿತೇಂದ್ರಿಯನೆಂದರೆ ಎಲ್ಲ ಇಂದ್ರಿಯಗಳನ್ನು ಜಯಿಸಿದವನೆಂದು ಸಾಮಾನ್ಯವಾಗಿ ಅರ್ಥವಾದರೂ ಆ ಶಬ್ದಕ್ಕೆ ವೀರ್ಯನಿರೋಧದಲ್ಲಿಯೇ ವಿಶೇಷವಾದ ತಾತ್ಪರ್ಯವುಂಟು ಏಕೆಂದರೆ ಸಕಲೇಂದ್ರಿಯಗಳನ್ನು ಜಯಿಸಲು ಯಾರಿಂದಲೂ ಸಾಧ್ಯವಾಗಲಾರದು. ನೀರಿಗೆ ಹರಿಯುವ ಸ್ವಭಾವವಿರುವಂತೆ ಆಯಾ ಇಂದ್ರಿಯಗಳಿಗೆ ತಮ್ಮ ತಮ್ಮ ವ್ಯಾಪಾರದಲ್ಲಿ ನಿರತರಾಗಿರುವುದೇ ಸ್ವಭಾವವಾಗಿದೆ ಇದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಕಣ್ಣಿಗೆ ನೋಡುವುದೂ, ಕಿವಿಗೆ ಕೇಳುವುದೂ, ಮೂಗಿಗೆ ಮೂಸುವುದೂ ಸ್ವಭಾವವಾಗಿದೆ. ಕಣ್ಣನ್ನು ನೋಡದಂತೆಯೂ, ಕಿವಿಯನ್ನು ಕೇಳದಂತೆಯೂ, ಮೂಗನ್ನು ಮೂಸದಂತೆಯೂ ನಿರ್ಬಂಧಿಸಲು ಯಾರಿಂದಲೂ ಶಕ್ಯವಾಗಲಾರದು ಆದರೆ ಇಂದ್ರಿಯಗಳು ದುರ್ವಿಷಯಗಳಲ್ಲಿ ಹರಿದಾಡುವುದನ್ನು ತಪ್ಪಿಸಿ ಸದ್ವಿಷಯಗಳಲ್ಲಿ ಪ್ರವರ್ತಿಸುವಂತೆ ಮಾಡಿದರೆ ಅದನ್ನೇ ಇಂದ್ರಿಯ ಜಯವೆಂದು ಹೇಳಬೇಕಲ್ಲದ ಇಂದ್ರಿಯ ವ್ಯಾಪಾರವನ್ನೇ ತಡೆಯಲಾಗುವುದಿಲ್ಲವು ಮತ್ತು ಇಂದ್ರಿಯಾಣಾಂ ವಿಚರತಾಂ ವಿಷಯೇಷ್ವಪಹಾರಿಷು । ಸಂಯಮೇಯತ್ನಮಾತಿಷ್ಠೇದ್ವಿದ್ವಾನ್ಯಂತೇವ ವಾಜಿನಾಂ ॥ ರಥವನ್ನು ಅಪಮಾರ್ಗದಲ್ಲಿ ಎಳೆದುಕೊಂಡು ಹೋಗಲಿಚ್ಛಿಸುವ ಮದಿಸಿದ ಕುದುರೆಗಳನ್ನು ರಥಿಕನು ಲಗಾಮಿನ ಹತೋಟಿಯಿಂದ ಹೇಗೆ ದಾರಿಗೆ ಹಚ್ಚುವನೋ ಅದರಂತೆ ದುರ್ವಿಷಯಗಳಲ್ಲಿ ಹರಿದಾಡುವ ಇಂದ್ರಿಯಗಳನ್ನು ವಿವೇಕಿಯಾದ ಪುರುಷನು ನಿಗ್ರಹಮಾಡಿ ಸದ್ವಿಷಯಗಳಲ್ಲಿ ಹರಿಸುವಂತೆ ಮಾಡಬೇಕು ಮನುಸ್ಮೃತಿಯೂ ಸಹ ಇದೇ ಅರ್ಥವನ್ನು ಪ್ರತಿಪಾದಿಸುತ್ತದೆ. ಆದ್ದರಿಂದ ‘‘ವೀರ್ಯನಿರೋಧೋಹಿಬ್ರಹ್ಮಚರ್ಯಂ’ ಎಂಬುಕ್ತಿಯಂತೆ ಚಕ್ಷುರಾದಿ ಸಕಲೇಂದ್ರಿಯಗಳನ್ನು ಸದ್ವಿಷಯದಲ್ಲಿ ಪ್ರವರ್ತಿಸುವಂತೆ ಮಾಡಿಕೊಳ್ಳುವುದಲ್ಲದೆ ಮುಖ್ಯವಾಗಿ ವೀರ್ಯವನ್ನು ತಡೆಯುವುದೇ ಬ್ರಹ್ಮಚರ್ಯವೆಂದು ಸ್ಪಷ್ಟವಾಗುವುದು ಇದೇ ಕಾಮನಿಗ್ರಹವೆಂದು ಹೇಳಲ್ಪಡುವದು ಈ ವೀರ್ಯನಿಗ್ರಹ ಸಾಮರ್ಥ್ಯವು ನಮ್ಮ ಸನಾತನ ಧರ್ಮಾವಲಂಬಿಗಳಾದವೆಲ್ಲರಿಂದಲೂ ಯಥಾ ಯೋಗ್ಯವಾಗಿ ಸಂಗ್ರಹಿಸಲ್ಪಡತಕ್ಕದಾಗಿದೆ. ಯಾವನಿಗೆ ವೀರ್ಯನಿಗ್ರಹಸಾಮರ್ಥ್ಯವಿಲ್ಲವೋ ಆತನಲ್ಲಿ ಕ್ರೋಧವುತ್ಪನ್ನವಾಗಿ ಆ ಕ್ರೋಧದಿಂದ ಮೋಹವೂ, ಆ ಮೋಹದಿಂದ ಭ್ರಮವೂ, ಆ ಭ್ರಮದಿಂದ ಬುದ್ಧಿನಾಶವೂ, ಆ ಬುದ್ಧಿನಾಶದಿಂದ ಸ್ವನಾಶವೂ ಸಂಭವಿಸುವುದು ಮತ್ತು “ವಶೇಹಿ ಯಸ್ಯೇಂದ್ರಿಯಾಣಿ ತಸ್ಯಪ್ರಜ್ಞಾ ಪ್ರತಿಷ್ಠಿತಾ” ಯಾವನು ಇಂದ್ರಿಯಗಳನ್ನು ಸ್ವಾಧೀನ ಮಾಡಿಕೊಳ್ಳುತ್ತಾನೆಯೋ ಆತನಲ್ಲಿ ಪ್ರಜ್ಞೆಯು ಸ್ಥಿರಗೊಳ್ಳುವನು ಇದೇ ಆತ್ಮಸಂಯಮವು ಎಂದು ಗೀತೋಕ್ತಿಯಿರುವುದರಿಂದಲೂ “ತತ್ಸಿದ್ಧೌನಿರತಿಶಯಸಾಮರ್ಥ್ಯಂ ಭವತಿ ಯೇನ ಅಣಿಮಾದ್ಯಷ್ಟಸಿದ್ಧಿರ್ಭವತಿ ॥ ಶಿಷ್ಯೇಷು ಉಪದೇಶಃ ಸದ್ಯಃಫಲತಿ” ಎಂದು ಯೋಗಸೂತ್ರದಲ್ಲಿ ಹೇಳಿರುತ್ತದೆ ಮತ್ತು ಇದೇ ಅಭಿಪ್ರಾಯವು ಇಂದ್ರಿಯಾಣಾಂವಶೀಕಾರೋನಿವೃತ್ತಿರಿತಿಗೀಯತೇ ಲಕ್ಷೀಕೃತೇ ಶಿವೇ ತೇಷಾಂ ಉತ್ತಸ್ಸಂಸಾರಸಾಗರಂ ॥ ಅಂದರೆ ಇಂದ್ರಿಯಗಳನ್ನು ವಶಮಾಡಿಕೊಳ್ಳುವುದೇ ನಿವೃತ್ತಿಯು. ಆ ನಿವೃತ್ತವಾದ ಮನಸ್ಸು ಶಿವಲಿಂಗದಲ್ಲಿ ನೆಲೆಸಿದರೆ ಸಂಸಾರ ಸಮುದ್ರವನ್ನು ದಾಂಟಿಯೇ ದಾಂಟುವನು ಎಂದು ರೇಣುಕಭಗವತ್ಪಾದರು ಅಗಸ್ತ್ಯಮುನಿಗಳಿಗೆ ಬೋಧಿಸಿರುತ್ತಾರೆ ಇಂಥ ಸಂಯಮಶಕ್ತಿಯು ನಮ್ಮ ಲೌಕಿಕ ಬಾರತೀಯರಿಗೆ ಬರಬರುತ್ತ ಕಡಿಮೆಯಾದುದರಿಂದ ಬಿರುಗಾಳಿಯಿಂದ ಘನೀಭೂತವಾದ ಮೇಘವು ಒಡೆದು ಛಿದ್ರವಾಗಿಹೋಗುವಂತೆ ಇವರ ಶಕ್ತಿಯೆಲ್ಲವೂ ಪರದಾಸ್ಯದಿಂದ ತುಂಡುತುಂಡಾಗಿ ಹೋಗಿದ ಇನ್ನು ಗುರುತ್ವವನ್ನು ಮಾಡುವ ವೈದಿಕರೂ ಸಹ ‘‘ಸಂಗಾತ್ಸಂಜಾಯತೇಕಾಮಃ’’ ಎಂಬಂತೆ ತಾವೂ ಇಂಥವರ ಸಂಸರ್ಗದಿಂದ ಸರ್ವೋತ್ಕೃಷ್ಟವೂ ನಿತ್ಯ ಸೌಖ್ಯಾಸ್ಪದವೂ ಆದ ಬ್ರಹ್ಮಚರ್ಯವನ್ನು ಹಾಳುಮಾಡಿಕೊಂಡಿದ್ದರಿಂದ ಗುರುಶಿಷ್ಯನ್ಯಾಯಕ್ಕೆ ತಿಲಾಂಜಲಿಯು ಕೊಡುವ ಪ್ರಸಂಗವು ಬಂದೊದಗಿದೆ ವೀರಶೈವಮತದಲ್ಲಿಯಾದರೋ ಶಿಷ್ಯರಿಗೆ ಶಿವಸಂಸ್ಕಾರಪೂರ್ವಕ ಬ್ರಹ್ಮೋಪದೇಶವನ್ನು ಮಾಡಿ ಮುಕ್ತಿಸಾಧನಗಳಾದ ಷಟ್‌ಸ್ಥಲೋಪದೇಶವನ್ನು ಮಾಡುವದಕ್ಕಾಗಿ ಪ್ರತಿಯೊಂದು ಊರುಗಳಲ್ಲಿಯೂ ಒಂದೊಂದು ಹಿರಿಯ ಮಠಗಳನ್ನು ಸ್ಥಾಪಿಸಿ ಅಲ್ಲಿ ಬ್ರಹ್ಮಚರ್ಯಾಶ್ರಮಧಾರಿಗಳಾದ ಪಟ್ಟಚರಾಧಿಪತಿಗಳು ಶ್ರೀ ಮಹಾಚಾರ್ಯರಿಂದ ನಿಯಮಿಸಲ್ಪಟ್ಟರು ಇಂಥ ಪರಮಪವಿತ್ರವಾದ ಬ್ರಹ್ಮಚರ್ಯಪಾಲನವೇ ತಮ್ಮ ಸರ್ವಸ್ವವಾಗಿರುವ ಪಟ್ಟಚರಾಧಿಪತಿಗಳಲ್ಲಿ ಅನೇಕರು ಇಂಥ ಬ್ರಹ್ಮಚರ್ಯಸಿದ್ಧಿಯುಳ್ಳವರಾದರೂ ಬೇರೆ ಕೆಲವರು ಜೀವರತ್ನವೆನಿಸುವ ಬ್ರಹ್ಮಚರ್ಯವನ್ನು ಕಳೆದುಕೊಂಡಿದ್ದರಿಂದ ಅವರ ಆತ್ಮ ಬಲವು ಕಡಿಮೆಯಾಗಿ ಲೌಕಿಕ ಜನಗಳಂತೆ ಆಗಿಹೋಗಿರುತ್ತಾರೆ ಇಂಥವರಿಂದ ಶಿಷ್ಯೋದ್ಧಾರಕಾರ್ಯವು ನಡೆಯಲು ಅವಕಾಶವಿಲ್ಲ. ಬ್ರಹ್ಮಚರ್ಯವಿಲ್ಲದ ಗುರುವಿನ ಉಪದೇಶವು ಭವತಪ್ತವಾದ ಶಿಷ್ಯಹೃದಯದಲ್ಲಿ ಕಾದ ಕಬ್ಬಿಣಕ್ಕೆ ಬಿಟ್ಟ ನೀರಿನಂತೆ ನಿರ್ನಾಮವಾಗುವುದು ಆದ್ದರಿಂದ ಗುರುಗಳಾಗಲಿ ಶಿಷ್ಯರಾಗಲಿ ತಾವು ಅಂಗೀಕರಿಸಿದ ಶುದ್ಧಬ್ರಹ್ಮಚರ್ಯವನ್ನಾಗಲಿ, ಗಾರ್ಹಸ್ಥ್ಯಬ್ರಹ್ಮಚರ್ಯವನ್ನಾಗಲಿ ನಿಯಮದಂತೆ ಪರಿಪಾಲಿಸಿ ಮಾನವಜನ್ಮವನ್ನು ಸಫಲಗೊಳಿಸುವಂತೆ ಶ್ರೀಪಂಚಾಚಾರ್ಯರು ಅನುಗ್ರಹಿಸಲಿ

ಯುದ್ಧವಾರ್ತೆ.

೨೦೦೦೦ ಜನಕ್ಕೆ ೩ ದಿನಗಳ ಆಹಾರಸಂಗ್ರಹ

ಕಲಿಕತ್ತೆಯಮೇಲೆ ಶತ್ರುಗಳು ಮುತ್ತಿಗೆ ನಡೆಸುವುದಾದರೆ, ನಿಲ್ಲಲು ನೆಲೆಯಿಲ್ಲದಂತಾಗಬಹುದಾದ ಜನರಿಗೆ ಆಹಾರಕೊಡಲು ತಕ್ಕಷ್ಟು ಆಹಾರವಸ್ತುಗಳನ್ನು ತಕ್ಷಣ ಸಂಗ್ರಹಿಸಿಡಬೇಕೆಂದು ಬಂಗಾಳಾಸರ್ಕಾರದವರು ಆಜ್ಞೆ ಮಾಡಿದ್ದಾರೆ ೨೦,೦೦೦ ಮಂದಿಗೆ ೩ ದಿನಗಳಿಗೆ ಬೇಕಾಗುವಷ್ಟು ಆಹಾರವನ್ನು ಸಂಗ್ರಹಿಸಲಾಗುತ್ತದೆ. ವಿಮಾನಮುತ್ತಿಗೆ ಕಾಲದಲ್ಲಿ ಪೋಲೀಸಿನವರ ಮತ್ತು “ಸಿವಿಕ್ ಗಾರ್ಡ್” ಗಳ ರಕ್ಷಣೆಗಾಗಿ ನಗರದ ರಸ್ತೆಗಳ ಪಕ್ಕಗಳಲ್ಲಿ ಮರಳು ಚೀಲಗಳಿಂದ ರಕ್ಷಣೆ ಸ್ಥಾನಗಳನ್ನು ಕಟ್ಟಲಾಗಿದೆ,

ಸಿಂಗಪುರಕ್ಕೆ ವಿಪತ್ತು

ಮಲಯಾ ರಂಗದ ಕೇಂದ್ರ ಭಾಗದಲ್ಲಿ ಜಪಾನರು ಸಿಂಗಪುರ್ ದ್ವೀಪದಿಂದ ೧೮ ಮೈಲಿ ದೂರದಲ್ಲಿದ್ದಾರೆ, ಪಶ್ಚಿಮ ರಂಗದಲ್ಲಿ ೨೬ ಮೈಲಿ ದೂರಲ್ಲಿಯೂ ಪೂರ್ವರಂಗದಲ್ಲಿ ಸುಮಾರು ೪೫ ಮೈಲಿ ದೂರದಲ್ಲಿಯೂ ಇದ್ದಾರೇಂದು ತಿಳಿದುಬರುತ್ತದೆ.

ಸಿಂಗಪುರವನ್ನು ಬಿಟ್ಟು ಹೊರಡಬೇಕು

ಜೊಹೋರ್ ಪ್ರಾಂತ್ಯಕ್ಕೆ ಎದುರಾಗಿರುವಸಿಂಗಪುರ್ ದ್ವೀಪದ ತೀರ ಪ್ರದೇಶಗಳಲ್ಲಿರುವ ಸಿವಿಲ್ ಪ್ರಜೆಗಳನ್ನು ಬೇರೆ ಕಡೆಗೆ ಸಾಗಿಸುವ ನಿಶ್ಚಯಮಾಡಲಾಗಿದೆ. ಪಶ್ಚಿಮ ತೀರದಿಂದ ಆರಂಭಿಸಿ, ಉತ್ತರ ತೀರವನ್ನು ಮುಟ್ಟಿ ಪೂರ್ವ ತೀರದ ವರೆಗೆ ವ್ಯಾಪಿಸಿರುವ ಸುಮಾರು ೧ ಮೈಲಿ ಅಗಲದಷ್ಟು ಕ್ಷೇತ್ರದಲ್ಲಿರುವ ಸಾರ್ವಜನಿಕ ಪ್ರಜೆಗಳು ೩೦ ನೇ ತಾ॥ ಶುಕ್ರವಾರ ಮಧ್ಯಾಹ್ನ ದೊಳಗಾಗಿ ತಮ್ಮ ದನಕರುಗಳೊಂದಿಗೆ ಹೊರಟು ಹೋಗಬೇಕೆಂದು ಆಜ್ಞೆಮಾಡಲಾಗಿದೆ. ಇದು ಕೇವಲ ಎಚ್ಚರಿಕೆಯ ಕಾರ್ಯಕ್ರಮವೆಂದೂ, ತಿಳಿಸಲಾಗಿದೆ.

ಮುಂಬೈ ನಗರಕ್ಕೆ ವಿಪತ್ತಿಲ್ಲ

“ಮುಂಬೈ ನಗರಕ್ಕೆ ವಿಪತ್ತು ಸಂಭವಿಸುವ ಸನ್ನಿವೇಶವಿರುವುದು ತೀರ ಕಡಿಮೆ ಆದುದರಿಂದ ಮುಂಬೈಯಲ್ಲಿ ಕೆಲಸವಿರುವವರು ಯಾರೂ ಆ ನಗರವನ್ನು ಬಿಟ್ಟು ಹೋಗಬೇಕಾದುದಿಲ್ಲ ಒಂದು ವೇಳೆ ವಿಮಾನಮುತ್ತಿಗೆ ಸಂಭವಿಸಿ ಜನರಿಗೆ ಅಪಾಯವುಂಟಾಗುವುದಾದರೆ, ತಕ್ಕ ಸಹಾಯ ನೀಡಲು ಸರ್ಕಾರದವರು ಸರ್ವ ಪ್ರಯತ್ನಗಳನ್ನೂ ಕೈಗೊಂಡಿದ್ದಾರೆ. ಆದುದರಿಂದ ಜನರು ಭಯಪಡಬಾರದು” ಎಂಬುದಾಗಿ ಮುಂಬೈ ಗವರ್ನರು ಆಕಾಶವಾಣಿ ಮೂಲಕ ಸಂದೇಶವಿತ್ತಿದ್ದಾರೆ

ಕಲ್ಕತ್ತನಗರದಿಂದ ಪ್ರಜೆಗಳನ್ನು ದಿನಕ್ಕೆ ೧ ಲಕ್ಷದಂತೆ ಸಾಗಿಸಲಾಗುವದು

ಈಸ್ಟ್ ಇಂಡೀಸ್ ರೈಲ್ವೆಯ ಅಧಿಕಾರಿಗಳು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿಕೆ ಕೊಡುತ್ತ ಡಿಶಂಬರ್ 13 ರಿಂದ ಜನವರಿ 20 ರ ವರೆಗೆ ತಮ್ಮ ರೈಲ್ವೆಗಳಲ್ಲಿ 5,92,872 ಮಂದಿ ಕಲ್ಕತ್ತನಗರವನ್ನು ಬಿಟ್ಟು ಬೇರೆ ಕಡೆಗೆ ಪ್ರಯಾಣಮಾಡಿರುವರೆಂದೂ ಸಾಮಾನ್ಯ ಪರಿಸ್ಥಿತಿಯಲ್ಲಿ ಎರಡುವರೆ ಲಕ್ಷ ಮಂದಿ ಪ್ರಯಾಣಮಾಡುತ್ತಿದ್ದರೆಂದೂ ಕಲ್ಕತ್ತ ನಗರದಿಂದ ಪ್ರಜೆಗಳನ್ನು ಸುರಕ್ಷಿತವಾದ ಸ್ಥಳಗಳಿಗೆ ಸಾಗಿಸುವ ಪ್ರಸಂಗಬಂದರೆ, ಅವಕ್ಕೆ ರೈಲ್ವೆಗಳವರು ತಕ್ಕ ಕಾರ್ಯಕ್ರಮವನ್ನು ಯೋಚಿಸಿದ್ದಾರೆಂದೂ ಕಲ್ಕತ್ತ ನಗರದಿಂದ ಮೂರು ರೈಲ್ವೆ ಕಂಪೆನಿಗಳೂ ಪ್ರತಿದಿನವೂ 1ಲಕ್ಷ ಪ್ರಜೆಗಳನ್ನು ಸಾಗಿಸಬಹುದೆಂದೂ ಸೂಚಿಸಿದರು.

ಪೆಸಿಫಿಕ್‌ನಲ್ಲಿ ಜಪಾನಿನ ಬಲ

ನೈರುತ್ಯ ಪೆಸಿಫಿಕ್ ಕ್ಷೇತ್ರದಲ್ಲಿ ಈಗ ಜಪಾನು ಸುಮಾರು 20 ಡಿವಿಜನ್‌ಗಳನ್ನು ಅಂದರೆ ಸುಮಾರು 5 ಲಕ್ಷ ಯೋಧರು ಉಪಯೋಗಿಸುತ್ತಿದ್ದಾರೆಂದು ಚೀನಾ ಮಿಲಿಟರಿ ಅಧಿಕಾರಿಗಳು ಅಂದಾಜುಹಾಕಿದ್ದಾರೆ. ಅದನ್ನು ಈ ರೀತಿ ಹಂಚಲಾಗಿದೆ. ಮಲಯ 5 ಡಿವಿಜನ್‌ಗಳು, ಫಿಲಿಪೈನ್ಸ್ 6 ಡಿವಿಜನ್‌ಗಳು, ಥೈಲೆಂಡು 4 ಡಿವಿಜನ್‌ಗಳು, ನ್ಯೂಗಿನಿಯಾ ಮತ್ತು ಡಚ್ ಇಂಡೀಸ್ 3 ಡಿವಿಜನ್‌ಗಳು, ಫ್ರೆಂಚ್ ಇಂಡೋ-ಚೈನಾ 2 ಡಿವಿಜನ್‌ಗಳು ಈ ರೀತಿ ವಿಂಗಡಿಸಿರುವದಾಗಿ ಹೇಳಲಾಗಿದೆ.

ಗ್ರೀಸಿಗೆ ಆಹಾರ

ಗ್ರೀಸಿನ ಪರಿಸ್ಥಿತಿ ಶೋಚನೀಯವಾಗಿದೆ ಜನರು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ ಆದಕ್ಕಾಗಿ ೮೦೦೦ ಟನ್ ಗೋಧಿಯನ್ನು ಒಂದೇ ಒಂದು ಹಡಗಿನಲ್ಲಿ ಗ್ರೀಸಿಗೆ ಕಳಿಸಲು ಬ್ರಿಟನ್ ಮತ್ತು ಅಮೆರಿಕೆಗಳು ಸಿದ್ಧವಾಗಿವೆ ಅಂತರರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆಯು ಜನರಿಗೆ ಹಂಚಬೇಕಾಗಿದೆ.

ಬಂಗಾಳಕೊಲ್ಲಿಯಲ್ಲಿ ೨ ವ್ಯಾಪಾರದ ಹಡಗುಗಳು ಮುಳುಗಿದವು

ಬಂಗಾಳ ಕೊಲ್ಲಿಯಲ್ಲಿ ಎರಡು ವ್ಯಾಪಾರದ ಹಡಗುಗಳನ್ನು ಶತ್ರುಗಳು ಮುಳುಗಿಸಿದರೆಂಬುದಾಗಿ ತಿಳಿದು ಬಂದಿದೆ. ರಕ್ಷಿಸಲ್ಪಟ್ಟವರು ಬರ್ಮಾಕ್ಕೆ ಬಂದು ಸೇರಿದ್ದಾರೆ ಅನಂತರ ವಿವರಗಳನ್ನು ಕೊಡಲಾಗುವುದೆಂದು ಅಧಿಕಾರಯುತ ಪ್ರಕಟನೆಯೊಂದು ತಿಳಿಸುತ್ತದೆ

ಜಪಾನೀಯರು ಭಾರತೀಯರಂತೆ ವೇಷ ಹಾಕಿ ಯುದ್ಧ ಮಾಡುತ್ತಿದ್ದಾರೆ

ಮಲಯದಲ್ಲಿ ಯುದ್ಧಮಾಡುತ್ತಿರುವ ಜಪಾನ್ ಸೈನಿಕರು ಅನೇಕ ಬಗೆಗಳಲ್ಲಿ ವೇಷಧರಿಸಿ ಬ್ರಿಟಿಷ್ ಸೈನಿಕರನ್ನು ಮೋಸಗೊಳಿಸಲು ಯತ್ನಿಸುತ್ತಿದ್ದಾರೆ ಭಾರತೀಯರು, ಚೀಣೀಯರು, ಮಲಯ ಸೈನಿಕರಂತೆ ಅವರು ವೇಷಗಳನ್ನು ಧರಿಸಿ, ಯುದ್ಧಮಾಡುತ್ತಿರುವುದಾಗಿ ಡೇಲಿ ಟೆಲಿಗ್ರಾಫ್ ಪತ್ರಿಕೆಯ ಸುದ್ದಿಗಾರರು ತಮ್ಮ ಪತ್ರಿಕೆಗೆ ಕೇಬಲ್ ಕಳುಹಿಸಿದ್ದಾರೆ ಗೇಮಾಸ್ ರಣರಂಗದಲ್ಲಿ ಒಂದು ಕಡೆ ಜಪಾನ್ ಸೈನಿಕರು ಭಾರತೀಯ ಯೂನಿಫಾರಂಗಳನ್ನು ಧರಿಸಿದ್ದುದು ಮಾತ್ರವಲ್ಲದೆ ಭಾರತೀಯರ ಹಾಗೆ ಮುಖಕ್ಕೆ ಬಣ್ಣ ಸಹ ಬಳಿದುಕೊಂಡಿದ್ದರೆಂದು ಹೇಳಲಾಗಿದೆ

ಸಾಲ್‌ವೀನ್ ನದಿ ಪೂರ್ವದಲ್ಲಿ ಕದನ.

ಮೌಲ್‌ಮೀನಿನಲ್ಲಿ ಆಡಳಿತವನ್ನು ಸೈನ್ಯಶಾಖೆಯವರು ವಹಿಸಿಕೊಂಡಮೇಲೆ ಅಲ್ಲಿನ ಜನರಿಗೆ ವಿಶೇಷ ಸಂಪಿಕಯುಂಟಾಗಿದೆಯೆಂದು ಅಲ್ಲಿಂದ ಬಂದವರು ಹೇಳುತ್ತಾರೆ ರಂಗೂನಿನಮೇಲೆ 28 ನೆಯ ತಾರೀಖು ಬೆಳಿಗ್ಗೆ ನಡೆದ ವಿಮಾನ ಮುತ್ತಿಗೆ ಕಾಲದಲ್ಲಿ 40 ಜಪಾನೀಸ್ ಫೈಟರುಗಳು ಭಾಗವಹಿಸಿದ್ದವೆಂದು ತಿಳಿದುಬಂದಿದೆ. ೬ ವಿಮಾನಗಳನ್ನು ನಾಶಪಡಿಸಲಾಯಿತು. ಮತ್ತಾರನ್ನು ಬಹುಶಃ ಕೆಡವಿರಬಹುದು ಸ್ವಲ್ಪ ನಷ್ಟವುಂಟಾಯಿತು ಟೆನಾಸರಿಂ ರಂಗದ ಪರಿಸ್ಥಿತಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ ಸಾಲ್‌ವೀನ್ ನದಿಯ ಪೂರ್ವದಲ್ಲಿ ಬರ್ಮಾಸೈನಿಕರಿಗೂ ಶತ್ರುಗಳಿಗೂ ಘರ್ಷಣವಾಯಿತು. ಸಾಲ್‌ವೀನ್ ನದಿಯನ್ನು ಹಲವು ಕಡೆ ದಾಟಲು ಶತ್ರುಗಳು ಪ್ರಯತ್ನಿಸುತ್ತಿರುವಂತಿದೆ. ನದಿಯು ಬಹಳ ಅಗಲವಾಗಿದೆ ದಾಟಲು ಹೆಚ್ಚಿನ ಸೌಕರ್ಯಗಳಿಲ್ಲ. ಆದ್ದರಿಂದ ಜಪಾನರು ಸುಲಭವಾಗಿ ನದಿಯನ್ನು ದಾಟಲು ಸಾಧ್ಯವಿಲ್ಲವೆಂದು ಹೇಳಲಾಗಿದೆ.

ನಾಜೀ ಮೂಲಕ್ಕೆ ವಿಪತ್ತು

ರಷ್ಯನ್ ಸೇನೆಗಳು ವೆಲೀಕಿ-ಲೂಕಿಯಿಂದ ದಕ್ಷಿಣಕ್ಕೆ ನುಗ್ಗುತ್ತ ಜರ್ಮನರ ಬಲಯುತಮೂಲವಾದ ಸ್ಮೊಲೆನ್ಸ್ಕ್‌ಗೆ ವಿಪತ್ತನ್ನುಂಟುಮಾಡಿವೆ ವೆಲಿಕಿಯೇಲೂಕಿ ಎಂಬುದು ರಷ್ಯನರ ವಶವಾದರೆ ಲೆನಿನ್‌ಗ್ರಾಡ್ ಸುತ್ತ ಇರುವ ವಾನ್‌ಲೀಬ್‌ರವರ ಸೇನೆಗೂ ಮತ್ತು ಸ್ಮೊಲೆನ್ಸ್ಕ್‌ನಲ್ಲಿರುವ ಹರ್ ಹಿಟ್ಲರರ ಮುಖ್ಯ ಕಚೇರಿಗೂ ಸಂಬಂಧವು ತಪ್ಪಿಹೋಗುತ್ತದೆ ಆದರೆ ಹರ್ ಹಿಟ್ಲರರು ಈಗಾಗಲೇ ಹಲವು ಮೈಲಿಗಳ ದೂರ ಮಿನ್ಸ್ಕ್ ಕಡೆಗೆ ಸರಿದಿದ್ದಾರೆಂದು ಅನಿಶ್ಚಿತವಾದ ಸುದ್ದಿಗಳಿಂದ ತಿಳಿದುಬರುತ್ತದೆ. ಖಾರಕೋವ್ ಬಳಿ ಉಗ್ರಕದನ ಆಗುತ್ತಿದೆಯೆಂಬ ಜರ್ಮನ್ ಸುದ್ದಿಗಳನ್ನು ರಷ್ಯನರು ಸ್ವೀಕರಿಸಿಲ್ಲ. ಇದು ಸುಳ್ಳಲ್ಲದಿರಬಹುದು. ಆದರೆ ಅದನ್ನು ಹಿಡಿಯುವ ತನಕ ಹೊಡೆದಾಟದ ಸುದ್ದಿ ಕೊಡಬಾರದೆಂದು ರಷ್ಯನರು ಹಾಗೆ ಮಾಡುತ್ತಿರಬೇಕು.

ಲಂಡನ್ ನಗರದಲ್ಲಿ ಭಾರತ ದಿನಾಚರಣೆ

ಲಂಡನ್ ನಗರದಲ್ಲಿ 26 ನೆ ತಾರೀಖಿನ ಭಾರತದ ದಿನಾಚರಣೆಯನ್ನು ನೆರವೇರಿಸಲಾಯಿತು ಕಿಂಗ್ಸ್‌ವೇ ಹಾಲ್‌ನಲ್ಲಿ ಸಭೆ ಸೇರಿತ್ತು. ಶ್ರೀಗಳಾದ ಸೋರೇನ್‌ಸನ್, ಎಡ್ವರ್ಡ್ ಥಾಂಸನ್, ಏಸ್ ಓಡೇನಿಸ್, ರೆಜಿನಾಲ್ಡ್ ರೆಡ್, ಕೃಷ್ಣಮೆನನ್ ಮತ್ತು ಪ್ರಿವರ್ಸ್ ಇವರುಗಳು ಭಾಷಣಮಾಡಿದರು. ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೆಂಬ ತತ್ವವನ್ನು ಒಪ್ಪಿಕೊಂಡು ಅದನ್ನು ಪ್ರಕಟಿಸಬೇಕೆಂದೂ ತಕ್ಷಣ ಭಾರತದ ಮಹಾಸಂಸ್ಥೆಯೆನಿಸಿದ ಕಾಂಗ್ರೆಸಿನೊಡನೆ ಸಂಧಾನ ನಡೆಸಬೇಕೆಂದೂ ಒತ್ತಾಯಪಡಿಸುವ ನಿರ್ಣಯವಾಯಿತು ಭಾರತವು ತನ್ನ ಬಲದ ಮೇಲೆ ತಾನು ನಿಂತು ಶಕ್ತಿ ಸಾಮರ್ಥ್ಯವನ್ನು ಗಳಿಸಿ ಪೂರ್ವಾರ್ಧಗೋಳದಲ್ಲಿ ಚೀಣಾ ಮತ್ತು ರಷ್ಯ ದೇಶಗಳೊಡನೆ ಸಹಕರಿಸಿ ಕೆಲಸ ಮಾಡಲು ಅದಕ್ಕೆ ಅವಕಾಶ ಕೊಡಬೇಕೆಂದು ಭಾಷಣಕಾರರು ಸೂಚಿಸಿದರು

ಬ್ರಿಟನ್ನಿಗೆ ಅಮೆರಿಕದ ಸೇನೆ

ಅಮೆರಿಕನ್ ಕಾಲಾಳು ಪಡೆಯ ಸಾವಿರಾರು ಮಂದಿ ಸಿಪಾಯಿಗಳು ಬ್ರಿಟಿಷ್ ದ್ವೀಪಕ್ಕೆ ಬಂದಿಳಿದರು ಫಿರಂಗಿಗಳನ್ನುಸಹ ಅವರು ತಂದಿದ್ದಾರೆ ಸರ್ ಆರ್ಚಿಬಾಲ್ಡ್ ಸಿಂಕ್ಲೇರರವರು ಅವರಿಗೆಲ್ಲ ಬ್ರಿಟಿಷ್ ಸರಕಾರದ ಪರವಾಗಿ ಸ್ವಾಗತ ನೀಡುತ್ತ "ನೀವೆಲ್ಲ ಸುರಕ್ಷಿತವಾಗಿ ಇಲ್ಲಿಗೆ ಬಂದಿಳಿದುದರಿಂದ ವಿಶ್ವ ಸಂಗ್ರಾಮದಲ್ಲಿ ಹೊಸ ಪಟ್ಟವನ್ನು ಮುಟ್ಟಿದಂತಾಗಿದೆ ಹಿಟ್ಲರನಿಗೆ ಇದು ಅನಿಷ್ಟಕಾರಿಯೆಂಬುದರಲ್ಲಿ ಸಂಶಯವಿಲ್ಲ ಇದು ಜ॥ ಟೋಜೋರವರ ಮನಸ್ಸಿನಮೇಲೆ ಸಹ ಪರಿಣಾಮವುಂಟುಮಾಡಿದೆ" ಎಂದರು ಸೈನಿಕರೆಲ್ಲ ಸುಮಾರು ೨೦ ವರ್ಷದ ಕಟ್ಟಾಳುಗಳು ಅಧಿಕಾರಿಗಳನ್ನು ಬಿಟ್ಟರೆ ಕಳೆದ ಮಹಾ ಯುದ್ಧದಲ್ಲಿ ಭಾಗವಹಿಸಿದ್ದವರು ಅಲ್ಪಮಂದಿ ಇದ್ದಾರೆ ಅವರು ಐರಿಷ್ ತೀರವನ್ನು ಕಾಣುವವರೆಗೆ ಎಲ್ಲಿಗೆ ಕರೆದೊಯ್ಯಲ್ಪಡುವರೆಂಬುದೇ ಗೊತ್ತಿರಲಿಲ್ಲ ಅಮೆರಿಕದ ನಾನಾಭಾಗಗಳಿಂದ ಈ ಸೈನಿಕರನ್ನು ಆರಿಸಿ ಕಳಿಸಲಾಗಿದೆ

೬೦ ವರ್ಷಗಳೊಳಗಿರುವವರೆಲ್ಲ ಹೆಸರು ಕೊಡಬೇಕು

ಆಸ್ಟ್ರೇಲಿಯಾದಲ್ಲಿ ಜನಬಲವನ್ನು 'ರೆಜಿಸ್ಟರ್' ಮಾಡುವ ಕಾರ್ಯವನ್ನು ತ್ವರೆಗೊಳಿಸುತ್ತಿರಲಾಗಿದೆ ೬೦ ವಯಸ್ಸಿನೊಳಗಿನವರೆಲ್ಲರ ಹೆಸರುಗಳನ್ನು ನಾಲ್ಕು ವಾರಗಳೊಳಗೇ 'ರೆಜಿಸ್ಟರ್' ಮಾಡಿಕೊಳ್ಳಬೇಕೆಂಬುದಾಗಿ ಆಜ್ಞೆ ಮಾಡಲಾಗಿದೆ ಆ ಮೇಲೆ ಸ್ತ್ರೀಯರ ಹೆಸರುಗಳನ್ನು 'ರೆಜಿಸ್ಟರ್' ಮಾಡಿಕೊಳ್ಳಲಾಗುತ್ತದೆ ಆಸ್ಟ್ರೇಲಿಯಾ ತೀರಗಳಲ್ಲಿ "ಬ್ಲಾಕ್‌ಔಟ್' ವ್ಯವಸ್ಥೆಯ ಏರ್ಪಾಟು ನಡೆಯುತ್ತಿದೆ

ಆಸ್ಟ್ರೇಲಿಯದ ಕರ್ತವ್ಯ

ಆಸ್ಟ್ರೇಲಿಯದ ಮಹಾಪ್ರಧಾನರಾದ ಶ್ರೀ ಕರ್ಟಿನ್‌ರವರು ತಮ್ಮ ಪ್ರಜೆಗಳನ್ನು ಕುರಿತು—

' ಜ॥ ವೇವೆಲ್‌ರವರ ಕಚೇರಿಯಲ್ಲಿ ಆಸ್ಟ್ರೇಲಿಯನರಿಗೆ ಸರಿಯಾದ ಪ್ರಾತಿನಿಧ್ಯ ದೊರಕಿಸಲೋಸುಗ ಈಗ ಸಂಧಾನ ನಡೆಯುತ್ತಿದೆ. ಪೆಸಿಫಿಕ್ ಸಾಗರದಲ್ಲಿ ಬಹಳ ಮುಖ್ಯಸ್ಥಾನವನ್ನು ಆಕ್ರಮಿಸಿರುವಂತಹ ಆಸ್ಟ್ರೇಲಿಯದ ಅಭಿಪ್ರಾಯವನ್ನು ಶ್ರೀ ಚರ್ಚಿಲ್ ಮತ್ತು ಶ್ರೀ ರೂಜ್‌ವೆಲ್ಟ್ ಇವರ ಮುಂದೆ ಇಡಲಾಗಿದೆ ಆಸ್ಟ್ರೇಲಿಯಾಕ್ಕೆ ಸಂಬಂಧಪಟ್ಟ ವಿಚಾರಗಳಲ್ಲೆಲ್ಲ ಆಸ್ಟ್ರೇಲಿಯನರ ವಾಣಿ ಕೇಳಿ ಬರಬೇಕು ನಮ್ಮ ಭವಿಷ್ಯವನ್ನು ರೂಪುಗೊಳಿಸುವುದರಲ್ಲಿ ನಮ್ಮ ಮಾತಿಗೆ ಪ್ರಾಧಾನ್ಯವಿರಬೇಕು ಆಸ್ಟ್ರೇಲಿಯವು ಆಸ್ಟ್ರೇಲಿಯನರಿಗಾಗಿ ಇದು ಬಿಳಿ ಆಸ್ಟ್ರೇಲಿಯಾ ದೇವರ ದಯನಿದ್ದರೆ ಅದನ್ನು ನಾವು ಹಾಗೆಯೇ ಉಳಿಸುವೆವು ಇದುವರೆಗೆ ಇನ್ನೊಬ್ಬರ ಕ್ರೂರತನವನ್ನು ಎದುರಿಸಬೇಕಾಗಿ ಬಂದಾಗ ಅವರ ಸಹಾಯಕ್ಕೆ ಆಸ್ಟ್ರೇಲಿಯಾವು ಹೋಗುತ್ತಿತ್ತು ಆದರೆ ಈಗ ತನ್ನ ಸ್ವಂತ ಭೂಮಿಗೆ ಬಂದಿರುವ ವಿಪತ್ತನ್ನದು ನಿವಾರಿಸಬೇಕಾಗಿದೆ ಶತ್ರುಗಳು ನಮ್ಮ ದ್ವಾರದ ಬಳಿ ಬಂದು ಸಿಂಹನಾದ ಮಾಡುತ್ತಿದ್ದಾರೆ ಆಸ್ಟ್ರೇಲಿಯವೀಗ ಸಂಗ್ರಾಮವಲಯದೊಳಕ್ಕೆ ಬಂದಿದೆ. ನಮ್ಮ ಭೂಮಿ, ಹೆಂಗಸರು ಮಕ್ಕಳಿಗಾಗಿ ನಾವೀಗ ಹೋರಾಡಬೇಕಾಗಿ ಬಂದಿದೆ ಆಸ್ಟ್ರೇಲಿಯಾದಲ್ಲಿ ಐಕಮತ್ಯವನ್ನು ಸ್ಥಾಪಿಸಿ ಆಸ್ಟ್ರೇಲಿಯನರ ಪ್ರಭುತ್ವವನ್ನೇ ಉಳಿಸಲೋಸುಗ ಈಗ ಎಲ್ಲರನ್ನೂ ಯುದ್ಧಕ್ಕೆ ಸನ್ನದ್ಧರನ್ನಾಗಿ ಮಾಡುತ್ತಿರಲಾಗಿದೆ. ಕೆಲಸ ಅಥವಾ ಹೊಡೆದಾಟ ಇವೆರಡೇ ಈಗಿನ ಉದ್ಯೋಗ ಪ್ರತಿಯೊಬ್ಬ ಸಿವಿಲಿಯನ್ ಕೂಡ ಯುದ್ಧದಲ್ಲಿ ಭಾಗವಹಿಸಿದ್ದಾನೆ ಆಸ್ಟ್ರೇಲಿಯವು ನಷ್ಟವನ್ನು ಅನುಭವಿಸಬೇಕಾಗುವುದರಲ್ಲಿ ಏನೇನೂ ಸಂಶಯವಿಲ್ಲ. ನಮ್ಮೆಲ್ಲರಿಗು ಒದಗಿರುವ ಸಂಕಟದಲ್ಲಿ ನಾವು ಏಕೋದ್ದಿಶ್ಯದಿಂದ ಕೆಲಸಮಾಡೋಣ" ಎಂಬುದಾಗಿ ತಿಳಿಸಿದ್ದಾರೆ.

ಆಸ್ಟ್ರೇಲಿಯಾ ಮಹಾಪ್ರಧಾನರ ವಿಮರ್ಶೆ.

ಆಸ್ಟ್ರೇಲಿಯದ ತಾತ್ಕಾಲಿಕ ಮಹಾಪ್ರಧಾನರಾದ ಶ್ರೀ ಫೋರ್ಡ್‌ರವರು ಪೌರಾತ್ಯದ ಘಟನೆಗಳನ್ನು ಕುರಿತು ವಿಮರ್ಶಿಸುತ್ತ "ಪೆಸಿಫಿಕ್ ಸಾಗರದ ಪರಿಸ್ಥಿತಿಯಲ್ಲಾಗಲಿ, ದೂರ ಪ್ರಾಚ್ಯದ ಪರಿಸ್ಥಿತಿಯಲ್ಲಾಗಲಿ ಹೆಚ್ಚು ಕೆಡುಕಾದ ಬದಲಾವಣೆಗಳಾಗಿಲ್ಲ ಇನ್ನು ಉಗ್ರವಾದ ವರ್ತಮಾನಗಳೇ ಬರುತ್ತಿದ್ದರೂ ಸಹ ಪರಿಸ್ಥಿತಿ ಹತೋಟಿಯಲ್ಲಿದೆ. ಕೆಲವು ಕ್ಷೇತ್ರಗಳಲ್ಲಿ ಜಪಾನರು ಹಿಡಿದಿರುವ ಸ್ಥಾನಗಳನ್ನು ಬಲಪಡಿಸುವರೆಂದು ನಾವು ನಿರೀಕ್ಷಿಸಬಹುದಾಗಿದೆ ಆಸ್ಟ್ರೇಲಿಯದ ಮೂಲಭೂಮಿಯಲ್ಲಿಯೇ ಜಪಾನರು ತಾತ್ಕಾಲಿಕವಾಗಿ ಕಾಲೂರಬಹುದು. ಇದೊಂದುವೇಳೆ ಸಂಭವಿಸಿದರೂ ಆಸ್ಟ್ರೇಲಿಯದ ಆಸೆ ಮುಗಿದಂತೆಯೇ ಎಂದು ಭಾವಿಸಬೇಕಾಗಿಲ್ಲ ಶತ್ರುವನ್ನು ಎದುರಿಸಲು ನಾವು ಎಷ್ಟೇ ಪ್ರಯತ್ನ ಮಾಡಿದರೂ ನಾವು ಕಷ್ಟತಮವಾದ ಪರಿಸ್ಥಿತಿಯನ್ನು ಎದುರಿಸಬೇಕಾಗುವುದೆಂಬುದೇನೋ ನಿಜ ಎಂತಹ ಪರಿಸ್ಥಿತಿಯೇ ಬರಲಿ ಆಸ್ಟ್ರೇಲಿಯವು ಜಗ್ಗುವುದಿಲ್ಲ. ಸಹಾಯವು ಬರಲಿ, ಬರದೇ ಹೋಗಲಿ ಅದು ಯುದ್ಧವನ್ನು ಕಟ್ಟಕಡೇವರೆಗೆ ಮುಂದುವರಿಸಿಯೇ ತೀರುವುದು

ಜಪಾನರ ಮುತ್ತಿಗೆಯನ್ನು ಎದುರಿಸಲು ಮಿತ್ರರಾಷ್ಟ್ರಗಳು ಆಸ್ಟ್ರೇಲಿಯಾಕ್ಕೆ ಸಹಾಯ ನೀಡಬೇಕು ಇತರ ಸ್ಥಾನಗಳ ರಕ್ಷಣೆಗೆ ಚ್ಯುತಿಯುಂಟಾಗದ ರೀತಿಯಲ್ಲಿ ಈ ಕಾರ್ಯವನ್ನು ಮಾಡಬಹುದಾಗಿದೆ ಜಪಾನರ ಮನಸ್ಸಿನ ಆಳವನ್ನು ಆಸ್ಟ್ರೇಲಿಯದಲ್ಲಿ ಅರ್ಥಮಾಡಿಕೊಂಡಿರುವಷ್ಟು ಮಟ್ಟಿಗೆ ಇನ್ನೆಲ್ಲೂ ಅರ್ಥಮಾಡಿಕೊಂಡಿಲ್ಲವೆಂದು ನಾವು ತಿಳಿಯಬೇಕಾಗಿದೆ ಆಕ್ಸಿಸ್ ಸಂಗ್ರಾಮೋದ್ದಿಷ್ಟಕ್ಕೂ ಜಪಾನಿನ ಉದ್ದಿಷ್ಟಕ್ಕೂ ಎಷ್ಟರಮಟ್ಟಿಗೆ ಸಮಾನವಾದ ಸಂಬಂಧವಿದೆಯೆಂಬುದನ್ನು ಸಹ ಇತರ ದೇಶಗಳಲ್ಲಿ ಚೆನ್ನಾಗಿ ಗ್ರಹಿಸಿಲ್ಲ" ಎಂದರು

ಸ್ವೀಕಾರ.

ಶಿವಮೊಗ್ಗಾ ಟವನ್‌ನಲ್ಲಿ ವಾಸವಾಗಿರುವ ಮ॥ ರಾ॥ ಸ್ವ್ಯಾಮತಿ ಚನ್ನಪ್ಪಶೆಟ್ಟರವರ ಕುಮಾರ ಗಂಗಾಧರಪ್ಪ ಶ್ರೇಷ್ಠಿಯವರ ದ್ವಿತೀಯ ಪುತ್ರರತ್ನವು ಮೂಲಾನಕ್ಷತ್ರ ಪ್ರಥಮಚರಣದಲ್ಲಿ ಜನಿಸಿದ ಪ್ರಯುಕ್ತ ದೋಷನಿವಾರಣಾರ್ಥವಾಗಿ ನೆರವೇರಿಸಿದ ಗುರುಪಾದಪೂಜಾ ಶಾಂತಿಕರ್ಮಗಳ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ ೧ ರೂ.ಯು ಗುಬ್ಬೀ ಶಿವಕಥಾಪಂಡಿತ ವೇ॥ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ

ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿರುವ ಗ್ರಂಥಿಗೆ ಅಂಗಡಿ ಮ॥ ರಾ॥ ಸೂಲ್ಯಂಟೆ ಸೆಟ್ರು ಚನ್ನಬಸಪ್ಪನವರ ಸಹೋದರ ನೀಲಕಂಠಪ್ಪನವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನಿಗೂ ಮ॥ ರಾ॥ ಎಮ್. ಎಸ್ ಚಂದ್ರಶೇಖರಪ್ಪನವರ ಕುಮಾರ ಚಿ॥ ರಾ॥ ಶಿವಣ್ಣನೆಂಬ ವರನಿಗೂ ನಡೆದ ವಿವಾಹಕಾಲದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ ೧ ರೂ ಮಹಂತಿನಮಠದ ವೇ॥ ರಾ॥ ಸಿ. ಸಿದ್ದಪ್ಪನವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಜಿ॥ ರಾಯರಹುಬ್ಬಳ್ಳಿಯಲ್ಲಿದ್ದ ಮ॥ ರಾ॥ ಬಸವಲಿಂಗಪ್ಪ ಕೋಂ. ಸೋಮಪ್ಪಾ ಸಿಂದಗಿ ಸಾ॥ ಹುಬ್ಬಳ್ಳಿ ಇವರು ಕೈಲಾಸವಾಸಿಗಳಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ ೧ ರೂಪಾಯಿಯು ಹುಬ್ಬಳ್ಳಿ ಹಿರೇಮಠದ ವೇ॥ ಸೋಮನಾಥಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಪೋಷಕ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

[೩ನೆಯ ಪುಟದಿಂದ ಮುಂದುವರಿದುದು]

ಜರುಗಿಸಬೇಕೆಂದು ಮುನ್ನಾದಿವಸ ಊರಲ್ಲೆಲ್ಲ ಡಂಗುರದಿಂದ ಪ್ರಕಟಪಡಿಸಿ ಮೇಲ್ಕಂಡ ಪುಣ್ಯತಿಥಿಯಲ್ಲಿ ಊರನ್ನೆಲ್ಲ ದೇವಾಲಯಗಳು ಮೊದಲುಗೊಂಡು ತಳಿರುತೋರಣಗಳಿಂದ ಅಲಂಕರಿಸಿ ಸರ್ವರು ಗುರುಶಾಂತಿ ದೈವಶಾಂತಿಯಂ ಜರುಗಿಸಿ ಬಹು ವೈಭವದಿಂದ ತಮ್ಮ ತಮ್ಮ ಉದ್ಯೋಗಗಳನ್ನೆಲ್ಲ ಬಿಟ್ಟು ಸಂತೋಷಸಾಗರದಲ್ಲಿ ನೃತ್ಯರಾಗಿ ಸಂಜೆಯ ೩ ಘಂಟೆಯ ಸುಮಾರಕ್ಕೆ ಊರೊಳಗಿನ "ಉಪಸ್ತ ಸಮುದಾಯವೆಲ್ಲ ಮುಖ್ಯ ಕೇಂದ್ರಸ್ಥಾನವಾದ ಶ್ರೀ ವೀರಭದ್ರದೇವರ" ಗುಡಿಯಲ್ಲಿ ಕೂಡಿ ಪಲ್ಲಕ್ಕಿ ಉತ್ಸವದೊಡನೆ ಸಕಲ ವಾದ್ಯವೈಭವಗಳೊಂದಿಗೆ ಶ್ರೀ ಗುರು ಪೀಠಾಧಿಪತಿಗಳವರ ಭಾವಚಿತ್ರವನ್ನು ಪಂಚಾಚಾರ್ಯರ ಜಯಘೋಷದಿಂದಲೂ ನಾಲ್ಕಾರು ಭಜನೆ ಮೇಳಗಳೊಂದಿಗೆ ಮೆರವಣಿಗೆಮಾಡಿ ಕಡೆಗೆ ಮೊದಲಿನ ಸ್ಥಾನವಾದ ಶ್ರೀ ವೀರಭದ್ರದೇವರ ಗುಡಿಗೆ ಬಂದು ಮೊದಲಿನಂತೆ ಸರ್ವರು ಆನಂದಪರದಿಂದ ಒಂದು ಸಭೆಯನ್ನು ಸೇರಿಸಿದರು ಸಭೆಗೆ ಪಟೇಲ ಕುಲಕರ್ಣಿ ಸಟ್ಟಿ ಸಾವಕಾರ ಶಾಲಾಧ್ಯಾಪಕರು ಮೊದಲುಗೊಂಡು ಯಾವತ್ತರು ಕೂಡಿದ್ದರು ಅವರಲ್ಲಿ ವೇ|| ಚಂದ್ರಶೇಖರಶಾಸ್ತ್ರಿಗಳು ಇವರ ಆಜ್ಞಾನೇರಗೆ ಕೆಲಕೆಲವರ ಭಾಷಣಗಳ ನಂತರ ಇದೇ ಗ್ರಾಮದ ಸ್ಥಾನಿಕ ಶಾಲೆಯ ಅಧ್ಯಾಪಕರು ಮಿ|| ಘ ಶಿರಸ್ತ್ಯೆಂಬವರು ಬಾಲವೃದ್ಧ ಮೊದಲುಗೊಂಡ ಜಗನ್ನಿನ್ತ್ರಂದಕ್ಕೂ ಸಕಲ ಮನಸ್ಸಿನಲ್ಲಿ ಒಳ್ಳೇ ಪರಿಣಾಮವಾಗುವಂತೆ ಗುರುಭಕ್ತಿ ವಿಷಯಕ ಭಾಷಣ ಮಾಡಿದರು ಇದರಲ್ಲಿ ಪೀಠಾಧಿಪತಿಗಳ ಮೂಲ ಉತ್ಪತ್ತಿಯ ವಿಷಯವನ್ನು ಮತ್ತು ಗುರುವಿನ ಮಹಿಮೆಯನ್ನು ಗುರುಭಕ್ತನ ವಿಷಯಕ್ಕೆ ಕೆಲಕೆಲವು ಉದಾಹರಣೆಗಳೊಂದಿಗೆ ಚನ್ನಾಗಿ ಮನಸ್ಸಿಗೆ ನಾಟುವಂತೆ ವರ್ಣಿಸಿ ಸರ್ವರೂ ಗುರು ಸೇವಾತತ್ಪರರಾದರೆ ದೊರೆಯುತಕ್ಕ ಫಲವನ್ನು ಸೂಚಿಸಿದರು ಈ ಪ್ರಕಾರ ತಮ್ಮ ಭಾಷಣವನ್ನು ಮುಗಿಸಿದನಂತರ ಸಭೆಯಲ್ಲಿ ಇವೊತ್ತಿನಿಂದ ಕ್ರಮವಾಗಿ ಜರಗತಕ್ಕ ಸರ್ವಸೀರಾಧಿಕಾರಿಗಳ ಜಯಂತ್ಯೋತ್ಸವಗಳನ್ನು ಮತ್ತು ಪುಣ್ಯತಿಥಿಗಳನ್ನು ಒಳ್ಳೇ ಭಕ್ತಿಪೂರ್ವಕವಾಗಿ ಈ ಗ್ರಾಮದಲ್ಲಿ ತಪ್ಪದೆ ಜರಗಿಸುತ್ತ ಹೋಗತಕ್ಕದ್ದೆಂದು ಪಾಸುಮಾಡಿದರು ಈ ಪ್ರಕಾರ ನಿರ್ಣಯವಾಗಿ ಸಭಾವಿಸರ್ಜನವಾಗುವ ಸಮಯಕ್ಕೆ ಸರ್ವರು ಗುರುಪ್ರಸಾದವನ್ನು ಸ್ವೀಕರಿಸಿ ಆನಂದೋಲ್ಲಾಸದಿಂದ ತಮ್ಮ ತಮ್ಮ ಬಿಡಾರಗಳಿಗೆ ತೆರಳಿದರು ಇದರಂತೆ ನಮ್ಮ ಭಾರತ ಮಾತೆಯ ಸೇವಾತತ್ಪರರಾದ ಸರ್ವ ವೀರಶೈವ ಮಹನೀಯರು ಆಚರಿಸುತ್ತ ಹೋಗುವರೆಂದು ಆಶಿಸುವ,

ಓರ್ವ ಗುರುಭಕ್ತ

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಗುರುಪಾದಪೂಜೋತ್ಸವವೂ— ಶಾಂತಿಕರ್ಮವೂ

ಶಿವಮೊಗ್ಗಾ ಟೌನಿನಲ್ಲಿ ಹಾಲೀ ವಾಸವಾಗಿರುವ ವಯೋವೃದ್ಧರೂ, ಲೋಕಾನುಭವಪ್ರಸಿದ್ಧರೂ, ಧರ್ಮಾವಲಂಬಿಗಳೂ, ಉದಾರಮತಿಗಳೂ ಆದ ಶ್ರೀಗಂಧ ನ್ಯಾಮತಿ ಚನ್ನಪ್ಪಶೆಟ್ಟರವರು ತಮ್ಮ ಕುಮಾರ ಗಂಗಾಧರಪ್ಪಶ್ರೇಷ್ಠಿಯವರ ದ್ವಿತೀಯ ಪುತ್ರರತ್ನವು ಜ್ಯೇಷ್ಠಾಂತ್ಯಪಾದಾನಕ್ಷತ್ರ ಪ್ರಥಮಚರಣದಲ್ಲಿ ಜನಿಸಿದ ಪ್ರಯುಕ್ತ ತದ್ದೋಷನಿವಾರಣಾರ್ಥವಾಗಿ ಶ್ರೀಮನ್ನಹಲೀ ಬೃಹನ್ಮಠದ ಪಟ್ಟಾಧ್ಯಕ್ಷರಾದ ಶ್ರೀಗುರು ನಾಗಾರ್ಜುನ ಶಿವಾಚಾರ್ಯಸ್ವಾಮಿಗಳವರನ್ನು ದಯಮಾಡಿಸಿಕೊಂಡು ಬಂದು ಶ್ರೀಗಳವರಿಂದ ತಾ|| ೨೫ ೧ ೧೯೪೨ನೇ ಭಾನುವಾರದಿಂದ ೩ ದಿನಗಳವರೆಗೂ ಶ್ರೀ ರುದ್ರಾಭಿಷೇಕವನ್ನು ನಡೆಸಿದರು ಅನಂತರ ಮಂಗಳವಾರ ಪ್ರಾತಃಕಾಲ ಶ್ರೀಗುರು ಪಾದಪೂಜೆಯು ವೈಭವದಿಂದ ನೆರವೇರಿದ ಬಳಿಕ ಮಧ್ಯಾಹ್ನ ಗೋಮುಖಪ್ರಸವಶಾಂತಿಯೂ, ನವಗ್ರಹಾರಾಧನೆಯೂ, ಹಾಗೂ ಭಕ್ತಮಾಹೇಶ್ವರ ಸಂತರ್ಪಣೆಯೂ ಸಹ ವಿಧ್ಯುಕ್ತವಾಗಿ ವಿತರಣೆಯಿಂದ ಜರುಗಿ ಗಣವರ್ಯರಿಗೆ ದಕ್ಷಿಣಾಪೂರ್ವಕ ಭೂರಿದಾನಗಳನ್ನಿತ್ತನಂತರ ಪಂಚಾಚಾರ್ಯಪ್ರಭಾ ಪೋಷಣಾರ್ಥವಾಗಿ ೧ ರೂಪಾಯಿಯು ವೇ|| ಗುಬ್ಬೀ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರ ವಶಕ್ಕೆ ಕಾರ್ಯಕರ್ತೃಗಳಿಂದ ಸಮರ್ಪಿಸಲ್ಪಟ್ಟಿತು ಈ ಸಮಾರಂಭಕ್ಕೆ ಪರಸ್ಥಳದ ಲೌಕಿಕ ವೈದಿಕ ಮಹನೀಯರೂ ಬಂಧುಮಿತ್ರರೂ ವಿಶೇಷವಾಗಿ ಆಗಮಿಸಿದ್ದರು

ಓರ್ವ ಗುರುಪದಕಿಂಕರ

ಬೆಂಗಳೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸ್ವೀಕಾರ

ಬೆಂಗಳೂರಿನಲ್ಲಿರುವ ಅಪ್ಪಾಜಪ್ಪಂಡ ಶೆಟ್ರು ಸಂಗಪ್ಪನವರ ಪುತ್ರಿ ಚಿ|| ಸೌ|| ಸರ್ವಮಂಗಳಮ್ಮನನ್ನು ಅರಸೀಕೆರೆಯಲ್ಲಿರುವ ಬ್ಯಾಡಗಿ ಚನ್ನವೀರಪ್ಪನವರ ಪುತ್ರ ಚಿ|| ಕೊಟ್ರಬಸಪ್ಪನವರಿಗೆ ಕೊಟ್ಟು ತಾ|| ೧೨ ೧ ೪೧ರಲ್ಲಿ ನಡೆದ ವಿವಾಹ ಕಾಲದಲ್ಲಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಫಂಡಿಗಾಗಿ ಕೊಟ್ಟ ರೂ ೩-೦-೦ ಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಲಾಯಿತು

ಬೆಂಗಳೂರು ಸಿಟಿ ವಿಶ್ವೇಶ್ವರಪುರದಲ್ಲಿ ವಾಸವಾಗಿರುವ ಗ್ರಂಥಿಗೆ ಅಂಗಡಿ ಗುರುಸಿದ್ಧಪ್ಪನವರ ಮೊಮ್ಮಗಳು ಚಿ|| ಸೌ|| ಸೌಭಾಗ್ಯ ಎಂಬ ವಧುವನ್ನು ಚಿ|| ರಾ|| ಬಸವರಾಜಪ್ಪನೆಂಬ ವರನಿಗೆ ಕೊಟ್ಟು ತಾ|| ೧೩ ೬ ೪೧ರಲ್ಲಿ ನಡೆದ ವಿವಾಹ ಕಾಲದಲ್ಲಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಫಂಡಿಗಾಗಿ ಕೊಟ್ಟ ರೂ ೧ ೦ ೦ ಯನ್ನು ವಂದನಾಪೂರ್ವಕವಾಗಿ ಸ್ವೀಕರಿಸಲಾಯಿತು

ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿ ವಾಸವಾಗಿರುವ ಗ್ರಂಥಿಗೆ ಅಂಗಡಿ ಸೊಲ್ಲಾಪುರಿ ಸೆಟ್ರು ಚನ್ನಬಸಪ್ಪನವರ ಸಹೋದರ ನೀಲಕಂಠಪ್ಪನವರ ಪುತ್ರಿ ಚಿ|| ಸೌ|| ಪಾರ್ವತಮ್ಮನಿಗೂ, ಮ|| ರಾ|| ಎಂ ಎಸ್ ಚಂದ್ರಶೇಖರಪ್ಪನವರ ಕುಮಾರ ಚಿ|| ರಾ|| ಶಿವಣ್ಣನೆಂಬ ವರನಿಗೂ ತಾ|| ೧೮ ೬ ೪೧ ರಲ್ಲಿ ನಡೆದ ವಿವಾಹ ಕಾಲದಲ್ಲಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಫಂಡಿಗಾಗಿ ಕೊಟ್ಟ ರೂ ೧ ೦ ೦ ನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದೆ

ಹರಿಹರದ ಭಿಕ್ಷಾವರ್ತಿ ಮಠದ ವೇ|| ಸಿದ್ಧಲಿಂಗಯ್ಯನವರ ಪುತ್ರಿ ಚಿ|| ಸೌ|| ದಾಕ್ಷಾಯಣಿಯಮ್ಮನನ್ನು ಹರಪನಹಳ್ಳಿ ಎಮ್ಮಿಗನೂರು ಸೂತ್ರವರ್ತಿಗಳಾದ ಹಿರಿಯವ್ವನಹಳ್ಳಿ ಮಠದ ವೇ|| ಗುರುಸಿದ್ಧಯ್ಯನವರ ಜ್ಯೇಷ್ಠಪುತ್ರ ಮುಪ್ಪಿನಯ್ಯನೆಂಬ ವರನಿಗೆ ಕೊಟ್ಟು ತಾ|| ೨೨ ೧ ೪೨ ರಲ್ಲಿ ನಡೆದ ವಿವಾಹ ಕಾಲದಲ್ಲಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಫಂಡಿಗಾಗಿ ಕೊಟ್ಟ ರೂ ೧ ೦-೦ ನ್ನು ವಂದನಾಪೂರ್ವಕವಾಗಿ ಸ್ವೀಕರಿಸಲಾಗಿದೆ

ಸೆಕ್ರೆಟರಿ

ಪೈರೆತ್ರಮ್ ಎಂಬ ಗಿಡದ ವ್ಯವಸಾಯ.

ಆಧುನಿಕ ವ್ಯವಸಾಯ ಕ್ರಮಗಳನ್ನನುಸರಿಸುತ್ತಿರುವ ರೈತರು ಮತ್ತು ಆರೋಗ್ಯ ಇಲಾಖೆಯವರು ಸಂಸ್ಥಾನದ ಮಲೇರಿಯಾ ರೋಗನಿವಾರಣಾರ್ಥವಾಗಿ ಕೈಗೊಂಡಿರುವ ವಿಷಯಗಳು ಮತ್ತು ಜನರ ಜೀವನದ ಮಟ್ಟವು ಹೆಚ್ಚಿರುವುದರ ಪರಿಣಾಮವಾಗಿ ಬೆಳೆಗಳನ್ನು ನಾಶಮಾಡುವ ವಿಷಕ್ರಿಮಿಗಳನ್ನು ಕೊಲ್ಲುವ ಹಲವು ಬಗೆಯ ಕ್ರಿಮಿ ನಾಶಕವಸ್ತುಗಳಿಗೆ ಭಾರತದಲ್ಲಿ ಈಗ ಬಹಳ ಹೆಚ್ಚಿನ ಆವಶ್ಯಕತೆಯು ಕಂಡುಬಂದಿದೆ ಸದ್ಯದಲ್ಲಿ ನಮಗೆ ಬೇಕಾದ ಕ್ರಿಮಿನಾಶಕ ವಸ್ತುಗಳನ್ನು ಹೊರಗಿನಿಂದ ತರಿಸುತ್ತಿದೆ ಇವನ್ನು ಭಾರತದಲ್ಲೇ ತಯಾರಿಸಿದರೆ ಬಹಳ ಅನುಕೂಲವುಂಟು ಭಾರತದಲ್ಲಿಯೇ ಸುಲಭವಾಗಿ ಒಂದು ಲಾಭದಾಯಕವಾದ "ಪೈರೆತ್ರಂ" ಎಂಬ ಕ್ರಿಮಿನಾಶಕ ಸಸ್ಯವನ್ನು ಬೆಳೆಯಲು ಸಾಧ್ಯವಿದೆ

ಈ ಗಿಡವು ಸೇವಂತಿಗೆ ಗಿಡದ ಜಾತಿಗೆ ಸೇರಿದುದು ಈ ಗಿಡದ ಹೂವಿನಲ್ಲಿ ಕ್ರಿಮಿನಾಶಕ ಗುಣಗಳಿವೆ ಮತ್ತು ಇದರಲ್ಲಿ ಪ್ರಾಣಿಗಳ ಚರ್ಮಕ್ಕೆ ಅಪಾಯ ಅಥವಾ ನೋವನ್ನುಂಟುಮಾಡುವ ಬೇರೆ ಯಾವ ಕೆಟ್ಟಗುಣವೂ ಇಲ್ಲ ಸ್ವಲ್ಪ ಪ್ರಮಾಣದಲ್ಲಿ ಇದನ್ನು ಹೊಟ್ಟೆಗೆ ತೆಗೆದುಕೊಂಡರೂ ಸಹ ಅಪಾಯವಿಲ್ಲ ಇವೆಲ್ಲ ಕಾರಣಗಳಿಂದ ಪೈರೆತ್ರಂ ಗಿಡದ ಹೂವು ಅತ್ಯಂತ ಉತ್ತಮವಾದ ಕ್ರಿಮಿನಾಶಕ ವಸ್ತುವಾಗಿದೆ.

ಬೆಂಗಳೂರಿನಲ್ಲಿರುವ ಅರಣ್ಯ ಪರಿಶೋಧನಾಲಯದವರು 1937ನೇ ಇಸವಿಯಲ್ಲಿ ಈ ವಿಷಯವನ್ನು ಪರ್ಯಾಲೋಚಿಸಿದರು. 5000 ಅಡಿಗಳ ಕೆಳಮಟ್ಟದಲ್ಲಿರುವ ಭೂಪ್ರದೇಶದಲ್ಲಿ ಈ ಹೂವು ಅರಳುವುದೇ ಇಲ್ಲವೆಂದು ಭಾವಿಸಲಾಗಿದ್ದಿತು. ಈ ಭಾವನೆಯಿಂದ ಮೈಸೂರು ದೇಶದಲ್ಲಿ ಈ ಗಿಡವನ್ನು ಬೆಳೆಯುವುದು ಲಾಭದಾಯಕವೇ ಎಂದೂ ಸಹ ಯೋಚಿಸಲಾಗಿತ್ತು ಆದಾಗ್ಯೂ ಜಪಾನಿನಿಂದ ತರಿಸಿದ ಬೀಜಗಳನ್ನು ಹಾಕಿ 558 ಗಿಡಗಳನ್ನು ಬೆಂಗಳೂರಿನಲ್ಲಿ 1938ನೇ ಇಸವಿ ಮಾರ್ಚಿ ತಿಂಗಳಿನಲ್ಲಿ ಬೆಳೆಯಿಸಲಾಯಿತು ಬೆಂಗಳೂರು ಸಮುದ್ರಮಟ್ಟದಿಂದ ೩002 ಅಡಿ ಎತ್ತರದಲ್ಲಿದೆ ಬಹಳ ಎಚ್ಚರಿಕೆಯಿಂದ ಈ ಗಿಡಗಳ ಬೆಳವಣಿಗೆಯನ್ನು ನೋಡಿಕೊಳ್ಳಲಾಯಿತು ಕ್ರಿಮಿನಾಶಕ ಗುಣಗಳಿರುವುದು ಹೂವಿನಲ್ಲಿ ಹೂವು ಅರಳದಿದ್ದ ಗಿಡವು ಕಸಕ್ಕೆ ಸಮಾನವಾದುದರಿಂದ 1939ನೇ ಇಸವಿ ಫೆಬ್ರವರಿ ತಿಂಗಳಿನಲ್ಲಿ, ಅಂದರೆ ಬೀಜವನ್ನು ಹಾಕಿ 11 ತಿಂಗಳ ನಂತರ ಮೂರನೇ ಒಂದು ಭಾಗದ ಗಿಡಗಳಲ್ಲಿ ಹೂ ಬಿಟ್ಟಿತು

ಇದರಿಂದ ಪರಿಶೋಧನಾಲಯದವರಿಗೆ ಸಂಸ್ಥಾನದಲ್ಲಿ ಪೈರೆತ್ರಂ ಹೂವನ್ನು ಬೆಳೆಯಬಹುದೆಂದು ತಿಳಿದಂತಾಯಿತು ಈ ಹೂವಿನಲ್ಲಿರುವುದಾದರೂ ಏನ ? ಪೈರೆತ್ರಿನ್ I ಮತ್ತು ಪೈರೆತ್ರಿನ್ II ಪರಿಶೋಧನೆಗಳಿಂದ ಇವೆರಡು ಕ್ರಿಮಿನಾಶಕ ವಸ್ತುಗಳೂ, ಬೆಂಗಳೂರಿನಲ್ಲಿ ಬೆಳೆದ ಹೂವಿನಲ್ಲಿ ನೇಕಡಾ 0 47ಯಷ್ಟೂ, ಸ್ವಂದೇಶ ಮಾರುಕಟ್ಟೆಗೆ ದೊರೆಯುವ ಕ್ರಿಮಿನಾಶಕ ವಸ್ತುಗಳಲ್ಲಿ 0 4 ರಷ್ಟೂ, ಜಪಾನಿನಲ್ಲಿ ಬೆಳೆಯುವ ಉತ್ತಮವಾದ ಹೂವಿನಲ್ಲಿ 1 0 ರಿಂದ 1 3 ರಷ್ಟೂ ಇದೆ ಎಂದೂ ಕಂಡುಬಂದಿದೆ.

ಉತ್ತಮವಾದ ಬೀಜಗಳನ್ನುಪಯೋಗಿಸುವುದರಿಂದಲೂ, ಇಲ್ಲಿನ ಹವಾಗುಣಕ್ಕೆ ಈ ಗಿಡಗಳನ್ನೊಗ್ಗಿಸುವುದರಿಂದಲೂ, ಹೂವುಗಳಲ್ಲಿರುವ ಕ್ರಿಮಿನಾಶಕ ಗುಣಗಳನ್ನು ಹೆಚ್ಚಿಸುವುದು ಸಾಧ್ಯವೇ ಎಂಬುದನ್ನು ತಿಳಿಯಲು ಕೆಲವು ಪರಿಶೋಧನೆಗಳನ್ನು ನಡೆಯಿಸಲಾಯಿತು. ಅಕ್ಟೋಬರ್ 1939ರಲ್ಲಿ ಪರಿಶೋಧನೆಗಳನ್ನು ಪ್ರಾರಂಭಿಸಿದುದಕ್ಕೆ ಎರಡನೆಯ ಬೆಳೆಗೇ ಆ ಗಿಡದ ಹೂವಿನಲ್ಲಿರುವ ಕ್ರಿಮಿನಾಶಕ ಗುಣವು ಎರಡರಷ್ಟು ಹೆಚ್ಚಾಯಿತು. ಈ ಗಿಡವನ್ನು ಹಾಕಿದ ಮೂರನೇ ವರ್ಷದಿಂದ ಒಳ್ಳೆ ಬೆಳೆಯು ಬರುವುದೆಂಬ ಅಂಶವನ್ನು ಮಾತ್ರ ಮರೆಯಬಾರದು ಈ ಸಂಬಂಧದಲ್ಲಿ ಇನ್ನೂ ಹಲವಾರು ಪರಿಶೋಧನೆಗಳು ನಡೆಯುತ್ತಲೇ ಇವೆ ಇಲ್ಲಿಯವರೆಗೂ ಕಂಡುಬಂದಿರುವ ಫಲಿತಾಂಶಗಳಿಂದ, ಮೈಸೂರಿನಲ್ಲಿ ಬೆಳೆದ ಈ ಹೂವುಗಳಲ್ಲಿರುವ ಕ್ರಿಮಿನಾಶಕ ಗುಣವು ಇತರ ಪ್ರದೇಶಗಳಲ್ಲಿ ಬೆಳೆದ ಹೂವುಗಳಲ್ಲಿರುವುದಕ್ಕೆ ಸ್ವಲ್ಪ ಕಡಿಮೆಯಾಗಿದ್ದರೂ ಸಹ ಸ್ಥಳದಲ್ಲಿ ಮಾರಾಟಕ್ಕೆ ದೊರೆಯುವ ಮಾದರಿಗಳಿಗಿಂತ ಉತ್ತಮವಾಗಿದೆ

ಬೆಂಗಳೂರಿನಲ್ಲಿ ಈ ಸಂಬಂಧದಲ್ಲಿ ಪರಿಶೋಧನೆಗಳು ನಡೆಯುವಾಗಲೇ, ಸಂಸ್ಥಾನದ ಇತರ ಸಮುದ್ರಮಟ್ಟದಿಂದ ಎತ್ತರದಲ್ಲಿರುವ ಪ್ರದೇಶಗಳಲ್ಲಿ ಅರಣ್ಯ ಇಲಾಖೆಯವರು ಈ ಗಿಡವನ್ನು ಬೆಳೆಯಲು ಪ್ರಯತ್ನಿಸುತ್ತಿದ್ದರು ಕೆಮ್ಮಣ್ಣುಗುಂಡಿಯಲ್ಲಿ ಈ ಗಿಡವು ಚನ್ನಾಗಿ ಬೆಳೆಯುವದೆಂದು ಕಂಡುಬಂದಿದೆ

ಈ ಗಿಡದ ವ್ಯವಸಾಯ ಕ್ರಮದ ಬಗ್ಗೆ, ಪರಿಶೋಧನಾಲಯದವರು ಹಲವಾರು ಪರಿಶೋಧನೆಗಳನ್ನು ನಡೆಯಿಸುತ್ತಲೇ ಇದ್ದಾರೆ ಈ ಗಿಡಕ್ಕೆ ಯಾವುದಾದರೂ ರೋಗಗಳು ಹಿಡಿಯುವುವೋ ಎಂಬುದನ್ನು ಪರಿಶೀಲಿಸುತ್ತಿದೆ ಇಲ್ಲಿಯವರೆಗೂ ತಿಳಿದುಬಂದಿರುವ ಅಂಶಗಳಿಂದ ಮೈಸೂರಿನಲ್ಲಿ ಒಂದು ಎಕರೆಗೆ 75 ಪೌಂಡು ಒಣಗಿದ ಹೂವು ದೊರೆಯುವುದೆಂದೂ, ಈ ಹೂವಿನಲ್ಲಿ ಕ್ರಿಮಿನಾಶಕ ಗುಣವು ನೇಕಡಾ 0 5 ರಿಂದ 0 8ರಷ್ಟು ಇರುತ್ತದೆಂದೂ ಕಂಡುಬಂದಿದೆ ಈ ಗಿಡಗಳನ್ನು ಬೆಳೆಯುವುದು ಲಾಭದಾಯಕ ಉದ್ಯಮವಾಗಿ ಕಂಡುಬಂದಿದೆ ಈ ವ್ಯವಸಾಯದ ಭವಿಷ್ಯವು ಆಶಾಜನಕವಾಗಿದೆ ಇನ್ನು ಹೆಚ್ಚಿನ ಪ್ರದೇಶದಲ್ಲಿ ಈ ಗಿಡದ ವ್ಯವಸಾಯವನ್ನು ನಡೆಯಿಸಿ ಪರೀಕ್ಷಿಸಲಾಗುವುದು.

(ಮೈಸೂರು ಇನ್ಫರ್ಮೇಷನ್ ಬ್ಯುರೋ)

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ನವಾದ ಶಿಷ್ಯರ ಮನೆಗಳಿರುತ್ತಿವೆ, ಆ ಮಠಾಧಿಕಾರಿಗಳು ಮವನ-ಕ್ಕೊ ಹತ್ತು ವರ್ಷಕ್ಕೊ ಒಂದುಸಾರೆ ಹೋಗಿ ಶಿಷ್ಯ ಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರ ಕವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ವನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕ ವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಇದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಬಹಳ ಕೆತದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರ ವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೌಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಸಿಂಧೂರ	೧	೨—೦—೦
ಲ್ಲಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು		
ರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ೋಹಭಸ್ಮ	೧	೦—೧೨—೦
ಂಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ಜ್ರಭಸ್ಮ	೧	೪೦—೦—೦
ಭ್ರಕಭಸ್ಮ	೧	೩—೦—೦
ತ್ರಾಳಭಸ್ಮ	೧	೦—೮—೦
ಚಿನಭಸ್ಮ	೧	೦—೮—೦
ಭಸ್ಮ	೧	೦—೮—೦
ಂತೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦—೧೨—೦
ಕ್ತಾಭಸ್ಮ	೧	೪೦—೦—೦
ವಾಳಭಸ್ಮ	೧	೦—೮—೦
ಪ್ಪೆಚಿಪ್ಪಿನ ಭಸ್ಮ	೧	೦—೮—೦
ಂಗದ ಕೋಡಿನ ಭಸ್ಮ	೧	೦—೮—೦
ದಂತಿಹರತಾಳಭಸ್ಮ	೧	೦—೮—೦
ತ್ರಾರಿ (೧ನೇ ನಂಬರ್)	೧	೫೦—೦—೦
ಾಜಿತ ಸೂರ್ಯಪುಟ	೧	೧—೦—೦
ಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವ ಪ್ರಕಾರದ ಸ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಶಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಅದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ; ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಆ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳ, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಶಾಸ್ತ್ರೋಪದೇಶದ ಸ್ವಪ್ರಧಾನರಾದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್** ಮಹಾಪ್ರಭುಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಇದರಲ್ಲಿಯ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುಕ್ತಿನಕಡೆಗೆ ದೃಷ್ಟಿಯನ್ನಿತ್ತವೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬-೦ರೂ ಗೆ ದೊರೆಯುವುದು. ವಿ. ಪಿ. ಚಾರ್ಜ ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಕ್ಷತರಿಲೆಗಳಿಂದ ಸುಂದರ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು [illegible] ಅಗಸ್ತ್ಯ ವಿಭೀಷಣ ವ್ಯಾಸ ಸಾನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೦×೧೪ ಬೆಲೆ	೦—೨—೬
ಸದ್ಯ! ಶ್ರೀಶಾಸೋಮಣಿಮಾರ್ಗಸ್ಥ [illegible] ಅಂತರಲಿಯ ಇರುವ ಫೋಟೋ ಸೈಜು ೧೪×೧೦ ಬೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಟಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦ ೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦ ೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಸ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯು ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲವೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳಿಸುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ ಪಿ ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[35] ಪೋ ಬಾ ೨೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪ್ರದೀಪ	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ ([illegible])	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳುಳ್ಳವು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೭ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य–संस्कृत)	१ रु
पुरुषसूक्तम् (वीरशैवप्राचीनभाष्योपेतम्)	८ आ
नन्दिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪ ಚಕ್ಷೀರವಿಸಾರಕರ್ ಪರತತ್ತ್ವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಫೆಬ್ರುವರಿ ೧೯೪೨ [ಸಂಚಿಕೆ ೪೧

ಶ್ರೀಜಗದ್ಗುರು ಸಿದ್ಧಲಿಂಗೇಶ್ವರಾಷ್ಟಕಂ

(ಶಾರ್ದೂಲ ವಿಕ್ರೀಡಿತ ವೃತ್ತಂ)

ಸಿಂಹಾಸನ ವೈಭವ

ಶ್ರೀಭದ್ರೇಭಮುಖಾಸನೇಶ್ವರೀಮಹಾಶಲಸತ್ಕಲ್ಪದ್ರುಮಾಗಸಿ ಹರ್ಷಾ-
ಧೀಶಂ ವಿಸ್ತೃತ ವೀರಶೈವಮತ ಸಾಮ್ರಾಜ್ಯೈಕ [illegible] |
[illegible] ದಕ್ಷ ಮ ಮುಕ್ತು ಪಾಲಕ ದಧತ್ಸಾಲ ಶಿಖಂಡಿಂ [illegible]
ವಂದೇಽನಂಗಹರಂ ಜಗದ್ಗುರುವರಂ ಶ್ರೀಸಿದ್ಧಲಿಂಗೇಶ್ವರಂ ॥೧॥

ವಿಚಿತ್ರಯತೀಂದ್ರ

ಜಿಹ್ವಾಂತರ್ನಟ ಭಾರತೀ ಪ್ರಿಯತಮೋ ಮುಕ್ತ್ಯಂಗನಾ ಮಂದಿರಂ | ಬ್ರಹ್ಮಾಂಡ್ವಾಂಡ [illegible] ಸುಂದರೋ ವರಸುಧೀ ಮಂದಾರು
ವ ದಾಂತಕಃ ॥ ಯೋಽಭೂದ್ಭಾಗ್ಯ [illegible] ವಿಶಿಷ್ಟಧೀ [illegible]
[illegible] ಯತೀಂದ್ರೋ [illegible] | ವಂದೇಽನಂಗಹರಂ ಜಗದ್ಗುರು
ವರಂ ಶ್ರೀಸಿದ್ಧಲಿಂಗೇಶ್ವರಂ ॥೨॥

ಗೋತ್ರಾಧಿಪವಿಚಾರ

ಶ್ರೀರಂಭಾಪುರಿಪೀಠಸುಸ್ಥಿತವರಂ ಶ್ರೀನಂದಿಗೋತ್ರೇಶ್ವರಂ |
[illegible] ಲಿಂಗಾಂಬರೀ ಮುದಪ್ಪುರೀ ಪಂಭಾದ್ರಿ [illegible] |
ಮುಕ್ತಾಖಂಡ ಮಹಾಲಿಕ ದನ ಕುಂಡಿತ್ವಂ ಪ್ರಯಿ
ವ ಣಿತಂ | ವಂದೇಽನಂಗಹರಂ ಜಗದ್ಗುರುವರಂ ಶ್ರೀ ಸಿದ್ಧ
ಲಿಂಗೇಶ್ವರಂ ॥೩।

ಚತುರ್ಯುಗಾಚಾರ್ಯಮೂರ್ತಿ

ಯೋಽಭೂದ್ಭದ್ರ ಮುಖ ಈಶವಾಮ [illegible] ದ್ವಿತ
ಧಾಮ್ನಿ ಕೃತೇ | ಶ್ರೀರಾಯಾಮಸಭೋ ದ್ವಿ ಸತ್ತಗಣಪ್ರೋ ಯೋ
ದಾರುಕೋದ್ವಾಪರೇ ॥ ಯಃ ಸಿದ್ಧೇಶ್ವರ ಲಿಂಗಜಶ್ಚ ರ ಲಾ
ಶಾರ್ಯ ಶ್ರೀ ಶುಭೇ ಕಲೌ | ವಂದೇ ತತ್ಸಕಲಾವತಾರ ವಿಭವಂ
ಶ್ರೀ ಸಿದ್ಧಲಿಂಗೇಶ್ವರಂ ॥೪।

ಪಂಚಾಕ್ಷರ್ಯಾದಿಸಂಬಂಧ

ಪಂಚಾಚಾರಪರಂ ಪಂಚಚಿತಕರಂ ಪಂಚ ಸ್ಥಪ್ರಿ ಪರಂ |
ಮ ದ್ವ್ರಪಂಚಕಭಾಸ್ವರಂ ಪರಮಮಾರ್ಗಂ ಪಂಚವಕ್ತ್ರೇಶ್ವರಂ ॥
ವಿದ್ಯಾವರ್ಧಕಸಂಘ ಸಂಘಟಿತ ಸದ್ವೇಷಾಂ ವಿದ್ಯಾಲಯಂ |
ವಂದೇಽನಂಗಹರಂ ಜಗದ್ಗುರುವರಂ ಶ್ರೀ ಸಿದ್ಧಲಿಂಗೇಶ್ವರಂ ॥೫।

ಷಡ್ವರ್ಗಸದುಪಯೋಗ

ಚಕ್ರಾತ್ಮಾಮಯುತಂ ರುಷಾಂತಿ ತಮಭೇ ಲಿಂಗಾರ್ಚನಾ
[illegible] | ಚಿದ್ಭಕ್ತಿ ಪ್ರಮದಾಂಶಿ ಮೋಹಪ್ಪದಯಂ ಕೋಪಂ
ಮಭಾವಾನ್ವಿತಂ ॥ ಷಡ್ವರ್ಗೇಸ್ಸ್ವಕ ಶಟ್ಸಿಪಸ್ತ್ರ ಚ
ಷ್ವರ್ಗ ಪನ್ವಾಗ್ರದಂ | ವಂದೇಽನಂಗಹರಂ ಜಗದ್ಗುರುವರಂ
ಶ್ರೀ ಸಿದ್ಧಲಿಂಗೇಶ್ವರಂ ॥೬॥

ಮಣಿಮಾಲಾಮೂರ್ತಿ

ಮುಕ್ತಿಸ್ತ್ರೀಮಣಿ ವಕ್ಷಸ್ಥಲಿ ಜಪದ್ರುದ್ರಾಕ್ಷಸಂಸ್ಥಾಯಿ |
ಕಿ ತ ಸತ್ಪವಿರಾಜತಃ ಧ ತರಳಂ ಶಾಂತಾಳಿ ಚಿಂತಾಮಣಿಂ |
ಶೈವಾಚಾರ್ಯಶಿರೋಮಣಿಂ ಶಿವಮ ಹಾತತ್ವಾಭೃ ತಾರಾಮಣಿಂ |
ವಂದೇಽನಂಗಹರಂ ಜಗದ್ಗುರುವರಂ ಶ್ರೀ ಸಿದ್ಧಲಿಂಗೇಶ್ವರಂ ॥೭॥

ವೃಷ್ಟಿಸೂತ್ರಸಾರ್ಥಕ್ಯ

ಶಿಕ್ಷಾವ್ಯಾಖ್ಯಾನರಕೇಷ್ಟ ಸತ್ಸಫಲೀಕೃದ್ವೃಷ್ಟಿಸೂತ್ರಾಧಿಪಂ |
ಶ್ರೀ ಬುದ್ಧ್ಯಂಬುಧಿ ತಾಪಸಂ ಬುಧಮನೋರಕ್ತಂ ವಿರಕ್ತೇಶ್ವರಂ ॥
ಭೋಗಮುಕ್ತಿಪದಂ ಕ್ಷಿಪ್ರದರ್ಶನಕೃತಾಂ ಮಾಂಗಲ್ಯಸಾಫಲ್ಯದಂ |
ವಂದೇಽನಂಗಹರಂ ಜಗದ್ಗುರುವರಂ ಶ್ರೀ ಸಿದ್ಧಲಿಂಗೇಶ್ವರಂ ॥೮॥

ಅಷ್ಟಕಸ್ತವರೂಪದು [illegible] ಶ್ರೀ [illegible] |
ಅಷ್ಟಕಂ [illegible] ॥೯॥

ವಿದ್ವಾನ್ ಓ. ಪಟ್ ಪಂ. ಶಿವಪಂಚಾಕ್ಷರಶಾಸ್ತ್ರಿ,
ಕನ್ನಡಪಂಡಿತ
[illegible] ಹಾಸ್ಟೆಲ್, [illegible]

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥

ಶ್ರೀಕಾಶೀಜಗದ್ಗುರುಗಳವರ ವರ್ಧಂತಿ ಮಹೋತ್ಸವ

ವಿಶ್ವೇಶಲಿಂಗ [illegible] |
[illegible] |
[illegible]
[illegible] ॥

ಶ್ರೀಕಾಶೀಕ್ಷೇತ್ರ ಏಂ ಜಂಗಮವಾಡಿ ಮಠಾಧೀಶ್ವರ ಶ್ರೀಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರ ೧೧ನೇ ವಾರ್ಷಿಕ ವರ್ಧಂತಿ ಮಹೋತ್ಸವವು ತಾ॥ ೨೯-೧-೪೨ ರಲ್ಲಿ ಅತಿ ವೈಭವದಿಂದ ನೆರವೇರಿತು. ಈ ಮಹೋತ್ಸವಕ್ಕೆ ಕರ್ನಾಟಕ ಮಹಾರಾಷ್ಟ್ರ ದೇಶಗಳಿಂದ ಬಹು ಜನರು ಆಗಮಿಸಿದ್ದರು. ತಾ॥ ೨೯-೧-೪೨ನೇ ಗುರುವಾರ ಪ್ರಾತಃಕಾಲ ೮ ಘಂಟೆಗೆ ಶ್ರೀಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರ ಮಂಗಲಸ್ನಾನ ಶಿವಾರ್ಚನೆಗಳಾದ ತರುವಾಯ ಮಹಾಸಂಸ್ಥಾನದ ವೈದಿಕ ಪಾಠಶಾಲೆಯ ಗುರುಕುಲದ ವಿದ್ಯಾರ್ಥಿಗಳಿಂದಲೂ ಶ್ರೀಜಗದ್ಗುರು ವಿಶ್ವಾರಾಧ್ಯ ಮೂರ್ತಿಗೂ ಜ್ಞಾನಸಿಂಹಾಸನಕ್ಕೂ ಏಕಾದಶವಾರ ಮಹಾರುದ್ರಾಭಿಷೇಕ ಬಿಲ್ವಾರ್ಚನ ವಿಧಿಗಳು ನೆರವೇರಿಸಲ್ಪಟ್ಟವು. ಮಧ್ಯಾಹ್ನ ನಾನಾ ಪ್ರಾಂತಗಳಿಂದ ಬಂದ ಚರಮಾಹೇಶ್ವರರಿಗೆ ಅನ್ನಸಂತರ್ಪಣೆಯು ನೆರವೇರಿಸಲ್ಪಟ್ಟಿತು. ತರುವಾಯ ಸಾಯಂಕಾಲ ೪॥ ಘಂಟೆಗೆ ಕೈಲಾಸಮಂಟಪದಲ್ಲಿ ಗುರುಕುಲದ ವಿದ್ಯಾರ್ಥಿಗಳು ಜಗದ್ಗುರುಗಳವರ ಶ್ರೇಯಃಪ್ರಾರ್ಥನಾ ಪುರಸ್ಸರವಾಗಿ ಆಚಾರ್ಯರ ಭಜನೆಯನ್ನು ಭಕ್ತಿಪೂರ್ವಕವಾಗಿ ಮಾಡಿದರು. ತರುವಾಯ ಮಹಾಮಂಗಳಾರತಿಯಾಗಿ ಪ್ರಸಾದವಿನಿಯೋಗವಾಯಿತು. ಇದರಂತೆ ಶ್ರೀಜಗದ್ಗುರು ಪಂಚಾಕ್ಷರಶಿವಾಚಾರ್ಯ ಮಹಾಸ್ವಾಮಿಗಳವರ ಅನೇಕಾನೇಕ ವರ್ಧಂತಿ ಮಹೋತ್ಸವಗಳು ನಡೆಯುವಂತೆ ಮಾಡಲೆಂದು ಶ್ರೀ ಜಗಜ್ಜನಕ ವಿಶ್ವೇಶ್ವರನಲ್ಲಿಯೂ ಶ್ರೀಜಗದ್ಗುರು ವಿಶ್ವಾರಾಧ್ಯರ ಪ್ರಾರ್ಥನೆಯೊಡನೆ ವರ್ಧಂತಿಮಹೋತ್ಸವವು ಸಮಾಪ್ತಿಯನ್ನು ಹೊಂದಿತು.

ಓರ್ವ ಗುರುಕುಲವಿದ್ಯಾರ್ಥಿ

॥ ಶ್ರೀಗುರುಭ್ಯೋನಮಃ ॥

ಪಾದಪೂಜೆಯೂ, ಮಹಾ ರುದ್ರಾಭಿಷೇಕವೂ

ಬದಾಮಿ ತಾಲೂಕ ಮೈಕಿ ಜಕನೂರಗ್ರಾಮದಲ್ಲಿರುವ ವೇ॥ ಶ್ರೀ ಬಸಯ್ಯನವರು ಅಂಗಡಿ ಇವರ ಸುಪುತ್ರ ಬಳ್ಳಾರಿ ಜಿಲ್ಲಾ ಕೊಟ್ಟೂರ ಗ್ರಾಮದ "ಆನರರಿ ಮ್ಯಾಜಿಸ್ಟ್ರೇಟ್" ಆದ ವೀರಣ್ಣಾ ಅಂಗಡಿ ಇವರು ತಮ್ಮ ಮಾತೋಶ್ರೀಯವರಾದ [illegible]ರಮ್ಮನವರ ನಿಧನ ಶಾಂತಿಯ ಬಗ್ಗೆ, ತಮ್ಮ ಗೃಹದಲ್ಲಿ ಶ್ರೀ ಮುರುಗೇಂದ್ರ ಶಿವಾಚಾರ್ಯಸ್ವಾಮಿಗಳವರ ಪಾದಪೂಜೆಯನ್ನೂ, ಮಹಾರುದ್ರಾಭಿಷೇಕವನ್ನೂ ಇದೇ ಮಾಘ ಶು॥ ೧೦ ಚಂದ್ರವಾರದಿಂದ ಮಾಘ ಶು॥ ೧೩ ಶುಕ್ರವಾರದವರೆಗೆ ಒಳ್ಳೇ ವಿಜೃಂಭಣೆಯಿಂದ ಎಸ್. ಜಿ. ಹಿರೇಮಠ ಇವರ ವೈದಿಕತ್ವದಲ್ಲಿ ಶಾಸ್ತ್ರೋಕ್ತ ಪ್ರಕಾರವಾಗಿ ನೆರವೇರಿಸಿದರು. ನಿತ್ಯವೂ ಜನರಿಗೆ ಅನ್ನಸಂತರ್ಪಣೆಯಾಗುತ್ತಿತ್ತು. ಕಡೆಯ ದಿವಸ ವಿಶೇಷ ಜನರಿಗೆ ಮೃಷ್ಟಾನ್ನ ಭೋಜನವನ್ನು ಮಾಡಿಸಿದರು. ವೀರಶೈವಧರ್ಮಜಾಗೃತಿಗಾಗಿ ಹೊರಡುತ್ತಿರುವ ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣೆಗಾಗಿ ಸದರಿ ಸ್ವಾಮಿಗಳವರಿಂದ ೧ ರೂ. ತೆರಿಯಿಸಿಕೊಟ್ಟಿರುತ್ತಾರೆ. ಸದಾಚಾರಸಂಪನ್ನರೂ, ಗುರುಭಕ್ತಿಯುತರೂ ಧರ್ಮಾಭಿಮಾನಿಗಳೂ, ಶಾಂತಸ್ವಭಾವದವರೂ ಆದ ಶ್ರೀಯುತ ವೀರಣ್ಣನವರಿಗೆ ಶ್ರೀ ಪರಮಾತ್ಮನು ಆಯುರಾರೋಗ್ಯೈಶ್ವರ್ಯಾದಿ ಸಕಲ ಸಂಪತ್ಸಮೃದ್ಧಿಯನ್ನು ಕೊಟ್ಟು ಕಾಪಾಡಲೆಂದು ಶ್ರೀಜಗದ್ಗುರು ಪಂಚಾಚಾರ್ಯರನ್ನು ಅನನ್ಯಭಾವದಿಂದ ಪ್ರಾರ್ಥಿಸುವ,

ಓರ್ವ ಗುರುಭಕ್ತ

ಮದರಾಸಿನ ಪ್ರಜೆಗಳು ವಿಮಾನ ಧಾಳಿಗೆ ಹೆದರಬೇಕಾಗಿಲ್ಲ

ಮದರಾಸ್ ನಗರದ ಮೇಲೆ ಶತ್ರುಗಳು ವಿಮಾನಧಾಳಿಯ ಭಯವನ್ನಾದರೂ ಒಡ್ಡಿದ ಅನೇಕ ದಿವಸಗಳಿಗೆ ಮುಂಚಿತವಾಗಿ, ವಾರಗಳಿಗೆ ಮುಂಚಿತವಾಗಿ ಜನರಿಗೆ ಪೂರ್ವಭಾವಿಯಾದ ಮುಂಜಾಗ್ರತೆಯನ್ನು ಕೊಡಲಾಗುವದು ವಿಪತ್ತು ಬರುವ ಸಂಭವವಿದ್ದರೆ ಜನರು ನಗರವನ್ನು ಬಿಟ್ಟು ಹೋಗುವಂತೆ ಸಾಕಷ್ಟು ಮುಂಚಿತವಾಗಿ ಎಚ್ಚರಿಕೆ ಕೊಡಲಾಗುವುದು ಕೆಲವು ಗಂಟೆಗಳಿಗೆ ಮುಂಚಿತವಾಗಿ ಮಾತ್ರ ಎಚ್ಚರಿಕೆ ಕೊಡಲಾಗುವುದಿಲ್ಲ ವಿಮಾನಗಳು ಧಾಳಿ ಮಾಡಲು ಬಂದರೆ ಅನೇಕ ಮಿನಿಟುಗಳ ಮುಂಚೆಯೇ ಎಚ್ಚರಿಕೆ ಕೊಡಲಾಗುವುದು ಸೈರನ್‌ಗಳನ್ನು ಧ್ವನಿ ಮಾಡಲಾಗುವುದು ಹೀಗೆ ಧ್ವನಿ ಮಾಡಿದನಂತರ ೨೦ ಅಥವಾ ೨೫ ಮಿನಿಟುಗಳ ಮೇಲೆ ವಿಮಾನಗಳು ಬರಬಹುದು ಕಚೇರಿಗಳಲ್ಲಿರುವ ಜನರೂ ಸ್ಕೂಲು ವಿದ್ಯಾರ್ಥಿಗಳೂ ರಕ್ಷಣಾ ಸ್ಥಳಗಳಲ್ಲೂ ಕಂದಕಗಳಲ್ಲೂ ಇರುವ ವ್ಯವಸ್ಥೆ ಮಾಡಲಾಗಿದೆ ಭಯಪಡಬೇಕಾದ ಕಾರಣವೇನೂ ಇಲ್ಲ ಎಂಬುದಾಗಿ ಮದರಾಸ್ ಸರ್ಕಾರವು ಪ್ರಕಟಿಸಿದೆ

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ॥

ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ

ಲೇಖಕರು—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೆ[illegible]

ಆಚಾರ್ಯರು ತತ್ವಮಾರ್ಗವನ್ನು ಬೋಧಿಸಿ ದುರ್ಲಭಂ ಮಾನುಷಂ ಜನ್ಮ ಎಂಬ ಉಕ್ತಿಯನ್ನು ಮಾನವರಿಗೆ ಅಕ್ಷರಶಃ ಸಾರ್ಥಕಮಾಡಿಕೊಡುವುದಕ್ಕಾಗಿಯೇ ಒಂದೊಂದು ವಿಧವಾಗಿ ಭೂಮಿಯಲ್ಲಿ ಅವತರಿಸಿರುವುದರಿಂದ ಪ್ರತಿಯೊಬ್ಬ ಸುಶೀಲನೂ ಆಯಾಯ ಮತಾಚಾರ್ಯರಲ್ಲಿ ಋಣಿಗಳಾಗಿ ಮತ್ತು ಕುಯುಕ್ತಿಗಳನ್ನು ಬಿಟ್ಟು ಅವರ ಪಾರಮಾರ್ಥಿಕ ತತ್ವವನ್ನು ಅನುಷ್ಠಿಸಿ ಅವರ ಮಹಿಮೆಯನ್ನು ಕೊಂಡಾಡುತ್ತ ಧರ್ಮಸ್ಥರಾಗಿ ಸುಖಭಾಗಿಗಳಾಗಬೇಕು

ಇನ್ನು ಕೆಲವರು ವೇದಾಗಮಗಳು ನಮ್ಮ ವೀರಶೈವರಿಗೆ ಸಂಬಂಧಿಸಿದ ಪ್ರಮಾಣಗ್ರಂಥಗಳಲ್ಲವೆಂದೂ, ಮತ್ತೆ ಕೆಲವರು ವೇದಗಳಂತೆ ಆಗಮಗಳು ಪ್ರಮಾಣಭೂತಗಳಲ್ಲವೆಂದೂ ವಾದಿಸುವರು ಇದನ್ನು ವಿಮರ್ಶಿಸೋಣ— ವೇದಾಗಮಗಳು ವೀರಶೈವರಿಗೆ ಸಂಬಂಧಿಸದಿದ್ದರೆ ಈ ಮತದಲ್ಲಿ ಜನ್ಮವೆತ್ತಿದ ರೇಣುಕಾದಿ ಪಂಚಾಚಾರ್ಯರೂ ಅನೇಕಜನ ತ್ರಿಕಾಲಜ್ಞಾನಿಗಳೂ, ಪಂಡಿತರೂ ವೇದಾಗಮಗಳ ತತ್ವದಂತೆ ನಡೆಯುತ್ತಿದ್ದಿಲ್ಲ ಅದರಂತೆ ಜನಜನರಿಗೆ ಬೋಧಿಸುತ್ತಿದಿಲ್ಲ ಮತ್ತು ಅವುಗಳ ಆಧಾರವನ್ನು ಯಾವ ಗ್ರಂಥಕಾರರೂ ತೆಗೆದುಕೊಳ್ಳುತ್ತಿದ್ದಿಲ್ಲ ಇನ್ನು ವೇದಗಳಿಗೂ ಆಗಮಗಳಿಗೂ ಬೇಧವಿಲ್ಲವು ವೇದಗಳ ರಹಸ್ಯವೇ ಆಗಮಗಳಲ್ಲಿ ತುಂಬಿತುಳುಕುತ್ತಿರುವುದು ಸಿದ್ಧಾಂತ ಶಿಖಾಮಣಿಯಲ್ಲಿ—

> ವೇದೈಃ ಶಿವಾಗಮಾದ್ಯೈಶ್ಚ ಸಂಬದ್ಧಾದಿಷ್ಠ್ಯೈಃ ಮಹಾಮತೇ
> ಸರ್ವವೇದಾನುಸಾರಿತ್ವಾತ್ ಶೈವತಂತ್ರ ವಿಶಿಷ್ಯತೇ ॥೭॥
> ಸ್ವತಂತ್ರಮಿತಿ ಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಂ ।
> ಸರ್ವವೇದಾರ್ಥರೂಪತ್ವಾತ್ ಪ್ರಮಾಣಂ ವೇದವತ್ಸದಾ ॥೮॥
> ವೇದಧರ್ಮಾಭಿಧಾಯಿತ್ವಾತ್ ಸಿದ್ಧಾಂತಾಖ್ಯಃ ಶಿವಾಗಮಃ ।
> ವೇದಬಾಹ್ಯವಿರೋಧಿತ್ವಾತ್ ವೇದಸಮ್ಮತ ಉಚ್ಯತೇ ॥೧೨॥
> ವೇದಸಿದ್ಧಾಂತಯೋಃ ಐಕ್ಯಮೇಕಾರ್ಥಪ್ರತಿಪಾದನಾತ್ ।
> ಪ್ರಾಮಾಣ್ಯಂ ಸದೃಶಂ ಜ್ಞೇಯಂ ಪಂಡಿತೈರೇತಯೋಃ ಸದಾ
> (ಪ೦, ೫) ೧೦೩।

ಅಂದರೆ ವೇದದ ಒಂದೊಂದು ಭಾಗವಲ್ಲದೆ ತತ್ವ ಸಂಖ್ಯಾದಿ ಶಾಸ್ತ್ರಗಳಿಗಿಂತಲೂ ಸರ್ವ ವೇದಗಳನ್ನು ಅನುಸರಿಸುವ ಶೈವಶಾಸ್ತ್ರವು ವಿಶೇಷವಾಗಿ ಮಹತ್ವವುಳ್ಳದ್ದಾಗಿರುವದು ಶಿವಪ್ರಣೀತವಾದ ಶೈವಶಾಸ್ತ್ರವು ಸಿದ್ಧಾಂತಶಾಸ್ತ್ರವೆಂದು ಹೇಳಲ್ಪಡುವು ಈ ಸಿದ್ಧಾಂತಶಾಸ್ತ್ರವು ಸಮಸ್ತ ವೇದ ಧರ್ಮವಾದ ಗಿರವುದರಿಂದ ಯಾವಾಗಲೂ ವೇದಗಳಂತೆ ಪ್ರಮಾಣಭೂತವಾಗಿರುವುದ ಸಿದ್ಧಾಂತನಾಮಕವಾದ ಶಿವಾಗಮವು ವೇದೋಕ್ತವಾದ ಭಸ್ಮಧಾರಣ ರುದ್ರಾಕ್ಷಿಧಾರಣ ಲಿಂಗಧಾರಣಾದಿ ಧರ್ಮಗಳನ್ನು ಪ್ರತಿಪಾದಿಸುತ್ತಿರುವದರಿಂದಲೂ ವೇದಸಮ್ಮತವೆಂದು ಹೇಳಲ್ಪಡುವುದು ಸರ್ವವೇದೇಷು ಯದ್ದೃಷ್ಟಂ ತತ್ಸರ್ವಂ ಶಿವಾಗಮೇ ಎಂಬ ವೀರಾಗಮ ಪ್ರಮಾಣಾನುಸಾರವಾಗಿ ವೇದಶಾಸ್ತ್ರ ಮತ್ತು ಸಿದ್ಧಾಂತಶಾಸ್ತ್ರ ಇವೆರಡೂ ಒಂದೇ ಅರ್ಥವನ್ನು ಪ್ರತಿಪಾದಿಸುತ್ತಿರುವುದರಿಂದ ಪಂಡಿತರಾದವರು ಇವೆರಡಕ್ಕೂ ಒಂದೇ ವಿಧವಾದ ಪ್ರಾಮಾಣ್ಯವನ್ನು ತಿಳಿಯಬೇಕು ಎಂದು ಶ್ರೀಜಗದ್ಗುರು ರೇಣುಕರು ಅಗಸ್ತ್ಯಮಹಾಮುನಿಗೆ ಅಪ್ಪಣೆಕೊಡಿಸಿದ್ದಾರೆ ಇದಲ್ಲದೆ ಯಾವ ಪರಶಿವಬ್ರಹ್ಮದ ಚತುರ್ಮುಖಗಳಾದ ಸದ್ಯೋಜಾತ ವಾಮದೇವ ಅಘೋರ ತತ್ಪುರುಷಗಳಿಂದ ಚತುರ್ವೇದಗಳುಕ್ತವಾಗಿಹವೋ ಅದೇ ಪರಶಿವನ ಈಶಾನವೆಂಬ ಐದನೆಯ ಮುಖದಿಂದ ಕಾಮಿಕಾದಿವಾತುಲಾಂತಗಳಾದ ೨೮ ಆಗಮಗಳು ಉಕ್ತಗಳಾಗಿವೆಯೆಂತಲೂ ಅವುಗಳಲ್ಲಿ ಪರಸ್ಪರ ಭೇದವನ್ನೆಣಿಸ ಕೂಡದೆಂತಲೂ ಆಗಮಗಳೂ ವೇದಗಳೂ ಪ್ರಾಮಾಣ್ಯವಿಷಯದಲ್ಲಿ ಎರಡೂ ಅಪೌರುಷೇಯಗಳೇ ಆಗಿಹವೆಂತಲೂ ಪೂರ್ವಾಚಾರ್ಯರು ಸಾರಿಸಾರಿ ಹೇಳಿರುವರು ಈ ವಿಷಯವು ಶ್ರೀಪತಿಪಂಡಿತರಿಂದ ಶ್ರೀಕರ ಭಾಷ್ಯದಲ್ಲಿಯೂ—

> ಸದ್ಯೋಜಾತೇನ ಋಗ್ವೇದಂ ವಾಮದೇವೇನ ಯಾಜುಷಂ ।
> ಅಘೋರೇಣ ತಥಾ ಸಾಮ ಪುರುಷೇಣಾಥರ್ವಣಂ ॥
> ಈಶಾನೇನ ಮುಖೇನೈವ ಕಾಮಿಕಾದ್ಯಾಗಮಾಂಸ್ತಥಾ ।
> ಜನಯಾಮಾಸ ವಿಶ್ವೇಶಃ ಸರ್ವಸಿದ್ಧಿಪ್ರದಾ ಯತಃ ।
> ತಸ್ಮಾದ್ವೇದಾಗಮಾರ್ಥೇಷು ಯಃ ಕುರ್ಯಾದ್ಭೇದಭಾವನಂ
> ಸಹಸ್ರಕುಲಂ ಘೋರೇ ನರಕೇ ಪತತಿ ಧ್ರುವಂ ।

ಈ ಪ್ರಕಾರವಾಗಿ ಉಕ್ತವಾಗಿದೆ ಯದ್ಯಾಪಿ ಆಗಮಕ್ಕೆ ಸಿದ್ಧಾಂತವೆಂದೂ ಹೆಸರು ಪ್ರಸಿದ್ಧವಾಗಿದೆ ಎಂದು ಮೇಲೆ ಹೇಳಿದೆಯಷ್ಟೆ ! ಇದೇ ವಿಷಯವನ್ನು ಶ್ರೀಕಂಠ ಶಿವಾಚಾರ್ಯರು ಕೂಡ ತಮ್ಮ ಭಾಷ್ಯದ (೨ ೨ ೩೨) ರಲ್ಲಿ—

> ವಯಂತು ವೇದಶಿವಾಗಮಯೋರ್ಭೇದಂ ನ ಪಶ್ಯಾಮಃ
> ವೇದೋಪಿ ಶಿವಾಗಮ ಇತಿ ವ್ಯವಹಾರೋ ಯುಕ್ತಃ ತಸ್ಯ ತತ್ಕರ್ತೃಕತ್ವಾತ್ ।
> ಅತಃ ಶಿವಾಗಮೋ ದ್ವಿವಿಧಃ ತ್ರೈವರ್ಣಿಕ ವಿಷಯಃ ಸರ್ವವಿಷಯಶ್ಚೇತಿ ।
> ವೇದಃ ತ್ರೈವರ್ಣಿಕವಿಷಯಃ ಸರ್ವ ವಿಷಯಶ್ಚಾನ್ಯಃ ಉಭಯೋರೇಕ ಏವ ।
> ಏಕಶಿವಃ ಕರ್ತಾ ಅತ ಕರ್ತೃಸಾಮಾನ್ಯಾತ್ ಉಭಯಮಪ್ಯೇಕಾರ್ಥಪರಂ ಪ್ರಮಾಣಮೇವ ॥

ಈ ಪ್ರಕಾರವಾಗಿ ಅಪ್ಪಣೆಕೊಡಿಸಿದ್ದಾರೆ

> ವೇದ ಧರ್ಮಾ ತ ಸಂಪ್ರದಾಯ ಶೈಕಾನ [illegible] ಪಕ್ಷ ಕಕೇ ಪರಹಿತ್ಯಂ ।
> ಶೈವ ಗಮಾನಾಪಿ ವಸವ [illegible] ವೇಕ್ಷ್ಯೋ ಎಂಪತ್ತ ಸ್ವಮಸ್ತಿತೇ ।

ಎಂದು ಅಪ್ಪಯ್ಯದೀಕ್ಷಿತರು ಸಹ ತಾವು ರಚಿಸಿದ ಶಿವತತ್ವವಿವೇಕ ಎಂಬ ಗ್ರಂಥದ ೧೦೯ ನೇ ಪುಟದಲ್ಲಿ ಶಿವಾಗಮಗಳ ಪ್ರಾಶಸ್ತ್ಯವನ್ನು ಪ್ರತಿಪಾದಿಸಿದ್ದಾರೆ ಅಂದ ಬಳಿಕ ಈ ಅನಂತ ಕಾರಣಗಳಿಂದ ಆಗಮ ಸಾಂಪ್ರದಾಯದ ಮೇಲಣ ಅವೈದಿಕ ಭಾವನೆಯು ಸರ್ವಥಾ ಖಂಡನೀಯವೇ ಆಗಿಹುದೆಂಬುದು ಸ್ಪಷ್ಟವಾಗಿ ತಿಳಿದು ಬರುವದು ಎಲ್ಲಾ ವಿಷಯವನ್ನು ತಿಳಿಯಲು ಅಸಮರ್ಥರಾದವರು ಯಾವದೋ ಒಂದು ಸಂಕುಚಿತ ದ್ವೇಷದಿಂದ ಆಗಮಿಕರ ಮೇಲೆ ಅವೈದಿಕ ವಿಷವಾಯುವನ್ನೂದುವದು, ಸೂರ್ಯನನ್ನು ಕ್ರೂರಕಿರಣಿಯೆಂದು ಉಗುಳಿದರೆ ತಾನೇ ಅಪವಿತ್ರನಾಗುವವನ ಪರಿಯಂತಾಗುವುದೆಂಬ ವಿಷಯವನ್ನು ಸೂಜ್ಞರು ಅರಿಯದೆ ಇರಲಾರರು

ಇನ್ನು ಕೆಲವರು ಆಚಾರ್ಯರು ಇತ್ತೀಚಿನವರೆಂದು ವಾದಿಸುವರು ಅದರ ಬಗ್ಗೆ ವಿಚಾರಿಸುವಾ ಅಸೂಯಾಂಧರಿಂದ ಭರಿತವಾಗಿರುವ ಈಗಿನ ಕಾಲದಲ್ಲಿ ಪ್ರಾಚೀನರು ಅರ್ವಾಚೀನರಾಗಿದ್ದಾರೆ ಅರ್ವಾಚೀನರೇ ಪ್ರಾಚೀನರಾಗಿದ್ದಾರೆ ಪೂಜ್ಯರು ಅಪೂಜ್ಯರಾಗಿದ್ದಾರೆ ಅಪೂಜ್ಯರು ಪೂಜ್ಯರಾಗಿದ್ದಾರೆ ಪಂಡಿತರು ಪಾಮರರಾಗಿದ್ದಾರೆ ಪಾಮರರು ಪಂಡಿತರಾಗಿದ್ದಾರೆ ಇದು ಕಲಿಕಾಲ ಪ್ರಭಾವವೆಂದೇ ಹೇಳಬೇಕಾಗಿದೆ ಈ ಆಚಾರ್ಯರ ವಿಷಯದಲ್ಲಿ ಮನಸ್ಸಿಗೆ ಬಂದಂತೆ ಮಾತಾಡುವವರು ಈ ಕೆಳಗೆ ಪ್ರತಿಪಾದಿಸುವ ವಿಷಯವನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಹಾರೈಸುತ್ತೇವೆ

ವಿರಕ್ತ ವರ್ಗಕ್ಕೆಲ್ಲ ಪರಮಪೂಜ್ಯರೂ, ಮಹಾತಪಸ್ವಿಗಳೂ ಜಗದ್ವಿಖ್ಯಾತರೂ ಆಗಿಹೋಗಿರುವ ಅನಾದಿ ತೋಂಟದ ಸಿದ್ಧಲಿಂಗೇಶ್ವರರು ತಮ್ಮಿಂದ ವಿರಚಿತವಾಗಿರುವ ಸಿದ್ಧೇಶ್ವರ ವಚನದಲ್ಲಿ—

> ಆದಿಯಲ್ಲಿ ಶಿವತತ್ವದಲ್ಲಿ ರೇಣುಕನ ದಮನಾಗಿದ್ದರೆ ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿಯೆಂತೋ ! ಆ ಶಿವಲಿಂಗದಲ್ಲಿಯೇ ಹುಟ್ಟಿ ಶಿವಲಿಂಗದಲ್ಲಿಯೇ ಲಯವಾದ ರೇವಣಸಿದ್ಧೇಶ್ವರನ ಅನಾದಿಮುಕ್ತನಲ್ಲ ಆದಿಮುಕ್ತನೆಂದು ಆಡುವ ಅಜ್ಞಾನಿಗಳಿಗೆ ನಾಯಕನರಕ ತಪ್ಪದು "

ಎಂದು ಉಲ್ಲೇಖಿಸಿದ್ದಾರೆ ಈ ಮಹಾನುಭಾವರ ವಚನದಿಂದ ಶ್ರೀರೇಣುಕಾಚಾರ್ಯರ ಅನಾದಿತತ್ವವೂ ಪೂಜ್ಯತ್ವವೂ ಎಷ್ಟರಮಟ್ಟಿಗಿರಬಹುದೆಂಬುದನ್ನು ಕುಶಲಮತಿಗಳಾದ ವಾಚಕರೇ ಊಹಿಸಬೇಕಾಗಿದೆ ಕ್ರಿಸ್ತಶಕಕ್ಕಿಂತಲೂ ಪೂರ್ವ ನಾಲ್ಕು ಶತಮಾನಗಳ ಮೊದಲು ಜನ್ಮವೆತ್ತಿದ ಶ್ರೀಶಂಕರಾಚಾರ್ಯರಿಗೆ ಶ್ರೀಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸಿದವರು ಶ್ರೀರೇಣುಕಾಚಾರ್ಯರಲ್ಲವೇ ? ಈ ವಿಷಯವು ಶೃಂಗೇರಿ ಪೀಠದ ವಂಶಾವಳಿಯನ್ನು ಪ್ರತಿಪಾದಿಸುವ 'ಗುರುವಂಶಕಾವ್ಯ'ದಲ್ಲಿಯೂ ವೀರಶೈವಮತದ ಅನೇಕ ಗ್ರಂಥಗಳಲ್ಲಿಯೂ ಉಕ್ತವಾಗಿಲ್ಲವೇ ? ಈಗ್ಗೆ ೨ ಸಾವಿರ ವರ್ಷಗಳ ಪೂರ್ವದಲ್ಲಿ ಉಜ್ಜಯಿನೀ ಪಟ್ಟಣವನ್ನಾಳುತ್ತಿದ್ದ ವಿಕ್ರಮಮಹಾರಾಜನಿಗೆ ಖಡ್ಗವನ್ನು ಅನುಗ್ರಹಿಸಿದವರು ಶ್ರೀರೇಣುಕಾಚಾರ್ಯರಲ್ಲವೇ ? ಲೋಕಪ್ರಸಿದ್ಧರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವ ಸಿದ್ಧಾಂತವನ್ನು ಉಪದೇಶಿಸಿದವರು ಇದೇ ಆಚಾರ್ಯರಲ್ಲವೇ ? ಇವೇ ಮೊದಲಾದ ಪ್ರಾಚೀನ ಚರಿತ್ರೆಗಳನ್ನು ವಿದ್ವಾಂಸರು ಚೆನ್ನಾಗಿ ನೋಡಿಕೊಳ್ಳಬೇಕು ಈಗ್ಗೆ ೨ ಸಾವಿರ ವರ್ಷಗಳ ಪೂರ್ವದಲ್ಲಿ ವಿರಚಿತವಾಗಿರುವ ಸಿದ್ಧಾಂತಶಿಖಾಮಣಿಯಲ್ಲಿ ಶ್ರೀರೇಣುಕಾಚಾರ್ಯರ ಸೋಮನಾಥಲಿಂಗೈಕ್ಯವು ಉಕ್ತವಾಗಿರುವುದನ್ನು ನೋಡಿ ಶಂಕಿತರಾಗಿರುವುದು ಒಳ್ಳೆತಲ್ಲವೇ ? ಶ್ರೀಕರಭಾಷ್ಯವನ್ನು ಬರೆದು ಸುಪ್ರಸಿದ್ಧರಾಗಿರುವ ಶ್ರೀಪತಿ ಪಂಡಿತರು ಕ್ರಿ ಶ ೧೦೬೦ ರಲ್ಲಿದ್ದರೆಂದು ಕೆಲವರೂ ಅದಕ್ಕಿಂತಲೂ ಮೊದಲಿದ್ದರೆಂದು ಕೆಲವರೂ 'ಮಾಡರನ್‌ರಿವ್ಯೂ' ಮೊದಲಾದ ಇಂಗ್ಲೀಷ್ ಪತ್ರಿಕೆಗಳಲ್ಲಿ ಇತಿಹಾಸ ದೃಷ್ಟಿಯಿಂದ ಸಿದ್ಧಮಾಡಿರುವುದು ಸರ್ವತ್ರ ಪ್ರಸಿದ್ಧವಿದೆ ಇಷ್ಟು ಪ್ರಾಚೀನರಾಗಿರುವ ಶ್ರೀಪತಿ ಪಂಡಿತರು ತಮ್ಮ ಬ್ರಹ್ಮಸೂತ್ರಭಾಷ್ಯಾರಂಭದಲ್ಲಿ —

> ಶ್ರೀಮತ್ಕುಟ್ಟಾಚಲ ವಿಹಾರದೀಕ್ಷಂ
> ಸ್ವಶಿಷ್ಯ ಸಕ್ತೀಶನಪೂರ್ಣಪಕ್ಷಂ ।
> ದುರಾಗಮಾವಾದಿ ವಿದಾರದಕ್ಷಂ
> ಭಜಾಮ್ಯಹಂ ರೇವಣಕಲ್ಪವೃಕ್ಷಂ ॥

ಎಂದು ಶ್ರೀ ರೇಣುಕಗಣರ ಆವಿರ್ಭಾವರನ್ನು ಸ್ತುತಿಸಿದ್ದಾರೆ ಇದಲ್ಲದೆ ರೇಣುಕಾದಿಗಳೇ ವಿಷ್ಣುಬ್ರಹ್ಮೇಂದ್ರಾದಿ ದೇವತೆಗಳಿಗೂ ಸಹ ಮೋಕ್ಷದಾಯಕವಾದ ಲಿಂಗಧಾರಣ ಪಂಚಾಕ್ಷರೀ ಮಂತ್ರೋಪದೇಶಗಳನ್ನು ಮಾಡಿದರೆಂದು, ಪಾಶುಪತತಂತ್ರಾದಿಗ್ರಂಥಗಳು ಸಾರುತ್ತಿರುವವು ಕನ್ನಡನಾಡಿನ ವೀರಶೈವ ಕವಿಗಳಲ್ಲಿ ಆದ್ಯನಾದ ಹರಿಹರದೇವನು ತನ್ನ ಗಿರಿಜಾಕಲ್ಯಾಣವೆಂಬ ಮಹಾಕಾವ್ಯದಲ್ಲಿ —

> ಗರಳಂ ಭದ್ರಮುಖಂ ಶುಭೋದಯ ನಭಂಗಂ ಶಂಕಕರ್ಣಂ ಷಡ
> ಕ್ಷರ ನುತ್ತುಂಗಶಿರಂ ವೃಕೋದರ ನಟಿಮ್ಮಂ ದಾರುಕಂ ಸಿಂಹಕೇ
> ಸರಿ ಸಿದ್ಧಾಂತಿ ಯುದಾರನೇಕಜಟ ವಿಷ್ಣುಸ್ತಾಲಿ ತಾರಾಕ್ಷ ಸಂ ।
> ಜ್ಞಿತರಂ ಭಾನವಾಯ ನಪ್ರತಿಮಾಕಾರಂ ವಿಸ್ತರಂ ಶಂಭುಂ ॥
> (ಅಶ್ವಾಸ ೧೦ ಶ್ಲೋಕ ೨೬)

ಜಗಜ್ಜನನಿಯಾದ ಪಾರ್ವತೀದೇವಿಯರ ವಿವಾಹಮಹೋತ್ಸವಕ್ಕೋಸ್ಕರವಾಗಿ ಮುನಿಗಳೂ ಋಷಿಗಳೂ ಮಹಾಮಹಾ ದೇವಾಸುರರೂ ಆಗಮಿಸಿದರೆಂದೂ ಅನಂತರ ಪ್ರಮಥರು ಗಣವರರಾದ ಗರಳ, ಭದ್ರಮುಖ, ಶುಭೋದಯ, ಅಭಂಗ, ಶಂಕಕರ್ಣ, ಷಡಕ್ಷರ, ಉತ್ತುಂಗಶಿರ, ವೃಕೋದರ, ನಟಪ್ಪ, ದಾರುಕ, ಸಿಂಹಕೇಸರಿ, ಸಿದ್ಧಾಂತಿ ಅನೇಕಜಟ ಇತ್ಯಾದಿ ಗಣಶ್ರೇಷ್ಠರು ಬಂದರೆಂದು ವರ್ಣಿಸಿದ್ದಾನೆ ಶಂಕಕರ್ಣ, ದಾರುಕ ಮುಂತಾದ ಗಣನಾಯಕರು ಪಂಚಾಚಾರ್ಯರೊಳಗಿನ ದಾರುಕ ಏಕೋರಾಮರೆಂಬುದು ಪ್ರಸಿದ್ಧವೇ ಇದೆ " ಸಸರ್ಜ ಸ್ವಾತ್ಮನಾತುಲ್ಯಾನ್ ಶಿವೋರುದ್ರಾನ್ ದ್ವಿಜೋತ್ತಮಾನ್ । ಎಂದು ಸೂತಸಂಹಿತೆಯ ಶಿವಮಾಹಾತ್ಮ್ಯಖಂಡದ ೧೦ನೆಯ ಅಧ್ಯಾಯದಲ್ಲಿಯೂ, " ಸಸರ್ಜ ಮನಸಾರುದ್ರಾನ್ ಸ್ವಾತ್ಮತುಲ್ಯಾನ್ ಮಹೇಶ್ವರಾನ್ । ನೀಲಕಂಠಾಂಸ್ತ್ರಿನೇತ್ರಾಂಶ್ಚ ಜಟಾಮುಕುಟಮಂಡಿತಾನ್ ॥ " ಎಂದು ಆದಿತ್ಯಪುರಾಣದ ೨೩ ನೆಯ ಅಧ್ಯಾಯದಲ್ಲಿಯೂ, ಸಿದ್ಧಾಂತಶಿಖಾಮಣಿಯ ೨ ನೆಯ ಪರಿಚ್ಛೇದದ ೨೭ ೨೮ ನೆಯ ಶ್ಲೋಕಗಳಲ್ಲಿಯೂ, ಶಿವನು ಸೃಷ್ಟಿಯ ಆರಂಭದಲ್ಲಿ ತನಗೆ ಸಮಾನರಾದ ರೇಣುಕಾದಿ ಪ್ರಮಥರನ್ನು ಹುಟ್ಟಿಸಿದನೆಂದು ಹೇಳಲ್ಪಟ್ಟಿದೆ ಸ್ಕಂದೋಪನಿಷತ್ತು ವೀರಲಿಂಗೋಪನಿಷತ್ತು ಮುಂತಾದ ಉಪನಿಷದ್ಭಾಗಗಳ ಪ್ರವರ್ತಕರು ಆ ಪ್ರಮಥರೇ ಆಗಿದ್ದಾರೆ ಸುಮಾರು ಕ್ರಿ ಶ ೮ ನೆಯ ಶತಮಾನದಲ್ಲಿ ರೇವಣಗಣನಾಥನ ಹೆಸರಿಟ್ಟುಕೊಂಡಿದ್ದ ರೇವಣನಾಥನೆಂಬ ರಾಜನ ಹೆಸರು ಚಿತ್ರದುರ್ಗ ತಾಲೂಕ ಬೇವಿನಹಳ್ಳಿ ಗ್ರಾಮದ ಹನುಮಂತದೇವರಗುಡಿಯ ಪ್ರಾಕಾರದಲ್ಲಿರುವ ಒಂದು ಶಾಸನದಲ್ಲಿ ಉಕ್ತವಾಗಿದೆ (ಚಿತ್ರದುರ್ಗ ತಾ॥ ಶಾಸನ ನಂಬರು ೭೪) ಇದನ್ನಾದರೂ ಈ ಮಹಾಮೇಧಾವಿಗಳು ನೋಡಬೇಕು ಈಗ್ಗೆ ೮ ವರ್ಷಗಳ ಕೆಳಗೆ (ತಾ॥ ೨೬ ೧೧ ೧೯೩೩ ರಲ್ಲಿ) ಬನಾರಸ್ ಸಬ್ ಜಡ್ಜ್ ಕೋರ್ಟಿನಲ್ಲಿ ಕಾಶೀ ಜಗದ್ಗುರು ಪೀಠದ ಬಗ್ಗೆ ನಡೆದ ಒಂದು ಪ್ರಕರಣದಲ್ಲಿ ವಿಶೇಷ ಚರ್ಚೆಯಾಗಿ ಸುಪ್ರಸಿದ್ಧ ಜಡ್ಜರಾದ ವೆ॥ ಬಾಬುವಿಂಧ್ಯವಾಸಿಪ್ರಸಾದರವರು ಪೀಠದವರು ಹಾಜರುಮಾಡಿದ ಅನೇಕ ಧರ್ಮಗ್ರಂಥಗಳನ್ನೂ, ಕಾಗದಪತ್ರಗಳನ್ನೂ ಶಾಸನಗಳನ್ನೂ ಒಳ್ಳೇ ಕುಶಲತೆಯಿಂದ ಪರಿಶೋಧಿಸಿ, ವೀರಶೈವಮತವನ್ನು ಐವರು ಆಚಾರ್ಯರು ಲಿಂಗೋದ್ಭವರಾಗಿ ಸ್ಥಾಪಿಸಿದರೆಂದೂ ಆ ಪೀಠವು ಅತ್ಯಂತ ಪ್ರಾಚೀನವಾದುದೆಂದೂ ತೀರ್ಮಾನಿಸಿ ಈ ಕೆಳಗಿನಂತೆ ಜಡ್ಜಮೆಂಟ್ ಬರೆದಿರುತ್ತಾರೆ

J N Farquhar M A D Litt, in his book entitled the Religious quest of India gives the history of Veerasuvas beginning from page 259 He says that the tradition is that the sect was founded by five ascetics— Ekorama Panditaradhya Revana Marula and Viswaradhya—who are said to have sprung from the heads of Shiva incarnate age after age. These are regarded very ancient

ಜೆ ಎನ್ ಫಾರ್ಕುಹಾರ್ ಎಂ ಎ, ಡಿ ಲಿಟ್, ಎಂಬುವರು ತಮ್ಮ 'ರಿಲಿಜಸ್ ಕ್ವೆಸ್ಟ್ ಆಫ್ ಇಂಡಿಯಾ' ಎಂಬ ಗ್ರಂಥದಲ್ಲಿ ೨೫೯ ನೇ ಪುಟದಿಂದ ವೀರಶೈವರ ಚರಿತ್ರೆಯನ್ನು ಕೊಟ್ಟಿರುತ್ತಾರೆ ಅವರು ಪದ್ಧತಿಯ ಗದಲ್ಲಿಯೂ ಶಿವನ ಮುಖಗಳಿಂದ ಉದ್ಭವಿಸಿದ ಏಕೋರಾಮ, ಪಂಡಿತಾರಾಧ್ಯ, ರೇವಣಾರಾಧ್ಯ, ಮರುಳಾರಾಧ್ಯ, ಮತ್ತು ವಿಶ್ವಾರಾಧ್ಯ ಎಂಬ ಐವರು ಯತಿಗಳಿಂದ ಈ ಮತವು ಸ್ಥಾಪಿಸಲ್ಪಟ್ಟಿತೆಂದೂ, ಇವರ ಬಹಳ ಪ್ರಾಚೀನಕಾಲದವರೆಂದೂ, ಬರೆದಿರುತ್ತಾರೆ ಇವರ ಮೇಲಿಂದ ಪಂಚಾಚಾರ್ಯರು ಪರಶಿವನ ಮುಖಗಳಿಂದ ಉದ್ಭವರಾಗಿ ಭೂಮಂಡಲದಲ್ಲಿ ಲಿಂಗಮುಖದಿಂದ ಅವತರಿಸಿದರೆಂಬುವು ಸ್ಪಷ್ಟವಾಗಿ ತಿಳಿಯುತ್ತದೆ ಇದಲ್ಲದೆ 1 ಗೌ॥ ಓರಿಯಂಟಲ್ ಸೀರೀಸ್ ಕ್ಲಾಸ್ ಬಿ ನ 4 ಭಾಂಡಾರಕರ್‌ರವರ ವೈಷ್ಣವಿಸಂ ಅಂಡ್ ಶೈವಿಜಂ ಪುಟ 187 ರಿಂದ 190 ರ ವರೆಗ (೨) ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರ ಭೂಷಣ (ಇಂಗ್ಲೀಷ) ಪುಸ್ತಕದ ಪುಟಗಳು 7, 8 ಮತ್ತು 10 (೩) ಶೃಂಗೇರಿ ಮಠದ ಗುರುವಂಶಕಾವ್ಯದ ಪುಟ 109 ಮತ್ತು 110 (4) ಶಿವತತ್ವರತ್ನಾಕರ ಪುಟ 10 (೧) ಬಸಂಗ್ ಗಜೆಟಿಯರ್ ಪುಟ 123

ಈ ಗ್ರಂಥಕರ್ತರು ತಮ್ಮ ಅಭಿಪ್ರಾಯಗಳನ್ನು ನಿಷ್ಪಕ್ಷಪಾತವಾಗಿ ಬರೆದಿರುತ್ತಾರೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ ಇವರ ಈ ಗ್ರಂಥಗಳ ಪರಿಶೀಲನೆಯಿಂದ ವೀರಶೈವರು ಹಿಂದೂದೇಶದ ಮತಗಳಲ್ಲಿ ಶ್ರೇಷ್ಠತೆಯನ್ನು ಪಡೆದಿರುವರೆಂದು ನನಗೆ ಚೆನ್ನಾಗಿ ಮನದಟ್ಟಾಗಿರುವುದು ಇವರ ಸಂಖ್ಯೆಯು ದಕ್ಷಿಣದೇಶದಲ್ಲಿ ವಿಶೇಷವಾಗಿದೆ ಇವರು ಮಠಗಳೆಂಬ ಮತಸಂಸ್ಥೆಗಳನ್ನು ಹೊಂದಿರುತ್ತಾರೆ ಮತ್ತು ಈ ಮಠದವರು ಇತರ ಮಠಗಳಿಗಿಂತಲೂ ತಮ್ಮ ಶಿಷ್ಯರಮೇಲೆ ಹೆಚ್ಚಿನ ಅಧಿಕಾರವನ್ನು ನಡೆಯಿಸುತ್ತಾರೆ ಸದ್ಯದ ವ್ಯಾಜ್ಯಕ್ಕೆ ಸಂಬಂಧಪಟ್ಟ ಮಠವು ಈ ವರ್ಗದ ಮಠಗಳಲ್ಲಿ ಒಂದಾಗಿರುವುದಲ್ಲದೆ ವೀರಶೈವರಲ್ಲಿ ಒಳ್ಳೆ ಪ್ರಾಶಸ್ತ್ಯವನ್ನು ಪಡೆದಿರುತ್ತದೆ ಈ ಮಠದ ಅಸ್ತಿತ್ವವು ಮೇಲಿನ ಗ್ರಂಥಗಳಲ್ಲಿ ಹೇಳಿರುವಂತೆ ಚರಿತ್ರೆಯಲ್ಲಿ ಕೂಡಿಕೊಂಡುಬಂದಿರುತ್ತದೆ ಎಂದು ಬರೆದಿರುತ್ತಾರೆ ಇದನ್ನೆಲ್ಲಾ ಈ ನವೀನ ನಾಸ್ತಿಕರು ಚೆನ್ನಾಗಿ ನೋಡಿ ನಿಜತತ್ವಗಳನ್ನು ತಿಳಿದುಕೊಂಡು ಭ್ರಾಂತಿಯಿಂದ ದೂರರಾಗಬೇಕು (ಸಶೇಷ)

॥ ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ವಾಳಕೆಸಿದ್ಧರಾಮಪ್ಪನವರ ಸ್ತುತ್ಯದಾನ

ವಾಳಕೆಸಿದ್ಧರಾಮಪ್ಪನವರು ಸೊಲ್ಲಾಪುರದಲ್ಲಿ ಒಬ್ಬ ವರ್ತಕರಾಗಿರುವರು ಇವರ ತಂದೆಯವರ ಹೆಸರು ಪ್ರಭುವಪ್ಪನವರು ಇವರು ಮೊದಲು ಹೇಳಂಬ ಎಂಬ ಗ್ರಾಮದವರ ಅಲ್ಲಿದ್ದಾಗ್ಗೆ ಒಳ್ಳೇ ಶ್ರೀಮಂತರಾಗಿದ್ದರು ಪ್ರಭುವಪ್ಪನವರಿಗೆ ದೇವತಾ ಭಕ್ತಿಯು ವಿಶೇಷವಾಗಿತ್ತು ತಾವು ಸಂಸಾರಿಗಳಾಗಿದ್ದರೂ ಸಂಸಾರದಲ್ಲಿ ವೈರಾಗ್ಯ ಹುಟ್ಟಿ ತಮ್ಮ ಅಪಾರ ಧನಧಾನ್ಯಗಳನ್ನು ಸತ್ಪಾತ್ರಕ್ಕೆ ದಾನವನ್ನು ಮಾಡಿ ಸೊಲ್ಲಾಪುರಕ್ಕೆ ಬಂದು ವಾಸಿಸಿದರು ವ್ಯವಹಾರದಲ್ಲಿ ನಿರಪೇಕ್ಷ ಬುದ್ಧಿಯುಳ್ಳವರಾಗಿ ಯಾವಾಗಲೂ ಗುರುಸೇವಾ ಸತ್ಕಾರ್ಯಗಳಲ್ಲಿಯೇ ಕಾಲವನ್ನು ಕಳೆಯುತ್ತಿದ್ದರು ಇಂಥವರ ಪುತ್ರರೆನಿಸಿದ ಸಿದ್ಧರಾಮಪ್ಪನವರು ಬಾಲ್ಯದಲ್ಲಿ ಕೇವಲ ವ್ಯವಹಾರದಲ್ಲಿ ಲಕ್ಷ್ಯವುಳ್ಳವರಾಗಿ ಧಾರ್ಮಿಕ ಕಾರ್ಯಪ್ರವೃತ್ತಿಗೆ ಲಕ್ಷ್ಯ ಕೊಡುತ್ತಿರಲಿಲ್ಲ ಹೀಗೆಯೇ ಕೆಲವು ಕಾಲವನ್ನು ಕಳೆದರು ಭಕ್ತಿನಲ್ಲಿ ಪರಸ್ಪರ ಪ್ರೇಮ ಹುಟ್ಟಬೇಕಾದರೆ ಜನ್ಮಾಂತರದ ಅಂಶಾಂಶೀಭಾವದ ಸಂಸ್ಕಾರವಿರಬೇಕು ಇಲ್ಲವಾದರೆ ಯಾವ ಉಪಾಯವನ್ನು ಕೈಕೊಂಡರೂ ಪ್ರೇಮವು ಹುಟ್ಟಲಾರದು ಸಿದ್ಧರಾಮಪ್ಪನವರು ಎಷ್ಟೋ ಜನ ಗುರುಮೂರ್ತಿಗಳನ್ನು ಕಂಡಿರಬಹುದು ಅವರ ಉಪದೇಶವನ್ನು ಕೇಳಿರಬಹುದು ತಂದೆಯವರೊಡನೆ ಗುರುಪೂಜಾವೈಭವಕ್ಕೂ ಭಾಗಿಗಳಾಗಿರಬಹುದು ಆದರೂ ಆ ಸೌಭಾಗ್ಯವು ಸಾಮಾನ್ಯ ಮತಾಚಾರವೆಂದು ತಿಳಿದಿದ್ದರಿಂದ ಆ ಚಿಗುರು ಇವರಿಗೆ ಅಂಟಿಕೊಂಡಿರಲಿಲ್ಲ ಧ್ಯಾನಿಪೂರ್ವತಪಸಾ ಕಿಂ ಸಂಚಿತಾನಿ ಕಲೇಃ ಫಲಂತಿಪುರುಷಸ್ಯ ಯಥೈವ ವೃಕ್ಷಾಃ ಮರಗಳು ಒಳ್ಳೆವನದಿಗಳು ಪುಷ್ಪವಾಗಿದ್ದರೂ ವಸಂತಕಾಲದಲ್ಲಿಯೇ ಫಲಪಲ್ಲವಗಳಿಂದ ಶೋಭಿಸುತ್ತಿರುವಂತೆ ಪುರುಷರೂ ತಮ್ಮ ಭಾಗ್ಯವು ಪಲ್ಲವಿಸುವ ಕಾಲವನ್ನು ನಿರೀಕ್ಷಿಸಬೇಕಾಗುತ್ತದೆ ಆದ್ದರಿಂದ ಸದರೀ ಸಿದ್ಧರಾಮಪ್ಪನವ ತಂದೆಯ ಧರ್ಮಾಂಶವನ್ನು ಗುಪ್ತವಾಗಿ ಉಳಿಸಿತ್ತು ಇಂಥವರಿಗೆ ಸುಕೃತದ ಪರಿಪಕ್ವದ ದೆಸೆಯು ಎಂದಿತು ಈ ಸನ್ನಿವೇಶದಲ್ಲಿ ವೀರಶೈವಶಾಸ್ತ್ರೋಕ್ತ ರಹಸ್ಯಾರ್ಥಗಳನ್ನು ತಿಳಿದುಕೊಂಡು ಅದರಂತೆ ತಾವು ಆಚರಿಸುತ್ತ ಶಿಷ್ಯರನು ವೀರಶೈವ ಶಾಸ್ತ್ರೋಕ್ತಾಚಾರದಲ್ಲಿ ನೆಲೆಗೊಳಿಸತಕ್ಕವರಾಗಿ ಮಹಾರಾಷ್ಟ್ರ ಪ್ರದೇಶವನ್ನು ಪವಿತ್ರಗೊಳಿಸುತ್ತಿರುವ ಹೋಟಗಿ ಬೃಹನ್ಮಠಾಧ್ಯಕ್ಷ ಶ್ರೀ॥ ಷ॥ ಬ್ರ॥ ಚನ್ನವೀರಶಿವಾಚಾರ್ಯರ ಕೃಪಾ ಪಶಿಕಲೇ ಸ್ಪರ್ಶದಿಂದ ಸಾಮಾನ್ಯ ಶಿಲೆಯಂತೆ ತೋರುತ್ತಿದ್ದ ಸಿದ್ಧರಾಮಪ್ಪನವರ ಹೃದಯವು ದ್ರವಿಸ್ಸವಾಗಿ ಚಂದ್ರಕಾಂತ ಶಿಲಾಸ್ವರೂಪವನ್ನು ಧರಿಸ ಹತ್ತಲು ಏರ್ಪಡಿಸಿದ ಕಳೆಯು ಆಗ ತೋರಹತ್ತಿತು ಗುರುಗಳ ಮೇಲೆ ಅನುರಾಗವು ಹೆಚ್ಚುತ್ತ ಬಂದಂತೆ ದೇವತಾ ಭಕ್ತಿಯು ಕುಡಿಯೊಡೆಯ ಹತ್ತಿತು ದೇಹೇಂದ್ರಿಯಗಳು ದಿನೇ ದಿನೇ ವ್ಯವಹಾರ ನಿಶ್ಚಿತ್ವವನ್ನು ದೂರ ಮಾಡುತ್ತ ಗುರುಸೇವೆಗೆ ಉನ್ಮುಖವಾಗಹತ್ತಿದವು ಏತದ್ದ್ವಾರಾ ಸಮುದ್ಭೂತವಾದ ಶಕ್ತಿಪಾತವನ್ನು ಲಕ್ಷಿಸಿ ಹೋಟಗಿ ಶ್ರೀಸ್ವಾಮಿಗಳವರು ಸಿದ್ಧರಾಮಪ್ಪನು ನಮ್ಮ ಧರ್ಮ ಜಾಗ್ರತೆಯ ಚಿತ್ರಕ್ಕೆ ಫಲಕವಾಗಲು ಅರ್ಹರೆನಿಸುವನೆಂದು ಶುಭ ಸಮಯದಲ್ಲಿ ಶಿವದೀಕ್ಷಾ ಸಂಸ್ಕಾರವನ್ನು ಮಾಡಿ ವೀರಶೈವ ಧರ್ಮ ಜಾಗ್ರತವನ್ನು ಮಾಡತಕ್ಕವರಾದರು ಎದ್ದಿರುವ ಸಂಸ್ಕಾರ ಬಲದಿಂದ ಗುರು ದೇವತೆಗಳಲ್ಲಿ ಪ್ರೇಮವು ಅತ್ಯುತ್ಕಟ ದೆಸೆಯ ಶಿಖರವನ್ನು ಹತ್ತಲು ಕವಲೊಡೆಯುತ್ತಿತ್ತು ಇದು ಅವರಿಗಿದ್ದ ಜನ್ಮಾಂತರ ಸಂಸ್ಕಾರದ ವರ್ಣಕಲೆಯ ಪ್ರಭಾವವೇ ಇರುತ್ತದೆ ತಾವು ವ್ಯವಹಾರದವರಾಗಿದ್ದುದರಿಂದ ಅದರಲ್ಲಿಯೂ ಕೇವಲ ಸತ್ಯಪ್ರಮಾಣಿಕತೆಯನ್ನು ಬಲವಾಗಿ ಸರ್ವಪ್ರಯತ್ನದಿಂದ ಕಾಪಾಡುತ್ತ ಬರುತ್ತಿರುವುದರಿಂದ ಮುಂಬಯಿ ಮೊದಲಾದ ಸ್ಥಳಗಳಲ್ಲಿಯ ಶ್ರೀಮಂತ ವ್ಯಾಪಾರಿಗಳ ಆದರಕ್ಕೆ ಪೂರ್ಣಪಾತ್ರರಾಗಿ ಲಕ್ಷಾಂತರ ರೂಪಾಯಿಗಳ ಸಹಾಯವನ್ನು ಪಡೆಯಲು ಸರ್ವರ ಪ್ರೇಮಬದ್ಧರಾಗಿರುವರು ಇವರು ವ್ಯವಹಾರದಲ್ಲಿ ಬಾಗರೂಕರೂ ಸಹೋದ್ಯೋಗಿಗಳೂ, ಸಾಹಸಿಗಳೂ ಆಗಿರುವರು ಇಂತಹ ಪ್ರಾಮಾಣಿಕ ವರ್ತನವನ್ನು ನೋಡಿ ಲಕ್ಷ್ಮೀದೇವಿಯೂ ಕೃಪಾದೃಷ್ಟಿಯನ್ನಿಟ್ಟಿರುವಳು ಸದರಿ ಸಿದ್ಧರಾಮಪ್ಪನವರು ದೈವಬಲವೇ ಮುಖ್ಯವೆಂದು ಪರಿಭಾವಿಸಿ ಉತ್ಪತ್ತಿಗಿಂತಲೂ ಹೆಚ್ಚಾಗಿಯೇ ಧರ್ಮಕಾರ್ಯಗಳಲ್ಲಿ ಪ್ರವರ್ತಿಸಿ, ಪ್ರತಿ ವರ್ಷವೂ ಸಾವಿರಾರು ರೂಪಾಯಿಗಳನ್ನು ಗುರುದೇವತಾ ಪೂಜಾವಿನಿಯೋಗಕ್ಕೆ ಅರ್ಪಿಸುತ್ತಿರುವರು ಪ್ರತಿವರ್ಷವೂ ಶ್ರೀಶೈಲಮಹಾಯಾತ್ರೆಯನ್ನು ಪೂರೈಸುತ್ತಿರುವರು ಶ್ರೀಮಲ್ಲಿಕಾರ್ಜುನ ಸೇವೆಯೇ ಇವರಿಗೆ ಮುಖ್ಯವಾದುದಾಗಿದೆ ಈ ಮಹಾಶಯನಿಗೆ ಯಾವಾಗಲೂ ವ್ಯವಹಾರದ ಬದಿಯಲ್ಲಿ ಧರ್ಮಚಿಂತನೆಯು ಇದ್ದೇ ಇರುವುದು ಹೀಗೆ ಧಾರ್ಮಿಕವ್ಯವಹಾರ ಕ್ರಿಯಾತತ್ಪರರಾದ ವಾಳಕೆ ಸಿದ್ಧರಾಮಪ್ಪನವರು ಸ್ಥಿರಧರ್ಮಬುದ್ಧಿಯಿಂದ ಹೋಟಗಿ ಶ್ರೀ ಸ್ವಾಮಿಗಳು ಶ್ರೀಶೈಲ ಮೊದಲಾದ ಯಾವಯಾವ ಸ್ಥಳಗಳಲ್ಲಿ ವಿಶೇಷಾನುಷ್ಠಾನ ತತ್ಪರರಾಗಿರುವರೋ ಅಲ್ಲೆಲ್ಲ ಇತರ ಮಹಾಶಯರೊಡನೆ ಭಕ್ತಿಪರವಶರಾಗಿ ಮಾಡುತ್ತಿರುವ ಸೇವೆಯು ಇಹಪರ ಸುಖಾಪೇಕ್ಷಿಗಳಿಗೆ ಮಾರ್ಗದರ್ಶಕವಾಗಿರುವುದು ಇಂತಹ ಸಿದ್ಧರಾಮಪ್ಪನವರು ಈವರೆವಿಗೂ ಗುರುದೇವತೆಗಳಿಗೆ ಧನವಸ್ತ್ರಾದಿಗಳನ್ನು ಶಕ್ತ್ಯನುಸಾರವಾಗಿ ಕೊಡುತ್ತ ಬಂದದ್ದಾಯಿತು ಇವು ಸ್ಥಿರಧರ್ಮಕಾರ್ಯವೆನಿಸುವುದಿಲ್ಲ ಸ್ಥಿರಧರ್ಮವನ್ನು ಮಾಡಬೇಕೆಂದು ತಿಳಿದು ತಮ್ಮ ದೀಕ್ಷಾಗುರುಗಳಾದ ಹೋಟಗಿ ಬೃಹನ್ಮಠದ ಶ್ರೀ॥ ಷ॥ ಬ್ರ॥ ಬಾಲತಪಸ್ವಿ ಚನ್ನವೀರಶಿವಾಚಾರ್ಯರಿಗೆ ಉದ್ದೇಶಿಸಿದಂತೆ ಸ್ಥಿರದಾನವೆಂದರೆ ಒಂದು ಮಠವನ್ನು ಕಟ್ಟಿಸಿ ಕೊಟ್ಟರೆ ಅದರಲ್ಲಿ ಗುರುಮೂರ್ತಿಗಳು ಆಚಂದ್ರಾರ್ಕವಾಗಿ ಶಿವದರ್ಶನ ಶಿವವ್ರತ, ಶಿವಕಥೋಪದೇಶಾದಿ ಮಂಗಲಕಾರ್ಯಗಳನ್ನು ಮಾಡಿಕೊಂಡು ಸಮಸ್ತರಿಗೂ ಧರ್ಮಜಾಗ್ರತಿಯನ್ನುಂಟುಮಾಡುತ್ತ ಹೋಗುವರು ಇದೇ ದಾನವೇ ಉತ್ಕೃಷ್ಟದಾನವೆಂದು ನಿರ್ಧರಿಸಿ ಐದುಸಾವಿರ ರೂಪಾಯಿ ಬೆಲೆಬಾಳುವ ಸೊಲ್ಲಾಪುರ ಕಸಬಾದಲ್ಲಿರುವ ಒಂದು ಜಾಗವನ್ನು ಕೊಡಲು ಯತ್ನವಿಟ್ಟುಕೊಂಡು ತನ್ನ ಮನೆತನದ ವಂಶಗುರುಗಳಾದ ರುದ್ರಪಶುಪತಿಸ್ವಾಮಿಗಳನ್ನು ಒರಮಾಡಿಕೊಂಡು ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ೧೦೦೮ ಶಿವಾನಂದರಾಜೇಂದ್ರ ಶಿವಾಚಾರ್ಯರನ್ನು ಮಹೋತ್ಸವದಿಂದ ತನ್ನ ಮನೆಗೆ ದಯಮಾಡಿಸಿಕೊಂಡು ಬಂಧು ಬಾಂಧವರೊಡನೆ ಮಹಾ ಪಾದಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ಸೇವಿಸಿ ಗಣತೃಪ್ತಿಯಾದನಂತರ ಶ್ರೀ ಶ್ರೀ ಜಗದ್ಗುರುಗಳವರನ್ನು ಅಖಿಲಭಕ್ತ ಮಾಹೇಶ್ವರರೊಡನೆ ಆ ಜಾಗಕ್ಕೆ ಮಹೋತ್ಸವದಿಂದ ದಯಮಾಡಿಸಿಕೊಂಡು ಹೋಗಿ ಶುಭ ಮುಹೂರ್ತದಲ್ಲಿ ಶ್ರೀ ಜಗದ್ಗುರುಗಳವರ ಅಮೃತಹಸ್ತದಿಂದ ಆ ಭೂಮಿಯನ್ನು ಶ್ರೀ॥ ಷ॥ ಬ್ರ॥ ಬಾಲತಪಸ್ವಿ ಚನ್ನವೀರ ಶಿವಾಚಾರ್ಯರಿಗೆ ಅರ್ಪಿಸಿದನೆಂದ ಸಂಕಲ್ಪವಿಟ್ಟು ವೈದಿಕ ಪೂಜೋತ್ಸವದಲ್ಲಿ ಶಿಲಾಸ್ಥಾಪನೆಯನ್ನು ಮಾಡಿಸಿದ ವಿಷಯ ಸುವರ್ಣಾಕ್ಷರದಿಂದ ಬರೆದಿರುವ ಭಾಷ್ಟ್ರಿಪಟ್ಟಿ ಬಳಿಕ ಜಗದ್ಗುರುಗಳವರು ಸಿಂಹಾಸನ ರೋಹಣವನ್ನು ಮಾಡಿದರು ಅನೇಕ ಶ್ರೀಮಂತರು ಸಭೆಯನ್ನಲಂಕರಿಸಿದ್ದರು ಕಾರ್ಯದ ಸೂಚನಾರಾದಕೂಡಲೇ ಶ್ರೀಮಾನ್ ಜಗದೇವರಾವ್ ವೆ ಎಂ ಈಶ್ವರ ಶ್ರೀಮಾನ್ ದಮ್ಮ ವಕೀಲರು ವೇ॥ ಪಂ॥ ವಾರದ ಸಂಸ್ಕೃತಪಾಠಶಾಲಾ ಪ್ರಧಾನ ಧ್ಯಾಪಕರಾದ ಸಾಹಿತ್ಯರತ್ನ ಜಗದೀಶ ಶಾಸ್ತ್ರಿಗಳ ಸೂಚನೆ ಪ್ರಕಾರ ಶ್ರೀಮಾನ್ ಬಾವಣಗಾವಕರ್ ಸಂಜೀವಿನಿ ಸಂಪಾದಕರು ಸ್ಫುಟಂಗವಾಗಿ ಶ್ರೀಮಾನ್ ವಾಳಕೆ ಸಿದ್ಧರಾಮಪ್ಪನವರು ಮಾಡಿದ ಸ್ಥಿರದಾನದ ಕಾರ್ಯದ ಆನಂದವನ್ನು ಉಪನ್ಯಾಸದಿಂದ ಸರ್ವರಿಗೂ ತಿಳಿಪಡಿಸಿದ ಬಳಿಕ ಶ್ರೀ ಶ್ರೀ ಜಗದ್ಗುರುಗಳು ದಾನದ ಪ್ರಭಾವವನ್ನು ಸಿದ್ಧರಾಮಪ್ಪನವರ ಗುರುದೇವತೆಗಳಲ್ಲಿಯ ಅಚಲಭಕ್ತಿಯನ್ನು ವರ್ಣಿಸಿ ಶಾಸ್ತ್ರಾರ್ಥಫಲಹೇತುವಾದ ಭೂದಾನಪ್ರಭಾವವನ್ನು ಸಪ್ರಮಾಣವಾಗಿಯೂ, ಸಯುಕ್ತಿಕವಾಗಿಯೂ ಬೋಧಿಸಿ ಇಂತಹ ಕಲಿಯ ನಿರಾಶ್ರಿತಕಾಲದಲ್ಲಿ ಧರ್ಮಕ್ಕೆ ಆಶ್ರಯವು ಸಿದ್ಧರಾಮಪ್ಪನಿಂದ ದೊರೆತದ್ದು ಸನಾತನ ಧರ್ಮಕ್ಕೆ ಊರುಗೋಲು ಆಯಿತೆಂದು ಅವನ್ನು ಸಮರ್ಥನ ಮಾಡಿ ಹೋಟಗೀ ಸ್ವಾಮಿಗಳಾದಿಯಾಗಿ ಉತ್ತರೋತ್ತರ ಒರುತ್ತಿರುವ ಪರಂಪರೆಯ ಶಿವಪೂಜಾನುಷ್ಠಾನ ಸತ್ಫಲಕ್ಕೆ ಭಾಗಿಯಾದ ಸಿದ್ಧರಾಮಪ್ಪನವರ ವಂಶದಲ್ಲಿ ಯಾವಾಗಲೂ ಸಂತತಿ ಸಂಪತ್ತುಗಳೆಂಬ ಫಲಪಲ್ಲವಗಳಿಂದ ಪೆರೆಯುತ್ತಿರಲೆಂದು ಶುಭಾಶೀರ್ವಾದವನ್ನು ಮಾಡಿದರು ಬಳಿಕ ಹಾಂತುರಾಯಿಗಳು ಹಂಚಲ್ಪಟ್ಟು ಆಚಾರ್ಯರ ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು

ಓರ್ವ ಪ್ರತ್ಯಕ್ಷದರ್ಶಿ

ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತಿಮಹೋತ್ಸವ

ಮಹಾ ಶಿವರಾತ್ರಿ



ಭರತಖಂಡದಲ್ಲಿರುವ ಸಮಸ್ತವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವದೇ ಆಸ್ತಿಕಮತಾನುಯಾಯಿಗಳ ಮುಖ್ಯ ಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡ ಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಆ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯ ವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು.

ಸೂಚನೆ

ಪ್ರತಿವರ್ಷ ಪದ್ಧತಿಯಂತೆ ಮಹಾಶಿವರಾತ್ರಿ ನಿಮಿತ್ತವಾಗಿ ಮುಂದಿನ (ತಾ॥ ೧೬-೨-೪೨) ವಾರದ ಪತ್ರಿಕೆಯು ಹೊರಡುವುದಿಲ್ಲ.

ಮ್ಯಾ.

ಯುದ್ಧವಾರ್ತೆ.

ಸಿಂಗಪುರದ ಮುತ್ತಿಗೆ

ಸಿಂಗಪುರದ ಮೇಲೆ ಪ್ರಚಂಡ ಮುತ್ತಿಗೆಯು ಈಗಾಗಲೇ ಆರಂಭವಾಗಿದೆ. ಫಿರಂಗಿಗಳು ಅತ್ಯುಗ್ರವಾಗಿ ಬೆಂಕಿಯ ಮಳೆಗರೆಯುತ್ತಿವೆ. ಶತ್ರುಗಳು ಬೆಂಕಿಯಿಟ್ಟ ಎಣ್ಣೆ ಹಡಗೊಂದು ಉರಿದುಹೋಯಿತು.

ಬ್ರಿಟನ್ನಿನಲ್ಲಿ ರೈಲುಗಳನ್ನು ಸ್ತ್ರೀಯರು ಬಿಡುತ್ತಿದ್ದಾರೆ

ಬ್ರಿಟನ್ನಿನಲ್ಲಿ ರೈಲುಗಳನ್ನು ಓಡಿಸುವುದರಲ್ಲಿ ಸ್ತ್ರೀಯರು ಹೆಚ್ಚಿನ ಪಾತ್ರವಹಿಸುತ್ತಿದ್ದಾರೆ ಲಂಡನ್ ಉತ್ತರ ಪೂರ್ವ ರೈಲ್ವೆಮಾರ್ಗವೊಂದರಲ್ಲಿಯೇ ಸುಮಾರು ೧೦,೦೦೦ ಸ್ತ್ರೀಯರು ಕೆಲಸ ಮಾಡುತ್ತಿದ್ದಾರೆ

ಮಿತ್ರರಾಷ್ಟ್ರಗಳ ಹಡಗುಗಳ ಮೇಲೆ ಶತ್ರುಗಳ ಮುತ್ತಿಗೆ

ಸಿಂಗಪುರ ಬಂದರಿನಲ್ಲಿದ್ದ ಮಿತ್ರ ರಾಷ್ಟ್ರಗಳ ಹಡಗುಗಳ ಮೇಲೆ ಜಪಾನ್ ವಿಮಾನಗಳು ಮುತ್ತಿಗೆ ನಡೆಸಿದವು ನೌಕಾ ಮೂಲದಲ್ಲಿದ್ದ ಎಣ್ಣೆ ಹಡಗೊಂದಕ್ಕೆ ಎರಡು ದಿನಗಳ ಹಿಂದೆ ಶತ್ರುಬಾಂಬಿನಿಂದ ಬೆಂಕಿಹತ್ತಿಕೊಂಡಿತು ಕದಿನ ಬೆಳಗ್ಗೆ ಸಿಂಗಪುರದ ಮೇಲೆ ಮುತ್ತಿಗೆ ನಡೆಸಲು ಬಂದ ಅಪಾರ ಸಂಖ್ಯೆಯ ವಿಮಾನಗಳನ್ನು ಕೆಡವಲಾಯಿತು

ಜೋಹರ್‌ನಲ್ಲಿ ಶತ್ರು ಸೇನೆ ದಕ್ಷಿಣಕ್ಕೆ ಚಲಿಸುತ್ತಿದೆ

ಅಪಾರ ಶತ್ರು ಸೇನೆಗಳು ಜೋಹರ್ ಪ್ರಾಂತ್ಯದಲ್ಲಿ ದಕ್ಷಿಣದ ಕಡೆಗೆ ಬರುತ್ತಿವೆಯೆಂದು ತಿಳಿದುಬಂದಿದೆ ಶತ್ರು ವಿಮಾನಗಳು ಸಿಂಗಪುರ ದ್ವೀಪದ ಮೇಲೆ ಬಾಂಬುಗಳನ್ನು ಸುರಿಸುತ್ತಲೂ ಗುಂಡು ಹಾರಿಸುತ್ತಲೂ ಇವೆ ಹೆಚ್ಚಿನ ನಷ್ಟವೇನೂ ಆಗಿಲ್ಲ ಮಿತ್ರ ಸೇನೆಯ ಫಿರಂಗಿಗಳು ಜೋಹರ್ ಪ್ರಾಂತ್ಯದಲ್ಲಿ ಕಾಣಬಂದ ಲಾರಿಗಳ ಮೇಲೂ ಮತ್ತು ಪರಿಶೀಲನೆ ಸ್ಥಾನಗಳ ಮೇಲೂ ಮುತ್ತಿಗೆ ನಡೆಸಿದುವು ಸಿಂಗಪುರ ದ್ವೀಪದಲ್ಲಿ ಬಂದಿಳಿಯಲು ಜಪಾನರು ಯೋಚಿಸಿರುವ ಸುದ್ದಿಯು ತಿಳಿದುಬಂದಿಲ್ಲ

ಬರ್ಮವನ್ನು ಮುತ್ತಲು ಸಿದ್ಧತೆ

ಉತ್ತರ ಥೈಲೆಂಡಿನಲ್ಲಿರುವ ಜಪಾನರು ಮೇಲಿನ ಬರ್ಮಾಕ್ಕೆ ಮುತ್ತಿಗೆ ಹಾಕಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂಬುದಾಗಿ ಚೀಣಾ ಮಿಲಿಟರಿ ಅಧಿಕಾರಿಗಳೊಬ್ಬರು ತಿಳಿಸಿದ್ದಾರೆ ಮಲಯಾ ಮೂಲಭೂಮಿಯಲ್ಲಿ ನಡೆದ ಕದನದಲ್ಲಿ ಭಾಗವಹಿಸಿದ್ದ ಜಪಾನಿನ ೧೮ನೇ ದಳವು ಸಂಪೂರ್ಣವಾಗಿ ಧ್ವಂಸವಾಯಿತು ದಕ್ಷಿಣ ಸಮುದ್ರ ಕ್ಷೇತ್ರಕ್ಕೆ ಹೆಚ್ಚಿನ ಸೇನೆಯನ್ನು ಕಳಿಸಲೋಸುಗ ಚೀಣಾದಿಂದ ಅಪಾರ ಸೇನೆಯನ್ನು ಜಪಾನರು ಹಿಂದಕ್ಕೆ ಕರೆಸಿದರೆಂದು ಹೇಳಲಾಗಿದೆ ಶತ್ರುಗಳು ಮರ್ಟಬಾನ್ ಮೇಲೆ ಉಗ್ರವಾಗಿ ಮುತ್ತಿಗೆ ನಡೆಸುತ್ತಲೂ ಮತ್ತು ಶೆಲ್‌ಗಳನ್ನು ಹಾರಿಸುತ್ತಲೂ ಇದ್ದಾರೆ ಪಾ ಕ್ಷೇತ್ರದಲ್ಲಿ ಶತ್ರು ಯೋಧರಿಗೂ ಬರ್ಮೀಯರಿಗೂ ಘರ್ಷಣೆಗಳಾಗುತ್ತಿವೆ ಬ್ರಿಟಿಷ್ ಫಿರಂಗಿಗಳು ಕೂಡ ಶತ್ರು ಸ್ಥಾನಗಳ ಮೇಲೆ ಶೆಲ್ ಹಾರಿಸುತ್ತಲಿವೆ

ಜೊಹೋರ್ ಸಿವಿಲಿಯನರು ತೆರಳುತ್ತಿದ್ದಾರೆ

ಮಲಯಾ ಮೂಲ ಭೂಮಿಯ ದಕ್ಷಿಣ ತೀರದ ಕೊನೆಯಲ್ಲಿರುವ ಜೊಹೋರ್ ಬ್ಯಾಹ್ರು ಎಂಬ ನಗರದ ಸಿವಿಲಿಯನರೆಲ್ಲ ಜಪಾನ್ ಅಧಿಕಾರಿಗಳ ಸೂಚನೆಯಂತೆ ಹೆಚ್ಚು ಕ್ಷೇಮಕರವಾದ ಪ್ರದೇಶಗಳಿಗೆ ಹೋಗಲು ಆರಂಭಿಸಿದ್ದಾರೆಂದು ತಿಳಿದುಬರುತ್ತದೆ

ಜನರು ಎದೆಗೆಟ್ಟಿಲ್ಲ

ಸಿಂಗಪುರ್ ದ್ವೀಪದಿಂದ ಮುಕ್ಕಾಲು ಮೈಲಿ ದೂರದಲ್ಲಿ ಸಮುದ್ರ ತೀರದುದ್ದಕ್ಕೂ ಶತ್ರುಗಳು ಬಂದು ಸೇರಿದ್ದರೂ ಸಿಂಗಪುರದ ಜನರು ಕಂಗೆಟ್ಟಿಲ್ಲ ಸಾಮಾನ್ಯ ಜನರ ನಂಬಿಕೆಗೆ ಅದರಿಂದ ಸ್ವಲ್ಪವೂ ಧಕ್ಕೆತಗಲಿಲ್ಲ ಕಡಿಮೆ ವಿಸ್ತಾರವುಳ್ಳ ಮತ್ತು ಬಲಯುತ ಫಿರಂಗಿಗಳಿಂದ ರಕ್ಷಿತವಾದ ಈ ದ್ವೀಪದಲ್ಲಿ ಈಗ ಸಾಮಾನ್ಯ ಸೇನೆಯೆಲ್ಲ ಕೇಂದ್ರೀಕೃತವಾಗಿರುವುದರಿಂದ ಜಪಾನರು ಬಂದಿಳಿಯುವುದು ಬಹಳ ಕಷ್ಟ

ನದಿ ದಾಟಲು ಆಗಲಿಲ್ಲ

ಬರ್ಮಾದಲ್ಲಿ ಸಾಲ್‌ವೀನ್ ನದಿಯನ್ನು ದಾಟಲು ಜಪಾನರು ನಡೆಸಿದ ಪ್ರಯತ್ನಗಳನ್ನೆಲ್ಲ ವಿಫಲಗೊಳಿಸಲಾಯಿತು ಜ|| ಹಟ್ಟನರ ಸೇನೆಯು ಶತ್ರುಪಡೆಯೊಂದನ್ನು ನಿರ್ಮೂಲಮಾಡಿತು ಯಾವ ಸೇತುವೆಯನ್ನೂ ಶತ್ರುಗಳು ಹಿಡಿಯಲಾರದಾದರು ನಮ್ಮ ಸೇನೆಗಳು ಇನ್ನೂ ಸಾಲ್‌ವೀನ್ ನದಿಯ ಪೂರ್ವಭಾಗದಲ್ಲಿ ಹೋರಾಡುತ್ತಿವೆ ಮೌಲ್‌ಮೀನನ್ನು ತ್ಯಜಿಸುವ ಮುನ್ನ ನಡೆದ ಹೋರಾಟದಲ್ಲಿ ಬರ್ಮಾ ಯೋಧರೂ ಅಪೂರ್ವ ಶೌರ್ಯವನ್ನು ತೋರಿಸಿದರು ನಗರದಿಂದ ಬ್ರಿಟಿಷ್ ಸೇನೆಯನ್ನು ಹಿಂದಕ್ಕೆ ಕರೆಯುವ ಮುನ್ನ ಶತ್ರುಗಳು ಅನೇಕ ಬಾರಿ ಎಲ್ಲ ಕಡೆಗಳಿಂದಲೂ ಮೇಲೆ ಬಿದ್ದರು ಆ ಹೋರಾಟದ ಕಾಲದಲ್ಲಿ ಬರ್ಮಾಯೋಧರು ಅಪೂರ್ವ ರೀತಿಯಲ್ಲಿ ಹೋರಾಡಿದರು

ಆಫ್ರಿಕಾ ಯುದ್ಧರಂಗ

ಲಿಬ್ಯಾದಲ್ಲಿ ಬೆಂಘಾಸಿ ಪಟ್ಟಣದಿಂದ ಶತ್ರುಸೈನ್ಯಗಳು ಮುಂದಕ್ಕೆ ಬರುತ್ತಿದ್ದಾಗ ಮೊರಾವಾಪಟ್ಟಣಕ್ಕೆ ಪಶ್ಚಿಮದಲ್ಲಿ ಈ ಸೈನ್ಯಗಳನ್ನು ಬ್ರಿಟಿಷ್ ಸೈನ್ಯಗಳು ಎದುರಿಸಿ ಕದನ ನಡೆಸಿದವು ಈ ಪಟ್ಟಣವು ತಮ್ಮ ವಶವಾಗಿವೆಯೆಂದು ಇಟಲಿಯ ಪ್ರಕಟಣೆ ತಿಳಿಸುತ್ತದೆ ಆದರೆ ಆ ಬಗ್ಗೆ ಮತ್ತಾವ ಕಡೆಯಿಂದಲೂ ಸಮರ್ಥನೆ ದೊರೆತಿಲ್ಲ ಜದಬಾಯಾವಿಗೂ, ಎಲ್‌ಅಜಿಲಾವಿಗೂ ಮಧ್ಯೆ ಶತ್ರು ಮೋಟಾರ್ ಟ್ರಾನ್ಸ್‌ಪೋರ್ಟ್‌ಮೇಲೆ ಬ್ರಿಟಿಷ್ ವಿಮಾನಗಳು ಸತತವಾಗಿ ಧಾಳಿ ನಡೆಸಿದವು ಟ್ರಿಪೋಲಿಯ ಮೇಲೂ ಬಲವಾಗಿ ಧಾಳಿ ನಡೆಸಲಾಯಿತು ಮೆಡಿಟರೇನಿಯನ್ನಿನಲ್ಲಿ ಎರಡು ಶತ್ರು ಸರಬರಾಜು ಹಡಗುಗಳಿಗೆ ಟಾರ್ಪಿಡೋ ಮಾಡಿ ಮುಳುಗಿಸಲಾಯಿತು

ಸಿಂಗಪುರಕ್ಕೆ ಆಸ್ಟ್ರೇಲಿಯಾ ಸಚಿವರ ಭರವಸೆ

“ಶತ್ರುಗಳನ್ನು ಎದುರಿಸಲು ಮಿತ್ರರಾಷ್ಟ್ರಗಳು ಪ್ರಚಂಡ ಪ್ರಯತ್ನ ಮಾಡುವುದರಲ್ಲಿವೆ,” ಎಂದು ಸಂಗ್ರಾಮ ಸಚಿವರಾದ ಮಿ|| ಫೋರ್ಡ್‌ರವರು ಸಿಂಗಪುರದಲ್ಲಿರುವ ಆಸ್ಟ್ರೇಲಿಯಾ ಸೇನೆಗೆ ರೇಡಿಯೋ ಮೂಲಕ ಮಾತನಾಡುತ್ತ ತಿಳಿಸಿದರು ಶತ್ರುವನ್ನು ಒಂದೊಂದು ಗಂಟೆ ತಡೆದ ಹಾಗೂ ಹೆಚ್ಚಿನ ಸಂಗ್ರಾಮ ವಸ್ತುಗಳನ್ನು ಮತ್ತು ಸೇನೆಯನ್ನು ಶೇಖರಿಸಿ, ಕಳುಹಿಸಿಕೊಡಲು ಸಾಧ್ಯವಾಗುತ್ತದೆ. ಆದ್ದರಿಂದ ನೀವು ರಕ್ಷಣೆ ಕಾರ್ಯವನ್ನು ಸ್ವಲ್ಪವೂ ಸಡಲಿಸಬಾರದು. ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ಸಹಾಯವನ್ನು ನಿಮಗೆ ಕಳಿಸಲು, ನಮ್ಮ ಕೈಲಾದ ಪ್ರಯತ್ನವನ್ನು ಮಾಡುತ್ತಿದ್ದೇವೆ ವಸ್ತು ಸಂಗ್ರಹದಿಂದ ಸಿಕ್ಕಿದಷ್ಟು ಸಾಮಾನನ್ನು ನಾವು ಅಲ್ಲಿಗೆ ಕಳಿಸುತ್ತಿದ್ದೇವೆಂದು ಯಾರೂ ತಿಳಿಯಬಾರದು. ನಮ್ಮ ಸಹಾಯವೀಗ ಪುಟ್ಟ ನದಿಯಂತೆ ತೆರಳುತ್ತಿದೆ ಅದು ಇತ್ವರಲ್ಲಿಯೇ ಪ್ರವಾಹವಾಗುವುದು. ಶತ್ರುಗಳು ಎದುರಿಸಲಾಗದಂತಹ ಪ್ರಮಾಣವನ್ನು ಮುಟ್ಟುವುದು ಮಿತ್ರ ಸೇನೆಗಳ ಚಲನ ಅಸಾಧ್ಯವಾಗಿದೆ ನಿಮ್ಮನ್ನು ಖಂಡಿತ ಬರಿಗೈಲಿ ಬಿಡುವುದಿಲ್ಲ ಮಿತ್ರ ರಾಷ್ಟ್ರಗಳೆಲ್ಲ ನಿಮ್ಮ ಹಿಂದಿವೆ ಅವುಗಳ ಸಾಧನ ಸಂಪತ್ತುಗಳ ಬಲವು ಸಂಪೂರ್ಣವಾಗಿ ನಿಮ್ಮದು ಈಗ ಕಾಲವು ಅಮೂಲ್ಯವಾದುದೆಂದು ಶತ್ರುವಿಗೆ ಗೊತ್ತು ಅವರು ಬೇಗನೆ ಜಯಭೇರಿ ಬಾರಿಸಲು ಪ್ರಯತ್ನ ಮಾಡುತ್ತಿದ್ದಾರೆ ನಿಮ್ಮ ವಿಚಾರದಲ್ಲಿರುವ ಹೆಮ್ಮೆಯನ್ನೂ ಮತ್ತು ಗೌರವವನ್ನು ನಿಮ್ಮ ದೇಶೀಯರು ಈ ಸಂದೇಶದ ಮೂಲಕ ನಿಮಗೆ ಕಳಿಸಿದ್ದಾರೆ ನಮ್ಮ ಶಕ್ತಿಮೀರಿ ಸಹಾಯ ಕಳಿಸುವೆವೆಂಬ ನಮ್ಮ ಈ ಪ್ರತಿಜ್ಞೆಯನ್ನು ಸ್ವೀಕರಿಸಿ ನೀವಾಗಲೇ ಮಿತ್ರರಾಷ್ಟ್ರಗಳಿಗೆ ಅಮೂಲ್ಯವಾದ ಕಾಲಾವಕಾಶವನ್ನು ದೊರಕಿಸಿಕೊಟ್ಟಿದ್ದೀರಿ

ಜ|| ವೇವೆಲ್‌ರವರ ಸಂದೇಶ

ನೈಋತ್ಯ ಪೆಸಿಫಿಕ್ ಕ್ಷೇತ್ರದ ದಂಡನಾಯಕ ಜ|| ವೇವೆಲ್‌ರವರು ಸಿಂಗಪುರದ ರಕ್ಷಕರಿಗೆ ವಿಶೇಷರೀತಿಯ ನಿರೂಪವನ್ನು ಕಳಿಸುತ್ತ—‘ಪೆಸಿಫಿಕ್ ಕ್ಷೇತ್ರದಲ್ಲಿರುವ ನಮ್ಮ ಸೇನೆಗೆ ಸಹಾಯನೀಡಲು ಅಪಾರ ಬಲವನ್ನು ಅಮೇರಿಕದಿಂದಲೂ ಬ್ರಿಟನ್ನಿನಿಂದಲೂ ಕಳಿಸಲಾಗುತ್ತಿದೆ ಅದು ಬರುವವರೆಗ ಕಾಲಾವಕಾಶವನ್ನು ಪಡೆಯುವುದೇ ನಿಮ್ಮ ಗುರಿಯಾಗಿರಬೇಕು ಬ್ರಿಟಿಷ್ ಸೇನೆಯು ಯೂರೋಪಿನಲ್ಲಿ ನಡೆದ ಪ್ರಥಮ ಕದನದಲ್ಲಿ ಜರ್ಮನರನ್ನು ಎದುರಿಸಿತು ನಾವೂ ಅದರಂತೆಯೇ ನಡೆದು ತೋರಿಸಿ, ಅವರ ಕೀರ್ತಿಯನ್ನು ಉಳಿಸಬೇಕು ಈ ಜಪಾನರನ್ನು ಎದುರಿಸಿ ಹಿಂದಿನ ಸ್ಥೈರ್ಯವನ್ನು ಉದ್ಧಾರಮಾಡಬೇಕಾಗಿದೆ ಎಡಬಲ ಪಾರ್ಶ್ವಗಳಿಂದ ನಮ್ಮನ್ನು ಆವರಿಸಲು ಅಸಾಧ್ಯವಾದಂಥ ಮತ್ತು ತಮ್ಮ ಅಪಾರ ಸಂಖ್ಯಾಬಲದಿಂದ ಮುಂದೆ ನುಗ್ಗಲಾರದಂತಹ ಸ್ಥಾನದಲ್ಲಿ ಈಗ ಶತ್ರುಗಳು ಬಂದಿದ್ದಾರೆ ನೀವು ಉಗ್ರವಾಗಿ ಕಾದುವ ಒಂದು ಅಂಗುಲ ಭೂಮಿಯನ್ನೂ ಬಿಟ್ಟುಕೊಡಲಾಗದು ಹಾಗೆ ಬಿಟ್ಟುಕೊಟ್ಟಾಗ ಶತ್ರುವಿಗೆ ಅತ್ಯಲ್ಪ ಪ್ರಮಾಣದಲ್ಲಿ ಉಪಯುಕ್ತವೆನಿಸತಕ್ಕಂತಹ ವಸ್ತುಗಳನ್ನು ಸಹ ನಾಶಮಾಡಿ ಬರಬೇಕು ಬಿಟ್ಟುಕೊಡುವ ಯೋಚನೆಯನ್ನೇ ನೀವೀಗ ತ್ಯಜಿಸಿ, ಹೋರಾಡಬೇಕು ಸಿಂಗಪುರ್ ಕದನವು ಟೋಬ್ರುಕ್ ಕದನದಷ್ಟೇ ಚಿರಸ್ಮರಣೀಯವಾದುದೂ ಮತ್ತು ಫಲಕಾರಿಯಾದುದೂ ಆಗುವಂತೆ ನೀವು ಕಾದಾಡಬೇಕು ಎಂದು ತಿಳಿಸಿದ್ದಾರೆ

ಸಿಂಗಪುರದ ಪ್ರಾಮುಖ್ಯತೆ

ಸಿಂಗಪುರವು ಜಪಾನರ ವಶವಾಗುವುದಾದರೆ, ಜಪಾನರಿಗೆ ಅದರಿಂದ ಬಹಳ ಪ್ರಯೋಜನವಾಗುತ್ತದೆ ಅನಿಷ್ಟ ಪ್ರಮಾಣದ ಪ್ರಯೋಜನವೆಂದರೆ ಸಬ್‌ಮೆರೀನ್‌ಗಳಿಗೂ, ಡಿಸ್ಟ್ರಾಯರುಗಳಿಗೂ ಬೇಕಾದ ಸಾಮಾನುಗಳನ್ನು ಸರಬರಾಜು ಮಾಡಲೋಸುಗ ಸಿಂಗಪುರವನ್ನು ಶತ್ರುಗಳು ಉಪಯೋಗಿಸಿಕೊಳ್ಳಬಹುದು ಆಗ ಶತ್ರುನೌಕೆಗಳು ರಿಯೋ ಆರ್ಚಿಪೆಲಗೋವನ್ನು ಹತೋಟಿಯಲ್ಲಿ ಇಡಬಹುದು ಅಲ್ಲದೆ ಉತ್ತರ ಸುಮಾತ್ರಾವನ್ನು ಮಿತ್ರ ಸೇನೆಗಳು ಉಳಿಸಿಕೊಳ್ಳುವುದು ಅಸಾಧ್ಯವಾಗುತ್ತದೆ ಸಿಂಗಪುರಕ್ಕೂ ಮತ್ತು ಬಟಾವಿಯಕ್ಕೂ ಮಧ್ಯೆ ಸುಮಾತ್ರಾದ್ವೀಪದ ಪೂರ್ವದಲ್ಲಿರುವ ಪಾಲೆಂಬಾಗ್ ಎಂಬುದಕ್ಕೆ ಸಹ ವಿಪತ್ತುಂಟಾಗುತ್ತದೆ ಮಿತ್ರನೌಕೆಗಳಿಗೆ ಸಾಮಾನುಗಳನ್ನು ಸರಬರಾಜುಮಾಡುವ ಮುಖ್ಯ ಕೇಂದ್ರವಿದು ಈ ಸ್ಥಾನಗಳು ಕೈಬಿಟ್ಟರೆ ಅದರ ಉಪಯೋಗಕ್ಕೆ ಬಾರದಂತಾದರೆ ಮಿತ್ರಸೇನೆಗಳು ಜಾವಾವರೆಗೆ ಹಿಂದೆ ಸರಿಯಬೇಕಾಗುತ್ತದೆ ಆಗ ಜಾವಾ ದ್ವೀಪದ ಉತ್ತರತೀರದ ಬಂದರುಗಳ ಮೇಲೆ ಏಕಪ್ರಕಾರವಾಗಿ ಶತ್ರುಗಳು ಮುತ್ತಿಗೆ ನಡೆಸುವರು ಆಗ ಭಾರತ ಮತ್ತು ದಕ್ಷಿಣ ಆಫ್ರಿಕಗಳಿಂದ ಒಂದು ಕಡೆಯೂ, ಆಸ್ಟ್ರೇಲಿಯಾ ಮತ್ತು ಅಮೇರಿಕಗಳಿಂದ ಇನ್ನೊಂದು ಕಡೆಯೂ ಬರುವ ವಸ್ತುಗಳನ್ನು ದಕ್ಷಿಣ ಜಾವಾದಲ್ಲಿರುವ ಬಂದರುಗಳ ಮೂಲಕ ಪಡೆಯಬೇಕಾಗುತ್ತದೆ

ಸ್ವೀಕಾರ.

ಧಾರವಾಡ ಡಿ|| ಗದಗ ಶಹರದಲ್ಲಿರುವ ಮ|| ರಾ|| ರಾಚಪ್ಪ ಪ್ರಭಪ್ಪ ಬಸೆಟ್ಟಿ ಇವರಿಗೆ ಬೆಟಗೇರಿ ಗ್ರಾಮದ ಮ|| ರಾ|| ಗುರುಶಾಂತಪ್ಪ ರಾಚಪ್ಪ ಮುದಗಲ್ಲ ಇವರ ಪುತ್ರಿ ಚಿ|| ಸೌ|| ಚನ್ನಬಸವ್ವನನ್ನು ಕೊಟ್ಟು ನಿಶ್ಚಯ ಮಾಡಿದ ಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಿದ 2 ರೂ ವಧುವಿನ ಕಡೆಯಿಂದ ತೆಗೆಯಿಸಿದ 1 ರೂ ಒಟ್ಟು 3 ರೂಪಾಯಿಗಳು ಗದಗ ಬೆಟಗೇರಿಯಲ್ಲಿರುವ ಮ|| ರಾ|| ಸಂಗನಬಸಪ್ಪ ಕಾಶಪ್ಪ ಬೇಲೇರಿ ಇವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ|| ಹೂವಿನಹಡಗಲಿಯ ಸುಪ್ರಸಿದ್ಧ ಕಿರಾಣಿ ವ್ಯಾಪಾರಿಗಳಾದ ಶ್ರೀಯುತ ಕೋಡಿಹಳ್ಳಿ ಮಲ್ಲಪ್ಪನವರು ಕಳೆದ ಮಾಘ ಶುದ್ಧ ಬಿದಿಗೆ ದಿವಸ ನಡೆದ ಲಗ್ನಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಹೂವಿನಹಡಗಲಿ ಗುರುಸೇವಾಕಿಂಕರ ಶ್ರೀಯುತ ಸೊಪ್ಪಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತದೆ

ಬಾದಾಮಿ ತಾ|| ಜಕನೂರು ಗ್ರಾಮದ ಶ್ರೀಬಸಯ್ಯನವರು ಅಂಗಡಿ ಇವರ ಪುತ್ರ ಬಳ್ಳಾರಿ ಜಿ|| ಕೊಟ್ಟೂರು ಆನರರಿ ಮ್ಯಾಜಿಸ್ಟ್ರೇಟ್ ಮ|| ರಾ|| ವೀರಣ್ಣಾ ಅಂಗಡಿ ಇವರು ತಮ್ಮ ಮಾತೃಶ್ರೀ ಸಾತೀರಮ್ಮನವರ ನಿಧನದ ಶಾಂತಿಗಾಗಿ ನಡೆಸಿದ ಶ್ರೀಗುರುಪಾದಪೂಜೆ ಮತ್ತು ರುದ್ರಾಭಿಷೇಕಸಮಾರಂಭದಲ್ಲಿ ಪ್ರಭಾಪೋಷಣೆಗಾಗಿ ಸಮರ್ಪಿಸಿದ 1 ರೂ ಯು ಕೋಣ್ಣೂರು ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಶಿವಮೊಗ್ಗ ಡಿ|| ಸಾಗರತಾಲೂಕು ಗುಳ್ಳೇಹಳ್ಳಿಯಲ್ಲಿರುವ ಹಿರೆಮನೆ ಬಿ ಚನ್ನಬಸಪ್ಪಗೌಡ್ರ ಸ್ವಗೃಹದಲ್ಲಿ ನಡೆದ ಗಣನಾಮಪಾರಾಯಣ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 0 8 0 ಮ|| ರಾ|| ಎಚ್ ಬಿ ಚನ್ನಬಸಪ್ಪಗೌಡರು ಗುಳ್ಳೇಹಳ್ಳಿ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಶೋಚನೀಯ ನಿಧನ

ನಿಜಾಮ ಇಲಾಖಾ ಮಬಲಗುಂಡಿಯಲ್ಲಿರುವ ಶ್ರೀಮಾನ್ ಧರ್ಮವೀರ ದಾನಶೂರ ಶರಣಪ್ಪಣ್ಣ ಸತ್ತೇಪುರ ಇವರ ಪುತ್ರಿಯವರಾದ ಚಿ|| ಸೌ|| ಶಾರದಮ್ಮನವರು ಶಿವಾಧೀನರಾದರೆಂಬ ವಿಷಯವನ್ನು ಕೇಳಿ ಅತ್ಯಂತ ವ್ಯಸನವೆನಿಸುತ್ತದೆ ಶ್ರೀ ಶಾರದಮ್ಮನವರು ಅತ್ಯಂತ ಸದ್ಗುಣಶಾಲಿನಿಯವರಾಗಿದ್ದರು ಶ್ರೀ ಶರಣಪ್ಪನವರಿಗೆ ಪುತ್ರಸಂತಾನವಿಲ್ಲದಿರುವದರಿಂದ ಶಾರದಮ್ಮನವರೇ ಅವರಿಗೆ ಸರ್ವಸ್ವದಂತಿದ್ದರು ದೊರೆಗಳು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಅಸಾಧಾರಣ ವೈಭವದಿಂದ ಇವರ ವಿವಾಹ ಕಾರ್ಯವನ್ನು ನೆರವೇರಿಸಿದ್ದರು ಧರ್ಮವೀರರ ಪುತ್ರಿಯವರು ಸಾಕ್ಷಾತ್ ಶಾರದಾದೇವಿಯಂತೆಯೇ ವಿರಾಜಿಸುತ್ತಿದ್ದರು ಇವರ ನಯ ವಿನಯ ಭಯ-ಭಕ್ತಿ-ಸೌಶೀಲ್ಯಾದಿ ಸದ್ಗುಣಗಳು ಅನುಕರಣೀಯವಾಗಿದ್ದವು ಈ ಸ್ತ್ರೀರತ್ನವು ನಮ್ಮ ಸಮಾಜವನ್ನು ಅಗಲಿಹೋದುದು ಸಮಾಜದ ದುರ್ದೈವವೆಂದೇ ಹೇಳಬೇಕಾಗಿದೆ ಕರಾಳವಿಧಿಯು ಚಿಕ್ಕವಯಸ್ಸಿನಲ್ಲಿಯೇ ಇವರು ಇಹಲೋಕವನ್ನು ತ್ಯಜಿಸುವಂತೆ ಮಾಡಿದುದು ಅತ್ಯಂತ ದುಃಖಕರವಾಗಿದೆ ಈ ನಾರೀಮಣಿಯ ವಿಯೋಗದಿಂದ ಇಡೀ ನೈಜಾಂ ರಾಜ್ಯವೇ ದುಃಖಸಾಗರದಲ್ಲಿ ಮುಳುಗಿಹೋಗಿದೆ ಶ್ರೀ ಶಾರದಮ್ಮನವರ ತಾಯಿಯವರಾದ ಸೌ|| ಬಸವಲಿಂಗಮ್ಮನವರ ದುಃಖವನ್ನಂತೂ ವರ್ಣಿಸಲಸದಳವಾಗಿದೆ ಈಶ್ವರೇಚ್ಛೆಗೆ ಉಪಾಯವಿಲ್ಲ ಶ್ರೀ ಜಗದೀಶ್ವರನು ಮೃತರ ಆತ್ಮಕ್ಕೆ ನಿತ್ಯಶಾಂತಿಯನ್ನೂ, ಅಪಾರ ದುಃಖಕ್ಕೀಡಾಗಿರುವ ತಾಯಿತಂದೆಗಳ ಮನಸ್ಸಿಗೆ ಧೈರ್ಯವನ್ನೂ ಅನುಗ್ರಹಿಸಿ ಕಾಪಾಡಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ

|| ಶ್ರೀಗುರುಭ್ಯೋನಮಃ ||

ಆನಂದವಾರ್ತೆ

ಧಾರವಾಡ ಜಿಲ್ಲಾ ನವಲಗುಂದ ತಾಲೂಕ ಪೈಕಿ ಶಿಣಗವಾಡ ಗ್ರಾಮದಲ್ಲಿರುವ ಜಿ. ಎಸ್. ಹಿರೇಮಠ ಇವರು ಕೆಲವು ವರ್ಷಗಳಿಂದ ಅಕ್ಟಿಂಗ್ ಸಬ್ ಇನಸ್ಪೆಕ್ಟರ್‌ಯಿದ್ದದ್ದು ಸರ್ವರಿಗೂ ಗೊತ್ತಿದ್ದ ಮಾತೇ ಇದೆ. ಇವರು ಶಾಂತಸ್ವಭಾವದವರೂ ದಯಾಳುಗಳೂ ಆಗಿದ್ದು ತಮ್ಮ ಕೆಲಸವನ್ನು ಒಳ್ಳೇ ಧೈರ್ಯದಿಂದಲೂ ಜಾಗ್ರತೆಯಿಂದಲೂ ಮಾಡಿ ಸರಕಾರದ ಪ್ರೀತಿಗೆ ಪಾತ್ರರಾಗಿ ಈಗ್ಗೆ ಕೆಲವು ದಿವಸಗಳ ಹಿಂದೆ ನಮ್ಮ ದಯಾಳು ಸರಕಾರದವರಿಂದ ಗದಗ ಸಿಟಿಗೆ ಖಾಯಂ ಸಬ್ ಇನಸ್ಪೆಕ್ಟರರಾಗಿ ನೇಮಿಸಲ್ಪಟ್ಟಿದ್ದನ್ನು ತಿಳಿಸಲು ಅತ್ಯಂತ ಸಂತೋಷವೆನಿಸುತ್ತದೆ. ಸದರಿ ಸಬ್ ಇನಸ್ಪೆಕ್ಟರವರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿ ಸಕಲ ಸಂಪತ್ಸಮೃದ್ಧಿಯನ್ನೂ ಅನುಗ್ರಹಿಸಲೆಂದು ದಯಾಸಿಂಧುವಾದ ಭಗವಂತನನ್ನು ಪ್ರಾರ್ಥಿಸುತ್ತೇವೆ.

ಪಿ. ಸ್ವಾಮಿ ಹಿರೇಮಠ, ಕೊಣ್ಣೂರು

ದುಃಖವಾರ್ತೆ

ಬದಾಮಿ ತಾಲೂಕ ಪೈಕಿ ಜಕನೂರ ಗ್ರಾಮದಲ್ಲಿರುವ ವೇ॥ ಬಸವಯ್ಯನವರು ಅಂಗಡಿ ಇವರ ಧರ್ಮಪತ್ನಿಯವರಾದ ಸಾತಿರಮ್ಮನವರ, ಇದೇ ಮಾಘ ಶು॥ ೩ ಸೋಮವಾರ ರಾತ್ರಿ ೨ ಘಂಟೆಯ ಸುಮಾರಕ್ಕೆ ಶಿವಸಾಯುಜ್ಯವನ್ನೈದಿದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಇವರಿಗೆ ಅವಸಾನ ಕಾಲದಲ್ಲಿ ೬೦ ವರ್ಷಗಳಾಗಿದ್ದವು. ಇವರು ಬಸಯ್ಯನವರ ಮೊದಲನೆಯ ಪತ್ನಿಯವರಾಗಿದ್ದು, ಸಂತಾನವಾಗದ ಕಾರಣ ಎರಡನೆಯ ಪತ್ನಿಯನ್ನು ಮಾಡಿಕೊಳ್ಳುವದಕ್ಕೆ ತಮ್ಮ ಪತಿಗೆ ಒಳ್ಳೇ ಪ್ರೀತಿಯಿಂದ ಒಪ್ಪಿಗೆಯನ್ನು ಕೊಟ್ಟರು. ಅನಂತರ ವೇ॥ ಬಸಯ್ಯನವರು ಗುರುಸಿದ್ಧಮ್ಮನವರು ಹುಬ್ಬಳ್ಳಿ ಇವರನ್ನು ಲಗ್ನವಾದರು. ಇವರ ಉದರದಿಂದ ಒಬ್ಬ ಗಂಡುಮಗನೂ, ಇಬ್ಬರು ಹೆಣ್ಣುಮಕ್ಕಳೂ ಜನಿಸಿದರು. ಸಾತಿರಮ್ಮನವರು ತಮ್ಮ ಸವತಿಯ ಮಕ್ಕಳೆಂದು ಉದಾಸೀನ ಮಾಡದೆ ತಮ್ಮ ಹೊಟ್ಟೆಯ ಮಕ್ಕಳಿಗಿಂತಲೂ ಹೆಚ್ಚು ಪ್ರೀತಿಯಿಂದ ಜೋಪಾನಮಾಡುತ್ತಿದ್ದರು. ಗುರುಸಿದ್ಧಮ್ಮನವರನ್ನು ತಂಗಿ ಎಂದು ತಿಳಿದು ನಡೆಸಿಕೊಳ್ಳುತ್ತಿದ್ದರು. ಇದಕ್ಕೆಲ್ಲ ಅವರ ಸದ್ಗುಣಗಳೇ ಕಾರಣ. ಇವರ ಪತಿಯಾದ ವೇ॥ ಬಸಯ್ಯನವರು ಮೃತಪಟ್ಟು ಇಂದಿಗೆ ೯ ವರ್ಷಗಳಾದವು. ಅಲ್ಲಿಂದ ಇಲ್ಲಿಯವರೆಗೆ ತಮ್ಮ ಗೃಹಕೃತ್ಯದ ಕಾರಭಾರವನ್ನು ಒಳ್ಳೇ ದಕ್ಷತೆಯಿಂದ ನಡೆಯಿಸುತ್ತ ಸರ್ವಜನರ ಪ್ರೀತಿಗೂ ಪಾತ್ರರಾಗಿದ್ದರು. ಇವರಲ್ಲಿ ಪರೋಪಕಾರವೂ, ಗುರುಭಕ್ತಿಯೂ ವಿಶೇಷವಾಗಿತ್ತು. ಇಂಥ ಸ್ತ್ರೀರತ್ನವನ್ನು ಕಳೆದುಕೊಂಡದ್ದು ತಮ್ಮ ದುರ್ದೈವವೆಂದು ಇವರ ಸಂಬಂಧಿಗಳೂ, ಎರಡನೆಯವರೂ ವಿಶೇಷವಾಗಿ ಚಿಂತಿಸುತ್ತಿರುವರು. ಇವರ ಅಂತ್ಯೇಷ್ಟಿವಿಧಿಯು ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರ ಇವರ ನೇತೃತ್ವದಲ್ಲಿ ಶಾಸ್ತ್ರೋಕ್ತ ಪ್ರಕಾರವಾಗಿ ನೆರವೇರಿಸಲ್ಪಟ್ಟಿತು. ಸ್ಥಳ ಪರಸ್ಥಳದ ಜನರು ವಿಶೇಷವಾಗಿ ಕೂಡಿದ್ದರು. ಶ್ರೀಜಗದೀಶ್ವರನು ಶ್ರೀಸಾತಿರಮ್ಮನವರ ಆತ್ಮಕ್ಕೆ ಶಾಂತಿಯನ್ನೂ, ಅವರ ಬಂಧುಬಳಗದವರಿಗೆ ದುಃಖಶಮನವನ್ನೂ ಉಂಟುಮಾಡಲೆಂದು ಪ್ರಾರ್ಥಿಸುವ,

ಎಸ್. ಜಿ. ಹಿರೇಮಠ, ಕೊಣ್ಣೂರ

ಕೆಲವು ವಿಚಿತ್ರ ವನಸ್ಪತಿಗಳು

ಅರಬ್ಬೀ ಜನರು "ಸೋಪಾರ" ಎಂದರೆ "ಕೊಳಲು" ಎಂದು ಕರೆಯುತ್ತಿದ್ದ ಒಂದು ತರದ ವನಸ್ಪತಿಯನ್ನು ಈಗ ಪಾರಸದಲ್ಲಿ ಬೆಳೆಸತೊಡಗಿದ್ದಾರೆ. ಅದಕ್ಕೆ ಅವರು "ಸಿಳ್ಳಿನ ಗಿಡ"ವೆಂದು ಹೇಳುವರು. ಯಾವತ್ತು ವನಸ್ಪತಿಗಳಲ್ಲಿ ಇದು ಅತ್ಯಂತ ಚಮತ್ಕಾರವಾಗಿದೆ. ಈ ಗಿಡದ ಎಲೆಗಳಲ್ಲಿ ಸಣ್ಣ ದೊಡ್ಡ ತೂತುಗಳಿದ್ದು ಅವುಗಳೊಳಗಿಂದ ಗಾಳಿಯು ಹಾಯ್ದು ಹೋಗುವಾಗ ಕೊಳಲಿನಂತೆ ತರತರದ ಇಂಪಾದ ಧ್ವನಿಯುಂಟಾಗಿ ಕೇಳುವವರನ್ನು ಆಶ್ಚರ್ಯಸಾಗರದಲ್ಲಿ ಮುಳುಗಿಸಿಬಿಡುವುದು. ಒಂದುತರದ ಕ್ರಿಮಿಗಳು ಈ ಗಿಡಗಳಲ್ಲಿ ವಾಸಿಸುತ್ತಿದ್ದು ಅವು ಇವುಗಳ ಎಲೆಯಲ್ಲಿ ತೂತುಕೊರೆಯುವವು. ಸೂಡಾನ ಬಾರ್ಡೋಜಗಳಲ್ಲಿ ಈ ಗಿಡಗಳು ವಿಪುಲವಾಗಿವೆ.

ಕ್ಯಾಲಿಫೋರ್ನಿಯಾದಲ್ಲಿ ಬೆಳೆಯುವ "ಸಿಟ್ಟಿನಗಿಡ" ಎಂಬ ಇನ್ನೊಂದು ಚಮತ್ಕಾರಿಕ ವನಸ್ಪತಿಯಿದೆ. ಇದು ೧೦ ೧೨ ಫೂಟು ಎತ್ತರವಾಗಿ ಬೆಳೆಯುವುದು. ಬಿರುಗಾಳಿಯಿಂದ ಈ ಗಿಡಕ್ಕೆ ತೊಂದರೆಯಾಗತೊಡಗಿದರೆ ಇದು ಒಳ್ಳೇ ಕೋಪಗೊಂಡಂತೆ ಎಲೆಗಳನ್ನೆಲ್ಲ ಫಡ ಫಡ ಬಡಿದುಕೊಂಡು ಮುದುಡಿಯಾಗಿ ಸುತ್ತಲಿನ ಹವೆಯನ್ನೆಲ್ಲ ಅತ್ಯುಗ್ರವಾದ ಒಂದು ಬಗೆಯ ವಾಸನೆಯಿಂದ ತುಂಬಿಬಿಡುವುದು.

ಜಪಾನದೇಶದಲ್ಲಿ "ಜ್ವಾಲಾಮುಖಿಯಗಿಡ" ಎಂಬ ಬೇರೊಂದು ಪ್ರಕಾರದ ಗಿಡಗಳು ಬೆಳೆಯುವವು. ಸಾಯಂಕಾಲವಾಗಿ ಸೂರ್ಯಾಸ್ತವಾಗತೊಡಗಿದೊಡನೆ ಈ ಗಿಡಗಳು ತಮ್ಮ ಮೇಲ್ಭಾಗದ ಟೊಂಗೆಗಳಿಂದ ಬಿಳೀ ಹೊಗೆಯನ್ನು ಬಿಡಹತ್ತುವವು. ಈ ದೃಶ್ಯವು ಕಾಲ್ಪನಿಕವಾದುದಾಗಿರದೆ ನಿಜವಾಗಿಯೂ ಅಂತಹ ಹೊಗೆಯು ಅದರಿಂದ ಹೊರಬೀಳುವುದು. ಈ ಗಿಡಗಳು ಸಂಪೂರ್ಣ ಬೆಳವಣಿಗೆಯನ್ನು ಹೊಂದಿದಾಗ ೫೦—೬೦ ಫೂಟು ಎತ್ತರವಾಗಿರುವವು. ಸಾಯಂಕಾಲದ ಹೊರತು ಮಿಕ್ಕವೇಳೆಯಲ್ಲಿ ಇವು ಶಾಂತವಾಗಿರುವವು.

ಮೆಕ್ಸಿಕೋ ದೇಶದಲ್ಲಿ ಸೂಜಿದಾರಗಳನ್ನು ಕೊಡುವ ಒಂದುತರದ ವನಸ್ಪತಿಯಿದೆ. ಇದರ ಎಳೆಯ ಕೊಂಬೆಗಳ ತುದಿಯಲ್ಲಿ ಅಚ್ಚ ಹಸರು ಬಣ್ಣದ ಎಲೆಗಳ ನಡುವೆ ಸೂಜಿಯಂತಿರುವ ಮುಳ್ಳುಗಳಿರುವವು. ಈ ಮುಳ್ಳುಗಳನ್ನು ಕಿತ್ತಕೂಡಲೆ ಅವುಗಳ ಬುಡದಲ್ಲಿ ಸಾಕಷ್ಟು ಉದ್ದವಾದ ಎಳೆಯು ಸೂಜಿಯಲ್ಲಿ ಪೋಣಿಸಿದ ದಾರದಂತೆ ಹೊರಡುವುದು. ಅಲ್ಲಿಯ ಜನರು ಇವನ್ನು ಸೂಜಿದಾರಗಳಂತೆ ಉಪಯೋಗಿಸಿಕೊಳ್ಳುವರು.

ಕೊಲಂಬಿಯಾದಲ್ಲಿ ಕೆಂಪು ಬಣ್ಣದ ರಸವನ್ನು ಕೊಡುವ "ಮಸಿಯ ಗಿಡ"ವೆಂಬ ಒಂದು ಬಗೆಯ ಗಿಡಗಳು ಬೆಳೆಯುವವು. ಈ ರಸವನ್ನು ಮೇಲ್ತರದ ಮಸಿಯಂತೆ ಉಪಯೋಗಿಸಿಕೊಳ್ಳಬಹುದು. ಇದರಿಂದ ನಿಬ್ಬುಗಳಿಗೆ ತುಕ್ಕು ಹಿಡಿಯುವುದಿಲ್ಲ. ಮತ್ತು ಈ ಮಸಿಯಿಂದ ಬರೆದ ಕಾಗದವನ್ನು ನೀರೊಳಗೆ ಅದ್ದಿ ಒಣಗಿಸಿಟ್ಟರೆ ತುಸು ಹೊತ್ತಿನಲ್ಲಿಯೇ ಈ ಕೆಂಪು ಬಣ್ಣವು ಹೋಗಿ ಕಪ್ಪಾಗುವುದು. ಇದರಿಂದ ಬರೆದ ಅಕ್ಷರಗಳು ಮಾಸುವುದಿಲ್ಲ, ಅಥವಾ ಕಾಗದಗಳು ಕೆಡುವುದಿಲ್ಲ.

ಮಡಗಾಸ್ಕರ ದ್ವೀಪದಲ್ಲಿ ಆರವಟ್ಟಿಗೆಯ ಗಿಡಗಳೆಂಬ ಒಂದು ವಿಧದ ಗಿಡಗಳಿವೆ. ಇವು ತಮ್ಮ ಎಲೆಗಳಲ್ಲಿ ನೀರನ್ನು ಸಂಚಯಿಸಿಡುವವು. ಒಂದೊಂದು ಎಲೆಯಲ್ಲಿ ಸುಮಾರು ಒಂದು ಕ್ವಾರ್ಟ (೩ ಸೇರು) ತಣ್ಣಗಿನ ನೀರು ತುಂಬಿರುವುದು.

ಒಂದೊಂದು ಗಿಡಕ್ಕೆ ಇಂಥ ಮೂರು ನಾಲ್ಕು ಎಲೆಗಳಿರುವವು. ದಣಿದು ನೀರಡಿಸಿ ಬಂದ ದಾರಿಗರು ಈ ಎಲೆಗಳಿಗೆ ಒರ್ಜಗಳನ್ನು ಒಗೆದು ನೀರು ಸುರಿಯಹತ್ತಿದೊಡನೆ ಕೆಳಗೆ ನಿಂತು ಪಾತ್ರೆಗಳಲ್ಲಿ ತುಂಬಿಕೊಂಡು ಇಲ್ಲವೆ ಬೊಗಸೆಯೊಡ್ಡಿ ಮನಸಾರೆ ಕುಡಿದು ತಣಿಯುವರು.

ಪಶ್ಚಿಮದೇಶಗಳಲ್ಲಿ ಬೆಳೆಯುವ ಒಂದು ತರದ ಗಿಡದ ಎಲೆಗಳು ಹೋಕಾಯಂತ್ರದ ಮುಳ್ಳುಗಳಂತೆ ನೇರಾಗಿ ದಕ್ಷಿಣೋತ್ತರವಾಗಿ ನಿಂತಿರುವವು. ಎಲ್ಲ ಎಲೆಗಳು ಯಾವಾಗಲೂ ಇದೇ ರೀತಿಯಿಂದ ನಿಶ್ಚಿತದಿಕ್ಕನ್ನು ತೋರಿಸುತ್ತಿರುವದರಿಂದ ಇದಕ್ಕೆ ಅವರು ದಿಕ್ಕುತೋರಿಸುವ ಗಿಡಗಳೆನ್ನುವರು.

ನಮ್ಮ ದೇಶದ ಅಡವಿಗಳಲ್ಲಿರುವ ಒಂದು ಪ್ರಕಾರದ ಗಿಡಗಳ ಎಳೆಯ ಟೊಂಗೆಗಳ ಹಾಗೂ ಎಲೆಗಳ ಮೇಲೆ ಕಾಯ್ದು ಕೆಂಪಗಾದ ಸೂಜಿಯಂತೆ ಜ್ವಲಿಸುತ್ತಿರುವ ಮುಳ್ಳುಗಳಿದ್ದು ಅವುಗಳನ್ನು ಸೋಂಕಿದೊಡನೆ ಮೈಯೊಳಗಿನ ಅಸ್ಥಿಯೆಲ್ಲ ಉರಿಯಹತ್ತಿದಂತೆ ತೋರುವುದು.

ನಮ್ಮ ದೇಶದಲ್ಲಿ ಎಲ್ಲ ಕಡೆಗಳಲ್ಲಿ ಕಂಡುಬರುವ 'ಒಳಮುಳ್ಳಗ' 'ಹೊರಮುಳ್ಳಗ'ಗಳಂತೂ ಎಲ್ಲರಿಗೂ ಗೊತ್ತೇ ಇವೆ. ಅರತಿಯ ಬಳ್ಳಿಯ ಚಿಗುರೆಲೆಗಳನ್ನು ತಂದು ಎಣ್ಣೆಯಲ್ಲಿ ಅದ್ದಿ ಉರಿ ಹಚ್ಚಿದರೆ ಎಣ್ಣೆಯಲ್ಲಿ ಅದ್ದಿದ ಅರಿವೆಯಂತೆ ಉರಿಯುವುವು.

ಈಶ್ವರನ ಸೃಷ್ಟಿಯಲ್ಲಿ ಇನ್ನೂ ಎಂತೆಂಥ ಚಮತ್ಕಾರಗಳು ಅಡಗಿರುವವೋ ಯಾರು ಬಲ್ಲರು?

ಶತೃವಿನ ನಿಗ್ರಹದ ಅವಶ್ಯಕತೆ.

ಮೈಸೂರು ಸಂಸ್ಥಾನದ ನ್ಯಾಯಶಾಖಾ ಸಚಿವರಾದ ರಾಜಸೇವಾಪ್ರಸಕ್ತ ಶ್ರೀಮಾನ್ ಎ. ವಿ. ರಾಮನಾಥರವರು 1941ನೆಯ ಇಸವಿ ನವೆಂಬರ್ 26ನೆಯ ತಾರೀಖು ಬೆಂಗಳೂರು ನಗರದ ಉಣ್ಣೆಯ, ಹತ್ತಿಯ ಮತ್ತು ರೇಷ್ಮೆ ಗಿರಣಿಯ ಕೆಲಸಗಾರರ ಹಿತಸಾಧನಾ ಸಮಿತಿಯ ಇಪ್ಪತ್ತನೆಯ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಅಪ್ಪಣೆ ಕೊಡಿಸಿದ ಭಾಷಣದಲ್ಲಿ,

"ಕಾರ್ಖಾನೆಗಳಲ್ಲಿ ಯುದ್ಧ ಸಾಮಗ್ರಿಗಳನ್ನಾಗಲಿ ಅಥವಾ ಯುದ್ಧ ಸಂಬಂಧವಾಗಿ ಬೇಕಾದ ಇತರ ವಸ್ತುಗಳನ್ನಾಗಲಿ ತಯಾರಿಸುವ ಕೆಲಸಕ್ಕೆ ಅಡ್ಡಿಯಾದರೇ ಆಗಲಿ ಅಥವಾ ಆ ಕೆಲಸವು ನಿಧಾನವಾದರೇ ಆಗಲಿ, ಜನಾಂಗಕ್ಕೆ ಘಾತವನ್ನುಂಟುಮಾಡಿಕೊಂಡಂತೆಯೇ ಸರಿ. ಸೈನ್ಯಗಳು ದಿನ ದಿನವೂ ಹೆಚ್ಚುತ್ತಿವೆ. ಹಾಗೆ ಹೆಚ್ಚುತ್ತಿರುವ ಸೈನ್ಯಗಳಿಗೆಲ್ಲ ಸಾಕಾಗುವಂತೆ ಪೂರ್ತಿಯಾಗಿ ನಾನಾ ವಸ್ತುಗಳನ್ನು ಒದಗಿಸಲನುಕೂಲಿಸುವ ಹಾಗೆ ಪರಮಾವಧಿ ಪ್ರಮಾಣದಲ್ಲಿ ವಸ್ತುರಚನೆ ಮಾಡದಿದ್ದರೆ, ಯುದ್ಧದಲ್ಲಿ ಜಯವು ಲಭಿಸುವುದು ತಪ್ಪಿಹೋಗದಿದ್ದರೂ ಜಯವು ಲಭಿಸಲು ತಡವೇನೋ ಆಗಿಯೇ ಆಗುತ್ತದೆ. ಈ ಅಂಶವನ್ನು ಮನದಟ್ಟು ಮಾಡಿಕೊಳ್ಳದಿರುವುದಾದರೆ, ಅದು ನಮ್ಮ ಪಾಳೆಯದೊಳಕ್ಕೇ ಶತ್ರುವನ್ನು ಬಿಟ್ಟುಕೊಂಡಂತೆ ಆತ್ಮಘಾತಕವಾದುದು. ಶತ್ರುಗಳ ಕಡೆಯ ಪಿತೂರಿಗಾರರು ಒಳಗೆ ಸೇರಿದರೆ ನಡೆಯಬಹುದಾದ ವಿಘಾತಕ್ಕಿಂತಲೂ ಹೆಚ್ಚಿನ ವಿಘಾತವು ನಾವುಗಳು ವಾಸ್ತವ ವಿದ್ಯಮಾನಗಳೇನೆಂಬುದನ್ನು ಗ್ರಹಿಸದೆ ಉಪೇಕ್ಷೆಮಾಡುದುದರಿಂದ ಉಂಟಾಗುತ್ತದೆ. ಶಾಂತಿ ಸಮಯದ ಕಾರ್ಯವಿಧಾನಕ್ಕೆ ಈಗ ಸ್ಥಾನವಿಲ್ಲ. ಮತ್ತೆ ಶಾಂತಿ ಸ್ಥಾಪನೆಯಾದಾಗಲೇ ಅದನ್ನು ಅನುಸರಿಸಲು ಅವಕಾಶ. ಯುದ್ಧದಲ್ಲಿ ಮಿತ್ರಪಕ್ಷದವರಿಗೆ ಜಯವಾಗಿ ಶಾಂತಿ ಸ್ಥಾಪನೆಯ ಸುದಿನವು ಭಗವಂತನ ಕೃಪೆಯಿಂದ ಬೇಗ ಒದಗಲೆಂದು ಹಾರೈಸೋಣ. ಆದರೆ ಆ ಸುದಿನವನ್ನು ಕಾಣುವವರೆಗೂ, ನಿರಂಕುಶ ಪ್ರವರ್ತಕರಾದ ನಮ್ಮ ಶತ್ರುಗಳನ್ನು ನೆಗ್ಗುವ ಯುದ್ಧೋದ್ಯಮದ ಸಮಾನೋದ್ದೇಶ ಸಾಧನೆಗಾಗಿ ನಾವೆಲ್ಲರೂ ಒಮ್ಮನಸ್ಸಿನಿಂದ—ಸೈನ್ಯಕಾರ್ಯಗಳು, ಆರ್ಥಿಕ ಕಾರ್ಯಗಳು ಮತ್ತು ಸಾಮಾಜಿಕ ಕಾರ್ಯಗಳು ಮುಂತಾಗಿ ಸರ್ವತೋಮುಖವಾದ ನಾನಾ ಕಾರ್ಯಗಳನ್ನೂ ನೆರವೇರಿಸಿ ನಮ್ಮ ಸರ್ವಸಾಮರ್ಥ್ಯವನ್ನೂ ವಿನಿಯೋಗಿಸಿ ಶ್ರಮಿಸೋಣ" ಹೇಳಿದರು.

ಇಥಿಯೋಪಿಯಾ ಇಂಗ್ಲೆಂಡ್ ಒಪ್ಪಂದ

ಇಂಗ್ಲೆಂಡ್-ಇಥಿಯೋಪಿಯಾ ಒಪ್ಪಂದಕ್ಕೆ ಸಹಿ ಬಿತ್ತೆಂದು ಶ್ರೀ ಏಡನ್ನರು ಕಾಮನ್ಸ್ ಸಭೆಯಲ್ಲಿ ಅಧಿಕಾರಯುತವಾಗಿ ತಿಳಿಸಿದರು. ಮೊದಲನೇ ವರ್ಷ 10 ಲಕ್ಷ ಪೌಂಡುಗಳ ಸಹಾಯ ನೀಡುವುದಾಗಿ ಬ್ರಿಟನ್ನು ಮಾತು ಕೊಟ್ಟಿದೆ. ಇಥಿಯೋಪಿಯದ ಸೇನೆಗಳನ್ನು ಪುನರ್ವ್ಯವಸ್ಥೆಗೊಳಿಸಲು ಬ್ರಿಟಿಷ್ ಮಿಲಿಟರಿ ಗೋಷ್ಠಿಯೊಂದನ್ನು ಕಳಿಸಬೇಕೆಂದು ಚಕ್ರವರ್ತಿಗಳು ಕೇಳಿದ್ದಾರೆ. ಇದಕ್ಕೆ ಒಪ್ಪಂದದಲ್ಲಿ ಅವಕಾಶ ಮಾಡಲಾಗಿದೆ. ಇದಲ್ಲದೆ ರಕ್ಷಣೆ ದೃಷ್ಟಿಯಿಂದ ಇಥಿಯೋಪಿಯಾದಲ್ಲಿ ಬ್ರಿಟಿಷ್ ಬಲವನ್ನು ಇಟ್ಟಿರಲು ಸರ್ವ ಏರ್ಪಾಟ ಮಾಡಲಾಗಿದೆ. ಇಥಿಯೋಪಿಯಾದಲ್ಲಿ ಶತ್ರುಗಳಿಂದ ವಶಪಡಿಸಿಕೊಳ್ಳಲ್ಪಟ್ಟ ವಸ್ತುಗಳನ್ನು ಇಥಿಯೋಪಿಯ ಸೇನೆಗೆ ಹಂಚಲಾಗುತ್ತದೆ ಎಂದು ತಿಳಿಸಿದರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ [illegible] ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಪತಿಗಳು ಎರಡುವರ್ಷಕ್ಕೋ ಮೂರುವರ್ಷಕ್ಕೋ ಒಂದಾವರ್ತಿ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯವನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಇದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ಶಾಶ್ವತರೂಪವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು [illegible] ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೋಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಿಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹರತಾಳಭಸ್ಮ	೧	೦—೮—೦
ಕಟಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಶುದ್ಧವಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಅದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ; ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ; ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದರ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೭೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದ್ರವ್ಯದಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೮ ರೂಪಾಯಿ** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯ ಶಿವಾರೋಹಣಮಾರ್ಗತಕ್ಕೆ ನವರು ಆಕಾಶದ ಅಂತರಾಳಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಪೂರ್ವದಲ್ಲಿ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ರೂಪವನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರನಿವಾಸಿಗಳಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦— —೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦— —೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಗೋಪುರದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦ ೦ ೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦ —೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರ ಸಿಟಿ ಸ್ಟೇಷನ್ನಲ್ಲಿ ಸೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂಪಾಯಿಗಳಿಗೆ ಮೇಲ್ಪಟ್ಟು ಫೋಟೋ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಜನರು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿದ್ದಾರೆ ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ ಒಂದು ತಲೆನೋವು ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ [illegible] ವ್ಯಾಧಿಗಳನ್ನು ಸ್ವಚ್ಛಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ [illegible] ಸಾಧಾರಣ ನಶ್ಯದ [illegible] ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜ಼ನ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

[illegible] ಅಂಡ್ ಕಂಪೆನಿ ಲಿಮಿಟೆಡ್

[೨೮] ಪೋ ಬಾ ೯೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯ ಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶಾತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೭ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಜಟಾಸೂತ್ರ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳುಳ್ಳದ್ದು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचन्द्रिका (संस्कृत)	३ रु
वीरशैवमत (मराठी)	१ रु
महानारायणोपनिषत् (वीरशैवभाष्य संस्कृत)	२ रु
पुरुषसूक्तम् (वीरशैवप्राचीनभाष्योपेतम्)	४ आ
नन्दिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೩ನೇ ಫೆಬ್ರವರಿ ೧೯೪೨ [ಸಂಚಿಕೆ ೪೩

ಭಾರತಕ್ಕೆ ಯುದ್ಧ ಭೀತಿ

“ಸಂಗ್ರಾಮವು ಈಗ ಖಂಡಿತವಾಗಿ ಭಾರತದ ಬಾಗಿಲವರೆಗೆ ವ್ಯಾಪಿಸಿದೆ ಮುಂದಿನ ಹಲವು ತಿಂಗಳಲ್ಲಿ ಭರತಖಂಡದಲ್ಲಿ ಬಹಳ ಕಷ್ಟತಮವಾದ ಪರಿಸ್ಥಿತಿಯನ್ನು ಎದುರಿಸಬೇಕಾದೀತು ದಿನ ದಿನ ಬೆಳೆಯುತ್ತಿರುವ ಮಿತ್ರರಾಷ್ಟ್ರಗಳ ಬಲವು ಶತ್ರುಗಳನ್ನು ಸದೆಬಡಿಯಲು ಶಕ್ತವಾಗುವವರೆಗೆ ನಮಗೆ ಕಷ್ಟತಪ್ಪಿದ್ದಲ್ಲ ೧೯೪೨ನೇ ವರ್ಷದಲ್ಲಿ ಅದರಲ್ಲಿಯೂ ಮುಖ್ಯವಾಗಿ ಮೊದಲಿನ ೬ ಅಥವಾ ೮ ತಿಂಗಳು ಈ ಸಂಗ್ರಾಮದಲ್ಲಿ ಅತ್ಯಂತ ಕಷ್ಟತಮವಾದ ಕಾಲವಾಗಬಹುದೆಂದು ಅನೇಕಸಾರ ತಿಳಿಸಲಾಗಿದೆ ಈಗಿನ ಪರಿಸ್ಥಿತಿಗೆ ಎರಡು ಮುಖ್ಯಕಾರಣಗಳಿವೆ ಜರ್ಮನಿಯು ರಷ್ಯದಮೇಲೆ ಬಿದ್ದುದರಿಂದ ಮಧ್ಯಪೂರ್ವದ ಪರಿಸ್ಥಿತಿಯು ಬದಲಾಯಿಸಿದುದು ಮೊದಲನೆಯದು ಜಪಾನು ಸಂಗ್ರಾಮಪ್ರವೇಶ ಮಾಡಿದುದು ಎರಡನೆಯದು

ಜರ್ಮನಿಯು ರಷ್ಯದಮೇಲೆ ಬಿದ್ದುದನ್ನು ಕಂಡಾಗ ಅದು ಛಳಿಗಾಲ ಬರುವುದರೊಳಗಾಗಿ ರಷ್ಯವನ್ನು ಸದೆಬಡಿಯುವುದೆಂದೂ, ಯುಕ್ರೇನನ್ನೆಲ್ಲ ಆಕ್ರಮಿಸಿ ಲೆನಿನ್‌ಗ್ರಾಡ್, ಮಾಸ್ಕೋ, ರೋಸ್ಟೋವ್ ನಗರಗಳನ್ನು ಹಿಡಿದು ಬಾಲ್ಟಿಕ್ ಸಮುದ್ರದ ಸುತ್ತ ಅಷ್ಟದಿಗ್ಬಂಧನ ಹಾಕಿ ಉತ್ತರದಿಂದ ರಷ್ಯಕ್ಕೆ ಸಾಮಾನುಗಳು ಬರದಂತೆ ತಡೆಯಲು ಶಕ್ತವಾಗುವುದೆಂದು ಎಲ್ಲರೂ ತಿಳಿದರು ಮಾಸ್ಕೋವನ್ನು ನಾಜಿಗಳು ಹಿಡಿಯಬಹುದಾದ್ದ ರಷ್ಯನ ಸರಕಾರವನ್ನು ಮತ್ತು ಕಾರ್ಖಾನೆಗಳನ್ನೂ ಗ್ರಾಮಾಂತರಗಳಿಗೆ ವರ್ಗಾಯಿಸಬೇಕಾಗಬಹುದೆಂದೂ ಊಹಿಸಲಾಯಿತು ಇದಲ್ಲದೆ ಡಾನ್ ನದಿ ಪ್ರದೇಶವೂ ಮತ್ತು ಕಾಕಸಸ್ ಎಣ್ಣೆ ಬಾವಿಗಳೂ ಜರ್ಮನಿಯ ಕೈ ಸೇರುವುದೆಂದು ಎಣಿಸಲಾಯಿತು ಹಾಗೇನಾದರೂ ಆಗಿದ್ದರೆ ಸಿರಿಯಾ, ಪ್ಯಾಲೆಸ್ಟೈನ್ ಇರಾನ್‌ಗಳ ರಕ್ಷಣೆ ಪರಿಸ್ಥಿತಿಯೇ ವ್ಯತ್ಯಾಸವಾಗುತ್ತಿತ್ತು ನಾವು ಅಲ್ಲಿ ಪ್ರಚಂಡ ಹೋರಾಟ ನಡೆಸಬೇಕಾಗುತ್ತಿತ್ತು ಆದರೆ ಅಂತಹ ಪರಿಸ್ಥಿತಿ ಒದಗಲಿಲ್ಲ ರಷ್ಯನರು ಶತ್ರುಗಳಮೇಲೆ ತಿರುಗಿ ಬಿದ್ದು ಉಗ್ರವಾಗಿ ಕಾದಿದುದರಿಂದ ಪರಿಸ್ಥಿತಿ ಬದಲಾವಣೆಯಾಯಿತು ನಾಜಿ ಸೇನೆಗೆ ಬಲವಾದ ಏಟುಬಿದ್ದಿತು ಜರ್ಮನ್‌ಸೇನೆಯು ಅಜೇಯವಾದುದೇನೂ ಅಲ್ಲವೆಂಬುದನ್ನು ರಷ್ಯನರು ಕಂಡರು ಇದಲ್ಲದೆ ಈಜಿಪ್ಟಿನಿಂದ ಪಶ್ಚಿಮಕ್ಕೆ ನುಗ್ಗಲು ನಮಗೆ ಅನುಕೂಲವಾಯಿತು ರಷ್ಯದ ಸಂಗ್ರಾಮವು ಯಾವುದೇ ಮಾರ್ಗಹಿಡಿದರೂ ಛಳಿಗಾಲ ಕಳೆದೊಡನೆಯೇ ಜರ್ಮನಿಯು ಅನಟೋಲಿಯಾ ಮೂಲಕವಾಗಲಿ ಅಥವಾ ಬಹಳಮಟ್ಟಿಗೆ ಕಪ್ಪುಕಡಲಿನ ಮೂಲಕವಾಗಲಿ ದಂಡಯಾತ್ರೆ ಹೊರಡುವ ಸಂಭವವಿದ್ದೇ ಇದೆ ಬ್ರಿಟನ್ನನ್ನು ನೇರವಾಗಿ ಹೊಡೆದು ಕೆಡವಲು ಬ್ರಿಟಿಷ್ ದ್ವೀಪಕ್ಕೇ ನಾಜಿಗಳು ಮುತ್ತಿಗೆ ಹಾಕುವ ಭಯವೂ ಇದೆ. ಜರ್ಮನಿಗೆ ಈಗ ಅಪಾರ ನಷ್ಟವಾಗಿದ್ದರೂ ಸಹ ಅದರ ಬಲ ಏನ್ನೂ ಕಡಿಮೆಯಾಗಿಲ್ಲ

ಈಗಿನ ಪರಿಸ್ಥಿತಿಯ ಸಂದರ್ಭ, ಫಿಲಿಪೈನಿನಲ್ಲಿ ಅಮೆರಿಕದ ಸೇನೆಗಳನ್ನೂ ಪ್ರತಿಭಟಿಸುತ್ತಿವೆ ಮಲಯಾವು ಶತ್ರುವಶವಾಯಿತು ಸಿಂಗಪೂರಿಗೆ ಖಂಡಿತ ವಿಪತ್ತುಂಟಾಗಿದೆ ಟೆನಾಸರಿಮ್ ಶತ್ರುವಶವಾಯಿತು ದಕ್ಷಿಣ ಸುಮಾತ್ರಾದಲ್ಲಿಗಳ ಜಪಾನರು ಬಂದಿಳಿದಿದ್ದಾರೆ ಆದ್ದರಿಂದ ಜಾವಾಕ್ಕೆ ವಿಪತ್ತುಂಟಾಗಿದೆ ನೆದರ್‌ಲೆಂಡ್ ಪೂರ್ವ ಇಂಡೀಸ್‌ಗಳಲ್ಲೂ ಮತ್ತು ಪೆಸಿಫಿಕ್ ಸಾಗರದ ನಾನಾ ದ್ವೀಪಗಳಲ್ಲೂ ಶತ್ರುಗಳು ಕಾಲೂರಿದ್ದಾರೆ ಮೊದಲು ನೈರುತ್ಯ ಪೆಸಿಫಿಕ್‌ನಲ್ಲಿ ನ್ಯೂಗಿನಿಯಾವರೆಗೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕೆಂಬುದು ಜಪಾನಿನ ಉದ್ದೇಶ ಅಮೆರಿಕದ ಸಾಮಾನುಗಳು ಚೀಣಾಕ್ಕೆ ಬರ್ಮಾರಸ್ತೆಯ ಮೂಲಕ ಹೋಗುತ್ತಿವೆ ಅದನ್ನು ತಪ್ಪಿಸಲು ರಂಗೂನನ್ನು ಹಿಡಿಯುವುದು ಶತ್ರುಗಳ ಎರಡನೇ ಗುರಿ ಈಗಿನ ಘಟನಾವಳಿಗಳಲ್ಲಿ ಭಾರತದಮೇಲೆ ಉಗ್ರಪರಿಣಾಮವುಂಟುಮಾಡುತ್ತಿವೆ ಸಂಗ್ರಾಮವು ಖಂಡಿತವಾಗಿ ಭಾರತದ ಬಾಗಿಲವರೆಗೆ ಬಂದಿದೆ ಇನ್ನು ಹಲವು ತಿಂಗಳವರೆಗೆ ನಮ್ಮ ಕಷ್ಟ ಅಪಾರವಾಗಿದುವುದು

[illegible] ಪ್ರಚಾರ ಹಾಕದ ಉದ್ದಿಶ್ಯವಿಟ್ಟು [illegible] ಎಂ[illegible]ಗಳಿಗಾಗಲಿ, ಉಂಡ ಸಾಗರವಾಸಿ ಯಾವನ್ನೂ ಕ್ಷೇಮಕಾರಿಯಲ್ಲವೆಂದೇ ಪರಿಗಣಿಸಬೇಕಾಗುತ್ತದೆ ಇದರ ಪರಿಣಾಮವು ಭಾರತದಮೇಲೆ ಅಪಾರವಾಗಿದೆ ಬರ್ಮದಲ್ಲಿ ತನ್ನ ಸ್ಥಾನವನ್ನು ಬಲಪಡಿಸಿಕೊಳ್ಳಲು ಜಪಾನು ಶಕ್ತವಾದರೆ, ಅದು ಪೂರ್ವ ಭಾರತದ ಭಾಗಗಳನ್ನು ಮುತ್ತಬಹುದು ಅಥವಾ ಭಾರತವು ದೊಡ್ಡ ದೇಶವಾದ್ದರಿಂದ ಅದಕ್ಕೆ ಮುತ್ತಿಗೆ ಹಾಕದೆ ಜಲಮಾರ್ಗಗಳಿಗೆ ತೊಂದರೆಯುಂಟುಮಾಡಲು ಪ್ರಯತ್ನಿಸಬಹುದು ಹಾಗೆ ಮಾಡಿದರೆ ನಮ್ಮ ಸಂಗ್ರಾಮ ಪ್ರಯತ್ನಗಳಿಗೆ ತೊಂದರೆಯಾಗುವುದು ಅಂತೂ ಜಪಾನು ಮೇಲೆ ವಿವರಿಸಿದ ಯಾವ ಕಾರ್ಯಮಾರ್ಗವನ್ನಾದರೂ ಹಿಡಿಯಬಹುದು

ಇದಲ್ಲದೆ ಜಪಾನು ಭರತಖಂಡಕ್ಕೆ ಮುತ್ತಿಗೆ ಹಾಕಬಹುದು ಭಾರತದ ಪೂರ್ವ ತೀರವು 2000 ಮೈಲಿ ಉದ್ದವಿದೆ ಜಪಾನಿನ ಕೈಮೇಲಾಗಿರುವವರೆಗೆ ಅದು ಎಲ್ಲಿ ಬೇಕಾದರೂ ಏಟು ಹಾಕಬಹುದು ಅವರು ಹೆಚ್ಚು ಸೇನೆಯನ್ನು ತಂದು ಮುತ್ತಿಗೆ ಹಾಕುವುದಾದರೆ ಹಡಗುಗಳಿಗೆ ದೊಡ್ಡ ಸಂಗ್ರಾಮ ನೌಕೆಗಳನ್ನು ಕಾವಲು ಹಾಕಬೇಕಾಗುತ್ತದೆ ಫಿಲಿಪೈನಿನಲ್ಲಿ ಪ್ರತಿಭಟನೆಯಿರುವುದರಿಂದ ಇದು ಸುಲಭಸಾಧ್ಯವಲ್ಲ ದೊಡ್ಡ ಸಂಗ್ರಾಮ ನೌಕೆಗಳನ್ನು 4200 ಮೈಲಿ ದೂರದಲ್ಲಿರುವ ಜಪಾನಿನಲ್ಲಿ ಹೊರತು ಮತ್ತೆಲ್ಲೂ ಸರಿಪಡಿಸಲು ಅವಕಾಶವಿಲ್ಲ ಅಂದ ಮಾತ್ರದಿಂದಲೇ ಸಮುದ್ರ ಮೂಲಕ ಭಾರತಕ್ಕೆ ಸೈನ್ಯವನ್ನು ತಂದಿಳಿಸುವುದು ಅಸಾಧ್ಯವೆಂದೇನೂ ಅರ್ಥವಲ್ಲ ಇಷ್ಟು ಅಗಾಧವಾದ ಭೂಪ್ರದೇಶವನ್ನು ಎದುರಿಸುವುದು ಕಷ್ಟ ಜಪಾನರು ಇಷ್ಟಪಟ್ಟರೆ ಭಾರತಕ್ಕೆ ಸೇನೆಯನ್ನು ತರಬಹುದು ಭಾರತದ ಜನರ ನೈತಿಕ ಮನೋಭಾವನೆಯನ್ನು ಕಡಿಸಲು ಯತ್ನಿಸಬಹುದು ಈ ಕಾರ್ಯದಲ್ಲಿ ಅದು ಪಿತೂರಿಗಾರರ ಸಹಾಯ ಪಡೆಯಬಹುದು ಜಪಾನಿನ ಹಡಗುಗಳ ಚಟುವಟಿಕೆ ವಿಸ್ತಾರಗೊಂಡಿದೆಯೆಂದು ತಿಳಿದುಬಂದಿದೆ

ಪರಿಸ್ಥಿತಿಯ ಉಗ್ರತೆಯನ್ನು ಈಗ ಕಡೆಗಣಿಸಬಾರದು ನಾವು ವಿಶೇಷ ಕಷ್ಟನಷ್ಟಗಳಿಗೆ ಒಳಗಾಗಬೇಕಾಗಿದ್ದರೂ ಸಹ ನಾವು ಬೆಳಕನ್ನು ಕಾಣುವುದು ಖಂಡಿತ ಈಗ ಮಾಡಬೇಕಾದ್ದೆಂದರೆ ಜನರೆಲ್ಲ ಐಕಮತ್ಯದಿಂದ, ಧೈರ್ಯದಿಂದ ಒಂದಾಗಿ ನಿಲ್ಲುವುದು ಗ್ರೇಟ್‌ಬ್ರಿಟನ್, ಚೀಣಾ ಈಜಿಪ್ಟುಗಳ ಬಳಿಗೆ ಸಂಗ್ರಾಮ ಬಂದರೂ ಅಲ್ಲಿನ ಜನರ ಭಾವನೆ ಹೇಗೆ ಕದಲಿಲ್ಲವೋ ಅದೇರೀತಿ ಭಾರತದಲ್ಲಿಯೂ ಜನರ ನೈತಿಕ ಸಂಕಲ್ಪವು ಕದಬಾರದು ಈಗಾಗಲೇ ಪೆಸಿಫಿಕ್ ಸಾಗರಕ್ಕೆ ಸೈನ್ಯಸಹಾಯವು ಬರುತ್ತಿದೆ ಅತ್ಯುತ್ತಮವೆಂದು ತೋರಿದ ರೀತಿಯಲ್ಲಿ ಅದನ್ನು ಉಪಯೋಗಿಸಲಾಗುವದು ಎಂದು ದೆಹಲಿಯ ಅಧಿಕಾರಿಗಳೊಬ್ಬರು ತಮ್ಮ ವಿಮರ್ಶೆಯಲ್ಲಿ ತಿಳಿಸಿದ್ದಾರೆ

ಭಾರತಕ್ಕೆ ಚೀಣಾ ಸಚಿವರ ಸೂಚನೆ

ಚೀಣಾದೇಶದ ವರ್ತಮಾನ ಶಾಖೆಯ ಉಪಸಚಿವರು ದೆಹಲಿಯಲ್ಲಿ ವೃತ್ತಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಭಾಷಣಮಾಡುತ್ತಾ—

“ಜಪಾನು ೩೦ ವರ್ಷಗಳ ಕೆಳಗೇ ತನ್ನ ಆಕ್ರಮಣ ನೀತಿಯನ್ನು ರೂಪುಗೊಳಿಸಿತೆಂದೂ, ಚೀಣಾ, ದಕ್ಷಿಣ ಸಮುದ್ರ, ಭಾರತ ಮತ್ತು ವಿಶಾಲ ಜಗತ್ತು ಇವುಗಳನ್ನು ಕ್ರಮವಾಗಿ ಜಯಿಸುತ್ತಾ ಬರುವುದೇ ಆ ಆಕ್ರಮಣದ ನೀತಿಯೆಂದೂ, ಮೊದಲು ಈ ಆಕ್ರಮಣ ನೀತಿಯನ್ನು ಜಗತ್ತು ಅಷ್ಟು ಗಮನಕೊಟ್ಟು ಪರಿಶೀಲಿಸಲಿಲ್ಲವೆಂದೂ ಈಗ ಅದು ನಿಜವಾಗ ಮತ್ತು ಜಪಾನ್ ಅನುಸರಿಸಿಕೊಂಡು ಬರುತ್ತಿರುವ ನೀತಿಯಾಗಿದೆಯೆಂಬುದು ವ್ಯಕ್ತಪಟ್ಟಿದೆಯೆಂದೂ ಸೂಚಿಸುತ್ತಾ, ಭಾರತವನ್ನು ನಿರ್ದೇಶಿಸಿ, “ಮೊದಲಿನಲ್ಲಿ ಜಪಾನೀಯರು ಯಾವಾಗಲೂ ಬಹಳ ಒಳ್ಳೆಯ ಮಾತುಗಳನ್ನೇ ಆಡುತ್ತಾರೆ ಸಹೋದರ ಸಹೋದರಿಯರೇ, ನರಕದಿಂದ ನಿಮ್ಮನ್ನು ಉದ್ಧಾರಮಾಡುವುದಕ್ಕೆ ನಾವು ಬಂದಿದ್ದೇವೆಂದು ಹೇಳುತ್ತಾರೆ ಆದರೆ ಅವರು ಬರುವಾಗ ತಮ್ಮೊಡನೆ ನರಕವನ್ನು ತೆಗೆದುಕೊಂಡು ಬರುತ್ತಾರೆ ಇದು ನಮ್ಮ ಅನುಭವ ಕಳೆದ ೪॥ ವರ್ಷಗಳಿಂದ ಅವರು ನಮ್ಮ ಸ್ತ್ರೀಯರಿಗೆ ಅನೇಕ ತೊಂದರೆಗಳನ್ನು ಕೊಟ್ಟಿದ್ದಾರೆ ವರ್ಣಿಸಲಸಾಧ್ಯವಾದ ಹಿಂಸೆಗಳಿತ್ತಿದ್ದಾರೆ ಹೋದ ಕಡೆಗಳಲೆಲ್ಲ ಏನನ್ನೂ ಉಳಿಸಿಲ್ಲ ಭೂಮಿಯ ಮೇಲೆ ಬೀಸುವ ಬಿರುಗಾಳಿಯೋಪಾದಿಯಲ್ಲಿ ಅವರು ಬರುತ್ತಾರೆ. ಪ್ರಜೆಗಳಿಗೆ ತಿನ್ನುವುದಕ್ಕೆ ಏನನ್ನೂ ಬಿಡುವುದಿಲ್ಲ ಪ್ರಜೆಗಳೆಲ್ಲ ಸಾಯಲೆಂಬುದೇ ಅವರ ಅಪೇಕ್ಷೆ ಸಹೋದರತ್ವ, ಸೌಹಾರ್ದ ಭಾವನೆಗಳಿಂದ ಕೂಡಿದ ಸಂದೇಶವನ್ನು ಅವರು ತರುವುದೇ ಇಲ್ಲ” ಎಂಬುದಾಗಿ ಹೇಳಿದರು

|| ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗು ವಿಶ್ವಾರಾಧ್ಯರ ಜಯಂತಿ ಸಮಾರಂಭ

ಕೊಟ್ಟೂರು

ಬಳ್ಳಾರಿ ಜಿಲ್ಲಾ ಕೊಟ್ಟೂರು ನಗರದಲ್ಲಿ ಬೃಹನ್ಮಠಾಧೀಶರಾದ ಶ್ರೀ|| ಷ|| ಬ್ರಂ ಶ್ರೀಗುರುಪಟ್ಟದ ಬೂತ ಭುಜಂಗ ಸ್ವಾಮಿಗಳವರಿಂದ ಜರುಗಿಸಲ್ಪಡುವ ಶ್ರೀ|| ಜ|| ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆಯಲ್ಲಿ ಇದೇ ವೃಷನಾಮ ಸಂ|| ಮಾಘ ಬ ೧೩ (ತಾರೀಖು 13 2 1942) ನೇ ಶುಕ್ರವಾರ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗು ವಿಶ್ವಾರಾಧ್ಯರ ಜಯಂತಿಮಹೋತ್ಸವ ಕಾರ್ಯಕ್ರಮಗಳು ಅತ್ಯಂತ ವಿಜೃಂಭಣೆಯಿಂದ ನಡೆದವು ಆದಿನ ಪ್ರಾತಃಕಾಲದಲ್ಲಿ ಪಾಠಶಾಲಾಧ್ಯಕ್ಷರಾದ ಮೇಲ್ಕಂಡ ಶ್ರೀಗಳವರೂ ಮತ್ತು ಆಕಸ್ಮಾತ್ ಇಲ್ಲಿಗೆ ಆಗಮಿಸಿದ ಜಮಖಂಡಿ ಬೃಹನ್ಮಠಾಧೀಶ ಚರಪಟ್ಟಾಧ್ಯಕ್ಷ ಶ್ರೀ|| ಷ|| ಬ್ರಂ|| ಅನ್ನದಾನಸ್ವಾಮಿಗಳವರೂ ಪಾಠಶಾಲಾಧ್ಯಾಪಕರಾದ ವೇ|| ಪಿ. ಎಂ. ಶಿವಪ್ರಸಾದ ಶಾಸ್ತ್ರಿಗಳೂ ಹಿರೇಹಡಗಲಿ ಪ್ರ|| ವ ವಿರೂಪಾಕ್ಷಶಾಸ್ತ್ರಿಗಳೂ ನಿತ್ಯಾನುಷ್ಠಾನಗಳನ್ನು ತೀರಿಸಿಕೊಂಡ ಒಂದು ತಳಿರುತೋರಣ ರಂಭಾಸ್ತಂಭಗಳಿಂದಲಂಕೃತವಾದ ದಿವ್ಯ ಮಂಟಪದಲ್ಲಿ ಉಭಯ ಶ್ರೀ|| ಜಗದಾಚಾರ್ಯರ ಭಾವಚಿತ್ರಗಳನ್ನು ಸ್ಥಾಪಿಸಿದರು ಸಕಾಲದಲ್ಲಿ ಪುರಪ್ರಮುಖರೂ ಇನ್ನೂ ಇದ್ದ ಭಕ್ತಮಂಡಳಿಯವರೂ ಸಮ್ಮಿಲಿತರಾದರು ಆಗ ಪಾಠಶಾಲಾ ವಿದ್ಯಾರ್ಥಿಗಳ ವೇದಘೋಷದೊಡನೆ ವಿಧ್ಯುಕ್ತವಾಗಿ ಪೂಜಾಪಾರಾಯಣಮಂಗಳಾದಿಗಳು ಸಕ್ರಮವಾಗಿ ನೆರವೇರಿದವು ಅಲ್ಲದೆ ತತ್ಸಾಯಂಕಾಲ ಪರಮ ಮಹಿಮಾಶಾಲಿಯಾದ ಶ್ರೀಕೊಟ್ಟೂರೇಶನ ಜಾತ್ರೆಯ ಸಮಾರಂಭವಾದ್ದರಿಂದ ಜಗದಾಚಾರ್ಯರ ಜಯಂತಿ ಸಮಾರಂಭಕ್ಕೆ ಬಹು ಜನಸಂದಣಿಯು ವಿಶೇಷಿಸಿತು ಅನಂತರ ಉತ್ತಮವಾದ ಭಾಷಣಗಳು ನಡೆದು ಶ್ರೀ|| ಜ|| ಪಂಚಾಚಾರ್ಯಮಹಾರಾಜರ [illegible] ಜಯಘೋಷದೊಡನೆ ಸಭೆಯ ಮುಕ್ತಾಯವಾಯಿತು ಮತ್ತು ಮಹಾಶಿವರಾತ್ರಿಯ ಪೂಜಾದಿಕಾರ್ಯಗಳೂ ಸಹ ವಿಧಿಪೂರ್ವಕವಾಗಿ ನಡೆದವು

ವೀರಶೈವಮಂಡಲಿ, ಕೊಟ್ಟೂರು.

ಚಿಲಕನಹಟ್ಟಿ ಗುರುಸ್ಥಲ ಮಠಂ

ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೂಕು ಚಿಲಕನಹಳ್ಳಿ ಗ್ರಾಮದಲ್ಲಿ ಮಾಘ ಬ|| ೧೩ ಶುಕ್ರವಾರ ತಾ|| ೧೩-೨-೧೯೪೨ ನೇ ಮಹಾಶಿವರಾತ್ರಿ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯ ಶ್ರೀವಿಶ್ವಾರಾಧ್ಯರ ಜಯಂತಿಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು ಈ ದಿವಸ ಶ್ರೀ ಜಗದ್ಗುರುಗಳ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ವೇದೋಕ್ತವಾಗಿ ಪದ್ಧತಿಪ್ರಕಾರ ಅಭಿಷೇಕೋತ್ಸವವು ನಡೆಯಿತು ತರುವಾಯ ಶ್ರೀ ಹಾಲವರ್ತಿ ಬಸವಲಿಂಗಾಚಾರ್ಯ, ಪುರವರ್ಗ ಶಿವಪುರ ಮಠಂ ಇವರು ಮೇಲ್ಕಂಡ ಪೂಜ್ಯಪಾದರ ಮತ್ತು ವೀರಶೈವ ಮಹಾತ್ಮರಾದ ಶ್ರೀಜಗದ್ಗುರು ಸದಾನಂದ ಶಿವಯೋಗಿ, ಆನಂದಲಿಂಗಶಿವಾಚಾರ್ಯ, ಭೂಕಂಡಲಿಂಗಶಿವಾಚಾರ್ಯ, ಚಿದ್ಘನಶಿವಾಚಾರ್ಯ ಮುಂತಾದ ಮಹಾತ್ಮರ ಪ್ರಭಾವವನ್ನೂ, ವೀರಶೈವಭಕ್ತವರ್ಗಕ್ಕೆಲ್ಲಾ ಸದಾಚಾರಾದಿ ಪಂಚಾಚಾರ ನಡಾವಳಿಯನ್ನು ಬಹು ವಿಸ್ತಾರವಾಗಿ ಬೋಧಿಸಿ ಇಲ್ಲಿ ಸಮ್ಮಿಲಿತವಾದ ಸುಮಾರು ಐದುನೂರು ಜನ ಭಕ್ತರಿಗೆ ಶ್ರೀ ಭಗವತ್ಪೂಜ್ಯಪಾದರಲ್ಲಿ ಭಕ್ತಿಯು ನೆಲೆಗೊಳ್ಳುವಂತೆ ಭಾಷಣವನ್ನು ಮಾಡಿದರು. ತರುವಾಯ ಪಿ ಎಮ್ ಸಣ್ಣಕೊಟ್ರಯ್ಯಶಾಸ್ತ್ರಿ ಇವರು ಬಹು ಮನೋಹರವಾಗಿ ಸಂಗೀತಸಾಹಿತ್ಯದೊಡನೆ ಕೀರ್ತನೆಮಾಡಿದರು ಇದೇ ದಿನ ವೇ|| ಶ್ರೀ ಪೂಜ್ಯಪಾದರ (ಲಿಂಗೋದ್ಭವ) ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿರಿಸಿ ವಾದ್ಯವೈಭವದೊಡನೆ ಮಹೋತ್ಸವವನ್ನು ನೆರವೇರಿಸಿದರು

ವೀರಶೈವಮಂಡಲಿ ಚಿಲಕನಹಟ್ಟಿ

|| ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ||

ಶ್ರೀಜಗದ್ಗುರು ವಿಶ್ವಾರಾಧ್ಯ ಹಾಗೂ ಪಂಡಿತಾರಾಧ್ಯರ ಜಯಂತೀಮಹೋತ್ಸವ

ಶ್ರೀಕ್ಷೇತ್ರ ಕಾಶಿ

ಶ್ರೀ ಕಾಶೀಕ್ಷೇತ್ರ ವಿರಾಜಮಾನ ಶ್ರೀಜಗದ್ಗುರು ವಿಶ್ವಾರಾಧ್ಯ ಮಹಾಸಂಸ್ಥಾನ ಜಂಗಮವಾಡೀ ಮಠದಲ್ಲಿ ಪ್ರತಿವರ್ಷದ ಪದ್ಧತಿಪ್ರಕಾರ ಈ ವರ್ಷವೂ ಶ್ರೀಜಗದ್ಗುರು ವಿಶ್ವಾರಾಧ್ಯ ಪಂಡಿತಾರಾಧ್ಯರ ಜಯಂತೀಮಹೋತ್ಸವವು ಮಹಾಶಿವರಾತ್ರಿಯ ದಿನ ಅತ್ಯಂತ ವೈಭವದಿಂದ ನೆರವೇರಿತು

ತಾ|| ೧೩-೨-೪೨ ಮಹಾಶಿವರಾತ್ರಿಯದಿನ ಪ್ರಾತಃಕಾಲ ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯ ಲಿಂಗೋದ್ಭವ ಮೂರ್ತಿಗಳಿಗೆ ಮಹಾಸಂಸ್ಥಾನದ ವೈದಿಕರಿಂದಲೂ ಗುರುಕುಲದ ವಿದ್ಯಾರ್ಥಿಗಳಿಂದಲೂ ಏಕಾದಶವಾರ ಮಹಾರುದ್ರಾಭಿಷೇಕವು ಸಹಸ್ರಬಿಲ್ವಾರ್ಚನೆಯೂ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟವು ಅನಂತರ ಸಂಧ್ಯಾಕಾಲದಲ್ಲಿ ಯಾತ್ರಾರ್ಥಿಗಳಾಗಿ ಬಂದ ಎಲ್ಲಾ ಭಕ್ತಮಾಹೇಶ್ವರರಿಗೂ ಪಂಚಾಮೃತ ಷೋಡಶೋಪಚಾರಗಳಿಂದಲೂ ರುದ್ರಾಧ್ಯಯನಾದಿಮಂತ್ರಗಳಿಂದಲೂ ಶಿವಪೂಜೆಯು ಮಾಡಿಸಲ್ಪಟ್ಟು ಪ್ರಸಾದವಿನಿಯೋಗವು ಮಾಡಲ್ಪಟ್ಟಿತು ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ವಿವಿಧ ವಿದ್ಯುದ್ದೀಪಗಳಿಂದಲೂ ನಾನಾವಿಧ ಪುಷ್ಪಮಾಲೆಗಳಿಂದಲೂ ಅಲಂಕೃತವಾದ ಕೈಲಾಸಮಂಟಪದಲ್ಲಿರುವ ಶ್ರೀಜಗದ್ಗುರು ವಿಶ್ವಾರಾಧ್ಯ ಮೂರ್ತಿ ಹಾಗೂ ಜ್ಞಾನಪೀಠದ ಸಂದರ್ಶನಕ್ಕಾಗಿ ಕಾಶೀ ಮಹಾನಗರವಾಸಿಗಳು ತಂಡೋಪತಂಡವಾಗಿ ಬರುತ್ತಿದ್ದರು ಅನಂತರ ರಾತ್ರಿ ಗುರುಕುಲದ ವಿದ್ಯಾರ್ಥಿಗಳು ಜಗದಾಚಾರ್ಯರ ಭಜನೆಯನ್ನು ಭಕ್ತಿಪೂರ್ವಕವಾಗಿ ಮಾಡಿದರು ತರುವಾಯ ಶ್ರೀಜಗದ್ಗುರು ವಿಶ್ವಾರಾಧ್ಯ ಪಂಡಿತಾರಾಧ್ಯರ ಲಿಂಗೋದ್ಭವಮೂರ್ತಿಗಳಿಗೆ ಮಹಾಮಂಗಲಾರತಿ ಪುಷ್ಪಾಂಜಲಿಗಳು ಅರ್ಪಿತವಾಗಿ ಪ್ರಸಾದವು ವಿನಿಯೋಗಿಸಲ್ಪಟ್ಟಿತು ತರುವಾಯ ಸರ್ವರಿಗೂ ಸನ್ಮಂಗಲವನ್ನುಂಟುಮಾಡಲೆಂದು ಜಗದಾಚಾರ್ಯರನ್ನು ಪ್ರಾರ್ಥಿಸಿದ ತರುವಾಯ ಮಹೋತ್ಸವವು ಸಮಾಪ್ತಿಯನ್ನು ಹೊಂದಿತು

ಓರ್ವ ಗುರುಕುಲವಿದ್ಯಾರ್ಥಿ

ಹಾರನಹಳ್ಳಿ

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ವೇ|| ಗುಬ್ಬೀ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರು ಪದ್ಧತಿಪ್ರಕಾರ ಶ್ರೀಜಗದ್ಗುರು ಪಂಡಿತಾರಾಧ್ಯವಿಶ್ವಾರಾಧ್ಯರ ಜಯಂತಿಮಹೋತ್ಸವವನ್ನು ತಮ್ಮಗೃಹದಲ್ಲಿ ತಾ||೧೩-೨-೧೯೪೨ನೇ ಶುಕ್ರವಾರ (ಮಹಾಶಿವರಾತ್ರಿ) ಪ್ರಾತಃಕಾಲ ಉಭಯ ಮಹಾಚಾರ್ಯರ ಭಾವಚಿತ್ರಪೂಜಾ ಸ್ಮರಣ ಸ್ತೋತ್ರ ಪಠಣ ಪ್ರಸಾದಸಮರ್ಪಣಾದಿಗಳಿಂದ ನೆರವೇರಿಸಿದರು

ಓರ್ವ ಗುರುಚರಣ ಸೇವಾಭಿಲಾಷಿ

|| ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀ ೧೦೮ ಜಗದ್ಗುರು ರಂಭಾಪುರೀ ಮಹಾಸ್ವಾಮಿಗಳ ಪೂಜಾಮಹೋತ್ಸವ

ಸೊಲ್ಲಾಪುರ

ಶ್ರೀಮಜ್ಜಗದ್ಗುರು ರಂಭಾಪುರೀ ವೀರಪೀಠಾಧೀಶ ಮಹಾಸ್ವಾಮಿಗಳವರು ಸೊಲ್ಲಾಪುರದಲ್ಲಿ ಅಖಿಲ ಭಕ್ತಮಾಹೇಶ್ವರರ ಪ್ರಾರ್ಥನಾಮೇರೆಗೆ ಅವರವರ ಮನೆಗಳಿಗೆ ರಾಜಮರ್ಯಾದೆಯಿಂದ ಬಿಜಯಂಗೈದು ಪೂಜೆಯನ್ನು ಕೈಕೊಂಡು ತೀರ್ಥಪ್ರಸಾದಗಳನ್ನು ಕೊಟ್ಟು ಪವಿತ್ರರನ್ನು ಮಾಡಿದ ವಿಚಾರವಾಗಿ ಈ ಹಿಂದೆ ಪಂಚಾಚಾರ್ಯಪ್ರಭಾಪತ್ರಿಕೆಯಿಂದ ಪ್ರಕಟಿಸಲ್ಪಟ್ಟಿದೆಯಷ್ಟೆ ಪುನಃ ಮಲ್ಲಿಕಾರ್ಜುನಪ್ಪ ಕುಂಬಾರ ನಾಗಪ್ಪ ಭೀಮಪ್ಪ ಗಾಬಣೆ ಡಾಕ್ಟರ್ ಮಾತೋಶ್ರೀ ಶಿವಗಂಗಾಬಾಯಿ ಮಂದ್ರೂಪಕರ ಡಾಕ್ಟರ್ ಸಿದ್ಧಲಿಂಗಪ್ಪಯ್ಯನವರು ಸಿದ್ಧರಾಮಪ್ಪ ವಾಕಳ್ಳೆ ಮುತ್ಯಪ್ಪ ಮೇಂಗಾಣೆ ರಾಮಚಂದ್ರಪ್ಪ ಕುತಾಟೆ ಈ ಮಹಾಶಯರು ಮಹೋತ್ಸವದಿಂದ ತಮ್ಮ ತಮ್ಮ ಮನೆಗಳಿಗೆ ಮಹಾಸನ್ನಿಧಾನವಂ ದಯಮಾಡಿಸಿಕೊಂಡು ಹೋಗಿ ಅಭೂತ ಪೂರ್ವವಾಗಿ ಸೇವೆಯನ್ನು ಮಾಡಿ ಕೃತಾರ್ಥರಾದರು ಬಳಿಕ ಶ್ರೀ ಜಗದ್ಗುರುಗಳವರು ಬೋರಾಮಣಿ ಥೊತ್ರೀ ದರಗನಹಳ್ಳಿ ದಿಂಡೂರು ನಿಂಬರಗಿ ಗ್ರಾಮಗಳ ಭಕ್ತರ ಪ್ರಾರ್ಥನಾಮೇರೆಗೆ ಆಯಾಯ ಗ್ರಾಮಗಳಿಗೆ ದಯಮಾಡಿಸಿ ನೆರೆದಿದ್ದ ಅಪಾರ ಜನಸ್ತೋಮಕ್ಕೆ ತಿರ್ಯಗಾಂದೋಲಿಕೋತ್ಸವದಲ್ಲಿ ದರ್ಶನಾಶೀರ್ವಾದಗಳಿಂದ ಹರ್ಷವನ್ನಿತ್ತುದ್ದಲ್ಲದೆ ವಿಜೃಂಭಣೆಯಿಂದ ಸೊಗಸನ್ನು ಬೀರುತ್ತಿದ್ದ ದರ್ಬಾರಮಂಟಪದಲ್ಲಿಸಿಂಹಾಸನಾರೂಢರಾಗಿ ಅಪ್ಪಣೆಯನ್ನು ಕೊಟ್ಟಪ್ರಕಾರ ಸೊಲ್ಲಾಪುರವಾರದವರ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳ ವೇದಘೋಷವು ಆಯಾಯ ಗ್ರಾಮಗಳವರ ಅಭಿನಂದನಪತ್ರಿಕೆಗಳನ್ನರ್ಪಿಸುವಿಕೆಯೂ ಶ್ರೀ|| ಷ|| ಬ್ರ|| ಬಾಲತಪಸ್ವಿ ಹೊಟಗಿ ಬೃಹನ್ಮಠಾಧ್ಯಕ್ಷ ಚನ್ನವೀರ ಶಿವಾಚಾರ್ಯರ ಮತ್ತು ಆಸ್ಥಾನವಿದ್ವಾನ್ ಪುರಾಣರತ್ನ ಬಿದರೆ ಬಸವಲಿಂಗಶಾಸ್ತ್ರಿಗಳ ಶ್ರೀ ಮಾ|| ಜಗದೇವರಾವ್ ಡಾಕ್ಟರ್ ದೇಶಮುಖರ ಶ್ರೀಮತಿ ಸೌ|| ಗುರುಭಕ್ತಿಭೂಷಿತೆಯರಾದ ಭಾಗೀರಥೀಬಾಯಿ ಕಬಾಡೆ ಇವರ ಗುರುಭಕ್ತಿ ಪ್ರಭಾವ ವಿಷಯಕವಾದ ಉಪನ್ಯಾಸಗಳೂ ತದನಂತರ ಶಿವಸಿದ್ಧಾಂತಗರ್ಭಿತವಾದ ಶ್ರೀ ಜಗದ್ಗುರುಗಳವರ ಶಿವಧರ್ಮೋಪದೇಶವೂ ಜರುಗಿದವಿಷಯವು ಚಿರಸ್ಮರಣೀಯವಾಗಿ ಹೋಗಿರುವುದು ನಿಂಬರಗಿ ಗ್ರಾಮದಲ್ಲಿ ಅಖಿಲ ಭಕ್ತರೊಡನೆ ಮಾಡಿದ ಸೇವೆಯಲ್ಲಿ ತೃಪ್ತಿಯಾಗದೆ ರೇವಣಸಿದ್ಧಪ್ಪ ಸಿದ್ಧರಾಮಪ್ಪ ಗೋಟೆ, ಗುರುಸಿದ್ಧಪ್ಪ ಶಿವಪ್ಪ ಬಿರಜದಾರ್, ಮಲ್ಲಿಕಾರ್ಜುನಪ್ಪ ಅಣ್ಣಾರಾವ್ ಬಿರಜದಾರ್ ಕಲ್ಲಪ್ಪ ಭಾಪೂರಾವ್ ಆಳಗಿ ಈ ಮಹಾಶಯರು ಮಹಾ ಗುರುಚರಣವನ್ನು ತಮ್ಮ ತಮ್ಮ ಮನೆಗಳಿಗೆ ಮಹೋತ್ಸವದಿಂದ ದಯಮಾಡಿಸಿಕೊಂಡು ಹೋಗಿ ಬಂಧುಬಾಂಧವರೊಡನೆ ಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ಸವಿದು ಶಕ್ತಿಮೀರಿ ಕಾಣಿಕೆಯನ್ನಿತ್ತು ಕೃತಾರ್ಥರಾದರು ಮತ್ತು ಗುಣವಂತರಾದ ಭಾಪೂರಾವ್ ಪಂಢರೀನಾಥ ಕುಲಕರ್ಣಿಯೆಂಬುವರು ಪರಮಾನಂದದಿಂದ ತಮ್ಮ ಶಕ್ತಿಮೀರಿ ಕಾಣಿಕೆಯನ್ನಿತ್ತು ಶುಭಾಶೀರ್ವಾದವನ್ನು ಪಡೆದರು ಈ ಪ್ರಕಾರ ಶ್ರೀಜಗದ್ಗುರುಗಳವರು ಗ್ರಾಮಾಂತರಗಳಲ್ಲಿ ತಮ್ಮ ವಿಜಯ ಯಾತ್ರೆಯನ್ನು ಪೂರೈಸಿಕೊಂಡು ಭಕ್ತರ ಪ್ರಾರ್ಥನಾಮೇರೆಗೆ ಶಿವರಾತ್ರಿ ವ್ರತಕ್ಕಾಗಿ ದಯಮಾಡಿಸಿದರು. ವಾಸಾಮಂದಿರದಲ್ಲಿಯೇ ಶಿವರಾತ್ರಿ ಮಹಾವ್ರತವನ್ನು ಆರಂಭಿಸಿದ್ದರಿಂದ ಅನೇಕ ಭಕ್ತಮಾಹೇಶ್ವರ ಸ್ತ್ರೀ ಪುರುಷರು ಅತ್ಯುತ್ಕಟ ಭಕ್ತಿಯಿಂದ ಸ್ನಾನವನ್ನು ಮಾಡಿಕೊಂಡು ಮಹಾಗುರು ದೇವತಾ ಪೂಜೋಪಕರಣಗಳನ್ನು ಮಹಾವ್ರತ ಕಾಣಿಕೆಯನ್ನು ತೆಗೆದುಕೊಂಡುಬಂದು ವಿಧ್ಯುಕ್ತವಾಗಿ ಪೂಜನ ಭಜನಗಳಿಂದ ವ್ರತವನ್ನು ನೆರವೇರಿಸಿ ಧನ್ಯರಾದರು ಆ ದಿವಸವೇ ಜಗದ್ಗುರು ಪಂಡಿತಾರಾಧ್ಯರ ಮತ್ತು ಜಗದ್ಗುರು ವಿಶ್ವಾರಾಧ್ಯರ ಜಯಂತಿಗಳಿದ್ದುದರಿಂದ ಸಮಸ್ತ ಭಕ್ತರ ಸಮ್ಮೇಳದಲ್ಲಿ ಶ್ರೀ ಮಹಾ ಜಗದ್ಗುರುಗಳವರು ಸಾಕ್ಷಿಸ್ಥಾನದಲ್ಲಿ ರಾರಾಜಿಸುತ್ತ ವೇ|| ಆಸ್ಥಾನವಿದ್ವಾನ್ ಪುರಾಣರತ್ನ ಬಸವಲಿಂಗಶಾಸ್ತ್ರಿಗಳ ಸಂಸ್ಕೃತಶಾಲಾ ಪ್ರಧಾನಾಧ್ಯಾಪಕ ಸಾಹಿತ್ಯರತ್ನ ಜಗದೀಶಶಾಸ್ತ್ರಿಗಳವರ ಶ್ರೀ ಮಾ|| ಧುಮ್ಮಾವಕೀಲರ ಮಹಾವ್ರತಪ್ರಭಾವ ವಿಷಯಕವಾದ ಉಪನ್ಯಾಸಗಳು ಜರುಗಿದ ನಂತರ ಶ್ರೀ ಜಗದ್ಗುರುಗಳವರು ಅನಾರ್ಯರ ಸಂಸರ್ಗದಿಂದುಂಟಾದ ಜಗತ್ತಿನಮಾಲಿನ್ಯ ನಿವಾರಣಪೂರ್ವಕವಾಗಿ ಸಹಜಧರ್ಮದ ಸ್ವರೂಪವನ್ನು ಸುಗಮೋಕ್ತಿಗಳಿಂದ ಪ್ರದರ್ಶಿಸಿ ಶಿವವ್ರತ ಪ್ರಭಾವ ವಿಷಯಕವಾದ ಸದುಪದೇಶದಿಂದ ಸರ್ವರನ್ನೂ ಆನಂದಗೊಳಿಸಿದರು ಈ ಸೊಲ್ಲಾಪುರದಲ್ಲಿ ಇನ್ನೂ ಬಿನ್ನಹಗಳು ಆಗತಕ್ಕವಿರುವವು. ಅಲ್ಲದೆ ಈ ಮಹಾರಾಷ್ಟ್ರದೇಶದಲ್ಲಿಯ ಅನೇಕ ಸಣ್ಣ ದೊಡ್ಡ ಗ್ರಾಮಗಳ ಭಕ್ತರು ತಮ್ಮ ತಮ್ಮಲ್ಲಿಗೆ ದಯಮಾಡಿಸಬೇಕೆಂದು ಅತ್ಯುತ್ಸಾಹದಿಂದ ಬಿನ್ನವಿಸಿಕೊಂಡಿರುವರು ಮೊಗಲಾಯಿಯಿಂದ ಬಹುಜನ ಶ್ರೀಮಂತರು ಪ್ರಾರ್ಥನೆಯನ್ನು ಮಾಡಿಕೊಂಡು ಮುಹೂರ್ತವನ್ನು ನಿಶ್ಚಯಿಸುವ ಸಮಯವನ್ನು ಕಾಯುತ್ತಿರುವರು ಶ್ರೀಜಗದ್ಗುರುಗಳವರ ವಿಜಯಯಾತ್ರೆಯು ಅತ್ಯುತ್ಸಾಹದಿಂದ ನಡೆದಿರುವುದನ್ನು ನೋಡಿ ಇದು ಆಚಾರ್ಯ ಯುಗವೆಂದು ಬಹು

ಜನಗಳು ಕೊಂಡಾಡುತ್ತಿರುವದು ತಾ|| ೧೯-೨-೧೯೪೨ ಗುರುವಾರ ಬಾರ್ಸಿ ಮುಕ್ಕಾಂ ಆಗುವುದಿದೆ ಶ್ರೀಜಗದ್ಗುರುಗಳವರ ಕೃಪಾಶೀರ್ವಾದ ಬಲದಿಂದ ವೀರಶೈವಜಗತ್ತು ಅಭಿವೃದ್ಧಿಯನ್ನು ಹೊಂದಲಿ

ಓರ್ವ ಗುರುಭಕ್ತಕೇಸರಿ

|| ಶ್ರೀಗುರುಭ್ಯೋನಮಃ ||

ಮಾಹೇಶ್ವರ ದೀಕ್ಷಾಸಂಸ್ಕಾರ

ವಿಜಾಪುರ ಜಿಲ್ಲಾ ಹುನಗುಂದ ತಾಲೂಕ ಪೈಕಿ ಅಮೀನಗಡದಲ್ಲಿರುವಂಥ ವೇ|| ಶ್ರೀ ಪ್ರಭಯ್ಯನವರು ಹುಚ್ಚಯ್ಯನವರು ರುದ್ರಸ್ವಾಮಿಮಠ ಇವರ ಚಿ|| ಗಳ ದೀಕ್ಷಾಸಂಸ್ಕಾರವು ಇದೇ ವಿಷುನಾಮ ಸಂವತ್ಸರ ಮಾಘ ಬ|| ೯ ಚಂದ್ರವಾರ ದಿವಸ ಒಳ್ಳೇ ವೈಭವದಿಂದ ನೆರವೇರಿಸಲ್ಪಟ್ಟಿತು ದೀಕ್ಷಾಕಾರ್ಯವು ಸಮಾಪ್ತಿಗೊಂಡ ನಂತರ ಗುರುಪಾದ ಪೂಜೆಯಾಗಿ ಆ ವೇಳೆ ವಿಶೇಷ ಭಕ್ತಮಾಹೇಶ್ವರರಿಗೆ ಅನ್ನಸಂತರ್ಪಣೆಯಾಯಿತು ಈ ಕಾರ್ಯಕ್ಕೆ ಕೊಣ್ಣೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಪಟ್ಟದಸ್ವಾಮಿಗಳವರು ಮತ್ತು ಮುಗಳಳ್ಳಿ ಪಟ್ಟದಸ್ವಾಮಿಗಳವರು ಆಗಮಿಸಿದ್ದರು ಸದರಿ ನೂತನ ಮಾಹೇಶ್ವರ ವಟುಗಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರ ಸದ್ಧರ್ಮಬುದ್ಧಿಯನ್ನು ಕೊಟ್ಟು ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನುಂಟು ಮಾಡಲೆಂದು ಇಚ್ಛಿಸುತ್ತೇವೆ

ಶ್ರೀಯುತ ಶೇಖರಯ್ಯನವರು ವಸ್ತ್ರದ ಶಿರೋಳ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ದತ್ತಕಸ್ವೀಕಾರವು.

ಶಿವಮೊಗ್ಗ ಡಿ|| ಜಡೇ ಹೋಬಳಿ ಕೋಡಿಕೊಪ್ಪದ ಸಿಂಧಿ ಶಿವಪ್ಪಗೌಡರ ಪರಿಚಯವನ್ನಿಲ್ಲಿ ಮಾಡಿಕೊಡುವದು ಹೊಸದಲ್ಲ ಶಿವಪ್ಪಗೌಡರು ತಮ್ಮ ಜೀವಿತಕಾಲದಲ್ಲಿ ಅನಂತಾನಂತ ಧರ್ಮಕಾರ್ಯಗಳನ್ನು ಮಾಡಿದ್ದರು

೧೯೩೯ನೆಯ ಇಸವಿಯಲ್ಲಿ ಶ್ರೀರಂಭಾಪುರೀ ಶ್ರೀ ಜಗದ್ಗುರುಗಳವರನ್ನು ತಮ್ಮ ಪ್ರಾಂತಕ್ಕೆ ದಯಮಾಡಿಸಿಕೊಂಡದ್ದಲ್ಲದೆ ತಮ್ಮ ಗೃಹಕ್ಕೂ ಕೂಡ ಬಿಜಯಂಗೈಸಿಕೊಂಡು ೨೨ ದಿವಸಗಳವರೆಗೂ ಸ್ವಂತ ಖರ್ಚಿನಿಂದ ಮುಕ್ಕಾಂ ಮಾಡಿಸಿ, ತಮ್ಮ ಹಾಗೂ ತಮ್ಮ ವಂಶದ ಕೀರ್ತಿಪ್ರತಿಷ್ಠೆಯು ಚಿರಕಾಲವಾಗಿ ಉಳಿಯುವಂತೆ ಮಹಾಪೀಠಕ್ಕೆ ಸುವರ್ಣರಜತಮಿಶ್ರಿತವಾದ ಸಿಂಹಾಸನವನ್ನು ಸಮರ್ಪಿಸಿ ಶ್ರೀಜಗದ್ಗುರುಗಳ ಕೃಪಾಶೀರ್ವಾದಕ್ಕೆ ಪಾತ್ರರಾಗಿದ್ದರು

ಉತ್ಸಾಹಿಗಳೂ ಉದಾರಿಗಳೂ ಆದ ಶಿವಪ್ಪಗೌಡರು ಧರ್ಮಕಾರ್ಯಗಳ ಜೊತೆಗೆ ಇನ್ನಿತರ ಸಾರ್ವಜನಿಕ ಕಾರ್ಯಗಳನ್ನು ಕೂಡ ಮಾಡಿ ಜನತಾಪ್ರೇಮವಿಶ್ವಾಸಗಳಿಗೆ ಪಾತ್ರರಾಗಿದ್ದರು

ಸದರಿ ಶಿವಪ್ಪಗೌಡರಿಗೆ ವಂಶೋದ್ಧಾರಕ್ಕೆ ಪುತ್ರಸಂತಾನವಿಲ್ಲದ್ದರಿಂದ ತಮ್ಮ ಅಣ್ಣನ ಮಗನಾದ ಈಶ್ವರಪ್ಪಗೌಡನನ್ನು ತಮ್ಮ ಅವಸಾನಕಾಲದಲ್ಲಿ ದತ್ತಮಾಡಿಕೊಂಡು ತಾ|| ೨೮-೯-೪೦ ರಲ್ಲಿ ಶಿವಸಾಯುಜ್ಯವನ್ನು ಹೊಂದಿದರು

“ದೈವೀವಿಚಿತ್ರಾಗತಿಃ” ಎನ್ನುವಂತೆ ಸದರಿ ಶಿವಪ್ಪಗೌಡರ ದತ್ತಕಮಗನಾಗಿದ್ದ ಈಶ್ವರಪ್ಪಗೌಡನು ಚಿರಕಾಲ ಬದುಕದೆ ಅಕಸ್ಮಾತ್ ರೋಗಪೀಡಿತನಾಗಿ ಮೃತಪಟ್ಟನು

ತರುವಾಯ ಶಿವಪ್ಪಗೌಡರ ಧರ್ಮಪತ್ನಿಯವರಾದ ಶ್ರೀಮತಿ ಬಸಮ್ಮಾಜಿಯವರು ತಮ್ಮ ವಂಶಾಭಿವೃದ್ಧಿಗಾಗಿ ಹಾಗೂ, ಪತಿಯ ಉತ್ತರಕ್ರಿಯಾದಿಗಳನ್ನು ನೆರವೇರಿಸುವುದಕ್ಕಾಗಿ ಗುರುಹಿರಿಯರ ಆಜ್ಞೆಯನ್ನು ಹೊಂದಿ ತಮ್ಮ ಪತಿ ಶಿವಪ್ಪಗೌಡರ ಅಣ್ಣನ ಮಗನಾದ ಶ್ರೀಯುತ ಬಸಪ್ಪಗೌಡರ ದ್ವಿತೀಯ ಪುತ್ರ ಚಿ|| ವೀರಪ್ಪಗೌಡನನ್ನು ವಿಧ್ಯುಕ್ತವಾಗಿ ದತ್ತಕ ತೆಗೆದುಕೊಂಡರು

ಈ ಸನ್ನಿವೇಶದಲ್ಲಿ ವೇ|| ಪಂ|| ಧರ್ಮಭೂಷಣ ಹರೀಶ್ವರಶಾಸ್ತ್ರಿಗಳು, ಶಾಂತಪುರಸಂಸ್ಥಾನ ಮಠದ ಇಲಾಖಾದಾರ್ ಜಡೇಮಾಸಿ ಗೊಗ್ಗಿಹಳ್ಳಿಮಠದ ಚನ್ನವೀರಸ್ವಾಮಿಯವರ ಹಾಗೂ ಆರೆಕಲಗದ್ದಿಮಠದ ಶಿ|| ಗದಿಗೆಯ್ಯನವರೊಡಗೂಡಿಕೊಂಡು ದತ್ತಕಕರ್ಮಾಂಗಭೂತಗಳಾದ ಗಣಪತಿಪೂಜಾ, ಪುಣ್ಯಾಹನಾಂದೀ ದತ್ತಹೋಮ ಫಲಪೂಜಾ ಇತ್ಯಾದಿ ಕಾರ್ಯಗಳನ್ನು ಶಾಸ್ತ್ರವಿಧಿಗನುಸಾರ ಮಾಡಿದರು

ಈ ಕಾರ್ಯಕ್ಕೆ ಬಂಧುವರ್ಗದವರು ಇಷ್ಟಮಿತ್ರರೂ ಸಹ ಸೇರಿದ್ದರು. ಮಾಹೇಶ್ವರರಿಗೆ ಅನ್ನಸಂತರ್ಪಣೆಯಾಯಿತು ಜಗದಾಚಾರ್ಯರ ಸೇವಾನಿರತರಾದ ಶ್ರೀಯುತ ಶಿವಪ್ಪಗೌಡರ ದತ್ತಕಮಗನಾದ ವೀರಪ್ಪಗೌಡರಿಗೆ ಚಿರಾಯುಷ್ಯವನ್ನು ದಯಪಾಲಿಸಿ ವಂಶಾಭಿವೃದ್ಧಿಯನ್ನುಂಟುಮಾಡಲೆಂದು ಜಗದೀಶನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ

ಗೊಗ್ಗಿಹಳ್ಳಿಮಠದ ಚನ್ನವೀರಸ್ವಾಮಿ ಜಡೆ

|| ಶ್ರೀ ಜಗದ್ಗುರು ರೇಣುಕಾಚಾರ್ಯಾಯನಮಃ ||

ವಿವಾಹಮಹೋತ್ಸವ ಸಮಾರಂಭ

ವಿಜಾಪುರ ಜಿಲ್ಲಾ ಬಾದಾಮಿ ತಾಲೂಕ ಪೈಕಿ ಗೋವಿನಕೊಪ್ಪಗ್ರಾಮದಲ್ಲಿರುವ ಶ್ರೀಯುತ ರಾ ರಾ ಸಂಗನಬಸಪ್ಪನವರು ಸಂಗಪ್ಪನವರು ಮಾಳವಾಡ ಇವರು ತಮ್ಮ ಪುತ್ರ ಚಿ|| ಗಂಗಾಧರಪ್ಪ ಇವರಿಗೆ ರಾಮದುರ್ಗದಲ್ಲಿರುವ ಗುರುಲಿಂಗ ಜಂಗಮ ಪ್ರೇಮಿಗಳೂ, ಸದಾಚಾರಸಂಪನ್ನರೂ ಆದ ಶ್ರೀಯುತ ರಾ ರಾ ಶಿವಯೋಗಪ್ಪನವರು ಪಟ್ಟಣದ ಇವರ ಪುತ್ರಿ ಚಿ|| ಕುಂ|| ಸೌ|| ಬಸಮ್ಮಾ ಇವರನ್ನು ತಂದು ಇದೇ ವೃಷನಾಮಸಂವತ್ಸರ ಮಾಘ ಬ|| ೧೧ ಬುಧವಾರ (ತಾ|| ೧೧-೨-೪೨) ದಿವಸ ಕೆ ಜ ಹಿರೇಮಠ ಕೊಣ್ಣೂರು ಇವರ ವೈದಿಕತ್ವದಲ್ಲಿ ವಿವಾಹಮಹೋತ್ಸವವನ್ನು ಒಳ್ಳೇ ವೈಭವದಿಂದ ನೆರವೇರಿಸಿದರು ಈ ವಿವಾಹ ಕಾರ್ಯಕ್ಕೆ ಧಾರವಾಡ ಜಿಲ್ಹಾಂವ ವಿಜಾಪುರ, ಗದಗ, ಗುಳೇದಗಡ್ಡ ಇವೇ ಮೊದಲಾದ ಪಟ್ಟಣಗಳಿಂದ ಅನೇಕ ಜನರು ಬಂದಿದ್ದರಲ್ಲದೆ, ಆಜುಬಾಜು ಗ್ರಾಮ ಹಳ್ಳಿಗಳಿಂದ ವಿಶೇಷ ಜನರು ಕೂಡಿದ್ದರು ಅಕ್ಷತಾರೋಪಣವಾದನಂತರ ಮಾಹೇಶ್ವರರಿಗೂ ಸ್ಥಳಪರಸ್ಥಳಗಳಿಂದ ಬಂದ ಯಾವತ್ತು ಜನರಿಗೂ ಮೃಷ್ಟಾನ್ನಭೋಜನವು ನಡೆಯಿತು [illegible] ದಿವಸ ರಾತ್ರಿ ನೂತನ ದಂಪತಿಗಳ ಮೆರವಣಿಗೆಯು ಅನೇಕ ವಾದ್ಯವೈಭವಗಳೊಂದಿಗೆ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಶ್ರೀ ಭಗವಂತನು ಈ ನೂತನ ದಂಪತಿಗಳಿಗೆ ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನೂ, ಪುತ್ರಪೌತ್ರಾಭಿವೃದ್ಧಿಯನ್ನೂ ಅನುಗ್ರಹಿಸಲೆಂದು ಹಾರೈಸುತ್ತೇವೆ ಈ ಮಹಾಕಾರ್ಯದಲ್ಲಿ ವೀರಶೈವ ಧರ್ಮಜಾಗ್ರತೆಗಾಗಿ ಹೋರಾಡುತ್ತಿರುವ ಪಂಚಾಚಾರ್ಯಪ್ರಭಾ ಪೋಷಣೆಕ್ಕಾಗಿ ೨ ರೂಪಾಯಿಗಳು ಮಾ|| ಸಂಗನಬಸಪ್ಪನವರಿಂದ ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರ ಇವರಲ್ಲಿ ಸಮರ್ಪಿಸಲ್ಪಟ್ಟಿತು

ಅ|| ಮಾಸ್ತರರು, ಗೋವಿನಕೊಪ್ಪ

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಗುರುತತ್ವಪ್ರಭಾಕರ

ಶ್ರೀ—ಪ| ಭಾಗೀರಥಿಬಾಯಿ ಚಿಕ್ಕಪ್ಪ, ಸೊಲ್ಲಾಪುರ

(ಹಿಂದಿನಿಂದ ಮುಂದುವರೆದುದು)

ಆದರ ಮನಸ್ಸೆಲ್ಲಾ ಯೋಗಶಕ್ತಿಯೆಂಬ ಬಲೆಯ ಕಣ್ಣುಗಳ ತೊಡಕಿಗೆ ಬಿದ್ದು ಆತ್ಮಾನ್ವೇಷಣವನ್ನು ಬಿಡುವದು. ಆ ಶಕ್ತಿಗಳ ವಿಷಯದಲ್ಲಿ ಎಚ್ಚರಿಕೆಯಾಗಿರಿ, ಅವುಗಳನ್ನುಪೇಕ್ಷಿಸಬೇಡಿ

(೨) ಸಣ್ಣಗಿಡಕ್ಕೆ ಯಾವಾಗಲೂ ಕುರಿಮೇಕೆಗಳ, ದನಕರುಗಳ ಮತ್ತು ಮಕ್ಕಳುಮರಿಗಳ ಬಾಧೆತಗಲದಂತೆ ಬೇಲಿ ಇರಬೇಕಾದುದಗತ್ಯ ಆದರೆ ದೊಡ್ಡದಾಗಿ ಬೆಳೆದ ಮೇಲೆ ಕುರಿಮೇಕೆಗಳು ದನಕರುಗಳು ಮಂದೆಮಂದೆಗಳೇ ಅದರ ನೆರಳಲ್ಲಿ ನಿಂತು ಅದರ ಎಲೆಗಳನ್ನೆಲ್ಲಾ ಹೊಟ್ಟೆ ಬಿರಿಯುವಷ್ಟು ಮೇಯಬಹುದು ನಮ್ಮಲ್ಲಿ ವಿಶ್ವಾಸವಿನ್ನೂ ಬಲಿಯದೆ ಇರವಾಗ ನಾವು ಕೆಟ್ಟಸಹವಾಸದ ಮತ್ತು ಪ್ರಾಪಂಚಿಕ ವಿಷಯಗಳ ಹಾವಳಿಗೆ ಸಿಕ್ಕದಂತೆ ಕಾಪಾಡಿಕೊಳ್ಳಬೇಕು ವಿಶ್ವಾಸವು ದೃಢವಾಗಿ ಬಲಿತ ಮೇಲೆ ನಮ್ಮ ಪವಿತ್ರಸಾನ್ನಿಧ್ಯಕ್ಕೆ ಯಾವ ಪ್ರಾಪಂಚಿಕ ವೃತ್ತಿಯೂ ದುರಿಚ್ಛೆಯೂ ತಲೆಹಾಕುವುದಕ್ಕೆ ಆಗುವುದಿಲ್ಲ ನಮ್ಮ ಪವಿತ್ರತೆಯ ಸಂಸರ್ಗದಿಂದಲೇ ದುಷ್ಟರಾದ ಎಷ್ಟೋ ಜನರು ದೈವೀ ಸಂಪತ್ತನ್ನು ಪಡೆಯುವರು ಇನ್ನು ನಿಜವಾದ ಭಕ್ತಿಯನ್ನು ಆರಂಭಿಸಬಹುದು ಅದು—

“ ಸತ್ಸಂಗತಿರೇವಾತ್ರಸಾಧನಂ ಪ್ರಥಮಂಸ್ಮೃತಂ ”

ಎಂಬ ಉಕ್ತಿಯಂತೆ ಸತ್ಸಂಗದಿಂದ ಮೊದಲಾಗುತ್ತದೆ. ಸತ್ಪುರುಷರು ಯಾರೆಂಬ ವಿಷಯದಲ್ಲಿ ಯೋಗವಾಸಿಷ್ಠದಲ್ಲಿ

“ಅನಸಂ ಸಮತಾನಂದಂ ಪರಮಾರ್ಥಂ ವಿದುರ್ಬುಧಾಃ |
ಸಯೈಃ ಪ್ರಾಪ್ಯತೇ ನಿತ್ಯಂ ತೇ ಸೇವ್ಯಾಃ ಶಸ್ತ್ರಸಾಧವಃ ||”

ಎಂದು ಹೇಳಿದೆ ಅಖಂಡವಾಗಿ ಸಮರಸ್ವರೂಪವಾಗಿರುವ ಆನಂದವೇ ಪರಮಾರ್ಥವಾದ್ದರಿಂದ ಅದು ಯಾರಿಂದ ನಮಗೆ ದೊರೆಯಬಹುದೋ ಅಂಥ ಸತ್ಪುರುಷರನ್ನೂ ಶಾಸ್ತ್ರಗಳನ್ನೂ ಸೇವಿಸಬೇಕೆಂದರ್ಥ ಅಂಥ ಸತ್ಪುರುಷರ ಸಹವಾಸವು ದೊರತಮೇಲೆಯೇ ಭಕ್ತಿಪಂಥವು ಮುಂದೆ ಸಾಗುವುದು ಅಥವಾ ಮುಂದೆ ಸಾಗುವುದೇನು! ಒಂದು ದೃಷ್ಟಿಯಿಂದ ನೋಡಿದರೆ ಭಕ್ತಿಪಂಥದಲ್ಲಿ ಅದೇ ಜೀವಸ್ಥಾನ

ತೇನಾಧೀತಶ್ರುತಿಗಣಾ ನೋಪಾಸಿತ ಮಹತ್ತಮಾಃ |
ಅವ್ರತಾತಪ್ತತಪಸಃ ಸತ್ಸಂಗಾನ್ಮಾಮುಪಾಗತಾಃ ||

ಎಂಬ ಶ್ಲೋಕವಿದೆ ಯಾರು ವೇದಶಾಸ್ತ್ರಗಳನ್ನೋದುವ ಆಯಾಸವನ್ನು ತೆಗೆದುಕೊಂಡಿಲ್ಲವೋ ಯಾರು ಅಪ್ರತಿಮ ಪಂಡಿತರನ್ನು ಸೇವಿಸುವ ಶ್ರಮೆಯನ್ನು ವಹಿಸಿಲ್ಲವೋ ಯಾರು ವ್ರತಗಳಿಂದಲೂ ತಪಸ್ಸಿನಿಂದಲೂ ದೇಹದಂಡನೆಯನ್ನು ಮಾಡಿಲ್ಲವೋ ಅಂಥವರುಕೂಡ ಬರೀ ಸತ್ಸಂಗದ ಪ್ರಭಾವದಿಂದ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗುತ್ತಾರೆ

“ ಮಹತ್ಸಂಗಸ್ತು ದುರ್ಲಭೋಽಗಮ್ಯೋಽಮೋಘಶ್ಚ ’

ಎಂಬ ಸೂತ್ರದಲ್ಲಿ ಮಹಾತ್ಮರ ಸಹವಾಸವು ದೊರೆಯುವುದು ಕಷ್ಟವೆಂದೂ ಅದನ್ನು ತಿಳಿಯುವದಾಗುವುದಿಲ್ಲವೆಂದೂ ಅದು ಬಹು ಬೆಲೆಯುಳ್ಳದ್ದೆಂದೂ ಸತ್ಸಂಗವನ್ನು ಹೊಗಳಿ ಆ ಸತ್ಸಂಗವು ದೇವರಕೃಪೆಯಿಂದಲೇ ದೊರೆಯುವುದೆಂದು

‘ ಲಭ್ಯತೇಽಪಿ ತತ್ಕೃಪಯೈವ ’

ಎಂಬಸೂತ್ರದಿಂದ ಹೇಳಿರುವುದಲ್ಲದೆ ಆದರ ಮುಂದಿನ

‘ ತಸ್ಮಿಂಸ್ತಜ್ಜನೇ ಭೇದಾಭಾವಾತ್ ’

ಎಂಬ ಸೂತ್ರದಿಂದ ಪರಮಾತ್ಮನಿಗೂ ಸತ್ಪುರುಷರಿಗೂ ಭೇದವಿಲ್ಲವೆಂದು ಹೇಳಿ ಆ ಸತ್ಪುರುಷರ ಸಹವಾಸವನ್ನು ಸರ್ವವಿಧದಲ್ಲಿಯೂ ಪಡೆಯಬೇಕೆಂದು

“ ತದೇವಸಾಧ್ಯತಾಂತದೇವಸಾಧ್ಯತಾಂ ’

ಎಂಬ ಸೂತ್ರದಲ್ಲಿ ಸಾರಿಸಾರಿ ಹೇಳುತ್ತಾರೆ ಆದ್ದರಿಂದ ಸಾಧಕನು ಸತ್ಪುರುಷರ ಆಶ್ರಯವನ್ನು ಮೊದಲು ಪಡೆಯಬೇಕು

ಒಂದು ಬೆಳೆಯನ್ನು ಬಿತ್ತಿದರೆ ಅದರ ಜೊತೆಯಲ್ಲಿ ಕಳೆಯು ಹುಟ್ಟುವಂತೆ ಒಬ್ಬ ಮಹಾತ್ಮರಲ್ಲಿ ಅಥವಾ ಒಂದು ಇಷ್ಟದೇವತೆಯಲ್ಲಿ ಅಥವಾ ಒಂದು ಶಾಸ್ತ್ರದಲ್ಲಿ ಶ್ರದ್ಧೆಯು ಹುಟ್ಟುವುದರೊಂದಿಗೆ ಇನ್ನೊಬ್ಬ ಮಹಾತ್ಮರಲ್ಲಿ ಅಥವಾ ಇನ್ನೊಂದು ದೇವತೆಯಲ್ಲಿ ಅಥವಾ ಇನ್ನೊಂದು ಶಾಸ್ತ್ರದಲ್ಲಿ ತುಚ್ಛಬುದ್ಧಿಯುಂಟಾಗುವ ಸಂಭವವುಂಟು ‘ಕುರ್ಚಿಗೆ’ ಎಂಬ ಆಯುಧದಿಂದ ಕಳೆಯನ್ನು ಕಿತ್ತೊಗೆದು ಸಸಿಯ ಬೆಳವಣಿಗೆಗೆ ಸಹಾಯವನ್ನು ಕಲ್ಪಿಸುವಂತೆ ವಿವೇಕದಿಂದ ಆ ತುಚ್ಛಭಾವನೆಯನ್ನು ಕಿತ್ತೊಗೆದ ಶ್ರದ್ಧೆಯನ್ನು ಬೆಳಸಬೇಕು ಕಳೆಯನ್ನು ಕಿತ್ತೊಗೆಯದಿದ್ದರೆ ಬೆಳೆಯು ಹೇಗೆ ಚೆನ್ನಾಗಿ ತಲೆ ಎತ್ತಿಕೊಂಡು ಬೆಳೆಯಲಾರದೋ ಹಾಗೆ ತುಚ್ಛಬುದ್ಧಿಯನ್ನು ತೆಗೆದುಹಾಕದಿದ್ದರೆ ಶ್ರದ್ಧೆಯು ಚೆನ್ನಾಗಿ ಕೈಗೂಡಿಕೊಳ್ಳಲಾರದು ಮನುಷ್ಯನಿಗೆ ಪೂರ್ವಜನ್ಮದ ಸಂಸ್ಕಾರದಿಂದಲಾದುದೋ ಒಂದು ದೇವತೆಯಲ್ಲಿ ಸ್ವಭಾವವಾಗಿ ಶ್ರದ್ಧೆಯುಂಟಾಗಿರುತ್ತದೆ ಇದಕ್ಕೆ ತನ್ನ ಪೂರ್ವಸಂಸ್ಕಾರವೇ ಕಾರಣವೇ ಹೊರತು ತಂದೆತಾಯಿಗಳದೇನೂ ಅಲ್ಲ

(೬ನೆಯ ಪುಟವನ್ನು ನೋಡಿ)

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ.

ಫಾಲ್ಗುನ ಶುದ್ಧ ಚತುರ್ದಶಿ **(1—3—42)** ಭಾನುವಾರ

ಶ್ರೀ ಕುಲ್ಯಪಾಕ್ ಸೋಮನಾಥಲಿಂಗದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಅವತಾರ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುನ ಶುದ್ಧ ಚತುರ್ದಶಿ ಭಾನುವಾರ **(1-3-42)** ದಿವಸ ಭರತಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು. ಶ್ರೀ ರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನ ಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವುದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀ ಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯು ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ.

ರಷ್ಯವು ಜಪಾನಿನ ಮೇಲೆ ಬೀಳುವಂತೆ ಮಾಡಬೇಕು

ಮಿತ್ರರಾಷ್ಟ್ರಗಳು ಪೆಸಿಫಿಕ್‌ನಲ್ಲಿ ಆತ್ಮ ಸಂರಕ್ಷಣೆ ನೀತಿಯನ್ನು ಮಾತ್ರ ಅನುಸರಿಸುತ್ತ ಬರಬೇಕೆಂದೂ, ಅತ್ತ ಅಮೆರಿಕ ಮತ್ತು ಬ್ರಿಟನ್‌ಗಳು ಮೆಡಿಟರೇನಿಯನ್ನಿನಿಂದ ಯೂರೋಪಿಗೆ ಮುತ್ತಿಗೆ ಹಾಕುವುದರ ಮೂಲಕ ಎರಡನೇ ರಂಗವೊಂದನ್ನು ಆರಂಭಿಸಬೇಕೆಂದೂ ಒಂದು ಸಲಹೆ ಹೊರಟಿದೆ. ಇದು ಅಮೆರಿಕದವರನ್ನು ಸಹ ಆಕರ್ಷಿಸಿರುವ ಹಾಗಿದೆ ಈ ಕಾರ್ಯವನ್ನು ಕೈಗೊಂಡರೆ ರಷ್ಯದಲ್ಲಿ ನಾಜಿಗಳ ಒತ್ತಾಯ ತೀರ ಕಡಿಮೆಯಾಗಿ ರಷ್ಯವು ತನ್ನ ಪೂರ್ವಸೇನೆಯ ಸಹಾಯದಿಂದ ಜಪಾನನ್ನು ಮುತ್ತಲು ಸಾಧ್ಯವಾದೀತೆಂದು ತಿಳಿಸಲಾಗಿದೆ. ಜಪಾನಿನ ಮೇಲೆ ಬಿದ್ದು ಹೊಡೆದಾಡಲು ಅನುಕೂಲವಾದ ಬಲಮೂಲವುಳ್ಳ ಮಿತ್ರರಾಷ್ಟ್ರವೆಂದರೆ ರಷ್ಯವೊಂದೇ ಎಂದೂ ಆದರೆ ಜರ್ಮನಿಯ ಒತ್ತಾಯವು ಕಡಿಮೆಯಾಗುವಂತೆ ಇತರರು ಮಾಡುವವರೆಗೆ ರಷ್ಯವು ಎರಡು ರಂಗಗಳಲ್ಲಿ ಹೊಡೆದಾಟವಾರಂಭಿಸುವ ಸಾಹಸ ಮಾಡಲಾರದೆಂದೂ ಸೂಚಿಸಲಾಗಿದೆ

ಜರ್ಮನಿಗೆ ಜ॥ ಫ್ರಾಂಕೋರವರ ಭರವಸೆ

ಪೂರ್ವದ ಕಡೆಯಿಂದ ಬರ್ಲಿನ್ ಮಾರ್ಗವು ತೆರೆಯಲ್ಪಡುವುದಾದರೆ ಸ್ಪೈಯಿನಿನ ಸ್ವಯಂಸೇವಕರು ಜರ್ಮನಿಯ ಸಹಾಯಕ್ಕೆ ಅಪಾರ ಸಂಖ್ಯೆಯಲ್ಲಿ ಬರುವರು ೨೦ ವರ್ಷಗಳಿಂದ ಹೂಣರನ್ನು ದೂರವಿರಿಸಿ ಕಮ್ಯೂನಿಸ್ಟರು ಯೂರೋಪಿಗೆ ಮುತ್ತಿಗೆ ಹಾಕದಂತೆ ತಡೆಗಟ್ಟಿದ್ದ ಸ್ಪೈನ ಸ್ವಯನ್ನೀಗ ಧ್ವಂಸಮಾಡಲು ಸಂಗ್ರಾಮವು ನಡೆಯುತ್ತಿದೆ ಈ ಅವಧಿಯಲ್ಲಿ ರಷ್ಯವು ಒಳಗೊಳಗೇ ಅಸಾಧ್ಯ ಸಿತೂರಿ ಮಾಡಿತು. ಸ್ಪೈಯಿನನ್ನು ಕಲಕಲು ಯತ್ನಿಸಿತು ಯೂರೋಪಿಗೆಲ್ಲ ಕಮ್ಯೂನಿಜಂ ದಾನಮಾಡಬೇಕೆಂಬುದು ರಷ್ಯನರ ಇಷ್ಟವಾಗಿದೆ ಇದು ಸಾಧಿಲ್ಪಡುವದೆಂಬ ಹೆದರಿಕೆಯೇನೂ ನಮಗಿಲ್ಲ. ಆದರೆ ವಿಪತ್ತುಂಟಾಗುವ ಸಂಭವವೇನಾದರೂ ಉಂಟಾದರೆ ಆಗ ಸ್ಪೈಯಿನಿನ ೧೦ ಲಕ್ಷ ಸ್ವಯಂ ಸೇವಕರು ಜರ್ಮನಿಗೆ ಸಹಾಯ ನೀಡಲು ಮುಂದೆ ಬರುವರು" ಎಂಬುದಾಗಿ ಜ॥ ಫ್ರಾಂಕೋರವರು ಸೈನ್ಯಾಧಿಕಾರಿಗಳನ್ನು ಕುರಿತು ಮಾತನಾಡುತ್ತಾ ತಿಳಿಸಿದರು.

ಸಿಂಗಪುರದ ಪತನ

ಕಳೆದ 15 ನೆಯ ತಾರೀಖು ಸಿಂಗಪುರವು ಜಪಾನಿಗೆ ಶರಣಾಗತವಾಯಿತೆಂದು ಅಧಿಕಾರಯುತವಾಗಿ ತಿಳಿಸಲಾಗಿದೆ—

ಸಿಂಗಪುರದ ರಕ್ಷಕರನ್ನು ಕುರಿತು ಜಪಾನರೂ ಪ್ರಶಂಸೆ ಮಾಡಿದರು ಸಿಂಗಪುರದಲ್ಲಿರುವ ಬ್ರಿಟಿಷ್ ಸೈನ್ಯಗಳು ಮಿಲಿಟರಿ ಸಂಪ್ರದಾಯಕ್ಕುಚಿತವೆನಿಸುವ ರೀತಿಯಲ್ಲಿ ಎಲ್ಲ ಕಷ್ಟನಷ್ಟಗಳನ್ನು ಅನುಭವಿಸಿ ಹೊಡೆದಾಡಿದರೆಂದು ಜಪಾನರು ತಿಳಿಸಿದರು. ಶರಣಾಗತರಾಗುವ ಷರತ್ತುಗಳಿಗೆ ಸಿಂಗಪುರದಿಂದ ೫ ಮೈಲು ದೂರದಲ್ಲಿರುವ ಫೋರ್ಡ್ ಮೋಟಾರು ಕಾರ್ಖಾನೆಯಲ್ಲಿ ರುಜು ಬಿತ್ತು. ಮಲಯದ ಜಪಾನ್ ದಂಡನಾಯಕರಾದ ಲೆ॥ ಜ॥ ಟೊಮೋಯುಕಿ ಯಮಾಶಿಟಾರವರೂ ಮತ್ತು ಬ್ರಿಟಿಷ್ ದಂಡನಾಯಕರಾದ ಜ॥ ಪರ್ಸಿವಲ್‌ರವರೂ ಸಹಿ ಹಾಕಿದರು ಸಿಂಗಪುರದ ನಗರದಲ್ಲಿಯೂ ಮತ್ತು ದ್ವೀಪದ ಕೇಂದ್ರಭಾಗದಲ್ಲಿಯೂ ಜಪಾನರಿಂದ ಸುತ್ತುವರಿಯಲ್ಪಟ್ಟು ಅವರು ಸುರಿಸಿದ ಬಾಂಬುಗಳನ್ನು ಎದುರಿಸಲು ಅಶಕ್ತರಾದಾಗ ಬ್ರಿಟಿಷರು ಶರಣಾಗತರಾಗಲು ಮುಂದೆ ಬಂದರೆಂದು ಹೇಳಲಾಗಿದೆ ಟ್ಯಾಂಕ್ ಪಡೆಯೊಂದನ್ನು ಮುಂದಿಟ್ಟುಕೊಂಡು ಸೋಮವಾರ ಬೆಳಿಗ್ಗೆ 8 ಗಂಟೆಗೆ ಜಪಾನ್ ಸೇನೆಗಳು ಸಿಂಗಪುರವನ್ನು ಪ್ರವೇಶಿಸಿದವೆಂದು ಹೇಳಲಾಗಿದೆ.

ಜ॥ ಟೋಜೋರವರ ಭಾಷಣ

ಜಪಾನ್ ಮಹಾಪ್ರಧಾನರಾದ ಜ॥ ಟೋಜೋರವರು ಶಾಸನಸಭೆಯ ಮುಂದೆ ಭಾಷಣಮಾಡುತ್ತ—"ಸಿಂಗಪುರವು ಬಿದ್ದುಹೋದುದರಿಂದ ಪೂರ್ವ ಏಷ್ಯಾದಲ್ಲಿರುವ ಬ್ರಿಟಿಷ್ ಮತ್ತು ಅಮೆರಿಕನ್ ಮೂಲಗಳೆಲ್ಲ ಜಪಾನರ ವಶವಾದಂತಾಯಿತು ಜಪಾನನ್ನು ಕೇಂದ್ರವಾಗಿಟ್ಟುಕೊಂಡು ಪೂರ್ವ ಏಷ್ಯಾದಲ್ಲಿ ಪರಸ್ಪರ ಅಭಿವೃದ್ಧಿ ಕ್ಷೇತ್ರವೊಂದನ್ನು ಸ್ಥಾಪಿಸುವುದೇ ನಮ್ಮ ಉದ್ದಿಷ್ಟ ಈ ವ್ಯವಸ್ಥೆಯಲ್ಲಿ ಪ್ರತಿಯೊಂದು ದೇಶಕ್ಕೂ ಸರಿಯಾದ ಸ್ಥಾನ ಕೊಡಲಾಗುತ್ತದೆ ದಕ್ಷಿಣಅಮೆರಿಕ ಮುಂತಾದ ತಾಟಸ್ಥ್ಯರಾಷ್ಟ್ರಗಳು ಜಪಾನಿನ ನಿಜವಾದ ಉದ್ದಿಷ್ಟಗಳನ್ನು ಅರಿತು ವರ್ತಿಸುವುವೆಂದು ನಾವು ನಂಬಿದ್ದೇವೆ ಸಿಂಗಪುರವು ಬಿದ್ದುಹೋದುದರಿಂದ ಈ ಸಂಗ್ರಾಮ ಪ್ರಥಮ ಘಟ್ಟವು ಮುಗಿದಂತಾಯಿತು ಜಪಾನರು ಈಗ ತಮ್ಮ ಪ್ರಯತ್ನವನ್ನು ಸಡಿಲಿಸಬಾರದು ಅಥವಾ ಸಿಂಗಪುರದ ಆಕ್ರಮಣದಿಂದ ಎಲ್ಲಾ ಆಗಿಹೋಯಿತೆಂದು ಸಂತೋಷದಿಂದ ಮೈಮರೆಯಲಾಗದು ಎಂದು ಹೇಳಿದರು.

ಜಪಾನ್ ಸೈನಿಕರು ತುಂಬಿದ ಹಡಗುಗಳ ನಾಶ

ದಕ್ಷಿಣ ಸುಮಾತ್ರದಲ್ಲಿರುವ ಪಲ್ಯಾಂಬ್ಯಾಂಗ ನಗರದ ಮೇಲೆ ನಮ್ಮ ವಿಮಾನಗಳು ಮುತ್ತಿಗೆಯನ್ನು ಮುಂದುವರಿಸಿದವು ಅಮೆರಿಕಾ ವಿಮಾನಗಳು ಒಂದು ವಿಮಾನ ನಿಲ್ದಾಣದ ಮೇಲೆ ಮುತ್ತಿಗೆ ನಡೆಸಿ, ೪ ಶತ್ರು ಫೈಟರುಗಳನ್ನು ನಾಶಮಾಡಿದವು ಡಚ್ ಫೈಟರುಗಳು ಎರಡು ಶತ್ರು ಬಾಂಬರುಗಳನ್ನು ಹೊಡೆದವು ಶತ್ರು ಹಡಗುಗಳ ಮೇಲೆ ಅಮೆರಿಕನ್ ಡಚ್ ವಿಮಾನಗಳು ಮುತ್ತಿಗೆ ನಡೆಸಿ, ಒಂದು ದೊಡ್ಡ ಸೈನಿಕರ ಹಡಗನ್ನು ಮುಳುಗಿಸಿದವು ಮತ್ತೊಂದಕ್ಕೆ ಪೆಟ್ಟುಬಿತ್ತು ಅಲ್ಲದೆ, ಯೋಧರು ತುಂಬಿದ ಹಲವು ಬಾರ್ಜುಗಳನ್ನು ಸಹ ಮುಳುಗಿಸಲಾಯಿತು

ಸ್ವೀಕಾರ.

ಧಾರವಾಡ ಜಿ॥ ಗದಗ ಶಹರನಿವಾಸಿಗಳಾದ ವೇ॥ ಗುಡ್ಡಿಮಠದ ಸಂಗಯ್ಯನವರ ಮೊಮ್ಮಗ ಚಿ॥ ಗಂಗಯ್ಯನಿಗೂ ಹೊಂಬಳಗ್ರಾಮದ ರಾಮಗಿರಿಮಠದ ವೇ॥ ಪ್ರಭಯ್ಯನವರ ಪುತ್ರಿ ಚಿ॥ ಸೌ॥ ಶಂಕರವ್ವನಿಗೂ, ಮತ್ತು ಸದರಿ ಸಂಗಯ್ಯನವರ ಅಳಿಯಂದಿರಾದ ಚಿ॥ ಅಯ್ಯಪ್ಪಯ್ಯನವರಿಗೂ ನಾರಾಯಣಪುರ ಗ್ರಾಮದ ವೇ॥ ಅಂಗಡಿ ಅಂದಾನಯ್ಯನವರ ಪುತ್ರಿ ಚಿ॥ ಸೌ॥ ಪಾರ್ವತವ್ವನಿಗೂ ಮಾಘ ಶು॥ ೬ ದಿವಸ ನೆರವೇರಿದ ವಿವಾಹಸಮಾರಂಭದಲ್ಲಿ ವಧೂವರರ ಕಡೆಯವರಿಂದ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 4 ರೂಪಾಯಿಗಳು ವೇ॥ ಸಿದ್ಧಯ್ಯನವರು ಹೊಸಮಠ ಹೊಂಬಳ ಇವರ ದ್ವಾರಾ ತಲ್ಪಿರುತ್ತವೆ

ಹುಬ್ಬಳ್ಳಿ ಹಿರಿಯಮಠದ ವೇ॥ ಸೋಮನಾಥಯ್ಯನವರ ಪುತ್ರಿ ಶಾಂತಾದೇವಿಯನ್ನು ಬೆಳಗಾಂವ ಜಿಲ್ಲಾ ಸಂಪಗಾಂವತಾಲೂಕ ನಾಗನೂರಗ್ರಾಮದ ವೇ॥ ಶೀಲಯ್ಯನವರ ಮಠದ ಚನ್ನಬಸವಯ್ಯನವರ ಪುತ್ರ ವೇ॥ ಕಾಶಯ್ಯಸ್ವಾಮಿ ಪ್ರೇಸ್ಸಿಮಾಸ್ತರಿಗೆ ಕೊಟ್ಟು ನೆರವೇರಿಸಿದ ನಿಶ್ಚಯಕಾಲದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ವೇ॥ ವೀರಭದ್ರಯ್ಯ ಹಿರೇಮಠ ಇವರ ದ್ವಾರಾ ತಲ್ಪಿದ್ದವೆ

ಶಿವಮೊಗ್ಗ ಜಿ॥ ಜಡೆಹೋಬಳಿ ಕೋಡಿಕೊಪ್ಪದ ಶ್ರೀ॥ ಶಿವಪ್ಪಗೌಡರ ಪತ್ನಿಯವರಾದ ಶ್ರೀಮತಿ ಬಸಮ್ಮಾಜಿಯವರು ತಮ್ಮ ಪತಿಯವರ ಸಹೋದರರ ಪುತ್ರ ಶ್ರೀ॥ ಬಸಪ್ಪಗೌಡರ ದ್ವಿತೀಯ ಪುತ್ರರಾದ ಚಿ॥ ವೀರಪ್ಪಗೌಡನನ್ನು ದತ್ತಕಪುತ್ರನನ್ನಾಗಿ ಸ್ವೀಕರಿಸಿದ ಸಂದರ್ಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ ಜಡೇವಾಸಿ ಗೊಗ್ಗಿಹಳ್ಳಿ ಮಠದ ವೇ॥ ಚನ್ನವೀರಸ್ವಾಮಿಯವರ ದ್ವಾರಾ ತಲ್ಪಿರುತ್ತದೆ.

ಗದಗನಿವಾಸಿಗಳಾದ ವೇ॥ ಕರಬಸವಯ್ಯಾ ಅಡಿವಯ್ಯಾ ಕಲ್ಮಠ ಇವರ ಸುಪುತ್ರ ಚಿ॥ ಅಡಿವಯ್ಯನಿಗೆ ವೀರಮಾಹೇಶ್ವರ ದೀಕ್ಷಾಸಮಾರಂಭವೂ ಮತ್ತು ಅವರ ತಮ್ಮ ವೇ॥ ರಾಚಯ್ಯನವರ ಪುತ್ರಿ ಚಿ॥ ಸೌ॥ ಬಸವ್ವನನ್ನು ಸೂಡಿ ಭಿಕ್ಷಾವೃತ್ತಿ ಮಠದ ವೇ॥ ಸಂಗಯ್ಯನವರ ದತ್ತಕಪುತ್ರ ಚಿ॥ ಸ॥ ವೀರಬಸಯ್ಯನಿಗೂ ವೇ॥ ರಾಚಯ್ಯನವರ ದ್ವಿತೀಯ ಪುತ್ರಿ ಚಿ॥ ಸೌ॥ ರಾಚವ್ವನನ್ನು ಹುಸ್ಸಾಳ ನಾಗವಿ ಹಿರೇಮಠದ ವೇ॥ ಮಲ್ಲಯ್ಯನವರ ಪುತ್ರ ಚಿ॥ ಸ॥ ವೀರಯ್ಯನಿಗೂ ಕೊಟ್ಟು ನಡೆದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವೇ॥ ಕರಬಸಯ್ಯನವರಿಂದ ಸಮರ್ಪಿಸಲ್ಪಟ್ಟ 1 ರೂ. ಯು ಶ್ರೀಮತಿ ಗಂಗವ್ವಾ ಕೋಂ ಸಂಗಯ್ಯ ಇವರಿಂದ ಸಮರ್ಪಿಸಲ್ಪಟ್ಟ 0–8–0 ಜುಮ್ಲಾ 1–8–0 ಗಳು ತಲ್ಪಿರುತ್ತವೆ.

ಕಾರವಾರ ಜಿ॥ ಸಿದ್ದಾಪುರ ತಾ॥ ವ ಳವತ್ತಿ ಪಟೇಲ ಬಂಗಾರಪ್ಪಗೌಡರು ಮಹಾಶಿವರಾತ್ರಿಯ ದಿವಸ ಶ್ರೀ ಜಗದಾಚಾರ್ಯರ ಜಯಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಯು ವೇ॥ ಯಲಿವಾಳ ಮಠದ ಚಂದ್ರಶೇಖರಯ್ಯನವರ ದ್ವಾರಾ ತಲ್ಪಿರುತ್ತದೆ

ಧಾರವಾಡ ಜಿ॥ ಬೆಲವಂತರ ಗ್ರಾಮದ ಶ್ರೀ ಪರ್ವ ಶಿವನಗೌಡರು ಪೋಲೀಸ್ ಪಾಟೀಲರ ಚಿಕ್ಕ ತಂದೆಯವರಾದ ಬಸನಗೌಡರು ಶಿವಾಧೀನರಾದ ಕಾಲದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ ಶ್ರೀ ಸಿದ್ಧರಾಮೇಶ್ವರಸ್ವಾಮಿ ಚನ್ನಬಸವೇಶ್ವರಸ್ವಾಮಿ ಹಿರೇಮಠ ಬೆಲವಂತರ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ಶ್ರೀ ರಂಭಾಪುರೀ ಜಗದ್ಗುರುಗಳವರ ಅಷ್ಟಪಲ್ಲಕ್ಕಿಮಹೋತ್ಸವ ಬಾರ್ಸಿ.

ಸೊಲ್ಲಾಪುರ ಜಿ॥ ಬಾರ್ಸಿಟವನ್ನಿನಲ್ಲಿ ಇದೇ ತಿಂಗಳು ೧೯ ನೆಯ ತಾರೀಖಿನದಿವಸ ಶ್ರೀರಂಭಾಪುರೀ ಜಗದ್ಗುರುಗಳವರ ಅಷ್ಟಪಲ್ಲಕ್ಕಿಮಹೋತ್ಸವವು ಸಕಲ ಬಾಜಬಿರುದಾವಳಿಗಳೊಡನೆ ಅಭೂತಪೂರ್ವ ವೈಭವದಿಂದ ನೆರವೇರಿತು ಶ್ರೀಜಗದ್ಗುರುಗಳವರು ಸೊಲ್ಲಾಪುರದಿಂದ ಬಾರ್ಸಿಗೆ ಆಗಮಿಸಿದರು ಈ ಮಹೋತ್ಸವಕ್ಕೋಸ್ಕರ ಮಹಾರಾಷ್ಟ್ರದೇಶದ ನಾನಾಭಾಗಗಳಿಂದ ಅಸಂಖ್ಯ ಜನರು ಆಗಮಿಸಿದ್ದರು ಈ ಮಹೋತ್ಸವಕ್ಕಾಗಿ ನಗರದಲ್ಲಿರುವ ಎಲ್ಲಾ ಸ್ಕೂಲು ಹೈಸ್ಕೂಲುಗಳಿಗೂ ನಾಲ್ಕು ಬಟ್ಟೆಯ ಮಿಲ್ಲುಗಳಿಗೂ ರಜಾಕೊಡಲಾಗಿತ್ತು ನಗರ ಶೃಂಗಾರವು ವರ್ಣನೀಯವಾಗಿತ್ತು ಜಗದಾಚಾರ್ಯರ ಜಯಧ್ವನಿಯು ನಭೋಮಂಡಲವನ್ನು ವ್ಯಾಪಿಸಿತ್ತು. ಪ್ರಾತಃಕಾಲ ೯ ಘಂಟೆಗೆ ಹೊರಟ ಉತ್ಸವವು ಸಾಯಂಕಾಲ ೪ ಘಂಟೆಗೆ ಉತ್ತರೇಶ್ವರದೇವಾಲಯಕ್ಕೆ ಬಂದು ತಲ್ಪಿತು ಸ್ಮಾರ್ತ, ವೈಷ್ಣವ, ಮಾರವಾಡಿ, ಗುಜ್ಜರ, ಜೈನ, ವೈಶ್ಯ, ವಿಶ್ವಕರ್ಮ, ಮರಾಠಾ, ಮುಸಲ್ಮಾನ್ ಮೊದಲಾದವರು ಶ್ರೀಜಗದ್ಗುರುಗಳವರಿಗೆ ಅತ್ಯುತ್ಸಾಹದಿಂದ ತಮ್ಮ ಭಕ್ತಿಯನ್ನು ಸಮರ್ಪಿಸಿದರು ಕೆಲವರು ನೋಟುಗಳ ಹಾರವನ್ನು ಮಾಡಿ ಕಂಠದಲ್ಲಿ ಹಾಕಿದರು ಈ ರೀತಿಯಾಗಿ ಉತ್ಸವವು ವಿಶೇಷ ವೈಭವದಿಂದ ನೆರವೇರಿತು 20 ನೆಯ ತಾರೀಖಿನದಿವಸ ಉತ್ತರೇಶ್ವರ ದೇವಾಲಯದಲ್ಲಿ ಶ್ರೀಜಗದ್ಗುರುಗಳವರ ಪ್ರವಚನವು ನೆರವೇರಿತು ಆ ಕಾಲಕ್ಕೆ ಬಹುಜನರು ಆಗಮಿಸಿದ್ದರು. ಪ್ರಾರಂಭದಲ್ಲಿ ಶ್ರೀ ವರಾಂಡಕರ್ ಶ್ರೀಗಳು, ಹೋಟಗಿ ಶ್ರೀಗಳು, ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳು, ಸೌ॥ ಭಾಗೀರಥೀಬಾಯಿ ಕಟಾಪ ಮೊದಲಾದವರ ಭಾಷಣಗಳಾದವು ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು

[೩ನೆಯ ಪುಟದಿಂದ ಮುಂದುವರೆದುದು]

ಪುರಾಣನಾಯಕನನ್ನಾಗಿ ಮಾಡಿರುವ ಎಲ್ಲಾ ಸ್ವರೂಪವೂ ಒಬ್ಬ ಜಗದೀಶ್ವರನವೇ ಆಗಿರುವುದರಿಂದ ನಾವು ಯಾವುದಾದರೊಂದು ಸ್ವರೂಪವನ್ನು ಅಥವಾ ಅದರ ಅನುಯಾಯಿಗಳಾದ ಬೇರೆ ಮಹಾತ್ಮರನ್ನೂ ಅಥವಾ ಆ ದೇವತಾ ಸಂಬಂಧವಾದ ಒಂದು ಶಾಸ್ತ್ರವನ್ನು ತುಚ್ಛಬುದ್ಧಿಯಿಂದ ನಿಂದಿಸಿದರೆ ಪ್ರಕಾರಾಂತರದಿಂದ ಆ ಜಗದೀಶ್ವರನನ್ನೇ ಅವನ ಅನುಯಾಯಿಗಳನ್ನೇ ಅವನ ಶಾಸ್ತ್ರವನ್ನೇ ನಿಂದಿಸಿದಂತಾಯಿತು. ರಾಜಯೋಗದಲ್ಲಿ ಯಮವನ್ನು ನಿಯಮಕ್ಕಿಂತ ಮೊದಲು ಹೇಳುವುದಕ್ಕೆ ಕೊಟ್ಟಿರುವ ಕಾರಣವನ್ನು ನೆನಪಿಗೆ ತರತಕ್ಕದ್ದು. ಬೇಕು ಒಳ್ಳೆಯದನ್ನು ಹಿಡಿಯುವುದಕ್ಕೆ ಮೊದಲು ಕೆಟ್ಟದ್ದನ್ನು ಬಿಡಬೇಕು ಅಂದರೆ ಒಬ್ಬರಲ್ಲಿ ಶ್ರದ್ಧೆಯನ್ನು ಇಟ್ಟುಕೊಳ್ಳುವುದಕ್ಕೆ ಮೊದಲು ಬೇರೊಬ್ಬರ ನಿಂದೆಯನ್ನು ಬಿಡಬೇಕು. ಎಲುಬನ್ನು ಹಿಡಿದುಕೊಂಡೇ ಎಷ್ಟು ಸಲ ಮುಳುಗಿದರೂ ಕೆಳ ನೆಲಿಗೆ ಹೋಗಲಾಗುವುದಿಲ್ಲವೋ ಹಾಗೆ ಇನ್ನೊಬ್ಬರ ನಿಂದೆಯನ್ನು ಮಾಡುತ್ತ ಎಷ್ಟು ಶ್ರದ್ಧೆಯನ್ನು ಬೆಳಸಿಕೊಂಡರೂ ವ್ಯರ್ಥವೇ. ಎಲುಬನ್ನು ದೂರಕ್ಕೆ ಬಿಸಾಟು ಒಮ್ಮೆ ಮುಳುಗಿದರೆ ಸಾಕು ಅವನು ಶುದ್ಧನಾಗುವನು. ಅದರಂತೆ ನಿಂದೆಯನ್ನು ಬಿಟ್ಟು ಶ್ರದ್ಧೆಯನ್ನು ಮಾಡಿದರೆ ಶೀಘ್ರದಲ್ಲಿ ಸಾಕ್ಷಾತ್ಕಾರವಾಗುವುದು. ಹೀಗೆ ಮಾಡಿದರೆ ಮಾತ್ರ ಭಕ್ತಿಯು ಬೆಳೆಯುವುದು. ಭಕ್ತರೆಂದರೆ ಪ್ರತಿದಿನವೂ ಕೆಲವು ಹೊತ್ತು ಗಟ್ಟಿಯಾಗಿ ರಾಮ ಕೃಷ್ಣ ಶಿವ ಶಂಕರ ಎನ್ನುತ್ತ ಭಜನೆಯನ್ನು ಮಾಡಿ ದೇವರಿಗೆ ಆರತಿ ನೈವೇದ್ಯವೆಂದು ಕಲವರು ತಿಳಿದುಕೊಂಡಿರುತ್ತಾರೆ.

(ಸಶೇಷ)

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ॥

ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ

ಲೇಖಕರು—ಶ್ರೀ ಪಟ್ಟದಸ್ವಾಮಿಗಳು, ಹಿರೇಮಠ, ಕೊಣ್ಣೂರು

(ಹಿಂದಿನಿಂದ ಮುಂದುವರೆದುದು)

ಪ್ರಾಚೀನ ಧರ್ಮ ನಿಯಮಗಳು ಬಹಳ ಕಷ್ಟತರಗಳಾಗಿವೆ. ಆದ್ದರಿಂದ ಈಗಿನ ಕಾಲಮಾನಕ್ಕನುಸಾರವಾಗಿ ಆ ಧರ್ಮದ ನಿಯಮಗಳನ್ನು ತಿದ್ದುವದು ಒಳಿತಲ್ಲವೆ? ಅಂದರೆ ನಮ್ಮ ವೀರಶೈವಧರ್ಮವು ಉಳಿಯುವದು. ಇಲ್ಲವಾದರೆ ನಾಮಾವಶೇಷವಾಗುವದೆಂದು ಈಗಿನ ಸುಧಾರಕರು ವಾದಿಸುವರು. ಮಹಾಶಯರೇ! ಪೂರ್ವದವರು ರುಮಾಲ (ಚೌಕ್ಟಿಕ ವಸ್ತ್ರ) ವನ್ನು ತಲೆಗೆ ಸುತ್ತಿಕೊಳ್ಳುತ್ತಿದ್ದರು. ಈಗಲೂ ಮೈಸೂರು ದೇಶದಲ್ಲಿ ಬಹುತೇಕ ಆ ಪದ್ಧತಿಯುಂಟು. ಆಗ್ಗೆ ಬೇಕಾದಷ್ಟು ದೊಡ್ಡ ತಲೆಗಳಿದ್ದರೂ ನಡೆಯುತ್ತಿದ್ದವು. ಈಗ ಸಣ್ಣ ಸಣ್ಣ ಗಾಂಧಿ ಟೊಪ್ಪಿಗೆಗಳಾಗಿರುವದರಿಂದ ಈ ಟೊಪ್ಪಿಗೆಗಳ ಅಳತೆಗೆ ಸರಿಯಾಗಿ ತಲೆಗಳನ್ನು ತಿದ್ದಬೇಕೆಂದೆನ್ನುತ್ತವೆ? ತಲೆಗಳ ಪ್ರಮಾಣದಂತೆ ಟೊಪ್ಪಿಗೆಗಳನ್ನು ತಯಾರಿಸಬೇಕೋ? ಅಥವಾ ಟೊಪ್ಪಿಗೆಗಳ ಪ್ರಮಾಣದಂತೆ ತಲೆಗಳನ್ನು ತಿದ್ದಬೇಕೋ? ಟೊಪ್ಪಿಗೆಗಳ ಅಳತೆಯಂತೆ ತಲೆಯನ್ನೇ ತಿದ್ದುವೆವೆನ್ನುವವರು ಮಳಲಿನಲ್ಲಿ ಹೋಗಿ ತೈಲವನ್ನು ತೆಗೆದುಕೊಂಡು ಬರುತ್ತೇನೆಂದು ಹೊರಟ ಮೂರ್ಖನಂತೆ ಹಾಸ್ಯಕ್ಕೀಡಾಗವರಲ್ಲವೆ? ಅದರಂತೆಯೇ ಧರ್ಮಶಾಸ್ತ್ರಾಜ್ಞೆಯಂತೆ ಜನರ ನಡೆ ನುಡಿಗಳನ್ನು ತಿದ್ದಬೇಕಲ್ಲದೆ ಜನರ ಇಚ್ಛೆಯಂತೆ ಧರ್ಮಶಾಸ್ತ್ರಗಳನ್ನು ತಿದ್ದುವದು ಯಾರಿಗೂ ಯಾವ ಕಾಲದಲ್ಲಿಯೂ ಸಾಧ್ಯವಿಲ್ಲವು. ತಮ್ಮ ಸ್ವೇಚ್ಛಾಚಾರಕ್ಕೆ ಅನುಕೂಲವಾದ ನಿಯಮಗಳಿಗೆ ಶಾಸ್ತ್ರವೆಂದು ಒಪ್ಪಿ ಪ್ರತಿಕೂಲವಾದ ನಿಯಮಗಳಿಗೆ ಇವು ನಮಗೆ ಸಂಬಂಧಿಸಿದವುಗಳಲ್ಲವೆಂದು ಧಿಕ್ಕರಿಸುವದು ಮಾನವಧರ್ಮದ ಲಕ್ಷಣವಲ್ಲ. ತಮ್ಮ ತಮ್ಮ ಮನಸ್ಸಿಗೆ ಬಂದಂತೆ ನಡೆಯುವವರು ಕಡೆಗೆ ದುಃಖಕ್ಕೀಡಾಗದಿರಲಾರರು. ಇದೇ ವಿಷಯವು—

ರಾಜಾಜ್ಞಾಭಂಗಕರ್ತೄಣಾಂ ಯಥಾದಂಡೋ ಭವಿಷ್ಯತಿ ।
ಶಿವಾಜ್ಞಾಭಂಗಕರ್ತೄಣಾಂ ದಂಡೋಹಿ ನರಕಸ್ತಥಾ ॥

ಎಂದು ವ್ಯಾಸಮಹರ್ಷಿಗಳು ಶೃತಿರೂಪವಾದ ಭಗವಂತನಾಜ್ಞೆಯು ರಾಜಾಜ್ಞೆಯಂತೆ ಬಲವತ್ತರವಾದುದೆಂದು ಶಂಕರಸಂಹಿತೆಯಲ್ಲಿ ಉಲ್ಲೇಖಿಸಿದ್ದಾರೆ. ಮತ್ತು

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂಗತಿಂ ॥

ಯಾವನು ಶಾಸ್ತ್ರನಿಯಮವನ್ನು ಅತಿಕ್ರಮಿಸಿ ತನ್ನ ಇಚ್ಛಾನುಸಾರವಾಗಿ ವರ್ತಿಸುವನೋ ಅಂಥವನು ಯಾವ ಸಿದ್ಧಿಯನ್ನೂ, ಯಾವ ಸುಖವನ್ನೂ, ಯಾವ ಸದ್ಗತಿಯನ್ನೂ, ಹೊಂದುವದಿಲ್ಲವೆಂದು ಗೀತಾಕಾರರು ಶಾಸ್ತ್ರವಿಧಿಯನ್ನು ಅತಿಕ್ರಮಿಸುವವರಿಗೆ ದೋಷವನ್ನು ತೋರಿಸಿರುವರು. ಅಸ್ತು.

ಶ್ರೀ ಪರಮೇಶ್ವರನು ಕೈಲಾಸದಲ್ಲಿ ಬ್ರಹ್ಮ ವಿಷ್ಣು ಮೊದಲಾದ ಸಮಸ್ತ ದೇವತೆಗಳಿಂದಲೂ, ವೀರ ನಂದಿ ಭೃಂಗಿ ವೃಷಭ ಸ್ಕಂದ ರೇಣುಕ ದಾರುಕ ಘಂಟಾಕರ್ಣ ಧೇನುಕರ್ಣ ವಿಶ್ವಕರ್ಣ ಮೊದಲಾದ ಪ್ರಮಥರಿಂದಲೂ, ಪರಿಶೋಭಿತವಾದ ಸಭೆಯಲ್ಲಿ ದಿವ್ಯಪೀಠವನ್ನಲಂಕರಿಸಿ, ಪರಮಾನಂದದಿಂದ ಸಮಸ್ತಲೋಕಗಳ ವಿಷಯವನ್ನು ವಿಚಾರಿಸುತ್ತಿರುವ ಸಮಯದಲ್ಲಿ, ಪ್ರಮಥಪುಂಗವನಾದ ರೇಣುಕಗಣಾಧೀಶ್ವರನನ್ನು ಕರೆದು —"ಎಲೈ ರೇಣುಕ ಗಣಾಧೀಶ್ವರನೇ! ನೀನು ಭೂಲೋಕದಲ್ಲಿ ವೇದಮಾರ್ಗದ ಸಾರವಾಗಿ ಶಿವಭಕ್ತಿಯನ್ನು ಪ್ರತಿಷ್ಠಿಸುವುದಕ್ಕೋಸ್ಕರ ಕುಲ್ಯಪಾಕಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀ ಸೋಮನಾಥಲಿಂಗದಿಂದ ತೇಜೋಮಯ ಶರೀರಧಾರಿಯಾಗಿ ಅವತರಿಸಿ, ಸಕಲಮಾನವರಿಗೂ ಶಿವಾದ್ವೈತಸಿದ್ಧಾಂತವನ್ನು ಉಪದೇಶಿಸಿ ಸಮಸ್ತಭೂಮಂಡಲವನ್ನು ಶಿವಭಕ್ತಿಮಯವನ್ನಾಗಿ ಮಾಡಿ, ಪುನಃ ನನ್ನ ಸನ್ನಿಧಿಗೆ ಬಾ" ಎಂದು ಅಪ್ಪಣೆಮಾಡಿದನು. ಪರಮೇಶ್ವರನ ಆಜ್ಞೆಯಂತೆ ಶ್ರೀ ರೇಣುಕಗಣಾಧೀಶ್ವರನು ಭೂಲೋಕದಲ್ಲಿ ಶಿವಾದ್ವೈತಸಿದ್ಧಾಂತವನ್ನು ಸ್ಥಾಪಿಸುವುದಕ್ಕೋಸ್ಕರ ಅವತರಿಸಿದನು.

(ಸಿದ್ಧಾಂತಶಿಖಾಮಣಿ ಪರಿಚ್ಛೇದ ೪)

ಅಥ ತ್ರಿಲಿಂಗವಿಷಯೇ ಕುಲ್ಯಪಾಕಾಭಿಧೇಸ್ಥಲೇ ।
ಸೋಮೇಶ್ವರಮಹಾಲಿಂಗಾತ್ ಪ್ರಾದುರಾಸೀತ್ಸರೇಣುಕಃ ॥೧॥
ಪ್ರಾದುರ್ಭೂತಂ ತಮಾಲೋಕ್ಯ ಶಿವಲಿಂಗಾತ್ತ್ರಿಲಿಂಗಜಾಃ ।
ವಿಸ್ಮಿತಾಃ ಪ್ರಾಣಿನಃ ಸರ್ವೇ ಬಭೂವುರತಿತೇಜಸಂ ॥೨॥
ಭಸ್ಮೋದ್ಧೂಲಿತ ಸರ್ವಾಂಗಂ ಸರುದ್ರಾಕ್ಷಭೂಷಣಂ ।
ಜಟಾಮುಕುಟಸಂಯುಕ್ತಂ ತ್ರಿಪುಂಡ್ರಾಂಕಿತಮಸ್ತಕಂ ॥೩॥
ಕಟೀತಟೇ ಪಟೀಭೂತ ಕಂಥಾ ಪಟಲಬಂಧುರಂ ।
ದಧಾನಂ ಯೋಗದಂಡಂಚ ಭಸ್ಮಾಧಾರಂ ಕಮಂಡಲುಂ ॥೪॥
ಶಿವಾದ್ವೈತ ಪರಿಜ್ಞಾನ ಪರಮಾನಂದ ಮೋದಿತಂ ।
ಸಿದ್ಧರ್ಷಿ ಸರ್ವಸಂಸಾರ ವಾಸನಾದೋಷಪಂಜರಂ ॥೫॥
ಶಿವನಾಮ ಸುಧಾಸಿಂಧುಸಮುನ್ಮೇಷ ಸುಧಾಕರಂ ।
ಚಿತ್ತಾರವಿಂದ ಸಂಗೂಢ ಶಿವಪಾದಾಂಬುಜದ್ವಯಂ ॥೬॥
ಯಮಾದಿಯೋಗ ತಂತ್ರಜ್ಞಂ ಸ್ವತಂತ್ರಂ ಸರ್ವಕರ್ಮಸು ।
ಸಮಸ್ತಸಿದ್ಧ ಸಂತಾನ ಸಮುದಾಯ ಶಿಖಾಮಣಿಂ ॥೭॥
ವೀರಸಿದ್ಧಾಂತ ನಿರ್ವಾಹ ಕೃತಪಟ್ಟನಿಬಂಧನಂ ।
ಅಶೇಷಕಪಾತ್ರ ನಿರ್ಭಿನ್ನ ಸಮಸ್ತ ಪ್ರಾಣಿಶಾಸಕಂ ॥೮॥
ತಮುಪೇತ್ಯ ಜನಾಃ ಸರ್ವೇ ನಮಂತಃ ಕೋಭವಾನಿತಿ ।
ಇತಿ ಪೃಷ್ಟೋ ಮಹಾಯೋಗೀ ಜನೈರ್ವಿಸ್ಮಿತಮಾನಸೈಃ ॥೯॥
ಪ್ರತ್ಯಾಹ ಶಿವಾದ್ವೈತ ಮಹಾನಂದ ಪರಾಯಣಃ ।
ಕೈಲಾಸಾತ್ ಪಾರ್ವತೇ ರೇಣುಕಾಖ್ಯೋ ಗಣೇಶ್ವರಃ ॥೧೦॥
ಶಿವಾದೇಶಾನ್ಮಹೇಶೇನ ಶಿವಲಿಂಗಾದಿಹಾಭವಂ ।
ನಿವಸ್ತ್ರ ಲೋಕ ಕ ಸಿದ್ಧೋಽಹಂ ಸಿದ್ಧಸಂತಾನ ನಾಯಕಃ ॥
ಸ್ಥಾಪನಾರ್ಥಂ ಲೋಕೇಽಸ್ಮಿನ್ ಶಿವಸಿದ್ಧಾಂತ ಪಾಲಕಃ
॥೧೧॥
ಇತ್ಯುಕ್ತ್ವಾ ಪಶ್ಯತಾಂ ತೇಷಾಂ ವಿಸ್ಮಯಸ್ಥಿರಚಕ್ಷುಷಾಂ ।
ಉತ್ಪತ್ಯ ವ್ಯೋಮಮಾರ್ಗೇಣ ಮಲಯಾದ್ರಿಂ ಮಹಾಮುನಿಃ
॥೧೨॥ ಸಿ, ಶಿ, ಪ. ೪

ಶ್ರೀರೇಣುಕ ಗಣಾಧೀಶ್ವರರು ಶಿವಾಜ್ಞಾನುಸಾರವಾಗಿ, ಶ್ರೀ ಸೋಮೇಶ್ವರಲಿಂಗದಿಂದ ದಿವ್ಯದೇಹಧಾರಿಗಳಾಗಿ ಅವತರಿಸಿ, ಆ ಸಮಯದಲ್ಲಿ ಸೋಮೇಶ್ವರ ದೇವಾಲಯದಲ್ಲಿದ್ದ ಭಕ್ತಮಂಡಳಿಯ ಪ್ರಾರ್ಥನಾನುಸಾರವಾಗಿ, ಅವರಿಗೆ ತಾವು ಅವತಾರವಾದ ಕಾರಣವನ್ನು ಹೇಳಿ ಸರ್ವರನ್ನೂ ಸಂತೋಷಗೊಳಿಸಿ, ಅಲ್ಲಿಂದ ಗಗನಮಾರ್ಗವಾಗಿ ಅಗಸ್ತ್ಯಮಹರ್ಷಿಗಳನ್ನು ಉದ್ಧರಿಸುವುದಕ್ಕೋಸ್ಕರ ಮಲಯಾಚಲವನ್ನು ಕುರಿತು ಪ್ರಯಾಣಮಾಡಿದರು. ಇದೇ ವಿಷಯವು ಮೇಲುದಾಹರಿಸಿರುವ ಸಿದ್ಧಾಂತಶಿಖಾಮಣಿಯ ಶ್ಲೋಕಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.

ಶ್ರೀ ರೇಣುಕಾಚಾರ್ಯರು ಕುಲ್ಯಪಾಕ ಕ್ಷೇತ್ರದಿಂದ ಮಲಯಪರ್ವತದಲ್ಲಿ ವಿರಾಜಿಸುತ್ತಿದ್ದ ಅಗಸ್ತ್ಯಾಶ್ರಮಕ್ಕೆ ದಯಮಾಡಿಸಿದ ಕೂಡಲೇ ಅಗಸ್ತ್ಯಮಹರ್ಷಿಗಳು ಅಸಾಧಾರಣ ಭಕ್ತಿವಿಶೇಷದಿಂದ ಆ ಪ್ರಮಥಗಣಾಧೀಶ್ವರರನ್ನು ಎದುರ್ಗೊಂಡು ದರ್ಭಾಸನದಲ್ಲಿ ಕುಳ್ಳಿರಿಸಿ, ಷೋಡಶೋಪಚಾರಗಳಿಂದ ಪೂಜಿಸಿ —

ಸ್ಥಿರಮದ್ಯ ಶಿವಜ್ಞಾನಂ ಸ್ಥಿರಾ ಮೇ ತಾಪಸಕ್ರಿಯಾ ।
ಭವದ್ದರ್ಶನ ಪುಣ್ಯೇನ ಸ್ಥಿರಾ ಮೇ ಮುನಿರಾಜತಾ ॥೪೬॥
ಸಂಸಾರಸರ್ಪದಷ್ಟಾನಾಂ ಮೂರ್ಛಿತಾನಾಂ ಶರೀರಿಣಾಂ ।
ಕಟಾಕ್ಷಸ್ತವಕಲ್ಯಾಣಂ ಸಮುಜ್ಜೀವನಭೇಷಜಂ ॥೪೭॥
ಸಮಸ್ತಲೋಕಸಂತಾಪ ತಾಪತ್ರಯ ಮಹಾನಲಃ ।
ತ್ವತ್ಪದಾಂಬುಕಣಾಸ್ವಾದಾದುಪಶಾಮ್ಯತಿ ದೇಹಿನಾಂ ॥೪೮॥
ರೇಣುಕಂ ತ್ವಾಂ ವಿಜಾನಾಮಿ ಗಣನಾಥಂ ಶಿವಪ್ರಿಯಂ ।
ಅವತೀರ್ಣ ಮಿಮಾಂ ಭೂಮಿಂ ಮದನುಗ್ರಹಕಾಂಕ್ಷಯಾ ॥೪೯॥
ಧನಾಢ್ಯಶಾಸ್ತ್ರಾಂ ಸಿದ್ಧಾನಾಂ ಪ್ರಭೋ ಧ್ವಸ್ತಜನ್ಮನಾಂ ।
ಪ್ರವೃತ್ತಿರೀದೃಶೀ ಲೋಕೇ ಪರಾನುಗ್ರಹಕಾರಿಣೀ ॥೫೦॥
ತ್ವನ್ಮುಖಾಚ್ಛ್ರೋತುಮಿಚ್ಛಾಮಿ ಸಿದ್ಧಾಂತಂ ಶ್ರುತಿಸಮ್ಮತಂ ।
ಸರ್ವಜ್ಞಪದಸೋಪಾನಂ ಶೈವಂ ಸರ್ವಾರ್ಥಸಾಧಕಂ ॥೫೧
ಸಿ, ಶಿ, ಪ. ೪॥

ಈ ರೀತಿಯಾಗಿ ಶ್ರೀ ರೇಣುಕಾಚಾರ್ಯರ ಮಹಿಮೆಯನ್ನು ನಾನಾ ವಿಧವಾಗಿ ಕೊಂಡಾಡಿ, ಶ್ರುತಿಸಮ್ಮತವಾದ ಶಿವಾದ್ವೈತ ಸಿದ್ಧಾಂತವನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಲು, ಆಗ್ಗೆ ಶ್ರೀ ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ಶಿವಾದ್ವೈತಸಿದ್ಧಾಂತವನ್ನು ವಿಶದವಾಗಿ ಉಪದೇಶಮಾಡಿದರು. ಶ್ರೀ ರೇಣುಕಾಚಾರ್ಯರ ಉಪದೇಶರೂಪವಾದ ಗ್ರಂಥವು 'ಸಿದ್ಧಾಂತಶಿಖಾಮಣಿ' ಅಥವಾ 'ರೇಣುಕಾಗಸ್ತ್ಯಸಂವಾದ' ಎಂಬ ಹೆಸರಿನಿಂದ ಲೋಕವಿಖ್ಯಾತವಾಗಿರುವುದು. ಶ್ರೀ ರೇಣುಕಾಚಾರ್ಯರು ಈ ಭೂಮಂಡಲದಲ್ಲಿ ೧೪೦೦ ವರ್ಷಗಳವರೆಗೆ ಇದ್ದು, ಭರತಖಂಡದಲ್ಲೆಲ್ಲ ಸಂಚರಿಸಿ ಚಾರ್ವಾಕಾದಿ ದುರ್ಮತಗಳನ್ನು ಖಂಡಿಸಿ ಸರ್ವರ ಹೃದಯದ ಭೂಮಿಯಲ್ಲಿ ಶಿವಭಕ್ತಿಬೀಜವನ್ನು ಬಿತ್ತಿ ಲೋಕದಲ್ಲಿ ಶಿವಭಕ್ತಿಯನ್ನು ಪ್ರತಿಷ್ಠಿಸಿದರು. ವೀರಶೈವಮತ ಪರಿಪಾಲನಕ್ಕಾಗಿ ರಂಭಾಪುರೀ ಕ್ಷೇತ್ರದಲ್ಲಿ ಧರ್ಮಪೀಠವನ್ನು ಸ್ಥಾಪಿಸಿ ಭರತಖಂಡದ ನಾನಾ ಭಾಗಗಳಲ್ಲಿ ಶಾಖಾಮಠಗಳನ್ನು ರಚಿಸಿದರು. ಈ ಮಹಾಚಾರ್ಯರ ಲೀಲಾತ್ಮಕ ಚರಿತ್ರವು ಅವರ ವಿಷಯಕವಾಗಿರುವ ಪುರಾಣಾದಿಗಳಲ್ಲಿ ವಿಶದವಾಗಿ ವರ್ಣಿಸಲ್ಪಟ್ಟಿರುವುದು. ವೀರಶೈವರೆಲ್ಲರೂ ಗುರುಸಾರ್ವಭೌಮರ ಲೀಲಾತ್ಮಕವಾಗಿರುವ ಚರಿತ್ರಗ್ರಂಥಗಳನ್ನು ಓದಿ ಅವರ ಲೀಲಾವೈಭವವನ್ನು ತಿಳಿದುಕೊಂಡು ಧನ್ಯರಾಗಬೇಕು.

ಉಭಯ ಕವಿತಾವಿಶಾರದನೆನಿಸಿ ಜಗತ್ಪ್ರಸಿದ್ಧನಾದ ಯಳಂದೂರು ಷಡಕ್ಷರಕವಿಶ್ರೇಷ್ಠನು ಸಹ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ ವಿಷಯವನ್ನು ತನ್ನ 'ರಾಜಶೇಖರವಿಲಾಸ' ವೆಂಬ ಗ್ರಂಥದಲ್ಲಿ —

ಶಿವಭಕ್ತೋ ಭಸ್ಮರೇಖಾ ಪ್ರಭುವೆನಿಸಿಯುಂ ರೇಣುಕೇ
ಶಾಖ್ಯೆಯಿಂತಾ |
ಲ್ದ ಮಹೀರಕ್ಷಾರ್ಥಮಾಶಂ ಬೆಸಸೆ ಧರಣಿಯೊಳ್ಕೊಲ್ಲಿ ಪಾಕೀಶ
ನೊಳ್ ಸಾ ॥
ಭವಿಸುತ್ತಂ ಜಂಗಮಾಕಾರದೆ ಸುಕವಿಪವಿತ್ರಕ್ಷೇತ್ರಮಂ
ಪಾವನಂಗೆ |
ಯ್ದು ವಿಶೇಷಾನ್ನತ್ಯದಿಂ ಕುಂಭಜ ಮುನಿಮುನಿಪ್ರಾಶ್ರಮಂ
ಬೋಧಿಸುತ್ತಂ ॥

ಎಂದು ವರ್ಣಿಸಿರುವನು. ಈ ಗುರುಸಾರ್ವಭೌಮರ ಲಿಂಗಾವತಾರ ಸ್ಮಾರಕಮಹೋತ್ಸವಗಳು ಆಯಾ ಕ್ಷೇತ್ರಗಳಲ್ಲಿ ರಾರಾಜಿಸುತ್ತಿರುವ ಧರ್ಮಪೀಠಗಳಲ್ಲಿ, ಅನಾದಿಕಾಲದಿಂದ ಇಂದಿನವರೆಗೂ ಬಿಟ್ಟುಬಿಡದೆ ನಡೆದು ಬಂದಿರುತ್ತವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಫಾಲ್ಗುಣ|| ಶು|| ೧೩ ದಿವಸ ಲಿಂಗದಿಂದ ಅವತರಿಸಿದುದರಿಂದ ಆ ಪರಮಪವಿತ್ರ ಪುಣ್ಯತಿಥಿಯ ದಿವಸ ರಂಭಾಪುರಿ (ಬಾಳೆಹಳ್ಳಿ) ಯಲ್ಲಿ ಪ್ರತಿವರುಷ ಮಹಾರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರುತ್ತದೆ. ಇದರಂತೆ ಶ್ರೀ ಜಗದ್ಗುರು ದಾರುಕಾಚಾರ್ಯರು, ವಿಶೋ

ರಾಮಾರಾಧ್ಯರು, ಪಂಡಿತಾರಾಧ್ಯರು, ವಿಶ್ವಾರಾಧ್ಯರು ಕ್ರಮವಾಗಿ ವೈಶಾಖ|| ಶು|| ೫ ವೈಶಾಖ|| ಶು|| ೩ (ಅಕ್ಷಯ ತೃತೀಯ) ಮಾಘ|| ಬ|| ೧೪ ಈ ಪ್ರಕಾರ ಈ ಪುಣ್ಯತಿಥಿಗಳಲ್ಲಿ ಲಿಂಗದಿಂದ ಅವತರಿಸಿರುವರು. ಇವರ ಜಯಂತಿಗಳು ಆಯಾ ಪೀಠಗಳಲ್ಲಿ ಒಳ್ಳೇ ವೈಭವದಿಂದ ಮಾಡಲ್ಪಡುತ್ತವೆ. ಮತಸ್ಥಾಪನಾಚಾರ್ಯರಾದ ರೇಣುಕಾದಿ ಗುರುಸಾರ್ವಭೌಮರ ಜಯಂತಿಗಳನ್ನು ಮಾಡದವನು ಎಂದೂ ವೀರಶೈವನೆನಿಸಲಾರನು ಆದುದರಿಂದ ಭರತಖಂಡದಲ್ಲಿರತಕ್ಕ ಸಮಸ್ತ ವೀರಶೈವರು ಆ ಪರಮಗುರುಸಾರ್ವಭೌಮರ ಜಯಂತಿ ಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿ, ಅವರ ಸಿದ್ಧಾಂತ ತತ್ವದಂತೆ ನಡೆದು 'ಮುಕ್ತಿಮೂಲಂ ಗುರೋಃಕೃಪಾ' ಎಂಬಂತೆ ಮುಕ್ತಿಗೆ ಮೂಲವಾದ ಆ ಗುರುಪುಂಗವರ ಕೃಪೆಯನ್ನು ಪಡೆದು ಮೋಕ್ಷಸಾಮ್ರಾಜ್ಯವನ್ನು ಹೊಂದಬೇಕೆಂದು ಇಚ್ಛಿಸುತ್ತೇವೆ

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ವಿವಾಹಮಹೋತ್ಸವ

ಶಿವಮೊಗ್ಗಾ ಡಿ|| ಆಯನೂರು ಗ್ರಾಮದ ಮ|| ತಿಪ್ಪಣ್ಣನವರ ವೀರಪ್ಪನವರ ಸ್ವಗೃಹದಲ್ಲಿ ಇದೇ ವಿಷುನಾಮ ಸಂ|| ಮಾಘ ಬಹುಳ ೧೧ (ತಾ|| ೯-೨-೧೯೪೨) ಸೋಮವಾರ ಹಾವೇರಿ ತಾ|| ಗುತ್ತಲದ ಮ|| ರಾ|| ಕಲಿವೀರಪ್ಪನವರ ಪುತ್ರಿ ಚಿ|| ಸೌ|| ಸೋಮಮುಖಿ ಎಂಬ ವಧುವಿಗೂ ಮ|| ರಾ|| ತಿಪ್ಪಣ್ಣನವರ ಬಸಪ್ಪನವರ ಪುತ್ರ ಚಿ|| ರಾ|| ಮಹಾದೇವಪ್ಪ ಎಂಬ ವರನಿಗೂ ಪಾಣಿಗ್ರಹಣ ಮಹೋತ್ಸವವು ಪಂಚಬ್ರಹ್ಮಕಲಶಸ್ಥಾಪನಾಪೂರ್ವಕ ತಮ್ಮಡಿಹಳ್ಳಿಮಠದ ವೇ|| ಶಿದ್ದಪ್ಪಯ್ಯನವರ ಪೌರೋಹಿತ್ಯದಲ್ಲಿ ವಿಧ್ಯುಕ್ತವಾಗಿ ವಿಶೇಷ ವೈಭವದಿಂದ ನೆರವೇರಿತು ತಾ|| ೧೧-೨-೧೯೪೨ ನೇ ಬುಧವಾರ ರಾತ್ರಿ ೯ ಘಂಟೆಯಿಂದ ಕೀರ್ತನಕೇಸರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರಿಂದ "ಸಾಧ್ವೀಶಿರೋರತ್ನ ಅನಸೂಯಾದೇವಿ" ಎಂಬ ಕಥೆಯು ನವರಸಭರಿತವಾಗಿ ಅನುವಾದ ಮಾಡಲ್ಪಟ್ಟಿತು ಈ 'ಸಮಾರಂಭದಾದ್ಯಂತದವರೆಗೂ ಇಲ್ಲಿನ ಸಮಾಜಬಂಧುಗಳು ಏಕೀಭವಿಸಿ ಸಹಕರಿಸಿದುದು ಸಂತೋಷಾಸ್ಪದವಾಗಿದೆ ಶ್ರೀ ಜಗದ್ಗುರು ಪಂಚಾಚಾರ್ಯರು ಇವರೆಲ್ಲರಿಗೂ **ಇತೋಪ್ಯತಿಶಯವಾದ** ಸೌಖ್ಯವನ್ನೀಯಲೆಂದು ಹಾರೈಸುತ್ತೇನೆ

ಓರ್ವ ಧರ್ಮಾಭಿಮಾನಿ

ದುಃಖವಾರ್ತೆ

ಧಾರವಾಡ ಡಿ|| ಕಲಘಟಗಿ ತಾಲ್ಲೂಕ ಬೆಲವಂತರ ಗ್ರಾಮದ ಶ್ರೀಮಾನ್ ಶಿವನಗೌಡರು ಪೋ|| ಪಾಟೀಲ ಇವರ ಕಕ್ಕಂದಿರಾದ ಬಸನಗೌಡರು ತಾ|| ೭-೨-೪೨ನೇ ಶನಿವಾರ ದಿವಸ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಸದ್ಗುಣಿಗಳೂ ಶಾಂತಸ್ವಭಾವಿಗಳೂ ಗುರುಭಕ್ತಿಯುತರೂ ಆಗಿದ್ದರು ಇವರು ತಮ್ಮ ಗುರುಗಳಾದ ಹಿರೇಮಠಾಧ್ಯಕ್ಷ ಶ್ರೀ ಸಿದ್ಧರಾಮೇಶ್ವರಸ್ವಾಮಿಗಳ ಆಜ್ಞೆಯಿಲ್ಲದೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ ಇವರಿಗೆ ಓರ್ವ ಮಗನೂ ಮೂವರು ಹೆಣ್ಣುಮಕ್ಕಳಿರುವರು ಮೃತರ ಆತ್ಮಕ್ಕೆ ಶಾಂತಿಯನ್ನೂ ಬಂಧುವರ್ಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನೂ ದಯಪಾಲಿಸಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ

ಇಂಡೋ-ಚೀಣಾಕ್ಕೆ ಶತ್ರು ಯೋಧರು

ಬರ್ಮಾ ದಂಡಯಾತ್ರೆಗೋಸ್ಕರ ಜಪಾನರು ೩0000 ಯೋಧರನ್ನು ಇಂಡೋಚೀಣದ ಹೈಫಾಂಗ್ ಎಂಬಲ್ಲಿಗೆ ಕರತಂದಿದ್ದಾರೆಂದು ಚೀಣಾಮಿಲಿಟರಿ ಅಧಿಕಾರಿಗಳೊಬ್ಬರು ತಿಳಿಸಿದರು ಈಗಾಗಲೇ ಎರಡು ಡಿವಿಜನ್ ಶತ್ರುಸೇನೆಗಳು ಬರ್ಮದಲ್ಲಿ ಇವೆಯೆಂದೂ, ಬರ್ಮಕ್ಕೆ ಕಳಿಸಪೋಸುಗ ಮಲಯಾದಿಂದ ಹಲವು ಸೇನೆಗಳನ್ನು ಜಪಾನರು ಹಿಂದಕ್ಕೆ ಬರಮಾಡಿಕೊಳ್ಳುತ್ತಿರಬಹುದೆಂದೂ ಅವರು **ಸೂಚಿಸಿದರು.**

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ; ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳ, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜ ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೦೬ ಪುಟಗಳಷ್ಟಾಗಿವೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಧೈರ್ಯಪೂರ್ವಕವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿಂಗಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ** ಗೆ ದೊರೆಯುವುದು ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧಕ್ಕೆ ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೭—೬
ಸದ್ಯ। [illegible] ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಾನ್ಫರೆನ್ಸಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—೨ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ


(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂತಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ

[38] ಪೋ ಬಾ ೫೧೦, ಮದರಾಸ.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸತ್ಯಾಸತ್ಯವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಸಿದ್ಧತತ್ತ್ವದರ್ಪಣ (೮ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಚರಿತ್ರೆ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಚರಿತ್ರೆ .	೨ ಆಣೆ
ಪಂಚಾಚಾರ ಪ್ರಕಾಶಿಕಾ ...	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ . .	೪ ಆಣೆ
ಸತ್ಯಾಸತ್ಯವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) .	೬ ಆಣೆ
ವೀರಶೈವಮಹಾತ್ಮರು .	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ...	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು(ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ) .. .	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ..	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ .	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) .	8 As
Speeches by Pandit Shri Kashinatha Shastriji *English*)	12 As
लिंगधारणचंद्रिका (संस्कृत) ... , ...	२ रु
वीरशैवरत्न (मराठी)	१ रु
महानारायणोपनिषत् (वीरशैवभाष्य–संस्कृत)	१ रु
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಮಾರ್ಚಿ ೧೯೪೨ [ಸಂಚಿಕೆ ೪೪

ರೂಸ್‌ವೆಲ್ಟರ ಭಾಷಣ

ಅಮೇರಿಕಾ ರಾಜ್ಯಾಧ್ಯಕ್ಷ ರೂಸ್‌ವೆಲ್ಟರವರು ರೇಡಿಯೋ ಮೂಲಕ ಭಾಷಣಮಾಡುತ್ತ "ನಮ್ಮ ವಸ್ತು ಪ್ರವಾಹವು ನಮ್ಮ ಬಲವನ್ನು ವಿಶೇಷವಾಗಿ ಹೆಚ್ಚಿಸುವವರೆಗೆ ನಾವು ಸಾಧ್ಯವಾದೆಡೆಗಳಲ್ಲೆಲ್ಲ ನಮ್ಮ ಶತ್ರುಗಳಿಗೆ ಏಟು ಹಾಕುತ್ತಿರಬೇಕು ಸದ್ಯಃ ನಾವು ಕೆಲವು ಪ್ರದೇಶಗಳನ್ನು ಬಿಟ್ಟುಕೊಡಬೇಕಾದರೂ ಚಿಂತೆಯಿಲ್ಲ, ಆದರೆ ಪ್ರತಿದಿನ ಅನೇಕ ಮಂದಿ ಶತ್ರುಗಳನ್ನು ಬಲಿ ತೆಗೆದುಕೊಳ್ಳುತ್ತಿದ್ದೇವೆ ಇಷ್ಟರಲ್ಲಿಯೇ ನಾವು ಮೇಲೆ ಬಿದ್ದು ಹೊಡೆದಾಡುವ ಶಕ್ತಿಯನ್ನು ಪಡೆಯುವೆವು ಕಟ್ಟಕಡೆಯ ಹೊಡೆದಾಟಗಳಲ್ಲಿ ಜಯಗಳಿಸುವೆವು ಈಗ ನಾವು ಎಲ್ಲ ಸಂಗ್ರಾಮ ನೌಕೆಗಳನ್ನೂ ವ್ಯಾಪಾರದ ಹಡಗುಗಳನ್ನೂ ಪೆಸಿಫಿಕ್ಕೆ ಕಳುಹಿಸಿಬಿಡುವುದಾದರೆ ಜಪಾನರನ್ನು ಸೋಲಿಸುವುದರಲ್ಲಿ ಬಹಳ ಮುಖ್ಯವೆನಿಸಿರುವ ಚೀಣಾಕ್ಕೆ ಸಹಾಯ ನೀಡಲು ಅಸಾಧ್ಯವೆನಿಸುವುದು ನಾವು ಸಂಗ್ರಾಮ ವಸ್ತುಗಳನ್ನು ರಷ್ಯನರಿಗೂ ಪರ್ಷಿಯನ್ ಜಲಸಂಧಿಗೂ ಕಳಿಸದೆ ಇದ್ದರೆ ಜರ್ಮನರು ಟರ್ಕಿ, ಸಿರಿಯಾ, ಈಜಿಪ್ಟ್, ಇರಾಕ್, ಪರ್ಷಿಯಾ ಮತ್ತು ಸೂಯೆಜ್ ಕಾಲುವೆಗಳನ್ನು ಹಿಡಿಯಲು ಅವಕಾಶಕೊಟ್ಟಂತಾಗುವದು.

ನಾವು ಉತ್ತರ ಅಟ್ಲಾಂಟಿಕ್ ಸರಬರಾಜು ಮಾರ್ಗವನ್ನು ರಕ್ಷಿಸದೆ ಹೋದರೆ ಜರ್ಮನರಮೇಲೆ ಅದ್ಭುತರೀತಿಯಲ್ಲಿ ಬಿದ್ದು ಹೊಡೆದಾಡುತ್ತಿರುವ ರಷ್ಯನರ ಕೈಕಾಲು ಕತ್ತರಿಸಿದಂತಾಗುತ್ತದೆ ಅಲ್ಲದೆ ಬ್ರಿಟನ್ನಿಗೆ ಅಗತ್ಯವಾಗಿ ಬೇಕಾದ ಆಹಾರವಸ್ತುಗಳನ್ನೂ ಸಂಗ್ರಾಮವಸ್ತುಗಳನ್ನೂ ಕಳಿಸದಂತಾಗುತ್ತದೆ ಈಗಾಗಲೇ ಅಮೇರಿಕದ ಅನೇಕ ಬಾಂಬರುಗಳೂ ಫೈಟರುಗಳೂ ನೈರುತ್ಯಪೆಸಿಫಿಕ್ ಕ್ಷೇತ್ರದಲ್ಲಿ ಶತ್ರುಗಳನ್ನು ಎದುರಿಸುತ್ತಿವೆ ಈ ಕ್ಷೇತ್ರದಲ್ಲಿಂದು ಅಮೇರಿಕದ ಸಾವಿರಾರು ಮಂದಿ ಯೋಧರಿದ್ದಾರೆ

ಪರ್ಲ್ ಬಂದರಿನ ಮೇಲೆ ನಡೆದ ಮುತ್ತಿಗೆಯು ಉಗ್ರವಾಗಿರುವುದು ಡಿಸೆಂಬರ್ ೭ ನೇ ತಾ|| ೨೩೪೦ ಮಂದಿ ಅಧಿಕಾರಿಗಳೂ ಸೈನಿಕರೂ ಸತ್ತರು ೯೪೨ ಮಂದಿ ಗಾಯಗೊಂಡರು ನಮ್ಮ ಸಂಕಲ್ಪವನ್ನು ಮುರಿಯಲು ಅಕ್ಸಿಸ್ ರಾಷ್ಟ್ರಗಳ ಪ್ರಚಾರಕರು ಕೆಟ್ಟದಾರಿಗಳನ್ನು ಹಿಡಿದಿದ್ದಾರೆ ಬ್ರಿಟಿಷರ ಆಟ ಮುಗಿಯಿತೆಂದೂ, ರಷ್ಯನರೂ ಮತ್ತು ಚೀಣರೂ ಬೇಗನೆ ಯುದ್ಧ ನಿಲ್ಲಿಸುವರೆಂದೂ ಹೇಳುತ್ತಿದ್ದಾರೆ ದೇಶಪ್ರೇಮದಿಂದ ಕೂಡಿದ ಮತ್ತು ವ್ಯವಹಾರಜ್ಞಾನವಿರುವ ಅಮೇರಿಕನ್ನರಾರೂ ಈ ಸುಳ್ಳುಪ್ರಚಾರವನ್ನು ಒಪ್ಪುವುದಿಲ್ಲ" ಎಂದು ಹೇಳಿದರು

ಜಾವಾ ಜನರಿಗೆ ಗವರ್ನರ್‌ರವರ ಸೂಚನೆ

ಜಾವಾ ಗವರ್ನರ್‌ರವರು ರೇಡಿಯೋ ಮೂಲಕ ನೆದರ್‌ಲೆಂಡ್ ಇಂಡೀಸ್ ಪ್ರಜೆಗಳನ್ನು ಕುರಿತು ಮಾತನಾಡುತ್ತ—"ಬೋರ್ನಿಯೋ, ಸಲಿಬೀಸ್ ಮತ್ತು ಮೊಲಕ್ಕಾಗಳು ಆಕ್ರಮಿಸಲ್ಪಟ್ಟಮೇಲೆ ಶತ್ರುಗಳು ದಕ್ಷಿಣ ಸುಮಾತ್ರ ಮತ್ತು ಬಾಲಿ ದ್ವೀಪಗಳನ್ನು ಸಹ ಹಿಡಿದಿದ್ದಾರೆ ಶತ್ರುಗಳ ಪ್ರಚಾರವನ್ನು ನೋಡಿದರೆ ಅವರು ಬೇಗನೆ ಜಾವಾದ್ವೀಪವನ್ನು ಮುತ್ತುವುದು ನಿಶ್ಚಯ ದೃಢಪ್ರತಿಜ್ಞೆಯಿಂದ ನಾವು ಬಂದೊದಗುವ ವಿಪತ್ತನ್ನು ಎದುರಿಸುತ್ತೇವೆ ಶತ್ರುಗಳ ಪ್ರತಿಯೊಂದು ಏಟನ್ನೂ ಹಿಂತಿರುಗಿಸಲು ನಾವು ನಿರ್ಧರಿಸಿದ್ದೇವೆ ಈಗಿನ ವಿಪತ್ತು ಸಾಮಾನ್ಯವಾದದಲ್ಲ ಅದನ್ನು ಎದುರಿಸಲು ನಾವು ಸರ್ವ ಬಲವನ್ನೂ ವಿನಿಯೋಗಿಸಬೇಕು ಜಾವಾ ದ್ವೀಪದ ತೀರವು ಬಹಳ ಉದ್ದವಾಗಿದೆ ಶತ್ರುಗಳು ಎಲ್ಲಿಬೇಕಾದರೂ ಏಟು ಹಾಕಬಹುದು ನಮ್ಮ ನೌಕಾ ಬಲಕ್ಕೆ ಇದು ಚೆನ್ನಾಗಿ ಗೊತ್ತಿದೆ ಬಹಳ ಬಲಯುತವಾದ ಭೂಸೇನೆಯೂ ವಿಮಾನ ಬಲವೂ ಇಲ್ಲದೆ ಜಾವಾ ಮೂಲವನ್ನು ಹಿಡಿಯುವುದು ಸುಲಭವಲ್ಲ ಪ್ರತಿದಿನ ಹೊಸ ಘಟನೆಗಳೂ ಆಪತ್ತೂ ತೋರಬಹುದು ಈಗ ಕಾಲವು ಬಹಳ ಮುಖ್ಯ ಏಕೆಂದರೆ ಶತ್ರುಗಳು ಉಗ್ರವಾದ ಕದನವನ್ನು ನಡೆಸಲು ಸಿದ್ಧರಾಗಿದ್ದಾರೆ ಮಿತ್ರ ರಾಷ್ಟ್ರಗಳು [illegible] ದಿನವೂ ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುತ್ತಿವೆ ಅಂತೂ ಇನ್ನು ಮುಂದೆ ಇರುವುದು ಉಗ್ರಕದನ ದೇವರ ದಯೆಯಿಂದ ನಿಮ್ಮ ಮತ್ತು ನಮ್ಮ ಬಲವು ವೃದ್ಧಿಯಾಗಲಿ" ಎಂದು ಹೇಳಿದರು

ಜಾವಾದಲ್ಲಿ ಸಿದ್ಧತೆಗಳು

ಜಾವಾ ಮುತ್ತಿಗೆಯನ್ನು ಪ್ರತಿಭಟಿಸಲು ನೆದರ್ಲೆಂಡ್ ಇಂಡೀಸ್‌ನಲ್ಲಿ ತಕ್ಕ ಸಿದ್ಧತೆ ನಡೆದಿದೆ ನೆದರ್ಲೆಂಡ್ ಮುಖ್ಯ ಸೈನ್ಯ ಕಚೇರಿಯಿರುವ ಬಾಂಡೋಯೆಂಗ್ ಬಳಿ ಅಸಾಧ್ಯ ಚಟುವಟಿಕೆ ಇದೆ ಮುಂದೆ ರಕ್ತ, ಬೆವರು ಮತ್ತು ಕಣ್ಣೀರು ಕಾದಿದೆಯೆಂದು ಸರ್ವರೂ ಅರಿತಿದ್ದಾರೆ ಆದರೆ ಅದರ ಫಲವನ್ನು ಎದುರಿಸುವುದರಲ್ಲಿ ಯಾರೂ ಹಿಂದು ಮುಂದು ನೋಡುವುದಿಲ್ಲ ಜಾವಾದಲ್ಲಿ ಈಗ ಜಪಾನರನ್ನು ಎದುರು ನೋಡುತ್ತಿರುವ ಸೇನೆಯು ಕಟ್ಟಕಡೆಯವರೆಗೆ ಶತ್ರುಗಳನ್ನು ಎದುರಿಸಿ ಹೋರಾಡುವುದೆಂದು ಕಾಣುತ್ತಿದೆ ಈಗಿನ ಪರಿಸ್ಥಿತಿಯಲ್ಲಿ ಹಿಂದಕ್ಕೆ ಸರಿಯಲು ಅವಕಾಶವೇ ಇಲ್ಲ ಮಲಯಾ ಕದನದ ಅನುಭವವು ಈಗ ಚೆನ್ನಾಗಿ ಗೊತ್ತಾಗಿರುವದರಿಂದ ಜಾವಾದಲ್ಲಿ ಮತ್ತೆ ಅದಕ್ಕೆ ಅವಕಾಶಕೊಡುವುದಿಲ್ಲ ಮುಂದುಗಡೆಯ ಕ್ಷೇತ್ರಗಳಲ್ಲಿ ಡಚ್ ಪಡೆಗಳನ್ನು ನಿಲ್ಲಿಸಲಾಗಿದೆ ಏನೇ ಆಗಲಿ ಹಿಮ್ಮೆಟ್ಟಲಾಗದೆಂದು ಅವುಗಳಿಗೆ ಆಜ್ಞೆಮಾಡಲಾಗಿದೆ ಜಾವಾ ದ್ವೀಪದ ಯಾವ ನಗರದಲ್ಲಿಯೂ ಸಿವಿಲ್ ಆಡಳಿತ ವ್ಯವಸ್ಥೆಯು ಮುರಿದು ಬೀಳದಂತೆ ಗವರ್ನರ್ ಜನರಲ್ಲರು ವ್ಯವಸ್ಥೆ ಮಾಡಿದ್ದಾರೆ. ಜಪಾನರು ಜಾವಾಕ್ಕೆ ಕಾಲಿಟ್ಟು ಮುಂದುವರಿದರೂ ಕೂಡ ಸಿವಿಲ್ ಪ್ರಭುತ್ವವು ಎಂದಿನಂತೆಯೇ ಇರುವುದು ಇದರ ಫಲವಾಗಿ ಹಲವು ಸಿವಿಲ್ ಅಧಿಕಾರಿಗಳು ಜಪಾನರ ಕೈಗೆ ಬೀಳುವುದು ಖಂಡಿತ. ಸ್ತ್ರೀಯರು ಮಕ್ಕಳಿಗೆ ಕೂಡ, ಅವರು ಬಿಳಿಯವರೇ ಆಗಲಿ, ಬಣ್ಣದವರೇ ಆಗಲಿ ವಿಶೇಷ ವರ್ತನವನ್ನೇನೂ ತೋರಿಸುವುದಿಲ್ಲವೆಂದು ಗವರ್ನರ್-ಜನರಲ್ಲರು ಎಚ್ಚರಿಕೆಯಿತ್ತಿದ್ದಾರೆ ಜಾವಾದಲ್ಲಿ ಜಪಾನರು ತೀರ ಹೊಸ ಬಗೆಯ ಮಿಲಿಟರಿ ಕಾರ್ಯಕ್ರಮವನ್ನು ಎದುರಿಸಬೇಕಾಗಿದೆ ಈ ದ್ವೀಪದಲ್ಲಿಯೇ ಅರಣ್ಯ ಕದನದಲ್ಲಿ ದೀರ್ಘ ಕಾಲ ಅನುಭವ ಹೊಂದಿರುವ, ಆಹಾರ ವಸ್ತುಗಳಿಗಾಗಿ ಕಾಯದೆ ಸಿಕ್ಕಿದ್ದನ್ನು ತಿಂದು ಜೀವಿಸಬಲ್ಲ ಸೈನ್ಯವನ್ನು ಎದುರಿಸಬೇಕೆಂದರೆ ಜಪಾನಿಗೆ ಕಷ್ಟವಾಗುತ್ತದೆ ಇದಲ್ಲದೆ ಜಾವಾದಲ್ಲಿರುವ ಭೂಸೇನೆಯೆಲ್ಲವೂ ಒಬ್ಬ ದಂಡನಾಯಕರ ಅಧೀನದಲ್ಲಿರುವುದು ಒಂದು ವಿಶೇಷ ಜಾವಾ ಕದನದ ಸಂಪೂರ್ಣ ಜವಾಬ್ದಾರಿಯನ್ನು ಡಚ್ ಸೇನೆಗೆ ವಹಿಸಲಾಗಿದೆ ಆರ್ ಎ ಎಫ್ ಬಲವನ್ನು ಕೂಡ ಡಚ್ ಅಧಿಕಾರಿಗಳ ವಶಪಡಿಸಲು ಜ|| ವೇವೆಲ್ಲರು ಸಿದ್ಧರಾಗಿದ್ದಾರೆ ಪರಿಸ್ಥಿತಿಯು ಉಗ್ರವಾಗಿದೆಯೆಂದೂ, ವಿಮಾನಗಳ ಮತ್ತು ಭಾರವಾದ ಸಂಗ್ರಾಮ ಸಾಧನೆಗಳ ಅಭಾವವು ಹೆಚ್ಚಿದೆಯೆಂದೂ, ಒಪ್ಪಿಕೊಳ್ಳಲಾಗಿದೆ ಆದರೆ ಅನಿಶ್ಚಿತ ಕಾಲದವರೆಗೆ ಜಾವಾವನ್ನು ರಕ್ಷಿಸಿಕೊಳ್ಳಲು ಸಾಧ್ಯವಾದೀತೆಂದು ನಂಬಲಾಗಿದೆ ಜಾವಾಕ್ಕೆ ಸೈನ್ಯ ಸಹಾಯವು ತೆರಳುತ್ತಿದೆಯೆಂಬುದಾಗಿ ಬ್ರಿಟನ್ ಮತ್ತು ಕೆನಡಾಗಳಿಂದ ಸುದ್ದಿ ಬಂದಿದೆ ಈ ಸಂಗ್ರಾಮದಲ್ಲಿ ಜನಬಲವು ಮುಖ್ಯವಲ್ಲವೆ ಹೋದರೂ, ಚೆನ್ನಾಗಿ ತರಪೇತು ಹೊಂದಿದ ಮತ್ತು ಸರಿಯಾದ ಸಂಗ್ರಾಮ ಸಲಕರಣೆಗಳುಳ್ಳ ಸೈನಿಕರ ಆಗಮನವು ಸ್ಫೂರ್ತಿದಾಯಕವಾಗಿದೆ

ಬ್ರಿಟಿಷರು ಭಾರತೀಯರನ್ನು ನಂಬಬೇಕು

ರಷ್ಯದ ಸ್ನೇಹಿತರು ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಸಂಯುಕ್ತ ಪ್ರಾಂತ್ಯದ ಅಸೆಂಬ್ಲಿ ಸಭೆಯ ಅಧ್ಯಕ್ಷರಾದ ಶ್ರೀ ಪುರುಷೋತ್ತಮದಾಸ್ ಟಾಂಡನ್‌ರವರು ಭಾಷಣಮಾಡುತ್ತ — ಇಂದಿನ ವಿಷಮಪರಿಸ್ಥಿತಿಯಲ್ಲಿಯೂ ಕೂಡ ಬ್ರಿಟಿಷ್ ಸರ್ಕಾರದವರು ಭಾರತೀಯರಿಗೆ ನಿಜವಾದ ಅಧಿಕಾರವನ್ನು ದಯಪಾಲಿಸುವುದಕ್ಕೆ ಹಿಂಜರಿಯುತ್ತಿರುವರೇಕೆ, ಆ ರೀತಿ ಅಧಿಕಾರವನ್ನು ಕೊಡುವುದಾದರೆ ಭಾರತೀಯರು ಎಲ್ಲಿ ಬಲಯುತರಾಗಿ ತಮ್ಮ ಹಸ್ತಮೀರಿ ಹೋಗುವರೋ ಎಂಬ ಭೀತಿ ಇರುವುದೇ ಇದಕ್ಕೆ ಕಾರಣವೆಂದೂ, ಇದು ತಪ್ಪುನೀತಿಯೆಂದೂ, ಭಾರತೀಯರಲ್ಲಿ ಬ್ರಿಟಿಷರು ನಂಬಿಕೆ ಇಡಬೇಕೆಂದೂ ಸೂಚಿಸಿದರು

ಮದರಾಸಿನ ಮೃಗಾಲಯದಲ್ಲಿರುವ ಮೃಗಗಳು

ಮದರಾಸಿನ ಮೃಗಾಲಯದಲ್ಲಿರುವ ಕ್ರೂರಮೃಗಗಳನ್ನೆಲ್ಲಾ ಮೈಸೂರಿಗೆ ಸಾಗಿಸಿ ಸಂಗ್ರಾಮಪರಿಸ್ಥಿತಿಯು ಉತ್ತಮಗೊಳ್ಳುವವರೆಗೂ ಅಲ್ಲಿಟ್ಟಿರಲಾಗುವುದೆಂದು ಗೊತ್ತಾಗಿದೆ ಮದರಾಸ್ ಪೌರಸಭೆಯವರು ಈ ವಿಚಾರವಾಗಿ ಮೈಸೂರು ಸರ್ಕಾರಕ್ಕೆ ಬರೆದಿದ್ದಾರೆಂದು ತಿಳಿದು ಬರುತ್ತದೆ.

॥ ಶ್ರೀಗುರುಭ್ಯೋನಮಃ ॥

ಶಿವಸರ್ವೋತ್ತಮತ್ವ

ಲೇಖಕರು—ಶ್ರೀ ಪಟ್ಟದಸ್ವಾಮಿಗಳು, ಹಿರೇಮಠ, ಕೊಣ್ಣೂರ

ಸರ್ವಜನಕ್ಕೆ, ಮಳೆಯು ಸರ್ವಜೀವನಕ್ಕೆ ಬೆಳೆಯು, ಸರ್ವರಿಗೆ ಬಡವನು, ಸರ್ವಬಣ್ಣಕ್ಕೆ ಬಿಳೇಬಣ್ಣವು ಸಮಸ್ತ ಉತ್ಸವಗಳಲ್ಲಿ ಪುತ್ರೋತ್ಸವವು ಸರ್ವಗ್ರಹಗಳಲ್ಲಿ ಚಂದ್ರ ಸೂರ್ಯರು ಹೇಗ ಮುಖ್ಯವೋ ಹಾಗೆ ಸರ್ವದೇವತೆಗಳಿಗೆ ಶಿವನೇ ಮುಖ್ಯನು ನಾಲ್ಕುವೇದಗಳೂ, ಇಪ್ಪತ್ತೆಂಟು ಶಿವಾಗಮಗಳೂ ಮೂವತ್ತೆರಡು ಉಪನಿಷತ್ತುಗಳೂ, ಶಾಸ್ತ್ರಪುರಾಣಗಳೂ, ನಿಘಂಟು ವಾಕ್ಯವೂ, ಕವಿಗಳೂ, ತ್ರಿಕಾಲಜ್ಞಾನಿಗಳಾದ ಮಹರ್ಷಿಗಳೂ, ಬ್ರಹ್ಮ ವಿಷ್ಣು ಮೊದಲಾದ ದೇವತಾ ಸಮೂಹವೂ, ಚತುರ್ದಶ ಭುವನಗಳೂ, ದಶದಿಕ್ಕುಗಳೂ, ಭೂತಭವಿಷ್ಯದ್ವರ್ತಮಾನಕಾಲಗಳೂ, ಶಿವನೇ ಅನಾದಿ ಮೂರ್ತಿಯೆಂದೂ, ಅವನೇ ಪರಬ್ರಹ್ಮನೆಂದೂ ಶಕ್ತಿವಿಶಿಷ್ಟನೆಂದೂ, ಶಕ್ತಿವಿಶಿಷ್ಟನಾದ ಆ ಪರಶಿವಮೂರ್ತಿಯಿಂದಲೇ ಚರಾಚರಾತ್ಮಕವಾದೀಜಗತ್ತು ನಿರ್ಮಿತವಾಗಿರುವದೆಂದು, ಮುಕ್ತಕಂಠದಿಂದ ಸಾರುತ್ತಲಿರುವವು ಇದೇ ವಿಷಯವನ್ನು ಕುರಿತು ಬ್ರಹ್ಮ ವಿಷ್ಣುವಿಗೆ ಆದ ವಾದವನ್ನೂ ಕೆಲವು ಆಧಾರಗಳನ್ನೂ ಓದುಗರ ಅವಗಾಹನೆಗಾಗಿ ಕೆಳಗೆ ಕೊಡುತ್ತೇವೆ

ಒಂದುದಿನ ವಿಷ್ಣ್ವಾದಿದೇವತೆಗಳು ದಿಕ್ಪಾಲಕರು ಮುನಿಗಳ ಸಮೂಹವು, ಚಂದ್ರ ಮೊದಲಾದ ನಕ್ಷತ್ರಸಮೂಹವು, ಪ್ರತ್ಯಕ್ಷವಾಗಿ ಕೂಡಿ ಇರುತ್ತಿರಲಾಗಿ ಬ್ರಹ್ಮನ ಹೆಮ್ಮೆಯನ್ನು ನೋಡಿ, ಎಲ್ಲರೂ ಕೂಡಿ, ಯೋಚನೆಯನ್ನು ಮಾಡಿ ಉಲ್ಲಾಸದಿಂದ ಬ್ರಹ್ಮನಹತ್ತಿರ ಒಂದು ಮಾತುಗಳು ಬ್ರಹ್ಮನೊಳ ನಿತ್ಯವಾಗಿಹ ನಿಜವಸ್ತುವು ದಾರ? ಸತ್ತುಹುಟ್ಟದ ನಿರ್ಧ್ಯಸ್ತಕ್ಷನದಾರ? ಅಣುರೇಣುತೃಣಕಾಷ್ಠದೊಳಗೆ ಪರಿಪೂರ್ಣವ್ಯಾಪಕಪರಮಾತ್ಮನಾರು? ಭೂಮಿಜಲ ಅಗ್ನಿ ವಾಯು ಆಕಾಶವೆಲ್ಲ ಪರಿಪೂರ್ಣವ ಗಿರ್ವಪರವಸ್ತುವು ಆರು? ಅನೇಕ ಬ್ರಹ್ಮಾಂಡಪಿಂಡಾಂಡದಲ್ಲಿ ಧರಿಸಿದ ಪರಿಪೂರ್ಣ ಪರಬ್ರಹ್ಮನಾರು? ಈ ಪ್ರಕಾರ ಪ್ರಶ್ನೆ ಕೇಳಲು ಅದಕ್ಕೆ ಬ್ರಹ್ಮನ ಉತ್ತರವು—ನಾನು ಶ್ರೇಷ್ಠ ತಿ 'ಅಗ್ನಿಬ್ರಹ್ಮಶಿರೋಲಿಪ್ತ ಲಲಾಟೆ ವಿಷ್ಣುಹೃದಯೆ' ಅಂದರೆ ಗಾಯತ್ರೀಸ್ವರೂಪ ಆ ಪರಬ್ರಹ್ಮವು ತನ್ನ ಶರೀರದಲ್ಲಿ ಉದಿಸಿತು ರುದ್ರಾವತಾರವು ನನ್ನ ಲಲಾಟದಲ್ಲಿ ಹುಟ್ಟಿತು ಯಜ್ಞೇಶ್ವರನು ನನ್ನ ಮುಖದಲ್ಲಿ ಹುಟ್ಟಿದನು. ವಿಷ್ಣುವು ನನ್ನ ಹೃದಯದಲ್ಲಿ ಹುಟ್ಟಿದನು ಸಮಸ್ತ ಜ್ಞಾನಿಗಳು ನನ್ನ ಮಾನಸಪುತ್ರರಿಂದ ಹುಟ್ಟಿದವು [illegible] ಸುರನರೋರಗ, ಕಿನ್ನರ, ಖೇಚರ, ಗರುಡ ಗಂಧರ್ವ, ಯಕ್ಷ, ರಾಕ್ಷಸ, ಪಿಶಾಚ, ಗುಹ್ಯಕ ಮೊದಲಾದ ಮೃಗ ಕ್ರಿಮಿಕೀಟಕ ಸಚರಾಚರಾದಿ ಸ್ಥಾವರ ಜಂಗಮಾದಿಗಳು ನನ್ನಿಂದ ಹುಟ್ಟಿದ ಸಮಸ್ತವುಗಳು [illegible] ಸೃಷ್ಟಿ ಸ್ಥಿತಿ ಸಂಹಾರಗಳ ಗ್ರಹಕರ್ತನು ನಾನೇ ಎಂದ

ಬ್ರಹ್ಮನಿರ್ದೇಶಕ್ಕೆ ವಿಷ್ಣುವು ಎಂದ ಎಲೋ ಬ್ರಹ್ಮನೇ ನಿನಗೆ ಕೆಟ್ಟಬುದ್ಧಿ ಹುಟ್ಟಿತು ತಲೆ ಪಿತ್ಥ ಏರಿರುವುದು ಭ್ರಮೆಯೊಳಗೆ ಬಿದ್ದಿರುವೆ ಮನಸಂಚಾರದ ಅಗೋಚರನಾದ ಮಹಿಮನಾತಿಲಿಯಾದ ಶಿವನನ್ನು ಮರೆತೆಯಾ? ಎಂದನು ಈ ಪ್ರಕಾರ ವಿಷ್ಣು ಅಂದುದಕ್ಕೆ ಬ್ರಹ್ಮನ ಉತ್ತರ—ಗರ್ವದಿಂದ ಎಲೋ ವಿಷ್ಣುವೇ ಜಗತ್ತಿನಲ್ಲಿ ನನಗೆ ಸಮಾನರು ಯಾರೂ ಇಲ್ಲ ನಾನೇ ನಿತ್ಯ ಮುಕ್ತನು ಶಿವನು ನನಗೆ ದೊಡ್ಡವನಲ್ಲ ಪೂರ್ವ ಮಾತುಗಳನ್ನು ಅರಿಬಂದೆಯಾ? ಬ್ಯಾಡವು ಸುಮ್ಮನಿರು ನೀನು ನನ್ನಲ್ಲಿ, ಅವನು ನನ್ನಲ್ಲಿ, ಸಕಲ ಚರಾಚರ ಪ್ರಾಣಿಗಳು ನನ್ನಲ್ಲಿ ಹುಟ್ಟಿವೆಯೆಂದು ಮೊದಲಿಗೆ ಹೇಳಲಿಲ್ಲವೇ? ಎಂದ ಮಾತಿಗೆ ವಿಷ್ಣುವು ಎಲೋ ಬ್ರಹ್ಮನೇ ನೀನು ಪೂರ್ವದಲ್ಲಿ ಹುಟ್ಟಿದ್ದನ್ನು ಹೇಳುತ್ತೇನೆ ಕೇಳು "ಆದಿಸುಲಿ ಪರಬ್ರಹ್ಮದಂಶಿಕವಾದ ಸದಾಶಿವನ ಅಂಶಿಕ। ನಾದನೀಶ್ವರ ಅವರ ಅಂಶಿಕನಾದನಾರುದ್ರ॥ ಆದನಾನವರಂಶಿಕದನಲ। ನೋದರದಸರಸಿಜ ಮಧ್ಯದಿ। ಆದೆನಿನಗ್ಯಾತಕ್ಕೆ ಪೌರುಷ"॥ ವೇದ ಕೇಳು?॥

ಸದ್ಯೋಜಾತೋದ್ಭವೋ ಬ್ರಹ್ಮ ವಾಮದೇವೋದ್ಭವೋ ಹರಿಃ।
ಅಘೋರಾದ್ರುದ್ರ ಉತ್ಪನ್ನಃ ತತ್ಪುರುಷೋದ್ಭವೇಶ್ವರಃ॥
ಈಶಾನ್ಯೋತ್ಸದಾಶಿವಶ್ಚ ಪಂಚಬ್ರಹ್ಮಪರಶಿವ ॥೧॥

ಆದಿಶಕ್ತಿಮಯಂಬೀಜಂ ಬೀಜಶಕ್ತಿಮಯಃ ಶಿವಃ।
ಶಿವಶಕ್ತಿಮಯೋ ವಿಷ್ಣುಸ್ಸರ್ವಂ ವಿಷ್ಣುಮಯಂ ಜಗತ್ ॥೨॥
ಯಜ್ಞಕರ್ತಾ ಚ ದೇವೇಂದ್ರೋ ವೇದಕರ್ತಾ ಚತುರ್ಮುಖಃ।
ತ್ವಮೇವ ಜಗತ್ಕರ್ತಾರಂ ಮಮಕರ್ತಾ ಮಹೇಶ್ವರಃ ॥೩॥

ಅಂದರೆ ಸದ್ಯೋಜಾತಮುಖದಿಂದ ಬ್ರಹ್ಮನು, ವಾಮದೇವಮುಖದಿಂದ ವಿಷ್ಣುವು, ಅಘೋರಮುಖದಿಂದ ರುದ್ರನು ತತ್ಪುರುಷಮುಖದಿಂದ ಈಶ್ವರನು, ಈಶಾನ್ಯಮುಖದಿಂದ ಸದಾಶಿವನು, ಈ ಪ್ರಕಾರ ಪರಶಿವನು ಪಂಚಬ್ರಹ್ಮರ ಮುಖದಿಂದ ಉದಸಿದರು ॥೧॥ ಆದಿಶಕ್ತಿಮಯವೇ ಬೀಜವು ಬೀಜಶಕ್ತಿಮಯವೇ ಶಿವನು, ಶಿವಶಕ್ತಿಮಯವೇ ವಿಷ್ಣುವು, ಸರ್ವಜಗತ್ತು ವಿಷ್ಣುಮಯವಾಗಿರುವುದು ॥೨॥ ಯಜ್ಞಾದಿಗಳಿಗೆ ಕರ್ತ ದೇವೇಂದ್ರನು, ವೇದಗಳಿಗೆ ಕರ್ತ ನೀನು, ಜಗತ್ತಿಗೆ ಕರ್ತ ನಾನು, ನನಗೆ ಕರ್ತನು ಮಹೇಶ್ವರನ ॥೩॥ ಇದಲ್ಲದೆ ವರ್ಣಾನಾಂ ಬ್ರಾಹ್ಮಣೋ ಗುರುಃ ಎಂಬ ವಾಕ್ಯವು

ಬ್ರಾಹ್ಮಣೋ ಭಗವಾನ್ ರುದ್ರಃ ಕ್ಷತ್ರಿಯೋಽಹಂ ಪಿತಾಮಹ।
ವೈಶ್ಯಃ ಕಮಲಗರ್ಭಸ್ತ್ವಂ ಶೂದ್ರಸ್ಸ್ಯಾತ್ಪಾಕಶಾಸನಂ ॥೪॥

ಈ ಪರಿ ವರ್ಣಗಳಲ್ಲಿ ಬ್ರಾಹ್ಮಣನೇ ಗುರುವು, ಇಂಥ ಬ್ರಾಹ್ಮಣನು ಭಗವಾನ್ ರುದ್ರನೇ ಆಗಿರುವುದರಿಂದ ಸಮಸ್ತ ದೈವಕ್ಕೂ, ಕುಲಕ್ಕೂ ಮನೆಗೂ, ಆ ಶಿವನೇ ಗುರುವಾಗಿರುತ್ತಾನೆ ನಾನೇ ಕ್ಷತ್ರಿಯನು, ನೀನು ವೈಶ್ಯನು ಶೂದ್ರಾಧಿಪತಿಯೇ ದೇವೇಂದ್ರನು ಮತ್ತ

ಮಹಾದೇವಸ್ಯ [illegible] ದೇವೋ ವಿಷ್ಣು [illegible]।
ಅಶೇಷ [illegible] ॥೫॥
ಭವತೋ ಬ್ರಾಹ್ಮಣ [illegible] ಜಗನ್ಮಯಃ।
ಭೂತಪ್ರಾಣ [illegible] ॥೬॥

'ಏಕಏವರುದ್ರೋ ನ ದ್ವಿತೀಯಾಯತಸ್ಥೇ' ಎಂಬ ಶಾಸ್ತ್ರೋಕ್ತಿಯಂತೆ ಶಿವನೇ ಸಕಲಕ್ಕೂ ಒಡೆಯನೆಂದು ಸಿದ್ಧವಾಗಿರುವದು 'ಅಣೋರಣೀಯಾನ್ ಮಹತೋ ಮಹೀಯಾನ್' ಎಂಬ ಉಕ್ತಿಯಂತೆ ಸಣ್ಣದರೊಳಗೆ ಎಲ್ಲಕ್ಕೂ ಸಣ್ಣವನು ದೊಡ್ಡದರೊಳಗೆ ಎಲ್ಲಕ್ಕೂ ದೊಡ್ಡವನ ಅಂಥ ಪರಬ್ರಹ್ಮನನ್ನು ತಿಳಿಯದೆ ಮದೋನ್ಮತ್ತನಾಗಿ ಮನಸ್ಸಿಗೆ ಬಂದಂತೆ ಮಾತಾಡುತ್ತೀ ನಿನ್ನ ಮನೈರವಕ್ಕೆ ಯಾರೇನು ಮಾಡುವುದ? ವೇದವನ್ನ ಕೇಳಿಕೊ ಎಂದು ಹೇಳಿ ವಿಷ್ಣುವು ಕಡೆಗಾದನು

ಆಗ ನಾಲ್ಕು ವೇದಗಳು ಬ್ರಹ್ಮನ ಎದುರಿಗೆ ಬಂದು ನಿಂತುಕೊಂಡವು ಋಗ್ವೇದವು—ಎಲೋ ವನಜಭವನೇ ಕೇಳು ಈ ಸಕಲ ಬ್ರಹ್ಮಾಂಡಗಳ ಧರಿಸಿಕೊಂಡಿರುವಂಥ ಪರಮಾತ್ಮದೈವಂ, ಇರುವೆಕಡೆ ಆನೆಮೊದಲಾದ ಎಂಬತ್ತನಾಲ್ಕುಲಕ್ಷ ಜೀವರ ಸ್ತೋತ್ರಮಂ ಪಡೆದು ಚರಿಸುತಿಹ ದೈವಂ, ಪರಮಋಷಿಗಳ ಹೃದಯದಲ್ಲಿರುವ ನವಚಕ್ರಗಳ ಸರಸಿಜದಿ ಚರಿಸುತಿಹ ಪರಮಹಂಸದೈವಂ, ಇರುವ ಸಚರಾಚರ ಸ್ಥಾವರಾದಿಗಳೊಳಗೆ ಚರಿಸಿಬಲಿದೆ ಯಿಪ್ಪ ಪರಮಾತ್ಮ ದೈವಂ

ಏಷ ಸ್ಯಾಂತಸ್ಥಾ [illegible] ತತ್ವಮಹಂ ಪ್ರವರ್ತಯ।
ಪರಾತ್ಪರಂ [illegible] ತತ್ವಂ [illegible] ಮಹೇಶ್ವರಃ ॥೭॥

ಓಂ ನಮೋ ರುದ್ರಾಯ ನ್ಯವೆಯೆಂದು ಋಗ್ವೇದವು ಆ ಮಹಾರುದ್ರಂಗೆ ನಮಸ್ಕಾರ ಸಮರ್ಪಿಸಿ ಎಲೆ ಬ್ರಹ್ಮ ಮಂಥನಿಯ ಮಾತನಾಡಬೇಡ ಇನ್ನು ಎಜುರ್ವೇದವ ಕೇಳಿಕೊ ಎಂದು ಋಗ್ವೇದವು ಕಡೆಗಾಗಲು, ಯಜುರ್ವೇದವು—ಎಲೋ ಬ್ರಹ್ಮನೇ ಕೇಳು ನಿನಗೆ ಕಾಳು ಮತಿ ಬಂದಿತೇ? ಜೀವಹೋಯಿತೇ? ಸಕಲವ್ಯಾಪಕನೆಂದು ತಿಳಿದಿಲ್ಲವೆ? ನಿನ್ನ ಮಂದಬುದ್ಧಿಯನ್ನು ಬಿಡು ಹುಚ್ಚನಂತೆ ಮಾತಾಡಬೇಡ ಎಲ್ಲರ ಒಡೆಯ ಶಿವನೆಂದು ತಿಳಿದುಕೋ ಉರಿದು ಕಮಲಗಳ ಮೀರಿ ಮೇಲೆ ಅರಸಲಿ ಕಾಣದೆ ತೋರಿ ನವಚಕ್ರಗಳ ಮೀರಿ ಶಿವನು ಬೀರುತಿಹ ಬ್ರಹ್ಮಕಳೆಯೊಳು, ಆ ಪ್ರಕಾರ ಶೋಭಿಸುವ ಪರಬ್ರಹ್ಮವನ್ನು ಸಂತೋಷದಿಂದ ಮನದೊಳಗೆ ತಿಳಿದುಕೋ ಕಂತ ಕರೆದನ್ನು ಮರೆತೆಯೊ? ನಿನಗೆ ಪ್ರಳಯ ಕಾಲವು ಒದಗಿತು ತಾಳು ಬಾಳಲೋಚನ ಶಿವನಿಗೆ ಕೇಳು ನೀವು ಬಹಳ ದೈವಗಳು ಶಿವನಾಳು

ಓಂ ನಮೋ ರುದ್ರಮನ್ಯವೇ ಎಂದು ಆ ಮಹಾರುದ್ರನಿಗೆ ನಮಸ್ಕಾರಮಂ ಸಮರ್ಪಿಸಿ ಇನ್ನು ಸಾಮವೇದವಂ ಕೇಳಿಕೊಯೆಂದು ಎಜುರ್ವೇದವು ಕಡೆಗಾಗಲು ಸಾಮವೇದ—ಜಲಜಸಂಭವನೇ ಕೇಳು ಮಾಯೆಗೆ ಶಿಲುಕದೆ ಎಲ್ಲಜೀವರ ಕುಲಾಲ ಚಕ್ರದ ಬಗೆಯು ತಿರುಹುವ ಸುಲಭ ನವದೈವಂ, ಸಂಚಿತಾ ಪ್ರಾರಬ್ಧವೆನಿಸುವ ವಂಚನೆಗಳ ಅರಿದ ಪಂಚ ತತ್ವದ ಮೀರಿ ನಡೆದ ನಿಶ್ಚಿಂತನವ ದೈವಂ, ನೋಡುವರ ಕಣ್ಣಿಗೆ ಕಾಣಿಸುವ ಪ್ರಾಣದಲಿ ಕಾಣದಂತೆ ಇರುವನು ಭಜಿಸುವ ಮಹಾತ್ಮರ ಕೇಳಿಕೊಂಡಿರುವ ಎಲ್ಲಿ ನೆನಸಿದರಲ್ಲಿ ತೋರುವನು ಎಲ್ಲ ದೇವರೊಡೆಯನು ಬಲ್ಲ ಮಹಿಮರ ಹೃದಯದೊಳು ಎಲ್ಲಕಾಲದಲ್ಲಿರುವನು ಮಹಾತ್ಮನಾದ ಶಿವನು ಮನಕೆ ಅಗೋಚರನು ಆ ದೊಡ್ಡ ತಂದೆಯನ್ನು ಮರೆತೆಯಾ? ನಿನಗೆ ಏನು ಕಾಲವದೆಯೋ ತಿಳಿಯದ

ಓಂ ನಮೋ ರುದ್ರಮನ್ಯವೆಯೆಂದು ಆ ಮಹಾರುದ್ರನಿಗೆ ನಮಸ್ಕಾರವಂ ಸಮರ್ಪಿಸಿ, ಇನ್ನು ಅಥರ್ವಣ ವೇದವನ್ನ ಕೇಳಿಕೋ ಎಂದ. ಸಾಮವೇದವು ಕಡೆಗಾಗಲು ಅಥರ್ವಣವೇದವು—ಎಲೋ ಬ್ರಹ್ಮನೇ ಕೇಳು ಆ ಪರಬ್ರಹ್ಮವೇ ಗುರು ಆತನು ಅರಿಷಡ್ವರ್ಗಗಳಿಗೆ ಶಿಲ್ಕಲಾರನು ಪರಮ ಋಷಿಗಳ ಅಂತರ್ಯಾಮಿ ನೀನು ಹೇರನ ಗುರ್ತು ಮರತೆಯಲ್ಲ, ಪ್ರಕೃತಿ ವಿಕೃತಿ ಷಡ್ಭ್ರಮೆಯೆಂಬ ಇಂತಹ ಸಕಲವನ್ನು ಮೀರಿದವನು ಅಖಿಲ ಮುನಿಗಳಿಗೆ ಆತ್ಮಜ್ಯೋತಿಯು, ನಿನ್ನ ಪ್ರಕೃತಿ ಗುಣವ ಬಿಟ್ಟುಬಿಡುತು, ಪರಮಸಚ್ಚಿದಾನಂದ, ಸರ್ವಹೃದಯ ಸೂತ್ರಧಾರಕನು, ಮದವ ಕಳೆದು ಮಾತನಾಡು

ಓಂ ನಮೋ ರುದ್ರಮನ್ಯವೇ ಎಂದು ಆ ಮಹಾರುದ್ರಂಗೆ ನಮಸ್ಕಾರವಂ ಸಮರ್ಪಿಸಿ ಎಲೋ ಬ್ರಹ್ಮನೇ ಕೇಳು ನಾವು, ನೀವೂ ಎಲ್ಲರೂ ಆ ಮಹಾರುದ್ರನೆಂಬ ಸೂತ್ರಧಾರಕನ ಕೈಯೊಳಗಿನ ಬೊಂಬೆಗಳು ಎಂದು ಅಥರ್ವಣವೇದವು ಕಡೆಗಾಯಿತು ಈ ಪ್ರಕಾರ ವಿಷ್ಣುವೂ ನಾಲ್ಕು ವೇದಗಳೂ ಪರಮಾತ್ಮನೇ ಶ್ರೇಷ್ಠನೆಂದು ಬ್ರಹ್ಮನಿಗೆ ಬೋಧಿಸಿದವು ಇರಲಿ

ಪರಗರ್ಭೋಪನಿಷದ್ವಚಸ್ಸುಯದಿಯೋನ್ಯಾಯೆಂದು
ತೋಳೆತ್ತಿದಂ।
ಸುರರುಂ ಪೊಮ್ಮಿದ ಸೋಽಧಿಪನೊಸಲೆ ಸೀಸೇಯೊಂದು
ನಿಷ್ಠಂಪ್ರಿಯಂ।
ಶರಣಂ ಪ್ರೋಕ್ತಂ ವಿಮುಕ್ತರಾಗುತನಿಶಪ್ರತ್ಯಕ್ಷಸುಪ್ರಸಾದಿನಂ।
ಪರವೆ [illegible] ॥೨॥ ಶಿವಮಹಿಮಾಶತಕ॥

ತಾ॥ ಶ್ರೇಷ್ಠವಾದ ಗರ್ಭೋಪನಿಷದ್ವಾಕ್ಯವು 'ಯದಿ ಯೋನ್ಯಾ' ಎಂದು ಕೈಯನ್ನು ಮೇಲಕ್ಕೆತ್ತಿ ಮುಕ್ತಿಯನ್ನು ಕೊಡುವ ರಾಜನು ನೀನೇ? ಎಂಬುದಾಗಿ ಡಂಗುರವನ್ನು ಹೊಡೆದಿರುವಲ್ಲಿ ನಿನ್ನ ಪಾದವನ್ನು ಮರೆಹೊಕ್ಕು ಪಾಪರಹಿತರಾಗಿ ಅನೇಕರು ಮುಕ್ತರಾಗುತ್ತ ಪ್ರತ್ಯಕ್ಷನಾಗಿರಲಾಗಿ ಪರಮೇಶನೆ ನಿನ್ನನ್ನು ಕೆಲವರು ಏಕೆ ಅರಿಯರು? ॥ಸಾಕ್ಷಿ॥

ಯದಿಯೋನ್ಯಾಂ ಪ್ರಮುಂಚಾಮಿ ಪ್ರಪದ್ಯೇ ಜಗದೀಶ್ವರಂ।
ಸರ್ವಶಕ್ತಿಂ ಚಿದಾತ್ಮಾನಂ ಸರ್ವಕಾರಣಕಾರಣಂ॥
ಯದಿ ಯೋನ್ಯಾಃ ಪ್ರಮುಚ್ಯೇಽಹಂ ಪ್ರಪದ್ಯೇ ಪರಮೇಶ್ವರಂ।
ಭರ್ಗಂ ಪಶುಪತಿಂ ರುದ್ರಂ ಮಹಾದೇವಂ ಜಗದ್ಗುರುಂ॥

ಎಂದಿರುವುದರಿಂದ ಪರಮೇಶ, ಭರ್ಗ, ಪಶುಪತಿ ರುದ್ರ ಮೊದಲಾದ ಸಹಸ್ರ ನಾಮವುಳ್ಳವನಂ ಭಜಿಸಬೇಕೆಂದು ಭಾವವು

ತಿರಿಯಲೆಂದವನಲ ದೇವಾಧಿದೇವೇಶಂ।
ನಿರವ ಒಸ್ಗೆ ಸಲಿಸು ನಿಜಲಿಂಗ ॥೧॥

ಶಿವನೇ ನೀನು ಸಣ್ಣವನೆನಲು ದೇವತೆಗಳಿಗೆ ಒಡೆಯನು ನಿನ್ನ ಇರುವಿಕೆಯನ್ನು ವರ್ಣಿಸಲಿಕ್ಕೆ ತಿಳಿಯದು ಎಂದು ನಿಜಲಿಂಗ ಶತಕದಲ್ಲಿ ಹೇಳಲ್ಪಟ್ಟಿದೆ

ಕವಿಯೆ ಸರ್ವರೊಳುತ್ತಮಂ ಕನಕವೇ ಲೋಹಂಗಳೊಳ್
ಶ್ರೇಷ್ಠಜಾ।
ನ್ಹವಿಯೆ ತೀರ್ಥಜಲಂಗಳೊಳ್ ರತನದೊಳ್ ಶ್ರೀ ರತ್ನವೆ
ವಜ್ರಗಳಂ।
ರವಿಯೆ ಸರ್ವ ಗ್ರಹಂಗಳೊಳ್ ಸರಸದೊಳ್ ಶೃಂಗಾರವೆ
ಒಪ್ಪಿತೇಳ್।
ಶಿವನೇ ದೈವ ಜಂಗಳೊಳ್ ಹರನದಾ ಶ್ರೀ ಚನ್ನ
ಕೋಟೀಶ್ವರ ॥೩॥

ಚಲುವರ ಚಲ್ವ ಚೆನ್ನಿಗರ ಚನ್ನ ಸುರೂಪರ ರೂಪನುತ್ತಮ।
ಬಲರ ಬಲಾಢ್ಯ ಬಲ್ಲವರ ಬಲ್ಲಹ ದೇವರ ದೇವ [illegible]॥

ಶಿಥಿಲ ನಿಜ್ಜಸುಮುಮಕ್ಕಳ ಮನೆಕ ಕಾಂತಿ ಶಾಂತಿ
ಶೀತಲಕ ಶಿಶಿರ |
ಮುಣೆ ನಿನಗೆ ಸಾಟಿಯಾರ್ ||೪|| ಅಪರಾಜಿತೇಶ್ವರ ಶತಕ |

ಸರ್ವರೊಳಗೆ ಕವಿಯೇ ಉತ್ತಮನು ಲೋಹಗಳಲ್ಲಿ ಕನಕವೇ ಶ್ರೇಷ್ಠ ಸರ್ವ ತೀರ್ಥಗಳಲ್ಲಿ ಭಾಗೀರಥಿಯೇ ಶ್ರೇಷ್ಠವು ಸಮಸ್ತ ರತ್ನಗಳಲ್ಲಿ ಶ್ರೀ ರತ್ನವೇ ಶ್ರೇಷ್ಠವು ಸರ್ವ ಗ್ರಹಗಳಲ್ಲಿ ಸೂರ್ಯನೇ ಶ್ರೇಷ್ಠವು ಸರಸದಲ್ಲಿ ಶೃಂಗಾರವೇ ಶ್ರೇಷ್ಠವು ಜಗತ್ತಿನಲ್ಲಿ ಮಹಾದೇವನೇ ದೈವವು ||೨|| (ದೇವರೇ ನೀನು) ಸೌಂದರ್ಯವಂತರಲ್ಲಿ ಸುಂದರವಂತನು ಉತ್ತಮರಲ್ಲಿ ಉತ್ತಮನು ಪರಾಕ್ರಮಿಗಳಲ್ಲಿ ಶೂರನು ಒಳ್ಳೇ ಕಲೆಗಳನ್ನು ಬಲ್ಲವರಲ್ಲಿ ಹೆಚ್ಚಿನವನು ಜಾಣತನದವರಲ್ಲಿ ಹೆಚ್ಚಿನವನು ದೇವರಿಗೆ ದೇವನು ನೀತಿಯಿಂದ ಶುದ್ಧರಾದವರ ಬೊಕ್ಕಸನು ಮುದು ಮಕ್ಕಳ (ಕೊರಳೊಳಗಿನ) ರತ್ನಕಾಂತಿಯು (ಅತ್ಯಧಿಕ) ಸಮಾಧಾನವುಳ್ಳವರಲ್ಲಿ ಶ್ರೇಷ್ಠನು ನಿನಗೆ ಸರಿಯಾದವರು ಯಾರ ? (ಯಾರೂ ಇಲ್ಲ) (ಈ ಮಾತು) ಸತ್ಯವು ||೩|| ಇದಲ್ಲದೆ ಲೋಕ ವಿಖ್ಯಾತನಾದ ವ್ಯಾಸ ಮಹರ್ಷಿಯು ತಾನು ಆದಿಯಲ್ಲಿ ವಿಷ್ಣು ಭಕ್ತನಾಗಿ, ವಿಷ್ಣುವೇ ದೇವೋತ್ತಮನೆಂದು ಸಾರುತ್ತ ಕಾಶೀ ಕ್ಷೇತ್ರಕ್ಕೆ ಹೋಗಿ, ವಿಶ್ವನಾಥನ ದೇವಾಲಯದಲ್ಲಿಯೂ ಸಹ "ನ ದೇವಃ ಕೇಶವಾತ್ಪರಃ" ಎಂದು ವಿಷ್ಣುವಿನ ಆಧಿಕ್ಯವನ್ನು ಸಾರಲು, ನಂದೀಶ್ವರನಿಂದ ಹಸ್ತಸ್ತಂಭನವನ್ನು ಹೊಂದಿ ಅಸಾಧಾರಣವಾದ ದುಃಖಕ್ಕೀಡಾಗಿ, ತನ್ನ ಉಪಾಸ್ಯ ದೇವತೆಯಾದ ವಿಷ್ಣುವಿನಿಂದಲೇ ಶಿವ ಸರ್ವೋತ್ತಮತ್ವವನ್ನು ತಿಳಿದುಕೊಂಡು, ಶಿವನನ್ನು ಧ್ಯಾನಿಸಿ ಬಂಧನದಿಂದ ಬಿಡುಗಡೆಯನ್ನು ಹೊಂದಿ ಗಂಗಾ ನದೀ ತೀರದಲ್ಲಿ ತನ್ನ ಹೆಸರಿನಿಂದ ಒಂದು ಶಿವಲಿಂಗವನ್ನು ಸ್ಥಾಪಿಸಿ, ಶಿವ ನಿಂದೆಯಿಂದ ತನಗೆ ಪ್ರಾಪ್ತವಾದ ದೋಷದಿಂದ ಮುಕ್ತನಾದ ವಿಷಯವನ್ನು ತಾನೇ ಕಾಶೀ ಖಂಡದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ ಆ ಲಿಂಗವು "ವ್ಯಾಸೇಶ್ವರ" ಎಂಬ ಹೆಸರಿನಿಂದ ಈಗಲೂ ವ್ಯಾಸಕಾಶಿಯಲ್ಲಿ ಪ್ರಕಾಶಿಸುತ್ತಿರುವುದೆಂದು ಕ್ಷೇತ್ರಕ್ಕೆ ಹೋದವರು ಹೇಳುತ್ತಾರೆ ಇದೇ ಪ್ರಕಾರವಾಗಿ ಅನೇಕ ಮಹರ್ಷಿಗಳು ತಮ್ಮ ತಮ್ಮ ಹೆಸರಿನಿಂದ ಶಿವಲಿಂಗವನ್ನು ಸ್ಥಾಪಿಸಿರುವರಂತೆ

ಲೋಕ ವಿಖ್ಯಾತರಾದ ಶ್ರೀ ಶಂಕರಾಚಾರ್ಯರು ತಮ್ಮಿಂದ ರಚಿಸಲ್ಪಟ್ಟ ಶಿವಾನಂದ ಲಹರೀ ಎಂಬ ಗ್ರಂಥದಲ್ಲಿ—

ಸಹಸ್ರಂ ವರ್ತಂತೇ ಜಗತಿ ವಿಬುಧಾಃ ಕ್ಷುದ್ರಫಲದಾಃ |
ನಮನ್ಯೇ ಸ್ವಪ್ನೇ ವಾ ತದನುಸರಣಂ ತತ್ಕೃತಫಲಂ ||
ಹರಿಬ್ರಹ್ಮಾದೀನಾಮಪಿ ನಿಕಟಭಾಜಾಮಸುಲಭಂ |
ಚಿರಂ ಯಾಚೇ ಶಂಭೋ ಶಿವ ತವ ಪದಾಂಭೋಜ ಭಜನಂ ||೪||

ಅಂದರೆ ಎಲೈ ಪರಮೇಶ್ವರನೇ ಲೋಕದಲ್ಲಿ ಸಾವಿರಾರು ಜನ ದೇವತೆಗಳಿದ್ದಾರೆ ಅವರು ಅಲ್ಪ ಫಲವನ್ನು ಕೊಡತಕ್ಕವರಾದುದರಿಂದ ನಾನು ಅವರ ಅನುಸರಣವನ್ನಾಗಲಿ ಸ್ವಪ್ನದಲ್ಲಿಯೂ ಸಹ ಸ್ಮರಿಸ ಬಯಸುವದಿಲ್ಲ ಒಂದಾನೊಂದು ಕಾಲದಲ್ಲಿ ವಿಷ್ಣು ಬ್ರಹ್ಮರೀರ್ವರೂ ನಾನು ಹೆಚ್ಚು ತಾನು ಹೆಚ್ಚು ಎಂಬ ಹೆಮ್ಮೆಯಿಂದ ಕೂಡಿದವರಾಗಿ, ಶಪಥ ಮಾಡಿಕೊಂಡು ಸಮೀಪದಲ್ಲಿದ್ದ ನಿನ್ನ ಪಾದಕಮಲಗಳನ್ನು ಕಾಣುವದಕ್ಕೋಸ್ಕರ ವಿಷ್ಣುವು ವರಾಹರೂಪವನ್ನು ಧರಿಸಿ ಸಹಸ್ರಾರು ವರ್ಷಗಳವರೆಗೆ ಪಾತಾಳಲೋಕವನ್ನು ಅಗೆಯುತ್ತ ಹುಡುಕಿದರೂ, ಸಹ ದೊರೆಯಲಿಲ್ಲ ಅದರಂತೆಯೇ ನಿನ್ನ ಪವಿತ್ರಮಸ್ತಕವನ್ನು ಸಂದರ್ಶಿಸುವದಕ್ಕೋಸ್ಕರ ಬ್ರಹ್ಮನು ಹಂಸಪಕ್ಷಿಯ ರೂಪವನ್ನು ಧರಿಸಿ, ಸಹಸ್ರಾರುವರ್ಷಗಳವರೆಗೆ ಹಾರುತ್ತ ಹುಡುಕಿದರೂ ಸಹ ದೊರೆಯಲಿಲ್ಲ ಈ ರೀತಿಯಾಗಿ ಹರಿ ಬ್ರಹ್ಮಾದಿಗಳಿಗೂ ಕೂಡ ದೊರೆಯದೆಯಿದ್ದ ಆ ನಿನ್ನ ಪಾದಕಮಲಗಳ ಸ್ತೋತ್ರವನ್ನೇ ನಾನು ಯಾವಾಗಲೂ ಬೇಡುತ್ತೇನೆಂದು ಕೊಂಡಾಡಿದ್ದಾರೆ ದೇವತೆಗಳಲ್ಲಿ ಯಾವ ಭೇದಭಾವವನ್ನೆಣಿಸದೆ ಸರ್ವರನ್ನೂ ಸಮತ್ವದಿಂದ ಕಾಣಬೇಕೆಂದು ಸಿದ್ಧಾಂತಗೊಳಿಸಿರುವ, ಶ್ರೀ ಶಂಕರಾಚಾರ್ಯರೇ ಈ ರೀತಿಯಾಗಿ ಅಸಾಧಾರಣವಾದ ಭಕ್ತಿಭಾವದಿಂದ ಶಿವನನ್ನು ಕೊಂಡಾಡಿರುವದನ್ನು ನೋಡಿದರೆ, ಶಿವಸರ್ವೋತ್ತಮತ್ವ ವಿಷಯವು ಎಷ್ಟರ ಮಟ್ಟಿಗಿರಬಹುದೆಂಬ ವಿಷಯವನ್ನು ವಾಚಕರೇ ಊಹಿಸಬಹುದಾಗಿದೆ "ಆದಿತ್ಯಮಂಬಿಕಾಂ ವಿಷ್ಣುಂ ಗಣನಾಥಂ ಮಹೇಶ್ವರಂ" ಸೂರ್ಯ, ಶಕ್ತಿ, ವಿಷ್ಣು, ಗಣಪತಿ, ಮಹೇಶ್ವರ ಈ ಪಂಚದೇವತೆಗಳನ್ನು ಒಂದೇ ಭಾವನೆಯಿಂದ ಪೂಜಿಸಬೇಕೆಂದು ಶ್ರೀ ಶಂಕರಾಚಾರ್ಯರ ಕರ್ಮಠದ ಸ್ಮಾರ್ತರಲ್ಲಿ ನಿಬಂಧನವನ್ನು ಮಾಡಿದ್ದರೂ ಸಹ, ತಮ್ಮ ಪೀಠದಲ್ಲಿ ಕೇವಲ "ಚಂದ್ರಮೌಳೀಶ್ವರ" ನಾಮಕನಾದ ಶಿವಲಿಂಗಮೂರ್ತಿಯ ಪೂಜೆಯನ್ನೇ ಮುಖ್ಯವಾಗಿಟ್ಟುಕೊಂಡಿದ್ದಾರೆಂಬ ವಿಷಯವು ಸರ್ವರಿಗೂ ತಿಳಿದೇ ಇದೆ ಮತ್ತು ಶಿವನು ವಿಷ್ಣು ಬ್ರಹ್ಮಾದಿ ಪಶುಗಳಿಗೆಲ್ಲ ಪತಿಯಾದ್ದರಿಂದ 'ಪಶುಪತಿ'ಯೆಂದೂ, ದೊಡ್ಡವನಾದ್ದರಿಂದ 'ಮಹಾದೇವ'ನೆಂದೂ ಅಮರಕೋಶದಲ್ಲಿಯೂ ಸಹ ಪ್ರಸಿದ್ಧವಾಗಿದೆ

ಕ್ಷುದ್ರದೈವಕೆ ಬಾಯ ಬಿಟ್ಟಲ್ಲಿ ಫಲವಿಲ್ಲ
ಸೃಷ್ಟಿಗೊಡೆಯನನು ಭಜಿಸಿದರೆ ಮುಂದಕೆ
ಇಷ್ಟಾರ್ಥವೀವ ಸರ್ವಜ್ಞ ||

ಅಂದರೆ ಕ್ಷುದ್ರದೇವರನ್ನು ಧ್ಯಾನಿಸಿದರೆ ಏನೂ ಫಲವಿಲ್ಲವು ಜಗತ್ತಿಗೊಡೆಯನಾದಂಥ ಪರಶಿವನನ್ನು ಸ್ತೋತ್ರಮಾಡಿದರೆ ಮುಂದೆ ಇಚ್ಛಿತ ಫಲವನ್ನು ಕೊಡುವನೆಂದ ಸರ್ವಜ್ಞಮೂರ್ತಿಗಳೂ ಸಹ ಹೇಳಿದ್ದಾರೆ ಒಟ್ಟಿನಮೇಲೆ ಮೇಲಿನ ಅನೇಕ ಶಾಸ್ತ್ರಾಧಾರದಿಂದ ಶಿವನೇ ದೇವತಾ ಸಾರ್ವಭೌಮನೆಂದ ಸಿದ್ಧವಾಗುತ್ತದೆ ಆದ್ದರಿಂದಲೇ ದೇವತೆಗಳೂ, ಪ್ರಾಚೀನ ಮಹರ್ಷಿಗಳೂ, ತ್ರಿಕಾಲಜ್ಞಾನಿಗಳೂ ಯೋಗಿಗಳೂ, ಪಂಡಿತರೂ, ರಾಜಾಧಿರಾಜರೂ ಆ ಪರಶಿವನನ್ನೇ ಸ್ಥಾಪಿಸಿ, ಪೂಜಿಸಿ, ಧ್ಯಾನಿಸಿ ತಮ್ಮ ಇಚ್ಛಿತ ಫಲವನ್ನು ಹೊಂದಿ ಮೋಕ್ಷವನ್ನು ಪಡೆದಿದ್ದಾರೆ ಆದಕಾರಣ ಜಗತ್ತಿನಲ್ಲಿರತಕ್ಕ ಪ್ರತಿಯೊಬ್ಬ ಸ್ತ್ರೀ ಪುರುಷರು ದೇವಾಧಿದೇವನಾದ ಮಹಾದೇವನನ್ನು ಸ್ಥಾಪಿಸಿ, ಪೂಜಿಸಿ, ಧ್ಯಾನಿಸಿ ತಮ್ಮ ಅಪೇಕ್ಷೆಯನ್ನು ಪೂರ್ತಿಗೊಳಿಸಿಕೊಂಡು ಮುಕ್ತರಾಗಬೇಕೆಂದು ಬಯಸುತ್ತೇವೆ

|| ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಜಾಹೀರ ಅಭಿನಂದನೆಯು

ತಾ|| 14-1 ನೇ ಶನಿವಾರ ಐದು ಘಂಟೆಗೆ ಸೊಲ್ಲಾಪುರ ವೀರಶೈವ ಸದಾಚಾರ ಶ್ರೀ ಸಮಾಜದಲ್ಲಿ ಸನಾತನ ವೀರಶೈವ ಧರ್ಮೋದ್ಧಾರಕ ವಿದ್ವದ್ರತ್ನ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಗುರುಭಕ್ತಶಿಖಾಮಣಿ ಶ್ರೀ ಮಲ್ಲಿಕಾರ್ಜುನಪ್ಪ ವಾಕಳೆ ಇವರು ಶ್ರೀ ೧೦೮ ಷ|| ಬ್ರ|| ಬಾಲತಪಸ್ವಿ ಚನ್ನವೀರಶಿವಾಚಾರ್ಯರು ಹಿರೇಮಠ ಹೋಟಗಿ ಈ ಶಿವಯೋಗಿಗಳವರ ದಿವ್ಯಚರಣ ಸನ್ನಿಧಿಗೆ ತನ್ನ ಸ್ವಂತ ಐದು ಸಾವಿರ ಬೆಲೆಯ ಭೂದಾನವನ್ನು ಅರ್ಪಿಸಿ ತನ್ನ ಗುರು ಭಕ್ತಿಯನ್ನು ವ್ಯಕ್ತಪಡಿಸಿದ್ದಕ್ಕಾಗಿ ಅವರ ಅಭಿನಂದನಾರ್ಥವಾಗಿ ಸಭೆಯು ನೆರವೇರಿಸಲ್ಪಟ್ಟಿತು ಸದರಿ ಶ್ರೀ ಸಮಾಜದವರು ಪ್ರಾರ್ಥನೆ ಮಾಡಿಕೊಂಡಂತೆ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಆಗಮಿಸಿದ ಕೂಡಲೆ ಪಂಡಿತರ ಜಗದಾಚಾರ್ಯರ ಜಯಘೋಷದೊಂದಿಗೆ ನೆರೆದಂಥ ಜನರು ಸ್ವಾಗತಿಸಿದರು ತರುವಾಯ ಸಮಾಜದ ಸಕ್ರೆಟರಿಗಳಾದ ಸೌ|| ಭಾಗೀರಥೀಬಾಯಿಯವರು ಶ್ರೀಪಂಡಿತರಿಗೆ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಸಮಾಜದವತಿಯಿಂದ ಪ್ರಾರ್ಥಿಸಲು ಶ್ರೀ ಧುಂಜೆ ವಕೀಲರು, ಪಂಡಿತ ಧರ್ಮರತ್ನ ಶ್ರೀ ಮಲ್ಲಿಕಾರ್ಜುನಶಾಸ್ತ್ರಿಗಳವರು ಅನುಮೋದಿಸಿದ ಕೂಡಲೇ ಜಯಘೋಷದೊಂದಿಗೆ ಪಂಡಿತರು ಸ್ಥಾನಾಪನ್ನರಾದರು ಕು|| ರುದ್ರಮುನಿ ಮಾಳಗೆ ಆಕಾಶವಾಣಿ ಸಂವಾದವನ್ನು ಒಳ್ಳೆಯ ಅಭಿನಯದೊಂದಿಗೆ ಹಾಡಿ ತೋರಿಸಿದರು ಸಮಾಜದ ಕುಮಾರಿಯರ ಜಗದಾಚಾರ್ಯರ ಸ್ತುತಿಯಾದಮೇಲೆ ಶ್ರೀ ಗುರುಬಾಯಿ ಮರಪತ್ತಿ ಇವರು ಶ್ರೀ ವಾಕಳೆ ಇವರ ಗುಣಗಾನರೂಪವಾದ ಭಾಷಣಮಾಡಿದರು ತರುವಾಯ ಶ್ರೀ ಪಂ|| ಮಲ್ಲಿಕಾರ್ಜುನಶಾಸ್ತ್ರಿಗಳವರು ಶ್ರೀ ಧ.ಮ್ಯಾ.ವಕೀಲ ಕಾಂಗ್ರೆಸ್, ಶ್ರೀ ಧುಂಜೆವಕೀಲರೂ, ವ್ಯಾಖ್ಯಾನ ಪಟುಗಳಾದ ಡಾಕ್ಟರ ಜಗದೇವರಾವರು ಇಂಥ ನಾಸ್ತಿಕ ವಾತಾವರಣದಲ್ಲಿ ಶ್ರೀ ವಾಕಳೆ ಇವರಿಗೆ ಈ ತರದ ಸದ್ಬುದ್ಧಿ ಬರಬೇಕಾದರೆ ಶ್ರೀ ಹೋಟಗಿ ಮಹಾಧ್ಯಕ್ಷರಾದ ಬಾಲತಪಸ್ವಿಗಳ ಸಹವಾಸವೇ ಮುಖ್ಯ ಕಾರಣವೆಂದೂ, ಗುರುಕರ್ತವ್ಯ ಏನೆಂಬುದನ್ನೂ ಒಳ್ಳೆ ಹೃದಯಂಗಮವಾಗಿ ಭಾಷಣಮಾಡಿದರು ಪುರಾಣರತ್ನ ಶ್ರೀ ವೃಷಭಲಿಂಗಶಾಸ್ತ್ರಿಗಳವರು 'ದಾನದ ಮಹತ್ವ'ದ ವಿಷಯವಾಗಿ ಶಾಸ್ತ್ರೋಕ್ತ ಉದಾಹರಣೆಗಳಿಂದ ಎಲ್ಲರ ಮನಸ್ಸಿಗೂ ಪ್ರತಿಬಿಂಬಿಸುವಂತೆ ಅಮೋಘವಾದ ಭಾಷಣಮಾಡಿದರು ಆಮೇಲೆ ಅಧ್ಯಕ್ಷಮಹೋದಯರು ಶ್ರೀ ಬಾಲತಪಸ್ವಿಗಳ ವೈರಾಗ್ಯತ್ವ ಶ್ರೀ ವಾಕಳೆ ಇವರ ಗುರುಭಕ್ತಿ ಈ ವಿಷಯವಾಗಿ ತಮ್ಮ ಅಧಿಕಾರವಾಣಿಯಿಂದ ಎಲ್ಲರಿಗೂ ತಿಳಿಯುವಂತೆ ಉಪದೇಶಿಸಿದರು ಶ್ರೀ ಬಾಳಾಸಾಹೇಬ್ ಫಟಾಟೆ ಇವರು ಗುರುಮಹಿಮೆಯ ವಿಷಯವನ್ನು ತಮ್ಮ ಬಾಲಭಾಷೆಯಿಂದ ಹೇಳಿ ಎಲ್ಲರನ್ನೂ ಸಂತೋಷಪಡಿಸಿದರು ನಂತರ ಸಮಾಜದ ಸೆಕ್ರೆಟರಿಗಳಾದ ಸೌ|| ಭಾಗೀರಥೀಬಾಯಿಯವರು ಶ್ರೀ ವಾಕಳೆ ಇವರ ಅಭಿನಂದನಮಾಡಿದ್ದಲ್ಲದೆ ಅಧ್ಯಕ್ಷಮಹೋದಯರ ಮತ್ತು ನೆರೆದಂಥ ಜನರ ಆಭಾರವನ್ನಿತ್ತು ಜಗದಾಚಾರ್ಯರ ಜಯಘೋಷದೊಂದಿಗೆ ಸಭೆಯು ಮುಕ್ತಾಯವಾಯಿತು

ಸಕ್ರೆಟರಿ,
ಶ್ರೀ ವೀರಶೈವ ಸದಾಚಾರ ಶ್ರೀ ಸಮಾಜ,
ಸೊಲ್ಲಾಪುರ ಸಿಟಿ

|| ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಆಚಾರ್ಯರ ಜಯಂತೀಮಹೋತ್ಸವ ಸೊಲ್ಲಾಪುರ.

ತಾ|| ೧೩-೨-೪೨ ನೆಯ ಶುಕ್ರವಾರ ಸೊಲ್ಲಾಪುರದ ಶ್ರೀ ವೀರಶೈವ ಸದಾಚಾರ ಶ್ರೀ ಸಮಾಜದಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತೀ ನಿಮಿತ್ತವಾಗಿ ಸಮಾಜದ ಕುಮಾರಿಯರ ಕಡೆಯಿಂದ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕ ಮಹಾನೈವೇದ್ಯವಾದ ಮೇಲೆ ಮಧ್ಯಾಹ್ನ ಮೂರು ಘಂಟೆಗೆ ಸಭೆಯು ನೆರೆಯಿತು ಪ್ರಥಮ ಕುಮಾರಿಯರು ಜಗದಾಚಾರ್ಯರ ಸ್ತೋತ್ರ ಪದ್ಯಗಳನ್ನು ಹಾಡಿದ ಮೇಲೆ ಶ್ರೀ ಗುರುಬಾಯಿ ಮರಪತ್ತಿ ಸೌ|| ಭಾಗೀರಥೀಬಾಯಿ ಇವರು ಜಯಂತೀ ವಿಷಯವಾಗಿ ಭಾಷಣ ಮಾಡಿದರು ತರುವಾಯ ಮಂಗಳಾರತಿ ಪ್ರಸಾದವಿನಿಯೋಗವಾಗಿ ಜಗದಾಚಾರ್ಯರ ಜಯಘೋಷದೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು.

|| ಶ್ರೀ ಜಗದ್ಗುರು ವಿಶ್ವಾರಾಧ್ಯಾಯ ನಮಃ ||

ತಪಸ್ಸು—ಅವುಗಳ ಕ್ರಮವು,

ಲೇ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ, ಕೊಣ್ಣೂರು

(೧) ಪಂಚಾಗ್ನಿತಪಸ್ಸು—ನಾಲ್ಕೂ ಕಡೆ ನಾಲ್ಕು ಅಗ್ನಿಗಳು ಮೇಲೆ ಸೂರ್ಯನೇ ಅಗ್ನಿ ಈ ಮೇರೆಗೆ ಐದು ಅಗ್ನಿಗಳ ನಡುವೆ ಮಾಡುವ ತಪಸ್ಸು ಪಂಚಾಗ್ನಿ ತಪಸ್ಸೆನಿಸುವದು

(೨) ಕೃಚ್ಛ್ರ—ಒಂದು ತರದ ಪ್ರಾಯಶ್ಚಿತ್ತರೂಪವಾದ ತಪಸ್ಸು ೧೨ ದಿವಸಗಳಲ್ಲಿ ಮುಗಿಯುವದು ಮೊದಲನೆಯ ದಿವಸ ಮಧ್ಯಾಹ್ನ ಹವಿಷ್ಯಾನ್ನದ ೨೬ ತುತ್ತುಗಳನ್ನು ಎರಡನೆಯ ದಿವಸ ಸಾಯಂಕಾಲಕ್ಕೆ ೨೨ ತುತ್ತುಗಳನ್ನು ಮೂರನೆಯದಿವಸ ಅಯಾಚಿತವಾಗಿ ದೊರೆತ ಹವಿಷ್ಯಾನ್ನದ ೨೪ ತುತ್ತುಗಳನ್ನು ತಿಂದು ನಾಲ್ಕನೆಯ ದಿವಸ ಉಪವಾಸವನ್ನು ಮಾಡಿದರೆ ಪಾದಕೃಚ್ಛ್ರವೆನಿಸುವದು ಇದರಂತೆ ಮೂರುಸಾರೆ ಮಾಡಿದರೆ ೧೨ ದಿವಸದ ೧ ಕೃಚ್ಛ್ರವಾಗುವದು ಅತಿಕೃಚ್ಛ್ರ—ಕೃಚ್ಛ್ರದೊಳಗಿನ ಊಟದ ದಿವಸಗಳಲ್ಲಿ ತುತ್ತುಗಳ ಸಂಖ್ಯಾನಿಯಮವನ್ನು ಬಿಟ್ಟು ಕೈತುಂಬ ಮಾತ್ರ ಅನ್ನವನ್ನುಂಡರೆ ಅತಿ ಕೃಚ್ಛ್ರವೆನಿಸುವದು

(೩) ಸಾಂತಪನ—ಇದು ಕೃಚ್ಛ್ರದ ಭೇದವು; ಒಂದು ದಿವಸ ಕುಶೋದಕಮಿಶ್ರವಾದ ಪಂಚಗವ್ಯ (ಆಕಳಹಾಲು, ಮೊಸರು, ತುಪ್ಪ, ಗೋಮೂತ್ರ, ಗೋಮಯ)ವನ್ನು ಭಕ್ಷಿಸುವದು, ಒಂದು ದಿವಸ ಉಪವಾಸ ಹೀಗೆ ಎರಡು ದಿವಸಗಳಿಂದ ಮಾಡುವಂಥದು.

(೬ನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೨ನೆಯ ಮಾರ್ಚಿ ತಾ॥ ೨ನೇ ಸೋಮವಾರ

ಶಿವಲಿಂಗಲಕ್ಷಣ

ವೀರಶೈವಮತವು ಶ್ರುತ್ಯಾಗಮಗಳಿಗೆ ಸಮ್ಮತವಾದುದರಿಂದ ಶ್ರೌತಮತವೆನಿಸುವದು ಈ ಮತಕ್ಕೆ ಲಿಂಗಧಾರಣವೇ ಮುಖ್ಯ ಚಿಹ್ನವಾಗಿರುತ್ತದೆ ಮಿಕ್ಕ ಭಸ್ಮ ರುದ್ರಾಕ್ಷಾದಿ ಧಾರಣಗಳು ಸಾಮಾನ್ಯಚಿಹ್ನಗಳಾಗಿರುತ್ತವೆ ಲಿಂಗಧಾರಣವು ಅಂತರ್ಧಾರಣ ಬಹಿರ್ಧಾರಣವೆಂದು ಎರಡುಪ್ರಕಾರವಾಗಿರುವದು ಹೃದಯಾಕಾಶದಲ್ಲಿ ಜ್ಯೋತೀರೂಪನಾದ ಪರಶಿವನನ್ನು ಚಿಂತಿಸುತ್ತಿರುವುದೇ ಅಂತರ್ಧಾರಣವೆನಿಸುತ್ತದೆ ಮಸ್ತಕ ಕಂಠ ಹೃದಯಾದಿ ಸ್ಥಾನಗಳಲ್ಲಿ ಧರಿಸುವುದೇ ಬಹಿರ್ಧಾರಣವೆನಿಸುತ್ತದೆ ಸ್ಥೂಲಾಂಗದಲ್ಲಿ ಧರಿಸಲ್ಪಟ್ಟ ಲಿಂಗವೇ ಇಷ್ಟಲಿಂಗನೆಂದು ಹೇಳಿಸಿಕೊಳ್ಳುವುದು ಈ ಇಷ್ಟಲಿಂಗವು ಸ್ಫಟಿಕಶಿಲೆಯಿಂದಾಗಲಿ, ಚಂದ್ರಕಾಂತ ಶಿಲೆಯಿಂದಾಗಲಿ, ಸೂರ್ಯಕಾಂತಶಿಲೆಯಿಂದಾಗಲಿ, ಮಾಡಲ್ಪಟ್ಟಿರಬೇಕೆಂದು ಶಿವಾಗಮಗಳು ಸಾರುತ್ತಿರುವವು ಲಿಂಗವು ನೋಡುವದಕ್ಕೆ ಅಂದವಾಗಿದ್ದು ಪಂಚಸೂತ್ರಸಹಿತವಾಗಿರಬೇಕು. 'ಲಿಂಗವೃತ್ತಸಮಂ ಪೀಠಂ ವೃತ್ತಸ್ಯ ವಿಸ್ತಾರಮೇವ ಚ । ತದರ್ಧಂ ಗೋಮುಖಂ [illegible] ಪ್ರೋಕ್ತಂ ಲಿಂಗಸ್ಯ ಲಕ್ಷಣಂ' ಎಂದು ಶಿವಾಗಮಗಳಲ್ಲಿ ಲಿಂಗಲಕ್ಷಣವು ಹೇಳಲ್ಪಟ್ಟಿರುತ್ತದೆ ಅಂದರೆ ಲಿಂಗದ ಸುತ್ತಳತೆಯು ಎಷ್ಟಿರುತ್ತದೆಯೋ ಪೀಠದ ಉದ್ದವೂ ಅಗಲವೂ ಅಷ್ಟೇ ಇರಬೇಕು ಗೋಮುಖದ ಅಳತೆಯು ಅದರ ಅರ್ಧದಷ್ಟಿರಬೇಕು ಈ ಐದು ಲಕ್ಷಣಗಳಲ್ಲಿ ಒಂದು ಲಕ್ಷಣವಿಲ್ಲದೆ ಹೋದರೆ ಅನೇಕ ದೋಷಗಳು ಶಿವಾಗಮಗಳಲ್ಲಿ ಹೇಳಲ್ಪಟ್ಟಿರುವವು 'ಲಿಂಗದೀರ್ಘ್ಯೇ ಭವೇನ್ಮೃತ್ಯುಃ ಶಕ್ತ್ಯಾದಿಧ್ಯೇ ಧನಕ್ಷಯಃ । ಲಿಂಗಶಕ್ತ್ಯೈಕ್ಯೇ ಸ್ವಮತ್ವಂ ಹಿ ಭೋಗಮೋಕ್ಷಪ್ರದಂ ' ಪೀಠದ ಮೇಲಿರುವ ಬಾಣವು ಅಳತೆಯನ್ನು ಮೀರಿದರೆ ಮೃತ್ಯುವು ಸಂಭವಿಸುವುದು ಶಕ್ತಿರೂಪವಾದ ಪೀಠವು ಅಳತೆಯನ್ನು ಮೀರಿದರೆ ಧನವು ನಾಶವಾಗುವದು ಲಿಂಗಲಕ್ಷಣವನ್ನು ಮೀರಿ ಲಿಂಗವನ್ನು ಮಾಡುವವರಿಗೂ ಅಂಥ ಲಿಂಗವನ್ನು ಧರಿಸುವವರಿಗೂ ಅನೇಕ ದೋಷಗಳುಂಟಾಗುವವು ಮೂಢರು ಎಂಥ ಲಿಂಗವನ್ನು ಮಾಡುವ ವಿಧಾನವನ್ನು ಅರಿಯದೆ ಕಂಡ ಕಂಡ ಶಿಲೆಗಳಿಂದ ಮನಸ್ವಿಯಾಗಿ ಲಿಂಗವನ್ನು ಮಾಡುತ್ತಿರುವದರಿಂದಲೂ ವಿವೇಕವಿಲ್ಲದ ಜನರು ಅಗ್ಗವಾಗಿ ಸಿಗುವದೆಂದು ಅಂಥ ಲಿಂಗಗಳನ್ನೇ ಕೊಂಡುಕೊಳ್ಳುವ ಪ್ರವೃತ್ತಿಯುಳ್ಳವರಿಂದಲೂ ನಾಮಮಾತ್ರದಿಂದ ಲಿಂಗ[illegible]

ಲೋಕದಲ್ಲಿ ರಾಜಪಟ್ಟವನ್ನು ಹೊಂದಿ ಸಕಲ ಪ್ರಜೆಗಳಿಂದ ಸನ್ಮಾನಿತರಾಗ [illegible] ಬೇಕಾದ ಪುರುಷನಾಗಲಿ ರಾಜನ ಬಳಿಯಲ್ಲಿ ಪಟ್ಟದಾನೆಯೆನಿಸಬೇಕಾದ ಗಜವಾಗಲಿ ಪಟ್ಟದಶ್ವವೆನಿಸಬೇಕಾದ ಅಶ್ವವಾಗಲಿ ಶಾಸ್ತ್ರಲಕ್ಷಣಗಳಿಂದ ಕೂಡಿರಬೇಕೆನ್ನುವುದು ಸರ್ವರಿಗೂ ತಿಳಿದೇ ಇರುವದಷ್ಟೆ! ಹೀಗೆ ಲೋಕದಲ್ಲಿಯೇ ಇಷ್ಟು ನಿಯಮಗಳಿರುವಾಗ ಇನ್ನು ವೀರಶೈವಮತಕ್ಕೆ ಮೂಲಾಧಾರವೂ, ವೇದಾಗಮ ಪ್ರತಿಪಾದ್ಯವೂ ಆದ ಶಿವಲಿಂಗವು ಯಾವ ಲಕ್ಷಣವುಳ್ಳದ್ದಾಗಿರಬೇಕೆನ್ನುವುದನ್ನು ವರ್ಣಿಸಬೇಕಾಗಿಲ್ಲ ಪಂಚಸೂತ್ರ ಲಕ್ಷಣಗಳಿಲ್ಲದಿದ್ದರೆ ಆ ಲಿಂಗವು ಪ್ರೇತಲಿಂಗವೆನಿಸಿಕೊಳ್ಳುತ್ತದೆ ಪ್ರೇತವನ್ನು ಎಷ್ಟು ಶೃಂಗರಿಸಿದರೂ ಎಷ್ಟು ಆರಾಧಿಸಿದರೂ ವ್ಯರ್ಥವಷ್ಟೆ! ಲಕ್ಷಣಹೀನವಾದ ಲಿಂಗದ ಸ್ಥಿತಿಯಾದರೂ ಅದರಂತೆಯೇ ಎಂದು ತಿಳಿಯಬೇಕು. ಕೆಲಜನರು ಶಾಸ್ತ್ರಲಕ್ಷಣಯುತವಾದ ಲಿಂಗಗಳನ್ನು ತರಿಸಿಕೊಳ್ಳದೆ, ಅಂಗಡಿಗಳಲ್ಲಿ ಮಾರಾಟಕ್ಕೆ ಇಟ್ಟವುಗಳನ್ನು ತರಿಸಿ ಬಾಲ್ಯಾವಸ್ಥೆಯಲ್ಲಿ ಏನೊಂದೂ ತಿಳಿಯದಿರುವ ಬಾಲಕರನ್ನು ಕರೆದುಕೊಂಡು ಬಂದು, ನಾವು ಧರ್ಮಾರ್ಥವಾಗಿ ನೂರುದೀಕ್ಷೆಗಳನ್ನು ಮಾಡಿಸಿದೆವು. ಇನ್ನೂರು ದೀಕ್ಷೆಗಳನ್ನು ಮಾಡಿಸಿದೆವೆಂದು ಕ್ರಮವಿಲ್ಲದೆ ಯದ್ವಾತದ್ವಾ ಲಿಂಗಗಳನ್ನು ಧರಿಸಲು ಪ್ರಾರಂಭಿಸಿರುವದನ್ನು ನೋಡಿದರೆ ವೀರಶೈವಮತದ ಭಾಗ್ಯವನ್ನು ಏನೆಂದು ವರ್ಣಿಸೋಣ! ಲಿಂಗಲಕ್ಷಣವನ್ನೂ, ಸಂಸ್ಕಾರಕ್ರಮವನ್ನೂ, ಉಪದೇಶಕ್ರಮವನ್ನೂ ಬೋಧಿಸುವುದಕ್ಕಾಗಿಯೂ ಮೋಕ್ಷಕ್ಕೆ ಪ್ರತಿಬಂಧಕಗಳಾದ ಇಂಥ ಅಶಾಸ್ತ್ರೀಯ ವರ್ತನಗಳನ್ನು ಖಂಡಿಸುವುದಕ್ಕಾಗಿಯೂ, ಪೂರ್ವಾಚಾರ್ಯರು ಅಲ್ಲಲ್ಲಿಯೇ ಪಟ್ಟಚರಮೂರ್ತಿಗಳನ್ನು ನಿರ್ಮಾಣಮಾಡಿರುತ್ತಾರೆ ಅವರು ಈ ಬಗ್ಗೆ ಬಹು ಜಾಗರೂಕತೆಯಿಂದ ವರ್ತಿಸಬೇಕು ಕಲಿಯುಗದ ಮಹಿಮೆಯಿಂದ ಪೂರ್ವಾಚಾರ್ಯಸಂಪ್ರದಾಯವು ನಷ್ಟವಾಗುತ್ತ ಹೋದಹಾಗೆಲ್ಲ ಅನಧಿಕಾರಿವರ್ಗವೂ, ಲಕ್ಷಣಶೂನ್ಯವಾದ ಲಿಂಗಗಳೂ, ಅಶಾಸ್ತ್ರೀಯವಾದ ಸಂಸ್ಕಾರಗಳೂ ಹೆಚ್ಚಿಹೋಗಿವೆ "ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ । ನ ಸ ಸಿದ್ಧಿಮವಾಪ್ನೋತಿ ನ ಸುಖಂಚ ಪರಾಂಗತಿಂ ॥" ಯಾವನು ಶಾಸ್ತ್ರನಿಯಮವನ್ನು ಮೀರಿ ಸ್ವೇಚ್ಛೆಯಿಂದ ನಡೆಯುತ್ತಾನೆಯೋ, ಅವನು ಸಿದ್ಧಿಯನ್ನಾಗಲಿ, ಸುಖವನ್ನಾಗಲಿ, ಮೋಕ್ಷವನ್ನಾಗಲಿ ಪಡೆಯದೆ ನಿರಸವಾದ ದುಃಖಕ್ಕೀಡಾಗುವನು ಎಂದು ಗೀತಾಕಾರರು ಹೇಳಿರುವಂತೆ, ಸ್ವೇಚ್ಛೆಯಾಗಿ ನಡೆಯುವವರು ಇಹಪರಲೋಕಗಳಿಗೆ ದೂರರಾಗುವರು ಈ ತತ್ವವನ್ನು ಪ್ರತಿಯೊಬ್ಬರೂ ವಿಚಾರಮಾಡಿ ಮುಕ್ತಿಗೆ ಮೂಲಭೂತವಾದ ಲಿಂಗಲಕ್ಷಣವನ್ನು ಚೆನ್ನಾಗಿ ಪರಿಶೋಧಿಸಿ, ಗುರುವರ್ಗವನ್ನಾಶ್ರಯಿಸಿ, ಶಿವದೀಕ್ಷಾಪೂರ್ವಕವಾಗಿ ಶಾಸ್ತ್ರೀಯಶಿವಲಿಂಗವನ್ನು ಪಡೆದು ಪೂರ್ವಾಚಾರ್ಯರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ

ಯುದ್ಧವಾರ್ತೆ.

ಚರ್ಚಿಲ್‌ರವರ ಭಾಷಣ

ಬ್ರಿಟಿಷ್ ಮಹಾಪ್ರಧಾನರಾದ ಮಿ॥ ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ಸಂಗ್ರಾಮ ವಿಷಯವನ್ನು ವಿಮರ್ಶೆಮಾಡುತ್ತ "ಸ್ಥೂಲವಾಗಿ ಪರಿಸ್ಥಿತಿಯನ್ನು ನಾವು ವಿವರ್ತೆಮಾಡಿದ್ದೇವೆ ಕಳೆದ ಎರಡು ವರ್ಷಗಳಲ್ಲಿ ಮಾತ್ರವಲ್ಲ, ಕಳೆದ ಹಲವು ತಿಂಗಳಲ್ಲಿ ಸಹ ನಮ್ಮ ಪರಿಸ್ಥಿತಿಯು ಬಹಳವಾಗಿ ಉತ್ತಮಗೊಂಡಿರುವುದು ಕಾಣಬರುತ್ತಿದೆ ಈ ಪರಿಸ್ಥಿತಿಗೆ ರಷ್ಯದ ಅಪೂರ್ವವಾದ ಹೋರಾಟವೂ ಮತ್ತು ಅಮೆರಿಕವು ತನ್ನ ಸರ್ವ ಸಂಪತ್ತನ್ನೂ ಮಿತ್ರರಾಷ್ಟ್ರಗಳ ಹಿತಸಾಧನೆಗಾಗಿ ವಿನಿಯೋಗಿಸಲು ಮುಂದೆ ಬಂದಿರುವದೂ ಕಾರಣವಾಗಿರುವವು ಸಂಗ್ರಾಮವು ವಿಶಾಲಕ್ಷೇತ್ರಕ್ಕೆ ವ್ಯಾಪಿಸಿರುವುದರಿಂದ ಕಳೆದ ಎರಡು ತಿಂಗಳಿಂದ ಬ್ರಿಟಿಷ್ ಹಡಗುಗಳಿಗೆ ವಿಪರೀತ ನಷ್ಟವಾಗುತ್ತಿದೆ ಯು-ಬೋಟ್ ಧ್ವಂಸಕ ನೌಕೆಗಳೂ ಇತರ ಬಗೆಯ ಹಡಗುಗಳೂ ನಮಗೆ ಬೇಕಾದ ಆಹಾರ ವಸ್ತುಗಳನ್ನೂ ಸಂಗ್ರಾಮ ವಸ್ತುಗಳನ್ನೂ ಒದಗಿಸುವುದರಲ್ಲಿ ನಿರತವಾಗಿರುವುದರಿಂದ ಶತ್ರುಗಳ ಕೈ ಮೇಲಾಯಿತು ಸಿಂಗಪುರದಲ್ಲಿ 73000 ಮಂದಿ ಬ್ರಿಟಿಷ್ ಯೋಧರು ಸಿಕ್ಕಿಬಿದ್ದರೆಂದು ಜಪಾನರು ಹೇಳುತ್ತಾರೆ ಅಲ್ಲಿ ಇದಕ್ಕಿಂತ ಹೆಚ್ಚು ಸೈನಿಕರು ಆಗ ಇಲ್ಲದಿದ್ದರೆಂಬುದು ಖಂಡಿತ ಅಮೆರಿಕ, ಬ್ರಿಟನ್, ಡಚ್ ಆಸ್ಟ್ರೇಲಿಯಾ ಕ್ಷೇತ್ರಗಳಲ್ಲಿ ಜಪಾನಿನ 21 ಪಡೆಗಳಿವೆ ಅಲ್ಲಿ ನಮ್ಮ ಸೇನೆಗಳು ಈಗ ಇಷ್ಟಿಲ್ಲ ಶತ್ರು ವಿಮಾನ ಬಲವು ಅಧಿಕವಾಗಿರುವುದರಿಂದ ನಮ್ಮ ವಿಮಾನಬಲದ ಪರ ಚಟುವಟಿಕೆ ಹೆಚ್ಚು ಫಲಕಾರಿಯಾಗಲಿಲ್ಲ ಆದ್ದರಿಂದ ನಾವು ಮುಂದೆ ಬಹಳ ಕಷ್ಟದ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ ಕಟ್ಟಕಡೆಗೆ ಬ್ರಿಟನ್, ಅಮೆರಿಕಾ, ಚೀನಾ, ರಷ್ಯಾ ಮತ್ತು ಎಲ್ಲ ಮಿತ್ರರಾಷ್ಟ್ರಗಳಿಗೆ ಜಯವು ಸಿದ್ಧ" ಎಂದು ಹೇಳಿದರು

ಸಿಂಗಪುರದಲ್ಲಿ ಅಸಂಖ್ಯಸೈನಿಕರು ಸೆರೆಯಾದುದಕ್ಕೆ ಕಾರಣ.

ವಿಮಾನಬಲದಲ್ಲಿ ಜಪಾನರ ಕೈ ಮೇಲಾಗಿದ್ದುದರಿಂದ ಸಿಂಗಪುರವನ್ನು ಸೇನೆಗಳು ತ್ಯಜಿಸಲಾಗಲಿಲ್ಲ ಗ್ರೀಸ್ ಮತ್ತು ಕ್ರೀಟಿಗಳಲ್ಲಿ ಮಿತ್ರಸೇನೆಗಳಿಗೆ ವಿಮಾನ ಬಲವಿಲ್ಲದೆ ಹೋದರೂ ಬಲಯುತ ನೌಕಾಬಲವಿದ್ದುದರಿಂದ ಆ ಪ್ರದೇಶಗಳಿಂದ ಹಿಂದಕ್ಕೆ ಬರಲು ಅವಕಾಶವಾಯಿತು. ಸಿಂಗಪುರದಲ್ಲಿ ನೌಕಾಬಲವೇನೂ ಇರಲಿಲ್ಲ ಕೆಲವು ವ್ಯಾಪಾರದ ಹಡಗುಗಳು ಮಾತ್ರ ಇದ್ದವು. ಈ ಪರಿಸ್ಥಿತಿಯಲ್ಲಿ ಸೈನಿಕರನ್ನು ಸಾಗಿಸುವ ಪ್ರಯತ್ನಮಾಡಿದ್ದರೆ ಅವರನ್ನೆಲ್ಲ ಕೈಯ್ಯಾರ ಕೊಂದಂತೆ ಆಗುತ್ತಿತ್ತು ಆದ್ದರಿಂದ ೬೦,೦೦೦ಕ್ಕಿಂತ ಹೆಚ್ಚುಮಂದಿ ಬ್ರಿಟಿಷ್‌ಯೋಧರು ತಮ್ಮ ಸಂಗ್ರಾಮಸಾಧನಗಳೊಂದಿಗೆ ಸೆರೆ ಸಿಕ್ಕಬೇಕಾಯಿತು. ಇಷ್ಟು ಶೀಘ್ರವಾಗಿ ಸಿಂಗಪುರವು ಬಿದ್ದುದಕ್ಕಾಗಿ ನಾನಾ ಕಾರಣಗಳನ್ನು ಕೊಡಲಾಗಿದೆ ಈಗ ತಿಳಿದುಬಂದಿರುವ ಪ್ರಕಾರ, ನೀರಿನ ಅಭಾವವೇ ಅವರ ಪತನಕ್ಕೆ ಮೂಲಕಾರಣವಾಯಿತು. ನೀರನ್ನು ಸರಬರಾಜು ಮಾಡುತ್ತಿದ್ದ ಕೊಳಾಯಿಗಳು ಬಾಂಬಿನೇಟಿನಿಂದ ಒಡೆದು ಹೋದುದರಿಂದ ಸೈನಿಕರು ಪ್ರತಿಭಟಿಸಲಾರದೆ ಹೋದರು

ಜಪಾನ್ ಸಂಗ್ರಾಮ ನೌಕೆಗಳು ಸಿಂಗಪುರಕ್ಕೆ ಬಂದವು

ಜಪಾನ ನೌಕಾಬಲವು ಕಳೆದ 22ನೆಯ ತಾರೀಖಿನ ದಿವಸ ಸಿಂಗಪುರದ ಕೆಪ್ಪೆಲ್ ಬಂದರಿಗೆ ಬಂತು ಬಂದರಿನ ಮೇಲೆ ಪ್ರಥಮತಃ ಜಪಾನ್ ನೌಕಾಬಲದ ಧ್ವಜವನ್ನು ಹಾರಿಸಲಾಯಿತು ಸಿಂಗಪುರ ದ್ವೀಪದ ಸುತ್ತಹಾಕಲಾಗಿದ್ದ ಮೈನ್‌ಗಳನ್ನು ಧ್ವಂಸಮಾಡಿದ ಮೇಲೆ ಸಂಗ್ರಾಮ ನೌಕೆಗಳು ಅಲ್ಲಿಗೆ ಬಂದವು ಎಂದು ಹೇಳಲಾಗಿದೆ

ಹೆಚ್ಚಿನ ಬಲಕ್ಕಾಗಿ ಜಪಾನರು ಕಾಯುತ್ತಿದ್ದಾರೆ.

ತಾತ್ಕಾಲಿಕವಾಗಿ ಬರ್ಮಾ ಕದನದ ಬಿರುಸು ಕಡಿಮೆಯಾಗಿದೆ ರಂಗೂನಿನ ಕಡೆಗೆ ನುಗ್ಗಲು ಹೆಚ್ಚು ಸೈನ್ಯ ಸಹಾಯವು ಬರಲೆಂದು ಜಪಾನರು ಕಾಯುತ್ತಿದ್ದಾರೆ ಈ ಮಧ್ಯ ಜಪಾನರು ತಮ್ಮ ಸೇನೆಗಳನ್ನು ಪುನರ್ವ್ಯವಸ್ಥೆಗೊಳಿಸುತ್ತಿದ್ದಾರೆಂದು ತಿಳಿದುಬಂದಿದೆ

ಬಂಗಾಳದಲ್ಲಿ ಸಿದ್ಧತೆ

ಬಂಗಾಳ ಪ್ರಾಂತ್ಯದಲ್ಲಿ ಹಲವು ಸಮುದ್ರ ತೀರ ಪ್ರದೇಶಗಳನ್ನು ಬಿಟ್ಟು ಜನರು ಹೊರಟು ಹೋಗಬೇಕೆಂದು ಅಜ್ಞೆ ಮಾಡಲಾಗಿದೆ ಜನರು ಭಯಭ್ರಾಂತರಾಗಕೂಡದೆಂದು ಎಚ್ಚರಿಕೆ ಕೊಡುತ್ತ ಜಿಲ್ಲಾ ಮ್ಯಾಜಿಸ್ಟ್ರೇಟರು ಒಂದು ಪ್ರಕಟಣೆ ಹೊರಡಿಸಿದ್ದಾರೆ. ಸೈನ್ಯಗಳು ನಿರಾತಂಕವಾಗಿ ಚಲಿಸಲು ಅನುಕೂಲವಾಗುವಂತೆ ಮಾಡಿಕೊಳ್ಳಲೋಸುಗ ಹಲವು ಹಳ್ಳಿಗಳನ್ನು ಜನರು ಬಿಡಬೇಕೆಂದು ಸೂಚನೆ ಕೊಡಲಾಗಿದೆ. ಈ ಕ್ಷೇತ್ರಗಳಲ್ಲಿ ಮಿಲಿಟರಿಯವರ ಓಡಾಟದಿಂದ ಅಲ್ಲಿನ ಸಿವಿಲಿಯನರಿಗೆ ಬಹಳ ಪ್ರತಿಬಂಧಕವುಂಟಾಗುತ್ತಿದೆ ಆದ್ದರಿಂದ ಅವರ ಅನುಕೂಲಕ್ಕಾಗಿಯೇ ಅವರನ್ನು ಬೇರೆಕಡೆ ಸಾಗಿಸುವ ಪ್ರಯತ್ನ ನಡೆದಿದೆ ಹೀಗೆ ಜನರನ್ನು ಸಾಗಿಸುತ್ತಿರುವುದನ್ನು ಕಂಡು ಯಾರೂ ಎದೆಗೆಡಬೇಕಾಗಿಲ್ಲ ಕೇವಲ ಮುನ್ನೆಚ್ಚರಿಕೆಗಾಗಿ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ.

ಜಾವಾದ್ವೀಪದ ಪರಿಸ್ಥಿತಿ

ಜಾವಾಪರಿಸ್ಥಿತಿಯು ಉಗ್ರವಾಗಿದೆಯೆಂಬುದಾಗಿ ಲಂಡನ್ನಿನಲ್ಲಿರುವ ನೆದರ್‌ಲೆಂಡ್ ಕ್ಷೇತ್ರಗಳಲ್ಲಿ ತಿಳಿದುಬಂದಿದೆ ಪಶ್ಚಿಮ, ಉತ್ತರ ಮತ್ತು ಪೂರ್ವಭಾಗಗಳಲ್ಲಿ ಜಪಾನರು ಕಾಲೂರಿದ್ದಾರೆ. ವಿಮಾನ ನಿಲ್ದಾಣಗಳು ಸಹ ಅವರ ವಶವಾಗಿವೆ ಆದ್ದರಿಂದ ವಿಮಾನನಿಲ್ದಾಣಗಳ ಮೇಲೂ ಮತ್ತು ಸೌರಬಾಯಾ ನೌಕಾಮೂಲದಮೇಲೂ ಮುತ್ತಿಗೆ ನಡೆಸಲು ಬಹಳ ಅನುಕೂಲವಾಗಿದೆ. ಈಗ ಮಿತ್ರಸೇನೆಗಳ ಕೈ ಮೇಲಾಗಬೇಕಾದರೆ ಅಪಾರ ವಿಮಾನಗಳು ಬೇಕು ಇನ್ನೊಂದು ಅಂಶವು ಮಿತ್ರರಾಷ್ಟ್ರಗಳಿಗೆ ಅನುಕೂಲವಾಗಿದೆ ಜಪಾನರೀಗ ತಮ್ಮ ಸೈನ್ಯಗಳನ್ನು ಬೇರೆ ಬೇರೆ ಕಡೆ ಚದುರಿಸಿರುವುದರಿಂದ, ಎಲ್ಲ ಕ್ಷೇತ್ರಗಳಲ್ಲೂ ಅವರು ಬಲಯುತರಾಗಿರಲು ಸಾಧ್ಯವಿಲ್ಲ ಜಾವಾ ವಿಮಾನ ನಿಲ್ದಾಣಗಳಲ್ಲಿಯೂ ಮತ್ತು ಸಮುದ್ರತೀರದಲ್ಲಿಯೂ ಮಿತ್ರರಾಷ್ಟ್ರಗಳವರ ಕೈ ಮೇಲಾಗಿರುವುದರಿಂದ ಸುತ್ತಮುತ್ತ ಶತ್ರುಗಳು ಹಿಡಿದಿರುವ ಸ್ಥಾನಗಳಿಂದ ಅವರನ್ನು ಓಡಿಸಲು ಸಾಧ್ಯವಾಗಬಹುದು ಎಂದು ಹೇಳಲಾಗಿದೆ.

ಭಾರತಕ್ಕೆ ಹೆಚ್ಚುಸೇನೆ ಬೇಕು

ಭರತಖಂಡಕ್ಕೆ ಹೆಚ್ಚಿನ ಸೈನ್ಯಬಲವನ್ನು ಕಳುಹಿಸಬೇಕೆಂಬುದಾಗಿ ವೈಸರಾಯರು ಬ್ರಿಟನ್ನನ್ನು ಪ್ರಾರ್ಥಿಸಿದ್ದಾರೆಂಬುದಾಗಿ ಕಾಮನ್ಸ್ ಸಭೆಯಲ್ಲಿ ನಡೆದ ಚರ್ಚೆಯ ಕಾಲದಲ್ಲಿ ಮೇಜರ್ ಮಿಲ್ನರ್‌ರವರು ತಿಳಿಸಿದರು

ರಂಗೂನನ್ನು ಬೇಗನೆ ಹಿಡಿಯುವ ಪ್ರಯತ್ನ

ರಂಗೂನಿನ ಕಡೆ ಮುಂದುವರಿಯಲು ಜಪಾನರು ಹೆಚ್ಚು ಸೇನೆಗಳನ್ನು ಕರೆತರುತ್ತಿದ್ದಾರೆ ಬೇಗನೆ ಜಯಗಳಿಸಲು ಜಪಾನರು ಅಪಾರ ಯೋಧರನ್ನು ಬಲಿ ಕೊಡಲು ಸಿದ್ಧರಾಗಿದ್ದಾರೆ. ರಂಗೂನ್ ತೀರದಲ್ಲಿ ಜಪಾನರು ಬಂದಿಳಿದಿರುವುದು ದೃಢಪಟ್ಟಿಲ್ಲ.

ಜಪಾನರು ದಕ್ಷಿಣ ಸುಮಾತ್ರವನ್ನು ಆಕ್ರಮಿಸಿದರು

ದಕ್ಷಿಣಸುಮಾತ್ರದ ಬಹುಭಾಗವು ಈಗ ಜಪಾನರ ಕೈ ಸೇರಿದೆ ಇದರಿಂದ ಸುಮಾತ್ರಕ್ಕೂ ಜಾವಾಕ್ಕೂ ಮಧ್ಯೆಇರುವ ಸುಂಡಾಕೊಲ್ಲಿಯು ವಿಪತ್ತಿಗೆ ಸಿಕ್ಕಿದೆ ಪ್ರತಿನಿತ್ಯ ಬಟಾವಿಗೂ ಮತ್ತು ಸೌರಬಾಯಗಳಮೇಲೂ ಶತ್ರುಮುತ್ತಿಗೆ ನಡೆಯುತ್ತಿದೆ. ಬಾಲಿದ್ವೀಪದ ಸ್ಥಿತಿ ತಿಳಿಯುವಂತೆಯೇ ಇಲ್ಲ ಅಲ್ಲಿ ಇನ್ನೂ ಹೊಡೆದಾಟಗಳಾಗುತ್ತಿವೆಯೆಂದು ಊಹಿಸಲಾಗಿದೆ ದಕ್ಷಿಣ ಸುಮಾತ್ರದಲ್ಲಿ ಜಪಾನರ ಕೈ ಮೇಲಾಗಿದ್ದರೂ ಅದರಮೇಲೆ ಅವರ ಸಂಪೂರ್ಣ ಹತೋಟಿಯನ್ನು ಸ್ಥಾಪಿಸಿಲ್ಲವೆಂದು ಹೇಳಲಾಗಿದೆ.

ಸ್ಟಾಲಿನ್‌ರವರ ಸಂದೇಶ

ಎಂ. ಸ್ಟಾಲಿನ್‌ರವರು ರಷ್ಯದ ಕೆಂಪು ಸೇನೆಯು ಸ್ಥಾಪಿತವಾದ 24ನೆಯ ವಾರ್ಷಿಕೋತ್ಸವದ ಸಮಯದಲ್ಲಿ ಸಂದೇಶವೊಂದನ್ನು ಕೊಡುತ್ತ—"ಲೆನಿನ್‌ಗ್ರಾಡ್ ದ್ವಾರದಿಂದ ಶತ್ರುಗಳನ್ನು ಓಡಿಸುವೆವು ಬಿಳಿ ರಷ್ಯ ಉಕ್ರೇನ್ ಮತ್ತು ಕ್ರಿಮಿಯಾಗಳನ್ನು ಶತ್ರು ಬಂಧನದಿಂದ ಬಿಡಿಸುವೆವು ಮೊದಲು ಎಲ್ಲೆಲ್ಲಿ ಕೆಂಪು ಧ್ವಜವು ಹಾರಾಡುತ್ತಿತ್ತೋ ಅಲ್ಲೆಲ್ಲ ಮತ್ತೆ ಅದನ್ನು ಹಾರಿಸುವೆವು ಶತ್ರುಗಳ ಸೋಲನ್ನು ಪೂರ್ಣಗೊಳಿಸಲು ರಷ್ಯನರು ಇನ್ನೂ ಹೆಚ್ಚು ಪ್ರಯತ್ನ ಮಾಡಬೇಕು. ಹರ್ ಹಿಟ್ಲರನನ್ನು ಈಗಾಗಲೇ ಸೋಲಿಸಲಾಗಿದೆಯೆಂದು ರಷ್ಯನರು ನಂಬಕೂಡದು. ಮುಂದೆ ನಡೆಯುವ ಯುದ್ಧದ ವಿಧಾನವೇ ಬೇರೆ ಇದುವರೆಗೆ ಹರ್ ಹಿಟ್ಲರನ ಬಲ ಹೆಚ್ಚಾಗಿತ್ತು ಈಗ ಅಷ್ಟಿರುವುದಿಲ್ಲ ನಾವು ಮುಂದೆ ಇನ್ನೂ ಉಗ್ರವಾದ ಕದನ ನಡೆಸಲು ಸಿದ್ಧವಾಗಿರಬೇಕು ವಿಜಯ ಸಂಪಾದಿಸಲು ರಣರಂಗಕ್ಕೆ ಹೊಸ ಪಡೆಗಳನ್ನು ಕಳುಹಿಸಬೇಕು. ಸಂಗ್ರಾಮವಸ್ತು ಸೃಷ್ಟಿಕಾರ್ಯವನ್ನು ದ್ವಿಗುಣಗೊಳಿಸಬೇಕು ಪ್ರತಿದಿನ ಸೇನೆಗೆ ಹೆಚ್ಚು ಟ್ಯಾಂಕುಗಳನ್ನೂ ವಿಮಾನಗಳನ್ನೂ ಫಿರಂಗಿಗಳನ್ನೂ ಸರಬರಾಜು ಮಾಡಬೇಕು " ಎಂದು ಸೂಚಿಸಿದರು

ಸ್ಮೋಲೆನ್‌ಸ್ಕ್ ಹಿಡಿಯಲು ರಷ್ಯನರ ಪ್ರಯತ್ನ

ಸ್ಮೋಲೆನ್‌ಸ್ಕ್ ನಗರದ ಆಕ್ರಮಣಕ್ಕಾಗಿ ಹೊಡೆದಾಟವು ಉಗ್ರವಾಗಿ ನಡೆಯುತ್ತಿದೆ ಅತ್ತ ಲೆನಿನ್‌ಗ್ರಾಡ್ ರಂಗದಲ್ಲಿ ರಷ್ಯನರಿಗೆ ಭಾರಿ ಜಯವಾಯಿತು ಲೆನಿನ್‌ಗ್ರಾಡಿನ ನೈಋತ್ಯಕ್ಕೆ ೧೪೦ ಮೈಲಿ ದೂರದಲ್ಲಿ ೧೬ನೇ ಜರ್ಮನ್ ಪಡೆಯು ಸಂಪೂರ್ಣವಾಗಿ ಸುತ್ತುವರಿಯಲ್ಪಟ್ಟಿದೆ ಎಂಬುದಾಗಿ ಮಾಸ್ಕೋ ರೇಡಿಯೋವು ತಿಳಿಸಿದೆ ೧೨೦೦೦ ಕ್ಕಿಂತ ಹೆಚ್ಚುಮಂದಿ ಜರ್ಮನರು ಸತ್ತರೆಂದೂ ಗಾಯಗೊಂಡರೆಂದೂ ತಿಳಿಸಲಾಗಿದೆ ಅಪಾರ ಸಂಗ್ರಾಮವಸ್ತುಗಳು ರಷ್ಯನರ ವಶವಾದವು ಪಶ್ಚಿಮ ರಂಗದಲ್ಲಿ ಮಹಾಕದನ ನಡೆಸಲು ರಷ್ಯಾ ಸೇನೆಗಳು ಸಿದ್ಧವಾಗಬೇಕೆಂದು ಅಧಿಕಾರಿಗಳು ಸೂಚನೆ ಕೊಟ್ಟಿದ್ದಾರೆ ಖಾರ್ಕೋವ್ ಮತ್ತು ಓರೆಲ್ ರಂಗಗಳಲ್ಲಿ ರಷ್ಯನರು ಮುಂದೆ ನುಗ್ಗುತ್ತಲಿದ್ದಾರೆ.

ಜರ್ಮನರು ಸುತ್ತುವರಿಯಲ್ಪಟ್ಟಿದ್ದಾರೆ

ಸ್ಟರಾಯಾ ರಸ್ಸಾ ಸುತ್ತಮುತ್ತ ೯೬೦೦೦ ಮಂದಿ ಜರ್ಮನರು ರಷ್ಯನರಿಂದ ಸುತ್ತುವರಿಯಲ್ಪಟ್ಟಿದ್ದಾರೆ ರಷ್ಯನರು ಅವರನ್ನೆಲ್ಲ ನಾಶಮಾಡುವ ಕಾರ್ಯದಲ್ಲಿ ಉದ್ಯುಕ್ತರಾಗಿದ್ದಾರೆ ಶತ್ರುಗಳ ಈ ಅಪಾರ ಬಲವು ಬೇರ್ಪಡಿಸಲ್ಪಟ್ಟಿರುವುದರಿಂದ ರಷ್ಯನರಿಗೆ ಬಹಳ ಅನುಕೂಲವಾದ ಪರಿಸ್ಥಿತಿಒದಗಿದೆ ಇದನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೆಂದು ಅವರು ಸಂಕಲ್ಪಿಸಿದ್ದಾರೆ ರಷ್ಯನರ ವ್ಯೂಹವನ್ನು ಒಡೆದು ತಪ್ಪಿಸಿಕೊಳ್ಳಲು ಜರ್ಮನರು ನಿಶ್ಚಯಯತ್ನ ಮಾಡುತ್ತಿದ್ದರೂ ಸಾರ್ಥಕವಾಗಿಲ್ಲವೆಂದು ಹೇಳಲಾಗಿದೆ

ಹಿಟ್ಲರನನ್ನು ಜಯಿಸುವ ಉಪಾಯ.

"ಎರಡು ಮೂರು ರಂಗಗಳಲ್ಲಿ ಏಕಕಾಲದಲ್ಲಿ ಹೊಡೆದಾಟವಾರಂಭಿಸುವುದರಿಂದ ಮಾತ್ರ ಹರ್ ಹಿಟ್ಲರನ ಸೇನೆಯನ್ನು ಧ್ವಂಸಮಾಡಲು ಸಾಧ್ಯ ಒಂದೊಂದು ರಂಗಕ್ಕೂ ಬಹಳದೂರ ಅಂತರವಿರಬೇಕ ಇಂತಹ ಕದನವನ್ನು ಹರ್ ಹಿಟ್ಲರನು ಖಂಡಿತ ಅಪೇಕ್ಷಿಸುವುದಿಲ್ಲ' ಎಂಬುದಾಗಿ ರಷ್ಯದರಾಯಭಾರಿಗಳಾದ ಎಂ. ಲಿಟ್ವಿನಾವ್‌ರವರು ಸಾರ್ವಜನಿಕಭಾಷಣದಲ್ಲಿ ತಿಳಿಸಿದರು

ಜಪಾನು ಆಕ್ರಮಿಸಲಿರುವ ಪ್ರದೇಶಗಳು

ಜಪಾನರು ಆಸ್ಟ್ರೇಲಿಯದ ಡಾರ್ವಿನ್ ನಗರದಮೇಲೆ ಮುತ್ತಿಗೆ ನಡೆಸಿರುವುದನ್ನೂ, ಪೋರ್ಚುಗಲ್ ದೇಶಕ್ಕೆ ಸೇರಿದ ಟಿಮೋರ್ ಎಂಬದ್ವೀಪವನ್ನು ಆಕ್ರಮಿಸಿರುವುದನ್ನೂ ನೋಡಿದರೆ, ಆಸ್ಟ್ರೇಲಿಯಾ ದೇಶವನ್ನು ಮುತ್ತುವ ಸೂಚನೆಗಳು ಮತ್ತಷ್ಟು ವ್ಯಕ್ತಪಟ್ಟಂತಾಗಿವೆಯೆಂದು ಹೇಳಬಹುದು ಉತ್ತರ ಆಸ್ಟ್ರೇಲಿಯಾದಲ್ಲಿರುವ ಬಹಳ ಮುಖ್ಯಪ್ರದೇಶಗಳನ್ನು ಆಕ್ರಮಿಸಿಕೊಳ್ಳಬೇಕೆಂಬುದೇ ಜಪಾನಿನ ಉದ್ದೇಶವಾಗಿದೆಯೆಂದು ತೋರುತ್ತದೆ ಆಸ್ಟ್ರೇಲಿಯದ ಪೂರ್ವತೀರದಲ್ಲಿರುವ ಟೌನ್ಸ್‌ವಿಲ್ಲಿ ಮತ್ತು ಕೇರನ್ಸ್ ನಗರಗಳನ್ನೂ ಯಾರ್ಕ್‌ಭೂಶಿರದಾಚೆ ಇರುವ ಥರ್ಸ್ಡೇ ದ್ವೀಪವನ್ನೂ ಪೋರ್ಚುಗೀಸ್ ಟಿಮೋರ್ ದ್ವೀಪಕ್ಕೆ ಕೇವಲ ೪೦೦ ಮೈಲಿದೂರದಲ್ಲಿರುವ ಡಾರ್ವಿನ್ ಬಂದರನ್ನೂ ಆಸ್ಟ್ರೇಲಿಯದ ವಾಯವ್ಯದಿಕ್ಕಿನಲ್ಲಿರುವ ಬ್ರೂಮ್ ಮತ್ತು ವಿಂಡ್ ಹ್ಯಾಂ ಬಂದರುಗಳನ್ನೂ ವಶಪಡಿಸಿಕೊಳ್ಳುವುದೇ ಜಪಾನಿನ ಉದ್ದೇಶವಾಗಿದೆ ಆಸ್ಟ್ರೇಲಿಯದ ಪೂರ್ವತೀರದಲ್ಲಿರುವ ಕೇರನ್ಸ್ ಬಂದರಿನಿಂದ ವಾಯುವ್ಯಗಡಿಯಲ್ಲಿರುವ ಬ್ರೂಮ್ ಬಂದರಿಗೆ ಮಧ್ಯದಲ್ಲಿರುವ ಪ್ರದೇಶವು ನಿರ್ಜನ ಪ್ರದೇಶವಾಗಿದ್ದು ಹೆಚ್ಚು ಜನಸಂಖ್ಯೆ ಇಲ್ಲವಾಗಿದೆ ೪ಲಕ್ಷ ಚದರಮೈಲಿಗಳ ವಿಸ್ತಾರವಿರುವ ಈ ಪ್ರದೇಶದಲ್ಲಿ ಕೇವಲ ೭೦,೦೦೦ಮಂದಿ ಬಿಳಿಯ ಜನರಿದ್ದಾರೆ ಈ ಪ್ರದೇಶವನ್ನು ರಕ್ಷಿಸುವುದು ಬಹಳ ಕಷ್ಟ ಕೇರನ್ಸ್ ನಗರದಲ್ಲಿ ೧೨,೦೦೦ ಪ್ರಜಾಸಂಖ್ಯೆ ಇದೆ ಟೌನ್ಸ್‌ವಿಲ್ಲೆಯಲ್ಲಿ ೨೭,೦೦೦ ಜನರಿದ್ದಾರೆ ಈ ಎರಡು ಊರುಗಳಲ್ಲಿ ಇಟಲಿ ಪ್ರಜೆಗಳು ಕೂಡ ಇದ್ದಾರೆ ಗೂಢಚಾರರಂತೆ ವರ್ತಿಸುವುದಕ್ಕೆ ಇವರಿಗೆ ಬಹಳ ಅನುಕೂಲವಾಗಿದೆ ಈ ತೀರಪ್ರದೇಶಗಳಲ್ಲಿ ಅಲ್ಲಲ್ಲಿ ಕೆಲವು ಮಂದಿ ವಾಸಮಾಡುತ್ತಿದ್ದಾರೆ ಟೌನ್ಸ್‌ವಿಲ್ಲೆ ಮತ್ತು ಕಾರನ್ಸ್‌ನಗರಗಳು ಉತ್ತಮವಾದ ಬಂದರುಗಳಿಂದ ಕೂಡಿವೆ ಥರ್ಸ್ಡೇ ದ್ವೀಪದಲ್ಲಿ ಅನೇಕ ಹಡಗುಗಳು ಬಂದು ಆಶ್ರಯ ಪಡೆಯಬಹುದು ಡಾರ್ವಿನ್ ಬಂದರು ಚೆನ್ನಾಗಿದೆ. ವಿಮಾನಬಲವನ್ನೂ ಕೂಡ ಸ್ಥಾಪಿಸುವುದಕ್ಕೆ ಇಲ್ಲಿ ಅವಕಾಶವಿದೆ ವಿಂಡ್ ಹ್ಯಾಂ ಮತ್ತು ಬ್ರೂಂ ಬಂದರುಗಳೂ ಕೂಡ ವಿಶಾಲವಾಗಿಯೂ ಆಳವಾಗಿಯೂ ಇವೆ ಬ್ರೂಂ ಬಂದರಿನ ಉತ್ತರದಲ್ಲಿರುವ "ಕಿಂಗ್ ಸೌಂಡ್" ಎಂಬ ಬಂದರಿನಲ್ಲಿ ಅನೇಕ ಹಡಗುಗಳೂ ಸಂಗ್ರಾಮ ನೌಕೆಗಳೂ ಬಂದಿಳಿಯಬಹುದು ಈ ತೀರ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುವುದಾದರೆ ಅದರ ಸುತ್ತುಮುತ್ತಲೂ ಇರುವ ಪ್ರದೇಶಗಳನ್ನೂ ಸಮುದ್ರಮಾರ್ಗಗಳನ್ನೂ ಹತೋಟಿಯಲ್ಲಿಟ್ಟುಕೊಳ್ಳಬಹುದು. ಡಾರ್ವಿನ್, ಟೌನ್ಸ್‌ವಿಲ್ಲೆ, ಮತ್ತು ಕಾರನ್ಸ್ ನಗರಗಳಲ್ಲಿ ಉತ್ತಮ ಬಂದರುಗಳಿವೆ. ಬ್ರೂಂ ಮತ್ತು ವಿಂಡ್ ಹ್ಯಾಂ ಬಂದರುಗಳಲ್ಲಿ ಉತ್ತಮ ವಿಮಾನನಿಲ್ದಾಣಗಳಿವೆ ಸಿವಿಲ್ ವಿಮಾನಗಳು ಅಲ್ಲಿ ಬಂದು ನಿಲ್ಲುತ್ತಿವೆ ಕಳೆದ ೨೦ ವರುಷಗಳಿಂದಲೂ ಜಪಾನೀಯರು ಈ ೩೦೦೦ ಮೈಲಿಗಳ ವಿಸ್ತೀರ್ಣದ ಆಸ್ಟ್ರೇಲಿಯದ ಉತ್ತರ ತೀರಪ್ರದೇಶವನ್ನು ಕಣ್ಣಿಟ್ಟುನೋಡಿಕೊಂಡು ಬರುತ್ತಿದ್ದಾರೆ ಪ್ರತಿಯೊಂದು ಸ್ಥಳವನ್ನು ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿದ್ದಾರೆ ಆಸ್ಟ್ರೇಲಿಯದ ಹಿಂಬಾಗಿಲಿಗೆ, ಡಾರ್ವಿನ್ ಬಂದರು ಬೀಗದ ಕೈಯಂತಿದೆ ಇಲ್ಲಿಂದ ಬರ್ಡಂ ವರೆವಿಗೆ ಇರುವ ೩೧೦ ಮೈಲಿ ದೂರದ ರೈಲ್ವೆ ಲೈನನ್ನು ಸುಲಭವಾಗಿ ನಾಶಮಾಡಿಬಿಡಬಹುದು

ಸ್ವೀಕಾರ.

ಸೊಲ್ಲಾಪುರ ನಗರದಲ್ಲಿರುವ ಶ್ರೀಮತಿ ಪಾರ್ವತೀಬಾಯಿ ಚವ್ಹಾಣ ಇವರು ತಮ್ಮ ಪತಿವರ್ಯರಾದ ಕೈ॥ ಚನ್ನಬಸಪ್ಪನವರ ೧೧ ನೆಯ ವಾರ್ಷಿಕ ಶ್ರಾದ್ಧವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಸೊಲ್ಲಾಪುರ ಡಿ॥ ಬಾರ್ಶಿ ಶಹರ ನಿವಾಸಿಗಳಾದ, ಮ॥ ರಾ॥ ಬಾಬು ಪ್ರಭು ಬುರಾಂಡೆ ಮತ್ತು ಶ್ರೀಮತಿ ಗಂಗಾಬಾಯಿ ಬುರಾಂಡೆ ಇವರು ಶ್ರೀರಂಭಾಪುರೀ ಜಗದ್ಗುರುಗಳವರನ್ನು ತಮ್ಮ ಮನೆಗೆ ಬಿಜಮಾಡಿಸಿಕೊಂಡು ಪಾದಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ 1 ರೂ ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ವಿಜಾಪುರ ಡಿ॥ ಗೋವನಕೊಪ್ಪ ಗ್ರಾಮದ ಶ್ರೀಯುತ ಮ॥ ರಾ॥ ಸಂಗಪ್ಪನವರು ಮಾಳವಾಡ ಇವರ ಪುತ್ರ ಚಿ॥ ಸ॥ ಗಂಗಾಧರಪ್ಪ ಇವರಿಗೆ ರಾಮದುರ್ಗದಲ್ಲಿರುವ ಶ್ರೀಯುತ ಮ॥ ರಾ॥ ಶಿವಯೋಗಪ್ಪನವರು ಪಟ್ಟಣದ ಇವರ ಪುತ್ರಿ ಹ॥ ಕುಂ॥ ಚಿ॥ ಸೌ॥ ದಾನಮ್ಮ ಇವರನ್ನು ತಂದು ನಡೆಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರು ಇವರ ದ್ವಾರಾ ತಲ್ಪಿರುತ್ತವೆ

ನೀಲಗಿರಿ ಡಿ॥ ಕುನ್ನೂರು ತಾ॥ ಕೋಟೇರಿ ಮಠಕ್ಕೆ ಮೈಸೂರು ಸಂಸ್ಥಾನ ಶ್ರೀ ಶಿವಪಾದಸ್ವಾಮಿಗಳವರ ಸೋಮೇಶ್ವರಸ್ವಾಮಿ ದೇವಸ್ಥಾನದಲ್ಲಿದ್ದ ಶ್ರೀ ಸಿದ್ಧಲಿಂಗಸ್ವಾಮಿಗಳಿಗೆ ಇದೇ ಫಾಲ್ಗುಣ ಶುದ್ಧ ೩ (18-2 42) ಬುಧವಾರದ ದಿವಸ ನಡೆದಪಟ್ಟಾಧಿಕಾರ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ಪ್ಲಾಂಟರ್ ಮ॥ ರಾ॥ ಬಿ. ಎಂ ನಂಜಯ್ಯನವರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಡಿ॥ ಜೈನಾಪುರದ ಮ॥ ರಾ॥ ಬಸಪ್ಪ ಸಿದ್ದಪ್ಪ ಗಿರಿಗಾಂವಿ ಇವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 1 ರೂಪಾಯಿಯು ಮ॥ ರಾ॥ ಗರಪ್ಪ ಗುರುಬಸಪ್ಪ ಬೆಳ್ಳುಬ್ಬಿ ಜೈನಾಪುರ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪಂಡಿತರ ಆಗಮನ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಶ್ರೀಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಸಂಚಾರವ್ಯವಸ್ಥೆಗಾಗಿ ೧॥ ತಿಂಗಳಿಂದ ಮಹಾರಾಷ್ಟ್ರದೇಶದಲ್ಲಿದ್ದು ನಿನ್ನೆದಿವಸ ರಾಜಧಾನಿಗೆ ಆಗಮಿಸಿದರು.

[೩ನೆಯ ಪುಟದಿಂದ ಮುಂದುವರಿದುದು]

(೪) ಆಹಿತಾಗ್ನಿ— ಅಗ್ನಿಹೋತ್ರ ಬಿಟ್ಟವ

(೫) ಚಾಂದ್ರಾಯಣ— ಶುಕ್ಲಪಕ್ಷದಲ್ಲಿ ಪ್ರತಿಪದೆಯಿಂದ ನವಿಲಿನತತ್ತಿಯ ಪ್ರಮಾಣದ ಒಂದೊಂದು ತುತ್ತನ್ನು ಹೆಚ್ಚಿಸುತ್ತ ಪೌರ್ಣಿಮೆಯದಿವಸ ೧೫ ತುತ್ತುಗಳನ್ನು ತೆಗೆದುಕೊಳ್ಳುವ ಕೃಷ್ಣಪಕ್ಷದಲ್ಲಿ ಒಂದೊಂದು ತುತ್ತುಗಳನ್ನು ಇಳಿಸುತ್ತ ಅಮಾವಾಸ್ಯೆಯದಿವಸ ಉಪವಾಸ ಮಾಡುವುದು ಹೀಗೆ ಒಂದು ಚಾಂದ್ರಮಾಸದಲ್ಲಿ ಮಾಡುವ ಪ್ರಾಯಶ್ಚಿತ್ತವ್ರತಕ್ಕೆ ಚಾಂದ್ರಾಯಣ ವ್ರತವೆನ್ನುವರು.

(೬) ಏಕಪಾದವ್ರತ ಒಂಟಿಗಾಲಿನಿಂದ ನಿಂತು ಮಾಡುವ ತಪಸ್ಸಿಗೆ ಏಕಪಾದವ್ರತವೆನ್ನುವರು.

ಮತ್ತೊಂದು ಸ್ಥಾನದ [illegible] ನೆಲಕ್ಕೂರಿ ಒಂದು ಕಾಲಿನ [illegible] ಎತ್ತಿಕಟ್ಟಿ [illegible] ಮೇಲಕ್ಕೆ ಎರಡೂ ತೋಳುಗಳನ್ನು ನೆಗಹಿ ಸೂರ್ಯ[illegible] ನಿಂತುಕೊಂಡು ಶಿವಮಂತ್ರವನ್ನು ಉಚ್ಚರಿಸುತ್ತ ದೇವರಧ್ಯಾನವನ್ನು ಮಾಡುವರು ಹೀಗೆ ತಪಸ್ಸಿನ ಅನೇಕ ಪ್ರಕಾರಗಳಿರುವವು

ದುಃಖವಾರ್ತೆ

ವಿಜಾಪುರ ಜಿಲ್ಲೆ [illegible]ಪುರದ ವೆ|| ಒಸಪ್ಪಾ ಸಿದ್ದಪ್ಪಾ [illegible] ಇವರು ತಾ|| [illegible] ದಿವಸ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ವಿಷಾದವೆನಿಸುತ್ತದೆ ಇವರು ಸದಾಚಾರಸಂಪನ್ನರೂ ಸತ್ಯಸಂಧರೂ ಗುರುಜಂಗಮ ಪ್ರೇಮಿಗಳೂ ಪರೋಪಕಾರಿಗಳೂ ಆಗಿದ್ದರು ಮೃತರಿಗೆ ಮರಣ ಕಾಲದಲ್ಲಿ ೬೫ ವರುಷ ವಯಸ್ಸಾಗಿದ್ದಿತು ಇವರ ಅಗಲಿಕೆಯಿಂದ ಸಮಾಜವವರೂ ಅವರ ಏಕಮಾತ್ರಪುತ್ರರೂ ಬಂಧು ಬಾಂಧವರೂ ಬಹಳ ದುಃಖಿತರಾಗಿದ್ದಾರೆ ಮೃತರ ಅಂತ್ಯಕಾಲಕ್ಕೆ ನೂರಾರು ಜನರು ನೆರೆದಿದ್ದರು ಪ್ರಭಾಪ್ರೋತ್ಸಾಹಣಕ್ಕಾಗಿ 1 ರೂಪಾಯಿಯ ಸಹಾಯ ಸಲ್ಲಿಸಲ್ಪಟ್ಟಿತು ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಬಂಧು ಬಾಂಧವರಿಗೆ ದುಃಖ ಶಮನವನ್ನೂ ಇತ್ತು ರಕ್ಷಿಸಲೆಂದು ಪ್ರಾರ್ಥಿಸುವ

[illegible] ದುಃಖಭಾಗಿ

ಮೈಸೂರು ಕೈಗಾರಿಕೆಗಳೂ ಮತ್ತು ಯುದ್ಧವೂ

ಸರಕಾರದವರ ಆಡಳಿತಕ್ಕೊಳಪಟ್ಟಿರುವ ಹಲವು ಕೈಗಾರಿಕಾ ಸಂಸ್ಥೆಗಳು ಯುದ್ಧಕ್ಕೆ ಬೇಕಾಗುವ ವಸ್ತುಗಳನ್ನು ಒದಗಿಸಲು ಒಪ್ಪಿ [illegible] ಆರ್ಡರುಗಳನ್ನು ತೆಗೆದುಕೊಂಡಿವೆ [illegible] ಬೇಕಾದ ವಸ್ತುಗಳನ್ನು ತಯಾರಿಸುವ ವಿಷಯದಲ್ಲಿ ಸರ್ಕಾರದ ವಿದ್ಯುಚ್ಛಕ್ತಿಯ ಕಾರ್ಖಾನೆಯವರು ನಡೆಸಿದ ಸಂಶೋಧನೆಗಳು ಮುಗಿದಿವೆ ಈಗ ತಯಾರಿಸಿರುವ ಮಾದರಿ ವಸ್ತುಗಳು ಸಮರ್ಪಕವಾಗಿವೆ ಎಂದು ಕಂಡು ಬಂದಿದೆ ಆಯುಧಗಳು ಮತ್ತು ಸಪ್ಲೈ ಇಲಾಖೆಯವರಿಗೂ ಇತರ ಸಾರ್ವಜನಿಕ ಸಂಸ್ಥೆಗಳಿಗೂ, ಟ್ರಾನ್ಸ್‌ಫಾರ್ಮರುಗಳನ್ನು ಒದಗಿಸುತ್ತಿದೆ ಆಯುಧಗಳ ಇಲಾಖೆಯವರು ಕೋರಿದ ಇತರ ವಸ್ತುಗಳನ್ನು ಸಮರ್ಪಕವಾದ ರೀತಿಯಲ್ಲಿ ತಯಾರಿಸಿ ಒದಗಿಸಲಾಯಿತು ಇನ್ನೊಂದು ಸಂದರ್ಭದಲ್ಲಿ ಮಾದರಿಗಾಗಿ ಕೆಲವು ವಸ್ತುಗಳನ್ನು ತಯಾರಿಸಿ ಸಪ್ಲೈ ಇಲಾಖೆಯವರಿಗೆ ಕಳುಹಿಸುತ್ತಿದೆ ಬರುವ ಮೂರು ತಿಂಗಳುಗಳಲ್ಲಿ 3 ಲಕ್ಷ ಬಾಚಣಿಗೆಗಳನ್ನು ಒದಗಿಸಬೇಕೆಂದು ಸಪ್ಲೈ ಇಲಾಖೆಯವರಿಂದ ಒಂದು ಆರ್ಡರು ಬಂದಿದೆ.

ಬಿಸಿಯಾದ ಆಹಾರ ವಸ್ತುಗಳನ್ನು ತೆಗೆದುಕೊಂಡು ಹೋಗಲು ಕ್ಯಾರಿಯರುಗಳು, ಬೇಕಲೈಟುಗುಂಡಿಗಳು, ಟೇಬಲ್ ಚಾಕುಗಳ ಹಿಡಿಗಳು, ಇವೇ ಮೊದಲಾದುವನ್ನು ತಯಾರಿಸುವ ವಿಷಯದಲ್ಲಿ ಪರಿಶೀಲನೆಗಳನ್ನು ನಡೆಯಿಸಲಾಯಿತು. ಸಂಗ್ರಾಮ ವಸ್ತುಗಳ ಕಾರ್ಖಾನೆಗಳವರು, ಕೇಳಿದ ಆಸಿಡ್ ರೆಸಿಸ್ಟೆಂಟು ವಸ್ತುಗಳಲ್ಲಿ ಬಹುಮಟ್ಟಿನ ಪ್ರಮಾಣವನ್ನು ಸರ್ಕಾರದ ಪಿಂಗಾಣಿ ಕಾರ್ಖಾನೆಯವರು ಈಗಾಗಲೇ ಒದಗಿಸಿರುತ್ತಾರೆ ಪಿಂಗಾಣಿಯ ಕೆಲವು ಬಗೆಯ ತಟ್ಟೆ ಬಟ್ಟಲು ಮುಂತಾದ ಸಾಮಾನುಗಳನ್ನು ಒದಗಿಸಲೂ ಆರ್ಡರು ಬಂದಿದೆ ಟೆಲಿಫೋನ್ ಮತ್ತು ಟೆಲಿಗ್ರಾಫ್ ಸರ್ವಿಸುಗಳಿಗೆ ಬೇಕಾದ ಇನ್ಸುಲೇಟರುಗಳನ್ನು ಕ್ರಮವಾಗಿ ಒದಗಿಸುತ್ತಿದೆ

ಸೊಳ್ಳೆಗಳನ್ನೋಡಿಸುವ ಔಷಧಿಯೊಂದರ ಮಾದರಿಗಳನ್ನು (ಕ್ರೀಂ) ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗು ಲ್ಯಾಬೊರೆಟರಿಯವರು ತಯಾರಿಸಿ, ಇಂಡಿಯನ್ ಮೆಡಿಕಲ್ ಸರ್ವಿಸಿನ ಡೈರೆಕ್ಟರ್ ಜನರಲ್‌ರವರ ಅವಗಾಹನೆಗಾಗಿ ಕಳುಹಿಸಿದ್ದಾರೆ ಸಪ್ಲೈ ಇಲಾಖೆಯವರಿಗೆ ಬೇಕಾದ ಪೊಟಾಸಿಯಂ ಬೈಟಾರ್ಟರೇಟ ಎಂಬ ವಸ್ತುವನ್ನು ತಯಾರಿಸಲು ಏರ್ಪಾಡುಮಾಡಿದೆ

ಸರ್ಕಾರದ ಡೈಕ್ರೋಮೇಟು ಕಾರ್ಖಾನೆಯಲ್ಲಿ ಹೆಚ್ಚಿನ ಡೈಕ್ರೋಮೇಟನ್ನು ತಯಾರಿಸುತ್ತಿದೆ ಹೆಚ್ಚಿನ ಡೈಕ್ರೊಮೇಟನ್ನು ಸಪ್ಲೈ ಇಲಾಖೆಯವರಿಗೆ ಒದಗಿಸುತ್ತಿದೆ

ಮೈಸೂರು ರೇಷ್ಮೆ ನೆಯಿಗೆಯ ಕಾರ್ಖಾನೆಯವರು ಪ್ಯಾರಾಚೂಟುಗಳನ್ನು ತಯಾರಿಸಲು ಬೇಕಾಗುವ ರೇಷ್ಮೆಯ ಬಟ್ಟೆಯೊಂದನ್ನು ಸಪ್ಲೈ ಇಲಾಖೆಯವರು ಒಪ್ಪಿರುತ್ತಾರೆ ಪ್ಯಾರಾಚ್ಯೂಟುಗಳಿಗೆ ಬೇಕಾದ ರೇಷ್ಮೆಯ ವಸ್ತ್ರಗಳನ್ನು ತಯಾರಿಸಲು ಬಂದಿರುವ ಆರ್ಡರಿನ ಮೇರೆಗೆ ವಸ್ತುಗಳನ್ನು ತಯಾರಿಸಿ ಒದಗಿಸುತ್ತಿದೆ

ಕೆಮಿಕಲ್ ಮತ್ತು ಫರ್ಟಿಲೈಸರ್ಸ್ ಕಂಪೆನಿಯವರು ತಕ್ಕ ಪ್ರಮಾಣದಲ್ಲಿ ಅಮೋನಿಯಂ ಸಲ್ಫೇಟು ಮತ್ತು ಸಲ್ಫ್ಯೂರಿಕ್ ಆಸಿಡನ್ನು ತಯಾರಿಸಿ ಒದಗಿಸಿರುತ್ತಾರೆ ಲಿಕ್ವಿಡ್ ಆಫ್ ಅಮೋನಿಯಾ ಮತ್ತು ಸಲ್ಫ್ಯೂರಿಕ್ ಆಸಿಡ್ಡುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲು ಏರ್ಪಾಡು ಮಾಡಿದೆ

ನೂರು ವರ್ಷಗಳಕಾಲ ಬದುಕುವುದು ಹೇಗೆ?

ವಾಷಿಂಗ್ಟನ್ ನಗರದ ಮೇರಿ ಆಫ್ ಹೇಡರ್ಸ್ ಎಂಬಾಕೆಯ ಭವನದಲ್ಲಿ ನಡೆದ ಒಂದು ಟೀ ಪಾರ್ಟಿಯಲ್ಲಿ ಅಲ್ಲಿಗೆ ಬಂದಿದ್ದ ಡೆಪ್ಯೂರವರು ಹೇಳಿದುದೇನೆಂದರೆ, "ಅನೇಕ ವರ್ಷಗಳ ಹಿಂದೆ ಪ್ಯಾರಿಸ್ ನಗರದಲ್ಲಿ ಪ್ರಸಿದ್ಧ ಫ್ರೆಂಚ್ ಶಾಸ್ತ್ರಜ್ಞನೊಬ್ಬನ ೧೦೦ ನೆಯ ವರ್ಷದ ವರ್ಧಂತ್ಯುತ್ಸವಕ್ಕಾಗಿ ನಡೆದ ಔತಣದಲ್ಲಿ, ನಾನೂ ಸೇರಿದ್ದುದಾಗಿಯೂ, ಆಗ ಅಲ್ಲಿದ್ದ ಶಾಸ್ತ್ರಜ್ಞನನ್ನು ಕುರಿತು ಅವನು ಅಷ್ಟು ವರ್ಷಗಳ ಕಾಲ ಬದುಕುವುದಕ್ಕೆ ಉಪಾಯವೇನೆಂದು ತಾನು ಕೇಳಿದುದಕ್ಕೆ ಅವನು ಮುಂದೆ ಹೇಳುವ ಉತ್ತರವನ್ನು ಕೊಟ್ಟನೆಂದಾಗಿಯೂ ಹೇಳಿದರು ಆ ಉತ್ತರವೇನೆಂದರೆ—

ನಾನು ಚಿಂತೆಯೆಂಬುದನ್ನೇ ಅರಿಯೆನು ನನ್ನ ತಂದೆಯು ಗೋಬೆಲಿನ್ ಕಾರಖಾನೆಯಲ್ಲಿ ರಸಾಯನ ಶಾಸ್ತ್ರಜ್ಞನು. ಅವನ ಮರಣಾನಂತರದಲ್ಲಿ ನಾನೂ ಅದೇ ಕೆಲಸವನ್ನು ಕೈಗೊಂಡೆನು ಆದುದರಿಂದ ಹಣ ಸಂಪಾದನೆಗಾಗಿ ಚಿಂತಿಸಬೇಕಾದ ಅವಶ್ಯಕತೆಯು ನನಗೆ ಯಾವಾಗಲೂ ಇರಲಿಲ್ಲ ಮತ್ತು ನಾನು ಬಹಳ ಮಿತವಾಗಿ ಖರ್ಚು ಮಾಡತಕ್ಕವನು ಮಾಂಸವನ್ನು ತಿನ್ನುವವನಲ್ಲ. ಬೀಡಿ, ಚುಟ್ಟಾ, ವಗೈರೆಗಳನ್ನು ಸೇದುವುದಿಲ್ಲ ಮದ್ಯಪಾನವನ್ನಾಗಲಿ ಟೀ, ಕಾಫಿಗಳನ್ನಾಗಲಿ ಕುಡಿಯತಕ್ಕವನಲ್ಲ'

ಆ ಶಾಸ್ತ್ರಜ್ಞನು ಹೇಳಿದುದು ವಾಸ್ತವವೆಂಬುದು ಸ್ವಂತ ಅನುಭವದಿಂದ ನನಗೂ ತಿಳಿದುಬಂದಿದೆ ನಾನೂ ಊಟವಾದ ವೇಳೆ ಉಪನ್ಯಾಸ ಮಾಡತಕ್ಕವನಾದ್ದರಿಂದ ನನ್ನನ್ನೂ ಎಷ್ಟೋ ಮಂದಿ ಔತಣಕ್ಕೆ ಕರೆಯುವರು ಆದರೂ ಅಂತಹ ಸಂದರ್ಭಗಳಲ್ಲಿ ಆ ಅತಿಥಿಗಳಿಗಾಗಿ ತಯಾರಿಸಿದ ತಿಂಡಿಯ ಪದಾರ್ಥಗಳೊಂದನ್ನೂ ನಾನು ಸೇವಿಸುತ್ತಿರಲಿಲ್ಲ ನನಗೆ ಯಾರಾದರೂ ಸಿಗರೇಟನ್ನು ಕೊಡುವುದಕ್ಕೆ ಬಂದಾಗ "ಚುಟ್ಟಾ ಸೇದುವುದರಿಂದ ನನ್ನ ದೇಹವು ಕೆಡುವುದಕ್ಕೆ ಪ್ರಾರಂಭಿಸಿತು ಆದುದರಿಂದ ಅದನ್ನು ಬಿಟ್ಟುಬಿಟ್ಟೆನು" ಎಂದು ಹೇಳಿಬಿಡುತ್ತಿದ್ದೆನು ಎಂದು ಡಿಪ್ಯೂರವರು ನನ್ನೊಡನೆ ಹೇಳಿದರು

ಚುಟ್ಟಾ ಸೇದುವ ಪ್ರತಿ ಮನುಷ್ಯನಿಗೂ ಈ ವಿಷಸಂಸರ್ಗವುಂಟಾಗಿ ದೇಹವು ನೀರಸವಾಗಿರುವುದು ತಮ್ಮ ದೇಹದೊಳಕ್ಕೆ ವಿಷವು ಸೇರುವುದೆಂಬ ಜ್ಞಾನವು ಅನೇಕರಿಗಿದ್ದರೂ ಡೆಪ್ಯೂರವರ ಉದಾಹರಣೆಯನ್ನು ಅನುಸರಿಸತಕ್ಕವರು ಮಾತ್ರ ಕಡಿಮೆ ಡೆಪ್ಯೂ ಚುಟ್ಟಾ ಸೇದುವುದನ್ನು ಬಿಟ್ಟು ತಮ್ಮ ಆಹಾರವನ್ನು ಬದಲಾಯಿಸಿದುದರಿಂದಲೇ ಸುಮಾರು ೨೦ ವರ್ಷಗಳ ಕಾಲ ಹೆಚ್ಚಾಗಿ ಬದುಕಿದರೆಂದು ಧಾರಾಳವಾಗಿ ಹೇಳಬಹುದು. ಅವರು ಇನ್ನೂ ಚಿಕ್ಕ ವಯಸ್ಸಿನಲ್ಲಿಯೇ ಈ ಎರಡು ಉತ್ತಮ ಪದ್ಧತಿಗಳನ್ನು ರೂಢಿಗೆ ತಂದಿದ್ದಲ್ಲಿ ಈಗಲೂ ಇನ್ನೂ ಜೀವಂತರಾಗಿದ್ದು, ತನ್ನ ನೂರನೆಯ ವರ್ಷವನ್ನೂ ಕಳೆಯುತ್ತಿದ್ದರೆಂದು ಹೇಳಬಹುದು

ದಿವಂಗತನಾದ ವಾನಮಾಲ್ಟ್ಕೆ ಎಂಬಾತನನ್ನು ಆತನ ತೊಂಬತ್ತನೆಯ ವಯಸ್ಸಿನಲ್ಲಿ ಅಷ್ಟು ಆರೋಗ್ಯಶಾಲಿಯಾಗಿಯೂ ಬಲಶಾಲಿಯಾಗಿಯೂ ಇರುವುದಕ್ಕೆ ಅನುಸರಿಸಿದ ಉಪಾಯವೇನೆಂದು ಕೇಳಲು, " ಸಕಲ ವಿಷಯಗಳಲ್ಲಿಯೂ ಮಿತವಾಗಿರುವೆನು ಮತ್ತು ಪ್ರತಿದಿನವೂ ಮೈದಾನಗಳಲ್ಲಿ ಅಂಗಸಾಧನೆಗಳನ್ನು ಮಾಡುವೆನು' ಎಂದನು

ಮಾದಕದ್ರವ್ಯಗಳಸೇವನೆಯನ್ನು ನಿಷೇಧಿಸುತ್ತಿದ್ದವರಲ್ಲಿ ಅಗ್ರಗಣ್ಯನಾದ ನೀಲ್ ಡೋ ಎಂಬಾತನು ಕೋಪತಾಪಗಳನ್ನೂ, ಚಳಿಗಾಳಿಗೆ ಮೈಯೊಡ್ಡುವುದನ್ನೂ ಬಿಟ್ಟು ಜೀರ್ಣಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಿರುವುದರಿಂದಲೇ ತಾನು ಅಷ್ಟು ದೀರ್ಘಕಾಲ ಬದುಕಿರುವುದಾಗಿ ಹೇಳುತ್ತಿದ್ದನು

ಸರ್ ಇಸಾಕ್ ಹೋಲ್ಡನ್ ಎಂಬಾತನು ತಾನು ಹಣ್ಣು ಹಂಪಲುಗಳನ್ನೇ ವಿಶೇಷವಾಗಿ ಸೇವಿಸುತ್ತ ರೊಟ್ಟಿಯೇ ಮುಂತಾದ ಪಿಷ್ಟ ಪದಾರ್ಥಗಳೊಂದನ್ನೂ ಸೇವಿಸದಿದ್ದುದೇ ತಾನು ದೀರ್ಘಕಾಲ ಬದುಕುವುದಕ್ಕೆ ಕಾರಣವೆಂದು ಹೇಳಿದನು.

ಜೂವೆಟ್ ಎಂಬಾತನು ದೀರ್ಘಕಾಲ ಬದುಕುವುದಕ್ಕೆ ಯಾವುದಾದರೊಂದು ಮಹಾ ಕಾರ್ಯವನ್ನು ಕೈಕೊಂಡು ನಡೆಸುತ್ತಿರುವುದು ಒಂದು ಉತ್ತಮೋಪಾಯವೆಂದನು

ಡಾಕ್ಟರ್ ಸ್ಟೀವನ್ ಸ್ಮಿತ್ ಎಂಬಾತನು ಒಂದು ಶತಮಾನಕ್ಕೆ ಕೆಲವು ತಿಂಗಳುಗಳು ಕಾಲಮಾತ್ರ ಕಡಿಮೆಯಾಗಿ ಬದುಕಿದ್ದನು ಆತನು ಚುಟ್ಟವಗೈರೆಗಳನ್ನು ಸೇದುತ್ತಿರಲಿಲ್ಲ ಮಾದಕ ದ್ರವ್ಯಗಳನ್ನು ಪಾನಮಾಡುತ್ತಿರಲಿಲ್ಲ ಕಾಫಿ, ಟೀ ಮುಂತಾದವುಗಳನ್ನು ಬಹು ಮಿತವಾಗಿ ಸೇವಿಸುತ್ತಿದ್ದನು ಆತನಿಗೆ ಹಾಲು, ರೊಟ್ಟಿ ಇವುಗಳನ್ನು ಬಿಟ್ಟು ಮತ್ತಾವ ಪದಾರ್ಥವನ್ನು ಸೇವಿಸಿದರೂ ಮಲವು ಬಂಧಿಸಿಹೋಗುತ್ತಿದ್ದುದರಿಂದ, ತನ್ನ 60ನೆಯ ವಯಸ್ಸು ದಾಟುವವರೆಗೂ ಅವೆರಡು ಪದಾರ್ಥಗಳನ್ನು ಮಾತ್ರ ಸೇವಿಸಿ ಬದುಕುತ್ತಿದ್ದನು ಆತನು ಹೇಳುತ್ತಿದ್ದುದೇನೆಂದರೆ "ಶೀಘ್ರವಾಗಿ ಗುಣವಾಗದ ಯಾವುದಾದರೂ ವ್ಯಾಧಿಯು ಪ್ರಾಪ್ತವಾಗಿ ಅದು ಗುಣವಾಗುವುದಕ್ಕಾಗಿ ತಕ್ಕ ಚಿಕಿತ್ಸೆಗಳನ್ನು ಹೊಂದುತ್ತಿದ್ದರೂ ಬಹಳಕಾಲ ಬದುಕಬಹುದೆಂದು" ಹೇಳುತ್ತಿದ್ದನು

ಅಮೆರಿಕದ ಪ್ರೆಸಿಡೆಂಟರಾಗಿದ್ದ ಅಬ್ರಹಾಮ್ ಲಿಂಕನ್ ಎಂಬಾತನು, ತನ್ನ ಸ್ನೇಹಿತನೊಬ್ಬನಿಗೆ ದೀರ್ಘಕಾಲ ಬದುಕಲು ಈ ಕೆಳಗೆ ಕಂಡ ಸೂಚನೆಗಳನ್ನು ಕೊಟ್ಟನು "ಚಿಂತೆಯನ್ನು ಬಿಟ್ಟುಬಿಡು! ದಿನಕ್ಕೆ ಮೂರಾವರ್ತಿ ಊಟಮಾಡು! ಪ್ರತಿದಿನವೂ ದೇವರನ್ನು ಪ್ರಾರ್ಥಿಸು! ನಿನ್ನಲ್ಲಿ ವ್ಯವಹಾರಮಾಡತಕ್ಕವರೊಡನೆ ಮೃದುವಾಗಿ ಮಾತನಾಡು! ನಿನ್ನ ಜೀರ್ಣಶಕ್ತಿಯನ್ನು ಕ್ರಮಪಡಿಸಿಕೋ ಸಿಟ್ಟೋದ್ರೇಕಕ್ಕೆ ಅವಕಾಶ ಕೊಡದಿರು. ನಿಧಾನವಾಗಿ ಸುಲಭವಾದ ವ್ಯಾಯಾಮವನ್ನು ಮಾಡು."

ಈಗ ಕೈಗಾರಿಕೆ, ವಸ್ತುನಿರ್ಮಾಣ, ವ್ಯವಸಾಯ, ವ್ಯಾಪಾರ ಮುಂತಾದವುಗಳಿಗೆ ವಿಜ್ಞಾನಶಾಸ್ತ್ರಜ್ಞಾನವನ್ನು ಉಪಯೋಗಿಸುತ್ತಿರುವಂತೆ, ಅದನ್ನು ಮನುಷ್ಯರ ಜೀವನ ಪದ್ಧತಿಗೂ ಅನ್ವಯಿಸಿ ನಡೆದರೆ, ಒಂದು ಶತಮಾನವಲ್ಲ! ಎರಡು ಶತಮಾನಗಳ ಕಾಲವಾಗಲಿ, ಇನ್ನೂ ಹೆಚ್ಚು ಕಾಲವಾಗಲಿ ಬದುಕಲು ಸಾಧ್ಯವಾಗಬಹುದು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಬೋಧನದಲ್ಲಿರುವ ಶಕ್ತಿಯೊಂದು ಗುರುವರ್ಗದ ಮಕ್ಕಳಿ ನವರು ಶಿಷ್ಯರ ಮನೆಗೀಯುತ್ತಿದ್ದು, ಆ ಮಠಾಧಿಕಾರಿಗಳು ವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯ ದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ವನ್ನು ಒದಗಿಸಿಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಗುತ್ತಿರುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿ ಗೆ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇವನ್ನು ರಿಹಾರಮಾಡುವುದಕ್ಕೋಸ್ಕರ ಈ ಹೊಸರೀತಿಯ ಪುಸ್ತಕವನ್ನು ಹೊಸ ಗಿ ಮುದ್ರಿಸಿಕೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವರವಾಗಿ ತೋರಿಸಲ್ಪಟ್ಟಿವೆ. ಆದುದರಿಂದ ಸದರಿ ಪುಸ್ತಕ ನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ಖರೀದಿಸಿಕೊಂಡು ದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಮಠಪಾರಂಪರ್ಯವಾಗಿ ವ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಮಾ ಶಿವದಂಥ ಕಾಗದ [illegible] ಬೈಂಡು ಮಾಡಿಸಲ್ಪಟ್ಟ [illegible] ದ ಮತ್ತು ಭದ್ರವಾದ [illegible] ಪಾರಾಸಿ

ಬೆಲೆ ೧ ರೂಪಾಯಿ
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೬—೦
ಮುಕ್ತಾಭಸ್ಮ	೧	೬೦—೦—೦
ಅಭ್ರಕಭಸ್ಮ	೧	೩—೦—೦
ಂತ್ರಾಳಭಸ್ಮ	೧	೦—೮—೦
ಚಿನಭಸ್ಮ	೧	೦—೬—೦
ಸ್ತ್ರಭಸ್ಮ	೧	೦—೨—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ವೈಕ್ರಾಂತಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೬—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೬—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೨—೮—೦

ನೋಟ್— ಈ ಔಷಧಾಲಯದಲ್ಲಿ ಸರ್ವಪ್ರಕಾರದ ರಸ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು.ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮನೋಜ್ಞವಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ; ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಸಹಿತ ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿದೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಧೈರ್ಯಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬಿಳುಪುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿಂಗಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಶಿಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಪ್ರಸಿದ್ಧರಾದ ಅಗಸ್ತ್ಯ, ದಧೀಚಿ ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಟಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಪ್ರಾಸಾದದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರ ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—೩ ರ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂದು ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ.ಪಿ ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[39] ಪೋ॥ ಬಾ ೫೧೦, ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ಮುಖಪತ್ರದ ಫೋಟೋಗಳುಳ್ಳದ್ದು)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೬೨೬ ಪುಟ)	೮ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
[illegible] (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಮಾರ್ಚಿ ೧೯೪೨ [ಸಂಚಿಕೆ ೪೫

ಶ್ರೀಜಗದಾಚಾರ್ಯರ ಜಯಂತೀಮಹೋತ್ಸವಗಳು

ಕೊಟ್ಟೂರು

ಬಳ್ಳಾರಿ ಡಿ॥ ಕೂಡ್ಲಿಗಿ ತಾ॥ ಕೊಟ್ಟೂರುನಗರದಲ್ಲಿ ಶ್ರೀಗುರುಪಟ್ಟದ ಭೂತಭುಜಂಗಸ್ವಾಮಿಗಳವರಿಂದ ಸ್ಥಾಪಿತವಾದ ಶ್ರೀರೇಣುಕಾಚಾರ್ಯ ಸಂಸ್ಕೃತಪಾಠಶಾಲೆಯಲ್ಲಿ ಇದೇ ಫಾಲ್ಗುನ ಶುದ್ಧ ೧೪ (ತಾ॥ 1 3 42)ನೇ ಭಾನುವಾರ ಪಾಠಶಾಲಾಧ್ಯಾಪಕರಾದ ವೇ॥ ಪಿ ಎಂ ಶಿವಪ್ರಸಾದಶಾಸ್ತ್ರಿಗಳು ವೇ॥ ಪ್ರಭುಒಡೆಯರ ಮರಿಮಲ್ಲಾರಾಧ್ಯರು ಪಾಠಶಾಲಾ ವಿದ್ಯಾರ್ಥಿಗಳೊಡನೆ ತಳಿರು ತೋರಣರಂಭಾಸ್ತಂಭಾದ್ಯಲಂಕೃತವಾದ ದಿವ್ಯಮಂಟಪದಲ್ಲಿ ಜಗದ್ಗುರುಗಳ ಭವ್ಯಮೂರ್ತಿಯನ್ನು ಸ್ಥಾಪಿಸಿದರು ಅಷ್ಟರಲ್ಲಿಯೇ ಪುರಪ್ರಮುಖರು ಸನ್ನಿಹಿತರಾದರು ವೇದಾಧ್ಯಯನಪೂರ್ವಕ ವಿಧ್ಯುಕ್ತವಾಗಿ, ಪೂಜೆಯು ನೆರವೇರಿಸಲ್ಪಟ್ಟಿತು ಈ ಮಹಾಕಾರ್ಯದಲ್ಲಿ ಬಿ ಕುಮಾರಗೌಡನೆಂಬ ಹೈಸ್ಕೂಲ್ ವಿದ್ಯಾರ್ಥಿಯು ವಿಶೇಷಭಾಗವಹಿಸಿ ಭಕ್ತಿಪೂರ್ವಕಕೆಲಸಗಳನ್ನು ಮಾಡಿದನು ತರುವಾಯ ಸಾಯಂಕಾಲ 6 ಘಂಟೆಯಿಂದ ಪಾಠಶಾಲಾವಿದ್ಯಾರ್ಥಿಗಳ ಭಜನೆಯೊಡನೆ ಶ್ರೀಜಗದ್ಗುರುಮೂರ್ತಿಯ ಉತ್ಸವವು ನೆರವೇರಿತು ಬಳಿಕ ಪಾಠಶಾಲಾ ಶಾಸ್ತ್ರಿಗಳು ಶ್ರೀರೇಣುಕರ ಮಹಿಮಾತಿಶಯವನ್ನು ಬೋಧಿಸಿದರು ಪ್ರ॥ ಮ॥ ಮರಿಆರಾಧ್ಯರೂ ಸಹ ಪ್ರಭೆಯಲ್ಲಿ ಪ್ರಕಟಿತವಾದ ಶ್ರೀರೇಣುಕಜಯಂತೀ ಮಹಿಮಾವಿಷಯವನ್ನು ಸರ್ವರಿಗೂ ತಿಳಿಯುವಂತೆ ಓದಿಹೇಳಿದರು ಅನಂತರ ಶ್ರೀಜಗದ್ಗುರು ಪಂಚಾಚಾರ್ಯಮಹಾರಾಜಕೀ ಜೈ ಎಂಬ ಜಯಘೋಷದೊಡನೆ ಸಭಾಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು ಗುರುಕಾರ್ಯದಲ್ಲಿ ಭಾಗವಹಿಸಿದ ಸರ್ವರಿಗೂ ಶ್ರೀಜಗದಾಚಾರ್ಯರು ಇತೋಽತಿಶಯವಾದ ಸಂಪತ್ತಿಯನ್ನನುಗ್ರಹಿಸಲೆಂದು ಪ್ರಾರ್ಥಿಸುವ,

ವೀರಶೈವಮಂಡಲಿ, ಕೊಟ್ಟೂರು

ರಾಮಪುರ

ಅರಸೀಕೆರೆ ತಾಲೂಕು ರಾಮಪುರದ ಗುರುಭಕ್ತಾಗ್ರಣಿಗಳೂ, ಆರಾಧ್ಯ ಪೀಠಾಭಿಮಾನಿಗಳೂ ಆದ ಪಟೇಲ್ ರಾಮಣ್ಣೆಗೌಡರು ಮಾಮೂಲಿನಂತೆ ಇದೇ ಫಾಲ್ಗುನ ಶು॥ ೧೪ ತಾ॥ 1-3-42 ನೇ ಭಾನುವಾರ ಗ್ರಾಮದ ಮುಖಂಡರಿಂದಲೂ ನೆರೆ ಗ್ರಾಮದ ಮುಖಂಡರಿಂದಲೂ ಸಮ್ಮಿಳಿತರಾಗಿ ಶ್ರೀಲಿಂಗೋದ್ಭವ ಮೂರ್ತಿಗೆ ಮಹಾರುದ್ರಾಭಿಷೇಕಾದಿಗಳನ್ನು ಬಹು ಭಕ್ತಿಯಿಂದ ನೆರವೇರಿಸಿ ಸಾವಿರಾರು ಜನಗಳ ಸಮುದಾಯದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಉತ್ಸವವನ್ನು ನೆರವೇರಿಸಿದರ ತರುವಾಯ ಹುಂಬಾಪುರದಲ್ಲಿರುವ ರಾರ್ಜವಳ್ಳಿ ಶ್ರೀ ಪಟ್ಟಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು ಹೊನ್ನವಳ್ಳಿ ಇನ್ಸ್‌ಪೆಕ್ಟರ್ ಸಬ್ ಅ॥ ಸರ್ಜನ್ ಎಂ ಸಿ ನಂಜಪ್ಪ ಎಲ್ ಯಂ ಪಿ ಇವರು ವೀರಶೈವಧರ್ಮಗ್ರಂಥಗಳ ಮೇಲೂ ಹಾಗೂ ಆಚಾರ್ಯ ಪೀಠಗಳ ಪುರಾತನತ್ವದ ಮೇಲೂ ಭಾಷಣಮಾಡಿ ಅವರ ಲೀಲಾಮಹಿಮೆಗಳನ್ನು ನೆರದಿರುವ ಶ್ರೋತೃವೃಂದಕ್ಕೆ ವಿವರವಾಗಿ ತಿಳಿಸಿದರು ಅನಂತರ ಮಹದೇವಶಾಸ್ತ್ರಿಗಳವರು ವೀರಶೈವಮತದ ಬಗ್ಗೆ ಭಾಷಣಮಾಡಿದರು

ಹೊನ್ನವಳ್ಳಿ ಗ್ರಾ॥ ಸಿದ್ಧಲಿಂಗಪ್ಪನವರು, ಕೆಂಗಲಾಪುರದ ವೇ॥ ಮರಿದ ಮರುಳಯ್ಯನವರ, ಮ॥ರಾ॥ ಸ್ಕೂಲುಮಾಸ್ಟರ ಸಿದ್ಧಲಿಂಗಪ್ಪನವರು, ಮ॥ ರಾ ಸಿದ್ಧರಾಮೇಗೌಡರು, ನಂಜೆಗೌಡರು ಸೂಸಿನಾಳದ ಮುದ್ದುಮಲ್ಲಪ್ಪನ ಪುರಲೆಗೌಡರು, ಮೇಳೇನಹಳ್ಳಿ ಚಿಕ್ಕೀಮಲ್ಲಪ್ಪನವರು ಒಕ್ಕಲಿಗರು ದೂರವಿದ್ದಾಗ್ಯೂ ಶ್ರಮೆಯನ್ನು ಲಕ್ಷಿಸದೆ ಬಂದು ಶ್ರೀಮದಾಚಾರ್ಯರ ಸೇವೆಯನ್ನು ಮಾಡಿದುದು ಸ್ತೋತ್ರಾರ್ಹವಾಗಿದೆ ಈ ಗ್ರಾಮದ ಹೆ॥ ಮಾ॥ ಸ್ಮಾರ್ತಬ್ರಾಹ್ಮಣರಾದ ಎ ವಿ ವೆಂಕಟಸುತಯ್ಯನವರ ವಿಶೇಷ ಶ್ರದ್ಧೆಯಿಂದ ಈ ಜಯಂತಿಯಲ್ಲಿ ಭಾಗಿಗಳಾಗಿದ್ದರು ಅ॥ಮಾ॥ ಸಿದ್ಧಪ್ಪನವರ ಭಜನ ಸಂಘದವರೊಂದಿಗೆ ಸಮ್ಮಿಳಿತರಾಗಿ ವಿಶೇಷ ವೈಭವದೊಡನೆ ಆಚಾರ್ಯರ ಕೀರ್ತನ ರೂಪ ಸೇವೆಯನ್ನು ಸಲ್ಲಿಸಿದರು ಜಗದಾಚಾರ್ಯರು ಸರ್ವರಿಗೂ ಸನ್ಮಂಗಲಗಳನ್ನೀಯಲಿ

ಜಿ ಕೆ ಎಸ್ ಆರಾಧ್ಯ, ರಾಮಪುರ

ಆನಂದದೇವನಹಳ್ಳಿ

ಕೊಟ್ಟೂರು ಕಟ್ಟಿಮನೆ ಹಿರೇಮಠದ ಶ್ರೀ ಗುರುಪಟ್ಟದ ಭೂತಭುಜಂಗಸ್ವಾಮಿಗಳವರು ಪಾಠಶಾಲಾ ಭಿಕ್ಷಾಟನಕ್ಕಾಗಿ ಸಂಚರಿಸುತ್ತ ಹೊಸಪೇಟೆ ತಾ॥ ಆನಂದದೇವನಹಳ್ಳಿ ಗ್ರಾಮಕ್ಕೆ ದಯಮಾಡಿಸಿ ಸದರಿ ಗ್ರಾಮದ ಸಮಸ್ತ ಶಿಷ್ಯಮಂಡಲಿಯವರಿಗೆ ಪ್ರೋತ್ಸಾಹಿಸಿ ತಾ॥ ೧ ೩ ೪೨ ನೇ ಭಾನುವಾರ ದಿನ ಶ್ರೀಜಗದ್ಗುರು ರೇಣುಕಾಚಾರ್ಯರ ದಿವ್ಯಮೂರ್ತಿಗೆ ವಿಧ್ಯುಕ್ತವಾಗಿ ಷೋಡಶೋಪಚಾರದ್ವಾರಾ ಲಕ್ಷಬಿಲ್ವಾರ್ಚನಾದಿಗಳನ್ನು ಮಾಡಿಸಿದರು ಆ ಸಮಯದಲ್ಲಿ ನೆರದಿದ್ದ ಭಕ್ತಜನರು ಶಿವಾನಂದಾರ್ಣವದಲ್ಲಿ ಮಗ್ನರಾಗಿಹೋದರು ಇಂತಹ ಪೂಜಾವೈಭವವನ್ನು ನಾವು ಎಂದೂ ನೋಡಿರಲಿಲ್ಲವೆಂದೂ, ಶ್ರೀಗಳವರ ಉಪದೇಶದಿಂದ ಇಂದು ನಾವು ಕೃತಾರ್ಥರಾದೆವೆಂದೂ ಕೊಂಡಾಡಿದರು ಬಳಿಕ ಜಗದ್ಗುರು ಪಂಚಾಚಾರ್ಯಮಹಾರಾಜಕೀ ಜೈ ಎಂಬ ಜಯಘೋಷದೊಡನೆ ಮಹಾಕಾರ್ಯವು ಮುಕ್ತಾಯವಾಯಿತು

ಪಂಚಾಚಾರ್ಯಭಜನಸಂಘದ ಸೆಕ್ರೆಟರಿ

ಸೊಲ್ಲಾಪುರ

ತಾ॥ 1 3 42 ನೆಯ ಭಾನುವಾರ ಸೋಲಾಪುರದ ವೀರಶೈವಸದಾಚಾರ ಸ್ತ್ರೀಸಮಾಜದಲ್ಲಿ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಒಳ್ಳೆ ವಿಜೃಂಭಣೆಯಿಂದ ಜರುಗಿತು ಬೆಳಗ್ಗೆ 8 ಘಂಟೆಗೆ ಸಮಾಜದ ಕುಮಾರಿಯರು ಪೂಜಾದಿಗಳನ್ನು ನೆರವೇರಿಸಿದರು. ಮಧ್ಯಾಹ್ನ 4 ಘಂಟೆಗೆ ಸಭೆ ಸೇರಿತು ಕು॥ ಶಾಂತಾದೇವಿ ಚವ್ಹಾಣ, ಕು॥ ಗೌರಾದೇವಿ ಹಬ್ಬು, ಕು॥ ಗೌರೀದೇವಿ ಕಟಕೆ, ಸೌ॥ ಸುಗ್ಗಲಾದೇವಿ ತಮಶೆಟ್ಟಿ ಇವರು ಜಗದಾಚಾರ್ಯರ ಲೀಲಾವಳಿಯ ವಿಷಯವಾಗಿ ತಮ್ಮ ಬಾಲಭಾಷೆಯಿಂದ ಎಲ್ಲರಿಗೂ ತಿಳಿಯುವಂತೆ ಭಾಷಣಮಾಡಿದರು ತರುವಾಯ ಸೌ॥ ಗಂಗಾಬಾಯಿ ಪಾಟೀಲ್ ಗರ್ಲ್ಸ್‌ಸ್ಕೂಲ್ ಮಿಸ್ಟ್ರೆಸ್ ಇವರು ಆಭಾರಮಾನಿಸಿದವೇಳೆ ಸೌ॥ ಭಾಗೀರಥೀಬಾಯಿಯವರು ಶ್ರೀಜಗದಾಚಾರ್ಯರ ಮಹತ್ವ ಮತ್ತು ಸಮಾಜದ ಕಾರ್ಯ ಈ ವಿಷಯವಾಗಿ ಭಾಷಣಮಾಡಿದರು ಅನಂತರ ಪ್ರಸಾದವಿನಿಯೋಗವಾಗಿ ಜಗದಾಚಾರ್ಯರ ಜಯಘೋಷದೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು

ಸೌ॥ ದಾನಮ್ಮ ಹಿರೇಮಠ, ಸೆಕ್ರೆಟರಿ

ಚಿಲಕನಹಟ್ಟಿ

ಬಳ್ಳಾರಿ ಡಿ॥ ಚಿಲಕನಹಟ್ಟಿ ಓರುಸ್ಥಲಮಠದಲ್ಲಿ ಇದೇ ಫಾಲ್ಗುನ ಶು॥ ೧೪ ಆದಿತ್ಯವಾರ ತಾ॥೧-೩-೪೨ನೇ ದಿವಸ ಪದ್ಧತಿಮೇರೆಗೆ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವು ವಿಧಿಪೂರ್ವಕವಾಗಿ ಮಹಾವೈಭವದಿಂದ ನೆರವೇರಿಸಲ್ಪಟ್ಟಿತು ಅಂದು ಸದರಿ ಮಠಾಧ್ಯಕ್ಷರಾದ ವೇ॥ ಸಣ್ಣಕೊಟ್ರಯ್ಯಶಾಸ್ತ್ರಿಗಳ ಪುತ್ರರತ್ನ ಚಿ॥ ಮಲ್ಲಿಕಾರ್ಜುನನ ವರ್ಧಂತ್ಯುತ್ಸವವು ಇದ್ದುದರಿಂದ ದಂಪತಿಗಳ ಗುರುದೇವತಾಭಕ್ತಿಯು ಸೂಸಿ ಹೊರಚೆಲ್ಲುತ್ತಿತ್ತು ಜೀರ್ಣವಾದ ಮಠವು ಪೇಳ್ಮಂತ ಮಹನೀಯರಿಂದ ವೃದ್ಧಿಹೊಂದುತ್ತಿರುವದೆಂದು ಗ್ರಾಮದಲ್ಲಿ ಸದ್ಭಕ್ತರ ಜಯಕಾರವೇ ಜಯಕಾರವಾಗಿತ್ತು ಈ ಸುಸಮಯದಲ್ಲಿ ಗುರುಸೇವಾಪಟುಗಳಾದ ಕೆ ಎಸ್ ಬಸಪ್ಪ, ಆರ್ ಸಿದ್ವೀರನಗೌಡರು ಮುಂತಾದ ಭಕ್ತರು ಅನನ್ಯಭಾವದಿಂದ ತಮ್ಮ ಭಕ್ತಿಯನ್ನು ಸಮರ್ಪಿಸಿದರು ಇವರೇ ಧನ್ಯರು! ಮೇಲ್ಕಂಡ ಕಾರ್ಯಗಳಿಗೆ ಅಧ್ಯಕ್ಷರಾದ ವೇ॥ ಪುರವರ್ಗಶಿವಪುರಮಠದ ಹಾಲಮಳೆಬಸವಲಿಂಗಶಿವಾಚಾರ್ಯರು ವೀರಶೈವಧರ್ಮಜಾಗ್ರತಿಗಾಗಿ ಹೊರಡುವ ಪ್ರಭಾಪೋಷಣಕ್ಕಾಗಿ ಒಂದು ರೂಪಾಯಿ. ತೆಗೆಯಿಸಿದರು

ಹಾಲಮಳೆಬಸವಲಿಂಗಸ್ವಾಮಿಗಳು.

ಮುದಗಲ್ಲು

ರಾಯಚೂರು ಡಿ॥ ಮುದಗಲ್ಲಿನಲ್ಲಿಯ ವೇ॥ ಸಿದ್ಧರಾಮಾರ್ಯ ಗಂಗಾಧರಮಠ ಇವರು ತಮ್ಮ ಮಠದಲ್ಲಿ ಫಾಲ್ಗುನ ಶು॥ ೧೪ ದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ವೈಭವದಿಂದ ನೆರವೇರಿಸಿದರು ಆ ದಿವಸ ಪ್ರಾತಃಕಾಲ ಆಚಾರ್ಯರ ಭಾವಚಿತ್ರಕ್ಕೆ ಪೂಜಾದಿಗಳು ನೆರವೇರಿ ಅನ್ನಸಂತರ್ಪಣೆಯಾಯಿತು.

ಓರ್ವ ಗುರುಭಕ್ತ.

ಹೂವಿನಹಡಗಲಿ.

ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ಶಹರದಲ್ಲಿ ಪದ್ಧತಿಯಮೇರೆಗೆ ಇದೇ ವೃಷನಾಮ ಸಂ|| ರದ ಫಾಲ್ಗುಣ ಶು|| ೧೪ ತಾ|| (೧ ೩ ೪೨) ಭಾನುವಾರ, ವೀರಶೈವ ಮಹಾ ಮತಸ್ಥಾಪನಾಚಾರ್ಯ ಭುವನಪ್ರಸಿದ್ಧ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯ ಮಹೋತ್ಸವವನ್ನು ವಿದ್ಯಾರ್ಥಿನಿಲಯದಲ್ಲಿ ಬಹು ಅಟ್ಟಹಾಸದಿಂದ ನೆರವೇರಿಸಲಾಯಿತು. ಅಂದು ಪ್ರಾತಃಕಾಲ ನಿಲಯದ ಸಕಲ ವಿದ್ಯಾರ್ಥಿಗಳೂ ನೇಮ ಮಡಿಯಿಂದ ಶ್ರೀಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದೊಡನೆ ಊರೊಳಗೆ ಭಜನೆ ಹೊರಟು, ಬೀದಿಬೀದಿಗಳಲ್ಲಿ ಹಾಯ್ದು ನಗರದ ಮಠ ಮಾನ್ಯ ದೇವಾಲಯಗಳಿಗೆ ಕಾಯಿಕರ್ಪೂರದ ಮಂಗಲಾರತಿಯನ್ನು ಮಾಡಿ ಮತ್ತೆ ಮಧ್ಯಾಹ್ನ ೧೨ ಘಂಟೆಗೆ ಸ್ವಸ್ಥಾನವನ್ನು ತಲ್ಪಿದರು ಬಳಿಕ ಸಕಲರೂ ವೃಷ್ಟಾನ್ನಭೋಜನದಿಂದ ತೃಪ್ತರಾದರು

ತರುವಾಯ ಸಾಯಂಕಾಲ ೫ ಘಂಟೆಗೆ ಸರಿಯಾಗಿ ವಿದ್ಯಾರ್ಥಿನಿಲಯದಲ್ಲಿ ಆರ್ಯಶ್ರೀಮಂತರೂ, ಗುರುಭಕ್ತ ಧುರೀಣರೂ, ದಾನಧರ್ಮಾದಿ ಕಾರ್ಯತತ್ಪರರೂ ಆದ ಸೊಪ್ಪಿನ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಸಭೆಜರುಗಿತ ಸಭಾಸ್ಥಾನದಲ್ಲಿ ಪಂಡಿತರೂ, ಸ್ವ ಪರಮತೀಯ ಪುರಪ್ರಮುಖರೂ, ನಿಲಯದ ಅಧಿಕಾರಿಗಳೂ ಮತ್ತು ಸಮಸ್ತ ವಿದ್ಯಾರ್ಥಿಗಳೂ ಸಮ್ಮಿಲಿತರಾಗಿದ್ದರು. ಪ್ರಾರಂಭದಲ್ಲಿ ನಿಲಯದ ಸೂಪರಿಂಟೆಂಡೆಂಟರಾದ ಶ್ರೀಯುತ ಸೊಪ್ಪಿನ [illegible] ಗಪ್ಪನವರು ಜಯಂತಿ ವಿಷಯವನ್ನು ಹೇಳಿ, ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ಇತರ ಮತಸ್ಥಾಪನಾಚಾರ್ಯರಂತೆ ಜನನೀ ಜನಕರ ಗರ್ಭದಿಂದ ಜನಿಸದೆ, ಲಿಂಗಮುಖದಿಂದ ವಿಶ್ವದೇವತೆಗಳಿಗಾಗಿ ಅವತರಿಸುವುದರಿಂದ, ಇವರ ಕಾಲನಿರ್ಣಯ ಮಾಗುವದು ಸಾಧ್ಯವಿಲ್ಲವೆಂದೂ, ಅಂತಹ ಪಂಚಾಚಾರ್ಯರಲ್ಲೊಬ್ಬರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗಳನ್ನೂ, ವಿಭೀಷಣ ವಿಕ್ರಮ-ನೀಲಗಿರಿ ತಾಳ ಸೋಮವಂಶದ ಚಕ್ರವರ್ತಿಗಳನ್ನುದ್ಧರಿಸಿದ ವಿಷಯ ಹಿಮಗಿರಿಗೆ ಹೋಗಿ ಇನ್ನೂ ಅನೇಕ ಅನೇಕ ಲೀಲಾವಳಿಗಳನ್ನು ಸ್ಪಷ್ಟವಾಗಿ ವಿವರಿಸಿದರು ಬಳಿಕ ಸುಪ್ರಸಿದ್ಧ ಗದ ಚಿಕ್ಕರಾದ ಶ್ರೀಮಂತ ಗುಗ್ರಿ ಹುಚ್ಚಪ್ಪನವರು ಜಯಂತಿಗಳನ್ನು ಏತಕ್ಕೆ ಆಚರಿಸಬೇಕೆಂಬ ಬಗ್ಗೆ ಪ್ರಮಾಣಪೂರ್ವಕವಾಗಿ ವಿಶದೀಕರಿಸಿದರು ಆನಂತರ ಪೋಸ್ಟ್ ಮಾಧ್ಯಮಿಕ ಶಾಲೆಯ ಕನ್ನಡ ಪಂಡಿತರಾದ ವಿದ್ವಾನ್ ವಾ ಬ ಎಂ ಶಿತಿಕಂಠಶಾಸ್ತ್ರಿಗಳವರು ಜಯಂತಿಯ ಒಗ್ಗಾಲೂ, ಗುರುವಿನ ಆವಶ್ಯಕತೆಯ ಬಗ್ಗೆಯೂ, ಶ್ರೀ ರೇಣುಕಾಚಾರ್ಯರ ಜಗದ್ಗುರುಗಳೂ, ಜಗತ್ಪೂಜ್ಯರೂ ಆಗಿರುವ ವಿಷಯವು ಭಾರತೀಯ ಚಿಕ್ಕಮಕ್ಕಳಿಗೂ ಸಹ ತಿಳಿದ ವಿಚಾರವೆಂಬುದನ್ನು ಸಕಾರಣವಾಗಿ ತೋರಿಸಿ ಎಂದು ಶ್ರೀಶಂಕರಾಚಾರ್ಯರೂ ಕೂಡ ಶ್ರೀ ಜಗದ್ಗುರು ರೇಣುಕಾಚಾರ್ಯರಿಂದ ಚಂದ್ರಮೌಳೀಶ್ವರ ಲಿಂಗವನ್ನು ಪಡೆದು ಧನ್ಯರಾದರೆಂಬ ಸಂಗತಿಯನ್ನು ಶುದ್ಧ ಸಂಸ್ಕೃತ ವಾಣಿಯಿಂದ ವಿವರಿಸಿದರು. ತರುವಾಯ ಪರಮ ಶ್ರೀಮಂತರಾದ ಶ್ರೀಮಾನ್ ಕೆ ಎಸ್ ಶಿವಪ್ಪನವರು ಜಯಂತಿಗಳನ್ನಾಚರಿಸುವುದರಿಂದ ಅವರ ಮಹತ್ವಗಳೂ, ಅವರು ಜಗತ್ಪಾವನಮಾಡಿದ ವಿಷಯವೂ ನಮ್ಮೆಲ್ಲರ ಸ್ಫೂರ್ತಿಯಾಗಿ, ಅವರಿಂದ ನಿರ್ಮಿತವಾದ ಕಟ್ಟಳೆಗಳನ್ನನುಸರಿಸುವ ಪರಿಣಾಮವಾಗುವುದೆಂದೂ, ವೀರಶೈವಮತವು ಪರಮ ಪವಿತ್ರವಾದುದೆಂದೂ, ಮೋಕ್ಷ ಸಾಮ್ರಾಜ್ಯವನ್ನು ಸೂರೆಗೊಳ್ಳಲು ಈ ಮತವು ಸುಲಭವಾದುದೆಂದೂ, ಪಂಚಾಚಾರ್ಯರೇ ಜಗದ್ಗುರುಗಳೆಂದೂ, ಜಗದ್ರಕ್ಷಕರೆಂದೂ ಮೊದಲಾದ್ಯನೇಕ ಅರ್ಥಗರ್ಭಿತ ವಿಷಯಗಳ ಮೇಲೆ ಸ್ಫೂರ್ತಿದಾಯಕ ಭಾಷಣವನ್ನುಮಾಡಿದರು ತದನಂತರ ಅಧ್ಯಕ್ಷರು ಎಲ್ಲಾ ಭಾಷಣಗಳ ಸಾರವನ್ನು ಕ್ರೋಢೀಕರಿಸಿ ವಿಚಾರಪೂರಿತ ಉಪನ್ಯಾಸವನ್ನು ಮಾಡಿದರು. ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಓರ್ವ ಗುರುಭಕ್ತ.

ನಾಲತವಾಡ

ಶ್ರೀರೇಣುಕ ಶಾಖಾಮಠೀಯ ಗುರುಪರಂಪರಾಗತ ನಾಲತವಾಡ ಹಿರೇಮಠಾಧ್ಯಕ್ಷರಾದ ಡಾ|| ಗಂಗಾಧರ ಸ್ವಾಮಿ ಪಟ್ಟದದೇವರು ತಮ್ಮ ದವಾಖಾನೆಯಲ್ಲಿ ಪ್ರತಿ ವರ್ಷ ಪದ್ಧತಿಯಂತೆ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ಇದೇ ಫಾಲ್ಗುಣ ಶು|| ೧೪ ದಿವಸ ವಿಜೃಂಭಣೆಯಿಂದ ನೆರವೇರಿಸಿದರು. ಪ್ರಾತಃಕಾಲ ಶ್ರೀಜಗದ್ಗುರುಗಳ ಭಾವಚಿತ್ರವನ್ನು ಉನ್ನತ ಪೀಠದಲ್ಲಿ ಸ್ಥಾಪಿಸಿ, ವೇದಮಂತ್ರಗಳಿಂದ ಅರ್ಚಿಸಿ ಅಷ್ಟೋತ್ತರ ಶತನಾಮೋಚ್ಚಾರಣಪೂರ್ವಕ ಬಿಲ್ವಪತ್ರಗಳನ್ನು ಧರಿಸಿ ಪೂಜಿಸಿದರು ಬಳಿಕ ಮಹಾ ಗಣಾರಾಧನೆಯಾಯಿತು ಸಾಯಂಕಾಲ ೬ ಘಂಟೆಗೆ ಶ್ರೀಜಗದ್ಗುರುಗಳ ಭಾವಚಿತ್ರವನ್ನು ಅಡ್ಡಪಲ್ಲಕ್ಕಿಯಲ್ಲಿರಿಸಿ ವಾದ್ಯ ವೈಭವದೊಡನೆ ಮೆರವಣಿಗೆಯು ಸಕಲ ಬೀದಿಗಳಲ್ಲಿ ಹೊರಟು ಹಿರೇಮಠಕ್ಕೆ ತಲ್ಪಿತು ಉತ್ಸವ ಕಾಲದಲ್ಲಿ ಗ್ರಾಮವು ತಳಿರುತೋರಣಗಳಿಂದಲೂ ಧ್ವಜಾದಿಗಳಿಂದಲೂ ಶೃಂಗರಿಸಲ್ಪಟ್ಟಿತ್ತು ಈ ಉತ್ಸವದಲ್ಲಿ ಊರ ಎಲ್ಲ ಪ್ರಮುಖರೂ ಭಾಗವಹಿಸಿ ಭಕ್ತಿಯಿಂದ ಕಾರ್ಯವನ್ನು ನೆರವೇರಿಸಿದರು

ಓರ್ವ ಗುರುಭಕ್ತ

ಶ್ರೀನಂದಾರಥೋತ್ಸವ, ರಂಭಾಪುರೀಕ್ಷೇತ್ರ

ಶ್ರೀಜಗದ್ಗುರು ರಂಭಾಪುರೀ ವೀರಸಿಂಹಾಸನಮಠದಲ್ಲಿ ಪದ್ಧತಿಪ್ರಕಾರ ಇದೇ ಫಾಲ್ಗುಣ ಶ|| ೧೫ (ತಾ|| ೩ ೩ ೧೯೪೨)ನೇ ಸೋಮವಾರ ಮಘಾನಕ್ಷತ್ರ ಶುಭಮುಹೂರ್ತದಲ್ಲಿ ಶ್ರೀನಂದಾರಥೋತ್ಸವವು ವಿಶೇಷ ವೈಭವದಿಂದ ನೆರವೇರಿತು ರಥಾಂಗಭೂತಮಹೋತ್ಸವಗಳು ಆಯಾಯ ದಿವಸ ಸಕ್ರಮವಾಗಿ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟವು ತತ್ಸಂಬಂಧವಾಗಿ ಮೂರು ದಿವಸಗಳವರೆಗೂ ನಿಯಮಿತಕಾಲಗಳಲ್ಲಿ ಕೀರ್ತನಕೇಸರಿ ಕವಿಭೂಷಣೇತ್ಯಾದಿ ಬಿರುದಾಂಕಿತರಾದ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಸರಸವಾದ ಕೀರ್ತನೆಗಳನ್ನು ಅನುನಾದಮಾಡಿದರು ಈ ಸಮಾರಂಭದ ಸರ್ವಕಾರ್ಯಗಳೂ ಮಹಾಸಂಸ್ಥಾನದ ಏಜೆಂಟರಾದ ವೇ|| ಸಿದ್ಧಮಠಸ್ವಾಮಿಗಳ ನೇತೃತ್ವದಲ್ಲಿ ಸುವ್ಯವಸ್ಥೆಯಿಂದ ನಿರ್ವಿಘ್ನವಾಗಿ ಕೊನೆಗಂಡವು ಸುತ್ತಮುತ್ತಣಗ್ರಾಮಗಳಿಂದಲೂ, ದೂರದೂರಪ್ರದೇಶಗಳಿಂದಲೂ, ಭಕ್ತಮಹಾಜನರು ಬಂದು ಉತ್ಸವದಲ್ಲಿ ಭಾಗಿಗಳಾಗಿ ಪವಿತ್ರಾಶ್ರಮಸಂದರ್ಶನಭಾಗ್ಯವನ್ನು ಪಡೆದು ಶ್ರೀಗುರುದೇವತಾಪ್ರಸಾದವನ್ನು ಸ್ವೀಕರಿಸಿ ಧನ್ಯರಾದರು

ಓರ್ವ ಧರ್ಮಾಭಿಮಾನಿ

ಶ್ರೀರೇಣುಕ ಜಯಂತೀ ಮಹೋತ್ಸವದಲ್ಲಿ ಅಧ್ಯಕ್ಷ ಭಾಷಣ

ಬೆಂಗಳೂರು ಸಿಟಿ ಶ್ರೀ ಮಹಾಂತಿನಮಠದಲ್ಲಿ ಪದ್ಧತಿಪ್ರಕಾರ ಈ ವರ್ಷ ನಡೆದ ಶ್ರೀ ಭಗವತ್ಪಾದ ರೇಣುಕ ಜಯಂತೀ ಮಹೋತ್ಸವ ಸಮಾರಂಭದ ಎರಡನೇ ದಿನದಲ್ಲಿ ಅಂದರೆ ತಾ|| ೨ ೩-೧೯೪೨ ರಲ್ಲಿ ಬೆಂಗಳೂರು ಮತ್ತು ಮೈಸೂರು ಸಿಟಿಗಳ ಇಂಕಂಟ್ಯಾಕ್ಸ್ ಅಸಿಸ್ಟೆಂಟ್ ಕಮಿಷನರ್ ವೇ|| ಜಿ ಕೆ ರುದ್ರಾರ್ಯರ ಅಧ್ಯಕ್ಷತೆಯಲ್ಲಿ ಕಾರ್ಯಕಲಾಪಗಳು ನೆರವೇರಿದವು. ಅಂದು ಅಧ್ಯಕ್ಷರು ಕೆಳಗ ಕಂಡಂತೆ ಮಹತ್ವದ ಭಾಷಣ ಮಾಡಿದರು

ತಥಾರೇವಣಸಿದ್ಧಸ್ಯ ಕುಲ್ಯಾಪಾಕ ಪುರೋತ್ತಮೇ |
ಸೋಮೇಶಲಿಂಗಾಜ್ಜನನಂ ಮಾಘಮಾಸಃ ಕದಲೀಪುರೇ ||

ಇತ್ಯಾದಿ ಸ್ವಾಯಂಭುವಾಗಮೋಕ್ತಿಯಂತೆ ರಂಭಾಪುರೀ ಪೀಠವು ಚತುರ್ಯುಗಗಳಿಂದಲೂ ವಿರಾಜಿಸುತ್ತಿರುವುದೆಂದೂ, ಶ್ರೀರೇಣುಕ ಭಗವತ್ಪಾದರು ವಾಯುವೇಗದಿಂದ ಪ್ರಪಂಚದಲ್ಲೆಲ್ಲಾ ಸಂಚರಿಸಿ ಅನೇಕ ಸ್ಥಳಗಳಲ್ಲಿ ತಪಸ್ಸನ್ನು ಮಾಡಿದ ಚಿಹ್ನೆಯು ಈಗಲೂ ಕಂಡುಬರುತ್ತಿರುವುದೆಂದೂ, ಈ ವಿಷಯದಲ್ಲಿ ರೇವಣಸಿದ್ಧೇಶ್ವರ ಬೆಟ್ಟ, ಸಿದ್ಧರಬೆಟ್ಟ, ಸಾಂಗಲಿಸಂಸ್ಥಾನ ಮಂಗಳವೇಢೆಯಲ್ಲಿರುವ ರೇವಣಸಿದ್ಧೇಶ್ವರದೇವಾಲಯ, ಸಾತಾರಾ ಜಿ|| ವಿಟಾ ತಾಲೂಕಿಗೆ ಸೇರಿದ ರೇಣಾವಿಯಲ್ಲಿರುವ ರೇವಣಸಿದ್ಧೇಶ್ವರ ದೇವಾಲಯ, ಕೊಲ್ಲಾಪುರ ರಾಜ್ಯದಲ್ಲಿರುವ ರೇವಣಸಿದ್ಧನಗುಡ್ಡ, ಹಿಮಾಲಯಪರ್ವತದಲ್ಲಿ ಉಷಾಮಠಕ್ಕೆ ಎರಡು ಮೈಲಿಯಲ್ಲಿರುವ ರೇವಣತಲಾವ, ಸೊಲ್ಲಾಪುರದ ರೇವಣಸಿದ್ಧೇಶ್ವರದೇವಾಲಯ, ಮದ್ರಾಸ್ ಇಲಾಖಾ ವೃದ್ಧಾಚಲಕ್ಷೇತ್ರದಲ್ಲಿರುವ ರೇವಣಸಿದ್ಧೇಶ್ವರ ದೇವಾಲಯ, ಮದ್ರಾಸ್ ಇಲಾಖಾ ತಿರುವಣ್ಣಾಮಲೆ ಕ್ಷೇತ್ರದಲ್ಲಿ ರೇವಣಸಿದ್ಧರದೇವಾಲಯ, ನಿಜಾಂ ಇಲಾಖಾ ಗುಲ್ಬರ್ಗಾ ಜಿ|| ರಟಗಲ್ಲಿಗ್ರಾಮಕ್ಕೆ ಎರಡು ಮೈಲಿ ದೂರದಲ್ಲಿರುವ ರೇವಗಿ ಅಥವಾ ರೇವಣಗಿರಿ ಇತ್ಯಾದಿ ಪವಿತ್ರ ಕ್ಷೇತ್ರಗಳೇ ನಿದರ್ಶನಗಳೆಂದೂ ಹೇಳಿ ಭಗವತ್ಪಾದರ ಲೀಲೆಗಳನ್ನು ವಿವರಿಸಿದರು. ಇದಲ್ಲದೆ ಶ್ರೀಕರಭಾಷ್ಯದಲ್ಲಿ " ವೀರೇಶ್ವರಸ್ಯ ರಾಮಾನುಜಕಲ್ಪಿತ ವೆಂಕಟೇಶ್ವರತ್ವಂ ರಜ್ಜುಸರ್ಪವದಾಭಾಸಮಾತ್ರಮೇವ' ಈ ರೀತಿ ಉಕ್ತವಾಗಿರುವುದರಿಂದ ರಾಮಾನುಜಾಚಾರ್ಯರು ತಿರುಪತಿಯಲ್ಲಿದ್ದ ವೀರಭದ್ರನ ವಿಗ್ರಹಕ್ಕೆ ವೆಂಕಟರಮಣಸ್ವಾಮಿಯೆಂದು ಅಭಿಧಾನವನ್ನಿಟ್ಟರೆಂಬುದು ಸಿದ್ಧವಾಗುವುದೆಂದೂ, ಈಗಲೂ ಆ ವಿಗ್ರಹದಲ್ಲಿ ಸರ್ಪಾಭರಣಾದಿಗಳು ಕಂಡುಬರುವವೆಂದೂ, ಶ್ರೀ ರೇಣುಕರ ಶಾಖಾಮಠಗಳಲ್ಲೆಲ್ಲಾ ವೀರೇಶ್ವರನ ಮೂರ್ತಿಗಳು ವಿರಾಜಿಸುತ್ತಿರುವವೆಂದೂ ಹೇಳಿದರು

ಶ್ರೀ ಶೃಂಗೇರಿಮಠದ ಲೈಬ್ರರಿಯಲ್ಲಿರುವ ಗುರುವಂಶಕಾವ್ಯದಲ್ಲಿ—

" ಶ್ರೀಚಂದ್ರಮೌಳೀಶ್ವರಲಿಂಗಮಸ್ಮೈ ಸದ್ರತ್ನಗರ್ಭಂ ಗಣನಾಯಕಂ ಚ | ಸ ವಿಶ್ವರೂಪಾಯ ಸುಸಿದ್ಧದತ್ತಂ ದತ್ವಾ ನ್ಯಗಾದೀಚ್ಚಿರಮರ್ಚಯೇತಿ || " ಸುಸಿದ್ಧೇನ ರೇವಣಸಿದ್ಧಮಹಾಯೋಗಿನಾ ದತ್ತಂ ಶ್ರೀಚಂದ್ರಮೌಳೀಶ್ವರಲಿಂಗಂ" ಈ ರೀತಿ ವ್ಯಾಖ್ಯಾನಕಾರರು ವ್ಯಾಖ್ಯಾನಮಾಡಿರುತ್ತಾರೆ. ಇದನ್ನೇ ಅನುಸರಿಸಿ ಶಿವತತ್ವರತ್ನಾಕರದಲ್ಲಿಯೂ " ರೇವಣಸಿದ್ಧಸಂಪ್ರಾಪ್ತಂ ಚಂದ್ರಮೌಳೀಶಮುಖ್ಯದಾತ್ | ಅಭ್ಯಚ್ಚ್ಯಾನೇನ ಲಿಂಗೇನ ಶಿವಾಭೀಷ್ಟಾಪ್ತಿರಿತ್ಯಪಿ || ಎಂದು ಉಕ್ತವಾಗಿದೆ

ಶಿವಮತವು ಪ್ರಪಂಚದ ನಾನಾ ಭಾಗಗಳಲ್ಲಿ ಪೂರ್ವಕಾಲದಲ್ಲಿ ಪ್ರಚಾರದಲ್ಲಿತ್ತೆಂಬುವಕ್ಕೆ ಈ ಕೆಳಗೆ ಕಂಡ ಸ್ಥಳಗಳಲ್ಲೆಲ್ಲಾ ಶಿವಲಿಂಗಗಳು ಕಂಡುಬರುವುವು ತುರ್ಕಿಯ ಬಾಬಿಲೋನ್ ಪಟ್ಟಣದಲ್ಲಿ ೧೨೦೦ ಅಡಿಗಳ ಎತ್ತರವುಳ್ಳ ಶಿವಲಿಂಗವೂ, ಈಜಿಪ್ಟಿನ ಮೆಂಫಿಸ್ ಪಟ್ಟಣದಲ್ಲಿ ೩೦೦ ನೊಳ ಎತ್ತರವಿರುವ ಶಿವಲಿಂಗವೂ, ಮಕ್ಕಾಕ್ಷೇತ್ರದಲ್ಲಿ ಮಕ್ಕೇಶ್ವರನಾಮಕವಾದ ಶಿವಲಿಂಗವೂ, ಫ್ರೀಜಿಯಾದೇಶದಲ್ಲಿ ಏಟಿಸ್ ಎಂಬ ಹೆಸರಿನ ಶಿವಲಿಂಗವೂ, ನಿನಿಭಾಪಟ್ಟಣದಲ್ಲಿ ಏಷೀರ್ ಎಂಬ ಶಿವಲಿಂಗವೂ, ಅಫ್ಘಾನಿಸ್ಥಾನ್, ಚಿತ್ರಾಲ, ಕಾಬೂಲ್, ಬಲಖಬುಖಾರ ದೇಶಗಳಲ್ಲಿ ಪಂಚಶೀರ ಪಂಚವೀರ ಎಂಬ ಹೆಸರಿನ ಲಿಂಗಮೂರ್ತಿಗಳೂ ಜಾವಾದ್ವೀಪದಲ್ಲಿ ಲಾರಾಜೋಂಗ್ರಾಂಗ್ ಎಂಬ ಮೂರು ಅಂತಸ್ತಿನ ಶಿವಾಲಯವೂ ಇರುತ್ತವೆ

ಕ್ರಿ|| ಶ|| ಎಂಟನೆಯ ಶತಮಾನದಲ್ಲಿ ರೇವಣಗಣನಾಥನ ಹೆಸರಿಟ್ಟುಕೊಂಡಿದ್ದ ರೇವಣನಾಥನೆಂಬ ರಾಜನ ಹೆಸರು, ಚಿತ್ರದುರ್ಗ ತಾ|| ಬೇವಿನಹಳ್ಳಿಗ್ರಾಮದ ಹನುಮಂತದೇವರಗುಡಿಯ ಪ್ರಾಕಾರದಲ್ಲಿರುವ ೭೪ ನೇ ನಂಬರು ಶಾಸನದಲ್ಲಿ ಉಕ್ತವಾಗಿದೆ

ತಾ|| ೨೭-೧೧ ೧೯೩೩ ರಲ್ಲಿ ಬನಾರಸ್ ಸಬ್ ಜಡ್ಜ್ ಕೋರ್ಟಿನಲ್ಲಿ ಮಿ|| ಬಾಬುವಿಂಧ್ಯವಾಸಿಪ್ರಸಾದರೆಂಬ ಜಡ್ಜಿಗಳು ಕಾಶೀ ಜಗದ್ಗುರು ವಿಶ್ವಾರಾಧ್ಯಪೀಠದ ಬಗ್ಗೆ ಚರ್ಚೆಬಂದಾಗ ಈ ಕೆಳಗೆ ಕಂಡಂತೆ ಜಡ್ಜ್ ಮೆಂಟ್ ಬರೆದಿರುವರು—

J. N. Farquhar M A., D Litt in his book entitled the religious quest of India gives the history of Veerasaivas beginning from page 259 He says that the tradition is that the sect was founded by five asetics, Ekorama, Panditaradhya, Revana, Marula and Visvaradhya, who are said to have sprung from the heads of Siva, incarnate age after age These are regarded very ancient.

ಇದರಲ್ಲಿ ವೀರಶೈವಮತವು ಬಹಳ ಪ್ರಾಚೀನ ಕಾಲದಲ್ಲಿ ಐದು ಆಚಾರ್ಯರಿಂದ ಸ್ಥಾಪಿಸಲ್ಪಟ್ಟಿರುವದೆಂದು ಉದಾಹರಿಸಿರುವರು.

ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀಭಗವತ್ಪಾದ ರೇಣುಕಾದಿ ಪಂಚಾಚಾರ್ಯರ ಗೋತ್ರಸೂತ್ರಗಳನ್ನು ಜನನಾದಿ ಅಂತ್ಯಸಂಸ್ಕಾರದವರೆಗೆ ನಡೆಯುವ ಎಲ್ಲಾ ಕರ್ಮಗಳಲ್ಲಿಯೂ, ಪ್ರತಿದಿನ ನಡೆಸುವ ಇಷ್ಟಲಿಂಗ ಪೂಜೆಯಲ್ಲಿಯೂ, ಸಂಕಲ್ಪದಲ್ಲಿಯೂ ಉಚ್ಚರಿಸುತ್ತಿರುವದರಿಂದ ಶುದ್ಧಸಂಪ್ರದಾಯದವರೆಲ್ಲರೂ ಆ ಭಗವತ್ಪಾದರಲ್ಲಿ ಅಸಾಧಾರಣ ಭಕ್ತಿಯನ್ನಿಟ್ಟು ವರ್ತಿಸಬೇಕೆಂದು ಹೇಳಿದರು

ಅಂತ್ಯದಲ್ಲಿ ಈಗ ಪ್ರಪಂಚವನ್ನೇ ಉಲ್ಲೋಲ ಕಲ್ಲೋಲ ಮಾಡುತ್ತಿರುವ ಮಹಾಯುದ್ಧದಲ್ಲಿ ನಮ್ಮನ್ನಾಳುವ ಬ್ರಿಟಿಷ್ ಸಾರ್ವಭೌಮರಿಗೆ ಜಯವಾಗಲೆಂದು ನಾವೆಲ್ಲರೂ ಏಕಕಂಠದಿಂದ ಶ್ರೀಭಗವಂತನನ್ನು ಪ್ರಾರ್ಥಿಸೋಣವೆಂದೂ, ನಮ್ಮನ್ನಾಳುವ ಮಹಾಪ್ರಭುಗಳಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರವರಿಗೂ ಅವರ ಕುಟುಂಬವರ್ಗಕ್ಕೂ ಶ್ರೀ ಭಗವಂತನು ಆಯುರಾರೋಗ್ಯೈಶ್ವರ್ಯವನ್ನು ದಯಪಾಲಿಸಲೆಂದೂ, ತಪಸ್ವಿಗಳಾದ ಶ್ರೀ ಗಂಗಾಧರಶಿವಾಚಾರ್ಯಸ್ವಾಮಿಗಳವರು ಉಪದೇಶಿಸುತ್ತಿರುವ ಸದಾಚಾರ ಮಾರ್ಗವನ್ನು ಸರ್ವರೂ ಅವಲಂಬಿಸಿ ಅದರಂತೆ ವರ್ತಿಸಬೇಕೆಂದೂ ನುಡಿದರು ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರೇಕ್ಷಕ

ಶ್ರೀ ಗಂಗಾಧರಶಿವಾಚಾರ್ಯರವರ ಸಂಚಾರ

ಶ್ರೀಗಳವರು ಭಕ್ತೋದ್ಧಾರಾರ್ಥವಾಗಿ ಪ್ರತಿವರ್ಷವೂ ಅನುಷ್ಠಾನಾದಿವ್ರತಗಳನ್ನು ಕೈಕೊಂಡು ನಿರ್ವಿಘ್ನವಾಗಿ ನೆರವೇರಿಸುತ್ತಿರುವುದು ಸಕಲರಿಗೂ ತಿಳಿದ ವಿಷಯವೇ ಆಗಿರುತ್ತದೆ ಅದರಂತೆ ಈ ವರ್ಷವೂ ತಮ್ಮ "ಶ್ರೀಮುಕ್ತಿಮಂದಿರ ಗುರುಕುಲದಲ್ಲಿ, ಚಾತುರ್ಮಾಸ ಅನುಷ್ಠಾನವನ್ನು ಆಚರಿಸಿದುದು ಸರ್ವರಿಗೂ ವಿದಿತವೇ ಇದೆ ಈ ವರ್ಷದ ಅನುಷ್ಠಾನಾನಂತರ ಭಕ್ತಮಹಾಶಯರ ಪ್ರಾರ್ಥನೆಯಂತೆ ಗುರುತತ್ವ ಪ್ರಚಾರಕ್ಕಾಗಿ ಹಳ್ಳಿಗಳ ಸಂಚಾರವನ್ನು ಕೈಗೊಂಡರು ಲಕ್ಷ್ಮೇಶ್ವರ ತಾ॥ ಸಿಗ್ಗಲಿ ನಿವಾಸಿಗಳಾದ ಸಾಹುಕಾರ್ ಸಿದ್ಧಯ್ಯನವರ ಪ್ರಾರ್ಥನೆಯಂತೆ ಮಾಘ ಶು॥ ೫ ಬುಧವಾರ ತಮ್ಮ ಮಿತಪರಿವಾರದೊಡನೆ ಸಿಗ್ಗಲಿಗೆ ದಯಮಾಡಿಸಿದರು ಭಕ್ತಮಂಡಲಿಯವರು ಭವ್ಯವಾಗಿ ರಚಿಸಿದ ಮಂಟಪದಲ್ಲಿ ಶ್ರೀಗಳವರನ್ನು ಸಂವಶಿಹಾರತುರಾಯಿಗಳನ್ನು ಸಮರ್ಪಿಸಿ ಉತ್ಸವದೊಡನೆ ದಯಮಾಡಿಸಿಕೊಂಡು ಬಂದರು. ನಿತ್ಯದಲ್ಲಿಯೂ ನಡೆಯುವ ಶ್ರೀರುದ್ರಾಭಿಷೇಕ ಮೊದಲಾದ ಪೂಜಾಕಾರ್ಯಗಳಿಗಾಗಿ ಭಕ್ತರು ತಂಡೋಪತಂಡವಾಗಿ ಬರುತ್ತಿದ್ದರು ಈ ಮಧ್ಯದಲ್ಲಿ ಸದರಿ ಗ್ರಾಮನಿವಾಸಿಗಳಾದ ಹುಲಗೂರು ಸಾಹುಕಾರ್ ಅಮೃತಪ್ಪನವರು ತಮ್ಮ ನೂತನ ಗೃಹಪ್ರವೇಶಕಾರ್ಯನಿಮಿತ್ತವಾಗಿ ಶ್ರೀಗಳವರನ್ನು ಪಲ್ಲಕ್ಕಿ ಮಹೋತ್ಸವದೊಡನೆ ತಮ್ಮ ಮನೆಗೆ ದಯಮಾಡಿಸಿಕೊಂಡು ಹೋಗಿ ಆಶೀರ್ವಾದವನ್ನು ಪಡೆದು ಧನ್ಯರಾದರು ಇದರಂತೆಯೇ ಅಣ್ಣಿಗೇರಿ ಸಾಹುಕಾರ್ ಮರಿಬಸಪ್ಪನವರು ಪಲ್ಲಕ್ಕಿ ಮಹೋತ್ಸವದೊಡನೆ ದಯಮಾಡಿಸಿಕೊಂಡು ಹೋಗಿ ತೀರ್ಥಪ್ರಸಾದಾದಿಗಳನ್ನು ಸ್ವೀಕರಿಸಿ ಧನ್ಯರಾದರು. ಇದಕ್ಕೆಲ್ಲಾ ಕಾರಣೀಭೂತರಾದ ಸಿದ್ಧಯ್ಯನವರು ತಮ್ಮ ಮನೆಯಲ್ಲಿ ಪಾದಪೂಜಾ, ಮಹಾರುದ್ರಾಭಿಷೇಕಾದಿ ಕಾರ್ಯಗಳನ್ನು ಅತ್ಯಂತ ವೈಭವದೊಡನೆ ನೆರವೇರಿಸಿದರು. ಸದರಿ ಗ್ರಾಮದಲ್ಲಿ ೧೫ದಿನಗಳವರೆಗೆ ಶ್ರೀಗಳವರಿಂದ ಧರ್ಮಸಂಬಂಧವಾದ ಅನೇಕಾನೇಕ ವಿಷಯಗಳು ಜನಗಳ ಮನಸ್ಸಿನಮೇಲೆ ಪರಿಣಾಮವಾಗುವಂತೆ ಬೋಧಿಸಲ್ಪಟ್ಟವು. ಜನರು ನಿಜವಾದ ವಿಷಯವನ್ನು ತಿಳಿದುಕೊಂಡು ಗುರುವಿರೋಧಿಗಳಿಂದ ದುರುಪದೇಶಿಸಲ್ಪಟ್ಟ ಅಂಧಶ್ರದ್ಧೆಯು ಇಂದು ದೂರಾಯಿತೆಂದು ಸಂತೋಷಭರಿತರಾದರು. ಬಳಿಕ ಹುಬ್ಬಳ್ಳಿ ತಾ॥ ನೂಲವಿ ಹಿರೇಮಠದ ಚನ್ನವೀರಯ್ಯನವರ ಪ್ರಾರ್ಥನೆಯ ಮೇರೆಗೆ ಶಿವದೀಕ್ಷಾಕಾರ್ಯಕ್ಕೋಸ್ಕರ ದಯಮಾಡಿಸಿದರು ಮಾಘ ಬ॥ (ತಾ9-2-42) ಸೋಮವಾರ ವೇ॥ ಚನ್ನ[illegible]ನವರ ಸುಪುತ್ರ ಚಿ॥ ಸ॥ ರೇವಣಸಿದ್ಧನಿಗೆ ಶಿವದೀಕ್ಷಾಸಂಸ್ಕಾರವು ನೆರವೇರಿತು ಮತ್ತು ಇತರ ಅನೇಕ ಮಾಹೇಶ್ವರ ವಟುಗಳ ಶಿವದೀಕ್ಷಾಸಂಸ್ಕಾರವು ಧರ್ಮಾರ್ಥವಾಗಿ ನೆರವೇರಿ ಸಾವಿರಾರು ಜನಗಳಿಗೆ ಅನ್ನಸಂತರ್ಪಣೆಯಾಯಿತು ಈ ಕಾರ್ಯವನ್ನು ಪೂರೈಸಿಕೊಂಡು ತಮ್ಮ ಶ್ರೀಮುಕ್ತಿಮಂದಿರಗುರುಕುಲದಲ್ಲಿ ಮಹಾಶಿವರಾತ್ರಿಯನ್ನು ನೆರವೇರಿಸಿದರು ಬಳಿಕ ಸವಣೂರ ಸಂಸ್ಥಾನ ಜೇಕಿನಕಟ್ಟೆಗೆ ಶಿವದೀಕ್ಷೆ ಮತ್ತು ನೂತನಕೂಪಶಾಂತಿಗಾಗಿ ತಾ॥ 16 2 42ನೇ ಸೋಮವಾರ ದಯಮಾಡಿಸಿದರು ಅದಿನ ಗ್ರಾಮವೆಲ್ಲವೂ ತಳಿರುತೋರಣಗಳಿಂದ ಅಲಂಕೃತವಾಗಿದ್ದಿತು ಸಾಯಂಕಾಲ 6 ಘಂಟೆಗೆ ಪಲ್ಲಕ್ಕಿ ಮಹೋತ್ಸವವು ಪೋಲೀಸ್ ಅಧಿಕಾರಿಗಳ ಶಿಸ್ತಿನಿಂದಲೂ, ಭಜನಾಸಂಘಗಳಿಂದಲೂ, ಬ್ಯಾಂಡ್ ಮೊದಲಾದ ವಾದ್ಯಗಳಿಂದಲೂ ಮುಖ್ಯಬೀದಿಗಳಲ್ಲಿ ವೈಭವದಿಂದ ನೆರವೇರಿತು ತಾ॥ 17ನೇ ಮಂಗಳವಾರ ಶ್ರೀಗಳವರ ನೇತೃತ್ವದಲ್ಲಿ ವೇದಪಾಠಶಾಲಾಧ್ಯಾಪಕರಾದ ವೇ॥ ಸಿ ಯಂ ಗಂಗಾಧರಶರ್ಮ ಇವರ ವೈದಿಕತ್ವದಿಂದ ನೂತನಕೂಪಶಾಂತಿಯೂ, ಬುಧವಾರ ವೇ॥ ಸಿದ್ಧಲಿಂಗಯ್ಯನವರ ಉದಾರಾಶ್ರಯದಿಂದ ಏರ್ಪಡಿಸಲ್ಪಟ್ಟ ಅನೇಕ ಮಾಹೇಶ್ವರವಟುಗಳ ಧರ್ಮಾರ್ಥಶಿವದೀಕ್ಷಾಸಂಸ್ಕಾರವೂ, ವಿಧ್ಯುಕ್ತವಾಗಿ ನಡೆಯಿಸಲ್ಪಟ್ಟವು 3 ದಿನಗಳವರೆಗೆ ಅನ್ನಸಂತರ್ಪಣೆಯು ನಡೆಯಿಸಲ್ಪಟ್ಟಿತು ಅಲ್ಲಿಂದ ಬೇಗಳೂರಲ್ಲಿ ತಮ್ಮ ಶ್ರೀಮಹಂತಿನಮಠದಲ್ಲಿ ನಡೆಯುವ ಶ್ರೀರೇಣುಕಭಗವತ್ಪಾದರವರ ಜಯಂತಿಗಾಗಿ ತಾ॥ 21 ನೇ ಶನಿವಾರ ದಯಮಾಡಿಸಿದರು

ಸಿ ಯಂ ಗಂಗಾಧರಶರ್ಮಾ,
ವೇದಪಾಠಶಾಲಾಧ್ಯಾಪಕ

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ॥

ಬ್ರಹ್ಮಜ್ಞಾನಿಗಳಿಗೆ ಮುಕ್ತಿಯುಂಟಾಗುವುದಲ್ಲದೆ, ವಾಗ್ಬ್ರಹ್ಮಿಗಳಿಗೆ ಉಂಟಾಗಲಾರದು

(ಲೇ—ಶ್ರೀಪಟ್ಟದಸ್ವಾಮಿಗಳು ಹಿರೇಮಠ, ಕೊಣ್ಣೂರ)

ವೇದಶಾಸ್ತ್ರಗಳ ತತ್ವವನ್ನು ತಿಳಿದುಕೊಂಡು ಅದರಂತೆ ನಡೆದು, ನಡೆ-ನುಡಿಗಳಲ್ಲಿ ಪರಿಶುದ್ಧನಾಗಿ, ಜಗತ್ತಿನಲ್ಲಿರತಕ್ಕ ಪ್ರಾಣಿಗಳೆಲ್ಲವೂ ಬ್ರಹ್ಮಸ್ವರೂಪವೆಂದು ತಿಳಿದು, ಸುಖ ದುಃಖಗಳಿಗೆ ಹಿಗ್ಗದೆ ತಗ್ಗದೆ, ಮಿತ್ರನಲ್ಲಿಯೂ ಶತ್ರುವಿನಲ್ಲಿಯೂ ಸಮಾನ ಬುದ್ಧಿಯುಳ್ಳವನಾಗಿ ಇವರು ನನ್ನವರು, ಇವರು ಎರಡನೆಯವರು ಎಂಬ ಭೇದವನ್ನು ಮಾಡದೆ, ಹೆಂಡರು ಮಕ್ಕಳು, ಬಂಧು ಬಾಂಧವರು, ಶರೀರ, ಧನ, ಅಧಿಕಾರ ಮೊದಲಾದವುಗಳಲ್ಲಿ ಅಹಂಕಾರ ಮಮಕಾರಗಳನ್ನು ತೊರೆದು ನಾನು ನೀನೆಂಬ ಭೇದವನ್ನಳಿದ, ದಾನ ಧರ್ಮ ಪರೋಪಕಾರವನ್ನು ಮಾಡುತ್ತ, ಶಬ್ದಾದಿ ವಿಷಯಾದಿಗಳಿಗೆ ಹರಿದಾಡುವ ಇಂದ್ರಿಯಗಳನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡು ಗುರುವಿನ ಪಾದಕಮಲದಲ್ಲಿ ನಿರ್ಮಲವಾದ ಭಕ್ತಿಯನ್ನಿಟ್ಟು ಯಾವಾಗಲೂ ಶಾಸ್ತ್ರಚಿಂತನೆಯನ್ನು ಮಾಡುತ್ತ, ಜಪತಪೋನುಷ್ಠಾನಗಳಲ್ಲಿ ಕಾಲವನ್ನು ಕಳೆಯುವನಾವನುಂಟೋ ಅವನೇ ಮೋಕ್ಷಕ್ಕೆ ಅಧಿಕಾರಿಯೆನಿಸುವನು ಇದೇ ವಿಷಯವು ಅನುಭವಾಮೃತದಲ್ಲಿ—" ದಾನ ಧರ್ಮ ದಯದಿಂದ ಕೂಡಿದವರು ದುರ್ಮಾರ್ಗ ಮದ ಮತ್ಸರ ಹೀನರು ಮೌನದಿಂದಿದ್ದು ತಮ್ಮ ಧರ್ಮ ನಿಯಮದಂತೆ ನಡೆಯುತ್ತ, ಪರಮಾತ್ಮನ ಧ್ಯಾನದಲ್ಲಿ ಮಗ್ನರಾದವರು ಜ್ಞಾನಸಾಧನೆಯನ್ನು ಮಾಡಿಕೊಂಡು ಶಮ, ದಮ, ನಿರತರು ದಂಭ ದರ್ಪಗಳೇನೂ ಇಲ್ಲದ ಶಾಂತರೇ ತತ್ವಾಧಿಕಾರಿಗಳು. ಸತ್ಯ ಶೌಚಾಚಾರ ನಿರತರು ನಿರ್ಮಲವಾದ ಮನಸ್ಸುಳ್ಳವರು, ನಿಸ್ಪೃಹವೃತ್ತಿಯಲ್ಲಿ ವರ್ತಿಸುವ ಆಶಾಪಾಶ ವರ್ಜಿತರು, ಉತ್ತಮೋತ್ತಮವಾದ ಗುರುಪದಭಕ್ತಿಯಿಂದ ಕೂಡಿದವರು, ಭವದ ಬೇರನ್ನು ಕಿತ್ತೊಗೆಯುವ ಸಜ್ಜನರೇ ತತ್ವಾಧಿಕಾರಿಗಳು ನಿತ್ಯನೈಮಿತ್ತಿಕ ಕರ್ಮಗಳನ್ನು ಪ್ರಾಣಾಯಾಮ ಪ್ರಾಯಶ್ಚಿತ್ತ ಜಪತಪಾದಿ ಕಾಮ್ಯಕರ್ಮಗಳ ಸಿದ್ಧಿಗಳನ್ನು ಬಿಟ್ಟು ಭಕ್ತಿಯಿಂದ ಈಶ್ವರನನ್ನು ಪೂಜಿಸಿ ಚಿತ್ತಶುದ್ಧಿಯಂ ಪಡೆದು ಮೋಕ್ಷವನ್ನು ಹೊಂದುತ್ತಿಹ ಸಾಧುಗಳೇ ತತ್ವಾಧಿಕಾರಿಗಳು ಆಶಾಪಾಶವ ಹರಿದು ಪಂಚ ಕ್ಲೇಶಗಳನ್ನು ನೆರೆ ಮುರಿದು ಮನಸ್ಸಿನ ಮತ್ಸರವನ್ನು ಬಿಡಿಸಿ, ಷಡ್ರಿಪುಗಳನ್ನು ಅಪಹರಿಸಿ ನಿಷ್ಠೆಯಿಂದ ಗುರುಹಿರಿಯರಲ್ಲಿ ಮನವಿಟ್ಟು ಭಕ್ತಿಯಮಾಡಿ, ಬ್ರಹ್ಮದ ದಾರಿಯನ್ನು ಹತ್ತುವವರೇ ಉತ್ತಮ ತತ್ವಾಧಿಕಾರಿಗಳು ಕಾಯವಾಙ್ಮನಸುಗಳಿಂದ ಪಾಪದ ಕೃತಿಯನ್ನು ಮಾಡರು, ನುಡಿಯರು ನೆನೆಯರು. ಅನ್ಯರು ತನಗೆ ಅಪಕಾರವಂ ಮಾಡಲು ಪೂರ್ವ ಕೃತಕರ್ಮವೆಂದು ತಿಳಿಯುವನು ಮಕ್ಕಳು ಅಣ್ಣತಮ್ಮಂದಿರು ತಂದೆ ತಾಯಿಗಳು ತನ್ನನ್ನು ಬೇಕಾದಷ್ಟು ದೂಷಿಸಿದರೂ, ಸ್ತುತಿಸಿದರೂ ಮನದಲ್ಲಿ ನೊಂದುಕೊಳ್ಳನು, ಹಿಗ್ಗನು, ಮೋಕ್ಷಾಪೇಕ್ಷಿತನು. ತನ್ನ ಸಂತೋಷಕ್ಕಾಗಲಿ ಕಷ್ಟಕ್ಕಾಗಲಿ ಬೇಕಾದಷ್ಟು ಸುಖ ದುಃಖಗಳು ಬಂದರೂ, ಹಿಗ್ಗದೆ ಕುಗ್ಗದೆ, ಇವೆಲ್ಲ ಈ ಹೊತ್ತು ಉತ್ತರಾಕ್ಷೆಯಿಂದ ಬಂದಿವೆಯೆನ್ನುತ್ತ ಧೈರ್ಯವನ್ನು ತಂದು, ಮನಸ್ಸಿನಲ್ಲಿ ದೃಢವಿರಕ್ತಿಯ ಹೊಂದಿ, ಭೋಗ ಭ್ರಾಂತಿಗಳನಳಿದಾತನೆ ಮುಮುಕ್ಷುವೆನಿಸುವನು. ಹಿಂದೆ ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯದ ಫಲದಿಂದ ಬ್ರಾಹ್ಮಣ ಕುಲದಲ್ಲಿ ಹುಟ್ಟಿದೆನು, ಮುಂದೆ ತನಗೆ ಇನ್ನಾವ ಗತಿಯೆಂದು ಕಾಣೆನು ಈ ಪ್ರಕಾರ ಮನದಲ್ಲಿ ದೃಢ ವಿವೇಕವ ತಂದು ಸದ್ಗುರು ಪಾದಕಮಲದಲ್ಲಿ ಭಕ್ತಿಯನ್ನಿಟ್ಟು ನಡೆಯುವವನೇ ಮುಮುಕ್ಷುವೆನಿಸುವನು ಬಲ್ಲವರನ್ನು ಕೇಳಿಕೊಂಡು ಶಾಸ್ತ್ರದ ಸಾರವನ್ನು ತಿಳಿದು ಸತ್ಪುರುಷರ ಗೆಳೆತನವನ್ನು ಮಾಡಿ, ಸದಾಚರಣೆಯಲ್ಲಿ ನಡೆಯುವ ಯೋಗ್ಯವಾದ ಸದ್ವಾಸನೆಗಳನ್ನು ಬಿಡದೆ, ಅಭ್ಯಾಸ ಮಾಡುವವನೇ ಮುಮುಕ್ಷುವೆನಿಸುವನು. ಬುದ್ಧಿಯಲ್ಲಿ ಕಪಟತನ ಕಲ್ಮಷವಿಲ್ಲದೆ ಚಪಲ ವೃತ್ತಿಯ ಚೇಷ್ಟೆಯಿಲ್ಲದೆ, ಕೃಪಣತನದ ಆಟೋಪ ಆಗ್ರಹ ನಿಗ್ರಹಗಳಿಲ್ಲದೆ ಪ್ರಪಂಚದೊಡನೆ ಗೋಷ್ಠಿಯಿಲ್ಲದೆ, ಗುರುಕೃಪೆಯಿಂದ ಉಪನಿಷದ್ವಾಕ್ಯಾರ್ಥವನ್ನು ತಿಳಿದುಕೊಂಡ ನಿಪುಣನೇ ಮುಮುಕ್ಷುವೆನಿಸುವನು ಸ್ತ್ರೀಯರು ತನ್ನೆದುರಿಗೆ ಬಂದರೆ ಕುರುಡನಂತಿರುವನು. ಅನ್ಯರು ಪರರನಿಂದೆಯ ಮಾಡಿದರೆ ಬಧಿರನಂತಿರುವನು ಪ್ರೀತಿಯಿಂದ ಅದನ್ನು ಕೇಳಲಾರನು ನೀಚರು ಕರದಲ್ಲಿ ದುಡ್ಡನ್ನು ಹಿಡಿದುಕೊಂಡ ಆಶೆತೋರಿಸಿದರೂ ಆ ಪರಧನವನ್ನು ಮುಟ್ಟಲಾರನು ದುಷ್ಟರು ತನ್ನನ್ನು ಜರೆದರೂ ಹಿಂತಿರುಗಿ ಅವರನ್ನು ಹೀಯಾಳಿಸನು, ಅವನೇ ಮುಮುಕ್ಷುವೆಂದೆನು ಸಂಕಟಕಾಲದಲ್ಲಿ ಎದೆಗುಂದದೆ ಅರಸನಾದಾಗ್ಯೂ ಉಬ್ಬದೆ, ಬಡತನ ಬಂದಿತೆಂದು ಕುಂದದೆ, ಪದವಿ ಗಳಿಸಿದ್ದೇನೆಂದು ಗರ್ವಪಡದೆ, ಮಡದಿ, ಮನೆ, ಮನಸ್ಸು, ಮಕ್ಕಳು, ಒಡವೆ ಇವುಗಳ ಸುದ್ದಿಯಲ್ಲಿ ಪ್ರೀತಿಯಿಲ್ಲದೆ, ದೃಢ ವಿರಕ್ತಿಯಲ್ಲಿ ಇರುವಾತನೇ ಮೋಕ್ಷಕ್ಕೆ ಅರ್ಹನೆನಿಸುವನು ಅಧ್ಯಾತ್ಮಿಕ ವಿಷಯದಲ್ಲಿ ಅಪೇಕ್ಷೆಯು ಯಾವಾಗಲೂ ಶಾಸ್ತ್ರವನ್ನು ಕೇಳಬೇಕೆಂಬ ಮನಸ್ಸುಳ್ಳವನೂ, ಘನವಾದ ವಿವೇಕ, ವೈರಾಗ್ಯ ಸದ್ಗುಣ ವೃತ್ತಿಗಳಿಂದ ಕೂಡಿದ ಸತ್ಸಂಗವುಳ್ಳವನೂ, ವಿನಯದಿಂದ ಗುರುಸೇವೆ ಮೊದಲಾದವುಗಳನ್ನು ಮಾಡುತ್ತ ಸದ್ವರ್ತನೆಯಿಂದ ಕೂಡಿದ ಮನುಜನೇ ತತ್ವಾಧಿಕಾರಿ ಮುಮುಕ್ಷುವೆನಿಸುವನು " ಈ ಪ್ರಕಾರವಾಗಿ ಹೇಳಲ್ಪಟ್ಟಿದೆ ಮೇಲಿನ ಲಕ್ಷಣಗಳಿಂದ ಕೂಡಿದ ಜ್ಞಾನಿಗಳಿಗೆ ಮುಕ್ತಿಯುಂಟಾಗುವದಲ್ಲದೆ ವಾಗ್ಬ್ರಹ್ಮಿಗಳಿಗೆ ಮುಕ್ತಿಯುಂಟಾಗಲಾರದು ಕೆಲವರು ಉಪನಿಷದ್ವಾಕ್ಯಗಳ ತಿರುಳನ್ನರಿಯದೆ ವಿಚಾರಸಾಗರ, ಜ್ಞಾನಸಿಂಧು ಮೊದಲಾದ ಗ್ರಂಥಗಳನ್ನು ಸ್ವಲ್ಪ ನೋಡಿಕೊಂಡು ಒಳ್ಳೇ ವೇದಾಂತ ಬಲ್ಲವರಂತೆ ನಟಿಸಿ, ಎಲ್ಲವೂ ಬ್ರಹ್ಮಸ್ವರೂಪವೆಂದು 'ಅಹಂಬ್ರಹ್ಮಾಸ್ಮಿ—ತತ್ವಮಸಿ' ಮುಂತಾದ ವೇದಾಂತವಾಕ್ಯಗಳನ್ನು ಉಪದೇಶಮಾಡುತ್ತ ತಾನುಮಾತ್ರ ತನ್ನದಂತೆ ನಡೆಸದೆ ಪರಸ್ತ್ರೀಸಂಗದಿಂದ ಕೂಡಿ ಪರದ್ರವ್ಯವನ್ನು ಅಪಹರಿಸುತ್ತ ಯಾವಾಗಲೂ ದುರ್ವಿಷಯಗಳಲ್ಲಿ ಮಗ್ನನಾಗಿ ಸ್ವೇಚ್ಛಾಪ್ರಕಾರ ವರ್ತಿಸುತ್ತ ಬಾಯಿಬಡಕತನದಿಂದ ವೇದಾಂತಶಾಸ್ತ್ರವನ್ನು ಹೇಳಿದರೆ, ಅದರಿಂದ ಆಗತಕ್ಕ ಫಲವೇನು ? " ಕ್ರಿಯಾ ವಿಣಾ ವಾಚಾಲತಾ ವ್ಯರ್ಥ ಆಹೆ " ಅಂದರೆ ನಡತೆಯಿಲ್ಲದೆ ಬಾಯಿಬಡಕತನವು ನಿರುಪಯೋಗವಹೆ ಎಂದು ರಾಮದಾಸರು ತಮ್ಮ ದಾಸಬೋಧ ಗ್ರಂಥದಲ್ಲಿ ಹೇಳಿದ್ದಾರೆ. ' ಚಾಪ್ಪಡಿಗಳಿರುವಲ್ಲಿ ಬಿಡಾರವನ್ನೂ ಮಾಡಬಾರದು " ಎಂದು ಒಬ್ಬ ನೀತಿಕಾರನು ಹೇಳಿದ್ದಾನೆ. ಅಂದಬಳಿಕ ಬಾಯಿಬಡಕ ಜನರಲ್ಲಿ ಶಾಸ್ತ್ರವನ್ನು ಕೇಳಲಿಕ್ಕೆ ಹೋಗುವ ಜನರು ಮೂರ್ಖರೇ ಸರಿ

(೭ನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೨ನೆಯ ಮಾರ್ಚಿ ತಾ॥ ೯ನೇ ಸೋಮವಾರ

ವಿದೇಶಗಳಲ್ಲಿ ಶಿವಾಲಯಗಳ ವ್ಯಾಪಕತೆ.

ಭರತಖಂಡದ ಹೊರಗಿರತಕ್ಕ ದೇಶಗಳಲ್ಲಿ ಶಿವ [illegible] ಗಳು ಯಾವ ಯಾವ ಸ್ಥಾನಗಳಲ್ಲಿರುವವೆ [illegible] ವನ್ನು ನಮ್ಮ ಪತ್ರಿಕೆಯಲ್ಲಿ [illegible] ಪ್ರಕಟಿಸುತ್ತಿರುವುದು ಸರಿಯಷ್ಟೆ! ಈಗ ಅನ್ನಾಂ [illegible] ಶಿವಾಲಯಗಳ ವ್ಯಾಪಕತೆಯು ಎಷ್ಟು [illegible] ವಿಷಯವನ್ನು ವಿಮರ್ಶಿಸುತ್ತೇವೆ ಈ ಅನ್ನಾಂ Annam ದೇಶವು ಇಂಡೋ ಚೈನಾ Indo China ದಲ್ಲಿರುವದು ಪ್ರಾಚೀನ ಕಾಲದಲ್ಲಿ ಈ ದೇಶಕ್ಕೆ 'ಚಂಪಾ' ಎಂದು ಕರೆಯುತ್ತಿದ್ದರು ಈ ದೇಶದಲ್ಲಿ [illegible] ಅನೇಕಾನೇಕ ಪ್ರಾಚೀನ ಶಿವಾಲಯಗಳು ವಿರಾಜಿಸುತ್ತಿರುವವು ಫ್ರೆಂಚ್ ದೇಶದ ಇತಿಹಾಸ ಸಂಶೋಧಕರಲ್ಲಿ ಪ್ರಸಿದ್ಧರಾದ ಮಿ॥ ಎ ಬರ್ಗೇನ್ (A Bergaine) ಎಂಬವರು ಆ ದೇಶದ ದೇವಾಲಯಗಳಲ್ಲಿರತಕ್ಕ ಯಾವತ್ತೂ ಸಂಸ್ಕೃತಶಿಲಾಶಾಸನಗಳನ್ನು ಸಂಶೋಧಿಸಿ ಒಂದು ದೊಡ್ಡ ಗ್ರಂಥವನ್ನೇ ಬರೆದಿರುವರು ಈ ಗ್ರಂಥಾಧಾರದಿಂದಲೂ, ಇತರ ಪ್ರಾಚೀನ ಗ್ರಂಥಾಧಾರಗಳಿಂದಲೂ ಮಿ॥ ಆರ್ ಸಿ ಮಜುಮ್‌ದಾರ್ ಎಂಬವರು 'Ancient Indian Colonies in the Far East' ಎಂಬ ಗ್ರಂಥವನ್ನು ಬರೆದಿರುವರು. ಈ ಗ್ರಂಥದಲ್ಲಿ ಆ ದೇಶದಲ್ಲಿ ದೊರೆತ ೧೨ ಶಾಸನಗಳು ಶಿವನ ವಿಷಯಕವಾಗಿಯೂ, ೩ ಶಾಸನಗಳು ವಿಷ್ಣುವಿನ ವಿಷಯಕವಾಗಿಯೂ, ೫ ಶಾಸನಗಳು ಬ್ರಹ್ಮನ ವಿಷಯಕವಾಗಿಯೂ, ೩ ಶಾಸನಗಳು ಶಿವ ಮತ್ತು ವಿಷ್ಣು ಇವರಿಬ್ಬರ ವಿಷಯಕವಾಗಿಯೂ, ೭ ಶಾಸನಗಳು ಬುದ್ಧನ ವಿಷಯಕವಾಗಿಯೂ ಇರುವವೆಂದು ಬರೆಯಲ್ಪಟ್ಟಿದೆ ಈ ಮಹೋದಯರು ಸಂಸ್ಕೃತಾಕ್ಷರಗಳಿಂದಿರತಕ್ಕ ಆ ಯಾವತ್ತು ಶಾಸನಗಳನ್ನು ಇದ್ದಕ್ಕಿದ್ದ ಹಾಗೆಯೇ ಮುದ್ರಿಸಿರುವರು ಕೆಲ ಪ್ರಾಚೀನ ಶಾಸನಗಳಲ್ಲಿ ಅಕ್ಷರಗಳೇ ಲೋಪವಾಗಿವೆ ಆ ಶಾಸನಗಳಲ್ಲಿರತಕ್ಕ ಸಂಸ್ಕೃತ ಕವಿತಾಶೈಲಿಯು ಬಹು ಹೃದಯಂಗಮವಾಗಿದೆ ಶಿವನ ವಿಷಯಕವಾಗಿದ್ದ ಅನೇಕ ಶಾಸನಗಳ ಮೇಲ್ಭಾಗದಲ್ಲಿ "ಓಂನಮಃಶಿವಾಯ" ಎಂಬ ಮಹಾಮಂತ್ರವು ಕೆತ್ತಲ್ಪಟ್ಟಿದ್ದು, ಮುಂದೆ ಆ ದೇಶಗಳನ್ನಾಳುತ್ತಿದ್ದ ರಾಜರ ವರ್ಣನೆಯೂ, ಅವರು ಸ್ಥಾಪಿಸಿದ ಶಿವಲಿಂಗಗಳ ವರ್ಣನೆಯೂ ಗದ್ಯಪದ್ಯಾತ್ಮಕವಾಗಿ ಕೆತ್ತಲ್ಪಟ್ಟಿದೆ ಆ ದೇಶದ ಪ್ರತಿಯೊಂದು ಶಾಸನವನ್ನು ಓದಿ ನೋಡಿದರೆ ಶಿವಭಕ್ತರ ಮನಸ್ಸು ಆನಂದಸಾಗರದಲ್ಲಿ ಓಲಾಡುವಂತಿದೆ ಪೂರ್ವದಲ್ಲಿ ಆ ದೇಶವನ್ನಾಳುತ್ತಿದ್ದ ಸಮಸ್ತರಾಜರೂ ಪರಮಶಿವಭಕ್ತರಾಗಿ ಹೋಗಿದ್ದಾರೆ ಆ ರಾಜರಲ್ಲಿದ್ದ ಶಿವಭಕ್ತಿಯು ಶೈವಶಿಖಾಮಣಿಗಳೆಂದು ಹೇಳುವ ವೀರಶೈವರಲ್ಲಿಯೂ ಸಹ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು.

ಆ ದೇಶದಲ್ಲಿ "**ಮಿ-ಸೋನ್**" ಎಂಬ ಗ್ರಾಮವಿರುವದು ಈ ಗ್ರಾಮವು ಪೂರ್ವದಲ್ಲಿ ಶ್ರೀಕಾಶೀಕ್ಷೇತ್ರಕ್ಕಿಂತಲೂ ಮಿಗಿಲಾದ ಶಿವಕ್ಷೇತ್ರವೆನಿಸಿಕೊಂಡಿತ್ತೆಂದು ಅಲ್ಲಿರತಕ್ಕ ಅನೇಕಾನೇಕ ಶಿವದೇವಾಲಯಗಳಿಂದಲೂ, ಶಿಲಾಶಾಸನಗಳಿಂದಲೂ ತಿಳಿದುಬರುತ್ತದೆ ಅಲ್ಲಿರತಕ್ಕ ಶಿವಾಲಯಗಳಷ್ಟು ಮನೋಹರವಾದ ಶಿವಾಲಯಗಳು ನಮ್ಮ ಭರತಖಂಡದಲ್ಲಿಯೇ ಇಲ್ಲವೆಂದು ಹೇಳಬಹುದಾಗಿದೆ ಇಂಥ ಪರಮಪವಿತ್ರವಾದ ಶಿವಕ್ಷೇತ್ರವು ಕಾಲಮಹಿಮೆಯಿಂದ ಅನ್ಯಮತೀಯರ ಕೃಪೇರಿ, ಅತ್ಯಂತ ಹೀನಾವಸ್ಥೆಗೀಡಾಗಿರುವದನ್ನು ನೋಡಿದರೆ ಯಾರಿಗೆತಾನೆ ವ್ಯಸನವೆನಿಸಲಿಕ್ಕಿಲ್ಲ?

ಈ ಮಿ ಸೋನ್ ಗ್ರಾಮದಲ್ಲಿ ಅನೇಕ ಶಾಸನಗಳಿದ್ದು ಅದರಲ್ಲಿಯ ೪ನೆಯ ಶಾಸನದಲ್ಲಿ—ಭದ್ರವರ್ಮನೆಂಬ ರಾಜನು "**ಭದ್ರೇಶ್ವರ**" ಎಂಬ ಶಿವಲಿಂಗವನ್ನು ಸ್ಥಾಪಿಸಿ ಆ ದೇವರ ಸೇವೆಗೋಸ್ಕರ ಸುಲಹಪರ್ವತ-ಮಹಾಪರ್ವತ ಕುಚಕಪರ್ವತ ಮಹಾನದಿ ಇವುಗಳ ಮಧ್ಯದಲ್ಲಿರುವ ಸಮಸ್ತಭೂಮಿಯನ್ನು ದಾನಮಾಡಿದ ವಿಷಯವು ಬರೆಯಲ್ಪಟ್ಟಿರುತ್ತದೆ ಈ ಶಾಸನವು ಕ್ರಿ ಶ ೪ನೆಯ ಶತಮಾನದಲ್ಲಿ ಬರೆಯಲ್ಪಟ್ಟಿದೆ ಇಷ್ಟು ಭೂಮಿಯನ್ನು ಭದ್ರವರ್ಮ ಮಹಾರಾಜನು ಭದ್ರೇಶ್ವರ ಲಿಂಗಕ್ಕೋಸ್ಕರ ದಾನಮಾಡಬೇಕಾದರೆ, ಆ ಮಹಾರಾಜನಿಗೆ ಆ ಶಿವಲಿಂಗದಲ್ಲಿ ಎಷ್ಟು ಭಕ್ತಿಯಿದ್ದಿರಬಹುದೆಂಬ ವಿಷಯವನ್ನು ವಾಚಕರೇ ಯೋಚಿಸಬಹುದಾಗಿದೆ ಭದ್ರವರ್ಮನು ಕಟ್ಟಿಸಿದ ಈ ದೇವಾಲಯವು ಸುಟ್ಟುಹೋಗಲು, ರುದ್ರವರ್ಮನ ಪುತ್ರನಾದ ಶಂಭುಭದ್ರವರ್ಮನು 'ಶಂಭುಭದ್ರೇಶ್ವರ' ಎಂಬ ಹೆಸರಿನಿಂದ ಬೇರೊಂದು ಶಿವಲಿಂಗವನ್ನು ಸ್ಥಾಪಿಸಿದನು ಈ ವಿಷಯವು ೭ನೆಯ ಶಾಸನದಲ್ಲಿ ಹೇಳಲ್ಪಟ್ಟಿದ್ದು, ಆ ಲಿಂಗದ ಸ್ತುತಿಯು ಈ ಕೆಳಗೆ ಕೊಟ್ಟಂತೆ ಆ ಶಾಸನದಲ್ಲಿ ಬರೆಯಲ್ಪಟ್ಟಿದೆ

ಸೃಷ್ಟಂ ಯೇನ ತ್ರಿತಯಮಖಿಲಂ ಭೂರ್ಭುವಸ್ಸ್ವಸ್ಸಶಕ್ತ್ಯಾ
ಯೇನೋತ್ಸಾತಂ ಭುವನದುರಿತಂ ವಹ್ನಿನೇವಾಂಧಕಾರಃ ।
ಯಸ್ಯಾಚಿಂತ್ಯೋ ಜಗತಿ ಮಹಿಮಾ ಯಸ್ಯ ನಾದಿರ್ನಚಾಂತ
ಶ್ಚಂಪಾದೇಶೇ ಜನಯತು ಸುಖಂ ಶಂಭುಭದ್ರೇಶ್ವರೋಽಯಂ ॥

ಈ ಶ್ಲೋಕದಲ್ಲಿರತಕ್ಕ ಅರ್ಥವನ್ನು ವಿಚಾರಮಾಡಿದರೆ, ಆ ರಾಜನಿಗೆ ಶಿವಲಿಂಗದಲ್ಲಿ ಎಂತಹ ಘನತರವಾದ ಭಕ್ತಿಯಿದ್ದಿತೆಂಬ ವಿಷಯವು ಪ್ರತಿಯೊಬ್ಬರಿಗೂ ವೇದ್ಯವಾಗುವದು

೨೧ನೆಯ ಶಾಸನದಲ್ಲಿ—

ಜಯತಿ ಜಿತಮನೋಜೋ ಬ್ರಹ್ಮವಿಷ್ಣ್ವಾದಿದೇವ
ಪ್ರಣತಚರಣಯುಗ್ಮೋ ನಿಷ್ಕಳಂಕಸ್ವರೂಪೀ ।
ತ್ರಿಭುವನಭವಹೇತುಃ ಸರ್ವಸಂಕಲ್ಪಹಾರೀ
ಪರಪುರುಷ ಇಹ ಶ್ರೀಶಾನದೇವೋಽನುನಾಸ್ಯಃ ।

೩೭ನೆಯ ಶಾಸನದಲ್ಲಿ—

ಬ್ರಹ್ಮಾದಿಮುನಿಸುರನತಃ ಶ್ರೀಭದ್ರೇಶ್ವರಃ ಪ್ರಭುರ್ಭಗವಾನ್ ।
ಜಯತಿ ಜಗದುರುರಾಪ್ಯಸ್ತ್ರಪುರವಿಜಯಿಯಾ ಯೇನಾಗಿಭಿಃ ಸಾರ್ಧಂ ॥

ಈ ಶ್ಲೋಕಗಳಲ್ಲಿ ಶಿವನ ವಿಷಯಕವಾಗಿದ್ದ ವಿಶೇಷಣಗಳನ್ನು ನೋಡಿದರೆ, ಶಿವಭಕ್ತರ ಮನಸ್ಸಾಗರವು ಮೇರೆದಪ್ಪಿ ಉಕ್ಕುವಂತಿದೆ ಬ್ರಹ್ಮವಿಷ್ಣ್ವಾದಿಗಳಿಂದ ಪೂಜಿಸಲ್ಪಟ್ಟ ಪಾದಕಮಲಗಳುಳ್ಳವನೂ, ತ್ರಿಲೋಕಗುರುವೂ ಇವೇ ಮೊದಲಾದ ವಿಶೇಷಣಗಳನ್ನು ಕೊಡಬೇಕಾದರ ಆ ಮಹಾರಾಜರಲ್ಲಿ ಶಿವನ ಬಗ್ಗೆ ವೀರಶೈವರಿಗಿಂತಲೂ ಹೆಚ್ಚಿನ ಭಕ್ತಿಯಿದ್ದಿತೆಂದೂ, ಇದಕ್ಕೆ ವೀರಶೈವಾಚಾರ್ಯರ ಉಪದೇಶವೇ ಮೂಲಕಾರಣವಾಗಿರಬಹುದೆಂದೂ ಹೇಳಬಹುದಾಗಿದೆ ಈ ಬಗ್ಗೆ ಆ ದೇಶದಲ್ಲಿ ದೊರೆಯುವ ಒಂದು ಶಾಸನದಲ್ಲಿ ಮಹತ್ವದ ವಿಷಯವು ಕಂಡುಬರುವುದು ಈ ವಿಷಯವನ್ನು ಮುಂದಿನ ಸಂಚಿಕೆಯಲ್ಲಿ ವಿಮರ್ಶಿಸುವೆವು

ಯುದ್ಧವಾರ್ತೆ.

ಭರತಖಂಡದಲ್ಲಿ ಸಂಗ್ರಾಮವಸ್ತು ನಿರ್ಮಾಣ

ಭರತಖಂಡದಲ್ಲಿ ಸಂಗ್ರಾಮವಸ್ತು ನಿರ್ಮಾಣ ಕಾರ್ಖಾನೆಗಳನ್ನು ಹೆಚ್ಚಿಸಿ ಶೀಘ್ರ ಕೆಲಸಮಾಡುವಂತೆ ಮಾಡಲು ಅಮೆರಿಕೆಯ ನಿಯೋಗಗೋಷ್ಠಿಯೊಂದು ಭಾರತಕ್ಕೆ ಬರಲಿದೆಯೆಂಬ ವಿಷಯವನ್ನು ಮಿ॥ ಸಮ್ನರ್ ವೆಲ್ಸ್‌ರವರು ತಿಳಿಯಪಡಿಸಿದರು

ಸೂಯೆಜ್ ಕಾಲುವೆಯಮೇಲೆ ಬಾಂಬು

ನೆಯ ತಾರೀಖಿನ ದಿವಸ ಮತ್ತೆ ಸೂಯೆಜ್ ಕಾಲುವೆ ಮತ್ತು ಅಲೆಗ್ಝಾಂಡ್ರಿಯ ಕ್ಷೇತ್ರಗಳಮೇಲೆ ಶತ್ರುಗಳು ಬಾಂಬುಗಳನ್ನು ಹಾಕಿದರು ೬ನೆಯ ತಾರೀಖಿನ ದಿವಸ ಮಾಲ್ಟಾ ಮೇಲೆ ಮುತ್ತಿಗೆ ನಡೆಯಿತು ಸೂರ್ಯೋದಯದಿಂದ ಕತ್ತಲಾಗುವವರೆಗೆ ಶತ್ರುವಿಮಾನಗಳು ಹಾರಾಡುತ್ತಿದ್ದವು

ಜಪಾನ್ ಬಾಂಬರುಗಳ ನಾಶ

ಗಿಲ್‌ಬರ್ಟ್‌ದ್ವೀಪಗಳ ಪಶ್ಚಿಮದಲ್ಲಿ ಜಪಾನ್ ಬಾಂಬರುಗಳು ಅಮೆರಿಕೆಯ ನೌಕಾಬಲದಮೇಲೆ ಬಿದ್ದಾಗ ಅಮೆರಿಕನ್ನರು 16 ಜಪಾನ್ ಬಾಂಬರುವಿಮಾನಗಳನ್ನು ಹೊಡೆದು ಕೆಡವಿದರೆಂದೂ, ಎರಡು ಅಮೆರಿಕ ಫೈಟರುಗಳು ಮಾತ್ರ ನಾಶವಾದವೆಂದೂ ಪ್ರಕಟವಾಗಿದೆ.

ಬರ್ಮಾದಿಂದ ಸ್ತ್ರೀಯರನ್ನು ಸಾಗಿಸಲಾಗುತ್ತಿದೆ

ಬರ್ಮಾದಲ್ಲಿರುವ ಬ್ರಿಟಿಷ್ ಮತ್ತು ಅಮೆರಿಕ ಸ್ತ್ರೀಯರನ್ನು ಈಗ ಭಾರತಕ್ಕೆ ಸಾಗಿಸಲಾಗುತ್ತಿದೆ ಬರ್ಮಾದಲ್ಲೇ ಇರಬೇಕೆಂದು ದೃಢ ಸಂಕಲ್ಪಮಾಡಿರುವವರನ್ನು ಬಿಟ್ಟು ಉಳಿದವರನ್ನೆಲ್ಲಾ ಸಾಗಿಸಲಾಗುವುದು

ಬರ್ಮಾಯುದ್ಧ

ಬರ್ಮಾದೇಶವನ್ನು ಉಳಿಸಲು ಹೆಚ್ಚು ಜನ ಭಾರತೀಯರು ರಂಗೂನಿಗೆ ಬರುತ್ತಿದ್ದಾರೆಂದೂ ಸಿಟ್ಟಾಂಗ್ ರಂಗದಲ್ಲಿ ವಾವ್ ಎಂಬಲ್ಲಿ ಶತ್ರುಗಳ ಮುಂಗಾವಲುಪಡೆಗೂ ಬ್ರಿಟಿಷ್ ಪಡೆಗೂ ಹೊಡೆದಾಟ ನಡೆಯಿತೆಂದೂ, ಆರ್ ಎ ಎಫ್ ಬಾಂಬರುಗಳೂ ಫೈಟರುಗಳೂ ಶತ್ರುಸ್ಥಾನಗಳಮೇಲೆ ಫಲಪ್ರದವಾಗಿ ಮುತ್ತಿಗೆ ನಡೆಸುತ್ತಿವೆಯೆಂದೂ, ಜಪಾನರು ಬರ್ಮಾರಸ್ತೆಯನ್ನು ಕತ್ತರಿಸಿದ್ದಾರೆಂದೂ, ಬಹುಮಂದಿ ಜಪಾನರು ಇನ್ನೂ ಸಿಟಾಂಗ್ ನದಿಯನ್ನು ದಾಟಿಲ್ಲವೆಂದೂ, ಇದುವರೆಗೆ ಬರ್ಮಾದಲ್ಲಿ 100 ಜಪಾನ್ ವಿಮಾನಗಳನ್ನು ನಾಶಮಾಡಲಾಗಿದೆಯೆಂದೂ ಪ್ರಕಟವಾಗಿದೆ

ಜಲಮಾರ್ಗಗಳೆಲ್ಲವೂ ಜಪಾನರ ವಶವಾಗಿವೆ

“ಪೆಸಿಫಿಕ್ ಸಾಗರದಲ್ಲಿ ಮಿತ್ರರಾಷ್ಟ್ರಗಳ ನೌಕಾಬಲಕ್ಕೆ ಹೆಚ್ಚಿನ ನಷ್ಟವಾದುದರಿಂದ ನಾವು ಆ ಕ್ಷೇತ್ರದಲ್ಲಿ ಸದ್ಯಃ ಶತ್ರುಗಳ ಮೇಲೆ ಬೀಳಲು ಅಶಕ್ತರಾಗಿದ್ದೇವೆ ಜಾವಾಕ್ಕೆ ಬರಬೇಕಾದ ಸೇನೆಗಳನ್ನೂ ಮತ್ತು ಸಂಗ್ರಾಮವಸ್ತುಗಳನ್ನೂ ಬಹುಮಟ್ಟಿಗೆ ಜಲಮಾರ್ಗದಲ್ಲಿಯೇ ಕಳುಹಿಸಬೇಕು ಆದರೆ ಸುತ್ತಮುತ್ತಲ ಜಲಮಾರ್ಗಗಳೆಲ್ಲವೂ ಜಪಾನರ ವಶವಾಗಿರುವುವಲ್ಲದೆ, ವಿಮಾನ ನಿಲ್ದಾಣಗಳೂ ಸಹ ಶತ್ರುಗಳ ವಶವಾಗಿವೆ ಆದ್ದರಿಂದ ಈಗ ಜಾವಾದಲ್ಲಿ ನಡೆಯುತ್ತಿರುವುದು ದಿಕ್ಕುತೋಚದ ಇರತಕ್ಕಂತಹ ಹೊಡೆದಾಟ” ಎಂದು ಪ್ರಕಟವಾಗಿದೆ

ಜಾವಾದಲ್ಲಿ ೧ ಲಕ್ಷ ಜನ ಜಪಾನರು!

ಜಪಾನರು ಇದುವರೆಗೆ ಸುಮಾರು 1 ಲಕ್ಷ ಸೈನಿಕರನ್ನು ಜಾವಾದ್ವೀಪಕ್ಕೆ ತಂದಿದ್ದಾರೆಂದು ಅಧಿಕಾರಯುತವಾಗಿ ತಿಳಿಸಲಾಗಿದೆ ಅವರು ಹಗುರವಾದ ಟ್ಯಾಂಕುಗಳನ್ನೂ ಮತ್ತು ಶಸ್ತ್ರಬಂಡಿಗಳನ್ನೂ ತಂದಿದ್ದಾರೆ ಸಾಮಾನ್ಯವಾಗಿ ಅಲ್ಲಿ 50000 ಸೈನಿಕರಿದ್ದಾರೆ ಇದರಿಂದ ರಕ್ಷಕರಿಗಿಂತ ಶತ್ರುಗಳ ಸಂಖ್ಯೆ ಬಹಳ ಹೆಚ್ಚಾಗಿದೆಯೆಂಬುದು ವ್ಯಕ್ತವಾಗುತ್ತದೆ ಸೈನಿಕರಿಲ್ಲದೆ ಸುಮಾರು 50000 ಮಂದಿ ಗೃಹರಕ್ಷಣೆ ಪಡೆಯುವರಿದ್ದಾರೆ ಹಲವು ಸಾವಿರ ಬ್ರಿಟಿಷ್ ಮತ್ತು ಅಮೆರಿಕನ್ ಯೋಧರೂ ಇರುವರು ಜಪಾನರು ಪಶ್ಚಿಮದಿಂದ ಬಾಂಡೊಯೆಂಗ್ ಕಡೆಗೆ ನುಗ್ಗಲೋಸುಗ ಇಂದ್ರಮಾಯೂದಲ್ಲಿ ಇಳಿದಿರುವುದರಿಂದ ಪೂರ್ವ ಕಡೆಯಿಂದ ಸಹ ವಿಪತ್ತುಂಟಾಗಿದೆ. ಈಗಲೆ ಒಂದು ಶತ್ರುಪಡೆ ಕ್ರವಾಂಗ್ ಮೈದಾನದ ಮೂಲಕ ಬಟಾವಿಯಾ ಕಡೆಗೆ ನುಗ್ಗುತ್ತಿದೆ ಇನ್ನೊಂದು ಪಡೆಯು ದಕ್ಷಿಣಕ್ಕೆ ಬಾಂಡೋಯೆಂಗ್ ಕಡೆಗೆ ನುಗ್ಗುತ್ತಿದೆ ಜಾವಾದಲ್ಲಿ ಮಿತ್ರಸೇನೆಗಳು ಅತ್ಯುಗ್ರವಾಗಿ ಜಪಾನರನ್ನು ಎದುರಿಸಿದರೂ ಸಹ ಜಪಾನರು ಮುಂದೆ ಹೋಗಲು ಸಮರ್ಥರಾದರು. ಪರಿಸ್ಥಿತಿಯು ಉಗ್ರವಾದುದರಿಂದ ಮಿಲಿಟರಿ ಸಾಧನಗಳನ್ನೆಲ್ಲ ನಾಶಮಾಡುವ ನೀತಿಯನ್ನು ಕಾರ್ಯರೂಪಕ್ಕೆ ತರಲಾಗಿದೆ. ಕಟ್ಟಕಡೆಯವರೆಗೆ ಹೊಡೆದಾಡಬೇಕೆಂಬುದಾಗಿ ಲಂಡ

ನ್ನಿನಲ್ಲಿರುವ ನೆದರ್‌ಲೆಂಡ್ ಸರ್ಕಾರದವರು ತಮ್ಮ ಸೈನ್ಯಾಧಿಕಾರಿಗಳಿಗೆ ಆಜ್ಞೆಮಾಡಿದ್ದಾರೆ

ಆಸ್ಟ್ರೇಲಿಯ ಪರಿಸ್ಥಿತಿ

ಜಪಾನ್ ವಿಮಾನಗಳು ಆಸ್ಟ್ರೇಲಿಯದ ವಿಂಡ್‌ಹ್ಯಾಂ ಮತ್ತು ಬ್ರೂಂ ಬಂದರುಗಳ ಮೇಲೆ ಬಾಂಬುಹಾಕಿದ ವಿಚಾರವಾಗಿ ಮಹಾ ಪ್ರಧಾನರಾದ ಮಿ॥ ಕರ್ಟಿನ್‌ರವರು ಎಚ್ಚರಿಕೆ ಕೊಡುತ್ತ—“ ಈಗ ಉತ್ತರ ಆಸ್ಟ್ರೇಲಿಯಾಕ್ಕೆ ವಿಪತ್ತೊದಗಿದೆಯೆಂದೂ, ಶತ್ರುಗಳು ಅಲ್ಲಿ ಸ್ಥಾನಗಳನ್ನು ಹಿಡಿಯಲು ಅವಕಾಶವಾದರೆ, ಜನಸಾಂದ್ರತೆ ಹೆಚ್ಚಾಗಿರುವ ಪೂರ್ವ ಭಾಗಗಳಿಗೆ ಸಹ ವಿಪತ್ತು ಸಿದ್ಧವೆಂದೂ, ಇಡೀ ದೇಶದ ರಕ್ಷಣೆ ದೃಷ್ಟಿಯಿಂದ ಅವು ಬಹಳ ಮುಖ್ಯಸ್ಥಾನಗಳಾಗಿವೆಯೆಂದೂ, ಉತ್ತರದಲ್ಲಿ ಶತ್ರುಗಳು ಕಾಲೂರಿದರೆ ಅವರು ನಮ್ಮ ಆರ್ಥಿಕ ಬಲವನ್ನು ಮುರಿದುಹಾಕಬಹುದೆಂದೂ, ಆಸ್ಟ್ರೇಲಿಯಾವನ್ನು ಕೈವಶಮಾಡಿಕೊಂಡುಬಿಟ್ಟರೆ, ಮಿತ್ರರಾಷ್ಟ್ರಗಳು ತಮ್ಮ ಮೇಲೆ ಬೀಳುವ ಅವಕಾಶವು ಬಹಳ ಮಟ್ಟಿಗೆ ಕಡಮೆಯಾಗುವದೆಂಬುದನ್ನು ಜಪಾನರು ಮನಗಂಡಿದ್ದಾರೆಂದೂ, ಈ ದೇಶವನ್ನು ರಕ್ಷಿಸಿಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವೆಂದೂ ” ತಿಳಿಸಿದರು

ರಂಗೂನಿಗೆ ವಿಪತ್ತು ಹೆಚ್ಚಿದೆ

ಜಪಾನರೀಗ ರಂಗೂನಿನಿಂದ ೬೦ ಮೈಲಿಯೊಳಗಿದ್ದಾರೆಂದು ಗೊತ್ತಾಗುತ್ತದೆ ಜಪಾನರು ಸಿಟ್ಟಾಂಗ್ ನದಿಯನ್ನುದಾಟಿ ಪೆಗೂನಿಗೆ ೧೫ ಮೈಲಿ ದೂರದಲ್ಲಿರುವ ವಾವ್ ಎಂಬ ಹಳ್ಳಿಯನ್ನು ಹಿಡಿದರು ಜಪಾನರು ಈಗ ಪಶ್ಚಿಮದ ಕಡೆಗೆ ಬರಲು ಅವಕಾಶವಾಗಿರುವುದನ್ನು ನೋಡಿದರೆ, ಮೊದಲಿಗಿಂತ ಈಗ ರಂಗೂನಿಗೆ ವಿಪತ್ತು ಹೆಚ್ಚಿದೆ. ರಂಗೂನ್ ಬಂದರು ರಕ್ಷಣೆಗೆ ಅನುಕೂಲವಾದ ಸ್ಥಾನದಲ್ಲಿ ಇಲ್ಲ ಪೂರ್ವದಿಂದ ಭೂಮಾರ್ಗವಾಗಿ ಮೇಲೆ ಬೀಳಲು ಅವಕಾಶವಿದೆ ವಾವ್‌ನಿಂದ ಪೆಗೂ ಮಾರ್ಗವಾಗಿ ರಂಗೂನಿಗೆ ಅತ್ಯುತ್ತಮ ರೈಲ್ವೆಮಾರ್ಗವಿರುವುದರಿಂದ ಜಪಾನರಿಗೆ ಬಹಳ ಸಹಾಯಕವಾಗಿದೆ ರಂಗೂನಿಗೆ ನಿಜವಾಗಿ ಉಂಟಾಗಿರುವ ವಿಪತ್ತು ಹಾಗಿರಲಿ, ರಂಗೂನ್ ಕ್ಷೇತ್ರದಲ್ಲಿರುವ ಅತ್ಯುತ್ತಮ ವಿಮಾನ ನಿಲ್ದಾಣಗಳು ಶತ್ರುವಶವಾಗುವುದರಿಂದ ಪರಿಣಾಮವು ಉಗ್ರವಾಗುತ್ತಿದೆ ಈ ವಿಮಾನ ನಿಲ್ದಾಣಗಳು ಜಪಾನರ ವಶವಾದುವೆಂದರೆ ಅವರ ಸ್ಥಾನವು ಬಹಳ ಬಲಯುತವಾಗುವದು. ಬರ್ಮಾ ಮುತ್ತಿಗೆಯು ಅವರಿಗೆ ಸುಲಭವಾಗುವುದು ಮಾತ್ರವಲ್ಲದೆ ಭಾರತದ ಅನೇಕ ಭಾಗಗಳ ಮೇಲೆ ಮುತ್ತಿಗೆ ನಡೆಸಲು ಜಪಾನರಿಗೆ ಸಾಧ್ಯವಾಗುತ್ತದೆ. ಜಪಾನರಿಗೆ ಹೆಚ್ಚಿನ ವಿಮಾನಗಳು ಬಂದದ್ದರಿಂದಲೇ ಅವರು ಏಕಪ್ರಕಾರವಾಗಿ ಮುಂದುವರಿದು ಸಿಟ್ಟಾಂಗ್ ನದಿಯನ್ನು ದಾಟಲು ಸಾಧ್ಯವಾಯಿತು ’ ಎಂದು ವಿಶೇಷ ಸುದ್ದಿಗಾರರು ಪ್ರಕಟಿಸಿರುತ್ತಾರೆ

ಡಚ್ ಗವರ್ನರ್ ಜನರಲ್ಲರ ಹೇಳಿಕೆ

“ ನಮ್ಮ ದೇಶದ ಯುದ್ಧದ ಜವಾಬ್ದಾರಿಯನ್ನು ಯಾರೊಬ್ಬರ ಮೇಲೆ ಹೊರಿಸುವುದೂ ಕಷ್ಟ ! ಡಚ್ಚರಾದ ನಾವೂ ಸಹ ದೋಷದಿಂದ ಕೂಡಿದ್ದೇವೆ ನಾವು ಬಹಳ ನಿಧಾನವಾಗಿ ಕೆಲಸಮಾಡಲು ಪ್ರಾರಂಭಿಸಿದೆವು ಈಗ ಆರು ವಾರಗಳ ಹಿಂದೆ ದಕ್ಷಿಣಕ್ಕೆ ಶತ್ರುಗಳ 6 ಜಲಮಾರ್ಗಗಳು ಅರಕ್ಷಿತವಾಗಿದ್ದಾಗಲೇ ನಾವು ಜಪಾನಿಗೆ ಏಟುಹಾಕಬೇಕಾಗಿತ್ತು ಆದರೆ ಆಗ ಹಾಗೆ ಮಾಡದೇಹೋದ ಜವಾಬ್ದಾರಿಯನ್ನು ಡಚ್ಚರೂ ಅಮೇರಿಕನ್ನರೂ ಹೊರಬೇಕು. ಇದೇರೀತಿ ಬ್ರಿಟಿಷರ ಮೇಲೂ ಈ ಜವಾಬ್ದಾರಿ ಬಿದ್ದಿದೆ. ನಾನು ಇತ್ತೀಚೆಗೆ ಅಮೆರಿಕಕ್ಕೆ ಹೋಗಿದ್ದಾಗ ಜಪಾನಿನ ಒಂದೇ ಒಂದು ದೌರ್ಬಲ್ಯವನ್ನು ವಿವರಿಸಿದೆನು ಜಪಾನಿನ ಜಲಮಾರ್ಗಗಳನ್ನು ಕತ್ತರಿಸಿಹಾಕದೆಹೋದರೆ ಅದರ ಪರಿಣಾಮವೇನಾಗುವುದೆಂಬುದನ್ನು ವರ್ಣಿಸಿದೆನು ಅಂತಹ ಪರಿಸ್ಥಿತಿಯು ಹದಗೆಡಲು ಅವಕಾಶ ಕೊಡಲಾಯಿತು ಅವಶ್ಯವಾದಾಗ ಮೇಲೆ ಬಿದ್ದು ಹೊಡೆಯುವ ಮನೋಭಾವನೆಯನ್ನು ತೋರಿಸದೆ ಹೋದುದೇ ಈ ವಿಷಮ ಪರಿಸ್ಥಿತಿಗೆ ಕಾರಣವಾಯಿತು. ” ಎಂದು ಹೇಳಿದರು

ಡಚ್ ಸರಕಾರದ ಹೇಳಿಕೆ

“ ಜಾವಾದಲ್ಲಿ ಜಪಾನರನ್ನು ತೀವ್ರವಾಗಿ ವಿರೋಧಿಸಿದರೂ ಅವರು ಮುಂದೆ ತೆರಳಿದ್ದಾರೆಂದೂ, ಮುಖ್ಯವಾಗಿ ಜಪಾನ್ ವಿಮಾನ ಬಲವು ಹೆಚ್ಚಾಗಿರುವುದರಿಂದಲೂ ಮತ್ತು ಯೋಧರ ಸಂಖ್ಯೆ ಅಧಿಕವಾಗಿರುವುದರಿಂದಲೂ ಅವರು ಮುಂದೆ ಬರಲು ಶಕ್ತರಾದರೆಂದೂ, ಶತ್ರುಗಳು ಬಾಂಡೋಯೆಂಗ್ ಬಳಿ ಇರುವ ವಿಮಾನ ನಿಲ್ದಾಣವೊಂದರ ಮೇಲೆ ಉಗ್ರಮುತ್ತಿಗೆ ನಡೆಸಿದುದರಿಂದ ಮಿಲಿಟರಿ ಮತ್ತು ಸಿವಿಲ್ ವಸ್ತುಗಳಿಗೆ ನಷ್ಟವಾಯಿತೆಂದೂ, ನೆಲದಮೇಲಿದ್ದ ನಮ್ಮ ಹಲವು ವಿಮಾನಗಳು ನಾಶವಾದವೆಂದೂ, ಮುತ್ತಿಗೆಯು ಉಗ್ರವಾಗಿದ್ದರೂ ಅಪಾಯಕ್ಕೆ ಒಳಗಾದವರು ತೀರ ಕಡಿಮೆಯೆಂದೂ, ಶತ್ರುಗಳ ವಿಮಾನನಿಲ್ದಾಣವೊಂದರ ಮೇಲೆ ನಮ್ಮ ವಿಮಾನಗಳು ಮುತ್ತಿಗೆ ನಡೆಸಿ ಹ್ಯಾಂಗರುಗಳಿಗೆ ನಷ್ಟವನ್ನುಂಟುಮಾಡಿದವೆಂದೂ, ಬಾಂಡೋಯೆಂಗ್‌ನಿಂದ 40 ಮೈಲಿ ದೂರದಲ್ಲಿರುವ ಸೂಬಾಂಗ್ ಕ್ಷೇತ್ರದಿಂದ ಡಚ್ ಸೇನೆಗಳು ನಿಧಾನವಾಗಿ ಶತ್ರುಗಳನ್ನು ಓಡಿಸುತ್ತಿವೆಯೆಂದೂ, ಈಗ ಸೂಬಾಂಗ್ ಕ್ಷೇತ್ರದ ಅರ್ಧ ಭಾಗವು ಡಚ್ಚರ ಕೈಯಲ್ಲಿದೆಯೆಂದೂ, ಅಲ್ಲಿಂದ ಸಂಪೂರ್ಣವಾಗಿ ಜಪಾನರನ್ನು ಓಡಿಸುವ ಪ್ರಯತ್ನ ನಡೆಯುತ್ತಿದೆಯೆಂದೂ, ಅಲ್ಲಿನ ಪರಿಸ್ಥಿತಿಯು ಪೂರ್ಣ ಹತೋಟಿಗೆ ಬಂದಿದೆಯೆಂದೂ ಅಲ್ಲಲ್ಲಿ ಸುಳಿದಾಡುತ್ತ ಮುಂದೆ ನುಗ್ಗುವ ಜಪಾನರೊಬ್ಬರನ್ನೂ ಜೀವಸಹಿತ ಬಿಟ್ಟಿಲ್ಲವೆಂದೂ ಡಚ್ ಸರಕಾರದವರು ಪ್ರಕಟಿಸಿದ್ದಾರೆ

ರೂಜ್‌ವೆಲ್ಟರು ಭಾರತಕ್ಕೆ ನಿಯೋಗ ಗೋಷ್ಠಿ ಕಳಿಸುವರು

ಚೀನಾಕ್ಕೂ ಮತ್ತು ಮಧ್ಯ ಪೂರ್ವರಾಷ್ಟ್ರಗಳಿಗೂ ಸಂಗ್ರಾಮವಸ್ತುಗಳನ್ನು ಒದಗಿಸುವ ಕಾರ್ಯದಲ್ಲಿ ಸಹಾಯ ನೀಡಲೋಸುಗ ಶ್ರೀರೂಜ್‌ವೆಲ್ಟರು ಇಷ್ಟರಲ್ಲಿಯೇ ಒಂದು ನಿಯೋಗ ಗೋಷ್ಠಿಯೊಂದನ್ನು ಕಳುಹಿಸುವರೆಂಬುದಾಗಿ ವಾಷಿಂಗ್‌ಟನ್ನಿನಿಂದ ಸುದ್ದಿಬಂದಿದೆ ಭರತಖಂಡವನ್ನು ಕೇಂದ್ರವಾಗಿ ಮಾಡಿಕೊಂಡು ಅಮೆರಿಕವು ‘ ಲೀಸ್ ಅಂಡ್ ಲೆಂಡ್ ’ ಶಾಸನದಂತೆ ಕೆಲಸ ಮಾಡಲು ಆರಂಭಿಸುವುದು ಜಪಾನರು ಅತಿಶೀಘ್ರವಾಗಿ ಮುಂದೆ ನುಗ್ಗುತ್ತಿರುವುದರಿಂದ ಈಗ ಉಳಿದಿರುವ ಕಾಲಾವಕಾಶದಲ್ಲಿ ಭಾರತದ ರಕ್ಷಣೆಗೆ ಏರ್ಪಾಡನ್ನು ಮುಖ್ಯವಾಗಿ ಸಿಲೋನ್, ಕಲಿಕತ್ತೆ ಮತ್ತು ಬೊಂಬಾಯಿಗಳಲ್ಲಿ ಚುರುಕುಗೊಳಿಸಬೇಕೆಂದು ಅಭಿಪ್ರಾಯಪಡಲಾಗಿದೆ ಭರತಖಂಡದಲ್ಲಿ ಸ್ಥಾಪಿಸಲಿರುವ ಸರಬರಾಜು ಮೂಲಕ್ಕೆ ಸಾಮಾನು ಹಡಗುಗಳನ್ನು ನೌಕಾಬಲದ ರಕ್ಷಣೆಯಲ್ಲಿ ಕರೆತರಲು ಎಲ್ಲ ಕಾಲಗಳಲ್ಲೂ ಸಾಧ್ಯವಾದೀತೆಂದು ನಂಬಲಾಗಿದೆ ಭರತಖಂಡದಲ್ಲಿ ಈಗ ನಡೆಯುತ್ತಿರುವ ಸಂಗ್ರಾಮವಸ್ತುಗಳ ಸೃಷ್ಟಿಕಾರ್ಯವನ್ನು ತ್ವರೆಗೊಳಿಸುವ ವಿಚಾರದಲ್ಲಿ ಅಮೆರಿಕದ ನಿಪುಣರು ಭಾರತೀಯ ಅಧಿಕಾರಿಗಳೊಂದಿಗೆ ಸಹಕರಿಸುವರು ಜಪಾನರ ಮುತ್ತಿಗೆಯನ್ನು ಪ್ರತಿಭಟಿಸಲು ಎಷ್ಟು ಆತುರದಿಂದ ಕೆಲಸಮಾಡುತ್ತಿರಲಾಗಿದೆ

ರಷ್ಯನರು ಮುನ್ನುಗ್ಗುತ್ತಿದ್ದಾರೆ.

ಮಾ॥ ಟಿಮೊಷೆಂಕೋರವರ ರಷ್ಯಸೈನ್ಯಗಳು ದಕ್ಷಿಣದಲ್ಲಿ ಒಂದೇಸಮನೆ ಮುನ್ನುಗ್ಗುತ್ತಿದ್ದು ಹನ್ನೊಂದು ಆಯಕಟ್ಟಿನ ಸ್ಥಾನಗಳನ್ನು ಜರ್ಮನರಿಂದ ಕಿತ್ತುಕೊಂಡಿವೆ ಈಚೆಗೆ ರಷ್ಯನರ ಏಟು ಬಹಳ ಜೋರಾಗಿದೆ ರಷ್ಯನ್ನರು ಅಪಾರ ಜನಬಲವನ್ನೂ ವಸ್ತುಬಲವನ್ನೂ ಯುದ್ಧರಂಗಕ್ಕೆ ಕಳುಹಿಸುತ್ತಿದ್ದಾರೆ ಲಟ್ವಿಯಗಡಿಯಲ್ಲಿ ರಷ್ಯನ್ನರು ಉಗ್ರಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ ಸ್ಟಾಲಿನ್‌ಸ್ಕ ಬಳಿ 1200 ನಾಜಿಯೋಧರು ರಷ್ಯನರ ಏಟಿಗೆ ಬಲಿಯಾದರು ಅಪಾರ ಸಂಗ್ರಾಮವಸ್ತುಗಳು ರಷ್ಯನರ ಕೈಸೇರಿದವು ಕ್ರಿಮಿಯಾರಂಗದಲ್ಲಿ ಅಪಾರ ಶಸ್ತ್ರಬಂಡಿಗಳ ಸಹಾಯದಿಂದ ರಷ್ಯನರು ಭಾರಿಮುತ್ತಿಗೆಯನ್ನಾರಂಭಿಸಿದ್ದಾರೆ ರಷ್ಯನ್ ನೌಕೆಗಳು ಭೂಸೈನ್ಯಕ್ಕೆ ಬೆಂಬಲಕೊಡುತ್ತ ಜರ್ಮನರು ಆಕ್ರಮಿಸಿರುವ ಸ್ಥಾನಗಳಮೇಲೆ ಗುಂಡುಹಾರಿಸುತ್ತಿವೆ

ಮೈಸೂರಿನಲ್ಲಿ ಯುದ್ಧಸಹಾಯ

ಮಹಾಪ್ರಭುಗಳವರಿಂದ ಆರೂವರೆ ಲಕ್ಷ ರೂಪಾಯಿಗಳ ಸಹಾಯ

ಶ್ರೀಮನ್ಮಹಾರಾಜರವರು, ಘನವನ್ನು ಹೊಂದಿದ ಇಂಡಿಯಾದ ವೈಸ್‌ರಾಯ್‌ರವರಿಗೆ 1942 ನೇ ಇಸವಿ ಜನವರಿ 21 ನೇ ತಾರೀಖಿನ ದಿನ ಈ ಕೆಳಗೆ ಕಂಡ ವಾರ್ತೆಯನ್ನು ಕಳುಹಿಸಿರುತ್ತಾರೆ —

ವೈಸ್‌ರಾಯ್‌ರವರ ವಾರ್ ಪರ್ಪಸಸ್ ನಿಧಿಗೆ, ನಾವು ಮತ್ತೊಮ್ಮೆ ಕಳುಹಿಸುವ ಆರೂವರೆಲಕ್ಷರೂಪಾಯಿಗಳನ್ನು ಸ್ವೀಕರಿಸಬೇಕೆಂದು ನಾವು ತಮ್ಮನ್ನು ಕೋರುತ್ತೇವೆ ಈ ಹಣವನ್ನುಒಂದು ಮೈನ್‌ಸ್ವೀಪಿಂಗು ಟ್ರಾಲರನ್ನು ಕೊಳ್ಳುವುದಕ್ಕಾಗಲೀ, ಅಥವಾ ಶತ್ರು ನೌಕಾ ದಾಳಿಯಿಂದ ಭಾರತದ ರಕ್ಷಣೆಯ ಸಂಬಂಧದಲ್ಲಿ ತಮಗೆ ಯುಕ್ತವೆಂದು ತೋರುವ ಇತರ ಯಾವುದಾದರೂ ಕಾರ್ಯಕ್ಕಾಗಲೀ ವಿನಿಯೋಗಿಸಬೇಕೆಂದು ಕೋರುತ್ತೇವೆ ಭಾರತದಲ್ಲಿ ಇಂದು ಯುದ್ಧಪ್ರಯತ್ನವು ಅತ್ಯಂತ ತೀವ್ರವಾಗಿ ನಡೆಯಬೇಕಾಗಿದೆ ಈ ಸಂಬಂಧದಲ್ಲಿ ನಾವೂ ನಮ್ಮ ಪ್ರಜೆಗಳೂ ನಮ್ಮ ಕೈಲಾದುದೆಲ್ಲವನ್ನೂ ಮಾಡಲು ಸಿದ್ಧರಾಗಿರುತ್ತೇವೆ

—ಶ್ರೀಮನ್ಮಹಾರಾಜರವರು.

ಘನವನ್ನು ಹೊಂದಿದ ವೈಸರಾಯ್‌ರವರ ಪ್ರತ್ಯುತ್ತರ.

1942 ನೇ ಇಸವಿ ಜನವರಿ 24 ನೇ ತಾರೀಖು ವೈಸರಾಯ್‌ರವರು ಈ ಕೆಳಗೆ ಕಂಡ ಪ್ರತ್ಯುತ್ತರವನ್ನು ಕಳುಹಿಸಿರುತ್ತಾರೆ —

‘ ಜನವರಿ 21ನೇ ತಾರೀಖಿನದಿನ ತಾವು ಮತ್ತೊಮ್ಮೆ ಕಳುಹಿಸಿದ 6½ ಲಕ್ಷರೂಪಾಯಿಗಳ ದ್ರವ್ಯಸಹಾಯಕ್ಕಾಗಿಯೂ ಮತ್ತು ತಮ್ಮ ಸಂದೇಶಕ್ಕಾಗಿಯೂ ಅತ್ಯಂತ ಕೃತಜ್ಞನಾಗಿರುತ್ತೇನೆ. ತಮ್ಮ ಉದಾರ ಸಹಾಯವನ್ನು ಚಕ್ರವರ್ತಿ ಸಾರ್ವಭೌಮರಿಗೆ ಕೃತಪಡಿಸುವೆನು ಮತ್ತು ತಾವು ಕಳುಹಿಸಿರುವ ಹಣವನ್ನು ಹೇಗೆ ವಿನಿಯೋಗಿಸಬೇಕೆಂಬ ವಿಷಯದಲ್ಲಿ ರಕ್ಷಣ ಇಲಾಖೆಯ ಅಧಿಕಾರಿಗಳೊಡನೆ ಸಮಾಲೋಚನೆ ನಡೆಯಿಸುತ್ತಿದ್ದೇನೆ

—ವೈಸರಾಯ್.

[ಮಹಾ ಪ್ರಭುಗಳವರು ಯುದ್ಧ ನಿಧಿಗೆ ಇಲ್ಲಿಯವರೆಗೂ 23,65,000 ರೂಪಾಯಿಗಳನ್ನು ಕೊಟ್ಟಿರುತ್ತಾರೆ]

ಸ್ವೀಕಾರ.

ಲಕ್ಷ್ಮೇಶ್ವರ ತಾ॥ ಸಿಗ್ಗಲಿಗ್ರಾಮದ ಸಾಹುಕಾರ್ ಸಿದ್ಧಯ್ಯನವರು ತಮ್ಮಮನೆಯಲ್ಲಿ ಬೆಂಗಳೂರು ಮಹಾಂತಿನ ಮಠಾಧ್ಯಕ್ಷರ ಪಾದಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಸದರಿ ಸ್ವಾಮಿಗಳವರ ಅಪ್ಪಣೆಯಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಹುಬ್ಬಳ್ಳಿ ತಾ॥ ನೂಲವಿ ಹಿರೇಮಠದ ವೇ॥ ಚನ್ನವೀರಯ್ಯನವರ ಪುತ್ರನ ದೀಕ್ಷಾಸಮಯದಲ್ಲಿ ಸಮರ್ಪಿಸಿದ 1 ರೂ ಬೇತಿಸಕಟ್ಟಿಗ್ರಾಮದ ಪ್ರಭಯ್ಯನವರ ಮಠದ ವೇ॥ ಸಿದ್ಧಲಿಂಗಯ್ಯನವರು ನೆರವೇರಿಸಿದ ಮಾಹೇಶ್ವರ ದೀಕ್ಷಾಸಮಯದಲ್ಲಿ ಸಮರ್ಪಿಸಿದ 1 ರೂ ಒಟ್ಟು 3 ರೂಪಾಯಿಗಳು ವೇ॥ ಪಿ ಯಂ ಗಂಗಾಧರಶರ್ಮರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಜಿ॥ ಹೊಸಪೇಟೆ ತಾ॥ ಚಿಲಕನಹಟ್ಟಿಮಠದ ವೇ॥ ಸಣ್ಣಕೊಟ್ರಯ್ಯಶಾಸ್ತ್ರಿಗಳ ಪುತ್ರನ ವರ್ಧಂತೀ ದಿವಸ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಯು ಶ್ರೀ ಕಾಲಮುಳಬಸವಲಿಂಗಸ್ವಾಮಿಗಳು ಪುರವರ್ಗ ಶಿವಪುರಮಠ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

[೩ನೇ ಪುಟದಿಂದ ಮುಂದುವರಿದುದು]

ಪ್ರಕಾರ ಉಪದೇಶಮಾಡುವ ಜನರಿಗೆ ಮೋಸಗಾರ ಶಕ್ತ, ದುರುಳವೇದಾಂತಿಗಳೆಂಬ ಹೆಸರು. "ತತ್ವದಂತೆ ನಡೆಯದಿದ್ದರೆ ಅವನ ಜನ್ಮವು ನಿರರ್ಥಕವೇ ಸರಿ! ಏಕೆಂದರೆ ಸತ್ಯವನ್ನು ಹೇಳು, ನೀಚ ಸ್ವಾರ್ಥತೆಯನ್ನು ಬಿಡು, ದುರಭಿಮಾನ ಪರಹಿಂಸಾದಿಗಳನ್ನು ತೊರೆ, ಕಷ್ಟದಲ್ಲಿ ಬೀಳ, ಧೈರ್ಯವನ್ನು ತಾಳ, ಪರಹಿತಕ್ಕೆ ಏಳು, ನಿತ್ಯ ಸುಖದಲ್ಲಿ ಬಾಳು. ಈ ತತ್ವಸಾರವನ್ನು ತಿಳಿ, ಕೇಳದಿದ್ದರೆ ಮರುಳಾ ನಿನ್ನ ಜನ್ಮ ವ್ಯರ್ಥ ಕಾಣೆ.' ಎಂದು ಮಹನೀಯರು ಬೋಧಿಸಿರುವರು. ಶುಷ್ಕವೇದಾಂತಿಗಳ ಬಗ್ಗೆ ಒಂದು ಇತಿಹಾಸವುಂಟು. ಅದನ್ನು ಕೆಳಗೆ ಕೊಡುತ್ತೇವೆ—

ಒಂದು ಊರಿನಲ್ಲಿ ಒಬ್ಬ ಶುಷ್ಕವೇದಾಂತಿ ಇದ್ದನು. ಅವನ ನುಡಿ ಒಂದು ರೀತಿಯಾಗಿತ್ತು, ನಡೆ ಒಂದು ರೀತಿಯಾಗಿತ್ತು. ಒಂದು ದಿನ ಅವನು ಊರ ಹೊರಗೆ ತಿರುಗಾಡಲಿಕ್ಕೆ ಹೋಗಿದ್ದನು. ಅಲ್ಲಿ ಆ ಊರ ಗೌಡನ ತೋಟವಿತ್ತು. ಅದರಲ್ಲಿ ಒಳ್ಳೇ ಉತ್ಕೃಷ್ಟವಾದ ಬದನಿಕಾಯಿಗಳಿದ್ದುವು. ಅವುಗಳನ್ನು ಕಂಡ, ಅವನ ಬಾಯಿಯಲ್ಲಿ ನೀರು ಬರಹತ್ತಿದವು. ಆದರಿಂದ ಅವನು ಸುತ್ತಮುತ್ತ ನೋಡಿದನು, ಯಾರ ಸುಳಿವೂ ಇರಲಿಲ್ಲ. ಆಗ ಹೋದವನೇ ಗಡಿಬಿಡಿಯಿಂದ ಬದನೀಕಾಯಿಗಳನ್ನು ಚಟಚಟ ಹರಿದು ತನ್ನ ಉಡಿಯಲ್ಲಿ ಹಾಕುವವನಾದನು. ಅದನ್ನು ಅಲ್ಲಿಯೇ ಮರೆಯಲ್ಲಿ ನಿಂತಿದ್ದ ತೋಟದವನ ನೋಡಿ, "ಏನು ವೇದಾಂತಿಗಳೇ, ಇದೆಯೋ ನಿಮ್ಮ ವೇದಾಂತದ ಮಾರ್ಗವು? ನೀವೇ ಅಲ್ಲವೇ! ಎರಡನೆಯವರದನ್ನು ಕಣ್ಣೆತ್ತಿ ಸಹ ನೋಡಬಾರದೆಂದು ದಿನಾಲು ಹೇಳುತ್ತಿರುವವರು!" ಎಂದು ನುಡಿದನು. ವೇದಾಂತಿಯು ಅಷ್ಟಕ್ಕೆ ಸುಮ್ಮನಾಗದೆ "ಓಹೋ! ಆ ಮಾತಿನ ವಿಷಯದಲ್ಲಿ ಈಗ ವ್ಯತ್ಯಾಸವಾಗಿ ತೋರಿಬಂದಿರುವುದೇನಯ್ಯಾ ಗ್ರಾಮಾಧಿಕಾರೀ! ಎಲ್ಲವೂ ಬ್ರಹ್ಮಸ್ವರೂಪವೇ! ನಮಗೂ ನಿಮಗೂ ಭೇದವಿಲ್ಲ. ನೀವು ನಮ್ಮವರಾದ್ದರಿಂದ ಈ ಹೊಲವಾದರೂ ನಮ್ಮದೆಂದೇ ತಿಳಿದು, ಕಾಯಿಗಳನ್ನು ಹರಕೊಂಡೆನು! ಬ್ರಹ್ಮ ವಿಷಯವಾಗಿ ಈತರದ ತಿಳಿಗೇಡಿತನವು ನಿಮ್ಮಲ್ಲಿದ್ದೀತೆಂದು ನಮಗೆ ಗೊತ್ತಿದ್ದಿಲ್ಲ!" ಎಂದು ತಿರುಗಿ ಗೌಡನ ಮೇಲೆಯೇ ಮಾತು ಜೋರಿಸಿ, ಹಾದಿಹಿಡಿದನು. ಆಗ ಗೌಡನು—'ಇವನ ಶುಷ್ಕ ವೇದಾಂತ ಮಾರ್ಗವನ್ನು ಬಿಡಿಸಲಿಕ್ಕೆ ಇದೇ ತಕ್ಕ ಸಮಯವೆಂದು ಯೋಚಿಸಿ, ಅವನನ್ನು ಒಂದು ಮರಕ್ಕೆ ಬಿಗಿದು, ಹುಣಸಿಯ ಬರಲುಗಳಿಂದ ಮನಬಂದಂತೆ ಒಡೆಯ ಹತ್ತಿದನು. ಆಗ ವೇದಾಂತಿಯು ಹಣ್ಣಾಗಿ, ಅಳುತ್ತ 'ಇದೇನಯ್ಯಾ!' ಎನ್ನಲು, ಗೌಡನು ಸ್ವಾಮಿ, ಇದೂ ಬ್ರಹ್ಮಕಾರ್ಯವೇ! ನೀವು ಪಟಿಸುವುದಕ್ಕೋ ನನಗೆ ತಿಳಿಯಲೊಲ್ಲದು!' ಎಂದು ಹೇಳಿದನು. ಆಗ ವೇದಾಂತಿಯು ನಾಚಿ ಮನೆಗೆ ಹೊರಟುಹೋದನು. ಅಂದಿನಿಂದ ತನ್ನ ಸುಳ್ಳುವೇದಾಂತ ಮಾರ್ಗವನ್ನು ಬಿಟ್ಟುಬಿಟ್ಟನು. ಪ್ರತಿಯೊಬ್ಬರೂ ಇಂಥವರ ಅನುಕರಣವನ್ನು ಮಾಡದೆ ನಿಜವಾದ ವೇದಾಂತಿಗಳಾಗಿ ಮೋಕ್ಷಸಾಮ್ರಾಜ್ಯವನ್ನು ಹೊಂದಬೇಕೆಂದು ಪ್ರಾರ್ಥಿಸುತ್ತೇವೆ.

ನಿದ್ರೆಯ ವಿಷಯದಲ್ಲಿ ಕೆಲವು ಸೂಚನೆಗಳು

(ಆರ್. ಎ. ಟೋರ್ದೆ ಎಂಬವರು ಬರೆದುದು.)

ದೇಹಶಕ್ತಿಯನ್ನು ಕಾಪಾಡಿಕೊಳ್ಳುವುದಕ್ಕಾಗಲಿ, ಹೆಚ್ಚಿಸುವುದಕ್ಕಾಗಲಿ ನಿದ್ರೆಯು ಅತ್ಯವಶ್ಯಕವು. ಅವರವರ ದೇಹಾರೋಗ್ಯರಕ್ಷಣೆಗೆ ಬೇಕಾದ ನಿದ್ರೆಯ ಪ್ರಮಾಣದ ವಿಷಯದಲ್ಲಿ ಭಿನ್ನಾಭಿಪ್ರಾಯವಿರಬಹುದೇ ಹೊರತು ದೇಹದ ಶಕ್ತಿಯನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕಾದರೆ, ನಿದ್ರೆಯು ಅವಶ್ಯಕವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಬೇಕಾದಲ್ಲಿ ಹಲವು ದಿನಗಳ ಅಥವಾ ವಾರಗಳ ಕಾಲ ಊಟವಿಲ್ಲದೆ ಇರಬಹುದು. ಆದರೆ ಕೆಲವು ದಿನಗಳವರೆಗೆ ನಿದ್ರಾಭಂಗವಾದರೆ ದೇಹದಲ್ಲಿ ಯಾವುದಾದರೂ ಆಯಾಸವು ತೋರದೆಬಿಡದು. ಪುರಾತನ ಆಂಗ್ಲೇಯ ಇತಿಹಾಸದಲ್ಲಿ ದೊಡ್ಡ ತಪ್ಪಿತಗಳನ್ನು ಮಾಡಿದವರಿಗೆ ನಿದ್ರೆಗೆ ಅವಕಾಶಕೊಡದೆ ಕೊಲ್ಲುತ್ತಿದ್ದರೆಂದು ತಿಳಿದುಬರುವುದು. ಚೈನಾದಲ್ಲಿ ಈಗಲೂ ನಿದ್ರಾಭಂಗಮಾಡುವುದೇ ಒಂದು ದೊಡ್ಡ ಶಿಕ್ಷೆಯಾಗಿರುವುದು. ಎಲ್ಲಕ್ಕಿಂತಲೂ ಇದರಲ್ಲಿ ಭೀತಿಯೂ ಹೆಚ್ಚಾಗಿರುವುದು.

ಇದರಿಂದ ನಮ್ಮ ಶರೀರಕ್ಕೆ ನಿದ್ರೆಯ ಅವಶ್ಯಕತೆಯು ಚೆನ್ನಾಗಿ ತಿಳಿಯಬಹುದು. ದೊಡ್ಡ ಪಟ್ಟಣಗಳಲ್ಲಿ ವಾಸಮಾಡುವ ಜನರೂ, ಅವರಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳೂ ಸಾಧಾರಣವಾಗಿ ರಾತ್ರಿ ಬಹಳ ಹೊತ್ತಾದ ಮೇಲೆ ಮಲಗುವರು. ನಿದ್ರೆಮಾಡದೆಯೇ ಇದ್ದರೆ ಹೇಗೆ ಮರಣಕ್ಕೆ ಗುರಿಯಾಗಬೇಕಾಗುವುದೋ, ಹಾಗೆಯೇ ಬಹಳ ಹೊತ್ತಾದಮೇಲೆ ಮಲಗುವುದರಿಂದಲೂ, ತಕ್ಕ ಪ್ರಮಾಣದಲ್ಲಿ ನಿದ್ರೆಮಾಡದಿರುವುದರಿಂದಲೂ ದೇಹದಲ್ಲಿ ಯಾವುದಾದರೂ ಬಾಧೆಯು ಕಾಣಿಸುವುದು. ನ್ಯೂರಾಸ್ಥೀನಿಯಾ (Neurasthenia) ಮುಂತಾದ ವ್ಯಾಧಿಗಳಿಗೆ ಪಟ್ಟಣವಾಸದ ಜನರು ಬಹಳ ಹೊತ್ತಾದಮೇಲೆ ನಿದ್ರೆಮಾಡುವುದೂ, ಹೆಚ್ಚುಕಾಲ ನಿದ್ರೆಮಾಡದಿರುವುದೂ ಮುಖ್ಯಕಾರಣಗಳಾಗಿವೆ. ಮನುಷ್ಯಸೃಷ್ಟಿಯಲ್ಲಿ ಕಂಡುಬರುತ್ತಿರುವ ನೂತನವಾದ ದೀಪಗಳೂ, ರಾತ್ರಿ ಕಾಲಗಳಲ್ಲಿ ಹೊತ್ತಾದಮೇಲೆ ನಿದ್ರೆಮಾಡುವುದಕ್ಕೆ ಅವಕಾಶ ಕೊಡುತ್ತಿರುವುದೂ ಇದರಿಂದ ನರಗಳ ಶಕ್ತಿಯು ಕಡಿಮೆಯಾಗುತ್ತಿರುವುದು. ಹಾಗಿಲ್ಲದೆ, ಈಗಿನ ನಾಗರಿಕ ಪ್ರಪಂಚದಲ್ಲಿ ಪೂರ್ವಕಾಲದವರಂತೆಯೂ ಮತ್ತು ಪಶುಪಕ್ಷಿಗಳಂತೆಯೂ ರಾತ್ರಿಯು ಪ್ರಾರಂಭವಾದೊಡನೆ ಮಲಗಿ ಸೂರ್ಯೋದಯಕ್ಕೆ ಮುಂಚೆ ಏಳುವ ಅಭ್ಯಾಸವನ್ನು ಆಚರಣೆಗೆ ತಂದರೆ ಮೊತ್ತದಲ್ಲಿ ಎಲ್ಲರ ದೇಹಾರೋಗ್ಯವೂ ಹೆಚ್ಚುವುದು.

ನಿಮಗೆ ಅವಶ್ಯವಾದ ನಿದ್ರೆಯ ಪ್ರಮಾಣವೇನು? ಈ ವಿಷಯದಲ್ಲಿ ಸಾಮಾನ್ಯವಾದ ನಿಯಮವಾವುದನ್ನೂ ಹೇಳಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಒಬ್ಬರಿಗೊಬ್ಬರಿಗೆ ವ್ಯತ್ಯಾಸವಿದೆ. ಕೆಲವರಿಗೆ ಹೆಚ್ಚುಕಾಲ ನಿದ್ರೆಯು ಅವಶ್ಯವು. ಗ್ರಾಮಫೋನ್ ಮುಂತಾದ ತನ್ನ ನೂತನ ನಿರ್ಮಾಣಗಳಿಂದ ಪ್ರಪಂಚವನ್ನೇ ವಿಸ್ಮಯಗೊಳಿಸಿದ ಥಾಮಸ್ ಎ ಎಡಿಸನ್ ಎಂಬ ಮಹಾಪುರುಷನು ಆರೋಗ್ಯಶಾಲಿಯಾಗಿಯೂ ಬಲಶಾಲಿಯಾಗಿಯೂ ಇದ್ದನು. ಆತನು ಹೇಳಿರುವುದೇನೆಂದರೆ, "ಈ ಕಾಲದಲ್ಲಿ ಸಾಮಾನ್ಯವಾಗಿ ಪುರುಷರೂ, ಸ್ತ್ರೀಯರೂ ಹೆಚ್ಚುಕಾಲ ನಿದ್ರೆಮಾಡುತ್ತಿರುವರು. ನಾನು ಸುಮಾರು ಮೂರರಿಂದ ಐದು ಘಂಟೆಗಳಕಾಲ ಮಾತ್ರ ನಿದ್ರೆಮಾಡಿ ನನ್ನ ದೇಹಾರೋಗ್ಯವನ್ನು ರಕ್ಷಿಸಿಕೊಂಡಿರುವೆನು." ಇಂಥವರ ವಿಷಯಗಳಲ್ಲಿ ಈ ಅಲ್ಪಕಾಲನಿದ್ರೆಯೇ ಸಾಕಾಗಿರಬಹುದು. ಅದಕ್ಕೆ ಅವರು ವಿಶೇಷ ಶಕ್ತಿಯುಳ್ಳ ಅಂಗಗಳನ್ನು ಹೊಂದಿರುವುದೇ ಮುಖ್ಯಕಾರಣವೆಂದು ಊಹಿಸಬೇಕಾಗುವುದು.

ನಿದ್ರೆಯ ವಿಷಯದಲ್ಲಿ ಸಕಲರಿಗೂ ಅನ್ವಯಿಸುವ ಸಾಮಾನ್ಯನಿಯಮವನ್ನು ವಿಧಿಸುವುದು ಅಸಾಧ್ಯವು. ಒಳ್ಳೆಯ ದೇಹಶಕ್ತಿಯೂ, ಶರೀರ ಸೌಷ್ಠವವೂ ವಿಶೇಷವಾಗಿರತಕ್ಕವರಿಗೆ ಇತರರಿಗಿಂತ ಕಡಮೆಯ ಕಾಲದ ನಿದ್ರೆಯೇ ಸಾಕಾಗಿರುವುದು. ಇಂತಹ ಬಲಾಢ್ಯರಿಗೆ ನಶಿಸಿದ ಭಾಗವು ಬಹಳ ಶೀಘ್ರದಲ್ಲಿಯೇ ಕೂಡಿ, ದುರ್ಬಲರಾದ ಇತರರಿಗಿಂತ ವೇಗವಾಗಿ ಶಕ್ತಿಯು ಬರುವುದು.

ಆದುದರಿಂದ ಒಟ್ಟಿನಲ್ಲಿ ನೋಡಿದರೆ ಅನೇಕರು ಬಹಳ ಕಡಿಮೆಕಾಲ ನಿದ್ರೆಮಾಡುತ್ತಿರುವರು. ನೀವು ಇಷ್ಟೇ ಘಂಟೆಗಳಕಾಲ ನಿದ್ರೆಮಾಡಬೇಕೆಂದು ನಾನು ವಿಧಿಸತಕ್ಕವನಲ್ಲ. ಆದರೆ ಪ್ರತಿಯೊಬ್ಬರೂ ನಿಮ್ಮ ನಿಮ್ಮ ದೇಹಶಕ್ತಿಗೆ ಬೇಕಾದಷ್ಟು ಕಾಲ ಸುಖವಾಗಿ ನಿದ್ರೆಮಾಡಬೇಕು. ಬಹಳ ಹೆಚ್ಚುಕಾಲ ನಿದ್ರೆಮಾಡಬೇಕು. ಬಹಳ ಹೆಚ್ಚುಕಾಲ ನಿದ್ರೆ ಮಾಡಿದವರು ದಡ್ಡರಾಗುವರೆಂದು ಜನರು ಸಾಮಾನ್ಯವಾಗಿ ಹೇಳುವರು. ಆದರೆ ಚೆನ್ನಾಗಿ ಗಾಳಿಬೀಸುವ ಪ್ರದೇಶಗಳಲ್ಲಿ ದೀರ್ಘಕಾಲ ನಿದ್ರೆಮಾಡಿದವರು ಯಾರೂ ಎಂದಿಗೂ ದಡ್ಡರಾಗುವುದಿಲ್ಲವೆಂದು ಸಮರ್ಥಿಸುವೆನು. ನಮ್ಮ ಮನಸ್ಸಿಗೆ ಏಳಬೇಕೆಂಬ ಆಶೆಯು ತೋರುವವರೆಗೂ ಮಲಗಿದ್ದರೆ, ನಿದ್ರೆಯು ಹೆಚ್ಚುವುದರಿಂದಾಗಲಿ, ಕಡಮೆಯಾಗುವುದರಿಂದಾಗಲೀ ತೋರಬಹುದಾದ ಬಾಧೆಗಳಿಗೆ ಗುರಿಯಾಗಬೇಕಾದುದಿಲ್ಲ.

ನಿದ್ರೆಮಾಡುವ ಕಾಲಪ್ರಮಾಣಕ್ಕಿಂತ ನಿದ್ರೆಮಾಡುವ ರೀತಿ ಮುಖ್ಯವು. ಚೆನ್ನಾಗಿ ನಿದ್ರೆ ಬರಬೇಕಾದರೆ ದೇಹಕ್ಕೆ ವಿಶೇಷವಾಗಿ ಆಯಾಸವಾಗಿರಬೇಕು. ನರಗಳಿಗೆ ಆಗುವ ಆಯಾಸಕ್ಕೂ, ದೇಹದಲ್ಲಿ ತೋರುವ ಆಯಾಸಕ್ಕೂ ವ್ಯತ್ಯಾಸವಿರುವುದು. ಸಾಧಾರಣವಾಗಿ ನರಗಳ ಬಾಧೆಯಿರುವಾಗ ನಿದ್ರೆ ಇರುವುದಿಲ್ಲ. ಚೆನ್ನಾಗಿ ನಿದ್ರೆ ಬಾರದಿರುವವರು ಸಾಯಂಕಾಲಗಳಲ್ಲಿ ವೇಗವಾಗಿ ಗಾಳಿಯಲ್ಲಿ ಸಂಚಾರಮಾಡಿದರೆ ಒಳ್ಳೇದು. ಆ ನಡಿಗೆಯ ವೇಗದಿಂದ ದೇಹದಲ್ಲಿ ಆಯಾಸವು ತೋರಬೇಕು.

ಮೂರುನಾಲ್ಕು ಘಂಟೆಗಳಕಾಲ ಚೆನ್ನಾಗಿ ನಿದ್ರೆಮಾಡಿದರೂ, ಸುಖನಿದ್ರೆಯಿಲ್ಲದೆ ಎಂಟು ಘಂಟೆಗಳಕಾಲ ಮಲಗಿದುದಕ್ಕಿಂತ ಫಲವು ಹೆಚ್ಚು. ಗಾಢನಿದ್ರೆಯಲ್ಲಿ ಮನಸ್ಸಿಗೆ ಪೂರ್ಣವಿಶ್ರಾಂತಿಯುಂಟು. ಸಾಮಾನ್ಯವಾಗಿ ಯಾವ ಬಾಧೆಯೂ ತೋರುವುದಿಲ್ಲ. ಚೆನ್ನಾಗಿ ನಿದ್ರೆಯು ಬಾರದಿದ್ದಲ್ಲಿ ಮಿದುಳಿನ ಕೆಲವು ಭಾಗಗಳು ತಮ್ಮ ಕೆಲಸ ಮಾಡುತ್ತಲೇ ಇರುವುವು. ಕನಸು ಕಾಣುವ ಸಂದರ್ಭಗಳಲ್ಲಿ ದೇಹದ ಎಲ್ಲಾ ಭಾಗಗಳೂ ಸಂಪೂರ್ಣವಿಶ್ರಾಂತಿ ಸುಖವನ್ನನುಭವಿಸುವುದಿಲ್ಲ.

ದೇಹದಲ್ಲಿ ನಶಿಸಿದ ಭಾಗಗಳು ಪುನಃ ಕೂಡಲು ನಿದ್ರೆಯಲ್ಲದೆ ಇತರವಿಧಗಳಲ್ಲಿಯೂ ವಿಶ್ರಾಂತಿಯನ್ನು ಹೊಂದಬೇಕು. ಮಾಂಸಖಂಡಗಳನ್ನೂ, ಕೈಕಾಲುಗಳನ್ನೂ ಸಡಿಲವಾಗಿ ಸ್ವಾಭಾವಿಕವಾದ ಸ್ಥಿತಿಯಲ್ಲಿಟ್ಟು ವಿಶ್ರಾಂತಿಯನ್ನನುಭವಿಸಿದಲ್ಲಿ ಕಡಿಮೆಯಕಾಲ ನಿದ್ರೆಮಾಡಿದರೂ ಬಾಧಕವೇನೂ ಇಲ್ಲ.

ನೀವು ಮಲಗುವಸ್ಥಳದಲ್ಲಿ ನಿರ್ಮಲವಾದ ಗಾಳಿಯು ಧಾರಾಳವಾಗಿ ಬೀಸುತ್ತಿರಬೇಕು. ಮಲಗಿರುವಾಗ ಧಾರಾಳವಾಗಿ ಗಾಳಿಯನ್ನು ಎಳೆದುಕೊಂಡು ಬಿಡುವುದಕ್ಕೆ ಅವಕಾಶವಿಲ್ಲದಿರುವುದರಿಂದ, ಆಗ ಗಾಳಿಯು ನಿರ್ಮಲವಾಗಿ ಬೀಸುತ್ತಿರುವುದು ಬಹಳ ಅವಶ್ಯವು. ಕೊಠಡಿಯಲ್ಲಿ ಮಲಗುವ ಅಭ್ಯಾಸವಿದ್ದಲ್ಲಿ ಕೊಠಡಿಯ ಕಿಟಕಿಗಳೆಲ್ಲವನ್ನೂ ಚೆನ್ನಾಗಿ ತೆರೆದು ಮಲಗಬೇಕು. ಮೇಲುಭಾಗವು ಮಾತ್ರ ಮುಚ್ಚಿರುವ ಹಜಾರದಲ್ಲಿ ಯಾವಾಗಲೂ ಮಲಗುವ ಅಭ್ಯಾಸವನ್ನು ಮಾಡುವುದುತ್ತಮ. ಅದರಿಂದ ಸ್ವಲ್ಪ ತೊಂದರೆಯಾಗಬಹುದಾದರೂ, ನಿಮ್ಮ ದೇಹದ ಶಕ್ತಿಸಾಮರ್ಥ್ಯಗಳು ಹೆಚ್ಚುವುದರಿಂದ ಶ್ರಮಕ್ಕೆ ತಕ್ಕ ಪ್ರತಿಫಲವು ದೊರಕುವುದು.

ಮುಖ್ಯವಾಗಿ ನರಗಳು ಬಲಹೀನವಾಗಿರುವವರು ಮಲಗಿರುವಾಗ ತಮ್ಮ ದೇಹದಲ್ಲಿ ರಕ್ತಸಂಚಾರವು ಸರಿಯಾಗಿ ನಡೆಯುವಂತೆ ಅವಕಾಶವನ್ನೇರ್ಪಡಿಸಬೇಕು. ಅನೇಕ ಸಂದರ್ಭಗಳಲ್ಲಿ ಚೆನ್ನಾಗಿ ನಿದ್ರೆಬಾರದಿರುವುದಕ್ಕೆ ಮಿದುಳಿನಲ್ಲಿ ರಕ್ತವು ಕಟ್ಟಿಕೊಳ್ಳುವುದು ಕಾರಣವು. ಆ ಬಾಧೆಗಳನ್ನನುಭವಿಸುವವರಿಗೆ ಸಾಮಾನ್ಯವಾಗಿ ಕೈಕಾಲುಗಳು ತಣ್ಣಗಾಗುವುವು. ಆದುದರಿಂದ ಕಾಲುಗಳನ್ನು ಬೆಚ್ಚಗೆಮಾಡಿದರೆ, ಆ ಬಾಧೆಯು ನಿವಾರಣೆಯಾಗಬಹುದು. ಕೆಲವು ಸಮಯಗಳಲ್ಲಿ ಮಲಗುವುದಕ್ಕೆ ಮುಂಚೆ ಒಂದು ಬಟ್ಟಲು ಬಿಸಿ ಹಾಲನ್ನು ಕುಡಿದರೆ ಸುಖವಾಗಿ ನಿದ್ರೆಯು ಬರುವುದು. ಕಾಲಿನ ಮೇಲೆ ಬಿಸಿ ನೀರನ್ನು ಸುರಿದುಕೊಂಡರೂ ಒಳ್ಳೆಯದು. ಮಲಗುವುದಕ್ಕೆ ಅರ್ಧ ಘಂಟೆಗಳಕಾಲ ಮುಂದೆ ಬಿಸಿನೀರಿನಲ್ಲಿ ಸ್ನಾನಮಾಡುವುದರಿಂದ ಮಿದುಳಿಗೆ ಹಿತವಾಗುವುದು ಮತ್ತು ನರಗಳ ಸಂಬಂಧವಾದ ವ್ಯಾಧಿಗಳಿಂದ ನರಳತಕ್ಕವರಿಗೂ ಸುಖವಾಗಿ ನಿದ್ರೆಯು ಬರುವುದು. ನರಗಳು ಬಲಹೀನವಾಗಿರುವವರಿಗೆ ರಾತ್ರಿಯೆಲ್ಲಾ ನಾಳಿಯ ಸ್ನಾನಮಾಡುವುದರಿಂದ ಗುಣವುಂಟು. ಹೊದ್ದುಕೊಳ್ಳುವ ಬಟ್ಟೆಯನ್ನು ಹಾಸಿಗೆಯಮೇಲೆ ಡೇರಾ ಹಾಕಿದ ರೀತಿಯಲ್ಲಿ ಮೇಲಕ್ಕೆ ಎತ್ತಿ ಕಟ್ಟಬೇಕು. ನರಗಳು ಬಲಹೀನವಾಗಿರುವವರು ಆ ಹಾಸಿಗೆಯ ಮೇಲೆ ಬೆತ್ತಲೆ ಮಲಗಿದರೆ ಆ ಹೊದಿಕೆ ಬಟ್ಟೆಯ ಭಾರವು ಮೈಮೇಲೆ ಬೀಳದೆ ಗಾಳಿಯು ಧಾರಾಳವಾಗಿ ಬೀಸಲು ಅವಕಾಶವಾಗುವುದು. ಆ ಬಟ್ಟೆಯು ತಲೆಹೊರತು ಬೇರೆ ಎಲ್ಲಾ ಭಾಗಗಳನ್ನೂ ಮುಚ್ಚುವಂತಿರಬೇಕು.

ಆ ಹೊದಿಕೆಯ ಬಟ್ಟೆಯು ವಿಶೇಷವಾಗಿ ಭಾರವಿಲ್ಲದೆ ಇರಬೇಕು. ಉಣ್ಣೆಯ ಬಟ್ಟೆಗಳು ಹಗುರವಾಗಿದ್ದು ದೇಹವನ್ನು ಸುಖವಾಗಿಡುವುದರಿಂದ ಅದೇ ಉತ್ತಮವಾದವು. ಹತ್ತಿಯ ಬಟ್ಟೆಗಳು ಸಾಮಾನ್ಯವಾದುವು. ಗರಿಯ ಹಾಸಿಗೆಯೂ, ತಲೆದಿಂಬೂ ಪ್ರಯೋಜನಕಾರಿಗಳಲ್ಲ. ಶೀತಕಾಲದಲ್ಲಿ ಮೈಗೆ ಚಳಿಯಾಗದಂತೆ ಸಾಧ್ಯವಾದಷ್ಟು ಕಡಿಮೆಯ ಬಟ್ಟೆಗಳನ್ನೇ ಉಪಯೋಗಿಸಬೇಕು.

ಮಲಗುವಾಗಲೆಲ್ಲಾ ತಲೆದಿಂಬುಗಳನ್ನು ಉಪಯೋಗಿಸುವುದು ಆವಶ್ಯವು. ಮೇಲುಮುಖವಾಗಿ ಮಲಗಿರುವಾಗ ಮಾತ್ರ ತಲೆದಿಂಬನ್ನುಪಯೋಗಿಸುವುದರಿಂದ ದೇಹವು ಮೇಲಕ್ಕೆತ್ತರಿಸಿ, ಹೆಗಲು ಜೋಲುವಂತಾಗುವುದು. ಮಗ್ಗುಲಾಗಿ ಮಲಗಿದರಾಗಲಿ, ಸ್ವಲ್ಪ ಕೆಳಮುಖವಾಗಿ ಮಲಗಿದರಾಗಲಿ, ತಲೆದಿಂಬು ಬಹಳ ಪ್ರಯೋಜನಕಾರಿಯು.

ಸುಖವಾಗಿ ನಿದ್ರೆಮಾಡಲು ಈ ಕೆಳಗೆ ಸೂಚಿಸಿದ ರೀತಿಯಲ್ಲಿ ಮಲಗುವುದೊಳ್ಳೆಯದು. ನಿಮ್ಮ ಎಡಿಯನ್ನು ಸ್ವಲ್ಪ ಕೆಳಮುಖವಾಗಿ ಚಾಚಿ ಎದೆಯ ಮೇಲೆ ಮತ್ತು ಮೊಳಕೈಮೇಲೆ ಭಾರವಿಟ್ಟು ಇನ್ನೊಂದು ಕೈಯನ್ನು ಸೊಂಟದ ಕೆಳಗೆ ಇಟ್ಟುಕೊಳ್ಳಿರಿ. ಮೊಳಕಾಲನ್ನು ಮಾತ್ರ ಸ್ವಲ್ಪ ಮೇಲಕ್ಕೆತ್ತಿಕೊಳ್ಳಬೇಕು. ಈ ರೀತಿಯಲ್ಲಿ ಮಲಗುವುದರಿಂದ, ಪಕ್ಕೆಯ ಕೆಳಭಾಗವೆಲ್ಲವೂ ಸಡಿಲವಾಗಿ ನೇತುಹಾಕಿದಂತಾಗುವುದು. ಹೊಟ್ಟೆಯು ಮುಂತಾದ ಭಾಗಗಳು ತಮ್ಮ ಭಾರದಿಂದ ಸ್ವಲ್ಪ ಕೆಳಕ್ಕಿಳಿದು, ಶ್ವಾಸಕೋಶವು ವಿಸ್ತರಿಸಿ, ಗಾಳಿಯು ತುಂಬಿಕೊಳ್ಳಲು ಅವಕಾಶವನ್ನು ಕಲ್ಪಿಸುವುದು. ಇದರಿಂದ ಮಲಗಿದವರು ರಾತ್ರಿಯೆಲ್ಲಾ ವಿಶೇಷವಾಗಿ ಗಾಳಿಯನ್ನು ಸೇವಿಸಲು ಅವಕಾಶವಾಗುವುದು. ಸ್ವಲ್ಪವೂ ತೊಂದರೆಯಿಲ್ಲದೆ ಪಕ್ಕಗಳನ್ನು ಬದಲಾಯಿಸಿಕೊಳ್ಳಬಹುದು. ಹೃದಯಕೋಶವು ದುರ್ಬಲವಾಗಿರತಕ್ಕವರಿಗೆ ಆ ಪಕ್ಕವಾಗಿ ಮಲಗಿದರೆ ಸ್ವಲ್ಪ ನೋವಾಗಬಹುದು. ಅಂಥವರು ಎಡಭಾಗವಾಗಿ ಮಲಗಬಾರದು.

"ಅರ್ಧರಾತ್ರಿಗೆ ಮುಂಚೆ ಒಂದು ಘಂಟೆಯ ಕಾಲ ನಿದ್ರೆಮಾಡುವುದು, ಅರ್ಧರಾತ್ರಿಯು ಕಳೆದಮೇಲೆ ಎರಡು ಘಂಟೆಗಳ ಕಾಲ ನಿದ್ರೆಮಾಡುವುದಕ್ಕೆ ಸಮಾನವು" ಎಂಬೀವಿಷಯದಲ್ಲಿ ಭಿನ್ನಾಭಿಪ್ರಾಯಗಳಿರುವುವು. ಸುಖವಾಗಿ ನಿದ್ರೆಬಂದಲ್ಲಿ ಯಾವಾಗ ನಿದ್ರೆ ಮಾಡಿದರೂ ಒಂದೇ ಫಲವನ್ನು ಕೊಡುವುದೆಂದು ಹಲವರು ಹೇಳುವರು. ಇದು ಸರಿಯಾದ ಅಭಿಪ್ರಾಯವೆಂದು ತೋರುವುದಿಲ್ಲ. ರಾತ್ರಿ ಹೊತ್ತಿಗೆ ಮುಂಚೆ ಮಲಗುವುದರಿಂದ ದೇಹದ ಆರೋಗ್ಯವು ಹೆಚ್ಚಿ, ದೇಹಸೌಂದರ್ಯವು ವೃದ್ಧಿಯಾಗುವದೆಂದೂ ನಮ್ಮ ಪೂರ್ವಿಕರು ಹೇಳುವ ಅಭಿಪ್ರಾಯವೇ ಸಾಧುವಾದುದೆಂದೂ ತೋರುವುದು.

ಮೊತ್ತಕ್ಕೆ ಆಲೋಚಿಸಿ ನೋಡಿದರೆ ಅರ್ಧರಾತ್ರಿಗೆ ಮುಂಚೆ ಒಂದು ಘಂಟೆಯಕಾಲವು ಅರ್ಧರಾತ್ರಿಯು ಕಳೆದಮೇಲೆ ಎರಡು ಘಂಟೆಗಳ ಕಾಲಕ್ಕೆ ಸಮಾನವು. ಅರ್ಧರಾತ್ರಿಯು ಕಳೆದಮೇಲೆ ಮಲಗಿದರೆ ನಿದ್ರೆಯ ಫಲವು ಸಂಪೂರ್ಣವಾಗಿ ದೊರಕಲಾರದು. ಪ್ರಾತಃಕಾಲಕ್ಕಿಂತ ರಾತ್ರಿಯ ಕಾಲದಲ್ಲಿ ನಿದ್ರೆಮಾಡುವುದರಿಂದ ಹೆಚ್ಚು ವಿಶ್ರಾಂತಿ ತೋರುವುದು. ಇದಕ್ಕೆ ನಿದರ್ಶನವಾಗಿ ರಾತ್ರಿ ಬಹಳಹೊತ್ತು ಕಳೆದಮೇಲೆ ಮಲಗತಕ್ಕವರು, ಹಗಲುಹೊತ್ತು ಬಹಳಕಾಲ ನಿದ್ರೆಮಾಡಿ ಆ ನಿದ್ರಾಭಂಗದ ಬಾಧೆಯನ್ನು ತೀರಿಸಿಕೊಳ್ಳುವರು. ಪ್ರಾಣಿಗಳಲ್ಲಿ ರಾತ್ರಿಚರ ಪ್ರಾಣಿಗಳಿರುವವು. ಮನುಷ್ಯಜಾತಿಯೂ ಸ್ವಲ್ಪಮಟ್ಟಿಗೆ ಆ ರಾತ್ರಿಸಂಚಾರದ ಅಭ್ಯಾಸಗಳನ್ನು ಮಾಡಿಕೊಂಡಿರುವರು. ಆದರೆ ಸಾಮಾನ್ಯವಾಗಿ ಎಲ್ಲಾ ಪ್ರಾಣಿಗಳೂ, ಮನುಷ್ಯರೂ, ಪುರಾತನಕಾಲದಿಂದ ನಿದ್ರೆಮಾಡುವ ಪದ್ಧತಿಗಳನ್ನಿಟ್ಟುಕೊಂಡಿರುವರು. ಆ ಪದ್ಧತಿಗಳನ್ನೆಲ್ಲ ಸಂಪೂರ್ಣವಾಗಿ ಬದಲಾಯಿಸುವುದರಿಂದ ನಿಮ್ಮ ನಿದ್ರೆಯಿಂದಾಗುವ ಪ್ರಯೋಜನವೂ ಬಹಳಮಟ್ಟಿಗೆ ಕಡಿಮೆಯಾಗಬಹುದು. ಅದಕೆ, ಬೆಳಕೇ ಕಾರಣವಾಗಿದ್ದರೂ ಇರಬಹುದು. ಬೆಳಕಿನಲ್ಲಿ ಉದ್ಯೋಗಶಕ್ತಿಯನ್ನೂ, ಅಭಿಲಾಷೆಯನ್ನೂ ಹೆಚ್ಚಿಸುವ ಶಕ್ತಿಯಿರುವುದು. ಕತ್ತಲೆಯಲ್ಲಿ ವಿಶ್ರಾಂತಿಗನುಕೂಲವಾದ ಗುಣವಿರುವುದು. ಬೆಳಕಿನಲ್ಲಿರುವ ಈ ಗುಣವೇ ಅರ್ಧರಾತ್ರಿಗೆ ಮುಂಚೆಮಾಡುವ ನಿದ್ರೆಯ ಗುಣವು ಹೆಚ್ಚುವದಕ್ಕೆ ಕಾರಣವಾಗಿದೆಯೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. "ಹೊತ್ತಿಗೆಮುಂಚೆ ಮಲಗಿ ಹೊತ್ತಿಗೆಮುಂಚೆ ಏಳುವುದರಿಂದ ಆರೋಗ್ಯವೂ ಐಶ್ವರ್ಯವೂ, ಬುದ್ಧಿಯೂ ಹೆಚ್ಚುವುದೆಂಬ" ವಾಕ್ಯವನ್ನು ಎಲ್ಲರೂ ಕೇಳಿರುವಿರಿ. ಆ ನಿಯಮದಂತೆ ಐಶ್ವರ್ಯವೂ, ಬುದ್ಧಿಯೂ ಹೆಚ್ಚದಿದ್ದರೂ ಆರೋಗ್ಯವೂ ಸೌಂದರ್ಯವೂ ಹೆಚ್ಚುವುದು ಖಂಡಿತ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ; ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕಷ್ಟಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಸಂತೋಷಪೂರ್ವಕವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಳುಪುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿಂಗಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿರುವ ಕಲರಿನ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಸಿದ್ಧ್ಯರ್ಥವಾಗಿ ಅಗಸ್ತ್ಯ, ದಧೀಚಿ, ವ್ಯಾಸ, ಸಾವರ್ಣ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೦ × ೮ ಬೆಲೆ	೦—೧—೬
ಸದ್ಯಃ ಶೀತಾರೋಹಣವಾಗಿರತಕ್ಕ [illegible] ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪದ್ಮಮುನೀಶ್ವರ ಶಿವಾಚಾರ್ಯರ ಯೋಗದಂಡದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ಪುತ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಪಾದದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—೨ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್ — ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ. ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ.—ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಪೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ. ೨-೮-೦ ವಿ ಪಿ ೮ ಆಣೆ ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[40] ಪೋ ಬಾ ೫೧೦. ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೨ನೆಯ ಆವೃತ್ತಿ) ..	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ...	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಶನ (೪ನೆಯ ಆವೃತ್ತಿ) .	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ .	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ..	೨ ಆಣೆ
ಪಂಚಾಚಾರ ಪ್ರಕಾಶಿಕಾ .	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) ...	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) ..	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ...	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೯ ಆಣೆ
ಸದ್ಬೋಧರತ್ನಾವಳಿ	೬ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ...	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) . .	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ ..	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೩ನೆಯ ಆವೃತ್ತಿ, ೬ ಮಹತ್ವದ ಫೋಟೋಗಳಿರುವವು)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) ..	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*) ...	**8 As**
Speeches by Pandit Shri Kashinatha Shastriji *English*)	**12 As.**
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषद् (वीरशैवभाष्य—संस्कृत) .	१ रु.
पुरुषसूक्तम् (वीरशैवप्राचीनभाष्योपेतम्) ...	६ आ
नंदिकेश्वरकारिका (संस्कृत) ...	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ಶ್ರೀ.... ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿತ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೬ನೇ ಮಾರ್ಚಿ ೧೯೪೨ [ಸಂಚಿಕೆ ೪೬

ಶ್ರೀ ರೇಣುಕಾಚಾರ್ಯರ ಜಯಂತೀ ಮಹೋತ್ಸವಗಳು

ಯಲಿವಾಳ

ಜಮಖಂಡಿ ಸ್ಟೇಟ್ ಕುಂದಗೋಳ ತಾಲೂಕ ಪೈಕಿ ಯಲಿವಾಳಗ್ರಾಮದ ವೀರಶೈವರು ಫಾಲ್ಗುನ ಶು|| ೧೪ ರವಿವಾರ ದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಉತ್ಸವವನ್ನು ವೈಭವದಿಂದ ನೆರವೇರಿಸಬೇಕೆಂದು ಮೊದಲನೆಯ ದಿವಸ ಶ್ರೀ ವೀರಭದ್ರದೇವರ ಗುಡಿಯಲ್ಲಿ ನಿರ್ಣಯಿಸಿ ಊರಲ್ಲಿ ಡಂಗುರ ಹೊಡೆಯಿಸಿದರು. ಗ್ರಾಮವೆಲ್ಲವೂ ತಳಿರುತೋರಣಗಳಿಂದ ಅಲಂಕೃತವಾಯಿತು ಸರ್ವಜನರು ತಮ್ಮ ತಮ್ಮ ಮನೆಗಳಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಪಟವನ್ನು ಭಕ್ತಿಪೂರ್ವಕವಾಗಿ ಅರ್ಚಿಸಿದರು ಸಾಯಂಕಾಲ ಕುಂದಗೋಳ ತಾ|| ಹಂಚಿನಾಳಗ್ರಾಮದ ಹಿರೇಮಠದ ಶಿವಶಂಕರಶಾಸ್ತ್ರಿಗಳು ಇದೇ ಗ್ರಾಮದ ಕೆಳದಿಮಠ ಚಂದ್ರಶೇಖರಶಾಸ್ತ್ರಿಗಳು ಮತ್ತು ಊರೊಳಗಿನ ಪಾಟೀಲ ಕುಲಕರ್ಣಿ ಸೆಟ್ಟಿ ಸಾವಕಾರ ಶಾಲಾ ಅಧ್ಯಾಪಕರು ಮೊದಲಾದವರು ವಾದ್ಯವೈಭವದಿಂದ ನಾಲ್ಕಾರು ಭಜನಮೇಳಗಳೊಂದಿಗೆ ಶ್ರೀ ರೇಣುಕಾಚಾರ್ಯರ ಭಾವಪಟವನ್ನು ಪಲ್ಲಕ್ಕಿಯಲ್ಲಿರಿಸಿ ಗ್ರಾಮದ ತುಂಬಾ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷದೊಂದಿಗೆ ಮೆರವಣಿಗೆಯನ್ನು ತೆಗೆದು ಶ್ರೀ ವೀರಭದ್ರದೇವರ ದೇವಾಲಯಕ್ಕೆ ಬಂದು ಮಹತ್ತಾದ ಸಭೆಯನ್ನು ಕರೆದರು ವೇ|| ಹಂಚಿನಾಳ ಹಿರೇಮಠದ ಶಿವಶಂಕರಶಾಸ್ತ್ರಿಗಳವರು ಶ್ರೀಜಗದ್ಗುರು ರೇಣುಕಾಚಾರ್ಯರ ಮಹಿಮಾ ವಿಷಯಗಳನ್ನು ಸಾದ್ಯಂತವಾಗಿ ಹೇಳಿ ಸರ್ವರನ್ನೂ ಸಂತೋಷಗೊಳಿಸಿದರು. ಗ ಫ. ಶಿರಗುಪ್ಪಿ ಎಂಬವರು ಸರ್ವಸಮಾಜ ಬಂಧುಗಳ ಪರಿಯಿಂದ ಆಭಾರಮನ್ನಿಸಿದರು ಆಮೇಲೆ ಸರ್ವರೂ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷವನ್ನು ಮಾಡಿ ಗುರುಪ್ರಸಾದವನ್ನು ಪಡೆದು ತಮ್ಮ ತಮ್ಮ ಮನೆಗಳಿಗೆ ತೆರಳಿದರು

ಓರ್ವ ಗುರುಭಕ್ತ

ಶಿಗ್ಗಾಂವಿ

ಪ್ರತಿವರ್ಷದ ಪದ್ಧತಿಯಂತೆ ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯರ ಜಯಂತೀಮಹೋತ್ಸವವು ತಾರೀಖು 1-3-1942 ನೇ ರವಿವಾರದಿವಸ ಧಾರವಾಡ ಡಿಸ್ಟ್ರಿಕ್ಟ ಶಿಗ್ಗಾಂವಿಯಲ್ಲಿ ಬಹು ವೈಭವದಿಂದ ಜರುಗಿಸಲ್ಪಟ್ಟಿತು ಗ್ರಾಮವೆಲ್ಲವೂ ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ಪ್ರಾತಃಕಾಲ ಹಿರೇಮಠದಲ್ಲಿ ಶ್ರೀ ರೇಣುಕ ಧ್ವಜಾರೋಹಣ ವಂದನೆಯಾಯಿತು ಮಧ್ಯಾಹ್ನ ಹಿರೇಮಠದಲ್ಲಿ ಶ್ರೀ ರೇವಣಸಿದ್ಧೇಶ್ವರಮೂರ್ತಿಗೆ ಷೋಡಶೋಪಚಾರ ಪೂಜಾದಿಗಳು ನೆರವೇರಿದವು ಸಾಯಂಕಾಲ ೭ ಘಂಟೆಗೆ ಶ್ರೀ ಜಗದ್ಗುರು ರೇಣುಕರ ಭಾವಚಿತ್ರದ ಪಲ್ಲಕ್ಕಿಮಹೋತ್ಸವವು ಭಜನಾಮಂಡಳಿ, ಡೊಳ್ಳು, ಭಜಂತ್ರಿ, ಬ್ಯಾಂಡ ಮೊದಲಾದ ವಾದ್ಯಗಳಿಂದ ಹೊರಟು ಪುರದ ಪ್ರಮುಖ ಬೀದಿಗಳಲ್ಲಿ ಹಾಯ್ದು ರಾತ್ರಿ ೯ ಘಂಟೆಗೆ ಮರಳಿ ಹಿರೇಮಠಕ್ಕೆ ತಲ್ಪಿತು ಉತ್ಸವವು ಬಹಳ ಆನಂದದಾಯಕವಾಗಿತ್ತು ಅನಂತರ ಜಯಂತಿಯ ಬಗ್ಗೆ ಧಾರ್ಮಿಕೋಪನ್ಯಾಸಗಳು ನಡೆದು ಸಭೆಯ ಕಾರ್ಯವು ಪಂಚಾಚಾರ್ಯರ ಜಯಘೋಷದೊಡನೆ ಸಮಾಪ್ತಿಗೊಂಡಿತು ದರ್ಮಾಭಿಮಾನಿಗಳೆಲ್ಲರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ

ಬಿ ಎಂ ಹಿರೇಮಠ

ಶಿರಹಟ್ಟಿ

ಸಾಂಗಲಿ ತಾಲೂಕು ಶಿರಹಟ್ಟಿಗ್ರಾಮದಲ್ಲಿ ಫಾಲ್ಗುನ ಶು|| ೧೪ ಭಾನುವಾರ ತಾ|| ೧-೩-೧೯೪೨ನೆಯ ದಿವಸ ಉದಯಕ್ಕೆ ಶ್ರೀ ಚನ್ನವೀರಸ್ವಾಮಿ ಉರ್ಫ ಫಕೀರಸ್ವಾಮಿಗಳ ಸಂಸ್ಥಾನ ಬೃಹನ್ಮಠದಲ್ಲಿ ಸದರಿಯವರ ನೇತೃತ್ವದೊಳಗೆ ಸ್ಥಾಪಿತವಾಗಿರುವ ಪಾಠಶಾಲೆಯಲ್ಲಿ ಜ್ಯೋತಿಷವೈದಿಕ ಪಾಠಶಾಲಾವಿದ್ಯಾರ್ಥಿಗಳೆಲ್ಲರೂ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರವನ್ನು ವೇದೋಕ್ತವಾಗಿ ಷೋಡಶೋಪಚಾರಗಳಿಂದ ಪೂಜಿಸಿದರು ಸಾಯಂಕಾಲ ೪ ಘಂಟೆಗೆ ಸಭೆ ಸೇರಿತು ಸಾವಕಾರ ದಬಾಲಿ ಲಿಂಗಪ್ಪನವರು ಮತ್ತು ಶ್ರೀಯುತ ಫಕೀರಪ್ಪ ಭೋರಶೆಟ್ರು ಮಠದ ಮುಕ್ತ್ಯಾರ ಇವರು ಸದರಿ ಸಂಸ್ಥಾನ ಬೃಹನ್ಮಠದ ಜ್ಯೋ|| ವೈ|| ಪಾಠಶಾಲಾ ಪ್ರಧಾನಾಧ್ಯಾಪಕರಾದ ಮೂಗಳಾದ ಪ್ರಸನ್ನದೇವರವರೀಯ. ವೇ|| ಸಿದ್ಧಾಂತಿಗಂಗಾಧರಶಾಸ್ತ್ರಿಗಳವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಸೂಚಿಸಿದ ಪ್ರಯುಕ್ತ ಶಾಸ್ತ್ರಿಗಳವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಬಳಿಕ ಸದರಿ ಶೆಟ್ರು ಭಕ್ತಿವಿಷಯವಾಗಿ ಗಂಭೀರವಾಣಿಯಿಂದ ಹೇಳಿದರು ಬಳಿಕ ಶ್ರೀಯುತ ಲಿಂಗಪ್ಪನವರು ವಿದ್ಯಾ ಹಾಗು ಗುರುಗಳ ವಿಷಯವಾಗಿಯೂ, ವಿದ್ಯಾರ್ಥಿಗಳ ವಿಷಯವಾಗಿಯೂ ಮನೋಹರವಾಗಿ ಭಾಷಣಮಾಡಿದರು ತರುವಾಯ ಪ್ರತಿಯೊಬ್ಬ ವಿದ್ಯಾರ್ಥಿಗಳು ವೀರಶೈವ ಆಚಾರ, ವಿಚಾರ, ತಂದೆ, ತಾಯಿ, ಗುರುಹಿರಿಯರ ಭಕ್ತಿಯ ಬಗ್ಗೆ ಚನ್ನಾಗಿ ಭಾಷಣಮಾಡಿದರು ಅನಂತರ ಅಧ್ಯಕ್ಷರು ಎಲ್ಲಾ ವಿಷಯಗಳನ್ನು ಕ್ರೋಡೀಕರಿಸಿ ಜನರು ತಲೆದೂಗುವಂತೆ ಉತ್ತಮ ಭಾಷಣವನ್ನು ಮಾಡಿದರು ಬಳಿಕ ವಿದ್ಯಾರ್ಥಿಗಳೆಲ್ಲರೂ ಭಜನೆಯನ್ನು ಮಾಡಿದರು ತರುವಾಯ ಶ್ರೀ ಜಗದ್ಗುರು ರೇಣುಕರ ಭಾವಚಿತ್ರಪಟಕ್ಕೆ ಮಹಾಮಂಗಳಾರತಿಯಾಗಿ ಪ್ರಸಾದವು ವಿನಿಯೋಗಿಸಲ್ಪಟ್ಟಿತು ಮಠದ ಕ್ಲಾರ್ಕ ಮ|| ನಂದವೀರಪ್ಪನವರು ಅಧ್ಯಕ್ಷರ ಆಭಾರಮನ್ನಿಸಿದಮೇಲೆ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು

ಶಿವಲಿಂಗಪ್ಪ, ಸಂಕದಾಳ

ಶ್ರೀಕಾಶೀಕ್ಷೇತ್ರ

ಪರಮವೈದಿಕವಾದ ವೀರಶೈವಮತವನ್ನು ಪ್ರತಿಯೊಂದು ಯುಗದಲ್ಲಿಯೂ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸ್ಥಾಪಿಸಿರುವ ವಿಷಯವು ವೇದಾಗಮೋಪನಿಷತ್ತುಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತಿರುವದು ಕಲಿಕಾಲದ ಪ್ರಭಾವದಿಂದ ಕೆಲವು ಶತಮಾನಗಳಿಂದ ವೀರಶೈವರು ಈ ವಿಷಯವನ್ನು ತಿಳಿಯದೆ ಕೇವಲ ಸಂಕರಜಾತಿಯವರ ವಚನಗಳನ್ನೇ ಪರಮಪ್ರಮಾಣಗಳೆಂದು ತಿಳಿದು ನಿಜವಾದ ವೀರಶೈವಮತಸಿದ್ಧಾಂತದ ಕಡೆಗೆ ಲಕ್ಷ್ಯಕೊಡದೆ ಮನಸ್ಸಿಗೆ ಬಂದಂತೆ ಆಚರಿಸುತ್ತಿದ್ದರು ಆದರೆ ಇತ್ತೀಚೆಗೆ ವೀರಶೈವಮತೋದ್ಧಾರಕರಾದ ನಾಗನೂರು ಬೃಹನ್ಮಠಾಧ್ಯಕ್ಷ ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಆಧಿಪತ್ಯದಲ್ಲಿ ಹೊರಡುವ ಪಂಚಾಚಾರ್ಯಪ್ರಭಾ ಪತ್ರಿಕೆಯಿಂದಲೂ ಮತ್ತು ಅವರ ಗ್ರಂಥಮಾಲೆಯಲ್ಲಿರುವ ಸರ್ವೋತ್ತಮ ಗ್ರಂಥಗಳಿಂದಲೂ ವೀರಶೈವಮತಾಚಾರ್ಯರನ್ನೂ ಮತ್ತು ವೀರಶೈವಮತ ಸಿದ್ಧಾಂತವನ್ನು ತಿಳಿದು ಪರಶಿವನ ಕೃಪೆಗೆ ಪಾತ್ರರಾಗುತ್ತಿರುವದು ಅತ್ಯಾನಂದಕರವಾದ ಸಂಗತಿಯಾಗಿದೆ. ವೀರಶೈವಮತಾಚಾರ್ಯರಾದ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರಲ್ಲಿ ಪರಮಭಕ್ತಿಯುಳ್ಳವರಾಗಿ ಆ ಮಹಾಚಾರ್ಯರ ಜಯಂತೀ ಮಹೋತ್ಸವಗಳನ್ನಾಚರಿಸುತ್ತಿರುವದು ಶುದ್ಧ ಸಂಪ್ರದಾಯದ ವೀರಶೈವರ ಮುಖ್ಯ ಕರ್ತವ್ಯವಾಗಿದೆ

ವಾರ್ಷಿಕ ಪದ್ಧತಿಯಂತೆ ಈ ವರ್ಷವಾದರೂ ಶ್ರೀ ಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀಜಗದ್ಗುರುವ ಮಹಾಸಂಸ್ಥಾನ ಜಂಗಮವಾಡಿ ಮಠದಲ್ಲಿ ಫಾಲ್ಗುನ ಶುಕ್ಲ ಚತುರ್ದಶೀ ಭಾನುವಾರ ಶ್ರೀಜಗದ್ಗುರು ರೇಣುಕ ಭಗವತ್ಪಾದಾಚಾರ್ಯರ ಜಯಂತೀ ಮಹೋತ್ಸವವು ವಿಧ್ಯುಕ್ತವಾಗಿ ಆಚರಿಸಲ್ಪಟ್ಟಿತು

ಆ ದಿವಸ ಶ್ರೀಜಗದ್ಗುರು ರೇಣುಕಶಿವಾಚಾರ್ಯರ ಭಾವಚಿತ್ರವನ್ನು ಉನ್ನತಪೀಠದಲ್ಲಿರಿಸಿ ವಿಧ್ಯುಕ್ತವಾಗಿ ಪೂಜಿಸಿದ ತರುವಾಯ ಗುರುಕುಲದ ವಿದ್ಯಾರ್ಥಿಗಳಿಂದ ಜಗದಾಚಾರ್ಯರ ಭಜನೆಯು ಮಾಡಲ್ಪಟ್ಟಿತು ತರುವಾಯ ಅಹಮದಪುರದ ಪಟ್ಟಾಧ್ಯಕ್ಷರು ಜಯಂತೀವಿಷಯವನ್ನು ಕುರಿತು ಭಾಷಣಮಾಡಿದರು ತರುವಾಯ ರಾಪಲುಡಿಕೆ ಬೃಹನ್ಮಠದ ವೇ|| ಸದಾಶಿವಶಾಸ್ತ್ರಿಗಳು ಕಾವ್ಯತೀರ್ಥ ಇವರು ವೀರಶೈವ ಮತತತ್ತ್ವವನ್ನು ಕುರಿತು ಭಾಷಣಮಾಡಿದರು. ಬಳಿಕ ಇನ್ನೂ ಕೆಲಜನ ವಿದ್ಯಾರ್ಥಿಗಳು ಭಾಷಣಮಾಡಿದರು. ಅನಂತರ ಶ್ರೀಜಗದ್ಗುರು ರೇಣುಕಭಗವತ್ಪಾದರ ಭಾವಚಿತ್ರಕ್ಕೆ ಮಹಾಮಂಗಳಾರತಿಯಾಗಿ ಸರ್ವರಿಗೂ ಪ್ರಸಾದವು ಹಂಚಲ್ಪಟ್ಟಿತು. ತರುವಾಯ ಜಗದಾಚಾರ್ಯರ ಜಯಘೋಷದೊಡನೆ ಉತ್ಸವವು ಸಮಾಪ್ತಿಯನ್ನು ಹೊಂದಿತು

ಓರ್ವ ಗುರುಕುಲವಿದ್ಯಾರ್ಥಿ
ಶ್ರೀಕ್ಷೇತ್ರಕಾಶೀ

ರೇವಗಿಕ್ಷೇತ್ರ

ಗುಲ್ಬರ್ಗಾ ಡಿ|| ಶ್ರೀರೇವಗಿ (ರೇವಣಗಿರಿ) ಕ್ಷೇತ್ರದಲ್ಲಿ ಈ ವರ್ಷ ಶ್ರೀ ಕಲ್ಯಾಣಕಟ್ಟಿಮನಿ ಬೃಹನ್ಮಠದ ಬೇಲೂರು ಗುರುಲಿಂಗಶಿವಾಚಾರ್ಯರ ನೇತೃತ್ವದಲ್ಲಿ ಜಯಂತೀಮಹೋತ್ಸವವು ಬಹು ಉತ್ಸಾಹದಿಂದ ನೆರವೇರಿತು ಕಳೆದ ವರ್ಷ ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು ಈ ಕ್ಷೇತ್ರಕ್ಕಾಗಮಿಸಿ, ಶ್ರೀ ರೇಣುಕರ ಅದ್ಭುತ ಲೀಲೆಗಳನ್ನು ಸರ್ವರಿಗೂ ತಿಳಿಯಪಡಿಸಿ ಪ್ರತಿವರ್ಷವೂ ಈ ಕ್ಷೇತ್ರದಲ್ಲಿ ಜಯಂತಿಯು ವೈಭವದಿಂದ ನೆರವೇರಬೇಕೆಂದು ಅಪ್ಪಣೆಕೊಡಿಸಿ ಹೋಗಿದ್ದರು ಅವರ ಆಜ್ಞಾನುಸಾರವಾಗಿಯೇ ಜಯಂತೀ ಕಾರ್ಯವು ಈ ವರ್ಷ ಬಹಳ ವೈಭವದೊಡನೆ ನೆರವೇರಿತ ಈ ಮಹೋತ್ಸವಕ್ಕಾಗಿ ೧೦ ೧೫ ಸಾವಿರ ಜನರು ಆಗಮಿಸಿದ್ದರು ಬಂದ ಜನರಿಗೆ ಊಟದ ವ್ಯವಸ್ಥೆಯನ್ನು ಬೇಲೂರು ಶ್ರೀಗಳವರು ಬಹು ಸಮರ್ಪಕವಾಗಿ ಇಟ್ಟಿದ್ದರು ಫಾಲ್ಗುನ ಶುದ್ಧ ೧೨ ಯಿಂದ ೧೪ ವರೆಗೆ ಮೂರು ದಿನಗಳ ಕಾರ್ಯಕ್ರಮವು ನೆರವೇರಿತು ಎಲ್ಲಿ ನೋಡಿದರೂ ಶ್ರೀ ರೇಣುಕರ ಜಯಘೋಷವೇ ಜಯಘೋಷವಾಗಿತ್ತು ಈ ಮಹೋತ್ಸವದ ವ್ಯವಸ್ಥೆಗಾಗಿ ನಿಜಾಂ ಪೋಲೀಸ್ ಅಧಿಕಾರಿಗಳು ಆಗಮಿಸಿ ಸರಿಯಾದ ವ್ಯವಸ್ಥೆಯನ್ನಿಟ್ಟಿದ್ದರು. ರೇಣುಕರ ಭಾವಚಿತ್ರವನ್ನು ದಿವ್ಯವಾದ ರಥದಲ್ಲಿಟ್ಟು ಉತ್ಸವವನ್ನು ನಡೆಯಿಸಿದ್ದಾಯಿತು ಪೋಲೀಸರು ಈ ಸಮಯದಲ್ಲಿ ಬಹಳ ಶಿಸ್ತಿನಿಂದ ಕಾರ್ಯವನ್ನು ನಡೆಯಿಸಿದರು. ಸರ್ಕಾರಿ ಅಧಿಕಾರಿಗಳ ಸಮ್ಮುಖದಲ್ಲಿ ಫೋಟೋ ತೆಗೆಯಲ್ಪಟ್ಟಿತು ಸುತ್ತಮುತ್ತಣ ಗ್ರಾಮಗಳಿಂದ ಅನೇಕ ಜನ ಭಜನಸಂಘದವರು ಆಗಮಿಸಿದ್ದರು ಒಟ್ಟಿನಲ್ಲಿ ಶ್ರೀ ರೇಣುಕಾಚಾರ್ಯರ ಅನುಗ್ರಹದಿಂದ ಮೂರು ದಿವಸಗಳವರೆಗೆ ಕಾರ್ಯಕ್ರಮವು ಬಹು ಸಮರ್ಪಕವಾಗಿ ನೆರವೇರಿತೆಂದು ತಿಳಿಸಲು ಪರಮಾನಂದವೆನಿಸುತ್ತದೆ ಇನ್ನೊಂದು ಸಂಗತಿಯೇನೆಂದರೆ ಈ ಬೆಟ್ಟದಲ್ಲಿ ಕೆಲವು ದಿವಸಗಳಿಂದಿದ್ದ ಒಬ್ಬ ಜಂಗಮರು ಈ ಜಯಂತೀ ನಿಮಿತ್ತ ಮಾಡಿಕೊಂಡು ಹಳ್ಳಿಹಳ್ಳಿಗಳಲ್ಲಿ ದುಡ್ಡು ವಸೂಲುಮಾಡಿ ಅದನ್ನು ಜಯಂತಿಗೆ ಕೊಡದೆ, ತಾವೇ ಅಪಹರಿಸಿದರೆಂದು ಅನೇಕ ಜನರು ಆಕ್ಷೇಪಿಸುತ್ತಿದ್ದರು ಇಂಥ ಜನರು ಬಂದರೆ ಮುಂದೆ ಯಾರೂ ದುಡ್ಡು ಸಹಾಯ ಮಾಡಬಾರದೆಂದು ನನ ಪ್ರಾರ್ಥನೆ

ಓರ್ವ ಗುರ ಭಕ್ತ

ಹುಬ್ಬಳ್ಳಿ

ಧಾರವಾಡ ಡಿ|| ಹುಬ್ಬಳ್ಳಿ ಟವನ್ನಿನಲ್ಲಿರುವ ಹನ್ನೆರಡು ಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಫಾಲ್ಗುನ ಶು|| ೧೪ ರವಿವಾರ ದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವು ಅಸಾಧಾರಣ ವೈಭವದೊಡನೆ ನೆರವೇರಿಸಲ್ಪಟ್ಟಿತು ಅಂದು ಪ್ರಾತಃಕಾಲ ಶ್ರೀಜಗದಾಚಾರ್ಯರ ಮೂರ್ತಿಗೆ ಷೋಡಶೋಪಚಾರ ಪೂಜೆಯು ನೆರವೇರಿತು ಸಾಯಂಕಾಲ ಸದರಿ ಹನ್ನೆರಡು ಮಠಕ್ಕೆ ಗುರುಭಕ್ತರೆಲ್ಲರೂ ಆಗಮಿಸಿದರು ಸಭೆಯಲ್ಲಿ ರಾಯಚೂರು ಶ್ರೀಗಳವರು ವಕ್ತೃ ಶ್ರೀಮಾನ್ ಪಿ ಎ ಹಿರೇಮಠ ಹೈಕೋರ್ಟ್ ವಕೀಲ್ ಇವರು ಜಯಂತಿಯ ಆವಶ್ಯಕತೆಯನ್ನೂ ಶ್ರೀರೇಣುಕರ ಅದ್ಭುತ ಲೀಲೆಗಳನ್ನೂ ಕುರಿತು ಭಾಷಣಮಾಡಿದರು ಪಿ. ಎ. ಹಿರೇಮಠ ವಕೀಲರವರು ತಮ್ಮ ಭಾಷಣದಲ್ಲಿ ಗುರುವರ್ಗದ ಪ್ರಾಚೀನ ವೈಭವವನ್ನೂ ಇತ್ತೀಚಿಗೆ ಆ ಪೂಜ್ಯವರ್ಗಕ್ಕೆ ಪ್ರಾಪ್ತವಾದ ದುಸ್ಥಿತಿಯನ್ನೂ ವರ್ಣಿಸಿದರು. ಗುರುವರ್ಗದ ಪೂರ್ವಪುಣ್ಯವಿಶೇಷದಿಂದ ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು ಜನ್ಮವೆತ್ತಿ ಗುರುವರ್ಗದ ಉದ್ಧಾರಕ್ಕಾಗಿ ಅನೇಕಾನೇಕ ಅದ್ಭುತ ಕಾರ್ಯಗಳನ್ನು ಮಾಡಿದರೆಂದೂ, ಅನೇಕ ಪ್ರಾಚೀನ ಗ್ರಂಥಗಳನ್ನು ಮುದ್ರಿಸಿದರೆಂದೂ, ಅವರ ಪ್ರಭಾವಾತಿಶಯದಿಂದ ಇಂದು ಗುರುವರ್ಗವು ಎಚ್ಚೆತ್ತು ತನ್ನ ಕರ್ತವ್ಯವನ್ನು ನೆರವೇರಿಸುತ್ತಿರುವದೆಂದೂ, ಅವರು ಮಹಾಶೋಧಕಬುದ್ಧಿಯಿಂದ ಬರೆದಿರುವ ಗ್ರಂಥಗಳು ಜಗನ್ಮಾನ್ಯಗಳಾಗಿದ್ದು, ಗುರುವರ್ಗ ವಿರೋಧಿಗಳ ಅರ್ಭಟವನ್ನು ತಗ್ಗಿಸಿದವೆಂದೂ ಪಂಡಿತರು ಗುರುವರ್ಗಕ್ಕೆ ಭಾನುವಿನಂತಿರುವರೆಂದೂ ಹೇಳಿ, ಸರ್ವರನ್ನೂ ಆನಂದಸಾಗರದಲ್ಲಿ ಮುಳುಗಿಸಿದರು ಆಮೇಲೆ ಮಹಾಮಂಗಳಾರತಿಯಾಗಿ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಓರ್ವ ಆಚಾರ್ಯಭಕ್ತ

ಮನ್ನಳ್ಳಿ

ಶ್ರೀಮದ್ವೀರಶೈವ ಮಹಾಮತಸಂಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಪರಶಿವನ ಅಪ್ಪಣೆಯ ಮೇರಗೆ ಪ್ರತಿಯೊಂದು ಯುಗದಲ್ಲಿಯೂ ಕುಲ್ಯಪಾಕ ಕ್ಷೇತ್ರದಲ್ಲಿ ರಾರಾಜಿಸುತ್ತಿರುವ ಶ್ರೀ ಸೋಮನಾಥಲಿಂಗದಿಂದ ಅವತರಿಸಿ ಭೂಮಂಡಲದಲ್ಲೆಲ್ಲ ಸಂಚರಿಸಿ ಅನಂತ ಲೀಲೆಗಳನ್ನು ಮಾಡಿ ಅನೇಕ ಜನ ಮಹರ್ಷಿಗಳನ್ನೂ ಚಕ್ರವರ್ತಿಗಳನ್ನೂ ಉದ್ಧರಿಸಿದ ವಿಷಯವು ಅವರ ವಿಷಯಕವಾಗಿರುವ ರೇಣುಕವಿಜಯ ಮೊದಲಾದ ಪವಿತ್ರ ಚರಿತ್ರೆಗಳಿಂದ ತಿಳಿದುಬರುವುದಷ್ಟೆ ! ಈ ಮಹಾತ್ಮರ ಜಯಂತಿಯು ನಿಜಾಮ ಇಲಾಖಾ ಬಿದರಜಿಲ್ಹಾ ಜಹಿರಾಬಾದ ತಾಲೂಕಿಗೆ ಸೇರಿದ ಮನ್ನಳ್ಳಿಗ್ರಾಮದ ರೇಣುಕ ಶಿಖಾಮಠದಲ್ಲಿರುವ ಪಂಚಾಚಾರ್ಯ ಮಂಟಪದಲ್ಲಿ ತಾ|| ೧-೩-೪೨ ಭಾನುವಾರದಿವಸ ವೇ|| ಮಹಾಂತಸ್ವಾಮಿಗಳವರು ಪಟ್ಟಿಮಠ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು ಅಂದು ಆ ಮಠದಲ್ಲಿನ ಪುರಾತನ ಮಠದ ಶಿವಲಿಂಗಮೂರ್ತಿಗೂ ಶ್ರೀಜಗದ್ಗುರು ರೇಣುಕಾಚಾರ್ಯರ ಮೂರ್ತಿಗೂ ರುದ್ರಾಭಿಷೇಕಪೂರ್ವಕ ರೇಣುಕರ ಅಷ್ಟೋತ್ತರನಾಮಾವಳಿ ಶಿವಸಹಸ್ರನಾಮಾವಳಿಗಳೊಡನೆ ಬಹು ವೈಭವದಿಂದ ನೆರವೇರಿತು ಮಂಗಳಾರತಿಯಾದಮೇಲೆ ಶ್ರೀಜಗದ್ಗುರು ಪಂಚಾಚಾರ್ಯಮಹಾರಾಜಕೀ ಜೈ ! ಪಂಡಿತ ಶ್ರೀಕಾಶೀನಾಥಶಾಸ್ತ್ರೀಜೀಕೀ ಜೈ ! ಎಂಬ ಜಯಘೋಷವು ಮಾಡಲ್ಪಟ್ಟಿತು ಅನಂತರ ಆಗಮಿಸಿದ ಮಾಹೇಶ್ವರರಿಗೆ ಅನ್ನಸಂತರ್ಪಣೆಯು ನೆರವೇರಿ ದಕ್ಷಿಣಾದಿಗಳು ಸಮರ್ಪಿಸಲ್ಪಟ್ಟವು ಬಳಿಕ ಸಭೆ ಕೂಡಿತು ಸಭೆಗೆ ಗುರುಭಕ್ತರಾದ ಬಾಚಪ್ಪ ಕನ್ನಾ, ಬಸವಲಿಂಗಪ್ಪ ಕನ್ನಾ, ಶಿವಬಸಪ್ಪ ಕೋಟಿ, ಶಂಕರಪ್ಪ ಅಭಿನವರೇಣುಕ ಸಂಘದ ಸಕ್ರೆಟರಿ, ಬಸವಣ್ಣಪ್ಪ ಹೊಲ್ಲಾ ಮೊದಲಾದವರು ಆಗಮಿಸಿದ್ದರು ಅಧ್ಯಕ್ಷರ ಸೂಚನೆಮೇರೆಗೆ ಅಭಿನವ ರೇಣುಕಸಂಘದ ಸಕ್ರೆಟರಿಗಳಾದ ಶಂಕರಪ್ಪನವರು ಶ್ರೀ ಜಗದಾಚಾರ್ಯರ ಜಯಂತಿಯ ಆವಶ್ಯಕತೆಯನ್ನು ಕುರಿತು ಹೇಳಿದ್ದಲ್ಲದೆ ಪ್ರತಿವರ್ಷ ಪದ್ಧತಿಯಂತೆ ಪಂಚಾಚಾರ್ಯರ ಜಯಂತಿಗಳನ್ನು ಇದಕ್ಕೂ ಹೆಚ್ಚಿನ ಸಮಾರಂಭದಿಂದಲೂ ಉತ್ಸಾಹದಿಂದಲೂ ನಡೆಸಬೇಕೆಂದು ಸಭಿಕರ ಮನಸ್ಸಿನಲ್ಲಿ ಪರಿಣಾಮವಾಗುವಂತೆ ಭಾಷಣಮಾಡಿದರು ಬಳಿಕ ಅಧ್ಯಕ್ಷರು ಪಂಚಾಚಾರ್ಯರ ಮಹಿಮೆಯನ್ನು ವಿಸ್ತಾರವಾಗಿ ಬೋಧಿಸಿದರು ಶ್ರೀಜಗದ್ಗುರು ಅಭಿನವರೇಣುಕ ಸಂಘದವರು ಪಂಚಾಚಾರ್ಯಸ್ತೋತ್ರಗಳನ್ನು ಬಹು ಮನೋಹರವಾಗಿ ಹಾಡಿ ಸರ್ವಸಭಿಕರನ್ನು ಆನಂದಗೊಳಿಸಿದರು. ಅವೇಳೆ ಮಹಾಂತಸ್ವಾಮಿಗಳವರು ರಚಿಸಿದ ಪದವನ್ನು ಹಾಡಿದರು ಬಳಿಕ ಮಂಗಲಮೂರ್ತಿಯ ನವಲೀಲಾಷಟಕ್ಕೆ ಮಂಗಳಾರತಿಯಾಗಿ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಕಾರ್ಯದಲ್ಲಿ ನಿರತರಾದ ಮಹಾಶಯರೆಲ್ಲರಿಗೂ ಶ್ರೀ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ. ಬೋಲೋ ಶ್ರೀಜಗದ್ಗುರು ಪಂಚಾಚಾರ್ಯಮಹಾರಾಜಕೀ ಜೈ ! ಬೋಲೋ ಸನಾತನ ವೀರಶೈವ ಮತೋದ್ಧಾರಕ ಪಂಡಿತ ಶ್ರೀಕಾಶೀನಾಥಶಾಸ್ತ್ರೀಜೀಕೀ ಜೈ !!

ಗುರುಭಕ್ತ,
ಶಾಂತಲಿಂಗಪ್ಪ ಪನಾಳೆ.

ಸೇಲಂ

ಮದರಾಸ್ ಇಲಾಖಾ ಸೇಲಂ ಟವನ್ನಿಗೆ 2|| ಮೈಲು ದೂರದಲ್ಲಿರುವ ಸ್ಥಲಮಲೆ ಎಂಬ ಚಿಕ್ಕ ಬೆಟ್ಟದ ಮೇಲೆ ಯಾವಾಗಲೂ ನೀರು ಹರಿಯುತ್ತಿರುವುದು ಈ ಜಲದ್ವಾರದ ಸಮೀಪದಲ್ಲಿ ಶ್ರೀರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಚಿತ್ರವು ಒಂದು ದೊಡ್ಡ ಬಂಡೆಯ ಮೇಲೆ ಲೋಪಾಮುದ್ರೆ, ಶಿವಲಿಂಗ, ನಂದಿ ಇವುಗಳೊಡನೆ ಕೆತ್ತಿಸಲ್ಪಟ್ಟಿದೆ ಈ ಪವಿತ್ರ ಸ್ಥಳದಲ್ಲಿ ಈಗ್ಗೆ 16 ವರುಷಗಳಿಂದಲೂ ಶ್ರೀರೇಣುಕಾಚಾರ್ಯರ ಜಯಂತೀಮಹೋತ್ಸವವು ನಡೆಯುತ್ತಬಂದಿರುವುದು. ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ತಾ|| 1-3-42 ನೆಯ ಭಾನುವಾರ ದಿವಸ ಶ್ರೀಜಗದಾಚಾರ್ಯರ ಮೂರ್ತಿಗೆ ಪೂಜಾದಿಗಳು ವೈಭವದಿಂದ ನೆರವೇರಿದವು ಬಳಿಕ ಎರಡುನೂರು ಜನರಿಗೆ ಅನ್ನಸಂತರ್ಪಣೆಯಾಯಿತು. ಆಮೇಲೆ ವೈದ್ಯ ಗುರುಸ್ವಾಮಯ್ಯನವರು ಶ್ರೀರೇಣುಕರ ಲೀಲೆಗಳನ್ನು ಕುರಿತು ಭಾಷಣಮಾಡಿದರು ಅನಂತರ ಆಚಾರ್ಯರ ಜಯಘೋಷದೊಡನೆ ಜಯಂತಿಯ ಕಾರ್ಯವು ಸಮಾಪ್ತಿಗೊಂಡಿತು. ಈಗ್ಗೆ 16 ವರ್ಷಗಳಿಂದ ಜಯಂತೀ ಮಹೋತ್ಸವವನ್ನು ವಿಶೇಷ ಧನವ್ಯಯದಿಂದ ನೆರವೇರಿಸುತ್ತಿರುವ ಸದರಿ ವೈದ್ಯಗುರುಸ್ವಾಮಯ್ಯನವರಿಗೆ ಶ್ರೀ ಜಗದಾಚಾರ್ಯರು ಸಕಲಸನ್ಮಂಗಳಗಳನ್ನೀಯಲೆಂದು ಪ್ರಾರ್ಥಿಸುವ,

ಓರ್ವ ಉತ್ಸವಭಾಗಿ.

ಬಳೂರಗಿ

ಗುಲಬರ್ಗಾ ಡಿ|| ಬಳೂರಗಿಗ್ರಾಮದಲ್ಲಿರುವ ಶ್ರೀ ವಿಠ್ಠಲದೇವಾಲಯದಲ್ಲಿ ಈ ತಿಂಗಳು ಒಂದನೆಯತಾರೀಖಿನ ದಿವಸ ಶ್ರೀ ರೇಣುಕಾಚಾರ್ಯರ ಜಯಂತೀಮಹೋತ್ಸವವು ಒಳ್ಳೇ ವೈಭವದಿಂದ ನೆರವೇರಿತು. ಈ ಜಯಂತೀಕಾರ್ಯಕ್ಕಾಗಿ ಗ್ರಾಮದ ಪ್ರಮುಖರು ಸೊಲ್ಲಾಪುರದಿಂದ ವೇ|| ನಿಜಗುಣಸ್ವಾಮಿ ಹೊಸಪೇಟಕರ್ ಇವರನ್ನು ಬರಮಾಡಿಕೊಂಡಿದ್ದರು ಇವರ ಅಧಿಪತ್ಯದಲ್ಲಿಯೇ ಆಚಾರ್ಯಮೂರ್ತಿಗೆ ರುದ್ರಾಭಿಷೇಕಾದಿಗಳು ನೆರವೇರಿದವು. ಮಧ್ಯಾಹ್ನ ಗಣಸಂತರ್ಪಣೆಯಾಯಿತು ಶ್ರೀಗುರುದರ್ಶನಕ್ಕಾಗಿ ಜನರು ತಂಡೋಪತಂಡವಾಗಿ ಆಗಮಿಸುತ್ತಿದ್ದರು ಸಾಯಂಕಾಲ ಸಭೆಸೇರಿತು. ಪ್ರಾರಂಭದಲ್ಲಿ ಗುರುಶಂಕರ ದುಂಡಲಿಂಗಪ್ಪ ಮಾಸ್ತರರು ಶ್ರೀ ರೇಣುಕಾಚಾರ್ಯರ ಲಿಂಗಾವತಾರದ ವಿಷಯವಾಗಿ ಭಾಷಣಮಾಡಿನರು. ಅಧ್ಯಕ್ಷರಾದ ನಿಜಗುಣಸ್ವಾಮಿಯವರು ಶ್ರೀಜಗದಾಚಾರ್ಯರ ಸಮಸ್ತ ಲೀಲೆಗಳನ್ನು ವರ್ಣಿಸಿದರು. ಮರುದಿನ ಶ್ರೀ ನಿಜಗುಣಸ್ವಾಮಿಯವರು ಕೈ|| ಉಜ್ಜಯಿನಿ ಜಗದ್ಗುರುಗಳವರ ಕೀರ್ತನವನ್ನು ಮಾಡಿ ಸರ್ವರನ್ನೂ ಸಂತೋಷಪಡಿಸಿದರು.

ಗುರುಶಂಕರ ದುಂಡಲಿಂಗಪ್ಪಾ,
ಮಾಸ್ತರ್.

ಹಮಸಾಗರ (ಶಿಹಾಂಕ್ಪೇಟ್)

ಇದೇ ಫಾಲ್ಗುನ ಶು|| ೧೪ ರವಿವಾರ ಇಲ್ಲಿಯ ವೇ|| ಸಂಗಬಸಯ್ಯನವರ ಬೃಹನ್ಮಠದಲ್ಲಿ ಶ್ರೀ ಮಜ್ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಅಭೂತಪೂರ್ವವಾಗಿ ನೆರವೇರಿತೆಂದು ತಿಳಿಸಲು ಅತ್ಯಾನಂದವೆನಿಸುತ್ತದೆ ಮುಂಜಾನೆ ೧೦ ಘಂಟೆಗೆ ರಂಭಾಸ್ತಂಭಗಳಿಂದಲೂ ತಳಿರು ತೋರಣಗಳಿಂದಲೂ ಅಲಂಕೃತವಾದ ಮಹಾಮಂಟಪದಲ್ಲಿ ವಿರಾಜಿಸುತ್ತಿದ್ದ ಲಿಂಗೋದ್ಭವ ದಿವ್ಯಭಾವಚಿತ್ರಕ್ಕೆ ವಿಧ್ಯುಕ್ತ ಮಹಾಪೂಜೆಯಾದನಂತರ ಪುರದಸದ್ಭಕ್ತರೆಲ್ಲರೂ ಅತ್ಯಂತ ಭಕ್ತಿಯುಕ್ತರಾಗಿ ಫಲ ಕಾಯಿ- ಕರ್ಪೂರಗಳನ್ನು ಸಲ್ಲಿಸುವದು ವರ್ಣನಾತೀತವಾಗಿತ್ತು ಪುನಃ ಮಧ್ಯಾಹ್ನ ೪ ಘಂಟೆಗೆ ಶ್ರೀ|| ಷ|| ಬ್ರ| ಶ್ರೀ ಚಂದ್ರಶೇಖರಶಿವಾಚಾರ್ಯರು ಅಮರಗೋಳ ಇವರ ಅಧ್ಯಕ್ಷತೆಯಲ್ಲಿ ಮಹಾಸಭೆಯುಕೂಡಿತು. ಈ ಮಂಗಲ ಮಯಸನ್ನಿವೇಶದಲ್ಲಿ ಪುರಪ್ರಮುಖರು, ಸ್ವಮತ-ಪರಮತೀಯ ಸ್ತ್ರೀ ಪುರುಷರು, ಅಜುಬಾಜು ೮-೧೦ ಗ್ರಾಮದವರು ಸುಮಾರು ಸಾವಿರಾರು ಜನರು ಅತ್ಯುತ್ಸಾಹದಿಂದ ನೆರೆದಿದ್ದರು ಮೊದಲು ಅಧ್ಯಕ್ಷರ ಸೂಚನೆಯಮೇರೆಗೆ ಮ|| ರಾ|| ಚಂದ್ರಾಲಿಂಗಪ್ಪ ಬಾಚಿಲಾಪುರ ಇವರು ಜಗದಾಚಾರ್ಯರ ಜಯಂತಿಯ ಆವಶ್ಯಕತೆಯನ್ನು ವಿವರಿಸಿದರು ಆಮೇಲೆ ಇಲ್ಲಿಯ ಶ್ರೀ ಕರಿಸಿದ್ಧೇಶ್ವರವಾಚನಾಲಯದ ಅಧ್ಯಕ್ಷರಾದ ಮ|| ರಾ|| ಶಿವರುದ್ರಪ್ಪ ರಂಜಣಗಿ ಇವರು "ಗುರುಭಕ್ತಿ" ಯ ವಿಷಯಕ್ಕೆ ಪ್ರಮಾಣ ಪುರಸ್ಸರವಾಗಿ ಭಾಷಣಮಾಡಿದರು. ಅನಂತರ ಪ್ರವಚನ

ಪಟು, ಪುರಾಣಪಂಚಾಸ್ಯ, ಗಾನಾನಂದ ಮೊದಲಾದ ಪದವೀಭೂಷಿತರಾದ ವೇ|| ಹಿರೆಹರಕುಣಿ ಹಿರೇಮಠದ ಶ್ರೀ ಸಿದ್ಧಲಿಂಗದೇವರು ತಮ್ಮ ಅಸ್ಖಲಿತ ದಿವ್ಯವಾಣಿಯಿಂದ ಗುರುವಿನ ಆವಶ್ಯಕತೆ, ರೇಣುಕಾದಿ ಪಂಚಾಚಾರ್ಯರ ಕಾಲನಿರ್ಣಯ, ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಗುರುಪೀಠಕ್ಕೆ ಸಲ್ಲಿಸಿದ ಅಪ್ರತಿಮಸೇವೆ ಮೊದಲಾದ ವಿಷಯಗಳನ್ನು ಸಪ್ರಮಾಣವಾಗಿ ಸರ್ವರಿಗೂ ತಿಳಿಯುವಂತೆ ಬೋಧೆಯನ್ನಿತ್ತರು. ಆಮೇಲೆ ಅಧ್ಯಕ್ಷರ ಸಮಾರೋಪಣ ಭಾಷಣವಾದಮೇಲೆ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಜಯಜಯಕಾರದೊಡನೆ ಸಭೆಯು ಮುಕ್ತಾಯವಾಯಿತು.

ಓರ್ವಗುರುಪದಾಬ್ಜಭ್ರಮರ

ವಡೇರಹಳ್ಳಿ

ಕಡೂರು ತಾ|| ಯಗಟಿತೋಬಳಿ ವಡೇರಹಳ್ಳಿಯಲ್ಲಿರುವ ವೇ|| ಚನ್ನವೀರಪ್ಪನವರ ಮಕ್ಕಳು ಓಸವಾರಾಧ್ಯರು ಪದ್ಧತಿಪ್ರಕಾರ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವನ್ನು ತಮ್ಮ ಗೃಹದಲ್ಲಿ ತಾ|| 1 3 42ನೇ ಭಾನುವಾರ ಪ್ರಾತಃಕಾಲ ನೆರವೇರಿಸಿದರು ಶ್ರೀ ರೇಣುಕಾಚಾರ್ಯರ ಮೂರ್ತಿಗೆ ರುದ್ರಾಧ್ಯಯನ ಪೂರ್ವಕ ಪೂಜೆಯು ನೆರವೇರಿತು ಬಳಿಕ ಅನ್ನಸಂತರ್ಪಣೆಯು ನಡೆಯಿತು

ಓರ್ವ ಗುರುಭಕ್ತ

ಹಾರ್ನಹಳ್ಳಿ

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ವೇ|| ಶಿವಕಥಾಪಂಡಿತ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ತಮ್ಮ ವಾಸಗೃಹದಲ್ಲಿ ಪದ್ಧತಿಯಂತೆ ಇದೇ ಫಾಲ್ಗುನ ಶು|| ೧೪ ಭಾನುವಾರ ಪ್ರಾತಃಕಾಲ ಶ್ರೀಭಗವತ್ಪಾದ ರೇಣುಕಾಚಾರ್ಯರ ಭಾವಚಿತ್ರವನ್ನು ಭದ್ರಪೀಠದಲ್ಲಿ ಮೂರ್ತಗೊಳಿಸಿ ವಿಧ್ಯುಕ್ತವಾಗಿ ಪೂಜಿಸಿ ಅಷ್ಟೋತ್ತರಶತನಾಮಾವಳಿಯನ್ನು ಪಠಿಸಿ ಪ್ರಸಾದವಿನಿಯೋಗವಾದ ಬಳಿಕ ಅದೇ ದಿವಸವೇ ಶ್ರೀಜಗದ್ಗುರು ರಂಭಾಪುರೀಕ್ಷೇತ್ರದಲ್ಲಿ ನಡೆಯುವ ಮಹಾರಥೋತ್ಸವ ಸಮಾರಂಭದಲ್ಲಿ ಭಾಗಿಯಾಗಲು ಪ್ರಯಾಣಮಾಡಿದರು

ಓರ್ವ ಗುರುಭಕ್ತ

ಆಲೂರು

ಹಾಸನ ಡಿ|| ಆಲೂರು ಟೌನಿನಲ್ಲಿ ತಾ|| 1 ೩ 1942ರ ಭಾನುವಾರ ಶ್ರೀ ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ಅತಿ ವಿಜೃಂಭಣೆಯಿಂದ ನೆರವೇರಿಸಲಾಯಿತು ಪ್ರಾತಃಕಾಲ ಶಿವದೇವಾಲಯದಲ್ಲಿ ರೇಣುಕರಿಗೆ ರುದ್ರಾಭಿಷೇಕ, ಮಹಾಪೂಜಾದಿಗಳನ್ನು ವೀರಶೈವಮಹಾಜನರು ನಡೆಸಿದರು ಅನಂತರ ಶ್ರೀ ರೇಣುಕಾಚಾರ್ಯರ ಭಾವಚಿತ್ರವನ್ನು ಶೃಂಗರಿಸಿದ ರಥದಲ್ಲಿಟ್ಟು, ವಾದ್ಯಘೋಷಗಳೊಡನೆ ಬೆಳಗ್ಗೆ ಮತ್ತು ಸಾಯಂಕಾಲ ಎರಡುವೇಳೆ ಮೆರವಣಿಗೆ ಮಾಡಲಾಯಿತು ಮಧ್ಯಾಹ್ನ ಇಲ್ಲಿನ ರೈಸ್ ಮಿಲ್ ಸಾ|| ಮೆ|| ನಂಜಪ್ಪನವರ ದಿವ್ಯಗೃಹದಲ್ಲಿ ಎಲ್ಲರಿಗೂ ಪಾನಕ ಫಲಾಹಾರಗಳು ನಡೆಸಲ್ಪಟ್ಟವು ಈ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಒಂದುರೂಪಾಯಿ ನಾಲ್ಕಾಣೆಗಳನ್ನು ಸಮರ್ಪಿಸಲಾಯಿತು ಆದಿನ ರಾತ್ರಿ ಕೋಣನೂರು ವೇ|| ವಿಶ್ವೇಶ್ವರದಾಸರವರಿಂದ "ದಾಕ್ಷಾಯಿಣಿ ವಿವಾಹ" ಎಂಬ ಶಿವಕಥೆಯು ಜನರಂಜನೆಯಾಗುವಂತೆ ನಡೆಸಲ್ಪಟ್ಟಿತು. ಬಳಿಕ ಶ್ರೀ ರೇಣುಕಾಚಾರ್ಯರ ಜಯ ಜಯಕಾರದೊಡನೆ ಸಮಾಪ್ತಿಗೊಂಡಿತು

ಎ ಪಿ. ಬಸವಲಿಂಗೇಗೌಡ,
ಧರ್ಮದರ್ಶಿ

ಕುಂಕಾನಾಡು

ಕಡೂರು ತಾ|| ಕುಂಕಾನಾಡುಗ್ರಾಮಸ್ಥರು ಇದೇ ಫಾಲ್ಗುನ ಶುದ್ಧ ಚತುರ್ದಶಿ ಭಾನುವಾರ ತಾ|| ೧-೩-೪೨ರಲ್ಲಿ ಶ್ರೀ ಮಲ್ಲಿಕಾರ್ಜುನಸ್ವಾಮಿ ಶಿವಾಲಯದಲ್ಲಿ ಪ್ರಾತಃಕಾಲ ವಡೇರಹಳ್ಳಿ ಶ್ರೀ ಶಿವಗಂಗಾಧರೇಶ್ವರನಿಗೂ ಶ್ರೀ ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೂ ವಡೇರಹಳ್ಳಿಮಠದ ವೇ|| ವೀರಭದ್ರಶರ್ಮರ ವೈದಿಕತ್ವದಲ್ಲಿ ರುದ್ರಾಭಿಷೇಕ ಬಿಲ್ವಾರ್ಚನೆಯನ್ನು ನೆರವೇರಿಸಿದರು ೧೨ ಘಂಟೆಗೆ ಸ್ತ್ರೀಪುರುಷರು ತಂಡೋಪತಂಡವಾಗಿ ಬಂದು ಧೂಪ ದೀಪ ನೈವೇದ್ಯಾದಿಗಳಿಂದ ಜಗದಾಚಾರ್ಯರ ಸೇವೆಯನ್ನುಮಾಡಿ ಕೃತಾರ್ಥರಾದರು. ಸಾಯಂಕಾಲ ನಾಲ್ಕುಘಂಟೆಗೆ ನೆರೆದ ಸುಮಾರು ನಾನೂರು ಐದುನೂರು ಜನಸಮುದಾಯಕ್ಕೆ ಪಾನಕಫಲಾಹಾರವಿನಿಯೋಗವಾಯಿತು. ಸಾಯಂಕಾಲ ಏಳುಘಂಟೆಗೆ ಬಹು ಸುಂದರವಾಗಿ ನಿರ್ಮಿಸಲ್ಪಟ್ಟ ಪುಷ್ಪಮಂಟಪದಲ್ಲಿ ನಂದಿಧ್ವಜಪೂರ್ವಕ ಸಕಲ ವಾದ್ಯವೈಭವದೊಡನೆ ಉತ್ಸವವು ಹೊರಟಿತು ಸ್ವಪರಮತೀಯ ಸ್ತ್ರೀ ಪುರುಷರು ಕಾಯಿ ಕರ್ಪೂರ ಫಲಗಳನ್ನರ್ಪಿಸಿ ದರ್ಶನಾಶೀರ್ವಾದವನ್ನು ಪಡೆದು ಧನ್ಯರಾದರು ಹೀಗೆ ಬಹುವೈಭವದಿಂದ ಹೊರಟ ಉತ್ಸವವು ಭಕ್ತರ ಭಕ್ತಿಯನ್ನು ಸ್ವೀಕರಿಸುತ್ತಾ ಮುಖ್ಯ ಬೀದಿಗಳಲ್ಲಿ ಹಾಯ್ದು ಹನ್ನೆರಡುವರೆ ಘಂಟೆಗೆ ಸ್ವಸ್ಥಾನವನ್ನು ಸೇರಿತು. ಬಳಿಕ ವೇ|| ವೀರಭದ್ರಶರ್ಮರು ಶ್ರೀ ಜಗದಾಚಾರ್ಯರ ಜಯಂತಿಯ ಆವಶ್ಯಕತೆಯನ್ನು ಹೇಳಿ ಶ್ರುತಿನಿರ್ದಿಷ್ಟ ಪದ್ಧತಿಯಂತೆ ಪಂಚಾಚಾರ್ಯರ ಜಯಂತಿಗಳನ್ನು ಇದಕ್ಕೂ ಹೆಚ್ಚಿನ ಸಮಾರಂಭದಿಂದಲೂ ಉತ್ಸಾಹದಿಂದಲೂ ನಡೆಯಿಸಬೇಕೆಂದು ಸಭಿಕರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಭಾಷಣ ಮಾಡಿದರು. ಅನಂತರ ಕುಂಕಾನಾಡು ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಮಾದಪ್ಪನವರು "ಗೋರಕ್ಷಗರ್ವಹರಣ" ಈ ವಿಷಯದ ಮೇಳಕೀರ್ತನೆಯನ್ನು ಮಾಡಿ ನೆರೆದ ಜನಸಮುದಾಯಕ್ಕೆ ಆನಂದವನ್ನುಂಟುಮಾಡಿದರು ಅನಂತರ ಆಚಾರ್ಯರ ಜಯಘೋಷದೊಡನೆ ಜಯಂತೀ ಸಮಾರಂಭವು ಮುಕ್ತಾಯವಾಯಿತು ಈ ಮಹಾಕಾರ್ಯವನ್ನು ವೇ|| ವೀರಭದ್ರಶರ್ಮರು, ಮಠದ ಮರುಳಸಿದ್ಧಾರಾಧ್ಯರು, ಮ|| ರಾ|| ಪುಟ್ಟಚಿಕ್ಕೇಗೌಡ್ರಮಕ್ಕಳು ಬಸಪ್ಪನವರು, ಪಟೇಲ್ ಚಿಕ್ಕೇಗೌಡರ ದೇವರಸಿದ್ದೇಗೌಡರು, ಜಡೇಮಲ್ಲಪ್ಪನವರು ನಂದೀಬಸಪ್ಪನವರು, ಕಲ್ಲಜ್ಜನವರ ಕಲ್ಲಪ್ಪನವರು, ಕುಂಟಪ್ಪನವರ ಕಲ್ಲಪ್ಪನವರು, ಲಕ್ಕಜ್ಜ ಗಂಗಾಧರಪ್ಪನವರ, ಮಹೂರಪಟ್ಟೆರವರು, ಕರಿಬಸಪ್ಪನವರು, ಬಾಳೇಗೌಡ್ರ ಬಸಪ್ಪನವರು, ಮಲ್ಲೇಗೌಡರು, ಮರುಳಯ್ಯನವರ ಕಲ್ಲಪ್ಪ ದೊಡ್ಡೀಗೌಡ್ರು, ಮಾಡಾಳು ಬೊಮ್ಮಣ್ಣನವರು, ರಾಜಮಣಿ ಕರಿಯಪ್ಪನವರು, ಮಾಡಾಳು ಕರಿಯಪ್ಪನವರು, ದೇವಾಂಗದ ಲಂಕಪ್ಪನವರು, ಹೋಬಳೀಗೌಡರು, ಸಿದ್ದೇಗೌಡರು, ದೊಡ್ಡೋರ ರಾಮಣ್ಣನವರು, ಶ್ಯಾನುಭೋಗರು ದೇವರಸಿದ್ದಪ್ಪನವರು, ಕರಿಯಾರಾಧ್ಯರು, ಕ್ಷತ್ರಿಯ ಲಕ್ಷ್ಮಣರಾವ್, ಕ್ಲಾತ್ ಮರ್ಚಂಟ್ ಗಂಗಯ್ಯನವರು ಮತ್ತು ಪೊಲೀಸ್ ಸಿಬ್ಬಂದಿಯೊಂದಿಗೆ ಉತ್ಸವವನ್ನು ನೆರವೇರಿಸಿದರು. ಗುರುಸೇವೆಯಲ್ಲಿ ತತ್ಪರರಾದ ಮಹಾಶಯರಿಗೆಲ್ಲರಿಗೂ ಶ್ರೀ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

ಗುರುಚರಣಸೇವಾಭಿಲಾಷಿ,
ಬಿ ಮರುಳಪ್ಪ ಅಲಪಹಳ್ಳಿ, ಸ್ಕೂಲ್ಮಾಸ್ಟರ್

|| ಶ್ರೀ ಜಗದ್ಗುರುಃ ಪಂಚಾಚಾರ್ಯಾಃ ಪ್ರಸೀದಂತು ||

ವಿವಾಹಮಹೋತ್ಸವ, ಬೆಳಗಾಂವ.

ಮನುಷ್ಯನು ಉದ್ಧಾರನಾಗಬೇಕಾದರೆ ಈಶಪ್ರಾಪ್ತಿಗಾಗಿ ಯೋಗ ಜಪ-ತಪಾದಿ ಅನೇಕ ನಿಯಮಗಳುಂಟು ಸಂಸಾರಿಯಾದವನು ಸಂಸಾರದಲ್ಲಿದ್ದುಕೊಂಡು ಮುಕ್ತನಾಗಬೇಕಾದರೆ, ಈಶಪೂಜಾ ಧರ್ಮಾಚರಣೆಗಳು ಮೊದಲಾದ ಸತ್ಕರ್ಮಗಳ, ಅವಶ್ಯವಿದ್ದಂತೆ ದಾನವೆಂಬುದೊಂದು ಕಾರ್ಯವು ಸಂಸಾರಿಗಳ ಮಂಗಳಕಾರ್ಯಗಳಲ್ಲಿ ತಳಹದಿಯಾಗಿದೆ ಎಷ್ಟೋತರಹದ ದಾನಗಳಲ್ಲಿ ಕನ್ಯಾದಾನವೆಂಬುದು ಅತಿಮಹತ್ತರವಾದದ್ದು ಇದನ್ನು ತಿಳಿದು ಬೆಳಗಾವಿಯ ರಾ|| ರಾ|| ಶ್ರೀ|| ಲಿಂಗಪ್ಪನವರು ಅಂಕಲಗಿ ಎಂಬ ಭಕ್ತಶ್ರೇಷ್ಠರು ತಮ್ಮ ಕನ್ಯಾಮಣಿಯಾದ ಚಿ|| ಕು|| ಸೌ|| ಅಕ್ಕುಬಾಯಿ ಎಂಬುವರನ್ನು ಬೆಳಗಾವಿಯಲ್ಲಿ ಸುಪ್ರಸಿದ್ಧರೂ ವೀರಶೈವರಲ್ಲಿ ಪುಢಾರಿಗಳೂ ಬೆಂಚಮ್ಯಾಜಿಸ್ಟ್ರೇಟರೂ ಮತ್ತು ಆಗರ್ಭಶ್ರೀಮಂತರೂ ಆಗಿದ್ದ ರಾವ್‌ಬಹದ್ದೂರ ವೈಜಪ್ಪನವರ ದ್ವಿತೀಯ ಪುತ್ರರಾದ ಚಿ|| ಕೆಂಚಪ್ಪನೆಂಬ ವರನಿಗೆ ಜಗದ್ಗುರು ಪಂಚಾಚಾರ್ಯರ ಸಾಕ್ಷಿಯಾಗಿ ತಮ್ಮ ಮನೆಯ ಮುಂದೆ ಫಾಲ್ಗುಣ ವ|| ೭ ತಾ|| ೯-೩-೪೨ ಸೋಮವಾರ ಪ್ರಾತಃಕಾಲ ಶುಭಮುಹೂರ್ತದಲ್ಲಿ ಧಾರೆಯೆರೆದು ಕೊಟ್ಟರು ವರನ ಪಕ್ಷದಕಡೆಯಿಂದ ಏನೂ ಅಪೇಕ್ಷಿಸದೆ ವಿಶೇಷವಾಗಿ ದ್ರವ್ಯದವ್ಯಯದಿಂದ ಪೂರ್ವಪದ್ಧತಿಯಂತೆ ಕನ್ಯಾದಾನಮಾಡುವ ಮಹನೀಯರಲ್ಲಿ ಲಿಂಗಪ್ಪನವರೊಬ್ಬರು ಆದರಿಂದು ಸಂತೋಷದಿಂದ ಹೇಳಬೇಕಾಗಿದೆ ತಮ್ಮ ಗುರುಗಳನ್ನು ಲಗ್ನಕ್ಕೆ ಬರಮಾಡಿಕೊಂಡು ಯೋಗ್ಯಗುರುಕಾಣಿಕೆಯನ್ನಿತ್ತರು. ಅಲ್ಲದೆ ಶ್ರೀ|| ಷ|| ಬ್ರ|| ಪಟ್ಟದ್ದೇವರು ಹುಣಸೀಕಟ್ಟಿ ಶ್ರೀ ಗುರುವರ್ಯಶಿವಾಚಾರ್ಯರು ಸತ್ತಿಗೆಟ್ಟಿ, ಇವರನ್ನು ಬರಮಾಡಿಕೊಂಡು ಇವರೆಲ್ಲರ ಸಾಕ್ಷಿಯಾಗಿ ಕನ್ಯಾದಾನವನ್ನು ಮಾಡಿಕೊಟ್ಟು ಪುಣ್ಯಭಾಗಿಗಳಾದರು ಪೂಜ್ಯಪಾದ ಆಚಾರ್ಯಭಗವತ್ಪಾದರು ಇವರ ಕಡೆಯಿಂದ ಎಷ್ಟೋಧರ್ಮಕಾರ್ಯಗಳನ್ನು ಮಾಡಿಸಿಕೊಳ್ಳಲೆಂದು ಹಾರೈಸುತ್ತೇನೆ ಅಲ್ಲದೆ ನೂತನ ದಂಪತಿಗಳಿಗೆ ಆಯುರಾರೋಗ್ಯಾದಿ ಐಶ್ವರ್ಯಗಳನ್ನು ಕೊಡಲೆಂದು ಆಚಾರ್ಯರಲ್ಲಿ ಬೇಡಿಕೊಳ್ಳುತ್ತೇನೆ ಈ ಮಂಗಲಪ್ರಸಂಗದಲ್ಲಿ ಪ್ರಭಾಪೋಷಣಕ್ಕೋಸ್ಕರ ೨ ರೂಪಾಯಿಗಳನ್ನು ಅರ್ಪಿಸಿರುತ್ತಾರೆ. ಇವರಿಗೆ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಬೇಡಿಕೊಳ್ಳುತ್ತೇನೆ

ಓರ್ವ ಉತ್ಸವಭಾಗಿ.

"ನಮ್ಮ ಚಿತ್ರಭಾನುವತ್ಸರಾರಮ್ಭ ಮಂಙ್ಗಳಾಶಂಸನಮ್"

ನಮ್ಮೇ ಶ್ರೀಚಿತ್ರಭಾನುಪ್ರಥಿತಮುಖಗತೇ ವತ್ಸರೇ ಶ್ರೀಸಹಾಯಃ
ಕಲ್ಯಾಣಾನೇಯರಮ್ಯಾಮಲಗುಣನಿಲಯಃ ಸರ್ವಗಃ
ಸರ್ವಗಮ್ಯಃ |
ವಾಗೀಶೋ ನೇ ವಿಧತ್ತಾಂ ಶಿಶಿರಕರಗೃಹಃ ಸಸ್ಮಿತಂ ಪ್ರೇಮ ಸಸ್ತು
ಸ್ಯಾತ್ಪತ್ನ್ಯಾಸ್ತವೃತ್ತಿಂ ಶುಭಸುಧಿಕಸುಖಂ
ದೀರ್ಘಮಾಯುರ್ಯಶಶ್ಚ ||

ನಕ್ಷ್ಯಜ್ಞಾ ಹಾವತ್ರ ಲೋಕಾಃ ಸುಖೋತ್ಕ್ಯೈ
ಶಿಷ್ಟದ್ಭಿಯಾ ಪಙ್ಕಜಾಲಾ ಭವದ್ಭಿಃ |
ರಮ್ಯಾ ಭಾಸ್ಯೈರ್ದೇವತಾಯಾಃ ಕೃಪಾಪಂ
ಸತ್ತ್ವಾಸ್ಯಾ ಶರ್ಮಸೌಖ್ಯಾ ಮಹೇಯಮ್ ||೨||

ಸೀತಾನರ್ಘೋಲತಾಜ್ಞೋ ಪಿರುಜಸುಜ್ಞಾ ಸಪ್ರಸೂನಃ ಕೃಪಾ-
ಸಾರಧ್ಯಃ ಪವಪತ್ರಜಾಲಿರಚಿರಃ ಸುಗ್ರೀವಶಾಖೋಜ್ವಲಃ |
ಶತ್ರುಘ್ನಾದಿಶಿಫಃ ಸುಮಿತ್ರ ತಿಸಲಃ ಸಾನ್ದ್ರರೂಪಾದಿಮ-
ಚ್ಛಾಯೋ ಮುಕ್ತಿಫಲೋ ವಿರಾಜತು ಹೃದಿ
ಶ್ರೀರಾಮಕಲ್ಪದ್ರುಮಃ ||೩||

ಯಸ್ಮಾಂಶೇಮಾನಪದ್ಮಸಂಭವಸುಕವ್ಯಾಸಪ್ರಬೇಕೋಭವ-
ವ್ಯಾಸೋತ್ಸಾಪದಸದ್ಮಪ್ರಿಯತಮಾ ವಾರ್ತಾಪಾಥಭಾಷೋ
ಜ್ಯೈಷನ್ |
ಲೋಕಾಭಿಪ್ಸುತರಮ್ಯಕೀರ್ತಿಧನಲಾ ಭಾಸ್ತ್ರಾ ಪ್ರವತ್ತಾಂ ಗಿರಂ
ಸೋsಯಂ ಸ್ಕಿನ್ದಪನನ್ದರೋsನವಪಮೋರವಾಚ್ಯಪೇಷು
ಶುಭಾಮ್ ||೪||

ಯಸ್ಯಾಃ ಸರ್ವವಿಸೋಽನ್ಯೈಃ ಪಟಿ ತಸ್ಯೈಮ್ರ್ಯನೇತ್ರಿ
ತ್ಯೈನೋಽಹಿತಃ
ಲೋಕಾನಾಂ ಪ್ರತಿಸರ್ಗಸರ್ಗವಿಧಯಾ ಕುರ್ವನ್
ಸಾರಿನೋsವತೇ |
ಯಸ್ಯಾಃ ಪಾದಸರೋಜಯಾವಕರಸ್ಯೈಃ ಸಂರಕ್ತವಕ್ಷಸ್ಥಲಃ
ಲೋಕಾಧೀಶಪದಂ ಯಯೌ ಚ ಭವಿಕಂ ದದ್ಯಾತ್ ಸದಾ ಸಾ
ರಮಾ ||೫||

ಕಾಲಿನ್ದೀವಿಪುಲಪ್ರದೇ ವಿಹರತೋ ಗೋಗೋಪಹಿಂಸಾಕೃತಃ |
ಸ್ಫಾರೇ ಕಾಲಿಯಪನ್ನಗಸ್ಯ ಚ ಫಣೇ ವನ್ದ್ಯಂ ಪದಾಬ್ಜದ್ವ
ಯಮ್ |
ರಮ್ಯಂ ಸ್ವಂ ಪ್ರಕಟಾಯ ಲಾಸ್ಯಸುತಾಲಂ ರಮ್ಯಾದಿ ಲಜ್ಜಾವಹಂ |
ವೇಣುಕ್ವಾಣಮನೋಹರಂ ನಟನಸೌ ಕುರ್ವನ್ನು ಕುಸೌಭ್ಯ
ವತು ||೬||

ಅಸ್ಮಿಂಶ್ಲೇಷಸಿಯಾಮುನಸ್ಪ್ರವಸಭೇ ಗೋಗೋಪಸಂಛ್ಸ್ಥಿತ್ಯಯ-
ಧ್ವಂಸೇ ದಕ್ಷಮಹೀಶಕಾಲಿಯಸಮಾಹನ್ಯಾರಮೂರ್ಜಸ
ಸ್ತಲಮ್ |
ಜಿತ್ವಾ ತತ್ಫಣಪಾದಮರ್ದನಮಹಾಟೋಪೇನ ಮುಕ್ತಿಸ್ಥಿತಃ
ಲಾಸ್ಯಾಪ್ತಾ ಭವತೀಲ ತತ್ಸಮುಪಕಾನ್ತಾಂ ಪೃಷ್ಣಯುಕ್ತಾ
ಧಮಃ ||೭||

(೬ನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ

೧೯೪೨ನೆಯ ಮಾರ್ಚಿ ತಾ॥ ೧೬ನೇ ಸೋಮವಾರ

ವಿದೇಶಗಳಲ್ಲಿ ಶಿವಾಲಯಗಳ ವ್ಯಾಪಕತೆ.

ಕಳೆದವಾರ ನವಿನ್ಯಾ ಪತ್ರಿಕೆಯಲ್ಲಿ ಅನ್ನಾಂ ದೇಶದಲ್ಲಿ ದೇದೀಪ್ಯಮಾನವಾದ ಮಿ ಸೋನ್ ಎಂಬ ಗ್ರಾಮದಲ್ಲಿರತಕ್ಕ ಶಿವಾಲಯಗಳ ವಿಷಯವನ್ನೂ ಪೂರ್ವಕಾಲದಲ್ಲಿ ಆ ದೇಶವನ್ನಾಳತಕ್ಕ ರಾಜಾಧಿರಾಜರು ಅಸಾಧಾರಣವಾದ ಶಿವಭಕ್ತಿಯಿಂದೊಡಗೂಡಿದ್ದ [illegible] ವಿಷಯವನ್ನೂ ಕೆಲವು ಶಿಲಾಶಾಸನಗಳ ಆಧಾರಗಳಿಂದ ಪ್ರಕಟಿಸಿದ್ದುದು ಸರಿಯಷ್ಟೆ! ಅದೇ ವಿಷಯವನ್ನೆ ಈಗಲೂ ಮುಂದುವರಿಸುತ್ತೇವೆ

ಈಗ್ಗೆ ೧೩೦೦ ವರ್ಷಗಳ ಪೂರ್ವದಲ್ಲಿ ಆ ದೇಶವನ್ನಾಳುತ್ತಿದ್ದ ಪ್ರಕಾಶಧರ್ಮನೆಂಬ ಮಹಾರಾಜನು "ಪ್ರಭಾಸೇಶ್ವರ" ಎಂಬ ಶಿವಲಿಂಗವನ್ನು ಸ್ಥಾಪಿಸಿದ ವಿಷಯವು ೧೨ನೇ ಶಾಸನದಲ್ಲಿರತಕ್ಕ ಕೆಲವು ವಾಕ್ಯಗಳಿಂದ ತಿಳಿದುಬರುತ್ತದೆ ಆ ವಾಕ್ಯವು—

'ಸಕಲಭುವನ್ಯನಾದ ಶ್ರೀಪ್ರಭಾಸೇಶ್ವರಂ [illegible] ಸ್ಥಾಪಿತವಾನ್'

ಈ ರೀತಿಯಾಗಿ ಒಂದು [illegible] ಮುಂದೆ ಈ ಕೆಳಗೆ ತೋರಿಸಲ್ಪಡುವ [illegible] ವಿಷಯವು ವರ್ಣಿತವಾಗಿದೆ

ಯೋ [illegible] ಶ್ರೀ [illegible] ಮಾನ್ಯಃ ತಥಾಪಿ ಭಕ್ತ್ಯಾ [illegible] ಭೂಮಾವತೀರ್ಣಃ [illegible] ॥

ಇತ್ಯಾದಿ ಶ್ಲೋಕಗಳಿಂದ ಪರಿಪೂರ್ಣ ಸ್ತೋತ್ರಮುಖ್ಯವು ಹೇಳಲ್ಪಟ್ಟಿದೆ

೪೨ನೇ ಶಾಸನದಲ್ಲಿ—

ದೇವೇಂದ್ರಃ [illegible] ಯಸ್ಯ [illegible] । ಚಂದ್ರಾರ್ಕೌ [illegible] । [illegible] । [illegible] ॥

ಎಂಬ ಶ್ಲೋಕವು ಬರೆಯಲ್ಪಟ್ಟಿದೆ ಈ ಶ್ಲೋಕದ ಮೊದಲನೇ ಚರಣವು ವ್ಯಾಕರಣದೋಷದಿಂದ ಕೂಡಿದ್ದುದಾಗಿ ಕಂಡುಬರುತ್ತದೆ ಆದಾಗ್ಯೂ ಇದ್ದಂತೆಯೇ ಪ್ರಕಟಿಸಿದ್ದೇವೆ ಈ ಶ್ಲೋಕದ ಅಭಿಪ್ರಾಯವೇನೆಂದರೆ—ಶ್ರೀಮತ್ಪರಮೇಶ್ವರನು ಕೈಲಾಸದಲ್ಲಿ ಸಭಾಸೀನನಾದಾಗ್ಯೆ ದೇವೇಂದ್ರನು ಪೂರ್ವಭಾಗದಲ್ಲಿದ್ದನೆಂದೂ, ಬ್ರಹ್ಮನು ಬಲಭಾಗದಲ್ಲಿದ್ದನೆಂದೂ, ವಿಷ್ಣುವು ಎಡಭಾಗದಲ್ಲಿದ್ದನೆಂದೂ, ಸೂರ್ಯ ಚಂದ್ರರು ಹಿಂಭಾಗದಲ್ಲಿದ್ದರೆಂದೂ, ಇವರೇ ಮೊದಲಾದ ಯಾವತ್ತು ದೇವತೆಗಳು ಕೈಜೋಡಿಸಿಕೊಂಡು ಸ್ವಧಾ ಸ್ವಾಹಾ ಎಂಬ ಮಂತ್ರಗಳನ್ನುಚ್ಚರಿಸುತ್ತ ಶಿವನನ್ನು ಅತ್ಯಂತ ಭಕ್ತಿಯಿಂದ ಸ್ತುತಿಸಿ ನಮಸ್ಕರಿಸುತ್ತಿದ್ದರೆಂದೂ ಅರ್ಥವಾಗುತ್ತದೆ ಈ ಶ್ಲೋಕದ ಅಭಿಪ್ರಾಯವನ್ನು ವಿಚಾರಮಾಡಿ ನೋಡಿದರೆ, ಆ ದೇಶದ ರಾಜರಿಗೆ ಶಿವನ ವಿಷಯದಲ್ಲಿ ರತಕ್ಕ ಪೂಜ್ಯಬುದ್ಧಿಯು ಸೀಮಾತೀತವಾಗಿತ್ತೆಂದು ಪ್ರತಿಯೊಬ್ಬರಿಗೂ ಸ್ಪಷ್ಟವಾಗಿ ವೇದ್ಯವಾಗುತ್ತದೆ ಮಹಾರಾಜರಲ್ಲಿ ಈ ತೆರಹದ ಅನಿತರ ಸಾಧಾರಣವಾದ ಶಿವಭಕ್ತಿಯು ನೆಲೆಗೊಂಡಿರುವುದನ್ನು ನೋಡಿದರೆ ಇದಕ್ಕೆ ವೀರಶೈವಮತಾಚಾರ್ಯರ ಅನುಗ್ರಹವೇ ಮೂಲಕಾರಣವೆಂದು ಕಂಡುಬರುತ್ತದೆ ಏಕೆಂದರೆ, ಈ ಭೂಮಂಡಲದಲ್ಲಿ ಲೋಕೋತ್ತರವಾದ ಶಿವಭಕ್ತಿಯನ್ನು ಸಂಸ್ಥಾಪಿಸಿದವರು ವೀರಶೈವಾಚಾರ್ಯರಲ್ಲದೆ ಬೇರೊಬ್ಬರಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ವೀರಶೈವಾಚಾರ್ಯರ ಸಮಸ್ತಪ್ರಪಂಚದಲ್ಲೆಲ್ಲಾ ಶಿವಭಕ್ತಿಯನ್ನು ನೆಲೆಗೊಳಿಸುವುದಕ್ಕಾಗಿಯೇ ಪರಮೇಶ್ವರನಿಂದ ಈ ಭೂಮಂಡಲಕ್ಕೆ ಕಳುಹಲ್ಪಟ್ಟಿರುವ ವಿಷಯವು ಶಿವಾಗಮಗಳಿಂದಲೂ ಇತರ ಗ್ರಂಥಗಳಿಂದಲೂ ವೇದ್ಯವಾಗುತ್ತದೆ ಈ ಶಿವಾಚಾರ್ಯರು ಗಗನಮಾರ್ಗವಾಗಿ ಸಮಸ್ತ ಪ್ರಪಂಚದಲ್ಲೆಲ್ಲಾ ಸಂಚರಿಸಿ ಶಿವಭಕ್ತಿಯನ್ನು ಪ್ರತಿಷ್ಠಾಪಿಸಿದ ವಿಷಯವು ಅವರ ಲೀಲಾಬೋಧಕ ಚರಿತ್ರಗಳಿಂದ ವೇದ್ಯವಾಗುತ್ತದೆ ಇವರಂತೆಯೇ ಇವರ ಪರಂಪರಾಗತರಾದ ಆಚಾರ್ಯರೂ ಸಹ ಶಿವಭಕ್ತಿಯನ್ನು ಪ್ರಚಾರಗೊಳಿಸಿರುತ್ತಾರೆ

ಅನ್ನಾಂದೇಶದಲ್ಲಿರುವ "ಬಾನ್‌ಲಾನ್" ಎಂಬ [illegible]ಯಲ್ಲಿರುವ ಒಂದು ಶಿಲಾಶಾಸನದಲ್ಲಿ ಶ್ರೀಕಲ್ಪನೆಂಬ ರಾಜಮನೆತನದ ಒಬ್ಬಾನೊಬ್ಬ ಅಧಿಕಾರಿಯಿಂದ ಸ್ಥಾಪಿಸಲ್ಪಟ್ಟ ಶಿವಾಲಯದ ವಿಷಯವು ಹೇಳಲ್ಪಟ್ಟಿರುತ್ತದೆ ಈ ಮನೆತನದವನು ಪರಮ ಶಿವಭಕ್ತನಿದ್ದನೆಂಬ ವಿಷಯವು ಆ ಶಾಸನದಲ್ಲಿರುವ ಈ ಕೆಳಗೆ ಕಾಣಿಸಿದ [illegible] ಶ್ಲೋಕದಿಂದ ಕಂಡುಬರುತ್ತದೆ ಆ ಶ್ಲೋಕವಾಕ್ಯವೇನೆಂದರೆ—

[illegible]
[illegible] ಶಿವಭಕ್ತ್ಯ [illegible] ।
[illegible]
[illegible] ॥

[illegible] ಹೇಳಲ್ಪಟ್ಟಿರುವ [illegible]—

[illegible] ಶಿವಲಿಂಗೇಶಂ [illegible] ವೀರಶೈವಾಚಾರ್ಯ [illegible] ॥

[illegible]
[illegible] ।
[illegible] ।
[illegible] ॥

[illegible] ।
ಸ್ಥಾಪಿತ್ವಾನ್ [illegible] ॥

ಈ ಪ್ರಕಾರವಾಗಿ ಎರಡು ಶ್ಲೋಕಗಳು ಬರೆಯಲ್ಪಟ್ಟಿರುವುವು ಮೇಲ್ಕಂಡ ವಾಕ್ಯಾಭಿಪ್ರಾಯವನ್ನೂ ಶ್ಲೋಕಾಭಿಪ್ರಾಯವನ್ನೂ ವಿಚಾರಮಾಡಿ ನೋಡಿದ್ದಾದರೆ [illegible] ಈ ಅಧಿಕಾರಿಯು ಮುತ್ತಜ್ಜನಿಂದ ಸ್ಥಾಪಿಸಲ್ಪಟ್ಟಿದ್ದ 'ಶ್ರೀನೃತ್ಯೇಶ್ವರ' ಎಂಬ ಲಿಂಗಮೂರ್ತಿಯು [illegible] ನಾಶವಾದಲ್ಪಟ್ಟಿತೆಂದೂ, ಅದೇ ಸ್ಥಾನದಲ್ಲಿ ಈ ಅಧಿಕಾರಿಯು ಜಯಸಿಂಹವರ್ಮನೆಂಬ ಮಹಾರಾಜನ ಅಭಿಪ್ರಾಯದಿಂದ ಶಿವಲಿಂಗೇಶ' ಎಂಬ ಹೆಸರಿನ ಲಿಂಗದ ಮೂರ್ತಿಯನ್ನು ಪುನಃ ಪ್ರತಿಷ್ಠಾಪಿಸಿದನೆಂದೂ ಈ ಶಿವಲಿಂಗಮೂರ್ತಿಯು '**ಶಿವಾಚಾರ್ಯ**' ಎಂಬ ಹೆಸರಿನ ಆಚಾರ್ಯರಿಂದ ಸ್ಥಾಪಿಸಲ್ಪಟ್ಟಿತೆಂದೂ ತಿಳಿದುಬರುತ್ತದೆ **ಶಿವಾಚಾರ್ಯ**" ಎಂಬ ಪದವು ಈ ಲೋಕದಲ್ಲಿ ವೀರಶೈವಾಚಾರ್ಯರಿಗೆ ಪ್ರಯೋಗಿಸಲ್ಪಡುವದಲ್ಲದೆ ಬೇರೊಬ್ಬರಿಗಿಲ್ಲವೆನ್ನುವ ವಿಷಯವು ಪ್ರತಿಯೊಬ್ಬರಿಗೂ ತಿಳಿದುದಾಗಿದೆ ಆದುದರಿಂದ ಆ ದೇಶದಲ್ಲಿ ಈ ವಿಧವಾದ ಅತ್ಯುಜ್ವಲ ಶಿವಭಕ್ತಿಯು ಪ್ರಸಾರವಾಗಿದ್ದುದಕ್ಕೆ ವೀರಶೈವಾಚಾರ್ಯರ ಅನುಗ್ರಹವೇ ಮೂಲಕಾರಣವೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ ಮೇಲಿನ ಶ್ಲೋಕದಲ್ಲಿ ಆ ಅಧಿಕಾರಿಗೆ 'ಶೈವಕ್ರಿಯಾವಿತ್' ಎಂಬ ವಿಶೇಷಣವನ್ನು ಕೊಟ್ಟಿರುವದರಿಂದ ಇವನು ಶಿವಾಗಮೋಕ್ತಗಳಾದ ಸಕಲ ಕ್ರಿಯೆಗಳನ್ನು ಚೆನ್ನಾಗಿ ತಿಳಿದು ಅದರಂತೆ ಆಚರಿಸುತ್ತಿದ್ದನೆಂದು ವ್ಯಕ್ತವಾಗುತ್ತದೆ ಈ ರೀತಿಯಾಗಿ ಅಸಾಧಾರಣ ಶೈವಸಂಪತ್ತಿಯಿಂದೊಡಗೂಡಿದ ಅನ್ನಾಂ ದೇಶವು ಸದ್ಯಃ ಶಿವಭಕ್ತಿಶೂನ್ಯವಾಗಿರುವದನ್ನು ನೋಡಿದರೆ ಯಾರಿಗೆ ತಾನೇ ವ್ಯಸನವೆನಿಸಲಿಕ್ಕಿಲ್ಲ? ಪೂರ್ವಕಾಲದಲ್ಲಿದ್ದ ಶಿವಭಕ್ತಿಯು ಶ್ರೀಪರಮೇಶ್ವರನ ಅನುಗ್ರಹದಿಂದ ಇನ್ನು ಮುಂದಾದರೂ ಸರ್ವತ್ರ ಹಬ್ಬಿ ಶೈವವೈಭವವು ಪ್ರಪಂಚದಲೆಲ್ಲಾ ವ್ಯಾಪಿಸುವಂತಾಗಲೆಂದು ಆ ಜಗನ್ನಿಯಾಮಕನನ್ನು ಭಕ್ತಿಪೂರ್ವಕವಾಗಿ ಭಜಿಸುತ್ತೇವೆ

ಮದರಾಸಿನಲ್ಲಿ ನಿರ್ಬಂಧದಾಜ್ಞೆ

ಮದರಾಸ್ ನಗರದ ಉತ್ತರ ದಿಗ್ಭಾಗದಲ್ಲಿ ತೊಂಡಿಯಾರ್ ಪೇಟೆಗೆ ಒಂದು ಮೈಲಿಯಿಂದ ಹಿಡಿದು ಅಡ್ಯಾರ್ ನದಿ ಮುಖಕ್ಕೆ ೨ ಮೈಲಿ ದಕ್ಷಿಣದವರೆಗೆ ಎಲ್ಲೂ ಸಮುದ್ರ ತೀರದಲ್ಲಿ ಸಂಜೆ ದೀಪಹೊತ್ತಿಸುವ ಸಮಯದಿಂದ ಹಿಡಿದು ಬೆಳಗಾಗುವವರೆಗೂ ಸೈನಿಕರ ಹೊರತು ಉಳಿದವರು ಯಾರೂ ಇರಕೂಡದೆಂದು ಮದ್ರಾಸ್ ಸೇನಾಧಿಪತಿಗಳು ಆಜ್ಞೆಮಾಡಿದ್ದಾರೆ.

ಯುದ್ಧವಾರ್ತೆ.

ರಂಗೂನಿಗೂ ಇಂಡಿಯದೇಶದ ಮುಖ್ಯಪಟ್ಟಣಗಳಿಗೂ ಇರುವದೂರ

ಬರ್ಮಾ ರಾಜಧಾನಿಯಾದ ರಂಗೂನ್ ಪಟ್ಟಣವನ್ನು ಬ್ರಿಟಿಷ್ ಸೈನ್ಯಗಳು ತ್ಯಜಿಸಿ ಬಂದವಷ್ಟೆ. ಈಗ ಜಪಾನರು ರಂಗೂನಿನಲ್ಲಿರುವದರಿಂದ ಅವರು ಮದರಾಸಿಗೆ ೧೦೦೦ ಮೈಲುಗಳ ದೂರದಲ್ಲೂ, ವಿಶಾಖ ಪಟ್ಟಣಕ್ಕೆ ೮೧೦ ಮೈಲುಗಳ ದೂರದಲ್ಲೂ, ಕಲ್ಕತ್ತಾಕ್ಕೆ ೭೮೦ ಮೈಲಿಗಳ ದೂರದಲ್ಲೂ ಮತ್ತು ಬಂಗಾಳದಗಡಿಗೆ ೩೭೫ ಮೈಲಿಗಳ ದೂರದಲ್ಲೂ ಇದ್ದಂತಾಗಿದೆ

ರಂಗೂನಿನ ಪರಿಸ್ಥಿತಿ

ರಂಗೂನಿನಿಂದ ೨೦ ಮೈಲಿಗಳ ದೂರದಲ್ಲಿರುವ ಎಣ್ಣೆ ಕಾರ್ಖಾನೆಯನ್ನು ಸಂಪೂರ್ಣವಾಗಿ ನಾಶಮಾಡಲಾಯಿತು ಅಲ್ಲದೆ ೩೦೦ ಮೈಲಿಗಳಿಂದಾಚೆಯಿಂದ ಎಣ್ಣೆಯನ್ನು ತೆಗೆದುಕೊಂಡು ಬರುತ್ತಿದ್ದ 'ಪೈಪ್ ಲೈನನ್ನು' ಮಧ್ಯದಲ್ಲಿ ಕತ್ತರಿಸಿಹಾಕಿಬಿಡಲಾಗಿದೆ ಜಪಾನಿನ ಸೈನ್ಯಪಡೆಗಳು ರಂಗೂನ್ ನಗರವನ್ನು ಪ್ರವೇಶಿಸಿದಾಗ ಆ ನಗರವು ಶೂನ್ಯವಾಗಿತ್ತು ಆರು ಲಕ್ಷ ಪ್ರಜಾಸಂಖ್ಯೆಯುಳ್ಳ ರಂಗೂನ್ ನಗರವು ದಿನದಿನವೂ ಕ್ಷೀಣಸ್ಥಿತಿಗೆ ಬಂದು ಕೊನೆಗೆ ಒಂದೆರಡು ಸಾವಿರ ಜನರು ಮಾತ್ರ ಉಳಿದರು ಸಂಗ್ರಾಮವು ರಂಗೂನ್ ನಗರದ ಸಮೀಪಕ್ಕೆ ಬಂದತೆಲ್ಲಾ, ರಂಗೂನಿನಲ್ಲಿ ಅಂಗಡಿಗಳನ್ನು ಮುಚ್ಚುತ್ತ ಬರಲಾಯಿತು ಇದು ನಿಜವಾಗಿಯೂ ಬಹಳ ಹೃದಯವಿದ್ರಾವಕವಾದ ಪರಿಸ್ಥಿತಿ ಈಗ ರಂಗೂನು ಜಪಾನರ ವಶವಾಗಿರುವುದರಿಂದ ಅಲ್ಲಿ ಯುದ್ಧವು ಮುಗಿದುಹೋಯಿತು ಈಗ ಬರ್ಮದಲ್ಲಿ ಯುದ್ಧವು ನಡೆಯುತ್ತಿದೆ ಅದೂ ಕೂಡ ಅತ್ಯಂತಕ್ರೂರವಾಗಿದೆ

ಮಡಗಾಸ್ಕರ್ ದ್ವೀಪವು ಆಕ್ಸಿಸ್ ರಾಷ್ಟ್ರಗಳ ಕೈಗೆ ಬೀಳಬಾರದು

ವಿಚಿಸರಕಾರವು ಇಂಡೋಚೀನಾ ದೇಶವನ್ನು ಜಪಾನರಿಗೆ ಬಿಟ್ಟುಕೊಟ್ಟು ಅವರು ಮಲಯ ಮತ್ತು ಸಿಂಗಪುರಗಳಮೇಲೆಯೂ ಬರ್ಮದಮೇಲೆಯೂ ಆಕ್ರಮಣ ನಡೆಸುವುದಕ್ಕೆ ಅವಕಾಶಕೊಟ್ಟಂತೆ ಮಡಗಾಸ್ಕರ್ ದ್ವೀಪವನ್ನೂ ಕೂಡ ಬಿಟ್ಟುಕೊಟ್ಟು ಮಿತ್ರರಾಷ್ಟ್ರಗಳು ಮಧ್ಯ ಪೂರ್ವಕೂ ಭಾರತಕ್ಕೂ ಸಾಮಾನುಗಳನ್ನು ಕಳುಹಿಸುತ್ತಿರುವುದಕ್ಕೆ ತೊಂದರೆಯನ್ನುಂಟುಮಾಡಬಹುದೆಂದು ಭೀತಿಯುಂಟಾಗಿರುವುದರಿಂದ ಈಗಿನಿಂದಲೇ ತಕ್ಕ ಎಚ್ಚರಿಕೆಯನ್ನು ಮಿತ್ರರಾಷ್ಟ್ರಗಳು ಕೈಗೊಳ್ಳಬೇಕೆಂದು ಸೂಚಿಸಲಾಗಿದೆ. ಜಪಾನು ಮಡಗಾಸ್ಕರ್ ದ್ವೀಪವನ್ನು ಆಕ್ರಮಿಸುವುದಾದರೆ, ದಕ್ಷಿಣಆಫ್ರಿಕದಲ್ಲಿರುವ ಡರ್ಬಾನ್ ಮತ್ತು ಕೇಪ್‌ಟೌನ್‌ಬಂದರುಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದೂ,ಬ್ರಿಟಿಷರು ತತ್ಕ್ಷಣ ಮಡಗಾಸ್ಕರ್ ದ್ವೀಪವನ್ನು ಆಕ್ರಮಿಸಬೇಕೆಂದೂ ಡರ್ಬಾನಿನಪತ್ರಿಕೆಗಳೆಲ್ಲವೂ ಬರೆದಿವೆ. ಜಪಾನರು ರಹಸ್ಯವಾಗಿ ಆ ದ್ವೀಪವನ್ನು ಉಪಯೋಗಿಸುವುದರಿಂದ ಇನ್ನೂ ಹೆಚ್ಚಿನ ವಿಪತ್ತು ಸಂಭವಿಸಬಹುದೆಂದೂ ವಿಚಿ ಸರ್ಕಾರವು ಆ ದ್ವೀಪವನ್ನು ಜಪಾನೀಯರಿಗೆ ಬಿಟ್ಟುಕೊಡುವುದಾದರೆ, ದಕ್ಷಿಣ ಆಫ್ರಿಕ ಸರ್ಕಾರವು ಕೂಡಲೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡು ಅದನ್ನು ತಪ್ಪಿಸುವುದೆಂದೂ ಹೇಳಲಾಗಿದೆ.

ಅತ್ಯಂತ ಚಿಕ್ಕದಾದ ನೂತನ ಶಸ್ತ್ರಬಂಡಿ!

ಅಮೇರಿಕಾ ಸೇನೆಯು ಉಪಯೋಗಿಸುತ್ತಿರುವ "ಜೀಪ್"ಎಂಬ ಅತ್ಯಂತಚಿಕ್ಕದಾದ ಶಸ್ತ್ರಬಂಡಿಯು ಈಗ ಲಂಡನ್ನಿಗೆ ಬಂದಿದೆ ಅದರ ಉದ್ದ ೧೧ ಅಡಿ, ಅಗಲ ೫೬ ಅಂಗುಲ ಅಗಲವಿದೆ ಇದರಲ್ಲಿ ೬ ಜನರು ಕುಳಿತುಕೊಳ್ಳಬಹುದು. ಇದರ ಕೆಲಸವು ಅದ್ಭುತವಾಗಿದೆ.

ಇಂತಹ ಶಸ್ತ್ರಬಂಡಿಗಳನ್ನು ಅಪಾರ ಸಂಖ್ಯೆಯಲ್ಲಿ ಕೊಳ್ಳಬೇಕೆಂದು ಬ್ರಿಟಿಷ್ ಸೈನ್ಯದವರು ಅಪೇಕ್ಷಿಸಿದ್ದಾರೆ. "ಆಧುನಿಕ ಯುದ್ಧಕ್ಕೆ ಅಮೇರಿಕವು ಕೊಟ್ಟಿರುವ ಮುಖ್ಯ ಸಾಧನವಿದು" ಎಂಬುದಾಗಿ ಅಮೆರಿಕಾ ಸೈನ್ಯದ ಮುಖ್ಯಾಧಿಕಾರಿಗಳಾದ ಜ|| ಮಾರ್ಷಲ್‌ರವರು ನುಡಿದರು. ಈ ಬಂಡಿಯ ಯಂತ್ರವು ೬೦ ಅಶ್ವ ಶಕ್ತಿಯುಳ್ಳದಾಗಿದ್ದು. ಕಡಿದಾದ ದಿನ್ನೆಗಳನ್ನು ಹತ್ತುವದು ನೀರಿನೊಳಗೆ ಕೂಡ ಚಲಿಸುತ್ತದೆ. ಮೆಷಿನ್ ಗನ್ ಒಂದನ್ನು ಹೊರಬಲ್ಲುದು ಮತ್ತು ಶತ್ರುಗಳಿಗೆ ಏನೂ ಕಾಣಿಸದಂತೆ ಹೊಗೆಯ ತೆರೆಯನ್ನು ರಚಿಸಬಲ್ಲುದು. ಅಮೆರಿಕದ ವಿಮಾನಪಡೆಗಳಿಗೆ ಈ ಹೊಸ ಶಸ್ತ್ರಬಂಡಿಗಳನ್ನು ಒದಗಿಸಲಾಗಿದೆ

ಜಾವಾದ ಸೋಲಿಗೆ ಕಾರಣಗಳು

ಶ್ರೀ|| ಗವರ್ನರ್ ಜನರಲ್ ಡಾ|| ವಾನ್‌ಮೂಕ್‌ರವರು ಜಾವಾದಲ್ಲಿ ಮಿತ್ರರಾಷ್ಟ್ರಗಳ ಸೋಲಿಗೆ ಕಾರಣಗಳನ್ನು ವಿವರಿಸುತ್ತ "ಪೂರ್ವ ಜಾವಾದಲ್ಲಿಯೂ ಬಾಂಡೋಂಗಿನ ಪೂರ್ವ ಮತ್ತು ಪಶ್ಚಿಮ ಪ್ರದೇಶದಲ್ಲಿಯೂ ಇನ್ನೂ ಹೊಡೆದಾಟಗಳು ನಡೆಯುತ್ತಿವೆ ಅಲ್ಲದೆ ಇತರ ಕೆಲವು ದ್ವೀಪಗಳೂ ಸುಮಾತ್ರದ ಕೆಲವು ಪ್ರದೇಶಗಳೂ ಇನ್ನೂ ಶತ್ರುಗಳ ವಶವಾಗಿಲ್ಲ ಜಪಾನು ಡಚ್ ಇಂಡೀಸ್ ದ್ವೀಪಗಳನ್ನೆಲ್ಲಾ ಆಕ್ರಮಿಸಿಕೊಂಡಿರುವನೆಂದು ಹೇಳುವುದು ಶುದ್ಧ ತಪ್ಪು.

ಬಾಂಡೊಯಾಂಗ್ ನಗರದ ಪತನವಾಗಿದೆ ಜಪಾನರು ನಾವು ನಿರೀಕ್ಷಿಸುವುದಕ್ಕಿಂತ ಅಧಿಕ ಸಂಖ್ಯೆಯಲ್ಲಿ ಸೈನಿಕರನ್ನು ಕಳುಹಿಸಿಕೊಟ್ಟರು ೧೫೦ ಹಡಗುಗಳಲ್ಲಿ ಸುಮಾರು ೧,೫೦,೦೦೦ ಮಂದಿ ಸೈನಿಕರನ್ನು ಕಳುಹಿಸಿಕೊಟ್ಟರು. ಜಾವಾ ಸಮುದ್ರತೀರವೆಲ್ಲೆಲ್ಲಾ ಜಪಾನ್ ಸೈನಿಕರು ಬಂದಿಳಿದರು ಮಿತ್ರರಾಷ್ಟ್ರಗಳಿಂದ ಬಂದ ಸಹಾಯ ತೀರ ಕಡಿಮೆ ಸಿಂಗಪುರಕ್ಕೆಂದು ಕಳುಹಿಸಿದ್ದ ಸೈನಿಕರು ಜಾವಾದಲ್ಲೇನೋ ಬಂದಿಳಿದರು ಆದರೆ, ಅವರಲ್ಲಿ ಹೊಡೆದಾಡುವ ಶಸ್ತ್ರಾಸ್ತ್ರಗಳೂ ಸಲಕರಣೆಗಳೂ ಹೆಚ್ಚಾಗಿರಲಿಲ್ಲ ಮನಿಲದಲ್ಲಿಡಲ್ಪಟ್ಟಿದ್ದ ಅಮೆರಿಕ ಸಂಗ್ರಾಮ ನೌಕೆಗಳೂ ಕೂಡ ಜಾವಾಕ್ಕೆ ಬಂದವು ಅಲ್ಲದೆ ಬ್ರಿಟಿಷ್ ಹಡಗುಗಳೂ ಕೂಡ ಬಂದವು ಬ್ರಿಟಿಷ್ ಮತ್ತು ಅಮೆರಿಕ ವಿಮಾನಗಳು ಕೂಡ ಬಂದು ಶತ್ರುಗಳ ವಿಮಾನಗಳೊಡನೆ ಸ್ವಲ್ಪಕಾಲ ಹೋರಾಟ ನಡೆಸಿದವು ಅವು ನಡೆಸಿದ ಹೋರಾಟವೇನೋ ಅದ್ಭುತವಾಗಿತ್ತು ಆದರೆ ಶಕ್ತಿ ಸಾಲದಾಯಿತು

ಜಪಾನರು ಜಾವಾದಲ್ಲಿ ಬಂದಿಳಿದಾಗ ನಮ್ಮ ನೌಕಾಬಲವೂ ಮತ್ತು ವಿಮಾನ ಬಲವೂ ಹೆಚ್ಚಾಗಿ ಕೆಲಸ ಮಾಡುವಂತಿರಲಿಲ್ಲ. ಏಕೆಂದರೆ ಅವು ಮಲಯ, ಬೋರ್ನಿಯೋ ಮತ್ತು ಮಕಸಾರ್ ಕೊಲ್ಲಿಗಳಲ್ಲಿ ಹೊಡೆದಾಟ ನಡೆಸಿ ಸೋತುಹೋಗಿದ್ದವು ನಮಗೆ ಹೆಚ್ಚಿನ ವಿಮಾನ ಬಲದ ಸಹಾಯವಿರಲಿಲ್ಲ ಜಪಾನಿಗೆ ಬೇಕಾದಷ್ಟು ಜನ ಸೈನಿಕರ ಸಹಾಯವಿತ್ತು. ಆದುದರಿಂದ ಎಷ್ಟು ಮಂದಿ ಜಪಾನ್ ಸೈನಿಕರನ್ನು ಸಂಹರಿಸಿದರೂ ಅದರಿಂದ ಜಪಾನರಿಗೆ ಹೆಚ್ಚಿನ ತೊಂದರೆ ಏನೂ ಆಗಲಿಲ್ಲ. ನಮ್ಮಲ್ಲಿ ಹೆಚ್ಚಿನ ವೈಮಾನಿಕರಿದ್ದರೂ ಅವರಿಗೆ ಕೊಟ್ಟಿದ್ದ ಶಿಕ್ಷಣವು ಸಾಲದಾಗಿತ್ತು. ಅಲ್ಲದೆ, ವಿಮಾನಗಳೂ ಕೂಡ ಹೆಚ್ಚಾಗಿರಲಿಲ್ಲ ಜಪಾನರು ಇನ್ನುಮುಂದೆ ಆಸ್ಟ್ರೇಲಿಯಾ ದೇಶವನ್ನೂ ಆಕ್ರಮಿಸಬಹುದು

ಇಂದು ಕಾರ್ಯರಚನೆಯು ಮುಖ್ಯವಾದುದು ಆಸ್ಟ್ರೇಲಿಯಾದಲ್ಲಿ ಸಂಗ್ರಾಮ ವಸ್ತುಗಳ ನಿರ್ಮಾಣ ವ್ಯವಸ್ಥೆಯನ್ನು ಕೇಂದ್ರೀಕರಿಸಬೇಕು. ಉತ್ಪತ್ತಿ ಶಕ್ತಿಯನ್ನು ಹೆಚ್ಚಿಸಬೇಕು ಸೈನಿಕರಿಗೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕು. ಜಪಾನಿನ ಸರಬರಾಯಿ ಮೂಲಗಳನ್ನೂ ಮಾರ್ಗಗಳನ್ನೂ ಮುತ್ತಿ ನಾಶಗೊಳಿಸಬೇಕು ರಷ್ಯವು ಇಂದು ಆಸ್ಟ್ರೇಲಿಯಕ್ಕೆ ಸಹಾಯಮಾಡಬೇಕು" ಎಂದು ಹೇಳಿದರು

೪೯೭೦೦೦ ಜರ್ಮನರು ಸತ್ತರು

ಕ್ಯಾಲಿನಿನ್ ರಣಾಂಗಣದಲ್ಲಿ ಫೆ. ೫ ರಿಂದ ಮಾರ್ಚಿ ೪ನೇ ತಾ|| ವರೆಗೆ ೪೯೦೦೦ ಜರ್ಮನರು ಸತ್ತಿದ್ದಾರೆ ೩೭೭ ಜರ್ಮನ್ ವಿಮಾನಗಳು ನಾಶವಾಗಿವೆ ೭೮ ಟ್ಯಾಂಕುಗಳನ್ನೂ ೧೭೩ ಭಾರಿ ಫಿರಂಗಿಗಳನ್ನೂ ರಷ್ಯನರು ಸ್ವಾಧೀನ ಪಡಿಸಿಕೊಂಡಿದ್ದಾರೆ.

ಭಾರತೀಯರಿಗೆ ವೈಸ್‌ರಾಯರ ಸಂದೇಶ

ಭಾರತದ ವೈಸರಾಯರವರು ಭಾರತೀಯರಿಗೆ ಈ ರೀತಿ ಸಂದೇಶವನ್ನು ಇತ್ತಿದ್ದಾರೆ—

ಭಾರತದಲ್ಲಿ ನೆಲಸಿರುವ ಎಲ್ಲಾ ಸ್ತ್ರೀ ಪುರುಷರಿಗೂ ಅವರು ಯಾವ ಜನಾಂಗಕ್ಕೇ ಸೇರಲಿ, ಯಾವ ಮತಕ್ಕೇ ಸೇರಲಿ, ಯಾವ ರಾಜಕೀಯ ಪಕ್ಷಕ್ಕೇ ಸೇರಲಿ ನಾವು ಅವರಿಗೆಲ್ಲ ಈ ಸಂದೇಶವನ್ನು ಕಳುಹಿಸಲು ಇಷ್ಟಪಡುತ್ತೇವೆ ರಾಷ್ಟ್ರೀಯ ಸಂಗ್ರಾಮ. ರಂಗದಲ್ಲಿ ನೀವು ಸೇರಿಕೊಳ್ಳುವುದಕ್ಕಾಗಿ ಇನ್ನು ಕೆಲವು ವಾರಗಳಲ್ಲಿ ನಿಮಗೆಲ್ಲಾ ಆಹ್ವಾನ ಬರುವುದು. ಇಂದು ವಿಪತ್ತು ಸನ್ನಿಹಿತವಾಗಿದೆ ನಮ್ಮಲ್ಲಿ ಪ್ರತಿಯೊಬ್ಬರೂ ಕೆಲಸಮಾಡುವ ಸಮಯವಿದು ಇಂದು ನಿಮ್ಮ ಎಲ್ಲ ಭಿನ್ನಾಭಿಪ್ರಾಯಗಳನ್ನೂ ಮರೆತುಬಿಡಬೇಕು ಶತ್ರುವನ್ನು ಎದುರಿಸಲು ಸಿದ್ಧರಾಗಬೇಕು ಶಾಂತಿಯುತ ರಾಜ್ಯಗಳಲ್ಲಿ ಇಂದು ಶತ್ರುವು ನಡೆಸಿರುವ ಹೀನಕೃತ್ಯಗಳನ್ನು ನೋಡಿದುದೇ ಆದರೆ ಶತ್ರುವು ಕರುಣಾವಿಹೀನನೆಂಬುದಾಗಿಯೂ ಅತ್ಯಂತ ಕ್ರೂರಿಯೆಂಬುವಾಗಿಯೂ ಕರೆಯಬಹುದು ಭಾರತದ ಸೈನಿಕರು ಇಂದು ನಾನಾ ರಂಗಗಳಲ್ಲಿ ಅತ್ಯಂತ ಶೌರ್ಯದಿಂದಲೂ ಧೈರ್ಯದಿಂದಲೂ ಹೋರಾಡುತ್ತಿದ್ದಾರೆ ತಮ್ಮ ದೇಶದ ರಕ್ಷಣೆಗಾಗಿ ಅದ್ಭುತಶೌರ್ಯದಿಂದ ಕಾದಾಡಿದ್ದಾರೆ ತಮ್ಮ ಜನಭೂಮಿಯಲ್ಲಿ ಪವಿತ್ರವಾದ ವಸ್ತುಗಳನ್ನು ರಕ್ಷಿಸುವುದರ ಮೂಲಕ ಭವಿಷ್ಯವು ಮಂಗಳಕರವಾಗಿರಲೆಂಬ ಉದ್ದೇಶದಿಂದ ತನುಮನಧನಗಳನ್ನರ್ಪಿಸಿ, ಸಂಗ್ರಾಮದಲ್ಲಿ ಭಾಗವಹಿಸಿದ್ದಾರೆ

ಇಂದು ಸಂಗ್ರಾಮದ ರಂಗವು ಬಹಳದೊಡ್ಡದಾಗಿದೆ ನಾವೆಲ್ಲರೂ ಸೈನಿಕರಾಗಿ ಹೋರಾಡಲು ಅವಕಾಶವಿದೆ ಧೈರ್ಯವಾಗಿ ಮುಂದೆಬರಬೇಕು. ಧೈರ್ಯಶಾಲಿಗಳಿಗೆ ಮತ್ತಷ್ಟು ಧೈರ್ಯವನ್ನು ತುಂಬಬೇಕು ಅಧೈರ್ಯಶಾಲಿಗಳಿಗೆ ಒತ್ತಾಸೆಕೊಡಬೇಕು ದೇಶದ್ರೋಹಿಗಳನ್ನು ನಿರ್ಮೂಲಮಾಡಬೇಕು ಇಂದು ದೇಶದ ರಕ್ಷಣೆಯು ಅತ್ಯಂತಬಲಯುತವಾಗಿರುವಂತೆ ಮಾಡಬೇಕು ಜಯಗಳಿಸಲು ನಾಳೆಯೆ ಮುಂದೆ ನುಗ್ಗಬೇಕು ಜಯವಿಲ್ಲದೆ ಹೋದರೆ ನಾವು ಜಗತ್ತಿನಲ್ಲಿ ಸ್ವತಂತ್ರವಾಗಿ, ನಾಗರಿಕತೆ ಮತ್ತು ಸಂಸ್ಕೃತಿಗಳನ್ನು ಪಡೆದು ಜೀವಿಸಲು ಸಾಧ್ಯವಿಲ್ಲ. ಚೀಣಾ, ರಷ್ಯಾ, ಅಮೇರಿಕಾ, ಬ್ರಿಟನ್ ಮೊದಲಾದ ರಾಷ್ಟ್ರಗಳೊಡನೆ ನಾವಿಂದು ಸೇರಿದ್ದೇವೆ ಭಾರತದಲ್ಲಿ ಜೀವಿಸಿರುವ ಪ್ರತಿಯೊಬ್ಬರೂ ಇಂದು ತಮ್ಮ ಪಾತ್ರವನ್ನು ನಿರ್ವಹಿಸಿ ಭಾರತದ ಘನತೆಗೆ ಅನುಸಾರವಾಗಿ ನಡೆದುಕೊಳ್ಳಬೇಕು ಈ ರೀತಿ ಮಾಡುವುದಾದರೆ ಜಯವು ಬೇಗನೆ ಲಭಿಸುವುದು ನಿಮ್ಮ ಧೈರ್ಯದಲ್ಲಿ ನನಗೆ ನಂಬಿಕೆಯುಂಟು

ಜೇವರಗಿಯ ಸವಿನೆನಪು

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಮೊನ್ನೆ ಸೊಲ್ಲಾಪುರ ಪ್ರಾಂತಕ್ಕೆ ದಯಮಾಡಿಸಿದ ಸಮಯದಲ್ಲಿ ನಿಜಾಮ ಇಲಾಖಾ ಜಹಗೀರ ಜೇವರಗಿ ಬೃಹನ್ಮಠಾಧಿಕಾರಿಗಳಾದ ಶ್ರೀ|| ಷ|| ಬ್ರ|| ಗುರುಶಾಂತಶಿವಾಚಾರ್ಯರವರು ಪಂಡಿತರ ಆರೋಗ್ಯ ರಕ್ಷಣೆಗಾಗಿ ಅವರನ್ನು ತಮ್ಮ ಗ್ರಾಮಕ್ಕೆ ಕರೆದುಕೊಂಡುಹೋಗಿ ಅಭೂತಪೂರ್ವವಾದ ಸತ್ಕಾರವನ್ನು ಮಾಡಿದರು ಜೇವರಗಿ ಗ್ರಾಮಕ್ಕೆ ೧|| ಮೈಲು ದೂರದಲ್ಲಿರುವ ಮನೋಹರವಾದ ಬಿಲ್ವವನದಲ್ಲಿ ಪಂಡಿತರಿಗಾಗಿ ಒಂದು ಭವ್ಯವಾದ ಆಶ್ರಮವನ್ನು ರಚಿಸಿದ್ದರು ಪಂಡಿತರು ಅಲ್ಲಿ ೧೫ ೨೦ ದಿವಸಗಳವರೆಗೆ ಆತ್ಮಾನಂದದಿಂದ ಕಾಲವನ್ನು ಕಳೆದರು ಪಂಡಿತರ ಸಂಗಡ ವಿನೋದಮೂರ್ತಿಗಳಾದ ಜೈನಾಪುರ ಶ್ರೀಗಳವರು ಇದ್ದುದರಿಂದ ಸದಾ ಆನಂದವೇ ಹೊರಸೂಸುತ್ತಿತ್ತು ಆ ಕಾಲದಲ್ಲಿ ಆ ಗ್ರಾಮದ ಪ್ರಮುಖರಾದ ಮ|| ರಾ|| ಪಾಟೀಲ ಶಿವರಾಯಗೌಡರು ಮಾಡಿದ ಸೇವೆಯು ವರ್ಣನಾತೀತವಾದುದು. ಶ್ರೀ ಗುರುಶಾಂತ ಶಿವಾಚಾರ್ಯರು ತಮ್ಮ ನಾಮಕ್ಕೆ ತಕ್ಕಂತೆ ಮಹಾಶಾಂತಮೂರ್ತಿಗಳಾಗಿದ್ದು ಮಹಾತಪಸ್ವಿಗಳಾಗಿರುವರು. ಪಂಡಿತರು ಶ್ರೀಗಳವರ ಆದರಾತಿಥ್ಯಾದಿಗಳನ್ನು ಕಂಡು ಪ್ರಯಾಣಮಾಡುವ ಕಾಲಕ್ಕೆ ಜೇವರಗಿಯ ಸವಿನೆನಪು ನಮ್ಮ ಮನೋಮಂದಿರದಲ್ಲಿ ಸದಾ ಸನ್ನಿಹಿತವಾಗಿರುವುದೆಂದು ನುಡಿದರು. ಈ ಸವಿನೆನಪಿಗೆ ಜೇವರಗಿ ಶ್ರೀಗಳವರೇ ಮೂಲಕಾರಣರು

ಸ್ವೀಕಾರ.

ಧಾರವಾಡ ಡಿ|| ಗದಗ ಶಹರನಿವಾಸಿಗಳಾದ ವೇ|| ಗುಡುಸ್ವಾಮಿಮಠದ ಶಿವಲಿಂಗಾರ್ಯರ ಪುತ್ರ ಚಿ|| ಶ್ರೀಕರನಿಗೆ ಇದೇ ವೃಷನಾಮಸಂವತ್ಸರ ಮಾಘಶುದ್ಧ ಪ್ರತಿಪದಕ್ಕೆ 15ವರ್ಷಗಳು ಮುಗಿದು 16ನೆಯ ವರ್ಷವು ಪ್ರಾರಂಭವಾದ ಸಂತೋಷಾರ್ಥವಾಗಿ ನೆರವೇರಿಸಿದ ಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ವೇ|| ಪುರವಯ್ಯನವರು ಮುಳಗುಂದ ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ

ಬೆಳಗಾಂವ ಟವನ್ ಗಣಪತಿಗಲ್ಲಿಯಲ್ಲಿರುವ ಮ|| ರಾ|| ಅಂಕಲಗಿ ಲಿಂಗಪ್ಪನವರು ತಮ್ಮ ಪುತ್ರಿ ಚಿ|| ಸೌ|| ಅಕ್ಕಬಾಯಿಯನ್ನು ಇದೇ ಟವನ್ನಿನಲ್ಲಿರುವ ರಾವಬಹದ್ದೂರ್ ವೈಜಪ್ಪನವರ ದ್ವಿತೀಯ ಪುತ್ರ ಚಿ|| ಕೆಂಚಪ್ಪನೆಂಬ ವರನಿಗೆ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂಪಾಯಿಗಳು ಶ್ರೀ|| ಷ|| ಬ್ರ|| ಗುರುವರ್ಯ ಶಿವಾಚಾರ್ಯರು ಸುತಗಟ್ಟಿ ಇವರ ದ್ವಾರಾ ತಲ್ಪಿರುತ್ತವೆ.

ದಾವಣಗೆರೆ ಟವನ್ ನಿವಾಸಿಗಳಾದ ವೇ|| ಗದಗಿನ ಮಠದ ಅನ್ನದಾನಯ್ಯನವರು ತಮ್ಮ ಮನೆಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ನೆರವೇರಿಸಿ ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ಕಳುಹಿಸಿರುತ್ತಾರೆ.

ಕಡೂರು ಡಿ|| ಕುಂಚಾನಾಡು ಗ್ರಾಮದಲ್ಲಿ ನೆರವೇರಿದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯ ಸಮಯದಲ್ಲಿ ವೇ|| ವಡೇರಹಳ್ಳಿ ಮಠದ ವೀರಭದ್ರಾರಾಧ್ಯರು ಗ್ರಾಮಸ್ಥರಿಂದ ತೆಗೆಯಿಸಿದ 1 ರೂಪಾಯಿಯು ಮ|| ರಾ|| ಅಲದಹಳ್ಳಿ ಸ್ಕೂಲ್‌ಮಾಸ್ಟರ್ ಬಿ. ಮರುಳಪ್ಪನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ತಿದ್ದುಪಡಿ

ತಾ|| 23 2-42 ನೆಯ ಪ್ರಭಾಪತ್ರಿಕೆಯಲ್ಲಿ ಶಿವಮೊಗ್ಗಾ ಡಿ|| ಆಯನೂರುಗ್ರಾಮದ ಸಾ|| ತಿಪ್ಪಣ್ಣನವರ ವೀರಪ್ಪನವರ ಗೃಹದಲ್ಲಿ ನಡೆದ ವಿವಾಹವಿಷಯಕವಾದ ಲೇಖದಲ್ಲಿ ವರನ ಹೆಸರು ತಿಪ್ಪಣ್ಣನವರ ದಾಸಪ್ಪನವರ ಪುತ್ರ ಮಹಾದೇವಪ್ಪಎಂದು ತಪ್ಪುಬಿದ್ದಿದೆ ಅದನ್ನು ತಿಪ್ಪಣ್ಣನವರ ರುದ್ರಪ್ಪನವರ ಪುತ್ರ ಗಂಗಾಧರಪ್ಪ ಎಂದು ಓದಿಕೊಳ್ಳಬೇಕು

ಕ್ಯಾಲೆಂಡರ್ ಸ್ವೀಕಾರ.

ಮೆ|| ಜೆ ಶಿವಸ್ವಾಮಿ ಅಂಡ್ ಕೊ ಜ್ಯುವೆಲರ್ಸ್, ಕೊಳ್ಳೆಗಾಲ ಇವರು ನಾನಾಬಣ್ಣಗಳಿಂದ ಅಂದವಾಗಿ ಮುದ್ರಿಸಿರುವ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರದ ಸುಂದರವಾದ ಕ್ಯಾಲೆಂಡರನ್ನು ಪರಮಾನಂದದೊಡನೆ ಸ್ವೀಕರಿಸಿರುತ್ತೇವೆ.

[೩ನೆಯ ಪುಟದಿಂದ ಮುಂದುವರಿಸಿದುದು]

ಯಸ್ತಾರಾಶೀತರಶ್ಮಿಪ್ರಮುಖದಿವಿಷದಾಂ ಜ್ಯೋತಿಷಾಂ ಚೇತರೇಷಾಂ
ತೇಜೋ ದಾತಾ ಕರ್ತೃಯೋಗೀ ಜನಯತಿ ಭುವನೇ ವೃಷ್ಟಿಮಸ್ತೋಯದಾಖ್ಯಾಮ್ |
ಯಃ ಸ್ವಾ ಪಂಚಪ್ರಬೋಧಂ ದಿಶತಿ ತನುಭೃತಾಂ ಶರ್ವರೀಣಾಂ ಯಶ್ಚ ಸಾಕ್ಷೀ
ಯೋ ಜೀವಾತುರ್ಜಗತ್ಯಾಃ ಸ ದಿಶತು ಭಗವಾನಂಶುಮಾಲೀ ಶುಭಂ ನಃ ॥೮॥

ವರ್ಷೇ ಶ್ರೀಚಿತ್ರಭಾನೌ ನೃಪತಿರಥ ಕುಜೋ ಧಾನ್ಯಪಃ ಶೀತರಶ್ಮಿಃ
ಮನ್ತ್ರೀ ಸೇನಾಧಿಪೋಽಥಾಧಿಪತಿದಿನಮಣಿಃ ಸಸ್ಯಪೋ ಸೇವ ಸೇಶಃ |
ಸೂರಿಃ ಸಾರೋ ರಸೇಶಶ್ಚ ಜಯಪದಮುಖಿಲ ಚಾಮರಾಜಂ ವಿಧತ್ತಾಂ
ಕರ್ಣಾಟಕ್ಷ್ಮೇಶಮಾರ್ಗಂ ಬಹುಧನತನಯಾಯುಸ್ಸುಖಂ ನಿಸ್ಸಪತ್ನಮ್ ೯।

ನೃಪತೇರ್ವಾಗ್ಮಿತೇನ ವ್ಯಸನಕಲುಷಾತ್ಸ್ವಂ ಜನತಾ
ಅಸ್ವಕ್ಷ್ವಂ [illegible] ಭಯಭೃತಾಂ |
ವೃಷ್ಟಿ [illegible] ಸಮುಜಃ ಯ ಶ್ರೀ ಭಾನುಭಿರೇವ
ಕತೋಽಕ್ಷ [illegible] ಸಾರ್ವಭೌಮ ಹ ತವಸ್ಯೇತಿ ಜನೌಘಃ ೧೦

ಅಮುತ್ರ್ಯಬ್ಧೇ ಸ್ವರ್ಣ [illegible]
ತ್ರಿಪುರಸ್ಸ್ಯ [illegible] ಭ್ರಮತಿ ಭವನೇಷೂಗ್ರಕಲಃ |
ಪ್ರಜಾನಾಮಾಸ್ವಾಸ್ಥ್ಯಂ ಜ್ವರಸಹಪದರ್ಥೈರ್ವಿತ್ರಜನಯೇತ್
ಸ್ವಘಾಮಪ್ರಧ್ವಂಸಾ ಸ್ವಜನವಿದ್ವೇಷಣಪಃ ಕಿ ॥೧೧

ಯೋಗೇ [illegible] ಸ್ವರ್ಕೈಷಮುಸ್ತೈ [illegible]
ಯೋಜ್ಞ [illegible] ಕೀರ್ತಿ [illegible] |
ರಾಜ್ಯಕ್ಷೋಭಃ ಸೈನಿಕಾನಾಂ ಪ್ರಕೋಪಃ
ರಾಜ್ಞಾಂ ಬೋಧೋ ಧಾವನಂ ಚೋದ್ವೇಗೇಯಃ ೧೨॥

ಬಹುತ್ವಸ್ಥಿತ್ಯ ಸ್ವರ್ಗೇ ಬಹುಲಶುಭವೃಷ್ಟಿರ್ಹಿತಕರಾ
ಸಮೃದ್ಧಿಃ ಸಸ್ಯಾನಾಂ ಕ್ವಚನ ಜನಸೌಹಾರ್ದಮಧಿಕಮ್ |
ಸುಭಿಕ್ಷಂ ಚಾರ್ಘಾಣಾಂ ತಿಲಚಣಕಗೋಧೂಮಕಲಮ
ಪ್ರಿಯಂಗೂನಾಂ ವೃದ್ಧಿರ್ಮಣಿವಣಿಜಲಾಭೋಽಪಿ ವಿಪುಲಃ ॥೧೩

ಸ್ವಬಿಂಬಪ್ರಾಪ್ತಿರ್ಗುರ್ವಣಗೇ (33) ಮಿತ್ರೇ ಕೇತುಭಿರಪಿ
ಆಗಾಹಾ ಪ್ರತ್ಯೈರಸ್ಯಾಂ ಭುವಿ ಬಹುತರಾವಿನಾಶ್ಯ ಶತಕಮ್ |
ಬ್ರುವಾಣಾಸ್ತಿಗ್ಮಾಂಶುರ್ನಯನಮುಖಲಾನಾಂ ಶ್ರುತಿಮಯೋ
ನಿರುನಿಷ್ಟಂ ಶ್ರೀಜಾನೇರ್ಗ್ರಹಮುಖಲಿಪ್ಸುಃ ಶಿವಹಿಮಾಮ್ ॥೧೪॥

ಪ್ರಜಾನಾಂ ಸರ್ವಾಸಾಮಪಿ ವಿಷಮ [illegible]
ಪೃಥಕ್ತ್ವಾಮುತ್ಪನ್ನಾಮಶೇಷವಿವಿಧಾಂ ದುಸ್ಸಹತರಾಮ್ |
ಪ್ರಸ್ಪೃಶ್ಯಂ ಶಂಭುಃ ಹೇಗೇರಲಮಿವ ಬಾಧಾಂ ಪ್ರತಿದಿನಂ
ನಿರುಸ್ಯಂ ಸರ್ವೇಶೋ ಹರಿರಪಿಲಮೇಯಪ್ರತಿಭಟಃ ॥೧೫॥

ಇಷ್ಟಾಂ ಶ್ರೀಜಯಚಾಮರಾಜನೃಪತಿಃ ಕರ್ಣಾಟದೇಶಾಧಿಪಃ
ನೇತ್ರಾನನ್ದನಸಿಂಹಪೀಠಮಹಿತಃ ಸೌಜನ್ಯಧೈರ್ಯಾಕರಃ |
ಲೋಕಶ್ರೀಜನಕಾಂಕ್ಷಿರಾಯುರತಃ ಶ್ರೀಶ್ರೀಕಂಠಾಯತಃ
ಸತ್ಕೀರ್ತಿಮಖಂಡಮಾರ್ಕಾಂಡಸುತಾನನ್ದಪ್ರಪೂರ್ಣಶ್ಚಿರಮ್ ॥೧೬॥

ಇತಿ ಚಿತ್ರಭಾನುವತ್ಸರಶುಭಾಶುಭಫಲಕಸನಂ ಮುದಾ ವಿಬುಧಃ |
ಜ್ಯೌತಿಷರತ್ನಂ [illegible] ಶೇಷಃ

ಶಿವಮಹಾಸ್ಥಾನ ಕಡೂರು ಶೇಷಾಚಾರ್ಯೋ ಜ್ಯೋತಿಷರತ್ನಂ ಮಹಾವಿದ್ವಾನ್ ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲಾಯಾಂ ಜ್ಯೋತಿಶ್ಶಾಸ್ತ್ರಪ್ರಧಾನೋಪಾಧ್ಯಾಯಶ್ಚ.

ಶ್ರೀಚಿತ್ರಭಾನುವತ್ಸರ ಚೈತ್ರ ಶುಕ್ಲ ಪ್ರತಿಪದಿ ಸೋಮವಾಸರೇ 17-3-42. ಜ್ಯೋತಿಷನಿವಾಸಸದನೇ 1057 ಚಾಮರಾಜೇಂದ್ರಾಗಾರೇ ಮಹಿಶೂರಪುರೇ

ನೂತನ ಚಿತ್ರಭಾನುಸಂವತ್ಸರದಲ್ಲಿ ಮೈಸೂರು ದೇಶದ ಶುಭಾಶುಭ ಫಲಗಳು

ತಾ॥ 17-3-42—5-4-43 ರ ವರೆಗೆ

ವರ್ಷೇ ಶ್ರೀಚಿತ್ರಭಾನೌ ನೃಪತಿರಥಕುಜೋ ಧಾನ್ಯಪಃ ಶೀತರಶ್ಮಿಃ । ಮನ್ತ್ರೀ ಸೇನಾಧಿಪೋಽಥಾಧಿಪತಿದಿನಮಣಿಃ ಸಸ್ಯಪೋ ಸೇವಸೇಶಃ ॥ ಸೂರಿಃ ಸಾರೋ ರಸೇಶಶ್ಚ ಜಯಪದಮುಖಿಲ ಚಾಮರಾಜಂ ವಿಧತ್ತಾಂ | ಕರ್ಣಾಟಕ್ಷ್ಮೇಶಮಾರ್ಗಂ ಬಹುಧನತನಯಾಯುಸ್ಸುಖಂ ನಿಸ್ಸಪತ್ನಮ್ ॥೧॥

ಈ ಚಿತ್ರಭಾನು ಸಂವತ್ಸರದಲ್ಲಿ ರಾಜನೂ, ಧಾನ್ಯಾಧಿಪತಿಯೂ, ಆದ ಕುಜನೂ ಮಂತ್ರಿಯಾದ ಚಂದ್ರನೂ, ಸೇನಾ-ಅರ್ಘ (ಬೆಲೆ) ಮೇಘ ಇವುಗಳಿಗೆ ಒಡೆಯನಾದ ಸೂರ್ಯನೂ, ಸಸ್ಯ-ನೀರಸವಸ್ತು ಇವುಗಳಿಗೆ ಅಧಿಪನಾದ ಗುರುವೂ, ರಸಾಧಿಪತಿಯಾದ ಶನಿಯೂ, ಇವರುಗಳು ಕರ್ಣಾಟಕದೇಶದ ರಾಜಶ್ರೇಷ್ಠರಾದ ಶ್ರೀಮಜ್ಜಯಚಾಮರಾಜೇಂದ್ರ ಸಾರ್ವಭೌಮರನ್ನು ಒಡಗೂಡಿದ ಐಶ್ವರ್ಯ, ಪಕ್ಷ, ಆಯುಸ್ಸು, ಸುಖ ಇವುಗಳನ್ನುಳ್ಳವರನ್ನಾಗಿಯೂ ನಿಷ್ಕಂಟಕರನ್ನಾಗಿಯೂ ಮಾಡಲಿ

ಚೈತ್ರಮಾಸ ತಾ॥ 17-3-42 — 16-4-42 ರ ವರೆಗೆ

ಶುಕ್ಲಪಕ್ಷದಲ್ಲಿ ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು ಈ ಸ್ಥಳಗಳಲ್ಲಿ 2-3 ಹದವಾದ ಮಳೆ, ಹೆಚ್ಚು ಬಿಸಿಲು, ಹೆಚ್ಚು ಗಾಳಿ, ಪದಾರ್ಥಗಳು ಅಗ್ಗವಾಗುವಿಕೆ, ಪ್ರಜಾಸೌಖ್ಯ, ಹೆಚ್ಚು ಶುಭಕಾರ್ಯಗಳು, ತಾ॥ 31, ಏಪ್ರಿಲ್ 1-2ರಲ್ಲಿ ಛತ್ರವನ್ನು ಸಂಗ್ರಹಿಸಿ 4ನೇ ತಿಂಗಳಲ್ಲಿ ಮಾರಿದರೆ ಲಾಭ

ಕೃಷ್ಣಪಕ್ಷದಲ್ಲಿ ಅಲ್ಲಲ್ಲಿ ರೋಗೋಪದ್ರವ, ಅಗ್ನಿಭಯ, ಹೆಚ್ಚು ರಾಜಕಲಹ, ಕತ್ತಿ, ಬಟ್ಟೆ ನೂಲು, ಕಂಚು, ಇವುಗಳ ಬೆಲೆ ವ್ಯಾಪಾರ, ಕಾಳ, ಜೋಳ, ಗೋಧಿ ಇವುಗಳಿಗೆ ಹೀನ, ರಾಜಕೀಯ, ದುಷ್ಟವ್ಯಾಪಾರದಿಂದ ಪ್ರಜೆಗಳಿಗೆ ತೊಂದರೆ, ನಷ್ಟ, ಜನಗಳ ರೋಗೋಪದ್ರವ, ದೊಡ್ಡ ಕಟ್ಟಡಗಳಿಗೆ ನಷ್ಟ, ಜನಗಳಿಗೆ ಭಯದಿಂದ ಸ್ಥಾನಚಲನ

ವೈಶಾಖ 16-4-42 ರಿಂದ 15-5-42 ರವರೆಗೆ

ಶುಕ್ಲಪಕ್ಷದಲ್ಲಿ ಸರ್ವತ್ರ ಒಳ್ಳೇ ಮಳೆ, ಪ್ರಜಾಕ್ಷೇಮ, ಹೆಚ್ಚು ಸಂಭ್ರಮಗಳು, ಮತ್ತು ಪರ್ವಕಾರ್ಯಗಳು ರಾಜ್ಯದಲ್ಲಿ ಶುಭಕಾರ್ಯಗಳು, ಹತ್ತಿ, ಕಬ್ಬು, ಎಳ್ಳು, ಎಮ್ಮೆ, ಹಾಲು, ತುಪ್ಪ ಇವುಗಳಿಗೆ ಹೆಚ್ಚು ಬೆಲೆ, ತಾ॥ 29-30 ಮತ್ತು ಮೇ 1 ರಲ್ಲಿ ಧಾನ್ಯಸಂಗ್ರಹಿಸಿ 6ನೇ ತಿಂಗಳಲ್ಲಿ ಮಾರಿದರೆ 2 ರಷ್ಟು ಲಾಭ

ಕೃಷ್ಣಪಕ್ಷದಲ್ಲಿ ಬ್ರಾಹ್ಮಣ, ಆನೆ, ಪಂಚಮರು ಇವರುಗಳಿಗೆ ಪೀಡೆ ಅಲ್ಲಲ್ಲಿ ರೋಗೋಪದ್ರವ, ಮಹಾವ್ಯಾಧಿಗಳು, ಅಲ್ಪವೃಷ್ಟಿ, ಆಯುಧ ಮತ್ತು ಅಗ್ನಿಯಿಂದ ಜನಗಳಿಗೆ ಮತ್ತು ಕಟ್ಟಡಗಳಿಗೆ ನಷ್ಟ, ಕೋಮುವಾರು ಕಲಹ, ಕಳವು, ಗರ್ಭಿಣಿ ಮತ್ತು ಶಿಶುಗಳಿಗೆ ಹೆಚ್ಚು ನಷ್ಟ

ಅಧಿಕ ಜ್ಯೇಷ್ಠ 16-5-42 ರಿಂದ 13-6-42 ರವರೆಗೆ

ಶುಕ್ಲಪಕ್ಷದಲ್ಲಿ ದುರ್ಭಿಕ್ಷ, ಸಿಡುಬು, ಉಷ್ಣಜ್ವರ, ಆಮಶಂಕೆ, ಇವುಗಳಿಂದ ಬಾಧೆ, ಬೆಂಗಳೂರು, ತುಮಕೂರು, ಶಿವಮೊಗ್ಗ, ಮಂಡ್ಯ, ಈ ಸ್ಥಳಗಳಲ್ಲಿ ಹದವಾದ 2-3 ಮಳೆ, ಹೆಚ್ಚು ಗಾಳಿ, ಮತ್ತು ಬಿಸಿಲು ಗೋಚರ, ಸರ್ಕಾರಿ ಇವರುಗಳಿಗೆ ಪೀಡೆ, ದ್ವೀಪಾಂತರಗಳಲ್ಲಿ ಘೋರವಾದ ಯುದ್ಧ, ಧನ ಮತ್ತು ಪ್ರಾಣ ನಷ್ಟ, ತಾ॥ 29-30 ರಲ್ಲಿ ಧಾನ್ಯ ಸಂಗ್ರಹಿಸಿ 4 ನೇ ತಿಂಗಳಲ್ಲಿ ಮಾರಿದರೆ ಲಾಭ

ಕೃಷ್ಣಪಕ್ಷದಲ್ಲಿ ಅಲ್ಲಲ್ಲಿ ರೋಗೋಪದ್ರವ, ಅಗ್ನಿಭಯ, ಜನಗಳಿಗೆ ಪರಸ್ಪರ ವಿರೋಧ, ರಾಜಕಾರ್ಯ, ಎಮ್ಮೆ, ಎಳ್ಳು, ಗೋಧಿ, ಉಪ್ಪು ಇವುಗಳಿಗೆ ಸಮಬೆಲೆ, ಮೈಸೂರು, ಚಾಮರಾಜನಗರ, ಗುಂಡ್ಲುಪೇಟೆ ಈ ಸ್ಥಳಗಳಲ್ಲಿ ಅಲ್ಪವೃಷ್ಟಿ, ಇತರ ಸ್ಥಳಗಳಲ್ಲಿ ಹೆಚ್ಚು ಮಳೆ, ರಾಗಿ, ಜೋಳ, ನವಣೆ ಇವೇ ಮೊದಲಾದ ಹೊಟ್ಟೆಯ ಧಾನ್ಯಗಳಿಗೆ ಹೆಚ್ಚು ಬೆಲೆ,

ನಿಜಜ್ಯೇಷ್ಠ 13-6-42 ರಿಂದ 13-7-42 ರವರೆಗೆ

ಶುಕ್ಲಪಕ್ಷದಲ್ಲಿ ದುರ್ಭಿಕ್ಷ, ರೋಗೋಪದ್ರವ, ಹಾಸನ, ಕಡೂರು, ಶಿವಮೊಗ್ಗ, ಬೆಂಗಳೂರು, ಕೋಲಾರ ಈ ಡಿಸ್ಟ್ರಿಕ್ಟ್ ಮತ್ತು ಇವಕ್ಕೆ ಸೇರಿದ ತಾಲೂಕುಗಳಲ್ಲಿ ಹದವಾದ 2-3 ಮಳೆ ಮತ್ತು ಪ್ರಜಾಕಲಹ, ಜನಗಳಿಗೆ ರಾಜಕೀಯ ವಿರೋಧ, ಅಲ್ಲಲ್ಲಿ ಚೋರೋಪದ್ರವ, ವಿಷಜಂತುಗಳ ಬಾಧೆ, ಜನಗಳಿಗೆ ಪರಸ್ಪರ ಹೊಟ್ಟೆಕಿಚ್ಚು

ಕೃಷ್ಣಪಕ್ಷದಲ್ಲಿ 28-29-30 ರಲ್ಲಿ ಎಳ್ಳು, ಎಣ್ಣೆ, ಸಂಗ್ರಹಿಸಿ 4 ನೇ ತಿಂಗಳಲ್ಲಿ ಮಾರಿದರೆ ಲಾಭ, ಮಲೆನಾಡು, ಕಾಡು, ಬೈಲು ಪ್ರದೇಶಗಳಲ್ಲಿ ಹೆಚ್ಚು ಮಳೆ, ಇತರ ಕಡೆಗಳಲ್ಲಿ ಅಲ್ಪವೃಷ್ಟಿ, ಅವರೆ, ಹೆಸರು, ಹಲಸಂದೆ ಈ ಧಾನ್ಯಗಳಿಗೆ ಹೆಚ್ಚು ಬೆಲೆ, ವರ್ತಕರಿಗೂ ಇತರರಿಗೂ ಹೊಡೆದಾಟ.

ಆಷಾಢ 14-7-42 ರಿಂದ 12-8-42 ರವರೆಗೆ

ಶುಕ್ಲಪಕ್ಷದಲ್ಲಿ ಪ್ರಜೆಗಳಿಗೆ ಅನಾರೋಗ್ಯ, ಅಗ್ನಿಭಯ, ಅನಾವೃಷ್ಟಿ, ಕಳವು, ದುಷ್ಟರ ಕಾಟ, ಕೋಮುವಾರು ಕಲಹ, ಪ್ರಜೆಗಳಿಗೂ ಸರ್ಕಾರಕ್ಕೂ ವಿವಾದ ದೊಡ್ಡ ಸಂಸ್ಥೆಗಳಲ್ಲಿ ಹೆಚ್ಚು ಕಳವು, ನಂಬಿಕೆ ದ್ರೋಹ.

ಕೃಷ್ಣಪಕ್ಷದಲ್ಲಿ ತಾ॥ 27-28-29 ರಲ್ಲಿ ವರ್ತಕರಿಗೆ ವಿಶೇಷ ನಷ್ಟ, ಎಳ್ಳು ಉದ್ದು, ಹೆಸರು ಈ ಧಾನ್ಯಗಳಿಗೆ ನಷ್ಟ, ವಿಷಜಂತುಗಳ ಬಾಧೆ, ದೊಡ್ಡ ಪಟ್ಟಣಗಳಲ್ಲಿ ಮಳೆ ಕಡಮೆ, ಮಲೆನಾಡು, ಬೈಲು ಸೀಮೆ, ಕಾಡು ಇವುಗಳಲ್ಲಿ ಹೆಚ್ಚು ಮಳೆ ಮಕ್ಕಳುಗಳಿಗೆ ಪೀಡೆ, ಚಿನ್ನ, ಬೆಳ್ಳಿ, ತಾಮ್ರ, ಕಂಚು, ಹತ್ತಿ, ನೂಲು, ನವಣೆ, ರಾಗಿ, ಜೋಳ ಇವುಗಳಿಗೆ ಹೆಚ್ಚು ಬೆಲೆ.

ಶ್ರಾವಣ 13-8-42 ರಿಂದ 10-9-42 ವರೆಗೆ

ಶುಕ್ಲಪಕ್ಷದಲ್ಲಿ ಪ್ರಜೆಗಳಿಗೆ ಸೌಖ್ಯ, ಆರೋಗ್ಯ, ಉತ್ಸಾಹ, ಸರ್ವತ್ರ 2-3 ಒಳ್ಳೆ ಮಳೆಗಳು, ಪಶುಪಕ್ಷಿಗಳಿಗೆ ವೃದ್ಧಿ, ಸುಭಿಕ್ಷೆ, ಪ್ರಜೆಗಳಿಗೆ ಅನುರಾಗ ಮತ್ತು ಐಕಮತ್ಯ, ವ್ಯವಹಾರದಲ್ಲಿ ಜಯ, ತಾ॥ 25-26-27 ರಲ್ಲಿ ಗೋಧಿ, ಎಳ್ಳು, ಜೋಳ ಇವುಗಳನ್ನು ಸಂಗ್ರಹಿಸಿ 6 ನೇ ತಿಂಗಳಲ್ಲಿ ಮಾರಿದರೆ 2ರಷ್ಟು ಲಾಭ

ಕೃಷ್ಣಪಕ್ಷದಲ್ಲಿ ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಕೋಲಾರ ಈ ಸ್ಥಳಗಳಲ್ಲಿ ಒಳ್ಳೇ ಮಳೆ, ಕುದುರೆಗಳಿಗೆ ಹೆಚ್ಚು ಬೆಲೆ, ಚತುಷ್ಪಾತ್ತುಗಳಿಗೆ ಹೀನ, ಪ್ರಜೆಗಳಿಗೆ ಯುದ್ಧಭಯ, ಉದ್ದು, ಹೆಸರು, ತೊಗರಿ, ಅವರೆ, ಈ ಧಾನ್ಯಗಳಿಗೆ ಕ್ರಿಮಿಕೀಟಾದಿಗಳಿಂದ ಪೀಡೆ, ಅಲ್ಲಲ್ಲಿ ಚೋರೋಪದ್ರವ.

ಭಾದ್ರಪದ 11-9-42 ರಿಂದ 10-10-42 ವರೆಗೆ

ಶುಕ್ಲಪಕ್ಷದಲ್ಲಿ ಪ್ರಜೆಗಳಿಗೆ ಸೌಖ್ಯ, ಸರ್ವತ್ರ, ಒಳ್ಳೆಮಳೆ, ಪಶು-ಪಕ್ಷಿಗಳಿಗೆ ವೃದ್ಧಿ, ಪದಾರ್ಥಗಳು ಅಗ್ಗವಾಗಿ ಸಿಕ್ಕುವಿಕೆ, ತಾ॥ 23-24-25 ರಲ್ಲಿ ಧಾನ್ಯಸಂಗ್ರಹಿಸಿ 4 ನೇ ತಿಂಗಳಲ್ಲಿ ಮಾರಿದರೆ ಲಾಭ, ಗಸಗಸೆ-ಉದ್ದು-ಛತ್ರ-ಗೋಧಿ ಇವುಗಳಿಗೆ ಹೆಚ್ಚು ಬೆಲೆ, ಕೃಷ್ಣಪಕ್ಷದಲ್ಲಿ ಮಳೆ ಕಡಮೆ, ಪದಾರ್ಥಗಳಿಗೆ ಹೆಚ್ಚು ಬೆಲೆ, ರೋಗಭಯ, ಶ್ರೀಮಂತರಿಗೆ ಹೆಚ್ಚು ಧನನಷ್ಟ ಮತ್ತು ವ್ಯಸನ, ಸರ್ಕಾರಿ ಆಫೀಸುಗಳಲ್ಲಿ ಕಳವು ಪ್ರಜೆಗಳಿಗೂ-ಸರ್ಕಾರಕ್ಕೂ ವೈಮನಸ್ಯ, ಅಲ್ಲಲ್ಲಿ ಚೋರಭಯ, ದುಷ್ಟಜನರಿಂದ ಹೆಚ್ಚು ಪೀಡೆ.

ಅಶ್ವಯುಜ 11-10-42 ರಿಂದ 8-11-42 ವರೆಗೆ

ಶುಕ್ಲಪಕ್ಷದಲ್ಲಿ ಜನಗಳಿಗೆ ಗಲಭೆ, ನಾನಾದೇಶದ ಜನಗಳ ಗಲಭೆ, ಮೈಸೂರು, ಬೆಂಗಳೂರು, ಚಿಕ್ಕಮಗಳೂರು, ಹಾಸನ, ಚಿತ್ರದುರ್ಗ, ಶಿವಮೊಗ್ಗ ಈ ಸ್ಥಳಗಳಲ್ಲಿ ಒಳ್ಳೆಮಳೆ, ಜನಗಳಿಗೆ ವಿಷಮಜ್ವರ-ಭೇದಿ-ಶಸ್ತ್ರಚಿಕಿತ್ಸೆ-ಛತ್ರ-ಗೋಧಿ, ಹತ್ತಿ ಇವುಗಳಿಗೆ ಹೆಚ್ಚು ಬೆಲೆ, ಸ್ವಲ್ಪ ದುರ್ಭಿಕ್ಷೆ.

ಕೃಷ್ಣಪಕ್ಷದಲ್ಲಿ 24-25-26ರಲ್ಲಿ ಎಳ್ಳು-ಎಣ್ಣೆ-ಸಂಗ್ರಹಿಸಿ 5 ನೇ ತಿಂಗಳಲ್ಲಿ ಮಾರಿದರೆ ಲಾಭ, ಸ್ವಲ್ಪಮಳೆ, ವರ್ತಕರಿಂದ ಜನಗಳಿಗೆ ತೊಂದರೆ, ಮತ್ತು ಪಾಠಶಾಲೆ-ವೇಶ್ಯೆ-ಶಿಲ್ಪ-ಬ್ರಾಹ್ಮಣ ಇವರಿಗೆ ತೊಂದರೆ, ಧನ-ಕರು-ಕುದುರೆ-ಆನೆ-ಮಕ್ಕಳು-ಗರ್ಭಿಣಿಯರು ಇವರುಗಳಿಗೆ ಹೆಚ್ಚು ರೋಗೋಪದ್ರವ, ಅಲ್ಲಲ್ಲಿ ಚೋರಬಾಧೆ ಸರ್ಕಾರಿ ಕಾರ್ಯಾಲಯಗಳಲ್ಲಿ ಕಳವು.

ಕಾರ್ತಿಕ 9-11-42 ರಿಂದ 8-12-42 ವರೆಗೆ

ಶುಕ್ಲಪಕ್ಷದಲ್ಲಿ ಪ್ರಜೆಗಳಿಗೆ ಪುಷ್ಕಲಸೌಖ್ಯ, ಸರ್ವತ್ರ ಹದವಾದ ಮಳೆ, ಹತ್ತಿ-ಗೋಧಿ-ಅರಿಶಿನ-ಪೀತಾಂಬರ-ಕರ್ಪೂರ-ವಸ್ತ್ರ ಮುತ್ತು ಇವುಗಳಿಗೆ ಹೆಚ್ಚು ಬೆಲೆ.

ಕೃಷ್ಣಪಕ್ಷದಲ್ಲಿ ತಾ॥ 22-23-24 ರಲ್ಲಿ ಎಳ್ಳು-ಎಣ್ಣೆ-ಸಂಗ್ರಹಿಸಿ 2 ನೇ ತಿಂಗಳಲ್ಲಿ ಮಾರಿದರೆ 2 ರಷ್ಟು ಲಾಭ, ಗೋವು-ಮೇಕೆ ಇವರಿಗೆ ಪೀಡೆ, ಜನಗಳಲ್ಲಿ ಪರಸ್ಪರ ವೈಷಮ್ಯ, ದುರ್ವ್ಯವಹಾರ, ಧನನಷ್ಟ, ಚಿನ್ನ-ಬೆಳ್ಳಿ-ತಾಮ್ರ ರೇಷ್ಮೆ-ಇವು ಈ ತಿಂಗಳಲ್ಲಿ ಕೆಲವು ದಿನ ಅಗ್ಗವಾಗಿ ಕೆಲವು ದಿನ ಹೆಚ್ಚು ಬೆಲೆಯಿಂದ ಕೂಡಿ ಮಾರಲ್ಪಡುವವು. ಬಿಳೀವಸ್ತ್ರಕ್ಕೆ ಸಾಧಾರಣ ಬೆಲೆ, ಗೋಧಿ-ಎಣ್ಣೆ-ತುಪ್ಪ ಉಪ್ಪು-ಸಕ್ಕರೆ-ಹೆಸರು ಇವುಗಳಿಗೆ ಹೆಚ್ಚು ಬೆಲೆ

ಮಾರ್ಗಶೀರ್ಷ 9-12-42 ರಿಂದ 6-1-43 ವರೆಗೆ

ಶುಕ್ಲಪಕ್ಷದಲ್ಲಿ ಪ್ರಜಾಸೌಖ್ಯ, ನವಣೆ-ಕೆಂಪುಕಾಳು-ಅಕ್ಕಿ-ಕಡಲೆ-ಕರಿಜೀರಿಗೆ-ಎಳ್ಳು-ಅಗಸೆ-ಕುಸುಬೆ-ಗೋಧಿ-ಹೆಸರು ಇವುಗಳಿಗೆ ಹೆಚ್ಚು ಬೆಲೆ, ಪಶುಪಕ್ಷಿಗಳಿಗೆ ಪೀಡೆ, ಬಿಳೀವಸ್ತ್ರ-ಕಂಚು-ಕರ್ಪೂರ-ತೆಂಗಿನಕಾಯಿ-ಕೊಬ್ಬರಿ-ಅಡಿಕೆ-ಚಿನ್ನ-ಬೆಳ್ಳಿ ಇವುಗಳಿಗೆ ಸಾಧಾರಣ ಬೆಲೆ.

ಕೃಷ್ಣಪಕ್ಷದಲ್ಲಿ ತಾ॥ 22-23-24 ರಲ್ಲಿ ಹತ್ತಿ-ನೂಲು-ತುಪ್ಪ-ಇವುಗಳನ್ನು ಸಂಗ್ರಹಿಸಿ 5 ನೇ ತಿಂಗಳಲ್ಲಿ ಮಾರಿದರೆ ಲಾಭ, ಜನ ಪಶು-ಪಕ್ಷಿ-ಮಕ್ಕಳು ಇವರುಗಳಿಗೆ ಹಾನಿ, 8 ವರ್ಷದ ಮಕ್ಕಳಿಗೆ ಪೀಡೆ, ಬೆಲ್ಲ-ಕಡಲೆ-ಹಲಸಂದೆ ಇವುಗಳಿಗೆ ಹೆಚ್ಚು ಬೆಲೆ

ಪುಷ್ಯ 7-1-43 ರಿಂದ 4-2-43 ವರೆಗೆ

ಶುಕ್ಲಪಕ್ಷದಲ್ಲಿ ಪ್ರಜೆಗಳಿಗೆ ಹೆಚ್ಚು ಸೌಖ್ಯ, ಗೋಧಿ-ತೊಗರಿ-ರಾಗಿ-ಹಲಸಂದೆ-ಕಡಲೆ ಇವುಗಳ ಮಾರಾಟದಿಂದ ಲಾಭ, ಕೇಸರಿ ಕರ್ಪೂರ-ಪರಿಮಳದ್ರವ್ಯ-ಪೀತಾಂಬರ ಇವುಗಳಿಗೆ ಹೆಚ್ಚು ಬೆಲೆ, ಹಸು-ಶೂದ್ರ-ಬ್ರಾಹ್ಮಣ ಮತ್ತು ಕ್ಷತ್ರಿಯರಿಗೆ ಪೀಡೆ, ಹಸುಗಳಲ್ಲಿ ಸ್ವಲ್ಪಹಾಲು-ಛತ್ರ-ಎಳ್ಳು-ತುಪ್ಪ-ಉದ್ದು ಇವುಗಳಿಗೆ ಹೆಚ್ಚು ಬೆಲೆ.

ಕೃಷ್ಣಪಕ್ಷದಲ್ಲಿ 11-12-13 ರಲ್ಲಿ ಛತ್ರ-ರಾಗಿ-ಜೋಳ ಸಂಗ್ರಹಿಸಿ 5 ನೇ ತಿಂಗಳಲ್ಲಿ ಮಾರಿದರೆ ಲಾಭ, ಕೋಮುವಾರು ಜಗಳ, ಅಲ್ಲಲ್ಲಿ ಉಷ್ಣಸಂಬಂಧವಾದ ವ್ಯಾಧಿಗಳು.

ಮಾಘ 5-2-43 ರಿಂದ 6-3-43 ವರೆಗೆ

ಶುಕ್ಲಪಕ್ಷದಲ್ಲಿ ಪ್ರಜೆಗಳಿಗೆ ಸೌಖ್ಯ, ಅಕ್ಕಿ-ರಾಗಿ-ಜೋಳ-ಗೋಧಿ ಈ ಪದಾರ್ಥಗಳು-ಅಗ್ಗವಾಗುವಿಕೆ, ಸರ್ಕಾರಕ್ಕೂ ಪ್ರಜೆಗಳಿಗೂ ಮನಸ್ತಾಪ, ಶುಭಕಾರ್ಯಗಳು, ಅರಿಶಿನ-ಕುಂಕುಮ-ಕೇಸರಿ ಪಚ್ಚಕರ್ಪೂರ-ಎಣ್ಣೆ-ತುಪ್ಪ ಇವುಗಳಿಗೆ ಹೆಚ್ಚು ಬೆಲೆ.

ಕೃಷ್ಣಪಕ್ಷದಲ್ಲಿ 20-21-22 ರಲ್ಲು ತೊಗರಿ-ಹೆಸರು-ಅವರೆ ಈ ಧಾನ್ಯಗಳನ್ನು ಸಂಗ್ರಹಿಸಿ 4 ನೇ ತಿಂಗಳಲ್ಲಿ ಮಾರಿದರೆ ಲಾಭ, ಪ್ರಜಾಕಲಹ, ಪಶು-ಶೂದ್ರ-ಬ್ರಾಹ್ಮಣ-ಗರ್ಭಿಣಿಯರು ಇವರುಗಳಿಗೆ ನಷ್ಟ.

ಫಾಲ್ಗುನ 7-3-43 ರಿಂದ 5-4-43 ವರೆಗೆ

ಶುಕ್ಲಪಕ್ಷದಲ್ಲಿ ಪ್ರಜೆಗಳಿಗೆ ರೋಗೋಪದ್ರವ, ಹೆಚ್ಚು ಬಿಸಿಲು, ಸಿಡುಬು, ಆಮಶಂಕೆ, ಉಷ್ಣಜ್ವರ ಮುಂತಾದವುಗಳ ಬಾಧೆ, ಚತುಷ್ಪಾತ್ತುಗಳಿಗೆ ಮತ್ತು ದನಕರುಗಳಿಗೆ ಹೆಚ್ಚು ಪೀಡೆ, ಪ್ರಜಾಕಲಹ.

ಕೃಷ್ಣಪಕ್ಷದಲ್ಲಿ 21-22-23 ರಲ್ಲಿ ಧಾನ್ಯಸಂಗ್ರಹಿಸಿ 4 ನೇ ತಿಂಗಳಲ್ಲಿ ಮಾರಿದರೆ ಲಾಭ, ಎಣ್ಣೆ-ಬೆಲ್ಲ-ಸಕ್ಕರೆ ಇವುಗಳಿಗೆ ಸಮಬೆಲೆ, ತೆಂಗಿನಕಾಯಿ-ಕೊಬ್ಬರಿ-ಹಿಪ್ಪಲಿ-ಜಾಯಿಕಾಯಿ-ಏಲಕ್ಕಿ ಕುಂಕುಮ ಇವುಗಳಿಗೆ ಹೆಚ್ಚು ಬೆಲೆ, ರಾಜಕ್ಲೇಶ, ಶೂದ್ರ-ಪಶು-ಬ್ರಾಹ್ಮಣ ಇವರಿಗೆ ಪೀಡೆ, ಮೈಸೂರು-ಚಾಮರಾಜನಗರ-ಶಿವಮೊಗ್ಗ-ಚಿತ್ರದುರ್ಗ-ಮಂಡ್ಯ ಈ ಸ್ಥಳಗಳಲ್ಲಿ ಹದವಾದ 1-2 ಮಳೆ.

॥ ಸರ್ವೇಜನಾಸ್ಸುಖಿನೋಭವನ್ತು ॥

ಸಾರಾಂಶ—ಒಟ್ಟಿನಲ್ಲಿ ಈ ಸಂವತ್ಸರದಲ್ಲಿ ಸರ್ವತ್ರ ಒಳ್ಳೆ ಮಳೆ ಮತ್ತು ಬೆಳೆಗಳಾಗುವುದರಿಂದ ಸುಭಿಕ್ಷವು. ಪ್ರಜೆಗಳ ಮನಸ್ಸಿಗೆ ಚಾಂಚಲ್ಯ, ಕೆಲವು ಸ್ಥಳಗಳಲ್ಲಿ ಮಂದವೃಷ್ಟಿಯೂ, ರೋಗೋಪದ್ರವಗಳೂ ಕೋಮುವಾರು ಜಗಳಗಳೂ ಧನಿಕರಿಗೆ ಹೆಚ್ಚು ಧನವ್ಯಯವೂ, ದೊಡ್ಡ ಕಟ್ಟಡಗಳಿಗೆ ಆಕಸ್ಮಿಕವಾದ ನಷ್ಟವೂ, ಪ್ರಜೆಗಳಿಗೂ ಮತ್ತು ಸರ್ಕಾರದವರಿಗೂ ವಿವಾದಗಳು-ಕೆಲವೆಡೆ ಬಹಳ ಪರೀಕ್ಷೆ ಕಳವು-ಅಗ್ನಿಭಯ-ದುರ್ಮರಣ-ದ್ವೀಪಾಂತರದಲ್ಲಿ ಯುದ್ಧಗಳೂ ಅಸಂಖ್ಯಾತ ಪ್ರಾಣನಷ್ಟಗಳೂ ಸಂಭವಿಸುವವು.

ಪ್ರಕೃತ ಯುದ್ಧದಿಂದ ಕರ್ನಾಟಕದೇಶಾಧಿಪತ್ಯಕ್ಕೆ ಯಾವ ವಿಧವಾದ ತೊಂದರೆಯೂ ಇಲ್ಲವೆ ನಿಸ್ಸಂದೇಹವಾಗಿರುವುದು.

ಈ ಪ್ರಕಾರ ಶಾಸ್ತ್ರದಿಂದ ಕಂಡುಬಂದಿರುವ ವಿಷಯಗಳು ಯಥಾವತ್ತಾಗಿ ಸೂಚಿಸಲ್ಪಟ್ಟಿರುತ್ತವೆ.

ಕಡೂರು ಶೇಷಾಚಾರ್ಯ ಜ್ಯೋತಿಷರತ್ನಂ ಆಸ್ಥಾನ ಮಹಾವಿದ್ವಾನ್
ಜ್ಯೋತಿಶ್ಶಾಸ್ತ್ರ ಪ್ರಧಾನೋಪಾಧ್ಯಾಯ ಸಂಸ್ಕೃತ
ಮಹಾಪಾಠಶಾಲಾ

ಟಿ ವಿ. ನರಸಿಂಹಾಚಾರ್ಯ ಆಸ್ಥಾನ ಜ್ಯೋತಿಷವಿದ್ವಾನ್,
ಶ್ರೀನೃಸಿಂಹ ಜ್ಯೋತಿರ್ವಿದ್ಯಾಲಯ 9, ಸ್ಯಾಗಂಟಿರೋಡ್,
ಕೃಷ್ಣರಾಜಮೊಹಲ್ಲಾ, ಮೈಸೂರು

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಭಸ್ಮಗಳು.

ಔಷಧ ಹೆಸರು	ತೊಲಿ	ಮೂಲ್ಯ
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹಿತ್ತಾಳಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಾಭಸ್ಮ	೧	೦—೧೨—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೩೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್, ಓಖಿಮಠ, ಜಿಲ್ಲಾ, ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಶಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ; ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯುಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿಂಗಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರ ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೨೦×೨೪ ಬೆಲೆ	—೧—೬
ಸದ್ಯಃ [illegible] ಇರುವ ಫೋಟೋ ಸೈಜು [illegible]	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು [illegible]	—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು [illegible]	—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರ [illegible]	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ [illegible] ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ [illegible] ಧಾರಣಮಾಡಿ [illegible]	೦—೦—೯
ಶ್ರೀ [illegible] ಫೋಟೋ	೦ ೦ ೯
ಶ್ರೀಶೈಲಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು [illegible] ಫೋಟೋ	—೦ ೯
ಶ್ರೀ ಕಾಶೀ [illegible] ಶ್ರೀ ಜಗದ್ಗುರು [illegible]	—೦—೯
ಶ್ರೀವೀರ ಸಿಂಹಾಸನಾಧೀಶ [illegible]	೦—೦—೯
ಶ್ರೀ [illegible] ಫೋಟೋ	೦—೯
ಶ್ರೀಮದುಜ್ಜಯಿನೀ [illegible] ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೬—೯
ಶ್ರೀ ಜಗದ್ಗುರು [illegible]	೦—೦—೯
ಶ್ರೀ ಜಗದ್ಗುರು ಉಜ್ಜಯಿನಿ [illegible] ಫೋಟೋ	—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಫೋಟೋ [illegible]	೦—೦—೯
ಹಿಮವತ್ಕೇದಾರ [illegible] ಫೋಟೋ	—೯
ಶ್ರೀರಂಭಾಪುರೀ ಜಗದ್ಗುರು [illegible] ಫೋಟೋ	೦— —೯
ಬೆಂಗಳೂರಿನ [illegible] ಫೋಟೋ	೦—೦—೯

ಸೂಚನೆ—[illegible] ಕಳುಹಿಸುವವರಿಗೆ [illegible] ಫೋಟೋಗಳನ್ನು [illegible] ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಜನಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸ[illegible] ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ೬ ಆಣೆ ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[41] ಪೋ ಬಾ ೫೨೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಕನ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೨ ಆಣೆ
ಪಂಚವಿಂಶತಿ ಪ್ರಶ್ನೋತ್ತರ (೩ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಕನ್ಯಾಶಾಸ್ತ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಪಾಕೆಟ್‌ಸೈಜು)	೬ ಆಣೆ
ವೀರಶೈವಮಹಾತ್ಮರು	೬ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೭ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ಸ್ಥಿರಚಿತ್ರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರದ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु
वीरशैवाचार (मराठी)	१ रु
महानारायणोपनिषत् (वीरशैवभाष्य-संस्कृत)	१ रु
पुरुषसूक्तम् (वीरशैवप्राचीनभाष्योपेतम्)	४ आ
नन्दिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿಪ್ರಕಟಿಸಲ್ಪಟ್ಟಿತು.

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರೀಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೩ನೇ ಮಾರ್ಚಿ ೧೯೪೨ [ಸಂಚಿಕೆ ೪೭

ಶಿವಾಗಮಸಂಗ್ರಹಃ

ಈ ಗ್ರಂಥವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ **ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮ**ಗಳೆಂಬ ನಾಲ್ಕು ಶಿವಾಗಮಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ, ಇದಕ್ಕೆ **“ ಶಿವಾಗಮಸಂಗ್ರಹ ”** ಎಂಬ ಹೆಸರನ್ನಿಡಲಾಗಿದೆ ಈ ನಾಲ್ಕು ಶಿವಾಗಮಗಳಲ್ಲಿ ವೀರಶೈವಮತದ ಪ್ರಾಚೀನ ಧರ್ಮಗಳು ಬಹು ಹೃದಯಂಗಮವಾಗಿ ವಿವರಿಸಲ್ಪಟ್ಟಿರುವವು ವೀರಶೈವಮತದ ಸರ್ವಸ್ವವೇ ಇವುಗಳಲ್ಲಿ ಅಡಗಿರುವದು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ವಿಶೇಷ ಪ್ರಯತ್ನದಿಂದ ಇವುಗಳನ್ನು ಸಂಗ್ರಹಿಸಿ ಚನ್ನಾಗಿ ಪರಿಶೋಧಿಸಿ ಅತ್ಯಂತ ಸುಂದರವಾಗಿ ಮುದ್ರಿಸಿ ಪ್ರಕಟಿಸಿದ್ದಾರೆ ಇಂತಹ ಸರ್ವೋತ್ತಮ ಶಿವಾಗಮಗಳು ಈಗ ಪ್ರಕಾಶಕ್ಕೆ ಬಂದಿರುವುದು ಈ ಮತದ ಪುಣ್ಯವಿಶೇಷವೆಂದೇ ಹೇಳಬೇಕಾಗಿದೆ ಈ ಶಿವಾಗಮಗಳು ಸಧ್ಯಃ ಟೀಕೆಯಿಲ್ಲದೆ ಮೂಲ ಮಾತ್ರ ಮುದ್ರಿತವಾಗಿವೆ ಪ್ರತಿಯೊಬ್ಬರೂ ಈ ಪೂಜ್ಯಗ್ರಂಥಗಳನ್ನು ತರಿಸಿಕೊಂಡು ಇವುಗಳಲ್ಲುಕ್ತವಾಗಿರುವ ಪ್ರಾಚೀನ ಪವಿತ್ರಧರ್ಮಗಳನ್ನು ತಿಳಿದು ಅದರಂತೆ ಆಚರಿಸಿ ಪರಶಿವನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ ಮನೋಹರವಾದ ಮುದ್ರಣ ! ಸುಂದರವಾದ ಬೈಂಡು ! **ಬೆಲೆ ೨ ರೂಪಾಯಿ**

ಪಂಚಾಚಾರಪ್ರಕಾಶಿಕಾ

ಇದರಲ್ಲಿ ವೀರಶೈವರು ಮುಖ್ಯವಾಗಿ ಆಚರಿಸತಕ್ಕ ೬೪ ಶೀಲಗಳು ಹೃದಯಂಗಮವಾಗಿ ವರ್ಣಿತವಾಗಿವೆ ಚಂದ್ರಜ್ಞಾನಾಗಮದ ೯ನೆಯ ಪಟಲದಲ್ಲಿ ಈ ಶೀಲಗಳು ಉಕ್ತವಾಗಿರುವುದರಿಂದ ಇದನ್ನು ಪ್ರತ್ಯೇಕವಾಗಿ ಕನ್ನಡ ಟೀಕೆಯೊಡನೆ ಮುದ್ರಿಸಿದ್ದಾಗಿದೆ **ಬೆಲೆ ೨ ಆಣೆ**

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ನಾನಾವಿಧ ಬಣ್ಣಗಳಿಂದ ಮನೋಹರವಾಗಿ ಮುದ್ರಿತವಾಗಿರುವ

ನೂತನ ಫೋಟೋಗಳು

ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ (ಸೈಜು ೧೪×೧೦) ಬೆಲೆ ೪ ಆಣೆ
(ಅತ್ಯಂತ ಸುಂದರವಾದುದು.)

ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ಸೈಜು ೬×೧೦) ,, ೨ ಆಣೆ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಸ್ವೀಕಾರ.

ಕಲ್ಮನೆಗ್ರಾಮದ ಫಕೀರಯ್ಯನವರ ಪುತ್ರ ಚಿ॥ ಬಸಯ್ಯನಿಗೆ ಕೊಲ್ಲಿಪಾಕಿಮಠದ ನಾಗೇಂದ್ರಸ್ವಾಮಿ ಪುತ್ರಿ ಚಿ॥ ಸೌ॥ ಶಾರದಾಂಬೆಯನ್ನು ಕೊಟ್ಟು ಬೆಂಗಳೂರು ಮಹಾಂತಿನಮಠದಲ್ಲಿ ಬೆಂಗಳೂರಿನ ಸುಪ್ರಸಿದ್ಧ ವ್ಯಾಪಾರಿಗಳಾದ ಯಜಮಾನ ಕೆಂಚಪ್ಪ ಸಹೋದರರು ಧರ್ಮಾರ್ಥವಾಗಿ ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **2-8-0**ರೂ ಗಳನ್ನು ಕಳುಹಿಸಿದ್ದಾರೆ

ತಿಪ್ಪೂರುನಿವಾಸಿಗಳಾದ ವುಡೇನೂರು ರಾಣೇಬೆನ್ನೂರು ಮಳೇಮಠದ ವೇ॥ ಮಲ್ಲಿಕಾರ್ಜುನಾರಾಧ್ಯರು ತಾ॥ 6 3 1942 ರಲ್ಲಿ ಸ್ವಾತೀನಕ್ಷತ್ರ 2 ನೆಯ ಚರಣದಲ್ಲಿ ಜನಿಸಿದ ತಮ್ಮ ಪುತ್ರನಿಗೆ ರೇಣುಕಾಚಾರ್ಯನೆಂದು ನಾಮಕರಣಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ **1** ರುಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಲಕ್ಷ್ಮೇಶ್ವರ ತಾಲೂಕು ವನಸಿಗ್ಗಲ ಗ್ರಾಮದಲ್ಲಿ ನೆರವೇರಿದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಸಮಯದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯಭಜನ ಸಂಘವನ್ನು ಸ್ಥಾಪಿಸಿದುದಕ್ಕಾಗಿ ವೇ॥ ಸಂಗಯ್ಯನವರು ಕೂಡ್ಲಮಠ ಇವರು ಪ್ರಭಾಪೋಷಣಕ್ಕೋಸ್ಕರ **1** ರೂಪಾಯಿಯನ್ನು ಸಮರ್ಪಿಸಿ ಕಳಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಲಾರ್ಡ್ ಹ್ಯಾಲಿಫಾಕ್ಸರ ಭಾಷಣ

ಅಮೆರಿಕೆಯಲ್ಲಿ ಬ್ರಿಟಿಷ್ ರಾಯಭಾರಿಗಳಾಗಿರುವ ಲಾರ್ಡ್ ಹ್ಯಾಲಿಫಾಕ್ಸರವರು ಅಮೆರಿಕನರನ್ನು ಕುರಿತು ರೇಡಿಯೋ ಮೂಲಕ ಭಾಷಣಮಾಡುತ್ತ—

“ಬ್ರಿಟನ್ನಿನಲ್ಲಿ ಸಂಗ್ರಾಮವಸ್ತುಗಳ ಸೃಷ್ಟಿಯು ಬಹಳ ಹೆಚ್ಚಿದೆಯೆಂದೂ, ಕಳೆದ ಆಗಸ್ಟಿನಲ್ಲಿ ತಯಾರಿಸುತ್ತಿದ್ದುದಕ್ಕಿಂತ ಈಗ ಎರಡರಷ್ಟು ಟ್ಯಾಂಕುಗಳನ್ನು ತಯಾರಿಸಲಾಗಿದೆಯೆಂದೂ, ಈ ವರ್ಷ ಹಗುರವಾದ ಟ್ಯಾಂಕುಗಳ ಉತ್ಪತ್ತಿಯು ೧೯೪೧ರ ಅಂತ್ಯದಲ್ಲಿದ್ದುದಕ್ಕೆ ಏಳರಷ್ಟಾಗುವುದೆಂದೂ, ಜರ್ಮನರು ಫ್ರಾನ್ಸಿನಲ್ಲಿ ಆಕ್ರಮಿಸಿರುವ ಸ್ಥಾನಗಳಮೇಲೆ ಇನ್ನು ಮುತ್ತಿಗೆಗಳು ಹೆಚ್ಚುವವೆಂದೂ, ಈ ಮುತ್ತಿಗೆಗಳಿಂದ ಜರ್ಮನರಿಗೆ ಬಹಳ ಕಷ್ಟವಾಗುವುದೆಂದೂ, ನಾವು ಯಾವಾಗ, ಎಲ್ಲಿ ಏಟು ಹಾಕುವೆವು ಎಂಬುದು ಅವರಿಗೆ ಗೊತ್ತಿರುವುದಿಲ್ಲವೆಂದೂ, ಅಲ್ಲದೆ ನಮ್ಮ ಬಲವೆಷ್ಟಿರುವುದೆಂಬುದು ಸಹ ಅವರಿಗೆ ತಿಳಿದಿರುವುದಿಲ್ಲವೆಂದೂ, ಆದ್ದರಿಂದ ಅವರು ಅಪಾರ ಸೇನೆಯನ್ನು ಪಶ್ಚಿಮ ಯೂರೋಪಿನಲ್ಲಿ ಕೆಲಸವಿಲ್ಲದೆ ಇಡಬೇಕಾಗಿದೆಯೆಂದೂ, ಮುಂದಿನ ಬೇಸಿಗೆಯಲ್ಲಿ ಮಧ್ಯಪೂರ್ವದ ಪರಿಸ್ಥಿತಿಯು ವಿಷಮಿಸುವುದೆಂದೂ” ಹೇಳಿದರು

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ಜೀವದ ಮೇಲಿನ ಮಮತೆ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ಮಳೆಮಠ ಮುದೇನೂರು.

ಜೀರ್ಯಂತಿ ಜೀರ್ಯತಃ ಕೇಶಾ ದಂತಾ ಜೀರ್ಯಂತಿ ಜೀರ್ಯತಃ ।
ಜೀವನಾಶಾ ಧನಾಶಾ ಚ ಜೀರ್ಯತೋಽಪಿ ನ ಜೀರ್ಯತಿ ॥

ಎಂಬ ಸುಭಾಷಿತವಾಕ್ಯದಂತೆ ಮನುಷ್ಯನು ಮುಪ್ಪಿದಂತೆ ಅವನ ಕೂದಲು ಬೆಳ್ಳಗಾಗುತ್ತ ಹೋಗಿ ಹಲ್ಲುಗಳು ಬೀಳಹತ್ತುತ್ತವೆ. ಆದರೆ ಇನ್ನೂ ನಾಲ್ಕಾರುಕಾಲ ಜೀವಿಸಿರಬೇಕೆಂಬ ಆಶೆಯೂ, ಮತ್ತಿಷ್ಟು ಹಣ ಗಳಿಸಬೇಕೆಂಬ ಹಂಬಲವೂ ಮಾತ್ರ ಬೆಳೆಯುತ್ತ ಹೋಗುತ್ತವೆ.

ಆಯುಷ್ಯದ ಸುಖಗಳನ್ನು ಕಡಿಮೆಮಾಡುವ ವಾರ್ಧಕ್ಯವು ಜೀವನಾಶೆಯನ್ನು ಮಾತ್ರ ಹೆಚ್ಚಿಸುತ್ತದೆ. ತಾರುಣ್ಯದ ಭರದಲ್ಲಿ ನಾವು ವಾಡಿಕೆಯಾಗಿ ದುರ್ಲಕ್ಷಿಸುವ ಭಯಗಳೇ ಮುಪ್ಪಿನಕಾಲದಲ್ಲಿ ಅತಿ ಭಯಾನಕವಾಗಿ ತೋರುತ್ತವೆ. ನಮ್ಮ ದಿವಸಗಳು ಕಳೆದಹಾಗೆ ನಾವು ಎಚ್ಚರಗೊಳ್ಳುತ್ತೇವೆ. ಮುಂದೆ ನಮ್ಮ ಗತಿಯು ಏನಾಗುವದೆಂಬ ಪ್ರಬಲವಾದ ಭೀತಿಯು ನಮ್ಮ ಮನಸ್ಸಿನಲ್ಲಿ ಯಾವಾಗಲೂ ಕಡೆಯಹತ್ತುತ್ತದೆ. ಮತ್ತು ನಮ್ಮ ಆಯುರ್ದಾಯದ ಉಳಿದ ಅಲ್ಪಭಾಗದಲ್ಲಿ ನಮ್ಮ ಜೀವನವನ್ನು ತಡೆಯಿಲ್ಲದೆ ಸಾಗಿಸುವ ಹವಣಿಕೆಯಲ್ಲಿ ನಾವು ಒಂದೇಸವನೆ ತೊಡಗಿರುತ್ತೇವೆ.

ನಮ್ಮ ಸುತ್ತಮುತ್ತಲಿರುವ ವಸ್ತುಗಳನ್ನು ನಾವು ಹೆಚ್ಚುಹೆಚ್ಚು ನೋಡಿದಂತೆ ಅವುಗಳಬಗ್ಗೆ ನಮ್ಮ ಪ್ರೀತಿಯು ಹೆಚ್ಚಾಗುತ್ತದೆ. ಅವುಗಳನ್ನು ಮನಸ್ಸಿನೊಳಗಿಂದ ಹೊರದೂಡುವುದು ನಮ್ಮಿಂದಾಗದ ಮಾತು. ಅದರಂತೆಯೇ ಮುದುಕರ ಮನಸ್ಸಿನಲ್ಲಿ ತಮ್ಮಲ್ಲಿರುವ ಪ್ರತಿಯೊಂದು ವಸ್ತುವಿಗೋಸ್ಕರ ಲೋಭವೂ, ವಿಶೇಷವಾಗಿ ಜೀವದಮೇಲಿನ ಮಮತೆಯೂ ಹುಟ್ಟುತ್ತವೆಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. ಎಂಬತ್ತು ತೊಂಬತ್ತು ವಯಸ್ಸಾದವರಲ್ಲಿ ಮೇಲ್ಕಂಡ ಸ್ವಭಾವಗಳು ಪ್ರತ್ಯಕ್ಷ ಕಾಣುತ್ತವೆ. ಯಾಕೆಂದರೆ ಈ ಪ್ರಪಂಚದಲ್ಲಿ "ತನಗಿಂತ ಪ್ರಿಯವಾದ ವಸ್ತುವಿನ್ನೊಂದುಂಟೆ?' ಎಂಬ ನಿಜಗುಣರ ವಾಕ್ಯದಂತೆ ಜೀವದಷ್ಟು ಪ್ರಿಯಕರವಾದ ವಸ್ತುವು ಬೇರೆ ಯಾವುದೂ ಇಲ್ಲ. ಒಂದು ತಗಣಿ, ಇರುವೆ, ಚೇಳು, ಸೊಳ್ಳೆ, ಹೇನು ಇತ್ಯಾದಿ ಕ್ಷುದ್ರಕೀಟಗಳು ತಮ್ಮ ಜೀವರಕ್ಷಣೆಗಾಗಿ ಯತ್ನಿಸುತ್ತಿರುವುದು ಪ್ರತ್ಯಕ್ಷ ಕಾಣುತ್ತದೆ. ಜನನಾರಭ್ಯ ಮರಣಪರ್ಯಂತ ಜೀವವೆಂಬ ವಸ್ತುವು ನಮ್ಮ ಸಂಗಡಲೇ ನಿರಂತರವಾಗಿ ಇರುವುದರಿಂದಲೂ, ಮಿಕ್ಕ ವಸ್ತುಗಳು ಇಷ್ಟು ನಿಕಟವಾಗಿಯೂ ನಿರಂತರವಾಗಿಯೂ ನಮ್ಮ ಬಳಿಯಲ್ಲಿ ಇರುವದಿಲ್ಲವಾದ್ದರಿಂದಲೂ ನಮ್ಮಲ್ಲಿ ಅದರ ಸಲುವಾಗಿ ಇಷ್ಟು ಮಮತೆಯು ಹುಟ್ಟುವುದು ಸ್ವಾಭಾವಿಕವಾದದ್ದೇ ಸರಿ. ಇದಲ್ಲದೆ ಕಳೆದುಹೋದ ದಿವಸಗಳಿಗೂ ಮುಂದೆಬರುವ ದಿವಸಗಳಿಗೂ ಹೋಲಿಸಿ ನೋಡಲು, ವಸ್ತುತಃ ಭವಿಷ್ಯಕಾಲವು ಬಹು ಭಯಾನಕವಾಗಿ ತೋರುವುದು. ಕಳೆದುಹೋದ ಜೀವಿತದಲ್ಲಿ ನಮಗೆ ಸುಖಪ್ರಾಪ್ತಿಯಾಗಿರುವುದೆಂತಲೂ, ಮುಂದೆ ಆಗುವ ಸುಖಗಳಿಗಿಂತಲೂ ಹಿಂದೆ ಆದ ಸುಖಗಳೇ ಹೆಚ್ಚಿನವೆಂತಲೂ ಅನುಭವದಿಂದ ಸಿದ್ಧವಾಗುತ್ತದೆ. ಆದರೂ ಅಜ್ಞಾನವು ಮುಂದೆ ಇನ್ನೂ ಹೆಚ್ಚಿನ ಸುಖವಿದ್ದೀತೆಂದು ಸುಮ್ಮನೆ ಆಶೆ ತೋರಿಸಿ ಭಾವಿಸುಖಗಳನ್ನು ಬಹುಅಂದವಾಗಿ ತೋರಿಸಿ ಮೃಗಜಲದಂತೆ ನಮ್ಮನ್ನು ವಂಚಿಸುವುದು. ದುಷ್ಟನಾದ ಮಾರೀಚ ರಾಕ್ಷಸನು ಕಪಟದ ಹೊನ್ನೆರಳೆಯ ರೂಪವನ್ನು ತಾಳಿ ಸಾತ್ವಿಕಳೂ ಸರಳಳೂ ಆದ ಸೀತಾದೇವಿಯನ್ನು ವಂಚಿಸಿದಂತೆ, ಭಾವಿಸುಖವೆಂಬ ಮಾಯೆಯು ತನ್ನನ್ನು ಹಿಂಬಾಲಿಸುವುದಕ್ಕೆ ನಮಗೆ ಒತ್ತಾಯಮಾಡುವುದು. ಸೋತಹಾಗೆ ಜೂಜಾಡುವವರಿಗೆ ಇನ್ನೂ ಆಡಬೇಕೆಂಬ ಅಭಿಲಾಷೆಯು ಹೆಚ್ಚುಹೆಚ್ಚು ಬೆಳೆಯುವಂತೆ ಪ್ರಾಪಂಚಿಕ ಎಷ್ಟು ತೊಡರುಗಳಿಂದ ಬೇಕಾದಷ್ಟು ನಿರಾಶೆಯನ್ನು ಹೊಂದಿದರೂ ಕಣ್ಣೀರಿನ ಕೋಡಿಯನ್ನು ಹರಿಸಿದರೂ ಭವಿಷ್ಯ ಸುಖಭ್ರಾಂತಿಯು ಕಡಿಮೆಯಾಗದೆ ಮತ್ತಿಷ್ಟು ಹೆಚ್ಚಾಗುತ್ತ ಹೋಗುವುದು. ಆದಪ್ರಯುಕ್ತ ಜೀವದ ಮೇಲಿನ ಮಮತೆಯಾದರೂ ಹೆಚ್ಚಾಗುತ್ತ ಹೋಗುವುದು. ಅದಕ್ಕೊಂದು ದೃಷ್ಟಾಂತವುಂಟು :—

ಚೀನದೇಶದ "ಚೆನಸ್ಸ್ಯಾಂಗ" ನೆಂಬ ರಾಜನು ಪಟ್ಟವೇರಿದನಂತರ ಸೆರೆಯಲ್ಲಿಡಲ್ಪಟ್ಟ ಜನರನ್ನು ಬಿಡುಗಡೆ ಮಾಡಿದನು. ಆಗ್ಗೆ ಸೆರೆಮನೆಯಿಂದ ಬಿಡುಗಡೆ ಮಾಡಿದ ರಾಜನನ್ನು ಕಾಣಲಿಕ್ಕೆ ಬಂದ ಬಂದಿಗಳಲ್ಲೊಬ್ಬ ಮುದುಕನು ರಾಜನ ಕಾಲಿಗೆರಗಿ ಗಂಭೀರಭಾವದಿಂದ ನುಡಿದದ್ದೇನೆಂದರೆ "ಜೀಯಾ, ನನಗೆ ಏನಿಲ್ಲೆಂದರೂ ಎಂಬತ್ತು ವರ್ಷಗಳಾಗಿವೆ. ನಾನು ಯಾವ ತಪ್ಪಿಗೂ ಗುರಿಯಾಗಿಲ್ಲವಾದರೂ ನನ್ನನ್ನು ಸೆರೆಯಲ್ಲಿಟ್ಟು ಐವತ್ತು ವರ್ಷಗಳಾದವು. ನಾನು ಇಷ್ಟು ದೀರ್ಘಕಾಲದವರೆಗೆ ಏಕಾಂತವಾದ ಕತ್ತಲೆಯ ಕೋಣೆಯೊಳಗೆ ಇದ್ದುದರಿಂದ ಕತ್ತಲೆಯಲ್ಲಿಯೇ ಇರುವ ಅಭ್ಯಾಸವು ನನಗೆ ಉಂಟಾಗಿದೆ. ನಿಮ್ಮ ದಯದಿಂದ ಇಂದು ಬಿಡುಗಡೆಯನ್ನು ಹೊಂದಿ ಕಣ್ಣು ಕುಕ್ಕುವ ಬಿಸಿಲಲ್ಲಿ ಬೀದಿಯೊಳಗೆ ತಿರುಗಾಡಿ ನೋಡಲು, ನನ್ನ ಮನೆಯವರೂ ಆಪ್ತೇಷ್ಟರೂ ಜೀವಿಸಿಲ್ಲ. ಯಾರೂ ನನ್ನ ಗುರ್ತು ಹಿಡಿಯಲಾರರು. ಇನ್ನು ಮುಂದೆ ಬಹು ದಿವಸ ಬದುಕಿರಲಾರೆ. ಆದಕಾರಣ ಈವರೆಗೆ ನಾನಿದ್ದ ಕತ್ತಲೆಯ ಕೋಣೆಯೊಳಗೇ ನನ್ನನ್ನು ಪುನಃ ಇರಿಸುವುದಕ್ಕೆ ಅಪ್ಪಣೆಯಾಗಬೇಕೆಂದು ಬೇಡಿಕೊಳ್ಳುತ್ತೇನೆ. ನನಗೆ ಅರಮನೆಯ ಸುಂದರವಾದ ಗೋಡೆಗಳಿಗಿಂತಲೂ ಕತ್ತಲೆಯ ಕೋಣೆಯ ಗೋಡೆಗಳೇ ಹೆಚ್ಚು ಸ್ವಚ್ಛವಾಗಿಯೂ ಅಂದವಾಗಿಯೂ ಕಾಣುತ್ತವೆ"

ಪ್ರಿಯವಾಚಕರೇ! ಸೆರೆಮನೆಯ ಸಲುವಾಗಿ ಆ ಮುದುಕನ ಪ್ರೀತಿಯು ಈ ಬಗೆಯಾಗಿದ್ದ ಕಾರಣವೇನು? ಸೆರೆಮನೆಯ ಏಕಾಂತವಾಸವನ್ನು ಯಾರಾದರೂ ಬಯಸುವರೋ? ಆದರೂ ಆ ಸ್ಥಳದಲ್ಲಿಯೇ ದೀರ್ಘಕಾಲ ಇದ್ದುದರಿಂದ ಅದರ ಮಮತೆಯು ಅವನಲ್ಲಿ ಈ ರೀತಿಯಾಗಿ ಹುಟ್ಟಿತು. ಅದರಂತೆಯೇ ನಮ್ಮ ಮಡದಿಮಕ್ಕಳೂ, ನಾವು ಹಾಕಿದ ಗಿಡಬಳ್ಳಿಗಳೂ, ಕಟ್ಟಿದ ಮನೆಮಠಗಳೂ, ಸಂಪಾದಿಸಿದ ಹಣಕಾಸುಗಳೂ ನಮ್ಮ ಮತ್ತು ಭೂಮಿಯ ನಡುವಿರುವ ಸಂಬಂಧವನ್ನು ಹೆಚ್ಚು ಸವಿಸ್ತಾರವಾಗಿ ಮಾಡುವುದಕ್ಕೂ ಅದರಿಂದಾಗುವ ವಿಯೋಗವನ್ನು ದುಃಸಹವಾಗಿ ಮಾಡುವುದಕ್ಕೂ ಕಾರಣವಾಗಿರುತ್ತವೆ. ನಮ್ಮ ವಯಸ್ಸು ಕಳೆದಹಾಗೆ ನಮ್ಮ ಇಂದ್ರಿಯಗಳು ಶಿಥಿಲವಾಗುವವಲ್ಲದೆ ನಮ್ಮ ಜೀವವೂ ಸಹ ಹಳೇ ಗೆಳೆಯನಂತೆ ತೋರುವುದು. ಅದರಿಂದ ಮತ್ತೇನೂ ಸುಖವಿಲ್ಲದಿದ್ದರೂ ಅದನ್ನೇ ಅಧಿಕವಾಗಿ ಪ್ರೀತಿಸುವೆವು, ಮತ್ತು ಸುಖ ಲೇಶವಿಲ್ಲದಿದ್ದರೂ ಈ ಜಗತ್ತನ್ನು ಬಿಟ್ಟು ತೆರಳುವಾಗ ಅತಿ ಘೋರವಾದ ವೇದನೆಯಲ್ಲಿ ಮುಳುಗಿ ದಡವನ್ನು ಕಾಣದೆ ಕಣ್ಣುಬಾಯಿ ಬಿಡುತ್ತ ಬಳಲುವೆವು. ಆದಪ್ರಯುಕ್ತ ವಿವೇಕವಂತನು ತನ್ನ ಅನಿತ್ಯವಾದ ಜೀವವನ್ನು ಮರೆತು, ಪೃಥ್ವೀಸಂಬಂಧವಾದ ವಿಷಯಾದಿಗಳಲ್ಲಿ ಮೂಢನಾಗಿರಬಾರದು. ನಾನು ಯಾರು? ಈ ಶರೀರವು ನನಗೇನು ಸಂಬಂಧವು? ನಾನು ಯಾವ ಸ್ಥಾನದಿಂದ ಬಂದೆ? ನನ್ನನ್ನು ಇಲ್ಲಿಗೆ ತಂದವನಾರು? ಯಾವನಿಗೋಸ್ಕರ ನಾನಿಲ್ಲಿರುತ್ತಿದ್ದೇನೆ? ಎಲ್ಲಿಗೆ ಹೋಗುತ್ತಿದ್ದೇನೆ? ಒಂದು ಕಾಲದಲ್ಲಿ ಸುಖವೂ, ಮತ್ತೊಂದು ಕಾಲದಲ್ಲಿ ದುಃಖವೂ, ಒಂದು ಕಾಲದಲ್ಲಿ ಸಂಪತ್ತೂ, ಮತ್ತೊಂದು ಕಾಲದಲ್ಲಿ ವಿಪತ್ತೂ, ಒಂದು ಕಾಲದಲ್ಲಿ ಸಂತೋಷವೂ, ಮತ್ತೊಂದು ಕಾಲದಲ್ಲಿ ಗೋಳಾಟವೂ ನಮ್ಮಲ್ಲಿಯೇ ಹುಟ್ಟಿ ನಮ್ಮಲ್ಲಿಯೇ ಲಯವಾಗುತ್ತಿರುತ್ತವೆ. ಎಂಬೀ ವಿಚಾರಗಳನ್ನು ವಿವೇಕ ವಿಚಾರಗಳಿಂದ ತಿಳಿದು ಪ್ರಿಯಕಾರ್ಯಲಾಭದಲ್ಲಿ ವಿಶೇಷವಾಗಿ ಹಿಗ್ಗದೆ ಅಪ್ರಿಯಕಾರ್ಯಪ್ರಾಪ್ತಿಯಲ್ಲಿ ಬಹುವಾಗಿ ತಗ್ಗದೆ, ಸುಖದುಃಖಗಳು ಕತ್ತಲೆ ಬೆಳ್ದಿಂಗಳಂತೆ ಅನಿತ್ಯಗಳೆಂದು ದ್ವಂದ್ವಾಭಾವ ಕಾಲದಲ್ಲಿ ಚಿತ್ತಚಾಂಚಲ್ಯವಂ ಹೊಂದದೆ ಧರ್ಮಾಚರಣೆಯುಳ್ಳವನಾಗಿರಬೇಕು. ಇಂತಹ ಶಾಸ್ತ್ರಸಜ್ಜನ ಸಮ್ಮತವಾದ ಸುಗಮವಾದ ಮಾರ್ಗವನ್ನತಿಕ್ರಮಿಸಿ, ಶ್ರೇಷ್ಠವಾದ ಮನುಷ್ಯ ಜನ್ಮವನ್ನು ಹೊಂದಿಯೂ, ಇಂದ್ರಿಯಗಳ ಶ್ರೇಷ್ಠತ್ವವಂ ಹೊಂದಿಯೂ, ಆತ್ಮಹಿತವಾದ ಕಾರ್ಯವನ್ನು ಯಾವನು ತಿಳಿದುಕೊಳ್ಳಲಾರನೋ, ಅವನು ಆತ್ಮಘಾತಕನಾಗುವನು. ಇದು ಮನುಷ್ಯಜನ್ಮಕ್ಕೆ ಬಹು ಅವಹೇಳನವು. ಮುಖ್ಯವಾಗಿ ಅನ್ನವೂ, ಪಾನವೂ, ದೇಹಸಂಬಂಧವಾದ ಜೀವನವನ್ನು ರಕ್ಷಣೆ ಮಾಡುವಂತೆ ಪುಣ್ಯಕಾರ್ಯದಿಂದ ಆತ್ಮಜೀವನವು ರಕ್ಷಿಸಲ್ಪಡಬೇಕು.

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ॥

ಸ್ತ್ರೀಧರ್ಮನೀತಿ

(ಲೇ—ಶ್ರೀಪಟ್ಟದಸ್ವಾಮಿಗಳು ಹಿರೇಮಠ, ಕೊಣ್ಣೂರು.)

ಬಳ್ಳಿಯು ಬೇಕಾದಷ್ಟು ದೊಡ್ಡದೂ ಬಲಿಷ್ಠವೂ ಆಗಿದ್ದರೂ ಗಿಡದ ಆಶ್ರಯವನ್ನು ಹೇಗೆ ಮಾಡಬೇಕಾಗುತ್ತದೆಯೋ, ಹಾಗೆಯೇ ಸ್ತ್ರೀಯರಾದರೂ ಒಬ್ಬರ ಆಶ್ರಯದಲ್ಲಿರಬೇಕಾಗುತ್ತದೆ. ಚಿಕ್ಕಂದಿನಿಂದ ವಿವಾಹವಾಗುವವರೆಗೆ ತಂದೆ ತಾಯಿ ಅಣ್ಣ ತಮ್ಮಂದಿರ ಆಜ್ಞೆಯಲ್ಲಿಯೂ, ಲಗ್ನವಾದನಂತರ ಗಂಡ ಅತ್ತೆ ಮಾವಂದಿರ ಆಜ್ಞೆಯಲ್ಲಿಯೂ, ಮುಪ್ಪಿನಕಾಲದಲ್ಲಿ ಮಕ್ಕಳ ಆಜ್ಞೆಯಲ್ಲಿಯೂ, ಇರಬೇಕು. ಗಂಡನು ಮೃತಪಟ್ಟರೆ ಜಿತೇಂದ್ರಿಯಗಳಾಗಿ ತವರುಮನೆಯಲ್ಲಿಯಾಗಲಿ ಗಂಡನಮನೆಯಲ್ಲಿಯಾಗಲಿ ಇರಬೇಕು. ಅವರಾರೂ ಇರದಿದ್ದರೆ 'ಗುರುರ್ಮಾತಾಗುರುಃಪಿತಾ' ಅಂದರೆ ಗುರುವೇ ತಾಯಿ ಗುರುವೇ ತಂದೆ ಎಂದು ಶಾಸ್ತ್ರವು ಬೋಧಿಸುವುದರಿಂದ ಸದ್ಗುರುವಿನ ಆಶ್ರಯವನ್ನು ಮಾಡಿಕೊಂಡಿರುವುದು ಶ್ರೇಷ್ಠವಾದುದು. ಈರೀತಿ ಆಶ್ರಯಮಾಡಿಕೊಂಡಿರಬೇಕಲ್ಲದೆ ಒಬ್ಬಳೇ ಎಂದಿಗೂ ಇರಕೂಡದು. ಏಕೆಂದರೆ ಅವಳು ಅಬಲೆಯೂ ಸ್ವಭಾವತಃ ಕೋಮಲಳೂ ಆಗಿರುವುದರಿಂದ, ಸ್ವತಂತ್ರಳಾಗಿ ಇರಲಿಕ್ಕೂ ಕೆಲಸವನ್ನು ಮಾಡಲಿಕ್ಕೂ ಸಮರ್ಥಳಲ್ಲ. ಏಕಾಂಗಿಯಾಗಿರುವುದರಿಂದ ಲೋಕಾಪವಾದವು ಬರುವುದು. ಹಿರಿಯರ ಮಾತನ್ನು ಲಕ್ಷ್ಯಕ್ಕೆ ತಾರದೆ ಯಾವಾಗಲೂ ಮೋರೆಯನ್ನು ಬಿಗಿದುಕೊಂಡು ಸಿಟ್ಟಿನಿಂದ ಕೆಲಸವನ್ನು ಮಾಡುತ್ತ, ತನ್ನ ಮನಸ್ಸಿಗೆ ಬಂದಂತೆ ನಡೆಯುವ ಸ್ತ್ರೀಯಳು ಲೋಕದಲ್ಲಿ ಮಾನ್ಯಳಾಗಳು. ಇದೇ ವಿಷಯವನ್ನು ಕುರಿತು---

ಪತಿದೈವಮೆಂದರಿದು ನಡೆವ ಸತಿಗಹುದು ಹಿತ |
ಗತಿಯುಳ್ಳದಂಗನೆಯರತಿಸಾಹಸಿಗಳವರ |
ಕೃತಕಶೀಲಂಗಳಂ ನಂಬಲಾಗದು ಪೇಳ್ ಸ್ವತಂತ್ರಮಂ
ಕೊಡಲಾಗದು ||

ಪಿತನಿಂದ ಬಾಲ್ಯದೊಳ್ ಪತಿಯಿಂದ ಪ್ರಾಯದೊಳ್ |
ಸುತನಿಂದ ವೃದ್ಧಾಪ್ಯದೊಳ್ ಕುಲಸ್ತ್ರೀಯರು |
ಕ್ಷಿತಿಯೊಗದಿರ್ದೊಡವರಿಂದ ನಿಜಸಂತತಿಸಹಿತಬಂದು
ದಲ್ಲದಿರದು ||೧||

ಮಾವಂಗೆ ಭಾವಂಗೆ ಮೇಣತ್ತೆಗೈದೆ ಸಂ |
ಭಾವಿಸುತ ಸೇವಿಸುತ ಕಾಂತಂಗೆ ಪ್ರೀತಿಸಂ |
ಜೀವನವನೀವ ನವಯುವತಿಗಿಹ ಲಕ್ಷಣಂ ಸುಕೃತಫಲ
ಮುಂತಲ್ಲದೆ |

ಸಾವಿನಂತಾಪಿಸಂಕಟದಿಗಳಿಗೆ ಮೊರೆವಿದ್ದು |
ದಾವರಿಸಿ ಸೇವರಿಸಿ ಮನೆಗೆಲಸವುಂ ಗೈಯು |
ದಾವನಿತೆ ಸಾವನಿತೆ ಲೇಸೆನಿಸದಿಹಳು ತತ್ತಾತಿಗೆ ತದ್ಗುರು
ಜನಕ್ಕೆ ||೨||

ಈ ಪ್ರಕಾರವಾಗಿ ಮಹನೀಯರು ಬೋಧಿಸಿರುವರು. ಪಾತಿವ್ರತ್ಯಧರ್ಮವನ್ನು ಕಾಯ್ದುಕೊಂಡು ಸತ್ಪುರುಷರನ್ನು ಆಶ್ರಯಮಾಡಿಕೊಂಡಿದ್ದರೂ, ಲೋಕದಲ್ಲಿ ಕೆಲವು ದುರಾತ್ಮರು ದೋಷಾರೋಪಣೆಯನ್ನು ಕೊಡಬಹುದು. ಗೂಗೆಯು ಸೂರ್ಯನನ್ನು ನಿಂದಿಸಿದರೆ ಅವನು ಪ್ರಕಾಶಹೀನನಾಗದೆ ತನ್ನ ನಿರ್ಮಲವಾದ ಪ್ರಕಾಶವನ್ನು ಹೇಗೆ ತೋರಿಸುವನೋ, ಅದರಂತೆಯೇ ದುರಾತ್ಮರು ಪತಿವ್ರತಾ ಸ್ತ್ರೀಯರಿಗೆ ಬೇಕಾದಷ್ಟು ಅಪವಾದವನ್ನು ಕೊಟ್ಟರೂ ಪತಿವ್ರತೆಯರು ಅವರ ಅಪವಾದಕ್ಕೆ ಕುಗ್ಗಿ ಕಳೆಗುಂದದೆ, ತಮ್ಮ ತಮ್ಮ ಕಾರ್ಯದಲ್ಲಿ ತತ್ಪರರಾಗುವರು. ಸ್ತ್ರೀಯರು ತವರುಮನೆಯಲ್ಲಿದ್ದಾಗ ತಂದೆ ತಾಯಿ ಅಣ್ಣ ತಮ್ಮ ಅಕ್ಕ ತಂಗಿಯರನ್ನೂ ಅತಿಥಿಗಳನ್ನೂ ಪ್ರೇಮಭಾವದಿಂದ ಉಪಚರಿಸುತ್ತ, ಅವರು ಹೇಳಿದ ಕೆಲಸವನ್ನು ಲಕ್ಷ್ಯಗೊಟ್ಟು ಮಾಡುತ್ತ, ಎಲ್ಲರ ಪ್ರೀತಿಗೆ ಪಾತ್ರರಾಗಿರುವಂತೆ, ಗಂಡನಮನೆಯಲ್ಲಿಯೂ ಗಂಡನೇ ದೇವರೆಂದು ಭಾವಿಸಿ ಉಪಚಾರಮಾಡುತ್ತಿರಬೇಕು. ಪತಿಯ ಸುಖವೇ ತನ್ನಸುಖವೆಂದು ತಿಳಿದು ಯಾವಾಗಲೂ ಪತಿಯ ಕಲ್ಯಾಣವನ್ನು ಬಯಸುತ್ತಿರುಬೇಕು. ಮಾವ ಭಾವ ಮೈದುನರನ್ನೂ ಅತ್ತೆ ನಾದಿನಿಯರನ್ನೂ ಪ್ರೀತಿಯಿಂದ ಉಪಚರಿಸುತ್ತ ಒಬ್ಬರಿಗೊಬ್ಬರು ಪ್ರೇಮದಿಂದ ನಡೆದುಕೊಳ್ಳಬೇಕು. ಮತ್ತು ಸ್ತ್ರೀಯರನ್ನು ಕುರಿತು ಒಬ್ಬ ನೀತಿಕಾರನು—

ಗಂಡಗೆಲ್ಲಳಿ ಮಕ್ಕಳ |
ಕಂಡಾಗಳೇ ಬಯ್ದು ಹೊಯ್ದು ಮುಸಿಮುನಿಸಿಗಳಂ |

ಕಂಡರಿಗಿಕ್ಕಿ ಕೆಡಿಸುತ |
ಹೆಂಡತಿಯನು ಅಳುತಿಪ್ಪ ಗಂಡಂ ಭಂಡಂ ||೧||

ಎಂದು ಹೇಳಿರುತ್ತಾನೆ.

ಪತಿವ್ರತಾಶಿರೋಮಣಿಯೂ, ಗಂಡನ ಹಾಗೂ ಗುರು ಹಿರಿಯರ ಆಜ್ಞಾಧಾರಕಳೂ, ನಿರೋಗಿಯೂ, ಮನೆಯೊಳಗಿನ ವಸ್ತುವಡವೆಗಳನ್ನು ಜೋಪಾನಮಾಡುವವಳೂ, ಗಂಡರು ಮಕ್ಕಳು ಹಿರಿಯರು ಅತಿಥಿಗಳನ್ನು ಉಪಚರಿಸುವವಳೂ, ಆದ ಸ್ತ್ರೀಯಳಮೇಲೆ ಮತ್ಸರದಿಂದ ಅಪವಾದವನ್ನು ಹೊರಿಸಿ ವೈರತ್ವವನ್ನು ಬೆಳಸಿಬಿಡುವುದು, ಮಹಾಪಾಪದಾಯಕವಾಗಿರುವುದು. ಸ್ತ್ರೀಯರು ತಮ್ಮ ಪತಿಯು ಏಳುವುದಕ್ಕಿಂತ ಪೂರ್ವದಲ್ಲಿ ಎದ್ದು ಶೌಚವಿಧಿಯನ್ನು ತೀರಿಸಿ ಕೈಕಾಲು ಮುಖ ಪ್ರಕ್ಷಾಲನೆಯನ್ನು ಮಾಡಿಕೊಂಡು, ಗುರುದೇವರಿಗೂ, ಗಂಡನಿಗೂ, ಹಿರಿಯರಿಗೂ ನಮಸ್ಕಾರವನ್ನು ಮಾಡಿ, ಮನೆಯ ಕಸವನ್ನು ತೆಗೆದು ಸಾರಣೆಯನ್ನುಮಾಡಿ ರಂಗೋಲೆಯನ್ನಿಟ್ಟು ಭಾಂಡೆಗಳನ್ನು ಬೆಳಗಿ, ಅಡಗಿಯ ಸಾಹಿತ್ಯವನ್ನು ಸಿದ್ಧಮಾಡಿಟ್ಟುಕೊಂಡು ಸ್ನಾನವನ್ನುಮಾಡಿ ಮಡಿನೀರನ್ನು ತಂದು, ತಮ್ಮ ಧರ್ಮಾನುಸಾರವಾಗಿ ನಿತ್ಯಕರ್ಮಾನುಷ್ಠಾನವನ್ನು ತೀರಿಸಿಕೊಂಡು ಪಾಕವನ್ನುಮಾಡಿ, ಗುರುದೇವರಿಗೆ ನೈವೇದ್ಯಮಾಡಿ ಮನೆಯೊಳಗಿನ ಹುಡುಗರಿಗೂ, ಹಿರಿಯರಿಗೂ, ಊಟಮಾಡಿಸಿ ಅನಂತರ ತಾನು ಮಾಡಬೇಕು ಎಲ್ಲರೂ ಊಟಮಾಡಿದಮೇಲೆ ತನಗೆ ಉಳಿಯಲಿಕ್ಕಿಲ್ಲವೆಂದು ತನಗೆ ಮೊದಲೇ ಬೇಕಾದಷ್ಟು ತೆಗೆದುಕೊಂಡು ಉಪಚರಿಸುವ ಸ್ತ್ರೀಯರೂ ಅನೇಕರಿದ್ದಾರೆ. ಇವರು ರಾಕ್ಷಸವರ್ಗಕ್ಕೆ ಸೇರಿದವರಲ್ಲದೆ ಮನುಷ್ಯವರ್ಗಕ್ಕೆ ಸೇರಿದವರಲ್ಲ. ಇಂಥವರ ಅನುಕರಣವನ್ನು ಯಾರೂ ಮಾಡಬಾರದು. ಕೆಲವು ಸ್ತ್ರೀಯರು ಮುಟ್ಟಾದಾಗ್ಗೆ ಪಾಕಾದಿಗಳನ್ನು ಮಾಡುತ್ತಾರೆ. ಇದು ಅತ್ಯಂತ ಪಾಪದಾಯಕವು. ಆದ್ದರಿಂದ ಅತ್ಯಂತ ಶಾಸ್ತ್ರವಿರೋಧವಾದ ಈ ಕಾರ್ಯವನ್ನು ಮಾಡಬಾರದು. ಮುಟ್ಟಾದನಂತರ ೪ ರಾತ್ರಿಗಳವರೆಗೂ ಪಾಕಾದಿಕ್ರಿಯೆಗಳನ್ನು ಮಾಡಲಿಕ್ಕೂ ಸ್ಪರ್ಶಕ್ಕೂ ಅಧಿಕಾರವಿಲ್ಲವು. ಸ್ನಾನಮಾಡಿ ತನ್ನ ಲಿಂಗಪೂಜೆಯನ್ನು ಮಾಡಲಿಕ್ಕೆ ಮಾತ್ರ ಅಧಿಕಾರವಿರುವದಲ್ಲದೆ, ಉಳಿದ ಕಾರ್ಯಕ್ಕೆ ಅಧಿಕಾರವಿಲ್ಲ. ಆದ್ದರಿಂದ ಈ ಶಾಸ್ತ್ರೀಯ ಪದ್ಧತಿಯನ್ನು ಆಚರಿಸಿ ಶಿವಪ್ರೀತಿಗೆ ಪಾತ್ರರಾಗಬೇಕೆಂದು ಸೂಚಿಸುತ್ತೇವೆ

ಗುರುತತ್ವಪ್ರಭಾಕರ

ಪರಮಾತ್ಮನ ಸಾಕ್ಷಾತ್ಕಾರದಂಥ ಮಹತ್ಫಲವನ್ನು ಕೊಡುವ ಭಕ್ತಿಯು ಇಷ್ಟು ಸುಲಭವಾಗಿರುವದೆಂದು ತಿಳಿಯಬಾರದು. ಭಕ್ತಿಯು ಸುಲಭವೆಂದು ಹೇಳಿದ್ದು ಅದು ಎಲ್ಲರ ಸ್ವಭಾವಕ್ಕೆ ಹೊಂದುವಂಥದೆಂಬ ದೃಷ್ಟಿಯಿಂದಲೇ ಹೊರತು ಪಡೆವಳಿಕೆಗೂ ಅದು ಇಷ್ಟು ಸುಲಭವಾದದ್ದೆಂದಲ್ಲ. ಮಹತ್ಫಲವನ್ನು ಕೊಡತಕ್ಕ ಸಾಧನವೂ ಮಹತ್ತಾಗಿಯೇ ಇರುವುದು. ಸುಮ್ಮನೆ ನೋಡುವಾಗ ಕಿತ್ತುಹೋಗುವಷ್ಟು ಕಿರಿಚಿಕೊಳ್ಳುವುದು ಮಾತ್ರವೇ ಭಕ್ತಿಯಲ್ಲ. ಅದರಿಂದ ಮನಸ್ಸು ಸ್ವಲ್ಪ ಎಚ್ಚರಗೊಳ್ಳಬಹುದು. ಆದರೆ ಅದಕ್ಕಿಂತ ಮಹತ್ವದ ಸಾಧನಗಳು ಬಹಳ ಉಂಟು. ಹೇಗೆಂದರೆ—"ಭಂಗೀಸೊಪ್ಪು" ಎಂದು ಸುಮ್ಮನೆ ಒದರಿದ ಮಾತ್ರಕ್ಕೇ ಅದರಿಂದ ಉಂಟಾಗಬೇಕಾದ ಮದವು ಬರುವುದಿಲ್ಲ. ಅದು ದ್ರವರೂಪವಾಗುವಂತೆ ನೀರಿನಲ್ಲಿ ತೇದು ಕುಡಿದರೆ ಮದವೇರುವುದು. ಸುಮ್ಮನೆ ಗಟ್ಟಿಯಾಗಿ ದೇವ, ದೇವ ಎಂದ ಮಾತ್ರಕ್ಕೆ ಏನಾದೀತು? ಏಕಪ್ರಕಾರವಾಗಿ ಭಕ್ತಿ ಸಾಧನಗಳನ್ನು ಅಭ್ಯಾಸ ಮಾಡಬೇಕು. ಆಗ ದೇವರು ನಿಜವಾಗಿ ಕಂಡೇ ಕಾಣುವನು. ಅಂಥ ಭಕ್ತಿ ಸಾಧನವು ಶ್ರವಣ, ಕೀರ್ತನ, ಸ್ಮರಣ, ಪಾದಸೇವನ ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನವೆಂದು ಒಂಭತ್ತು ಬಗೆಯಾಗಿರುವದು. ಈ ಒಂಭತ್ತು ಭಕ್ತಿಗಳನ್ನು ಕ್ರಮವಾಗಿ ಪರೀಕ್ಷಿತ, ಶುಕ, ಪ್ರಲ್ಹಾದ, ಲಕ್ಷ್ಮೀ, ಪೃಥು, ಅಕ್ರೂರ, ಮಾರುತಿ, ಅರ್ಜುನ ಮತ್ತು ಬಲಿ ಇವರು ಸಾಧಿಸಿ ಪ್ರಸಿದ್ಧರಾಗಿರುವರೆಂದು ಸ್ಮೃತಿಯು

ಶ್ರೀಕೃಷ್ಣಶ್ರವಣೇ ಪರೀಕ್ಷಿದಭವದ್ವೈಯಾಸಕಿಃ ಕೀರ್ತನೇ |
ಪ್ರಲ್ಹಾದಃ ಸ್ಮರಣೇ ತದಂಘ್ರಿಭಜನೇ ಲಕ್ಷ್ಮೀಃ ಪೃಥುಃ ಪೂಜನೇ |
ಅಕ್ರೂರಸ್ತ್ವಭಿವಂದನೇ ಕಪಿಪತಿರ್ದಾಸ್ಯೇ ಚ ಸಖ್ಯೇಽರ್ಜುನಃ |
ಸರ್ವಸ್ವಾತ್ಮನಿವೇದನೇ ಬಲಿರಭೂತ್ಕೈವಲ್ಯಮೇಷಾಂ ಪದಂ |

ಎಂಬ ಶ್ಲೋಕದಲ್ಲಿ ಹೇಳುತ್ತದೆ. ಇವುಗಳಲ್ಲಿ ಒಂದೊಂದನ್ನಾಗಿ ಈ ಕೆಳಗೆ ವಿವರಿಸೋಣ

ಶ್ರವಣ—ಶ್ರವಣವೆಂದರೆ ಪರಮಾತ್ಮನ ಮಹಿಮಾವಿಶೇಷಗಳನ್ನು ಕೇಳುವದು. ಈ ಮಹಿಮಾವಿಶೇಷಗಳು ಪುರಾಣಗಳಲ್ಲಿ ಸಮೃದ್ಧಿಯಾಗಿರುವವು. ಇವುಗಳನ್ನು ಕೇಳುವ ಸುಯೋಗವು ಕೂಡ ಎಷ್ಟೋ ಜನರಿಗೆ ದುರ್ಲಭವೆಂದು ಶ್ರುತಿಯು ಹೇಳುವದು. ವೇದದ ಭಾಷೆಯು ಕಠಿಣವಾಗಿದ್ದು ಅತ್ಯಲ್ಪಸಂಖ್ಯೆಯ ಜನರಿಗೆ ಮಾತ್ರ ತಿಳಿಯಬಹುದಾದ ಸ್ವಭಾವದಲ್ಲಿರುವದರಿಂದ ಅದನ್ನು ಸಾಕ್ಷಾತ್ತಾಗಿ ತಿಳಿಯುವದು ವ್ಯರ್ಥಾಶ್ರಮವಾಗಿದೆ ಅದರ ಅರ್ಥವನ್ನೇ ವಿವರಿಸಿ ಪುರಾಣಗಳು ಅದನ್ನು ಹೆಚ್ಚು ರಸವತ್ತಾಗಿ ಮಾಡಿರುವವು. ಮೊದಲು ಮಕ್ಕಳಿಗೆ ಅನ್ನವನ್ನು ತಿನ್ನಿಸುವಾಗ ಅದರಲ್ಲಿ ರುಚಿಯುಂಟಾಗುವಂತೆ ಸಕ್ಕರೆಯನ್ನು ಸೇರಿಸಿ ಅದನ್ನುಣಿಸುವದರಿಂದ ಮಕ್ಕಳನ್ನು ಪುಷ್ಟಿಗೊಳಿಸುವಂತೆ ಪೂರ್ವಿಕರು ವೇದದಲ್ಲಿರುವ ಕಷ್ಟವಾದ ವಿಷಯಗಳಿಗೆ ಉದಾಹರಣೆಗಳನ್ನು ಕೊಟ್ಟು ಒಳ್ಳೇ ಅಲಂಕಾರ ಭಾಷೆಯಿಂದ ಮನಸ್ಸಿನಲ್ಲಿ ಬಿಂಬಿಸುವ ಹಾಗೆ ವರ್ಣಿಸಿ ವೇದದಿಂದ ಆಗಬೇಕಾದ ಪೂರ್ಣಪ್ರಯೋಜನವನ್ನು ನಮ್ಮೀ ಅನುಭವಕ್ಕೆ ಸಿದ್ಧಮಾಡಿಕೊಟ್ಟಿರುತ್ತಾರೆ ವೇದಗಳ ರಹಸ್ಯವನ್ನೇ ತೆಗೆದುಕೊಂಡು ಶ್ರೀ ಕೃಷ್ಣನು ಅರ್ಜುನನಿಗೆ ಉಪದೇಶ ಮಾಡಿದ ಗೀತೆಯು ಹೇಗೆ ಲೋಕಪ್ರಸಿದ್ಧವಿದೆಯೋ ಹಾಗೆ ಭಗವತ್ಪಾದ ಜಗದ್ಗುರು ರೇಣುಕಾಚಾರ್ಯರು ಮುನಿಪುಂಗವರಾದ ಅಗಸ್ತ್ಯರಿಗೆ ಬೋಧೆ ಮಾಡಿದ ಶಿವಸಿದ್ಧಾಂತರೂಪವಾದ ಸಿದ್ಧಾಂತ ಶಿಖಾಮಣಿಯು ಜಗತ್ಪ್ರಸಿದ್ಧವಾಗಿದೆಯೆಂದು ಬೇರೆ ಬರೆಯ ಬೇಕಾಗಿಲ್ಲ. ವೇದವನ್ನು ಓದುವದಕ್ಕೆ ಎಲ್ಲರಿಗೂ ಸಮ್ಮತಿಯನ್ನು ಕೊಡದೆ ಇರುವದನ್ನು ನೋಡಿ ಪೂರ್ವಿಕರು ರಹಸ್ಯಾರ್ಥಗಳನ್ನೆಲ್ಲಾ ಸ್ವಾರ್ಥದೃಷ್ಟಿಯಿಂದ ಬಚ್ಚಿಟ್ಟಿರುವರೆಂದು ಕೆಲವರು ದೂರುವರು ಆದರೆ ಎಷ್ಟೋ ಜನರು ವೇದವನ್ನೇ ಸಾಕ್ಷಾತ್ತಾಗಿ ಓದಿ ಅರ್ಥವನ್ನು ಮಾಡಿಕೊಂಡು ಅದರಮೇಲೆ ಅನೇಕ ಗ್ರಂಥಗಳನ್ನು ಬರೆದಿರುವರಷ್ಟೆ. ಪೂರ್ವಿಕರು ಪುರಾಣಗಳಲ್ಲಿ ವಿವರಿಸದೆ ಬಚ್ಚಿಟ್ಟಿರುವ ಒಂದು ವಿಷಯವನ್ನಾದರೂ ಯಾರಾದರೂ ತೋರಿಸುವರೇ? ಶಕ್ಯವಿಲ್ಲ. ಪೂರ್ವಿಕರು ಒಂದು ಸಂಪ್ರದಾಯಪರಂಪರೆಯನ್ನು ಕಾಯುವ ಸದ್ಬುದ್ಧಿಯಿಂದ ಆ ಶಬ್ದಾಧ್ಯಯನದ ಅಧಿಕಾರವನ್ನು ಮಾತ್ರ ಸ್ವಲ್ಪ ಕೈಹಿಡಿದಿರುವರೇ ಹೊರತು ಅವರ ಅರ್ಥವನ್ನೆಳ್ಳಷ್ಟೂ ಮರೆಮಾಡಿಲ್ಲ. ತನಗೆ ತಿಳಿದ ಅರ್ಥವನ್ನು ಮತ್ತೊಬ್ಬರಿಗೆ ಹೇಳದೆ ಸ್ವಾರ್ಥಬುದ್ಧಿಯಿಂದ ತನ್ನಲ್ಲಿಯೇ ಉಳಿಸಿಕೊಳ್ಳುವುದು ಪಾಪ. ಈ ಕಲ್ಪನೆಯು ನಮ್ಮ ಪೂರ್ವಿಕರಲ್ಲಿ ಎಷ್ಟು ಜಾಗರೂಕವಾಗಿತ್ತೆಂಬುದಕ್ಕೆ ಪ್ರಶ್ನೋಪನಿಷತ್ತಿನ ಆರನೆಯ ಪ್ರಶ್ನೆಯಲ್ಲಿ ಒಂದು ಕಥೆ ಬಂದಿದೆ. ಕೋಸಲದೇಶದ ಹಿರಣ್ಯನಾಭನೆಂಬ ರಾಜಪುತ್ರನು ಸುಕೇಶನೆಂಬ ಬ್ರಾಹ್ಮಣನ ಬಳಿಗೆ ಬಂದು ಪುರುಷನ ಷೋಡಶಕಲೆಗಳ ವಿಷಯವನ್ನು ಪ್ರಶ್ನೆಮಾಡಿದನು ಆಗ ಸುಕೇಶನು "ಅಯ್ಯಾ, ನನಗೆ ಅದು ತಿಳಿಯದು. ಹಾಗೆ ತಿಳಿದಿದ್ದರೆ ನಾನು ನಿನಗೆ ಹೇಳದೆ ಹೇಗೆ ಇದ್ದೇನು?" ಎಂದು ಉತ್ತರವನ್ನು ಕೊಟ್ಟು ಆ ವಿಚಾರವನ್ನು ತಿಳಿದುಕೊಳ್ಳುವದಕ್ಕಾಗಿ ಪಿಪ್ಪಲಾದನೆಂಬ ಋಷಿಯ ಬಳಿಗೆ ಹೋಗಿ ತಾನು ಗುರುಕುಲವಾಸವನ್ನು ಮಾಡಿದ್ದಾನೆ. ಇದರಿಂದ ತನಗೆ ತಿಳಿದದ್ದನ್ನು ಮಾಚುವದು ನಮ್ಮಾರ್ಯಜನಾಂಗದ ಪದ್ಧತಿಯಂತೆ! ಪರದೇಶದವರು "ತಾನು ಕಳ್ಳ, ಪರರನ್ನು ನಂಬ" ಎಂಬ ಗಾದೆಯಂತೆ ತಾವು ಮಾಡುವರಾದ್ದರಿಂದ ಅವರ ಕಣ್ಣಿಗೆ ನಮ್ಮಲ್ಲಿಯೂ ಆ ಗುಣವೇ ಕಂಡ ಹಾಗೆ ಆಗುತ್ತದೆ. ಪಶ್ಚಿಮದೇಶದಲ್ಲಿ ವ್ಯಾಪಾರದ ಮತ್ತು ಕೈಗಾರಿಕೆಯ ಉದ್ಯೋಗಗಳು ಮುಗಿಲುಮುಟ್ಟಿವೆಯಷ್ಟೆ. ಅವುಗಳನ್ನು ಕಲಿಯಲು ನಮ್ಮವರು ಹೋದರೆ ಅವರು ನಮಗೆ ಕಲಿಸುವದು ಬರೀ ಹೊರಗಣ ಕೂಲಿಯ ಕೆಲಸವೇ ಹೊರತು ಅವುಗಳ ರಹಸ್ಯವನ್ನು (trade secret) ವ್ಯಾಪಾರದ ರಹಸ್ಯವೆಂದು ಬಚ್ಚಿಟ್ಟುಕೊಳ್ಳುತ್ತಿರುವದು ಪ್ರಸಿದ್ಧವಾಗಿದೆ. ಆದ್ದರಿಂದ ಅವರ ಕಣ್ಣಿಗೆ ನಾವು ಸ್ವಾರ್ಥಿಗಳಾಗಿ ಕಾಣುವದು ಸಹಜವಾಗಿದೆ. ಇನ್ನು ನಮ್ಮ ನಮ್ಮವರಲ್ಲಿಯೂ ಎಷ್ಟೋ ಜನರು ಈ ಅಭಿಪ್ರಾಯದವರುಂಟು. ಆದರೇನು? ಪಾಪ! ಅದು ಅವರ ಸ್ವಬುದ್ಧಿಯಲ್ಲಿ ಹುಟ್ಟಿದ್ದಲ್ಲ.

(ಸಶೇಷ)

ಹಿಮಾಲಯಪ್ರಾಂತದ ಸಮಾಚಾರ

ಶ್ರೀಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರಿಂದ ಸ್ಥಾಪಿತವಾದ ಶ್ರೀ ಕೇದಾರನಾಥಸನಾತನಧರ್ಮ ಮಹಾವಿದ್ಯಾಲಯದಲ್ಲಿ, ಸದ್ಯಃ ೮೦ ವಿದ್ಯಾರ್ಥಿಗಳಿದ್ದು ವ್ಯಾಕರಣ, ಜ್ಯೋತಿಷ, ಆಯುರ್ವೇದ, ಸಾಹಿತ್ಯಾದಿ ಶಾಸ್ತ್ರಗಳನ್ನು ಓದುತ್ತಿರುವರು. ಈ ವರ್ಷ ಈ ವಿದ್ಯಾಲಯದಿಂದ ಕಾಶೀ ಸಂಸ್ಕೃತ ಪರೀಕ್ಷೆಗಾಗಿ ೨೬ ಜನ ವಿದ್ಯಾರ್ಥಿಗಳು ಮೇಲೆಕಾಣಿಸಿದ ವಿಷಯಗಳಲ್ಲಿ ಪರೀಕ್ಷೆಕೊಡುವುದಕ್ಕಾಗಿ ಉಖಾಮಠದಿಂದ ಹೋಗಿರುವರು.

ಇದಲ್ಲದೆ ಆಂಗ್ಲೋವರ್ನಾಕ್ಯುಲರ್ ಪರೀಕ್ಷೆಗಾಗಿ ೨೮ ಜನ ವಿದ್ಯಾರ್ಥಿಗಳು ಈ ದಿನ ಕರ್ಣಪ್ರಯಾಗ ಕೇಂದ್ರಕ್ಕೆ ಹೋದರು. ಶ್ರೀ ಕೇದಾರನಾಥಸ್ವಾಮಿಯ ದೇವಾಲಯದ ದ್ವಾರವು ೨೯-೪-೪೨ನೇ ಪ್ರಾತಃಕಾಲ ತೆಗೆಯಲ್ಪಡುವುದು.

ಯಾತ್ರಿಗೆ ಬರತಕ್ಕ ಸದ್ಭಕ್ತರು ತಾ|| ೧೫-೪-೪೨ ರಲ್ಲಿ ತಮ್ಮ ತಮ್ಮ ಸ್ಥಳಗಳಿಂದ ಹೊರಡಬಹುದು. ಈ ಪ್ರಾಂತದಲ್ಲಿ ಯಾವತರಹದ ತೊಂದರೆಗಳೂ ಇರುವುದಿಲ್ಲ.

ಪಂ|| ಸಿದ್ಧಲಿಂಗಶರ್ಮಾ
ಉಖಾಮಠ

ಸಮರವಿಜಯಭೇರಿ

ಶಾಂತಿವೇದಾಂತಾತ್ಮಶಕ್ತಿಗಾಶ್ರಯಮಾದ
ಭರತಖಂಡವು ಧರ್ಮರಾಜನೆನುತ!
ಘನವೀರನುತಶೌರ್ಯಧೈರ್ಯಕಾಶ್ರಯಮಾದ
ರಷ್ಯರಾಜ್ಯವು ಸಮರಭೀಮನೆನುತ!
ವಿಜಯವೀರೋತ್ಸಾಹವಿಶ್ವದಾಶ್ರಯಮಾದ
ವಿನುತಇಂಗ್ಲೆಂಡ್‌ರಾಜ್ಯ ವಿಜಯನೆನುತ!
ವಿಪುಲಶ್ರೀಯೌದಾರ್ಯನಿಧಿಗೆ ಆಶ್ರಯಮಾದ
ಬುದ್ಧಚೀಣಾರಾಜ್ಯ ಸಹದೇವನೆನುತ!
ಗ್ರಹಿಸಿ; ವಾದೋಪಭೇದಗಳ ಬೇಗತ್ಯಜಿಸಿ!
ಒಲಿಸಿಕೊಳ್ಳಲು ವಿಜಯ"ಪಾಂಡವರಸ್ಮರಿಸಿ!
ಕಲಿಸಿ ರಣಯೋಧಶಿಕ್ಷಣೆಯ ಭಯವಹರಿಸಿ!
ಮೆರಸಿಭಾರತವಿಖ್ಯಾತಿ ರಿಪುಶಕ್ತಿವಿನಾಶಗೊಳಿಸಿ||
ದುಗುಡಮರಾಗ್ರಹಾಸುರರಿಗಾಶ್ರಯಮಾದ,
ನಾಜಿಜರ್ಮನಿರಾಜ್ಯ ದುರ್ಯೋಧನೆನುತ!
ಕುಹಕಕ್ರೂರಾಚಾರಕುಮತಿಗಾಶ್ರಯಮಾದ,
ಇಟಲಿರಾಜ್ಯವು ಪಾಪಿ ಶಕುನಿಯೆನುತ!
ಕಾಮ ಕ್ರೋಧ ಲೋಭ ಮೋಹಕಾಶ್ರಯಮಾದ,
ಜಾಪ್ನರಾಜ್ಯವು ದ್ರೋಹಿ ಕರ್ಣನೆನುತ!
ತ್ರಿಪುರರಾಕ್ಷಸರಿವರು ಕೌರವಾಶ್ರಯರಾದ
ರಾಷ್ಟ್ರದಾಹದಪ್ರಳಯ ಕರ್ತರೆನುತ;
ಮನದಿಯೋಚಿಸಿ ಮನಸಾರಮಮತೆಯಿರಿಸಿ!
ಪಾಂಡವಾಗ್ರಜ ಧರ್ಮಜನನ್ನು ಸ್ಮರಿಸಿ!
ಸುಕೃತಸೋದರ ಸಹದೇವ ಸತ್ಯವರಿಸಿ!
ಅನುಜಶಕ್ತಿಯ ಅಗ್ರಜನೊಳೈಕ್ಯಗೊಳಿಸಿ!
ಸಮರ ಸಂಧಾನ ಸಾಹಸ ಶೌರ್ಯಗಳಿಸಿ!
ಧುರದಿಕರ್ಣಾದಿನಾಜಿಗಳ ವಿಧ್ವಂಸಗೊಳಿಸಿ!
ಪಾಂಡವಾಗ್ರಜ ಪಟ್ಟಾಭಿಷೇಕಸಲಿಸಿ!
ವಿಶ್ವಶಾಂತಿಯಸ್ಥಾಪಿಸಲು ಯುದ್ಧಬಯಸಿ!
ಭಾರತೀಯರ ಶೌರ್ಯಧೈರ್ಯಗಳಬೆಳಸಿ!
ಭರತಮಾತೆಯ ದಾಸ್ಯಶೃಂಖಲೆಯಹರಿಸಿ!
ಸತ್ಯದಯಧರ್ಮಸಾಮ್ರಾಜ್ಯ ಕರ್ತರೆನಿಸಿ!
ಸಾರ್ವಭೌಮನ ಸಂದೇಶ ಸಫಲಗೊಳಿಸಿ!
ರಾಜ್ಯವಾಳಿದ ಶ್ರೀರಾಮ ತತ್ವಗ್ರಹಿಸಿ!
ನಾಜಿರಾಕ್ಷಸರಿವು ಸಂಘ ನಿರ್ನಾಮಗೊಳಿಸಿ!
ನಮ್ಮ ಜಯಚಾಮಪ್ರಭುವರ ಕೀರ್ತಿಬೆಳಸಿ!
ಪ್ರಮುಖ ಪ್ರಭುಧರ್ಮ ಸತ್ಯ ಪ್ರತ್ಯಕ್ಷಪಡಿಸಿ
ವಿಜಯ ಸಾಧನೆ ಸಿದ್ಧಾಂತವಿದನು ಬರೆಸಿ!
ಮೆರೆಸುತಿಹನೀತ ಚೀಣಾವಿನೋತ್ಸವದಿ ಹರಿಸಿ!

ಭಾವಕವಿ:—ಸತ್ಯಪ್ರಚಾರಕ ರಾಮಚಂದ್ರ
ಕೋಚಾರ.

ಪಂಚಾಚಾರ್ಯಪ್ರಭಾ.

೧೯೪೨ನೆಯ ಮಾರ್ಚಿ ತಾ|| ೨೩ನೇ ಸೋಮವಾರ

ವಿದೇಶಗಳಲ್ಲಿ ಶಿವಾಲಯಗಳ ವ್ಯಾಪಕತೆ.

ಈಗ್ಗೆ ೨ ವಾರಗಳಿಂದ 'ಇಂಡೋಚೈನಾ'ದಲ್ಲಿರುವ ಶಿವಾಲಯಗಳ ವಿಷಯವನ್ನು ಪ್ರತಿಪಾದಿಸುತ್ತಿರುವುದು ಸರಿಯಷ್ಟೆ! ಸದ್ಯಃ ಅದೇ ವಿಷಯವನ್ನು ಮುಂದುವರಿಸುತ್ತೇವೆ

ಕ್ರಿಸ್ತಶಕದ ೬ನೆಯ ಶತಮಾನದಲ್ಲಿ ಅನ್ನಾಂದೇಶವನ್ನಾಳುತ್ತಿದ್ದ ನರವಾಹನವರ್ಮನೆಂಬ ಮಹಾರಾಜನು ಶ್ರೀಶಾನಭದ್ರೇಶ್ವರಲಿಂಗದ ವೇದಿಕೆಯನ್ನು ಸುವರ್ಣ ರಜತಗಳಿಂದ ನಿರ್ಮಿಸಿದ ವಿಷಯವು ೭ನೆಯ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ

ನರವಾಹನವರ್ಮಶ್ರೀಶಶಿಲಾಲಾಸ್ತ್ರಾಂ ಶಿಲಾಮಯಾಂ ।
ರುಕ್ಮರೌಪ್ಯವಿಹಿತಾಭ್ಯಾಂ ಬ್ರಹ್ಮಾ ಮೇರುಶಿಖಾವಿವ ॥
ಸ್ವರ್ಣರೌಪ್ಯಮಯೀ ಲಕ್ಷ್ಮೀಂ ಬಿಭ್ರತೀ ವೇದಿಕಾ ಪುನಃ ।
ವಿದ್ಯುತ್ ಭಾತಿ ಶಿಲಾ ಹಿಮಗಿರೇರಿವ ॥

ನರವಾಹನವರ್ಮಮಹಾರಾಜನು ಶ್ರೀಶಾನಭದ್ರೇಶ್ವರಲಿಂಗಮೂರ್ತಿಯ ವೇದಿಕೆಯನ್ನು ಬೆಳ್ಳಿ ಮತ್ತು ಬಂಗಾರದ ತಗಡುಗಳಿಂದ ಅಲಂಕರಿಸಿದನೆಂದೂ, ಇದರಿಂದ ಆ ವೇದಿಕೆಯು ಮೇರುಪರ್ವತ ಮತ್ತು ಹಿಮವತ್ಪರ್ವತಾಗ್ರದ ಶೋಭೆಯನ್ನು ವಹಿಸಿತ್ತೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ ಈ ಶಾಸನವು ಕ್ರಿ ಶ ೬೩೦ರಲ್ಲಿ ಬರೆಯಲ್ಪಟ್ಟಿದೆ

ಕ್ರಿ ಶ ೮೭೫ನೆಯ ಇಸ್ವಿಯಲ್ಲಿ ಬರೆಯಲ್ಪಟ್ಟ ೩೧ನೆಯ ಶಾಸನದಲ್ಲಿ— ಈ ಶಂಭುಭದ್ರೇಶ್ವರಲಿಂಗವನ್ನು ಶಿವನು ಆದಿಯಲ್ಲಿ ಭೃಗುವಿಗೆ ಅನುಗ್ರಹಿಸಿದನೆಂದೂ, ಅನಂತರ ಭೃಗುವು ಉರೋಜನೆಂಬ ಮಹಾರಾಜನಿಗೆ ದಯಪಾಲಿಸಿದನಂತೆ, ಆ ಉರೋಜ ಮಹಾರಾಜನು ಆ ಶಿವಲಿಂಗವನ್ನು ಚಂಪಾನಗರಿಯಲ್ಲಿ ಸ್ಥಾಪಿಸಿದನೆಂದೂ, ಈ ದೇವರೇ ಚಂಪಾದೇಶದ ರಕ್ಷಣೆಗೆ ಮೂಲಕಾರಣನೆಂದೂ, ಈ ದೇವರ ಅನುಗ್ರಹದಿಂದಲೇ ಚಂಪಾದೇಶದ ರಾಜರೆಲ್ಲರೂ ಕೀರ್ತಿಶಾಲಿಗಳಾದರೆಂದೂ ಪೌರಾಣಿಕಕಥೆಯು ಬರೆಯಲ್ಪಟ್ಟಿದೆ ಉರೋಜಮಹಾರಾಜನು ತನ್ನ ಕಾಲದಲ್ಲಿ ಈ ಶಂಭುಭದ್ರೇಶ್ವರಶಿವಲಿಂಗಕ್ಕೆ "ಶ್ರೀಶಾನಭದ್ರೇಶ್ವರ" ಎಂಬ ನೂತನನಾಮವನ್ನಿಟ್ಟನೆಂದೂ, ಈ ಶಿವಲಿಂಗವು ಆ ದೇಶದಲ್ಲಿ ಶೋಭಿಸುತ್ತಿರುವ 'ವೃಗ್ವನ್' ಎಂಬ ಹೆಸರಿನ ಪರ್ವತದ ಮೇಲೆ ಸ್ಥಾಪಿಸಲ್ಪಟ್ಟಿರುವುದೆಂದೂ ೬೩ನೆಯ ಶಾಸನದಲ್ಲಿರತಕ್ಕ ಪದ್ಯಗಳಿಂದ ತಿಳಿದು ಬರುತ್ತದೆ

ಶ್ರೀಶಾನಭದ್ರೇಶ್ವರಮಾದಿರಾಜಂ ಶಕ್ತ್ಯಾ ಪುರೋರೋಜಕೃತಂ ವಿಶೀರ್ಣಂ । ಪುನರ್ಭವೋಽಹಂ ಸವಿನಾಶಕಾಂಸ್ತಾನ್ ಪಶ್ಯಾರಥೇ ಶಕ್ತ ಪುನಃ ಪ್ರತಿಷ್ಠೇ ॥ ಶ್ರೀಮಾನ್ ಶ್ರೀಶಾನಭದ್ರೇಶ್ವರ ಮಹಿತನುಮಂ ಸ್ಥಾಪಯಿತ್ವಾ ಪ್ರಕೀರ್ತೇಽಜೋ । ನಾಕೌಕಸ್ಯಾಂ ಜನಸ್ಯಾಸ್ಥೆಯಮತ ಸ ವೃಗ್ವನ್ ಭೂಧರಸ್ಯಾಂಕಮೂರ್ಧ್ನಿ । ಕೃತ್ವಾ ಚಾಸ್ತಂಗತೇಽಭೂತ್ ಪ್ರಸರದಮರೋ ಭಾವಯಿತ್ವಾ ಪಿನಷ್ಟಂ । ಸ್ಥಾನಂ ದೇವಸ್ಯ ತಸ್ಯಾಭಿನುತಮುಖ ವೃಗ್ವನ್ ಸ್ಥಾಪಿತೇಽಸ್ಮಿ ಪುರೇಽಪ್ಯ ॥

ಎಂಬೀ ಶ್ಲೋಕಗಳೇ ಈ ವಿಷಯದಲ್ಲಿ ಆಧಾರಗಳಿವೆ

ಉರೋಜಮಹಾರಾಜನು ಗತಿಸಿದಮೇಲೆ ಅವನ ವಂಶದ ಪ್ರತಿಯೊಬ್ಬ ರಾಜನೂ ಈ ದೇವರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು, ಈ ದೇವಾಲಯವನ್ನು ಅತ್ಯಂತವೈಭವಸ್ಥಿತಿಯಲ್ಲಿಟ್ಟಿದ್ದರು ಈ ದೇವಾಲಯದ ಅಪಾರವಾದ ಸಂಪತ್ತನ್ನು ಕಂಡು, ಕಾಂಬೋಡಿಯಾ ದೇಶದ ಜನರು ಮೇಲಿಂದಮೇಲೆ ಇದಕ್ಕೆ ತೊಂದರೆಯನ್ನುಂಟುಮಾಡುತ್ತಿದ್ದರು ಆದರೂ ಚಂಪಾದೇಶದ ರಾಜರು ಕಾಂಬೋಡಿಯಾದೇಶದ ಮೇಲೆ ದಂಡೆತ್ತಿ ಹೋಗಿ ಆ ದೇಶವನ್ನು ಲೂಟಿಮಾಡಿ, ಅಲ್ಲಿ ದೊರೆತ ಸಂಪತ್ತಿನಿಂದ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡುತ್ತಿದ್ದರು ಜಯಇಂದ್ರವರ್ಮನೆಂಬ ಮಹಾರಾಜನು ಕ್ರಿ ಶ ೧೦೮೮ರಲ್ಲಿ ಈ ದೇವರಿಗೆ ಅಮೂಲ್ಯವಾದ ರತ್ನಗಳಿಂದ ಕೆತ್ತಲ್ಪಟ್ಟ ಆರುಮುಖಗಳುಳ್ಳ ಸರ್ಪದಿಂದ ಯುಕ್ತವಾದ ಸುವರ್ಣಕವಚವನ್ನು ಸಮರ್ಪಿಸಿದನು ಈ ಸುವರ್ಣಕವಚವು ೧೬೨೦ ತೊಲೆಗಳ ತೂಕವುಳ್ಳದಾಗಿತ್ತೆಂದು ಕೆಲವು ದಾಖಲೆಗಳಿಂದ ತಿಳಿದು ಬರುತ್ತದೆ ೮೦ ವರ್ಷಗಳಾದಮೇಲೆ ಇದೇ ಹೆಸರಿನ ೭ನೆಯ ಜಯಇಂದ್ರವರ್ಮನೆಂಬ ಮಹಾರಾಜನು ಈ ದೇವರಲ್ಲಿ ಅನಿತರ ಸಾಧಾರಣವಾದ ಭಕ್ತಿಯನ್ನಿಟ್ಟು, ಎಲ್ಲ ರಾಜರಿಗಿಂತಲೂ ವಿಶೇಷ ಬೆಲೆಯುಳ್ಳ ಮುತ್ತು ರತ್ನಗಳಿಂದಲಂಕೃತವಾದ ಸುವರ್ಣಕವಚವನ್ನು ಸಮರ್ಪಿಸಿದನೆಂದೂ, ದೇವರ ಪೂಜೆಗೋಸ್ಕರ ಸಕಲಪೂಜಾ ಸಾಮಾಗ್ರಿಗಳನ್ನು ಸುವರ್ಣದಿಂದ ಮಾಡಿಸಿ ಸಮರ್ಪಿಸಿದನೆಂದೂ, ಈ ದೇವಾಲಯದ ಗೋಪುರವನ್ನು ಬಂಗಾರದ ತಗಡಿನಿಂದ ನಿರ್ಮಿಸಿದನೆಂದೂ, ಇದಕ್ಕೋಸ್ಕರ (೭೫ ಪೌಂಡು) ೩೦೦೦ ತೊಲೆ ಬಂಗಾರವು ವೆಚ್ಚವಾಯಿತೆಂದೂ ಈ ದೇವಾಲಯವನ್ನೆಲ್ಲ ಬೆಳ್ಳಿಯ ತಗಡಿನಿಂದ ಆಚ್ಛಾದಿಸಿದನೆಂದೂ, ಇದಕ್ಕಾಗಿ ೩೯ ಸಾವಿರ ಪೌಂಡು (೧೪ ಲಕ್ಷ ತೊಲೆ) ಬೆಳ್ಳಿಯು ವೆಚ್ಚವಾಯಿತೆಂದೂ "ಮಾಸ್ಪರೋ" ಎಂಬ ಫ್ರಾನ್ಸ್‌ದೇಶದ ಇತಿಹಾಸಜ್ಞರು ಬರೆದ ಗ್ರಂಥದಿಂದ ತಿಳಿದುಬರುತ್ತದೆ ಇದೇ ರೀತಿಯಾಗಿ ಈ ದೇಶದ ಮಹಾರಾಜರು ದೇವರಿಗೋಸ್ಕರ ಮುತ್ತು ರತ್ನ ಸುವರ್ಣಾದ್ಯಾಭರಣಗಳನ್ನು ಹೇರಳವಾಗಿ ಸಮರ್ಪಿಸಿದ್ದಲ್ಲದೆ, ಆನೆಗಳನ್ನೂ, ಸ್ತ್ರೀ ಪುರುಷಸೇವಕರನ್ನೂ, ವೃಷಭಗಳನ್ನೂ, ಗಾಯಕರನ್ನೂ ನರ್ತಕಿಯರನ್ನೂ ಸಮರ್ಪಿಸಿದರೆಂಬ ವಿಷಯವು ೨೩ ಮತ್ತು ೨೪ನೆಯ ಶಾಸನಗಳಿಂದ ತಿಳಿದುಬರುತ್ತವೆ

ಯುದ್ಧವಾರ್ತೆ.

ಟೈಮೂರ್ ಆಕ್ರಮಣ

ಪೋರ್ಚುಗೀಸರಿಗೂ ಡಚ್ಚರಿಗೂ ಸೇರಿದ್ದ ಟೈಮಾರ್ ದ್ವೀಪವನ್ನು ಜಪಾನರು ಸಂಪೂರ್ಣವಾಗಿ ಆಕ್ರಮಿಸಿದ್ದಾರೆ

ಜಪಾನು ೧,೪೦,೦೦೦ ಜನ ಸೈನಿಕರನ್ನು ಕಳೆದುಕೊಂಡಿತು

ಪೆಸಿಫಿಕ್ ಕ್ಷೇತ್ರದಲ್ಲಿ ಇದುವರೆಗೆ ಜಪಾನು ೧,೪೦,೦೦೦ ಮಂದಿ ಯೋಧರನ್ನು ಕಳೆದುಕೊಂಡಿದೆಯೆಂಬುದಾಗಿ "ಫಾರಿನ್ ಕರೆಸ್‌ಪಾಂಡೆನ್ಸ್" ಎಂಬ ಪತ್ರಿಕೆಯು ತಿಳಿಸುತ್ತದೆ ಈ ಸಂಖ್ಯೆಯಲ್ಲಿ ಕನಿಷ್ಠಪಕ್ಷ ಮೂರರನೇ ಒಂದು ಭಾಗದಷ್ಟು ಜನರು ನೀರಿನಲ್ಲಿ ಮುಳುಗಿಹೋದರು ಜಪಾನು ರಣರಂಗಕ್ಕೆ ತಂದ ಸೇನೆಗಳಲ್ಲಿ ೧೦೦ಕ್ಕೆ ೫೦ರಷ್ಟು ನಷ್ಟವಾಯಿತೆಂದು ಅಂದಾಜುಹಾಕಲಾಗಿದೆ ಜಪಾನಿನ ಒಟ್ಟು ಸೈನ್ಯಬಲ ೭೨ ಡಿವಿಜನ್‌ಗಳೆಂದೂ (೩೦ ಲಕ್ಷ), ಅಸ್ಟ್ರೇಲಿಯಾವನ್ನು ಮುತ್ತಲು ಅವರು ೧೨ ಡಿವಿಜನ್‌ಗಳನ್ನು ಸಿದ್ಧಗೊಳಿಸಿದ್ದಾರೆಂದೂ ವಾಷಿಂಗ್‌ಟನ್ನಿನಲ್ಲಿ ಅಂದಾಜುಹಾಕಲಾಗಿದೆ

ಬರ್ಮಾದಲ್ಲಿ ಜಪಾನರ ಮುನ್ನಡೆ

ಬರ್ಮಾದೇಶದ ಮುಖ್ಯ ಸೇನಾನಾಯಕರಾದ ಜ|| ಅಲೆಕ್ಸಾಂಡರ್‌ರವರು ಪತ್ರಿಕಾ ಸುದ್ದಿಗಾರರೊಡನೆ ಮಾತನಾಡುತ್ತ ರಂಗೂನಿನಿಂದ ಹಿಮ್ಮೆಟ್ಟಲು ಕಾರಣಗಳನ್ನು ವಿವರಿಸಿದ್ದಲ್ಲದೆ ಜಪಾನಿನ ಮುಂದಿನ ಉದ್ದೇಶಗಳೇನಿರಬಹುದೆಂಬುದನ್ನು ಈರೀತಿ ಸೂಚಿಸಿದರು "ಜಪಾನಿಗೆ ಒಂದು ಮುಖ್ಯ ಉದ್ದೇಶವಿರುವಂತಿದೆ ರಂಗೂನಿನಿಂದ ಉತ್ತರಕ್ಕೆ 180 ಮೈಲಿ ದೂರದಲ್ಲಿಯೂ ಪ್ರೋಮಿಗೆ ಉತ್ತರಕ್ಕೆ 120 ಮೈಲು ದೂರದಲ್ಲಿಯೂ ಇರುವ ಸಂಪತ್ಸಮೃದ್ಧವಾದ ಇರವಾಡಿ ಎಣ್ಣೆಗಣಿಗಳನ್ನು ಹಿಡಿಯಬೇಕೆಂಬುದೇ ಅವರ ಮುಖ್ಯ ಗುರಿ ಶತ್ರುಗಳ ಈ ಉದ್ದೇಶವನ್ನು ವಿಫಲಗೊಳಿಸಲು ನಾನು ಸಂಕಲ್ಪಮಾಡಿದ್ದೇನೆ ಇದುವರೆಗೆ ಬರ್ಮಾದ ಕದನದಲ್ಲಿ ಮಿತ್ರಸೇನೆಗಳಿಗೆ ಅವುಗಳ ಕಡೆಯ ಮೋಟರುವಾಹನಗಳೇ ಅಡ್ಡಿಯಾಗಿದ್ದವು. ಇದ್ದ ಕೆಲವು ಉಪಯುಕ್ತ ರಸ್ತೆಗಳನ್ನು ಈ ವಾಹನಗಳು ಆಕ್ರಮಿಸಿಕೊಂಡಿದ್ದರಿಂದ ತೊಂದರೆಯುಂಟಾಯಿತು. ಜಪಾನರು ರಸ್ತೆಗಳನ್ನು ಬಿಟ್ಟು ಅರಣ್ಯಪ್ರದೇಶದಲ್ಲಿ ಹೊಡೆದಾಡುವ ನೈಪುಣ್ಯವನ್ನು ತೋರಿಸಿದುದರಿಂದ ಅವರಿಗೆ ಜಯವಾಯಿತು ಈ ಪರಿಸ್ಥಿತಿಯನ್ನು ಸರಿಪಡಿಸಲು ಈಗ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ" ಎಂದು ತಿಳಿಸಿದರು.

ಮೋರ್ಸ್‌ಬಿ ಬಂದರಿನ ಕಡೆಗೆ ಜಪಾನರ ಓಟ

ಜಪಾನರ ಬಲಯುತವಾದ ಭೂಸೇನೆಯು ನ್ಯೂಗಿನಿಯಾದಲ್ಲಿ ಮೋರ್ಸ್‌ಬಿ ಬಂದರಿನ ಕಡೆಗೆ ತೆರಳುತ್ತಿದೆಯೆಂದು ವರ್ತಮಾನ ಬಂದಿದೆ. ಶತ್ರುಸೇನೆಗಳು ಮೋರ್ಸ್‌ಬಿಗೆ 240 ಮೈಲಿ ದೂರದಲ್ಲಿರುವ ಒಂದು ಸ್ಥಳವನ್ನು ತಲುಪಿವೆ ಇದುವರೆಗೆ ಜಪಾನಿನ ಬಲಕ್ಕೂ ಮೋರ್ಸ್‌ಬಿ ಬಂದರಿನ ರಕ್ಷಕರಿಗೂ ಹೊಡೆದಾಟವಾಗಿಲ್ಲ. ಆಸ್ಟ್ರೇಲಿಯಾ ಸೈನಿಕರು ಬೇಗನೆ ಅವರನ್ನು ಎದುರಿಸುವರೆಂದು ನಂಬಲಾಗಿದೆ ಜಪಾನರ ಚಲನದಿಂದ ಮೋರ್ಸ್‌ಬಿ ಬಂದರಿಗೇನೂ ಹೆಚ್ಚಿನ ವಿಪತ್ತುಂಟಾಗಿಲ್ಲ ಆದರೆ ಹಿಂದಿನಿಂದ ಏಟುಹಾಕಲು ಈಗ ಪ್ರಯತ್ನವು ಆರಂಭವಾಗಿದೆಯೆಂದು ಹೇಳಬಹುದು. ಜಪಾನರು ಮೊದಲು ವಿಮಾನನಿಲ್ದಾಣಗಳಿಗೆ ಅನುಕೂಲವೆನಿಸಿದ ಮೈದಾನಪ್ರದೇಶವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವರೆಂದು ತಿಳಿದುಬಂದಿದೆ

ಮೆಕಾರ್ಥರ್‌ರವರು ಆಸ್ಟ್ರೇಲಿಯಾದ ದಂಡನಾಯಕರಾದರು

ಈಗ ೩ ತಿಂಗಳಿಂದಲೂ ಫಿಲಿಪೈನ್ ದ್ವೀಪಗಳಲ್ಲಿ ಜಪಾನರನ್ನು ಅದ್ಭುತ ರೀತಿಯಲ್ಲಿ ಎದುರಿಸಿ ಹೋರಾಡುತ್ತಿದ್ದ ಜ|| ಡೂಗ್ಲಾಸ್ ಮೆಕಾರ್ಥರವರು ಈಗ ಆಸ್ಟ್ರೇಲಿಯಾಕ್ಕೆ ಬಂದಿದ್ದಾರೆ ರಾಜಾಧ್ಯಕ್ಷ ರೂಜ್‌ವೆಲ್ಟರ ಸೂಚನೆಪ್ರಕಾರ ಮೆಕಾರ್ಥರ್‌ರವರು ತಮ್ಮ ಮುಖ್ಯ ಕಚೇರಿಯನ್ನು ಫಿಲಿಪೈನಾ ನಿಂದ ಆಸ್ಟ್ರೇಲಿಯಾಕ್ಕೆ ವರ್ಗಾಯಿಸಿದ್ದಾರೆ ಇವರು ಆಸ್ಟ್ರೇಲಿಯಾ ಕ್ಷೇತ್ರದಲ್ಲಿಯೂ ಮತ್ತು ಫಿಲಿಪೈನಿನಲ್ಲಿಯೂ ಇರುವ ಸೇನೆಗಳ ದಂಡನಾಯಕರಾಗಿ ನೇಮಕಮಾಡಲ್ಪಟ್ಟಿದ್ದಾರೆ ಜ|| ಮೆಕಾರ್ಥರ್‌ರವರನ್ನು ಸಿಂಗಪುರದ ಪೂರ್ವದಿಕ್ಕಿನಲ್ಲಿರುವ ಎಲ್ಲ ಪ್ರದೇಶಗಳಿಗೂ ಮಹಾ ದಂಡನಾಯಕರನ್ನಾಗಿ ನೇಮಿಸಲಾಗಿದೆಯೆಂದೂ ಅವರನ್ನು ಫಿಲಿಪೈನ್ಸ್‌ನಿಂದ ಕರೆಸಿದ್ದರಿಂದ ಆ ದ್ವೀಪವನ್ನು ತ್ಯಜಿಸಿದಂತಾಯಿತೆಂದು ಆಕ್ಸಿಸ್ ರಾಷ್ಟ್ರಗಳು ಪ್ರಚಾರ ನಡೆಸಬಹುದೆಂದೂ, ಅದು ಹೇಗೇ ಇರಲಿ, ಮೆಕಾರ್ಥರ್‌ರವರು ಫಿಲಿಪೈನಿನಲ್ಲಿ ಇರುವುದಕ್ಕಿಂತ ಆಸ್ಟ್ರೇಲಿಯಾದಲ್ಲಿ ಮಹಾ ದಂಡನಾಯಕರಾಗಿದ್ದು ಹೆಚ್ಚು ಸೇವೆಸಲ್ಲಿಸುವರೆಂದು ಅಮೆರಿಕದ ಪ್ರತಿಯೊಬ್ಬ ಸ್ತ್ರೀಪುರುಷರೂ ನಂಬಿರುವರೆಂದೂ ರೂಜ್‌ವೆಲ್ಟರು ಹೇಳಿದರು

ಅಂಜಾಕ್ ಕ್ಷೇತ್ರದಲ್ಲಿ ಜ|| ಮೆಕಾರ್ಥರ್‌ರವರನ್ನು ಮಹಾದಂಡನಾಯಕರನ್ನಾಗಿ ನೇಮಿಸಬೇಕೆಂದು ಆಸ್ಟ್ರೇಲಿಯಾ ಸರಕಾರದವರೇ ಪ್ರಾರ್ಥಿಸಿದರೆಂದು ಮಹಾಪ್ರಧಾನರಾದ ಶ್ರೀ ಕರ್ಟಿನ್‌ರವರು ಹೇಳುತ್ತ—"ಆಸ್ಟ್ರೇಲಿಯಾದಲ್ಲಿ ಆಕಾರವಾದ ಅಮೆರಿಕನ್ ಸೇನೆಯಿದೆಯೆಂದೂ, ಶತ್ರುಗಳಮೇಲೆ ಬೀಳಲು ಮಿತ್ರಸೇನೆಗಳು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿವೆಯೆಂದೂ, ಶತ್ರುಗಳಿಗೆ ಏಟು ಹಾಕಬೇಕಾದರೆ ನಮ್ಮ ಮೂಲದಿಂದಲೇ ಸಾಧ್ಯವೆಂದೂ, ಅಮೆರಿಕದ ಸಹಾಯಕ್ಕಾಗಿ ಆಸ್ಟ್ರೇಲಿಯವು ಇಮ್ಮಡಿ ಸಂತೋಷ ಪಡುವದೆಂದೂ, ಅಟ್ಲಾಂಟಿಕ್‌ನಲ್ಲಿ ಮಹಾ ಹೋರಾಟದಲ್ಲಿ ತೊಡಗಿರುವ ಬ್ರಿಟನ್ನು ಪೆಸಿಫಿಕ್ ಕದನದ ಭಾರವನ್ನು ಹೊರಲು ಸಾಧ್ಯವಿಲ್ಲವೆಂದೂ, ಜಪಾನಿನ ಮೇಲೆ ಬೀಳಲು ಆಸ್ಟ್ರೇಲಿಯಾದಲ್ಲಿ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿವೆಯೆಂದೂ, ವರ್ಷಗಟ್ಟಲೆ ಶತ್ರುಗಳನ್ನು ಎದುರಿಸಲು ನಮಗೆ ಶಕ್ತಿಯಿದೆಯೆಂಬುದನ್ನು ತೋರಿಸಬೇಕೆಂದೂ, ನಾವೀಗ ವಿಫಲರಾದರೆ ಯಾರೂ ನಮ್ಮನ್ನು ಉಳಿಸಲಾರರೆಂದೂ, ನಮಗೆ ಅಮೆರಿಕವು ನೀಡಿರುವ ಸಹಾಯವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದೂ" ನುಡಿದರು.

ಡಾ॥ ವಾನ್ ಮೂಕ್‌ರವರು ಲಂಡನ್ನಿಗೆ ತೆರಳುವರು

ನೆದರ್‌ಲೆಂಡ್ ಪೂರ್ವ ಇಂಡೀಸ್ ಲೆ॥ ಗವರ್ನರ್ ಜನರಲ್‌ರವರಾದ ಡಾ॥ ವಾನ್ ಮೂಕ್‌ರವರು ಆಸ್ಟ್ರೇಲಿಯಾಕ್ಕೆ ತಪ್ಪಿಸಿಕೊಂಡು ಬಂದರಷ್ಟೆ! ಅವರು ಲಂಡನ್ನಿಗೆ ಹೊರಡಲಿದ್ದಾರೆ. ಅಲ್ಲಿಂದ ಅವರು ಅಮೇರಿಕದ ಮೂಲಕ ಆಸ್ಟ್ರೇಲಿಯಾಕ್ಕೆ ಹಿಂತಿರುಗುವರು.

ಜರ್ಮನರ ಮೇಲೆ ರಷ್ಯನರ ದಾಳಿ

ರಷ್ಯದ ಡೊನೆಟ್ಸ್ ಬೈಲಿನಲ್ಲಿ ರಷ್ಯನರು ಜರ್ಮನರ ರಕ್ಷಣ ವ್ಯೂಹವನ್ನು ಭೇದಿಸಿ 2 ಶತ್ರುಪಡೆಗಳನ್ನು ನಾಶಪಡಿಸಿದ್ದಾರೆ. 15 ಜರ್ಮನ್ ಟ್ಯಾಂಕುಗಳು ಕೆಲಸಕ್ಕೆ ಬಾರದಂತಾಗಿವೆ ದಕ್ಷಿಣ ರಣಾಂಗಣದಲ್ಲಿ 4 ಶತ್ರು ವಿಮಾನಗಳನ್ನು ಉರುಳಿಸಲಾಯಿತು

ಸ್ವೀಡನ್ನಿನಿಂದ ಜರ್ಮನಿಗೆ ಕಾಗದ

ಸ್ವೀಡನ್ನಿಗೂ ಜರ್ಮನಿಗೂ ಕಾಗದದ ಬಗ್ಗೆ ಒಂದು ಹೊಸ ಒಪ್ಪಂದವೇರ್ಪಟ್ಟಿದೆ ಈ ವರ್ಷದ ಮೊದಲನೇ ಆರು ತಿಂಗಳಲ್ಲಿ ಸ್ವೀಡನ್ನು ಕಾಗದಕ್ಕೆ ಬೇಕಾಗುವ 50,000 ಟನ್ ಪಲ್ಪನ್ನೂ 30,000 ರಿಂದ 40,000 ಟನ್‌ಗಳಷ್ಟು ಕಾಗದವನ್ನೂ ಮತ್ತು ಅಧಿಕ ಸಂಖ್ಯೆಯಲ್ಲಿ ಸಲ್ಫೇಟ್ ಪಲ್ಪನ್ನೂ ಜರ್ಮನಿಗೆ ಒದಗಿಸಬೇಕಾಗಿದೆ

ಜರ್ಮನರ ಹೊಸ ಅಸ್ತ್ರ!

ಏಪ್ರಿಲ್ ತಿಂಗಳ ಮೂರನೇ ವಾರದಲ್ಲಿ ಜರ್ಮನಿಯು ರಷ್ಯದಮೇಲೆ ಬೀಳಲು ನಿಶ್ಚಯಿಸಿದೆಯೆಂಬುದಾಗಿ ಜರ್ಮನ್‌ಗಡಿಯಲ್ಲಿರುವ ಸುದ್ದಿಗಾರರೊಬ್ಬರು ಬರೆಯುತ್ತಾರೆ ರಷ್ಯದ ದಕ್ಷಿಣರಂಗದಲ್ಲಿ ಜರ್ಮನಿಯು ಇದುವರೆಗೆ ಕಾಣದೆ ಇರತಕ್ಕಂತಹ ಭಯಂಕರ ಯುದ್ಧವನ್ನಾರಂಭಿಸುವುದೆಂದೂ, ಜರ್ಮನರು "ಹೊಸದಾಗಿ ರಸಾಯನಿಕ ಅಸ್ತ್ರ" ವೊಂದನ್ನು ಉಪಯೋಗಿಸುವರೆಂಬ ಸುದ್ದಿ ಹರಡಿದೆಯೆಂದೂ ಅವರು ಹೇಳುತ್ತಾರೆ

ಅಮೇರಿಕದಲ್ಲಿ ೧,೪೮,೦೦೦ ವಿಮಾನಗಳು

ಅಧ್ಯಕ್ಷ ರೂಜ್‌ವೆಲ್ಟರವರು ಯುದ್ಧ ಕಚೇರಿಗೆ ಬೇಕಾಗುವ ವಿಮಾನ ತಯಾರಿಕೆಗಾಗಿ 17579 ಮಿಲಿಯನ್ ಡಾಲರುಗಳನ್ನು ಮಂಜೂರು ಮಾಡಬೇಕೆಂದು ಕಾಂಗ್ರೆಸ್ಸಿನವರನ್ನು ಕೇಳಿರುವರೆಂದೂ, ಈ ಹಣವನ್ನೂ ಹಿಂದೆ ಮಂಜೂರಾಗಿರುವ ಹಣವನ್ನೂ 148,000 ವಿಮಾನಗಳನ್ನು ತಯಾರುಮಾಡಲು ಉಪಯೋಗಿಸಿಕೊಳ್ಳಲಾಗುವುದೆಂದೂ ತಿಳಿಸಿದರು

ಬರ್ಮಾ ಆಡಳಿತವು ಸರಿಯಾಗಿ ನಡೆಯುತ್ತಿರುವುದು.

ರಂಗೂನ್ ನಗರವು ಪತನವಾದರೂ ಮಹಾಪ್ರಧಾನರಾದ ಸರ್ ಪಾಟನ್‌ರವರ ನಾಯಕತ್ವದಲ್ಲಿ ಆಡಳಿತ ವ್ಯವಸ್ಥೆಯು ಎಂದಿನಂತೆ ಚೆನ್ನಾಗಿರುವುದು ಎಲ್ಲ ಸಚಿವರೂ ಬರ್ಮಾದಲ್ಲಿ ಯಾವುದೋ ಕಡೆ ಸಭೆಸೇರಿ ಸ್ವಲ್ಪವೂ ತೊಂದರೆಯಿಲ್ಲದೆ ಆಡಳಿತ ನಡೆಸುತ್ತಿದ್ದಾರೆ. ಸದ್ಯಃ ಬರ್ಮಾದಲ್ಲಿ ಹಣಕಾಸಿನ ಸ್ಥಿತಿ ಬಹಳ ಶೋಚನೀಯವಾಗಿದೆ. ರಫ್ತು ವ್ಯಾಪಾರವು ಇಲ್ಲದೆ ಹೋಗಿರುವುದರಿಂದ ತೆರಿಗೆಯ ಆದಾಯವು ಕಡಿಮೆಯಾಗಿದೆ ರಂಗೂನಿನ ಸುತ್ತುಮುತ್ತಿನ ಪ್ರದೇಶವನ್ನು ಜಪಾನರು ಆಕ್ರಮಿಸಿದ್ದರೂ ಕೂಡ ಬರ್ಮಾದಲ್ಲಿ ಆಹಾರದ ಕೊರತೆಯೇನೂ ಇಲ್ಲವೆಂದು ಹೇಳಲಾಗಿದೆ ಬರ್ಮಾವು ತನ್ನ ಪ್ರಜೆಗಳಿಗೆ ಮಾತ್ರವಲ್ಲದೆ, ಅಲ್ಲಿಗೆ ಆಗಮಿಸಿರುವ ಚೀಣಾ ಯೋಧರಿಗೆ ಸಹ ಆಹಾರ ವಸ್ತುಗಳನ್ನು ಸರಬರಾಜು ಮಾಡಲು ಶಕ್ತವಾಗುವುದೆಂದು ಭಾವಿಸಲಾಗಿದೆ ಆದರೆ ಉಪ್ಪಿಗೆ ಮಾತ್ರ ಕೊರತೆ ಒದಗುವಹಾಗಿದೆ

ಫಿಲಿಪ್ಪೈನಿನಲ್ಲಿ ಕದನ

ಫಿಲಿಪ್ಪೈನಿನಲ್ಲಿರುವ ಅಮೇರಿಕನ್ ಸೇನೆಗಳ ದಂಡನಾಯಕತ್ವವನ್ನು ಮೇಜರ್ ಜನರಲ್ ವೈನ್‌ರೈಟ್‌ರವರಿಗೆ ವಹಿಸಲಾಗಿದೆ ಆಧುನಿಕ ಯುದ್ಧ ವಿಧಾನದಲ್ಲಿ ಅವರು ನಿಪುಣರೆಂದು ಹೇಳಲಾಗಿದೆ ಶತ್ರುಗಳು ಬಹಳ ದಿನಗಳಿಂದ ಸುಮ್ಮನಿದ್ದು ಬಾಟಾನಿನಲ್ಲಿ ಉಗ್ರ ರೀತಿಯಲ್ಲಿ ಮೇಲೆಬಿದ್ದರು. ಆದರೆ ವೈನ್‌ರೈಟ್‌ರವರ ಪಡೆಗಳು ಅವರನ್ನು ಸುಲಭವಾಗಿ ಓಡಿಸಿದವು

ಜಪಾನು ಚೈನಾದೇಶದೊಡನೆ ಸಂಧಾನ ನಡೆಸುವದಂತೆ.

ಲಂಡನ್ನಿಗೆ ಬಂದಿರುವ ವರದಿಯಂತೆ ಜಪಾನು ಚೈನಾದೊಡನೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆಯೆಂದೂ ಇದಕ್ಕಾಗಿ ೬ ಷರತ್ತುಗಳನ್ನು ಹಾಕುವುದೆಂದೂ ಗೊತ್ತಾಗಿದೆ

೧ ಏಷ್ಯಾದ ಪುನರ್ವ್ಯವಸ್ಥೆಯ ಹೊಸ ಹಂಚಿಕೆಯಲ್ಲಿ ಚೈನಾದೇಶವು ಜಪಾನಿನೊಡನೆ ಸಹಕರಿಸುವುದಾದರೆ ಜಪಾನು ಮಾರ್ಷಲ್ ಚಿಯಾಂಗ್ ಕೈ-ಷೇಕ್‌ರ ಸರ್ಕಾರವನ್ನು ಅಂಗೀಕರಿಸುವುದು ೨ ಆಕ್ರಮಿಸಿರುವ ಕೆಲವು ಬಂದರುಗಳ ಹೊರತು ಮಿಕ್ಕ ಪ್ರಾಂತಗಳನ್ನು ಜಪಾನು ಚೈನಾಕ್ಕೆ ಬಿಟ್ಟುಕೊಡುವುದು ೩ ಜಪಾನು ಎಲ್ಲಾ ಖೈದಿಗಳನ್ನೂ ಬಿಡುಗಡೆ ಮಾಡುವುದು ೪ ಉಭಯರೂ ಯುದ್ಧ ಖರ್ಚನ್ನಾಗಲಿ ನಷ್ಟವನ್ನಾಗಲಿ ಕೇಳಕೂಡದು ೫ ಉಭಯರ ಸುಂಕದ ಏರ್ಪಾಡು. ೬ ಚೀಣಾ ಮತ್ತು ಬರ್ಮಾಯರ ಸಹವರ್ತನೆಯನ್ನು ಒಪ್ಪಿ ಚೀಣಾದ ಕೈತಪ್ಪಿರುವ ಬಂದರುಗಳಿಗೆ ಬದಲಾಗಿ ರಂಗೂನನ್ನು ಬಿಟ್ಟುಕೊಡುವುದು ಇದಕ್ಕೆ ಪ್ರತಿಫಲವಾಗಿ ಚೈನಾದೇಶವು ಸಂಯುಕ್ತರಾಷ್ಟ್ರಗಳಿಂದ ಬೇರೆಯಾಗಬೇಕು ಮತ್ತು ಜಪಾನರು ರಷ್ಯದೊಡನೆ ಯುದ್ಧ ಹೂಡಿದರೆ ಜಪಾನಿನೊಡನೆ ಸ್ನೇಹಭಾವದಿಂದ ಕೂಡಿ ತಟಸ್ಥ ರಾಷ್ಟ್ರವಾಗಿರಬೇಕು ಈ ಶಾಂತಿ ಷರತ್ತುಗಳನ್ನು ಚೈನಾದೇಶವು ಚರ್ಚಿಸುವುದೇ ಇಲ್ಲವೆಂದು ನಂಬಲಾಗಿದೆ

ಕೊರಿಯದಲ್ಲಿ ಪ್ರಭುತ್ವ ಸ್ಥಾಪನೆ

ಜಪಾನಿನ ಅಧಿಕಾರದಲ್ಲಿರುವ ಕೊರಿಯ ದೇಶವನ್ನು ಸ್ವತಂತ್ರವನ್ನಾಗಿ ಮಾಡುವ ಉದ್ದೇಶದಿಂದ ಈಗ ಚಂಗ್‌ಕಿಂಗ್ ನಗರದಲ್ಲಿ ಕೊರಿಯದ ಸ್ವತಂತ್ರ ಪ್ರಭುತ್ವವೊಂದನ್ನು ಸ್ಥಾಪಿಸಲಾಗಿದೆ ಆ ಪ್ರಭುತ್ವಕ್ಕೆ ಚಂಗ್‌ಕಿಂಗ್ ಸರ್ಕಾರದವರೂ ಬ್ರಿಟಿಷ್ ಮತ್ತು ಅಮೇರಿಕ ಸರ್ಕಾರದವರೂ ಒಪ್ಪಿಗೆ ಕೊಡಬಹುದೆಂಬ ಆಶೆಯಿದೆ ಜಪಾನಿನೊಡನೆ ಯುದ್ಧ ಹೂಡಲು ಈ ಸರಕಾರವು ತಕ್ಕಷ್ಟು ಬಲವನ್ನು ಪಡೆದಿರುವುದೆಂದು ಹೇಳಲಾಗಿದೆ ಈ ಪ್ರಭುತ್ವವು ೨೦೦೦೦ ಮಂದಿ ಗೆರಿಲಾ ಸೈನಿಕರಿಂದ ಕೂಡಿದೆ ಈ ಸೈನಿಕರು ಇಂದು ಚೀಣಾ ಮತ್ತು ಮಂಚೂರಿಯ ದೇಶಗಳಲ್ಲಿ ಯುದ್ಧಮಾಡುತ್ತಿದ್ದಾರೆ. ಇದಲ್ಲದೆ ಕೊರಿಯದಲ್ಲಿ ಕೆಲಸಮಾಡುತ್ತಿರುವ ಸ್ವತಂತ್ರ ಪಕ್ಷದಲ್ಲಿ ೫೦೦೦೦ ಜನರೂ ಮಂಚೂರಿಯದಲ್ಲಿ ಕೆಲಸಮಾಡುತ್ತಿರುವವರಲ್ಲಿ ೨೦೦೦೦ ಜನರೂ ಇದ್ದಾರೆ ಅಲ್ಲದೆ ಕೊರಿಯದಲ್ಲಿ ವಾಸಮಾಡುತ್ತಿರುವ ಬಹುಜನ ಪ್ರಜೆಗಳು ಜಪಾನಿನ ವಿರುದ್ಧವಾಗಿ ವರ್ತಿಸುತ್ತಾ ಕೊರಿಯದ ಸ್ವಾತಂತ್ರ್ಯವನ್ನು ಬಯಸುತ್ತಿದ್ದಾರೆ

ಕೊರಿಯಾ ಪ್ರಜೆಗಳು 1919 ರಲ್ಲಿ ಸ್ವಾತಂತ್ರ್ಯವನ್ನು ಪಡೆಯಲು ದಂಗೆ ಎದ್ದ ಪ್ರಯುಕ್ತ ಜಪಾನರು ಬಹಳ ಕ್ರೂರ ರೀತಿಯಿಂದ ಆ ದಂಗೆಯನ್ನು ತುಳಿದುಬಿಟ್ಟರು. ಆಗ ಸಾವಿರಾರು ಜನರ ಕೊಲೆಯಾಯಿತು. ಲಕ್ಷಾಂತರ ಜನರನ್ನು ಬಂಧನಕ್ಕೆ ಗುರಿಪಡಿಸಲಾಯಿತು. ಕೊರಿಯದೇಶದ ಆರ್ಥಿಕ ಸ್ಥಿತಿಯು ಬಹಳ ಶೋಚನೀಯವಾಗಿದೆ ಕೊರಿಯದೇಶದಲ್ಲಿ ಬೆಳೆಯುವ ಆಹಾರಪದಾರ್ಥಗಳು ಮತ್ತು ಅಕ್ಕಿ ಆ ದೇಶಕ್ಕೆ ಸಾಕು ಆದರೆ ಬೆಳೆದ ವಸ್ತುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನು ಕೊರಿಯದಲ್ಲಿರುವ ಜಪಾನೀ ಪ್ರಜೆಗಳೇ ತಿಂದುಹಾಕಿಬಿಡುತ್ತಿರುವುದರಿಂದ ಆಹಾರ ಪದಾರ್ಥಗಳಿಗೆ ಅಲ್ಲಿ ಬಹಳ ತೊಂದರೆಯುಂಟಾಗಿದೆ. ಕೊರಿಯದಲ್ಲಿದ್ದ ಶ್ರೀಮಂತರು ಮೊದಲು ಜಪಾನರ ಸ್ನೇಹಿತರಾಗಿದ್ದರು ಈಗ ವೈರಿಗಳಾಗಿದ್ದಾರೆ.

ಹಿಟ್ಲರನಿಗೆ ತನ್ನ ಅಶಕ್ತತೆಯು ಅರಿವಾಗಿದೆ

ಚಳಿಗಾಲ ಕಳೆದಮೇಲೆ ಜರ್ಮನಿಯು ಹೊಸ ಕದನವನ್ನಾರಂಭಿಸುವದೆಂದು ಹಿಟ್ಲರನು ಮೇಲಿಂದ ಮೇಲೆ ಹೇಳುತ್ತಿದ್ದಾನೆ. ಎಲ್ಲಿ ಹೊಸದಾಗಿ ಏಟು ಹಾಕಲಾಗುವದೆಂಬುದನ್ನು ಕಂಡುಹಿಡಿಯುವದು ಕಷ್ಟ. ನಾರ್ವೆಯಲ್ಲಿ ಜರ್ಮನರು ವಿಶೇಷ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವದನ್ನೂ ರಷ್ಯ ಮತ್ತು ಲಿಬ್ಯಾಗಳಲ್ಲಿ ವಿಶೇಷವಾಗಿ ಮೇಲೆ ಬೀಳದಿರುವದನ್ನೂ ನೋಡಿದರೆ ಪುನಃ ಬ್ರಿಟನ್ನನ್ನು ಮುತ್ತಬೇಕೆಂಬ ಯೋಚನೆ ಇರುವಂತಿದೆ ಆದರೆ ಬ್ರಿಟನ್ನಿನ ಮಿಲಟರಿ ವಿಮರ್ಶಕರು ಈ ಮುತ್ತಿಗೆಯ ಸಂಭವವಿದೆಯೆಂದು ಭಾವಿಸುವುದಿಲ್ಲ ಏಕೆಂದರೆ ಆರ್. ಎ ಎಫ್ ಬಲವು ಬ್ರಿಟನ್ನಿನ ಸುತ್ತ ಜೋರಾಗಿದೆ ಮುತ್ತಿಗೆಗಾಗಿ ಬರಬಹುದಾದ ಶತ್ರು ನೌಕೆಗಳನ್ನು ಬಹುದೂರದಲ್ಲೇ ಗುರ್ತಿಸಿ ನಾಶಮಾಡಬಹುದಾಗಿದೆ ಆದ್ದರಿಂದ ಜರ್ಮನಿಯು ಬ್ರಿಟನ್ನಿಗೆ ಮುತ್ತಿಗೆ ಹಾಕುವ ಬದಲು ಬ್ರಿಟನ್ನೇ ಫ್ರಾನ್ಸ್, ಹಾಲೆಂಡ್, ನಾರ್ವೆ ಮೊದಲಾದ ಯೂರೋಪಿನ ದೇಶಗಳ ಮೇಲೆ ಮುತ್ತಿಗೆ ಹಾಕುವ ಸಂಭವವು ಹೆಚ್ಚಾಗಿದೆ

ಯೂರೋಪಿನ ತೀರದಲ್ಲಿ ಬಹಳ ದೂರದ ಅಂತರದಲ್ಲಿ ಹಲವು ಕಡೆ ಮುತ್ತಿಗೆ ಹಾಕಿದರೆ ಆಗ ನಾಜಿ ರಕ್ಷಣ ವ್ಯವಸ್ಥೆಯನ್ನು ಬಹಳ ದೂರ ಎಳೆದಂತಾಗುತ್ತದೆ ಮುತ್ತಿಗೆಗಾರರಿಗೆ ಸಹಾಯಮಾಡಲು ಅನೇಕ ಪಿತೂರಿಗಾರರಿದ್ದಾರೆ ರಷ್ಯದಲ್ಲಿ ಕೆಂಪು ಸೇನೆಗಳ ಒತ್ತಾಯವು ಬಲವಾಗಿರುವದರಿಂದ ಹಿಟ್ಲರನು ಅಲ್ಲಿಂದ ತನ್ನ ಬಲವನ್ನು ಬೇರೆ ಕಡೆಗೆ ಸಹಾಯಕ್ಕೆ ಕರೆಸುವದು ಅಸಾಧ್ಯ ಈಚೆಗೆ ಹಿಟ್ಲರನು ಮಾಡಿದ ಭಾಷಣವು ಬರೀ ಸುಳ್ಳಿನ ಕಂತೆ ತನ್ನ ದೌರ್ಬಲ್ಯವನ್ನು ಮುಚ್ಚಿಡುವದೇ ಆತನ ಉದ್ದೇಶ ಆತನ ಭಾಷಣದಲ್ಲಿ ಅಡಗಿರುವ ಭರವಸೆಗಳಿಂದಲೂ ಗರ್ವದ ಮಾತುಗಳಿಂದಲೂ ಅದಕ್ಕೆ ಬೆಲೆ ಕೊಡಬಾರದು. ತನ್ನ ಪತನವು ಖಂಡಿತವೆಂದೂ ಜರ್ಮನ್ ಸೇನೆಯ ವಿನಾಶವು ಅನಿವಾರ್ಯವೆಂದೂ ಹಿಟ್ಲರನು ಅರಿತಿರುವನೆಂಬುದು ಆತನ ಪ್ರತಿಯೊಂದು ಮಾತಿನಲ್ಲಿಯೂ ಒಡೆದು ಕಾಣುತ್ತಿದೆ" ಎಂದು ಶ್ರೀ ಸಮ್ನರ್‌ವೆಲ್ಸ್‌ರವರು ತಮ್ಮ ಭಾಷಣದಲ್ಲಿ ತಿಳಿಸಿದರು.

ದಿವಾನರ ನೂತನ ಪ್ರೈವೇಟ್ ಸೆಕ್ರೆಟರಿಗಳು

ಇದುವರೆಗೂ ಸರ್ಕಾರದ ಪ್ರಕಟನ ಶಾಖಾಧಿಕಾರಿಗಳಾಗಿದ್ದ ಶ್ರೀ ಸಿ ನರಸಿಂಹಮೂರ್ತಿಯವರನ್ನು ದಿವಾನರ ಪ್ರೈವೇಟ್ ಸೆಕ್ರೆಟರಿಗಳನ್ನಾಗಿ ನೇಮಿಸಲಾಗಿದೆ. ಇವರು ತಮ್ಮ ಹೊಸ ಅಧಿಕಾರವನ್ನು ವಹಿಸಿಕೊಂಡರು. ವಾರ್ ಇನ್‌ಫರ್ಮೇಷನ್ ಆಫೀಸರಾಗಿದ್ದ ಶ್ರೀ ಎಂ. ಎಸ್ ಸ್ವಾಮಿನಾಥರವರು ಇನ್ನುಮೇಲೆ ಪ್ರಕಟನ ಶಾಖಾಧಿಕಾರಿಗಳಾಗುವರು

ಕಾಗದದ ಬೆಲೆ

ಸರಕಾರದವರು ನಾನಾಬಗೆಯ ಕಾಗದದ ಬೆಲೆಯನ್ನು ಗೊತ್ತುಮಾಡಿ ಒಂದು ಹೇಳಿಕೆಯನ್ನು ಹೊರಡಿಸಿರುವರು. ಯಾರೂ ಈ ಬೆಲೆಗಿಂತ ಹೆಚ್ಚು ಬೆಲೆಗೆ ಮೈಸೂರುಸಂಸ್ಥಾನದಲ್ಲಿ ಮಾರಕೂಡದು ಪ್ರತಿಯೊಬ್ಬ ವ್ಯಾಪಾರಿಯೂ ಕೊಂಡುಕೊಳ್ಳುವವರಿಗೆ ಕಾಗದದ ದರ್ಜೆ, ಎಷ್ಟು ಕಾಗದ, ಮತ್ತು ಬೆಲೆ ಇವುಗಳನ್ನು ಒಂದು ಪಟ್ಟಿಮಾಡಿಟ್ಟು ತೋರಿಸಬೇಕು ಈ ಪಟ್ಟಿಯನ್ನು ಮುಖ್ಯವಾದ ಸ್ಥಳದಲ್ಲಿ ಅಂಗಡಿಯಲ್ಲಿಟ್ಟಿರಬೇಕು. ಕಾಗದವನ್ನಿಟ್ಟುಕೊಂಡು ಸರಕಾರದವರು ಮಾಡಿರುವ ಬೆಲೆಗೆ ಕೊಡುವುದಿಲ್ಲವೆಂದು ಯಾರೂ ಹೇಳಕೂಡದು ಜಿಲ್ಲಾಧಿಕಾರಿಗಳ ಪರಿಶೀಲನೆಗೆ ಸರ್ವದಾ ಸಿದ್ಧರಾಗಿರಬೇಕು. ಈ ಕಾನೂನಿನಂತೆ ವರ್ತಿಸದೆ ಇದ್ದವರಿಗೆ ಮೂರು ವರುಷಗಳ ಶಿಕ್ಷೆ ಅಥವಾ ಜುಲ್ಮಾನೆಗಳನ್ನು ವಿಧಿಸಬಹುದು.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವ, ತಿಪಟೂರು.

ಇಲ್ಲಿಯ ವೀರಶೈವ ಮಂಡಲಿಯವರು ಪದ್ಧತಿ ಪ್ರಕಾರ ತಾ॥ ೧೩-೩-೪೨ ರಲ್ಲಿ ಸ್ವಸದ್ಧೇಶ್ವರಾಲಯದಲ್ಲಿ ಭಗವತ್ಪಾದ ಶ್ರೀ ರೇಣುಕಾಚಾರ್ಯರ ಜಯಂತಿಯನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು. ಆ ದಿವಸ ಪ್ರಾತಃಕಾಲ ೮ ಘಂಟೆಯಿಂದ ಸ್ವಸದ್ಧೇಶ್ವರನಿಗೆ ರುದ್ರಾಭಿಷೇಕವೂ ಜಗದಾಚಾರ್ಯರ ಭಾವಚಿತ್ರ ಪಟಕ್ಕೆ ವಿಧ್ಯುಕ್ತವಾಗಿ ಷೋಡಶೋಪಚಾರ ಪೂಜೆಯೂ ನೆರವೇರಿದವು. ೧೨ ಘಂಟೆಗೆ ಸುಮಂಗಲೆಯರು ತಮ್ಮ ಮಕ್ಕಳ ಮರಿಗಳೊಡನೆ ಗುಂಪು ಗುಂಪಾಗಿ ಬಂದು ಫಲಪುಷ್ಪ ಕರ್ಪೂರಗಳನ್ನರ್ಪಿಸಿ ಭಗವತ್ಪಾದರ ಲೀಲಾತ್ಮಕ ಪದಗಳನ್ನು ಆನಂದದಿಂದ ಹಾಡಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಗುರುಕೃಪೆಗೆ ಪಾತ್ರರಾದರು. ಸಾಯಂಕಾಲ ಘಂಟೆಗೆ ಶೃಂಗರಿಸಲ್ಪಟ್ಟ ಪುಷ್ಪ ಮಂಟಪದಲ್ಲಿ ನಂದಿಧ್ವಜ ಮತ್ತು ಸಕಲ ವಾದ್ಯವೈಭವದೊಡನೆ ಜಗದ್ಗುರು ಮೂರ್ತಿಯ ಉತ್ಸವವು ಹೊರಟಿತು. ಉತ್ಸವವು ಹೊರಟ ಮುಕ್ಕಾಲು ಘಂಟೆಯ ಮೇಲೆ [illegible] ೪-೫ ನಿಮಿಷ ತತ್ಕ್ಷಣ ವೃಷ್ಟಿಯಾದರೂ ತಪ್ಪು ನಿವೇದನ್ನು ಸಲ್ಲಿಸಿದನು. ಸ್ವಾಮಿಮಹಿಮೆಯನರಿತು ಕಾಯಿ ಕರ್ಪೂರ ಫಲಗಳನ್ನರ್ಪಿಸಿ ದರ್ಶನಾಕಾಂಕ್ಷಿಗಳಾದ [illegible] ತರಾದರು. ಇದೆಲ್ಲವೂ ಶ್ರೀ [illegible] ಗುರುಮೂರ್ತಿಯ ಪ್ರಭಾವವೆಂದು ಅನೇಕರು ಉದ್ಗಾರಗಳನ್ನು ತೆಗೆದರು. ಈರೀತಿ ಉತ್ಸಾಹ ವೈಭವದೊಡನೆ ಹೊರಟ ಗುರುಮೂರ್ತಿ ಉತ್ಸವವು ಪಟ್ಟಣ ನಿವಾಸಿಗಳ ಕೈಕೋಲ್ಪತ್ತು ವ ಮುಖ್ಯ ಬೀದಿಗಳಲ್ಲಿ ಹಾದು ಹನ್ನೆರಡು ಘಂಟೆಗೆ ಸ್ವಸ್ಥಾನಕ್ಕೆ ಸೇರಿತು. ಆನಂತರ ಮಹಾಮಂಗಳಾರತಿಯಾಗಿ ಸರ್ವರಿಗೂ ಪ್ರಸಾದ ವಿನಿಯೋಗವಾಯಿತು. ಈ ಮಹಾ ಕಾರ್ಯವನ್ನು ವೇ॥ ಎ ಎ. ಶಿವಲಿಂಗಾರಾಧ್ಯರು, ವೇ॥ ಎ ಎಂ ಚಿಕ್ಕಣ್ಣಾರಾಧ್ಯರು, ವೇ॥ ಜಿ ತಮ್ಮಯ್ಯನವರು, ಶ್ರೀ॥ ಸಾಸಲು ಮುರಿಗಪ್ಪನವರು, ಶ್ರೀ॥ ಎಚ್ ಎಂ ಶಾಂತಣ್ಣನವರು, ಶ್ರೀ॥ ಎ. ಎಸ್. ಮಹಾಲಿಂಗಪ್ಪನವರು, ಮ॥ ರಾ॥ ಜಿ ಎಸ್ ಗುರುಚನ್ನಬಸಪ್ಪನವರು, ರಾ॥ ಎಂ ನಂಜಪ್ಪನವರು, ಶ್ರೀ॥ ಸಿ ಕೆ ಕಪ್ಪಣ್ಣನವರು ಕೋ॥ ಆ॥ ಸೊಸೈಟಿ ಆನರರಿ ಸೆಕ್ರೆಟರಿ ಇತ್ಯಾದಿ ಮಹಾಶಯರು ವಿಶೇಷ ಶ್ರದ್ಧಾಭಕ್ತಿಗಳಿಂದ ನೆರವೇರಿಸಿ ಗುರ್ವನುಗ್ರಹಕ್ಕೆ ಪಾತ್ರರಾದರು ಗುರುಕಾರ್ಯತತ್ಪರರಾದವರೆಲ್ಲರಿಗೂ ಶ್ರೀ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುವ,

ಪ್ರತ್ಯಕ್ಷದರ್ಶಿ.

ಬಳುರಗಿ

ಗುಲ್ಬುರ್ಗಾ ಜಿ॥ ಬಳುರಗಿ ಗ್ರಾಮದಲ್ಲಿರುವ ಮ॥ ರಾ॥ ಗುರುಶಂಕರ ದಂಡಲಿಂಗಪ್ಪ ಮಾಸ್ತರರ ಮನೆಯಲ್ಲಿ ತಾ॥ ೧೩-೩-೧೯೪೨ನೆಯ ದಿವಸ ಶ್ರೀಜಗದಾಚಾರ್ಯರ ಜಯಂತಿಯು ವೈಭವದಿಂದ ನೆರವೇರಿಸಲ್ಪಟ್ಟಿತು. ಪ್ರಾತಃಕಾಲ ಜಗದಾಚಾರ್ಯರ ಮೂರ್ತಿಗೆ ಅಭಿಷೇಕವು ಮಾಡಲ್ಪಟ್ಟಿತು. ಅಂದು ಸಾಯಂಕಾಲ ವೃಷಭೇಶ್ವರ ದೇವಾಲಯದಲ್ಲಿ ಸಭೆಗೂಡಿತು. ಭೂಸನೂರು ಪಟ್ಟಾಧ್ಯಕ್ಷರು ಅಧ್ಯಕ್ಷರಾಗಿ ೩ ತಾಸುಗಳ ವರೆಗೆ ಜಗದಾಚಾರ್ಯರ ಮಹತ್ತ್ವವನ್ನೂ ಜಯಂತಿಯ ಆವಶ್ಯಕತೆಯನ್ನೂ ಬೋಧಿಸಿದರು. ಬಸವಪಂಥಿಗಳೇ ಆದಿಯಾಗಿ ಸರ್ವರೂ ಪರಮಾನಂದಭರಿತರಾದರು. ಮಹಾಮಂಗಳಾರತಿಯಾದ ಬಳಿಕ ಜಗದಾಚಾರ್ಯರ ಜಯಘೋಷದೊಡನೆಯೂ, ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರ ಜಯಘೋಷದೊಡನೆಯೂ ಸಭೆಯು ವಿಸರ್ಜಿಸಲ್ಪಟ್ಟಿತು.

ವಡಸಿಗ್ಗಲಿ

ಲಕ್ಷ್ಮೇಶ್ವರ ತಾ॥ ವಡಸಿಗ್ಗಲಿ ಗ್ರಾಮದಲ್ಲಿ ಫಾಲ್ಗುನ ಶುದ್ಧ ೧೪ ದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯು ಬಹು ವಿಜೃಂಭಣೆಯಿಂದ ನೆರವೇರಿತು. ಆ ದಿವಸ ವಿಶಾಲವಾದ ಅರಳೆಲೆ ಮಹಾವೃಕ್ಷದಡಿ ಶ್ರೀ॥ [illegible] ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು. ಸಭಾಮಧ್ಯದಲ್ಲಿ ಶ್ರೀರೇಣುಕಾಚಾರ್ಯರ [illegible] ಶ್ರೀಜಗದ್ಗುರು ಪಂಚಾಚಾರ್ಯರ [illegible] ವಿಷಯವನ್ನೂ ಹೇಳಿದರು. [illegible] ಅಧ್ಯಕ್ಷರ ಅಪ್ಪಣೆಯಂತೆ ಜಗದ್ಗುರು ಪಂಚಾಚಾರ್ಯರ ಭಜನಾ [illegible] ಈ ಸಮಯದಲ್ಲಿ ವೇ॥ ಸಂಗಯ್ಯನವರು [illegible] ಪ್ರಭಾಷಣ [illegible] ಸಮರ್ಪಿಸಿದರು

ಓರ್ವ ಪ್ರತ್ಯಕ್ಷದರ್ಶಿ.

ಹಾವೇರಿ

ಧಾರವಾಡ ಜಿ ಹಾವೇರಿ ಪೇಟೆಯಲ್ಲಿ ತಾ॥ ೧-೩-೪೨ ನೇಯ ದಿವಸ ಶ್ರೀ ರೇಣುಕಾಚಾರ್ಯರ ಜಯಂತಿಯು ಬಹು ವೈಭವದಿಂದ ನೆರವೇರಿತು. ಪ್ರಾತಃಕಾಲ ರುದ್ರಾಭಿಷೇಕವು ಮಧ್ಯಾಹ್ನ ಗಣಸಂತರ್ಪಣೆಯೂ ನೆರವೇರಿದವು. ಸಾಯಂಕಾಲ ೬ ಘಂಟೆಗೆ ನೂತನ ರಥದಲ್ಲಿ ಭಾವಚಿತ್ರದ ಮೆರವಣಿಗೆಯಾಯಿತು. ಗ್ರಾಮವು ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಉತ್ಸವದ ಸಮಯದಲ್ಲಿ ಸ್ತ್ರೀ ಪುರುಷರು ಸುಮಂಗಲೆಯರು ಕಾಯಿಕರ್ಪೂರಗಳನ್ನರ್ಪಿಸಿ ಆಶೀರ್ವಾದವನ್ನು ಪಡೆಯುತ್ತಿದ್ದರು. ವಾದ್ಯವೈಭವವು ವರ್ಣನಾತೀತವಾಗಿತ್ತು. ಈ ರೀತಿ ಉತ್ಸವವು ವೈಭವದಿಂದ ಸಾಗಿ ರಾತ್ರಿ ೧೨ ಘಂಟೆಗೆ ಸ್ವಸ್ಥಾನವನ್ನು ತಲ್ಪಿತು. ಆವೇಳೆ ಮಂಗಳಾರತಿಯಾಗಿ ಸರ್ವರೂ ಪ್ರಸಾದವನ್ನು ಸ್ವೀಕರಿಸಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಓರ್ವ ಗುರುಭಕ್ತ.

ಪ್ರಸಿದ್ಧ ಪತ್ರಿಕೆ

ಕೆಲವು ವರ್ಷಗಳಿಂದೀಚೆಗೆ ಸಂಸ್ಥಾನದಲ್ಲಿ ಪ್ಲೇಗು ರೋಗವು ಅಲ್ಲಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಲೇ ಇದೆ. ಆ ಜಾಡ್ಯವು ಸಂಭವಿಸದಂತೆ ಅಥವಾ ಅದು ಹರಡದಂತೆ ಸರಿಯಾದ ಏರ್ಪಾಡುಗಳನ್ನು ಮಾಡಲು ಕಾನೂನಿನ ಸಾಮಾನ್ಯ ನಿಯಮಗಳ ಮೇರೆಗೆ ಸಾಧ್ಯವಾಗುವಂತೆ ಕಂಡುಬರುವುದಿಲ್ಲ. ಪ್ಲೇಗುರೋಗ ಸಂಭವಿಸದಂತೆ ತಪ್ಪಿಸಿ ಅದ. ಹರಡದಂತೆ ಅಡ್ಡಿಪಡಿಸುವುದಕ್ಕೆ ತಕ್ಕ ವ್ಯವಸ್ಥೆ ಮಾಡುವುದಕ್ಕಾಗಿ ಸರ್ಕಾರದವರು ಸಾಂಕ್ರಾಮಿಕ ರೋಗಗಳಿಗೆ ಸಂಬಂಧಪಟ್ಟ ಆಕ್ಟಿನ 2ನೆಯ ಪ್ರಕರಣದ ಮೇರೆಗೆ ಕೆಲವು ಹಂಗಾಮಿ ಆಕ್ಟುಗಳನ್ನು ಸಾದರುಮಾಡಿರುತ್ತಾರೆ. ಈ ಆಕ್ಟುಗಳು 1942ನೆಯ ಇಸವಿ ಜನವರಿ 2ನೆಯ ತಾರೀಖಿನ ಲಾಗಾಯತು ಒಂದು ವರ್ಷ ಅವಧಿಯವರೆಗೆ ಜಾರಿಯಲ್ಲಿರಬೇಕೆಂದು ವಿಧಾಯಕವಾಗಿವೆ

ಪ್ಲೇಗುಜಾಡ್ಯವು ಹರಡದಂತೆ ಈ ಆಕ್ಟುಗಳ ಮೇರೆಗೆ ಮಾಡತಕ್ಕ ಏರ್ಪಾಡುಗಳಿಗೆ ತಗಲತಕ್ಕ ವೆಚ್ಚವೆಲ್ಲವನ್ನೂ ಸರ್ಕಾರದವರೇ ವಹಿಸಿಕೊಳ್ಳುತ್ತಾರೆ.

ಈ ಆಕ್ಟುಗಳ ಮೇರೆಗೆ, ಪ್ಲೇಗು ಜಾಡ್ಯವು ಹರಡದಂತೆ ಮಾಡತಕ್ಕ ಏರ್ಪಾಡುಗಳ ಮೇಲ್ತನಿಖೆಯನ್ನು ಸಾಮಾನ್ಯವಾಗಿ ಜನಾರೋಗ್ಯ ರಕ್ಷಣೆ ಇಲಾಖೆಯ ಡೈರೆಕ್ಟರವರಿಗೆ ವಹಿಸಿಕೊಡಲಾಗಿದೆ, ಮತ್ತು ತಮ್ಮ ತಮ್ಮ ಅಧಿಕಾರಕ್ಕೊಳಪಟ್ಟ ಡಿಸ್ಟ್ರಿಕ್ಟುಗಳಲ್ಲಿ ಪ್ಲೇಗು ರೋಗವು ವ್ಯಾಪಿಸದಂತೆ ಮತ್ತು ಹರಡದಂತೆ ಅಡ್ಡಿಪಡಿಸತಕ್ಕ ಕಾರ್ಯಗಳನ್ನು ನಡೆಯಿಸುವ ಜವಾಬ್ದಾರಿಯನ್ನು ಆಯಾ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳಿಗೆ ವಹಿಸಿಕೊಡಲಾಗಿದೆ.

ಪ್ಲೇಗು ರೋಗವು ಹರಡದಂತೆಯೂ ತಪ್ಪಿಸಿ ಹತೋಟಿಯನ್ನಿಡುವುದಕ್ಕಾಗಿ ಡೆಪ್ಯುಟಿಕಮಿಷನರುಗಳಿಗೆ ನಾನಾ ಅಧಿಕಾರಗಳನ್ನು ಕೊಡಲಾಗಿದೆ. ಅವುಗಳ ಪೈಕಿ ಕೆಲವನ್ನು ಈ ಕೆಳಗೆ ನಮೂದಿಸಬಹುದು. ಅವು ಯಾವವೆಂದರೆ :—ಮಾರ್ಕೆಟ್ಟುಗಳನ್ನು ಮುಚ್ಚಿಸುವುದು, ಜನಗಳು ಒಟ್ಟಾಗಿ ಸೇರುವುದನ್ನು ತಪ್ಪಿಸುವುದು, ರೋಗದ ಸೋಂಕು ಇರುವ ಪ್ರದೇಶಗಳನ್ನು ಮತ್ತು ಅವುಗಳ ಸುತ್ತಮುತ್ತಲ ಸ್ಥಳಗಳನ್ನು ಬಿಟ್ಟುಹೋಗುವಂತೆ ಜನಗಳಿಗೆ ಅಪ್ಪಣೆ ಮಾಡುವುದು, ರೋಗದ ಸೋಂಕು ತಗಲಿರುವ ಪ್ರದೇಶಗಳಿಂದ ಬರುವ ಜನಗಳೆಲ್ಲರೂ ಇನಾಕಲೇಷ ಹಾಕಿಸಿಕೊಳ್ಳಬೇಕೆಂದು ನಿರ್ಬಂಧವಾದ ಆಜ್ಞೆಯನ್ನು ಹೊರಡಿಸುವುದು, ಪ್ಲೇಗಿನ ಸೋಂಕು ತಗಲಿಯೆಂದು ಅನುಮಾನಿಸಲ್ಪಟ್ಟ ಆವರಣಗಳನ್ನು ಪರಿಶೀಲಿಸಿ ನೋಡುವಂತೆ ಹುಕುಂ ಮಾಡುವುದು; ರೋಗ ಸೋಂಕು ತಗಲಿದ ಪ್ರದೇಶಗಳಲ್ಲಿರುವ ಗುಡಿಸಲುಗಳನ್ನೂ ಜೋಪಡಿಗಳನ್ನೂ ಕೆಡವಿಸುವಂತೆ ಹುಕುಂ ಮಾಡುವುದು; ರೈಲಿನಲ್ಲಿ, ರಸ್ತೆಯಲ್ಲಿ ಅಥವಾ ಮತ್ತಾವುದಾದರೂ ರೀತಿಯಲ್ಲಿ ಒಯ್ಯಲ್ಪಡುವ ದವಸಧಾನ್ಯಗಳ ಮೂಟೆಗಳನ್ನು, ವ್ಯಾಪಾರದ ಸಾಮಗ್ರಿಗಳನ್ನು ಅಥವಾ ಜನರು ತಮ್ಮೊಡನೆ ಇಟ್ಟುಕೊಂಡಿರುವ ಸ್ವತ್ತುಗಳನ್ನು ಪರೀಕ್ಷಿಸುವಂತೆ ಹುಕುಂ ಮಾಡುವುದು; ಆ ಮೂಟೆಗಳನ್ನು, ಸಾಮಗ್ರಿಗಳನ್ನು ಅಥವಾ ಸ್ವತ್ತುಗಳನ್ನು ಕೆಳಗಿಳಿಸುವಂತೆಯೂ ಮತ್ತು ಅವುಗಳನ್ನು ವಿಷಕ್ರಿಮಿನಾಶಕ ದ್ರವದಿಂದ ತೊಳೆಯುವುದೇ ಮುಂತಾದ ಕೆಲಸಗಳನ್ನು ಮಾಡಿಸುವಂತೆಯೂ ಹುಕುಂ ಮಾಡುವುದು.

ಪ್ರತಿಯೊಬ್ಬ ಮನುಷ್ಯನೂ ಯಾವುದಾದರೂ ಕಟ್ಟಡದ ಮಾಲೀಕನು ಅಥವಾ ಆ ಕಟ್ಟಡದಲ್ಲಿ ವಾಸಮಾಡುತ್ತಿರುವ ಪ್ರತಿಯೊಬ್ಬ ಮನುಷ್ಯನೂ ಅಥವಾ ಪ್ರತಿಯೊಬ್ಬ ಮೆಡಿಕಲ್ ಪ್ರಾಕ್ಟಿಷನರೂ, ಯಾವುದಾದರೂ ಮನೆಯಲ್ಲಿ ಇಲಿಗಳೇನಾದರೂ ಸಾಯುತ್ತಿರುವುದು ಅಥವಾ ಯಾರಿಗಾದರೂ ಪ್ಲೇಗು ರೋಗವು ಸಂಭವಿಸಿರುವುದು ಅಥವಾ ಗಡ್ಡೆ ಕಾಣಿಸಿಕೊಂಡು ಜ್ವರ ಬಂದಿರುವುದು ಅಥವಾ ಮತ್ತಾವುದಾದರೂ ಅನುಮಾನಾಸ್ಪದವಾದ ಚಿಹ್ನೆಗಳು ಕಂಡುಬಂದಿರುವುದ.— ಈ ವಿಷಯಗಳೇನಾದರೂ ತಮ್ಮ ಗಮನಕ್ಕೆ ಬಂದರೆ, ಅವರು ಈ ವಿಚಾರಗಳನ್ನು ಅತ್ಯಂತ ಸಮೀಪದಲ್ಲಿರುವ ಸ್ಥಳೀಯ ಅಧಿಕಾರಿಗಾಗಲಿ ಅಥವಾ ಅತ್ಯಂತಸಮೀಪದಲ್ಲಿರುವ ಡಿಸ್ಪೆನ್ಸರಿಯ ಯಾರಾದರೊಬ್ಬರು ಆಫೀಸರಿಗಾಗಲಿ ವರದಿ ಮಾಡಬೇಕೆಂದು ಆಕ್ಟುಗಳಲ್ಲಿ ನಿರ್ಬಂಧಗೊಳಿಸಲಾಗಿದೆ. ಗಣಿಗಳ, ಎಸ್ಟೇಟುಗಳ ಮತ್ತು ಕಾರ್ಖಾನೆಗಳ ಚಾರ್ಜಿನಲ್ಲಿರತಕ್ಕ ಸೂಪರಿಂಟೆಂಡೆಂಟರುಗಳು ಅಥವಾ ಏಜೆಂಟರುಗಳ ಕೂಡ ಅಂಥ ವಿಚಾರಗಳನ್ನು ತಿಳಿಸಬೇಕೆಂದು ನಿರ್ಬಂಧಗೊಳಿಸಲಾಗಿದೆ.

ಪ್ಲೇಗು ರೋಗದಿಂದ ಮೃತಪಟ್ಟವರ ದೇಹಗಳನ್ನು ಜನರು ವಾಸಮಾಡತಕ್ಕ ಸ್ಥಳಗಳಿಂದಲೂ ಮತ್ತು ನೀರು ಸರಬರಾಯಿಯ ಮೂಲಸ್ಥಾನಗಳಿಂದಲೂ ಬಹಳ ದೂರವಾಗಿರತಕ್ಕ ಪ್ರದೇಶಗಳಲ್ಲಿ ಅದು ಅತಿ ಆಳವಾಗಿ ತೋಡಿರತಕ್ಕ ಮತ್ತು ಒಂದು ಗುಣಿಯಿಂದ ಮತ್ತೊಂದು ಗುಣಿಗೆ ನಾಲ್ಕು ಅಡಿಗಳ ಅಂತರವಿರತಕ್ಕ ಗುಣಿಗಳಲ್ಲಿ ಹೂಳತಕ್ಕದೆಂದು ನಿಬಂಧನೆಗಳಲ್ಲಿ ವಿಧಾಯಕವಾಗಿದೆ. ಯಾವ ಪ್ರದೇಶಗಳಲ್ಲಿ, ಶವಗಳನ್ನು ಹೂಳಬಹುದು ಮತ್ತು ಯಾವ ಪ್ರದೇಶಗಳಲ್ಲಿ, ಹೂಳಬಾರದು ಎಂಬುದನ್ನು ನಿರ್ಧರಿಸಿ ವಿಧಾಯಕಮಾಡಲು ಡೆಪ್ಯುಟಿ ಕಮಿಷನರುಗಳಿಗೆ ಅಧಿಕಾರವನ್ನು ವಹಿಸಿಕೊಡಲಾಗಿದೆ. ಪ್ಲೇಗು ರೋಗದಿಂದ ಸತ್ತವರ ಶವಗಳನ್ನು ಸುಡಬೇಕಾದ ಪಕ್ಷದಲ್ಲಿ ಅವುಗಳನ್ನು ಪ್ರತ್ಯೇಕಿಸಲ್ಪಟ್ಟ ಪ್ರದೇಶಗಳಲ್ಲಿ ಸುಡಬೇಕು. ಪ್ಲೇಗು ರೋಗದಿಂದ ಮೃತಪಟ್ಟವರ ಶವಗಳನ್ನು ಹೂಳಲು ಅಥವಾ ಸುಡಲು ಬೀಳತಕ್ಕ ಖರ್ಚುಗಳನ್ನು ಮೃತಪಟ್ಟವರ ಬಂಧುಗಳು ವಹಿಸಿಕೊಳ್ಳಲು ಸಾಧ್ಯವಿಲ್ಲದ ಸಂದರ್ಭಗಳಲ್ಲಿ ಆ ಖರ್ಚುಗಳನ್ನು ಸರ್ಕಾರದವರೇ ವಹಿಸಿಕೊಳ್ಳುವರು.

ಪ್ಲೇಗು ಆಕ್ಟಿನ ನಿಯಮಗಳ ಉಲ್ಲಂಘನವು ಇಂಡಿಯನ್ ಪೀನಲ್ ಕೋಡಿನ ೧೮೮ ನೆಯ ಪ್ರಕರಣದ ಮೇರೆಗೆ ಶಿಕ್ಷೆಗೆ ಗುರಿಯಾಗತಕ್ಕ ಒಂದು ತಪ್ಪೀರಿನಂತೆ ಪರಿಗಣಿಸಲ್ಪಡುವುದು. ಮತ್ತು ಅಂಥ ತಪ್ಪೀರುಗಳನ್ನು ಮಾಡತಕ್ಕ ಅಪರಾಧಿಗಳು ಆರುತಿಂಗಳುಗಳ ವರೆಗೂ ಹೋಗಬಹುದಾದ ಸಜಾ ಶಿಕ್ಷೆಗೆ ಅಥವಾ ೧,೦೦೦ ರೂಪಾಯಿಗಳವರೆವಿಗೂ ಹೋಗಬಹುದಾದ ಜುಲ್ಮಾನೆಯ ಶಿಕ್ಷೆಗೆ ಅಥವಾ ಈ ಎರಡು ಶಿಕ್ಷೆಗಳಿಗೂ ಗುರಿಯಾಗುವರು.

ಸಿ. ನರಸಿಂಹಮೂರ್ತಿ,

ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ನೂರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಮೂವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರಿವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧ ಹೆಸರು	ತೊಲೆ	ಮೂಲ್ಯ
ಭಸ್ಮಗಳು		
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಸಿಂಧೂರ	೧	೨—೦—೦
ಲ್ಲಸಿಂಧೂರ	೧	೪—೦—೦
ಾಲಸಿಂಧೂರ	೧	೪—೦—೦
ಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ರವಂಗ	೧	೧—೦—೦
ಸ್ವರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೯—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಶುಕ್ತಾಕಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ದಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ, ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ; ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತರುಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಬ್ಲಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ವಿನಿಯೋಗಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. **ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು [illegible]ಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ \ ೨೫ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಪ್ರಸಿದ್ಧತರಾದ ಅಗಸ್ತ್ಯ ದಧೀಚಿ ವ್ಯಾಸ [illegible] ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ \ ೧೪ ಬೆಲೆ	೦—೧—೬
ಸದ್ಯಃ ಶ್ರೀ [illegible] ಮಾಡಿರತಕ್ಕ [illegible] ಸಂದರ್ಭದಲ್ಲಿ ತೆಗೆದ ಫೋಟೋ ಸೈ ೧೧ \ ೧೫ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾಕಾರದ ಫೋಟೋ ಸೈಜು ೮ \ ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೧ \ ೧೪ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯರು ಲಿಂಗದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ಮುಕ್ತಿಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಲಂಕಾಪಟ್ಟಣದಲ್ಲಿಯೆ ಮೂರುಕೋಟಿ ರೂಪಗಳನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ [illegible] ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು [illegible] ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು [illegible] ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ದೇವಸ್ಥಾನದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ[illegible] ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—೧ ರೂಪಾಯಿಗಿಂತ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂಪಾಯಿಗಳ ಫೋಟೋ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ. ಪಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇವನ್ನ ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦. ವಿ.ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[42] ಪೋ ಬಾ ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸಪ್ತಶಾಸ್ತ್ರಮತವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸಪ್ತಶಾಸ್ತ್ರಮತವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಭವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವುದು)	೧| ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As.
लिंगधारणचंद्रिका (संस्कृत)	१ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
पुरुषसूक्तम् (वीरशैवश्रौतभाष्योपेतम्)	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಲ್ಪಟ್ಟು ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩೦ನೇ ಮಾರ್ಚಿ ೧೯೪೨ [ಸಂಚಿಕೆ ೪೮

ಶ್ರೀಕಾಶೀನಾಥಗ್ರಂಥಮಾಲೆಯ—೪೦-೪೧-೪೨-೪೩ನೆಯ ಪುಷ್ಪ

ಶಿವಾಗಮಸಂಗ್ರಹಃ

ಈ ಗ್ರಂಥವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ **ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮ**ಗಳೆಂಬ ನಾಲ್ಕು ಶಿವಾಗಮಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ, ಇದಕ್ಕೆ “ **ಶಿವಾಗಮಸಂಗ್ರಹ** ” ಎಂಬ ಹೆಸರನ್ನಿಡಲಾಗಿದೆ. ಈ ನಾಲ್ಕು ಶಿವಾಗಮಗಳಲ್ಲಿ ವೀರಶೈವಮತದ ಪ್ರಾಚೀನ ಧರ್ಮಗಳು ಬಹು ಹೃದಯಂಗಮವಾಗಿ ವಿವರಿಸಲ್ಪಟ್ಟಿರುವವು ವೀರಶೈವಮತದ ಸರ್ವಸ್ವವೇ ಇವುಗಳಲ್ಲಿ ಅಡಗಿರುವದು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ವಿಶೇಷ ಪ್ರಯತ್ನದಿಂದ ಇವುಗಳನ್ನು ಸಂಗ್ರಹಿಸಿ ಚನ್ನಾಗಿ ಪರಿಶೋಧಿಸಿ ಅತ್ಯಂತ ಸುಂದರವಾಗಿ ಮುದ್ರಿಸಿ ಪ್ರಕಟಿಸಿದ್ದಾರೆ. ಇಂತಹ ಸರ್ವೋತ್ತಮ ಶಿವಾಗಮಗಳು ಈಗ ಪ್ರಕಾಶಕ್ಕೆ ಬಂದಿರುವುದು ಈ ಮಠದ ಪುಣ್ಯವಿಶೇಷವೆಂದೇ ಹೇಳಬೇಕಾಗಿದೆ. ಈ ಶಿವಾಗಮಗಳು ಸದ್ಯಃ ಟೀಕೆಯಿಲ್ಲದೆ ಮೂಲ ಮಾತ್ರ ಮುದ್ರಿತವಾಗಿವೆ. ಪ್ರತಿಯೊಬ್ಬರೂ ಈ ಪೂಜ್ಯಗ್ರಂಥಗಳನ್ನು ತರಿಸಿಕೊಂಡು ಇವುಗಳಲ್ಲುಕ್ತವಾಗಿರುವ ಪ್ರಾಚೀನ ಪವಿತ್ರಧರ್ಮಗಳನ್ನು ತಿಳಿದು ಅದರಂತೆ ಆಚರಿಸಿ ಪರಶಿವನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ. ಮನೋಹರವಾದ ಮುದ್ರಣ ! ಸುಂದರವಾದ ಬೈಂಡು ! **ಬೆಲೆ ೨ ರೂಪಾಯಿ**

ಪಂಚಾಚಾರಪ್ರಕಾಶಿಕಾ (೪೪ನೆಯ ಪುಷ್ಪ)

ಇದರಲ್ಲಿ ವೀರಶೈವರು ಮುಖ್ಯವಾಗಿ ಆಚರಿಸತಕ್ಕ ೬೪ ಶೀಲಗಳು ಹೃದಯಂಗಮವಾಗಿ ವರ್ಣಿತವಾಗಿವೆ. ಚಂದ್ರಜ್ಞಾನಾಗಮದ ೯ನೆಯ ಪಟಲದಲ್ಲಿ ಈ ಶೀಲಗಳು ಉಕ್ತವಾಗಿರುವುದರಿಂದ ಇದನ್ನು ಪ್ರತ್ಯೇಕವಾಗಿ ಕನ್ನಡ ಟೀಕೆಯೊಡನೆ ಮುದ್ರಿಸಿದ್ದಾಗಿದೆ. **ಬೆಲೆ ೨ ಆಣೆ**

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ನಾನಾವಿಧ ಬಣ್ಣಗಳಿಂದ ಮನೋಹರವಾಗಿ ಮುದ್ರಿತವಾಗಿರುವ

ನೂತನ ಫೋಟೋಗಳು

ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ **(ಸೈಜು ೧೪×೧೦) ಬೆಲೆ ೪ ಆಣೆ**
(ಅತ್ಯಂತ ಸುಂದರವಾದುದು.)

ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ **(ಸೈಜು ೬×೧೦) „ ೨ ಆಣೆ**

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ನಂದೀಮಠದ ಪಟ್ಟಾಭಿಷೇಕಮಹೋತ್ಸವ, ಸೊಲ್ಲಾಪುರ.

ಸೊಲ್ಲಾಪುರ ನಗರದಲ್ಲಿ ಸುಪ್ರಸಿದ್ಧವಾಗಿರುವ ಗುರುವರ್ಗದ ನಂದೀಮಠಕ್ಕೆ ಈಗ್ಗೆ ೪೦ ವರ್ಷಗಳಿಂದ ಪಟ್ಟಾಧಿಕಾರಿಗಳಿದ್ದಿಲ್ಲ. ಅಧಿಕಾರಿಗಳಿಲ್ಲದಿರುವುದರಿಂದ ಆ ಮಠದ ಶಿಷ್ಯಮಂಡಳಿಗೆ ಬಹಳ ತೊಂದರೆಯುಂಟಾಗಿದ್ದಿತು. ಜಗದಾಚಾರ್ಯರ ಅನುಗ್ರಹದಿಂದ ಶಾಲಿವಾಹನಶಕೆ ೧೮೬೩ ವೃಷನಾಮಸಂವತ್ಸರ ಫಾಲ್ಗುನ ಬ॥ ೭ ಸೋಮವಾರ ಪ್ರಾತಃಕಾಲ ಸದರಿ ಮಠದ ಶ್ರೀ ಷಡಕ್ಷರಯ್ಯ ಎಂಬವರಿಗೆ ಶ್ರೀಮದ್ರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಪಟ್ಟಾಭಿಷೇಕಮಹೋತ್ಸವವು ನೆರವೇರಿ ಶಿಷ್ಯಮಂಡಳಿಗೆಲ್ಲಾ ಪರಮಾನಂದವಾಯಿತು. ಇದೇ ಸಮಯದಲ್ಲಿ ಚಿ॥ ಕಲ್ಲಯ್ಯ ಷಣ್ಮುಖಯ್ಯ ನಂದಿಮಠ, ಸಂಗನಬಸವಯ್ಯ ನಾಗಲಿಂಗಯ್ಯ ನಂದಿಮಠ, ಸೋಮಶೇಖರ ಕಲ್ಲಯ್ಯಸ್ವಾಮಿ ಕಾಸೇಗಾಂವಕರ್ ಈ ವಟುಗಳ ಉಪನಯನ ಮತ್ತು ಮಾಹೇಶ್ವರದೀಕ್ಷಾ ಸಂಸ್ಕಾರಗಳು ನೆರವೇರಿದವು. ಈ ಸಮಾರಂಭಕ್ಕಾಗಿ ಶ್ರೀ ರಾಚಲಿಂಗಶಿವಾಚಾರ್ಯರು ಪರಾಂಡಕರ್ ಮಠ ಬಾರ್ಸಿ, ಶ್ರೀ ಶಿವಾನಂದಶಿವಾಚಾರ್ಯರು ಆಹಿರವಾಡಿ, ಶ್ರೀಗುರುಪಾದಶಿವಾಚಾರ್ಯರು ಮುಳ್ಳೂರು, ಶ್ರೀಚನ್ನವೀರಶಿವಾಚಾರ್ಯರು ಹುಟಗಿ, ಶ್ರೀ ಮಹಾಲಿಂಗಶಿವಾಚಾರ್ಯರು ಧೈನಾಪುರ, ವೇ॥ ಜಗದೀಶಶಾಸ್ತ್ರಿಗಳು ನಾಲ್ವಾರ, ವೇ॥ ಮಲ್ಲಿಕಾರ್ಜುನಶಾಸ್ತ್ರಿಗಳು ಮಣ್ಣೂರು, ಚಂದ್ರಶೇಖರ ಡಿಂಷೂರ, ಬಾಬಾಸಾಹೇಬ ದೇಶಮುಖ, ರಾಮಚಂದ್ರಪ್ಪ ಶೇಟಿ, ವಿಶ್ವನಾಥ ದರಗೋ ಪಾಟೀಲ, ಆನಂದರಾವ್ ದರಗೋ ಪಾಟೀಲ, ಮಹಾಲಿಂಗಪ್ಪ ಶೇಳಗಿ ಪಾಟೀಲ, ವಿಶ್ವನಾಥ ದೇಗಾಂವ ಪಾಟೀಲ, ಲಿಂಬಾಬಾಯಿ ಶೇಟಿ, ಮುಕ್ತಾಬಾಯಿ ಶೇಟಿ, ಪಾರ್ವತೀಬಾಯಿ ಚವ್ಹಾನ, ಭಾಗೀರಥೀಬಾಯಿ ಕಟಾಕ, ಕಾಶೀಬಾಯಿ ಪರಪಾಟೆ ಮೊದಲಾದವರು ಆಗಮಿಸಿದ್ದರು. ನೂತನ ಪಟ್ಟಾಧಿಕಾರಿಗಳಿಂದ ಸದರಿ ನಂದಿಮಠವು ಉನ್ನತಸ್ಥಿತಿಗೆ ಬರಲೆಂದು ಸರ್ವರೂ ಜಗದೀಶ್ವರನನ್ನು ಪ್ರಾರ್ಥಿಸಿದರು. ಈ ಮಂಗಲಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ೫ ರೂಪಾಯಿಗಳು ತೆಗೆಯಲ್ಪಟ್ಟವು.

ಓರ್ವ ಪ್ರತ್ಯಕ್ಷದರ್ಶಿ.

ಸ್ವೀಕಾರ.

ಸೊಲ್ಲಾಪುರ ನಗರದಲ್ಲಿರುವ ನಂದಿಮಠದಲ್ಲಿ ವೃಷಸಂವತ್ಸರ ಫಾಲ್ಗುನ ಬ॥ ೭ ದಿವಸ ಪಟ್ಟಾಧಿಕಾರವೂ, ಉಪನಯನ ಸಂಸ್ಕಾರವೂ ನೆರವೇರಿದ ಸಮಯದಲ್ಲಿ ಸದರಿ ಮಠಾಧಿಪತಿಗಳು ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀಜಗದ್ಗುರು ಪಂಚಾಚಾರ್ಯರ ಅವತಾರ ವಿಷಯದಲ್ಲಿ ತಾಯಿ-ಮಗಳ ಸಂವಾದ

ಲೇಖಕಿ—ಶ್ರೀ|| [illegible]

([illegible] ಎಂಬಂತೆ)

ತಾಯಿ— ಸುತೆಯೆ! ಪ್ರಮುದದಿಂ ಪಂಚಾಚಾರ್ಯರನ್ನು [illegible]
ನುತಿಸಿ ಜನನ ಚಾರಿತ್ರವನ್ನು [illegible] ||೧||

ಮಗಳು—ಮಾತೆ! ಪಂಚಾಚಾರ್ಯರಿವರು ಯಾರು [illegible]
ಪ್ರೀತಿಯಿಂದ ಪೇಳಿ ಎನಗೆ ಸಕಲವನ್ನು [illegible] ||೨||

ತಾಯಿ— ಶಿವನ ಆಜ್ಞೆಯಂತೆ ಇವರು ನಮ್ಮ ಧರ್ಮವ
ಭುವನದಲ್ಲಿ ಸ್ಥಾಪಿಸಲು ಮುದದಿ ಬಂದಿರುವರು ||೩||

ಮಗಳು—ಭುವನಪೂಜ್ಯರಾದ ಇವರು ಎಲ್ಲಿ ಜನಿಸಿದರ್
ಜವದಿ ಪೇಳಿ [illegible] ||೪||

ತಾಯಿ— ಕೃತಯುಗ [illegible] ಇವರು [illegible]
ಸುತೆಯೆ! ಪ್ರತಿಯುಗದಲ್ಲಿ [illegible] ಜನಿಸಿದರ್ ||೫||

ಮಗಳು—ಯಾವ ಯಾವ ಲಿಂಗದಿಂದ ಯಾವ ಯಾವ ಜನಿಸಿದರ್
ಭಾವಜಾರಿಪ್ರಾಣಪ್ರಿಯರಿವರ ಜಗದಿ ಪೇಳ ನಿಲಿಸಿದರ್ ||೬||

ತಾಯಿ— ರೇಣುಕಾರ್ಯ ದಾರುಕಾರ್ಯ ಪಂಡಿತಾರ್ಯರು
ಸ್ಥಾಣುರೂಪಿ ಏಕೋರಾಮ ವಿಶ್ವಾರಾಧ್ಯರು ||೭||

ಸೋಮನಾಥ ಸಿದ್ಧನಾಥ ಮಲ್ಲಿನಾಥನೊಳ್ |
ರಾಮನಾಥ ವಿಶ್ವನಾಥ ಲಿಂಗದಲ್ಲಿ ಜನಿಸಿದರ್ ||೮||

ಮಗಳು—ಯಾವ ಯಾವ ಕಾರ್ಯ ಮಾಡಿ ಲೋಕಮಾನ್ಯರಾದರು |
ಸಾವಧಾನದಿಂದ ಎನಗೆ ಸಕಲವನ್ನು ತಿಳುಹಿಸೌ ||೯||

ತಾಯಿ [illegible]ಜಾದಿಯೋಗಿಗಳ್ಗೆ ಭೂಮಿಪಾಲವೃಂದಕೆ |
ಶಂಭುತತ್ವವನ್ನು ತಿಳುಹಿ ಲೋಕಪೂಜ್ಯರಾದರು ||೧೦||

ಯಕ್ಷ ಮಿಥುನ ಕುಟಿಲಗೋರಕ್ಷಸಿದ್ಧರಿಂ |
ಶಿಕ್ಷಿಸುತ್ತ ಭರದಿ ಲೋಕವಂದ್ಯರಾಗಿ ಮೆರೆದರು ||೧೧||

ಶಕ್ತಿವಿಶಿಷ್ಟಾದ್ವೈತಮತದ ಪರಮಸಾರವ |
ಭಕ್ತಜನರಿಗೆಲ್ಲ ಅರುಹಿ ಮುಕ್ತರನ್ನು ಮಾಡಿದರ್ ||೧೨||

ದುಷ್ಟಜನರ ದೌಷ್ಟ್ಯವನ್ನು ನಷ್ಟಮಾಡುತ |
ಶಿಷ್ಟಜನರ ರಕ್ಷಿಸುತ್ತ ಭೀಷ್ಟವಿತ್ತು ಪೊರೆದರು ||೧೩||

ವೀರಶೈವತತ್ತ್ವವನ್ನು ಜಗದಿ ಜವದಿ ಸ್ಥಾಪಿಸಿ |
ಸಾರಪಂಚಲಿಂಗಗಳಲಿ ಮುದದಿ ಲೀನರಾದರು ||೧೪||

ಸಾಧೋರಧಿಕವೆಂದು ಪೇಳ್ವ ನಿಗಮವಚನವ |
ನಿಗಮಮಾನ್ಯರಿವರು ಸಾರ್ಥಮಾಡಿ ಮೆರೆದರು ||೧೫||

ಮಗಳು ವೀರಮಾತೆ! ನಿನ್ನ ಮುಖದಿ ಗುರುಗಳೈವರ |
ಚಾರುಚರಿತವನ್ನು ತಿಳಿದು ಧನ್ಯಳಾದೆನು ||೧೬||

ತಾಯಿ- ಮಗಳು ವಿಜಯಮಕ್ಕೆ ವಿಜಯಮಕ್ಕೆ ಪಂಚಪೀಠಕೆ |
ವಿಜಯಮಕ್ಕೆ ವಿಜಯಮಕ್ಕೆ ನಮ್ಮ ಧರ್ಮಕೆ ||೧೭||

ಶ್ರೀ ಜಗದ್ಗುರು ದಾರುಕಾಚಾರ್ಯರ ನವ

ಸೂಕ್ತಿಮಾಲೆ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು [illegible]
ಮುದೇನೂರು

(ಹಿಂದಿನಿಂದ ಮುಂದುವರಿದುದು)

೫೧ ಬಾಹ್ಯ ಸೂರ್ಯಚಂದ್ರಾದಿಗಳು ಕಣ್ಣಿದ್ದವರಿಗೆ ಪ್ರಕಾಶಿಸುವುವು, ಹೀಗೆ ಕಣ್ಣು ಪ್ರಕಾಶಿಸಿ ತೋರಿಸುವ ಚಂದ್ರಾದಿಗಳನ್ನು ಮನಸ್ಸು ತನ್ನ ಅರಿವಿನಿಂದ ಪ್ರಕಾಶಿಸುವುದು ಆದ್ದರಿಂದ ಎಲ್ಲವನ್ನೂ ಪ್ರಕಾಶಿಸುವುದಕ್ಕೆ ಮನಸ್ಸೇ ನಮಗೆ ಮೊದಲನೆಯ ಬೆಳಕಾಯಿತಷ್ಟೆ ಈ ಬೆಳಕನ್ನೂ ಸಹ ಬೆಳಗುವದು ಪರಶಿವನ ಚೈತನ್ಯವೆಂಬ ಬೆಳಕು ಹೊರಗೆ ಹರಿಯುವ ಇಂದ್ರಿಯಗಳನ್ನು ಅಂತರ್ಮುಖಮಾಡಿಕೊಂಡು ಮನಸ್ಸನ್ನು ಕಳವಳವಿಲ್ಲದಂತೆ ಏಕಾಗ್ರಮಾಡಿಕೊಂಡು ಅಮೃತಸ್ವರೂಪವಾಗಿರುವ ಪರಮಾತ್ಮನೆಂಬ ಬೆಳಕನ್ನು ತಮ್ಮ ಹೃದಯದಲ್ಲಿ ಕಂಡುಕೊಳ್ಳತಕ್ಕವರು ಧನ್ಯರೆನಿಸುವರು

೫೨ ಮಹಾಪುರುಷರ ಮುಖದಿಂದ ಪ್ರೀತಿಪೂರ್ವಕವೂ ಯುಕ್ತಿಯುಕ್ತವೂ ಎನಿಸಿ ಹೊರಡುವ ಅಮೃತವಾಣಿಗಳು ಪುಣ್ಯಶಾಲಿಗಳ ಅಂತರಂಗವನ್ನು ವಶೀಕರಣ ಮಂತ್ರದಂತೆ ಸ್ವಾಧೀನಪಡಿಸಿಕೊಳ್ಳುವುವು ಅಂತಹ ಮಹದಾನಂದವು ಕಡುಬಿಸಿಲಿನಲ್ಲಿ ಬಳಲಿಬಂದವನಿಗೆ ಹಿಮೋದಕಸ್ನಾನದಿಂದ ದೊರೆಯುವ ಆನಂದಕ್ಕಿಂತಲೂ ಮಿಗಿಲಾದುದು ಒಂದೊಂದು ಅವಯವದಲ್ಲಿಯೂ ಪೂಸಿದ ದಿವ್ಯಪರಿಮಳವನ್ನು ಬೀರುವ ಚಂದನವೂ ಇದರಷ್ಟು ಆಹ್ಲಾದಕರವೆನಿಸಲಾರದು ವಾಚಕರೇ! ಮಹಾಪುರುಷರಿಂದ ಶಾಸ್ತ್ರೋಕ್ತವಾಗಿ ಪ್ರತಿಷ್ಠೆ ಮಾಡಿದ ಶಿಲೆಯು ದೇವತ್ವವನ್ನು ಪಡೆಯುವಂತೆಯೂ, ಸೂರ್ಯನು ಮೂಡಿದೊಡನೆಯೇ ಮೂಡಣ ಬೆಟ್ಟದಲ್ಲಿರುವ ವಸ್ತುಗಳು ಪ್ರಕಾಶಿಸುವಂತೆಯೂ ಅಂತಹ ಮಹಾಪುರುಷರ ಸಂಸರ್ಗದಿಂದ ಎಂತಹ ಅಲ್ಪನೂ ಪ್ರಕಾಶಿಸುವುದರಲ್ಲಿ ಸಂದೇಹವಿಲ್ಲ.

೫೩ ಚೆನ್ನಾಗಿ ಜೀರ್ಣಿಸಿದ ಊಟ, ವಿವೇಕಿಯಾದ ಮಗ, ಯುಕ್ತವಾದ ಆಳ್ವಿಕೆಗೆ ಒಳಪಟ್ಟ ಮಡದಿ, ನಿರ್ವಂಚನೆಯಿಂದ ಸೇವೆಯನ್ನು ಕೈಗೊಂಡ ಧಣಿ, ದೂರವಾಗಿ ಆಲೋಚಿಸಿ ನುಡಿದ ಮಾತು, ಮುಂದಿನ ಪರಿಣಾಮವನ್ನು ಯೋಚಿಸಿ ಮಾಡಿದ ಕೆಲಸ, ನಿಷ್ಕಳಂಕವಾದ ಸ್ನೇಹ ಇವುಗಳು ಎಷ್ಟು ದಿನಗಳಾದರೂ ವ್ಯತ್ಯಾಸವಾಗಲಾರವು.

೫೪ ಬುದ್ಧಿಶಾಲಿಯು ತಾನು ಮುಪ್ಪು ಸಾವೂ ಇಲ್ಲವೆಂದು ಭಾವಿಸಿ ವಿದ್ಯೆಯನ್ನೂ ಧನವನ್ನೂ ಸಂಪಾದಿಸಬೇಕು ಮೃತ್ಯುವು ತಲೆಗೂದಲನ್ನು ಹಿಡಿದು ಸೆಳೆಯುತ್ತಿರುವುದೆಂದು ಭಾವಿಸಿ ಧರ್ಮವನ್ನೂ ಆತ್ಮಜ್ಞಾನವನ್ನೂ ಆರ್ಜಿಸಬೇಕು

೫೫ ದುರ್ಜನನು ತನ್ನನ್ನು ಪೂಜಿಸಿದವನಿಗೂ ತನಗೆ ಉಪಕಾರವನ್ನು ಮಾಡಿದವನಿಗೂ ಅಪಕಾರವನ್ನೇ ಮಾಡುವನು ಹಾವನ್ನು ತಲೆಯಮೇಲೆ ಇಟ್ಟುಕೊಂಡರೂ ಕಾಲಿನಲ್ಲಿ ಒದೆದರೂ ಅದು ಕಚ್ಚಲೇ ಕಚ್ಚುವುದು ದುರ್ಜನನು ಸದಾ ಸೇವಿಸಲ್ಪಡುತ್ತಿದ್ದರೂ ತನ್ನ ದುಸ್ಸ್ವಭಾವವನ್ನು ಬಿಡುವುದಿಲ್ಲ ಪೂಜ್ಯವಲ್ಲದ ಪದಾರ್ಥವು ಎಲ್ಲಿಯೂ ಪೂಜ್ಯವಾಗಲಾರದು ಅಮೃತಧಾರೆಯನ್ನು ಹೊಯಿದು ಬೆಳೆಸಿದರೂ ಬೂರುಗದ ಮರವು ಕಲ್ಪವೃಕ್ಷದ ಹಾಗೆ ಪೂಜ್ಯವಾದೀತೆ? ಸಕ್ಕರೆಯಲ್ಲಿ ಜೇನನ್ನು ಹಾಕಿ ಕಲಸಿ ಪಾತಿಗಟ್ಟಿ ಬೇವಿನ ಬೀಜವನ್ನು ನೆಟ್ಟು ಹಾಲನ್ನು ಹಾಕಿ ಬೆಳೆಯಿಸಿದರೆ ಆ ಬೇವಿನಗಿಡವು ಸಿಹಿಯಾದೀತೆ? ಉತ್ತಮನಾದವನು ಇತರರಿಗೆ ಅಪಾಯಬರುವಾಗ ವಿಚಾರಿಸಿ ತಿಳಿದುಕೊಂಡು ಅವರೊಡನೆ ಸಮುಚಿತವಾಗಿ ಹೇಳುವನು, ದುರಾತ್ಮನಾದವನು ತಾನು ತಿಳಿದಿದ್ದರೂ ತನ್ನ ಮನಸ್ಸಿನಲ್ಲಿ ನಿರ್ನಿಮಿತ್ತವಾಗಿ ಒಂದು ಹಗೆತನವನ್ನು ಇಟ್ಟುಕೊಂಡು ಹೇಳುವದಿಲ್ಲ ಎಷ್ಟು ಒಳ್ಳೆಯತನದಿಂದಿದ್ದು ಎದುರಿಗೆ ಸವಿಮಾತುಗಳನ್ನಾಡುತ್ತಿದ್ದರೂ ಮನಸ್ಸಿನಲ್ಲಿ ಹಗೆತನವಿಟ್ಟುಕೊಂಡು ಕೋಪವುಳ್ಳವನಾಗಿರುವವನು ದುರ್ಜನನು, ಒಳ್ಳೆಯತನದಿಂದ ಸಂತೋಷಿಸುವವನು ಸುಜನನು ದುರ್ಜನರು ಸಜ್ಜನರಿಗೆ ಅಪಕಾರವನ್ನೇ ಹುಡುಕುತ್ತಿರುವರು 'ಪುಣ್ಣಿಗೆರಗುವುದು ಮಕ್ಷಿಕಕೆ ಸಹಜವಲಾ' ಎಂಬಂತೆ ಅದು ಅವರ ನೈಜಗುಣ ಕಬ್ಬೂ ಬೇವಿನ ಗಿಡವೂ ಅವುಗಳ ರಸದಿಂದಲೇ ಅಂತಹುವೆಂದು ತಿಳಿಯಬರುತ್ತವೆ. ಹಾಗೆಯೇ ಸುಜನನೂ ಕುಜನನೂ ಅವರ ಸ್ವಭಾವದಿಂದಲೇ ಅಂತಹರೆಂದು ತಿಳಿಯಬರುತ್ತಾರೆ ವಾಚಕರೇ! ಜಗತ್ತಿನಲ್ಲಿ ಹಿತವನ್ನು ಕೋರುವವರು ತಿಳಿದವರಾಗಿರರು, ತಿಳಿದವರು ಹಿತವನ್ನು ಕೋರುವವರಾಗಿ ಇರರು ತಿಳಿದವರಾಗಿಯೂ ಹಿತವನ್ನು ಕೋರುವವರಾಗಿಯೂ ಇರುವವರು ಸಿಕ್ಕುವುದು ರೋಗವನ್ನು ಹರಿಸುವುದಾಗಿಯೂ ರುಚಿಕರವಾಗಿಯೂ ಇರುವ ಔಷಧದ ಹಾಗೆ ಅಪೂರ್ವವು. ಈ ಕಾಲದಲ್ಲಿ ಇವರು ದೊಡ್ಡವರು ಇವರು ಚಿಕ್ಕವರು ಇವರು ಅನ್ಯರು ಇವರು ಬಂಧುಗಳು ಎನ್ನದೆ ಎಲ್ಲರೂ ಮಾಯೋಪಾಯಗಳಿಂದ ವರ್ತಿಸುತ್ತಿರುವರು ಕಲಿಪ್ರಭಾವ. ಆದ್ದರಿಂದಲೇ ಕುಲಶೀಲಗಳನ್ನರಿಯದೆ ಯಾರ ಸ್ನೇಹವನ್ನೂ ಮಾಡಬಾರದು, ಯಾರಿಗೂ ಆಸರೆಯನ್ನು ಕೊಡಬಾರದೆಂದು ಪೂರ್ವಿಕರು ಹೇಳಿರುವರು ಅಲ್ಲದೆ ಅಲ್ಪರಿಗೆ ಆಸರೆಯನ್ನಾಗಲಿ, ಉನ್ನತಸ್ಥಾನವನ್ನಾಗಲಿ ಕೊಡಬಾರದೆಂಬ ಒಗ್ಗೆ ಒಂದು ಕಥೆಯುಂಟು—ಪೂರ್ವಕಾಲದಲ್ಲಿ ಗೌತಮಮುನಿಯ ತಪೋವನದಲ್ಲಿ ಮಹಾವ್ರತನೆಂಬ ಒಬ್ಬ ತಾಪಸೋತ್ತಮನಿದ್ದನು ಆತನ ಪರ್ಣಶಾಲೆಯ ಹತ್ತಿರ ಕಾಗೆಯ ಬಾಯಿಂದ ಜಾರಿಬಿದ್ದ ಒಂದು ಇಲಿಮರಿಯು ಆತನಿಗೆ ಕಾಣಿಸಿತು ಆತನು ಅದನ್ನು ನೋಡಿ ಕನಿಕರಗೊಂಡು ಅದನ್ನು ತಂದು, ಕಾಪಾಡುತ್ತ ಬಂದನು ಹೀಗಿರುವಲ್ಲಿ ಒಂದು ಬೆಕ್ಕು ಅದನ್ನು ತಿನ್ನುವುದಕ್ಕಾಗಿ ಹೊಂಚುಹಾಕುತ್ತಿದ್ದಿತು. ಇದನ್ನು ಕಂಡು ಆ ಮುನಿಯು ತನ್ನ ತಪೋಬಲದಿಂದ ಆ ಇಲಿಮರಿಯನ್ನು ಬಲಿಷ್ಠವಾದ ಒಂದು ಬೆಕ್ಕಿನ ರೂಪಕ್ಕೆ ಮಾರ್ಪಡಿಸಿದನು ಬಳಿಕ ಆ ಬೆಕ್ಕು ನಾಯಿಗೆ ಹೆದರಿತು ಬಳಿಕ ಅದನ್ನು ನಾಯಿಯನ್ನಾಗಿಸಿದನು. ನಾಯಿ ಹುಲಿಗೆ ಅಂಜಿತು ಅಷ್ಟರಲ್ಲಿ ಆತನು ನಾಯಿಯನ್ನು ಹುಲಿಯನ್ನಾಗಿಮಾಡಿ, ಅದನ್ನೂ ಇಲಿಯಂತೆಯೇ ಸಾಕುತ್ತಿದ್ದನು ಇದನ್ನು ನೋಡಿ ಆ ತಪೋವನದಲ್ಲಿದ್ದವರೆಲ್ಲರೂ "ಈ ಮುನಿಯು ಇಲಿಯನ್ನು ಹುಲಿಯನ್ನಾಗಿ ಮಾಡಿರುವನು" ಎಂದುಕೊಳ್ಳುತ್ತಿದ್ದರು ಇದನ್ನು ಕೇಳಿದ ಆ ಹುಲಿಯು ಮನಮರುಗಿ "ಅಯ್ಯೋ! ಈ ತಾಪಸನು ಬದುಕಿರುವವರೆಗೂ ನನಗೆ ಈ ಅಪವಾದವು ತಪ್ಪಿದುದಲ್ಲ. ಈಗ ಹೇಗೂ ನಾನು ಹುಲಿಯಾಗಿರುವೆನಷ್ಟೆ! ನನ್ನ ಮೊದಲಿನ ಸುದ್ದಿ ಇವರಿಗೇಕೆ? ಹಿಂದೆ ನಾನು ಏನಾಗಿದ್ದರೇನು? ಆದರೆ ಈ ಅಪವಾದವನ್ನು ಮಾತ್ರ ಸಹಿಸಲಾರೆನು" ಎಂಬುದಾಗಿ ಯೋಚಿಸಿ, ಆ ಮುನಿಯನ್ನು ಕೊಲ್ಲುವ ಸಲುವಾಗಿ ಮುಂದರಿಸಿತು ಇದರ ಅಭಿಪ್ರಾಯವನ್ನು ತಿಳಿದ ಆ ಮುನಿಯು "ಮರಳಿ ಇಲಿಯಾಗು" ಎಂದನು. ಕೂಡಲೇ ಹುಲಿ ಇಲಿಯಾಯಿತು. ಆದಕಾರಣ ನೀಚನನ್ನು ಯಾವಾಗಲೂ ಉನ್ನತಪದವಿಯಲ್ಲಿರಿಸಬಾರದು ಆಶ್ರಯನಾಶಕನೆನಿಸಿದ ಬೆಂಕಿಯಂತೆ ಈ ದುರುಳರ ಸಹವಾಸವು ಸರ್ವಾನರ್ಥಕರವೆಂಬುದು ಅಕ್ಷರಶಃ ನಿಜವಿರುವುದು.

೫೬ ಸಾಯಂಕಾಲದಲ್ಲಿ ಯುಕ್ತಾಯುಕ್ತ ವಿಚಾರ ಮಾಡದೆ, ತುಂಬಿಯು ಜೇನಿನ ಆಸೆಯಿಂದ ಶೀಘ್ರವಾಗಿ ಕಮಲದಲ್ಲಿ ಪ್ರವೇಶಿಸಿ, ಆಮೇಲೆ ಕಮಲವು ಮುಚ್ಚಿ

ಕೊಳ್ಳುತ್ತಲೇ ಹೊರಗೆ ಬರುವುದಕ್ಕೆ ಮಾರ್ಗವಿಲ್ಲದೆ ಚಿಂತಿಸುವಹಾಗೆ, ಕೆಲವರು ಮುಂದೆ ಬರುವದನ್ನರಿಯದೆ ಲೋಭದಿಂದ ಪ್ರವರ್ತಿಸುವರು ಕಮಲ, ನೈದಿಲೆ ಮೊದಲಾದ ಪುಷ್ಪಗಳನ್ನು ಬಿಟ್ಟು ಬಿಟ್ಟು ತುಂಬಿಗಳು ಮದಿಸಿದ ಆನೆಯ ಮಸ್ತಕದಲ್ಲಿನ ಮದಜಲವನ್ನು ಪಾನ ಮಾಡಲಿಕ್ಕೆ ಹೋಗುತ್ತವೆ, ಆಗ ಆನೆಯು ಕಿವಿಗಳಿಂದ ಬೀಸಿದರೆ ಗಾಳಿಗೆ ಕೆಳಗೆ ಬಿದ್ದು ಆಗ ತಾವರೆಯಲ್ಲಿ ತಾವು ವಿಹರಿಸುವುದನ್ನು ನೆನೆಸಿಕೊಳ್ಳುತ್ತವೆ ಹಾಗೆಯೇ ಜಗತ್ತಿನಲ್ಲಿ ಮುಂಜಾಗ್ರತೆ ಇಲ್ಲದ ಜನರು ಸುಲಭಸಾಧವನ್ನು ಬಿಟ್ಟು ದುರ್ಜನರಲ್ಲಿ ಅನುರಕ್ತಿಯುಳ್ಳವರಾಗಿ, ಅಲ್ಲಿ ಉಪದ್ರವವು ಸಂಭವಿಸಿದಾಗ ಸಜ್ಜನರ ಬಳಿಯಲ್ಲಿ ಸೇವಿಸದೆ ಹೋದೆವಲ್ಲಾ ಎಂದು ವ್ಯಸನಪಡುತ್ತಾರೆ ಕಟ್ಟಕಡೆಗೆ ಅವರೂ ದುರ್ಜನರೆಂದು ಜನರಿಂದ ಪರಿಗಣಿಸಲ್ಪಡುತ್ತಾರೆ ಊರಹತ್ತಿರ ಶ್ಮಶಾನಭೂಮಿಯಲ್ಲಿರುವ ಹದ್ದುಗಳ ಸಂಗಡ ಒಂದು ಹಂಸವಿದ್ದರೆ, ನೋಡುವವರು ಅದನ್ನು ಹದ್ದೆಂದುಕೊಳ್ಳುವರೇ ಹೊರತು ಹಂಸವೆಂದು ತಿಳಿದುಕೊಳ್ಳಲಾರರು

೫೭. ಮನಸ್ಸಿನಲ್ಲೂ ವಾಕ್ಕಿನಲ್ಲೂ ಏಕರೀತಿಯಾಗಿರದೆ ಒಂದು ಕಾರ್ಯವನ್ನು ಉದ್ದೇಶಿಸಿ ಸ್ನೇಹಿತರನ್ನು ಸಂಪಾದಿಸಲಿಕ್ಕೆ ಪ್ರಯತ್ನಿಸುವವನೂ, ನಿತ್ಯವೂ ಪ್ರಸಿದ್ಧವಾದ ಪಾಪಗಳನ್ನು ಮಾಡುತ್ತಾ ಧರ್ಮವನ್ನು ಮಾಡಬೇಕೆಂದು ನೆನಸುವವನೂ, ಬೂಟಾಟಿಕೆಯ ಪೂಜಾದಿಗಳನ್ನು ಮಾಡತಕ್ಕವನೂ, ಯಾವಾಗಲೂ ಪರರಿಗೆ ಉಪಹತಿಯನ್ನು ಕೊಟ್ಟು ಧನವನ್ನು ಕೂಡಹಾಕಬೇಕೆಂಬ ಇಚ್ಛೆಯುಳ್ಳವನೂ, ಕೇವಲ ಶರೀರ (ಇಂದ್ರಿಯ) ಸೌಖ್ಯವನ್ನು ಬಯಸಿ ಧನವನ್ನು ಖರ್ಚುಮಾಡಬೇಕೆಂಬ ಮನಸ್ಸುಳ್ಳವನೂ ವಿವೇಕವಿಲ್ಲದವರೆಂದು ನೀತಿಶಾಸ್ತ್ರಜ್ಞರು ಹೇಳುತ್ತಾರೆ

೫೮ ವಿಷಾದವು ಸಂತೋಷವನ್ನೂ, ಹೇಮಂತ ಋತುವು ಶರತ್ಕಾಲವನ್ನೂ, ಸೂರ್ಯನು ಕತ್ತಲೆಯನ್ನೂ, ಕೃತಘ್ನತೆಯು ಸುಕೃತವನ್ನೂ, ವಿವೇಕವು ದುಃಖವನ್ನೂ, ನೀತಿಯು ಆಪತ್ತನ್ನೂ ಹೋಗಲಾಡಿಸುವಂತೆ ದುರ್ನೀತಿಯು ಸಮೃದ್ಧವಾದ ಸಂಪತ್ತನ್ನೂ ಘನವಾದ ಮರ್ಯಾದೆಯನ್ನೂ ಹೋಗಲಾಡಿಸುವುದು

೫೯. ಜಗತ್ತಿನಲ್ಲಿ ಎರಡು ವಿಧವಾದ ತಿಳವಳಿಕೆಯನ್ನು ಸಂಪಾದಿಸಬಹುದು ಒಂದುಬಗೆಯ ತಿಳವಳಿಕೆಯು ಹೆಚ್ಚಿದಷ್ಟೂ ಇಂದ್ರಿಯಗಳು ಚಂಚಲವಾಗುವುವು. ಇದೇ ವಿಷಯಗಳ ತಿಳವಳಿಕೆ ಮಕ್ಕಳಿಗೆ ಇಂದ್ರಿಯಪಾಟವಾಗುವುದಕ್ಕೂ ಬಾಹ್ಯವಸ್ತುಗಳ ಸ್ವಭಾವವನ್ನು ಗೊತ್ತುಪಡಿಸಿಕೊಳ್ಳುವುದಕ್ಕೂ ಈ ತಿಳವಳಿಕೆಯು ಬೇಕಾಗಿರುವುದು ಆದರೆ ಪ್ರಪಂಚವ್ಯವಹಾರದ ಸ್ವರೂಪವನ್ನು ತಕ್ಕಮಟ್ಟಿಗೆ ತಿಳಿದುಕೊಂಡು ಅದರಿಂದ ಬಿಟ್ಟು ತಿಂದಿರುವವನು ಪುನಃ ಈ ತಿಳವಳಿಕೆಯಲ್ಲಿಯೇ ಬಿದ್ದು ಹೊರಳಾಡುವುದು ಎಂದಿಗೂ ತರವಲ್ಲ ಎಂಜಲಪಾಳಿಗಳಿಗೆ ಓಡಿಬರುವ ನಾಯಿಯಂತೆಯೂ, ಬಿಸಿಲುಕುದುರೆಯ ನೀರಿಗೆಂದು ಓಡುವ ಜಿಂಕೆಯಂತೆಯೂ, ಈ ನೀರಸತಿಳವಳಿಕೆಯ ಬೆನ್ನುಹತ್ತುವವರಿಗೆ ಬರಿಯ ಆಯಾಸವೇ ಪ್ರತಿಫಲವಾಗಿರುವುದು ಇಂದ್ರಿಯಗಳನ್ನು ಆಯಾಸಗೊಳಿಸುವ ಈ ತಿಳವಳಿಕೆಯನ್ನು ಅಜ್ಞಾನವೆಂದು ಕರೆಯುವುದೇ ಸಮಂಜಸವೆನಿಸುವುದು ಇನ್ನೊಂದು ಬಗೆಯ ತಿಳವಳಿಕೆಯುಂಟು. ಅದನ್ನು ತಿಳಿದರೆ ಇಂದ್ರಿಯಗಳು ಬಾಹ್ಯವಿಷಯಗಳಿಗೆ ಹಾತುವರಿಯುವುದು ತಪ್ಪುತ್ತದೆ ಮನಸ್ಸಿಗೆ ಶಾಂತಿಯೂ ಉಂಟಾಗುತ್ತದೆ ಈ ತಿಳವಳಿಕೆಯೇ ನಿಜವಾದ ಜ್ಞಾನ ಇದಕ್ಕೆ ಆತ್ಮಜ್ಞಾನವೆಂದು ಹೆಸರು ವಾಚಕರೇ ! ಮನುಷ್ಯನು ತನ್ನ ಸ್ವರೂಪವನ್ನರಿಯದೆ ಸುಖವಿಷಯಗಳನ್ನು ಅರಿಯುವುದಕ್ಕೇ ಹವಣಿಸುತ್ತಿರುತ್ತಾನೆ ಈ ಹವಣಿಕೆಯಿಂದ ಸಂಸಾರದಲ್ಲಿ ನಾನಾಬಗೆಯ ತೊಂದರೆಗಳಾಗುತ್ತಿವೆ ತನ್ನ ಸ್ವರೂಪವನ್ನು ತಾನರಿಯನೆಂದು ತಿಳಿಯದಿರುವುದೇ ಈ ಹವಣಿಕೆಗೆ ಕಾರಣವು ಈ ಹವಣಿಕೆಯು ತಪ್ಪಿ ದುಃಖರಹಿತನಾಗಬೇಕಾದರೆ ವಾಯುವು ವನಗಳನ್ನೂ, ತುಂಬಿಗಳು ಹೂಗಳನ್ನೂ, ಹಂಸ, ಮತ್ಸ್ಯ, ಕೂರ್ಮ, ಮೊಸಳೆ, ಕಪ್ಪೆಗಳು ನೀರನ್ನೂ, ಪಕ್ಷಿಗಳು ಆಕಾಶವನ್ನೂ ಆಶ್ರಯಿಸುವಹಾಗೆ ಸದ್ಗುರುವನ್ನಾಶ್ರಯಿಸಬೇಕು. ಇದರ ಹೊರತು ಗತ್ಯಂತರವೇ ಇಲ್ಲ

೬೦ ವಿದ್ಯೆ, ವಿನಯ, ದಾನ, ಧರ್ಮ, ಸತ್ಯ, ಶೀಲ, ಜ್ಞಾನಾರ್ಜನೆ ಇತ್ಯಾದಿಗಳಲ್ಲಿ ಆಸಕ್ತಿಯಿಲ್ಲದವನ ಜನ್ಮವು ವ್ಯರ್ಥವು ತನ್ನ ಹುಟ್ಟಿನಿಂದ ಯಾವನು ತನ್ನ ವಂಶಕ್ಕೆ ಕೀರ್ತಿಯನ್ನು ತರುವನೋ ಅವನೇ ಹುಟ್ಟಿದವನು ಜನನಮರಣಗಳೆಂಬ ಚಕ್ರದೋಪಾದಿಯಲ್ಲಿ ತಿರುಗುವ ಈ ಸಂಸಾರದಲ್ಲಿ ಸತ್ತಬಳಿಕ ಹುಟ್ಟದಿರುವವರು ಯಾರೂ ಇಲ್ಲ ಗುಣಶಾಲಿಗಳ ಸಮೂಹವನ್ನು ಲೆಕ್ಕಿಸುವಾಗ ಪ್ರಥಮತಃ ಬಳಪವು ಬೇಗನೆ ಯಾವನ ವಿಷಯದಲ್ಲಿ ಮೊದಲನೆಯ ಗೆರೆಯನ್ನು ಎಳೆಯಲಿರದೋ, ಅಂತಹವನ ಜನನಿಯು ಪುತ್ರವತಿಯೆನಿಸಿದ್ದರೂ ಬಂಜೆಯು ನೂರುಗಟ್ಟಲೆ ಗುಣಹೀನರಿಗಿಂತಲೂ ಗುಣಶಾಲಿಯಾದ ಒಬ್ಬಮಗನೇ ಲೇಸು ಧಾನ್ಯವು ಇಲ್ಲದೆ ಅಳೆಯುವ ಸೇರುಗಳಿದ್ದು ಫಲವೇನು ? ಬರಿಯ ಸೇರುಗಳಿಂದ ಕಣಜವನ್ನು ತುಂಬಲಾಗುವುದೇ ? ಗುಣಹೀನನಾಗಿ ಎಷ್ಟು ಬಾಳಿದರೇನು ? ಎಷ್ಟು ಧನ ಸಂಪಾದಿಸಿದರೇನು ! ಎಲ್ಲವೂ ವ್ಯರ್ಥವು ವಾಚಕರೇ ! ವಿನೀತನೂ, ಧಾರ್ಮಿಕನೂ, ಸಂಪನ್ನನೂ, ವಿಚಾರದನೂ ಎನಿಸಿದ ಮಗನನ್ನು ಪಡೆಯಬೇಕಾದರೆ ಯಾವುದಾದರೊಂದು ಪುಣ್ಯಕ್ಷೇತ್ರದಲ್ಲಿ ದುಷ್ಕರವಾದ ತಪಸ್ಸನ್ನು ಮಾಡಬೇಕು

೬೧ ಸಂಕಲ್ಪಶಕ್ತಿಯೆನ್ನುವುದು ಒಂದು ಸಾಮರ್ಥ್ಯವು ಅದನ್ನು ಸತ್ಕಾರ್ಯಕ್ಕಾಗಲೀ ಇಲ್ಲವೇ ದುಷ್ಕಾರ್ಯಕ್ಕಾಗಲೀ ಉಪಯೋಗಪಡಿಸಬಹುದು ಒಬ್ಬನು ಬೆಂಕಿಯಿಂದ ಪಾಕಾದಿಗಳನ್ನು ಮಾಡಿ ಭೂತತೃಪ್ತಿಪಡಿಸಬಹುದು ಮತ್ತೊಬ್ಬನು ಅದೇ ಬೆಂಕಿಯಿಂದ ಹೋಮಾದಿಗಳನ್ನು ಮಾಡಿ ಪುಣ್ಯವನ್ನು ಪಡೆಯಬಹುದು ಇನ್ನೊಬ್ಬನು ಅದೇ ಬೆಂಕಿಯಿಂದ ಮನೆಗಳನ್ನು ಸುಟ್ಟು ಪಾಪವನ್ನು ಹೊಂದಬಹುದು ಆದರೆ ಬೆಂಕಿಯು ಸ್ವಭಾವತಃ ಒಳ್ಳೆಯದೂ ಅಲ್ಲ ಕೆಟ್ಟದೂ ಅಲ್ಲ ಅದು ತನ್ನನ್ನು ಉಪಯೋಗಿಸತಕ್ಕ ಮನುಷ್ಯನ ಉದ್ದೇಶವನ್ನೂ ಕಾರ್ಯದ ಸ್ವಭಾವವನ್ನೂ ಅನುಸರಿಸಿ ಫಲವನ್ನುಂಟುಮಾಡುವುದು ಅದೇ ರೀತಿಯಾಗಿ ಜೀವನ ಸಂಕಲ್ಪಶಕ್ತಿಯು ಬೆಂಕಿಯಂತಿರುವದು. ಅದು ಹೊಗೆಗಾಡಿಯನ್ನು ಎಳೆಯತಕ್ಕ ಆವಿಯಶಕ್ತಿಯಹಾಗೂ ವಿದ್ಯುಚ್ಛಕ್ತಿಯ ಹಾಗೂ ಇರುವ ಒಂದು ಶಕ್ತಿಯಾಗಿದೆ ಮಂತ್ರಗಳ ಸಿದ್ಧಿಯಿಂದ ಫಲವನ್ನು ಹೊಂದುವುದೂ ಇತರರ ಇಂಗಿತಗಳನ್ನು ತಿಳಿದುಕೊಳ್ಳುವುದೂ ಈ ಶಕ್ತಿಯಿಂದಲೇ ಜೀವನು ಅಜ್ಞಾನದ ದೆಸೆಯಿಂದ ಈ ಸಂಕಲ್ಪಶಕ್ತಿಯನ್ನು ಸ್ವಪ್ರಯೋಜನಕ್ಕಾಗಿ ದುರ್ವಿನಿಯೋಗಪಡಿಸಿ ತಾನೂ ಕೆಟ್ಟು ಇತರರನ್ನೂ ಕೆಡಿಸಿ ಅನೇಕ ನರಕಬಾಧೆಗಳನ್ನು ಅನುಭವಿಸುವನು ಆದಪ್ರಯುಕ್ತ ದುಷ್ಟಸಂಕಲ್ಪಗಳನ್ನು ಮೈಗೂಡಿಸಿಕೊಳ್ಳಬಾರದು ಕಾಶಿಗೆ ಹೋಗತಕ್ಕವರು ಗಾಡಿಯನ್ನುಹತ್ತಿ ಪ್ರಯಾಣಮಾಡಲಾಗಿ ಆ ಗಾಡಿಯ ಚಕ್ರದ ಪ್ರತಿಸುತ್ತೂ ಅವರನ್ನು ಕಾಶೀಪಟ್ಟಣಕ್ಕೆ ಹತ್ತಿರ ಹತ್ತಿರ ತರುವಂತೆ ಸದ್ಗುಣಗಳನ್ನು ಮೈಗೂಡಿಸಿಕೊಳ್ಳುತ್ತಾ ಬಂದಲ್ಲಿ ಜೀವನು ದೇವನಾಗುವುದರಲ್ಲಿ ಸಂಶಯವಿಲ್ಲ ಈಬಗ್ಗೆ ಮುಂಡಕೋಪನಿಷತ್ತಿನಲ್ಲಿ " ಕಿಡಿಯೂ ಸಹ ಬೆಂಕಿಯೇ ಆದ್ದರಿಂದ ಅದನ್ನು ಚೆನ್ನಾಗಿ ವೃದ್ಧಿಹೊಂದಿಸಿದರೆ ಅದೂ ದೊಡ್ಡ ಬೆಂಕಿಯ ಜ್ವಾಲೆಯೇ ಆಗುವುದು ಒಂದು ದೊಡ್ಡವೃಕ್ಷದ ಗುಣಗಳೆಲ್ಲಾ ಬೀಜದಲ್ಲಿ ಅಡಗಿಕೊಂಡು ನಿದ್ರೆಮಾಡುತ್ತಿರುವವು ಆ ಬೀಜವನ್ನು ಬಿತ್ತಿದರೆ ಆ ಗುಣಗಳೆಲ್ಲವೂ ಹೊರಪಟ್ಟು ಅದು ವೃಕ್ಷವಾಗುವುದು ಅದೇ ರೀತಿಯಲ್ಲಿ ಜೀವನಲ್ಲಿಯೂ ಈಶ್ವರನ ಶಕ್ತಿ, ಗುಣಗಳು ಅಡಕವಾಗಿವೆ ಅವುಗಳನ್ನು ಗುರುಮುಖೇನ ತಿಳಿದುಕೊಂಡು ಅವನ್ನು ಅಭಿವೃದ್ಧಿಮಾಡಿದರೆ ಜೀವನು ಈಶ್ವರನಂಥವನೇ ಆಗುವನು " ಎಂದು ಹೇಳಿರುವದು

೬೨ ಎಂದಿಗೆ ವಿಷಯಾಸಕ್ತಿಯಲ್ಲಿರುವ ಮನಸ್ಸು ಅಂತಃಕರಣದ ಕಡೆಗೆ ತಿರುಗುತ್ತದೆಯೋ, ಎಂದಿಗೆ ಬಹಿರ್ವಿಷಯಗಳನ್ನುಬಿಟ್ಟು ಅಂತರಂಗಸ್ಥಾನವನ್ನು ಹೊಂದುವುದೋ, ಅಂದಿಗೆ ಮನುಷ್ಯರಲ್ಲಿ ಹೋರಾಟವು ಮುಗಿದುಹೋಗುವುದು ವಿಷಯಗಳು ಪರಿಮಿತವುಳ್ಳವಾದ್ದರಿಂದ ತನಗೆ ಬರತಕ್ಕ ಭಾಗವು ಎಲ್ಲಿ ಬಾರದೇಹೋಗುವುದೋ ಎಂಬುದಾಗಿ ಬಡಿದಾಡುವರು ಬುದ್ಧಿ ವಿಷಯಗಳಾದರೋ ಅಪರಿಮಿತವಾದುವು ಆದ್ದರಿಂದ ಅದಕ್ಕೆ ಪರಸ್ಪರ ಹೋರಾಟವು ಇರುವುದೇ ಇಲ್ಲ ಏತಕ್ಕೆಂದರೆ ಮತ್ತೊಬ್ಬನ ಜ್ಞಾನ ಹೆಚ್ಚಿದ್ದರಲ್ಲಿ ಇನ್ನೊಬ್ಬನಿಗೆ ನಷ್ಟವಿಲ್ಲ. ಮತ್ತೊಬ್ಬನು ಹೆಚ್ಚಾಗಿ ಸಂಪಾದಿಸಿದ್ದರಲ್ಲಿ ಇನ್ನೊಬ್ಬನ ಭಾಗವು ಯಾವ ವಿಧದಲ್ಲೂ ಕಮ್ಮಿಯಾಗುವುದಿಲ್ಲ ಈ ರೀತಿ ಮಾನವವರ್ಗದಲ್ಲಿ ಮೇಲ್ಪಾಟವು ತಪ್ಪಿ ಪರಸ್ಪರ ಅನುವರ್ತನೆಯಲ್ಲಿ ಪರಿಣಮಿಸಿ ಭ್ರಾತೃಭಾವದ ಒಂದು ಪಾಠವನ್ನು ಕಲಿಯುವರು ಸ್ವಪ್ರಯೋಜನವನ್ನು ಬಿಟ್ಟು ಪರಪ್ರಯೋಜನಕ್ಕಾಗಿಯೇ ಕೆಲಸ ಮಾಡುವುದನ್ನು ಸ್ವಭಾವವಾಗಿಉಳ್ಳ ಉನ್ನತಪದವಿಯನ್ನು ಕೊಡುತ್ತಿರುವನಾದ್ದರಿಂದ ಜ್ಞಾನವು ಹೆಚ್ಚಿದಂತೆಲ್ಲಾ ಹೆಚ್ಚಾಗಿ ಕೊಡಬಲ್ಲವನಾಗುತ್ತಾನೆಯೇ ಹೊರತು ಹೊಂದುವವನಾಗುವುದಿಲ್ಲ

೬೩ ಬೆಂಕಿಯ ಜ್ವಾಲೆಗೆ ಇರುವಷ್ಟು ತೇಜಸ್ಸು ಅದರ ಕಿಡಿಗೆ ಇಲ್ಲದಿರುವಂತೆ ಶಿವನಿಗಿರುವಷ್ಟು ಶಕ್ತಿಯು ಜೀವನಿಗಿರುವುದಿಲ್ಲ ಜೀವನು ಅನೇಕ ಜನ್ಮಗಳಲ್ಲಿ ತಾನು ಮಾಡಿದ ಪುಣ್ಯಪಾಪಗಳಿಗನುಗುಣವಾಗಿ ಸ್ಥೂಲಸೂಕ್ಷ್ಮಾದಿ ಶರೀರಗಳನ್ನು ಹೊಂದಿ ಅವುಗಳಲ್ಲಿನ ದುರ್ವಾಸನೆಗಳಿಗೊಳಗಾಗಿ ಕಾಮ ಕ್ರೋಧಗಳುಳ್ಳವನಾಗಿ ತನ್ನ ಸಂಕಲ್ಪಶಕ್ತಿಯನ್ನು ಕಿಂಚಿತ್ತಾದ ಸ್ವಲಾಭಕ್ಕಾಗಿಯೇ ಉಪಯೋಗಪಡಿಸಿಕೊಳ್ಳುತ್ತಿರುವುದರಿಂದಲೇ ಶರೀರಗಳಿಂದ ಬಂಧಿಸಲ್ಪಟ್ಟು ಮಿತಶಕ್ತಿಯುಳ್ಳವನಾಗುತ್ತಿದ್ದಾನೆ ಆದಾಗ್ಯೂ ಈ ಮಿತಸ್ಥಿತಿಯಲ್ಲಿಯೂ ಸಹ ಅವನ ಸಂಕಲ್ಪಶಕ್ತಿಯು ಸೃಷ್ಟಿ ಸ್ಥಿತಿಲಯಗಳನ್ನು ಮಾಡತಕ್ಕ ಸಾಮರ್ಥ್ಯವುಳ್ಳದ್ದಾಗಿರುತ್ತದೆ ಆದರೆ ಅದು ಅಷ್ಟು ಬಲವತ್ತರವಾಗಿಲ್ಲ ಸ್ವಚ್ಛವಾದ ದೀಪವನ್ನು ಅನೇಕ ಕಶ್ಮಲಗಳಿಂದ ಕೂಡಿದ ಕನ್ನಡಿಗಳುಳ್ಳ ಲಾಂದರದಲ್ಲಿಟ್ಟರೆ ಅದರ ಮುಖಾಂತರಬರುವ ಬೆಳಕು ಪ್ರಕಾಶದಲ್ಲಿ ಕಡಮೆಯಾಗುವಂತೆಯೇ ಜೀವನ ಸಂಕಲ್ಪಶಕ್ತಿಯು ದುರ್ವಾಸನೆಗಳುಳ್ಳ ಮಲಿನ ಶರೀರಗಳ ಮುಖಾಂತರವಾಗಿ ಕಾರ್ಯಮಾಡುವುದಾದ್ದರಿಂದ ಅದರ ಬಲವು ತಗ್ಗಿರುವುದು ಕನ್ನಡಿಗಳಲ್ಲಿರುವ ಕೊಳೆಯನ್ನು ತೊಳೆದು ಶುಭ್ರಮಾಡಿದರೆ ಬೆಳಕು ಯಾವರೀತಿ ಹೆಚ್ಚುವುದೋ ಅದೇರೀತಿಯಾಗಿ ಕಾಮಕ್ರೋಧಗಳನ್ನು ನಾಶಪಡಿಸಿ ಚಿತ್ತಸ್ಥೈರ್ಯವನ್ನೂ ಭಕ್ತಿಭೂತದಯೆಗಳನ್ನೂ ವೃದ್ಧಿಪಡಿಸಿಕೊಂಡರೆ ನಮ್ಮ ಸೂಕ್ಷ್ಮಾದಿಶರೀರಗಳು ಪರಿಶುದ್ಧತೆಯನ್ನು ಹೊಂದಿ ನಮ್ಮ ಸಂಕಲ್ಪಶಕ್ತಿಯು ಹೆಚ್ಚುವುದು

|| ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ||

ಸ್ತ್ರೀಧರ್ಮನೀತಿ

ಲೇಖಕ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ, ಕೊಣ್ಣೂರು

(ಹಿಂದಿನಿಂದ ಮುಂದುವರಿದುದು)

ಸ್ತ್ರೀಯರು ಕೆಲಸವಿಲ್ಲದಾಗ ನಿರರ್ಥಕವಾಗಿ ಹೊತ್ತುಗಳೆಯದೆ ಪುರಾಣ ಪುಣ್ಯಕಥೆ ಮೊದಲಾದವುಗಳನ್ನು ಕೇಳುತ್ತ, ಕಲಿತವರಿದ್ದರೆ ಸ್ವತಃ ಉತ್ತಮಗ್ರಂಥಗಳನ್ನು ಓದುತ್ತ, ತಾವು ಅದರಂತೆ ನಡೆಯುವದಲ್ಲದೆ, ಪರಸ್ತ್ರೀಯರನ್ನೂ ಸುಧಾರಿಸಬೇಕು ಇಂಥ ಕಾರ್ಯವನ್ನು ಕೈಕೊಂಡ ಸ್ತ್ರೀಯರಲ್ಲಿ ಅಗ್ರಸ್ಥಾನವನ್ನು ಪಡೆದವರೆಂದರೆ (ಸೌ||) ಭಾಗೀರಥೀಬಾಯಿ ಕಟಾಪ ಸೊಲ್ಲಾಪುರ ಇವರೆಂದು ಹೇಳಬಹುದು ಇವರು ಸ್ತ್ರೀಯರಿಗೆ ನಿತ್ಯದಲ್ಲಿಯೂ ಸ್ತ್ರೀಧರ್ಮನೀತಿಯನ್ನೂ, ಧಾರ್ಮಿಕ ಶಾಸ್ತ್ರೀಯ ವಿಷಯಗಳನ್ನೂ ಬೋಧಿಸುತ್ತ, ಎಷ್ಟೋ ಸ್ತ್ರೀಯರನ್ನು ಸುಧಾರಿಸಿದ್ದು ಪಂಚಾಚಾರ್ಯ ಪ್ರಭಾಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ ಇಂಥ ಸ್ತ್ರೀಯರು ಹುಟ್ಟುವದು ಸ್ತ್ರೀಸಮಾಜದ ಭಾಗ್ಯೋದಯವೆಂದೇ ಹೇಳಬೇಕಾಗಿದೆ, ಇರಲಿ. ಸ್ತ್ರೀಯರಿಗೆ ಪಾತಿವ್ರತ್ಯಗುಣವು ಅಲಂಕಾರಸ್ವರೂಪವಾಗಿರುವದು, ಪಾತಿವ್ರತ್ಯಗುಣವೊಂದಿದ್ದರೆ ಸ್ತ್ರೀಯರಿಗೆ ಲೋಕದಲ್ಲಿ ಅಸಾಧ್ಯವಾದುದು ಯಾವದೂ ಇಲ್ಲ. ಅಂತೇ " ಸತಿಗೆ ಪಾತಿವ್ರತ್ಯವೇ ಭೂಷಣಂ " ಎಂದು ಸೋಮೇಶ್ವರಶತಕವಲ್ಲಿ ಹೇಳಲ್ಪಟ್ಟಿದೆ ತನ್ನ ಕರ್ಮಾನುಸಾರವಾಗಿ ದೊರೆತ ಪತಿಯು ಕುಂಟನೇ ಇರಲಿ, ಕುರುಡನೇ ಇರಲಿ, ವಿದ್ವಾಂಸನೇ ಇರಲಿ, ಮೂರ್ಖನೇ ಇರಲಿ, ಪಾಲಿಗೆ ಬಂದದ್ದು ಪಂಚಾಮೃತವೆಂದು ಭಾವಿಸಿ ಪತಿಯ ಗುಣಾವಗುಣಗಳನ್ನು ಎಣಿಸದೆ ತನ್ನ ಪತಿಯೇ ಸರ್ವಸೌಭಾಗ್ಯವೆಂದು ತಿಳಿದು, ಸೀತಾ, ದ್ರೌಪದಿ, ಅರುಂಧತಿ,

(೬ನೆಯ ಪುಟವನ್ನು ನೋಡಿ

ಪಂಚಾಚಾರ್ಯಪ್ರಭಾ

೧೯೪೨ನೆಯ ಮಾರ್ಚಿ ತಾ|| ೩೦ನೇ ಸೋಮವಾರ

ವಿದೇಶಗಳಲ್ಲಿ ಶಿವಾಲಯಗಳ ವ್ಯಾಪಕತೆ.

ಚಂಪಾ (ಅನ್ನಾಂ) ದೇಶದಲ್ಲಿ ಅನೇಕ ಪ್ರಾಚೀನ ಶಿವಲಿಂಗಮೂರ್ತಿಗಳು ಅನಾದಿಕಾಲದಿಂದ ಪೂಜಿಸಲ್ಪಡುತ್ತಿರುವುವು. ಅವುಗಳಲ್ಲಿ 'ಮುಖಲಿಂಗ' ವೆಂಬ ಶಿವಲಿಂಗಮೂರ್ತಿಯು ಅತ್ಯಂತಪ್ರಾಚೀನವಾದುದು. ಈ ಶಿವಲಿಂಗಸ್ಥಾಪನೆಯ ಕಾಲನಿರ್ಣಯವು ಶಾಸನವೊಂದರಲ್ಲಿ ಈ ರೀತಿಯಾಗಿ ವರ್ಣಿಸಲ್ಪಟ್ಟಿದೆ. ಅದೇನೆಂದರೆ—

> ಪುಣ್ಯಸಪ್ತಸಹಸ್ರ [illegible]
> ವರ್ಷೇ ಶ್ರೀ [illegible] ಶ್ರೀ [illegible] ।
> [illegible]
> [illegible]
> [illegible]
> [illegible]
> [illegible]
> [illegible] ಶ್ರೀ [illegible]
> [illegible] ।

ದ್ವಾಪರಯುಗದಲ್ಲಿ [illegible] ಸುಮಾರು [illegible] ವರ್ಷಗಳ ಪೂರ್ವದಲ್ಲಿ ಈ ಮುಖಲಿಂಗವು '[illegible]' ನೆಂಬ ಮಹಾರಾಜನಿಂದ ಸ್ಥಾಪಿಸಲ್ಪಟ್ಟಿತೆಂದೂ, [illegible] ಶಿವಲಿಂಗಕ್ಕೆ [illegible] ಎಷ್ಟೋ ದಿನಗಳ [illegible] ಮೋಹದಿಂದ ಅನ್ಯ [illegible] ಮಾರ್ಗವಾಗಿ ಬಂದು ನುಗ್ಗಿ [illegible] ಅಲ್ಲಿದ್ದ ಸಕಲಸಂಪತ್ತನ್ನು [illegible] ರೆಂದೂ, ಶೂನ್ಯವಾದ [illegible] ನೆಂಬ ಮಹಾರಾಜನು '[illegible]' ಹೆಸರಿನಿಂದ ಬೇರೊಂದು ಲಿಂಗವನ್ನು [illegible] ಈ ಶಾಸನದಲ್ಲುಕ್ತವಾಗಿದೆ. [illegible] ಪೂರ್ವದಲ್ಲಿ ಈ ಶಿವಲಿಂಗವು ಸ್ಥಾಪಿತವಾಗಿ [illegible] ಚಂಪಾ (ಅನ್ನಾಂ) ದೇಶವು [illegible] ಶಿವಭಕ್ತಿಮಯವಾಗಿದ್ದಿತೆಂದು ಸ್ಪಷ್ಟವಾಗಿ [illegible] ಈ ರೀತಿಯಾಗಿ ಅತ್ಯಂತ ಪ್ರಾಚೀನವಾಗಿ [illegible] ಮಿಸುವ ಶಿವಲಿಂಗವು ಈ ಪ್ರಪಂಚದಲ್ಲಿ ಬೇರೊಂದಿಲ್ಲವೆಂದು ಹೇಳಬಹುದಾಗಿದೆ

ಪೂರ್ವದಲ್ಲಿ 'ಅನ್ನಾಂ' ದೇಶವನ್ನಾಳುತ್ತಿದ್ದ ಮಹಾರಾಜರೆಲ್ಲರೂ ಪರಮಶಿವಭಕ್ತರಾಗಿ, ಶಿವಲಿಂಗಗಳನ್ನು ಸ್ಥಾಪಿಸುವುದರಮೂಲಕ ಶಿವನ ಸೇವೆಯನ್ನು ಮಾಡುವುದೇ ತಮ್ಮ ಪ್ರಥಮಕರ್ತವ್ಯವೆಂದೂ ಶಿವನ ಸೇವೆಯೇ ತಮ್ಮ ರಾಜ್ಯಸಂಪತ್ತಿಗೂ ಮೋಕ್ಷಸಂಪತ್ತಿಗೂ ಮೂಲಕಾರಣವೆಂದೂ, ಶಿವದೇವಾಲಯಗಳನ್ನು ಕಟ್ಟಿಸುವುದೇ ತಮ್ಮ ನಿರ್ಮಲಕೀರ್ತಿಯು ಆಚಂದ್ರಾರ್ಕವಾಗಿ ಬೆಳಗಲಿಕ್ಕೆ ಕಾರಣವಾಗಿರುವುದೆಂದೂ, ಶಿವದೇವಾಲಯಗಳ ಸಂರಕ್ಷಣೆಯೇ ತಮ್ಮ ಪವಿತ್ರಧರ್ಮವೆಂದೂ, ಶಿವದೇವಾಲಯಗಳಿಗೋಸ್ಕರ ತಮ್ಮ ಅಪಾರವಾದ ಸಂಪತ್ತನ್ನು ಸಮರ್ಪಿಸುವುದೇ ತಮ್ಮ ವೈಭವದ ಸಾರ್ಥಕತೆಯೆಂದೂ, ಶಿವದ್ವೇಷಿಗಳೊಡನೆ ಯುದ್ಧಮಾಡಿ ಅವರನ್ನು ಶರಣಾಗತರನ್ನಾಗಿ ಮಾಡುವುದೇ ತಮ್ಮ ಕ್ಷಾತ್ರಧರ್ಮವೆಂದೂ, ಸದಾ ಶಿವನಾಮವನ್ನುಚ್ಚರಿಸುವುದೇ ತಮ್ಮ ರಸನೆಯ ಧ್ಯೇಯವೆಂದೂ, ಶಿವಲಿಂಗವನ್ನು ಪೂಜಿಸುವುದೇ ತಮ್ಮ ಹಸ್ತಗಳಿಗೆ ಭೂಷಣವೆಂದೂ, ಶಿವಲಿಂಗಗಳನ್ನು ಸಂದರ್ಶಿಸುವುದೇ ತಮ್ಮ ನೇತ್ರಗಳಿಗೆ ಸಾಫಲ್ಯವೆಂದೂ, ಶಿವಕ್ಷೇತ್ರಯಾತ್ರೆಯನ್ನಾಚರಿಸುವುದೇ ತಮ್ಮ ದೇಹಸೌಭಾಗ್ಯವೆಂದೂ, ಶಿವಪ್ರಸಾದವನ್ನು ಸೇವಿಸುವುದೇ ತಮ್ಮ ದೇಹಶುದ್ಧಿಗೆ ಕಾರಣವೆಂದೂ, ಸದಾ ಶಿವನಲ್ಲಿ ಚಿತ್ತವನ್ನಿರಿಸುವುದೇ ಆತ್ಮೋದ್ಧಾರಕ್ಕೆ ಕಾರಣವೆಂದೂ ಭಾವಿಸಿ, ಅನನ್ಯಸಾಧಾರಣವಾದ ಭಕ್ತಿವಿಶೇಷದಿಂದ ಶಿವನನ್ನು ಸೇವಿಸುತ್ತಿದ್ದರು

ಚಂಪಾದೇಶವನ್ನಾಳಿದ ಅನೇಕಜನ ಮಹಾರಾಜರು ತಮ್ಮ ನಾಮವು ಭೂಮಂಡಲದಲ್ಲಿ ಚಿರಕಾಲ ಸ್ಥಿರವಾಗಿರಲೆಂಬ ಉದ್ದೇಶದಿಂದ ತಾವು ಸ್ಥಾಪಿಸಿದ ಶಿವಲಿಂಗಗಳಿಗೆ ತಮ್ಮ ತಮ್ಮ ನಾಮವನ್ನಿಟ್ಟು ಲಿಂಗಗಳನ್ನು ಸ್ಥಾಪಿಸಿದ್ದಾರೆ. ಭದ್ರವರ್ಮಮಹಾರಾಜನು 'ಭದ್ರೇಶ್ವರ' ಎಂಬ ಹೆಸರಿನಿಂದಲೂ, ಶಂಭುಭದ್ರವರ್ಮಮಹಾರಾಜನು "ಶಂಭುಭದ್ರೇಶ್ವರ" ಎಂಬ ಹೆಸರಿನಿಂದಲೂ ಇಂದ್ರವರ್ಮಮಹಾರಾಜನು 'ಇಂದ್ರಭದ್ರೇಶ್ವರ ಇಂದ್ರಭೋಗೇಶ್ವರ ಇಂದ್ರಪರಮೇಶ್ವರ" ಎಂಬ ಹೆಸರುಗಳಿಂದಲೂ ವಿಕ್ರಾಂತವರ್ಮಮಹಾರಾಜನು ವಿಕ್ರಾಂತರುದ್ರ ಶ್ರೀವಿಕ್ರಾಂತರುದ್ರೇಶ್ವರ ಎಂಬ ಹೆಸರುಗಳಿಂದಲೂ, ಭದ್ರವರ್ಮದೇವಮಹಾರಾಜನು ಪ್ರಕಾಶಭದ್ರೇಶ್ವರ ಭದ್ರಕುಲಯೀಶ್ವರ ಭದ್ರಪಂಚೇಶ್ವರ ಭದ್ರಮಂಡಲೇಶ್ವರ ಎಂಬ ಹೆಸರುಗಳಿಂದಲೂ ಇಂದ್ರವರ್ಮಮಹಾರಾಜನು ಇಂದ್ರಕಾಂತೇಶ್ವರ ಎಂಬ ಹೆಸರಿನಿಂದಲೂ ಹರಿವರ್ಮಮಹಾರಾಜನು ಹರಿವರ್ಮೇಶ್ವರ ಎಂಬ ಹೆಸರಿನಿಂದಲೂ ಜಯಹರಿವರ್ಮದೇವಮಹಾರಾಜನು ಜಯಹರಿಲಿಂಗೇಶ್ವರ ಎಂಬ ಹೆಸರಿನಿಂದಲೂ ಜಯಇಂದ್ರವರ್ಮದೇವಮಹಾರಾಜನು ಜಯಇಂದ್ರಲೋಕೇಶ್ವರ ಜಯಇಂದ್ರೇಶ್ವರ ಎಂಬ ಹೆಸರುಗಳಿಂದಲೂ ಇಂದ್ರವರ್ಮಮಹಾರಾಜನು ಇಂದ್ರವರ್ಮಲಿಂಗೇಶ್ವರ ಎಂಬ ಹೆಸರಿನಿಂದಲೂ ಜಯಸಿಂಹವರ್ಮದೇವಮಹಾರಾಜನು ಜಯಸಿಂಹವರ್ಮಲಿಂಗೇಶ್ವರ' ಎಂಬ ಹೆಸರಿನಿಂದಲೂ ಶಿವಲಿಂಗಗಳನ್ನು ಸ್ಥಾಪಿಸಿದವರು. ಈ ಮಹಾರಾಜರು ಸ್ಥಾಪಿಸಿದ ಶಿವಲಿಂಗಗಳ ವಿಷಯವು ಅನುಕ್ರಮವಾಗಿ ೬ ೭ ೩೩ ೩೪ ೩೯ ೪೪ ೭೪ ೭೬ ೧೦೮ ೧೧೩ ೧೧೭ ನೇ ಶಾಸನಗಳಲ್ಲಿ ಉಕ್ತವಾಗಿವೆ. ಈ ಶಿವಲಿಂಗಮೂರ್ತಿಗಳಲ್ಲದೆ ಆ ದೇಶದಲ್ಲಿ ದೇವಲಿಂಗೇಶ್ವರ ಮಹಾಲಿಂಗೇಶ್ವರ ಶಿವಲಿಂಗೇಶ್ವರ ಮಹಾಶಿವಲಿಂಗೇಶ್ವರ ಧರ್ಮಲಿಂಗೇಶ್ವರ ಎಂಬ ಶಿವಲಿಂಗಮೂರ್ತಿಗಳೂ ಸ್ಥಾಪಿಸಲ್ಪಟ್ಟಿರುವುವು. ಈ ಶಿವಲಿಂಗಗಳ ವಿಷಯವು ಅನುಕ್ರಮವಾಗಿ [illegible] ನೆಯ ಶಾಸನಗಳಲ್ಲಿ ಉಕ್ತವಾಗಿದೆ.

ತಮ್ಮ ಪವಿತ್ರನಾಮದಲ್ಲಿ ಅನೇಕ ಶಿವಲಿಂಗಗಳನ್ನು ತಮ್ಮ ನಾಮಸಂಕೇತದಿಂದ ಸ್ಥಾಪಿಸುವುದು ಅನಾದಿಕಾಲದಿಂದ ರೂಢಿಯಲ್ಲಿದೆ. ಅಗಸ್ತ್ಯ, ಗೌತಮ, ಕಪಿಲ, ಮಾರ್ಕಂಡೇಯ, ವ್ಯಾಸ ಕಶ್ಯಪ ಮೊದಲಾದ ಮಹರ್ಷಿಗಳು ತಮ್ಮ ತಮ್ಮ ಹೆಸರಿನಿಂದ ಅಗಸ್ತ್ಯೇಶ್ವರ, ಗೌತಮೇಶ್ವರ ಕಪಿಲೇಶ್ವರ ಮಾರ್ಕಂಡೇಯೇಶ್ವರ, ವ್ಯಾಸೇಶ್ವರ ಕಶ್ಯಪೇಶ್ವರ ಮೊದಲಾದ ಶಿವಲಿಂಗಗಳನ್ನು ಸ್ಥಾಪಿಸಿರುವುದೂ ರಾಮನು ತನ್ನ ಹೆಸರಿನಿಂದ ರಾಮೇಶ್ವರ ಎಂಬ ಶಿವಲಿಂಗವನ್ನು ಸ್ಥಾಪಿಸಿರುವುದೂ ಪ್ರಸಿದ್ಧವೇ ಆಗಿದೆ. ಇನ್ನೂ ಮುಂದೆ ಸ್ವಾಮಿದೇವನೆಂಬ ಮಹಾರಾಜನು 'ಸ್ವಾಮಿದೇವೇಶ್ವರ' ಎಂಬ ಶಿವಲಿಂಗವನ್ನೂ, ಚಾಲುಕ್ಯರಾಜ್ಯದ ಎರಡನೆಯ ವಿಕ್ರಮಾದಿತ್ಯನ ಪತ್ನಿಯರಾದ ಲೋಕಮಹಾದೇವಿ, ತ್ರೈಲೋಕ್ಯಮಹಾದೇವಿ ಎಂಬ ಇಬ್ಬರು ರಾಣಿಯರು ತಮ್ಮ ಹೆಸರಿನಿಂದ "ಲೋಕೇಶ್ವರ ತ್ರೈಲೋಕ್ಯೇಶ್ವರ" ಎಂಬ ಶಿವಲಿಂಗಗಳನ್ನೂ ಸ್ಥಾಪಿಸಿರುವುದು ಇತಿಹಾಸಪ್ರಸಿದ್ಧವೇ ಆಗಿದೆ. ಇದೇ ರೀತಿಯಾಗಿ ಚಂಪಾದೇಶದ ಮಹಾರಾಜರೂ ಸಹ ತಮ್ಮ ತಮ್ಮ ಹೆಸರುಗಳಿಂದ ಶಿವಲಿಂಗಗಳನ್ನು ಸ್ಥಾಪಿಸಿರುವರೆಂದು ಸ್ಪಷ್ಟವಾಗುತ್ತದೆ

ಇಂಡಿಯಾ ದೇಶದ ವೃದ್ಧಪಿತಾಮಹ

ಈಗಿನ ಜಾನೇಷುಮಾರಿ ಲೆಖ್ಖದಂತೆ ನಾಗಪುರದಲ್ಲಿರುವ ಸಿದ್ಧಿ ವಸ್ತಾದ್ ಎಂಬವನಿಗೆ 160 ವರ್ಷ ವಯಸ್ಸಾಗಿರುವದೆಂದು ಪ್ರಕಟವಾಗಿದೆ

ವಿಚಿತ್ರ ವಿವಾಹ

ಪಂಜಾಬ್ ಪ್ರಾಂತದ ಸಿಯಾಲ್ಕೋಟ್ ಎಂಬ ಊರಿನ ಒಬ್ಬ ಹಿಂದೂ ಮುದುಕನು ಈಗ ೧೬ನೇ ಸಲ ಮದುವೆಯಾಗಿರುವನು ಅವನಿಗೆ ೯೫ ವರ್ಷ ವಧುವಿಗೆ ೧೮ ವರ್ಷ.

ಯುದ್ಧವಾರ್ತೆ.

ಬರ್ಮಾದಲ್ಲಿ ಜಪಾನರ ದಾಳಿ

ಜಪಾನರು ಉತ್ತಮ ತರಹದವಿಮಾನಗಳನ್ನು ತಂದು ಬರ್ಮಾದಲ್ಲಿ ಬಲವಾದ ದಾಳಿ ನಡೆಸುತ್ತಿದ್ದಾರೆ. ಅವರು ಹೆಚ್ಚು ಹೆಚ್ಚಿಗೆ ವಿಮಾನಗಳನ್ನು ತರುತ್ತಿರುವುದನ್ನು ನೋಡಿದರೆ ತಮ್ಮ ಕೆಲಸವನ್ನು ಯಾವರೀತಿ ಪೂರೈಸಬೇಕೆನ್ನುವುದನ್ನು ಅರಿತಿದ್ದಾರೆ ಇಂಥ ಧಾಳಿಯನ್ನು ತಡೆಗಟ್ಟಲು ಚೀಣರಿಗೆ ಸಾಕಾದಷ್ಟು ವಿಮಾನಗಳನ್ನು ಒದಗಿಸಿಕೊಟ್ಟರೆ ಅವರಿಗೆ ಉತ್ತೇಜನ ಕೊಟ್ಟಂತಾಗುವುದು ಎಂದು ಬರ್ಮಾದ ಚೀಣಸೈನಿಕರ ಕಮ್ಯಾಂಡರು ಹೇಳಿದ್ದಾರೆ

ಜಪಾನರು ವಿಮಾನನಿಲ್ದಾಣವನ್ನು ಆಕ್ರಮಿಸಿದರು

ಕಳೆದ 25 ನೆಯ ತಾರೀಖಿನ ದಿವಸ ಸುಮಾರು 1000 ಜನ ಜಪಾನ್ ಸೈನಿಕರು ಟಂಗೂನಗರವನ್ನು ಒಂದು ಪಕ್ಕಕ್ಕೆ ಬಿಟ್ಟು ಮುಂದೆ ನುಗ್ಗಿ ಅಲ್ಲಿಂದ ಉತ್ತರಕ್ಕಿರುವ ವಿಮಾನ ನಿಲ್ದಾಣವೊಂದನ್ನು ಹಿಡಿದರೆಂದೂ, ಅಲ್ಲಿಂದ ಅವರನ್ನು ಓಡಿಸಲು ಚೀಣಾ ದಳವೊಂದನ್ನು ಕಳುಹಿಸಲಾಯಿತೆಂದೂ, ಅಲ್ಲಿ ಭಾರಿ ಕದನ ನಡೆಯುತ್ತಿದೆಯೆಂದೂ, ಶತ್ರುಗಳ ಮೂಲಸೇನೆಗಳು ಇನ್ನೂ ಟಂಗುವಿನಿಂದ ದಕ್ಷಿಣಕ್ಕೆ 20 ಮೈಲಿ ದೂರದಲ್ಲಿರುವವೆಂದೂ ತಿಳಿದುಬರುತ್ತದೆ

ಬರ್ಮಾದಲ್ಲಿ ಜಪಾನರ ಮುನ್ನಡೆ

ಜಪಾನರ ದೊಡ್ಡ ಪಡೆಯೊಂದು ಕ್ಯಾಂಗಿನ್ ಉತ್ತರಭಾಗಕ್ಕೆ ನುಗ್ಗುತ್ತಿದೆಯೆಂದು ಸುದ್ದಿಯಿದೆ. ಯೋಮಾಸ್ ಕಡೆ ಶತ್ರುಗಳು ಅಲ್ಲಲ್ಲಿ ಸೈನಿಕರನ್ನು ಪ್ಯಾರಾಚೂಟುಗಳಮೂಲಕ ಇಳಿಸುತ್ತಿದ್ದಾರೆ ಶತ್ರುಗಳು ಟಂಗೂನಗರವನ್ನು ಒತ್ತಟ್ಟಿಗೆ ಬಿಟ್ಟು ಉತ್ತರಕ್ಕೆ ೧೨ ಮೈಲು ದೂರದಲ್ಲಿರುವ ಟ್ಯಾಂಗಾನ್ ಎಂಬ ಊರನ್ನು ಹಿಡಿದಿರುವರೆಂದು ಹೇಳಲಾಗಿದೆ

ಜಪಾನಿನಲ್ಲಿ ಭೀತಿ

ಯುದ್ಧಾರಂಭದಲ್ಲಿ ಅಮೇರಿಕನ್ನರಿಂದ ಜಪಾನು ವಶಪಡಿಸಿಕೊಂಡ ಮಾರ್ಕಸ್ ಮತ್ತು ವೇಕ್ ದ್ವೀಪಗಳ ಮೇಲೆ ಅಮೆರಿಕದ ವಿಮಾನಬಲದವರೂ ನೌಕಾಬಲದವರೂ ಮುತ್ತಿಗೆ ನಡೆಸಿ ಜಪಾನರಿಗೆ ಬಹಳ ಹಾನಿಯನ್ನುಂಟುಮಾಡಿದರು ಮಾರ್ಕಸ್‌ದ್ವೀಪವು ವೇಕ್ ದ್ವೀಪದ ಪಶ್ಚಿಮಕ್ಕಿದೆ ಅಲ್ಲಿಂದ ಜಪಾನಿನ ಯೋಕೊಹಾಮಕ್ಕೆ 990 ಮೈಲು ಮಾತ್ರವಿದೆ. ಮಿತ್ರರಾಷ್ಟ್ರಗಳು ಜಪಾನಿನ ಕಡೆಗೆ ತೀರ ಸಮೀಪಕ್ಕೆ ಬಂದಿರುವ ಪ್ರದೇಶವೆಂದರೆ ಇದೇ ಅಮೇರಿಕನ್ನರ ಈ ದಾಳಿಯಿಂದ ಅಲ್ಲಿಯ ಬಂದರು ವ್ಯವಸ್ಥೆಗಳಿಗೂ ವಿಮಾನನಿಲ್ದಾಣಗಳಿಗೂ ಅಪಾರ ಹಾನಿಯಾಗಿದೆ ವೇಕ್‌ದ್ವೀಪದಲ್ಲಿದ್ದ ಜಪಾನ್ ವಿಮಾನಗಳೆಲ್ಲವೂ ನಾಶವಾದವು. ಅಲ್ಲಿಯ ವಸ್ತುಸಂಗ್ರಹಸ್ಥಾನಗಳೂ ಒಂದು ರೇಡಿಯೋ ಸ್ಟೇಷನ್ನೂ ಸಹ ಹಾಳಾದವು. ಹೊಸದಾಗಿ ಕಟ್ಟಿ ಮುಗಿಸಿದ್ದ ವಿಮಾನನಿಲ್ದಾಣವೊಂದು ಅಪಾಯಕ್ಕೀಡಾಯಿತು. ಮಾರ್ಕಸ್‌ದ್ವೀಪದ ಮೇಲೆ ಮುತ್ತಿಗೆ ನಡೆದುದನ್ನು ಕೇಳಿ ಟೋಕಿಯೋದಲ್ಲಿ ಈಗ ರಾತ್ರಿಕಾಲದಲ್ಲಿ ದೀಪಗಳನ್ನು ಆರಿಸಿಬಿಡುವ ಏರ್ಪಾಡು ಮಾಡಲಾಗಿದೆ. ಇದರಿಂದ ಜಪಾನಿನ ಜನರು ಕಳವಳಗೊಂಡಿದ್ದಾರೆ.

೧೭ ವರ್ಷದ ಹುಡುಗಿಯರು ರಾಷ್ಟ್ರಸೇವೆಗೆ ಬರಬೇಕು

ಇಂಗ್ಲೆಂಡಿನಲ್ಲಿ ೧೭ ವರ್ಷ ವಯಸ್ಸಿನ ಹುಡುಗಿಯರು ರಾಷ್ಟ್ರ ಸೇವೆಗಾಗಿ ಮಾರ್ಚಿ ೨೮ನೇ ತಾರೀಖಿನ ದಿವಸ ತಮ್ಮ ಹೆಸರನ್ನು ರಿಜಿಷ್ಟರ್ ಮಾಡಿಸಬೇಕೆಂದು ಸರ್ಕಾರದ ಆಜ್ಞೆಯಾಗಿದೆ

ರಷ್ಯದಲ್ಲಿ ಸ್ತ್ರೀ ಸೈನಿಕರು

ಅನೇಕ ರಷ್ಯ ಸ್ತ್ರೀ ಸ್ವಯಂ ಸೇವಿಕೆಯರು ರಷ್ಯಾ ಸೈನ್ಯಪಡೆಗೆ ಸೇರಿದ್ದಾರೆ. ಅವರು ಮೋಟಾರ್ ಸೈಕ್ಲಿಸ್ಟುಗಳಾಗಿದ್ದಾರೆ ಅಲ್ಲದೆ ಮೆಷೀಗನ್ ಮತ್ತು ರೈಫಲ್ ಬಂದೂಕಗಳನ್ನು ಹಿಡಿದು ಯುದ್ಧಮಾಡುತ್ತಿದ್ದಾರೆ.

ಮದ್ರಾಸಿನ ಹತ್ತರ ಶತ್ರುನೌಕೆ

ಮದ್ರಾಸಿಗೆ ಕೇವಲ ೧೦ ಮೈಲಿ ದೂರದಲ್ಲಿ ಬಂಗಾಳಾ ಕೊಲ್ಲಿಯಲ್ಲಿ ಅಮೆರಿಕನ್ ನೌಕೆಯೊಂದು ಟಾರ್ಪೆಡೋ ಮಾಡಲ್ಪಟ್ಟಿತೆಂದು ಅಧಿಕಾರಯುತವಾಗಿ ಪ್ರಕಟಿಸಲಾಗಿದೆ

ಬ್ರಿಟನ್ನಿನ ಹೊಸ ವಿಮಾನ

ವಿರ್ಲ್‌ವಿಂಡ್ ಎಂಬ ಹೊಸ ಬ್ರಿಟಿಷ್ ವಿಮಾನವು ಈಗ ಕೆಲಸ ಮಾಡಲು ಹೊರಗೆ ಬಂದಿದೆ ಇದು ೨ ಇಂಜಿನುಗಳಿಂದ ನಡೆಯುವುದು ಇದರಲ್ಲಿ ೪ ಫಿರಂಗಿಗಳಿವೆ ಸ್ಪಿಟ್ ಫೈರ್ ವಿಮಾನಗಳಿಗಿಂತಲೂ ಬಹಳ ವೇಗವಾಗಿ ಹೋಗುವುದು

ಹೊಸ ಮಾದರಿಯ ವಿಮಾನಗಳು

ಇಂದಿನ ಯುದ್ಧದಲ್ಲಿ ಭಾಗವಹಿಸಲು ಅಮೆರಿಕೆಯು ಹೊಸಹೊಸ ಮಾದರಿ ವಿಮಾನಗಳನ್ನು ನಿರ್ಮಿಸುತ್ತಿದೆ ಅಮೆರಿಕೆಯು ತನ್ನ ವಿಮಾನಬಲಕ್ಕೆ ಬೇಕಾದ ಸಾಮಾನುಗಳನ್ನು ಸಿದ್ಧಗೊಳಿಸುತ್ತಿರುವದಲ್ಲದೆ ಮಿತ್ರರಾಷ್ಟ್ರಗಳಿಗೆ ಬೇಕಾದ ವಿಮಾನಗಳನ್ನೂ ಕೂಡ ಸಿದ್ಧಗೊಳಿಸುತ್ತದೆ ಬ್ರಿಟನ್ನಿಗೆ ಇಂದು ಹೆಚ್ಚು ಸಂಖ್ಯೆಯಲ್ಲಿ ಹೊಸ ಹೊಸ ವಿಮಾನಗಳು ಬರುತ್ತಿವೆ ಇತ್ತೀಚಿಗೆ ಬಂದ ಹೊಸ ಬಗೆಯ ವಿಮಾನಗಳಲ್ಲಿ ಉತ್ತರ ಅಮೆರಿಕದ 'ಮಸ್ಟ್ಯಾಂಗ್' ಎಂಬ ಸಿಂಗಲ್ ಸೀಟರ್ ಫೈಟರ್ ವಿಮಾನವು ಬಹು ಮುಖ್ಯವಾದುದು ಇದು 1150 ಅಶ್ವಶಕ್ತಿಯಿಂದ ಕೂಡಿದ್ದು ಬಹಳ ಚನ್ನಾಗಿ ಕೆಲಸ ಮಾಡುವುದಂತೆ!

ಇರಾನ್-ರಷ್ಯ ರಸ್ತೆ ನಿರ್ಮಾಣ

ಇರಾನಿನಿಂದ ರಷ್ಯಾದೇಶಕ್ಕೆ ಸಂಗ್ರಾಮವಸ್ತುಗಳನ್ನು ಸಾಗಿಸಲು ಅನುಕೂಲಿಸುವಂತೆ ೨೦೦೦ ಮೈಲುಗಳುದ್ದವಿರುವ ರಸ್ತೆಯನ್ನು ಬೇಗಬೇಗ ನಿರ್ಮಿಸುತ್ತಿರಲಾಗಿದೆ. ಸಾವಿರಾರುಜನರು ಈ ಕೆಲಸದಲ್ಲಿ ತೊಡಗಿದ್ದಾರೆ ಬ್ರಿಟನ್ನಿನ ಸೈನ್ಯಶಾಖೆಯವರೂ ಸಹ ರಸ್ತೆ ನಿರ್ಮಾಣಕಾರ್ಯದಲ್ಲಿ ಭಾಗವಹಿಸಿದ್ದಾರೆ. ಈ ರಸ್ತೆಯ ಕೆಲಸವು ಬೇಗನೆ ಮುಗಿಯುವ ನಿರೀಕ್ಷಣೆಯಿದೆ

ಅಮೆರಿಕಾ ಸೈನಿಕರು ಆಸ್ಟ್ರೇಲಿಯಾ ಹುಡುಗಿಯರನ್ನು ಮದುವೆಯಾಗುವರಂತೆ!

ಅಮೆರಿಕಾ ಸೈನಿಕರು ಆಸ್ಟ್ರೇಲಿಯಾಕ್ಕೆ ಬಂದಿಳಿದರಷ್ಟೆ! ಈಗ ಅವರು ಆಸ್ಟ್ರೇಲಿಯಾ ಹುಡುಗಿಯರನ್ನು ಮದುವೆ ಮಾಡಿಕೊಳ್ಳಲು ಪ್ರಾರಂಭಿಸಿರುವದರಿಂದ ಇದನ್ನು ಕೆಲವು ಚರ್ಚಿನವರು ಪ್ರತಿಭಟಿಸಿದ್ದಾರೆ ರೋಮನ್ ಕ್ಯಾಥಲಿಕ್ ಆರ್ಕಿ ಬಿಷಪ್‌ರಾದ ಡಾ॥ ಹುಹಿಗ್‌ರವರು ಅಮೆರಿಕ ಸೈನಿಕರು ಆಸ್ಟ್ರೇಲಿಯಾಕ್ಕೆ ಬಂದಿರುವುದು ಯುದ್ಧಮಾಡುವದಕ್ಕೋ ಅಥವಾ ಮದುವೆಯಾಗುವುದಕ್ಕೋ ಎಂದು ಒಂದು ಹೇಳಿಕೆಯನ್ನಿತ್ತಿದ್ದಾರೆ.

ರಷ್ಯಾ ರಣರಂಗಕ್ಕೆ ೪ ಲಕ್ಷ ಜರ್ಮನ್ ಸೈನ್ಯ

ಜರ್ಮನರು ರಷ್ಯಾರಣರಂಗಕ್ಕೆ ಹೆಚ್ಚು ಹೆಚ್ಚಾಗಿ ಸೈನ್ಯಗಳನ್ನು ಕಳುಹಿಸುತ್ತಿದ್ದಾರೆ ಅನಧಿಕಾರಯುತವಾಗಿ ತಿಳಿದು ಬಂದಿರುವುದರಲ್ಲಿ ಈ ಸೈನ್ಯದ ಸಂಖ್ಯೆಯು ೪ ಲಕ್ಷ ಎಂದು ಹೇಳಲಾಗಿದೆ. ರಷ್ಯನರು ಮಾರ್ಚ ೧ ನೇ ತಾರೀಖಿನಿಂದ ೨೪ ನೇ ತಾ॥ ವರೆಗೆ ೮೪೫ ವಿಮಾನಗಳನ್ನೂ ಇದೇ ಕಾಲದಲ್ಲಿ ೬೮೬ ಟ್ಯಾಂಕುಗಳನ್ನೂ ಕಳೆದುಕೊಂಡಿರುವರೆಂದು ಜರ್ಮನರು ಹೇಳುತ್ತಿರುವರು

೧೦ ದಿನಗಳಲ್ಲಿ ೩೨,೦೦೦ ಜರ್ಮನರ ನಾಶ

ಸ್ಟರಾಯರಸ್ಸಾ ರಣರಂಗದಲ್ಲಿ ೧೦ ದಿನಗಳಲ್ಲಿ ೩೨,೦೦೦ ಜರ್ಮನರು ಸತ್ತರು ಮತ್ತು ಗಾಯಗೊಂಡಿರುವರು ಆದರೂ ಜರ್ಮನರು ಅದನ್ನು ಲಕ್ಷಿಸದೆ ಅಲ್ಲಿ ಸುತ್ತುವರಿಯಲ್ಪಟ್ಟಿರುವ ರಷ್ಯನರಿಂದ ತಪ್ಪಿಸಿಕೊಳ್ಳಲು ಪ್ರಯತ್ನಮಾಡುತ್ತಿದ್ದಾರೆ. ಜರ್ಮನರು ಶಸ್ತ್ರ ಬಂಡಿಗಳನ್ನೂ, ಫಿರಂಗಿಗಳನ್ನೂ, ವಿಮಾನಬಲವನ್ನೂ ಉಪಯೋಗಿಸುತ್ತಿದ್ದರೂ ಪ್ರಯೋಜನವಾಗಿಲ್ಲ ಜರ್ಮನಿಯಿಂದ ಹೊಸ ಹೊಸ ಪಡೆಗಳು ವಿಮಾನಗಳಲ್ಲಿ ಬರುತ್ತಲೇ ಇದ್ದರೂ ರಷ್ಯನರು ಒಂದರ ಹಿಂದೊಂದರಂತೆ ಜರ್ಮನ್ ಪಡೆಗಳನ್ನು ನಿರ್ನಾಮಮಾಡುತ್ತಿದ್ದಾರೆ

ವಸ್ತು ನಾಶಕನೀತಿ ಭಾರತಕ್ಕೆ ಸಲ್ಲದು

ಈಗ ನಡೆಯುತ್ತಿರುವ ಸಂಗ್ರಾಮದಲ್ಲಿ ಶತ್ರುಗಳು ಆಕ್ರಮಿಸಬಹುದಾದ ಪ್ರದೇಶದಲ್ಲಿರುವ ಸಕಲ ವಸ್ತುಗಳನ್ನು ನಾಶಮಾಡಿ ಶತ್ರುವಿಗೆ ಏನೂ ಸಿಕ್ಕದಂತೆ ಮಾಡಬೇಕೆಂಬ ನೀತಿಯು ಈಗ ಎಲ್ಲರಿಂದಲೂ ಆಚರಿಸಲ್ಪಡುತ್ತಿರುವುದಷ್ಟೆ! ಇದು ಭಾರತದ ಪ್ರಕೃತ ಸ್ಥಿತಿಗೆ ಬಹು ಅಪಾಯಕಾರಕ ನೀತಿಯಾಗಿರುವುದೆಂದೂ, ಒಂದುವೇಳೆ ಅಂತಹ ಸಮಯವು ಒದಗಿದರೂ ಕೂಡ ಶತ್ರುಗಳ ಕೈಗೆ ಯಾವ ವಸ್ತುವೂ ಬೀಳದಂತೆ ನಾಶಗೊಳಿಸುವ ನೀತಿಯನ್ನು ಭರತಖಂಡಕ್ಕೆ ಅನ್ವಯಿಸಬಾರದೆಂದೂ ಹಾಗೆ ಅನ್ವಯಿಸುವದಿಲ್ಲವೆಂದು ಇಂಡಿಯಾ ಸರ್ಕಾರದವರು ಸ್ಪಷ್ಟವಾಗಿ ಭರವಸೆ ಕೊಡುವದಾದರೆ ಈಗ ಜನರಲ್ಲಿ ಉಂಟಾಗಿರುವ ಭಯ ಸಂಶಯಗಳು ಬಹಳ ಮಟ್ಟಿಗೆ ನಿವಾರಣೆಯಾಗುವವೆಂದೂ ಗಾಂಧಿಯವರು ಪ್ರಕಟಿಸಿರುವರಲ್ಲದೆ, ಭಾರತದ ಸಾರ್ವಜನಿಕಾಭಿಪ್ರಾಯವೂ ಸಹ ಇದೇರೀತಿ ಇರುವದೆಂದು ಕಂಡುಬರುತ್ತದೆ

ಜಪಾನಿನ ಓಟವು ಬಹಳ ಕಡಿಮೆಯಾಗಿದೆ

ನೈಋತ್ಯ ಪೆಸಿಫಿಕ್ ಕದನದಲ್ಲಿ ಸಂಗ್ರಾಮದ ಆರಂಭದೆಸೆಯಲ್ಲಿದ್ದ ಜೋರು ಈಗ ಕಾಣುಬರುವುದಿಲ್ಲ ಜಪಾನಿನ ಬಲವಿನ್ನೂ ಕಡಿಮೆಯಾಗಿಲ್ಲವೆ ಹೋದರೂ ಇತ್ತೀಚಿಗೆ ಜಪಾನಿಗೆ ಬಹಳ ನಷ್ಟವಾದುದರಿಂದಲೂ ಮತ್ತು ಅದು ಅನೇಕ ಸಾಮಾನುಹಡಗುಗಳನ್ನು ಕಳೆದುಕೊಂಡದರಿಂದಲೂ ಪುನಃ ಮೊದಲಿನಂತೆ ಉಗ್ರಕದನವನ್ನು ನಡೆಸಲಾರದೆಂದು ಅಭಿಪ್ರಾಯಪಡಲಾಗಿದೆ ಇದರಿಂದ ಮಿತ್ರರಾಷ್ಟ್ರಗಳು ಜನರನ್ನೂ ಸಂಗ್ರಾಮವಸ್ತುಗಳನ್ನೂ ಶೇಖರಿಸಲು ಅವಕಾಶವಾಗುತ್ತದೆ ಜಪಾನು ಇದುವರೆಗೆ ಅನುಭವಿಸಿರುವ ಕಷ್ಟಗಳಿಗಿಂತ ಹೆಚ್ಚು ಉಗ್ರವಾದ ಕಷ್ಟವನ್ನು ಇನ್ನುಮುಂದೆ ಆಸ್ಟ್ರೇಲಿಯಾದಲ್ಲಿ ಅನುಭವಿಸಬೇಕಾಗುತ್ತದೆ ಚೀಣಾದಲ್ಲಿ ಅನೇಕ ಕಂದಕಗಳಿರುವುದರಿಂದ ಅಲ್ಲಿ ಜಪಾನರ ಪ್ರಯತ್ನಗಳು ನಿಷ್ಫಲವಾಗಿರುವಂತೆ ಆಸ್ಟ್ರೇಲಿಯಾದಲ್ಲಿಯೂ ಕಂದಕಗಳಿರುವದರಿಂದ ನಿಷ್ಫಲವಾಗುವದು ಮಲಯಾ ಜಾವಾಗಳನ್ನು ಆವರಿಸಿದಂತೆ ಜಪಾನು ಆಸ್ಟ್ರೇಲಿಯಾವನ್ನು ಆವರಿಸಲಾರದು ಜಪಾನರುಇನ್ನು ಮುಂದೆ ಹೊಸ ರೀತಿಯಲ್ಲಿ ಯುದ್ಧಮಾಡುವ ಸಂಭವವದೆ ಜ॥ ಸ್ಟಿಲ್‌ವಿಲ್‌ರವರ ದಂಡನಾಯಕತ್ವದಲ್ಲಿ ಕೆಲಸಮಾಡುತ್ತಿರುವ ಎರಡು ಚೀಣಾ ಸೇನೆಗಳು ಮುಂದಿನ ಹಲವು ವಾರಗಳಲ್ಲಿ ಬಹಳ ಮುಖ್ಯಪಾತ್ರವನ್ನು ವಹಿಸುವ ಸಂಭವವಿದೆ ಚೀಣಾದಲ್ಲಿದ್ದ ಅತ್ಯುತ್ತಮ ಪಡೆಗಳವು ಚೀಣವು ತನ್ನಲ್ಲಿದ್ದ ಟ್ಯಾಂಕುಗಳನ್ನೂ ಮತ್ತು ಶಸ್ತ್ರ ಬಂಡಿಗಳನ್ನೂ ಬಹಳ ಮಟ್ಟಿಗೆ ಈ ಪಡೆಗಳಿಗೇ ಕೊಟ್ಟಿದೆ ಈಗಿನ ಸಮಸ್ಯೆಗಳಿಗೆಲ್ಲ ವಿಮಾನ ಬಲವೇ ಮುಖ್ಯವಾಗಿರುವುದು ಇನ್ನೆರಡು ತಿಂಗಳೊಳಗಾಗಿ ಸಾಕಾದಷ್ಟು ವಿಮಾನಗಳನ್ನು ಶೇಖರಿಸುವುದಾದರೆ ಶತ್ರುಗಳ ಜಲಮಾರ್ಗಗಳಿಗೆ ವಿಶೇಷಹಾನಿಯುಂಟುಮಾಡಿ, ಜಪಾನು ಆಸ್ಟ್ರೇಲಿಯಾವನ್ನು ಮುತ್ತುವುದು ತೀರ ಕಷ್ಟವಾಗುವಂತೆ ಮಾಡಬಹುದು

ಜಪಾನ್ ನೌಕಾಧಿಕಾರಿಗಳ ಹೇಳಿಕೆ

ಜಪಾನಿನ ನೌಕಾಧಿಕಾರಿಗಳೊಬ್ಬರು ಜಾವಾ ದ್ವೀಪವು ಬಿದ್ದುಹೋದಂದಿನಿಂದ ಸಂಗ್ರಾಮವು ಜಪಾನಿಗೆ ಹೆಚ್ಚು ಅನುಕೂಲವಾಗಿ ಪರಿಣಮಿಸಿಲ್ಲವೆಂದು ಪತ್ರಿಕೆಯೊಂದರಲ್ಲಿ ಈ ಕೆಳಗೆ ಕಂಡಂತೆ ಪ್ರಕಟಿಸಿದ್ದಾರೆ.

"ಈಗ ಜಪಾನು ಆತ್ಮರಕ್ಷಣೆಯಲ್ಲಿ ತೊಡಗಿದೆಯೆಂದೂ, ಇಂಗ್ಲೆಂಡ್-ಅಮೆರಿಕಾ ರಾಷ್ಟ್ರಗಳು ಮೇಲೆ ಬಿದ್ದು ಹೊಡೆಯುತ್ತಿವೆಯೆಂದೂ, ಆದರೆ ಕೇವಲ ಆತ್ಮರಕ್ಷಣ ಕಾರ್ಯವು ನಮ್ಮನ್ನು ವಿಜಯದ ಕಡೆ ಒಯ್ಯುವುದಿಲ್ಲವೆಂದೂ, ಹಿಂಮಹಾಸಾಗರವನ್ನೂ ಮತ್ತು ಆಸ್ಟ್ರೇಲಿಯಾವನ್ನೂ ಜಪಾನರು ಹಿಡಿದು, ಸಂಗ್ರಾಮವನ್ನು ಮುಂದುವರಿಸಬೇಕೆಂದೂ, ಪೆಸಿಫಿಕ್‌ನಲ್ಲಿ ಈ ವರ್ಷ ಶತ್ರುಗಳು ತಮ್ಮ ನೌಕಾಬಲವನ್ನು ಹೆಚ್ಚಿಸುವ ನಿರೀಕ್ಷೆಯಿದೆಯೆಂದೂ, ಆಗ ಹವಾಯ್, ನ್ಯೂಜಿಲೆಂಡ್, ಸಾಮೋವಾ ಮತ್ತು ಇತರ ಸ್ಥಾನಗಳಿಂದ ಅವರು ನಮ್ಮ ಮೇಲೆ ಬೀಳುವುದು ನಿಶ್ಚಯವೆಂದೂ, ದಕ್ಷಿಣ ಪೆಸಫಿಕ್‌ನಲ್ಲಿ ಜಪಾನು ಈಗಾಗಲೇ ಆಕ್ರಮಿಸಿರುವ ದೇಶಗಳ ಸಂಪತ್ತೆಲ್ಲ ಜಪಾನಿನ ವಶವಾಯಿತೆಂದು ಭಾವಿಸುದು ತಪ್ಪೆಂದೂ, ಆ ಸಂಪತ್ತು ಜಪಾನಿನ ಹತೋಟಿಗೆ ಒಳಪಟ್ಟಿದ್ದರೂ ಅದರ ಪ್ರಯೋಜನವನ್ನು ಜಪಾನು ಹೊಂದಲು ಶಕ್ತವಾಗಿಲ್ಲವೆಂದೂ, ಅದರ ಪ್ರಯೋಜನ ಹೊಂದುವಂತಾದರೆ ಮಾತ್ರ ಜಪಾನಿನ ಸ್ಥಾನ ಬಲಗೊಳ್ಳುವುದೆಂದೂ, ಅಲ್ಲಿಯವರೆಗೆ ಜಪಾನು ನಾನಾ ಕಷ್ಟಗಳನ್ನು ಅನುಭವಿಸಬೇಕಾಗಿದೆಯೆಂದೂ" ಬರೆದಿದ್ದಾರೆ

ಚರ್ಚಿಲ್ಲರ ಭಾಷಣ

ಲಂಡನ್ನಿನಲ್ಲಿರುವ ಕ್ಯಾಕ್ಸ್ಟನ್ ಹಾಲಿನಲ್ಲಿ ಮುಖ್ಯಮಂತ್ರಿಗಳಾದ ಚರ್ಚಿಲ್ಲರು ಕನ್ಸರ್ವೆಟಿವ್ ಸಂಘದ ವಾರ್ಷಿಕೋತ್ಸವದ ಸಮಾರಂಭದಲ್ಲಿ ಭಾಷಣಮಾಡುತ್ತ ನಾನಾರಣರಂಗಗಳಲ್ಲಿ ಬ್ರಿಟಿಷರಿಗುಂಟಾದ ಜಯಾಪಜಯಗಳನ್ನು ಕೆಳಗೆಕಂಡಂತೆ ವಿವರಿಸಿದರು

"ಬರ್ಮಾಮೇಲ್ಭಾಗದಲ್ಲಿ ಉಗ್ರವಾದ ಕದನವಾಗುತ್ತಿದೆ ಆಸ್ಟ್ರೇಲಿಯಾ ಮತ್ತು ಇಂಡಿಯಾದೇಶಗಳಿಗೆ ಭೀತಿ ಹೆಚ್ಚಿದೆ ಅಟ್ಲಾಂಟಿಕ್ ಸಮುದ್ರದ ಪರಿಸ್ಥಿತಿ ಪುನಃ ಹದಗೆಟ್ಟಿದೆ ಆದ್ದರಿಂದ ನಾನು ಈದಿನ ನಿಮಗೆ ನಾವು ದುರದೃಷ್ಟದಿಂದ ಪಾರಾಗುವೆವೆಂದು ಭರವಸೆಯನ್ನು ಕೊಡಲಾರೆನು ನಾವು ಈಗ ಬಲವಾದ ಜರ್ಮನಿ ಮತ್ತು ಇಟಲಿ ರಾಷ್ಟ್ರಗಳನ್ನು ಎದುರಿಸಬೇಕಾಗಿದೆ ಅವರು ಮೊದಲಿನಿಂದಲೂ ಸಕಲ ಸಿದ್ಧತೆಗಳನ್ನು ಮಾಡಿಕೊಂಡು ಅವಕ್ಕೆ ತಕ್ಕಂತೆ ತಮ್ಮ ರಾಷ್ಟ್ರಗಳ ಜೀವಿತವನ್ನೂ ಮಾರ್ಪಡಿಸಿಕೊಂಡಿದ್ದಾರೆ ಮೊದಲಿನಿಂದಲೂ ಸಿದ್ಧರಾಗಿಲ್ಲದ ನಾವು ಈ ಎರಡುರಾಷ್ಟ್ರಗಳನ್ನು ಪ್ರತಿಭಟಿಸಲು ಪ್ರಾರಂಭಿಸಿದೆವು. ಇಷ್ಟರಲ್ಲಿ ಜಪಾನ್ ರಾಷ್ಟ್ರವು ನಮಗೆ ವಿರೋಧವಾಗಿ ನಿಂತಿತು ೮ ಕೋಟಿ ಪ್ರಜಾಸಂಖ್ಯೆಯುಳ್ಳ ಜಪಾನಿನಲ್ಲಿ ಬಹಳ ಸುಸಜ್ಜಿತರಾದ ೪೦ ಲಕ್ಷ ಯೋಧರೂ ಬಹಳ ಶಕ್ತಿಯುತವಾದ ನೌಕಾ ಮತ್ತು ವಿಮಾನಬಲವೂ ಇರುವುದಲ್ಲದೆ ಯಥೇಚ್ಛವಾಗಿ ಶಸ್ತ್ರ ಸಾಮಗ್ರಿಗಳೂ ಇರುವುವು ಈಗ ನಮ್ಮ ದೇಶದಲ್ಲಿಯೇ ಹೆಚ್ಚಿನ ಅನುಕೂಲಗಳು ಬೇಕಾಗಿದ್ದುದರಿಂದ ನಮ್ಮ ಪೂರ್ವದೇಶಗಳನ್ನು ರಕ್ಷಿಸಿಕೊಳ್ಳಲು ಸಮರ್ಪಕವಾದ ಏರ್ಪಾಡಿಗೆ ಅವಕಾಶವಾಗಲಿಲ್ಲ ಇಂತಹ ಸ್ಥಿತಿಯಲ್ಲಿ ನಾವು ಇನ್ನೂ ಹೆಚ್ಚಿನ ಕಷ್ಟವನ್ನು ಅನುಭವಿಸಲು ಸಿದ್ಧರಾಗದಿದ್ದರೆ ನಾವು ಮೂರ್ಖರಾಗುವೆವು ನಾನು ನಿಮಗೆ ಮೃದುವಚನವನ್ನಾಡುವುದಿಲ್ಲ ಮತ್ತು ಸಂತೋಷವನ್ನುಂಟುಮಾಡುವ ಭರವಸೆಗಳನ್ನೂ ಕೊಡುವುದಿಲ್ಲ. ನಾನು ಹೋದವರ್ಷ ಹೇಳಿದಂತೆ ೧೯೪೩ನೆಯ ಇಸವಿಯಲ್ಲಿಯೂ ಸಹ ಜಯವನ್ನು ಪಡೆಯುವುದರ ಜೊತೆಗೆ ಮಧ್ಯ ಮಧ್ಯದಲ್ಲುಂಟಾಗುವ ಸೋಲಿಗೂ ಸಿದ್ಧರಾಗಬೇಕೆಂದು ಎಚ್ಚರಿಸುತ್ತೇನೆ" ಎಂದು ಹೇಳಿದರು.

[೪ನೆಯ ಪುಟದಿಂದ ಮುಂದುವರಿದುದು]

ಮಲ್ಲಮ್ಮ, ಮೊದಲಾದ ಪತಿವ್ರತಾಸ್ತ್ರೀಯರ ಮೇಲ್ಪಂಕ್ತಿಯನ್ನು ಅನುಸರಿಸಿ ಅವರ ಮಾಲಿಕೆಯಲ್ಲಿ ಸೇರಿಕೊಳ್ಳಬೇಕಲ್ಲದೆ ಈಗಿನ ಪಾಶ್ಚಾತ್ಯಶಿಕ್ಷಣ ಪ್ರಭಾವದಿಂದ ಸ್ವಾತಂತ್ರ್ಯಪರಾಯಣೆಯರಾಗಿ ಕಾಮವಿಕಾರದಿಂದಾಗಲಿ ದುಡ್ಡಿನ ಆಶೆಯಿಂದಾಗಲಿ, ಉಡಿಗೆ ತೊಡಿಗೆಗಳ ಆಶೆಗಾಗಲಿ, ಸಿಲುಕಿ ಪರಪುರುಷರನ್ನು ಅಪೇಕ್ಷಿಸುವದು ಅನೀತಿಕರವೂ, ಪಾಪದಾಯಕವೂ ಆಗುವದು ಲೋಕದಲ್ಲಿ ವ್ಯಭಿಚಾರಿಣಿಯಾದ ಸ್ತ್ರೀಯಳು ಎಷ್ಟು ನಿಯಮೋಪವಾಸಾದಿವ್ರತಗಳನ್ನಾಚರಿಸುತ್ತಿದ್ದರೂ, ಆ ವ್ರತಗಳೆಲ್ಲವೂ ನಿಷ್ಫಲಗಳಾಗುವವು ಆದ್ದರಿಂದ ನಮ್ಮ ಭಾರತದ ಮಹಿಳೆಯರು ಇಂಥ ವಿಷಮ ಪರಿಸ್ಥಿತಿಯನ್ನು ಎಂದೂ ತಂದುಕೊಳ್ಳಬಾರದು

ಡೊಂಕಾದ ಕಟ್ಟಿಗೆಯನ್ನು ನೆಟ್ಟಗೆಮಾಡಬಹುದು ಮಳಲಿನಲ್ಲಿ ತೈಲವನ್ನು ತೆಗೆಯಬಹುದು ಅರಣ್ಯದಲ್ಲಿರುವ ಸಿಂಹವನ್ನು ಕಟ್ಟಬಹುದು. ಹೋಗುವಂಥ ಹುಲಿಯನ್ನು ಕರೆಯಬಹುದು ಆದರೆ ಸ್ತ್ರೀಯರ ಮನಸ್ಸನ್ನು ಕಂಡುಹಿಡಿಯುವದು ಯಾರಿಂದಲೂ ಸಾಧ್ಯವಿಲ್ಲ ಈ ಬಗ್ಗೆ ಒಂದು ಇತಿಹಾಸವುಂಟು ಅದೇನೆಂದರೆ “ಒಂದು ಊರಲ್ಲಿ ಒಬ್ಬ ಬ್ಯಾಡನಿದ್ದನು; ಅವನ ಹೆಂಡತಿಯು ಬಹಳ ವ್ಯಭಿಚಾರಿಣಿಯಾಗಿದ್ದಳು ಒಂದು ದಿವಸ ಅವಳ ಗಂಡನು ಆಕೆಯನ್ನು ಹಿಡಿದು ತಕ್ಕ ಶಿಕ್ಷೆಯನ್ನು ಮಾಡಬೇಕೆಂದು ಆ ದಿವಸ ಊರಿಗೆ ಹೋಗುತ್ತೇನೆಂದು ತನ್ನ ಹೆಂಡತಿಗೆ ಸುಳ್ಳುಹೇಳಿ, ಸ್ವಲ್ಪದೂರ ಹೋಗಿ ಯಾರೂ ಕಾಣದ ಹಾಗೆ ಮರಳಿ ಬಂದು ಮನೆಯೊಳಗೆ ಅಡಗಿಕೊಂಡನು ಆಗ ಅವನ ಹೆಂಡತಿಯು ತನ್ನ ಪತಿಯು ಊರಿಗೆ ಹೋದನೆಂದು ಸಂತೋಷಭರಿತಳಾಗಿ ವ್ಯಬಿಚಾರ ಕೆಲಸಕ್ಕೆ ಹೊರಡುವಷ್ಟರಲ್ಲಿ ಅದನ್ನು ಗಂಡನು ನೋಡಿ ಅವಳನ್ನು ಹಿಡಿದು ಮನೆಯೊಳಗಿನ ಕಂಬಕ್ಕೆ ಹೆಡಮುರಿಗೆಯನ್ನು ಕಟ್ಟಿ, ತಾನು ಸುಖದಿಂದ ನಿದ್ರೆಯನ್ನು ಮಾಡತೊಡಗಿದನು. ಅನಂತರ ಅವಳ ಕುಂಟಣಿಯಾದ ನಾವಲಗಿತ್ತಿಯು ಬಂದು ಇದೇನೆಂದು ಕೇಳಲು, ಆಗ ವ್ಯಭಿಚಾರಿಣಿಯು ತನ್ನ ವೃತ್ತಾಂತವನ್ನೆಲ್ಲ ದುಃಖದಿಂದ ಹೇಳಿದಳು ಆಕೆಯು ಅವಳ ಹೆಡಮುರಿಗೆಯನ್ನು ಬಿಚ್ಚಿ ತಾನು ಕಟ್ಟಿಕೊಂಡು ಬ್ಯಾಡತಿಯನ್ನು ಜಾರತ್ವಕ್ಕೆ ಕಳುಹಿದಳು ಕುಂಟಣಿಯು ಸುಮ್ಮನೆ ನರಳುತ್ತಿರುವ ಶಬ್ದವನ್ನು ಕೇಳಿ ನಿದ್ರೆಗೈಯುತ್ತಿದ್ದ ಬ್ಯಾಡನು ಎಚ್ಚತ್ತು, ಇನ್ನೂ ನಿನಗೆ ನಾಚಿಕೆ ಬರುವದಿಲ್ಲವೆ? ಎಂದು ಕೋಪಿಸಿ ಅವಳ ಮೂಗನ್ನುಕೊಯ್ದನು. ಆಮೇಲೆ ಬ್ಯಾಡಗಿತ್ತಿಯು ತನ್ನ ವಿಟಗಾರನಿಗೆ ಭೋಗವನ್ನು ಕೊಟ್ಟು ಆನಂದದಿಂದ ಬಂದು ಈ ದೂತಿಯನ್ನು ಬಿಡಿಸಲಾಗಿ, ದೂತಿಯು ಬಹಳ ದುಃಖದಿಂದ ತನ್ನ ಕೊಯ್ದಿರುವ ಮೂಗನ್ನು ತೋರಿಸಿ ಮಿಡುಕುತ್ತಿರಲು, ಬ್ಯಾಡತಿಯು ಕಳವಳಗೊಂಡು ಅವಳ ಕಟ್ಟನ್ನು ಬಿಚ್ಚಿ ಮೊದಲಿನಂತೆ ತಾನು ಕಟ್ಟಿಕೊಂಡು ದೂತಿಯನ್ನು ಕಳುಹಿದಳು ಸ್ವಲ್ಪಹೊತ್ತಿನಮೇಲೆ ಕೆಳಗಿನಂತೆ ರೋದನವನ್ನು ಮಾಡತೊಡಗಿದಳು.

ಎಲೈ ಭೂದೇವಿಯೇ! ಆಕಾಶವೇ! ಚಂದ್ರ ಸೂರ್ಯ ಮೊದಲಾದ ಅಷ್ಟದಿಕ್ಪಾಲಕರುಗಳಿರಾ! ನನ್ನಮೇಲೆ ಸುಳ್ಳೇ ಅಪರಾಧವನ್ನು ಹೊರಿಸಿ ನನ್ನ ಗಂಡನು ನನ್ನ ಮೂಗನ್ನು ಕೊಯ್ದನು. ಆದರೆ ನನ್ನಲ್ಲಿ ಪತಿವ್ರತಾ ಧರ್ಮವೆ ನಿಜವಾಗಿದ್ದರೆ ಕೊಯ್ದಂಥ ಮೂಗು ಚಿಗಿಯಲಿ, ಇಲ್ಲದಿದ್ದರೆ ಹೋದ ಮೂಗು ಹೋಗಲಿ ಎಂದು ನುಡಿಯಲು, ಅಲ್ಲಿಯೇ ಮಲಗಿದ್ದ ಗಂಡನು ಕೇಳಿ ಎಚ್ಚೆತ್ತು ನೋಡಲು ಮೊದಲಿನಂತೆ ಮೂಗು ಇದ್ದುದನ್ನು ಕಂಡು, ಆಶ್ಚರ್ಯಭರಿತನಾಗಿ ಅವಳನ್ನು ಸಮ್ಮಾನಿಸಿ ನೀನು ಮಹಾಪತಿವ್ರತೆಯೆಂದು ಹೇಳಿ,ತನ್ನ ತಪ್ಪನ್ನು ಕ್ಷಮಿಸಬೇಕೆಂದು ಬಹುದೈನ್ಯದಿಂದ ಬೇಡಿಕೊಂಡು ಹೆಡಮುರಿಗೆಯನ್ನು ಬಿಚ್ಚಿ ಸಂತೈಸಿದನು.

ಇತ್ತ ನಾವಲಗಿತ್ತಿಯಾದ ಕುಂಟಣಿಯು ಗಂಡನು ಕ್ಷೌರದ ಕೆಲಸಕ್ಕೆ ಹೋಗುವ ನಿಮಿತ್ತವಾಗಿ ಹಡಪವನ್ನು ಕೊಡು ಎಂದು ಒಳಗಿದ್ದ ತನ್ನ ಹೆಂಡತಿಗೆ ಹೇಳಲು, ಅವಳು ಕದಕ್ಕೆ ಮರೆಯಾಗಿ ನಿಂತುಕೊಂಡು ಹಡಪದೊಳಗಿನ ಒಂದೊಂದು ಕತ್ತಿಯನ್ನು ತೆಗದುಕೊಡುತ್ತಿರಲು, ಅವನು ಕೋಪವನ್ನು ತಾಳಿ ಹಡಪವನ್ನು ಬೇಡಿದರೆ ಒಂದೊಂದು ಕತ್ತಿಯನ್ನು ತೆಗೆದುಕೊಡುತ್ತೀಯಾ ಎಂದು ಕತ್ತಿಯನ್ನು ತಿರುಗಿ ಒಳಗೆ ಬೀಸಾಡಿ ಒಗೆಯಲು ಅದೇ ನೆಪಮಾಡಿಕೊಂಡು ಅವಳು ನನ್ನ ಮೂಗು ಕತ್ತಿಬಡಿದು ಹೋಯಿತೆಂದು ಬಾಯಿ ಬಾಯಿ ಒಡಿದುಕೊಂಡು ದೊಡ್ಡ ಧ್ವನಿಯಿಂದ ಅಳಹತ್ತಿದಳು. ಆಕೆಯು ಅಳುವುದನ್ನು ಕೇಳಿ ನೆರೆಹೊರೆಯವರೆಲ್ಲರೂ ಬಂದು, ನಿರಪರಾಧಿಯು ಮೂಗನ್ನು ಕೊಯ್ಯಬೇಕೇ? ಎಂದು ಅವಳ ಪತಿಯನ್ನು ಬೈಯ್ಯಹತ್ತಿದರು ಆಮೇಲೆ ಈ ವಾರ್ತೆಯನ್ನು ಆಪಟ್ಟಣದ ರಾಜನು ಕೇಳಿ ತನ್ನ ಸೇವಕರನ್ನು ಕರೆದು ಕ್ಷೌರಿಕನನ್ನು ಹೆಡಮುರಿಗೆಯನ್ನು ಕಟ್ಟಿ ತನ್ನ ಬಳಿಗೆ ತರಬೇಕೆಂದು ಆಜ್ಞೆಮಾಡಲು, ಆ ಪ್ರಕಾರ ಅವರು ಆವನನ್ನು ಅರಸನ ಸನ್ನಿಧಿಗೆ ಒಪ್ಪಿಸಿದರು. ಆಗ ರಾಜನು ಇವಳ ಮೂಗನ್ನು ಕೊಯ್ದ ಕಾರಣವೇನೆಂದು ಕೇಳಿದನು ಆಗ ಹಡಪಿಗನು ಉತ್ತರವಿಲ್ಲದೆ ಸುಮ್ಮನಾಗಲು ಅರಸನು ಕೋಪಿಸಿ, ಹಡಪಿಗನನ್ನು ಶೂಲಕ್ಕೆ ಹಾಕಬೇಕೆಂದು ಅಪ್ಪಣೆಮಾಡಿದನು. ಈ ಅನ್ಯಾಯದ ತೀರ್ಪನ್ನು ನೋಡಿ ಬ್ಯಾಡನ ಮನೆಯ ಹತ್ತಿರವಿದ್ದ ದೇವಶರ್ಮನೆಂಬ ಒಬ್ಬ ಯತೀಶ್ವರನು, ಮೇಲಿನ ಇತಿಹಾಸವನ್ನೆಲ್ಲಾ ಅರಿತವನಾದುದರಿಂದ ಈ ಕೌತುಕವನ್ನೆಲ್ಲ ಅರಸನಮುಂದೆ ಹೇಳಬೇಕೆಂದು ಸಮೀಪಕ್ಕೆ ಬಂದು ಮಹಾರಾಜನೇ—ಅತ್ತಿಯ ಹೂವನ್ನಾದರೂ ನೋಡಬಹುದು, ಬಿಳಿಯ ಕಾಗೆಯನ್ನಾದರೂ ಕಾಣಬಹುದು; ನೀರೊಳಗೆ ಮೀನದಹೆಜ್ಜೆಯನ್ನಾದರೂ ನೋಡಬಹುದು, ಆದರೆ ಸ್ತ್ರೀಯರ ಹೃದಯವನ್ನು ಕಂಡುಹಿಡಿಯುವುದು ಅಸಾಧ್ಯವು, ಎಂದು ಹೇಳಿ ಆ ವ್ಯಭಿಚಾರಿಣಿಯರ ಸಮಸ್ತವೃತ್ತಾಂತವನ್ನೆಲ್ಲ ಅರಸನಿಗೆ ಹೇಳಲು, ರಾಜನು ಆಶ್ಚರ್ಯಪಟ್ಟು ಬ್ಯಾಡನ ಹೆಂಡತಿ ಮತ್ತು ಹಡಪಿಗನ ಹೆಂಡತಿ ಇವರಿಬ್ಬರನ್ನೂ ಹಿಡಿತರಿಸಿ, ಕಠಿನಶಿಕ್ಷೆಯನ್ನು ಮಾಡಿದನು ಈ ವ್ಯಭಿಚಾರಿ ಸ್ತ್ರೀಯರ ಇತಿಹಾಸವನ್ನು ಕೇಳಿ ಸ್ತ್ರೀಪುರುಷರೆಲ್ಲರೂ ಚಕಿತರಾಗದೆ ಇರಲಾರರು ಆದುದರಿಂದ ನಮ್ಮ ಭರತಖಂಡದ ಸ್ತ್ರೀಯರು ಇಂತಹ ಅತ್ಯಾಚಾರಕ್ಕೆ ಬೀಳದಂತೆ ಪರಮೇಶ್ವರನು ಇವರಿಗೆ ಸದ್ಬುದ್ಧಿಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಮದ್ರಂಭಾಪುರೀ ಜಗದ್ಗುರುಗಳ ಸಂಚಾರ

ಬಾರ್ಸಿ ಟವನ್ನಿನ ವೀರಶೈವರು ಶ್ರೀಜಗದ್ಗುರುಗಳವರನ್ನು ತಮ್ಮಲ್ಲಿಗೆ ದಯಮಾಡಿಸಿಕೊಂಡುಬಂದು ಅಭೂತಪೂರ್ವವಾಗಿ ತಿರ್ಯಗಾಂದೋಲಿಕೋತ್ಸವದಿಂದ ಸತ್ಕರಿಸಿದ ವಿಷಯವು ಸರ್ವತ್ರ ಪ್ರಸಿದ್ಧವೇ ಆಗಿದೆ ಇಲ್ಲಿಯ ಗುರುಭಕ್ತರು ತಮ್ಮ ತಮ್ಮ ಮನೆಗಳಿಗೆ ಮಹೋತ್ಸವಪೂರ್ವಕವಾಗಿ ದಯಮಾಡಿಸಿಕೊಂಡುಹೋಗಿ ಪಾದಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಧನ್ಯರಾದರು. ನಂದೀಮಠದ ಪಟ್ಟಾಭಿಷೇಕಕಾರ್ಯನಿಮಿತ್ತವಾಗಿ ಸೊಲ್ಲಾಪುರಕ್ಕೆ ದಯಮಾಡಿಸಿ ಪಟ್ಟಾಧಿಕಾರಕಾರ್ಯವನ್ನು ಸಾಂಗಗೊಳಿಸಿ ಅವರನ್ನು ಬಹೂಪದೇಶದಿಂದ ಕೃತಾರ್ಥರನ್ನಾಗಿ ಮಾಡಿದರು. ಬಳಿಕ ಪಂಢರಾಪುರದ ಭಕ್ತಮಂಡಲಿಯ ಪ್ರಾರ್ಥನೆಯಂತೆ ಅಲ್ಲಿಗೆ ಸಕಲ ಬಿರುದಾವಳಿಗಳ ಸಮೇತ ದಯಮಾಡಿಸಿದರು ಪಂಢರಾಪುರವು ಸುಪ್ರಸಿದ್ಧ ಕ್ಷೇತ್ರವೂ ಮಸ್ತಕದಲ್ಲಿ ಶಿವಲಿಂಗಾಂಕಿತನಾದ ವಿಠೋಬನ ಆವಾಸಸ್ಥಾನವೂ ಆಗಿರುವುದು. ಆಗಮನ ಸಮಯದಲ್ಲಿ ಪುರವು ತಳಿರುತೋರಣ ಚಪ್ಪರಗಳಿಂದ ಮನೋಹರವಾಗಿತ್ತು ನಿಲ್ದಾಣದಲ್ಲಿ ಪ್ರಮುಖರ ಪರಿಚಯವಾಗಿ ಶ್ರೀಜಗದ್ಗುರುಗಳವರು ತಿರ್ಯಗಾಂದೋಲಿಕೆಯನ್ನಾರೋಹಿಸಿದರು. ವಿಧವಿಧವಾದ ವಾದ್ಯಗಳು ಭೋರ್ಗರೆಯುತ್ತಿದ್ದವು. ಮಹಾರಾಷ್ಟ್ರದೇಶದ ಅನೇಕ ಭಾಗಗಳಿಂದ ಮಹಾಜನಗಳು ಆಗಮಿಸಿದ್ದುದರಿಂದ ಎತ್ತ ನೋಡಿದತ್ತ ಜನಸಮುದಾಯವು ದರ್ಶನೀಯವಾಗಿತ್ತು. ಉತ್ಸವವು ಸಕಲಬೀದಿಗಳಲ್ಲಿಯೂ ಜರುಗಿ ಮನ್ಮಥಸ್ವಾಮಿಯ ಮಠಕ್ಕೆ ಬಂದಿತು. ಶ್ರೀಗಳವರು ಆಂದೋಲಿಕೆಯಿಂದವತರಿಸಿ ಸುವರ್ಣರಜತಾತ್ಮಕ ಸಿಂಹಾಸನವನ್ನಾರೋಹಿಸಿದರು. ಸ್ವಾಗತಸಮಿತಿಯ ಪ್ರೆಸಿಡೆಂಟರು ವಿಜ್ಞಾಪನಾಪತ್ರಿಕೆಯನ್ನು ಓದಿ ರಜತಪಾತ್ರೆಯಲ್ಲಿಟ್ಟು ಸಮರ್ಪಿಸಿದರು. ಮಹಾಸ್ವಾಮಿಗಳವರು ವಿಜ್ಞಾಪನಾಪತ್ರಿಕೆಯ ವಿಷಯಗಳಿಗೆಲ್ಲ ಸಮರ್ಪಕವಾಗಿ ಉತ್ತರವನ್ನು ದಯಪಾಲಿಸಿದರು. ಪಂಢರಾಪುರದ ಕಾಣಿಕೆಯನ್ನು ಕೈಕೊಂಡು ಬಾರ್ಸಿಗೆ ದಯಮಾಡಿಸಿದರು. ಅಲ್ಲಿಂದ ಪುನಃ ಸೊಲ್ಲಾಪುರಕ್ಕೆ ದಯಮಾಡಿಸಿರುವರು. ಈ ದೇಶದಲ್ಲಿ ಇನ್ನೂ ೧ ವಾರವಿದ್ದು ಆಮೇಲೆ ಬಾಳೇಹೊನ್ನೂರು ಸಂಸ್ಥಾನ ಮಠಕ್ಕೆ ದಯಮಾಡಿಸುವರು.

ಓರ್ವ ಗುರುಭಕ್ತ.

ವಿಶ್ವಶಾಂತಿಸಾಧಕ ತಪೋನುಷ್ಠಾನ

ಅಧರ್ಮವು ಹೆಚ್ಚಾದರೆ ಪ್ರಜಾಪೀಡಕರಗಳಾದ ಅನಂತ ಈತಿಬಾಧೆಗಳು ಪ್ರಪಂಚದಲ್ಲಿ ಹರಡಿ ಸಕಲರೂ ಅನೇಕ ಬಗೆಯ ಸಂಕಟಗಳಿಗೊಳಗಾಗಬೇಕಾಗುತ್ತದೆ. ಜಗತ್ತಿನಲ್ಲಿ ಅನೇಕ ಬಗೆಯ ಕಷ್ಟಗಳು ಕಂಡುಬರುತ್ತಿದ್ದರೂ, ಸದ್ಯಃ ಪ್ರಚಲಿತವಾದ ಯುದ್ಧದ ಪ್ರಭಾವದಿಂದ ಪ್ರಜಾಪೀಡೆಯು ಮಿತಿಮೀರಿ ಕಲಿಪುರುಷನ ಲೀಲಾನಾಟಕವು ಕರಾಳರೂಪವನ್ನು ತಾಳಿ ಪ್ರಳಯವನ್ನೇ ಸೂಚಿಸುವದಾಗಿದೆ. ಶಸ್ತ್ರಸಜ್ಜಿತವಾದ ಬಾಹ್ಯಬಲದೊಡನೆ ಶಾಸ್ತ್ರವಿಹಿತವಾದ ಪರಮಾತ್ಮನ ಆರಾಧನೆಯು ಅತ್ಯವಶ್ಯಕವಾಗಿದೆ. ಜಗತ್ತಿಗೆ ಶಾಂತಿಯನ್ನುಂಟುಮಾಡುವ ಹೇತುವಿನಿಂದ ಬೆಂಗಳೂರು ಶ್ರೀ ಮಹಂತಿನ ಮಠಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಭೀಷ್ಮಬ್ರಹ್ಮಚಾರಿ, ತಪೋನಿಧಿ ಶ್ರೀ ಗಂಗಾಧರಶಿವಾಚಾರ್ಯಸ್ವಾಮಿಗಳವರನ್ನು, ಅನೇಕ ಜನರು ಪ್ರಾರ್ಥಿಸಿಕೊಂಡದ್ದರಮೇರೆಗೆ, ಬ್ರಿಟಿಷ್ ಸಾರ್ವಭೌಮರಿಗೂ ಅವರ ಮಿತ್ರಮಂಡಲಿಯವರಿಗೂ ಶೀಘ್ರದಲ್ಲಿಯೇ ವಿಜಯದೊರೆತು ನಮ್ಮ ಭರತಖಂಡದಲ್ಲಿ ಶಾಂತಿ ನೆಲೆಗೊಂಡು ನಮ್ಮ ಶ್ರೀಮನ್ಮಹಾಪ್ರಭುಗಳ ರಾಮರಾಜ್ಯವು ಚಿರಸುಖಭಾಜನವಾಗಲೆಂಬ ಸತ್ಸಂಕಲ್ಪದಿಂದ ತಪೋನುಷ್ಠಾನವನ್ನು ಆಚರಿಸಲು ಒಪ್ಪಿ ಚಿಕ್ಕಪೇಟೆಯಲ್ಲಿರುವ ತಮ್ಮ ಶ್ರೀ ಮಹಾಂತಿನಮಠದಲ್ಲಿ ಚಿತ್ರಭಾನುಸಂವತ್ಸರ ಚೈತ್ರ ಶುದ್ಧ ೩. ತಾ॥ 19-3-42 ನೇ ಗುರುವಾರದಿಂದ ತಪೋನುಷ್ಠಾನವನ್ನಾರಂಭಿಸಿರುವರು. ಪ್ರತಿದಿನವೂ ಪ್ರಾತಃಕಾಲ 6ರಿಂದ 12ಘಂಟೆಯವರೆಗೆ ಶ್ರೀವಿರೂಪಾಕ್ಷೇಶ್ವರಸ್ವಾಮಿಗೂ, ಶ್ರೀ ರೇಣುಕ ಭಗವತ್ಪಾದಾಚಾರ್ಯರಿಗೂ ಏಕಾದಶವಾರ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಶ್ರೀ ಪಾರ್ವತಾದೇವಿ ಅಮ್ಮನವರಿಗೆ ಸಹಸ್ರ ಕುಂಕುಮಾರ್ಚನೆಯು ವೈದಿಕಮಂಡಲಿಯಿಂದ ನವಗ್ರಹ ಹೋಮ ಪಂಚಬ್ರಹ್ಮಹೋಮ ರುದ್ರಹೋಮಗಳು ನಡೆದು, ಮಹಾಮಂಗಳಾರತಿ, ರಾಜಾಶೀರ್ವಾದ ಜರುಗುತ್ತಲಿವೆ ವಿಶ್ವಶಾಂತಿರೂಪವಾದ ತಪೋನುಷ್ಠಾನಪರಿಸಮಾಪ್ತಿಯ ಮಂಗಲಮಹೋತ್ಸವವು ವೈಭವದೊಡನೆ ಜರುಗಲೋಸುಗ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ನಿವೃತ್ತ ಪ್ರಧಾನ ನ್ಯಾಯಾಧೀಶ ಓ. ಮಹಾದೇವಯ್ಯನವರು ಅಧ್ಯಕ್ಷರು, ನ್ಯಾಯವಿಧಾಯಕ ಸಭಾಧ್ಯಕ್ಷರಾದ ಡಿ. ಹೆಚ್. ಚಂದ್ರಶೇಖರಯ್ಯನವರು ಉಪಾಧ್ಯಕ್ಷರು, ಪೇಟದ ಶೆಟ್ಟರು ಯಜಮಾನರು ಇನ್ನಿತರ ದೊಡ್ಡ ಮನುಷ್ಯರನ್ನೊಳಗೊಂಡ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿದೆ. ಮುಂದೆ ನಡೆಯಲಿರುವ ವಿಶೇಷವಿಚಾರಗಳು ಪ್ರಸಿದ್ಧಪತ್ರಿಕೆಗಳಮೂಲಕವಾಗಿ ಪ್ರಕಟವಾಗುವುವು. ಸಕಲಪೀಡಾನಿವೃತ್ತಿದ್ವಾರಾ ಲೋಕಶಾಂತಿ ಹೇತುಕವಾದ ಆಂಗ್ಲಚಕ್ರವರ್ತಿಗಳ ಮತ್ತು ಶ್ರೀಮನ್ ಮೈಸೂರು ಮಹಾಪ್ರಭುಗಳವರ ವಿಜಯಾರ್ಥವಾಗಿ ನಡೆಯುತ್ತಲಿರುವ ಈ ಮಹಾಕಾರ್ಯಕ್ಕೆ ಸರ್ವರೂ ದಯಮಾಡಿಸುವುದಲ್ಲದೆ ತಮ್ಮ ಮನೆಗಳಲ್ಲಿಯೂ, ಮಠ, ದೇವಾಲಯಗಳಲ್ಲಿಯೂ, ವಿಶೇಷ ಪೂಜಾನ್ನದಾನಾದಿಗಳನ್ನು ನೆರವೇರಿಸಿ ಶಾಂತಿಗಾಗಿ ಶ್ರೀ ಪರಮಾತ್ಮನನ್ನು ಪ್ರಾರ್ಥಿಸಬೇಕೆಂದು ಕೋರುತ್ತೇವೆ.

ಯಜಮಾನ ಕೆಂಚಪ್ಪ ಮತ್ತು ಯನ್. ರುದ್ರಯ್ಯ,
ಕಾರ್ಯದರ್ಶಿಗಳು.

ಗೋಮಹಿಮೆ

(೨ನೇ ಭಾಗ)

(ಕನ್ನಡ ಪಂಡಿತ, ಆಸ್ಥಾನವಿದ್ವಾನ್ ಅನವಟ್ಟಿ ರಾಮರಾಯರವರಿಂದ.)

ಧನಿಕ ಭರಣಿಪ ಗೋವು ಮೇಷಾ !
ವಿನುತ ವೈದ್ಯನು ಸುಗುಣವಿಪ್ರನು !
ಮೆನಿಪರಿವರಿಂ ಜಗವು ನಿಂತಿಹುದೆಂದು ಶಾಸ್ತ್ರವಿದು ॥

ಅನುಪಮಮುಕ್ತಿಯನೈದುವವಂ |
ಬಿನದದಿಂದವರಿಲ್ಲದೆಪಡದೆ |
ಪಶುಮತದೆ ಪಾಶವಳು ಗೈಯದುದೆಂದು ಶಾಸ್ತ್ರವಿದೆ||೧||

ಸಾಧುವೆನಿಸುತೆ ಭೂಸುರೆಯಂ |
ಮೋದದಿಂದಂ ಕುಡುವ ಗೋವನು |
ಸಾದರದೆ ವಸ್ತ್ರಾದಿಭೂಷಣದಿಂದಲಂಕರಿಸಿ ||
ವೇದವಿದನಾಗಿರುವ ವಿಪ್ರನಿ |
ಗಾದರದೆ ದಾನವನು ಗೈದೊಡೆ |
ವೇದವಿನೀತನು ಪರಮಪದವಂ ಜವದೆ ಸೇರುವನು ||೨||

ಜೀವಹತ್ಯವ ಗೈಯದಿರ್ಪುದೆ |
ಭಾವಿಸುವುದು ಪ್ರಥಮಪುಷ್ಪವು |
ಕಾವುತಿರ್ದೊಡೆ ಕರಣಜಾಲವ ಪುಷ್ಪವೆನಿಸಿಹುದು ||
ಜೀವಿಯೊಳು ದಯೆದೋರೆ ಪುಷ್ಪವು |
ತೀವಿದಾಕ್ಷಮೆಯೊಳಿರೆ ಪುಷ್ಪವು |
ಭಾವಶಾಂತಿಯು ತಪವು ಸತ್ಯವು ವಿಷ್ಣುಪ್ರೀತಿಯವು ||೩||

ಧರೆಯೊಳೆಸೆವಾ ಸಕಲಜೀವಿಯು |
ನಿರುತಪರಮನೆಂದೆನುತೆ ಭಾವಿಸು |
ಇರುವದೇವಂ ಸರ್ವರೊಳುನೆಲಸಿಹನು ಸಂತತವು ||
ಹರಿಯು ಗುಣ ಪರಿಪೂರ್ಣನಾಗಿರು |
ತಿರುವ ಭಾವವನರಿತ ಮನುಜಂ |
ಪರಮಪದವ ಪಡೆವನೆಂಬುದು ದೇವನಾಣತಿಯು ||೪||

ಕೋಟಿಸಂಸ್ತುತಿಗೊಂದು ಪುಷ್ಪವು |
ಕೋಟಿಪುಷ್ಪಕದೊಂದು ಜಪ ತಾಂ |
ಕೋಟಿಜಪಕದು ಸಮವು ಧ್ಯಾನವು ನೀತಿವಂತರಿಗೆ ||
ಕೋಟಿಧ್ಯಾನಕ್ಷಮೆಗೆ ಶಾಂತಿಗೆ |
ಸಾಟಿಯಾಗಿರುತಿರಲು ಜೀವರ |
ಕೋಟಿಗೆ ಕ್ಷಮೆಯನ್ನು ತೋರ್ಪುದು ನರನ ಕರ್ತವ್ಯ ||೫||

ದೇವಪಿತೃಋಷಿಯತಿಥಿನಿಚಯವು |
ಕಾವುದೆನ್ನನು ಪಡೆದು ಜೀವಿಗ |
ಳಾವಗಂ ಪ್ರಾರ್ಥಿಪರು ಸತ್ಕುಟುಂಬಿಯಹ ಗೃಹಸ್ಥನ ||
ಆವಗಂ ಪ್ರಾಣಿಗಳನೆಳಸದ |
ಭಾವವಾನುತೆ ಸಾಧುವೃತ್ತಿಯ |
ನೋವಿ ಪಿತೃಋಣಗಳನು ತೀರಿಸೆ ಧನ್ಯನಾಗುವನು ||೬||

ಮದಿಸಿ ಮದ್ಯವ ಪೀರಿ ಮಾಂಸವ |
ಪದೆದು ಭುಂಜಿಸಿ ಹಳಸಿದನ್ನವ |
ಮುದದೆ ಭಕ್ಷಿಸಿ ಜೀವಹತ್ಯವ ಗೈಯುತನುದಿನದೆ ||
ಹೃದಯಸಾಕ್ಷಿಗಸತ್ಯವೊರೆಯುತೆ |
ಸದಯದಿಂದಾಸಾಧುವೃತ್ತಿಗೆ |
ವಿಧವಿಧದ ಕಷ್ಟಗಳ ಕಲ್ಪಿಸೆ ಮೋಕ್ಷವಾನುವನೆ ? ||೭||

ಪರಮಧರ್ಮಸುಕಾಮಗಳೊಳಂ |
ನಿರತನಾಗುತಭೀಷ್ಟದಾನವ |
ವಿರಚಿಸುತ್ತಲಿ ಭಕ್ತಿಯಿಂದಾನಗ್ನಿಹೋತ್ರವನು ||
ನಿರುತಸಾಯಂಪ್ರಾತದೊಳಗಾ |
ಚರಿಸುತಲಿ ಗೋವ್ನಳಲಿ ನೆಲವಾಂ |
ತಿರುತೆ ಸತಿಸುತರನ್ನು ಪೊರೆವವ ಧನ್ಯಮಾನವನು ||೮||

ಪರಮಶ್ರೇಷ್ಠವದೆಂದು ಗಣಿಸಿಹ |
ಸುರಭಿಕುಲವದು ಹವ್ಯಕವ್ಯಕೆ |
ಚಿರತತಿಥಿಸಂತರ್ಪಣೆಗಳಿಗೆ ಶಾಂತಿಪೌಷ್ಟಿಕಕೆ ||
ನಿರುತ ಶಿಶುಸಂರಕ್ಷಣೆಗಿದುವೆ |
ಪರಸಜೀವಿಯು ಪೂಜ್ಯವಾಗಿರೆ |
ಧರೆಯೊಳಗೆ ಪಾವನಮದೆನಿಸಿರೆ ನಿತ್ಯಶೋಭಿಪುದು ||೯||

ಪರಮಪುಣ್ಯಕ್ಷೇತ್ರಗಯೆಯೊಳು |
ಮಿರುಪ ಗೋವಂ ಪಿಂಡದಾನವ |
ವಿರಚಿಪಾತನು ಪುತ್ರಭಾಗ್ಯವನಾಂಪನೆನ್ನುತಲಿ ||
ಒರೆವುದಂ ಆಲಿಸಿದಪಾಂಗಿಂ |
ಧರಣಿಪಾಲವಿಶಾಲರಾಜಂ |
ಸಿರಿದೊಲವಿನಿಂಗೈದು ಸುತರಂ ಪಡೆದನಂತ್ಯದೊಳು||೧೦||

ಸಿದ್ಧಾಂತಶಿಖಾಮಣಿ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ

ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತವಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಹೆಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿ ನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M. F. Printinge ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು. ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಸಾರಿಸಾರಿ ಹೇಳಬಹುದಾಗಿದೆ. ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು. ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣನಾಥನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! **ಬೆಲೆ ೨ ರೂಪಾಯಿ.**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಢಂಗುರಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ದೇವಿಕೇಶವನ್ನಿಗೆ ಅರ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ಪಠಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ಕೊಂಡುಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಸಿಂಹಾಸನದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೨—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯಪಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇವನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾದಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ.ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[42] ಪೋ ಬಾ ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೇಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೇಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೇಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೇಯ ಆವೃತ್ತಿ) ..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೇಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೇಯ ಆವೃತ್ತಿ) ..	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೇಯ ಆವೃತ್ತಿ) ...	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೇಯ ಆವೃತ್ತಿ) ..	೨ ಆಣೆ
ಪಂಚಾಚಾರ್ಯಪ್ರಭಾಕರ ...	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ.
ವೀರಶೈವಾಚಾರವಿಧಿ (೩ ನೇಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೇಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಫುಟೀಕರಣ (೩ನೇಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ..	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೇಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ...	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೇಯ ಆವೃತ್ತಿ) .. .	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ ...	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧ ರೂ
ಸಚಿತ್ರ ರೇಣುಕವಿಜಯ (೨ನೇಯ ಆವೃತ್ತಿ)	೧ ರೂ
ವೀರಶೈವರತ್ನ (೫ನೇಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) ..	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ.
A brief life sketch of Pandit Sri Kashinatha Shastriji (*English*)	4 As.
The Philosophical Aspect of Virasaivism (*English*) ...	8 As.
Speeches by Pandit Shri Kashinatha Shastriji *English*)	12 As.
लिंगधारणचंद्रिका (संस्कृत)	१ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत) .	१ रु.
पुरुषसूक्तम् (वीरशैवप्राचीनभाष्यान्वितम्)	४ आ.
नंदिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರು ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೬ನೇ ಏಪ್ರಿಲ್ ೧೯೪೨ [ಸಂಚಿಕೆ ೪೯

ಶ್ರೀಕಾಶೀನಾಥಗ್ರಂಥಮಾಲೆಯ—೪೦-೪೧-೪೨-೪೩ನೆಯ ಪುಷ್ಪ

ಶಿವಾಗಮಸಂಗ್ರಹಃ

ಈ ಗ್ರಂಥವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ **ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮ**ಗಳೆಂಬ ನಾಲ್ಕು ಶಿವಾಗಮಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ, ಇದಕ್ಕೆ **"ಶಿವಾಗಮಸಂಗ್ರಹ"** ಎಂಬ ಹೆಸರನ್ನಿಡಲಾಗಿದೆ. ಈ ನಾಲ್ಕು ಶಿವಾಗಮಗಳಲ್ಲಿ ವೀರಶೈವಮತದ ಪ್ರಾಚೀನ ಧರ್ಮಗಳು ಬಹು ಹೃದಯಂಗಮವಾಗಿ ವಿವರಿಸಲ್ಪಟ್ಟಿರುವವು ವೀರಶೈವಮತದ ಸರ್ವಸ್ವವೇ ಇವುಗಳಲ್ಲಿ ಅಡಗಿರುವದು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ವಿಶೇಷ ಪ್ರಯತ್ನದಿಂದ ಇವುಗಳನ್ನು ಸಂಗ್ರಹಿಸಿ ಚನ್ನಾಗಿ ಪರಿಶೋಧಿಸಿ ಅತ್ಯಂತ ಸುಂದರವಾಗಿ ಮುದ್ರಿಸಿ ಪ್ರಕಟಿಸಿದ್ದಾರೆ ಇಂತಹ ಸರ್ವೋತ್ತಮ ಶಿವಾಗಮಗಳು ಈಗ ಪ್ರಕಾಶಕ್ಕೆ ಬಂದಿರುವುದು ಈ ಮತದ ಪುಣ್ಯವಿಶೇಷವೆಂದೇ ಹೇಳಬೇಕಾಗಿದೆ ಈ ಶಿವಾಗಮಗಳು ಸದ್ಯಃ ಟೀಕೆಯಿಲ್ಲದೆ ಮೂಲ ಮಾತ್ರ ಮುದ್ರಿತವಾಗಿವೆ. ಪ್ರತಿಯೊಬ್ಬರೂ ಈ ಪೂಜ್ಯಗ್ರಂಥಗಳನ್ನು ತರಿಸಿಕೊಂಡು ಇವುಗಳಲ್ಲುಕ್ತವಾಗಿರುವ ಪ್ರಾಚೀನ ಪವಿತ್ರಧರ್ಮಗಳನ್ನು ತಿಳಿದು ಅದರಂತೆ ಆಚರಿಸಿ ಪರಶಿವನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ. ಮನೋಹರವಾದ ಮುದ್ರಣ ! ಸುಂದರವಾದ ಬೈಂಡು ! **ಬೆಲೆ ೨ ರೂಪಾಯಿ**

ಪಂಚಾಚಾರಪ್ರಕಾಶಿಕಾ (೪೪ನೆಯ ಪುಷ್ಪ)

ಇದರಲ್ಲಿ ವೀರಶೈವರು ಮುಖ್ಯವಾಗಿ ಆಚರಿಸತಕ್ಕ ೬೪ ಶೀಲಗಳು ಹೃದಯಂಗಮವಾಗಿ ವರ್ಣಿತವಾಗಿವೆ. ಚಂದ್ರಜ್ಞಾನಾಗಮದ ೯ನೆಯ ಪಟಲದಲ್ಲಿ ಈ ಶೀಲಗಳು ಉಕ್ತವಾಗಿರುವುದರಿಂದ ಇದನ್ನು ಪ್ರತ್ಯೇಕವಾಗಿ ಕನ್ನಡ ಟೀಕೆಯೊಡನೆ ಮುದ್ರಿಸಿದ್ದಾಗಿದೆ. **ಬೆಲೆ ೨ ಆಣೆ**

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ನಾನಾವಿಧ ಬಣ್ಣಗಳಿಂದ ಮನೋಹರವಾಗಿ ಮುದ್ರಿತವಾಗಿರುವ

ನೂತನ ಫೋಟೋಗಳು

ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ **(ಸೈಜು ೧೪×೧೦) ಬೆಲೆ ೪ ಆಣೆ**
(ಅತ್ಯಂತ ಸುಂದರವಾದುದು.)

ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ **(ಸೈಜು ೬×೧೦) ,, ೨ ಆಣೆ**

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

॥ ಶ್ರೀ ಜಗದ್ಗುರು ರೇಣುಕಾಚಾರ್ಯಾಯನಮಃ ॥

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವ

(ಬೆಂಗಳೂರು)

ಶ್ರೀಪರಮಾತ್ಮನ ಅನೇಕ ಲೀಲಾನಾಟಕಗಳಲ್ಲಿ ಮನುಷ್ಯಪ್ರಪಂಚವೆಂಬುದು ರಸಭರಿತವಾದ ಒಂದು ನಾಟಕವಾಗಿದೆ. ಈ ನಾಟಕವು ಪರಮಾತ್ಮನಿಗೆ ಬಹು ಪ್ರೇಮಾಸ್ಪದವಾಗಿದೆ ಇದರ ರಚನೆಯು ಬಹಳ ವಿಲಕ್ಷಣವಾಗಿದೆ. ಈ ನಾಟಕದ ಸೌಂದರ್ಯಾಭಿವೃದ್ಧಿಗಾಗಿ ಪರಮಾತ್ಮನು ಅನಂತ ಸೌಕರ್ಯಗಳನ್ನು ನಿರ್ಮಿಸಿರುವನು. ವೇದಾಗಮಾದಿ ಸಕಲಶಾಸ್ತ್ರಗಳೂ ಮನುಷ್ಯನಾಟಕದ ಅಭಿನಯಸಾಹಿತ್ಯ ಭಂಡಾರವಾಗಿವೆ ಈ ನಾಟಕದಲ್ಲಿ ಅನೇಕ ಭೂಮಿಕೆಗಳಿರುವವು ಭೂಮಿಕಾನುಗುಣವಾಗಿ ಎಲ್ಲ ವಾಙ್ಮಯವು ವಿಂಗಡಿಸಿ ಹಂಚಲ್ಪಟ್ಟಿದೆ. ಸ್ತ್ರೀ, ಪುರುಷ ಎಂಬೆರಡು ಭಾಗವುಳ್ಳ ಈ ನಾಟಕವು, ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿಗಳೆಂಬ ವಿಶೇಷ ಭಾಗಗಳಿಂದ ಕೂಡಿದುದಾಗಿದೆ. ನಾಟಕದ ಯಜಮಾನನೂ ಕರ್ತೃವೂ ಆದ ಪರಮಾತ್ಮನು ನಾಟಕಾಭಿನಯ ಚಾತುರ್ಯಶಿಕ್ಷಣಕ್ಕಾಗಿ ಮತವೆಂಬ ಸುಂದರಮಂದಿರವನ್ನು ನಿರ್ಮಿಸಿರುವನು ಆ ಅಭಿನಯಶಿಕ್ಷಣದ ಭಾರವೆಲ್ಲವೂ ಮಹಾಚಾರ್ಯರಮೇಲೆಯೇ ಇರುತ್ತದೆ ಸರ್ವಜ್ಞರಾದ ಮಹಾಚಾರ್ಯರು ತಮ್ಮ ಮಂದಿರದಲ್ಲಿ ಕೊಡುವ ವೇದಾಗಮಾದಿ ಶಿಕ್ಷಣಾಭಿನಯದಲ್ಲಿ ಮನುಷ್ಯ ಭೂಮಿಕೆಗಳು ನೈಪುಣ್ಯವನ್ನು ಸಂಗ್ರಹಿಸಿದರೆ ಜಗದ್ರಂಗದಲ್ಲಿ ಬಹುಮೂಲ್ಯವು ದೊರೆಯುವುದಲ್ಲದೆ ನಾಟಕಾಧಿಪತಿಯಾದ ಶ್ರೀಪರಮಾತ್ಮನ ಅನುಗ್ರಹವೂ ಪ್ರಾಪ್ತವಾಗುತ್ತದೆ. ಭೂಮಿಕಾನುಗುಣವಾಗಿ ಆಚಾರ್ಯನು ಕೊಡುವ ಶಿಕ್ಷಣವನ್ನು ಮನುಷ್ಯನು ಚೆನ್ನಾಗಿಗ್ರಹಿಸಿ ಮನನಮಾಡಿಕೊಂಡರೆ ನಾಟಕದ ದರ್ಶನೀಯತೆಯು ಬೆಳೆಯುವುದಲ್ಲದೆ ಸ್ವಯಂಪ್ರಯೋಜನವೂ ಉಂಟಾಗುತ್ತದೆ ಶಿಕ್ಷಣವು ಸರಿಯಾಗಿ ಇರದಿದ್ದರೆ ಅಭಿನಯವು ವೃಥಗೊಳ್ಳುವುದಿಲ್ಲ. ಹೀಗಾದರೆ ನಾಟಕದ ಬಹಿರಂತಶ್ಶೋಭೆಯು ಕೆಟ್ಟು ಲೋಕನಿಂದೆ ಪರಮಾತ್ಮ ಕೋಪಗಳಿಗೆ ಗುರಿಯಾಗಬೇಕಾಗುತ್ತದೆ. ಭೂಲೋಕದಲ್ಲಿ ಮನುಷ್ಯನಾಟಕದಲ್ಲಿ ಪಾತ್ರವಹಿಸಿದ ಪ್ರತ್ಯೇಕಪ್ರಾಣಿಯು ಶ್ರೀಪರಮಾತ್ಮನ ಅನುಗ್ರಹಧನಾಪೇಕ್ಷೆಯುಳ್ಳುದೇ ಆಗಿದೆ ಅದು ದೊರೆಯಬೇಕಾದರೆ ಮನುಷ್ಯಪ್ರಾಣಿಯ ಸರ್ವವ್ಯವಹಾರಗಳು ಶಿವಪ್ರೀತಿಸಾಧನಗಳಾಗಿರಬೇಕು. ತ್ರಿಕರಣಗಳ ಅಭಿನಯವು ಯಾವಾಗಲೂ ಶಾಸ್ತ್ರಸಮ್ಮತವಾಗಿಯೇ ಇರಬೇಕು. ಒಳಗೊಂದು ಹೊರಗೊಂದು ವರ್ತನವಿದ್ದರೆ ಈ ವ್ಯತ್ಯಾಸವನ್ನು ಸರ್ವಾಂತರ್ಯಾಮಿ ಸರ್ವಜ್ಞನಾದ ಪರಮಾತ್ಮನು ನೋಡದಿರನು. ಆಚಾರ್ಯಶಿಕ್ಷಣವಾದರೂ ತ್ರಿಕರಣಗಳಿಗೆ ಸರಿಯಾಗಿಯೇ ಇರುತ್ತದೆ. ಅಭಿನಯ, ಆಚಾರ್ಯ, ಶಿವ ಈ ಮೂರನ್ನೂ ಅನುಸರಿಸುವುದು ತ್ರಿಕರಣಶುದ್ಧಿಯುಳ್ಳ ಮನುಷ್ಯನಿಗೆ ಬೇಕಾಗಿದೆ. ಶಿವ-ವಿದ್ಯಾ-ಗುರು ಈ ಮೂರುವಸ್ತುಗಳು ಒಂದೇ ಬಗೆಯ

ವಾಗಿದೆ “ಯಥಾಶಿವಸ್ತಥಾವಿದ್ಯಾ, ಯಥಾವಿದ್ಯಾ ತಥಾಗುರುಃ ಎಂಬ ಆಗಮಪ್ರಮಾಣವು ಶಿವ ವಿದ್ಯಾ ಗುರುಗಳ ಮಹತ್ವದ ಅಭೇದವನ್ನೇ ಪ್ರತಿಪಾದಿಸುತ್ತಿದೆ ವಿಚಾರಮಾಡಿನೋಡಿದರೆ ಆಚಾರ್ಯನ ಕಾರ್ಯಕ್ಷೇತ್ರವು ಎಷ್ಟು ವಿಶಾಲವಾಗಿದೆ? ಮನುಷ್ಯನ ಕರ್ಮಭೂಮಿಯು ಎಷ್ಟು ವಿಸ್ತೃತಗಂಭೀರವಾಗಿದೆ? ಇವೆರಡೂ ನಮ್ಮ ನಮ್ಮ ಕಾರ್ಯಭಾಗವನ್ನು ಲಕ್ಷೀಕರಿಸಿ ವ್ಯವಸಾಯ ಮಾಡುವರಾದರೆ ಫಲಪ್ರಾಪ್ತಿಯು ಸಾವಕಾಶವಾಗುವುದಿಲ್ಲ ಜೀವನರಣದಿಂದ ಮುಮುಕ್ಷುವಾದ ಮನುಷ್ಯನು ಆ ಕಾರ್ಯಾಧೀನನಾಗಿದ್ದು ಸಕಲವಿಧಸೇವೆಯನ್ನು ಸಲ್ಲಿಸಿ [illegible] ನವನ್ನು ಸಂಗ್ರಹಿಸಿ ವರ್ತಿಸಿ ಧನ್ಯನಾಗುವನು ಗುರುಹೃದಯಂಗತ ವಿದ್ಯಾಸಂಪ್ರಾಪ್ತಕ್ಕೆ ಸೇವೆಯೇ ಪ್ರಧಾನ ಸಾಧನವಾಗಿದೆ ಸೇವಾರಹಿತವಾದ ವಿದ್ಯಾರ್ಜನೆಯು ಬುಡವಿಲ್ಲದ ಮರದಂತೆ ಅಸ್ಥಿರವಾಗುವದರಿಂದ ಈ ಕಾಲದಲ್ಲಿ ಮಹಾಚಾರ್ಯರನ್ನು ಸೇವಿಸುವುದೇ ನಮ್ಮ ಮುಮುಕ್ಷುಗಳ ಪ್ರಥಮ ಕರ್ತವ್ಯವೇ ಆಗಿದೆ ವೀರಶೈವ ಮಹಾಮತಸ್ಥಾಪಕರಾದ ಶ್ರೀಜಗದ್ಗುರು ಮೂಲಪಂಚಾಚಾರ್ಯರನ್ನು ಪ್ರತಿಯೊಬ್ಬ ವೀರಶೈವನೂ ಸೇವಿಸಬೇಕು ಆ ಸೇವೆಯು ವಿವಿಧವಾಗಿದ್ದರೂ ಅವರ ಅವತಾರದ ಶುಭದಿವಸಗಳನ್ನು ದೊಡ್ಡಹಬ್ಬಗಳಂತೆ ಆಚರಿಸುವುದೂ ಒಂದು ಅವಶ್ಯಸೇವೆಯಾಗಿದೆ ಈ ಹಬ್ಬಗಳಿಗಿಂತಲೂ ದೊಡ್ಡಹಬ್ಬಗಳು ವೀರಶೈವರಿಗಿಲ್ಲವು ಉಳಿದವು ಮಿಕ್ಕವುಗಳು ಸಾಧಾರಣ ಹಬ್ಬಗಳಾದರೆ ಶ್ರೀಜಗದಾಚಾರ್ಯರ ಜಯಂತೀ ಹಬ್ಬಗಳು ವಿಶೇಷರೂಪಗಳಾಗಿವೆ ಅನಾದಿಕಾಲದಿಂದಲೂ ನಡೆಯುತ್ತಾ ಬಂದ ಈ ಜಯಂತೀ ಮಹೋತ್ಸವವು ವಿದ್ವತ್ಪ್ರತ್ನ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಹೃದಯ ಪಾವಿತ್ರ್ಯದ ಸಹಿನೆಲೆಸಿನಂತಿರುವ “ಪಂಚಾಚಾರ್ಯಪ್ರಭಾ ಮುಖದ ಜಗತ್ತಿನಲ್ಲಿ ವಿದ್ಯುದ್ವೇಗ, ಮನೋವೇಗದಿಂದ ವ್ಯಾಪಿಸಿ ಜನತೆಯನ್ನು ನಿಜಗುರುಜ್ಞಾನ, ಸ್ವಸಿದ್ಧಾಂತಾಭಿಮಾನಿಗಳ ಮೂಲಕವಾಗಿ ಸಂತೋಷಗೊಳಿಸುತ್ತಿರುವುದು ವೀರಶೈವಸಿದ್ಧಾಂತದ ಅಭಿವೃದ್ಧಿಯ ಶುಭಶಕುನವೂ ವೀರಶೈವಮತೀಯರ ಸೌಭಾಗ್ಯಸೂರ್ಯೋದಯವೂ ಆಗಿರುವದರಲ್ಲಿ ಯಾವ ಸಂದೇಹವೂ ಇಲ್ಲ ಶ್ರೀಜಗದ್ಗುರು ಪಂಚಪೀಠಗಳಲ್ಲಿ ಈ ಜಯಂತೀಕಾರ್ಯವು ಜರುಗುವುದಲ್ಲದೆ ಭರತಖಂಡದ ನಗರಗಳಲ್ಲಿ ನಾನಾವಿಧವಾಗಿ ನಡೆಯುತ್ತಲಿದೆ ಬೆಂಗಳೂರು ನಗರದಲ್ಲಿಯೂ ಈ ಜಯಂತಿಯು ಬಹುದಿವಸಗಳಿಂದ ವೈಭವಪೂರ್ಣವಾಗಿ ನಡೆಯುತ್ತ ಬಂದಿರುವುದು ಸರ್ವತ್ರ ಸುಪ್ರಸಿದ್ಧವೇ ಆದ ಅದು ಪ್ರತಿವರ್ಷವೂ ಉತ್ತರೋತ್ತರ ಅಭಿವೃದ್ಧಿಯನ್ನೇ ಹೊಂದುತ್ತಿರುವುದು ಆಚಾರ್ಯಸೇವಾಧುರೀಣರಾದ ಬೆಂಗಳೂರು ವೀರಶೈವರ ಗುರುಭಕ್ತಿಯ ಪ್ರಭಾವವನ್ನಿದೆ [illegible] ಬೆಂಗಳೂರಿನಲ್ಲಿ ನಡೆಯುವ ಶ್ರೀಜಗದ್ಗುರು ರೇಣುಕಜಯಂತಿಯ ವೈಭವವು ಅಸಾಧಾರಣವಾದುದಾಗಿದೆ ಶ್ರೀ ಗಂಗಾಧರಾಚಾರ್ಯಶಿವಯೋಗೀಶ್ವರರ ಸಾನ್ನಿಧ್ಯದಿಂದ ಈ ಮಹೋತ್ಸವವು ಚಂದ್ರನನ್ನು ಕಂಡ ಸಮುದ್ರದಂತೆ ಅಭಿವೃದ್ಧಿಯನ್ನೈದುತ್ತಲಿದೆ ಸಕಲಮತೀಯರೂ ಈ ಸುವರ್ಣಸಂಧಿಯ ಲಾಭವನ್ನು ಮಾಡಿಕೊಳ್ಳುತ್ತಾರೆ ಈವರ್ಷದ ಜಯಂತಿಯು ತಾ|| 1 3 1942ರಿಂದ ತಾ|| 17 3 1942ರ ವರೆಗೆ ಅಂದರೆ ಫಾಲ್ಗುಣ ಶು|| ೧೫ ರವಿವಾರದಿಂದ ಚಿತ್ರಭಾನು ಸಂ|| ಚೈತ್ರಶುದ್ಧ ಪಾಡ್ಯದ (ಯುಗಾದಿಯ) ವರೆಗೆ ಶ್ರೀ ಮಹಾಂತಿನಮಠದಲ್ಲಿ ಬಹುವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ತಾ|| 1 3 1942ನೇ ಭಾನುವಾರ ಪ್ರಾತಃಕಾಲ 6 ಘಂಟೆಯಿಂದ 10 ಘಂಟೆಯವರೆಗೆ ಶ್ರೀ ಮಹಾಂತಿನಮಠದಲ್ಲಿರುವ ವೈದಿಕಪಾಠಶಾಲಾ ವಿದ್ಯಾರ್ಥಿಗಳಿಂದ ಶ್ರೀಜಗದ್ಗುರು ರೇಣುಕಮೂರ್ತಿಗೆ ಏಕಾದಶವಾರ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ, ಮಹಾಮಂಗಳಾರತಿ ರಾಜಾಶೀರ್ವಾದಗಳು ನಡೆದು 2 ಘಂಟೆಯವರೆಗೆ ಅನ್ನಸಂತರ್ಪಣೆಯಾಯಿತು ಸಾಯಂಕಾಲ 6½ ಘಂಟೆಯಿಂದ ಶ್ರೀಗಳವರ ಸನ್ನಿಧಿಯಲ್ಲಿ ಸಭೆಸೇರಿತು ಅಂದಿನ ಅಧ್ಯಕ್ಷಸ್ಥಾನವನ್ನು ನಿವೃತ್ತ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಶ್ರೀಮಾನ್ ಎಚ್ ಕೆ ವೀರಬಸವಯ್ಯನವರು ವಹಿಸಿದ್ದರು ಆದಿಯಲ್ಲಿ ವಿದ್ಯಾರ್ಥಿಗಳಿಂದ ವೇದಘೋಷವಾದಮೇಲೆ ಸೆಕ್ರೆಟರಿಯವರಾದ ಶ್ರೀ|| ಎನ್ ರುದ್ರಯ್ಯನವರು ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯಕೃಪಾಪೋಷಿತ ಶ್ರೀ ಬೋರ್ಡಿಂಗಿನವರ ವರದಿಯನ್ನೋದಿದರು ಆಮೇಲೆ ಶ್ರೀಗಳು “ಜೀವನಕರ್ತವ್ಯ’ ಎಂಬ ವಿಷಯದಲ್ಲಿ ಉಪನ್ಯಾಸವನ್ನು ಮಾಡಿದರು ಅಧ್ಯಕ್ಷರ ಭಾಷಣವಾದಮೇಲೆ ಮಹಾಮಂಗಳಾರತಿ ರಾಜಾಶೀರ್ವಾದ ಪುಷ್ಪಪ್ರಸಾದ ವಿನಿಯೋಗವಾಗಿ [illegible] ಸಭೆಯು ವಿಸರ್ಜನವಾಯಿತು [illegible] ಘಂಟೆ [illegible] ವನ್ನು ಭಕ್ತ [illegible] ದನೆ ಊರ [illegible] ರನವು [illegible] ಯನ್ನು ಹುಟ್ಟಿಸುತ್ತಿ [illegible] ನರ್ತನಾ [illegible] ಸ್ಥಳವು ನಗರದ ಮುಖ್ಯ [illegible] ಶ್ರೀವ [illegible] ಪಚಾರ [illegible] ನಡೆದು ಅಂದಿನ ಸಭೆಯ ಕ್ರಮವು ಮುಗಿಯಿತು ತಾ|| [illegible] 1942 ನೇ ಸೋಮವಾರ ಸಾಯಂಕಾಲ ಇನ್ಕಂಟ್ಯಾಕ್ಸ್ ಅಸಿಸ್ಟೆಂಟ್ ಕಮಿಷನರಾದ ಶ್ರೀ|| ಜಿ [illegible] ರುದ್ರಾರ್ಯರವರ ಅಧ್ಯಕ್ಷತೆಯಲ್ಲಿ ನಾರಾಯಣದಾಸರು ಭಕ್ತಮಾರ್ಕಂಡೇಯ ಎಂಬ ಭಕ್ತಿಭಾವಭರಿತವಾದ ಕಥೆಯನ್ನು ಅನುವಾದಿಸಿದರು ತಾ|| 3 3 1942ನೆಯ ಮಂಗಳವಾರ ಸಾಯಂಕಾಲ ಮೈಸೂರು [illegible] ಕಂಪನಿಯ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಶ್ರೀಮಾನ್ ಎಚ್ [illegible] ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್ ಜಿ ರೇಣುಕಾರಾಧ್ಯರವರು ‘ಜಗದೇಕವೀರ’ ಎಂಬ ಶಿವಕಥೆಯನ್ನು ರಮಣೀಯವಾಗಿ ಅನುವಾದಿಸಿದರು ತಾ|| 4 3 1942ನೇ ಸಾಯಂಕಾಲ ಶ್ರೀಗಳವರ ಸನ್ನಿಧಿಯಲ್ಲಿ ಕೀರ್ತನವಿಶಾರದ ಸಿ ಎಸ್ ಸುಬ್ಬರಾಯದಾಸರು ‘ಸಲ್ಲಕಂ[illegible]’ ಎಂಬ ಕಥೆಯನ್ನು ಅನುವಾದಿಸಿದರು ತಾ|| [illegible] 3 194[illegible]ನೆಯ ದಿನ ರಾತ್ರಿ ವಿದ್ಯಾನಿಧಿಯ ಶಿಕ್ಷಣಕಾರ್ಯಕ್ರಮವಿದ್ದುದರಿಂದ ವಿಶೇಷ ಕಾರ್ಯಕ್ರಮಗಳು ನಡೆಯದೆ ಶ್ರೀ ರೇಣುಕಮೂರ್ತಿಗೆ ಮಹಾಮಂಗಳಾರತಿಯು ನಡೆಯಿತು ತಾ|| 6 3 1942ನೆಯ ದಿನ ಶ್ರೀ ರೇಣುಕವಿಜಯ ಮಹಾಪುರಾಣಾಂತರ್ಗತವಾದ ‘ಗೋರಕ್ಷ [illegible]’ ಎಂಬ ಕಥಾಶ್ರವಣವು ನಡೆಯಿತು [illegible] ಸುಪ್ರಸಿದ್ಧ ಗಮಕಿಗಳಾದ ಕೆ [illegible] ಪ್ರವಚನವನ್ನೋದಿದರು [illegible] ದೊಡ್ಡಬಳ್ಳಾಪುರದ ಶ್ರೀ [illegible] ಪುರಾಣಕ್ಕೆ ವ್ಯಾಖ್ಯಾನವನ್ನು ಮಾಡಿದರು ತಾ|| 7 3 1942ನೆಯ ದಿನ [illegible] ನವರು [illegible] ಅರಮನೆ [illegible] ಸಂಗೀತ ಕಚೇರಿಯು ಬಹುಸ್ವಾರಸ್ಯಕರವಾಗಿ ನಡೆಯಿತು ತಾ|| 8 3 1942ನೆಯ ದಿನ ಶ್ರೀಮಾನ್ ಎಚ್ ಕೆ ವೀರಬಸವಯ್ಯನವರ ಅಧ್ಯಕ್ಷತೆಯಲ್ಲಿ ಅನಂತಸ್ವಾಮಿಮಠಾಧ್ಯಕ್ಷರಾದ ಹರಿಹರಾನಂದಭಾರತೀಸ್ವಾಮಿಗಳವರು ರಾಜಾಗೋಪೀಚಂದ ಎಂಬ ಕಥೆಯನ್ನು ಹೃದಯಂಗಮವಾಗಿ ಅನುವಾದಿಸಿದರು ತಾ|| 9 3 1942ನೆಯ ದಿನ ಕವಿಭೂಷಣ ಬಿರುದಾಂಕಿತರಾದ ದೊಡ್ಡಬಳ್ಳಾಪುರದ ಶ್ರೀ ಶಿವದೇವಶಾಸ್ತ್ರಿಗಳವರು “ಮಹಾಶಿವರಾತ್ರಿಮಹಿಮೆ’ ಎಂಬ ಶಿವಕಥೆಯನ್ನು ಅನುವಾದಿಸಿದರು ತಾ|| 10 3 1942ನೇ ದಿನ ಶ್ರೀಮಾನ್ ಯಜಮಾನ್ ಕೆಂಚಪ್ಪನವರ ಪ್ರೋತ್ಸಾಹೌದಾರ್ಯಗಳಿಂದ ತುರಾಬಿರುದಾರ್ ಬಿ ನೀಲಕಂಠಯ್ಯ ಮತ್ತು ಕಲ್ಲಿಬಿರುದಾರ್, ಡಿ ಯಸ್ ರಾಮಯ್ಯ ಇವರು ಸ್ವಯಂರಚಿತವಾದ “ಶ್ರೀ ರೇಣುಕಮಹಿಮಾದರ್ಶ” ಎಂಬ ಲಾವಣಿ ಪದ್ಯಗಳನ್ನು ರಸಿಕರಂಜನವಾಗುವಹಾಗೆ ಹಾಡಿದರು ಈ ಲಾವಣಿಪದಗಳು ಜನರಲ್ಲಿ ಹರಡಲು ಶ್ರೀಮಾನ್ ಯಜಮಾನ್ ಕೆಂಚಪ್ಪನವರು ಧರ್ಮಾರ್ಥವಾಗಿ ಸಾವಿರಾರು ಪ್ರತಿಗಳನ್ನು ಮುದ್ರಿಸಿ ಕವಿಗಳಿಗೆ ಉಚಿತವಾಗಿ ಕೊಟ್ಟರು ತಾ|| 11 3 1942 ನೇ ದಿನ, ಪಂಡಿತ ಶ್ರೀ ತಪಸೀ ರಾಮಯ್ಯಶಾಸ್ತ್ರಿಗಳವರು “ಶರಭಲೀಲೆ” ಎಂಬ ಕಥೆಯನ್ನು ಅನುವಾದಿಸಿದರು. ತಾ|| 12 3-1942 ನೇ ದಿನ ಶ್ರೀ ಗಂಗಾಧರಶಿವಾಚಾರ್ಯರು “ಭಕ್ತಿಭಾವ’ ಎಂಬ ವಿಷಯದಲ್ಲಿ ಅಮೋಘವಾದ ಭಾಷಣವನ್ನು ಮಾಡಿದರು ತಾ|| 13 3 42 ನೇ ದಿನ ಮೈಸೂರಿನ ಕೀರ್ತನಪಟುಗಳಾಗಿದ್ದ ಕೆ. ಶಿವಪ್ಪಶಾಸ್ತ್ರಿಗಳ ಪುತ್ರ ಎಸ್ ಚೆನ್ನಬಸವಪ್ಪಶಾಸ್ತ್ರಿಗಳು “ಶಾಂತಾದೇವಿ” ಎಂಬ ಕಥೆಯನ್ನು ಅನುವಾದಿಸಿದರು ತಾ|| 14 3 1942 ನೇ ದಿನ ಒಡಗೇನಹಳ್ಳಿಯ ಶ್ರೀ ಪಿ ರಾಮಬಸಪ್ಪನವರು “ರೇಣುಕಾರಾಧ್ಯಚರಿತ್ರೆ ಎಂಬ ಕಥೆಯನ್ನು ಅನುವಾದಿಸಿದರು ತಾ|| 15 3 1942 ನೇ ದಿನ ಶ್ರೀ ಸಂತನಾರಾಯಣದಾಸರು ‘ಭೀಮಭಕ್ತಿ’ ಎಂಬ ಕಥೆಯನ್ನು ಅನುವಾದಿಸಿದರು ತಾ|| 16 3 1942 ನೇಯ ದಿನ ಆದವಾನಿಯಿಂದ ಬಂದಿದ್ದ ಭರತನಾಟ್ಯಕೋವಿದರೂ ಅನೇಕ ದೊಡ್ಡಮನುಷ್ಯರಿಂದ ಸನ್ಮಾನಿತರಾದ ಶ್ರೀ ಪಿ ಕೇಶವನಾಥಕರ್ಣಾಟಕಿಯವರು ಭರತನಾಟ್ಯ ಶಾಸ್ತ್ರರೀತಿಯಾಗಿ ಶಿವತಾಂಡವ, ಭಸ್ಮಾಸುರ ನೃತ್ಯ ಮೊದಲಾದ ಅನೇಕ ನರ್ತನಗಳನ್ನು ಮಾಡಿದರು ಅವರ ನರ್ತನವೈಖರಿಯು ಆಯಾಯ ದೇವತೆಗಳ ಸಾನ್ನಿಧ್ಯವನ್ನು ಪ್ರತ್ಯಕ್ಷೀಕರಿಸುತ್ತಿದ್ದಿತು ತಾ||17 3 1942 ನೆಯ ಮಂಗಳವಾರವು ‘ಚಿತ್ರಭಾನುಸಂವತ್ಸರದ ಆರಂಭ (ಯುಗಾದಿ) ದಿನವಾದುದರಿಂದ ಪ್ರಾತಃಕಾಲ ವಿಶೇಷ ಪೂಜಾದಿಗಳು ನಡೆದ ಸಾಯಂಕಾಲಕ್ಕೆ ಶ್ರೀಗಳ ಸನ್ನಿಧಿಯಲ್ಲಿ ಸಭಾಕಾರ್ಯಕ್ಕೆ ಆರಂಭವಾಯಿತು ಅಂದಿನ ಅಧ್ಯಕ್ಷತೆಯನ್ನು ನಿವೃತ್ತ ಮುಖ್ಯನ್ಯಾಯಾಧೀಶರಾದ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಪಿ ಮಹದೇವಯ್ಯನವರು ವಹಿಸಿದ್ದರು ಪದ್ಧತಿಯ ಪ್ರಕಾರ ವೇದಘೋಷವಾಯಿತು ಶ್ರೀ ಗುರುಲಿಂಗಶಾಸ್ತ್ರಿಗಳೂ, ಶ್ರೀ ಗುರುಬಸವಶಾಸ್ತ್ರಿಗಳೂ ನೂತನ ವರ್ಷದ ಪಂಚಾಂಗಶ್ರವಣವನ್ನು ಮಾಡಿದರು ಶ್ರೀ ಜ|| ರೇ|| ಪಂ|| ಶ್ರೀ ಬೋರ್ಡಿಂಗ್ ವೈದಿಕ ಪಾಠಶಾಲಾಧ್ಯಾಪಕರಾದ ಶ್ರೀ|| ಸಿದ್ಧನಂಜಾರಾಧ್ಯರು ಶ್ರೀಗಳವರ ನೂತನವರ್ಷದ “ಶುಭಸಂದೇಶ” ವನ್ನು ಓದಿದರು ತರುವಾಯ ಶ್ರೀಗಳು ‘ಬ್ರಹ್ಮಚರ್ಯ” ಎಂಬ ವಿಷಯಕವಾದ ಭಾಷಣವನ್ನು ಮಾಡಿದರು ಅಧ್ಯಕ್ಷರು ತಮ್ಮ ಅನುಭವಕ್ಕೆ ತಕ್ಕಂತೆ ವಿಚಾರಪರಿಪ್ಲುತವಾದ ಭಾಷಣವನ್ನು ಮಾಡಿದರು ಆಮೇಲೆ, ಶ್ರೀ ಗುರುಲಿಂಗಶಾಸ್ತ್ರಿಗಳಿಗೆ ಶ್ರೀ ಮಠದಿಂದ ಕಲಾಬತ್ತಿನ ಶಾಲು ಆಶೀರ್ವದಿಸಲ್ಪಟ್ಟಿತು. ತರುವಾಯ ರಾಜಾಶೀರ್ವಾದ, ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ, ಗಂಧ ಪುಷ್ಪ, ಪ್ರಸಾದವಿನಿಯೋಗಗಳಾದವು ಇಂದಿನ ಸಭೆಗೆ ರಾಜಧರ್ಮಪ್ರವೀಣ ದಿವಾನ್‌ಬಹದ್ದೂರ್ ಪಿ ಮಹದೇವಯ್ಯನವರು, ಡಿ ಹೆಚ್ ಚಂದ್ರಶೇಖರಯ್ಯನವರು ರಿ|| ಡಿಸ್ಟ್ರಿಕ್ಟ್ ಜಡ್ಜರೂ, ಜಿ ಕೆ ರುದ್ರಾರ್ಯರೂ ಇ|| ಟ|| ಕಮಿಷನರ್, ಎಚ್ ಕೆ ಮಲ್ಲಪ್ಪನವರು ಅಸಿಸ್ಟೆಂಟ್ ಸೆಕ್ರೆಟರಿ, ಮೈಸೂರು ಶುಗರ್ ಕಂಪನಿ ಇವರೇ ಮೊದಲಾದ ಅನೇಕ ದೊಡ್ಡ ಮನುಷ್ಯರು ಆಗಮಿಸಿದ್ದರು ಅಂದಿನ ಸಭಾದೃಶ್ಯವು ಬಹು ರಮಣೀಯವಾಗಿದ್ದಿತು. ಸಭಾಸ್ಥಾನವು ಶ್ರೀ ಜಗದಾಚಾರ್ಯರ ನೂತನ ಚಿತ್ರಪತಾಕೆಗಳಿಂದ ಅಲಂಕರಿಸಲ್ಪಟ್ಟಿದ್ದಿತು ಪೋಲೀಸ್ ವ್ಯವಸ್ಥೆಯು ಸರಿಯಾಗಿದ್ದಿತು ಜನರ ಆನಂದಕ್ಕೆ ಪಾರವೇ ಇರಲಿಲ್ಲ ಈ ಮಧ್ಯೇ ತಾ|| 12 3 1942 ನೇ ಗುರುವಾರ ದಿವಸ ಯಜಮಾನ್ ಕೆಂಚಪ್ಪನವರು ತಮ್ಮ ಮನೆಯ ಮಂಡಳಿಯೊಡನೆ ಶಿವದೀಕ್ಷಾ ಸಂಸ್ಕಾರವನ್ನು ಹೊಂದಿದ್ದಲ್ಲದೆ ನೂರಾರು ಜನರಿಗೆ ಉಚಿತವಾಗಿ ಶಿವದೀಕ್ಷೆಯನ್ನು ಮಾಡಿಸಿದರು ತಂದೆಯವರು ಆನಂದಪಡಬೇಕೆಂಬ ಹೇತುವಿನಿಂದ ಶ್ರೀ|| ಕೆಂಚಪ್ಪನವರ ಸಹೋದರರು ಷೋಡಶಮಹಾದಾನಗಳನ್ನು ಮಾಡಿದರು ತದಂತರ್ಗತವಾದ ಕನ್ಯಾದಾನವು ಸಹ ತಾ|| 13 3 1942 ನೇ ಶುಕ್ರವಾರ ಶ್ರೀ ಮಹಂತಿನಮಠದಲ್ಲಿಯೇ ನೆರವೇರಿತು. ಶ್ರೀಮಾನ್ ಕೆಂಚಪ್ಪ ಸಹೋದರರ ಔದಾರ್ಯವು ಪ್ರಶಂಸನೀಯವಾಗಿದೆ ಜಯಂತೀ ಸಮಯದಲ್ಲಿ ಎಂಟು ದಿನಗಳವರೆಗೆ ಅವಿಚ್ಛಿನ್ನವಾಗಿ ಅನ್ನದಾನವನ್ನು ಮಾಡಿದರು ಹೀಗೆ ಜಗದ್ಗುರು ರೇಣುಕಭಗವತ್ಪಾದಾಚಾರ್ಯರ ಜಯಂತಿಯು ಬಹು ವಿಜೃಂಭಣೆಯಿಂದ ನೆರವೇರಿತು ಜಗದಾಚಾರ್ಯರ ಸೇವೆಯನ್ನು ಮಾಡಿ ಸಕಲರೂ ಸುಖಿಗಳಾಗಲಿ.

ಬಿ ಎಸ್. ರುದ್ರಯ್ಯ.

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ಕರ್ತವ್ಯಕರ್ಮ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರ ಶುಕಿವ ಪ ಮುಮೇಸೂರು.

ಅಕಾರ್ಯಂ ನೈವ ಕರ್ತವ್ಯಂ ಪ್ರಾಣತ್ಯಾಗೇಽಪಿ ಸಂಸ್ಥಿತೇ ।
ನಕೃತ್ಯಂ ಪರಿತ್ಯಾಜ್ಯಂ ಧರ್ಮಏಷ ಸನಾತನಃ ॥

ಕರ್ತವ್ಯಕರ್ಮವೆಂದರೆ ಅಗತ್ಯವಾಗಿ ಮಾಡತಕ್ಕಂಥ ಕಾರ್ಯವು ಶಿರೋಲೇಖದಲ್ಲಿ ಉದಾಹರಿಸಿರುವ ಮನುವಾಕ್ಯದಂತೆ, ಪ್ರಾಣಹೋಗುವ ಸನ್ನಿವೇಶವು ಪ್ರಾಪ್ತವಾದರೂ ಮಾಡಬಾರದ್ದನ್ನು ಎಂದೂ ಮಾಡಬಾರದ, ಮಾಡತಕ್ಕದ್ದನ್ನು ಎಂದೂ ಬಿಡಬಾರದು. ಇದೇ ಸನಾತನಧರ್ಮದ ಮೂಲತತ್ವವು. ಆದ್ದರಿಂದ ಕರ್ತವ್ಯಕರ್ಮವು ಒಂದು ಬಗೆಯ ಧಾರ್ಮಿಕ ದೇಣಿಗೆಯೆಂದು ಹೇಳಬಹುದು. ಈ ದೇಣಿಗೆಯನ್ನು ತೀರಿಸದೆ ಕರ್ತವ್ಯಕರ್ಮಹೀನರಾದರೆ ದಿವಾಳಿತೆಗೆದು ಅಪಖ್ಯಾತಿಯನ್ನು ತಂದುಕೊಳ್ಳುವಂಥ ಮೈಗಳ್ಳರನ್ನುಳಿದು ಮಿಕ್ಕವರೆಲ್ಲರೂ ಇದಕ್ಕೆ ಪಾತ್ರರಹರು. ಈ ಸಾಲವನ್ನು ತೀರಿಸುವುದಕ್ಕೆ ವ್ಯಾವಹಾರಿಕ ಹಣದ ಅಗತ್ಯವಿರುವುದಿಲ್ಲ. ಮನಃಪೂರ್ವಕವಾದ ಪ್ರಯತ್ನವೂ ಧೃಢನಿಶ್ಚಯವೂ ಇದ್ದರೆ ಸಾಕು.

ಈ ಜಗತ್ತಿನಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೆ ಒಂದಿಲ್ಲೊಂದು ಕರ್ತವ್ಯವು ಇದ್ದೇ ಇರುತ್ತದೆ. ಉಚ್ಚಸ್ಥಿತಿಯಲ್ಲಾಗಲಿ ನೀಚಸ್ಥಿತಿಯಲ್ಲಾಗಲಿ ಅವನು ಅವಶ್ಯವಾಗಿ ಮಾಡತಕ್ಕ ಯಾವುದಾದರೊಂದು ಕಾರ್ಯವು ಇರುವುದು. ಅವನು ಇಂತಿಷ್ಟು ವರ್ಷದವನಾದವೇಳೆ ಅವನಲ್ಲಿ ಕರ್ತವ್ಯವನ್ನು ಮಾಡುವ ಸಾಮರ್ಥ್ಯವು ಬರುತ್ತದೆಂಬ ಬಗ್ಗೆ ಖಂಡಿತವಾದ ನಿಯಮವನ್ನು ಹೇಳುವುದು ಸಾಧ್ಯವಲ್ಲ. ಆದರೂ ವಾಡಿಕೆಯಾಗಿ ಅವನು ಬಾಲ್ಯಾವಸ್ಥೆಯಲ್ಲಿರುವಾಗಲೇ ತನ್ನ ಮಾತಾಪಿತೃಗಳ ವಾಕ್ಯವನ್ನು ಪರಿಪಾಲಿಸಹತ್ತಿದಂದಿನಿಂದ ಕರ್ತವ್ಯಕರ್ಮವನ್ನು ಆಚರಿಸಲಾರಂಭಿಸುತ್ತಾನೆಂದು ಹೇಳಬಹುದು. ಮುಂದೆ ಅವನು ದೊಡ್ಡವನಾದಹಾಗೆ, ಅವನಿಗೆ ಸತಿಪತಿಗಳು, ಗುರುಶಿಷ್ಯರು, ಸ್ವಾಮಿಸೇವಕರು ಎಂಬ ಪ್ರಾಪಂಚಿಕ ಸಂಬಂಧಗಳು ಪ್ರಾಪ್ತವಾಗುತ್ತವೆ. ಆದ್ದರಿಂದ ಈ ಬೇರೆಬೇರೆ ಸಂಬಂಧಗಳನ್ನು ಕುರಿತು ಅವನಿಗೆ ಬೇರೆಬೇರೆ ತರದ ಕರ್ತವ್ಯಗಳನ್ನು ಮಾಡುವ ಪ್ರಸಂಗಗಳು ಬರುತ್ತವೆ. ಇವುಗಳ ಹೊರತು ನೆರೆಹೊರೆಯವರು ಪರಸ್ಪರರ ಸಂಗಡ, ಪ್ರಜೆಗಳು ರಾಜನಸಂಗಡ, ರಾಜನು ಪ್ರಜೆಗಳ ಸಂಗಡ, ಸೇವಕರು ಅಧಿಕಾರಿಗಳ ಸಂಗಡ, ಅಧಿಕಾರಿಗಳು ಸೇವಕರ ಸಂಗಡ ವರ್ತಿಸಬೇಕಾದಂಥ ಅನೇಕ ಸಾರ್ವಜನಿಕ ಸಂಬಂಧಗಳಲ್ಲಿ ಕೈಕೊಳ್ಳತಕ್ಕ ಕರ್ತವ್ಯಗಳು ಎಷ್ಟೋ ಇರುತ್ತವೆ. ಸಾರಾಂಶ, ಮನುಷ್ಯನ ಲೌಕಿಕಸ್ಥಿತಿಯು ಬದಲಾಗುತ್ತ ಬಂದಂತೆ ಅವನ ಕರ್ತವ್ಯಗಳಾದರೂ ಬದಲಾಗುತ್ತ ಹೋಗುತ್ತವೆ.

ಇದಲ್ಲದೆ ತನ್ನನ್ನು ಹುಟ್ಟಿಸಿ ಸಕಲ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವ ಪರಮಾತ್ಮನಲ್ಲಿ ಭಕ್ತಿ, ವಿಶ್ವಾಸ, ಕೃತಜ್ಞತೆಗಳನ್ನಿಟ್ಟು, ಸತ್ಯವಾದ ಆಚರಣೆಯಿಂದ ನಡೆದು, ಪರಲೋಕದ ಸಾಧನವನ್ನು ಸಾಧಿಸಿಕೊಳ್ಳುವುದು ಮನುಷ್ಯನ ಆದ್ಯ ಕರ್ತವ್ಯವಾಗಿರುವುದು. ದೇವರು ನಮಗೆ ಮಾನವಜನ್ಮವನ್ನು ಕೊಟ್ಟಿದ್ದು ಕೇವಲ ನಿದ್ರಾಹಾರಮೈಥುನಾದಿಗಳಿಗಲ್ಲ. ಮುಖ್ಯವಾದ ಪುರುಷಾರ್ಥವನ್ನು ಸಂಪಾದಿಸಿ ನಾವು ನಮ್ಮ ಜನ್ಮದ ಸಾರ್ಥಕವನ್ನು ಮಾಡಿಕೊಳ್ಳತಕ್ಕದ್ದು. ಹಾಗೆ ಮಾಡದಿದ್ದರೆ, ನಾವು ಕೃತಘ್ನರೂ ದ್ರೋಹಿಗಳೂ ಅತಿಪಾಪಿಗಳೂ ಆಗುತ್ತೇವೆ.

ಗಾಳಿಗಿಟ್ಟ ದೀಪದಂತೆ ಮನಸ್ಸು ಚಂಚಲವಿದ್ದರೆ, ಕರ್ತವ್ಯಕರ್ಮವನ್ನು ಮಾಡುವುದು ಬಹಳ ತೊಂದರೆಯಾಗುತ್ತದೆ. ಹೆಚ್ಚೇಕೆ ಯಾವಕಾರ್ಯವೂ ಸಾಧಿಸುವುದಿಲ್ಲ. ಅದರಂತೆಯೇ ಸೋಮಾರಿತನ, ಸುಖೋಪಭೋಗಗಳಲ್ಲಿ ಆಸಕ್ತಿ, ಕಾಮಕ್ರೋಧಾದಿ ಷಡ್ರಿಪುಗಳ ವ್ಯಾಮೋಹ ಇತ್ಯಾದಿದುರ್ಗುಣಗಳು ಕರ್ತವ್ಯಕರ್ಮವನ್ನು ಮಾಡಗೊಡುವುದಿಲ್ಲ. ಸ್ವಲ್ಪಕಾಲವಾದರೂ ಮನಸ್ಸನ್ನು ಸ್ಥಿರಗೊಳಿಸುವದುತ್ತಮವು. ಇದಿಲ್ಲದಿದ್ದರೆ ಈ ದುರ್ಗುಣಗಳು ನಮ್ಮನ್ನು ಸರ್ವತೋಮುಖವಾಗಿ ವ್ಯಾಪಿಸುವವು. ಈ ಪರಿಯಾಗಿ ವ್ಯಾಪಿಸಲ್ಪಟ್ಟ ಮನುಷ್ಯನು ಶೂನ್ಯಕ್ಕೆ ಸರಿಯಾಗುವನು. ಅಂಥವನಿಂದ ಪ್ರಶಸ್ತವಾದ ಯಾವ ಕಾರ್ಯವೂ ಆಗುವುದಿಲ್ಲ. ಆದ್ದರಿಂದ ಕರ್ತವ್ಯಕರ್ಮವನ್ನು ಸರಿಯಾಗಿ ಮಾಡಬೇಕಾದರೆ, ಮನುಷ್ಯನಲ್ಲಿ ಆತ್ಮಸಂಯಮನವೂ ಸ್ವಾಭಾವಿಕವಾದ ಸ್ವಾರ್ಥತ್ಯಾಗವೂ, ದೃಢವಾದ ಮನಸ್ಸೂ ಅವಶ್ಯಕವಾಗಿರಬೇಕು.

ಕರ್ತವ್ಯಕರ್ಮಕ್ಕೂ ಸತ್ಯಕ್ಕೂ ಅತಿ ನಿಕಟವಾದ ಸಂಬಂಧವಿರುತ್ತದೆ. ಕರ್ತವ್ಯದಕ್ಷನಾದ ಮನುಷ್ಯನಲ್ಲಿ ಸತ್ಯವೂ ಸರಳತ್ವವೂ ತಮ್ಮಿಂದ ತಾವೇ ಆವಿರ್ಭವಿಸುತ್ತವೆ. ಅವನಿಗೆ ಸುಳ್ಳಾಡುವ ಪ್ರಸಂಗವೇ ಬರುವುದಿಲ್ಲ. ಮನಸ್ಸಿನಲ್ಲಿದ್ದದನ್ನು ಮಾತಾಡುವನು, ಆಡಿದಂತೆ ಮಾಡುವನು ಮತ್ತು ಅದನ್ನು ಯೋಗ್ಯರೀತಿಯಲ್ಲಿಯೂ ಯೋಗ್ಯಕಾಲದಲ್ಲಿಯೂ ಮಾಡುವನು. ಸತ್ಯದಷ್ಟು ಪುಣ್ಯವೂ ಅಸತ್ಯದಷ್ಟು ಪಾಪವೂ ಮತ್ತೆ ಯಾವುದೂ ಇಲ್ಲ. ಸತ್ಯಮಾತಾಡುವುದು ನಮ್ಮ ಧರ್ಮವು. ಯಾಕೆಂದರೆ ದೇವರ ನಮಗೆ ನಾಲಗೆಯನ್ನು ಕೊಟ್ಟಿದ್ದು ಸುಳ್ಳಾಡುವುದಕ್ಕಲ್ಲ. ಆದ್ದರಿಂದ ಸತ್ಯಸಂಧರಾಗಲಿಚ್ಛಿಸುವವರು ಕರ್ತವ್ಯದಕ್ಷರಾಗಿರತಕ್ಕದ್ದು.

ಕರ್ತವ್ಯದಕ್ಷನ ಮನಸಿನಿಂದ ಅಕೃತ್ಯವು ಎಂದೂ ಘಟಿಸದು. ಅವನಿಗೆ ಯಾವ ಭಯವೂ ಇರುವುದಿಲ್ಲ. ಅವನ ಮನಸ್ಸು ನಿರ್ಮಲವಾಗಿಯೂ ಶಾಂತವಾಗಿಯೂ ಇರುವುದು. ಜನರ ಆದರಾತಿಥ್ಯಗಳಿಗೆ ಅವನು ಪಾತ್ರನಾಗುವನು. ಅವನು ಹಿಡಿದ ಕಾರ್ಯಗಳಲ್ಲಿ ಅಪಜಯವು ಎಂದೂ ತಟ್ಟುವುದಿಲ್ಲ. ಕದಾಚಿತ್ ಅಪಜಯವಾದರೂ "ಯತ್ನೇ ಕೃತೇ ಯದಿ ನ ಸಿಧ್ಯತಿ ಕೋಽತ್ರ ದೋಷಃ" ಎಂಬ ವಾಕ್ಯದ ತಾತ್ಪರ್ಯವನ್ನು ಮನಸ್ಸಿನಲ್ಲಿ ತಂದು ಸಮಾಧಾನ ಪಡುವನು. ಇದಲ್ಲದೆ ಕರ್ತವ್ಯಕರ್ಮವನ್ನು ಎಡೆಬಿಡದೆ ಜರುಗಿಸುವ ಮಹಾನುಭಾವರು ಐಶ್ವರ್ಯವನ್ನೂ, ಮಾನವನ್ನೂ, ಪದವಿಯನ್ನೂ, ಜಯಾಪಜಯಗಳನ್ನೂ, ಅದೇಕೆ ತಮ್ಮ ಜೀವವನ್ನೂ ಸಹ ಲೆಕ್ಕಿಸುವುದಿಲ್ಲ. ಉದಾಹರಣೆಗಾಗಿ ಸತ್ಯಹರಿಶ್ಚಂದ್ರನನ್ನು ತೆಗೆದುಕೊಳ್ಳೋಣ. ತನ್ನನ್ನು ಯಾಚಿಸಿದ ಮುನಿಗೆ ಕ್ಷಾತ್ರಧರ್ಮಕ್ಕನುಸಾರವಾಗಿ ಸರ್ವಸ್ವವನ್ನೂ ದಾನ ಮಾಡಿದನು. ಪಾಠಕರೇ! ಸೌಂದರ್ಯಶಾಲಿನಿಯೂ ಪತಿಗತಪ್ರಾಣಳೂ ಆದ ರಮಣಿಯು ದೊರೆತಳೆಂದರೆ ಅವಳನ್ನು ಅಗಲುವುದಕ್ಕೆ ಯಾವನು ತಾನೆ ಒಪ್ಪುವನು? ಅಂತಃಪುರದಲ್ಲಿ ಹಂಸತೂಲಿಕಾತಲ್ಪದಲ್ಲಿ ವಿಹರಿಸುತ್ತಿದ್ದವನು ರಾಜ್ಯವನ್ನು ತೊರೆದು ಪತ್ನೀಪುತ್ರರೊಡನೆ ಘೋರಾರಣ್ಯದಲ್ಲಿ ಸಂಚರಿಸಿದನಲ್ಲವೆ? ಮತ್ತು ಕಾಶೀಪಟ್ಟಣದಲ್ಲಿ ತನ್ನ ಪ್ರೇಮದ ಹೆಂಡತಿಯನ್ನೂ ಮಾರಿ ತಾನೂ ಚಂಡಾಲನ ಆಳಾಗಲಿಲ್ಲವೆ? ಇವೆಲ್ಲವೂ ಕರ್ತವ್ಯಕರ್ಮಪಾಲನೆಗಾಗಿಯಲ್ಲವೆ? ಈ ಜಗತ್ತಿನಲ್ಲಿ ಐಶ್ವರ್ಯಕ್ಕಾಗಿಯೂ ರಾಜ್ಯಕ್ಕಾಗಿಯೂ, ಪತ್ನೀಪುತ್ರರುಗಳಿಗಾಗಿಯೂ ಮಡಿದಿರುವವರೇ ಬಹುಜನರು. ಆದರೆ ಪರೋಪಕಾರಾರ್ಥವಾಗಿಯೂ, ಕರ್ತವ್ಯಪಾಲನೆಗೋಸುಗವಾಗಿಯೂ ಸರ್ವಸ್ವವನ್ನೂ ತ್ಯಾಗಮಾಡಿ ಯಾತನೆಯನ್ನೂ ಕಷ್ಟವನ್ನೇ ಅನುಭವಿಸುವಂತಹ ಸ್ವಾರ್ಥತ್ಯಾಗಿಗಳು ವಿರಳ. ಆದ್ದರಿಂದ ಈ ಸಂಸಾರದಲ್ಲಿ ಜಯಾಪಜಯಗಳು ಸರಿಯೆಂದು ಬಗೆದು ಧೈರ್ಯದಿಂದ ತನ್ನ ಕರ್ತವ್ಯವನ್ನು ಮಾಡುವವನೇ ಶೂರನು. ಅವನೇ ಧೈರ್ಯಶಾಲಿಯು. ಅವನೇ ಕಾರ್ಯದಕ್ಷನು.

ಕರ್ತವ್ಯವನ್ನು ನೆರವೇರಿಸುವುದು ವ್ಯಕ್ತಿಸುಖಕ್ಕೆ ಕಾರಣವಾಗಿರುವಂತೆ ದೇಶಹಿತಕ್ಕಾದರೂ ಕಾರಣವಾಗಿರುವುದು. ಕರ್ತವ್ಯವನ್ನು ಎಡೆಬಿಡದೆ ನೆರವೇರಿಸುವಂತಹ ಜನರುಳ್ಳ ದೇಶವು ಕೂಡಲೆ ಘನತೆಗೇರುವುದು. ಅದರ ಶ್ರೇಷ್ಠತ್ವವು ಚಿರಕಾಲ ಉಳಿಯುವುದು. ಪ್ರಜೆಗಳು ಸ್ವದೇಶಕ್ಕೆಕೊಡುವ ಕರ್ತವ್ಯಕರ್ಮವೆಂಬ ಸಾಲವನ್ನು ತಮ್ಮ ಕೈಯಿಂದಾದಷ್ಟು ತೀರಿಸದೆ, ಕೇವಲ ಸ್ವದೇಶಾಭಿಮಾನವನ್ನು ಕುರಿತು ಮಾತನಾಡುವುದರಿಂದಲೇನೂ ಲಾಭವಿಲ್ಲ. ಮನಃಪೂರ್ವಕವಾಗಿ ದೇಶಹಿತಕ್ಕೋಸ್ಕರ ಕಷ್ಟಪಡುವ ವೀರರು ದೇಶದಲ್ಲಿ ಇದ್ದುದರಿಂದಲೇ ಶಿವಾಜಿಮಹಾರಾಜನು ಹಿಂದೂ ಧರ್ಮವನ್ನು ಉಳಿಸಿದನು. ನೆಲ್ಸನ್ನನು ಪ್ರಾಣಬಿಡುವ ಸಮಯದಲ್ಲಿ, ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಮಾಡತಕ್ಕದ್ದೆಂದು ಇಂಗ್ಲೆಂಡ್ ದೇಶವು ಅಪೇಕ್ಷಿಸುತ್ತದೆ (England expects every man to do his duty) ಎಂದು ಹೇಳಿ ತನ್ನ ಸೈನಿಕರನ್ನು ಹುರಿದುಂಬಿಸಿ ವೈರಿಗಳನ್ನು ಸೋಲಿಸಿದನು. ಕರ್ತವ್ಯಕರ್ಮಹೀನರಿಂದೊಡಗೂಡಿದ ದೇಶವು ಬೇಕಾದಷ್ಟು ಧನಾಢ್ಯವೂ, ಬೆಳೆಯುಳ್ಳದ್ದೂ, ಬಲವತ್ತಾದಾಗ್ಯೂ, ವಿದ್ಯಾಕಲಾಕೌಶಲ್ಯಸಂಪನ್ನವಾದದ್ದೂ ಇದ್ದರೂ, ಮಣ್ಣುಪಾಲಾಗದೆ ಇರಲಾರದೆಂಬ ಮಾತು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಚಿತ್ರಿಸಿದೆ. ಮಾಡತಕ್ಕದ್ದನ್ನು ಮಾಡದಿರುವುದೂ, ಮಾಡಬಾರದ್ದನ್ನು ಮಾಡುವುದೂ ಇವೆರಡೂ ಅಧೋಗತಿಗೆ ಕಾರಣಗಳು. ಆದ್ದರಿಂದಲೇ "ಕ್ರಮತಪ್ಪಿ ನಡೆವುದರಿಂ ಬಂಧನವಿನ್ನುಂಟೆ?" ಎಂದು ಜ್ಞಾನಿಗಳು ಹೇಳಿರುವರು. ಆದ್ದರಿಂದ ಕರ್ತವ್ಯಕರ್ಮಪಾಲನೆಗಾಗಿ ಯತ್ನಿಸುವುದು ನಮ್ಮ ಕರ್ತವ್ಯವಾಗಿದೆ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಗುರುತತ್ವಪ್ರಕಾಶಿಕೆ

ಪಶ್ಚಿಮದೇಶದಲ್ಲಿರುವ ಪೂಜ್ಯಬುದ್ಧಿಯಿಂದ ನಮ್ಮವರು ಅವರ ಹಿಮ್ಮೇಳನವನ್ನು ಹಾಡುವರು. ಪಶ್ಚಿಮದೇಶದವರು ತಮ್ಮ ಪುಂಗಿಯನ್ನು ಬದಲುಮಾಡಿದರೆ ಒಡನೆ ಅನುಕರಣಪ್ರಿಯರಾದ ನಮ್ಮವರು ತಮ್ಮ ಹಿಮ್ಮೇಳನವನ್ನು ಆ ಶ್ರುತಿಗೆ ಹೊಂದಿಸುವರು. ತಮಗೆ ವೇದಾಧಿಕಾರವಿಲ್ಲವೆಂದು ಕಣ್ಣು ಕೆಂಪಗೆ ಮಾಡುವವರಿಗೆಲ್ಲಾ ವೇದ ಧರ್ಮದಮೇಲಿನ ಪ್ರೀತಿಯೇ ಕಾರಣವೆಂದು ಹೇಳುವಹಾಗಿಲ್ಲ. ಏಕೆಂದರೆ ಈಗ ಜರ್ಮನಿಯ ಪಂಡಿತರಾದ "ಮ್ಯಾಕ್ಸಮಿಲ್ಲರ್ ಸಾಹೇಬರು ವೇದಗಳನ್ನೆಲ್ಲಾ ಇಂಗ್ಲೀಷಿಗೆ ಭಾಷಾಂತರಿಸಿಯೂ ಇರುವರು ಮತ್ತು ಎಲ್ಲವೂ ಅಚ್ಚಾಗಿಯೂ ಇರುವವು. ಹೀಗೆಂದು ಅದನ್ನು ತಿಳಿದುಕೊಳ್ಳುವದಕ್ಕೆ ಈಗ ಎಷ್ಟು ಜನರು ಬಾಯಿನೀರು ಕರೆಯುತ್ತಿದ್ದಾರೆ? ಒಮ್ಮೆ ಸ್ವಾಮಿ ವಿವೇಕಾನಂದರಿಗೂ ಪ್ರೊಫೆಸರ್ ಡಾಯಸನ ಸಾಹೇಬರಿಗೂ ಸಂಭಾಷಣೆಯಾದಾಗ ತಾನು ವೇದಾಂತದಲ್ಲಿ ತಲೆಯನ್ನು ಹಾಕಿ, ಇಷ್ಟೆಲ್ಲಾ ಅರಿಯುವದಕ್ಕೆಬದಲು ಬೇರೆ ಯಾವದಾದರೂ ಶಾಸ್ತ್ರವಿಷಯವನ್ನು ಹಿಡಿದಿದ್ದರೆ ತಮ್ಮ ಮನೆಗೆ ಸುವರ್ಣದ ಕಲಶವನ್ನಿಡಬಹುದಾಗಿತ್ತೆಂದು ಪ್ರೊಫೆಸರ್ ಡಾಯಸನ ಸಾಹೇಬರು ಹೇಳಿದರಂತೆ. ಅವರು ಹೀಗೆ ಹೇಳಿದ್ದಕ್ಕೆ ಕಾರಣವೇನೆಂದರೆ ಅವರ ವೇದಾಂತದ ಪುಸ್ತಕಗಳನ್ನು ಕೊಂಡುಕೊಳ್ಳುವವರೇ ಇಲ್ಲದಾಗಿತ್ತು. ಇದನ್ನು ನೋಡಿದರೆ ಜನರಿಗೆ ವೇದದ ವಿಚಾರದಮೇಲಿನ ಆದರವೇನೂ ಬಹಳವಾಗಿಲ್ಲ. ತಾವು ಯಾವದಕ್ಕೂ ಅನಧಿಕಾರಿಗಳೆನಿಸಿಕೊಳ್ಳಬಾರದೆಂಬ ಅಭಿಮಾನವೇ ಅವರ ಮನಸ್ಸನ್ನು ಕಲಕಿಬಿಡುವದು. ವೇದಾರ್ಥವನ್ನು ಪ್ರಚಾರಮಾಡುವ ವಿಷಯದಲ್ಲಿ ನಮ್ಮವರ ಎಷ್ಟುಮಾತ್ರವೂ ಹಿಂದಿಲ್ಲ."

* ಶ್ರಾವಯೇಚ್ಚತುರೋವರ್ಣಾನ್ ಕೃತ್ವಾ ಬ್ರಾಹ್ಮಣಮಗ್ರತಃ

ಬ್ರಾಹ್ಮಣನನ್ನು ಮುಂದುಮಾಡಿಕೊಂಡು ನಾಲ್ಕು ವರ್ಣದವರಿಗೂ ಶ್ರವಣಮಾಡಿಸಬೇಕೆಂದು ಅದರ ಅರ್ಥ. ಬರೀ ನಾಲ್ಕುವರ್ಣದವರೇಕೆ? ಮ್ಲೇಂಛಾದಿಗಳಿಗೂ ಕೂಡ ಭಾಷಾಂತರದಿಂದ ಅದರಲ್ಲಿ ಅರ್ಥವನ್ನು ತಿಳಿದುಕೊಳ್ಳಬಹುದೆಂದು ಸ್ಕಾಂದಪುರಾಣವು ಹೇಳುತ್ತದೆ. ಹೀಗೆ ವೇದಾರ್ಥವನ್ನು ಎಲ್ಲರಿಗೂ ಜೀರ್ಣಿಸುವ ಸ್ಥಿತಿಗೆ ತಂದು ಅದರಿಂದ ಪುರಾಣರೂಪದಲ್ಲಿ ಬರೆದಿಟ್ಟಿರುವ ಗ್ರಂಥಗಳನ್ನು ಅವರು ಎಲ್ಲರ ಮುಂದೆಯೂ ಇಟ್ಟು ಅದನ್ನು ಓದುವುದಕ್ಕೆ ಸಮ್ಮತಿಯನ್ನು ಕೊಟ್ಟಿದ್ದರೂ ಅದನ್ನು ಕಣ್ಣೆತ್ತಿ ಕೂಡ ನೋಡದೆ ಅವರು ವಿಚಾರಪೂರ್ವಕವಾಗಿ ಬಿಗಿಹಿಡಿದಿರುವದನ್ನೇ ಅಪೇಕ್ಷಿಸುವುದರಲ್ಲಿ ಹುರುಳಿಲ್ಲ. ಲೋಕದಲ್ಲಿ ಒಂದೊಂದರ ವ್ಯವಸ್ಥೆ ಒಬ್ಬೊಬ್ಬರ ಕಡೆಗಿದ್ದರೆ ನೆಟ್ಟಗಾಗುವುದೆಂಬ ಸೂತ್ರವನ್ನು ಹಿಡಿದು ವೇದದ ರಕ್ಷಣೆಯ ಭಾರವನ್ನು ಒಂದು ವರ್ಣದಲ್ಲಿಟ್ಟಿದ್ದಾಗಿದೆಯೇ ಹೊರತು ಮತ್ತೇನೂ ಇಲ್ಲ. ಆ ವೇದ ರಕ್ಷಕರಿಗಾದರೂ ಉಳಿದವರಿಗೆ ಅದನ್ನು ಹದಮಾಡಿಕೊಡಬೇಕೆಂಬ ಭಾರವಿರುವದರಿಂದ ಇತರರಿಗೆ ಅದೊಂದು ಬಗೆಯ ಹೆಚ್ಚಿನ ಸೌಕರ್ಯವೇ ಆಯಿತು. ಇರಲಿ ಶ್ರವಣವೆಂಬುವದೊಂದು ಸಾಮಾನ್ಯವಾದ ಸಾಧನವೆಂದು ಯಾರೂ ತಿಳಿಯಬಾರದು. ಶ್ರವಣವಿಲ್ಲದೆ ಪರಮಾತ್ಮನ ಮಹಿಮೆಯು ತಿಳಿಯುವುದಿಲ್ಲ. ಆ ಮಹಿಮೆಯಂ ತಿಳಿಯದೆ ಭಕ್ತಿಯು ಹುಟ್ಟುವುದಿಲ್ಲ. ಶ್ರವಣ ಮೊದಲಾದುವುಗಳಲ್ಲದೆ ಒಬ್ಬರನ್ನೊಬ್ಬರು ನೋಡಿ ಭಜನೆಯನ್ನು ಮಾತ್ರ ಮಾಡುವ ಭಕ್ತಿಯು ಕುರುಡು

(ಒಳಿಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೨ನೆಯ ಏಪ್ರಿಲ್ ತಾ|| ೬ನೇ ಸೋಮವಾರ

ವಿದೇಶಗಳಲ್ಲಿ ಶಿವಾಲಯಗಳ ವ್ಯಾಪಕತೆ.

ಚಂಪಾ (Annam) ದೇಶದ ಇತಿಹಾಸವನ್ನು ವಿಚಾರಮಾಡಿನೋಡಿದರೆ, ಆ ದೇಶವು ಪೂರ್ವದಲ್ಲಿ ಕೇವಲ ಶಿವಲಿಂಗಮಯವಾಗಿದ್ದಿತೆಂದು ತಿಳಿದುಬರುತ್ತದೆ. ಆ ದೇಶದ ಜನರು ಶಿವನನ್ನು ಲಿಂಗಾಕಾರದಿಂದಲೂ, ಕರಚರಣಾದ್ಯವಯವಾಕಾರದಿಂದಲೂ ಪೂಜಿಸುತ್ತಿದ್ದರೆಂದು ಅಲ್ಲಿ ಈಗಲೂ ದೊರೆಯುವ ನಾನಾವಿಧಮೂರ್ತಿಗಳಿಂದ ಕಂಡುಬರುತ್ತದೆ. ಆ ದೇಶದಲ್ಲಿ ಮನುಷ್ಯಾಕಾರದ ಮೂರ್ತಿಗಳಿಗಿಂತಲೂ ಲಿಂಗಾಕಾರದ ಮೂರ್ತಿಗಳೇ ವಿಶೇಷವಾಗಿ ಸ್ಥಾಪಿಸಲ್ಪಟ್ಟಿರುವವು. ಆ ದೇಶದಲ್ಲಿಯ ಶಿವಲಿಂಗಪೀಠಗಳು ಚೌಕಾಗಿಯೂ ಮತ್ತು ವರ್ತುಲಾಕಾರವಾಗಿಯೂ ಇದ್ದು, ಮನೋಹರವಾದ ೧-೫ ಲಿಂಗಗಳಿಂದ ಯುಕ್ತವಾಗಿರುವುವು. ಕೆಲವು ದೇವಾಲಯಗಳಲ್ಲಿ ಒಂದು ಪೀಠದಮೇಲೆ ೭ ಲಿಂಗಗಳವರೆಗೆ ಸ್ಥಾಪಿಸಲ್ಪಟ್ಟಿರುವುವು. ಆ ದೇಶದ ಕೆಲಜನ ರಾಜರು ಬಾಣಲಿಂಗಗಳಲ್ಲಿ ತಮ್ಮ ಮುಖಭಾವವನ್ನು ಕೆತ್ತಿಸಿ ಅವುಗಳಿಗೆ ಮುಖಲಿಂಗಗಳೆಂಬ ನಾಮವನ್ನಿಟ್ಟು ಸ್ಥಾಪಿಸಿರುವರೆಂಬ ವಿಷಯವು ಕೆಲವು ಶಾಸನಗಳಿಂದ ತಿಳಿದುಬರುತ್ತದೆ.

ಈ ಶಿವಲಿಂಗಮೂರ್ತಿಗಳಲ್ಲದೆ ಮನುಷ್ಯಾಕಾರದ ಶಿವನ ಮೂರ್ತಿಗಳು ಈಗಲೂ ಅಲ್ಲಲ್ಲಿ ಶೋಭಿಸುತ್ತಿರುವುವು. "ಟಾ-ಕ್ಯೂ" ಎಂಬ ಗ್ರಾಮದಲ್ಲಿ ಈ ವಿಧವಾದ ಎರಡು ಮೂರ್ತಿಗಳು ದೊರತಿರುವುವು. ಈ ವಿಗ್ರಹಗಳು ನಿಂತುಕೊಂಡ ಭಾವದಲ್ಲಿ ಬಹುಮನೋಹರವಾಗಿ ಕೆತ್ತಲ್ಪಟ್ಟಿದ್ದು, ವಿಶಾಲವಾದ ಜಡೆಯಿಂದಲೂ, ಕಿರೀಟದಿಂದಲೂ, ಸರ್ಪಗಳಿಂದಲೂ, ಆಭರಣಗಳಿಂದಲೂ ವಿರಾಜಿಸುತ್ತಿರುವುವು. ಈ ಮೂರ್ತಿಗಳ ಕೈಕಾಲುಗಳು ಭಿನ್ನವಾಗಿವೆ. "ಮಿ-ಸೋನ" ಗ್ರಾಮದಲ್ಲಿ ಈ ವಿಧವಾದ ಶಿವನ ಮೂರ್ತಿಯೊಂದು ದೊರೆತಿರುವುದು. ಈ ಮೂರ್ತಿಗೆ ಎರಡು ಹಸ್ತಗಳಿದ್ದು, ಒಂದು ಹಸ್ತದಲ್ಲಿ ರುದ್ರಾಕ್ಷಮಾಲಿಕೆಯೂ, ಮತ್ತೊಂದು ಹಸ್ತದಲ್ಲಿ ಅಮೃತಪಾತ್ರೆಯೂ ಇರುವುದಲ್ಲದೆ, ಮಸ್ತಕದಲ್ಲಿ ಸುಂದರವಾದ ಜಡೆಯೂ, ಹಣೆಯಲ್ಲಿ ಅಗ್ನಿನೇತ್ರವೂ ಶೋಭಿಸುತ್ತಿರುವವು. "ಬನಾನ್ ಮುಂ" ಎಂಬ ಗ್ರಾಮದಲ್ಲಿ ಶಿವನ ವಿಗ್ರಹವು ಕುಳಿತಂತಿದ್ದು, ಮೂರುನೇತ್ರಗಳಿಂದಲೂ, ತ್ರಿಶೂಲದಿಂದಲೂ ಯುಕ್ತವಾಗಿರುವುದು. "ಫ್ರಾನ್ ಛಾಯ್" ಎಂಬ ಗ್ರಾಮದಲ್ಲಿ ನಂದಿಯ ಮೇಲೆ ಕುಳಿತಿರುವ ಶಿವನ ಮೂರ್ತಿಯು ಪರಿಶೋಭಿಸುತ್ತಿರುವುದು. ಕೆಲವು ಸ್ಥಾನಗಳಲ್ಲಿ ತಾಂಡವೇಶ್ವರಮೂರ್ತಿಗಳು ವಿರಾಜಿಸುತ್ತಿರುವುವು. ಮನುಷ್ಯಾಕಾರವುಳ್ಳ ಶಿವನ ಮೂರ್ತಿಗಳಲ್ಲಿ ಕೆಲವು ಮೂರ್ತಿಗಳು ೨ ಕೈಗಳಿಂದಲೂ, ೪ ಕೈಗಳಿಂದಲೂ, ೬ ಕೈಗಳಿಂದಲೂ, ೧೦ ಕೈಗಳಿಂದಲೂ, ೨೪ ಕೈಗಳಿಂದಲೂ, ೩೪ ಕೈಗಳಿಂದಲೂ ಯುಕ್ತವಾಗಿರುವುವು. ಪ್ರತಿಯೊಂದು ಮೂರ್ತಿಯ ಹಣೆಯಲ್ಲಿ ಅಗ್ನಿನೇತ್ರವು ಶೋಭಿಸುತ್ತಿರುವುದಲ್ಲದೆ, ಮುಂಭಾಗದಲ್ಲಿ ನಂದೀಶ್ವರನ ವಿಗ್ರಹವು ವಿರಾಜಿಸುತ್ತಿರುವುದು. ಆ ದೇಶದ ಪ್ರತಿಯೊಂದು ಶಿವದೇವಾಲಯದೊಳಗೆ ಶಿವನ ಸಮ್ಮುಖದಲ್ಲಿ ನಂದೀಶ್ವರನ ಮೂರ್ತಿಗಳು, ನಮ್ಮ ದೇಶದ ಶಿವದೇವಾಲಯಗಳಲ್ಲಿ ಸ್ಥಾಪಿಸಲ್ಪಟ್ಟಿರುವಂತೆ ಸ್ಥಾಪಿಸಲ್ಪಟ್ಟಿರುವುವು. ಆ ನಂದೀಶ್ವರನ ಮೂರ್ತಿಗಳ ಪೀಠಗಳು ಬಹುಸುಂದರವಾದ ಚಿತ್ರಗಳಿಂದ ಯುಕ್ತವಾಗಿರುವುವಲ್ಲದೆ, ಆ ಮೂರ್ತಿಗಳ ಕುತ್ತಿಗೆಯ ಸುತ್ತಲೂ ಗಂಟೆಗಳ ಸರಗಳು ಕೆತ್ತಲ್ಪಟ್ಟಿರುವುವು.

ನಮ್ಮ ದೇಶದ ಅನೇಕ ದೊಡ್ಡ ದೊಡ್ಡ ಶಿವದೇವಾಲಯಗಳಲ್ಲಿ ಪಾರ್ವತೀದೇವಿಯ ವಿಗ್ರಹಗಳು ಸ್ಥಾಪಿಸಲ್ಪಟ್ಟಿರುವಂತೆ, ಆ ದೇಶದಲ್ಲಿಯೂ ದೇವಿಯ ವಿಗ್ರಹಗಳು ಸ್ಥಾಪಿಸಲ್ಪಟ್ಟಿರುವುವು. "ಪೋ-ನಗರ" ಎಂಬ ಗ್ರಾಮದಲ್ಲಿ "ಕೌಠಾರೇಶ್ವರಿ" ಎಂಬ ಹೆಸರಿನ ದೇವಿಯ ವಿಗ್ರಹವು ಸ್ಥಾಪಿಸಲ್ಪಟ್ಟಿರುವದು. ಈ ದೇವಿಯ ವಿಗ್ರಹವು ಅಲ್ಲಿ ಬಹುಪ್ರಾಚೀನಕಾಲದಿಂದ ವಿಶೇಷವೈಭವದೊಡನೆ ಮೆರೆಯುತ್ತಿರಲು, ಕಾಡುಜನರು ಆ ದೇವಾಲಯದೊಳಗೆ ನುಗ್ಗಿ ದೇವಿಯ ವಿಗ್ರಹವನ್ನು ಕಿತ್ತುಕೊಂಡುಹೋದರೆಂದೂ, ಇದರಿಂದ ದೇವಾಲಯವು ದೇವರಿಲ್ಲದೆ ಬಹುಕಾಲದ ವರೆಗೆ ಹಾಗೆಯೇ ಬಿದ್ದಿತ್ತೆಂದೂ, ಹರಿವರ್ಮಮಹಾರಾಜನು ಕ್ರಿ ಶ ೮೧೭ ರಲ್ಲಿ ನೂತನವಾಗಿ ದೇವಿಯ ವಿಗ್ರಹವನ್ನು ಸ್ಥಾಪಿಸಿ, ಆ ದೇವತೆಗೆ ಬೆಳ್ಳಿ ಬಂಗಾರದ ಪದಾರ್ಥಗಳನ್ನೂ, ಭೂಮಿಯನ್ನೂ ದಾಸದಾಸಿಯರನ್ನೂ ಸಮರ್ಪಿಸಿದನೆಂದೂ ೨೬ನೆಯ ಶಾಸನದಲ್ಲಿ ಉಕ್ತವಾಗಿದೆ. ಕ್ರಿ ಶ ೯೧೮ರಲ್ಲಿ ಇಂದ್ರವರ್ಮಮಹಾರಾಜನು ಈ ದೇವಿಯ ವಿಗ್ರಹವನ್ನು ಸುವರ್ಣದಿಂದ ನಿರ್ಮಿಸಿದನೆಂದು ೪೫ನೆಯ ಶಾಸನದಿಂದ ತಿಳಿದುಬರುತ್ತದೆ

> ವ್ಯೋಮಾಂಗರಾಶಿಶಶಿಗೇ ಶಕರಾಜಕಾಲೇ |
> ದೇವೀಮಿಮಾಂ ಭಗವತೀಂ ಕಲಧೌತದೇಹಾಂ |
> ವಿಶಾದಕೀಶಸಿ ಶುಭೇಪಿಸಿಕೇರ್ತನಾದೀ |
> ಕೋಶಿಷ್ಠಪಟ್ಟವನಮಂಡಲಕೀರ್ತಿಕಾಂಕ್ಷೀ |

ಈ ದೇವಿಯ ಸುವರ್ಣವಿಗ್ರಹವು ಶಕ ೮೪೦ ಜ್ಯೇಷ್ಠ ಕೃಷ್ಣಪಕ್ಷ ಏಕಾದಶೀ ಭಾನುವಾರ ದಿವಸ ಸ್ಥಾಪಿಸಲ್ಪಟ್ಟಿತೆಂದು ಈ ಶ್ಲೋಕದ ಅಭಿಪ್ರಾಯವಿರುತ್ತದೆ. ಕೆಲವು ದಿನಗಳು ಕಳೆದಮೇಲೆ ಸುವರ್ಣದಿಂದ ನಿರ್ಮಿತವಾಗಿದ್ದ ಈ ದೇವಿಯ ವಿಗ್ರಹವನ್ನು ಕಾಂಬೋಡಿಯಾದೇಶದ ಜನರು ದ್ರವ್ಯಾಶೆಯಿಂದ ಕಿತ್ತುಕೊಂಡುಹೋದರೆಂದೂ, ಜಯ ಇಂದ್ರವರ್ಮಮಹಾರಾಜನು ಪುನಃ ಆ ಸ್ಥಾನದಲ್ಲಿ ಶಿಲೆಯಿಂದ ನಿರ್ಮಿಸಿದ ದೇವಿಯನ್ನು ಸ್ಥಾಪಿಸಿದನೆಂದೂ ೪೬ ನೆಯ ಶಾಸನದಿಂದ ತಿಳಿದುಬರುತ್ತದೆ. ಕ್ರಿ. ಶ. ೧೦೫೦ ರಲ್ಲಿ ಪರಮೇಶ್ವರವರ್ಮನೆಂಬ ಮಹಾರಾಜನು ಈ ದೇವಿಗೆ ರತ್ನಗಳಿಂದ ಅಲಂಕೃತವಾದ ಕಿರೀಟವನ್ನೂ, ಬೆಳ್ಳಿಯ ಪ್ರಭಾವಳಿಯನ್ನೂ, ನವಿಲುಗರಿಗಳಂತಿರುವ ಛತ್ರಿಯನ್ನೂ, ಬೆಳ್ಳಿ ಬಂಗಾರದ ಸಾಮಾನುಗಳನ್ನೂ ಸಮರ್ಪಿಸಿದನೆಂದು ೫೫ ನೆಯ ಶಾಸನದಿಂದ ತಿಳಿದುಬರುತ್ತದೆ. ಈ ಶಾಸನದ ಮೊದಲನೆಯ ಶ್ಲೋಕವು ದೇವಿಯ ಸ್ತೋತ್ರರೂಪವಾಗಿದ್ದು, ಎರಡನೆಯ ಶ್ಲೋಕವು ಪರಮೇಶ್ವರವರ್ಮಮಹಾರಾಜನ ವರ್ಣನಾತ್ಮಕವಾಗಿರುವುದು. ಈ ಶ್ಲೋಕಗಳು ಎಷ್ಟು ಮನೋಹರವಾಗಿ ರಚಿಸಲ್ಪಟ್ಟಿರುವುವೆಂಬುವನ್ನು ಪ್ರತಿಯೊಬ್ಬರೂ ಕೇಳಿ ಸಂತೋಷಿಸಬೇಕಾಗಿದೆ.

೫೫ ನೆಯ ಶಾಸನದಲ್ಲಿ—

> ಭೂತಾಭೂತೇಶಭೂತಾ ಭುವಿ ಭವವಿಭವೋದ್ಭವಭೂತಾತ್ಮ
> ಭೂತಾಭಾವಾಭಾವಸ್ಥಭಾವಾ ಭವಭವದಭವಾಭವಾಭಾವೈಕಭಾವಾ |
> ಭಾವಾಭಾವಾಗ್ರಶಕ್ತಿಃ ಶಿವಸಕಟಿತನೋಃ ಸರ್ವಶೌಭಾಸು ಸು
> ಯಾ ಶಾ ಶಾಶ್ವತೀ ಶಾಯಿತೇಶಾಯಾ ಭಗವತಿ ನಮತೋ ನೋ
> ಜಗೆ ದೇಶಸಿದ್ಧ್ಯೈ ||೧||
>
> ಸಾರಾಸಾರವಿನೀಚನಸ್ಫುಟಮನಾ ಮಾನ್ಯೋ ಮನೋಜಂದ
> ಸಾ ಸಾಸಾಸಾಪಭಯಸ್ಥಿತಃ ಪ್ರಿಯಕರಃ ಕೀರ್ತ್ಯಾಜ್ಞಯಾ ಸೈಕೋ
> ಸ್ಯವಃ | ಲೋಕಾಲೋಕಿಕಲಾ ಕಲಾ ಸತಿ ಸತತ್ತ್ವಂ ತುಂ ಭವದ್ಭ್ಯಾ
> ವಿನೋ ಭಾಸ್ವೋಪ್ಯಾವಸುಭಾನಸದ್ಗುಣಗಣ್ಯೈರ್ಧರ್ಮರ್ಮ ತನೋ
> ತ್ಯೇವ ಯಃ ||೨||

ಈ ಶ್ಲೋಕಗಳಲ್ಲಿರುವ ಪ್ರಾಸವನ್ನೂ, ಪದಲಾಲಿತ್ಯವನ್ನೂ, ಅರ್ಥಗಾಂಭೀರ್ಯವನ್ನೂ ಪರಿಶೀಲಿಸಿದರೆ, ಆಗಿನ ಕಾಲದ ಮಹಾರಾಜರ ಆಸ್ಥಾನದಲ್ಲಿ ಮಹಾಮಹಾ ಪಂಡಿತರಿದ್ದರೆಂದು ಕಂಡುಬರುತ್ತದೆ. ಕ್ರಿ. ಶ. ೧೧೬೭ ರಲ್ಲಿ ೬ ನೆಯ ಜಯಇಂದ್ರವರ್ಮನೆಂಬ ಮಹಾರಾಜನು ಪರಮೇಶ್ವರಿ ಮತ್ತು ರಯಾ ಎಂಬ ರಾಣಿಯರಿಂದಲೂ, ಭಾಗ್ಯವತಿ, ಸುಪುತ್ರಾ, ಸುದಕ್ಷಿಣಾ ಎಂಬ ಪುತ್ರಿಯರಿಂದಲೂ ಯುಕ್ತನಾಗಿ, ಕೌಠಾರೇಶ್ವರೀದೇವಿಗೆ ಅಮೂಲ್ಯವಾದ ಕಾಣಿಕೆಗಳನ್ನು ಸಮರ್ಪಿಸಿದನೆಂದು ೮೦ ನೆಯ ಶಾಸನದಿಂದ ತಿಳಿದುಬರುತ್ತದೆ. ಇದೇರೀತಿಯಾಗಿ ಅನೇಕಜನ ಮಹಾರಾಜರು ಈ ದೇವಿಯಲ್ಲಿ ನಿರುಪಮವಾದ ಭಕ್ತಿಯನ್ನಿಟ್ಟು ಸೇವಿಸಿರುವ ವಿಷಯವು ೯೭-೯೮-೯೯-೧೦೫-೧೧೯ ನೆಯ ಶಾಸನಗಳಿಂದ ತಿಳಿದುಬರುತ್ತದೆ.

ಯುದ್ಧವಾರ್ತೆ.

ಜಪಾನಿಗೆ ಜರ್ಮನ್ ಶಸ್ತ್ರಾಸ್ತ್ರಗಳು

ನ್ಯೂಯಾರ್ಕ್ ವರದಿಯಂತೆ ಜಪಾನರು ಉಪಯೋಗಿಸುತ್ತಿರುವ ವಿಶೇಷವಾದ ಶಸ್ತ್ರಾಸ್ತ್ರಗಳೂ ಬಾಂಬುಗಳೂ ಜರ್ಮನಿಯಲ್ಲಿ ತಯಾರಾದುವೆಂದು ಗೊತ್ತಾಗುತ್ತದೆ.

ಕಲ್ಕತ್ತಾನಗರದಲ್ಲಿ ವಿಮಾನದಾಳಿ ಎಚ್ಚರಿಕೆ

ಈ ತಿಂಗಳು 3 ನೆಯ ತಾರೀಖಿನ ದಿವಸ ಕಲ್ಕತ್ತಾ ನಗರದಲ್ಲಿ ಶತ್ರುಗಳ ವಿಮಾನ ದಾಳಿಯು ನಡೆಯಬಹುದೆಂದು ಭಾವಿಸಿ ಎಚ್ಚರಿಕೆಯನ್ನು ಕೊಟ್ಟರೆಂದೂ, ಆದರೆ ವಿಮಾನ ದಾಳಿಯು ನಡೆಯಲಿಲ್ಲವೆಂದೂ ಬಂಗಾಲ ಸರಕಾರದವರು ಪ್ರಕಟಿಸಿದ್ದಾರೆ

ತುರ್ಕಿಗೆ ನಾಜಿ ಷರತ್ತುಗಳು

ಜರ್ಮನಿಯು ತುರ್ಕಿಗೆ ಈ ಕೆಳಗೆ ಕಂಡ ಷರತ್ತುಗಳನ್ನು ಕಳುಹಿಸಿದೆಯಂತೆ! 1 ತುರ್ಕಿಯು ಬ್ರಿಟನ್ನಿನೊಡನೆ ಸಹಕರಿಸುವದನ್ನು ಬಿಟ್ಟು ಆಕ್ಸಿಸ್ ರಾಷ್ಟ್ರಗಳು ಯೂರೋಪಿನಲ್ಲಿ ಸ್ಥಾಪಿಸಲಿರುವ ಹೊಸ ವ್ಯವಸ್ಥೆಯೊಂದಿಗೆ ಸಹಕರಿಸಬೇಕು. 2 ಇಂಗ್ಲೆಂಡ್ ತುರ್ಕಿ ಸಂಬಂಧವನ್ನು ಕ್ರಮಶಃ ತ್ಯಜಿಸಬೇಕೆಂದು ಕೇಳುವದಿಲ್ಲ 3 ಡಾರ್ಡನೆಲ್ಸ್ ಜಲಸಂಧಿಯಲ್ಲಿ ನಾಜಿ ಮತ್ತು ಇಟಲಿ ಸಂಗ್ರಾಮ ನೌಕೆಗಳು ಹೋಗಲು ಅವಕಾಶ ಕೊಡಬೇಕು. ಆದರೆ ತುರ್ಕಿ ಭೂಮಿಯಲ್ಲಿ ಯುದ್ಧ ನಡೆಸುವದಿಲ್ಲವೆಂದು ಭರವಸೆಕೊಡಲಾಗುತ್ತದೆ. ಯುದ್ಧಮುಗಿದ ಮೇಲೆ ಹಲವು ಗ್ರೀಕ್ ದ್ವೀಪಗಳನ್ನೂ ಗ್ರೀಕ್ ಮೂಲ ಭೂಮಿಯಲ್ಲಿ ಹಲವು ಪ್ರದೇಶಗಳನ್ನೂ ತುರ್ಕಿಗೆ ಬಿಟ್ಟುಕೊಡುವದಾಗಿ ಭರವಸೆ ಕೊಡುವದೆಂದು ಹೇಳಲಾಗಿದೆ.

ಜಪಾನರು ಪಶ್ಚಿಮ ಆಸ್ಟ್ರೇಲಿಯದ ಮೇಲೆ ಬೀಳಬಹುದು

ಜಪಾನಿನವರು ಕಳೆದ ಅರ್ಧ ಶತಮಾನದಿಂದಲೂ ಆಸ್ಟ್ರೇಲಿಯದ ಪಶ್ಚಿಮ ತೀರದಲ್ಲಿ ಸಮುದ್ರದಿಂದ ಮುತ್ತುಗಳನ್ನು ತೆಗೆಯುವ ಕಾರ್ಯದಲ್ಲಿ ಉದ್ಯುಕ್ತರಾಗಿರುವುದರಿಂದ ಈ ತೀರದ ರೂಪು ರೇಖೆಗಳೆಲ್ಲವನ್ನೂ ಅವರು ಚೆನ್ನಾಗಿ ತಿಳಿದವರಾಗಿದ್ದಾರೆ. ಆದ್ದರಿಂದ ಅವರು ಈ ತೀರದಲ್ಲಿ ತಮ್ಮ ಅತಿಕ್ರಮಣ ಕಾರ್ಯಗಳನ್ನು ಪ್ರಾರಂಭಿಸಬಹುದೆಂದು ಕೆಲವು ಮಂದಿ ಸೇನಾನಿಗಳು ನಿರೀಕ್ಷಿಸಿದ್ದಾರೆ. ಏಪ್ರಿಲ್ ತಿಂಗಳಿನ ಪ್ರಾರಂಭದಲ್ಲಿ ಈ ರೀತಿ ಅಕ್ರಮಣ ಕಾರ್ಯಗಳಿಗೆ ಬಹಳ ಅನುಕೂಲ ಉಂಟೆಂಬುದು ಸಹ ಜಪಾನರಿಗೆ ತಿಳಿದಿದೆಯೆಂದೂ ಈ ಪ್ರದೇಶದಲ್ಲಿ ಅಲ್ಬೆನಿ ಮತ್ತು ಫ್ರೀಮಾಂಟಲ್ ಎಂಬ ಎರಡು ಮುಖ್ಯ ಬಂದರುಗಳನ್ನು ಸ್ವಾಧೀನಪಡಿಸಿಕೊಳ್ಳುವುದೇ ಜಪಾನರ ಉದ್ದೇಶವಾಗಿದೆಯೆಂದೂ ಈ ಬಂದರುಗಳನ್ನು ಹಿಡಿದುಕೊಳ್ಳುವುದರಿಂದ ಜಪಾನರಿಗೆ ಹಿಂದೂಸಾಗರದ ಪೂರ್ವ ಮತ್ತು ಆಗ್ನೇಯ ಭಾಗಗಳಮೇಲೆ ಸಂಪೂರ್ಣವಾದ ಹತೋಟಿ ಸಿಕ್ಕುವುದೆಂದೂ ಹೇಳಲಾಗಿದೆ.

ಸರ್ ಕ್ರಿಪ್ಸರ ಪ್ರಯಾಣ ಮುಂದೆ ಹಾಕಲಾಗಿದೆ.

ಭಾರತಕ್ಕೆ ಬ್ರಿಟಿಷ್ ಪಾರ್ಲಿಮೆಂಟಿನ ಸಲಹೆಗಳನ್ನು ತಂದ ಸರ್ ಕ್ರಿಪ್ಸ್‌ರವರು ಭಾರತದ ಮುಖಂಡರೊಡನೆ ಕಲೆತು ಮಾತನಾಡಿದರಷ್ಟೆ. ಅವರು ಈ ಸೋಮವಾರ ಭಾರತವನ್ನು ಬಿಟ್ಟು ಸ್ವದೇಶಕ್ಕೆ ಪ್ರಯಾಣಮಾಡುವುದಾಗಿ ನಿಶ್ಚಯಿಸಿದ್ದರು. ಆದರೆ ಈವರೆಗೂ ಭಾರತದ ಮುಖಂಡರುಗಳಿಂದ ಅವರು ಯೋಚಿಸಿದ್ದಂತೆ ಯಾವ ಅನುಕೂಲವಾದ ರೀತಿಯು ಕಾಣದ್ದರಿಂದಲೂ, ಈ ವಾರದಲ್ಲಿ ಅಲ್ಲಲ್ಲೇ ಮುಖಂಡರು ಕೂಡಿ ವಿಮರ್ಶಿಸಿ ಒಂದು ವಿಧವಾದ ತೀರ್ಮಾನಕ್ಕೆ ಬರಬಹುದೆಂಬ

ನಿರೀಕ್ಷೆ ಇರುವದರಿಂದಲೂ ಅವರು ತಮ್ಮ ಪ್ರಯಾಣವನ್ನು ಮುಂದುವರಿಸಿದರೆಂದು ತಿಳಿದುಬರುತ್ತದೆ.

ಕಾಂಗ್ರೆಸ್ಸಿನ ತೀರ್ಮಾನ

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದ ಮೌ|| ಅಬ್ದುಲ್ ಕಲಾಂ ಅಜಾದ್‌ರವರೂ ಪಂ|| ಜವಾಹರಲಾಲ್ ನೆಹರೂರವರೂ ಕಾಂಗ್ರೆಸ್ ಕಾರ್ಯಕಾರಿಸಮಿತಿಯ ನಿರ್ಧಾರವನ್ನು ನಿರ್ಣಯ ರೂಪದಲ್ಲಿ ಸರ್ ಕ್ರಿಪ್ಸರಿಗೆ ಒಪ್ಪಿಸಿದರು. ಈ ನಿರ್ಣಯವನ್ನು ಈಗಲೇ ಬಹಿರಂಗಪಡಿಸುವುದಿಲ್ಲ. ಭಾರತೀಯರು ಬ್ರಿಟಿಷರ ಈ ಸಲಹೆಗಳನ್ನು ಅಂಗೀಕರಿಸಬಾರದೆಂದು ಈ ನಿರ್ಣಯದಲ್ಲಿ ಸೂಚಿಸಲಾಗಿದೆಯೆಂದು ಹೇಳಲಾಗಿದೆ.

ಹಿಂದೂ ಮಹಾಸಭೆಯ ನಿರ್ಣಯ

ಭರತಖಂಡವನ್ನು ರಾಜಕೀಯ ರೀತಿಗಳಲ್ಲಿ ಛಿದ್ರಗೊಳಿಸುವ ಯಾವ ಸಲಹೆಗಳನ್ನೂ ತಾವು ಒಪ್ಪುವುದಿಲ್ಲವೆಂದು ಸೂಚಿಸಿ ಅಖಿಲ ಭಾರತ ಹಿಂದೂ ಮಹಾಸಭೆಯವರು ಕ್ರಿಪ್ಸರ ಸಲಹೆಗಳನ್ನು ನಿರಾಕರಿಸಿದ್ದಾರೆ ಮುಖ್ಯವಾಗಿ ಭರತಖಂಡದ ರಕ್ಷಣೆಯ ವಿಷಯದಲ್ಲಿ ಈ ಯೋಜನೆಯು ಅಂಗೀಕಾರಾರ್ಹವಾಗಿಲ್ಲವೆಂದು ಈ ಸಭೆಯವರು ನಿರ್ಣಯಿಸಿದ್ದಾರೆ.

ಪೋಸ್ಟ್ ಇಲಾಖೆಯ ೧೯೪೧ನೇ ವರ್ಷದ ವರದಿ

೧೯೪೦–೪೧ನೇ ವರ್ಷದ ಇಂಡಿಯಾ ಸರ್ಕಾರದ ಅಂಚೆ ಮತ್ತು ತಂತಿ ಶಾಖೆಯ ವರದಿಯು ಈಗ ಹೊರಬಿದ್ದಿದೆ ಇಂಡಿಯಾ ದೇಶದಲ್ಲೆಲ್ಲಾ ಒಟ್ಟು ೨೫,೩೩೮ ಪೋಸ್ಟಾಫೀಸುಗಳಿರುವುವು ಇವುಗಳಲ್ಲಿ ಒಟ್ಟು ೧,೨೧,೦೦೨ ಜನರು ಕೆಲಸಮಾಡುತ್ತಿರುವರು ಈ ಶಾಖೆಯಲ್ಲಿ ನಡೆದ ಒಟ್ಟು ವಹಿವಾಟವು ೨೯೦ ಕೋಟಿ ರೂಪಾಯಿಗಳು. ೩ ಕೋಟಿ ೯೦ ಲಕ್ಷ ರಿಜಿಸ್ಟರಾದ ಕಾಗದಗಳನ್ನೂ ೨೬ ಲಕ್ಷ ಇನ್ಷೂರ್ ಕವರುಗಳನ್ನೂ ಈ ವರ್ಷ ರವಾನಿಸಲಾಯಿತು. ೪ ಕೋಟಿ ೩೦ ಲಕ್ಷ ಮನಿಯಾರ್ಡರುಗಳನ್ನು ಸಾಗಿಸಲಾಯಿತು. ಇವುಗಳ ಬೆಲೆ ೭೦೪ ಕೋಟಿ ರೂಪಾಯಿಗಳು ೧ ಕೋಟಿ ೯೦ ಲಕ್ಷ ಟೆಲಿಗ್ರಾಮುಗಳನ್ನು ಸಾಗಿಸಲಾಯಿತು.

೧೯೪೦-೪೧ನೇ ವರ್ಷದಲ್ಲಿ ನಡೆದ ಅಂಚೆ ವ್ಯಾಪಾರವು ೧೯೩೯-೪೦ನೇ ವರ್ಷದಲ್ಲಿ ನಡೆದ ವ್ಯಾಪಾರಕ್ಕಿಂತ ಎಲ್ಲಾ ಭಾಗಗಳಲ್ಲಿಯೂ ಹೆಚ್ಚು. ಅಂಚೆ ಮತ್ತು ತಂತೀ ಶಾಖೆಯ ೧೯೪೦-೪೧ನೇ ವರ್ಷದ ಉಳಿತಾಯವು ೧೨೪೪೭೦೩೫೨ರೂಗಳು ಇಷ್ಟು ಉಳಿತಾಯವು ಹಿಂದೆ ಯಾವ ವರ್ಷವೂ ಆಗಿರಲಿಲ್ಲ.

ಅಂಚೆ ಮತ್ತು ತಂತೀಶಾಖೆಯ ಒಟ್ಟು ಆದಾಯ ೧೩೨೮೨೬೦೦೦ ರೂಗಳು. ೧೯೩೯-೪೦ರಲ್ಲಿ ಒಟ್ಟು ಆದಾಯವು ೧೨೪೪೫೨೦೦೦ ರೂ. ಗಳು.

ಮೈಸೂರು ಸಂಸ್ಥಾನದ ಹೊರಗಡೆ ಯಾವ ಪ್ರದೇಶಕ್ಕೂ ಆಯಾ ಜಿಲ್ಲಾ ಮ್ಯಾಜಿಸ್ಟ್ರೇಟರ ಅನುಮತಿ ಇಲ್ಲದೆ ಅಕ್ಕಿ, ರಾಗಿ ಮತ್ತು ಜೋಳವನ್ನು ಯಾರೂ ರಫ್ತು ಮಾಡಕೂಡದೆಂದು ಸರ್ಕಾರದವರು ಆಜ್ಞೆಮಾಡಿದ್ದಾರೆ. ಮತ್ತು ಅಕ್ಕಿ-ರಾಗಿ-ಜೋಳ ಯಾರ್‍ಯಾರಲ್ಲಿ ಎಷ್ಟೆಷ್ಟು ಅವೆ ಎಂಬುದನ್ನು ಅಧಿಕಾರಿಗಳಿಗೆ ತಿಳಿಸಬೇಕೆಂದು ಆಜ್ಞೆ ಹೊರಡಿಸಿದ್ದಾರೆ. ಈ ಆಜ್ಞೆಗಳಿಂದ ಆಹಾರ ವಿಷಯಕವಾದ ಹಾಹಾಕಾರವು ತಪ್ಪಿ ಬಡಬಗ್ಗರಿಗೆ ಅನುಕೂಲವಾಗುವುದೆಂದು ಭಾವಿಸಲಾಗಿದೆ.

ಬರ್ಮ, ಮಲಯ, ಸಿಂಗಪುರ ಮತ್ತು ದೂರಪ್ರಾಚ್ಯಗಳಿಂದ ಮೈಸೂರು ಸಂಸ್ಥಾನಕ್ಕೆ ೧೯೪೨ನೇ ಫೆಬ್ರವರಿ ತಾ|| ೧ರಿಂದ ಈಚೆಗೆ ಬಂದು ನೆಲಸಿರುವವರು ಪೋಸ್ಟ್ ಮೂಲಕವಾಗಲಿ ಅಥವಾ ಖುದ್ದಾಗಿಯಾಗಲಿ ತಮ್ಮ ಹೆಸರು, ಹಿಂದೆ ಯಾವ ಊರಿನಲ್ಲಿದ್ದದ್ದು, ಊರು ಬಿಟ್ಟು ಬರುವುದಕ್ಕಿಂತ ಮುಂಚೆ ಯಾವ ಉದ್ಯೋಗದಲ್ಲಿದ್ದದ್ದು, ಇಲ್ಲಿರುವ ನಂಟರ ಅಥವಾ ಸ್ನೇಹಿತರ ಹೆಸರು ಇತ್ಯಾದಿಗಳನ್ನು ತಿಳಿಸಿ ಕೂಡಲೆ ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ಸರ್ಕಾರದ ಆಜ್ಞೆಯಾಗಿದೆ.

ಮೈಸೂರು ರಿಕ್ರೂಟಿಂಗ್ ಆಫೀಸರರಾದ
ಶ್ರೀ ಜೆ. ಬಿ. ಮಲ್ಲಾರಾಧ್ಯರವರು
ಆಕಾಶವಾಣೀರೂಪದಿಂದಿತ್ತ
ಸಮರ ಸಂದೇಶದ ಸಾರ

“ಈಗಿನ ಯುದ್ಧ ಪರಿಸ್ಥಿತಿಯನ್ನು ಚಿತ್ರಿಸಿಕೊಂಡರೆ ನಮ್ಮ ಭರತಖಂಡಕ್ಕೆ ಎಂಥ ಅಪಾಯ ಸನ್ನಿಹಿತವಾಗಿದೆಯೆಂದು ಮನವರಿಕೆಯಾಗುತ್ತದೆ. ಇಂಥ ಸಮಯದಲ್ಲಿ ನಾವು ಧೈರ್ಯಗೆಡಬಾರದು, ಎದೆಗುಂದಬಾರದು, ಅನವಶ್ಯಕವಾದ, ನಿರಾಧಾರವಾದ ತಪ್ಪು ಅಭಿಪ್ರಾಯಗಳಿಗೆ, ಸುಳ್ಳು ವರ್ತಮಾನಗಳಿಗೆ ಕಿವಿಗೊಡಬಾರದು. ಈಗ ಮೊಳಗುತ್ತಿರುವ ರಣಕಹಳೆಯು ನಮ್ಮ ಹೃದಯದಲ್ಲಿ ಪ್ರತಿಧ್ವನಿ ಮಾಡುತ್ತಿದೆ ಅದು ನಮ್ಮ ಹಿರಿಯರ ಪೌರುಷ ಪ್ರತಾಪಗಳನ್ನು ನೆನಪಿಗೆ ತರುತ್ತಿದೆ ನಮ್ಮ ತಾರುಣ್ಯದ ರಕ್ತವನ್ನು ಬಿಸಿಯೇರಿಸುತ್ತಿದೆ. ನಮ್ಮ ಹಿರಿಯರು ಪ್ರಚಂಡ ಪರಾಕ್ರಮಿಗಳು ಯುದ್ಧವೆಂದರೆ ಅವರು ಮೈಯುಬ್ಬಿ ಮುನ್ನುಗ್ಗುತ್ತಿದ್ದರು. ರಣರಂಗದಲ್ಲಿ ಅವರು ಪ್ರಳಯರುದ್ರನಂತೆ ಹೋರಾಡುತ್ತಿದ್ದರು ಅವರು ರಣಹೇಡಿಗಳಾಗಿರಲಿಲ್ಲ, ಜೀವಗಳ್ಳರಾಗಿರಲಿಲ್ಲ ಸ್ವದೇಶ ರಕ್ಷಣೆಗಾಗಿ, ಸ್ವಾತಂತ್ರ್ಯಪಾಲನೆಗಾಗಿ, ಆತ್ಮಗೌರವಕ್ಕಾಗಿ ಪ್ರಾಣಾರ್ಪಣ ಮಾಡಿರುತ್ತಾರೆ ಅಂಥ ಮೇಲ್ಮೆಯನ್ನು ಗಳಿಸಿದ ಕನ್ನಡನಾಡಿನ ವೀರಪುತ್ರರಾದ ನಾವು ಹೇಡಿಗಳಂತೆ ಹೆದರಿ ನಿಲ್ಲಬಹುದೇ ? ಸಿಂಹದ ಹೊಟ್ಟೆಯಲ್ಲಿ ಸಿಂಹವೇ ಹುಟ್ಟುವುದಲ್ಲದೆ ಬಡನರಿಯು ಹುಟ್ಟುವುದೇ ? ಯುದ್ಧವೆಂಬುದು ನಮಗೇನೂ ಹೊಸದಲ್ಲ. ಇಂಥ ರಣಕಹಳೆಯು ಹಿಂದೆ ಎಷ್ಟೋ ಸಲ ಭರತಖಂಡದಲ್ಲಿ ಮೊಳಗಿರುತ್ತದೆ. ಹಿಮಾಲಯದ ಕುಹರಗಳಲ್ಲಿ ಧ್ವನಿ ಮಾಡಿದೆ. ರಾಮಸೇತುವಿನ ತರಂಗಗಳಲ್ಲಿ ಭೋರ್ಗರೆದಿರುತ್ತದೆ. ಈಗ ಪ್ರಾಪ್ತವಾಗಿರುವ ಯುದ್ಧವಾದರೂ ನಮ್ಮ ಆತ್ಮಶಕ್ತಿಯನ್ನು ಉಪಯೋಗಿಸಲು ಸದವಕಾಶವನ್ನು ಕಲ್ಪಿಸಿದೆ. ಇದಕ್ಕಾಗಿ ನಾವು ಎಳ್ಳಷ್ಟೂ ಭೀತರಾಗಬೇಕಾಗಿಲ್ಲ. ಅಂಜುಬುರುಕರಾಗಿ ಹಿಂಜರಿದು ನಿಂತು ಹೇಡಿಗಳೆನಿಸಿಕೊಳ್ಳಬಾರದು ಹಿಂದೂ ಧರ್ಮವೇ ಕ್ಷಾತ್ರತೇಜೋಮಯವಾದುದು ಅದು ಶುಷ್ಕ ವೇದಾಂತ ಧರ್ಮವಲ್ಲ” ಎಂದು ನುಡಿದು ಹಿಂದಿನ ರಣಪರಾಕ್ರಮಿಗಳ ಉದಾಹರಣೆಗಳನ್ನಿತ್ತರು.

ತಾಯಿನಾಡಿನ ಸೇವೆಗಾಗಿ ಸ್ವರ್ಗಸುಖವನ್ನಾದರೂ ತ್ಯಾಗಮಾಡಬೇಕು ; ಸ್ವದೇಶಾಭಿಮಾನದಿಂದ, ಸ್ವಾತಂತ್ರ್ಯ ಪ್ರೇಮದಿಂದ ಮೈಯುಬ್ಬಿ ಶತ್ರುವಿಧ್ವಂಸನಕಾರ್ಯದಲ್ಲಿ ತೊಡಗಬೇಕು , ಮೈಸೂರಿನ ತರುಣರು ತಮ್ಮ ರಕ್ತನಾಳಗಳಲ್ಲಿ ಒಂದು ತೊಟ್ಟು ರಕ್ತವಿರುವವರೆಗೂ ಸ್ವಾತಂತ್ರ್ಯವನ್ನು ನೀಗಿಕೊಳ್ಳುವರಲ್ಲವೆಂಬ ವೀರ ಪ್ರತಿಜ್ಞೆಯನ್ನು ತೊಡಬೇಕು ; ಸ್ವಾತಂತ್ರ್ಯ ರಕ್ಷಣೆಗಾಗಿ ಯುದ್ಧಭೂಮಿಗೆ ವೀರರಂತೆ ನುಗ್ಗಿ ಕಲಿಯಂತೆ ಕಾದಾಡಬೇಕು. ಸ್ವಾತಂತ್ರ್ಯವನ್ನು ನೀಗಿಕೊಳ್ಳಬಾರದು ಸ್ವಾತಂತ್ರ್ಯಹೋದಮೇಲೆ ಏನಿದ್ದರೇನು, ಏನಿಲ್ಲದಿದ್ದರೇನು ? ನಿಜವಾದ ವೈರಾಗ್ಯ ಬುದ್ಧಿಯಿಂದ ಪ್ರಪಂಚ ಪರ್ಯಟನಮಾಡಿ ಧರ್ಮಬೋಧೆ ಮಾಡುತ್ತಿದ್ದ ಪುರಂದರದಾಸರಂಥವರೂ ಸಹ, “ಗುಂಡಿಗೆಂಜುವ ಭಂಟ ಒಡಕುಹರಿವೆಯ ಕಂಟೆ” ಎಂದು ಸಾರಿದ್ದಾರೆ ಈ ಮಾತಿನಲ್ಲಿ ಲೌಕಿಕದೃಷ್ಟಿಯಿಂದ ಮಹಾತತ್ವವು ಅಡಗಿರುವದು

“ರಾಜಾ ಪ್ರತ್ಯಕ್ಷದೇವತಾ” ಎಂಬುದಾಗಿ ಶಾಸ್ತ್ರಗಳು ಸಾರುತ್ತಿವೆ ಇದನ್ನು ಆಸ್ತಿಕರಾದ ನಾವೆಲ್ಲರೂ ಒಪ್ಪುತ್ತೇವೆ ರಾಜಸೇವೆಯೇ ರಾಷ್ಟ್ರಸೇವೆ, ಈಶ್ವರಸೇವೆ ನಮ್ಮ ರಾಜಭಕ್ತಿ ಅವಿಚ್ಛಿನ್ನವಾದುದು. ರಾಜನಿಷ್ಠಾಗರಿಷ್ಠರಾದ ನಾವು ನಮ್ಮ ಮಹಾರಾಜರ ಪ್ರೇಮದ ಪ್ರಜೆಗಳು. ಅವರ ಮನಸ್ಸಿಗೆ ಯಾವುದು ಸಂತೋಷವನ್ನುಂಟುಮಾಡುತ್ತದೆಯೋ ಅಂಥ ಕಾರ್ಯವನ್ನು ನಾವು ಮಾಡಿ ಅವರ ಮನಸ್ಸನ್ನು ಸಂತೋಷಪಡಿಸಬೇಕು. ಅದೇ ನಮ್ಮ ಪರಮ ಪವಿತ್ರ ಕರ್ತವ್ಯ. ಮೈಸೂರಿನ ಸೈನ್ಯಸಮೂಹಕ್ಕೆ ಸೈನಿಕರನ್ನು ಸೇರಿಸುವ ಕಾರ್ಯದಲ್ಲಾಗಲಿ, ಸೈನಿಕರಾಗಿ ಸೇರುವ ವಿಷಯದಲ್ಲಾಗಲಿ ರಾಜಕೀಯ ಸಮಸ್ಯೆ ಏನಿದೆ ? ರಾಜಕೀಯ ತೊಡಕುಗಳ ಪ್ರವೇಶಕ್ಕೆ ಅವಕಾಶವೆಲ್ಲಿದೆ ? ರಾಷ್ಟ್ರಜೀವನದಲ್ಲಿ, ಸಂಸ್ಥಾನದ ಆಗುಹೋಗುಗಳಲ್ಲಿ, ನಮ್ಮ ಶ್ರೇಯಶ್ಚಿಂತೆಯ ಕಾರ್ಯದಲ್ಲಿ, ನಮ್ಮ ಪ್ರಭುಗಳು ಏಕನಾಯಕರಲ್ಲವೇ ? ಅವರ ಛಾಯಾನುವರ್ತಿಗಳಾದ ಪತ್ರಸಮುದಾಯಕ್ಕೆ ಸೇರಿದ ನಮ್ಮೆಲ್ಲರ ಕರ್ತವ್ಯವಾದರೂ ಏನು ? ನಮ್ಮ ಏಕಮಾತ್ರ ನಾಯಕರ ಆಜ್ಞೆಯನ್ನು ಶಿರಸಾವಹಿಸಿ, ನಮ್ಮ ರಾಜ್ಯರಕ್ಷಣೆಯ ವ್ಯವಸ್ಥೆಯನ್ನು ರೂಪುಗೊಳಿಸುವುದಲ್ಲವೆ ?

ಇಂದಿನ ಘೋರ ಯುದ್ಧದ ದೆಸೆಯಿಂದ ನಮ್ಮ ನಮ್ಮಲ್ಲಿರುವ ಭೇದಭಾವನೆಗಳು ತೊಲಗಿ ನಮ್ಮಲ್ಲಿ ಒಗ್ಗಟ್ಟು ಆಗುವುದು ನಿಜ. ಪ್ರತಿಯೊಬ್ಬ ಭಾರತೀಯನೂ ಇನ್ನುಮುಂದಾದರೂ ಸಮರ ಶಿಕ್ಷಣವನ್ನು ಪಡೆದು ಒಂದು ಕ್ಲಿಪ್ತ ಕಾಲದವರೆಗೆ ಯುದ್ಧ ಜೀವನದಲ್ಲಿ ತೊಡಗಿರಬೇಕು. ಅವಕಾಶ ಒದಗಿದಾಗ ಯುದ್ಧರಂಗಕ್ಕೆ ಪ್ರತಿಯೊಬ್ಬರೂ ಧಾವಿಸಿ ಬರಬೇಕು ಆ ಮನಃ ಪ್ರವೃತ್ತಿಯನ್ನು ನಾವು ಇಂದಿನಿಂದಲೇ ಗಳಿಸಬೇಕು. ಇಂದಲ್ಲ ಮುಂದೆಯಾದರೂ, ಈ ವಿಷಯವು ಬಲಾತ್ಕಾರವಾಗಿ ನೆರವೇರಲೇ ಬೇಕಾಗುವುದು ಆಗ ಮೈಸೂರು ರಾಜ್ಯದಲ್ಲಿ ನಮ್ಮ ರಾಷ್ಟ್ರಗೌರವಕ್ಕೆ ಅನುಗುಣವಾದ, ನಮ್ಮ ದೇಶದ ಕೀರ್ತಿ ಪ್ರತಿಷ್ಠೆಗಳಿಗೆ ತಕ್ಕದಾದ, ಹಿಂದಿನ ಪೌರುಷ ಪ್ರತಾಪಗಳನ್ನು ಮೆರೆಯಿಸುವಷ್ಟು ಯೋಗ್ಯವಾದ, ಒಂದು ಸೈನ್ಯ ಸಮೂಹವು ಶಸ್ತ್ರಸಜ್ಜಿತವಾಗಿ ತಯಾರಾಗಲೇಬೇಕು. ಈಗ ನಾವು ಸೇರಿಸಲಿರುವ ಒಂದು ಸಹಸ್ರ ಯೋಧರು, ಭಾವೀ ಮೈಸೂರು ಸೈನ್ಯಸಮೂಹದ ಅಡಿಗಲ್ಲಾಗಲಿ. ಈ ಯೋಧರು ಇನ್ನೂ ಹೆಚ್ಚಿ, ನಮ್ಮ ಸೈನ್ಯ ಸಂಖ್ಯೆಯು ಒಂದು ಸಾವಿರದಿಂದ ಒಂದು ಲಕ್ಷವಾಗಲಿ, ಇನ್ನೂ ಶತಾಧಿಕ್ಯವಾಗಲಿ. ಇದು ನಿಜವಾದ ದೇಶಪ್ರೇಮಿಯಾದ, ಅಚಲವಾದ ರಾಜನಿಷ್ಠೆಯುಳ್ಳ ಪ್ರತಿಯೊಬ್ಬ ಮೈಸೂರಿನ ಪ್ರಜೆಯ ಹಾರ್ದಿಕೆಯಾಗಬೇಕು ಈ ಸವಿಗನಸು ನಿಜವಾಗಬೇಕು. ನಮ್ಮ ನಾಡಿನ ಎಲ್ಲ ಪಂಗಡಗಳವರೂ ಯುದ್ಧ ಮನಸ್ಕರಾಗಿದ್ದುಕೊಂಡು ರಾಜನಿಷ್ಠಾಗರಿಷ್ಠರಾಗಿ ಬಾಳಬೇಕು ನಮ್ಮ ರಾಜಭಕ್ತಿಗೆ ಚ್ಯುತಿ ಬಾರದಿರಲಿ. ಮೈಸೂರಿನ ಸರ್ವತೋಮುಖವಾದ ಪ್ರಗತಿಯ ಸಲುವಾಗಿ, ಮೈಸೂರಿನ ಮೇಲ್ಮೆಗಾಗಿ ನಮ್ಮನ್ನಾಳುವ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರ ಸಮಸ್ತ ಆಶೋತ್ತರಗಳೂ ಈಡೇರಲಿ ಮೈಸೂರಿನ ಸುಶಿಕ್ಷಿತ ತರುಣರು ಅಪ್ರತಿಮ ವೀರರಾಗಿ ಬಾಳಲಿ ದೇಶಸೇವಾ ಕಾರ್ಯದಲ್ಲಿ ವೀರಕಂಕಣವನ್ನು ಧರಿಸಲಿ. ಹೆಚ್ಚು ಸಂಖ್ಯೆಯ ಜನರು ಸೈನ್ಯ ಸಮೂಹಕ್ಕೆ ಉಮೇದುವಾರರಾಗಿ ಮುಂದೆ ಬರಲಿ. ಜಗನ್ಮಾತೆಯಾದ ಶ್ರೀಚಾಮುಂಡೇಶ್ವರೀ ದೇವಿಯು ನಾಡಿಗೆ ಮಹತ್ತರವಾದ ಅಭಿವೃದ್ಧಿಯನ್ನು ಕರುಣಿಸಲಿ.”

ಸ್ವೀಕಾರ.

ಬೆಳಗಾಂವ ಡಿ|| ಸಂಕೇಶ್ವರಗ್ರಾಮದಲ್ಲಿರುವ ವೇ|| ಹಿರೇಮಠದ ಶ್ರೀಶೈಲಶಾಸ್ತ್ರಿಗಳ ಪುತ್ರನ ಮಾಹೇಶ್ವರ ದೀಕ್ಷಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಕೆಗೆಯಿಸಿದ ೧ ರೂ. ಯು ಶ್ರೀ ಪಾಚ್ಛಾಪುರ ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಗದಗ ಬೆಟಗೇರಿ ಶಹರ ನಿವಾಸಿಗಳಾದ ಮ|| ರಾ|| ಮುಧೋಳ ವೀರಭದ್ರಪ್ಪನವರ ಪುತ್ರ ಚಿ|| ಲಿಂಗಪ್ಪನಿಗೆ ಹುವ್ವಿನಹಡಗಲಿ ಗ್ರಾಮದ ಮ|| ರಾ|| ಜ್ಯೋತಿಬಸಪ್ಪನವರ ಪುತ್ರಿ ಚಿ|| ಸೌ|| ಸಾವಿತ್ರೀದೇವಿಯನ್ನು ತಂದು ನೆರವೇರಿಸಿದ ವಿವಾಹ ಸಮಯದಲ್ಲಿ ಮ|| ರಾ|| ವೀರಭದ್ರಪ್ಪನವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂ ಯು ಬಳಗೇರಿಪುರವರ್ಗಮಠದ ವೇ|| ರುದ್ರಯ್ಯನವರು ಹಿರೇಮಠ ಎರೆಹಂಚಿನಾಳ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹನೀಯರುಗಳಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದ ಹಾರೈಸುತ್ತೇವೆ.

[೩ನೆಯ ಪುಟದಿಂದ ಮುಂದುವರಿದುದು]

ಭಕ್ತಿ. ಆದರಿಂದ ದೇವರನ್ನು ಕಾಣುವುದಕ್ಕೆ ಆಗುವುದಿಲ್ಲ. ಹಿಂದೆ ಶ್ರೀ ಶುಕಾಚಾರ್ಯರು ಪರೀಕ್ಷಿತನಿಗೆ ಭಾಗವತಶ್ರವಣವನ್ನು ಮಾಡಿಸುವುದಕ್ಕೆ ಕುಳಿತಾಗ ದೇವತೆಗಳು ತಮ್ಮ ಅಮೃತಕಲಶವನ್ನು ಅವರ ಮುಂದೆ ತಂದಿಟ್ಟು ಆ ಅಮೃತವನ್ನು ಪರೀಕ್ಷಿತನಿಗೆ ಕುಡಿಸಿ ಭಾಗವತಾಮೃತವನ್ನು ತಮಗೆ ಕೊಡಬೇಕೆಂದು ಪ್ರಾರ್ಥಿಸಿದರು. ದೇವತೆಗಳ ಅಮೃತವನ್ನು ಪರೀಕ್ಷಿತನಿಗೆ ಕುಡಿಸಿದರೆ ಅವನಿಗೆ ಸರ್ಪದಿಂದ ಆಗತಕ್ಕ ಮರಣವು ತಪ್ಪಬಹುದಾಗಿತ್ತು. ಆದರೆ ಎಂದೆಂದಿಗೂ ಹುಟ್ಟು ಸಾವುಗಳ ಕೋಟಲೆಯುಂಟಾಗದಂಥ ಪರಿಸ್ಥಿತಿಯೊದಗುತ್ತಿರಲಿಲ್ಲ. ಇದಲ್ಲದೆ ದೇವತೆಗಳು ಸ್ವಾರ್ಥಬುದ್ಧಿಯಿಂದ ಶ್ರವಣವನ್ನಪೇಕ್ಷಿಸಿದರೇ ಹೊರತು ಭಕ್ತಿಯಿಂದ ಅಲ್ಲ. ಇದು ಶ್ರೀ ಶುಕಾಚಾರ್ಯರಿಗೆ ತಿಳಿದಿತ್ತು. ಆದ್ದರಿಂದ ಅವರು ಇದನ್ನು ದೇವತೆಗಳಿಗೆ ಹೇಳಲಿಲ್ಲ.

ಶ್ರವಣದಲ್ಲಿ ಪರೀಕ್ಷಿತನಿಗಿದ್ದ ಭಕ್ತಿ ವಿಶೇಷವು ಎಂಥದ್ದಾಗಿದ್ದಿತೆಂದರೆ, [illegible] ಅವನಿಗೆ ಏಳು ದಿವಸಗಳಲ್ಲಿ ಸರ್ಪದಿಂದ ಮರಣವೆಂದು ನಿಶ್ಚಯವಾಗಿತ್ತು. ಅಷ್ಟರಲ್ಲಿ ಅವನು ತನ್ನ ಸದ್ಗತಿಯ ದಾರಿಯನ್ನು ನೋಡಿಕೊಳ್ಳಬೇಕೆಂದು ಶ್ರವಣದಲ್ಲಿ ತದೇಕಮನಸ್ಕನಾಗಿ [illegible] ಬಾಯೊಳಗೆ ತಲೆಯನ್ನಿಟ್ಟಿರುವ [illegible] ತೀವ್ರವಾದ ವೈರಾಗ್ಯವುಂಟಾಗಿತ್ತು. ಇಂಥ ಬುದ್ಧಿಯಿಂದ ಕೇಳಿದ ಶ್ರವಣವೇ ಶ್ರವಣ. ವಿನೋದಕಾಲಕ್ಷೇಪಕ್ಕಾಗಿ ಮಾಡುವ ಶ್ರವಣವು ಶ್ರವಣವಲ್ಲ. ಮನಸ್ಸು ಹತ್ತು ದಿಕ್ಕುಗಳಿಗೂ ಹರಿದಾಡ ಬಿಟ್ಟು ಶರೀರಮಾತ್ರವನ್ನು [illegible] ಆ ಶಬ್ದಗಳನ್ನು ಕಿವಿ [illegible] ಎಂದಿಗೂ ಶ್ರವಣವೆನಿಸಲಾರದು. ಶ್ರವಣದಲ್ಲಿ ಮನಸ್ಸು ಏಕಾಗ್ರವಾಗಿರಬೇಕು. ಶ್ರವಣವು ಮನಸ್ಸಿಗೆ ಹೊರತು ಬರೀ ಕಿವಿಗಳಿಗಲ್ಲ. ಹೀಗೆ ಶ್ರವಣವಾಗದಿದ್ದರೆ ಶ್ರೀ ಶುಕಾಚಾರ್ಯರ [illegible] ಅಲ್ಲಿ ಕಂಬಗಳಲ್ಲಿ ಮಾಡಿದ್ದ [illegible] ಅವುಗಳಿಗೂ ಶ್ರವಣವಾಗಬೇಕಾಯಿತು. ಇದು ಅಸಂಭವ. ಪರೀಕ್ಷಿತನ ಮನಸ್ಸು ತನ್ಮಯವಾಗಿದ್ದುದೇ ಅವನ ಶ್ರವಣದ ಯೋಗ್ಯತೆ. ವಿಶೇಷ ಆ ತನ್ಮಯತೆಯು ಒಮ್ಮೆ ಆ ಸಭೆಯಲ್ಲಿಯೇ [illegible] ಶ್ರೀ ಶುಕಾಚಾರ್ಯರು ಭಾಗವತ ಪುರಾಣವನ್ನಾರಂಭಿಸಿದಾಗ ಕೇಳುತ್ತಿದ್ದವರಲ್ಲಿ [illegible] ಮೊದಲಾದವರೆಲ್ಲಾ [illegible] ಆದರೂ ಆಚಾರ್ಯರು ಪರೀಕ್ಷಿತನ ಮುಖವನ್ನು ನೋಡುತ್ತಲೇ ಪುರಾಣವನ್ನು ಹೇಳುತ್ತಿದ್ದರು. [illegible] ಪಕ್ಷಪಾತವನ್ನು [illegible] ಆಚಾರ್ಯರಿಗೂ ತಿಳಿಯಿತು. [illegible] ಪ್ರಶ್ನೋತ್ತರದಿಂದ [illegible] ಆಚಾರ್ಯರು ಒಮ್ಮೆಗೆ ಆ [illegible] ಅದನ್ನು [illegible] ಋಷಿಗಳೆಲ್ಲ [illegible] ಪರೀಕ್ಷಿತನ ಮಾತ್ರ [illegible] ಇಲ್ಲ [illegible] ಪರೀಕ್ಷಿತನ [illegible]

ಶ್ರವಣದ [illegible]

ಮುಂದೆ ನುಗ್ಗುತ್ತೇವೆ. ನಮಗೆ ಅದರ ವಿಚಾರವೂ ಚೆನ್ನಾಗಿ ತಿಳಿದು ಇವೆಲ್ಲವೂ ಪರಮಾತ್ಮನ ಸೃಷ್ಟಿವೈಚಿತ್ರ್ಯದ ಒಂದೊಂದು ಲೇಶವೆಂದು ತಿಳಿದರೆ ಆಗ ನಮಗೆ ದೇವರಲ್ಲಿ ಪೂಜ್ಯಬುದ್ಧಿಯುಂಟಾಗುತ್ತದೆ. ಈ ದೃಷ್ಟಿಯಿಂದ ಕಲಿತರೆ ಭೌತಿಕವಾದ ಯಾವ ವಿದ್ಯೆಯೂ ವ್ಯರ್ಥವಲ್ಲ. ನಿಜವಾಗಿ ವಿದ್ಯೆಗಳ ಉದ್ದೇಶವೆಲ್ಲಾ ಇದೆ. ನಮಗೆ ಈ ದೃಷ್ಟಿ ಇಲ್ಲದ್ದರಿಂದ ಈ ವಿದ್ಯೆಗಳೆಲ್ಲಾ ಅವಿದ್ಯೆಗಳಾಗಿವೆ. ಇವೆಲ್ಲವೂ ಪರಮಾತ್ಮನ ಸ್ತೋತ್ರಕ್ಕೆ ಒಳಪಟ್ಟು ಇರುವ ವಿಚಾರವನ್ನು ಮನಸ್ಸಿಗೆ ತಂದುಕೊಂಡರೆ ಅವನಿಗೆ ಪರಮಾತ್ಮನಲ್ಲಿ ವಿಚಾರಪೂರ್ವಕವಾದ ಭಕ್ತಿಯುಂಟಾಗುತ್ತದೆ. ಹೀಗೆ ಉಂಟಾದ ಭಕ್ತಿಯು ಆ ಮೇಲೆ ಕದಲುವದಿಲ್ಲ. ಹೀಗಲ್ಲದ ಕುರುಡ ಭಕ್ತಿಯು ಯಾವಾಗಲೋ ಅಡ್ಡದಾರಿಯಲ್ಲಿ ಹೋಗಿ ಕೊರಕಲಿಗೆ ಬೀಳುವದು. ಇಷ್ಟೆಲ್ಲಾ ಶ್ರವಣಮಾಡಬೇಕು, ಆದರೆ ಅದರಲ್ಲಿ ಸಾರವನ್ನು ಶೋಧಿಸಿ ತೆಗೆದುಕೊಳ್ಳಬೇಕು. ಅಸಾರವಾದದ್ದೆಲ್ಲ ಬಿಟ್ಟುಬಿಡಬೇಕು ಇದೇ ಶ್ರವಣಭಕ್ತಿ.

ಹೀಗೆ ಸಾರಗ್ರಹಣ ಮಾಡುವ ವಿಷಯದಲ್ಲಿ ಶುಕಾಚಾರ್ಯರು ಸರ್ವಶಾಸ್ತ್ರಗಳನ್ನು ನೋಡಿ ಅದರ ಮೇಲೆ ತಮ್ಮ ವಿಚಾರವನ್ನು ನಡೆಸಿ ಪರಮಾತ್ಮನ ಅಖಂಡ ನಾಮಸ್ಮರಣೆಯನ್ನು ಮಾಡಬೇಕೆಂಬ ಒಂದರ್ಥವನ್ನ ಸಾರವಾಗಿ ತೆಗೆದಿಟ್ಟಿರುತ್ತಾರೆ. ಈ ಕೆಲಸವನ್ನು ಶುಕಾಚಾರ್ಯರು ಮಾಡಿರುವರೆಂದು ಅಷ್ಟಕ್ಕೇ ಸುಮ್ಮನಾಗಬಾರದು. ಪ್ರತಿ ಒಬ್ಬರು ಆ ಕೆಲಸವನ್ನು ತಾವೇ ಮಾಡಿ ತಮ್ಮದೊಂದು ಸಾರಸಂಗ್ರಹವನ್ನು ಸಿದ್ಧಗೊಳಿಸಬೇಕು. ಹೀಗೆ ಮಾಡಿದರೆ ಮಾತ್ರ ಮುಂದೆ ಅದು ಗಟ್ಟಿಯಾಗಿ ಉಳಿಯುವದು

ವೀರಮಾಹೇಶ್ವರ ದೀಕ್ಷಾಸಮಾರಂಭ ಸಂಕೇಶ್ವರ

ಇದೇ ಚಿತ್ರಭಾನು ಸಂವತ್ಸರ ಚೈತ್ರ ಶು|| ೩ ಬುಧವಾರ ದಿವಸ ಸಂಕೇಶ್ವರ ಗ್ರಾಮದಲ್ಲಿ ವೇ|| ಶ್ರೀಶೈಲ ಶಾಸ್ತ್ರಿಗಳು ಹಿರೇಮಠ ಇವರ ಪುತ್ರ ಚಿ|| ವಿಶ್ವನಾಥನಿಗೆ ವೀರಮಾಹೇಶ್ವರ ದೀಕ್ಷಾಸಮಾರಂಭವು ಅತಿ ವಿಜೃಂಭಣೆಯಿಂದ ನೆರವೇರಿತು. ಈ ದೀಕ್ಷಾಸಮಯದಲ್ಲಿ ಅನೇಕ ವಟುಗಳ ಮತ್ತು ಭಕ್ತರ ದೀಕ್ಷೆಯು ನೆರವೇರಿಸಲ್ಪಟ್ಟಿತು. ಈ ಸಮಾರಂಭವು ಶ್ರೀ ಷ|| ಬ್ರ|| ಪಟ್ಟದಸ್ವಾಮಿಗಳು ಹಿರೇಮಠ ಪೈಸಾಳ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳು ಹಿರೇಮಠ ಅಥಣಿ ಮತ್ತು ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳು, ಹಿರೇಮಠ ಪಾಚ್ಛಾಪುರ ಇವರ ನೇತೃತ್ವದಲ್ಲಿ ಶಾಸ್ತ್ರೋಕ್ತವಾಗಿ ನೆರವೇರಿತು. ಈ ಸಮಯದಲ್ಲಿ ಪ್ರಭಾಪ್ರೋತ್ಸಾಹಕ್ಕಾಗಿ 1 ರೂಪಾಯಿಯು ಸಮರ್ಪಿಸಲ್ಪಟ್ಟಿದೆ.

ಪ್ರತ್ಯಕ್ಷದರ್ಶಿ

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಬೆಂಗಳೂರು ಮಹಂತಿನ ಮಠಾಧ್ಯಕ್ಷರಾದ ಶ್ರೀ ಗಂಗಾಧರಶಿವಾಚಾರ್ಯಸ್ವಾಮಿಗಳವರ ನೂತನ ವರ್ಷದ ಶುಭಸಂದೇಶ

ಸಂವತ್ಸರೇ ಚಿತ್ರಭಾನೌ ಜಗದೇತಚ್ಚರಾಚರಂ |
ಸುಖಶಾಂತಿಸಮಾಯುಕ್ತಂ ಭೂಯಾಚ್ಛಿವಕಾರುಣ್ಯತಃ ಸದಾ ||

" [illegible] " ಎಂಬ [illegible] ಬೇಕಾಗಿದೆ. [illegible]

[illegible]

ಚಕ್ರದ ಸಂಬಂಧವಿರುವವರೆಗೂ ಜೀವನ ಕ್ರಮಚಕ್ರಿಯೆಯು ನಿಲ್ಲುವದೇ ಇಲ್ಲ. ಸಾಯುತ್ತಿರುವ ಪ್ರಾಣಿಗಳಲ್ಲಿ ಅಮರತ್ವವನ್ನು ಯಾಚಿಸಿದರೆ ದೊರೆಯುವದಿಲ್ಲ. ಜೀವನು ತನ್ನ ಮತ್ತು ಜಗತ್ತಿನ ಹಾಗೂ ಶ್ರೀ ಪರಮಾತ್ಮನ ಜ್ಞಾನವನ್ನು ಪಡೆದುಕೊಳ್ಳಬೇಕು. ಈ ತ್ರಿಪುಟಿಯಲ್ಲಿ ಒಂದರ ಜ್ಞಾನವಾದರೂ ಪ್ರಯೋಜನವಿಲ್ಲ. ಈ ಮೂರು ವಸ್ತುಗಳ ವಿಜ್ಞಾನವಾದ ಮೇಲೆ ಬಯಕೆಯ ಮಾಯೆಯಾಗಿರಲಾರದು. ಈ ಜ್ಞಾನಾಭಾವವೇ ಜೀವಾತ್ಮನ ದುಃಖಪರಂಪರೆಗೆ ಕಾರಣವಾಗಿರುವುದು. ವಸ್ತುವಿನ ಯಥಾರ್ಥಜ್ಞಾನ, ಉಪಯೋಗಗಳಷ್ಟೇ ಪುರುಷಾರ್ಥಸಾಧನಗಳಲ್ಲ, [illegible] ಜ್ಞಾನೋಪಯೋಗಗಳೆರಡೂ ಫಲಪ್ರಾಪ್ತಿಯ ಸಮೀಚೀನ ಸಾಧನಗಳಾಗಿರುತ್ತವೆ.

ರತ್ನಪರೀಕ್ಷೆಯುಳ್ಳವನು ತನ್ನ, ಸಮುದ್ರದ, ಮತ್ತು ರತ್ನದ ಯೋಗ್ಯತೆ ಗಾಂಭೀರ್ಯ, ಮೌಲ್ಯಗಳನ್ನು ತಿಳಿಯಬೇಕಾದುದು ಅತ್ಯಾವಶ್ಯಕವಾದಂತೆ ಜೀವಾತ್ಮನು ತನ್ನ ಜಗತ್ತಿನ ಮತ್ತು ಶ್ರೀ ಪರಮಾತ್ಮನ ಪರಿಶುದ್ಧ ಜ್ಞಾನವನ್ನು ಸಂಪಾದಿಸುವುದು ಇಷ್ಟಾರ್ಥಪ್ರಾಪ್ತಿಯ ರಾಜಮಾರ್ಗವಾಗಿದೆ. ಈ ತ್ರಿಪುಟಿಯ ತತ್ವವನ್ನರಿಯದ ಜೀವನ ಸ್ಥಿತಿಯು ತೆಂಗಿನಮರದಲ್ಲಿರುವ ಫಲಗಳನ್ನು ಅಪೇಕ್ಷಿಸುವ ಕುಂಟನಂತಾಗುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಜೀವಪರಮಾತ್ಮರ ಮಧ್ಯದಲ್ಲಿ ಪ್ರಪಂಚವೊಂದಿರದಿದ್ದರೆ ಯಾವ ಸಾಹಸಗಳೂ ಒದಗುತ್ತಿರಲಿಲ್ಲವೆಂದು ಊಹಿಸಬಹುದಾಗಿದೆ. ಮುಂಗೈ ಬಳೆಯನ್ನು ನೋಡಲು ದರ್ಪಣ ಸಹಾಯವು ಅನಾವಶ್ಯಕವಾದಂತೆ ಜೀವನು ಪರಮನನ್ನು ಸೇರಲು ಯಾವ ಆಯಾಸವೂ ಬೇಕಾಗುತ್ತಿರಲಿಲ್ಲ. ಸಂಸಾರಿ ಜೀವನು ಯಾವಾಗಲೂ "ಬೇಕು, ಬೇಕು, ಸಾಲದು ತೃಪ್ತಿಯಿಲ್ಲ" ಎಂದು ಶ್ರಮಗೊಂಡು ಸುತ್ತುತ್ತಿರುತ್ತಾನೆ. ಇದು ಬಹಿರ್ಮುಖಿಯಾದ ಜೀವನ ಸ್ವಭಾವವಾಗಿದೆ. ಆಶಾ-ಪಾಶ ಬಂಧನಗಳೂ ಸಪ್ಪಗಳಾಗುವುದಿಲ್ಲ. ಜೇಡರಹುಳುವು ವಿಶಾಲ-ಜಟಿಲವಾದ ಜಾಲವನ್ನು ರಚಿಸಿ ಕೆಲಕಾಲದವರೆಗೆ ಆ ಜಾಲದ ಸಹಾಯದಿಂದಲೇ ಉಪಜೀವಿಸುತ್ತಾ ಕೊನೆಗೆ ಆ ಜಾಲದಲ್ಲಿಯೇ ನಾಶವನ್ನೈದುವ ಹಾಗೆ ಜೀವಾತ್ಮನು ಅಜ್ಞಾನಮೂಲವಾದ ಸಂಸಾರಜಾಲದಲ್ಲಿ ವಿಹರಿಸುತ್ತ ಅಲ್ಪಸುಖವನ್ನನುಭವಿಸುತ್ತ ಅದನ್ನೇ ಘನವನ್ನಾಗಿ ತಿಳಿದು ಮುಂದುಗಾಣದೆ ಅದರಲ್ಲಿಯೇ ನಾಶ ಹೊಂದುತ್ತಾನೆ. ಈ ಸಂಕಟ ಪರಂಪರೆಯನ್ನು ದಾಟಲು ಬಂದ ಜೀವಾತ್ಮನು ಮನುಷ್ಯಶರೀರ ರೂಪವಾದ ಸಾಧನವನ್ನು ಹೊಂದಿದ್ದರೂ ಸದ್ಗುರು ಕೃಪಾವಿಶೇಷದಿಂದ ವಿಜ್ಞಾನವನ್ನು ಸಂಪಾದಿಸಿ ಸನ್ಮಾರ್ಗಗಾಮಿಯಾಗಿ ಪರಮಾನಂದ ಪ್ರಾಪ್ತಿಯ ಸತ್ಸಂಕಲ್ಪವನ್ನು ನೆರವೇರಿಸದೆ ಬೂದಿಯನ್ನೂದಿ ಬೆಂಕಿಯನ್ನು ಹೊತ್ತಿಸುವ ಪ್ರಯತ್ನದಲ್ಲಿ ಬಿದ್ದಿರುವುದು ಪರಮಾಶ್ಚರ್ಯ—ಮಹಾವಿಷಾದ ಕಾರಣವಾಗಿದೆ. ಸದ್ಗುರುವೇ ಸಂಸಾರ ಸಂಹಾರಕನು. ಪರಮಬಂಧುವಾದ ಸದ್ಗುರುವೇ ಸಕಲ ಸಂಶಯಗಳನ್ನು ದೂರಮಾಡಿ ಜೀವನನ್ನು ನೆಲೆಗೆ ಹೊಂದಿಸುವವನು. ಅಪಾರ ಅಗಾಧವಾದ ಸಂಸಾರದಲ್ಲಿ ಮುಂದುಗಾಣದಿರುವ ಜೀವನು ಸದ್ಗುರು ಸಹಾಯದಿಂದಲೇ ಪರಮಗತಿಯನ್ನೈದಬೇಕಾಗಿದೆ ಎಂಬಂಶವನ್ನು ಸಕಲ ಶಾಸ್ತ್ರಗಳೂ ಘಂಟಾಘೋಷವಾಗಿ ಸಾರುತ್ತಲಿವೆ. ಸದ್ಗುರು ಸಹಾಯವಿಲ್ಲದೆ ಸದ್ಗತಿಯನ್ನಪೇಕ್ಷಿಸುವುದು ಮಣ್ಣಿಲ್ಲದೆ ಮಡಿಕೆಯನ್ನು ಮಾಡಲೆತ್ನಿಸುವ ಮೂರ್ಖತನವಿದೆ. 'ಗುರುರುಪಾಯಃ' ಎಂಬ ಸೂತ್ರವು ಸಂಸಾರಿ ಜೀವನ ಬಂಧವಿಮೋಚನಕ್ಕೆ ಗುರುವೇ ಪರಮೋಪಾಯವೆಂದು ಸಾರುತ್ತಲಿದೆ. "ಮುಕ್ತಿಮೂಲಂ ಗುರೋಃ ಕೃಪಾ" ಎಂಬಿವೇ ಮೊದಲಾದ ಅನಂತ ಪ್ರಮಾಣಗಳು ಗುರುಕೃಪೆಯೇ ಮುಕ್ತಿಗೆ ಮೂಲವಾಗಿದೆ ಎಂದು ಉದ್ಘೋಷಿಸುತ್ತಲಿವೆ. ದುರ್ಗಮವಾದ ಸಂಸಾರವನ್ನು ದಾಟಲು ಜೀವನು ಸ್ವಯಂ ಸಮರ್ಥನಲ್ಲ, ಒಂದು ಪಕ್ಷದಲ್ಲಿ ಆ ಶಕ್ತಿಯು ಜೀವನಲ್ಲಿದ್ದರೂ ಅದು ಸೂಕ್ಷ್ಮವಾಗಿದ್ದು ಅದನ್ನು ಜೀವನು ಮರೆತಿರುವನು. ಮತ್ತು ಬೆಂಕಿಯ ಕಿಡಿಯ ಮೇಲೆ ಹಸಿಯ ಕಟ್ಟಿಗೆಗಳನ್ನು ಹಾಕುವಂತೆ ಆ ಸೂಕ್ಷ್ಮಶಕ್ತಿಯ ಮೇಲೆ ಜಡಗಳಾದ ಆ ಶಾಸ್ತ್ರೀಯ ಕರ್ಮಗಳನ್ನು ಹೇರುವುದರಿಂದ ಆ ದಿವ್ಯಶಕ್ತ್ಯಂಶವು ಮತ್ತಷ್ಟು ಕುಂದವಾಗುತ್ತದೆ. ಇಂತಹ ಅಶಕ್ತಜೀವನ ಸದ್ಗತಿ ಸಂಪಾದನೆಗಾಗಿ ಪರಮಾತ್ಮಾವತಾರಿಯೂ ಪರಮ ಕರುಣಾಳುವೂ ಸರ್ವಸಮರ್ಥನೂ ಸರ್ವತಂತ್ರ ಸ್ವತಂತ್ರನೂ ಆದ ಪರಮಾಚಾರ್ಯ ಪರಮಗುರುವು "ಮತ" ವೆಂಬ ರಾಜಮಾರ್ಗವನ್ನು ನಿರ್ಮಿಸಿರುವನು. ಈ ಮತಮಾರ್ಗವೇ ಜೀವನ ಶಾಶ್ವತ ಸುಖದ ಸಾಧನವಾಗಿದೆ ಇದೇ ಮತಾಶ್ರಯವು. ಈ ಮತದಾಶ್ರಯವನ್ನು ಬಿಟ್ಟರೆ ಜೀವನು ಕೆಟ್ಟನೆಂದೇ ತಿಳಿಯಬೇಕು. ಮತಾಚರಣೆಗಳಲ್ಲಿ ಜೀವಾತ್ಮನು ತನ್ಮಯನಾಗಬೇಕು. ನೀರಿನಲ್ಲಿ ನೆನೆಯದ ಬಟ್ಟೆಯನ್ನು ಬಾಧೆಗೆ ಅಪ್ಪಳಿಸುವುದು ಬಟ್ಟೆಯ ವಿನಾಶಕ್ಕೂ ಅದನ್ನು ಉಪಯೋಗಿಸುವವನ ಶೀತೋಷ್ಣಾದಿ ಬಾಧೆಗೂ ಕಾರಣವಾಗಿದೆ. ಹಾಗೆಯೇ ಮತಾಚರಣೆಗಳಲ್ಲಿ ಮಗ್ನನಾಗದ ಜೀವನ ಸಂಸಾರ ತಾಪವು ಶಾಂತವಾಗುವುದಿಲ್ಲ. ರೆಕ್ಕೆಗಳನ್ನು ಕಟ್ಟಿಕೊಂಡ ವೇಷಧಾರಿ ಗರುಡನು ಆಕಾಶದಲ್ಲಿ ಹಾರಬಲ್ಲನೇ ? ಬಹಿರಾಡಂಬರದ ಮತಾಚರಣೆಯು ಲೋಕರಂಜನಕ್ಕಲ್ಲದೆ ಆತ್ಮೋದ್ಧಾರಕ್ಕಲ್ಲ. ಮನುಷ್ಯಪ್ರಾಣಿಯು ಮತವಿಲ್ಲದೇ ಹುಟ್ಟುವದಿಲ್ಲ. ಮತವೆಂಬುದು ಸರ್ವಸಾಮಾನ್ಯವಾದುದಾದರೂ ಅದರಲ್ಲಿ ಅಧಿಕಾರಾನುಗುಣವಾಗಿ ತಾರತಮ್ಯ ಭಾವಗಳಿದ್ದೇ ಇವೆ. ವೇದಾಗಮೋಪನಿಷದ್ವಾಕ್ಯಾದಿಗಳು ಮತದ ಮೂಲಾಧಾರಗಳು. ಅಹಿಂಸಾ ಸತ್ಯ, ಬ್ರಹ್ಮಚರ್ಯಾದಿ ಸದ್ವ್ರತಗಳಿಲ್ಲದ ಮತವು ಕಣ್ಣಿಲ್ಲದ ಮುಖದಂತೆ ಕಳಾಹೀನವೇ ಸರಿ. ಶರೀರವೃದ್ಧಿಯನುಗುಣವಾಗಿ ಅಂಗಿಯನ್ನು ತೊಡಿಸುವಂತೆ ಜೀವಾತ್ಮನ ಶಕ್ತ್ಯನುಗುಣವಾಗಿಯೇ ಮತಾಚಾರ್ಯರು ಮತಾಚಾರಗಳನ್ನು ಬೋಧಿ

ಭದ್ರಗೊಳಿಸುವ ಹೀಗಲ್ಲದಿರುವುದು ಸುಖಸಾಧನವಲ್ಲ. ವಿಷಯ ವಾಸನೆಯಿಂದ ಹುಟ್ಟಿ ಅದರಲ್ಲಿಯೇ ಬೆಳೆಯುತ್ತ ಅದನ್ನೇ ನೋಡಿ ಅನುಭವಿಸುತ್ತಿರುವ ಜೀವಾತ್ಮನಿಗೆ ಮೊದಲು ಸದಾಚಾರಗಳು ರುಚಿಸುವುದಿಲ್ಲ. ಬಿಸಿಲ್ಗುದುರೆಯನ್ನು ಅನುಸರಿಸುತ್ತಿರುವ ಮೃಗ ಶಿಖಿಸಿಸಂತೆ ವಿಷಯ ಪದಾರ್ಥಗಳನ್ನು ಹಿಂಬಾಲಿಸುತ್ತಿರುವ ಜೀವಾತ್ಮನ ಬಹಿರ್ವೃತ್ತಿಯನ್ನು ಅಂತರ್ಮುಖೀಕರಿಸುವದೇ ಪರಮಾತ್ಮಾಭಿಮುಖವನ್ನಾಗಿ ಮಾಡುವುದೇ ಸದಾಚಾರಗಳ ಮುಖ್ಯೋದ್ದೇಶವಾಗಿರುವುದು. ಜೀವನಲ್ಲಿ ಒಮ್ಮೆಲೇ ಸದಾಚಾರನಿಷ್ಠೆಯು ಉದಯಿಸುವುದಿಲ್ಲ. ಪರೋಕ್ಷವಾದ ಮೋಕ್ಷಸುಖಂತು ಅಸಂಭವವೇ ಸರಿ. ಆದುದರಿಂದಲೇ ಸರ್ವಜ್ಞರಾದ ಮತಸ್ಥಾಪನಾಚಾರ್ಯರು ಜೀವಾತ್ಮನ ಸದಾಚಾರ ನಿಷ್ಠಾಭಿವೃದ್ಧಿಗಾಗಿ ಅನಂತಸಂಸ್ಕಾರಗಳನ್ನು ವಿಧಿಸಿರುವರು. ಈ ಸಂಸ್ಕಾರಗಳೇ ಜೀವನ ಜಾಡ್ಯವನ್ನು ಕಳೆದು ಶಿವತ್ವಂ ಪಡೆಗೊಳಿಸಿ ಮೋಕ್ಷಮಾರ್ಗ ಪರಾಯಣನನ್ನಾಗಿ ಮಾಡುತ್ತವೆ. ಮೋಕ್ಷಾಪೇಕ್ಷೆಯುಳ್ಳವರಿಗೆ ಸಂಸ್ಕಾರಗಳು ಪರಮೋಪಕಾರವೇ ಸರಿ. ಸಂಸ್ಕಾರಗಳೇ ಸಿದ್ಧಿಗೊಳ್ಳದ ಮೇಲೆ ಸದಾಚಾರನಿಷ್ಠೆಯುಂಟಾಗಿ ಜಲಲಿಪಿಪ್ರಾಯವೇ ಆಗುತ್ತದೆ. ಉತ್ತಮವಾದ ಮನುಷ್ಯಜನ್ಮ, ಶುದ್ಧವಾದ ಮತದಲ್ಲಿ ಜನ್ಮ, ಗುರುಶಾಸ್ತ್ರರೂಪ ಸಂಪತ್ಸಹಾಯ, ಇಷ್ಟಲ್ಲದೇ ಇನ್ನೂ ಅನೇಕ ಭೌತಿಕ ವಸ್ತುಗಳ ಅನುಕೂಲತೆ ಇವೆಲ್ಲವಿದ್ದರೂ ಸನ್ಮಾರ್ಗಗಾಮಿಯಾಗದೆ ಅಂದರೆ, ಸದಾಚಾರ್ಯರಿಗೆ ಶರಣಾಗತನಾಗಿ ಮತತತ್ವಗಳನ್ನು ತಿಳಿದು ಸದಾಚಾರಪರನಾಗದೆ ಅಲಕ್ಷ್ಯ ಉದಾಸೀನನಾಗಿರುವುದು ಜೀವಾತ್ಮನಿಗೆ ಎಷ್ಟೂ ಭೂಷಣವಲ್ಲ. ಯಾವುದನ್ನೋ ಸಂಕಲ್ಪಿಸಿ ಇನ್ನಾವುದನ್ನೋ ಮಾಡಿಬಿಟ್ಟರೆ ವಿಪರೀತ ಫಲಪ್ರಾಪ್ತಿಯಾಗದಿರದು. ವಿಷಯಭೋಗಾಸಕ್ತನಾದ ಜೀವಾತ್ಮನು ತನ್ನ ಆಯುರ್ಮರ್ಯಾದೆಯನ್ನು ಸಹ ಅರಿಯದೆ ನಡೆಯುತ್ತಿರುವುದು ಅವನ ಅಜ್ಞಾನದ ಹೆಗ್ಗುರುತಾಗಿದೆ. ಇಂತಹ ಮಾರ್ಗದಲ್ಲಿಯೇ ನಡೆಯುವ ಜೀವನಿಗೆ ಕೋಟಿಕಲ್ಪಗಳವರೆಗೂ ಶಾಂತಿಯು ದೊರೆಯದು. ಆದುದರಿಂದ ಸರ್ವರಿಗೂ ಸ್ವಮತಾಚಾರ್ಯಭಕ್ತಿ ಸ್ವಮತಾಚಾರನಿಷ್ಠಾಗರಿಷ್ಠರಾಗಿ ವರ್ತಿಸುವುದು ಶ್ರೇಯೋಮಾರ್ಗವಾಗಿದೆ. ಇಂತಹ ಆಸಕ್ತಿಯು ಸರ್ವರಲ್ಲಿಯೂ ಉದಯಿಸಲಿ. ಸರ್ವರೂ ಸದ್ಧರ್ಮಪರಾಯಣರಾಗಲಿ; ಕಾಲಾನುಗುಣವಾಗಿ ಮಳೆಬೆಳೆಗಳಾಗಿ ಸರ್ವರೂ ಆರೋಗ್ಯ ದೀರ್ಘಾಯುಗಳಾಗಿ ಬಾಳಲಿ; ಪ್ರಪಂಚದಲ್ಲಿ ಪಸರಿಸಿದ ಸರ್ವ ಈತಿಬಾಧೆಗಳೂ ದೂರಾಗಿ ಶಾಂತಿಯು ನೆರೆಯಲಿ.

ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ ಪೃಥಿವೀ ಶಾಂತಿರಾಪಃ
ಶಾಂತಿರೋಷಧಯಃ ಶಾಂತಿಃ | ವನಸ್ಪತಯಃ ಶಾಂತಿರ್ವಿ
ಶ್ವೇದೇವಾಃ ಶಾಂತಿರ್ಬ್ರಹ್ಮ ಶಾಂತಿಃ ಸರ್ವಂ ಶಾಂತಿಃ
ಶಾಂತಿರೇವ ಶಾಂತಿಃ ಸಾಮಾ ಶಾಂತಿರೇಧಿ ||

ಶ್ರೀಮನ್ಮಹಾಪ್ರಭುಗಳವರಿಗೆ ಮಂಗಳವಾಗಲಿ.

ಭದ್ರಂ ! ಶುಭಂ ! ಮಂಗಳಂ !

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಪರುಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯತಕ್ಕ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಸಿದ್ಧಾಂತಶಿಖಾಮಣಿ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ

ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತವಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸಧ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲಾ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೫ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿ ನೋಡಿದವೇಳೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೬ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M. F Printings ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು. ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಸಾರಿಸಾರಿ ಹೇಳಬಹುದಾಗಿದೆ. ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು. ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣನಾಥನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! **ಬೆಲೆ ೨ ರೂಪಾಯಿ.**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೦ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮಸ್ವಾಮಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ಉಪಯೋಗಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೬೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. **ಈ ಮಹಾಗ್ರಂಥದ ಬೆಲೆ ೪ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರು
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ \ ೧೪ ಬೆಲೆ ೧ಕ್ಕೆ	೦—೪—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೬ \ ೧೦ ಬೆಲೆ	೦—೨—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಿಭೀಷಣ, ವ್ಯಾಸ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೨ \ ೧೬ ಬೆಲೆ	೦—೧—೬
ಸದ್ಯೋಜಾತಾದಿಪಂಚಮೂರ್ತಿಗಳಿಂದ ಐವರು ಆಚಾರ್ಯರು ಅವತರಿಸುವ ಫೋಟೋ ಸೈಜು ೧೪ \ ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೬ \ ೧೨ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೨ \ ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ \ ೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೨—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು. ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ ೮ ಆಣೆ

(Registered Trade Mark)

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[43] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸಂಧ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ [illegible] (೨ನೆಯ ಆವೃತ್ತಿ)	೨ ಆಣೆ
ಬಸವಾದಿಪ್ರಮಥತತ್ತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ [illegible]	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸಂಧ್ಯಾಶಾಸ್ತ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾಪದ್ಧತಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಸುಂದರವಾದ ಫೋಟೋಗಳಿರುವವು)	೧। ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಪಾರಮೇಶ್ವರಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೬೨೫ ಪುಟ)	೮ ರೂ.
A brief life sketch of Pandit Sri Kashinatha Shastriji (*English*)	4 As.
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As.
लिंगधारणचन्द्रिका (संस्कृत)	१ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य–संस्कृत)	१ रु.
पुरुषसूक्तम् (वीरशैवप्राचीनभाष्योपेतम्)	४ आ.
नंदिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಖ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ನೇ ಏಪ್ರಿಲ್ ೧೯೪೨ [ಸಂಚಿಕೆ ೫೦

ಶ್ರೀಕಾಶೀನಾಥಗ್ರಂಥಮಾಲೆಯ—೪೦-೪೧-೪೨-೪೩ನೆಯ ಪುಷ್ಪ

ಶಿವಾಗಮಸಂಗ್ರಹಃ

ಈ ಗ್ರಂಥವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ **ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮ**ಗಳೆಂಬ ನಾಲ್ಕು ಶಿವಾಗಮಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ, ಇದಕ್ಕೆ “**ಶಿವಾಗಮಸಂಗ್ರಹ**” ಎಂಬ ಹೆಸರನ್ನಿಡಲಾಗಿದೆ. ಈ ನಾಲ್ಕು ಶಿವಾಗಮಗಳಲ್ಲಿ ವೀರಶೈವಮತದ ಪ್ರಾಚೀನ ಧರ್ಮಗಳು ಬಹು ಹೃದಯಂಗಮವಾಗಿ ವಿವರಿಸಲ್ಪಟ್ಟಿರುವವು ವೀರಶೈವಮತದ ಸರ್ವಸ್ವವೇ ಇವುಗಳಲ್ಲಿ ಅಡಗಿರುವದು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ವಿಶೇಷ ಪ್ರಯತ್ನದಿಂದ ಇವುಗಳನ್ನು ಸಂಗ್ರಹಿಸಿ ಚನ್ನಾಗಿ ಪರಿಶೋಧಿಸಿ ಅತ್ಯಂತ ಸುಂದರವಾಗಿ ಮುದ್ರಿಸಿ ಪ್ರಕಟಿಸಿದ್ದಾರೆ ಇಂತಹ ಸರ್ವೋತ್ತಮ ಶಿವಾಗಮಗಳು ಈಗ ಪ್ರಕಾಶಕ್ಕೆ ಬಂದಿರುವುದು ಈ ಮತದ ಪುಣ್ಯವಿಶೇಷವೆಂದೇ ಹೇಳಬೇಕಾಗಿದೆ ಈ ಶಿವಾಗಮಗಳು ಸದ್ಯಃ ಟೀಕೆಯಿಲ್ಲದೆ ಮೂಲ ಮಾತ್ರ ಮುದ್ರಿತವಾಗಿವೆ. ಪ್ರತಿಯೊಬ್ಬರೂ ಈ ಪೂಜ್ಯಗ್ರಂಥಗಳನ್ನು ತರಿಸಿಕೊಂಡು ಇವುಗಳಲ್ಲುಕ್ತವಾಗಿರುವ ಪ್ರಾಚೀನ ಪವಿತ್ರಧರ್ಮಗಳನ್ನು ತಿಳಿದು ಅದರಂತೆ ಆಚರಿಸಿ ಪರಶಿವನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ ಮನೋಹರವಾದ ಮುದ್ರಣ ! ಸುಂದರವಾದ ಬೈಂಡು ! **ಬೆಲೆ ೨ ರೂಪಾಯಿ**

ಪಂಚಾಚಾರಪ್ರಕಾಶಿಕಾ (೪೪ನೆಯ ಪುಷ್ಪ)

ಇದರಲ್ಲಿ ವೀರಶೈವರು ಮುಖ್ಯವಾಗಿ ಆಚರಿಸತಕ್ಕ ೬೪ ಶೀಲಗಳು ಹೃದಯಂಗಮವಾಗಿ ವರ್ಣಿತವಾಗಿವೆ ಚಂದ್ರಜ್ಞಾನಾಗಮದ ೯ನೆಯ ಪಟಲದಲ್ಲಿ ಈ ಶೀಲಗಳು ಉಕ್ತವಾಗಿರುವುದರಿಂದ ಇದನ್ನು ಪ್ರತ್ಯೇಕವಾಗಿ ಕನ್ನಡ ಟೀಕೆಯೊಡನೆ ಮುದ್ರಿಸಿದ್ದಾಗಿದೆ. **ಬೆಲೆ ೨ ಆಣೆ**

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ನಾನಾವಿಧ ಬಣ್ಣಗಳಿಂದ ಮನೋಹರವಾಗಿ ಮುದ್ರಿತವಾಗಿರುವ

ನೂತನ ಫೋಟೋಗಳು

ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ (ಸೈಜು ೧೪×೧೦) ಬೆಲೆ ೪ ಆಣೆ
(ಅತ್ಯಂತ ಸುಂದರವಾದುದು.)

ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ಸೈಜು ೬×೧೦) „ ೨ ಆಣೆ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸಹಶಿಕ್ಷಣ

ಲೇ—ಬಿ ಹೆಚ್ ಎಮ್. ಅಮರನಾಥಶಾಸ್ತ್ರಿಗಳು ವಿದ್ವಾನ್,
ಕನ್ನಡಪಂಡಿತ ಬೋರ್ಡ್ ಮಿಡ್ಲ್‌ಸ್ಕೂಲ್, ಕಂಪ್ಲಿ.

ಶ್ರೀಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟ ನಮ್ಮ ವೀರಶೈವಮತದಲ್ಲಿ ಈಗಿನ ಕೆಲವು ಪಾಶ್ಚಾತ್ಯ ವಿದ್ಯಾವಂತ ತರುಣರು ತಾವು ನವನಾಗರಿಕರೆನಿಸಿಕೊಳ್ಳಲು ಏನೊಂದೂ ವಿಚಾರಮಾಡದೆ ನಮ್ಮ ಸನಾತನ ಧರ್ಮದ ತತ್ವಗಳನ್ನು ಕೂಡಲೇ ಮಾರ್ಪಡಿಸಲು ಹಾತೊರೆಯುತ್ತಿರುವರು ಇದು ತೀರಾ ಅಸಮಂಜಸವು.

ಆ ಪೈಕಿ ಸಹಶಿಕ್ಷಣದ ದುಷ್ಪರಿಣಾಮದ ಬಗ್ಗೆ ಸ್ವಲ್ಪ ವಿಚಾರಿಸುವಾ ! ಬಾಲ್ಯಾದಾರಭ್ಯ ಕೊನೆಯವರೆಗೂ ಸ್ತ್ರೀ ಪುರುಷರೀರ್ವರೂ ಕೂಡಿ ಓದುವ ವಿಷಯದಲ್ಲಿ ನಮಗೆ ಲೇಶಮಾತ್ರವೂ ಗುಣವು ಕಂಡುಬರುವುದಿಲ್ಲ

ಜಗತ್ತಿನಲ್ಲಿ ಸ್ತ್ರೀ ಪುರುಷರೆಂದು ಎರಡು ಭಾಗವು ಸ್ಪಷ್ಟವಾಗಿ ಕಂಡುಬರುತ್ತದೆ ಸ್ತ್ರೀಯರ ಅಂಗರಚನೆಯೇ ಬೇರೆ. ಇವರಿಗೆ ಎಡಭಾಗವೇ ಮುಖ್ಯವಾಗಿದೆ. ಮಿದುಳು ಪುರುಷರಿಗಿಂತಲೂ ಅಲ್ಪ ಪರಿಮಾಣವುಳ್ಳದ್ದಾಗಿದೆ ಇವರ ಪ್ರಕೃತಿಯಲ್ಲಿ ಕೋಮಲತೆಯೂ ದುರ್ಬಲತೆಯೂ ವ್ಯಕ್ತವಾಗುತ್ತಿದೆ ಸ್ತ್ರೀಪುರುಷರ ಜಾತಿಭೇದವು ಒಂದೆರಡು ಅಂಗಾಂಗಗಳ ಭೇದಮಾತ್ರವಲ್ಲ ಈ ಭೇದವು ಎರಡು ಜಾತಿಗಳ ಕಣಕಣದಲ್ಲಿಯೂ ಹೊಕ್ಕಿದೆ ಎಂದು ವೈಜ್ಞಾನಿಕರು ಅಭಿಪ್ರಾಯಪಡುತ್ತಾರೆ. ಸ್ತ್ರೀಯರು ಪ್ರತಿಮಾಸಿಕರಜೋದರ್ಶನಕಾಲದಲ್ಲಿ ಯಾವಕಾರ್ಯವನ್ನು ಮಾಡಲು ಅಸಮರ್ಥರೆಂತಲೂ ಇವರ ನೆರಳು ಸೋಂಕುವುದೂ ಕೂಡ ಅನಾರೋಗ್ಯಕರವೆಂತಲೂ ನಾಲ್ಕು ದಿವಸದವರೆಗೂ ಗೃಹಕೃತ್ಯದಬಗ್ಗೆ ಬಹಿಷ್ಕೃತರೆಂತಲೂ ನಿರ್ಣಯಿಸಿರುವರು ಹುಡುಗರಿಗೆ ಮುಟ್ಟುದೋಷವು ಎಂತಹ ಅನರ್ಥಕಾರಿ ಎಂಬುದು ಸರ್ವರಿಗೂ ವೇದ್ಯವೇ ಇದೆ. ಮತ್ತು ಗರ್ಭಧಾರಣಕಾಲದಲ್ಲಿಯಂತೂ ತನ್ನ ದೇಹವೇ ತನಗೆ ಭಾರವಾದಂತಾಗಿರುವದು ಇವೆಲ್ಲ ಕಾರಣಗಳಿಂದ ಇವರು ಅಬಲೆಯರೆಂಬುದೂ ಪರಾಧೀನರೆಂಬುದೂ ನಿರ್ವಿವಾದ

ಇಂತಹ ಸ್ತ್ರೀಯರನ್ನು ಗಂಡಸರ ಜೊತೆಯಲ್ಲಿ ಸೇರಿಸಿ ಓದಿಸುವುದರಿಂದ ಅವರಿಗೆ ಪುರುಷರ ಬಗ್ಗೆ ಇರುವ ಲಜ್ಜಾ, ಪ್ರೇಮ ಮೊದಲಾದ ನೈಜಗುಣಗಳು ಮಾಜಿ ಹೋಗಿ “ಸಲಜ್ಜಾ ಗಣಿಕಾ ನಷ್ಟಾ ನಿರ್ಲಜ್ಜಾ ಚ ಕುಲಾಂಗನಾ” ಎಂಬಂತೆ ಅವರು ನಿಷ್ಪ್ರಯೋಜಕರಾದ ಗಂಡುಬೀರಿಯರಾಗುವುದರಲ್ಲಿ ಸಂದೇಹವಿಲ್ಲ.

ಇನ್ನು ವಿದ್ಯಾಭ್ಯಾಸದ ವಿಷಯವಾಗಿ ವಿಚಾರಿಸಿದರೂ ಪುರುಷರ ಮತ್ತು ಸ್ತ್ರೀಯರ ವಿದ್ಯಾಭ್ಯಾಸದ ರೀತಿಯು ಪರಸ್ಪರ ಭಿನ್ನವಾಗಿಯೇ ಇದೆ. “ಗೃಹಿಣೀ ಗೃಹಮುಚ್ಯತೇ” ಎಂಬಂತೆ ಸ್ತ್ರೀಯರಿಗೆ ಗೃಹಕೃತ್ಯದ ಕೌಶಲವನ್ನುಂಟುಮಾಡತಕ್ಕ ವಿದ್ಯೆಯೇ ಅವಶ್ಯಕ. ಈಗ ಕಲಿಯುತ್ತಿರುವ ವಿಷಯಗಳಲ್ಲಿ ಅನೇಕವನ್ನು ತೆಗೆದುಹಾಕಿ

ಬಿಡಬಹುದು ಅವರಿಗೆ ಗೃಹವಿಜ್ಞಾನ, ಸಂಗೀತ, ಚಿತ್ರ, ಶಿಶುಪೋಷಣೆ ಮೊದಲಾದ ವಿಷಯಗಳನ್ನು ಕಲಿಸಲು ಒತ್ತಾಯಪಡಿಸಬೇಕು

ಈಗಿನ ಉಚ್ಚಶಿಕ್ಷಣ ಪಡೆದ ಸ್ತ್ರೀಯರಿಗೆ ಗೃಹಕರ್ತವ್ಯದಬಗ್ಗೆ ಅಷ್ಟು ಪರಿಜ್ಞಾನವಿರುವುದಿಲ್ಲ. ಅದರಿಂದ ವಿಶಾಲಾದ ಮನೆಗೆಲಸ ಮಾಡುವುದು ಕಷ್ಟವಾಗಿ ಪರಿಣಮಿಸುವುದು ಸೇವಕರನ್ನು ನೇಮಿಸುವಷ್ಟು ಆಸ್ತಿತ್ವ ಇಲ್ಲದಿದ್ದಲ್ಲಿ ಆಕೆಯನ್ನು ಕೈಹಿಡಿದ ಪುರುಷನ ಜೀವನವು ದುಃಖಮಯವಾಗಿರುವುದು ಇಂತಹ ತರುಣಿಯು ಅತ್ತೆ, ಮಾವ, ಮತ್ತು ಇತರ ಜನರುಗಳ ಕಣ್ಣಿಗೆ ಮುಳ್ಳಾಗಿ ಪರಿಣಮಿಸುವಳು ಇದಲ್ಲದೆ ತನ್ನ ವಿದ್ಯೆಯಿಂದ ಅಧಿಕ ಅಧ್ಯಯನದಿಂದ ಮಾನಸಿಕ ಶಕ್ತಿಯು ಬೆಳೆದಂತೆಲ್ಲಾ ಆಕೆಯ ದೈಹಿಕ ಶಕ್ತಿಯು ಕಡಿಮೆಯಾಗುವುದು ವಿವಿಧ ವ್ಯಾಧಿಗಳಿಗೆ ತುತ್ತಾಗುವಳು ದುರ್ಬಲ ಸಂತಾನಗಳನ್ನು ಪಡೆಯುವಳು. ಹೀಗಾಗಿ ಸಂತಾನದ ಲಾಲನೆಪಾಲನೆ ಮಾಡುವಷ್ಟು [illegible] ನಿಷ್ಪ್ರಯೋಜಕಳಾಗುವಳು. [illegible] ಆಡಳಿತವು ಮಂತ್ರಿಗೆ ಸೇರಿರುವಂತೆಯೇ ಮನೆಯ ಆಡಳಿತವು ಗೃಹಿಣಿಯ ಕೈಯಲ್ಲಿರುವುದು. ಕೆಲವು ಸ್ತ್ರೀಯರು "ಹೆಂಗಸರು ಯಾವಾಗಲೂ ಮನೆಯಲ್ಲಿಯೇ ಕೊಳೆಯಬೇಕೆಂಬ ನಿರ್ಬಂಧವೇಕೆ?" ಎನ್ನುವರು ಅವರ ಅಭಿಪ್ರಾಯದಂತೆ ಗೃಹಕೃತ್ಯವು ಹೀನ ಉದ್ಯೋಗವಲ್ಲ ಸಂಸಾರವು ಸುಸೂತ್ರವಾಗಿ ನಡೆಯಬೇಕಾದರೆ ಗೃಹಕೃತ್ಯವೂ ದ್ರವ್ಯಾರ್ಜನೆಯೂ ಎರಡೂ ಬೇಕು. ಈ ಎರಡೂ ಕೆಲಸಗಳನ್ನು ಅವರವರ ದೇಹಕ್ಕೆ ಅನುಸರಿಸಿ ವಿಭಾಗಿಸಿರುವರೇ ಹೊರತು ಬೇರಲ್ಲ

ಸ್ತ್ರೀಯರಲ್ಲಿ ಕೋಮಲತೆಯೂ ಸೌಂದರ್ಯವೂ ಸೇರಿರುವುದು. ಪುರುಷನಲ್ಲಿ ಬಲವೂ ಧೈರ್ಯವೂ ಕೂಡಿರುವುದು ಆದುದರಿಂದ ಆತನ ದೃಢವಾದ ದೇಹಕ್ಕೆ ದ್ರವ್ಯಾರ್ಜನೆಯಂಥ ಒರಟುಕಾರ್ಯವೇ ಯೋಗ್ಯವಾದ ಕಾರ್ಯ ಕೋಮಲ ಶರೀರಿಯಾದ ಸ್ತ್ರೀಯಳಿಗೆ ಗೃಹಕೃತ್ಯವೇ ಯೋಗ್ಯವಾದ ಕಾರ್ಯ. ಯಾವ ಸ್ತ್ರೀಯು ತನ್ನ ಗೃಹವೆಂಬ ಚಿಕ್ಕರಾಜ್ಯದಲ್ಲಿ ಮಂತ್ರಿಯಂತೆ ಸರಿಯಾದ ಆಡಳಿತವನ್ನು ಜರುಗಿಸುತ್ತಾ ಉತ್ತಮವಾದ ಒಂದೇ ಒಂದು ಸುಶಿಕ್ಷಿತ ಸಂತಾನಫಲವನ್ನು ಜನಾಂಗದ ಸೇವೆಗಾಗಿ ಸಮರ್ಪಿಸುವಳೋ ಆ ತಾಯಿಯೇ ಗೃಹಕ್ಕೆ ಅಧಿದೇವತೆ. ಅಷ್ಟೇ ಏಕೆ? ನಮ್ಮ ದೇಶಕ್ಕೂ ಅಧಿದೇವತೆಯೆನಿಸುವಳು ಜೀಜಾಬಾಯಿಯು ಸುಶಿಕ್ಷಿತನಾದ ಒಬ್ಬ ಶಿವಾಜಿಯಿಂದ ದೇಶದಲ್ಲಿ ಸ್ವರಾಜ್ಯ ಸ್ಥಾಪಿಸುವಂತಾದಳು ಆ ಶಿವಾಜಿಯೇ ಅನೇಕ ವೇಳೆ ತನಗೆ ಸಲ್ಲತಕ್ಕ ಕೀರ್ತಿಯು ತಾಯಿಗೆ ಸಲ್ಲತಕ್ಕದ್ದೆಂದು ಹೇಳಿರುವುದು ಯುಕ್ತವೇ ಆಗಿದೆ

ಸಹಶಿಕ್ಷಣದಿಂದ ಅನುಭವವಿಲ್ಲದ ಮುಗ್ಧಬಾಲಿಕೆಯರ ಕೋಮಲ ಹಾಗೂ ನಿರ್ಮಲವಾದ ಹೃದಯಕಮಲಗಳಮೇಲೆ ಜಾಜ್ವಲ್ಯವಾದ ವಿಕಾರಭಾವಗಳ ಬಲವಾದ ಪೆಟ್ಟುಬಿದ್ದು ಅವರ ಸ್ವಾಭಾವಿಕ ಲಜ್ಜಾ, ಮೃದುಸ್ವಭಾವ, ಸಹಿಷ್ಣುತಾ, ದಯಾ ಮತ್ತು ಕೋಮಲತಾ ಮುಂತಾದ ಕುಲಸತಿಯರಿಗೆ ಭೂಷಣಗಳಾದ ಗುಣಗಳಿಗೆ ಆಘಾತ ಸಂಭವಿಸುವ ಸಂದರ್ಭವು ಇದೆ ಸಹಶಿಕ್ಷಣದಲ್ಲಿ ಪ್ರಶಿಕ್ಷಣದಲ್ಲಿಯೂ ಅವರಿಗೆ ಭಿನ್ನಭಿನ್ನ ಪ್ರಕೃತಿಯ ತರುಣರೊಂದಿಗೆ ಸಂಪರ್ಕವಾಗುವ ಅವಶ್ಯಕತೆಯು ಇದ್ದೇ ಇದೆ. ಇಂತಹ ಪರಿಸ್ಥಿತಿಯಲ್ಲಿ ತರುಣಿಯರು ಮತ್ತು ತರುಣರು ತಮ್ಮ ಪವಿತ್ರ ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳುವುದು ಅಸಾಧ್ಯವೇ ಆಗಿದೆ.

ಋಷಿಯು ಏಕಾಂತವಾಸಿಯಾಗಿ ನಿಶ್ಚಲಮನಸ್ಸಿನಿಂದಲೂ ಕಷ್ಟತರವಾದ ನಿಯಮಗಳಿಂದಲೂ ದೇವರನ್ನು ಒಲಿಸಿಕೊಳ್ಳುವಂತೆ, ವಿದ್ಯಾರ್ಥಿಯಾದವನು "ಒಬ್ಬನ ಪಾಠ ಇಬ್ಬರ ಊಟ" ಎಂಬ ಗಾದೆಮಾತಿನಂತೆ ಒಬ್ಬೊಂಟಿಗನಾಗಿ ಮನೋವಿಕಾರಕ್ಕೆ ಆಸ್ಪದವಾದ ಸಂಗೀತ, ನಾಟಕ, ಕಾದಂಬರಿ, ಸ್ತ್ರೀಯರ ದರ್ಶನ, ಸಂಭಾಷಣಾದಿಗಳನ್ನು ಸಹಿತ ದೂರೀಕರಿಸಿ ತನ್ನ ಆರಾಧ್ಯದೇವತೆಯಾದ ಸರಸ್ವತಿ (ವಿದ್ಯೆ) ಯನ್ನು ಒಲಿಸಿಕೊಳ್ಳಬೇಕು. ಹೀಗಿದ್ದರೂ ಮಹಾ ಋಷಿಗಳಿಂದಲೂ ಅಸಾಧ್ಯವಾದ ಸ್ತ್ರೀಯರೊಡನೆ ಸಹಶಿಕ್ಷಣವನ್ನು ನಡಿಸಬೇಕೆಂಬುದು ಹಟಮಾರಿತನವೂ ನಿರರ್ಥಕಶ್ರಮಕಾರಿಯೂ ಆಗಿದೆ. ಸ್ತ್ರೀಯರಿಗಾಗಿ ಪ್ರಾಥಮಿಕಶಾಲೆಯಿಂದ ಮೊದಲುಮಾಡಿಕೊಂಡು ಕಲಾಶಾಲೆಯವರೆಗೂ ಪ್ರತ್ಯೇಕ ಶಾಲೆಗಳಿವೆ. ಅದ್ದರಿಂದ ಸ್ತ್ರೀಯರಿಗೆ ರೈಲ್ವೆಗಾಡಿಗಳಲ್ಲಿಯೂ, ಸಿನಿಮಾ ನಾಟಕಗಳಲ್ಲಿಯೂ, ಕೀರ್ತನೆಪುರಾಣಗಳಲ್ಲಿಯೂ, ಬಸ್ಸುಗಾಡಿಗಳಲ್ಲಿಯೂ ಪ್ರತ್ಯೇಕ ಸ್ಥಾನಗಳು ಏರ್ಪಾಟಾಗಿವೆ.

[illegible] ಸಹಶಿಕ್ಷಣದ ಅನರ್ಥವನ್ನು ತಿಳಿದೇ ಇದನ್ನು [illegible]. ಆದರೆ ಪುರುಷರು ಮಾತ್ರ [illegible] ಸ್ತ್ರೀಯರಿಗೆ ತಮ್ಮ ಶಾಲೆಗಳಲ್ಲಿ [illegible]ವನ್ನು ನೋಡಿದರೆ ಇದು [illegible]. ಹೋಗುವ ಯಾತ್ರಿ [illegible] ಕುಟಿಲತನದ ಉದಾರತ್ವವು [illegible]

ಸಹಶಿಕ್ಷಣ [illegible]ವೆಂಬುದು ಕಪಟ ಸನ್ಯಾಸಿಗಳಂತೆ [illegible] ಒಂದು ನೆವದಿಂದ ತಮ್ಮ [illegible]ವನ್ನು ಪೂರ್ತಿ ಮಾಡಿಕೊಳ್ಳುವ ದುರುದ್ದೇಶದ [illegible] ಸಂಚಿಕೆಯಾಗಿದೆ ಇದೇ ವಿಷಯದಲ್ಲಿ ನಮ್ಮ ಹಿಂದೂದೇಶದ ಸುಧಾರಕರಲ್ಲಿ ಅಗ್ರಗಣ್ಯರೆನಿಸಿದ ಮಹಾತ್ಮಾ ಗಾಂಧಿಯವರು ಕರಾಚಿಯಲ್ಲಿ ನಡೆದ ಅಖಿಲ ಭಾರತದ [illegible] ಕಾರ್ಯಕಲಾಪಗಳನ್ನು [illegible] ಸಹಶಿಕ್ಷಣದ ಬಗ್ಗೆ ತಮ್ಮನ್ನು ಪ್ರಶ್ನಿಸಿದ ಕೆಪ್ಟನ್ ನಾಯರ್ ಎಂಬಾತನಿಗೆ ಹೇಳಿದುದೇನೆಂದರೆ—

"ಸಹಶಿಕ್ಷಣದಿಂದ ವಿಜಯವಾಗಿದೆಯೋ ಇಲ್ಲವೇ ಎಂಬುದನ್ನು ನಾನು ನಿರ್ಧಾರವಾಗಿ ಹೇಳಲಾರೆನು. ಪಾಶ್ಚಾತ್ಯ ದೇಶಗಳಲ್ಲಿ ಸಹಶಿಕ್ಷಣವು ರೂಢಿಯಲ್ಲಿದ್ದರೂ ಪ್ರಯೋಜನಕಾರಿಯಾದಂತೆ ಕಂಡು ಬಂದಿಲ್ಲ ಪರಿಶೋಧನೆ ನಡೆಯುವ ಬಗೆಯಿಂದ ನಾನು ಕೆಲವು ದಿನಗಳ ಹಿಂದೆ ಗಂಡುಹೆಣ್ಣು ಮಕ್ಕಳನ್ನು ಆಟ ಪಾಟ ವಿನೋದಗಳಲ್ಲಿಯೂ, ಮಲಗಿ ನಿದ್ರಿಸುವಾಗಲೂ ಸಹಿತ ಒಬ್ಬರೊಡನೊಬ್ಬರು ಸಹಕರಿಸಿ ವರ್ತಿಸುವಂತೆ ಏರ್ಪಡಿಸಿದ್ದೆನು. ಅಷ್ಟೇ ಅಲ್ಲ. ಅವರು ಒಂದೇ ಪಡಸಾಲೆಯಲ್ಲಿ ಮಲಗಬೇಕೆಂದೂ ನಿಯಮಿಸಿದ್ದೆ ಹೆಚ್ಚುಕಡಿಮೆ ನಡೆಯದಂತೆ ನಾನೂ ಶ್ರೀಮತಿ ಕಸ್ತೂರಿಬಾಯಿಯೂ ನೋಡಿಕೊಳ್ಳುತ್ತಿದ್ದೆವು. ಆದರೂ ಪರಿಣಾಮದಲ್ಲಿ ತೀರಾ ಕೆಡುಕಾದಂತೆ ಕಂಡುಬಂತು" ಎಂದು ಮುಂತಾಗಿ ಹೇಳಿದರು

ಇದು ಅವರ ಸತ್ಯ ಸಂಶೋಧನೆಗೆ ಭೂಷಣವೇ ಆಗಿದೆ ಏಕೆಂದರೆ ವಿಶ್ವಾಮಿತ್ರ, ಪರಾಶರ ಮೊದಲಾದ ಋಷಿಗಳು ಗಾಳಿ, ನೀರು ಒಣಗಿದ ಎಲೆಗಳನ್ನೇ ತಿಂದು ಅಸ್ಥಿಪಂಜರದಂತಿದ್ದ ಅವರೇ ಸ್ತ್ರೀಯಳ ಮುಖಕಮಲವನ್ನು ನೋಡಿದ ಮಾತ್ರದಿಂದ ಮೋಹಿತರಾದರು. ಎಂದ ಮೇಲೆ ಪೌಷ್ಟಿಕಾಹಾರಗಳನ್ನುಂಡು ನಾಟಕ, ಸಿನೇಮಾ ಕಾದಂಬರಿ ಮುಂತಾದವುಗಳಿಂದ ವಿಲಾಸ ಪ್ರಿಯರಾದ ಸ್ತ್ರೀಪುರುಷರು ಪರಸ್ಪರ ಸಂಸರ್ಗದಿಂದ ಇಂದ್ರಿಯವನ್ನು ನಿಗ್ರಹಿಸುವರೆಂಬುದು "ವಿಂಧ್ಯಃ ಪ್ಲವೇತ್ಸಾಗರೇ" ಎಂಬ ಪ್ರಪಂಚದ ಅನುಭವಪೂರಿತ ಭರ್ತೃಹರೀಶ್ವರನ ವಚನದಂತೆ ವಿಂಧ್ಯಪರ್ವತವು ಸಾಗರದಲ್ಲಿ ತೇಲಾಡಿದಂತೆ ಆಗುವುದೆಂಬುದು ಘಂಟಾಘೋಷವಾಗಿದೆ.

ಮತ್ತು "ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿಕರ್ಷತಿ" ಎಂತಹ ಮಹಾಜ್ಞಾನಿಯಾದವರೂ ತಾಯಿ, ಸೋದರಿಯರು, ಮಕ್ಕಳು ಮುಂತಾದ ಸ್ತ್ರೀಯರ ಏಕಾಸನದಲ್ಲಿ ವಾಸಿಸಬಾರದೆಂತಲೂ ಇಂದ್ರಿಯಗಳ ಸಮೂಹವು ಎಂಥಾ ಬಲವಂತ ಜ್ಞಾನಿಯನ್ನೂ ಕೂಡ ಆಕರ್ಷಣ ಮಾಡಿಕೊಳ್ಳುವುದೆಂತಲೂ ಹೇಳಿದೆ. ಏಕೆಂದರೆ ಸ್ತ್ರೀ ಎಂಬುದು ಅದೊಂದು ಸೂಜಿಗಲ್ಲಿನಿಂದ ನಿರ್ಮಿಸಿದ ಯಂತ್ರ. ಇದು ಪುರುಷನ ಇಂದ್ರಿಯಗಳೆಂಬ ಸೂಜಿಗಳನ್ನು ಸೆಳೆಯುವುದಾಗಿದೆ. ಅದಕ್ಕಾಗಿಯೇ "ಸ್ತ್ರೀಯಂತ್ರಂ ಕೇನಸೃಷ್ಟಂ" ಎಂದು ಪ್ರತೀಕಾರ ರಹಿತವಾದ ಈ ಸ್ತ್ರೀ ಯಂತ್ರವು ಯಾರಿಂದ ನಿರ್ಮಿತವಾಗಿದೆಯೋ ಎಂಬುದಾಗಿ ಜ್ಞಾನಿಗಳು ಆಶ್ಚರ್ಯದ ಉದ್ಗಾರವನ್ನು ತೆಗೆದಿದ್ದಾರೆ.

"ಅಗ್ನಿಕುಂಡಸಮಾನಾರೀ | ಘೃತಕುಂಭಸಮೋನರಃ॥ ಸಹಸ್ಥಿತಾ ಪರಸ್ತ್ರೀ ಚೇತ್|ಕಸ್ಯನೋಚ್ಚಲತೇಮನಃ" ಎಂದರೆ ಸ್ತ್ರೀಯಳು ಬೆಂಕಿಕುಂಡದಂತೆಯೂ ಪುರುಷನು ತುಪ್ಪದಕೊಡದಂತೆಯೂ ಇದ್ದು ಅವರಿಬ್ಬರನ್ನು ಒಂದೇ ಕಡೆಯಲ್ಲಿಟ್ಟು ಶಿಕ್ಷಣ ಕೊಡುವುದೆಂಬುದು ಹಾಸ್ಯಾಸ್ಪದ ಸಂಗತಿಯಾಗಿದೆ.

ಪ್ರಾಪಂಚಿಕ ಧರ್ಮದ ಮರ್ಮವನ್ನರಿತ ಕವಿಕುಲತಿಲಕನೆನಿಸಿದ ಕಾಳಿದಾಸನೂ ಕೂಡ "ತಯೋರ್ಜಗೃಹತುಃಪಾದಾನ್ | ರಾಜಾರಾಜ್ಞೀಚಮಾಗಧೀ | " ಎಂಬುದಾಗಿ ಗುರುಗಳಾದ ವಸಿಷ್ಠರ ಪಾದವನ್ನು ದಿಲೀಪ ಮಹಾರಾಜನಿಂದಲೂ ಗುರುಪತ್ನಿಯಾದ ಅರುಂಧತೀದೇವಿಯ ಪಾದವನ್ನು ರಾಣಿಯಾದ ಸುದಕ್ಷಿಣಾ ದೇವಿಯಿಂದಲೂ ಹಿಡಿಯಿಸಿ ಪ್ರತ್ಯೇಕವಾಗಿ ನಮಸ್ಕಾರ ಮಾಡಿಸಿರುವುದು ಆತನ ಲೌಕಿಕಾನುಭವದ ಪರಾಕಾಷ್ಠತೆಯನ್ನು ಸೂಚಿಸುತ್ತದೆ.

ನಮ್ಮ ವೀರಶೈವ ಧರ್ಮಶಾಸ್ತ್ರವಾದರೂ "ಸ್ತ್ರೀಭಿರೇವಸ್ತ್ರಿಯಃಪೂಜ್ಯಾಃ" ಎಂದು ಹೇಳಿರುವದು. ಮೋಕ್ಷಪ್ರಾಪ್ತಿಗೆ ಸ್ತ್ರೀಪುರುಷರಿಬ್ಬರೂ ಸಮಾನಾಧಿಕಾರಿಗಳೆಂದು ನಮ್ಮ ಮತದಲ್ಲಿ ಸ್ತ್ರೀಯರಿಗೂ ಸಹ ಪಂಚಾಚಾರ, ಷಟ್ಸ್ಥಲ, ಅಷ್ಟಾವರಣ ಮೊದಲಾದ ವಿಶಿಷ್ಟಕ್ರಿಯೆಗಳು ಪುರುಷರಿಗಿಂತಲೂ ಬೇರೆಯಾಗಿಲ್ಲ. ಈ ತರಹದ ಸಮಾನಾಧಿಕಾರತ್ವ ಕೊಟ್ಟಿರುವುದನ್ನು ನೋಡಿದರೆ ಸಹಶಿಕ್ಷಣದ ದುಷ್ಪರಿಣಾಮಗಳನ್ನು ಕಂಡು ಸ್ತ್ರೀಯರನ್ನು ಸ್ತ್ರೀಯರೇ ಪೂಜಿಸತಕ್ಕದ್ದೆಂದು, ದೂರಾಲೋಚನೆಯಿಂದ ನಿರ್ಧರಿಸಿ ಹೇಳಿರುವರು. ಈ ಸಹಶಿಕ್ಷಣದ ದೋಷದಿಂದಲೇ ಕಚನನ್ನು ಮೋಹಿಸಿದ ದೇವಯಾನೆಯು ಪಾತಿವ್ರತ್ಯವನ್ನು ಕಾಪಾಡಿಕೊಳ್ಳಲಾರದಾದಳೆಂತಲೂ ಚಂದ್ರನು ಗುರುಪತ್ನಿಯಾದ ತಾರೆಯನ್ನು ಮೋಹಿಸಿ ಕ್ಷಯಿಸುವಾತನಾದನೆಂತಲೂ ಮುಂತಾಗಿ ಪುರಾಣ, ಚರಿತ್ರೆಗಳಿಂದಲೂ ನಮ್ಮ ದೇಶದಲ್ಲಿ ನಡೆಯುತ್ತಿರುವ ಅನೇಕ ತರುಣ ತರುಣಿಯರ ಕರುಣಾಜನಕವಾದ ಅನರ್ಥಕಾರಿಯಾದ ನೂತನ ಚರಿತ್ರೆಗಳಿಂದಲೂ ಕರದರ್ಪಣದಂತೆ ಸರ್ವರಿಗೂ ಇದರ ಅನಿಷ್ಟಮಹಾಜ್ವಾಲೆಯು ಜಗತ್ತನ್ನೇ ತಳಮಳಗೊಳಿಸುತ್ತಿರುವದರಿಂದ ಸರ್ವರೂ ಈ ಬಗ್ಗೆ ಎಚ್ಚತ್ತು ಸನಾತನ ಧರ್ಮವನ್ನು ಅವಲಂಬಿಸತಕ್ಕದೆಂದು ಈ ಮೂಲಕ ಸೂಚಿಸುತ್ತೇನೆ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಗುರುತತ್ವಪ್ರಭಾಕರ

ಪರಮಾತ್ಮನ ಸ್ವರೂಪವನ್ನೂ ಜಗತ್ತಿನ ಸ್ವರೂಪವನ್ನೂ ಶ್ರವಣ ಮಾಡಿದಮೇಲೆ ಅವುಗಳನ್ನೆಲ್ಲಾ ಮನಸ್ಸಿನಲ್ಲಿ ತುಂಬಿ ಕೀರ್ತನ ರೂಪದಲ್ಲಿ ಹೊರಬೀಳಬೇಕು. ಆಗ ಅದರ ವೈಭವವು ಆನಂದದಾಯಕವಾಗಿರುವದು ಒಮ್ಮೆ ಪರಮಾತ್ಮನು ಜಗಜ್ಜನನಿಯಾದ ಪಾರ್ವತಿಗೆ ಹೇಳಿರುವದೇನೆಂದರೆ—

ನಾಹಂ ವಸಾಮಿ ಕೈಲಾಸೇ ನ ಮೇರೌ ನ ಚ ಮಂದರೇ |
ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ಪಾರ್ವತಿ ॥

"ಹೇ ಪಾರ್ವತಿ ನಾನು ಕೈಲಾಸದಲ್ಲಾಗಲಿ, ಮೇರು ಪರ್ವತದಲ್ಲಾದಲಿ ಅಥವಾ ಮಂದರಪರ್ವತದಲ್ಲಾಗಲಿ ಇರುವುದಿಲ್ಲ. ಆದರೆ ನನ್ನ ಭಕ್ತರು ಎಲ್ಲಿ ನನ್ನನ್ನು ಗಾನಮಾಡುತ್ತಾರೋ ಅಲ್ಲಿ ಇರುತ್ತೇನೆ." ಹೀಗೆಂದು ಹೇಳಿರುವ ಮಾತುಗಳಿಂದ ಕೈಲಾಸ, ಮೇರು, ಮಂದರ ಮೊದಲಾದ ಕಡೆಗಳಲ್ಲಿ ದೇವರಿಲ್ಲವೆಂದು ತಿಳಿಯಬಾರದು. ಪರಮಾತ್ಮನು ಇಲ್ಲದೆ ಇರುವ ಸ್ಥಲವೇ ಇಲ್ಲವೆಂಬುದು ಸರಿಯಷ್ಟೆ ಕೈಲಾಸ ಮೊದಲಾದುವುಗಳು ವಿಶೇಷವಾಗಿ ಅವನ ಸಾನ್ನಿಧ್ಯದ ಸ್ಥಳಗಳೇ ಆದರೂ ಪರಮಾತ್ಮನಿಗೆ ಕೀರ್ತನದ ಮೇಲೆ ಪ್ರೀತಿ ಹೆಚ್ಚು. ಅದರಲ್ಲಿಯೂ ಗಾಯನದಿಂದ ಕೂಡಿದ ಕೀರ್ತನವೆಂದರೆ ಅವನಿಗೆ ಪರಮ ಪ್ರೀತಿ. ಈ ಅಭಿಪ್ರಾಯವನ್ನು ತೋರಿಸುವುದಕ್ಕಾಗಿ ಪರಮಾತ್ಮನು ಕೈಲಾಸ ಮೊದಲಾದವುಗಳನ್ನು ಕಡಿಮೆಮಾಡಿ ಕೀರ್ತನವನ್ನು ಅಟ್ಟಕ್ಕೇರಿಸಿರುವನು. ದೇವರು ಸಾಮಗಾನಲೋಲನೆಂದು ಬಹಳವಾಗಿ ಪ್ರಸಿದ್ಧಿ ಇದೆ. ಎಲ್ಲಾ ಪ್ರಾಣಿಗಳಿಗೂ ಅಷ್ಟಿಷ್ಟಾದರೂ ಗಾನದಲ್ಲಿರುವ ಪ್ರವೃತ್ತಿಯನ್ನು ಸದುಪಯೋಗ ಮಾಡಿಕೊಂಡು ಎಲ್ಲರೂ ತನ್ನ ಕಡೆಗೆ ಬರಲೆಂದೇ ಆತನು ಗಾನಲೋಲನಾಗಿದ್ದಾನೆಂದು ತೋರುತ್ತದೆ. ಹಾಗಿಲ್ಲದಿದ್ದರೆ ಸಾನಂದಮೂರ್ತಿಯಾದ ಆತನು ತನ್ನ ಆನಂದಕ್ಕೆ ಗಾನವನ್ನು ಅವಲಂಬಿಸಬೇಕಾಗಿರಲಿಲ್ಲ. ಹಾಗೆ ಆತನು ನಮಗಾಗಿ ಗಾನಲೋಲನಾಗಿರುವದರಿಂದ ಪ್ರತಿಯೊಬ್ಬರೂ ಕೀರ್ತನದಿಂದ ಪರಮಾತ್ಮನನ್ನು ಒಲಿಸಿಕೊಳ್ಳುವ ಯತ್ನವನ್ನು ಮಾಡಬೇಕು.

ಇದರ ವಿಷಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ಹೇಳಿರುವುದೇನೆಂದರೆ—

೧. ಲೋಕಮಾತೆಯಾದ ಆದಿಶಕ್ತಿಯು ಪರದೆಯ ಹಿಂದುಗಡೆ ಕುಳಿತು ತನ್ನ ಕೆಲಸವನ್ನು ನಡೆಸುತ್ತಾ ತಾನು ಮಾತ್ರ ಯಾರಿಗೂ ಕಾಣಿಸಿಕೊಳ್ಳದೆ ಇರುವ ಕುಲೀನ ಸ್ತ್ರೀಯಂತೆ ಇರುವಳು. ನಮ್ಮ ಪ್ರೇಮಪೂರ್ವಕವಾದ ಕೀರ್ತನೆಗಳು ಮಾತ್ರ ಮಾಯೆಯೆಂಬ ಪರದೆಯನ್ನು ತೂರಿಕೊಂಡು ಆಕೆಯ ಬಳಿಗೆ ಹೋಗುತ್ತವೆ.

೨. ತಾಯಿಗೆ ಅನೇಕ ಮಕ್ಕಳಿರುತ್ತಾರೆ. ಆಕೆಯು ಒಂದಕ್ಕೆ ಒಂದು ಬೊಂಬೆಯನ್ನೂ ಇನ್ನೊಂದಕ್ಕೆ ಒಂದು ತುಂಡು ಮಿಠಾಯಿಯನ್ನೂ ಮತ್ತೊಂದಕ್ಕೆ ಒಂದು ಹವಳದ ಆಟದ ವಸ್ತುವನ್ನೂ ಕೊಡುತ್ತಾಳೆ. ಆಗ ಅವರೆಲ್ಲರೂ ಅವರವರ ಆಟದಲ್ಲಿಯೇ ತನ್ಮಯರಾಗಿ ತಮ್ಮ ತಾಯಿಯನ್ನು ಮರೆತುಬಿಡುತ್ತಾರೆ. ಆ ಸಮಯದಲ್ಲಿ ಆಕೆಯು ತನ್ನ ಮಟ್ಟಿಗೆ ತಾನು ಬೇರೆ ಕೆಲಸದಲ್ಲಿರುವಳು. ಆದರೆ ಆ ಮಕ್ಕಳುಗಳಲ್ಲಿ ಯಾವುದು ತನ್ನ ಆಟದ ಸಾಮಾನನ್ನು ಚೆಲ್ಲಿ, ಅಮ್ಮ, ಅಮ್ಮ ಎಂದು ಹಂಬಲಿಸುವದೋ ಆ ಮಗುವಿನ ಬಳಿಗೆ ಆಕೆಯು ಓಡಿಬಂದು ಅದನ್ನು ಎತ್ತಿಕೊಂಡು ಮುದ್ದಿಸುವಳು. ಅದುದರಿಂದ ಜನರು ವ್ಯರ್ಥವಾದ ಪ್ರಪಂಚ ವಿಷಯಗಳಲ್ಲಿ ಮುಳುಗಿ ನಮ್ಮ ಲೋಕಮಾತೆಯನ್ನು ಮರೆತಿದ್ದೇವೆ. ಆದರೆ ಅವುಗಳನ್ನೆಲ್ಲ ನಿರಾಕರಿಸಿ ಆಕೆಗೆ ಮೊರೆ ಇಟ್ಟರೆ ಆಕೆಯು ಒಡನೆಯೇ ಬಂದು ನಮ್ಮನ್ನು ಎತ್ತಿಕೊಳ್ಳುವಳು.

೩. ಎಲೆ ಹೃದಯವೇ, ಲೋಕಮಾತೆಯಾದ ದೇವಿಗೆ ನಿಜವಾಗಿ ಮೊರೆಯಿಡು. ಆಕೆಯು ನಿನ್ನ ಬಳಿಗೆ ಎಷ್ಟು ಬೇಗ ಓಡಿಬರುವಳೆಂಬುದನ್ನು ನೀನೇ ನೋಡುವೆ. ಮನಃಪೂರ್ವಕವಾಗಿ ಆಕೆಗೆ ಒಂದುಸಲ ಮೊರೆಯಿಟ್ಟರೆ ಸಾಕು. ಆಕೆ ಎಂದಿಗೂ ಅದಕ್ಕೆ ಕಿವಿಗೊಡದೆ ಇರುವುದಿಲ್ಲ.

ಕೀರ್ತನವೆಂದರೆ ಕನ್ನಡ ದೇಶದಲ್ಲಿ ಒಂದೊಂದು ಕಡೆ ಒಂದೊಂದು ಅರ್ಥವಿದೆ. ಮೈಸೂರು ಕಡೆಯಲ್ಲಿ ಕೀರ್ತನವೆಂದರೆ ಪದಗಳನ್ನು ರಾಗದಿಂದ ಹಾಡುವದು. ಧಾರವಾಡದ ಕಡೆಯಲ್ಲಿ ಕೀರ್ತನವೆಂದರೆ ತಾಳಮೇಳ ಗಾನಗಳೊಡನೆ ಪರಮಾತ್ಮನ ಕಥೆಯನ್ನು ಪ್ರತಿಪಾದಿಸುವುದು. ಯಾವ ಯಾವ ಕಡೆಯ ಅರ್ಥವಾದರೂ ಇರಲಿ, ಕೀರ್ತನವೆಂಬ ಸಂಸ್ಕೃತ ಶಬ್ದಕ್ಕೆ ಹೇಳುವದೆಂದರ್ಥ. ಇದರ ಪ್ರಕಾರ ಬರೇ ಪದಗಳನ್ನು ರಾಗದಿಂದ ಹಾಡುವುದೂ, ತಾಳಮೇಳಗಳೊಡನೆ ಪರಮಾತ್ಮನ ಕಥೆಯನ್ನು ಪ್ರತಿಪಾದಿಸುವದೂ ಇವೆರಡೇ ಅಲ್ಲದೆ ಪುರಾಣಗಳನ್ನು ಹೇಳುವದೂ ಇವೆಲ್ಲವೂ ಕೀರ್ತನಗಳೆ. ಶ್ರೀರಾಮದಾಸಸ್ವಾಮಿಗಳು ಕೀರ್ತನ ಶಬ್ದವನ್ನು ಈ ವ್ಯಾಪಕಾರ್ಥದಲ್ಲಿಯೇ ಇಟ್ಟುಕೊಂಡು ಕೀರ್ತನದ ಸ್ವರೂಪವನ್ನು ಕುರಿತು ತಮ್ಮ ದಾಸಬೋಧ ಗ್ರಂಥದಲ್ಲಿ ಬರೆದಿರುವ ತಾತ್ಪರ್ಯವೇನೆಂದರೆ—

"ಕೀರ್ತನಕಾರನು ಅಪ್ರತಿಹತವಾದ ತನ್ನ ವೈಖರಿಯಿಂದ ಪರಮಾತ್ಮನ ಮಹಿಮೆಯ ಪ್ರವಾಹವನ್ನು ಶ್ರೋತೃವೃಂದದಮೇಲೆ ಹಾಯಿಸಬೇಕು. ಕೀರ್ತನಕಾರನಿಗೆ ಅನೇಕ ಶಾಸ್ತ್ರಾಂತರಗಳು ಪರಿಚಯವಿದ್ದು ಅವುಗಳೆಲ್ಲಾ ಅಲ್ಲಿ ಸೂರೆಯಾಗಬೇಕು. ಸುಮ್ಮನೆ ಬರೆದಿಟ್ಟದ್ದನ್ನು ಅಥವಾ ಗಟ್ಟಿಮಾಡಿದ್ದನ್ನು ಗಿಳಿಯಂತೆ ಓದುವ ಅಥವಾ ಒಪ್ಪಿಸುವ ಕೀರ್ತನವು ಕೀರ್ತನವಲ್ಲ. ಕೀರ್ತನದಲ್ಲಿ ಸಮಯಕ್ಕೆ ತಕ್ಕಹಾಗೆ ಅನೇಕ ಕಡೆಗಳಿಂದ ಉದಾತ್ತ ವಿಚಾರಗಳು ಧುಮುಕುತ್ತಿರಬೇಕು. ಕೀರ್ತನಕಾರನು ಪ್ರತಿದಿವಸವೂ ಹೊಸಹೊಸ ಪ್ರಸಂಗಗಳನ್ನು ತೆಗೆಯಬೇಕು. ಅವುಗಳನ್ನು ಪ್ರತಿಪಾದಿಸುವಾಗ ನಾನಾ ವಿಧವಾದ ಆಕ್ಷೇಪಗಳನ್ನು ತಾನೇ ಎತ್ತಿ ಅವುಗಳಿಗೆಲ್ಲಾ ಸಭಿಕರು ತಲೆದೂಗುವಂತೆ ಸಮಾಧಾನವನ್ನು ಹೇಳಬೇಕು. ಕೀರ್ತನಸಮಯದಲ್ಲಿ ಬಗೆಬಗೆಯ ಧ್ಯಾನಗಳನ್ನೂ ವರ್ಣಿಸಬೇಕು. ಕೇಳುವವರ ಮನಸ್ಸಿನಲ್ಲಿ ಪರಮಾತ್ಮನ ಸಗುಣಮೂರ್ತಿಯು ಒಡೆದು ಮೂಡುವಂತೆ ಅದರ ಅಲಂಕಾರ ವಿಶೇಷಗಳ ವರ್ಣನಮಾಡಬೇಕು. ಪರಮಾತ್ಮನ ಯಶಸ್ಸು, ಪರಮಾತ್ಮನ ಪ್ರತಾಪ ಇವು ಕೇಳುವವರ ಮನಸ್ಸಿನಲ್ಲಿ ಮನೆಯನ್ನು ಮಾಡಿಕೊಳ್ಳಬೇಕು. ಕೀರ್ತನಕಾರನ ವಾಣಿಯ ಭಾಷಾಪಾಂಡಿತ್ಯವು ಸಭಿಕರನ್ನು ಬೆರಗುಮಾಡಿಬಿಡಬೇಕು; ಪರಮಾತ್ಮನ ಕಥೆಯನ್ನು ವಿವರಿಸುವಾಗ ನಡುನಡುವೆ ಚುಟ್ಟುಕಥೆಗಳನ್ನೂ ಐತಿಹಾಸಿಕ ಕಥೆಗಳನ್ನೂ ಹೇಳಿ ಜನರ ಮನಸ್ಸನ್ನು ಉಲ್ಲಾಸಗೊಳಿಸಬೇಕು. ತಾಳ, ಗಾಯನ ಮೃದಂಗ ಇವುಗಳಿಂದಲೂ ಜನರಮನಸ್ಸನ್ನು ಆಕರ್ಷಿಸಬೇಕು. ಸುವೃಷ್ಟಿಯಾದಾಗ ನೀರುತುಂಬಿ ಮೊರೆಯುತ್ತ ಹರಿಯುವ ನದಿಯಂತೆ ಕೀರ್ತನಕಾಲದಲ್ಲಿ ಪರಮಾತ್ಮನ ವಿಚಾರಪ್ರವಾಹವು ಜನರ ಕಿವಿಗಳಲ್ಲಿ ಭೋರ್ಗರೆಯುತ್ತಿರಬೇಕು. ಹೇಳುವವರಿಗೂ ಕೇಳುವವರಿಗೂ ರೋಮಾಂಚವುಂಟಾಗಿ ಆನಂದಾಶ್ರುಗಳು ಕೋಡಿಯೊಡೆಯಬೇಕು. ಕೀರ್ತನದಲ್ಲಿ ಬಗೆಬಗೆಯ ವೃತ್ತಪದ್ಯಗಳ ಪ್ರವೇಶವಾಗಬೇಕು. ಶೃಂಗಾರ ಮೊದಲಾದ ರಸಗಳಿಗೂ ಕೊರತೆಯಾಗಬಾರದು. ಸಾಮಾನ್ಯವಿಚಾರಗಳ ನಡುವೆ ವೇದಾಂತವಿಚಾರಗಳನ್ನು ಪೋಣಿಸಬೇಕು. ಕರ್ಮ ಉಪಾಸನ ಈ ಮಾರ್ಗಗಳನ್ನು ರಕ್ಷಣಮಾಡಿಕೊಂಡು ಜ್ಞಾನಮಾರ್ಗವನ್ನು ಹೇಳಬೇಕು. ಯಾವಸದ್ವೃತ್ತಿಯಲ್ಲಿಯೂ ಅನಾದರವನ್ನುಂಟುಮಾಡದಂತೆ ಎಚ್ಚರಿಕೆಯಿಂದಿರಬೇಕು.

ಶ್ರೀಸಮರ್ಥರು ಹೇಳುವಂತೆ ಇಷ್ಟೆಲ್ಲಾ ಗುಣವಿಶೇಷಗಳಿಂದ ಕೀರ್ತನಮಾಡುವವರೂ ಸಿಕ್ಕಬಹುದು. ಏಕೆಂದರೆ ಈಗಿನಕಾಲದಲ್ಲಿ ಪಾಂಡಿತ್ಯದ ಬೆಲೆಯೂ ಅಗ್ಗವಾಗಿದೆ. ಇದರಜೊತೆಗೆ ಅಲ್ಲಲ್ಲಿ ವಕ್ತೃತ್ವದ ಅಭ್ಯಾಸವೂ ಬೆಳೆಯುತ್ತಿದೆ. ಆದರೆ ಮೇಲೆಹೇಳಿದ ಗುಣಗಳ ಜೊತೆಗೆ ಇನ್ನೊಂದು ಗುಣವು ಅವಶ್ಯಕವಾಗಿರಬೇಕಾಗಿದೆ. ಅದು ಇವುಗಳ ಮೇಲೆಲ್ಲಾ ತನ್ನ ಬೆಳಕನ್ನು ಕೆಡಹುವಂಥದು. ಆ ಗುಣವಿದ್ದರೆ ವಕ್ತೃತ್ವವು ಕಾರ್ಯಕಾರಿಯಾಗುವುದು. ಇಲ್ಲದಿದ್ದರೆ ಅದೆ. ಅರಣ್ಯರೋದನವೇ ಸರಿ!

"ವಕ್ತಾ ಪಾಹಿಜೇ ಸಾಚಾರ ಅನುಭವಾಚಾ"

ಎಂದು ಹೇಳಿರುವಂತೆ ಕೀರ್ತನಕಾರನು ಆಚಾರಶೀಲನಾಗಿ ಅನುಭವಿಯಾಗಿರಬೇಕು. ಗಣಿತ, ಖಗೋಲ, ಭೂಗೋಲ ಮೊದಲಾದವುಗಳನ್ನು ಹೇಳುವವರು ಹೇಗಿದ್ದರೂ ನಡೆಯುತ್ತದೆ. ಧರ್ಮಪ್ರಚಾರಕ್ಕೆ ಮಾತ್ರ ಹಾಗೆ ನಡೆಯುವುದಿಲ್ಲ. ಆಚಾರಹೀನನೂ ವಕ್ತೃತ್ವದಲ್ಲಿ ಯಶಸ್ಸನ್ನು ಪಡೆಯಬಹುದು. ಅನಾಚಾರಿಯು ಹೇಳುವ ಗಣಿತ ಮೊದಲಾದವುಗಳು ಹೇಗೆ ಕಲಿಯುವವರ ಮನಸ್ಸಿನಲ್ಲಿ ಬಿಂಬಿಸುವವೋ ಹಾಗೆ ಅನಾಚಾರಿಯು ಹೇಳಿದ ಧರ್ಮಬೋಧೆಯು ಯಾರ ಮನಸ್ಸಿನಲ್ಲಿಯೂ ಬಿಂಬಿಸಲಾರದು. ಆದ್ದರಿಂದ ಕೀರ್ತನಕಾರನು ತನ್ನ ಆಚಾರವನ್ನು ಹೆಚ್ಚಾಗಿ ರಕ್ಷಣೆಮಾಡಿಕೊಂಡು ತಾನು ಹೇಳುವ ಸದುಪದೇಶಗಳನ್ನೆಲ್ಲಾ ತನ್ನ ಅನುಭವದಲ್ಲಿಟ್ಟುಕೊಳ್ಳಬೇಕು.

|| ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ||

ಶ್ರವಣದ ಅವಶ್ಯಕತೆ.

ಲೇ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೋಣೂರು.

ಶ್ರವಣಂ ಕೀರ್ತನಂ ಶಂಭೋಃ ಸ್ಮರಣಂ ಪಾದಸೇವನಂ |
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ ||೧||
ಏವಂ ನವವಿಧಾ ಭಕ್ತಿಃ ಪ್ರೋಕ್ತಾ ದೇವೇನ ಶಂಭುನಾ |
ದುರ್ಲಭಾ ಪಾಪಿನಾಂ ಲೋಕೇ ಸುಲಭಾ ಪುಣ್ಯಕರ್ಮಣಾಂ||೨||

ಶಿವಕಥೆಯನ್ನು ಕೇಳುವುದು, ಶಿವ ಸ್ತೋತ್ರಮಾಡುವುದು, ಶಿವನನ್ನು ಸ್ಮರಿಸುವುದು, ಶಿವನ ಪಾದಸೇವೆಯನ್ನು ಮಾಡುವುದು, ಶಿವನನ್ನು ಪೂಜಿಸುವುದು, ನಮಸ್ಕರಿಸುವುದು, ಶಿವನಲ್ಲಿ ಭೃತ್ಯಭಾವದಿಂದಿರುವುದು, ಶಿವನನ್ನು ಪ್ರೀತಿಸುವುದು, ಶಿವನಲ್ಲಿ ಆತ್ಮಸಮರ್ಪಣಮಾಡುವುದು, ಈ ರೀತಿ ಒಂಭತ್ತು ವಿಧವಾದ ಭಕ್ತಿಯು ಶಿವನಿಂದ ಹೇಳಲ್ಪಟ್ಟಿದೆ. ಈ ನವವಿಧ ಭಕ್ತಿಯು ಲೋಕದಲ್ಲಿ ಪಾಪಿಗಳಿಗೆ ದುರ್ಲಭವಾಗಿಯೂ, ಪುಣ್ಯಾತ್ಮರಿಗೆ ಸುಲಭವಾಗಿಯೂ ಇರುವುದು. ಎಂದು ಸಿದ್ಧಾಂತಶಿಖಾಮಣಿಯಲ್ಲಿ ಶ್ರೀರೇಣುಕರು ಅಗಸ್ತ್ಯಮುನಿಗೆ ಬೋಧಿಸಿದ್ದಾರೆ. ಶ್ರವಣವೆಂದರೆ ಕೇಳುವದು ಎಂದು ಅರ್ಥವಾಗುವದು. ಇದು ಅನೇಕವಿಧವಾಗಿರುವದು. ಅದರಲ್ಲಿ ಏನನ್ನು ಕೇಳಬೇಕು ಏನನ್ನು ಕೇಳಬಾರದು ಎಂದು ಪ್ರಶ್ನೆ ಹೊರಡುವದು. ಅದಕ್ಕೆ ಉತ್ತರ—ಜಾರ, ಚೋರ, ವಿಟ, ವೇಶ್ಯಾ ಇವರೇ ಮೊದಲಾದವರ ಚರಿತ್ರವನ್ನು ಎಂದೂ ಕೇಳಬಾರದು. ಏಕೆಂದರೆ ಅವು ಮನುಷ್ಯರ ಮನಸ್ಸನ್ನು ಕೆಡಿಸಿ ಅಧೋಗತಿಗೆ ಒಯ್ಯುತ್ತವೆ. ಗುರು-ದೇವರ-ಸತ್ಪುರುಷರ ಚರಿತ್ರೆಗಳನ್ನು ಯಾವಾಗಲೂ ಶುದ್ಧಮನಸ್ಸಿನಿಂದ ಕೇಳುತ್ತ, ಅದರಂತೆ ನಡೆಯುತ್ತ ಹೋದರೆ ಮನುಷ್ಯನಿಗೆ ಸದ್ಗತಿಯಾಗುವದು. ಕೇಳುವವರು ಅನೇಕ ಪ್ರಕಾರದಿಂದ ಹೋಗುತ್ತಾರೆ. ಕೆಲವರು ಗುರು-ಶಿವ-ಸತ್ಪುರುಷರ ಮಹಿಮಾತಿಶಯಗಳನ್ನು ಕೇಳಿ ಅದರಂತೆ ನಡೆದು ಮುಕ್ತಿಯನ್ನು ಹೊಂದಬೇಕೆನ್ನುವರು. ಕೆಲವರು ಅಲ್ಲಿಯೇ ಒಂದು ಕಿವಿಯಿಂದ ಕೇಳಿ ಒಂದು ಕಿವಿಯಿಂದ ಬಿಟ್ಟುಬಿಡುವರು. ಕೆಲವರು ಮನೆಯಲ್ಲಿ ಕುಳಿತು ಹರಟೆಯನ್ನು ಹೊಡೆಯುವುದಕ್ಕಿಂತಲೂ, ಅಲ್ಲಿಯೇ ಮಂದಿಯ ಸಂಗಡ ಹೋದರಾಯಿತೆಂದು ಹೋಗುವರು. ಕೆಲವು ಸ್ತ್ರೀಯರು ಪುರುಷರನ್ನೂ, ಕೆಲವು ಪುರುಷರು ಸ್ತ್ರೀಯರನ್ನೂ ಕಾಮದೃಷ್ಟಿಯಿಂದ ನೋಡಲಿಕ್ಕೆ ಹೋಗುವರು. ಕೆಲವರು ವಸ್ತ್ರ ಪಡವೆಗಳನ್ನು ಕದಿಯಲಿಕ್ಕೆ ಹೋಗುವರು. ಕೆಲವರು ಬರಿಗಾಲಿನಿಂದ ಹೋಗಿ ಎರಡನೆಯವರ ಪಾದರಕ್ಷೆಯನ್ನು ಮೆಟ್ಟಿಕೊಂಡು ಹೋಗುವರು. ಕೆಲವರು ಹೇಳುವದನ್ನು ಕೇಳಿ ನಾವು ಅದರಂತೆ ನಡೆಯಬೇಕೆಂದು ಅಲ್ಲಿ ವೈರಾಗ್ಯವನ್ನು ತಾಳಿ ಮನೆಗೆ ಬಂದೊಡನೆ ಬಿಟ್ಟುಬಿಡುತ್ತಾರೆ. ಯಾರು ಶುದ್ಧಮನಸ್ಸಿನಿಂದ ಕೇಳಿ ಅದನ್ನು ಮನನಮಾಡಿಕೊಂಡು, ಅದರಂತೆ ನಡೆಯುವರೋ ಅವರಿಗೆ ಶ್ರವಣ ಫಲವು ದೊರಕುವದಲ್ಲದೆ, ಉಳಿದವರಿಗೆ ದೊರೆಯಲಾರದು. "ಕಸಬರಿಗೆ ಕೈಲಾಸಕ್ಕೆ ಹೋದರೂ ಹುಡುಗುವದು ತಪ್ಪಲಿಲ್ಲ" ಎಂಬ ಗಾದೆಯಂತೆ ನಾವು ಎಷ್ಟು ಶಾಸ್ತ್ರ ಪುರಾಣವನ್ನು ಕೇಳಿದರೇನು ನಮ್ಮ ನಡೆ-ನುಡಿಗಳನ್ನು ತಿದ್ದಿಕೊಳ್ಳದಿದ್ದರೆ, ನಮ್ಮ ಜನ್ಮವು ವ್ಯರ್ಥವೇ ಸರಿ!

ಅಪೂರ್ಣಪ್ರಜ್ಞರಿಗೆ ಉಂಟಾಗುವ ಹಂಗಾಮಿ ವೈರಾಗ್ಯಗಳು ವ್ಯಸನಕಾಲದಲ್ಲಿ ನಿರುತ್ಸಾಹಿಗಳಾಗಿ ಏನಾದರೂ ಅನುಕೂಲ ದೊರೆತರೆ, ಯಥಾಪ್ರಕಾರ ಉತ್ಸಾಹಿಗಳಾಗುವ ಪ್ರಸೂತಿ ವೈರಾಗ್ಯ, ನಳ-ಪಾಂಡವಾದಿಗಳ ಜೀವನಚರಿತ್ರೆಯನ್ನು ಕೇಳುವಾಗ ಜಗತ್ತಿನ ಸಂಬಂಧವಾದ ಭೋಗ ಭಾಗ್ಯಗಳು ನಿತ್ಯವಲ್ಲವೆಂದು ತಿಳಿದು, ಉದಾಸೀನಮಾಡಿ ಉತ್ತರ ಕ್ಷಣದಲ್ಲಿಯೇ ಕಾರ್ಯ ತತ್ಪರರಾಗುವ ಪುರಾಣ ವೈರಾಗ್ಯ, ಮತ್ತು ಯಾರಾದರೂ ಶವವನ್ನು ಸಂಸ್ಕಾರಮಾಡುತ್ತಿರುವಾಗ ಅಳುವದನ್ನು ಕಂಡು ದೇಹವು ಅನಿತ್ಯವಾದದ್ದು ಯಾರಿಗೇನು ಸ್ಥಿರವೆಂದು ದೇಹದ ವಿಷಯದಲ್ಲಿ ಅನಾದರಭಾವನೆಯನ್ನು ತಾಳಿ, ಮನೆಗೆ ಬಂದೊಡನೆ ಊಟ-ಉಪಚಾರಗಳಿಂದ ಶರೀರವನ್ನು ಪೋಷಿಸುವ ಸ್ಮಶಾನ ವೈರಾಗ್ಯ, ಈ ಮೂರೂ ವೈರಾಗ್ಯಗಳು ದಿವಸಕ್ಕೆ ಎಷ್ಟುಸಾರೆ ಕೋಲ್ಮಿಂಚಿನಂತೆ ಹೊಳೆದು ಅಳಿದು ಹೋಗುವವು. ಇಂತಹ ಹಂಗಾಮಿ ವೈರಾಗ್ಯಗಳಿಂದ ಏನೂ ಉಪಯೋಗವಿಲ್ಲವು. ರಾಮದಾಸರು ಸಹ—

ವಿಷಯಾಂಧರ್ ಶ್ರವಣಕೆ ಐದು |
ತೊಸವೇಗಳ್ ಸ್ತ್ರೀಯರನ್ನೆ ಕಾಮಿಸಿ ನೋಳ್ಪರ್ ||
ಪೊಸಪಾದರಕ್ಷೆಗಳನೆ |
ಬ್ಬಿಸಿಕೊಂಡೊಯ್ಯುರವರತೆ ಚೋರಾಗ್ರಣಿಗಳ್ ||೧||

ಈ ಪ್ರಕಾರ ದಾಸಬೋಧ ಗ್ರಂಥದಲ್ಲಿ ಬೋಧಿಸಿದ್ದಾರೆ. ಹೇಳುವವರು ನೀತಿವಂತರಾಗಿದ್ದರೆ ಕೇಳುವವರಿಗೆ ವಿಶೇಷ ಪರಿಣಾಮವಾಗುತ್ತದೆ. ಇಲ್ಲದಿದ್ದರೆ ಹೇಳುವವರೇ ಶಾಸ್ತ್ರದಂತೆ ನಡೆಯುವದಿಲ್ಲ; ನಮಗೇನು ಬಿಡುಯೆಂದು, ಉದಾಸೀನ ಮಾಡುವರು. ಆದಕಾರಣ ಬೋಧಕರು ತಾವು ಮೊದಲು ಶಾಸ್ತ್ರತತ್ವದಂತೆ ನಡೆದು ಅನಂತರ ಎರಡನೆಯವರಿಗೆ ಬೋಧಿಸಬೇಕು.

ಹೇಳುವವರೇ ಆಗಲಿ, ಕೇಳುವವರೇ ಆಗಲಿ, ತತ್ವದಂತೆ ನಡೆದರೇನೇ ಅದರ ಫಲವು ಸಿಗುತ್ತದಲ್ಲದೆ, ನಡೆಯದೆ ಹೇಳುವವರಿಗಾಗಲಿ, ಕೇಳಿ ನಡೆಯದಿರುವವರಿಗಾಗಲಿ ಫಲವು ಸಿಗಲಾರದು. ಅವರವರ ಫಲವು ಅವರಿಗೆ. ಇಂದಬಳಿಕ ಹೇಳುವವರು ಹ್ಯಾಗೇ ಇರಲಿ, ಅವರ ವಿಚಾರ ನಮಗೆ ಏತಕ್ಕೆ ಬೇಕು? ನಮಗೊಂದು ಸದ್ಬೋಧವನ್ನು ಮಾಡುತ್ತಾರೆ. ಅದರಂತೆ ನಾವು ನಡೆದು ನಮ್ಮ ಆತ್ಮೋದ್ಧಾರಮಾಡಿಕೊಂಡರೆ ಸಾಕು; ಈ ಮಾತು ಕೇಳುವವರು ಲಕ್ಷ್ಯದಲ್ಲಿಡತಕ್ಕದ್ದು. ಹೇಳುವವರು ಲೌಕಿಕ ತಾರತಮ್ಯಾನುಸಾರವಾಗಿ ವಯೋಮಾನದ ಮೇಲಿಂದ ವಿಷಯವನ್ನು ಬೋಧಿಸಬೇಕು. ಪ್ರಾಯದ ಹುಡುಗರಿಗೆ ಭಕ್ತಿನೀತಿಯನ್ನೂ, ವಯೋವೃದ್ಧರಿಗೆ ವೇದಾಂತ ತತ್ವವನ್ನೂ, ಸ್ತ್ರೀಯರಿಗೆ ಪಾತಿವ್ರತ್ಯ ಸ್ತ್ರೀಧರ್ಮ ನೀತಿಯನ್ನೂ ಬೋಧಿಸಬೇಕು. ಕೇಳುವವರು ಹೇಳಿದಂತೆ ನಡೆಯುತ್ತ ಹೋದರೆ ಹೇಳುವವರಿಗೆ ಹುರುಪು ಬರುತ್ತದೆ. ಇಲ್ಲವಾದರೆ ಉತ್[illegible]

(೬ನೆಯ ಪುಟವನ್ನು ನೋಡಿ)

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ
ಹಾಗೂ
ಶ್ರೀಜಗದ್ಗುರು ದಾರುಕಾಚಾರ್ಯರ
ಜಯಂತೀಮಹೋತ್ಸವಗಳು.

ವೈಶಾಖ ಶು ೩ ಶನಿವಾರ. ವೈಶಾಖ ಶು ೫ ಸೋಮವಾರ.

ಶ್ರೀದಾಕ್ಷಾರಾಮಕ್ಷೇತ್ರ [illegible]
(ಭೀಮೇಶ್ವರ) ಲಿಂಗದಿಂದ ಶ್ರೀಜಗದ್ಗುರು
ಏಕೋರಾಮಾರಾಧ್ಯರ ಅವತಾರ

ಶ್ರೀ ಉಜ್ಜಯಿನಿ ಸಿದ್ಧೇಶ್ವರ [illegible]
ಶ್ರೀಜಗದ್ಗುರು ದಾರುಕಾಚಾರ್ಯರ
ಅವತಾರ

ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತ ಪವಿತ್ರಕ್ಷೇತ್ರ ಮಸ್ತಕಮಣೀಭೂತಗಳಾದ ದಾಕ್ಷಾರಾಮಕ್ಷೇತ್ರ. ಉಜ್ಜಯಿನೀಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀಭೀಮೇಶ್ವರ, ಶ್ರೀ ಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ ಪರಮಪವಿತ್ರವಾದ ವೀರಶೈವ ಸಿದ್ಧಾಂತವನ್ನು ಭೂಮಂಡಲದಲ್ಲಿ ಸಂಗೋಪಿಸಿ ವ್ಯಾಸ, ದಧೀಚಿ ಮೊದಲಾದ ಅನಂತ ಜನ ಮಹರ್ಷಿಗಳನ್ನೂ, ಗೌತಮೇಂದ್ರ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೋ, ಅಂತಹ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗುವುದರಿಂದ ಸರ್ವ ಗುರುಭಕ್ತರೂ ಈ ಜಯಂತೀಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು. ವೈಶಾಖ ಶು|| ೩ ಶನಿವಾರ ತಾ|| **೧೮-೪-೧೯೪೨**ನೆಯ ದಿವಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವನ್ನೂ, ವೈಶಾಖ ಶು|| ೫ ಸೋಮವಾರ ತಾ|| **೨೦-೪-೧೯೪೨**ನೆಯ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀಮಹೋತ್ಸವಗಳನ್ನು ಆಯಾ ಪವಿತ್ರತಿಥಿಗಳಲ್ಲಿ ಅತ್ಯಂತ ಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಅದರಂತೆಯೇ ಶುದ್ಧಸಂಪ್ರದಾಯದ ವೀರಶೈವರು ಸದ್ಯಃ ಪ್ರಾಪ್ತವಾಗಿರುವ ಆಚಾರ್ಯರ ಜಯಂತೀಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ ವೈಭವದಿಂದಲೂ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಯುದ್ಧವಾರ್ತೆ.

ಅಂಡಮಾನಿನ ಚೀಫ್‌ಕಮಿಶನರು ಜಪಾನಿನ ಸೆರೆಯಲ್ಲಿದ್ದಾರೆ

ಅಂಡಮಾನ ದ್ವೀಪದಲ್ಲಿ ಬ್ರಿಟನ್ನಿನ ಚೀಫ್‌ಕಮಿಷನರಾಗಿದ್ದ ಶ್ರೀ ಒ ಎಫ್ ವಾಟರ್‌ಫಾಲ್‌ರವರು ಈಗ ಜಪಾನರ ಕೈಸೆರೆಯಾಗಿದ್ದಾರೆಂದು ತಿಳಿದುಬಂದಿದೆ.

ಅಂಡಮಾನಿಗೂ ಭಾರತಕ್ಕೂ ಇರುವ ದೂರ

ಈಗ ಬಂಗಾಳಾ ಕೊಲ್ಲಿಯಲ್ಲಿ ಜಪಾನರು ಆಕ್ರಮಿಸಿರುವ ಅಂಡಮಾನ ದ್ವೀಪವು ಕೊಲಂಬೋ ನಗರಕ್ಕೆ 640 ಮೈಲಿಗಳು, ಮದರಾಸಿಗೆ 840 ಮೈಲಿಗಳು, ಕಲ್ಕತ್ತಾ ನಗರಕ್ಕೆ 790 ಮೈಲಿಗಳು, ರಂಗೂನ್ ನಗರಕ್ಕೆ 410 ಮೈಲಿಗಳು ದೂರವಿರುವದು ಹೀಗೆ ಮಧ್ಯದಲ್ಲಿರುವ ಆಯಕಟ್ಟಿನ ಪ್ರದೇಶವು ಶತ್ರುಗಳ ಹಸ್ತಗತವಾದುದು ಭಾರತದ ಯುದ್ಧಭೀತಿಯನ್ನು ವಿಶೇಷವಾಗಿ ಹೆಚ್ಚಿಸಿದೆ.

ಕೊಲಂಬೋ ದಾಳಿಯಿಂದಾದ ನಷ್ಟ ಅತ್ಯಲ್ಪ.

ಕಳೆದ 5ನೆಯ ತಾರೀಖಿನದಿವಸ ಸಿಲೋನಿನ ಮುಖ್ಯ ಪಟ್ಟಣವಾದ ಕೊಲಂಬೋ ನಗರದ ಮೇಲೆ ಶತ್ರುಗಳು ನಡೆಸಿದ ವಿಮಾನದಾಳಿಯಿಂದಾದ ನಷ್ಟವನ್ನು ಪರಿಶೀಲಿಸಲು ಗವರ್ನರವರು ನಗರದಲ್ಲೆಲ್ಲ ಸಂಚರಿಸಿ ವ್ಯಾಪಾರಿಗಳೊಡನೆ ಮಾತನಾಡಿ, ಭಾನುವಾರದ ಮುತ್ತಿಗೆಯಲ್ಲಿ ಕೊಲಂಬೋದಲ್ಲಿ ಅಪಾಯಕ್ಕೊಳಗಾದವರ ಸಂಖ್ಯೆ ಅತ್ಯಲ್ಪವೆಂದೂ, ಒಟ್ಟು ಅಪಾಯಕ್ಕೆ ಶಿಕ್ಕ 50 ಮಂದಿಯಲ್ಲಿ 20 ಮಂದಿ ನಗರದಲ್ಲಿ ಅಪಾಯಕ್ಕೆ ಶಿಕ್ಕರೆಂದೂ ಇದು ಲಂಡನ್ನಿನ ಬೀದಿಗಳಲ್ಲಿ ದಿನವಹಿ ಒದಗುವ ಅನಾಹುತಗಳಿಗೆ ಶಿಕ್ಕವರ ಸಂಖ್ಯೆಗಿಂತ ಕಡಮೆಯೆಂದೂ, ಯಾರೂ ನಗರವನ್ನು ತ್ಯಜಿಸಿ ಓಡಿಹೋಗುವ ಅವಶ್ಯಕತೆ ಇಲ್ಲವೆಂದೂ ಹೇಳಿದರು

ಜನರು ಮದ್ರಾಸ್ ನಗರವನ್ನು ತ್ಯಜಿಸುತ್ತಿದ್ದಾರೆ

ತೆಲಗುದೇಶದಲ್ಲಿರುವ ವಿಶಾಖಪಟ್ಟಣ ಮತ್ತು ಕೋಕನಾಡಗಳಮೇಲೆ ಜಪಾನರು ವಿಮಾನಮುತ್ತಿಗೆಯನ್ನು ನಡೆಯಿಸಿದುದರಿಂದ ಮದರಾಸ್ ನಗರದ ಜನರು ಭಯಗ್ರಸ್ತರಾಗಿ ಸಾವಿರಾರು ಸಂಖ್ಯೆಯಲ್ಲಿ ಮದರಾಸನ್ನು ತ್ಯಜಿಸಿ ದಕ್ಷಿಣ ಜಿಲ್ಲೆಗಳಿಗೂ ಮೈಸೂರು ಮೊದಲಾದ ಮಧ್ಯಪ್ರದೇಶಗಳಿಗೂ ಬರುತ್ತಿದ್ದಾರೆ. ಕಳೆದ ಸೋಮವಾರ ಎಗ್ಮೋರ್ ಸ್ಟೇಶನ್ನಿನಿಂದ ಸಾಧಾರಣವಾಗಿ ಹೊರಡುವ ರೈಲುಗಳಲ್ಲದೆ 4 ಸ್ಪೆಶಲ್ ರೈಲುಗಳನ್ನು ಬಿಡಲಾಯಿತು ಮಂಗಳವಾರ ಮತ್ತೆ 3 ಸ್ಪೆಶಲ್ ರೈಲುಗಳು ಹೊರಟವು ಸೆಂಟ್ರಲ್ ಸ್ಟೇಶನ್ನಿನಿಂದಲೂ ಸ್ಪೆಶಲ್ ರೈಲುಗಳು ಹೊರಟವು 6ನೆಯ ತಾರೀಖಿನದಿವಸ ಸೆಂಟ್ರಲ್ ಸ್ಟೇಶನ್ ಒಂದರಲ್ಲೇ 12 ಸಾವಿರ ಜನರಿಗಿಂತ ಹೆಚ್ಚಾಗಿ ಹೊರಟರೆಂದೂ ಒಟ್ಟು 50600 ರೂಪಾಯಿಗಳ ಟಿಕೆಟುಗಳು ಮಾರಾಟವಾದವೆಂದೂ ಮದರಾಸಿನಿಂದ ಹೊರಕ್ಕೆ ಹೋಗುವವರ ಗಲಾಟೆಯು ಇನ್ನೂ ಕಡಿಮೆಯಾಗಿಲ್ಲವೆಂದೂ ತಿಳಿದುಬರುತ್ತದೆ.

ಮದ್ರಾಸ್ ಸರ್ಕಾರದ ಪ್ರಕಟನೆ

೬ನೇ ತಾ|| ದಿನ "ಕೋಕನಾಡದಮೇಲೂ ವಿಶಾಖಪಟ್ಟಣದಮೇಲೂ ವಿಮಾನಮುತ್ತಿಗೆ ನಡೆಯಿತು. ಜಪಾನರು ವಿಶಾಖಪಟ್ಟಣ ಬಂದರಿಗೆ ಬರುತ್ತಿದ್ದ ಹಡಗುಗಳಮೇಲೆ ಮೊದಲು ಮುತ್ತಿಗೆ ನಡೆಸಿದರು. ಮಧ್ಯಾಹ್ನ 1 30 ಘಂಟೆಗೆ, 'ಪುನಃ' ಸಾಯಂಕಾಲ 5 ಘಂಟೆಗೆ 'ಡಾಕ್' ಪ್ರದೇಶಗಳ ಮೇಲೆ ವಿಮಾನ ಮುತ್ತಿಗೆಗಳನ್ನು ನಡೆಸಲಾಯಿತು. ಈ ಎರಡು ವಿಮಾನಮುತ್ತಿಗೆ

ಗಳ [illegible] ಜಪಾನರು 10ಕ್ಕಿಂತ ಹೆಚ್ಚಾಗಿ ವಿಮಾನಗಳನ್ನು ಉಪಯೋಗಿಸಲಿಲ್ಲ 'ಹಾಕ್' ಕ್ಷೇತ್ರದಲ್ಲಿ 20 ಬಾಂಬು ಬಿದ್ದವು. ಬಂದರಿನ ಕೆಲವು ಪ್ರದೇಶಗಳಿಗೆ ಸ್ವಲ್ಪ ನಷ್ಟವಾಯಿತು. ಜನರಿಗೆ ಹೆಚ್ಚು ವಿಪತ್ತು ಸಂಭವಿಸಲಿಲ್ಲ. ಊರಿನ ಮಧ್ಯದಲ್ಲಿ ಬಾಂಬುಗಳೇನೂ ಬೀಳಲಿಲ್ಲ

ಮಾಂಡಲೆ ನೆಲಸಮವಾಯಿತು

ಜಪಾನ್ ವಿಮಾನದಳದವರು ಬರ್ಮಾಪ್ರಧಾನ ನಗರವಾದ ಮಾಂಡಲೆಯಮೇಲೆ ನಿಷ್ಕರುಣೆಯಿಂದ ಅಸಂಖ್ಯಾತವಾದ ಬಾಂಬುಗಳನ್ನು ಹಾಕಿ ಚರ್ಚುಗಳನ್ನೂ, ಆಸ್ಪತ್ರೆಗಳನ್ನೂ, ಜನರ ಮನೆಮಠಗಳನ್ನೂ, ವಿಶೇಷವಾಗಿ ನಾಶಗೊಳಿಸಿದ್ದಾರೆ. ಈ ಕಟ್ಟಡಗಳೆಲ್ಲವೂ ಮುಖ್ಯವಾಗಿ ಮರದಿಂದಲೇ ತಯಾರಾಗಿದ್ದುದರಿಂದ ಅವು ಬಹುಬೇಗನೆ ಅಗ್ನಿಗೆ ಆಹುತಿಯಾದವು ಬೆಂಕಿಯನ್ನು ಆರಿಸುವುದೇ ಅಸಾಧ್ಯವಾಗಿದ್ದಿತು ಇದರಿಂದಾದ ಸಾವುನೋವುಗಳು ವಿಶೇಷವಾಗಿವೆ ಶತ್ರುವಿಮಾನದಾಳಿ ನಡೆಯುವ ಸೂಚನೆಯೇ ಜನರಿಗೆ ತಿಳಿಯಲಿಲ್ಲವಾದ್ದರಿಂದ ಜನರಾರೂ ರಕ್ಷಣೆ ಪಡೆಯಲಿಲ್ಲ ಅತ್ಯಂತಸುಂದರನಗರವಾದ ಮಾಂಡಲೆಯು ಈಗ ಸಂಪೂರ್ಣವಾಗಿ ನೆಲಸಮವಾಗಿದೆ

ಮೆಡಿಟರೇನಿಯನ್ ಯುದ್ಧ

ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟನಿಗೆ ಸೇರಿದ ಭದ್ರವಾದ ಮತ್ತು ಆಯಕಟ್ಟಿನ ಸ್ಥಳವಾದ ಮಾಲ್ಟಾ ದ್ವೀಪದಮೇಲೆ ಶತ್ರುಗಳು ಒಂದೇ ಸಮನೆ ಉಗ್ರ ವಿಮಾನ ಮುತ್ತಿಗೆಗಳನ್ನು ನಡೆಸುತ್ತಿದ್ದಾರೆ ಲಿಬಿಯಾ ಅಥವಾ ಸಿರಿಯಾದಲ್ಲಿ ಕದನವಾರಂಭಿಸುವ ಪೂರ್ವಭಾವಿಯಾಗಿ ಈ ಮುತ್ತಿಗೆಯನ್ನು ನಡೆಸುತ್ತಿರುವದಾಗಿ ಊಹಿಸಲಾಗಿದೆ. ನಾಜಿ ಪ್ಯಾರಾಚೂಟ ಸೈನಿಕರ ಮುಖ್ಯಾಧಿಕಾರಿಗಳು ಗ್ರೀಸ್ ಮತ್ತು ಕ್ರೀಟಗಳಿಗೆ ಭೇಟಿಯಿತ್ತು ಈಗ ಲಿಬಿಯಕ್ಕೆ ಹೋಗಿದ್ದಾರೆ. ಕಳೆದ ವರ್ಷ ಲಂಡನ್ನಿನ ಮೇಲೆ ನಾಜಿಗಳು ನಡೆಸಿದ ಉಗ್ರವಿಮಾನ ಮುತ್ತಿಗೆಯ ಚಾಲಕರಾಗಿದ್ದ ಫೀಲ್ಡ್ ಮಾರ್ಷಲ್ ಕೆಸಲ್‌ರಿಂಗ್‌ರವರು ಜ|| ರೋಮೆಲ್‌ರವರೊಂದಿಗೆ ಸಹಕರಿಸುತ್ತಿದ್ದಾರೆ ಇವರು ಹಿಟ್ಲರರ ಜನರಲ್‌ಗಳಲ್ಲಿ ಅತ್ಯಂತ ಬಲಿಷ್ಠರಾದವರು ಇವರು ಮೆಡಿಟರೇನಿಯ ಕ್ಷೇತ್ರದಲ್ಲಿರುವದರಿಂದ ಅಲ್ಲಿ ಭಾರಿ ಕದನವಾರಂಭವಾಗುವ ಸಂಭವವಿದೆ ಈಗ ಆರಂಭವಾಗಬಹುದಾದ ಹೊಡೆದಾಟದಲ್ಲಿ ಎರಡೂ ಕಡೆಯವರು ಹೊಸ ಅಸ್ತ್ರಗಳನ್ನು ಉಪಯೋಗಿಸಲಿರುವರು ಈಗ ಟ್ಯಾಂಕುಗಳಲ್ಲಿ ಬಲಯುತ ಫಿರಂಗಿಗಳನ್ನಿಟ್ಟಿರುವರಲ್ಲದೆ ಅದರಲ್ಲಿರುವವರಿಗೆ ಉತ್ತಮ ರಕ್ಷಣೆಯನ್ನು ಸಹ ಕಲ್ಪಿಸಿರುವರು

ಕೊಲಂಬೋ ಮುತ್ತಿಗೆಯ ಬಗ್ಗೆ ಪ್ರಕಟನೆ.

೫ ನೆಯ ತಾರೀಖು ಭಾನುವಾರ ಬೆಳಗ್ಗೆ ೮ ಘಂಟೆಗೆ ಕೊಲಂಬೋ ನಗರದ ಮೇಲೆ ಜಪಾನಿನ ಅನೇಕ ವಿಮಾನಗಳು ಮುತ್ತಿಗೆ ನಡೆಸಿದವು. ಬಂದರು ಮತ್ತು ರಟ್ಮಲಾನಾ ಕ್ಷೇತ್ರದಲ್ಲಿ "ಡೈವ್ ಬಾಂಬರು"ಗಳು ಬಂದು ಬಾಂಬುಗಳನ್ನು ಹಾಕಿದವು ಬ್ರಿಟನ್ನಿನ "ಫೈಟರ್" ವಿಮಾನಗಳು ಮೇಲಕ್ಕೆ ಹಾರಿ, ಶತ್ರುಗಳ ವಿಮಾನಗಳನ್ನು ತಡೆಗಟ್ಟಿದವು. ಶತ್ರುಗಳ ಅನೇಕ ವಿಮಾನಗಳನ್ನು ನಾಶಮಾಡಲಾಯಿತು ಬ್ರಿಟಿಷ್ ಫೈಟರುಗಳಿಂದ ಶತ್ರುಗಳ ೨೭ ವಿಮಾನಗಳು ನಾಶವಾಗಿವೆ ಇನ್ನೂ ೫ ವಿಮಾನಗಳು ನಾಶವಾಗಿರಬೇಕು ವಿಮಾನಧ್ವಂಸಕ ಫಿರಂಗಿಗಳಿಂದ ೨ ವಿಮಾನಗಳು ನಾಶವಾಗಿವೆ ಬ್ರಿಟಿಷ್ ವಿಮಾನಗಳಿಗೆ ಹೆಚ್ಚು ನಷ್ಟವಾಗಿಲ್ಲ ಜಪಾನಿನ ಕಡೆ ಫೈಟರು ವಿಮಾನಗಳೇ ಬಹಳ [illegible] ವೆಂದೂ ವಿಮಾನಧ್ವಂಸಕ ಫಿರಂಗಿಗಳ ಹೊಡೆತದಿಂದ ಅವು ತೀರಕ್ಕೆ ಬರಲು ಸಾಧ್ಯವಾಗಲಿಲ್ಲವೆಂದೂ ಗೊತ್ತಾಗುವುದು. ಕೆಳಕ್ಕೆ ಬಿದ್ದ ಕೆಲವು ಬಾಂಬುಗಳಿಂದ ಅನೇಕ ಮನೆಗಳು ನಾಶವಾದವು ಶತ್ರುಗಳ ಒಂದು ವಿಮಾನವು ಓಡಾಡುತ್ತಿದ್ದವರ ಮೇಲೆ ಮಿಷನ್‌ಗನ್‌ಗಳಿಂದ ಗುಂಡುಗಳನ್ನು ಹಾರಿಸಿತು ನಗರದ ಕೆಲವು ಕ್ಷೇತ್ರಗಳಮೇಲೆ ಮುತ್ತಿಗೆ ನಡೆಯಿತೆಂದು ತಿಳಿದುಬಂದಿದೆ.

ಜಪಾನ್ ಮಹಾಪ್ರಧಾನರ ಭಾಷಣ.

ಹಿಂದೂಸ್ಥಾನವನ್ನು ಆಕ್ರಮಿಸಿಕೊಳ್ಳಬೇಕೆಂಬ ಆಸೆ ಜಪಾನಿಗೆ ಇರುವುದಿಲ್ಲ ಅದರ ಬದಲು ಹಿಂದೂಸ್ಥಾನವು ಸ್ವತಂತ್ರ ರಾಷ್ಟ್ರವಾಗಬೇಕೆಂಬ ಕುತೂಹಲವು ಜಪಾನರಿಗೆ ವಿಶೇಷವಾಗಿದೆ ಭಾರತೀಯರಿಗೆ ಆ ಸ್ವಾತಂತ್ರ್ಯವನ್ನು ಗಳಿಸಿಕೊಡಲು ಜಪಾನು ಶಕ್ತಿಯುತವಾಗಿದೆ ಅಮೆರಿಕಾ ಸಂಯುಕ್ತ ಸಂಸ್ಥಾನವನ್ನೂ ಬ್ರಿಟಿಷ್ ಚಕ್ರಾಧಿಪತ್ಯವನ್ನೂ ಪುಡಿಪುಡಿ ಮಾಡಬೇಕೆಂಬ ನಮ್ಮ ದೃಢಸಂಕಲ್ಪವನ್ನು ಕ್ರಮವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ ಹಿಂದೂಸ್ಥಾನವು ಬ್ರಿಟಿಷ್ ಸೈನ್ಯದ ಹತೋಟಿಯಲ್ಲಿರುವುದಾದರೆ, ಅಗ್ಗೆ ಬ್ರಿಟಿಷ್ ಸೈನ್ಯವನ್ನು ಸದೆಬಡಿಯಬೇಕೆಂಬ ನಮ್ಮ ಪ್ರಯತ್ನದಲ್ಲಿ ಭಾರತವು ಸಹ ವಿಶೇಷ ಕಷ್ಟನಷ್ಟಗಳನ್ನನುಭವಿಸಬೇಕಾದುದು ಅನಿವಾರ್ಯವೆಂದೇ ಹೇಳಬೇಕಾಗುವದು ಈ ಯುದ್ಧದ ಹಾವಳಿಯಿಂದ ಹಿಂದೂಸ್ಥಾನವು ಕಷ್ಟನಷ್ಟವನ್ನನುಭವಿಸಬೇಕಾದುದಕ್ಕಾಗಿ ಜಪಾನು ಭಾರತೀಯ ಪ್ರಜೆಗಳೊಡನೆ ಆಗಾಧವಾದ ಸಹತಾಪದಿಂದ ಕೂಡಿದೆ ಹಿಂದೂಸ್ಥಾನದಲ್ಲಿರುವ ಸೈನ್ಯಬಲದ ನಾಯಕತ್ವವನ್ನು ಯಾರು ವಹಿಸಿಕೊಂಡರೇನು? ನಮಗೆ ಇರುವ ಒಂದೇ ಮಾರ್ಗವೆಂದರೆ ಆ ಸೈನ್ಯವನ್ನು ನಿರ್ನಾಮಗೊಳಿಸುವುದು

ಈ ಭಾಷಣವನ್ನು ಕುರಿತು ಲಂಡನ್ನಿನ "ಡೈಲಿ ಟೆಲಿಗ್ರಾಫ್ ಅಂಡ್ ಮಾರ್ನಿಂಗ್ ಪೋಸ್ಟ್" ಎಂಬ ಪತ್ರಿಕೆಯು —'ಚೀನಾದೇಶವನ್ನು ಬ್ರಿಟಿಷರಾಗಲಿ ಅಥವಾ ಮತ್ತಾವ ರಾಷ್ಟ್ರದವರಾಗಲಿ ತಮ್ಮ ಹತೋಟಿಯಲ್ಲಿಟ್ಟುಕೊಂಡಿರದಿದ್ದಾಗ್ಯೂ ಆ ದೇಶವನ್ನು ಜಪಾನರು ಆಕ್ರಮಿಸದೆ ಬಿಡಲಿಲ್ಲ ಬ್ರಿಟಿಷರನ್ನು ಈ ದೇಶದಿಂದ ಓಡಿಸಿಬಿಡಬೇಕೆಂದು ಜಪಾನರು ಭಾರತೀಯರನ್ನು ಒತ್ತಾಯಪಡಿಸುತ್ತಿರುವುದು ಹಿಂದೂಸ್ಥಾನವನ್ನು ಅವರು ಸುಲಭವಾಗಿ ಆಕ್ರಮಿಸಿಕೊಳ್ಳಬೇಕೆಂಬ ಉದ್ದೇಶದಿಂದಲ್ಲದೆ ಬೇರೇನೂ ಇಲ್ಲ' ಎಂದು ಭಾರತೀಯರಿಗೆ ಎಚ್ಚರಿಕೆ ಕೊಟ್ಟಿರುತ್ತದೆ

ಇಟಲಿ ನೌಕೆ ಮುಳುಗಿತು

ಮೆಡಿಟರೇನಿಯನ್ ಸಮುದ್ರದಲ್ಲಿ 10,000 ಟನ್ ತೂಕದ ಒಂದು ಇಟಲಿಯ ಕ್ರೂಯಿಜರ್ ಯುದ್ಧನೌಕೆಯನ್ನು ಬ್ರಿಟಿಷ್ ಸಬ್‌ಮರೀನು ಮುಳುಗಿಸಿತೆಂದು ಹೇಳಲಾಗಿದೆ

ರಷ್ಯನರ ಮುಂದೋಟ

ಕೇಂದ್ರರಂಗದಲ್ಲಿ ರಷ್ಯನರು ಜರ್ಮನರನ್ನು ಸದೆಬಡಿದು ಬಿಳಿ ರಷ್ಯಾಪ್ರಾಂತವನ್ನು ಹೊಕ್ಕಿರುವರೆಂದೂ ಬಿಳಿರಷ್ಯಾ ಪ್ರಾಂತದ ಗಡಿಯನ್ನು ಹಲವೆಡೆಗಳಲ್ಲಿ ದಾಟಿರುವುದಾಗಿಯೂ ಮುಂದುವರಿದಂತೆಲ್ಲ ಹೊಡೆದಾಟಗಳು ಜೋರಾಗುತ್ತಿವೆಯೆಂದೂ ಹೇಳಲಾಗಿದೆ

ರಷ್ಯಾದಲ್ಲಿ ೧೦ ಲಕ್ಷ ಸ್ತ್ರೀ ಸೈನ್ಯ

ಈಗ ನಡೆಯುತ್ತಿರುವ ರಷ್ಯಾಯುದ್ಧದಲ್ಲಿ ೧೦ಲಕ್ಷ ಜನ ಸ್ತ್ರೀಯರು ಸೇರಿ ಯುದ್ಧಕಾರ್ಯದಲ್ಲಿ ನಿರತರಾಗಿದ್ದಾರೆ [illegible] ಗ್ರಿಜೋಡ್‌ಬೋವ್ ಎಂಬಾಕೆಯು ಬಾಂಬರ್ ವಿಮಾನದಳದ ಮುಖ್ಯಾಧಿಕಾರಿಣಿಯಾಗಿದ್ದಾಳೆ ಮತ್ತು ಶಿಟ್ನಿನಾ ಎಂಬಾಕೆಯು ನೌಕಾದಳದಲ್ಲಿ ಕ್ಯಾಪ್ಟನ್ ಆಗಿದ್ದಾಳೆ

ಸಾವಿರಾರು ಜರ್ಮನರ ಶವಗಳು ಮಂಜಿನಗಡ್ಡೆಗಳ ಕೆಳಗೆ ಹೂತುಕೊಂಡಿವೆ.

ರಷ್ಯಾದ ರಣರಂಗದಲ್ಲಿ ಈಗ ಮಂಜಿನಗಡ್ಡೆಗಳು ಕರಗಿ [illegible] ಕೆಳಗೆ ಹೂತುಹೋಗಿರುವ ಸಾವಿರಾರು ಜರ್ಮನ್ ಯೋಧರ ಮೃತದೇಹಗಳು ಈಗ ಹೊರಕ್ಕೆ ಕಾಣಿಸಲಾರಂಭಿಸಿವೆ ಆರೋಗ್ಯದ ದೃಷ್ಟಿಯಿಂದ ಈಗ ನಾಜಿಗಳು ಭಾರಿ ಸಮಸ್ಯೆಯನ್ನು ಎದುರಿಸಬೇಕಾಗಿದೆಯೆಂದೂ, ಉಷ್ಣವು ಹೆಚ್ಚಿದಂತೆಲ್ಲ ಸಾಂಕ್ರಾಮಿಕರೋಗದ ಭಯವು ಅಧಿಕವಾಗುವದೆಂದೂ, ಶವಗಳನ್ನು ಸಂಗ್ರಹಿಸಿ ಹೂಳುವುದಕ್ಕಾಗಿಯೇ ಜರ್ಮನರು ವಿಶೇಷತಂಡಗಳನ್ನು ಸ್ಥಾಪಿಸಿದ್ದಾರೆಂದೂ ಅರಣ್ಯಗಳಲ್ಲೂ ಮೈದಾನಗಳಲ್ಲಿಯೂ ಗುದ್ದಲಿಗಳನ್ನು ಹಿಡಿದು ಮಂಜಿನ ಗಡ್ಡೆಗಳನ್ನು ತೆಗೆಯುವುದೇ ಅವರ ಕೆಲಸವಾಗಿದೆಯೆಂದೂ, ಕೆಲವು ಕಡೆಗಳಲ್ಲಂತೂ ಹೆಣಗಳ ರಾಶಿಗಳೇ ಕಾಣಬರುತ್ತಿವೆಯೆಂದೂ, 16 ರಿಂದ 17 ವರ್ಷದ ಬಾಲಕರು ಅನೇಕರಿರುವರಲ್ಲದೆ 60 ವರ್ಷಗಳ ವೃದ್ಧರೂ ಇರುವರೆಂದೂ ಪ್ರಕಟವಾಗಿದೆ.

ಹಿಟ್ಲರರ ಅಂತರಂಗ ಸಭೆ

ಜರ್ಮನರು ಆಕ್ರಮಿಸಿರುವ ಯುರೋಪಿನಲ್ಲಿ ದಂಗೆಗಳು ನಡೆಯದಂತೆ ನೋಡಿಕೊಳ್ಳಲು ಹರ್‌ಹಿಟ್ಲರರವರು ಕೀವ್ ನಗರದಲ್ಲಿ ಮಿಲಿಟರಿ ಗವರ್ನರುಗಳ ಒಂದು ಸಭೆಯನ್ನು ಏರ್ಪಡಿಸಿದ್ದರೆಂದು ಪ್ರಕಟವಾಗಿದೆ ಮಾರ್ಚಿ ತಿಂಗಳ ಕೊನೆಯಲ್ಲಿ ಈ ಸಮ್ಮೇಳನವು ನಡೆಯಿತೆಂದೂ, ಈ ಸಮ್ಮೇಳನಕ್ಕೆ ಜರ್ಮನಿಯ ಗೆಸ್ಟಪೊ ಪಡೆಯ ಮುಖ್ಯಾಧಿಕಾರಿಗಳಾದ ಹರ್ ಹಿಮ್ಲರ್‌ರವರೂ, ಬೋಹಿಮಿಯ ದೇಶದ ರಕ್ಷಕರಾದ ಶ್ರೀ ಹೈಡ್ರಿಚ್‌ರವರೂ, ನಾರ್ವೆಯಲ್ಲಿರುವ ರೀಚ್ ಕಮಿಷನರರವರೂ, ಹಾಲೆಂಡ್ ಬೆಲ್ಜಿಯಂ ಮತ್ತು ಉತ್ತರ ಫ್ರಾನ್ಸ್‌ಗಳಲ್ಲಿರುವ ನಾಜಿ ಸೈನ್ಯಪಡೆಗಳ ಮುಖ್ಯ ದಂಡನಾಯಕರೂ ಬಂದಿದ್ದರೆಂದು ಹೇಳಲಾಗಿದೆ ಜರ್ಮನಿಯು ಆಕ್ರಮಿಸಿಕೊಂಡಿರುವ ಪ್ರಾಂತ್ಯಗಳಲ್ಲಿರುವ ನಾಜಿ ಸೈನ್ಯಪಡೆಗಳ ಸಹಾಯಾರ್ಥವಾಗಿ ಹೆಚ್ಚು ಜನ ಸೈನಿಕರನ್ನು ಕಳುಹಿಸುವುದಕ್ಕೆ ಈಗ ಸಾಧ್ಯವಿಲ್ಲವೆಂದೂ, ಕ್ರೂರ ದಬ್ಬಾಳಿಕೆಯಿಂದ ದಂಗೆಗಳನ್ನು ಅಡಗಿಸಿ ಶಾಂತಿಪಾಲನೆ ಮಾಡಬೇಕೆಂದೂ ಹರ್ ಹಿಟ್ಲರರವರು ಸೂಚನೆ ಮಾಡಿದರೆಂದು ಹೇಳಲಾಗಿದೆ

ಸ್ವೀಕಾರ.

ದಾವಣಗೆರೆಯಲ್ಲಿರುವ ಚೌಕಿಪೇಟೆ ಮ|| ರಾ|| ಮಹಾದೇವಪ್ಪನವರ ಪುತ್ರಿ ಚಿ|| ಸೌ|| ಮಹಾದೇವಮ್ಮನನ್ನು ಹರಪನಹಳ್ಳಿ ತಾಲೂಕು ಕುಂಚೂರು ಗ್ರಾಮದಲ್ಲಿರುವ ಮ|| ರಾ|| ಚಿಗಟೇರಿ ಸಂಗಪ್ಪನವರ ಪುತ್ರ ಚಿ|| ಸ|| ಮಹಾದೇವಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ವೇ|| ಜಿ ಯಂ ಅನ್ನದಾನಯ್ಯನವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ|| ಹುವ್ವಿನಹಡಗಲಿ ಗ್ರಾಮದ ಮ|| ರಾ|| ಮಜ್ಜಿಗಿ ಬಸಪ್ಪನವರು ತಾ|| 13 3 42ನೆಯ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ ಮತ್ತು ಇದೇ ಗ್ರಾಮದ ಲಕಮಾಪುರದ ಶಿವಯ್ಯನವರು ತಾ|| 25 2 42ನೆಯ ದಿವಸ ಶಿವಾಧೀನರಾದ ಸಮಯದಲ್ಲಿ ತೆಗೆಯಿಸಿದ 0 8-0ಗಳು ಮ|| ರಾ|| ಗುರ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರುಗಳೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಶ್ರೀರಂಭಾಪುರೀ ಜಗದ್ಗುರುಗಳವರ ಶುಭಾಗಮನ

ಶ್ರೀ ರಂಭಾಪುರೀ ಜಗದ್ಗುರುಗಳವರು ಸೊಲ್ಲಾಪುರದಿಂದ ಹೊರಟು ಈ ತಿಂಗಳು 5 ನೆಯ ತಾರೀಖಿನ ದಿವಸ ರಂಭಾಪುರೀಪೀಠಕ್ಕೆ ದಯಮಾಡಿಸಿದರು. ಅಲ್ಲಿ 5-6 ದಿವಸಗಳವರೆಗಿದ್ದು ಈ ದಿವಸ ಹಾಸನ ಡಿ|| ಆಲೂರು ಟವನ್ನಿಗೆ ಆಗಮಿಸಿದರು. ಇಂದು ಆಲೂರು ಟವನ್ನಿನಲ್ಲಿ ಸಕಲ ಬಿರುದಾವಳಿಗಳೊಡನೆ ಆಂದೋಳಿಕಾ ಮಹೋತ್ಸವವು ವಿಶೇಷ ವೈಭವದೊಡನೆ ನೆರವೇರಿತು

[೭ನೆಯ ಪುಟದಿಂದ ಮುಂದುವರಿದುದು]

ಕಲಿತು ಹೇಳಿದ್ದು ಮತ್ತು ತಮ್ಮ ಮನೆಯ ಕೆಲಸವನ್ನು ಬದಿಗೊತ್ತಿ ಕೇಳಲಿಕ್ಕೆ ಬಂದದ್ದು ವ್ಯರ್ಥವೇ ಸರಿ! ಇದಕ್ಕೊಂದು ಇತಿಹಾಸವುಂಟು—

ಒಂದು ಊರಿನಲ್ಲಿ ಒಬ್ಬ ಸ್ವಾಮಿಗಳು ಕಾಶಿಗೆಹೋಗಿ ಪಂಡಿತರಾಗಿ ಊರಿಗೆ ಬಂದರು. ಒಂದು ದಿವಸ ಭಕ್ತಾದಿಗಳನ್ನು ಮಠಕ್ಕೆ ಕರೆಯಿಸಿ ನಮಗೆ ಹೊತ್ತುಹೋಗುವುದಿಲ್ಲ. ಶಾಸ್ತ್ರವಿಷಯವನ್ನು ಹೇಳುತ್ತೇವೆ. ದಿನಾಲು ಒಂದೆರಡು ತಾಸು ಕೇಳಹೋಗಬೇಕೆಂದು ತಿಳಿಸಿದರು. ಆ ಪ್ರಕಾರ ಭಕ್ತಾದಿಗಳು ನಿತ್ಯದಲ್ಲಿ ಬರಹತ್ತಿದರು. ಶಾಸ್ತ್ರವು ವರ್ಷಾರುತಿಂಗಳು ಚೆನ್ನಾಗಿ ಸಾಗಿತು. ಆ ವರ್ಷಾರುತಿಂಗಳು ಬೋಧಿಸಿದ ವ್ಯಾಖ್ಯಾನ ಭಕ್ತಾದಿಗಳ ನಡೆನುಡಿಗಳಲ್ಲಿ ಎಳ್ಳಷ್ಟೂ ಹೆಚ್ಚುಕಡಿಮೆ ಆಗಲಿಲ್ಲ. ಆ ಸ್ವಾಮಿಗಳಿದ್ದ ಊರಿಗೆ ಗುಡ್ಡವಿದ್ದುದರಿಂದ ಮಂಗಗಳ ಹಾವಳಿಯು ಹೆಚ್ಚಾಗಿ, ಸ್ವಾಮಿಗಳ ಮಠದೊಳಗೆ ಬಂದು ತ್ರಾಸುಕೊಡುತ್ತಿದ್ದವು. ಅವುಗಳ ತ್ರಾಸನ್ನು ತಪ್ಪಿಸುವುದಕ್ಕಾಗಿ ಒಂದು ನಾಯಿಯನ್ನು ಸಾಕಿದ್ದರು. ಮಂಗಗಳು ಬಂದಕೂಡಲೆ ನಾಯಿಯು ಬೊಗಳುತ್ತ ಮುಂದಕ್ಕೆ ಹೋಗುತ್ತಿತ್ತು. ಮಂಗಗಳು ಹಿಂದಕ್ಕೆ ಜಿಗಿಯುತ್ತ ಹೋಗುತ್ತಿದ್ದವು. ಹೀಗೆ ದಿನಾಲು ನಡೆಯುತ್ತ ವರ್ಷಾರುತಿಂಗಳು ಹೋಯಿತು. ನಾಯಿಗೂ ಮಂಗಗಳಿಗೂ ಮಿತ್ರತ್ವ ಕೂಡಿದಂತಾಗಿ ಆ ಮಂಗಗಳು ಮೊದಲಿನಂತೆ ಮಠದೊಳಗೆ ಬಂದು ತ್ರಾಸ ಕೊಡಹತ್ತಿದವು. ನಾಯಿಯ ಉಪಯೋಗವು ಮಂಗಗಳಿಗೆ ಹೇಗೆ ಆಗಲಿಲ್ಲವೋ ಹಾಗೆಯೇ ನಾವು ಕಷ್ಟಪಟ್ಟು ಉಪದೇಶ ಮಾಡಿದ್ದು ಸಾರ್ಥಕವಾಗಲಿಲ್ಲವೆಂದು ಭಕ್ತಮಂಡಲಿಗೆ ಹೇಳಿದರಂತೆ! ಕೇಳುವವರು ಇಂಥ ಸ್ಥಿತಿಯನ್ನು ಎಂದೂ ತಂದುಕೊಳ್ಳಬಾರದೆಂದು ಆಗ್ರಹದಿಂದ ಸೂಚಿಸುತ್ತೇವೆ.

ಶೃಣೋತಿ ಶುದ್ಧಮನಸಾ ಸ ಯಾತಿ ಪರಮಾಂ ಗತಿಂ

ಎಂಬ ಶಾಸ್ತ್ರೋಕ್ತಿಯಂತೆ ಯಾವನು ನಿರ್ಮಲಮನಸ್ಸಿನಿಂದ ಕೇಳುತ್ತಾನೆಯೋ ಅವನು ಮುಕ್ತಿಯನ್ನು ಹೊಂದುವನು.

ನಿಶ್ಚಯ ಸಮಾರಂಭ

ದಾವಣಗೆರೆಯಲ್ಲಿರುವ ಚೌಕಿಪೇಟೆ ವೀರಭದ್ರಪ್ಪನವರ ಮಗ ಮಾ॥ ರಾ॥ ಮಹಾದೇವಪ್ಪನವರ ಪುತ್ರಿ ಚಿ॥ ಕುಂ॥ ಸೌ॥ ಮಹಾದೇವಮ್ಮನನ್ನು ಹರಪನಹಳ್ಳಿ ತಾ॥ ಕುಂಚೂರು ಗ್ರಾಮದ ಚಿಗಟೇರಿ ಸಂಗಪ್ಪನವರ ಪುತ್ರ ಚಿ॥ ಮಹಾದೇವಪ್ಪನವರಿಗೆ ಕೊಟ್ಟು ನಿಶ್ಚಯಿಸಿದ ಸಮಾರಂಭ ಕಾರ್ಯವು ತಾ॥ ೬-೪-೪೨ನೇ ಸೋಮವಾರ ದಿವಸ ಚೌಕಿಪೇಟೆ ಮಹಾದೇವಪ್ಪನವರ ಗೃಹದಲ್ಲಿ ನೆರವೇರಿತು. ಈ ಸಮಾರಂಭಕ್ಕೆ ಹೊಳಲಕೆರೆ ಶ್ರೀ ಹಾಲಸ್ವಾಮಿಗಳವರ ಮಠದ ಷ॥ ಬ್ರ॥ ಶ್ರೀ ಚರಮೂರ್ತಿಸ್ವಾಮಿಗಳವರು ಆಗಮಿಸಿ ನೂತನ ವಧೂವರರಿಗೆ ಆಶೀರ್ವದಿಸಿದುದು ಅತ್ಯಾನಂದದ ಸಂಗತಿಯಾಗಿರುವದು. ಸ್ಥಳದ ಪ್ರಮುಖರಾದ ಶ್ರೀ ಯಜಮಾನ್ ಬೆಳ್ಳೂಡಿ ವೀರಪ್ಪನವರು, ಬೆಳ್ಳೂಡಿ ಮಲ್ಲಪ್ಪನವರು, ಬಿನಹಳ್ಳಿ ವೀರಭದ್ರಪ್ಪನವರು, ಕಂಚೀಕೇರಿ ವೀರಭದ್ರಪ್ಪನವರು, ಮಾಗಾನಹಳ್ಳಿ ನಂಜುಂಡಪ್ಪನವರು, ನಲ್ಲೂರು ಕರೇಗೌಡ್ರ ಹಾಲಪ್ಪನವರು, ಟಿ. ಎಂ. ರುದ್ರಯ್ಯನವರು, ಮಲೇಬೆನ್ನೂರು ಮಠದ ಹಾಲಸಿದ್ಧಯ್ಯನವರು, ಗದಗಿನ ಮಠದ ಅನ್ನದಾನಯ್ಯನವರು, ಎಚ್. ಎಂ. ಚಂದ್ರಶೇಖರಯ್ಯನವರೇ ಮೊದಲಾದ ಅನೇಕರು ಈ ಸಮಾರಂಭದಲ್ಲಿ ಭಾಗಿಗಳಾಗಿದ್ದರು. ಈ ಸಮಯದಲ್ಲಿ ಮೇಲ್ಕಂಡ ಶ್ರೀ ಚರಮೂರ್ತಿಸ್ವಾಮಿಗಳವರ ಅಪ್ಪಣೆ ಮೇರೆಗೆ ಸನಾತನ ವೀರಶೈವಮತೋದ್ಧಾರಕ್ಕಾಗಿ ಅವತರಿಸಿರುವ ಪಂಚಾಚಾರ್ಯ ಪ್ರಭಾ ಪೋಷಣಕ್ಕಾಗಿಯೂ ಮತ್ತು ನಮ್ಮ ಟವನ್ನಿನಲ್ಲಿ ರಾಜಕೀಯ, ಧಾರ್ಮಿಕ ಮೊದಲಾದ ವಿಷಯಗಳನ್ನೊಳಗೊಂಡು ಪ್ರಕಟವಾಗುವ ಸನ್ಮಾರ್ಗ ದರ್ಶಕ ಪತ್ರಿಕಾ ಪೋಷಣಕ್ಕಾಗಿಯೂ ವಧೂವರರ ಕಡೆಯಿಂದ ಪೋಷಣದ್ರವ್ಯವು ತೆಗೆಯಿಸಲ್ಪಟ್ಟಿತು.

ಕಾರ್ಯದರ್ಶಿಗಳು,
ಈಶ್ವರಪ್ಪ ಬಳ್ಳಾರಿ.
ನದೀಹರಳಹಳ್ಳಿ ಚನ್ನಗೌಡ್ರ ಮಹಾದೇವಪ್ಪ.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಗುರುಸೇವಾ ಸಿಂಹ, ಗುರುಭಕ್ತ ಕಂಠೀರವ ಇತ್ಯಾದಿ ಬಿರುದಾಂಕಿತರಾದ ಶ್ರೀಯುತ ಸೊಪ್ಪಿನ ಗುರುಲಿಂಗಪ್ಪನವರಿಗೆ ವಿದ್ಯಾರ್ಥಿನಿಲಯದ ಸಮಸ್ತ ವಿದ್ಯಾರ್ಥಿಗಳು ಭಕ್ತಿಪೂರ್ವಕವಾಗಿ ಅರ್ಪಿಸಿದ

ಮಾನಪತ್ರಿಕೆ

ಮಹಾನುಭಾವರೇ! ತಾವು ಗರ್ಭಶ್ರೀಮಂತರೂ, [illegible] ಸಾಮಾಜಿಕ ಧಾರ್ಮಿಕ ಕಾರ್ಯದಕ್ಷರೂ ಎನಿಸಿ ನಮ್ಮ ನಿಲಯದಲ್ಲಿ ಕಳೆದವರ್ಷ ಮ್ಯಾನೇಜರರಾಗಿ [illegible] ಅತಿ ಜಾಗರೂಕತೆಯಿಂದ ಕೆಲಸವನ್ನು ಮಾಡಿ ಕೀರ್ತಿವಂತರೆನಿಸಿಕೊಂಡಿರಿ.

ಅಷ್ಟೇ! ಈ ವರ್ಷವೂ ಕೂಡ ನಿಲಯದ ಸದಸ್ಯರೂ ಕಳೆದ ವರ್ಷದ ನಿಮ್ಮ ಕೆಲಸಕ್ಕೆ ಮೆಚ್ಚಿ ಆಗ್ರಹದಿಂದ ನಿಮ್ಮನ್ನು ಪುನಃ ಸೂಪರಿಂಟೆಂಡೆಂಟರನ್ನಾಗಿ ನಿಯಮಿಸಿದರು.

[illegible] ಕೆಲಸದಲ್ಲಿ ಬಹಳ ಶ್ರದ್ಧೆಯಿಂದ ನಮ್ಮೆಲ್ಲರ ಯೋಗಕ್ಷೇಮವನ್ನು ವಿಚಾರಿಸಿ ನಮ್ಮ ವಿದ್ಯಾಭ್ಯಾಸದ ಕಡೆಗೆ ಪ್ರೋತ್ಸಾಹ ಕೊಡುತ್ತ ಎಲ್ಲ ವಿದ್ಯಾರ್ಥಿಗಳನ್ನು ಸಮಾನದೃಷ್ಟಿಯಿಂದ [illegible] ಬೋಧೆಯಿಂದ ನಮ್ಮ [illegible] ಮಾಡಿದಿರಿ.

ವಿದ್ಯಾರ್ಥಿನಿಲಯಕ್ಕೆ ನಿಮ್ಮ ಈ ಕಾರ್ಯಕೌಶಲ್ಯವನ್ನು ನಾವು ಎಷ್ಟು ವರ್ಣಿಸಿದರೂ ತೀರದಾಗಿದೆ. ದಯಾಮಯನಾದ ಪರಮಾತ್ಮನು ನಿಮಗೆ ಇಂತಹ ಕಾರ್ಯದಲ್ಲಿ ಇನ್ನೂ ಹೆಚ್ಚಿನ ಆಸಕ್ತಿಯನ್ನೂ ಆಯುರಾರೋಗ್ಯಾದಿ ಭಾಗ್ಯಗಳನ್ನೂ ಕೊಡಲೆಂದು ಆತನನ್ನು ನಿರಂತರವಾಗಿ ಬೇಡಿಕೊಳ್ಳುತ್ತ ಈ ಮಾನಪತ್ರವನ್ನು ತಮ್ಮ ಸನ್ನಿಧಿಯಲ್ಲಿ ಅತ್ಯಂತ ಭಕ್ತಿಪೂರ್ವಕವಾಗಿ ಅರ್ಪಿಸುತ್ತೇವೆ.

ತಮ್ಮ ಪ್ರೀತಿಪಾತ್ರರಾದ,
ನಿಲಯದ ಸಮಸ್ತ ವಿದ್ಯಾರ್ಥಿಗಳು,
ವಿದ್ಯಾರ್ಥಿನಿಲಯ ಹೂವಿನಹಡಗಲಿ,
ತಾ ೮-೪-೧೯೪೨

ಸಂಸ್ಕಾರಶೂನ್ಯರ ಹಾವಳಿ

ಪ್ರಪಂಚದಲ್ಲಿ ಪ್ರತಿಷ್ಠಿತ ಸಂನ್ಯಸ್ತರೂ ಅಧಿಕಾರಯುತರೂ ನಿಜತತ್ವವೇತ್ತರೂ ಪವಿತ್ರಹೃದಯರೂ ಆದ ಸಮರ್ಥಬೋಧಕರ ವಿದ್ವತ್ಪೂರಿತ ಹಿತೋಪದೇಶವು ಕಲುಷಿತಹೃದಯರಿಗೆ ರುಚಿಸದು. ಕಾಗೆಗಳು ಬೇವಿನಫಲಗಳನ್ನೇ ಇಚ್ಛಿಸುವ ತೆರನೂ ಸಿಹಿಪದಾರ್ಥಗಳ ಮೇಲೆ ಕುಳಿತಿದ್ದರೂ ನೊಣಗಳು ಕಸದ ಬುಟ್ಟಿಯನ್ನೇ ನೋಡಿದೊಡನೆಯೇ ಹೋಗಿ ಎರಗುವಂತೆಯೂ ಅಜ್ಞಜನರು ತಿಳಿವಿಲ್ಲದ ಶುದ್ಧಪಾಮರವಿಚಾರದ ಬಹು ಥಳಕಿನ ಒಣಾಡಂಬರಗಳಿಗೆ ಮರುಳಾಗಿ ಸರೋವರದಲ್ಲಿ ಸ್ನಾನವನ್ನು ಮಾಡಬೇಕೆಂದು ಸಂಕಲ್ಪಿಸಿ ಕೆಸರನ್ನು ಬಳಿದುಕೊಂಡ ಹಾಗೆ ತಮ್ಮ ಧ್ಯೇಯ ಏನೆಂಬುದನ್ನರಿಯದೆ ಅಧೋಗತಿಗಿಳಿಯುತ್ತಿರುವುದು ತುಂಬಾ ವಿಷಾದಾಸ್ಪದವಾಗಿದೆ. ಸತ್ಯಾಸತ್ಯವಿಮರ್ಶಾತ್ಮಕಬುದ್ಧಿಯು ಇಲ್ಲದಿರುವ ಅಸಂಸ್ಕಾರಿಗಳಾದ ಗಾಂಪರ ಹರಟೆಲ್ಲವೂ ಹೀಗೆಯೇ. ಸಜ್ಜನಮರುಳೋ ಜಾತ್ರೆಮರುಳೋ ಎಂಬ ಗಾದೆಯ ಮಾತು ಎಂದಿಗೂ ಸುಳ್ಳಾಗಲಾರದು.

ಓರ್ವ ಸದ್ಧರ್ಮಪಕ್ಷಪಾತಿ

ಗೋಪರಿಪಾಲನೆಯ ಮಹತ್ವ.

ಪಶುಸಂರಕ್ಷಣೆಯ ವಿಷಯದಲ್ಲಿ ಹಿಂದುಸ್ಥಾನದ ರೈತರುಗಳ ಅಲಕ್ಷ್ಯವಾದ ಉದಾಸೀನವೂ ಕೂಡ ಭೂಮಿಯ ಕನಿಷ್ಠವಾದ ಮತ್ತು ಅಲ್ಪಪ್ರಮಾಣದ ಉತ್ಪತ್ತಿಗೆ ಒಂದು ಮಹತ್ವವಾದ ಕಾರಣವಾಗಿದೆ. ಗೋಪರಿಪಾಲನೆಯ ಸಾಮಾನ್ಯ ತತ್ವಗಳು ಎಲ್ಲಾ ರೈತರಿಗೂ ತಿಳಿದಿದ್ದರೂ ಪಾಶ್ಚಾತ್ಯ ನಾಗರಿಕತೆಯ ಸೋಂಕಿನ ಪ್ರಭಾವದಿಂದ ಸೋಮಾರಿತನವು ಉದ್ಭವಿಸಿ ಅದರ ಪ್ರಭಾವದಿಂದ ರಸವಿಲ್ಲದ ಬೆಳೆಯೂ ತನ್ಮೂಲಕ ನಿರ್ವೀರ್ಯವೂ ಉಂಟಾಗಿ ರೈತರೆಲ್ಲಾ ಜೀವಚ್ಛವಗಳಂತಿದ್ದಾರೆ. ಸರ್ಕಾರದವರಿಂದ ನಿರ್ಮಿಸಲ್ಪಟ್ಟ ವ್ಯವಸಾಯ ಇಲಾಖೆಯವರಾದರೂ ಹಳ್ಳಿಹಳ್ಳಿಗೂ ಹೋಗಿ ಈ ತತ್ವಗಳನ್ನು ಬೋಧಿಸಿದರೆ ಎಷ್ಟೋ ಪರಿಣಾಮವಾದೀತು! ನಮ್ಮ ರೈತಬಂಧುಗಳ ಮತ್ತು ರೈತರಿಗೆ ಉಪಕಾರಮಾಡಬೇಕೆಂದೆಣಿಸುವ ಮಹನೀಯರ ಉಪಯೋಗಾರ್ಥವಾಗಿ ಈ ಕೆಳಗೆ ಕೆಲವು ಸೂಚನೆಗಳನ್ನು ಕೊಡುತ್ತೇವೆ. ಅವರು ಸದುಪಯೋಗ ಮಾಡಲು ಕೋರಿಕೆ.

೧. ಹೆಚ್ಚಿಗೆ ಹಾಲುಕೊಡುವ ಹಸುಗಳನ್ನು ಪ್ರತ್ಯೇಕವಾಗಿರಿಸಿ ಅವುಗಳ ಪೋಷಣೆಯನ್ನು ಉತ್ತಮರೀತಿಯಿಂದ ಮಾಡಬೇಕು. ಗೊಡ್ಡು ದನಗಳಿಗೆ ಸಾವಧಾನವಾಗಿ ಉಪಚರಿಸಬಹುದು.

೨. ನಾಲ್ಕು ಕಡೆಗಳಿಂದಲೂ ಪ್ರಕಾಶವೂ ಮತ್ತು ಗಾಳಿಯೂ ಬರುವಂಥ ಕೊಟ್ಟಿಗೆಗಳಲ್ಲಿ (ಅಂದರೆ ಅಧಿಕ ಉಷ್ಣಕ್ಕಾಗಲೀ, ಅಧಿಕ ಶೀತಕ್ಕಾಗಲೀ ಎರವಾಗದಂತೆ) ಹಸುಗಳನ್ನು ಕಟ್ಟಬೇಕು. ಹೆಚ್ಚಿಗೆ ತೊಂದರೆಯಾಗದ ರೀತಿಯಲ್ಲಿ ದೂರದೂರವಾಗಿ ಕಟ್ಟುವುದೊಳ್ಳೆಯದು. ಹತ್ತು ಅಡಿ ಉದ್ದ ಮತ್ತು ಎಂಟು ಅಡಿ ಅಗಲವುಳ್ಳ ಒಂದು ಸ್ಥಳವು ಎಂಥಾ ದೊಡ್ಡ ಹಸುವಿಗಾದರೂ ವಿಶಾಲವಾಗುತ್ತದೆ.

೩. ಮನುಷ್ಯನಿಗೆ ನೈರ್ಮಲ್ಯದಮೇಲೆ ಎಷ್ಟು ಅಪೇಕ್ಷೆಯಿರುವದೋ ಪ್ರಾಣಿಗಳಿಗಾದರೂ ಹಾಗೆಯೇ ಎಂಬುದನ್ನು ಅರಿಯಬೇಕು. ದನದ ಕೊಟ್ಟಿಗೆಗಳನ್ನು ಬಹಳ ಶುದ್ಧವಾಗಿರಿಸಬೇಕು. ಗೊಬ್ಬರ, ಗಂಜಳದ ವಾಸನೆಯು ಹಾಲಿನಮೇಲೆ ಕೆಟ್ಟಪರಿಣಾಮವನ್ನು ಮಾಡುವದರಿಂದ ಅದನ್ನು ತಪ್ಪದಂತೆ ಮಾಡಬೇಕು.

೪. ಪ್ರತಿನಿತ್ಯವೂ ಹಸುಗಳಿಗೆ ಮೂರಾವರ್ತಿ ಅಂದರೆ ಪ್ರಾತಃಕಾಲ ಮಧ್ಯಾಹ್ನ, ಸಾಯಂಕಾಲ ಶುದ್ಧ ಜಲವನ್ನು ಕುಡಿಸಬೇಕು. ಹೆಚ್ಚಿಗೆ ಹಾಲು ತಯಾರ್ಮಾಡಲು ಹೆಚ್ಚು ನೀರು ಬೇಕಾಗುತ್ತದೆ. ಕಾಲಕ್ಕೆ ಸರಿಯಾಗಿ ನೀರು ಒದಗದೆ ಇರುವದರಿಂದ ಇನ್ನು ತಯಾರಾಗಬೇಕೆಂದಿರುವ ಹಾಲು ಕೂಡ ಒಣಗಿಹೋಗುತ್ತದೆ. ಕೆಲವು ಸಂದರ್ಭಗಳಲ್ಲಿ ನೀರು ಸಿಗದೇ ಇರುವುದರಿಂದ ಅದು ಚರಂಡಿಯ ಕೊಳ್ಳಲು ನೀರನ್ನು ಕುಡಿಯುತ್ತದೆ. ಆಗ ಅದರ ಪರಿಣಾಮವು ಭಯಂಕರವಾಗುತ್ತದೆ. ಏಕೆಂದರೆ ಅಂಥ ಹಸುವಿನ ಹಾಲು ನಿಷ್ಕಾರಣವಾಗಿ ಅನೇಕ ರೋಗಗಳನ್ನು ತಂದುಹಾಕುತ್ತದೆ. ಅದೇ ರೀತಿಯಲ್ಲಿಯೇ ಅಮೇಧ್ಯ ಮುಂತಾದ ಹೇಯ ವಸ್ತುಗಳನ್ನು ತಿನ್ನಲಿಕ್ಕೆ ಅವಕಾಶಕೊಡಬಾರದು.

೫. ಹಾಲು ಕೊಡುವ ಪರ್ಯಂತವೂ ಅದಕ್ಕೆ ಹೊಟ್ಟೆತುಂಬ ಪುಷ್ಟಿಕರವಾದ ಆಹಾರವನ್ನು ಕೊಡಬೇಕು. ಮೇಯಿಸಲು ಒಂದು ಮೈಲಿಗಿಂತ ದೂರ ಹೊಡೆದುಕೊಂಡುಹೋಗಬಾರದು. ಕರುವನ್ನು ೫ ತಿಂಗಳಮೇಲೆ ಅದನ್ನು ಸಂಪೂರ್ಣ ಪ್ರತ್ಯೇಕಿಸಬೇಕು. ಸಾಧಾರಣವಾಗಿ ಒಂದು ಗೋವಿಗೆ ೧॥ ಸೇರು ಕಾಳು, ೧ ಚಟಾಕು ಉಪ್ಪು, ೭॥ ಸೇರು ಒಣಗಿದ ಹುಲ್ಲು, ೫ ಸೇರು ಹಸಿಯದು ಈ ರೀತಿಯಲ್ಲಿ ಪ್ರತಿನಿತ್ಯವೂ ಹಾಕಬೇಕು.

೬. ಋತುಧರ್ಮಗಳ ಅನುಸಾರವಾಗಿ ವಾರಕ್ಕೊಂದು ಸಲವಾದರೂ ಶುದ್ಧನೀರಿನಿಂದ ಸ್ನಾನಮಾಡಿಸಿದಲ್ಲಿ ಅದರ ಮೈಮೇಲೆ ಉಣ್ಣೆವಗೈರೆಗಳಿಗೆ ವಾಸಸ್ಥಾನವಾಗುವುದಿಲ್ಲ.

೭. ಗಂಜಲವಾದ ಸೊಪ್ಪೆ ಅಥವಾ ಹುಲ್ಲನ್ನೇ ಪುನಃ ಹಾಕಬಾರದು. ಆದರೆ ಗಂಜಲಯುಕ್ತವಾದ ಹುಲ್ಲನ್ನು ಅದಕ್ಕೆ ಮೆತ್ತಗಿರುವಂತೆ ಕೆಳಗೆ ಹಾಸಬೇಕು. ಪ್ರಾತಃಕಾಲ ಮತ್ತು ಸಾಯಂಕಾಲ ಕರೆಯುವವೇಳೆಗಳಲ್ಲಿ ಸ್ವಲ್ಪ ಮುಂಚೆಯಾಗಿಯೋ ಅಥವಾ ಕರೆದನಂತರವೋ ಮೈಮೇಲೆ ಚೆನ್ನಾಗಿ ಪ್ರೀತಿಯಿಂದ ಕೈಯಾಡಿಸಬೇಕು. ಇದರಿಂದ ಹಾಲು ಹೆಚ್ಚು ಆಗುವುದು.

೮. ಚಾಕರರು ಹಸುವನ್ನು ಕೆಟ್ಟ ಭಾಷೆಗಳಿಂದ ಬಯ್ಯುವರು, ಹೊಡೆಯುವರು, ಹೆದರಿಕೆಯನ್ನು ತೋರಿಸುವುದು ವಗೈರೆ ದುರಾಚರಣೆಗಳಾಗದಂತೆ

ನೋಡಿಕೊಳ್ಳಬೇಕು ಇದರಿಂದ ಹಾಲಿನಗುಣವು ಕೆಡುವುದಲ್ಲದೆ ಹಾಲೂ ಕೂಡ ಕಡಿಮೆಯಾಗುವುದು

೯ ಹೆಚ್ಚಿಗೆ ಹಾಲುಕೊಡುವ ಹಸುಗಳಿಂದ ಹುಟ್ಟುವ ಹೋರಿಗಳನ್ನು ಚೆನ್ನಾಗಿ ಪೋಷಿಸಿದರೆ ಅವುಗಳಿಂದ ಗರ್ಭವಾಗುವ ಹಸುಗಳೂ ಅಧಿಕಹಾಲನ್ನು ಕೊಡುತ್ತವೆ ಒಂದು ಹಸುವು ತನ್ನ ತಂದೆ, ಮಗು, ಅಥವಾ ಸಹೋದರನಿಂದ ಗರ್ಭವಾಗದಂತೆ ಬಹಳ ಹುಷಾರಾಗಿ ನೋಡಿಕೊಳ್ಳಬೇಕು ಏತಕ್ಕೆಂದರೆ ಇದರಿಂದ ಹಾಲು ಕೊಡುವ ಶಕ್ತಿಯು ಕಡಮೆಯಾಗುವುದಲ್ಲದೆ ಶರೀರವೂ ಕೂಡ ಚಿಕ್ಕದಾಗಿಹೋಗುತ್ತದೆ

೧೦ ಭಗವಂತನು ಹಾಲಿನಿಂದ ಮನುಷ್ಯನು ಬಲವಂತನಾಗಲೆಂತಲೂ, ಅದರ ಗೊಬ್ಬರದಿಂದ ಭೂಮಿಯು ಫಲವತ್ತಾಗಲೆಂತಲೂ ನಿಯಮಿಸಿರಬೇಕಾದರೆ ನಾವು ಅದನ್ನು ವ್ಯರ್ಥಮಾಡುವುದೊಳ್ಳೆಯದಲ್ಲ ಗಂಜಲಕ್ಕೂ ಗಂಜಲವಾದ ಹುಲ್ಲಿಗೂ ತಮ್ಮ ತಮ್ಮ ಅವಶ್ಯಕತೆಗಳಿಗನುಸಾರವಾಗಿ ಮೂರುಗುಂಡಿಗಳನ್ನು ಮಾಡಬೇಕು ಅವುಗಳಲ್ಲಿ ಕೆಳಗೆ ಹುಲ್ಲನ್ನು ಚೆನ್ನಾಗಿ ಹಾಸಬೇಕು ಒಂದರಲ್ಲಿ ನಿರೋಗವುಳ್ಳ ಪ್ರಾಯದ ಎತ್ತು ಹಸುಗಳ ಗಂಜಲವನ್ನೂ ಗೊಬ್ಬರವನ್ನೂ ಹಾಕಬೇಕು ಎರಡನೆಯದರಲ್ಲಿ ಕರುಗಳ ಮತ್ತು ಮುದಿದನಗಳ ಗೊಬ್ಬರವನ್ನೂ, ಮೂರನೆಯದರಲ್ಲಿ ರೋಗಿಷ್ಠ ದನಗಳ ಗೊಬ್ಬರವನ್ನೂ ಶೇಖರಿಸುತ್ತಾ ಹೋಗಬೇಕು ಇವೆಲ್ಲಾ ತುಂಬಿದಮೇಲೆ ಮಣ್ಣಿನಿಂದ ಮುಚ್ಚಿಬಿಡಬೇಕು ಇದು ಹತ್ತು ತಿಂಗಳಲ್ಲಿ ಪಕ್ವವಾಗಿ ಒಳ್ಳೆಯ ಗೊಬ್ಬರವಾಗುತ್ತದೆ ಆಗ ಪೈರುಗಳಿಗನುಸಾರವಾಗಿ ಇವುಗಳನ್ನು ಉಪಯೋಗಿಸಿಕೊಳ್ಳಬಹುದು

೧೧ ಇಂಥಾ ಗೊಬ್ಬರವನ್ನು ಎಕರೆ ಒಂದಕ್ಕೆ ೧೫ ೨೦ ಗಾಡಿಗಳಂತೆ ಹಾಕಿದಲ್ಲಿ ಭೂಮಿಯು ಮೂರು ವರ್ಷಗಳವರೆವಿಗೂ ಉತ್ಕೃಷ್ಟವಾದ ಬೆಳೆಗಳನ್ನು ಕೊಡುತ್ತದೆ ವರ್ಷವರ್ಷವೂ ಹೀಗೆ ಗೊಬ್ಬರವನ್ನು ಹಾಕುತ್ತಿದ್ದರೆ ಭೂಮಿಯು ಬಂಜರಾಗುವುದೇ ಇಲ್ಲ

೧೨ ಪಶುಗಳ ಗಂಜಲವೂ ಕೂಡ ಸಗಣಿಯಂತೆ ಶ್ರೇಷ್ಠವಾದದ್ದು ಆದುದರಿಂದ ನೆನೆದಮಣ್ಣನ್ನು ಭೂಮಿಯಲ್ಲಿ (ಹೊಲದಲ್ಲಿ) ಚೆಗಿಸುತ್ತಾ ಹೋಗುವುದು ಒಳ್ಳೆಯದು

ಪ್ರಿಯಶೈವಸಹೋದರರೇ! ಪ್ರಾಚೀನಕಾಲದಿಂದಲೂ ವ್ಯವಸಾಯದ ಗುಟ್ಟನ್ನು ಬಲ್ಲ ನಾವು ಪರದೇಶೀಯರಿಂದ ಈ ವಿದ್ಯೆಯನ್ನು ಕಲಿಯುವುದು ನಾಚಿಕೆಗೇಡು ಇಲ್ಲಿಗಿಂತಲೂ ಐದಾರು ಗುಣಗಳು ಅಧಿಕವಾಗಿ ಪರದೇಶಗಳಲ್ಲಿ ಧಾನ್ಯಾದಿಗಳನ್ನು ಬೆಳೆಯುತ್ತಾರೆ ಅಲ್ಲಿಯ ಹಸುಗಳೂ ಕೂಡ ದಿನ ೧ಕ್ಕೆ ೩೦ ೪೦ ಸೇರು ಹಾಲ ಕೊಡುತ್ತವೆ ಇನ್ನುಮೇಲಾದರೂ ಎಚ್ಚರವಾಗಬೇಕಾದುದು ವಿಹಿತವಲ್ಲವೇ?

(ಪ್ರಾಣಿದಯೆ)

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೋಗಕ್ಷೇಮ ವಿಷಯಗಳನ್ನು ಬರೆಯಿಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿದೆ ಇದನ್ನು ದೂರಮಾಡುವುದಕ್ಕೋಸ್ಕರ ಈ ರಿಜಿಸ್ಟರ್ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಮಠಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಸಿದ್ಧಾಂತಶಿಖಾಮಣಿ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತವಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೩ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದೆ ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯೂ ಗೂಢಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿ ನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೬೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M F Printing ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವೆನಿಸಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಸಾರಿಸಾರಿ ಹೇಳಬಹುದಾಗಿದೆ ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣನ ಘನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! **ಬೆಲೆ ೩ ರೂಪಾಯಿ**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯ ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾ ಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತ ಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿ ತಿಳಿಯಲೆಂಬ ಸಮುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂ ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊ ವೀರಶೈವರೂ ಅವಶ್ಯವಾಗಿ ಪಠಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾ ಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾ ದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ಕ ಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೪ ರೂಪಾಯಿ** ಒಂದುರೂಪಾಯಿಗೆ ನಾಲ್ಕಾಣೆಯ ಕಮಿಷನ್ ವಜಾ ಹೋಗಲಾಗಿ ೩ ರೂ ಗೆ ದೊರೆಯುವುದು ವಿ ಪಿ ಛಾರ್ಜು ೧ ರೂ ೫ ಆಣೆ ಪ್ರತ್ಯೇ

ಮ್ಯಾನೇ
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ X ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ X ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಶಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ X ೧೪ ಬೆಲೆ ..	೦—೧—೬
ಸದ್ಯ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ X ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ X ೮ ಬೆಲೆ ೧ಕ್ಕೆ ...	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ..	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ..	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ..	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೨—೮
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ .	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ...	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ..	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತವೆ. ಮೂರುಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

(Registered Trade Mark)

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[44] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸಪ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) ...	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ.
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಫುರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳುಳ್ಳದ್ದು)	೧| ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As.**
Speeches by Pandit Shri Kashinatha Shastriji *English*)	**12 As.**
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य—संस्कृत) ...	१ रु.
पुरुषसूक्तम् (वीरशैवप्राचीनभाष्योपेतम्)	४ आ.
नंदिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಲ್ಪಟ್ಟಿತು

16

1(

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಸ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ. ಪರಸ್ಥಳದವರಿಗೆ ೨ ರೂ. ೪ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೦ನೇ ಏಪ್ರಿಲ್ ೧೯೪೨ [ಸಂಚಿಕೆ ೧

ಶ್ರೀಕಾಶೀನಾಥಗ್ರಂಥಮಾಲೆಯ—೪೦-೪೧-೪೨-೪೩ನೆಯ ಪುಷ್ಪ

ಶಿವಾಗಮಸಂಗ್ರಹಃ

ಈ ಗ್ರಂಥವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. **ಚಂದ್ರಜ್ಞಾನಾಗಮ-ಕಾರಣಾಗಮ-ಮುಕುಟಾಗಮ-ಸೂಕ್ಷ್ಮಾಗಮ**ಗಳೆಂಬ ನಾಲ್ಕು ಶಿವಾಗಮಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ, ಇದಕ್ಕೆ “ **ಶಿವಾಗಮಸಂಗ್ರಹ** ” ಎಂಬ ಹೆಸರನ್ನಿಡಲಾಗಿದೆ. ಈ ನಾಲ್ಕು ಶಿವಾಗಮಗಳಲ್ಲಿ ವೀರಶೈವಮತದ ಪ್ರಾಚೀನ ಧರ್ಮಗಳು ಬಹು ಹೃದಯಂಗಮವಾಗಿ ವಿವರಿಸಲ್ಪಟ್ಟಿರುವವು. ವೀರಶೈವಮತದ ಸರ್ವಸ್ವವೇ ಇವುಗಳಲ್ಲಿ ಅಡಗಿರುವದು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ವಿಶೇಷ ಪ್ರಯತ್ನದಿಂದ ಇವುಗಳನ್ನು ಸಂಗ್ರಹಿಸಿ ಚನ್ನಾಗಿ ಪರಿಶೋಧಿಸಿ ಅತ್ಯಂತ ಸುಂದರವಾಗಿ ಮುದ್ರಿಸಿ ಪ್ರಕಟಿಸಿದ್ದಾರೆ. ಇಂತಹ ಸರ್ವೋತ್ತಮ ಶಿವಾಗಮಗಳು ಈಗ ಪ್ರಕಾಶಕ್ಕೆ ಬಂದಿರುವುದು ಈ ಮತದ ಪುಣ್ಯವಿಶೇಷವೆಂದೇ ಹೇಳಬೇಕಾಗಿದೆ ಈ ಶಿವಾಗಮಗಳು ಸದ್ಯಃ ಟೀಕೆಯಿಲ್ಲದೆ ಮೂಲ ಮಾತ್ರ ಮುದ್ರಿತವಾಗಿವೆ. ಪ್ರತಿಯೊಬ್ಬರೂ ಈ ಪೂಜ್ಯಗ್ರಂಥಗಳನ್ನು ತರಿಸಿಕೊಂಡು ಇವುಗಳಲ್ಲುಕ್ತವಾಗಿರುವ ಪ್ರಾಚೀನ ಪವಿತ್ರಧರ್ಮಗಳನ್ನು ತಿಳಿದು ಅದರಂತೆ ಆಚರಿಸಿ ಪರಶಿವನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ. ಮನೋಹರವಾದ ಮುದ್ರಣ ! ಸುಂದರವಾದ ಬೈಂಡು ! **ಬೆಲೆ ೨ ರೂಪಾಯಿ.**

ಪಂಚಾಚಾರಪ್ರಕಾಶಿಕಾ (೪೪ನೆಯ ಪುಷ್ಪ)

ಇದರಲ್ಲಿ ವೀರಶೈವರು ಮುಖ್ಯವಾಗಿ ಆಚರಿಸತಕ್ಕ ೬೪ ಶೀಲಗಳು ಹೃದಯಂಗಮವಾಗಿ ವರ್ಣಿತವಾಗಿವೆ. ಚಂದ್ರಜ್ಞಾನಾಗಮದ ೯ನೆಯ ಪಟಲದಲ್ಲಿ ಈ ಶೀಲಗಳು ಉಕ್ತವಾಗಿರುವುದರಿಂದ ಇದನ್ನು ಪ್ರತ್ಯೇಕವಾಗಿ ಕನ್ನಡ ಟೀಕೆಯೊಡನೆ ಮುದ್ರಿಸಿದ್ದಾಗಿದೆ. **ಬೆಲೆ ೨ ಆಣೆ.**

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ನಾನಾವಿಧ ಬಣ್ಣಗಳಿಂದ ಮನೋಹರವಾಗಿ ಮುದ್ರಿತವಾಗಿರುವ

ನೂತನ ಫೋಟೋಗಳು

ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ (ಸೈಜು ೧೪×೧೦) ಬೆಲೆ ೪ ಆಣೆ
(ಅತ್ಯಂತ ಸುಂದರವಾದುದು.)

ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ಸೈಜು ೬×೧೦) „ ೨ ಆಣೆ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪ್ರಭೆಯು ಚಿರಕಾಲ ಬಾಳಲಿ

ಲೇಖಕ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ, ಕೊಣ್ಣೂರು

ಪಂಚಾಚಾರ್ಯಪ್ರಭೆಯು ಜನ್ಮವೆತ್ತಿ ಈ ಚಿತ್ರಭಾನುಸಂವತ್ಸರ ವೈಶಾಖ ಶುದ್ಧ ಪಂಚಮಿಗೆ ೧೫ ವರ್ಷಗಳು ತುಂಬಿ ೧೬ನೆಯ ವರ್ಷವು ಪ್ರಾರಂಭವಾಗಿರುವದು. ಇದು ಹುಟ್ಟಿದಂದಿನಿಂದ ಹಿಡಿದು ಇಲ್ಲಿಯವರೆಗೂ ಧಾರ್ಮಿಕ, ಸಾಮಾಜಿಕ, ನೈತಿಕ, ಐತಿಹಾಸಿಕಗಳಿಂದೊಡಗೂಡಿದ ಮಹತ್ವದ ಲೇಖನಗಳನ್ನು ಪ್ರಕಟಿಸಿ, ನಾಸ್ತಿಕರ ದುರ್ವಾದವನ್ನು ಖಂಡಿಸಿ ಆಸ್ತಿಕರ ಧರ್ಮಪ್ರಕಾಶವನ್ನು ಜಗತ್ತಿನಲ್ಲೆಲ್ಲ ಹರಡಿ, ಭರತಖಂಡದಲ್ಲಿರುವ ಸಮಸ್ತ ಸನಾತನಿಗಳನ್ನು ಆನಂದಸಾಗರದಲ್ಲಿ ಓಲಾಡುವಂತೆ ಮಾಡಿ, ತನ್ನ ಹೆಸರನ್ನು ಸಾರ್ಥಕಮಾಡಿಕೊಂಡಿರುವದು. ಪ್ರಭೆಯು ಚಿರಕಾಲ ಬಾಳಬೇಕಾದರೆ ಗುರುಭಕ್ತರೆಲ್ಲರೂ ಅಸಾಧಾರಣವಾದ ಅಭಿಮಾನವನ್ನು ವಹಿಸಿ ಚಂದಾದಾರರಾಗಬೇಕಲ್ಲದೆ, ಇತರರನ್ನೂ ಚಂದಾದಾರರಾಗಲಿಕ್ಕೆ ಪ್ರೋತ್ಸಾಹಿಸಬೇಕು. ಮತ್ತು ಪ್ರತಿಯೊಬ್ಬರ ಮನೆಯಲ್ಲಿ ನಡೆಯತಕ್ಕ ಶುಭಾಶುಭ ಕಾರ್ಯಗಳಲ್ಲಿ ಪ್ರಭಾಪೋಷಣಕ್ಕಾಗಿ ಹಣವನ್ನು ವಸೂಲುಮಾಡಿ ಕಳಿಸಿಕೊಡಬೇಕು. ಈ ಕಾರ್ಯದಲ್ಲಿ ಗುರುಪೀಠಾಭಿಮಾನಿಗಳೆಲ್ಲರೂ ನಿರತರಾಗಬೇಕು. ಧರ್ಮವೇ ಮೂರ್ತಿಮತ್ತಾಗಿರುವ ಪ್ರಭೆಯು ಚಿರಕಾಲ ಬಾಳುವಂತೆ ಅನುಗ್ರಹಿಸಲೆಂದು ಶ್ರೀಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುತ್ತೇವೆ.

ಸ್ವೀಕಾರ.

ಬೆಳಗಾಂವ ಜಿ॥ ಮತ್ತಿಕೊಪ್ಪಗ್ರಾಮದಲ್ಲಿ ನೆರವೇರಿದ ಶಿವದೀಕ್ಷಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಮುತ್ತಗಟ್ಟಿ ಶ್ರೀ॥ ಷ॥ ಬ್ರ॥ ಗುರುವರ್ಯಶಿವಾಚಾರ್ಯರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಬ್ರಿಟಿಷ್ ದ್ವೀಪವು ಸುತ್ತಲ್ಪಟ್ಟ ಸ್ಪ್ರಿಂಗಿನಂತಿದೆ

“ ಇಂಗ್ಲೆಂಡಿನಲ್ಲಿ 30 ಲಕ್ಷ ಹೋಂಗಾರ್ಡುಗಳಲ್ಲದೆ ಶಸ್ತ್ರಸಜ್ಜಿತರಾದ 3150000 ಯೋಧರಿದ್ದಾರೆ. ಇದರಿಂದ ಬ್ರಿಟಿಷ್ ದ್ವೀಪವೀಗ ಮುಂದಿನ ಕಾರ್ಯಾಚರಣೆಗೆ ಸುತ್ತಿ ಸಿದ್ಧಪಡಿಸಿಟ್ಟ ಸ್ಪ್ರಿಂಗಿನಂತಿದೆ” ಎಂಬುದಾಗಿ ಅಮೇರಿಕದ ಪತ್ರಿಕೆಯೊಂದು ಬರೆದಿರುವದಲ್ಲದೆ, ಪೂರ್ವದಿಂದ ರಷ್ಯನರೂ ಪಶ್ಚಿಮದಿಂದ ಬ್ರಿಟಿಷರೂ ಮತ್ತು ಅಮೇರಿಕನ್ನರೂ ನುಗ್ಗಿದ್ದಾದರೆ ಹಿಟ್ಲರನನ್ನು ಧ್ವಂಸ ಮಾಡಬಹುದೆಂದು ಬರೆದಿದೆ.

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು

ತಪೋನುಷ್ಠಾನಸಮಾಪ್ತಿ

ಜಗತ್ಸೃಷ್ಟಿಯಾಕಾರಕನಾದ ಶ್ರೀಪರಮಾತ್ಮನ ಇಚ್ಛೆಯು ಎಲ್ಲ ಪ್ರಾಣಿಗಳೂ ಸುಖಿಗಳಾಗಿರಬೇಕೆಂದೇ ಇರುತ್ತದೆ. ದೇವರು ಆಯಾ ಪ್ರಾಣಿಗಳಿಗೆ ಬೇಕಾದ ಸುಖಸಾಧನಗಳನ್ನು ಮೊದಲೇ ಕಲ್ಪಿಸಿರುವನು. ಪ್ರಾಣಿಗಳ ನಿರ್ಮಾಣದಲ್ಲಿ ತಾರತಮ್ಯವಿರುವಂತೆ ಅವುಗಳ ಸುಖಸಾಧನವಲ್ಲಿಯೂ ಹೆಚ್ಚುಕಡಿಮೆಯಿದ್ದೇ ಇದೆ. ತಿರ್ಯಗ್ಜಂತುಗಳ ಸುಖಸಾಧನಗಳೆಂದರೆ ಅನ್ನೋದಕಗಳು. ತಿರ್ಯಗ್ಜಂತುಗಳ ಅಷ್ಟು ದಿವ್ಯವಸ್ತುಯು ನೈಸರ್ಗಿಕವಾಗಿವೆ. ಆ ಜಂತುಗಳು ಮನುಷ್ಯನನ್ನು ಆಶ್ರಯಿಸಿದಾಗಮಾತ್ರ ಕೆಲಕಾಲ ಅಲ್ಲಿ ಅನ್ನೋದಕಗಳ ಅಭಾವದಿಂದ ಬಳಲಬೇಕಾಗುತ್ತದೆ. ಮನುಷ್ಯಪ್ರಾಣಿಗಾಗಿ ಶ್ರೀಪರಮೇಶ್ವರನು ಶರೀರಪೋಷಕಗಳಾದ ಅನ್ನೋದಕಗಳನ್ನಲ್ಲದೆ ಮೋಕ್ಷಸಾಧನಸಂಪತ್ತಿಯನ್ನು ಅನುಗ್ರಹಿಸಿರುವನು. ಅವೆರಡನ್ನೂ ಉಪಯೋಗಿಸಿಕೊಂಡು ನಿಜಸೌಖ್ಯವನ್ನು ಪಡೆವುದು ಮನುಷ್ಯನ ಕರ್ತವ್ಯವಾಗಿದೆ. ಧರ್ಮಮಾರ್ಗದಲ್ಲಿ ನಡೆಯುತ್ತಿರುವ ಮನುಷ್ಯನ ಯಾವ ಸಾಧನವೂ ಕೆಡುವದಿಲ್ಲ ಮತ್ತು ಕೊರತೆಯೂ ಬರುವದಿಲ್ಲ. ಆತನ ಪಲ್ಲಿ ಪ್ರವೃತ್ತಿಯು [illegible] ಸಂಪತ್ತುಗಳೂ ಸುತ್ತುಗಟ್ಟುತ್ತವೆ. ಧರ್ಮಮಾರ್ಗದಲ್ಲಿ ಪ್ರವೃತ್ತಿ ನಿವೃತ್ತಿಗಳೆರಡೂ ಸ್ವೀಕೃತಗಳಾಗಿವೆ. ಪ್ರವೃತ್ತಿಮಾರ್ಗದಲ್ಲಿ ವಿಷಯಸುಖದ ಪ್ರಾಬಲ್ಯವುಂಟು. [illegible] ತಮ್ಮ ಪದಾರ್ಥಗಳನ್ನು ಉಪಯೋಗಿಸುತ್ತಿರುವಾಗ [illegible] ಸುಖವೇ ವಿಷಯ [illegible] ಜ್ಞಾನ [illegible] ಧಾರಣವೃದ್ಧಿ ಆರೋಗ್ಯಗಳಿಗಾಗಿ ಮಾತ್ರ [illegible] ಅನ್ನವು [illegible] ನಾಲುಗುವನಿಗೂ ಆಸಕ್ತಿ [illegible] ಪ್ರಾಸೇಂದ್ರಿಯಗಳಿಗೆ ಸಹ ಅಷ್ಟು ರವಿಲ್ಲವೆ ಆತಿ [illegible] ಯೋಗತ್ಯಾಗವು ಉತ್ತರೀಯದಲ್ಲಿ ಇಂದ್ರಿಯಗಳ [illegible] ಉಪಯೋಗಿಸದಿರ ವುದೆ ಅಧರ್ಮವೆಂದು [illegible] ಮನುಷ್ಯನು ಅಧರ್ಮಮಾರ್ಗದಲ್ಲಿ [illegible] ಕ್ರೋಧಾದಿಗಳು [illegible] ಮನುಷ್ಯದೇಹ [illegible] ಶಕ್ತಿಯು [illegible] ವಿಷಯ ಪದಾರ್ಥಗಳ ಕಡೆಗೆ ಮನಸ್ಸು [illegible] ಉಪಯೋಗಿಸ [illegible] ಇಂದ್ರಿಯಶಕ್ತಿಗಳೆಲ್ಲ [illegible] ಹೋಗುತ್ತವೆ [illegible] ಈ ಕ್ರೋಧ ದೇಶದಲ್ಲಿ ಮನುಷ್ಯನ [illegible] ಉಳಿಯುವುದಿಲ್ಲ. ವಸ್ತುಪ್ರಾಪ್ತಿಯಾದರೆ [illegible] ತನ್ನ [illegible] ನಿರ್ವಹಿಸುತ್ತಾನೆ [illegible] ಸ್ವಾರ್ಥ [illegible] ಕಡೆಯಲ್ಲಿ ಮುಳುಗಿರಲು [illegible] ಉತ್ತರವಾಗ [illegible] ಪ್ರಜ್ಞೆಯೂ ಉಳಿಯುವುದಿಲ್ಲ [illegible] ದುರ್ಮಾರ್ಗವು [illegible] ಅವಶ್ಯವಾಗುತ್ತದೆ. [illegible] ಸತ್ಪ್ರವೃತ್ತಿಯು [illegible] ಕಲಹಪ್ರಾರಂಭವಾಗುತ್ತದೆ. ಈ ಪ್ರಪಂಚವೇ ಪ್ರಳಯೋನ್ಮುಖವಾಗುತ್ತದೆ. “ಪಶ್ಯಂತು ಲೋಕಾಃ ಕಲಿಕಾಲಚೇಷ್ಟಿತಂ” ಎಂಬ ಅನೇಕವಿಧವಾಗಿ ಭವಿಷ್ಯತ್ಪುರಾಣದಲ್ಲಿ ವರ್ಣಿಸಿದ ಕಲಿಕೌತುಕಗಳೆಲ್ಲವೂ [illegible] ಕಣ್ಣಿಗೆ [illegible] ಗಿವೆ [illegible] ವೃತ್ತಿಯ [illegible] ಕೋಲ ಕಲವೆಂಬ [illegible] ಅಶ್ವಮೇಧ [illegible] ಅವನ [illegible] ಧನಿಗೆ [illegible] ವುದು ಎಲ್ಲೆಲ್ಲಿಯೂ [illegible] ಅಭಿವೃದ್ಧಿಯಾಗುವುದಕ್ಕೆ ಸಾಧನವಾದುದು [illegible] ಸುಧಾರಣೆಯೋ ತಿಳಿಯದಾಗಿದೆ. ಪ್ರಪಂಚದ ಅಧಿಕಪಾಲಿನ [illegible] ಪರಿಶೀಲಿಸಿದರೆ ಎಲ್ಲೆಯು [illegible] ಯುದ್ಧದಲ್ಲಿ ಹುಳಗಳು [illegible] ಸತ್ಪ್ರವೃತ್ತಿಯು [illegible] ಜಗತ್ತಿಗೆ ಯುದ್ಧದ [illegible] ಸ್ಪಷ್ಟವಾಗಿದೆ. ಈ [illegible] ಪ್ರಪಂಚದ [illegible] ಹೊಸದಾಗಿ [illegible] ದೈವೀಶಕ್ತಿಯು [illegible] ರಕ್ಷಣೆ [illegible] ಅಸುರಶಕ್ತಿ [illegible] ಅಲ್ಲ [illegible] ಶಕ್ತಿಯನ್ನು ದೈವೀಶಕ್ತಿಯಿಂದ [illegible] ಯುದ್ಧವೆಂಬುದು ಧರ್ಮರಕ್ಷಣೆಗಾಗಿಯೇ ಇರುತ್ತದೆ. ಧರ್ಮದ ಮನುಷ್ಯನ ಸರ್ವಾರ್ಥಸಾಧನವೆಂದ ಬೇರೆ ಬರೆಯಬೇಕಾಗಿಲ್ಲ. [illegible] ಆತ್ಮಶಕ್ತಿ ಇಲ್ಲದಿರವಾಗ [illegible] ಆಯುಧಬಲವನ್ನು ಅವಲಂಬಿಸಬೇಕಾಗುತ್ತದೆ. ಆದರೂ ಆತ್ಮಶಕ್ತಿಯು [illegible] ಆಯುಧಗಳೇನೂ ಮಾಡಲಾರವೆಂಬ [illegible] ಮರೆಯಬಾರದು. ಈಗ ಪ್ರಪಂಚಕ್ಕೊದಗಿದ [illegible] ದೂರಗೊಳಿಸಬೇಕಾದರೆ ಸರ್ವರೂ ಪರಮಾತ್ಮನನ್ನು [illegible] ತಪೋಭೂಮಿಯಾದ ಭಾರತಭೂಮಿಯು ಬೇರೆ [illegible] ದವುಳ್ಳದ್ದಾಗುತ್ತಲಿದೆ. ತಪೋಧನರಾದ ರಕ್ಷಣೆಯನ್ನು ತಪಸ್ಸಿನಿಂದಲೇ ಮಾಡಿಕೊಳ್ಳಲು ಸಿದ್ಧರಾಗಬೇಕು. ಈ ಬಗೆಯ ಸಂಕಟಗಳು ಪ್ರಪಂಚಕ್ಕೆ ನೂತನಗಳೇನೂ ಅಲ್ಲ. ಪ್ರಾಚೀನಕಾಲದ ಸಂಕಟಗಳನ್ನು ಅಧ್ಯಯನ ಮಾಡಿದರೆ ದೇವತೆಗಳೂ ಇತಿಹಾಸ ಪುರಾಣಾದಿಗಳಲ್ಲಿ ಅವುಗಳ ಭೀಷಣ ಚಿತ್ರಗಳನ್ನು ಅವಲೋಕಿಸಬಹುದಾಗಿದೆ. ಆ ಕಾಲದಲ್ಲಿ ಸಂಕಟವು ದೈವಬಲದಿಂದಲೇ [illegible] ಪ್ರಪಂಚಕ್ಕೆ [illegible] ತಪಃಶಕ್ತಿ (ದೈವೀಶಕ್ತಿ) ಯು ಅಬಲವೆಂದು ಯಾರೂ [illegible] ಅದನ್ನು ಪೊರಕೂಡಿಸುವ [illegible] ತರವಾಗಿರಬೇಕು. ಸದ್ಯ ನಮಗೆ ಆತ್ಮಶಕ್ತಿಯು [illegible] ಬೇಕಾಗಿದೆ. [illegible] ತಪಸ್ಸು [illegible] ಗುವುದಿಲ್ಲ [illegible] ಸಾಧನೆಯನ್ನು ಅನವರತವೂ [illegible] ಸ್ಥಲದಲ್ಲಿ [illegible] ತಪೋಭೂಮಿಯಲ್ಲಿ [illegible] ದಿಗಳ [illegible] ತಪೋಧನಿಯೇ ಅಲ್ಲ [illegible] ತಪಸ್ಸು [illegible] ಸಂಕಟ [illegible] ಸಾಮಾನ್ಯಪ್ರಾಣಿಗಳು [illegible] ಮಾತ್ರ [illegible] ಅನುಭವಿಸುತ್ತವೆ [illegible]

ಪಂಚಾಚಾರ್ಯರ [illegible] ಸಮರ್ಪಣವನ್ನು ಮಾಡುವುದು [illegible] ಏಕಾಂತ [illegible] ಈ ಸಮಯದಲ್ಲಿ [illegible] ಸನ್ನಿಧಿಯು [illegible] ಜನ [illegible] ಪರಾಸ್ತವೆ [illegible] ಈ [illegible] ತ್ತಿಗ [illegible] ಕೊಂಡಿರ [illegible] ಪ್ರಸ್ತಾಪ [illegible] ತಕ್ಕ [illegible] ಸಮಸ್ತ [illegible] ಸಂಘಟಿಸಿ [illegible] ತಮ್ಮ [illegible] ಕರ್ತನವನ್ನು ನಿರ್ವಹಿಸುವುದಕ್ಕೆ ಅವರ [illegible] ಪಡೆಯಲು ಸಿದ್ಧರಾದಿರುವ [illegible] ಶ್ರೀಮ [illegible] ಶ್ರೀ [illegible] ಆವ [illegible] ಈ [illegible] ಪ್ರವರ್ತ [illegible] ನಿಜಮುಖವಾಗಿ [illegible] ಯು ಇದೇ [illegible] ೧೯೪೨ನೇ [illegible] ಶ್ರೀಮದು [illegible] ತಪೋನುಷ್ಠಾನ [illegible] ಹೋದ [illegible] ಶ್ರೀಪಂಚ [illegible] ಶ್ರೀ ಮೃತ್ಯುಂಜಯಮಹೋದ [illegible] ಪ್ರಸ [illegible] ಮಹಾಮಂಗಳಾರತಿ [illegible] ಜನಗಳಲ್ಲಿ [illegible] ಕೊಳ್ಳುತ್ತಿದ್ದರು [illegible] ಪ್ರಸಂಗ [illegible] ಒಂದು ಸಮಿತಿಯು ನಿರ್ಮಿಸಲ್ಪಟ್ಟಿದ್ದಿತು. ಈ ಸಂಘದ ಅಧ್ಯಕ್ಷಸ್ಥಾನವನ್ನು [illegible] ಬಹದ್ದೂರ ರಾ|| ಚೀಫ ಜಸ್ಟಿಸ [illegible] ನವರು [illegible] ಮೈಸೂರ ನ್ಯಾಯ [illegible] ಚಂದ್ರಶೇಖರಯ್ಯನವರೂ [illegible] ದ್ದರು. ಅನುಷ್ಠಾನಸಮಾಪ್ತಿಯ ೧೧ನೇ [illegible] ದಿನ [illegible] ದಿವಸ ನೆರವೇರ [illegible] ವಾದಿತು. ಆದಿನ ಅಧ್ಯಕ್ಷಸ್ಥಾನವನ್ನು ಮೈಸೂರ ಸಂಸ್ಥಾನದ ದಿವಾನರಾದ [illegible] ವಹಿಸಿದ್ದರು. ಆದಿನ ಸಭೆ ಮುಂಚಿನವುರಾತ್ರಿ [illegible] ವ್ಯವಸ್ಥೆಗೊಳಿಸಲ್ಪಟ್ಟಿದ್ದಿತು. [illegible] ಸಿಯರಾಗಿದ್ದಿತು. ಆ [illegible] ಜನಸಂದಣಿಯು [illegible] ಅನೇಕ ಜನ [illegible] ವ್ಯವಸ್ಥೆಯ [illegible] ದಿವಾನ [illegible] ಸರಿಯಾಗಿ [illegible] ಘಂಟೆಗೆ ಮಹಾಸನ [illegible] ಆಗಮಿಸಿದರು. [illegible] ಮಂಗಳ [illegible] ಸಂಘ [illegible] ಶ್ರೀ [illegible] ಸ್ವಾಗತ [illegible] ಶ್ರೀಮಾನ [illegible] ಚಂದ್ರಶೇಖರಯ್ಯನವರ [illegible] ಶೆಟ್ಟರ, [illegible] ಮೊದಲಾದ ಮಹಾಜನರು ದಿವಾನ್ [illegible] ಕರೆದುಕೊಂಡ [illegible] ಅಸ್ಥಳದಲ್ಲಿ ಶ್ರೀ [illegible] ಮುಂದೆ [illegible] ಅಲ್ಲಿಯೇ [illegible] ಶ್ರೀ [illegible] ಫೋಟೋ ತೆಗೆಯಲ್ಪಟ್ಟಿತು. [illegible] ಸಭೆಯು ಪ್ರಾರಂಭವಾಯಿತು. [illegible] ದಿವಾನರವರಿಗೆ ಫಲಮಂತ್ರಾಕ್ಷತೆಗಳು [illegible] ಲ್ಪಟ್ಟವು. ಅನಂತರ ಸ್ವಾಗತಸಮಿತಿಯ [illegible] ಶ್ರೀ [illegible] ಚೆನ್ನಯ್ಯನವರು [illegible] ಭಾಷಣವನ್ನು ಮಾಡಿದರು. ಇವರ ಭಾಷಣದಲ್ಲಿ [illegible] ಸಿದ್ಧಾಂತಸ್ವರೂಪ, ಪರಮೇಶ್ವರನಲ್ಲಿಯ [illegible] ಪ್ರಾಚೀನತೆ, ಮತದ [illegible] ದವುಗಳು [illegible] ಜನರ [illegible] ಮೂಲಕ [illegible] ಹೊರಹೊಮ್ಮುತ್ತಿತ್ತು. [illegible] ಶ್ರೀಗಳು “ವಿಶ್ವಶಾಂತಿ” ಎಂಬ ವಿಷಯದಲ್ಲಿ ವಿಚಾರಪರಿಪ್ಲುತವಾದ ಭಾಷಣವನ್ನು ಮಾಡಿದರು. [illegible] ಭಾಷಣವನ್ನು ಕೇಳಿ ಸಭಿಕರೆಲ್ಲರೂ ತಲೆದೂಗುತ್ತಿದ್ದರು. ಶ್ರೀ [illegible] ಗಳು ಎಂ. ಎ. ಮತ್ತು [illegible] ಸಾಹೇಬರು ಬಿ. ಎ., ಎಲ್. ಎಲ್. ಬಿ., ಇವರೇ ಮೊದಲಾದವರು ತಪೋಮಹಿಮೆ, ದೇಶಶಾಂತಿ ಮೊದಲಾದ ವಿಷಯಗಳಲ್ಲಿ ಸ್ಫೂರ್ತಿದಾಯಕಗಳಾದ ಉಪನ್ಯಾಸಗಳನ್ನು ಮಾಡಿದರು. ರಿಕ್ರ್ಯೂಟಿಂಗ್ ಆಫೀಸರರಾದ ಶ್ರೀಮಾನ ಜೆ. ಬಿ. ಮಲ್ಲಾರಾಧ್ಯರು ಎಂ. ಎ., ಇವರು ಯುದ್ಧದಿಂದಾಗುವ ಹಾನಿ ಮತ್ತು ಅದರ ಪ್ರತಿಕ್ರಿಯೆ ಈ ವಿಷಯದಲ್ಲಿ ಅನುಭವಪೂರ್ಣವಾದ ಉಪನ್ಯಾಸವನ್ನು ಮಾಡಿದರು. ಅಧ್ಯಕ್ಷರಾದ ದಿವಾನ ಸಾಹೇಬರವರು ಎಲ್ಲ ವಿಷಯಗಳನ್ನೂ ಕ್ರೋಡೀಕರಿಸಿ ಮನನೀಯವಾದ ಉಪನ್ಯಾಸವನ್ನು ಮಾಡಿ ಶ್ರೀಗಳಲ್ಲಿರುವ ತಮ್ಮ ಆದರಭಾವವನ್ನು ವ್ಯಕ್ತಗೊಳಿಸಿದರು. ಅನಂತರ ಸ್ವಾಗತಸಮಿತಿಯ ಉಪಾಧ್ಯಕ್ಷರಿಂದ ಶ್ರೀಮಾನ್ ಡಿ. ಯಸ್. ಚಂದ್ರಶೇಖರಯ್ಯನವರು ವಂದನೆಗಳನ್ನು [illegible] ಈ ವಿಷಯವನ್ನು ಸ್ವಕೀಯರಿಗೆ ತಿಳುಹಿಸುವಂತೆ ಅಧ್ಯಕ್ಷಮಹಾಶಯರನ್ನು ಪ್ರಾರ್ಥಿಸಿಕೊಂಡರು. ಬಳಿಕ ರಾಜಗುರುಗಳ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಸಭೆಗೆ ಸರ್ [illegible] ಚೀಫ್ ಜಸ್ಟಿಸ್ ರಾಯಬಹದ್ದೂರ್ ಬಿ. ಕೆ. ಗರುಡಾಚಾರ್, ಜಸ್ಟಿಸ್ ಸುಬ್ರಹ್ಮಣ್ಯ ಅಯ್ಯರ್ ಇವರೇ ಮೊದಲಾದ ಅನೇಕ ಜನ ಮಾನ್ಯವ್ಯಕ್ತಿಗಳು ಆಗಮಿಸಿದ್ದರು. ತಾ|| ೩೦-೩-೧೯೪೨ನೇ ಸೋಮವಾರ ಶ್ರೀಗಳ ಪಾದಪೂಜೆ ಗಣಾರಾಧನೆಗಳು ನೆರವೇರಿದವು. ತಾ|| ೩೧-೩-೧೯೪೨ನೇ ಮಂಗಳವಾರ ಬಡಜನರಿಗೆ ಅನ್ನದಾನ ಮಾಡಲ್ಪಟ್ಟಿತು. ಆ ದಿವಸ ಅಸಂಖ್ಯ ಜನರು ದೂರದೂರದಿಂದ ಸೇರಿದ್ದರು. ಅಂದು ಮುನಿಸಿಪಾಲಿಟಿಯವರು ತಕ್ಕ ವ್ಯವಸ್ಥೆಯನ್ನಿಟ್ಟಿದ್ದಲ್ಲದೆ ಸುಮಾರು ೨೫ ಜನ ಪೋಲೀಸಿನವರು ಬಹು ದಕ್ಷತೆಯಿಂದ ಕಾರ್ಯವನ್ನು ನಿರ್ವಹಿಸಿದರು. ಈ ಕಾರ್ಯವನ್ನು ವಿಶೇಷ ಶ್ರದ್ಧೆಯಿಂದ ಮಾಡಿದವರೆಲ್ಲರಿಗೂ ಶ್ರೀಪರಮಾತ್ಮನು ಆಯುರಾರೋಗ್ಯಭಾಗ್ಯಾದಿಗಳನ್ನು ಕೊಟ್ಟು ಸಲಹುವುದಲ್ಲದೆ ಸಮಸ್ತ ಪ್ರಪಂಚಕ್ಕೆ ಶಾಂತಿಯನ್ನಿತ್ತು ಕಾಪಾಡಲೆಂದು ಶ್ರೀಪಂಚೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಸಿ. ಸಿದ್ದಪ್ಪ, ಮ್ಯಾನೇಜರ್.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸುವರ್ಣ ರಜತಾಂದೋಳಿಕಾ ಮಹೋತ್ಸವ

ಆಲೂರು.

ಶ್ರೀಜಗದ್ಗುರುಗಳವರು ಹಾಸನ ಡಿ|| ಆಲೂರು ಟವನ್ನಿಗೆ ಇದೇ ತಾ|| ೧೩ನೇ ತಾರೀಖು ಸೋಮವಾರ ಪ್ರಾತಃಕಾಲ ೧೦ ಗಂಟೆಗೆ [illegible] ಮೆರವಣಿಗೆಯೊಡನೆ ದಯಮಾಡಿಸಿದರು. ಉತ್ಸವವು ವೈಭವದೊಡನೆ ನೆರವೇರಿತು. ಆಗಂತುಕ ಜನರು ಉತ್ಸವದಲ್ಲಿ ಭಾಗವಹಿಸಿದ್ದರು. ಬೆಂಗಳೂರು ಮಹಾಂತಿನ ಮಠದ ವಿದ್ಯಾರ್ಥಿಗಳು ಬಹು [illegible] ಮಾಡಿದರು. ಹೊನ್ನವಳ್ಳಿ ಭಜನಾ ಸಂಘದವರು ಬಹು ಆನಂದದಿಂದ ಗುರುಭಜನೆಯನ್ನು ಮಾಡಿದರು. ಗ್ರಾಮಾಂತರದವರು ವಾದ್ಯಸಮೇತ ಬಂದು ಉತ್ಸವದಲ್ಲಿ ಸೇವೆಯನ್ನು ಸಲ್ಲಿಸಿದರು. ದಾಸೋಹವು ಬಹಳ ವಿಶೇಷದಿಂದ ನಡೆದು ಜನರು ಆನಂದಭರಿತರಾದರು. ರಾತ್ರಿ ೭ ಗಂಟೆಗೆ ಸಭೆ ಸೇರಿತು. ಶ್ರೀ ಜಗದ್ಗುರುಗಳವರು ಸಿಂಹಾಸನಾರೋಹಣ ಮಾಡಿದ ಮೇಲೆ ವಿಜ್ಞಾಪನಪತ್ರಿಕೆಯು ಒಪ್ಪಿಸಲ್ಪಟ್ಟಿತು. ಸ್ವಾಗತಪದ್ಯಗಳನ್ನು ಕೆ. ಮಾರಿ ಕಾತ್ಯಾಯನಿ, ರಾಜಶೇಖರಪ್ಪನವರು ಓದಿ ಒಪ್ಪಿಸಿದರು. ಶ್ರೀಜಗದ್ಗುರುಗಳವರು ಎ. ಸಿ. [illegible] ನವರ ಗುರುಭಕ್ತಿ ವಿಷಯವಾಗಿ ಸ್ವಾರಸ್ಯವಾದ ಭಾಷಣ [illegible] ಸಭಿಕರನ್ನು ಆನಂದಗೊಳಿಸಿದರು. ವೈ. ಹೆಚ್. ಸಿದ್ದಯ್ಯನವರು ಶ್ರೀಜಗದ್ಗುರುಗಳ ಗುಣಕಥನಮಾಡಿದರು. ವ|| ರಾ|| ಎ. ಎಸ್. ಶಿವಪಂಚಪ್ಪನವರು ಮಾದನೂರು [illegible] ದರ [illegible] ಸಣ್ಣತಮ್ಮೇಗೌಡರ ಪುತ್ರಿ ರುಕ್ಮಿಣಮ್ಮನು ರೇಣುಕರ [illegible] ಮಾನೋಹರವಾಗಿ ಹಾಡಿ ಎಲ್ಲರೂ ಆನಂದಭರಿತರಾದರು. ಬಾರಸಭೆಯ [illegible] ತಮ್ಮ ಪೆಂಡಾಲಿನಲ್ಲಿ ಬಿನ್ನಹಪತ್ರಿಕೆ ಅರ್ಪಿಸಿದರು. ಸರ್ವಮತೀಯರೂ ಸಭೆಗೆ ಬಂದಿದ್ದರು. ಶ್ರೀಜಗದ್ಗುರುಗಳವರು ದಿವ್ಯವಾಣಿಯಿಂದ ಸದುಪದೇಶಮಾಡಿ ಶ್ರೀಮನ್ಮಹಾರಾಜರವರಿಗೆ ಶ್ರೇಯಸ್ಸನ್ನು ಬಯಸಿದರು. ಅತುಲವಾತರ, ಶ್ರೀ|| ಸ [illegible] ಬಹಳವಿಜೃಂಭಣೆಯಿಂದ ಉತ್ಸವವನ್ನು ನೆರವೇರಿಸಿದರು. ವೈ|| ಶ್ರೀ ಎ. [illegible] ಬಸವಲಿಂಗೇಗೌಡರ ಭಾಗವಹಿಸಿದ್ದರು. ಇವರೆಲ್ಲರಿಗೂ ಜಗದಾಚಾರ್ಯರು ಸಕಲ ಸನ್ಮಂಗಳಗಳನ್ನೀಯಲಿ.

ಓರ್ವ ಉತ್ಸವಭಾಗಿ

ವೀರಶೈವ ಸಮಾಜದ ವಾರ್ಷಿಕ ಸಭೆ

ಹುಮನಾಬಾದ

ಗುಲ್ಬರ್ಗಾ ಡಿ|| ಹುಮನಾಬಾದ ನಗರದಲ್ಲಿ ಚೈತ್ರ ಶುದ್ಧ ೧೩ ಸೋಮವಾರ ದಿವಸ ವೀರಶೈವ ಸಮಾಜದ [illegible] ವಾರ್ಷಿಕ ಸಭೆಯು ಕೇರಳ್ಳಿ ಹಿರೇಮಠಾಧ್ಯಕ್ಷರಾದ ಶ್ರೀಸಿದ್ಧವೀರಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಆಗ್ಗೆ ವೇ|| ಸಿದ್ಧರಾಮಯ್ಯನವರು ಬಾಗಿ ಇವರು ವೀರಶೈವರ ಸಂಘಟನೆ ಬಗ್ಗೆಯೂ ಗುರುಭಕ್ತಿಯ ಬಗ್ಗೆಯೂ ಮನೋಹರವಾದ ಭಾಷಣವನ್ನು ಮಾಡಿದರು. ಬಳಿಕ ಜಗದಾಚಾರ್ಯರ ಭಾವಚಿತ್ರಕ್ಕೆ ಮಂಗಳವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಚನ್ನವೀರಯ್ಯ ಮುಕಶೆಟ್ಟಿ.

ಪಲ್ಲಕ್ಕಿಯ ಮಹೋತ್ಸವ, ಸೊಲ್ಲಾಪುರ.

ಕಳೆದ ಫಾಲ್ಗುನ ಬ|| ೮ ಮಂಗಳವಾರ ದಿವಸ ನಂದೀಮಠದಲ್ಲಿ ನೂತನ ಪಟ್ಟಾಧಿಕಾರ ಮಹೋತ್ಸವದ ಸಂಬಂಧವಾಗಿ ಅನ್ನ ಸಂತರ್ಪಣೆಯೂ ನೆರವೇರಿತು. ಆ ದಿವಸ ಈ ನಗರದಲ್ಲಿರುವ ನಂದೀಮಠದ ಎಲ್ಲ ಶಿಷ್ಯಮಂಡಲಿಯವರೂ ಮತ್ತು ಪುರಪ್ರಮುಖರೂ ಆಗಮಿಸಿದ್ದರು. ಅದೇ ದಿನ ರಾತ್ರಿ ೮ ಘಂಟೆಗೆ ನೂತನ ಪಟ್ಟಾಧಿಕಾರಿಗಳಾದ ಶ್ರೀ ಷಡಕ್ಷರಶಿವಾಚಾರ್ಯರ ಪಲ್ಲಕ್ಕಿ ಮಹೋತ್ಸವವು ನಂದೀಮಠದಿಂದ ಹೊರಟು ಮಾಣಿಕಚೌಕ, ಭುಂದೆಗಲ್ಲಿ, ಲೋಕಮಂದಗಲ್ಲಿ, ಕರಾಫಗಲ್ಲಿ, ಜಾಟಿಗಲ್ಲಿ, ಬಾಳೀವೇಸ, ಮಲ್ಲಿಕಾರ್ಜುನ ದೇವಾಲಯ, ತಿಲಕಚೌಕ ಮೊದಲಾದ ಮಾರ್ಗಗಳಲ್ಲಿ ಹಾಯ್ದು ಮಠಕ್ಕೆ ಬಂದು ತಲುಪಿತು. ಈ ಉತ್ಸವದಲ್ಲಿ ಮಠದ ಶಿಷ್ಯಮಂಡಲಿಯವರೂ, ಇತರ ವೀರಶೈವಬಂಧುಗಳೂ, ನಾದದ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳೂ, ಶ್ರದ್ಧಾನಂದ ಸಮಾಜದವರೂ ವೀರಶೈವ ಸದಾಚಾರಸ್ತೋಮಸಮಾಜದವರೂ ಭಾಗವಹಿಸಿದ್ದರು. ಉತ್ಸವವು ಮಠಕ್ಕೆ ತಲಪಿದ ಮೇಲೆ ವೇ|| ಪಂ|| ಮಲ್ಲಿಕಾರ್ಜುನ ಶಾಸ್ತ್ರಿಗಳವರು ನಂದೀಮಠದ ಪ್ರಾಚೀನತ್ವದ ಒಗ್ಗೆ ಮನೋಹರವಾಗಿ ಮಾತನಾಡಿದರು. ಒಳಕ ವೇ|| ಕಲ್ಲಯ್ಯಸ್ವಾಮಿ ಶಾಸ್ತ್ರೀ ಗಾಂವಕರ್ ಇವರು ಪಂಚಾಚಾರ್ಯರ ಮಹತ್ವದ ಒಗ್ಗೆ ಮರಾಠಿ ಭಾಷೆಯಲ್ಲಿ ಅತ್ಯುತ್ತಮವಾದ ಭಾಷಣವನ್ನು ಮಾಡಿದರು. ಒಳಕ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು.

ಪ್ರತ್ಯಕ್ಷದರ್ಶಿ

| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು |

ಶಿವದೀಕ್ಷಾ ಸಮಾರಂಭ, ಮುತ್ತಿಕೊಪ್ಪ

ಬೆಳಗಾವಿ ಜಿ|| ಮುತ್ತಿಕೊಪ್ಪಗ್ರಾಮದ ಭಕ್ತರ ಪ್ರಾರ್ಥನೆಯ ಮೇರೆಗೆ ಶ್ರೀ|| ಮ|| ಪ್ರ|| ರುದ್ರಮುನಿಶಿವಾಚಾರ್ಯರ್ ಹಿರೇಮಠ ಪತ್ರಿಬ್ಬಿ ಇವರು ದಯಮಾಡಿಸಿ ಪ್ರವಚನವನ್ನು ನಡೆಯಿಸಿದರು ಇವರ ಬೋಧೆಯಿಂದ ಭಕ್ತರು ಲೋಲುಪರಾಗಿದ್ದು ಶಿವದೀಕ್ಷೆಯನ್ನು ಹೊಂದಲು ಸಿದ್ಧರಾದರು. ಶಿವದೀಕ್ಷಾಸಮಾರಂಭವು ಚೈ|| ವ|| ೧೩ ಸೋಮವಾರ ದಿವಸ ಸಂಭ್ರಮದಿಂದ ನೆರವೇರಿತು. ಶಿವದೀಕ್ಷೆಯನ್ನು ೩೦ ಜನರು ಹೊಂದಿದರು. ಅವರಲ್ಲಿ ಕಲ್ಲಪ್ಪ, ಗುರುಸಿದ್ಧಪ್ಪ ಸಿದ್ಧಪ್ಪ, ದುಂಡಪ್ಪ, ಈರಬಸಪ್ಪ ಇವರೇ ಮೊದಲಾದ ಸದ್ಭಕ್ತರು ಭಾಗವಹಿಸಿ ಉತ್ಸಾಹದಿಂದ ಕಾರ್ಯವನ್ನು ನಡಸಿದರು. ಶ್ರೀಕಲ್ಮೇಶ್ವರ ಭಜನಸಂಘವು ಶ್ರೀಗಳವರ ಹಸ್ತದಿಂದ ಸ್ಥಾಪಿಸಲ್ಪಟ್ಟಿತು. ವೇ|| ಗಂಗಯ್ಯನವರು ಭಜನೆಯ ಮುಖ್ಯಸ್ಥರಾಗಿರುವರು ಶಿವಪ್ಪ ಸುರಕುಂಬಿ ಮತ್ತು ಫಕೀರಪ್ಪ ಅಂಕಣ್ಣವರ ಇವರ ಗುರುಭಕ್ತಿಪದಗಳ ಗಾನವು ಪರಮಾನಂದಕರವಾಗಿದೆ. ಬಸನಗೌಡ ಪಾಟೀಲ, ಬಸವಣ್ಣೆಪ್ಪ ಅಂತಣ್ಣವರ, ಕಲ್ಲನಗೌಡ ಪಾಟೀಲ, ಶಿವಪ್ಪ ಸಿದ್ಧಣ್ಣನವರ, ಚನ್ನಯ್ಯಾ ಪೂಜಾರಿ ಇತ್ಯಾದಿ ಸಜ್ಜನರು ಉತ್ಸಾಹಿಗಳಾಗಿದ್ದು ಗುರುಭಕ್ತಿಪರಾಯಣರಾಗಿರುವರು. ಇವರೆಲ್ಲರೂ ಗುರುಭಕ್ತಿಯನ್ನು ಭಜನೆಯ ದ್ವಾರಾ ಅಲ್ಲಲ್ಲಿಗೆ ಹೋಗಿ ಪ್ರಚಾರಮಾಡಲು ಶ್ರೀಗಳವರಿಗೆ ಅಭಿವಚನವನ್ನು ಕೊಟ್ಟಿದ್ದಾರೆ

ಓರ್ವ ಗುರುಭಕ್ತ

ವಿಮಾನದಾಳಿ ಎಚ್ಚರಿಕೆಗಳು.

ಎ ಆರ್ ಪಿ ಅಧಿಕಾರಿಗಳ ವಿವರಣೆ

೧೯೧೬ನೆಯ ಇಸವಿ ಜುಲೈ ೧೩ನೆಯ ತಾರೀಖಿನ ಮಧ್ಯಾಹ್ನದ ಹೊತ್ತು ಲಂಡನ್ ನಗರದ ಮೇಲೆ ಇದ್ದಕ್ಕಿದ್ದ ಹಾಗೆ ಜರ್ಮನ್ ವಿಮಾನಗಳು ಎರಗಿಬಂದುವು ಗೋಥಾ ಮಾದರಿಯ ಆ ವಿಮಾನಗಳು ಒಂದು ಬಾಂಬುಗಳನ್ನು ಹಾಕಿದವು ಅವುಗಳಿಂದ ೫೯೪ ಜನಗಳಿಗೆ ಪೆಟ್ಟುಬಿದ್ದು ೧೬೨ ಜನರು ಸತ್ತುಹೋದರು. ಆಗಲೂ ಬ್ರಿಟಿಷರಿಗೂ ಜರ್ಮನರಿಗೂ ಈಗಿನಂತೆಯೇ ಯುದ್ಧ. ಆದರೆ ಅದ ವರೆಗೆ ಭೂಮಿಯ ಮೇಲೂ ಸಮುದ್ರದ ಮೇಲೂ ಮಾತ್ರ ಯುದ್ಧ ನಡೆಯುತ್ತಿದ್ದುದನ್ನು ಜನರು ಒಪ್ಪಿದವರಾಗಿದ್ದರು ಹೀಗೆ ಬಾಂಬುಗಳು ಬಿದ್ದೊಡನೆಯೇ ಯುದ್ಧದ ರೀತಿಯೇ ಬದಲಾಯಿಸಿತು. ಅಂತರಿಕ್ಷದಲ್ಲಿ ಸಹ ಯುದ್ಧ ನಡೆಯುವ ಹೊಸ ರೀತಿಯೇ ಹುಟ್ಟಿಕೊಂಡಿತು. ಅದುವರೆಗೆ ಜನಾಂಗಗಳು ಭೂಮಿಯ ಮೇಲೂ ಸಮುದ್ರದ ಮೇಲೂ ಯುದ್ಧ ವಿಧಾನವನ್ನು ಅತ್ಯಂತವಾಗಿ ಪರಿಷ್ಕರಿಸಿಕೊಂಡಿದ್ದುದೆಲ್ಲ ಅದರಿಂದ ತಲೆಕೆಳಗಾಯಿತು, ಕಾಳಗದ ಹೊಸ ವಿಧಾನವು ಏರ್ಪಟ್ಟುದರಿಂದ ಅವು ಮೊದಲಿನಷ್ಟು ಪ್ರಯೋಜನವಿಲ್ಲದಂತಾದುವು ಅದಕ್ಕೆ ಮೊದಲು ಫಿರಂಗಿಗಳು ನೆಲೆಗೊಳ್ಳುವುದಕ್ಕೆ ಕಿರ್ರಿಕಟ್ಟಡಗಳೂ ಹೀಗೆಯೇ ಆಯಿತು, ಕೋಟೆಕೊತ್ತಲಗಳನ್ನು ನಿರ್ಮಿಸಲು ಜನರು ತೋರಿಸುತ್ತಿದ್ದ ಕೌಶಲವೆಲ್ಲ ಫಿರಂಗಿಗಳು ಕಂಡುಹಿಡಿದ ಮೇಲೆ ವ್ಯರ್ಥವಾಯಿತು. ಅದೇ ರೀತಿಯಲ್ಲಿ ವಿಮಾನಗಳಲ್ಲಿ ಒಂದು ಬಾಂಬು ಹಾಕುವುದು ಪ್ರಾರಂಭವಾದ ಮೇಲೆ, ಹಿಂದೆ ಅನೇಕ ಶತಮಾನಗಳಿಂದಲೂ ಶಾಸ್ತ್ರೀಯವಾದ ಪ್ರವೀಣ ಕೌಶಲ್ಯದಿಂದ ಏರ್ಪಡಿಸಿಕೊಂಡಿದ್ದ ದೇಶರಕ್ಷಣೆಯ ಸಾಧನಗಳಿಂದ ಹೆಚ್ಚಿನ ಪ್ರಯೋಜನವಿಲ್ಲದಂತಾಯಿತು. ಶತ್ರುಗಳಿಗೆ ಅರಿವೇ ಇಲ್ಲದಂತೆ ಅಕಸ್ಮಾತ್ತಾಗಿ ಬರುವ ಸ್ವತ್ತುಗಳಿಗೂ ಪ್ರಾಣಕ್ಕೂ ನಷ್ಟವನ್ನುಂಟುಮಾಡುವ ಹೊಸ ಸಾಧನವು ಸಿದ್ಧವಾದಂತಾಯಿತು. ಹೊಸ ವಿಧದ ಈ ಕೋಟಲೆಯಿಂದ ಕೇಡಾಗದಂತೆ ಮಾಡಲು ಹೊಸ ವಿಧದ ರಕ್ಷಣೆಯ ಏರ್ಪಾಡೇ ನಡೆಯಬೇಕಾದುದು ತೀರ ಅವಶ್ಯಕವಾದುದು. ವೃತ್ತವಾಯಿತು ಶತ್ರುವಿಮಾನದಾಳಿಗಳು ನಡೆದರೆ, ಅವುಗಳನ್ನು ಎದುರಿಸುವ ರಕ್ಷಣೆ ಏರ್ಪಾಡು ಅಗತ್ಯವೆಂದು ಅಗ್ಗ ತೋರಿಬಂದರೂ, ಅದು ಕಾರ್ಯರೂಪಕ್ಕೆ ಬಂದುದು ಸ್ಪೇನಿನಲ್ಲಿ ಯುದ್ಧ ನಡೆದು, ಜರ್ಮನಿ ಮತ್ತು ಇಟಲಿ ವಿಮಾನಗಳು ಮೆಡ್ರಿಡ್ ಕ್ಯಾಟಲೋನಿಯ ಮತ್ತು ಬಾರ್ಸಿಲೋನ ಮುಂತಾದ ನಗರಪ್ರಾಂತಗಳ ಮೇಲೆ ಬಾಂಬುಗಳನ್ನು ಹಾಕಿದಾಗಲೇ. ಆದಾಗ್ಯೂ, ಇಂಗ್ಲೆಂಡಿನಲ್ಲಿಯೋ ಈಗಿನ ಯುದ್ಧವು ಪ್ರಾರಂಭವಾಗುವವರೆಗೂ, ವಿಮಾನದಾಳಿಗಳನ್ನು ಎದುರಿಸುವ ರಕ್ಷಣೆ ಏರ್ಪಾಡು ನಡೆಯಲು ಪ್ರಾರಂಭವಾಗಿರಲಿಲ್ಲ. ಬ್ರಿಟನಿಗೆ ಜರ್ಮನಿಯೊಡನೆ ಯುದ್ಧವು ಒದಗಿತು, ಜರ್ಮನರು ವಿಮಾನಗಳಲ್ಲಿ ಹಾರಿ ಹೋಗಿ ಬಾಂಬುಗಳನ್ನು ಹಾಕುವುದರಲ್ಲಿ ಬಹಳ ಸಾಮರ್ಥ್ಯವನ್ನು ಸಂಪಾದಿಸಿದ್ದರು. ಆದಕಾರಣ, ಅವರು ತಮ್ಮ ಸಾಮರ್ಥ್ಯವನ್ನು ಪೂರ್ತಿಯಾಗಿ ಉಪಯೋಗಿಸುವುದು ಖಂಡಿತವೆಂದು ನಿರೀಕ್ಷೆಯುಂಟಾಯಿತು. ಆದುದರಿಂದ ಬ್ರಿಟಿಷರು ಹೊಸ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳನ್ನು ಅವಸರ ಅವಸರವಾಗಿ ಬೇಗ ಬೇಗ ಮಾಡಿದರು. ಬಾರ್ಸಿಲೋನಾ ನಗರದಲ್ಲಿ ಮಾಡಿದ್ದ ರಕ್ಷಣೆ ಏರ್ಪಾಡುಗಳ ಮೇಲ್ಗೆ ಆ ಮಾದರಿಯ ಆಧಾರದ ಮೇಲೆ ಅವು ನಡೆದುವು. ಅದರ, ಹಾಗೆ ಆರಂಭವಾದ ಆ ಏರ್ಪಾಡುಗಳನ್ನು ಜರ್ಮನರ ನವೀನ ಸೃಷ್ಟಿಯ ಡೈವ್ ಬಾಂಬರ್ ವಿಮಾನಗಳ ದಾಂಧಲೆಗಳು ಹೆಚ್ಚಿದ ಹಾಗೆಲ್ಲ, ಆ ಆ ಸಮಯದ ಸನ್ನಿವೇಶಗಳ ಅನುಭವದ ಮೇರೆಗೆ ಪದೇ ಪದೇ ಉತ್ತಮಪಡಿಸುತ್ತ ಬರಬೇಕಾಯಿತು. ಆ ರಕ್ಷಣೆ ಏರ್ಪಾಡುಗಳು ಇನ್ನೂ ಹೀಗೆಯೇ ಸರಿಯೆಂದು ಕೊನೆಯಾದ ನೆಲೆಗೆ ಬಂದಿಲ್ಲ. ಬ್ರಿಟಿಷರು ಇನ್ನೂ ಅವುಗಳನ್ನು ಉತ್ತಮಪಡಿಸುತ್ತಲೇ ಬರುತ್ತಿದ್ದಾರೆ. ಬಾಂಬು ಹಾಕುವುದರಲ್ಲಿ ಜರ್ಮನರು ಚಮತ್ಕಾರವನ್ನು ಹೆಚ್ಚಿಸಿದಂತೆಲ್ಲ ಅದಕ್ಕನುಸಾರವಾಗಿಯೂ, ಮತ್ತು ಆ ಆ ಸನ್ನಿವೇಶಗಳ ಮತ್ತು ಸ್ಥಳಗಳ ಅವಶ್ಯಕತೆಗಳಿಗನುಸಾರವಾಗಿಯೂ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳನ್ನು ಬ್ರಿಟಿಷರು ಉತ್ತಮಗೊಳಿಸುತ್ತಿದ್ದಾರೆ. ಭರತಖಂಡದಲ್ಲಿ ನಡೆದಿರುವ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳೂ ಸಹ, ಇಂಗ್ಲೆಂಡಿನಲ್ಲಿ ನಡೆದಿರುವ ಏರ್ಪಾಡುಗಳ ಮಾದರಿಯನ್ನೇ ಅನುಸರಿಸಿವೆ. ಭರತಖಂಡವು ಬಹು ದೊಡ್ಡ ದೇಶ. ಆದಕಾರಣ, ಇಲ್ಲಿ ಈಗಾಗಲೇ ನಡೆದಿರುವ ಏರ್ಪಾಡುಗಳನ್ನೆಲ್ಲ ಹದಕ್ಕೆ ತಂದು ಅಚ್ಚುಕಟ್ಟು ಮಾಡಿ ನಾನಾಪ್ರದೇಶಗಳಲ್ಲಿ ಸಹ ಅವು ಒಂದೇ ಒಗೆಯಲ್ಲಿ ಉತ್ತಮವಾಗಿರುವಂತೆ ಮಾಡಬೇಕಾದುದು ಅಗತ್ಯ. ಆ ಕೆಲಸವನ್ನು ದಕ್ಷತೆಯಿಂದ ನೋಡಿಕೊಳ್ಳುವುದಕ್ಕಾಗಿ ಇಂಡಿಯಾ ಸರ್ಕಾರದ “ಹೋಂ ಡಿಪಾರ್ಟ್‌ಮೆಂಟ್” ಇಲಾಖೆಯಲ್ಲಿ ಈಚೆಗೆ ತಾನೆ ಒಂದು ಶಾಖೆಯು ಏರ್ಪಟ್ಟಿದೆ.

ದಾಳಿಯ ಉದ್ದೇಶ

೨ ವಿಮಾನದಾಳಿಗಳ ಉದ್ದೇಶವೇನೆಂಬುದನ್ನು ಈ ರೀತಿ ವಿವರಿಸಬಹುದು. ದಾಳಿ ನಡೆಯುವ ದೇಶದ ಜನರ ಮನಸ್ಸಿನಲ್ಲಿ ಕಳವಳವನ್ನು ಹುಟ್ಟಿಸಿ ಅವರ ಆತ್ಮರಕ್ಷಣೆ ಮಾಡಿಕೊಳ್ಳುವ ಉತ್ಸಾಹವನ್ನು ಕುಗ್ಗಿಸುವುದು, ಅಲ್ಲಿಯ ಸರ್ಕಾರದವರಿಗೆ ಪ್ರಜೆಗಳ ಒತ್ತಾಸೆಯು ದೊರೆಯುವುದನ್ನು ತಪ್ಪಿಸಿ, ಅವರು ಶತ್ರುವಿನೊಡನೆ ಸಂಧಿಯನ್ನು ಯಾಚಿಸುವಂತೆ ಮಾಡುವುದು—ಇದು ವಿಮಾನದಾಳಿಗಳ ಉದ್ದೇಶ. ಆದಕಾರಣ ಸೈನಿಕರಲ್ಲದ ಇತರ ಸಾಮಾನ್ಯ ಪ್ರಜೆಗಳಲ್ಲಿ ಶತ್ರುಗಳಿಗೆ ಜಗ್ಗದಂತೆ ಹೋರಾಡಬೇಕೆಂಬ ಮನೋಧರ್ಮವನ್ನು ಒದಗಿಸಿ ಅವರುಗಳ ಧೈರ್ಯ ಸ್ಥೈರ್ಯಗಳನ್ನು ಹೆಚ್ಚಿಸಬೇಕಾದುದು ಅತ್ಯಂತ ಮುಖ್ಯವಾಗಿ ಪರಿಣಮಿಸಿದೆ. ಈಗಿನ ಯುದ್ಧಕಾಲದಲ್ಲಿ ಶತ್ರುಗಳು ಮನಸ್ಸು ಬಂದಂತೆ ಎಲ್ಲೆಂದರೆ ಅಲ್ಲಿ ಬಾಂಬುಗಳನ್ನು ಹಾಕಿ ಸೈನಿಕರಲ್ಲದ ಸಾಮಾನ್ಯ ಪ್ರಜೆಗಳಿಗೂ ಸ್ವತ್ತುಗಳಿಗೂ ನಷ್ಟವನ್ನುಂಟುಮಾಡಿದ್ದಾರೆ. ಪ್ರಜೆಗಳು ಯುದ್ಧದಾಂಧಲೆಯಿಂದ ಸುಲಭವಾಗಿ ಹೇಗಾದರೂ ವಿಮಾನದಾಳಿಗಳು ನಿಂತರೆ ಸಾಕೆಂದು ಒಲಿದು, ವಿಮಾನದಾಳಿಗಳನ್ನು ಎದುರಿಸುವ ಧೈರ್ಯವನ್ನೇ ಕಳೆದುಕೊಳ್ಳುವ ಮಟ್ಟಿಗೆ ಶತ್ರುಗಳು ಪದೇ ಪದೇ ಬಾಂಬುಗಳನ್ನು ಹಾಕಿ ನಷ್ಟಪಡಿಸುತ್ತಾರೆ. ಹೀಗೆ ನಡೆಯುವ ವಿಮಾನದಾಳಿಗಳಿಗೆ ಭಯಪಡದೆ ಜನರು ಧೈರ್ಯದಿಂದ ಅವುಗಳನ್ನು ಎದುರಿಸುವಂತೆ ಮಾಡಬೇಕಾದುದು ಅವಶ್ಯಕ. ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳು ನಡೆಯಬೇಕಾದುದು ಅದಕ್ಕಾಗಿಯೇ. ಪ್ರಾಣಕ್ಕೂ ಸ್ವತ್ತಿಗೂ ವಿಮಾನದಾಳಿಗಳಿಂದ ಅಪಾಯ. ಅವುಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ವಿವೇಕಿಗಳು ಅವಲಂಬಿಸುವ ಜಾಗರೂಕತೆಗಳನ್ನೆಲ್ಲಾ ಒಟ್ಟುಗೂಡಿಸಿ ಆ ವ್ಯವಸ್ಥೆಯಲ್ಲಿ ಸೇರಿಸಲಾಗಿದೆ. ವಿಮಾನದಾಳಿ ಎಚ್ಚರಿಕೆಗಳು ಬಹುಮುಖ್ಯವಾಗಿವೆ. ಆದರೆ, ಈಗಿನ ಯುದ್ಧವಿಧಾನಗಳನ್ನು ನೋಡಿದರೆ ವಿಮಾನದಾಳಿಗಳಿಂದ ಜನರನ್ನು ರಕ್ಷಿಸಬೇಕಾದರೆ ಕೆಲವು ಕಷ್ಟಸಾಧ್ಯವಾದ ಕೆಲಸಗಳನ್ನು ನಿರ್ವಹಿಸಬೇಕೆಂದು ತೋರುವುದು. ಅದೇನೆಂದರೆ ವಿಮಾನದಾಳಿ ಎಚ್ಚರಿಕೆಗಳೆಂದರೆ ಜನರ ರಕ್ಷಣೆಯ ಕಾರ್ಯಗಳು ಮಾತ್ರವೇ ಅಲ್ಲದೆ ಕಟ್ಟಡಗಳೇ ಮುಂತಾದುವಕ್ಕೆ ಬಾಂಬು ಬಿದ್ದು ಬೆಂಕಿ ಹೊತ್ತಿದಾಗ ಅವುಗಳನ್ನು ಆರಿಸುವುದು, ಬಾಂಬುಗಳನ್ನು ಅವು ಸಿಡಿಯುವುದಕ್ಕೆ ಮುಂಚೆಯೇ ನಾಶಗೊಳಿಸುವುದು ಮುಂತಾದುವುಗಳು ನಡೆಯಬೇಕಾಗುತ್ತದೆ

ರಕ್ಷಣೋಪಾಯಗಳು.

೩. ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳಲ್ಲಿ ವಿಮಾನಗಳೊಡನೆ ಯುದ್ಧಮಾಡುವ ರಕ್ಷಣೆ ಏರ್ಪಾಡು ಸೇರಿಲ್ಲ. ಈ ರೀತಿ ವಿಮಾನಗಳೊಡನೆ ಯುದ್ಧಮಾಡುವ ರಕ್ಷಣೆಏರ್ಪಾಡಿನಲ್ಲಿ ಶತ್ರುವಿಮಾನಗಳು ಬರುವುದನ್ನು ಕಾದು ನಿರೀಕ್ಷಿಸುತ್ತಿದ್ದು ಅವು ಬರುತ್ತಿರುವುದನ್ನು ತಿಳಿಸುವ ದಳ, ವಿಮಾನಗಳು ಎರಗಿಬಂದಾಗ ಅವುಗಳನ್ನು ನಾಶಗೊಳಿಸುವ ಫಿರಂಗಿಗಳ ವ್ಯವಸ್ಥೆ, ಶತ್ರುವಿಮಾನಗಳು ಹಾದುಹೋಗದಂತೆ ‘ಬ್ಯಾರೇಜ್’ ತಡೆವ್ಯವಸ್ಥೆಗಳು, ಶತ್ರುವಿಮಾನಗಳು ಮೇಲಿಂದ ಬರುತ್ತಿರುವಾಗಲೇ ಮೇಲಕ್ಕೆ ಹಾರಿಹೋಗಿ ಫಿರಂಗಿಗಳನ್ನು ಹೊಡೆದು ಅವುಗಳನ್ನು ನಾಶಗೊಳಿಸುವ ವಿಮಾನಗಳು—ಇವುಗಳೆಲ್ಲಾ ಸೇರಿರುತ್ತವೆ. ಭರತಖಂಡಕ್ಕೆ ಯಾವ ಪ್ರಮಾಣದಲ್ಲಿ ವಿಮಾನದಾಳಿಯು ಒದಗಬಹುದೆಂದು ನಿರೀಕ್ಷೆ ಮಾಡಿಯೋ ಆ ಪ್ರಮಾಣದಲ್ಲಿ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳೂ, ವಿಮಾನಯುದ್ಧ ಏರ್ಪಾಡುಗಳೂ ನಡೆಯುತ್ತಿವೆ. ಇಂಡಿಯಾ ಸರ್ಕಾರದ ವಿಮಾನ ವ್ಯವಸ್ಥೆಯ ನಾಯಕರು ಅವಕ್ಕೆ ತೀವ್ರವಾಗಿ ಗಮನಕೊಡುತ್ತಿದ್ದಾರೆ. ನಮ್ಮ ಸಂಬಂಧವಾಗಿದೆ. ನೆಲದ ಮೇಲೆ ಎಷ್ಟೇ ರಕ್ಷಣೆ ಏರ್ಪಾಡುಗಳನ್ನು ಮಾಡಿದರೂ, ಅವಕ್ಕೊಂದು ಪರಿಮಿತಿಯುಂಟು. ಇದೇಕೆಂದರೆ, ಕೆಲಕೆಲವು ಕಡೆಗಳಲ್ಲಿ ಅವುಗಳನ್ನು ಮಾಡಬಹುದೇ ಹೊರತು, ಸಮಸ್ತಪ್ರದೇಶಗಳನ್ನೂ ಆವರಿಸುವಂತೆ ಅವುಗಳನ್ನು ಮಾಡುವುದು ಸಾಧ್ಯವೇ ಇಲ್ಲ. ಆದಕಾರಣ, ಎಷ್ಟೇ ಜಾಗರೂಕತೆಯಿಂದ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳನ್ನು ಮಾಡಿದರೂ, ಶತ್ರುಗಳ ಬಾಂಬುಗಳು ಬೀಳದಂತೆ ಎಲ್ಲಾ ಪ್ರದೇಶಗಳಿಗೂ ರಕ್ಷಣೆಯನ್ನೊದಗಿಸುವುದು ಸಾಧ್ಯವಿಲ್ಲ. ಇಂಗ್ಲೆಂಡಿನಲ್ಲಿ ಈ ಸಂಬಂಧವಾಗಿ ಮಾಡಿರುವ ಏರ್ಪಾಡುಗಳು ಬಹಳ ಬಲವಾಗಿವೆ. ಹೀಗಿದ್ದೂ ಶತ್ರುಗಳ “ಬಾಂಬರ್” ವಿಮಾನಗಳು ಒಂದು ಬಾಂಬುಗಳನ್ನು ಹಾಕದಂತೆ ತಪ್ಪಿಸುವುದು ಇಂಗ್ಲೆಂಡಿನಲ್ಲಿ ಸಹ ಸಾಧ್ಯವಾಗಿಲ್ಲ. ಏಕೆಂದರೆ, ಶತ್ರುವಿಮಾನಗಳು ಒಂದು ... ಅವುಗಳನ್ನು ನೆಲಕ್ಕುರುಳಿಸುವುದಕ್ಕೆ ಫಿರಂಗಿಗಳ ವ್ಯವಸ್ಥೆ ಮುಂತಾದ ಒಳ್ಳೆಯ ಏರ್ಪಾಡುಗಳೇ ನಡೆದಿದ್ದೂ ಸಹ, ಕೆಲವು ಶತ್ರುವಿಮಾನಗಳು ಹೇಗೋ ತಪ್ಪಿಸಿಕೊಂಡು ಬಹಳ ಮೇಲಿಂದಹಾರಿಹೋಗಿ ಸಿಕ್ಕಿದ ಕಡೆ ಬಾಂಬುಗಳನ್ನು ಹಾಕಿ ಬರುತ್ತಿವೆ. ಆದರೆ ಅವು ಏರ್‌ಕ್ರಾಫ್ಟ್ ಫಿರಂಗಿ ಹೊಡೆತಕ್ಕೆ ಸಿಕ್ಕುವಷ್ಟು ಕೆಳಮಟ್ಟದಲ್ಲಿ ಹಾರಲು ಯತ್ನಿಸಿದರೆ ಮಾತ್ರ, ಅವುಗಳನ್ನು ಬ್ರಿಟಿಷರು ಕೆಳಕ್ಕುರುಳಿಸಬಹುದು. ಇದರಿಂದ ಅವು ಕೆಳಮಟ್ಟದಲ್ಲಿ ಹಾರಿ ಬಂದು ಹೆಚ್ಚಿನ ದಾಂಧಲೆ ಮಾಡುವುದಕ್ಕೆ ಅವಕಾಶ ತಪ್ಪಿದೆ. ಆದಕಾರಣ, ವಿಮಾನದಾಳಿ ಎಚ್ಚರಿಕೆಗಳ ಏರ್ಪಾಡುಗಳು ದೇಶರಕ್ಷಣೆ ವ್ಯವಸ್ಥೆಯಲ್ಲಿ ಈಗಿನ ಕಾಲದಲ್ಲಿ ತಪ್ಪದೆ ನಡೆಯಲೇಬೇಕಾಗಿವೆ

ಅಪಾಯವನ್ನು ಕಡಿಮೆಮಾಡುವುದು

೪ ಆದ್ದರಿಂದ, ಯಾವ ದೇಶದಲ್ಲಿ ಅಥವಾ ಯಾವ ಪ್ರದೇಶದಲ್ಲಿ ಎಷ್ಟರಮಟ್ಟಿಗೆ ಈ ಜಾಗರೂಕತೆ ಏರ್ಪಾಡುಗಳು ನಡೆಯಬೇಕೆಂಬುದು ಅಲ್ಲಿ ಯಾವ ರೀತಿಯ ಅಪಾಯಗಳು ಎಷ್ಟರಮಟ್ಟಿಗೆ ಒದಗಿವೆಯೆಂಬುದನ್ನು ಅವಲಂಬಿಸಿದೆ. ಭರತಖಂಡಕ್ಕೆ ಯಾವವಿಧದಲ್ಲಿ ವಿಮಾನದಾಳಿಯ ಅಪಾಯ ಒದಗಬಹುದೆಂಬುದನ್ನು ನಿಪುಣರು ನಿರ್ಧರಿಸಿದ್ದಾರೆ. ಭರತಖಂಡದಲ್ಲಿ ಆಗಾಗ ಒಂದೊಂದು ಕಡೆ ಸ್ವಲ್ಪ ಸ್ವಲ್ಪ ಕಾಲ ಮಾತ್ರ ವಿಮಾನದಾಳಿ ನಡೆಯುತ್ತದೆಂದು ಅವರು ನಿರ್ಧರಿಸಿದ್ದಾರೆ. ಅಗ್ಗ ಉಪಯೋಗಿಸಲ್ಪಡತಕ್ಕ ಬಾಂಬುಗಳು ಸಿಡಿಬಾಂಬುಗಳೂ ಮತ್ತು ಬಿದ್ದಕಡೆ ಬೆಂಕಿ ಹೊತ್ತಿಸುವ ಉರಿಬಾಂಬುಗಳೂ ಆಗಿರಬಹುದೆಂಬುದೂ ಅವರ ಅಭಿಪ್ರಾಯ. ವಿಮಾನದಾಳಿಗಳು ಸಿಡಿಬಾಂಬುಗಳು ಬೀಳುವುದು ಬಹುಶಃ ಕೆಲವು ಪ್ರತ್ಯೇಕ ಕಾರ್ಖಾನೆಗಳು, ಮುಂತಾದುವುಗಳ ಮೇಲೆ ಮತ್ತು ಉರಿಬಾಂಬುಗಳು ಬೀಳುವುದು ದೊಡ್ಡ ದೊಡ್ಡ ನಗರಗಳಲ್ಲಿ ಜನನಿಬಿಡವಾಗಿರುವ ಪ್ರದೇಶಗಳ ಮೇಲೆ—ಎಂದು ಅವರು ಸೂಚಿಸಿದ್ದಾರೆ. ವಿಷಗ್ಯಾಸಿನ ಪ್ರಯೋಗವು ಭರತಖಂಡದ ಸಮುದ್ರತೀರ ಪ್ರದೇಶಗಳ ಕೆಲವು ನಗರಗಳಲ್ಲಿ ಹೊರತು ಮತ್ತೆಲ್ಲಿಯೂ ವಿಶೇಷವಾಗಿ ನಡೆಯಲಾರದೆಂದೂ ಅವರು ಹೇಳಿದ್ದಾರೆ. ಈ ವಿಮಾನದಾಳಿಗಳ ಉದ್ದೇಶಗಳೇನೆಂದರೆ ಸಾಧ್ಯವಾದಷ್ಟುಮಟ್ಟಿಗೂ ಹೆಚ್ಚಾಗಿ ಪ್ರಾಣಹಾನಿ ಮಾಡುವುದು, ಸ್ವತ್ತುಗಳಿಗೆ ನಷ್ಟವನ್ನುಂಟುಮಾಡುವುದು, ಯುದ್ಧಸಹಾಯಕ ಕಾರ್ಯಕಲಾಪಗಳಿಗೆ ವಿಘಾತವನ್ನುಂಟುಮಾಡುವುದು, ಜನರ ಮನಸ್ಸಿನಲ್ಲಿ ಭಯವನ್ನೂ ಗಾಬರಿಯನ್ನೂ ಹುಟ್ಟಿಸುವುದು ಪ್ರಜೆಗಳ ಸೌಕರ್ಯಸಾಧನಗಳ ಸಂಬಂಧವಾಗಿ ನಡೆಯುವ ಕಾರ್ಯಗಳಿಗೂ ಮತ್ತು ಕೈಗಾರಿಕೆಗಳಿಗೂ ವಿಘಾತವನ್ನುಂಟುಮಾಡುವುದು ಪ್ರಜೆಗಳು ಕಳವಳದಿಂದ ಕುಸಿದು ಬಿದ್ದು, ತಮ್ಮ ಕಾರ್ಯಪಟುತ್ವವನ್ನೇ ಕಳೆದುಕೊಳ್ಳುವಂತೆ ಮಾಡುವುದು. ವಿಮಾನದಾಳಿಗಳಿಂದ ಆಗತಕ್ಕ ಅತಿ ದೊಡ್ಡ ವಿಘಾತವೆಂದರೆ, ಜನರ ಮನಸ್ಸಿನಲ್ಲಿ ಗಾಬರಿ ಹುಟ್ಟಿಸುವುದು. ಅದಕ್ಕೆ ಎರಡನೆಯದು, ಸ್ವತ್ತುಗಳ ನಷ್ಟ. ಇವೆರಡು ಅಪಾಯಗಳನ್ನೂ ತಪ್ಪಿಸುವುದಕ್ಕೆ ಕಟ್ಟುನಿಟ್ಟಾದ ವಿಮಾನದಾಳಿ ಎಚ್ಚರಿಕೆಗಳ ಏರ್ಪಾಡು (ಎಂದರೆ, “ಎ. ಆರ್. ಪಿ.” ಏರ್ಪಾಡು) ನಮ್ಮ ಭರತಖಂಡದಲ್ಲಿ ನಡೆಯಬೇಕಾಗಿದೆ.

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ೧೫ ವರ್ಷಗಳು ತುಂಬಿ ೧೬ನೆಯ ವರ್ಷವು ಪ್ರಾರಂಭವಾಗಿರುವುದು ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ ವಿ.ಪಿ. ಮಾಡುವುದರಿಂದ ನಮ್ಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ [illegible] ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ [illegible]ಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ~~ವಿ. ಪಿ. ಮಾಡಿದರೆ ೩ ರೂ [illegible] ಆಣೆ ಬೀಳುವದು— ಯಾವ ಗ್ರಾಮದಲ್ಲಿ ವಿಶೇಷ~~ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು

ಮ್ಯಾ —

ಪಂಚಾಚಾರ್ಯಪ್ರಭಾ.

೧೯೪೨ನೆಯ ಏಪ್ರಿಲ್ ತಾ|| ೨೦ನೇ ಸೋಮವಾರ

೧೬ನೆಯ ವರ್ಷದ ಪ್ರಾರಂಭ.

ಸನಾತನ ಮತಾನುಯಾಯಿಗಳಿಗೆ ಪರಮಮಾನ್ಯಗಳಾದ ಅರವತ್ತು ಸಂವತ್ಸರಗಳಲ್ಲಿ ಪ್ರಥಮವೆನಿಸಿರುವ ಪ್ರಭವನಾಮಸಂವತ್ಸರದ ವೈಶಾಖ ಶುದ್ಧ ೫ ದಿವಸ ಪ್ರಾಪ್ತವಾಗುವ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀರೂಪವಾದ ಪುಣ್ಯದಿವಸದಲ್ಲಿ ವೀರಶೈವ ಮತೋದ್ಧಾರಕ್ಕಾಗಿ ಅವತಾರವನ್ನೆತ್ತಿರುವ ಪಂಚಾಚಾರ್ಯ ಪ್ರಭಾನಾಮಕವಾದೀಪತ್ರಿಕೆಗೆ ೧೫ ವರುಷಗಳು ತುಂಬಿ ಈ ದಿವಸ ೧೬ನೆಯ ವರ್ಷವು ಪ್ರಾರಂಭವಾಗಿರುವುದು

ಶ್ರೀಜಗದ್ಗುರು ಪಂಚಾಚಾರ್ಯರ ಚಿತ್ಕಲಾಸ್ವರೂಪವಾಗಿರುವೀಪತ್ರಿಕೆಯು, ಆ ಮಹಾತ್ಮರ ಅನುಗ್ರಹಬಲದಿಂದ ಯಾವ ತೊಂದರೆಯೂ ಇಲ್ಲದೆ ಅವಿಚ್ಛಿನ್ನವಾಗಿ ಪ್ರಕಟವಾಗುತ್ತಿರುವುದನ್ನು ಕಂಡು ಭರತಖಂಡದಲ್ಲಿರುವ ಸಮಸ್ತ ಗುರುಭಕ್ತರೂ ಆನಂದೋದ್ಗಾರವನ್ನು ಮಾಡುತ್ತಿರುವುದನ್ನು ನೋಡಿ ಸಂತೋಷಪಡಬೇಕಾಗಿದೆ.

ಜಗದ್ವಿಖ್ಯಾತರಾದ ಶ್ರೀಜಗದ್ಗುರು ಪಂಚಾಚಾರ್ಯರ ನಾಮಸಂಕೀರ್ತನವು, ನಾಸ್ತಿಕಮಯವಾದ ಈ ಕಾಲದಲ್ಲಿ ಲುಪ್ತಪ್ರಾಯವಾಗಿದ್ದುದನ್ನು ಕಂಡು, ಅವರ ಪವಿತ್ರಾಭಿಧಾನದಿಂದ ಪ್ರಕಾಶಿಸುತ್ತಿರುವೀ ಪತ್ರಿಕೆಯು ತನ್ನ ಅತ್ಯುಜ್ವಲಲೇಖಗಳ ದ್ವಾರಾ ಆ ಮಹಿಮರ ಪವಿತ್ರನಾಮಸಂಕೀರ್ತನವು ದಶದಿಕ್ಕುಗಳಲ್ಲಿ ಹರಡುವಂತೆ ಮಾಡಿತು ಜಾತಿಸಾಂಕರ್ಯ ಪ್ರಘಾತದಿಂದ ಜರ್ಝರಿತವಾಗುತ್ತಿರುವ ಸನಾತನಧರ್ಮದ ರಕ್ಷಣೆಯ ವಿಷಯದಲ್ಲಿ ಅನೇಕಾನೇಕ ಲೇಖಗಳನ್ನು ಪ್ರಕಟಮಾಡಿ, ಜಾತಿಸಾಂಕರ್ಯವಾದಿಗಳ ದುರಭಿಪ್ರಾಯವನ್ನು ಆಮೂಲಾಗ್ರವಾಗಿ ಖಂಡಿಸಿ ನಮ್ಮೀ ಭರತಭೂಮಿಯಲ್ಲಿ ವರ್ಣಾಶ್ರಮವಿಭಾಗವು ಅನಾದಿಕಾಲದಿಂದಲೂ ರೂಢಮೂಲವಾಗಿರುವದೆಂಬ ಅಭಿಪ್ರಾಯವನ್ನು ಶ್ರುತಿನಿಗಮಾಗಮಾದಿ ಪ್ರಮಾಣಗಳ ದ್ವಾರಾ ಬೋಧಿಸಿ ಮಹಾಜನಗಳ ಮನಸ್ಸನ್ನು ಸನಾತನಧರ್ಮದ ವಿಷಯದಲ್ಲಿ ಪ್ರೇಮಭರಿತವಾದುದನ್ನಾಗಿಮಾಡಿತು. ಪ್ರತಿಯೊಬ್ಬರ ಹೃದಯಭೂಮಿಯಲ್ಲಿ ಗುರುದೇವತಾಭಕ್ತಿರೂಪವಾದ ಬೀಜವನ್ನು ಬಿತ್ತಿ, ಅಂಕುರಿಸಿ, ಪಲ್ಲವಿಸಿ, ಫಲಿಸುವಂತೆ ಮಾಡಿತು ಅತ್ಯಂತ ಕಠಿನವಾಗಿರುವ ವೀರಶೈವ ಸಿದ್ಧಾಂತರಹಸ್ಯವನ್ನು ಸರ್ವರಿಗೂ ತಿಳಿಯುವಂತಹ ಸುಗಮವಾದ ಭಾಷಾಶೈಲಿಯಿಂದ ಬೋಧಿಸಿ ಅನೇಕರನ್ನು ಸ್ವಸಿದ್ಧಾಂತತತ್ವಜ್ಞರನ್ನಾಗಿಮಾಡಿತು

ಈ ರೀತಿಯಾಗಿ ಈ ಪತ್ರಿಕೆಯು ತಾನು ಜನ್ಮವೆತ್ತಿದಂದಿನಿಂದ ಇಲ್ಲಿಯವರೆಗೆ ಸನಾತನಧರ್ಮೋದ್ಧಾರಕಾರ್ಯಗಳನ್ನು ಮಾಡುತ್ತ ಸಮಸ್ತ ಸನಾತನಮತಾನುಯಾಯಿಗಳ ಪರಮಪ್ರೇಮಕ್ಕೆ ಕಾರಣವಾಗಿರುವುದು ಮತೋದ್ಧಾರಕ್ಕಾಗಿ ಮತಾಚಾರ್ಯರ ಪವಿತ್ರಾಭಿಧಾನದಿಂದ ಪ್ರಕಾಶಿಸುತ್ತಿರುವ ಈ ಪತ್ರಿಕೆಯು ಚಿರಕಾಲ ಬಾಳಲೆಂಬ ಸದುದ್ದೇಶದಿಂದ ಅನೇಕ ಜನ ಗುರುಭಕ್ತಿಧುರೀಣರು ಈ ಪತ್ರಿಕೆಯ ಅಭಿವೃದ್ಧಿಗಾಗಿ ಲಿಂಗಧಾರಣ, ದೀಕ್ಷಾ, ವಿವಾಹಾದಿ ಶುಭಕಾರ್ಯಗಳಲ್ಲಿ ತಮ್ಮ ತಮ್ಮ ಶಕ್ತ್ಯನುಸಾರವಾಗಿ ದ್ರವ್ಯವನ್ನು ಸಮರ್ಪಿಸುತ್ತಿರುವುದು ಪ್ರತಿಯೊಬ್ಬರಿಗೂ ತಿಳಿದ ವಿಷಯವಾಗಿದೆ ಇದೇ ರೀತಿಯಾಗಿ ಸಮಸ್ತ ಗುರುಭಕ್ತರೂ ಈ ಪತ್ರಿಕೆಯ ಅಭಿವೃದ್ಧಿ ವಿಷಯದಲ್ಲಿ ಕಾಯ ವಾಙ್ಮನಸ್ಸುಗಳಿಂದ ಸಹಾಯಮಾಡಿ, ಶ್ರೀಜಗದಾಚಾರ್ಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದಾಶಿಸುತ್ತೇವೆ ಈಗ ಪ್ರಾಪ್ತವಾಗಿರುವ ಘೋರಯುದ್ಧದಿಂದ ಕಾಗದ ಮೊದಲಾದವುಗಳ ಬೆಲೆಯು ವಿಪರೀತವಾಗಿ ಏರಿಹೋಗಿದೆ ಇದರಿಂದ ಪತ್ರಿಕೆಗೆ ವಿಶೇಷ ನಷ್ಟವಾಗುವುದೆಂಬುದು ಪ್ರತಿಯೊಬ್ಬರಿಗೂ ತಿಳಿಯತಕ್ಕ ವಿಷಯವೇ ಆಗಿದೆ ಇಂತಹ ಕಠಿನ ಸಮಯದಲ್ಲಿ ಅಭಿಮಾನಿಗಳು ನಾನಾರೀತಿಯಿಂದ ಹೆಚ್ಚು ಸಹಾಯಮಾಡಿದರೆ ಪತ್ರಿಕೆಯು ನಿರಾತಂಕವಾಗಿ ನಡೆಯುವದು ಈ ವಿಷಯವನ್ನು ಅಭಿಮಾನಿಗಳಾದವರು ಮುಖ್ಯವಾಗಿ ಗಮನದಲ್ಲಿಡಬೇಕು ಅಸ್ತು! ಶ್ರೀಜಗದಾಚಾರ್ಯರು ಸದಾ ತಮ್ಮ ಸೇವೆಯಲ್ಲೇ ನಿರತವಾಗಿರುವ ಈ ಪತ್ರಿಕೆಗೆ ಜಯಾಶೀರ್ವಾದಗಳನ್ನನುಗ್ರಹಿಸಿ, ಇದರ ವೈಭವವು ಸರ್ವತ್ರ ವ್ಯಾಪಿಸುವಂತೆ ಮಾಡಲೆಂದು ಆ ಪೂಜ್ಯಪಾದರನ್ನು ಅನನ್ಯಸಾಧಾರಣವಾದ ಭಕ್ತಿಭಾವದಿಂದ ಭಜಿಸುತ್ತೇವೆ.

ಯುದ್ಧವಾರ್ತೆ.

ಹೈಕೋರ್ಟು ಕೊಯಮುತ್ತೂರಿಗೆ ಹೋಯಿತು.

ಮದರಾಸು ಹೈಕೋರ್ಟಿಗೆ ಕಳೆದ 13ನೆಯ ತಾರೀಖಿನಿಂದಲೇ ಬೇಸಿಗೆ ರಜಾ ಆರಂಭವಾಗತಕ್ಕದ್ದೆಂದೂ ಬೇಸಿಗೆ ಕಾಲದಲ್ಲಿ ಕೋರ್ಟು ಕೊಯಮುತ್ತೂರಿನಲ್ಲಿ ಕೆಲಸಮಾಡಬೇಕೆಂದೂ ಸರ್ಕಾರದ ಆಜ್ಞೆಯಾಗಿದೆ

ಅಕೌಂಟೆಂಟ್ ಜನರಲ್ಲರ ಕಚೇರಿ ಬೆಂಗಳೂರಿಗೆ

ಈಗಿನ ಪರಿಸ್ಥಿತಿಯ ದೆಸೆಯಿಂದ ಮದರಾಸ್ ಅಕೌಂಟೆಂಟ್ ಜನರಲ್ಲರ ಕಚೇರಿಯನ್ನು ಬೆಂಗಳೂರಿಗೆ ವರ್ಗಾಯಿಸಲಾಗುತ್ತದೆ ಆದರೆ ಬೆಂಗಳೂರು ಕಚೇರಿಯಲ್ಲಿ ವಿರಾಮವೇತನಗಳನ್ನು ಕೊಡುವ ವ್ಯವಸ್ಥೆ ಮಾಡುವದು ಅಸಾಧ್ಯವಾಗಿದೆಯೆಂದು ಹೇಳಲಾಗಿದೆ

ರೈಲ್ವೆ ಕಚೇರಿಯ ರವಾನೆ.

ಮದರಾಸಿನಲ್ಲಿದ್ದ ಎಂ. ಎಸ್. ಎಂ. ರೈಲ್ವೆಯ ಮುಖ್ಯ ಕಚೇರಿಯನ್ನು ಮುಚ್ಚಿದ್ದಾರೆ. ಈ ಕಚೇರಿಯ ಬೇರೆ ಬೇರೆ ಭಾಗಗಳನ್ನು ಆದಷ್ಟು ಬೇಗ ಹುಬ್ಬಳ್ಳಿ, ಬಳ್ಳಾರಿ. ಗುಂತಕಲ್ ಕಡೆಗಳಲ್ಲಿ ಸ್ಥಾಪಿಸಲಾಗುವದು ಚೀಫ್ ಕಮರ್ಷಿಯಲ್ ಮ್ಯಾನೇಜರ್ ಕಚೇರಿಯು ಗುಂತಕಲ್ಲಿನಲ್ಲಿರುವದೆಂದು ತಿಳಿದುಬರುತ್ತದೆ.

ಮದರಾಸಿನಿಂದ ಅಕಾರಾ ಕಚೇರಿಯ ವರ್ಗ

ಮದರಾಸು ಅಕಾರಾ ಕಚೇರಿಯ ಮುಖ್ಯಭಾಗಗಳನ್ನೆಲ್ಲ ಚಿತ್ತೂರು ಜಿಲ್ಲೆಯ ಮದನಪಲ್ಲಿಗೆ ವರ್ಗಾಯಿಸಲಾಗಿದೆ. ಇತರ ಭಾಗಗಳನ್ನು ಉದಕಮಂಡಲಕ್ಕೆ ವರ್ಗಾಯಿಸಿದೆ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಕಚೇರಿಯು ವೆಲ್ಲೂರಿಗೆ ಹೋಗಿದೆ ರೆವಿನ್ಯೂಬೋರ್ಡ್ ಕಚೇರಿಯು ಸೇಲಮ್ಮಿನಲ್ಲೂ ಸರ್ಜನ್ ಜನರಲ್ಲರ ಮತ್ತು ಶಿಕ್ಷಣಾಧಿಕಾರಿಗಳ ಕಚೇರಿಗಳು ಅನಂತಪುರದಲ್ಲೂ ಆಶ್ರಯ ಪಡೆದಿವೆ ಸರಕಾರದ ಶ್ರೀಸ್ತಕಾರ್ಯದರ್ಶಿಗಳು, ಗೃಹಶಾಖಾ ಕಾರ್ಯದರ್ಶಿಗಳು ಮತ್ತು ಇತರ ಒಬ್ಬಿಬ್ಬರು ಕಾರ್ಯದರ್ಶಿಗಳೂ ಮದರಾಸಿನಲ್ಲೇ ಇದ್ದಾರೆ.

ಮದರಾಸು ಬಂದಿಗಳ ರವಾನೆ

ಮದ್ರಾಸ್ ಸೆರೆಮನೆಯಲ್ಲಿದ್ದ ಖೈದಿಗಳನ್ನೆಲ್ಲ ಸ್ಪೆಷಲ್ ರೈಲಿನಲ್ಲಿ ಬಳ್ಳಾರಿಗೆ ಸಾಗಿಸಿದ್ದಾರೆ ಅಲ್ಲಿಂದ ಅವರೆಲ್ಲರನ್ನೂ ಆಲಿಪುರ ಸೆರೆಮನೆಗೆ ಸಾಗಿಸತಕ್ಕವರಾಗಿದ್ದಾರೆ.

ಮದ್ರಾಸ್ ಮೃಗಾಲಯದಲ್ಲಿದ್ದ ಕ್ರೂರ ಮೃಗಗಳನ್ನೆಲ್ಲ ಕೊಂದರು.

ಮದರಾಸಿನ ಮೃಗಾಲಯದಲ್ಲಿ ಇಡಲಾಗಿದ್ದ ಕ್ರೂರಮೃಗಗಳನ್ನೆಲ್ಲಾ ಕಳೆದ 12 ನೆಯ ತಾರೀಖು ಭಾನುವಾರ ಗುಂಡಿನಿಂದ ಹೊಡೆದು ಕೊಂದರು ಅವುಗಳನ್ನು ಉಳಿಸಲು ಪೌರಸಭಾಧ್ಯಕ್ಷರೂ ಮತ್ತು ಕಮೀಷನರೂ ಎಲ್ಲ ಪ್ರಯತ್ನಗಳನ್ನೂ ಮಾಡಿದರು, ಆದರೂ ಸಾಧ್ಯವಾಗಲಿಲ್ಲ ಆ ಮೃಗಗಳನ್ನು ಬೇರೆ ಯಾವ ಮೃಗಾಲಯಕ್ಕಾದರೂ ವರ್ಗಾಯಿಸಲು ಪ್ರಯತ್ನಿಸಿದರು ಮೈಸೂರು, ಹೈದರಾಬಾದು, ಭೂಪಾಲ್ ಮತ್ತು ಕಲಕತ್ತಾ ಮೃಗಾಲಯಗಳವರು ಅವುಗಳನ್ನು ಇಟ್ಟುಕೊಳ್ಳಲು ಒಪ್ಪಲಿಲ್ಲ. ಆದುದರಿಂದ ಸರಕಾರದ ಆಜ್ಞೆಯ ಪ್ರಕಾರ ಹುಲಿಗಳು, ಸಿಂಹಗಳು, ಕರಡಿಗಳು, ಚಿರತೆಗಳು, ನಾಗರಹಾವುಗಳು ಮುಂತಾದವುಗಳನ್ನೆಲ್ಲಾ ನಾಶಮಾಡಲಾಯಿತು

ಅನವಶ್ಯಕ ಪ್ರಜೆಗಳು ಮದರಾಸಿನಿಂದ ಹೊರಡಬೇಕು.

ಮದ್ರಾಸ್ ಸರ್ಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ, “ಮದರಾಸಿಗೆ ಈಗ ಯುದ್ಧದ ವಿಪತ್ತು ಹೆಚ್ಚಾಗಿದೆ ಎಂದು ನಂಬಲು ಸಾಕಷ್ಟು ಕಾರಣಗಳಿರುವುದರಿಂದ ನಗರದಲ್ಲಿ ಇರಬೇಕಾದ ಅಗತ್ಯವಿಲ್ಲದ ಪ್ರಜೆಗಳೆಲ್ಲರೂ ಹೊರಟುಹೋಗಬೇಕು ಬೇರೆ ಊರುಗಳಿಗೆ ಹೋಗಿ ಉಳಿದುಕೊಳ್ಳಲು ಬಂಧುಮಿತ್ರರಾರೂ ಇಲ್ಲದವರಿಗೆ, ಸಂದೀವರಂಹಳ್ಳಿ, ನಂಗಂಬಕಂಹಳ್ಳಿ, ಪೆರಿಯಪಾಳಯಂ, ಅತ್ತೂರು, ನೆಂಗತ್ತೂರು, ಮತ್ತು ತೂರಪಲ್ಲಂ ಎಂಬ ಊರುಗಳಲ್ಲಿ ಸರ್ಕಾರದವರು ಏರ್ಪಡಿಸಿರುವ ಬಿಡಾರಗಳಲ್ಲಿ ಸ್ಥಳವನ್ನು ಕಲ್ಪಿಸಲಾಗಿದೆ” ಎಂದು ತಿಳಿಸಿದೆ

ಮದರಾಸಿನಿಂದ ಹೊರಗೆ ಹೋಗುವವರಿಗೆ ಸೌಕರ್ಯ.

ಮದರಾಸಿಗೆ ಯುದ್ಧಭೀತಿ ಹೆಚ್ಚಿರುವದರಿಂದ ಅಲ್ಲಿಂದ ಪ್ರಯಾಣ ಮಾಡಲಿರುವ ಬಹಳ ಜನಗಳಿಗೆ ತಕ್ಕ ಸೌಕರ್ಯವನ್ನೇರ್ಪಡಿಸಲು ಸರ್ಕಾರದವರು ಸಿದ್ಧತೆಗಳನ್ನು ಮಾಡಿದ್ದಾರೆ ಸಾರ್ವಜನಿಕರ ಅವಗಾಹನೆಗಾಗಿ ಅವನ್ನು ಪ್ರಕಟಿಸಲಾಗಿದೆ. (1) ಸಾಮಾನ್ಯವಾಗಿ ಓಡಾಡುವ ರೈಲುಗಳನ್ನು ಆದಷ್ಟು ಕಾಲ ಓಡಿಸಲಾಗುವದು. ಸ್ಟೇಷನ್ನುಗಳಲ್ಲಿ ಜನ ಸಂಖ್ಯೆ ಮಿತಿಮೀರಿದರೆ ಅವುಗಳನ್ನು ನಿಲ್ಲಿಸಬೇಕಾಗಬಹುದು ಸೆಂಟ್ರಲ್, ರಾಯಪುರಂ, ಬೀಚ್ ಮತ್ತು ಎಗ್ಮೋರ್ ಸ್ಟೇಷನ್ನುಗಳಿಂದ ಗುಮ್ಮಿಡಿಪುಂಡಿ, ತಿರುವೆಳ್ಳೂರು ಮತ್ತು ಚಂಗಲ್‌ಪೇಟೆ ಸ್ಟೇಷನ್ನುಗಳಿಗೆ ಮಾತ್ರ ಸ್ಪೆಷಲ್ ರೈಲುಗಳನ್ನು ಬಿಡಲಾಗುತ್ತದೆ. ಈ ಸ್ಟೇಷನ್ನುಗಳಿಗೆ ಜನರನ್ನು ಚಾರ್ಜಿಲ್ಲದೆ ಸಾಗಿಸಲಾಗುತ್ತದೆ. ಈ ರೈಲ್ವೆಸ್ಟೇಷನ್ನುಗಳ ಹತ್ತಿರ ಬಿಡಾರಗಳನ್ನು ಕಲ್ಪಿಸಲಾಗಿದೆ ಅಲ್ಲಿ ಜನರಿಗೆ ಆಹಾರವನ್ನೂ ಇರಲು ಸ್ಥಳವನ್ನೂ ಕೊಡಲಾಗುತ್ತದೆ ರಸ್ತೆಗಳ ಮೂಲಕ ಹೋಗುವವರಿಗೂ ಮೂರು ಕಡೆ ಬಿಡಾರಗಳನ್ನು ಕಲ್ಪಿಸಿದ್ದಾರೆ ಈ 6 ಬಿಡಾರಗಳಲ್ಲೂ ಕುಡಿಯುವ ನೀರಿಗೂ ಸ್ಥಳನಿರ್ಮಲೀಕರಣಕ್ಕೂ ತಕ್ಕ ಏರ್ಪಾಡು ಮಾಡಲಾಗಿದೆ. ಈ ಬಿಡಾರಗಳನ್ನು ಉಪಯೋಗಿಸುವ

ವರು ಕೆಲವು ದಿನಗಳ ಕಾಲ ಮಾತ್ರ ಅಲ್ಲಿರಲು ಅವಕಾಶ ಕೊಡಲಾಗುತ್ತದೆ ಅಲ್ಲಿಂದ ಮುಂದೆ ಅವರ ಮನಸ್ಸಿಗೆ ಬಂದಕಡೆ ಹೋಗಲು ತಕ್ಕ ಏರ್ಪಾಟು ಮಾಡಿಕೊಳ್ಳುವ ವರೆಗೆ ಅಲ್ಲಿರಬಹುದು ಎಂದು ಪ್ರಕಟವಾಗಿದೆ.

ಕೊಚ್ಚಿ ಸರ್ಕಾರದ ಬದಲಾವಣೆ

ಈಗಿನ ಸಂಗ್ರಾಮಪರಿಸ್ಥಿತಿಯ ದೆಸೆಯಿಂದ ಕೊಚ್ಚಿ ಸರ್ಕಾರದ ಕಚೇರಿಗಳನ್ನು ತಿರುಚೂರಿಗೆ ವರ್ಗಾಯಿಸುವ ತೀರ್ಮಾನಮಾಡಲಾಗಿದೆ ಎಂದೂ ಅಗತ್ಯ ಪತ್ರವ್ಯವಹಾರಕ್ಕಾಗಿ ಕೆಲವು ನೌಕರರನ್ನು ಮಾತ್ರ ಎರ್ನಾಕುಳಂನಲ್ಲಿ ಇರಿಸಲಾಗುವುದೆಂದೂ, ತಿರುಚೂರಿನ ಬಾಲಕರ ಮತ್ತು ಬಾಲಿಕೆಯರ ಪಾಠಶಾಲೆಗಳಲ್ಲಿ ಸರ್ಕಾರದ ಕಚೇರಿಗಳನ್ನು ಸ್ಥಾಪಿಸಲಾಗುವವೆಂದೂ, ಖಜಾನೆ ಬ್ಯಾಂಕುಗಳನ್ನೂ ಸಹ ಎರ್ನಾಕುಳದಿಂದ ಸಾಗಿಸುವ ವಿಚಾರ ವಿಮರ್ಶೆಯು ನಡೆಯುತ್ತಿದೆಯೆಂದೂ ಎಂದಿನಂತೆ ಮಹಾರಾಜರು ತ್ರಿಪುರಿಯಲ್ಲಿಯೂ ದಿವಾನರು ಎರ್ನಾಕುಳದಲ್ಲಿಯೂ ಇರುವರೆಂದೂ ಹೇಳಲಾಗಿದೆ

ಮಿಗ್‌ಯಾಂಗೆಹಳ್ಳಿ ಜಪಾನರ ಕೈಸೇರಿತು

ಕಳೆದ 13ನೆಯ ತಾರೀಖಿನ ದಿವಸ ಬಹಳ ಉಗ್ರವಾದ ಹೊಡೆದಾಟ ನಡೆದಮೇಲೆ ಜಪಾನರು ಮಿಗ್‌ಯಾಂಗೆ ಎಂಬ ಹಳ್ಳಿಯನ್ನು ಆಕ್ರಮಿಸಿದರು ಟಾಂಗ್‌ವಿಂಗಿಗೆ ನೈರುತ್ಯದಲ್ಲಿ ಶತ್ರುಗಳ ಒತ್ತಾಯ ಅಧಿಕವಾಗಿದೆ ಬರ್ಮದಲ್ಲಿರುವ ಬರ್ಮಾಯರು, ಭಾರತೀಯರು ಮತ್ತು ಬ್ರಿಟಿಷ್ ವಿಮಾನಧ್ವಂಸಕ ಫಿರಂಗಿದಳದವರು ಬಹಳ ದಕ್ಷತೆಯಿಂದ ಕೆಲಸಮಾಡುತ್ತಿದ್ದಾರೆ ಗುರಿಹಿಡಿದು ಗುಂಡು ಹೊಡೆಯುವದರಲ್ಲಿ ಇವರು ಅದ್ವಿತೀಯರೆಂದು ಜಪಾನರ ಪ್ರಶಂಸೆಗೂ ಪಾತ್ರರಾಗಿದ್ದಾರೆ. ಇದರಿಂದ ಜಪಾನ್ ವೈಮಾನಿಕರು ಸು॥ 20000 ಅಡಿಗಳಿಗಿಂತ ಕೆಳಕ್ಕೆ ಬರುವುದೇ ಅಸಾಧ್ಯವಾಗಿದೆ

ಆಕ್ಸಿಸ್ ರಾಷ್ಟ್ರಗಳನ್ನು ಸೋಲಿಸಲು ೩ ವರ್ಷ ಬೇಕು

ಅಮೆರಿಕಾಧ್ಯಕ್ಷರಾದ ಶ್ರೀ ರೂಜ್‌ವೆಲ್ಟರು ವಿಜಯದಲ್ಲಿ ತಮಗಿರುವ ಪೂರ್ಣನಂಬಿಕೆಯನ್ನು ವ್ಯಕ್ತಪಡಿಸುತ್ತ "ನಮ್ಮ ನಾಗರಿಕತೆಯು ಉಳಿಯುವದೆಂಬುದನ್ನು ದೃಢಪಡಿಸಿಕೊಳ್ಳಲು ಬಹುಶಃ ಇನ್ನೂ ೩ ವರ್ಷಗಳಾಗಬೇಕು. ಅದಕ್ಕಾಗಿ ನಾವೆಲ್ಲರೂ ಬಹಳ ತ್ಯಾಗಮಾಡಬೇಕಾಗಿದೆ ಆದರೆ ಕಡೆಗೆ ನಾವು ಯಶಸ್ವಿಗಳಾಗುವೆವೆಂಬುದೇನೋ ನಿಶ್ಚಯ ಈ ಗೋಳದ ಯಾವಭಾಗವಾದರೂ ಜರ್ಮನಿಯ ಕೈಗೆ ಬೀಳುವುದಾದರೆ ಆಗ ಸಂಭವಿಸಬಹುದಾದ ಸ್ಥಿತಿಯನ್ನು ಯೋಚಿಸಿದರೆ ಮೈ ನಡುಗುತ್ತದೆ ಅಮೆರಿಕವು ಆಕ್ಸಿಸ್ ರಾಷ್ಟ್ರಗಳನ್ನು ಗೆಲ್ಲಬೇಕಾದರೆ ಇನ್ನೂ ೨-೩ ವರ್ಷಕಾಲ ಬೇಕು" ಎಂದು ಹೇಳಿದರು

ಬ್ರಿಟಿಷ್ ವಿಮಾನ ಕಾರ್ಯಾಚರಣೆ

ಕಳೆದ ಕೆಲವು ದಿವಸಗಳಿಂದ ಬ್ರಿಟಿಷ್ ವಿಮಾನಗಳು ಬರ್ಮದಮೇಲೂ ಮತ್ತು ಅಂಡಮಾನ್ ದ್ವೀಪಗಳ ಮೇಲೂ ಬಹಳ ಚಟುವಟಿಕೆಯಿಂದ ಕಾರ್ಯನಡೆಸುತ್ತಿವೆ ಇರವಾಡಿ ಯುದ್ಧರಂಗದಲ್ಲಿ ಭೂಬಲದೊಡನೆ ಸಹಕರಿಸಿ ಅಲ್ಲಲ್ಲಿ ನೆರೆದಿದ್ದ ಶತ್ರುಪಡೆಗಳ ಮೇಲೆ ಗುಂಡು ಹಾರಿಸಿದ್ದಲ್ಲದೆ ದೋಣಿಗಳಲ್ಲಿ ಕುಳಿತು ಬರುತ್ತಿದ್ದ ಶತ್ರುಪಡೆಗಳನ್ನು ಮುಳುಗಿಸಿದವು. ಆರ್. ಎ. ಎಫ್. ಪಡೆಯೊಂದು ಪೋರ್ಟ್‌ಬ್ಲೇರ್‌ನಲ್ಲಿದ್ದ ಜಪಾನಿನ 13 ಸಮುದ್ರವಿಮಾನಗಳ ಮೇಲೆ ಮುತ್ತಿಗೆ ನಡೆಸಿತು ಇದರಿಂದ 4 ಯಂತ್ರಗಳುಳ್ಳ ಒಂದು ವಿಮಾನವು ಮುಳುಗುವ ಸ್ಥಿತಿಗೆ ಬಂದುದಲ್ಲದೆ, ಎರಡು ವಿಮಾನಗಳು ಬೆಂಕಿಹತ್ತಿ ಉರಿಯಲಾರಂಭಿಸಿದವು. ಉಳಿದ ವಿಮಾನಗಳಿಗೆ ನಷ್ಟವಾಯಿತು. ಬ್ರಿಟಿಷ್ ವಿಮಾನಗಳೆಲ್ಲವೂ ಸುರಕ್ಷಿತವಾಗಿ ಹಿಂದಿರುಗಿದುವು.

ಜರ್ಮನಿಯು ಯುದ್ಧಾರಂಭಕ್ಕೆ ಮುಹೂರ್ತ ನೋಡುತ್ತಿದೆ.

ಜರ್ಮನಿಯು ಇನ್ನೇನು ಯುದ್ಧವನ್ನಾರಂಭಿಸುವದಾಗಿ ಪ್ರಚಾರವನ್ನೇನೋ ಮಾಡುತ್ತಿದೆ ಆದರೆ ಆ ರೀತಿ ಆಕ್ರಮಣವನ್ನು ಆರಂಭಿಸುವ ಕಾಲವನ್ನು ಇನ್ನೂ ಮುಂದೆ ಹಾಕಿದಂತೆ ಕಾಣುತ್ತಿದೆ ಜರ್ಮನರು ಸಹನೆಯಿಂದಿದ್ದು ತಮ್ಮ ನಾಯಕರಲ್ಲಿ ನಂಬಿಕೆಯಿಟ್ಟಿರಬೇಕೆಂದು ಎಲ್ಲ ಕಡೆಯೂ ಒತ್ತಾಯಪಡಿಸುತ್ತಿರುವದಾಗಿ ಬರ್ಲಿನ್ನಿನ ಸುದ್ದಿ ತಿಳಿಸುತ್ತದೆ ಮೇ ಅಥವಾ ಜೂನ್ ತಿಂಗಳಲ್ಲಿ ಜರ್ಮನಿಯು ಯುದ್ಧವಾರಂಭಿಸುವದೆಂದು ಸಾಮಾನ್ಯವಾಗಿ ಹೇಳಲಾಗಿದ್ದರೂ ಸರಿಯಾದ ಕಾಲವು ಯಾವಾಗ ಒದಗುವದೆಂದು ಹೇಳಲು ಸಾಧ್ಯವಿಲ್ಲವೆಂದು ಜರ್ಮನಿಯ ಪತ್ರಿಕೆಗಳು ಬರೆಯುತ್ತಿವೆ ಜರ್ಮನಿಯಲ್ಲಿ ಬಿಸಿಲು ಕಾಯುತ್ತಿದ್ದರೂ ಪೂರ್ವರಂಗದಲ್ಲಿ ಹವಾಮಾನವು ಉತ್ತಮಗೊಂಡಿದ್ದರೂ ಸುಲಗ್ನದಲ್ಲಿ ದಾಳಿಯನ್ನಾರಂಭಿಸಲು ಕಾಯುತ್ತಿರುವದಾಗಿ ಹೇಳಲಾಗಿದೆ

ಜಪಾನಿನಲ್ಲಿ ನಡೆಯುತ್ತಿರುವುದೇನು?

ಬಹಳ ವರ್ಷಗಳಿಂದಲೂ ಜಪಾನಿನಲ್ಲಿಯೇ ಇದ್ದ ಎಚ್ ಎಚ್ ಇಸ್ಮಾಯಿಲ್ ಎಂಬ ಭಾರತೀಯ ವರ್ತಕರೊಬ್ಬರು ಈರೀತಿ ತಿಳಿಸಿದ್ದಾರೆ.

ಜಪಾನ್‌ದೇಶವು ಅಮೇರಿಕ ಮತ್ತು ಬ್ರಿಟನ್ನುಗಳ ಮೇಲೆ ಯುದ್ಧಹೂಡುವುದಕ್ಕೆ ಮೊದಲೇ, ಯುದ್ಧಕ್ಕೆ ಬೇಕಾಗುವ ಸಾಮಗ್ರಿಗಳ ನಿರ್ಮಾಣದಲ್ಲಿ ತೊಡಗಿತ್ತು. ಯೋಧರಿಗೆ ಬೇಕಾದ ಸಲಕರಣೆಗಳನ್ನು ಹೊಂದಿಸಿಕೊಡುವುದು, ರಫ್ತುಮಾಡುವುದನ್ನು ತಯಾರಿಸುವುದು, ಇವೆರಡಕ್ಕೇ ಕಾರ್ಖಾನೆಗಳಲ್ಲಿ ಮೊದಲು ಗಮನಕೊಡಲಾಗುತ್ತಿತ್ತು ಕೈಗಾರಿಕೆ ಕೇಂದ್ರಗಳಲ್ಲೆಲ್ಲಾ ಹೊರದೇಶಗಳಿಗೆ ಬೇಕಾದ ಸಾಮಾನುಗಳನ್ನು ವೃದ್ಧಿಗೊಳಿಸಿ, ತನ್ನ ಜನಾಂಗಕ್ಕೆ ಶೇಕಡಾ ಐದುಭಾಗ ಸಾಮಗ್ರಿಗಳನ್ನು ಮಾತ್ರ ಒದಗಿಸುತ್ತಿತ್ತು

೧೯೩೯ರಲ್ಲಿ ಜಪಾನಿನ ಆರ್ಥಿಕಸ್ಥಿತಿಯು ಅಂಧಕಾರಮಯವಾಗಿತ್ತು ಪ್ರತಿಯೊಂದು ಸಾಮಗ್ರಿಗಳು ಸರ್ಕಾರದ ಹತೋಟಿಯಲ್ಲಿದ್ದವು. ಸಕ್ಕರೆಯು ಪ್ರತಿಯೊಬ್ಬನಿಗೂ ತಿಂಗಳಿಗೆ ಮುಕ್ಕಾಲು ಪೌಂಡಿಗೆ ಹೆಚ್ಚಾಗಿ ಸಿಕ್ಕುತ್ತಿರಲಿಲ್ಲ ಆದರೆ ಟೋಕಿಯೋದಲ್ಲಿದ್ದ ಪರದೇಶೀಯರಿಗೆ ಮಾತ್ರ ಸ್ವಲ್ಪ ಹೆಚ್ಚಾಗಿ ಸಿಕ್ಕುತ್ತಿತ್ತು

೧೯೩೮ರಲ್ಲಿ ತಿಂಗಳಿಗೆ ಮೂವತ್ತು ಗ್ಯಾಲನ್ ಪೆಟ್ರೋಲ್ ಸಿಕ್ಕುತ್ತಿತ್ತು. ೧೯೪೦ರಲ್ಲಿ ತಿಂಗಳಿಗೆ ಎರಡು ಗ್ಯಾಲನ್ನಿಗೆ ಇಳಿಸಲ್ಪಟ್ಟಿತು ಉಡುವುದಕ್ಕೆ ಒಳ್ಳೆ ಸಿಕ್ಕುವುದೇ ಬಹಳ ಕಷ್ಟ! ಹತ್ತಿಯಬಟ್ಟೆ ಸಿಕ್ಕುವುದೇ ಇಲ್ಲ ಪೈದಿಗಳಾಗಿರುವ ಹೆಂಗಸರಿಗೆ ಮಾತ್ರ ಒಬ್ಬೊಬ್ಬರಿಗೆ ಐದುಗಜ ಬಟ್ಟೆ ಸಿಕ್ಕುತ್ತದೆ

ಔಷಧಿಗಳು ಸಿಕ್ಕುವುದೇ ಅಸಾಧ್ಯ. ಚೀನಾ ಯುದ್ಧಭೂಮಿಯಿಂದ ಹಿಂತಿರುಗಿಬಂದ ಜಪಾನೀ ಸೈನಿಕರು ತಮ್ಮ ಸ್ಥಿತಿಗತಿಗಳನ್ನು ಕುರಿತು ಗೊಣಗುಟ್ಟುತ್ತಾರೆ. ಪಾನೀಯಗಳಿಲ್ಲ, ಅಷ್ಟೇ ಅಲ್ಲದೆ ಚೀಣೀಯರ ಗುಂಡಿನೇಟಿಗೆ ವ್ಯಥೆಪಟ್ಟಿರುತ್ತಾರೆ ಚೀನಾದೇಶದಲ್ಲಿ ಮೂವತ್ತು ಲಕ್ಷಮಂದಿ ಗಾಯಗೊಂಡವರ ಪೈಕಿ ಸುಮಾರು ಹತ್ತು ಲಕ್ಷ ಸೈನಿಕರು ಕಾಯಿಲೆಗಳಿಂದ ಸತ್ತಿರುವುದನ್ನು ನೋಡಿದರೆ ವೈದ್ಯಕೀಯ ಅನುಕೂಲಗಳೇ ಇಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು.

ಯಾವುವನ್ನೇ ಆಗಲಿ ಸಾರ್ವಜನಿಕರು ಯಥೇಚ್ಛವಾಗಿ ಉಪಯೋಗಿಸುವ ಹಾಗಿಲ್ಲ ಕ್ಯಾಮರಾ ಇಟ್ಟುಕೊಂಡು ಫೋಟೋ ತೆಗೆಯುವುದಂತೂ ಸರ್ಕಾರದ ಕಾನೂನಿಗೆವಿರುದ್ಧವಾದುದು. ಉಪಾಹಾರದ ಗೃಹಗಳೂ ಅಂಗಡಿಗಳೂ ೯ ಘಂಟೆಯ ಒಳಗಾಗಿ ಮುಚ್ಚಬಿಡಬೇಕು ಯಾರಾದರೂ ಒಂದು ಸಿಗರೇಟು ಡಬ್ಬಿ ಕೇಳಬೇಕಾದರೆ ಆತನು ಹಿಂದೆ ಕೊಂಡುಕೊಂಡಿದ್ದು ಈಗ ಖಾಲಿಯಾಗಿರುವ ಡಬ್ಬಿಯನ್ನು ತೋರಿಸಬೇಕು. ಲಿಪ್ಟನ್ ಕಂಪೆನಿಯ ಟೀ ಸೊಪ್ಪು ಒಂದು ಪೌಂಡಿಗೆ ಐದು ಯೆನ್ನುಗಳನ್ನು ಕೊಟ್ಟರೂ ಸಿಕ್ಕುವುದು ದುರ್ಲಭ. ಮುಕ್ಕಾಲುಪಾಲು ಜನಾಂಗವೆಲ್ಲಾ ಅನ್ನ ಮತ್ತು ಟೀಯಿಂದಲೇ ತೃಪ್ತವಾಗಬೇಕಾಗಿದೆ.

ಜಪಾನಿನ ವಿಮಾನಬಲ

ಜಪಾನು ಅಮೆರಿಕಾ ಮತ್ತು ಬ್ರಿಟನ್ನುಗಳ ಮೇಲೆ ಯುದ್ಧ ಘೋಷಿಸಿದ ಕೆಲವು ದಿವಸಗಳಲ್ಲಿಯೇ ತನ್ನ ವಿಮಾನಬಲವನ್ನು ರಂಗೂನಿಗೆ ಕಳುಹಿಸಿತು ಈಗ ಸಾಧಾರಣವಾಗಿ ನಮ್ಮ ವಿಮಾನ ದಳಗಳು ಜಪಾನಿನ ವಿಮಾನ ದಳವನ್ನು ಬರ್ಮಾ ಮತ್ತು ಸಯಾಂಗಳಲ್ಲಿ ನಿರ್ಭಯದಿಂದ ಎದುರಿಸುತ್ತಿವೆ ಜಪಾನಿನ ಚರಿತ್ರೆಯಲ್ಲಿ ಇದುವರೆಗೂ ವಿಮಾನ ದಳಕ್ಕೆ ಪ್ರತಿಭಟನೆಯೇ ಇರಲಿಲ್ಲ. ವಿಮಾನ ಬಲದಲ್ಲಿ ಗಂಡುಗಲಿಗಳೆಂದು ಜಪಾನರು ಜಂಭ ಕೊಚ್ಚಿಕೊಳ್ಳುತ್ತಾ, ಇತರ ರಾಷ್ಟ್ರಗಳನ್ನು ಯುದ್ಧಕ್ಕೆಳೆದು ಬಲುಬೇಗನೆ ಜಯಸಾಧಿಸಬೇಕೆನ್ನುವರು

ಜಪಾನು ಬರ್ಮಾ ದೇಶದಮೇಲೆ ನಡೆಸಿರುವ ದಾಳಿಗಳಲ್ಲಿ ತನ್ನ ಮುಖ್ಯವಾದ ವಿಮಾನಬಲವನ್ನು ಬಹಳವಾಗಿ ಕಳೆದುಕೊಂಡಿರುವುದೇ ಒಂದು ವಿಶೇಷ ಜಪಾನರಿಗಾದ ಅಪಾರ ಅಪಘಾತಗಳೂ ನಷ್ಟವೂ ಹೇಳಲಸಾಧ್ಯ. ಒಂದು ಸಾರೆ ಮೂವತ್ತು ಫೈಟರ್ ವಿಮಾನಗಳೂ ಏಳು ಬಾಂಬರ್ ವಿಮಾನಗಳೂ ಮುತ್ತಿಗೆಯಲ್ಲಿ ಭಾಗವಹಿಸಿದ್ದುವು ಇವುಗಳಲ್ಲಿ ಎಲ್ಲಾಬಾಂಬರ್ ವಿಮಾನಗಳೂ ಮೂರು ಫೈಟರ್ ವಿಮಾನಗಳೂ ನೆಲಕ್ಕುರುಳಿಸಲ್ಪಟ್ಟುವು. ಮತ್ತೊಂದು ಸಂದರ್ಭದಲ್ಲಿ ಅರವತ್ತು ವಿಮಾನಗಳು ದಾಳಿ ಮಾಡಿದುದರ ಪೈಕಿ ನಲ್ವತ್ತು ವಿಮಾನಗಳು ಮಾತ್ರ ತಪ್ಪಿಸಿಕೊಂಡು ಹೋದರೂ ಅವುಗಳಲ್ಲಿ ಹೆಚ್ಚಿನ ಭಾಗ ಜಖಂ ಆಗಿ, ಹೋಗುತ್ತಾ ದಾರಿಯಲ್ಲಿಯೇ ಅಪಾಯಕ್ಕೊಳಗಾಗಿ ನಾಶವಾಗಿರಲೇಬೇಕು.

ನಾವು ಬರ್ಮಾದೇಶದಲ್ಲಿರುವ ದಟ್ಟವಾದ ಕಾಡುಗಳನ್ನು ಗಮನಕ್ಕೆ ತಂದುಕೊಂಡರೆ ಧ್ವಂಸವಾದ ಶತ್ರುವಿಮಾನಗಳ ಸಂಖ್ಯೆಯನ್ನು ಕಂಡುಹಿಡಿಯುವುದು ಕಷ್ಟ! ಗಣನೆಗೆ ಸಿಕ್ಕದಿರುವ ವಿಮಾನಗಳ ಸಂಖ್ಯೆಯನ್ನು ಬಿಟ್ಟುಬಿಟ್ಟರೂ ಕೂಡ ನಾಶವಾಗಿರುವ ಶತ್ರುವಿಮಾನಗಳೇ ಅಸಂಖ್ಯಾತವಾಗಿವೆ. ಬ್ರಿಟನ್ನಿನಮೇಲೆ ನಡೆದ ಯುದ್ಧವು ಉನ್ನತಸ್ಥಾನದಲ್ಲಿರುತ್ತಿದ್ದಾಗಲೇ ಶತ್ರುವಿಮಾನಗಳು ಇಷ್ಟು ನಾಶವಾಗಿಲ್ಲ. ಒಂದು ಸಂದರ್ಭದಲ್ಲಿ ನೂರಕ್ಕೆ ನೂರು, ಇನ್ನೊಂದು ಸಂದರ್ಭದಲ್ಲಿ ನೂರಕ್ಕೆ ಇಪ್ಪತ್ತೈದರಂತೆ ಶತ್ರುವಿಮಾನಗಳು ಬರ್ಮಾದೇಶದಲ್ಲಿ ನಾಶವಾದುವೆಂಬುದನ್ನು ಗಮನಿಸಿದರೆ ಶತ್ರುವಿಗೆ ಎಷ್ಟು ಅಪಾರ ನಷ್ಟವಾಗಿದೆಯೆಂಬುದನ್ನು ಯೋಚಿಸಬಹುದು. ಇದನ್ನೆಲ್ಲಾ ಯೋಚಿಸಿದರೆ ಬ್ರಿಟನ್ನಿನ ಆರ್.ಎ ಆಫ್ ದಳದವರು ಎಷ್ಟುದಕ್ಷತೆಯಿಂದಲೂ ಧೈರ್ಯದಿಂದಲೂ ಶತ್ರುವನ್ನೆದುರಿಸಿದ್ದಾರೆಂಬುದು ಗೋಚರವಾಗುತ್ತವೆ

ಸುಮಾರು ನೂರಕ್ಕೆ ಹತ್ತರಂತೆ ವಿಮಾನದಾಳಿಯಲ್ಲಿ ಶತ್ರುಸೈನ್ಯವು ಹತವಾದರೆ ಅದನ್ನು ಮಹಾನಷ್ಟವೆಂದು ಗಣಿಸುತ್ತಾರೆ ಹೀಗಿರುವಲ್ಲಿ ಜಪಾನಿಗೆ ಆಗಿರುವ ಅಗಾಧ ನಷ್ಟದಿಂದ ಜಪಾನು ಹಗಲಿನಲ್ಲಿ ದಾಳಿ ನಡೆಸದೆ ರಾತ್ರಿ ಹೊತ್ತು ದಾಳಿ ನಡೆಸುತ್ತಿದೆ. ಈಗ ಜಪಾನಿನ ದಳಗಳೆಲ್ಲಾ ನಮ್ಮ ದಳಗಳನ್ನೆದುರಿಸುವುದಕ್ಕೋಸ್ಕರ ರಂಗೂನಿನ ಏರೋಡ್ರೋಂಗಳ ಮೇಲೆ ಕೇಂದ್ರೀಕೃತವಾಗಿವೆ ಇದುವರೆವಿಗೂ ಜಪಾನಿನ ದಾಳಿಗಳೆಲ್ಲಾ ವಿಫಲವಾಗಿವೆಯೆಂದೇ ಹೇಳಬಹುದು.

ಈಗಿನ ವಿದ್ಯಮಾನಗಳನ್ನು ವಿಮರ್ಶಿಸುವುದಾದರೆ ಜಪಾನಿನ ವಿಮಾನದಳದವರು ಗಟ್ಟಿಗರೆಂದೂ ಮಹಾಸಾಹಸಿಗಳೆಂದೂ ಹೇಳಬಹುದು ಆದರೆ ಪ್ರಸ್ತುತ ಯುದ್ಧವು ಬಲಪ್ರಯೋಗದಿಂದ ಸಾಗುವ ಯುದ್ಧವಲ್ಲ. ಬುದ್ಧಿವಂತರೂ ಅನುಭವಸ್ಥರೂ ಆದ ವಿಮಾನದಳದವರಿಂದ ಸಾಗುವುದೇ ಹೊರತು ದಡ್ಡರಿಂದ ಸಾಧ್ಯವಿಲ್ಲ. ಈ ವಿಷಯದಲ್ಲಿ ಅನುಭವಸ್ಥರಾದ ಮಹಾವ್ಯಕ್ತಿಗಳು ಕೂಡ—ನಮ್ಮ ವಿಮಾನಪಡೆಯವರು ಶತ್ರುಪಕ್ಷದ ಪಡೆಗಳಿಗಿಂತಲೂ ಸುಶಿಕ್ಷಿತರಾಗಿರುತ್ತಾರೆಂದು ಹೇಳಿದ್ದಾರೆ

Welcome Speech delivered by **Rajadharmapravina Diwan Bahadur P Mahadevayya,** B A B L Retired Chief Justice as Chairman of the 'Reception Committee on the 29th March 1918 being the Day of national prayers for the victory of the British and their allies at the Public Meeting held in the Sri Mahantina Mutt Chickpet Bangalore City under the Presidentship of **Rajamantrapravina N MADHAVA RAO** Esq B A [illegible] Dewan of Mysore

Sri Swamiji, Mr President Ladies & Gentlemen

Please permit me to offer our grateful thanks to the Dewan for having kindly consented to preside on this occasion in spite of his pressing engagements and multifarious duties While the war is fast approaching the borders of India it is the duty of every patriotic Indian to directly and indirectly contribute to the best of his ability, towards the war effort and help the British and their Allies to achieve a speedy victory against the aggressors It was a happy idea of the Swamiji to have arranged to offer special prayers for the success of the British and their Allies, in continuation of the Annual Renuka Jayanti celebrations The name of **Renukacharya** stands for triumph among the Virasaivas He was one of the five famous founders of the Virasaiva religion On the advice of Prof **H H Wilson** the late Mr **C P Brown** the distinguished Telugu scholar of the Madras Civil Service made a special study of this religion and wrote an Essay which is published in Vol XI of the Madras Journal of Literature & Science In this essay the learned author has not only given an account of Sri Renuka Acharya and the other founders of the religion, but has also compared certain aspects of the Virasaiva philosophy with the system of philosophy of the ancient Greeks The Srikara Bhashya which is recognised to be a great Virasaiva commentary on the Brahma Sutras to which my friend Rao Bahadur Rajacharita Visharada Mr C Hayavadana Rao has written a masterly introduction and which has attracted the attention of eastern and western scholars including Prof Berriedale Keith contains appreciative references to the exploits of Sri Renuka Acharya An interesting account of the Virasaiva religion and Sri Renukacharya's seat at Balehonnur in the Kadur District is to be found in the Census Report issued by the Mysore Government in 1901

II Sri Renukacharya is said to have initiated Agastya the famous Maharshi into the doctrines of the Virasaiva faith according to 'Siddhanta Sikhamani a religious work of great antiquity Again Sri Renukacharya was the holy sage who is said to have presented the sacred Linga called 'Chandramouleswara to the famous Sri Sankaracharya The authenticity of this incident is corroborated by —

(1) The Biography called **Guruvamsa Kavya** , in the Library of the Sri Sringeri Mutt

(2) The introduction written by Rao Bahadur Mr H Krishna Sastry, B A Archaeologist of the government of India, to the religious work called '**Sivatatva Ratnakara** ',

(3) References contained in the same work published in Devanagari character by Mr B Rama Rao, M A, LL B, Senior Translator of the Madras Government, and Vidwan P Sundara Sastriyar of the Oriental Library of the Madras Government,

(4) References contained in '**Pitamaha Samhita** ' by Sri Vidyaranya, and in "**Vidyaranya Kriti** ", by Bharati Krishna Yati, and

(5) References contained in "Keladi Nrupa Vijaya ', which is a work issued by the Government of Mysore

It may be of interest to add that this sacred "Chandramouleswara" finds a place of honour even now in the Sringeri Mutt, and is respectfully worshipped every day

III The number of Virasaivas in India is about three millions It is recorded in the "Kasikanda", "Srisailakanda' and "Pashupata Tantra ' that such renowned sages as Agastya, Gautama, Doorvasa, Dadhichi, Vyasa Sananda, Kasyapa and Upamanyu sought initiation into the doctrines of the Virasaiva faith, and such famous emperors as Nala, Kakutsa, and Puroorava are understood to have been devoted followers of the Virasaiva religion The Virasaivas believe that their religion is as old as the Vedas, and the learned commentary on "Lingadharana Chandrike by the late Mahamahopadhyaya Shivakumar Pandit of Benares, is considered to be a great authority in favour of 'Lingadharana I may also invite reference to a recent learned commentary on the "Sivadwaita Manjari an ancient work on the Virasaiva system of philosophy by Mr Devasikhamani Ramanujacharya the wellknown pandit of the Mysore palace In order to popularise the work, Pandit Sree Kasinatha Sastry, Editor of The Panchacharya Prabha" of Mysore got it rendered into Kannada, and it has been respectfully dedicated to His Highness the late Maharaja of Mysore That the Saiva cult had spread far and wide in the olden times, that the Pancha Acharyas were the original propogators of the Virasaiva religion in different parts of India, and that many Ruling princes embraced the said religion and honoured its followers are indisputable historical facts and later researches have fully confirmed them It is proved by historical records that there were nearly twelve millions of lingas in India at the time of the first Mahomedan invasion Though it may seem to be incredible there are certain stubborn facts to show that even prior to the growth of Christianity Shaivism exerted a powerful influence on distant countries, and Shaivite Temples and Altars had been built in Europe, Africa and America In a book called Nirmalya Ratnakara , Babu Bechu Sinha of Benares has shown that Saiva worship had spread to Atudistan Chitral Kabul Balk Bokhara Mecca, Babylon Egypt, Greece Italy, Glasgow and Brazil The historical evidences found at the present day at Java, Borneo, and Annam go to show that the Saiva faith had penetrated into those countries also Many ancient inscriptions reveal that the kings of Nepal Kashmir, Benares, Ujjain Chola, and other countries were ardent followers of the Virasaiva religion The eleventh Report of the Royal Asiatic Society of Bombay, issued in the year 1875, contains several inscriptions showing the high regard in which the virasaiva religion was held by many of the Provincial Rulers in the 10th century A D in that part of India, and the South Indian Inscriptions establish the fact that the Pallava Kings, "Atyanta Kama', Raja Simha , and "Gunabhara of the 6th century A D were Virasaivas As many of you are aware the members of the Royal family of Mysore were all Virasaivas from 1399 to 1605, and the Rajas of Coorg and the Nagar Kingdom were also Virasaivas

IV (a) The famous Jangamawadi Mutt at Benares founded by Sri Visvaradhya, is another ancient Peetha (Seat) of the pancha Acharyas In addition to the gifts made by Hindu Kings, the Moghul Emperors, viz, Humayun Akbar, Jehangir Shahjehan, Aurengzeb and Mahammad Shah have also made several grants of land to this mutt

(b) Kedara Peetha in the Himalayas founded by Sri Ekorama, is another holy seat of the Pancha Acharyas It is said that king Janamejaya of Mahabharata time made a copper plate grant to the holy Archbishop "Ananda Linga Jangama ' of this mutt, and it is understood that the mutt is still in the enjoyment of 141 villages included in the said grant The Raja of Tehri is a disciple of this mutt, and it is stated that the Maharajas of Udaipur, Kashmir, Nepal, and 13 Northern Indian Rulers pay annual tythes to this mutt The British Government have, in recognition of the sanctity and dignity of this mutt,

authorised it to use all the 72 honours and insignias throughout the whole of British India You may be interested to hear that His Highness the late Maharaja of Mysore, of blessed memory, paid a visit to this holy mutt on his way back from the Kailasa mountain in Tibet and performed 'puja' for three days

V Now a word about our swamiji He occupies a prominent place in the priestly heirarchy He is one of the most learned and respected disciples of Sri Balehonnur Swamy He is not only the head of this Institution, but he is also the Chief Bishop of the wellknown Vibhutipur mutt, with Jurisdiction over its branch mutts More than all this his austerity and "thapas" have impressed all those who have come into cotact with him He practises and preaches what may be called "The philosophy of the good life. He emphasises moral values and always appeals to those ideals of which the human sole always appreciates Again, the Swamiji has made a name in Mysore and Dharwar as being an expert in the art of meditation or "Thapas' and I am glad that the organisers selected a most appropriate person for offering special prayers to God for the speedy victory of the British and their allies From the 19th instant he has been daily performing Navagraha Japa Panchabrahma Homa, and Mrityunjaya Homa on the 27th instant Sri Rudra Homa was also performed in addition The ceremonies have been concluded today, and you will be interested to hear that Swamiji has performed altogether 5½ lakhs of Japams for the last 11 days Arrangements have also been made to feed about 8 000 poor people tomorrow and the day after, for which a huge pendal has been put up and permission to temporarily close the public road has been applied for to the Municipality

VI Though we are living in an age in which materialism is uppermost in the minds of most people still there are many who believe that India is the most spiritual country in the world, and that the future will find India the moral leader of all the nations Thoughtful people are of the opinion that India's spiritual life still exists, despite the storms of political agitation which now hide it and that living sages can reveal a wisdom untaught by our modern universities In spite of learned sceptics, meditation has received recognition in the spiritual world as the best means of knowing the soul It is no doubt difficult to attain a proper knowledge of the soul, and Voltaire is said to have exclaimed that "Four thousand volumes of metaphysics will not teach us what the soul is

VII Though meditation is said to be a lost art in the West, you will be surprised to hear that many famous figures of the world are known to have drawn inspiration by the practice of meditation William F Stead, the famous Newspaper editor, declared that he practised meditation in the prison and 'found himself Thomas A Edision, whose name will always stand as one of the world's great inventors developed the habit of meditation which brought him the solution of many of his perplexing problems Lord Tennyson, England's poet Laureate exalts meditation and says, that "if thou wilt dive into the Temple cave of thine own self thou may'st haply learn the Nameless hath a voice Sir Isac Newton, the great mathematician and astronomer, late one morning, was found sitting half dressed in bed and sunk in meditation It is now revealed that Field Marshall Lord Kitchener sought and received secret initiation into Oriental Yoga practices, during his long service in command of the British Military, Forces in India and Egypt, and that he habitually practised meditation in a delightful littel island on the River Nile near the old town of Assuan which now bears his name it is said that the right method of meditation leads to thought control and spiritual knowledge The light of the mind is vague and diffused in the average man, and it is said that by the technique of sharp concentration it becomes a powerful searchlight Upon whatever object we throw this powerful beam we shall be able to see it clearly and acquire useful knowledge A piece of paper might be lying on the ground for all time and nothing exciting may happen to it But if you apply a burning glass and carefully concentrate the sun's rays on one spot of that paper, something extraordinary will soon happen The human mind possesses attractive and repulsive properties Its magnetic activity constantly goes on in man's sub-conscious self, though he may not be aware of it, and its secret silent influence is said to be a never ceasing operation When a yogi proves the power of mind over matter by some extraordinary feat that seems miraculous, or when a Christ like man changes the hearts of many others, we then dimly realise what great potency lies hidden in thought control It is said that a divine purpose pulsates through the whole of nature He who learns the art of right meditation will put himself into harmony with that purpose, which will then use him as a holy instrument in his labours among the strayed sheep of mankind And clever scientists have now begun to think that the Universe is ultimately a thought in the mind of God

VIII Again, it is recognised that man, as he really is, is a spiritual being, and that one of the outstanding wonders of God's creation is the mind of man within We are told that the treasure trove of the real self is within us, and that if you want proof of your divinity you have to listen into your "overself ', since that proof is within you It is said that it is the invisible inner man of thoughts and feeling who dictates his daily actions and reactions and who faces him when he is alone The thoughts which often occupy his brain and the moods which frequently fill his heart, are his invisible rulers and constitute his real self It is said that thought can affect both matter and man that all mater is but densified force, that all men are but sensitive batteries of force and that thought is a registrable force which science has begun to detect by delicate instruments Scientists have shown that the human mind possesses electro magnetic properties, that thoughts can be photographed and that the electrical impulses of the human brain can be transformed into light rays It is a matter of common knowledge that the science of soul discovery was born in ancient India more than 5,000 years ago Man arises out of too mysterious womb of the "Infinite , and possesses latent mental power and spiritual intelligence and spiritual India knows how best to develop and use these latent powers to their utmost potentiality By regular meditation and by forgetting the external world for a brief while we turn our thoughts inward upon ourselves with concentrated attention until we get into the stillness which is behind all thought It is said that right meditation gradually liberates a soul-force in man which eventually becomes the greatest inspirer of his activities It is the most powerful because it is the most inward element of his being This is a truth which was believed and acted upon by men like Oliver Cromwell Marcus Aurelius, Asoka, Akbar and Sivaji It will thus be seen that meditation or 'Thapas ' has received recognition in all countries and in all ages, and I believe that prayers proceeding from the depths of a sincere heart are bound to go up and reach the proper quarters

The Swamiji has greatly promoted the war effort by his Puja, meditation, and prayers for the last 11 days, and let us offer our respectful thanks to him I also request all those assembled here to-night to offer our united prayers to God for the speedy victory of the British and their Allies

(Sd) **P Mahadevayya.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಗಾರು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗೋದ್ಭವದ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೨ × ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮುನಿವರ್ಯರಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯಃ ಶಿವಲೋಕಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರ ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—೩ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತವೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ. ಡಜ ಒಂದಕ್ಕೆ ಕ್ರಯ ರೂ ೨ ೮ ೦ ವಿ ಪಿ ೬ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[45] ಪೋ. ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಸ್ತೋತ್ರಸೂತ್ರಪಟ (೫ನೆಯ ಆವೃತ್ತಿ) ...	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ...	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ) .	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ) ...	೨ ಆಣೆ
ಸವಾದನಿಜತತ್ತ್ವದರ್ಪಣ (೪ನೆಯ ಆವೃತ್ತಿ) ...	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) .	೨ ಆಣೆ
ಪಂಚಾಚಾರ್ಯಪ್ರಭಾಕರ ...	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) ...	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಭಗವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರ್ಯುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀ ಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ ..	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೬೦ ಮಹತ್ವದ ಫೋಟೋಗಳಿರುವುವು)	೧। ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾನುವಾದ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As.
The Philosophical Aspect of Virasaivism (*English*) ..	8 As.
Speeches by Pandit Shri Kashinatha Shastriji *English*)	12 As.
लिंगधारणचन्द्रिका (संस्कृत)	१ रु.
वीरशैवरत्न (मराठी)	१ रु.
महानारायणोपनिषद् (वीरशैवभाष्य-संस्कृत) ...	१ रु.
पुरुषसूक्तम् (वीरशैवभाष्योपेतम्) . .	४ आ.
[illegible] (संस्कृत) ...	२ आ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರಿಗೆ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೭ನೇ ಏಪ್ರಿಲ್ ೧೯೪೨ [ಸಂಚಿಕೆ ೨

ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವ, ಧಾರವಾಡ.

ಧಾರವಾಡ ನಗರದಲ್ಲಿರುವ ಕರ್ನಾಟಕ ಸಾಂಸ್ಕೃತಿಕ ಉತ್ಸವಮಂಡಲಿಯವರು ಈ ತಿಂಗಳು ೧೮ ನೆಯ ತಾರೀಖಿನ ದಿವಸ ಧಾರವಾಡದಲ್ಲಿರುವ ವೀರಶೈವ ನಗರಭವನದಲ್ಲಿ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀ ಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದರು ಸಾಯಂಕಾಲ ೬ ಘಂಟೆಗೆ ಶ್ರೀವರ್ಮಾ ಸಿ ಆಯ್ ಹಿರೇಮಠ ಹೈಕೋರ್ಟ್ ವಕೀಲ ಹುಬ್ಬಳ್ಳಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು ಸಭೆಗೆ ಪ್ರೊಫೆಸರ್ ಮಾಳವಾಡ, ಪ್ರೊಫೆಸರ್ ಬಸವನಾಳ ಮೊದಲಾದ ಅನೇಕಜನ ಸಭ್ಯಗೃಹಸ್ಥರು ಆಗಮಿಸಿದ್ದರು ಪ್ರಾರಂಭದಲ್ಲಿ ಧಾರವಾಡ ಯಲ್ಲಾಪುರ ಓಣಿಯ ಶ್ರೀಜಗದ್ಗುರು ಪಂಚಾಚಾರ್ಯ ಭಜನಸಂಘದವರು ಜಗದಾಚಾರ್ಯರ ಸ್ತೋತ್ರಗಳನ್ನು ಮನೋಹರವಾಗಿ ಹಾಡಿ ಸರ್ವರನ್ನೂ ಸಂತೋಷಪಡಿಸಿದರು ಬಳಿಕ ವೇ॥ ಎಚ್. ಎಚ್ ಶಿವಲಿಂಗಶಾಸ್ತ್ರಿಗಳವರು ಶ್ರೀಮದೇಕೋರಾಮಾರಾಧ್ಯರ ಅವತಾರವಿಷಯವನ್ನೂ, ಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ಮಹಿಮಾತಿಶಯಗಳನ್ನೂ ಹೇಳಿ, ಸರ್ವರೂ ಏಕೀಭವಿಸಿ ಸನಾತನ ವೀರಶೈವಧರ್ಮದ ರಕ್ಷಣೆಯ ಬಗ್ಗೆ ಪ್ರಯತ್ನಮಾಡಬೇಕೆಂದು ಪರಿಣಾಮಕಾರಕವಾಗುವಂತೆ ಭಾಷಣಮಾಡಿದರು. ಆಮೇಲೆ ಕೆ ಎಸ್ ಪಾಟೀಲ ವಕೀಲರು ಜಯಂತಿಯ ಮಹತ್ತ್ವವನ್ನು ಕುರಿತು ಮಾತನಾಡಿದರು. ಅನಂತರ ಅಧ್ಯಕ್ಷಮಹಾಶಯರು ಶ್ರೀಜಗದ್ಗುರು ಪಂಚಾಚಾರ್ಯರ ಅವತಾರ ವಿಷಯವನ್ನೂ, ವೀರಶೈವಧರ್ಮವು ವೇದಾಗಮಗಳಲ್ಲಿ ಪೂರ್ಣವಾಗಿ ಪ್ರಕಾಶಿಸುತ್ತಿರುವ ವಿಷಯವನ್ನೂ, ವೀರಶೈವಗೋಪನಿಷತ್ತಿನಲ್ಲಿ ಜಗದಾಚಾರ್ಯರ ಅವತಾರ ವಿಷಯವು ಸ್ಪಷ್ಟವಾಗಿ ಉಕ್ತವಾಗಿರುವುದನ್ನೂ, ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ಶ್ರೇಷ್ಠತೆಯನ್ನೂ, ಕಾಶೀ ಕೇದಾರಪೀಠಗಳಿಗೆ ಪ್ರಾಚೀನಕಾಲದ ಹಿಂದೂ ಮಹಾರಾಜರು ದಾನಮಾಡಿರುವ ವಿಷಯವನ್ನೂ, ಇಂದಿಗೂ ಆ ಪೀಠಗಳು ರಾಜಾಧಿರಾಜಮಾನ್ಯಗಳಾಗಿ ಮೆರೆಯುತ್ತಿರುವ ವಿಷಯವನ್ನು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ಅಸಾಧಾರಣವಾದ ಶ್ರಮವನ್ನು ವಹಿಸಿ ಅನೇಕ ಪ್ರಾಚೀನ ವೀರಶೈವಮತಗ್ರಂಥಗಳನ್ನೂ, ಶಿಲಾಶಾಸನಗಳನ್ನೂ ಶೋಧಿಸಿ ಮುದ್ರಿಸಿ ವೀರಶೈವಜಗತ್ತಿಗೆ ಮಹೋಪಕಾರಮಾಡಿರುವ ವಿಷಯವನ್ನೂ, ಅವರ ಪ್ರಭಾವಾತಿಶಯದಿಂದಲೇ ಇಂದು ಜಗತ್ತಿನಲ್ಲಿ ಜಗದಾಚಾರ್ಯರ ವಿಜಯವು ಭರದಿಂದ ಸಾಗಿರುವುದೆಂಬ ವಿಷಯವನ್ನೂ ವಿಶದವಾಗಿ ಹೇಳಿ ಸರ್ವಸಭಿಕರನ್ನು ಸಂತೋಷಪಡಿಸಿದರು. ಅಧ್ಯಕ್ಷರ ಮುಖದಿಂದ ಹೊರಟ ಅತ್ಯಂತ ಮಹತ್ವದ ವಿಷಯಗಳನ್ನು ಕೇಳಿ ಸರ್ವರೂ ಸಂತುಷ್ಟಚಿತ್ತರಾದರು. ಆ ಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಕಾರ್ಯವನ್ನು ಸಿ ಜಿ ಹೊನ್ನಾಪುರಮಠ ವಕೀಲ, ಬಿ ಕ ಶಿವಯ್ಯನಮಠ, ಎ ವಿ ಹಿರೇಮಠ, ಎ ಜಿ ಹೊಳೆಯಣ್ಣನವರ ಮೊದಲಾದವರು ವಿಶೇಷಶ್ರದ್ಧೆಯಿಂದ ನೆರವೇರಿಸಿದರು ಈ ಕಾರ್ಯದಲ್ಲಿ ನಿರತರಾದವರೆಲ್ಲರಿಗೂ ಶ್ರೀಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನು ಅನುಗ್ರಹಿಸಲೆಂದು ಪ್ರಾರ್ಥನೆ.

ಪ್ರತ್ಯಕ್ಷದರ್ಶಿ.

ಯೂರೋಪನ್ನು ಮುತ್ತಲು ಸಿದ್ಧತೆ

ಯೂರೋಪಿಗೆ ಮುತ್ತಿಗೆ ಹಾಕಬೇಕೆಂದು ಬ್ರಿಟೀಷ್ ಅಮೆರಿಕಗಳು ಮಾಡಿರುವ ಯೋಚನೆಯನ್ನು ಕುರಿತು ಬರ್ಲಿನಿನಲ್ಲಿ ಚರ್ಚೆ ನಡೆಸಿದರಂತೂ, ಬ್ರಿಟಿಷರು ಅಪ್ರತಿಮಿಲಿಟರಿ ಬಲವನ್ನು ಕೂಡಿಸಿದ್ದಾರೆಂದೂ ಅವರು ಈಗ ಯೂರೋಪಿಗೆ ಮುತ್ತಿಗೆ ಹಾಕಲು ಶಕ್ತರಾಗಿದ್ದಾರೆಂದೂ, ಈ ವಿಷಯವನ್ನು ಜರ್ಮನಿಯು ಅರಿತಿದೆಯೆಂದೂ, ಅದನ್ನು ಎದುರಿಸಲು ಜರ್ಮನಿಯು ಆಕ್ರಮಿಸಿರುವ ಪ್ರದೇಶಗಳಲ್ಲಿ ಅಸಾಧ್ಯ ಸಿದ್ಧತೆಗಳು ನಡೆಯುತ್ತಿರುವುದೆಂದೂ ಸ್ಟಾಕ್‌ಹೋಂ ಪತ್ರಿಕೆಯು ತಿಳಿಸಿದೆ

ರಷ್ಯನರ ಪ್ರತಿಕ್ರಿಯೆ

ರಷ್ಯನರು ಎಲ್ಲಾ ರಣಾಂಗಗಳಲ್ಲೂ ಜರ್ಮನ್ ಪಡೆಗಳು ಅವರ ಇತರ ಸೈನ್ಯ ಪಡೆಗಳೊಡನೆ ಹೊಂದಿರಬಹುದಾದ ಸಂಬಂಧವನ್ನು ಕತ್ತರಿಸುವುದರಲ್ಲೂ ಅವರ ಸರಬರಾಜು ಟ್ರೈನುಗಳನ್ನು ಧ್ವಂಸಮಾಡುವುದರಲ್ಲೂ ಅವರ ಸೈನ್ಯ ಶಿಬಿರಗಳನ್ನು ನಾಶಪಡಿಸುವುದರಲ್ಲೂ ನಿರತರಾಗಿರುವರಲ್ಲದೆ ಈ ರಣಾಂಗಣಗಳಲ್ಲಿ ಹಿಟ್ಲರನು ಎಲ್ಲಿಯೂ ತನ್ನ ಸೈನ್ಯ ಬಲವನ್ನು ಕೇಂದ್ರೀಕರಿಸದಂತೆಯೂ ಮಾಡಿದ್ದಾರೆ. ರಷ್ಯನರು ಅವರ ಮೇಲೆ ಈಗ ಪ್ರಯೋಗಿಸುತ್ತಿರುವುದು ಇದೊಂದೇ ಅಸ್ತ್ರ

ಬರ್ಲಿನ್ ಪ್ರಜೆಗಳಲ್ಲಿ ಭಯ

ಜರ್ಮನಿಯು ಮುಂದೆ ಯುದ್ಧಮಾಡುವ ಮಾತು ಹಾಗಿರಲಿ, ಅಮೆರಿಕಾ ಮತ್ತು ಬ್ರಿಟನ್‌ದೇಶಗಳು ಎಲ್ಲಿ ಮುತ್ತಿಗೆ ಹಾಕುವುವೋ ಎಂಬ ಹೆದರಿಕೆ ಬರ್ಲಿನ್ ಪ್ರಜೆಗಳಿಗೆ ಬಲವಾಗಿದೆ. ನಾರ್ವೆಗೆ ಮಿತ್ರರಾಷ್ಟ್ರಗಳು ನುಗ್ಗಿದರೆ ಜರ್ಮನಿಗೆ ಉಗ್ರವಾದ ಪೆಟ್ಟು ಹಾಕಿದಂತಾಗುವುದೆಂಬ ಅಭಿಪ್ರಾಯವು ಬೆಳೆಯುತ್ತಿದೆ

ಹಿಟ್ಲರನಿಗೆ ಅಮೆರಿಕನ್ನರ ಮರ್ಯಾದೆ

ನ್ಯೂಯಾರ್ಕ್ ನಗರ ನಿವಾಸಿಗಳು, ಕಳೆದ ಸೋಮವಾರ ಹಿಟ್ಲರನ ೫೩ನೇ ವರ್ಷದ ವರ್ಧಂತ್ಯುತ್ಸವದ ಸಮಯದಲ್ಲಿ ಅವನಂತೆಯೇ ಒಂದು ದೊಡ್ಡ ಗೊಂಬೆಯನ್ನು ಮಾಡಿ ಎಲ್ಲರಿಗೂ ಕಾಣುವಹಾಗೆ ಟೈಮ್ಸ್ ಸ್ಕ್ವೇರಿನಲ್ಲಿ ಒಂದು ಎತ್ತರವಾದ ಸ್ಥಳದಲ್ಲಿ ಅದನ್ನು ನೇಣುಹಾಕಿದ್ದರು.

ಜರ್ಮನ್ ಸೇನೆಗೆ ಹೊಸ ಅಧಿಕಾರಿ

ರಷ್ಯಾರಂಗದ ಉತ್ತರಭಾಗದಲ್ಲಿರುವ ಜರ್ಮನಿ ಸೇನೆಗಳ ದಂಡನಾಯಕರಾಗಿದ್ದ ಜ॥ ವಾನ್‌ಲೀಬರವರನ್ನು ಹಿಂದಕ್ಕೆ ಕರೆಸಿ ಜ॥ ವಾನ್‌ಕಚಲರ್ ಎಂಬವರನ್ನು ಆ ಸ್ಥಾನಕ್ಕೆ ಸೇನಾಧಿಕಾರಿಗಳನ್ನಾಗಿ ನಿಯಮಿಸಿರುವುದಾಗಿ ತಿಳಿದು ಬಂದಿದೆ. ಈ ಹೊಸ ಸೇನಾಪತಿಗಳ ವಯಸ್ಸು 61 ಎಂದೂ, ಅವರು ಬಹಳ ಶಕ್ತರೆಂದೂ ಹೇಳಲಾಗಿದೆ

ಜರ್ಮನ್ ವಿಮಾನಬಲದಲ್ಲಿ ಈಗ ೪೦೦೦ ವಿಮಾನಗಳು ಮಾತ್ರ ಅವೆ.

ಈಗ ಜರ್ಮನಿಯು ೪೦೦೦ ಕ್ಕಿಂತ ಸ್ವಲ್ಪ ಹೆಚ್ಚು ವಿಮಾನಗಳನ್ನು ಹೊಂದಿದೆಯೆಂದು ತಿಳಿದುಬಂದಿದೆ ಪಶ್ಚಿಮ ಯೂರೋಪಿನಲ್ಲಿ ನಾರ್ವೆ ಉತ್ತರಭಾಗದಿಂದ ಹಿಡಿದು ಬೋರ್ಡೋವರೆಗೆ ಜರ್ಮನಿಯು ೧೦೦೦ಕ್ಕಿಂತ ಸ್ವಲ್ಪ ಹೆಚ್ಚು ವಿಮಾನಗಳನ್ನು ಇಟ್ಟಿದೆ ಬ್ರಿಟಿಷ್ ವಿಮಾನಗಳ ಮುತ್ತಿಗೆಗಳನ್ನೆದುರಿಸಲು ಫ್ರಾನ್ಸ್, ಬೆಲ್ಜಿಯಂ ಮತ್ತು ಹಾಲೆಂಡುಗಳಲ್ಲಿ ಬಲವಾದ ಫೈಟರ್ ಪಡೆಗಳಿವೆ. ಬ್ರಿಟಿಷ್ ಬಂದರುಗಳಮೇಲೂ ಮತ್ತು ಹಡಗುಗಳಮೇಲೂ ಮುತ್ತಿಗೆ ನಡೆಸಲು ತಕ್ಕ ಬಾಂಬರು ಪಡೆಯಿದೆ ಬ್ರಿಟನ್ನು ಮುತ್ತಿಗೆ ಹಾಕಬಹುದಾದ ಕ್ಷೇತ್ರಕ್ಕೆ ಬೇಗನೆ ಸೈನಿಕರನ್ನು ಸಾಗಿಸಲು ದೊಡ್ಡ ದೊಡ್ಡ ವಿಮಾನಗಳನ್ನು ಸಿದ್ಧವಾಗಿಡಲಾಗಿದೆ ಎಲ್ಲ ಬಗೆಯ ಸುಮಾರು ೨೦೦೦ ವಿಮಾನಗಳನ್ನು ಪೂರ್ವರಂಗದಲ್ಲಿ ಉಪಯೋಗಿಸುತ್ತಿದ್ದಾರೆ ಉಳಿದ ವಿಮಾನಗಳು ಮೆಡಿಟರೇನಿಯನ್ ಕ್ಷೇತ್ರದಲ್ಲಿವೆ ಮಾಲ್ಟಾಮೇಲೂ ಮತ್ತು ಪಶ್ಚಿಮ ಮರುಭೂಮಿಯಲ್ಲಿಯೂ ಇವು ಹಾರಾಡುತ್ತಿರುವವು ಹಿಟ್ಲರನು ರಷ್ಯಾಕ್ಕೆ ಮುತ್ತಿಗೆಹಾಕುವ ಮುನ್ನ ೫೦೦೦ ವಿಮಾನಗಳಿದ್ದವು

ಜಪಾನ್ ಕಾರ್ಖಾನೆಗಳಿಗೆ ಅಪಾಯ

ಕಳೆದ ೨೦ ನೆಯ ತಾರೀಖಿನ ರಾತ್ರಿ ಟೋಕಿಯೋ ಮುಂತಾದ ನಗರಗಳಲ್ಲಿ ಮತ್ತೆ ವಿಮಾನ ಸೂಚನೆ ಕೊಡಲಾಯಿತು. ಆವರೆ ವಿಮಾನದಾಳಿ ನಡೆದ ವಿಚಾರವೇನೂ ಪ್ರಕಟವಾಗಿಲ್ಲ ಹೀಗೆ ಮುತ್ತಿಗೆ ನಡೆಸುತ್ತಿರುವ ವಿಮಾನಗಳು "ಹೇಸ್ಟಿಂಗ್" ಎಂಬ ಜಾತಿಯ ಅಮೆರಿಕೆಯ ಡೈವ್‌ಬಾಂಬರ್ ವಿಮಾನಗಳೆಂದೂ ಈ ಬಗೆಯ ವಿಮಾನಗಳು ಒಂದು ಸಲಕ್ಕೆ 2000 ಮೈಲಿಗಿಂತ ಹೆಚ್ಚು ದೂರ ಹಾರಬಲ್ಲವೆಂದೂ, ಕಳೆದ 18 ನೆಯ ತಾರೀಖಿನ ದಿವಸ ಟೋಕಿಯೋ ಮತ್ತು ಯಾಕೋಹಾಮಗಳ ಮೇಲೆ 60ಕ್ಕಿಂತ ಹೆಚ್ಚು ವಿಮಾನಗಳು ಹಾರಿಬಂದು ಕಾರ್ಖಾನೆಗಳಿರುವ ಪ್ರದೇಶಗಳ ಮೇಲೆ ಬಾಂಬುಗಳನ್ನು ಹಾಕಿದವೆಂದೂ, ಕೋಬೇ ಬಂದರಿಗೂ ಮತ್ತು ಕೈಗಾರಿಕೆ ನಗರವಾದ ನಾಗಾಯಕ್ಕೂ ಏಟುಬಿದ್ದು ಕೊಂಚ ನಷ್ಟ ವಾಯಿತೆಂದೂ, ಟೋಕಿಯೋದಲ್ಲಿ ಕಾರ್ಖಾನೆಗಳು ಉರಿದುಹೋದವೆಂದೂ ಹೇಳಲಾಗಿದೆ.

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ ॥

ಬ್ರಹ್ಮಚಾರಿಗಳು ಪಾಲಿಸತಕ್ಕ ನಿಯಮಗಳು

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ಮಾಳಿಮಠ ಮುದೇನೂರು

೧ ಪವಿತ್ರಸಂಕಲ್ಪ—'ತನ್ಮೇ ಮನಃಶಿವಸಂಕಲ್ಪಮಸ್ತು' 'ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ಭದ್ರಂಪಶ್ಯೇಮಾಕ್ಷಭಿರ್ಯಜತ್ರಾಃ' ॥ ಎಂಬ ವೇದವಾಕ್ಯದಂತೆ ಸದಾ ಮನಸ್ಸಿನಲ್ಲಿ ಪವಿತ್ರ ಸಂಕಲ್ಪಗಳನ್ನೂ ಉಚ್ಚ ಹಾಗೂ ಶುಭಕರ ವಿಚಾರಗಳನ್ನೂ ತಂದುಕೊಳ್ಳತಕ್ಕದ್ದು

೨ ಪವಿತ್ರ ಮಾತೃಭಾವ ದೃಷ್ಟಿ—'ಮಾತೃವತ್ ಸ್ವಸೃವಚ್ಚೈವ ನಿತ್ಯಂ ದುಹಿತೃವಚ್ಚ ಯೇ ಪರದಾರೇಷು ವರ್ತಂತೇ ನರಾಸ್ತೇ ಸ್ವರ್ಗಗಾಮಿನಃ ॥ (ಮಹಾಭಾರತ) ಎಂಬಂತೆ ಪರಸ್ತ್ರೀ ವಿಚಾರದಲ್ಲಿ ಮಾತೃಭಾವ

೩ ಕುದೃಶ್ಯತ್ಯಾಗ—ನ ಪಶ್ಯೇತ್ಪ್ರಸ್ರವಂತೀಂ ತೇಜಸ್ಕಾಮೋ ದ್ವಿಜೋತ್ತಮಃ । ನಾಂಜಯಂತೀಂ ಸ್ವಕೇ ನೇತ್ರೇ ನಚಾಭ್ಯಕ್ತಾಮನಾವೃತಾಂ ॥ (ಮನುಸ್ಮೃತಿ) ಅಂದರೆ ಯಾವ ಸ್ಥಿತಿಯಲ್ಲಿ ಸ್ತ್ರೀಯನ್ನು ನೋಡಿದಾಗ ಮನಸ್ಸು ವಿಕಲ್ಪವಾಗಿ ಒಡನೆಯೇ ವಿಕಾರವಶವಾಗುವುದೋ ಅಂತಹ ನಗ್ನಾವ್ಯವಸ್ಥೆಗಳಲ್ಲಿ ಅವಳನ್ನು ನೋಡದೆ ಇರುವುದು ಇನ್ನೂ ಕಾಲಸ್ಥಿತಿಯಿಂದ ಹೇಳುವುದಾದರೆ ಅಂತಹ ನಗ್ನ ಅರ್ಧ ನಗ್ನ ಕಾಮೋದ್ದೀಪಕ ಚಿತ್ರಪಟಗಳನ್ನು ನೋಡದಿರುವುದು

೪ ಸತ್ಸಂಗತಿ—ಈ ವಿಷಯದಲ್ಲಿ ಹೆಚ್ಚು ವಿವರಿಸಬೇಕಾಗಿಲ್ಲ ಸತ್ಸಹವಾಸವೇ ನಮ್ಮನ್ನು ಸರ್ವಾಪತ್ತುಗಳಿಂದಲೂ ದೂರವಿರಿಸಿ ಹಿತವನ್ನು ದೊರಕಿಸಿಕೊಡತಕ್ಕದ್ದಾಗಿರುವುದು ಈ ವಿಷಯದಲ್ಲಿ ಶ್ರೀ ಶಂಕರಾಚಾರ್ಯರು—ಸತ್ಸಂಗತ್ವೇ ನಿಸ್ಸಂಗತ್ವಂ ನಿಸ್ಸಂಗತ್ವೇ ನಿರ್ಮೋಹತ್ವಂ । ನಿರ್ಮೋಹತ್ವೇ ನಿಶ್ಚಲತತ್ವಂ । ನಿಶ್ಚಲತತ್ವೇ ಜೀವನ್ಮುಕ್ತಿಃ ॥ ಎಂದು ಅಪ್ಪಣೆ ಕೊಡಿಸಿರುವರು

೫ ಸದ್ಗ್ರಂಥಪಠನ—ಶ್ರುತಿ ಸ್ಮೃತೀತಿಹಾಸಾದಿಗಳನ್ನು ಅರ್ಥಾನುಸಂಧಾನಪೂರ್ವಕವಾಗಿ ಓದಿ ಅದನ್ನು ಪುನಃ ಪುನ ಮನನಮಾಡುತ್ತಾ, ಅದರ ಆದೇಶಗಳನ್ನು ಅನುಷ್ಠಾನದಲ್ಲಿ ತರುವುದು ಬ್ರಹ್ಮಚರ್ಯವಿಹೀನಾನಾಂ ದ ಶಾಂತಿ ಸ್ಯಾಂಪದೇಶದೇ । ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ । ಮನಃಪ್ರಸಾದಃ ಸೌಮ್ಯತ್ವಂ ಮೌನಮಾತ್ಮವಿನಿಗ್ರಹಃ । ಭಾವಸಂಶುದ್ಧಿರಿತ್ಯೇತತ್ತಪೋ ಮಾನಸಮುಚ್ಯತೇ ॥ ಇತ್ಯಾದಿ ಅಮೃತವಾಣಿಗಳನ್ನು ಮೇಲಿಂದ ಮೇಲೆ ನೆನಪಿಗೆ ತಂದುಕೊಳ್ಳುವುದು ಅಂತೆಯೇ ಕೇವಲ ಶೃಂಗಾರರಸ ಪ್ರಧಾನಗಳಾದ ಕಾದಂಬರಿಗಳನ್ನು ಓದಿ ಮನಸ್ಸನ್ನು ವಿಹ್ವಲಮಾಡಿಕೊಳ್ಳಬಾರದು

೬ ಪ್ರಾತಃಶೀತಜಲಸ್ನಾನ—ಪ್ರಾತಃಶೀತಜಲಸ್ನಾನಂ ಹೃದ್ಯಮೋಜಸ್ಕರಂ ಪರಂ । ಪವಿತ್ರಂ ವೃಷ್ಯಮಾಯುಷ್ಯಂ ಶ್ರಮಸ್ವೇದಸುತಾಪಜಿತ್ ॥ ಉಷ್ಣಜಲಸ್ನಾನವು ಸ್ವಲ್ಪ ಉತ್ತೇಜಕವಿರುವುದರಿಂದ ಮನೋವಿಕಾರದ ನಿಗ್ರಹಕ್ಕೆ ಚಿತ್ತವೃತ್ತಿಯ ಸಮಸ್ಥಿತಿಗೆ ಭಾವನೆಯು ಪ್ರಶಾಂತಗೊಳ್ಳುವುದಕ್ಕೆ ದುಃಸ್ವಪ್ನ ನಿವೃತ್ತಿಗೆ ಒಟ್ಟಿನ ಮೇಲೆ ಶಾರೀರಿಕ ಮಾನಸಿಕ ತಾಪ ಶಮನಕ್ಕೆ ಶೀತ ಜಲಸ್ನಾನವು ಪರಮೌಷಧವಾಗಿರುವುದು

೭. ಅಲ್ಪಾಹಾರ—ಅನಾರೋಗ್ಯ ಮನಾಯುಷ್ಯಮಸ್ವರ್ಗ್ಯಂ ಚಾತಿಭೋಜನಂ । ಅಪುಣ್ಯಂ ಲೋಕವಿದ್ವಿಷ್ಟಂ ತಸ್ಮಾತ್ತತ್ಪರಿವರ್ಜಯೇತ್ ॥ (ಮನುಸ್ಮೃತಿ) ಸರ್ವರೋಗಿಗಳಿಗೂ ಆದಿನಿದಾನವಾದ ಅತಿ ಭೋಜನದ ವಿಷಯವಾಗಿ ಪ್ರತ್ಯೇಕ ಬರೆಯಲವಶ್ಯಕವಿಲ್ಲ ಪ್ರಾಯಃ ಅಜೀರ್ಣರೋಗಿಯನ್ನೇ ಮನೋವಿಕಾರವು ಅಂಟಿಕೊಂಡಿರುವುದು ಇಂತಹವನಿಗೇ ಸ್ವಪ್ನಸ್ಖಲನಾದಿಗಳು ಪದೇ ಪದೇ ಆಗುತ್ತಿರುತ್ತವೆ

೮ ನಿರಾಹಾರ—ಆಹಾರಂ ಪಚತಿ ಶಿಖೀ ದೋಷಾ ನಾಹಾರವರ್ಜಿತಃ । (ಆಯುರ್ವೇದ) ಯಂತ್ರಗಳಿಗೆ ನಿಯಮಿತವಾದ ಒಂದು ದಿವಸದಲ್ಲಿ ರಜಾ ಕೊಡುವಂತೆ ನಮ್ಮ ಶರೀರ ಯಂತ್ರಕ್ಕೂ ೧೫ ದಿನಗಳಿಗೊಂದುಸಲವಾದರೂ ವಿಶ್ರಾಂತಿ ಕೊಟ್ಟಲ್ಲಿ ಅಧಿಕ ಅದು ಅಜೀರ್ಣವಾಗಿ ಉಳಿದಿರುವ ದೋಷಗಳನ್ನೆಲ್ಲಾ ತನ್ನಲ್ಲಿರತಕ್ಕ ಆಹಾರಾಭಾವದ ಮೂಲಕ ಜೀರ್ಣಿಸಿಬಿಡುವುದು ಇನ್ನು 'ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ॥' ಎಂಬಂತೆ ವಿಷಯೋದ್ವೇಗ ಶಮನಕ್ಕೂ ಇದು ಸಾಧನವಾಗುವುದು ಅಜೀರ್ಣದೋಷವಿರವಿರತಕ್ಕವನು ಜಡನೂ ನಿರುತ್ಸಾಹಿಯೂ ಅಸಹಿಷ್ಣುವೂ ಶೀಘ್ರಕೋಪಿಯೂ ಅಶಕ್ತನೂ ಚಂಚಲಮನಸ್ಕನೂ ಆಗಿ ಪರಿಣಮಿಸುವನು ಶರೀರದ ಜಾಡ್ಯವು ಬುದ್ಧಿಮಾಂದ್ಯದಲ್ಲಿ ಕೊನೆಗೊಳ್ಳುವುದರಿಂದ ವಿವೇಕಶೂನ್ಯನಾದ ಅವನ ತನ್ನ ಮಂದಬುದ್ಧಿಯಲ್ಲಿ ನವಚೈತನ್ಯವನ್ನು ತಾಳಿಸುವುದಕ್ಕೆ ಅಸಮರ್ಥನಾಗಿ ಅದನ್ನು ರಮಿಸುವ ಉದ್ದೇಶದಿಂದ ದುಶ್ಚಟಗಳಿಗೆ ಬಲಿಯಾಗುತ್ತಾನೆ ಆದದರಿಂದ ಉಪವಾಸವು ಮನಃಸಂಯಮನದ ಬಗ್ಗೆ ಅತ್ಯವಶ್ಯ ಸಾಧನವಿರುವುದು.

೯ ಮಲಮೂತ್ರವಿಸರ್ಜನ—'ನವೇಗ ನೀರಯೇದ್ಬಲಾತ್' ಎಂಬಂತೆ ಮಲಮೂತ್ರಾದಿಗಳ ವೇಗವನ್ನು ತಡೆಯಬಾರದು

೧೦ ನಿಯತನಿದ್ರಾ—'ನಿದ್ರಾಯತ್ತಂ ಸುಖಂ ದುಃಖಂ ಪುಷ್ಟಿಃ ಕಾರ್ಶ್ಯಂ ಬಲಾಬಲೇ । ವೃಷತಾ ಕ್ಲೀಬತಾ ಜ್ಞಾನಮಜ್ಞಾನಂ ಜೀವಿತಂ ನ ಚ ॥' (ಆಯುರ್ವೇದ) ರಾತ್ರಿ ಸುಮಾರು ೯ ಘಂಟೆಗೆ ಶಯನಮಾಡಿ ಬೆಳಗಿನ ೫ ಘಂಟೆಗೆ ಏಳುವ ನಿಯಮವನ್ನು ತಪ್ಪದೆ ಪಾಲಿಸುವುದು ಅಖಂಡವಾಗಿ ಸ್ವಚ್ಛವಾಗಿ (ಸ್ವಪ್ನರಹಿತವಾಗಿ) ನಿದ್ರೆ ಹತ್ತತಕ್ಕದ್ದು ಬ್ರಹ್ಮಚಾರಿಯ ಲಕ್ಷಣವೆಂದರೂ ಅಡ್ಡಿಯಿಲ್ಲ

೧೧ ಕೌಪೀನಧಾರಣ—'ವೀರ್ಯಸಂರಕ್ಷಣಾರ್ಥಾಯ ಕೌಪೀನಂ ಧಾರಯೇತ್ಸದಾ । ಸ್ವಪ್ನದೋಷೋಂಡವೃದ್ಧಿಶ್ಚ ನಭವೇದ್ಧಿ ಕದಾಚನ ॥' ಜನನೇಂದ್ರಿಯದ ಚಲನವಲನಗಳೇ ವೀರ್ಯಸ್ರಾವಕ್ಕೆ ಉಪಾದಾನ ಕಾರಣವಾಗುವುದರಿಂದ ಸ್ವಚ್ಛ ಹಾಗೂ ಸದೃಢವಾದ ಕೌಪೀನಧಾರಣದಿಂದ ಜನನೇಂದ್ರಿಯದ ರಕ್ಷಣೆಯಾಗುವುದು ಈ ಕಾರಣದಿಂದಲೇ 'ಕೌಪೀನವಂತಃ ಖಲು ಭಾಗ್ಯವಂತಃ' ಎಂಬುಕ್ತಿಯು ಪ್ರಸಿದ್ಧಿಗೆ ಬಂದಿರುವುದು

೧೨ ನಿರ್ವ್ಯಸನತಾ—ಅಫೀಮು, ಧೂಮ, ಮಾಂಸಸೇವನ, ಚಾ, ಕಾಫೀ, ಮದ್ಯಪಾನ ಇತ್ಯಾದಿಗಳೆಲ್ಲಾ ಜನತೆಯಲ್ಲಿ ಸರ್ವಸಾಮಾನ್ಯವಾಗಿ ಬಳಕೆಗೊಂಡ ಕಾಷ್ಟವ್ಯಸನಗಳು ಇವೆಲ್ಲವೂ ತೀವ್ರೋತ್ತೇಜಕಗಳಿದ್ದು ನರಗಳ ಶಕ್ತಿಯನ್ನು ಕುಗ್ಗಿಸಿ ಧಾತುಪಾತಕ್ಕೆ ಹೇತುವಾಗುತ್ತವೆ

೧೩ ಏಕಾಂತತ್ಯಾಗ—'ಸ್ಥಾನಂ ವಿವಿಕ್ತಂ ಯಮಿನಾಂ ವಿಮುಕ್ತಯೇ ಕಾಮಾತುರಾಣಾಮತಿಕಾಮಕಾರಣಂ ॥' ಜಿತೇಂದ್ರಿಯನಿಗೆ ಮಾತ್ರ ಏಕಾಂತವಾಸವು ಆತ್ಮಾನಂದಾನುಭವಕ್ಕೆ ಸಹಕಾರಿಯಾಗುವುದು ಮನಸ್ಥೈರ್ಯವಿಲ್ಲದವನಿಗೆ ಏಕಾಂತದಲ್ಲಿರುವಿಕೆಯು ಇಲ್ಲದ ದುರ್ಬುದ್ಧಿಯನ್ನೇ ಹುಟ್ಟಿಸತಕ್ಕದ್ದಿರುವುದು

೧೪ ದಿನಚರ್ಯಾಸಮಾಲೋಚನ—'ಪ್ರತ್ಯಹಂ ಪ್ರತ್ಯವೇಕ್ಷೇತ ನರಶ್ಚರಿತಮಾತ್ಮನಃ । ಕಿಂನು ಮೇ ಪಶುಭಿಸ್ತುಲ್ಯಂ ಕಿಂನು ಸತ್ಪುರುಷೈರಿತಿ ॥' ಎಂಬಂತೆ ತನ್ನ ದೈನಂದಿನದ ಕ್ರಿಯೆಗಳನ್ನು ವಿವೇಚನಪೂರ್ವಕವಾಗಿ ಪರಿಶೀಲಿಸಿ ಎಲ್ಲಿ ಅದು ಅಧೋಮುಖವಾಗಿರುವುದೆಂಬುದನ್ನು ಕಂಡುಹಿಡಿದು ಅದನ್ನು ಸರಿಪಡಿಸಿಕೊಳ್ಳುವುದು

೧೫ ಸತತ ಉದ್ಯೋಗ—ಯಾವಾಗಲೂ ಉದ್ಯೋಗಶೀಲನಾಗಿಯೇ ಕಾಲವನ್ನು ಕಳೆಯುವುದರಿಂದ ಅಸದ್ವಿಷಯಗಳ ಚಿಂತನೆಗೆ ಎಡೆಯೇ ದೊರೆಯುವುದಿಲ್ಲ

೧೬ ಪ್ರಾಣಾಯಾಮ—'ದಹ್ಯಂತೇ ಧ್ಮಾಯಮಾನಾನಾಂ ಧಾತೂನಾಂ ಚ ಯಥಾ ಮಲಾಃ । ತಥೇಂದ್ರಿಯಾಣಾಂ ದಹ್ಯಂತೇ ದೋಷಾಃ ಪ್ರಾಣಸ್ಯ ನಿಗ್ರಹಾತ್ ॥' ಬ್ರಹ್ಮಚರ್ಯದ ಪಾಲನೆಗೆ ಪ್ರಾಣಾಯಾಮ ಸಾಧನೆಯಂತೂ ಜಿತೇಂದ್ರಿಯತೆಯನ್ನುಂಟುಮಾಡುವ ಮೂಲಕ ಪ್ರಧಾನ ಕಾರಣವಾಗಿರುವುದು

ಇನ್ನು ಹೀಗೆಯೇ 'ಪಾದುಕಾಧಾರಣಂ ನಿತ್ಯಂ ವಿಹಿತಂ ಬ್ರಹ್ಮಚಾರಿಣಃ ।' ಎಂಬಂತೆ ಪಾದುಕಾಧಾರಣ, ಶುದ್ಧ ವಾಯುಸೇವನ, ನಿಯಮನಿಷ್ಠೆ, ಆತ್ಮವಿಶ್ವಾಸ ವಿಷಯಗಳಲ್ಲಿ ವಿಷಭಾವನೆ, ವ್ಯಾಯಾಮಸೇವನೆ, ಈಶ್ವರಭಕ್ತಿ, ಇವೆಲ್ಲವೂ ಒಂದಲ್ಲ ಒಂದು ರೀತಿಯಿಂದ ಮನುಷ್ಯನನ್ನು ಸನ್ಮಾರ್ಗಕ್ಕೆ ಎಳೆಯುವ ಮೂಲಕ 'ಬ್ರಹ್ಮಚರ್ಯೇ ಸ್ಥಿತಂ ಧೈರ್ಯಂ ಹ್ಯಾವಿಕ್ರ್ಯಂಚ ಪರಾಕ್ರಮಃ । ಸ್ವಾತಂತ್ರ್ಯವಿಶಿಷ್ಟರತ್ನಂಚ ಸರ್ವಂ ವೀರ್ಯೇ ಪ್ರತಿಷ್ಠಿತಂ ॥' ಎಂಬ ಹೊಗಳಿಕೆಗೆ ಪಾತ್ರವಾದ ಜಗತ್ಕಾರಣವಾದ ವೀರ್ಯವನ್ನು ರಕ್ಷಿಸುವ ಮೂಲಕ ಬ್ರಹ್ಮಚರ್ಯದ ಪಾಲನೆಗೆ ಸಾಧನವಾಗುವುವು ವೀರ್ಯರಕ್ಷಣೆಯಿಂದ ಮರ್ತ್ಯನನ್ನು ಅಮರ್ತ್ಯ (ದೇವ) ನನ್ನಾಗಿ ಮಾಡಬಲ್ಲ ಬ್ರಹ್ಮಚರ್ಯಕ್ಕೆ ಭಂಗಬಾರದಂತೆ ಮನುಷ್ಯನು ತನ್ನ ಆಹಾರವಿಹಾರ ಆಚಾರವಿಚಾರಗಳನ್ನೆಲ್ಲಾ ಅಂದರೆ ಒಟ್ಟಿನ ಮೇಲೆ ತನ್ನ ದಿನಚರ್ಯೆಯಲ್ಲೇ ನಿಯಮನಿಷ್ಠೆಯಿಂದ ವರ್ತಿಸತಕ್ಕದೆಂಬುದು ಸ್ಪಷ್ಟವಾದಂತಾಯಿತು.

ವಾಚಕಮಹಾಶಯರೆ! ಮೇಲ್ಕಂಡ ನಿಯಮಗಳನ್ನು ಕೇವಲ ಬ್ರಹ್ಮಚಾರಿಗಳೇ ಪಾಲಿಸಬೇಕೆಂದಲ್ಲ. ತಮ್ಮ ಪುರೋಭಿವೃದ್ಧಿಯನ್ನು ಬಯಸತಕ್ಕ ಸಮಸ್ತರೂ ಪಾಲಿಸುವುದರಲ್ಲಿ ನಷ್ಟವೇನೂ ಇಲ್ಲ ಸದಾಚಾರಣೆಗಳ ಮೂಲಕ ಬ್ರಹ್ಮವನ್ನು ಸಾಧಿಸಲು ಎಲ್ಲರಿಗೂ ಅಧಿಕಾರವುಂಟು. ಈ ವಿಷಯದಲ್ಲಿ ಶ್ರೀ ಶಂಕರಾಚಾರ್ಯರು —

ಯೋಗರತೋ ವಾ ಭೋಗರತೋ ವಾ ।
ಸಂಗರತೋ ವಾ ಸಂಗವಿಹೀನಃ ॥
ಯಸ್ಯ ಬ್ರಹ್ಮಣಿ ರಮತೇ ಚಿತ್ತಂ ।
ನಂದತಿ ನಂದತಿ ನಂದತ್ಯೇವ ॥

ಎಂದು ನಿರೂಪಿಸಿರುವರು.

ಈಗಿನ ನವಯುವಕರು ಕೆಳಗಿನ ಶ್ಲೋಕಗಳನ್ನು ನಿತ್ಯವೂ ಪಾರಾಯಣ ಮಾಡುತ್ತಿರಬೇಕೆಂದು ಆರ್ಯರು ನಿರೂಪಿಸಿರುವರು —

ಬ್ರಹ್ಮಚರ್ಯದಹಾಯಾಂತಿ ಶ್ರೀಣಾಯಾಂ ಹೀನವಿಕ್ರಮಃ ।
ಆಯುರ್ಬುದ್ಧಿ ಬಲಂಪುಣ್ಯಂ ಹನ್ಯತೇಽಬ್ರಹ್ಮಚರ್ಯಯಾ ॥
ಬ್ರಹ್ಮಚರ್ಯವಿಹೀನಾ ವೈ ಬುದ್ಧಿವಿದ್ಯಾವಿವರ್ಜಿತಾಃ ।
ಧೈರ್ಯತೇಜೋವಿರಹಿತಾಃ ಕುಲಾಂಗಾರಾಃ ಪ್ರಜಾನಯಂ ॥

॥ ಶ್ರೀ ಗುರುಭ್ಯೋನಮಃ ॥

ಮನಸ್ಸಿನ ಚಾಪಲ್ಯ

ಲೇ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ, ಕೊಣ್ಣೂರು
(ತಾ-ನರಗುಂದ)

ನೀರಿನ ಸ್ವಭಾವವು ಹಳ್ಳದ ಕಡೆಗೆ ಹರಿಯುವಂತೆ ಮನಸ್ಸಿನ ಸ್ವಭಾವವಾದರೂ ಪರನಿಂದೆ, ಪರವಧೂಸಂಗ, ಕುಟಿಲಕುಯುಕ್ತಿ, ಪರಹಿಂಸೆ, ಕಪಟ ನಿರ್ದಯ, ಕಠಿಣವಚನ, ಗುರುನಿರಾಕರಣೆ, ಮದ, ಮೋಹ, ರಾಗದ್ವೇಷ ಮೊದಲಾದ ದುರ್ಗುಣಗಳ ಕಡೆಗೆ ಹರಿಯುತ್ತಿದೆ ಸದ್ಗುಣಗಳ ಕಡೆಗೆ ಎಂದೂ ಹರಿಯುವದಿಲ್ಲ ಮನಸ್ಸಿನ ಸ್ವಭಾವವೂ, ಮಂಗನ ಸ್ವಭಾವವೂ ಒಂದೇ ಆಗಿದೆ ಇದೇ ವಿಷಯವನ್ನು ಕುರಿತು ಪುರಂದರದಾಸರು—

ಮನವೆಂಬ ಮರ್ಕಟನ ತಡೆಯಲಾರೆನು ದೇವ ।
ಎನಿತೆಂದರ ಚಪಲ ಚೇಷ್ಟೆಗಳ ವರ್ಣಿಸಲಿ ॥ಪ॥

ಧರೆಯನೆಲ್ಲವನೊಂದೆಕೊಡೆಯಿಂದಳಾಳುವದು ।
ಗಿರಿಯಗುಹೆಯೊಳು ಕುಳಿತು ತಪವ ಮಾಡುವದು ॥
ತರುಣಿಯರ ಕಂಕುಳೊಳು ಕೈಯಿಕ್ಕಿ ನಗಿಸುವದು ।
ಕರಿಯ ಮೇಲಂಬಾರಿಯಲ್ಲಿ ಮೆರೆಯುವದು ॥೧॥

ಅನುಭವದೆ ಕಾಣದಾ ಸಂಗತಿಯ ತಿಳಿಯುವದು ।
ಧನವ ದಶಲಕ್ಷವನು ಗಳಿಸಿ ಹೂಳುವದು ॥
ಮನೆಯ ಮಕ್ಕಳ ಬಿಟ್ಟು ವಿರತಿಯಿಂ ಪೊರಡುವದು ।
ವನಜೋದ್ಭವಾಂಡವೊಂದೊಂದನೆಣಿಸುವದು ॥೨॥

ಅರಿಗಳನು ಹಿಡಿದು ಹೆಡೆಮುಡಿಗಟ್ಟಿ ಹೊಸಗುವದು ।
ಸುರಲೋಕಕೈದಿ ನಂದನದೆ ರಮಿಸುವದು ॥
ಬರಿದೆ ನಾನೇಕೆನಿತು ಬೇಸ್ತ್ರಿಸುವೆಯನೆ ಧರೆಯೊ- ।
ಳಿರುವ ಕೋಟಿಗಣಾರ ತಿಷ್ಯರೆಂದೆಪುದು ॥೩॥

ಓಡಿವನೆನೆ ಮೊದಲೆ ಮುಮ್ಮಾರು ಹಾರಾಡುವದು ।
ಪೊಡಿವನೆನಲಾ ನಡಿಯದಾರದೇಮುವದು ॥
ಕುಡುಗದನವಿಷ ಕೊರಳಗುದ್ದೆಯಂದದೊಳೆನ್ನ ॥
ನೆಡೆವಿಪಡೆ ಮೂಜಗದೊಳೆದಾಡುತಿಹುದು ॥೪॥

ಈ ಪ್ರಕಾರ ಮನಸ್ಸಿನ ಚೇಷ್ಟೆಯನ್ನು ವರ್ಣಿಸಿರುವರು.

ಸತ್ಯವಾದುದನೆಲ್ಲ ಹಿಡಿಯಲೊಲ್ಲದು ಮನವು ।
ಮಿಥ್ಯವಾದುದನೆಲ್ಲ ಹಿಡಿವುತಿರುದೀ ಮನವು ॥
ಸತ್ಯವಾಹುವರಹುಗೊಂಡಿಹ ದಸತ್ಯಕ್ಕೆ ಕಾಣಿಸುತಿದು
ಬರುತಲಿಹುದು ।
ಪ್ರತ್ಯೇಜಯನೆ ನಿಮ್ಮ ಮರೆತೊಳ್ಪ ದುರ್ಮನವ ॥
ಕತ್ತರಿಸಿ ಸನ್ಮಾರ್ಗದೊಳು ಬಿಡದೆ ನಡುವ ಮನವಿತ್ತು
ಸಲಹುವದೆನ್ನ ನಿಜಲಿಂಗ ॥೧॥

ಈ ಪ್ರಕಾರ ಮನಸ್ಸು ದುಷ್ಟಮಾರ್ಗದಲ್ಲಿಯೇ ಚರಿಯುತ್ತಿದೆ; ಹೊರತು ಸನ್ಮಾರ್ಗದಲ್ಲಿ ಚರಿಯುವದಿಲ್ಲವೆಂದು ನಿಜಲಿಂಗಶತಕವೂ ಸಹ ಬೋಧಿಸುತ್ತದೆ

ಜಲೇನ ಜನಿತಂ ಪಂಕಂ ಜಲೇನ ಪರಿಶುದ್ಧ್ಯತಿ ।
ಚಿತ್ತೇನ ಜನಿತಂ ಪಾಪಂ ಚಿತ್ತೇನ ಪರಿಶುದ್ಧ್ಯತಿ ॥

ಅಂದರೆ ನೀರಿನಿಂದ ಕೆಸರುಹುಟ್ಟಿ ನೀರಿನಿಂದ ಶುದ್ಧವಾಗುವಂತೆ, ಮನಸ್ಸಿನಿಂದ ಪಾಪಹುಟ್ಟಿ ಮನಸ್ಸಿನಿಂದ ಶುದ್ಧವಾಗುವದು "ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂಬ ಆರ್ಯೋಕ್ತಿಯಂತೆ ಮನುಷ್ಯನ ಬಂಧಕ್ಕೂ ಮೋಕ್ಷಕ್ಕೂ, ಮನಸ್ಸೇ ಕಾರಣವಾಗಿರುವದು ರಥಿಕನು ಮದಸಿದ ಕುದುರೆಗಳು ಎಳೆದುಕೊಂಡು ಹೋದಕಡೆಗೆ ಹೋದರೆ ಯಾವದಾದರೊಂದು ದೊಡ್ಡ ಕೊಳ್ಳಕ್ಕೆ ಕೆಡವಿ, ರಥಿಕನನ್ನು ಕಷ್ಟಕ್ಕೆ ಗುರಿಮಾಡುತ್ತವೆ ರಥವನ್ನು ಅಮಾರ್ಗದಲ್ಲಿ ಎಳೆದುಕೊಂಡು ಹೋಗಲಿಚ್ಛಿಸುವ ಮದಸಿದ ಕುದುರೆಗಳನ್ನು ರಥಿಕನು, ಲಗಾಮಿನ ಹತೋಟಿಯಿಂದ ದಾರಿಗೆ ಹಚ್ಚಿದರೆ ತನ್ನ ಸ್ವಸ್ಥಾನಕ್ಕೆ ಸುಖದಿಂದ ಹೇಗೆ ಮುಟ್ಟುವನೋ ಹಾಗೆಯೇ ಮನುಷ್ಯನು ದುರ್ವಿಷಯಗಳಲ್ಲಿ ಚರಿದಾಡುವ ಮನಸ್ಸಿನ ಸಂಗಡ ಹೋದರೆ ಅವನನ್ನು ಘೋರವಾದ ನರಕಕೂಪಕ್ಕೆ ಕೆಡುವುವದು ದುರ್ವಿಷಯಗಳಲ್ಲಿ ಚರಿದಾಡುವ ಮನಸ್ಸನ್ನು ವಿವೇಕಿಯಾದ ಪುರುಷನು, ನಿಗ್ರಹಮಾಡಿ ಸತ್ಯ, ಸನ್ಮಾರ್ಗ, ಶಮೆ, ದಯೆ, ಶಾಂತಿ, ಗುರುಭಕ್ತಿ, ತತ್ವವಿವರಣ, ವಿದ್ಯೆ, ದಯ, ಧರ್ಮ, ನಿತ್ಯಕರ್ಮ, ವಿನಯ, ವಿವೇಕ, ವಿರತಿ, ಜಪ, ತಪ, ಯೋಗ ಮೊದಲಾದ ಸದ್ಗುಣಗಳಲ್ಲಿ ಚರಿಸುವಂತೆ ಮಾಡಿದರೆ ನಿತ್ಯಸುಖವಾದ ಮುಕ್ತಿಸಾಮ್ರಾಜ್ಯಕ್ಕೆ ಕರೆದುಕೊಂಡು ಹೋಗುವದು ಯಾವನು ಮನಸ್ಸನ್ನು ಸ್ವಾಧೀನಮಾಡಿಕೊಳ್ಳುತ್ತಾನೆಯೋ ಅವನಲ್ಲಿ ಪ್ರಜ್ಞೆಯು ಸ್ಥಿರಗೊಳ್ಳುವದು ಇದೇ ಆತ್ಮಸಂಯಮವು ಎಂದು ಗೀತೆಯಲ್ಲಿ ಹೇಳಲ್ಪಟ್ಟಿರುವದು ಮತ್ತು ಇದೇ ಅಭಿಪ್ರಾಯವು "ಇಂದ್ರಿಯಾಣಾಂವಶೀಕಾರೋ ನಿವೃತ್ತಿರಿತಿಗೀಯತೇ । ಲಕ್ಷ್ಯೀಕೃತೇ ಶಿವೇ ತೇಷಾಂ ಶುಷ್ಯತ್ಸಂಸಾರಸಾಗರಃ" ॥ ಅಂದರೆ ಇಂದ್ರಿಯಗಳನ್ನು ವಶಮಾಡಿಕೊಳ್ಳುವದೇ ನಿವೃತ್ತಿಯು ಆ ನಿವೃತ್ತವಾದ ಮನಸ್ಸು ಶಿವಲಿಂಗದಲ್ಲಿ ನೆಲೆಸಿದರೆ, ಸಂಸಾರಸಮುದ್ರವನ್ನು ದಾಂಟಿಯೇ ದಾಂಟುವನು ಎಂದು ಶ್ರೀ ರೇಣುಕಭಗವತ್ಪಾದರು ಅಗಸ್ತ್ಯಮುನಿಗಳಿಗೆ ಉಪದೇಶಿಸಿರುತ್ತಾರೆ ಇಂಥ ಆತ್ಮಸಂಯಮಶಕ್ತಿಯು ಭಾರತೀಯರಲ್ಲಿ ಬರಬರುತ್ತ ಕಡಿಮೆಯಾಗುದರಿಂದ, ಘನೀಭೂತವಾದ ಮೋಡವು ಬಿರುಗಾಳಿಯಿಂದ ಒಡೆದು ಛಿದ್ರವಾಗಿ ಹೋಗುವಂತೆ ಇವರ ಶಕ್ತಿಯೆಲ್ಲವೂ ಪರದಾಸ್ಯದಿಂದ ತುಂಡುತುಂಡಾಗಿ ಹೋಗಿದೆ ಆದುದರಿಂದ ಸರ್ವರೂ ಮನೋನಿರ್ಮಲತೆಯನ್ನು ಹೊಂದುವುದರಲ್ಲಿ ನಿರತರಾಗಿ ಮನಶ್ಶುದ್ಧಿಯನ್ನು ಪಡೆದು ಮೋಕ್ಷಸಾಮ್ರಾಜ್ಯಸುಖವನ್ನನುಭವಿಸಲೆಂದಾಶಿಸುತ್ತೇನೆ

॥ ಶ್ರೀಗುರುಭ್ಯೋನಮಃ ॥

ಶ್ರೀಮಹಾಂತೇಶ್ವರ ರಥೋತ್ಸವ

ರಾಯಚೂರು ಡಿ|| ಬಿಚ್ಚಾಲಿಯ ಸುಪ್ರಸಿದ್ಧ ಸಾವಿರದೇವರು ಶ್ರೀಮಹಾಂತೇಶ್ವರ ಮಠದಲ್ಲಿ ಸನಾತನ ಕಾಲದಿಂದ ಬಂದ ಪದ್ಧತಿಯಂತೆ ಚಿತ್ರಭಾನು ಸಂ|| ಚೈತ್ರ ಬ|| ೫ ಸೋಮವಾರ ದಿವಸ ಮಹಾರಥೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು ಚೈತ್ರ ಬ|| ೪ ರವಿವಾರ ತಪೋನಿಧಿ ಗುರುವರ್ಯ ಶ್ರೀಮಹಾಂತೇಶ್ವರ ಮೂರ್ತಿಗೆ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ, ಮಹಾಮಂಗಳಾರತಿ ಮುಂತಾದ ಕ್ರಿಯೆಗಳು ಜರುಗಿದನಂತರ ಮಧ್ಯಾಹ್ನ ೩ ಘಂಟೆಯವರೆಗೆ ಅನ್ನಸಂತರ್ಪಣೆಯಾಯಿತು ಸೋಮವಾರ ಉದಯ ೮ ಘಂಟೆಯಿಂದ ೧೨ ರವರೆಗೆ ಸಂಗೀತ ವಿದ್ವಾನ್ ರಾಜಪ್ಪನವರ ಮತ್ತು ಸಂಗೀತವಿದ್ವಾನ್ ಜಂಬಲದಿನ್ನಿ ಸಿದ್ಧಣ್ಣನವರ, ಮಟಮರಿ ತಿಮ್ಮಯ್ಯ ಗವಾಯಿಗಳ ಸಂಗೀತ ಕಛೇರಿಯಾಯಿತು ಸಂಗೀತವು ಶ್ರಾವ್ಯವೂ ಚಿತ್ತಾಕರ್ಷಕವೂ ಆಗಿದ್ದಿತು ಅದೇ ದಿವಸ ಮಧ್ಯಾಹ್ನ ೩ರಿಂದ ೬ ಘಂಟೆಯವರೆಗೆ ವಿವಿಧ ವಾದ್ಯ ವೈಭವಗಳಿಂದಲೂ ಸಂಸ್ಥಾನದ ಬಿರುದ ಬಾವಲಿಗಳಿಂದಲೂ ರಥೋತ್ಸವವು ಸಾಂಗವಾಗಿ ಜರುಗಿತು ಈ ವರ್ಷ ಜನಸಂದಣಿಯು ವಿಶೇಷವಾಗಿ ಕೂಡಿದ್ದುದರಿಂದ ಸಬ್ ಇನ್ಸ್‌ಪೆಕ್ಟರ್ ಮುಂತಾದ ಅಧಿಕಾರಿಗಳಿಂದ ಯೋಗ್ಯವ್ಯವಸ್ಥೆಯು ಮಾಡಲ್ಪಟ್ಟಿತ್ತು ಮರುದಿನ ಉದಯ ೭ ರಿಂದ ೮ ಘಂಟೆಯವರೆಗೆ ಸದರಿಮಠಾಧ್ಯಕ್ಷರಾದ ಷ|| ಬ್ರ|| ಶ್ರೀ ಚನ್ನವೀರಶಿವಾಚಾರ್ಯರಿಂದ ರಚಿತವಾದ ಶ್ರೀರೇಣುಕಭಗವತ್ಪಾದರ ಸ್ತುತಿಪದ್ಯಗಳನ್ನು ಸಂ|| ವಿ|| ಸಿದ್ಧಣ್ಣ ಗವಾಯಿಗಳು ಹಿಂದಸ್ಥಾನೀ ಪದ್ಧತಿಯಂತೆ ಬಹು ಶ್ರಾವ್ಯವಾಗಿ ಹಾಡಿ ಸಭಿಕರಿಗೆ ಆನಂದವನ್ನುಂಟುಮಾಡಿದರು ೮ ರಿಂದ ೧೦|| ಘಂಟೆಯವರೆಗೆ ಪಂಡಿತರತ್ನ ಚಿದರೆಮಠದ ವೀರಭದ್ರಶಾಸ್ತ್ರಿಗಳವರು "ವೈದಿಕಮತ" ಎಂಬ ಬಗ್ಗೆ ಒಳ್ಳೆಯ ಮಹತ್ವದ ಭಾಷಣಮಾಡಿದರು ಬಳಿಕ ಸದರಿ ಶ್ರೀಗಳವರ, ವೇ|| ಮಿರ್ಜಾಪೂರ ಬಸವರಾಜಶಾಸ್ತ್ರಿಗಳು ಇವರೇ ಮೊದಲಾದ ವಿದ್ವಾಂಸರ ಉಪನ್ಯಾಸಗಳು ಜರುಗಿದವು ಆಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು ಮಟಮರಿ ಸದ್ಗೃಹಸ್ಥರ ಅಪೇಕ್ಷೆಯ ಮೇರೆಗೆ ಚಿದರೆಮಠದ ಪಂಡಿತರು ಶ್ರೀಗಳವರೊಂದಿಗೆ ಮಟಮರಿಗೆ ಹೋಗಿ ಶ್ರೀಮತಿ ಪೂ|| ಹಂ|| ವೀರಮ್ಮನವರ ಸದ್ಭಕ್ತಿಯಿಂದ ನಿರ್ಮಿಸಲ್ಪಟ್ಟ ಶ್ರೀಗಳವರ ನೂತನ ಮಠದ ಹಾಲಿನಲ್ಲಿ ಸುಮಾರು ೩ ಘಂಟೆಯವರೆಗೆ ಪ್ರವಚನಮಾಡಿ ಸುತ್ತಲು ಗ್ರಾಮಗಳಿಂದ ತಂಡೋಪತಂಡವಾಗಿ ಬಂದಿದ್ದ ಶ್ರೋತೃವರ್ಗಕ್ಕೆ ಅತ್ಯಾನಂದವನ್ನುಂಟುಮಾಡಿದರು

ಓರ್ವ ಪ್ರತ್ಯಕ್ಷದರ್ಶಿ

ಎ. ಆರ್. ಪಿ.

ಮನೆಯಲ್ಲಿ ವಾಸವಾಗಿರುವವರಿಗೆ ತಿಳುವಳಿಕೆ

೧ ನಿಮ್ಮ ವಾರ್ಡನ್‌ರವರಿಂದ ತಿಳಿದು ನಿಮ್ಮ ಮನೆಯಲ್ಲಿನ ಭದ್ರವಾಗಿರುವ ಕೋಣೆಯನ್ನು ಆರಿಸಿ ಅಲ್ಲಿಯ ಬಾಗಿಲು ಕಿಟಕಿ ಮೊದಲಾದವಕ್ಕೆ ಹಾಕಿರುವ ಗಾಜುಗಳನ್ನು ತೆಗೆದುಹಾಕಿ ವಿಮಾನದಾಳಿಯ ಎಚ್ಚರಿಕೆ ಧ್ವನಿಯನ್ನು ಕೇಳಿದ ಕೂಡಲೆ ಅಂತಹ ಕೋಣೆಯಲ್ಲಿ ಸೇರಿಕೊಳ್ಳಿ

೨ ಸುಲಭವಾಗಿ ಬೆಂಕಿ ಹತ್ತಿಕೊಳ್ಳಬಹುದಾದ ಪದಾರ್ಥಗಳನ್ನು ದೂರವಾಗಿಡಿ

೩ ನಿಮ್ಮ ಮನೆ ಬಾಗಿಲ ಹತ್ತಿರ ಕುಕ್ಕೆ ಅಥವಾ ಚೀಲದಲ್ಲಿ ಮರಳನ್ನೂ ಪಾತ್ರೆ ಅಥವಾ ಮಡಿಕೆಗಳಲ್ಲಿ ನೀರನ್ನೂ ಬೆಂಕಿಯ ಅಪಾಯದ ನಿವಾರಣೆಗಾಗಿ ಇಟ್ಟುಕೊಂಡಿರಿ

೪ ಬಾವಿಯಿಂದ ನೀರುಸೇದುವಂತೆ ಹಗ್ಗ, ಕೊಡಗಳನ್ನು ಹಾಕಿಸಿ, ಸಿದ್ಧವಾಗಿ ಇಡಿ

೫ ಪಿಕಾಸಿ, ಹಾರೆ ಮತ್ತು ಗುದ್ದಲಿ ಇವುಗಳನ್ನು ಸುಲಭವಾಗಿ ಸಿಗುವ ರೀತಿ ಇಟ್ಟಿರಿ

೬ ಎಣ್ಣೆದೀಪಗಳನ್ನೂ ಮೇಣದಬತ್ತಿಗಳನ್ನೂ ಅಥವಾ ಕೈಲಾಂದ್ರಗಳನ್ನು ಸಿದ್ಧವಾಗಿಟ್ಟುಕೊಂಡಿರಿ

೭ ನಿಮ್ಮ ಮನೆಯಲ್ಲಿರುವವರ ಪಟ್ಟಿಯನ್ನು ತಯಾರಿಸಿ ನಿಮ್ಮ ವಾರ್ಡನ್‌ರ ವಶಕ್ಕೆ ಕೊಡಿ

೮ ವಿಮಾನ ದಾಳಿಯ ಎಚ್ಚರಿಕೆ ಧ್ವನಿಗಳನ್ನು ಚೆನ್ನಾಗಿ ನೆನಪಿಡಿ ಎಚ್ಚರಿಕೆ ಧ್ವನಿ ಸೈರನ್ನುಗಳ ಎತ್ತರ ತಗ್ಗುಧ್ವನಿ, ಕಾರ್ಖಾನೆಗಳಿಂದಲೂ, ಸಿಳ್ಳೆಗಳಿಂದಲೂ ಬೇಗ ಕೊಡುವ ಧ್ವನಿ 'ರೇಡರ್ಸ್ ಪಾಸ್ಡ್' ಎಂಬ ಧ್ವನಿ, ಸೈರನ್ನುಗಳಿಂದಲೂ, ಕಾರ್ಖಾನೆಗಳಿಂದಲೂ ಸಿಳ್ಳೆಗಳಿಂದಲೂ ಕೊಡುವ ದೀರ್ಘವಾದ ಧ್ವನಿ

೯ ಎಚ್ಚರಿಕೆಧ್ವನಿ ಕೇಳಿದ ಕೂಡಲೆ ರಕ್ಷಣೆಗಾಗಿ ಉಪಾಯಿಸಿರುವ ಕೊಠಡಿಯಲ್ಲಿ ಅಡಗಿಕೊಳ್ಳಿ. "ರೇಡರ್ಸ್ ಪಾಸ್ಡ್" ಎಂಬ ಧ್ವನಿ ಆಗುವವರೆಗೂ ಕೊಠಡಿಯಿಂದ ಖಂಡಿತವಾಗಿಯೂ ಹೊರಗೆ ಬರಕೂಡದು.

೧೦ ದಾಳಿಯ ಕಾಲದಲ್ಲಿ ಬಾಗಿಲುಗಳ ಮತ್ತು ಕಿಟಕಿಗಳ ಹತ್ತಿರದಲ್ಲಿ ನಿಲ್ಲಬೇಡಿ,

ನಿಮ್ಮ ವಾರ್ಡನ್‌ರವರಿಂದ ನಿಮಗೆ ಬೇಕಾದ ತಿಳುವಳಿಕೆ ಮತ್ತು ಸಹಾಯವನ್ನು ಪಡೆಯಿರಿ.

ವಿಮಾನದಾಳಿಯ ಸೂಚನೆ

(ಎ ಆರ್ ಪಿ ಅಧಿಕಾರಿಗಳ ವಿವರಣೆ)

(ಹಿಂದಿನಿಂದ ಮುಂದುವರಿದುದು)

೫ ಈಗಿನ ಕಾಲದ ನವೀನ ರೀತಿಯಲ್ಲಿರುವ ದೊಡ್ಡ ಪಟ್ಟಣಗಳು "ಬಾಂಬರ್" ವಿಮಾನಗಳು ಹಾರಿಬಂದು ದಾಳಿಗಳನ್ನು ಹಾಕಿಹೋಗಲು ಬಹಳ ಆಕರ್ಷಕವಾದ ಪ್ರದೇಶಗಳು ರಕ್ಷಣೆ ಏರ್ಪಾಡುಗಳು ಫಲಕಾರಿಯಾಗಿ ನಡೆಯುವುದಕ್ಕೆ ಅಲ್ಲಿ ಸಾಧ್ಯತೆಯಂತೂ ಬಹು ಕಡಮೆ. ಆದಾಗ್ಯೂ ಅದೆಷ್ಟು ಮಟ್ಟಿಗೂ ನಷ್ಟವು ಕಡಮೆಯಾಗುವಂತೆ ರಕ್ಷಣೆಯನ್ನು ಒದಗಿಸಿ ನಗರಗಳನ್ನು ಕಾಪಾಡುವುದು ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳ ಆಶಯ ಜನರೆಲ್ಲರೂ ತಾವು ತಾನೇ ಮುಂದೆ ಬಂದು ಒಟ್ಟುಗೂಡಿ, ಆ ಏರ್ಪಾಡುಗಳನ್ನು ಹೆಚ್ಚಿಸಿ ಸ್ಥಳದಿಂದ ಸ್ಥಳಕ್ಕೆ ಹರಡಿ, ರಕ್ಷಣೆಯ ವ್ಯವಸ್ಥೆಯನ್ನು ಹೆಚ್ಚಿಸುವುದು ಅವುಗಳ ಮೇರೆಗೆ ನಡೆಯಬೇಕಾದ ಕೆಲಸ

ಕಾರ್ಯಕ್ರಮ

೬ ಬಾಂಬುಗಳನ್ನು ಹಾಕುವವರು ವಿಮಾನಗಳಲ್ಲಿ ಬಂದಾಗ ತಾವು ನಾಶಗೊಳಿಸಬೇಕೆಂದಿರುವ ವಸ್ತುಗಳು ಮುಂತಾದುವು ಅವರಿಗೆ ಸರಿಯಾಗಿ ಕಾಣದಂತೆಯೇ ಉಪಾಯಗಳನ್ನು ಮಾಡಿದರೆ, ಅವರಿಗೆ ತಾವು ಎಲ್ಲಿ ಹಾರಿಹೋಗುತ್ತಿರುವುದೆಂಬುದೇ ತಿಳಿಯುವುದಿಲ್ಲ ಆದರಿಂದ ಅವರು ಬಾಂಬು ಹಾಕದೆಯೇ ಹೊರಟುಹೋಗುತ್ತಾರೆ ಈ ರೀತಿ ಅಪಾಯಗಳನ್ನು ಕಡಮೆ ಮಾಡುವ ಉಪಾಯಗಳು ಎರಡು ರಾತ್ರಿಯವೇಳೆಯಾದರೆ, ನಗರಗಳಲ್ಲಿ ದೀಪಗಳಿರುವುದನ್ನು ಆದಷ್ಟು ಕಡಮೆಮಾಡಿಬಿಡುವುದು ಹಗಲಿನಲ್ಲಾದರೆ, ಅವರು ಗುರಿಯಿಟ್ಟು ಬಾಂಬುಗಳನ್ನು ಹಾಕಲಿಚ್ಛಿಸುವ ಪ್ರದೇಶಗಳು ಅವರಿಗೆ ಗೊತ್ತಾಗದಂತೆ ಮುಚ್ಚುಮರೆಮಾಡುವುದು. ನಗರಕ್ಕೆ ನಗರವನ್ನೇ ಹಾಗೆ ಮರೆಮಾಡಿ ವಿಮಾನಗಾರರಿಗೆ ಭ್ರಾಂತಿ ಕಲ್ಪನೆ ಮಾಡುವುದು ಸಾಧ್ಯವಿಲ್ಲ. ಕೆಲಕೆಲವು ಕಟ್ಟಡಗಳನ್ನೋ, ವಿಮಾನ ನಿಲ್ದಾಣಗಳು, ರೈಲ್ವೆಗಳು, ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಯಂತ್ರಶಾಲೆಗಳು ಮುಂತಾದ ಕೆಲವು ಸ್ಥಳಗಳನ್ನೋ ಬೇಕಾದರೆ ಮರೆಮಾಡಿ ವಿಮಾನಗಳಲ್ಲಿರುವವರಿಗೆ ಕಾಣದಂತೆ ಮಾಡಬಹುದು ಹಾಗೆ ಮಾಡುವ ವಿಧಾನಗಳು ಆಯಾ ಕಟ್ಟಡಗಳ ಮತ್ತು ಅವುಗಳ ಸುತ್ತಮುತ್ತಲೂ ಮರಗಿಡಗಳಿವೆಯೇ ಅಥವಾ ಬಯಲಿದೆಯೇ ಎಂಬಿವೇ ಮುಂತಾದ ಸನ್ನಿವೇಶಗಳಿಗೆ ಅಧೀನವಾಗಿ ನಿರ್ಧರವಾಗಬೇಕಾಗುತ್ತದೆ ಅತ್ಯಂತ ಮುಖ್ಯವಾದ ಎಚ್ಚರಿಕೆ ಏರ್ಪಾಡೆಂದರೆ, ರಾತ್ರಿಯ ವೇಳೆಯಲ್ಲಿ ವಿಮಾನಗಳಿಂದ ನೋಡಿದಾಗ್ಗೆ ನಗರವು ಕಾಣದಂತೆ ಮಾಡುವುದಕ್ಕೆ ಸಾಧ್ಯವಾದಷ್ಟು ಮಟ್ಟಿಗೂ ಪ್ರಯತ್ನ ಮಾಡುವುದೇ ಆಗಿದೆ. ಏಕೆಂದರೆ, ರಾತ್ರಿಯ ವೇಳೆ ವಿಮಾನಗಳಲ್ಲಿ ಬಂದು ಬಾಂಬುಗಳನ್ನು ಹಾಕುವುದು ಹಗಲು ಹೊತ್ತಿನಲ್ಲಿ ಹಾಗೆ ಮಾಡುವುದಕ್ಕಿಂತಲೂ ಬಹು ಸುಲಭ. ರಾತ್ರಿಯ ವೇಳೆ ವಿಮಾನದಾಳಿಯನ್ನು ಎದುರಿಸಿ ನಗರ ರಕ್ಷಣೆಮಾಡುವುದು ಹಗಲು ಹೊತ್ತಿನಲ್ಲಿ ಹಾಗೆ ಮಾಡುವುದಕ್ಕಿಂತಲೂ ಬಹು ಕಷ್ಟ ಏಕೆಂದರೆ, ದಾಳಿಗಳಿಗೆ ವಿಮಾನಗಳು ಬರುತ್ತಿರುವುದನ್ನು ಗುರುತಿಸಿ ಅವುಗಳೊಡನೆ ಹೋರಾಡುವುದು ರಾತ್ರಿಯಲ್ಲಿ ಕಷ್ಟ. ಆದಕಾರಣ, ಆ ವಿಮಾನಗಳಿಗೆ ರಾತ್ರಿಯ ವೇಳೆ ಅಪಾಯ ಕಡಮೆಯಾದುದರಿಂದ ಅವುಗಳ ದಾಳಿಗೆ ಆಗಲೇ ಹೆಚ್ಚು ಅವಕಾಶ. ರಾತ್ರಿಯ ವೇಳೆ ನಗರದ ದೀಪಗಳನ್ನು ಆರಿಸಿ ಕತ್ತಲು ಕವಿದಿರಲು ಅವಕಾಶ ಕೊಟ್ಟಲ್ಲಿ ನಗರವು ಎಲ್ಲಿ ಇರುವುದೆಂಬುದೇ ವಿಮಾನಗಳಲ್ಲಿರುವವರಿಗೆ ಗೊತ್ತಾಗುವುದಿಲ್ಲ ಇಂಗ್ಲೆಂಡಿನಲ್ಲಿ ಅಂಗೀಕಾರವಾಗಿರುವುದು ಈ ವಿಧಾನಕ್ಕೆ ಆದರೆ ರಾತ್ರಿಯ ಹೊತ್ತು ದೀಪಗಳೂ ಇಲ್ಲದೆ ಆಕಾಶದಲ್ಲಿ ಕತ್ತಲು ಕವಿದಿದ್ದರೆ, ವಿಮಾನಗಳು ಬರುತ್ತಿರುವುದನ್ನು ದೂರದಿಂದಲೇ ಗುರುತಿಸಿ ಹೋರಾಡುವುದಕ್ಕೂ ಅದರಿಂದ ಅಡ್ಡಿಯಾಗುತ್ತದೆ. ಕತ್ತಲಿನಲ್ಲಿರುವುದರಿಂದ ನಗರ ನಿವಾಸಿಗಳಿಗೆ ಬಹಳ ತೊಂದರೆಯಾಗಿ ಬೇಸರವುಂಟಾಗುವುದು. ಆದುದರಿಂದ, ಅವರ ಮನಃಪೂರ್ವಕವಾದ ಸಹಕಾರವು ಬಹು ಮುಖ್ಯವಾಗಿ ದೊರೆಯಬೇಕಾದ ಸಮಯದಲ್ಲಿ ಅದು ದೊರೆಯುವುದು ಕಷ್ಟವಾಗುತ್ತದೆ ಆದಕಾರಣ, ರಾತ್ರಿಯ ಹೊತ್ತಿನಲ್ಲಿ ದೀಪಗಳಿಲ್ಲದೆ ಜನರು ಕತ್ತಲೆಯಲ್ಲಿರುವ ಏರ್ಪಾಡು ಸರಿಯಾದುದಲ್ಲವೆಂದು ಅಭಿಪ್ರಾಯಬಂದಿದೆ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳ ಕೆಲಸಗಾರರು ದಕ್ಷತೆಯಿಂದ ಕೆಲಸಮಾಡಿ, ಬಾಂಬು ಹಾಕುವ ವಿಮಾನಗಳು ಬರುವುದನ್ನು ಗುರುತಿಸಿ ಅವುಗಳನ್ನು ಸಾಕಷ್ಟು

(೬ನೆಯ ಪುಟವನ್ನು ನೋಡಿ)

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ೧೫ ವರ್ಷಗಳು ತುಂಬಿ ೧೬ನೆಯ ವರ್ಷವು ಪ್ರಾರಂಭವಾಗಿರುವುದು ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ.ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ.ಪಿ. ಮಾಡಿದರೆ ೨ ರೂ ೧೪ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ಬರೆದಿಟ್ಟು ಮರೆಯದೆ ತಿಳಿಸಬೇಕು. ನಂಬರು ತಿಳಿಸದಿದ್ದರೆ ತೊಂದರೆಯಾಗುವದು.

ವ್ಯಾ —

ಪಂಚಾಚಾರ್ಯಪ್ರಭಾ

೧೯೪೨ನೆಯ ಏಪ್ರಿಲ್ ತಾ|| ೨೭ನೇ ಸೋಮವಾರ

ವಿದೇಶಗಳಲ್ಲಿ ಶಿವಾಲಯಗಳ ವ್ಯಾಪಕತೆ.

ಅನ್ನಾಂ (Annam) ದೇಶದಲ್ಲಿ ಶಿವನ ಅರ್ಧಾಂಗಿಯಾದ ದೇವಿಯ ವಿಗ್ರಹಗಳಿರುವಂತೆ, ಶಿವನ ಪುತ್ರರಾದ ವಿಘ್ನೇಶ್ವರ ಮತ್ತು ಷಣ್ಮುಖ ಇವರ ವಿಗ್ರಹಗಳೂ ಕೂಡ ಇರುವವು. ಆ ದೇಶದಲ್ಲಿ ವಿಘ್ನೇಶ್ವರನ ಮೂರ್ತಿಗಳು ವಿಶೇಷವಾಗಿ ದೊರೆಯುವವು. ಆದರೂ ಈ ಮೂರ್ತಿಗಳು ವಿಶೇಷವಾಗಿ ಶಿವದೇವಾಲಯಗಳಲ್ಲಿ ಸ್ಥಾಪಿಸಲ್ಪಟ್ಟಿರುವವು. ಪೋ 'ನಗರ' ಎಂಬ ಗ್ರಾಮದಲ್ಲಿ ಮಾತ್ರ ಈ ದೇವರಿಗೆ ಪ್ರತ್ಯೇಕವಾದ ಮಂದಿರವು ಕ್ರಿ.ಶ ೮೭೦ರಲ್ಲಿ ಕಟ್ಟಲ್ಪಟ್ಟಿತೆಂದು ೨೬ನೆಯ ಶಾಸನದಿಂದ ತಿಳಿದುಬರುತ್ತದೆ. ಆ ದೇಶದಲ್ಲಿರುವ ಪ್ರತಿಯೊಂದು ವಿಘ್ನೇಶ್ವರಮೂರ್ತಿಗಳು ಎರಡು ಕೈಗಳನ್ನು, ಎಡಗೈಯಲ್ಲಿ ಅಮೃತಪಾತ್ರೆಯೂ ಬಲಗೈಯಲ್ಲಿ ಶಿವಲಿಂಗಧಾರಣವೂ ಇರುವವು. ನಮ್ಮ ದೇಶದಲ್ಲಿ ಅನೇಕ ದೇವತೆಗಳ ಹಸ್ತದಲ್ಲಿ ಶಿವಲಿಂಗಧಾರಣವಿರುವುದು ಕಂಡುಬರುವಂತೆ, ಆ ದೇಶದಲ್ಲಿ ವಿಘ್ನೇಶ್ವರನ ಹಸ್ತದಲ್ಲಿ ಶಿವಲಿಂಗಧಾರಣವಿದ್ದುದು ಕಂಡುಬರುತ್ತದೆ. ಅಲ್ಲಿ ಇದೊಂದು ವೀರಶೈವಮತದ ಹೆಗ್ಗುರುತಾಗಿದೆ. ಯಾರಾದರೂ ಮತಾಭಿಮಾನಿಗಳು ಆ ದೇಶಕ್ಕೆ ಹೋಗಿ ಪರಿಶೋಧಿಸಿದರೆ, ವೀರಶೈವಮತದ ಗುರುತುಗಳು ವಿಶೇಷವಾಗಿ ದೊರೆಯಬಹುದೆಂದು ಪೂರ್ಣ ನಂಬುಗೆಯಿದೆ. ಅಸ್ತು! 'ಮಿ ಸೋನ್' ಗ್ರಾಮದಲ್ಲಿರುವ ವಿಘ್ನೇಶ್ವರನ ಮೂರ್ತಿಗೆ ಮಾತ್ರ ನಾಲ್ಕು ಕೈಗಳಿದ್ದು ನಿಂತುಕೊಂಡಂತೆ ಸ್ಥಾಪಿಸಲ್ಪಟ್ಟಿದೆ.

ಅನ್ನಾಂದೇಶದಲ್ಲಿ ವಿಘ್ನೇಶ್ವರನ ಮೂರ್ತಿಗಳು ವಿಶೇಷವಾಗಿರುವಂತೆ, ಷಣ್ಮುಖಸ್ವಾಮಿಯ ಮೂರ್ತಿಗಳು ವಿಶೇಷವಾಗಿರುವುದಿಲ್ಲ. ಇಲ್ಲಿಯವರೆಗೆ ಫ್ರೆಂಚ್ ಸರಕಾರದವರು ಶೋಧಿಸಿದ್ದರಲ್ಲಿ ೪ ಮೂರ್ತಿಗಳು ಮಾತ್ರ ದೊರೆತಿರುತ್ತವೆ. ಇವುಗಳಲ್ಲಿ ಎರಡು ಮೂರ್ತಿಗಳು ನವಿಲಿನ ಮೇಲೆ ಕುಳಿತಂತೆಯೂ, ಮಿಕ್ಕ ಎರಡು ಮೂರ್ತಿಗಳು ನೀರಾನೆಯ ಮೇಲೆ ಕುಳಿತಂತೆಯೂ ರಚಿಸಲ್ಪಟ್ಟಿವೆ. ಶ್ರೀಷಣ್ಮುಖಸ್ವಾಮಿಯ ವಿಷಯವು ೯-೨೪-೩೬ ೩೯ನೆಯ ಶಾಸನಗಳಲ್ಲಿ ಸಂಕ್ಷೇಪವಾಗಿ ಹೇಳಲ್ಪಟ್ಟಿದೆ.

ಇಲ್ಲಿಯವರೆಗೆ ಅನ್ನಾಂ ದೇಶದಲ್ಲಿರುವ ಶಿವವಿಗ್ರಹಗಳ ಮತ್ತು ಶಿವಸಂಬಂಧಿಗಳಾದ ಪಾರ್ವತಿ ಗಣಪತಿ ಷಣ್ಮುಖವಿಗ್ರಹಗಳ ವಿಷಯವು ಪ್ರತಿಪಾದಿಸಲ್ಪಟ್ಟದ್ದಾಯಿತು. ಇನ್ನು ಆ ದೇಶದ ರಾಜರು ಶಿವನೇ ದೇವತಾಸಾರ್ವಭೌಮನೆಂಬ ನಿರ್ಮಲಬುದ್ಧಿಯಿಂದ, ತಾವು ಬರೆಯಿಸಿದ ಶಾಸನಗಳಲ್ಲಿ ಶಿವನನ್ನು ಅಸಾಧಾರಣ ಭಕ್ತಿಭಾವದಿಂದ ಕೊಂಡಾಡಿರುವ ವಿಷಯವನ್ನು ಸಂಕ್ಷೇಪವಾಗಿ ವಿವರಿಸುವದಾಗುವದು.

೩೯ನೆಯ ಶಾಸನದಲ್ಲಿ—

ಲಿಂಗ ವಕ್ರ ಸಮುದ್ಭಾವಿತಸಂ ತ್ವಥಸ್ತಾತ್
ಪರಂ ಪದ್ಮವತಾ ಪಂಚಾಸ್ಯ ವಕ್ತ್ರಂ
ವಿ ಯ ಗ ಣ ಸನಯಿತಮ ತ್ತಮುಯೋಗವೇಶ್ಚ
ಶಕ್ತಿ ಪ ಯಸ್ಯ ಯದನಿಷ್ಟವರಪ್ರದಾತಾ |
ಲಿಂಗಾವಸಾನಮನಭಿಜ್ಞತಯೋಃ ಸಂಸ್ತಾವ್
ಮಾರ್ಗಾನ್ವಿತ್ಯಾನ ಶರಶೀತುಪರ್ಯೋನಿಸಾಪ |
ಸ್ಥಿತ್ಯನವೀರ್ಯತುಟಿ [illegible] ಶಪ ವ ತ್ರಂ
ಶಕ್ತಂ ಸ ಮುಖ ಯದನಿಷ್ಟವತ್ಪ್ರಸಾದಾತ್ |

ಯಸ್ಯ ವಿಜ್ಞಾಯ ಮಹಾಂತ ಸತ್ವಪದಜಪಜ್ಞಾನಹೋಶ್ಚಾಂದ್ಯಕಿ
ಪ್ರಾತೀಯುಗ್ಮ ಸಿತ ಸನ್ಮುಖಸಿದಾ ಪ್ರೋತ್ ನಾಗೇವಿ ಮಾ |
ದೇ ಗಾ ವಿಂದಪಶಿರೋಜಜಾ ಕಿಮುಪಸ್ಸಿ ಸಂಸ್ಥಾ ಯಥಾಭ್ಯಾಂ ಪುನಾಗ್
ಯಸ್ಯಾಲ ಪ್ರವ ಭಿತ್ವಯಾ ವಸು ನತಿ ಕೃಷ್ಣಾ ಪ ದ ನಾಸ್ಯಥಾ |
ಇತಿ ಬ ಸ್ಯ ನಜ ಶ್ಲಾಘ್ಯಂ ಪ್ರವದಂತೌ ತ ಸಾಸದಾ |
ಮದಾರಿವಸ್ಮಯಕೇಶೀ ತಾ ನೇಮುಕಾರ್ಯವ ನುತ್ತರಾ |
ಅಪಶ್ಯನ್ನಾರ್ಗ್ಯ ಯತ್ನ್ಯಾದರ್ಶ ಬೋಧಿತಮುಖಾಂಬುಜಾ |
ತೌ ಮಹಾನ್ ದೇವದೇವಸ್ತ್ವಂ ಕ ಯರ್ಗ ಯವ್ಯ ರ ಮಾವಯೋಃ ||
ಇತಿ ಯೋ ಪರ್ಗಯ ನ್ ಮಧ್ಯಲಿ ಗನ್ನಿರ್ಗತವಾಸನಃ |
ನೇತ್ರತ್ರಯಾಗ್ನಿಚಂದ್ರಾರ್ಕಪ್ರಭಾಭಾಸಿತಮಸ್ತಕಃ ||
ತತಶ್ಚ ದಕ್ಷಿಣೇ ಬ್ರಹ್ಮಾ ಸಂಸ್ಥಿತೋ ವಾಮತೋ ಹರಿ |
ಇತ್ಯೇಕತ್ವಂ ಗತೌ ಯೇನ ಲಭೇತೇ ಯದನುಜ್ಞಯಾ |

ವಿಷ್ಣು ಬ್ರಹ್ಮರೀರ್ವರ ನಾನು ಹೆಚ್ಚು, ತಾನು ಹೆಚ್ಚು ಎಂಬ ಹೆಮ್ಮೆಯಿಂದ ಕೂಡಿದವರಾಗಿ, ಲಿಂಗರೂಪಿಯಾದ ಪರಶಿವನ ಮಸ್ತಕ ಮತ್ತು ಪಾದಗಳನ್ನು ಯಾರು ನೋಡುವರೋ ಅವರೇ ಹೆಚ್ಚೆಂದು ತಮ್ಮ ತಮ್ಮೊಳಗೆ ನಿರ್ಧರಿಸಿ, ವಿಷ್ಣುವು ವರಾಹರೂಪವನ್ನು ಧರಿಸಿ ಅಸಂಖ್ಯವರ್ಷಗಳವರೆಗೆ ಭೂಮಿಯನ್ನು ಭೇದಿಸುತ್ತ ಹೋದರೂ ಲಿಂಗಮೂರ್ತಿಯ ಪಾದವನ್ನು ಕಾಣಲಿಲ್ಲವೆಂದೂ, ಇದರಂತೆ ಬ್ರಹ್ಮನು ಹಂಸರೂಪವನ್ನು ಧರಿಸಿ ಅಸಂಖ್ಯವರ್ಷಗಳವರೆಗೆ ಆಕಾಶದಲ್ಲಿ ಹಾರುತ್ತ ಹೋದರೂ ಲಿಂಗಮೂರ್ತಿಯ ಮಸ್ತಕವನ್ನು ಕಾಣಲಿಲ್ಲವೆಂದೂ ಲಿಂಗಮೂರ್ತಿಯ ಮಸ್ತಕ ಮತ್ತು ಪಾದಗಳನ್ನು ನೋಡದೆ ಚಿಂತಾಕ್ರಾಂತರಾಗಿ ಬಾಡಿದ ಮುಖಗಳಿಂದ ಕೂಡಿದ ವಿಷ್ಣುಬ್ರಹ್ಮರ ಸ್ವರೂಪವನ್ನು ತಿಳಿದು ಶ್ರೀಶಂಕರನು—ಎಲೈ, ವಿಷ್ಣುಬ್ರಹ್ಮರಿರಾ! ನೀವು ವ್ಯಸನಾಕ್ರಾಂತರಾಗದೆ ಅಸಾಧಾರಣಭಕ್ತಿಭಾವದಿಂದ ನನ್ನನ್ನು ನಮಸ್ಕರಿಸಿರೆಂದು ಆಕಾಶವಾಣಿಯಿಂದ ನುಡಿದನೆಂದೂ, ಆತ್ಮಾನಂದದಾಯಕವಾದ ಆ ಶಿವವಾಣಿಯನ್ನು ಕೇಳಿ ವಿಷ್ಣುಬ್ರಹ್ಮರು ಅಸದೃಶಭಕ್ತಿಯಿಂದೊಡಗೂಡಿ ಸ್ತುತಿಸುತ್ತ ನಮಸ್ಕರಿಸಿ ಪ್ರತ್ಯಕ್ಷನಾಗಬೇಕೆಂಬ ವರವನ್ನು ಬೇಡಿಕೊಂಡರೆಂದೂ, ಕೂಡಲೆ ಶ್ರೀಶಂಕರನು ಚಂದ್ರಸೂರ್ಯ-ಅಗ್ನಿನೇತ್ರಗಳಿಂದ ಪರಿಶೋಭಿಸುತ್ತಿರುವ ಮುಖವನ್ನು ಲಿಂಗಮಧ್ಯದಲ್ಲಿ ತೋರಿಸಿದನೆಂದೂ, ಆಗ್ಗೆ ಬಲಭಾಗದಲ್ಲಿ ಬ್ರಹ್ಮನೂ, ಎಡಭಾಗದಲ್ಲಿ ವಿಷ್ಣುವೂ ಕೈಜೋಡಿಸಿ ಎದ್ದು ನಿಂತುಕೊಂಡು ಶಿವನ ಅಪ್ಪಣೆಯಮೇರೆಗೆ ಪರಸ್ಪರವಾಗಿ ಏಕತ್ವವನ್ನು ತಾಳಿದರೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ.

ಈ ರೀತಿ ಶಿವಸರ್ವೋತ್ತಮತ್ವವನ್ನು ಕೊಂಡಾಡಿರುವದನ್ನು ನೋಡಿದರೆ, ಚಂಪಾದೇಶದ ರಾಜರಿಗೆ ಶಿವನ ವಿಷಯದಲ್ಲಿರತಕ್ಕ ಪೂಜ್ಯಬುದ್ಧಿಯು ಸೀಮಾತೀತವಾಗಿತ್ತೆಂದು ಸ್ಪಷ್ಟವಾಗಿ ವೇದ್ಯವಾಗುತ್ತದೆ. ಆ ಮಹಾರಾಜರಲ್ಲಿ ಈ ವಿಧವಾದ ಮಹಾಶಿವಭಕ್ತಿಯು ನೆಲೆಗೊಂಡಿರುವುದಕ್ಕೆ ವೀರಶೈವಮಹಾಚಾರ್ಯರ ಅನುಗ್ರಹವೇ ಮೂಲಕಾರಣವೆಂದು ಕಂಡುಬರುತ್ತದೆ. ಏಕೆಂದರೆ—ಈ ಭೂಮಂಡಲದಲ್ಲಿ ಲೋಕೋತ್ತರವಾದ ಶಿವಭಕ್ತಿಯನ್ನು ಸಂಸ್ಥಾಪಿಸಿದವರು ವೀರಶೈವಾಚಾರ್ಯರಲ್ಲದೆ ಬೇರೊಬ್ಬರಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ವೀರಶೈವಾಚಾರ್ಯರು ಸಮಸ್ತಪ್ರಪಂಚದಲ್ಲೆಲ್ಲ ಶಿವಭಕ್ತಿಯನ್ನು ನೆಲೆಗೊಳಿಸುವುದಕ್ಕಾಗಿಯೇ ಪರಮೇಶ್ವರನಿಂದ ಈ ಭೂಮಂಡಲಕ್ಕೆ ಕಳುಹಿಸಲ್ಪಟ್ಟಿರುವ ವಿಷಯವು ಶಿವಾಗಮಗಳಿಂದಲೂ ಇತರ ಗ್ರಂಥಗಳಿಂದಲೂ ವೇದ್ಯವಾಗುತ್ತದೆ. ಈ ಶಿವಾಚಾರ್ಯರು ಗಗನಮಾರ್ಗವಾಗಿ ಸಮಸ್ತ ಪ್ರಪಂಚದಲ್ಲೆಲ್ಲ ಸಂಚರಿಸಿ ಶಿವಭಕ್ತಿಯನ್ನು ಪ್ರತಿಷ್ಠಾಪಿಸಿದ ವಿಷಯವು ಅವರ ಲೀಲಾಬೋಧಕ ಚರಿತ್ರಗಳಿಂದ ವೇದ್ಯವಾಗುತ್ತದೆ. ಇದರಂತೆಯೇ ಇವರ ಪರಂಪರಾಗತರಾದ ಆಚಾರ್ಯರೂ ಸಹ ಶಿವಭಕ್ತಿಯನ್ನು ಪ್ರಪಂಚದಲ್ಲೆಲ್ಲ ಪ್ರಕಾಶಗೊಳಿಸಿರುವರು. ಈ ಮಹಾಚಾರ್ಯರ ಪ್ರಭಾವದಿಂದಲೇ ಅನ್ನಾಂ ದೇಶದಲ್ಲಿ ಶಿವಭಕ್ತಿಯು ನೆಲೆಗೊಂಡಿತೆಂದು ಧಾರಾಳವಾಗಿ ಹೇಳಬಹುದಾಗಿದೆ.

ಯುದ್ಧವಾರ್ತೆ.

ಚೀಣಾದಲ್ಲಿ ಭೂಕಂಪ

ಚೀಣದ ದಕ್ಷಿಣ ಯುನಾನ್ ಪ್ರಾಂತ್ಯದಲ್ಲಿರುವ ಜನೋವಾ ಎಂಬ ನಗರದಲ್ಲಿ ಉಗ್ರಭೂಕಂಪವಾಗಿ ನಗರವು ಸಂಪೂರ್ಣವಾಗಿ ನಾಶವಾಯಿತು. ಬೆಟ್ಟಗಳು ಅಲ್ಲಾಡಿದವು, ಭೂಮಿಯು ಬಾಯಿಬಿಟ್ಟಿತು. ಪ್ರತಿಯೊಂದು ಮನೆಯೂ ನೆಲಕ್ಕುರುಳಿ ಅನೇಕ ಜನರು ಸತ್ತರು. ಉಳಿದವರಿಗೆ ನಿಲ್ಲಲು ನೆರಳಿಲ್ಲದಂತಾಗಿದೆ.

ಜಪಾನಿನ ಮೇಲೆ ಬಾಂಬು

ಜಪಾನಿನ ರಾಜಧಾನಿಯಾದ ಟೋಕಿಯೋ ನಗರದ ಮೇಲೂ ಮತ್ತು ಯಾಕೋಹಾಮ ನಗರದಮೇಲೂ ಕಳೆದ 18ನೇ ತಾರೀಖಿನವರೆಗೆ ಅಮೆರಿಕದ ವಿಮಾನಗಳು ದಾಳಿ ನಡೆಸಿ ಬಾಂಬುಗಳನ್ನು ಹಾಕಿದವೆಂದೂ ಜನರಿಗೆಲ್ಲ ಮೊದಲೇ ತಕ್ಕ ಶಿಕ್ಷಣ ಕೊಟ್ಟಿರುವದರಿಂದ ಹೆಚ್ಚು ಮಂದಿಗೆ ಅಪಾಯವಾಗಲಿಲ್ಲವೆಂದೂ ಹೀಗೆ ದಾಳಿ ನಡೆಸಿದ ವಿಮಾನಗಳು ವಿಮಾನವಾಹಕನೌಕೆಗಳ ಮೇಲಿಂದ ಬಂದು ಮುತ್ತಿಗೆ ನಡೆಯಿಸಿರಬೇಕೆಂದೂ ಈ ನೌಕೆಗಳು ಜಪಾನ್ ಸಮುದ್ರತೀರದಲ್ಲಿಯೇ ಕೆಲಸಮಾಡುತ್ತಿರಬಹುದೆಂದೂ ಊಹಿಸಲಾಗಿದೆ.

ಮದರಾಸನ್ನು ಮಿಲಿಟರಿಗೆ ಒಪ್ಪಿಸುವದಿಲ್ಲ

ಮದರಾಸು ನಗರದಲ್ಲಿ ಮಿಲಿಟರಿ ಓಡಾಟವು ಹೆಚ್ಚಾಗಿದೆ. ಸಿವಿಲಿಯನರ ನಿವಾಸಕ್ಷೇತ್ರಗಳಾದಿಯಾಗಿ ನಗರದಲ್ಲಿ ಅನೇಕ ಕಡೆಗಳಲ್ಲಿ ಮಿಲಿಟರಿ ಸ್ಥಾನಗಳನ್ನು ಏರ್ಪಡಿಸಲಾಗಿದೆ. ಮದರಾಸಿನ ರಕ್ಷಣೆಗೆ ಅಗತ್ಯವೆಂದು ತೋರಿಬಂದ ಕೆಲಸಗಳನ್ನು ಮಿಲಿಟರಿಯವರು ಮಾಡುತ್ತಿರುವರಾದರೂ ಈ ವಿಚಾರದಲ್ಲೆಲ್ಲಾ ಸಿವಿಲ್ ಸರ್ಕಾರದ ಪೂರ್ಣ ಸಹಕಾರ ಪಡೆದೇ ವರ್ತಿಸುತ್ತಿದ್ದಾರೆ. ನಗರವನ್ನು ಮಿಲಿಟರಿಯವರಿಗೆ ಒಪ್ಪಿಸುವರೆಂದು ಹೊರಟಿರುವ ಸುದ್ದಿ ನಿರಾಧಾರವಾದುದೆಂದೂ ಈಗಿನ ಪರಿಸ್ಥಿತಿಯಲ್ಲಿ ಮಿಲಿಟರಿಗೆ ಒಪ್ಪಿಸುವ ಅವಶ್ಯಕತೆ ಇಲ್ಲವೆಂದೂ ತಿಳಿಸಲಾಗಿದೆ.

ಮೈಸೂರು ಸೈನ್ಯಪಡೆಗೆ ಸೇರಿ ಹೊರಗೆ ಹೊಡೆದಾಡುತ್ತಿರುವ ಮೈಸೂರು ಸೈನಿಕರ ಮಕ್ಕಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಕೆಲವು ಅನುಕೂಲಗಳನ್ನು ಕಲ್ಪಿಸಿರುತ್ತಾರೆ. ಅಂತಹ ಮಕ್ಕಳಿಗಾಗಿ ಮಾಧ್ಯಮಿಕ ಶಾಲೆಗಳಲ್ಲಿ ತಿಂಗಳಿಗೆ ೩ ರೂಗಳ ವಿದ್ಯಾರ್ಥಿ ವೇತನ ಬರುವ 54 ಸ್ಕಾಲರ್‌ಷಿಪ್‌ಗಳನ್ನು, ಹೈಸ್ಕೂಲುಗಳಲ್ಲಿ 6 ರೂ ವಿದ್ಯಾರ್ಥಿವೇತನದ 20 ಸ್ಕಾಲರ್‌ಷಿಪ್‌ಗಳನ್ನು ಫ್ರೀಷಿಪ್ ಸಮೇತ ಕೊಡಬೇಕೆಂದು ಸರ್ಕಾರದವರು ಆಜ್ಞೆಹೊರಡಿಸಿದ್ದಾರೆ. ಇದಲ್ಲದೆ ಫ್ರೀಷಿಪ್, ಅರ್ಧ ಫ್ರೀಷಿಪ್ ಮೊದಲಾದ ಇತರ ಸೌಕರ್ಯಗಳನ್ನೂ ಕಲ್ಪಿಸಿ ಕೊಟ್ಟಿದ್ದಾರೆ.

ಮದರಾಸ್ ನಗರದ ಪರಿಸ್ಥಿತಿ

ಮದರಾಸಿನ ಪರಿಸ್ಥಿತಿಯನ್ನು ಕುರಿತು ಅಲ್ಲಿಯ ಸಿವಿಲ್ ಡಿಫೆನ್ಸ್ ಕಮಿಷನರು ವಿವರಿಸುತ್ತ "ಯುದ್ಧ ಭೀತಿಯಿಂದ ಸುಮಾರು ೩ ಲಕ್ಷ ಜನ ನಾಗರಿಕರು ಮದರಾಸನ್ನು ಬಿಟ್ಟು ಹೋಗಿದ್ದಾರೆ. ಟ್ರಿಪ್ಲಿಕೇನ್ ಸಹಕಾರಸಂಘಕ್ಕೆ ಸರ್ಕಾರದವರು ಹಣಸಹಾಯಮಾಡಿದ್ದರಿಂದ ಅದರ ೫೭ ಶಾಖೆಗಳು ಮದರಾಸುನಗರದ ನಾನಾ ಕಡೆಗಳಲ್ಲಿ ಕೆಲಸಮಾಡುತ್ತಿವೆ. ಚಿಲ್ಲರೆ ಅಂಗಡಿಗಳಿಗೆ ಸಾಮಾನು ಒದಗಿಸಲು ದೊಡ್ಡ ಅಂಗಡಿಗಳೂ ಇವೆ ಕೆಲವು ದಿವಸ ಆಹಾರವಸ್ತುಗಳಿಗೆ ಕೊರತೆಯಾಯಿತು ಈಗ ಸಾಕಾದಷ್ಟು ಆಹಾರ ಪದಾರ್ಥಗಳು ಬರುತ್ತವೆ ಈಗ ಸಾಮಾನ್ಯವಾಗಿ ಎಲ್ಲರೂ ಮನೆಯವರನ್ನು ಬೇರೆ ಕಡೆಗೆ ಕಳುಹಿಸಿಬಿಟ್ಟಿದ್ದಾರೆ. ಅಡಿಗೆಯವರೂ ಪರಿಚಾರಕರೂ ಓಡಿಹೋಗಿದ್ದಾರೆ. ಅನೇಕ ಹೋಟೆಲುಗಳ ಮಾಲೀಕರು ಇನ್ನೂ ನಗರದಲ್ಲೇ ಇದ್ದರೂ ಅಡಿಗೆ ಮಾಡುವವರಿಲ್ಲದ್ದರಿಂದ ತೊಂದರೆಯಾಗಿದೆ ಅಸಂಖ್ಯ ಜನರು ನಗರವನ್ನು ತ್ಯಜಿಸಿಹೋಗಿರುವದರಿಂದ ಗಿರಾಕಿಗಳು ಮೊದಲಿನಷ್ಟು ಇಲ್ಲ ಆದರೂ 35 ಹೋಟೆಲುಗಳು ನಡೆಯುತ್ತಿವೆ ಇದರ ಜೊತೆಗೆ ಕಚೇರಿಗಳೂ ವ್ಯಾಪಾರಭವನಗಳವರೂ ತಮ್ಮ ಸ್ವಂತ ಹೋಟೆಲುಗಳನ್ನು ನಡೆಸುತ್ತಿದ್ದಾರೆ ಸರ್ಕಾರದವರಿಗೆ ಹೋಟೆಲು ನಡೆಸುವದು ಕಷ್ಟ ಅಡಿಗೆ ವಿಚಾರದಲ್ಲಿ ಅವರಿಗೇನೂ ಗೊತ್ತಿಲ್ಲ ಈ ಆಹಾರಸಮಸ್ಯೆಯನ್ನು ಹೋಟೆಲು ಮಾಲೀಕರೇ ಪರಿಹರಿಸಲು ಶಕ್ತರು ಎಂದು ಹೇಳಿದರು

ಜಪಾನಿಗೂ ಕಷ್ಟವಿದೆ

ಜಪಾನಿನ ನೌಕಾಬಲದಲ್ಲಿ ವಿಮಾನಗಳನ್ನು ಹೊರುವ ದೊಡ್ಡ ನೌಕೆಗಳು ನಾಲ್ಕು ಮಾತ್ರ ಇವೆ ಅವುಗಳನ್ನು ಮೀಸಲಾಗಿಟ್ಟು ಸಣ್ಣಪುಟ್ಟ ಹಡಗುಗಳನ್ನು ಉಪಯೋಗಿಸುವುದು ಜಪಾನಿನ ಪದ್ಧತಿಯಾಗಿದ್ದರೂ ಈಗ ಅದು ಈ ದೊಡ್ಡ ನೌಕೆಗಳನ್ನೇ ಉಪಯೋಗಿಸಬೇಕಾಗಿದೆ ಏಕೆಂದರೆ, ಸಿಂಗಪುರವು ಈಗ ಜಪಾನ್ ನೌಕೆಗಳ ಮೂಲಸ್ಥಾನವಾಗಿದ್ದು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮುಂಗಾವಲು ಸ್ಥಾನಗಳಾಗಿವೆ ಈ ಮುಂಗಾವಲುಸ್ಥಾನವಾದ ದ್ವೀಪಗಳು ಸಿಲೋನ್ ನೌಕಾಮೂಲದಿಂದ 900 ಮೈಲು ದೂರದಲ್ಲಿವೆ ಆದ್ದರಿಂದ ಜಪಾನು ತನ್ನ ದಾಳಿಯನ್ನು ಮುಂದುವರಿಸಲು ಈ ವಿಮಾನವಾಹಕ ನೌಕೆಗಳನ್ನೇ ಬಹುಮಟ್ಟಿಗೆ ನಂಬಬೇಕಾಗಿದೆ ಇವುಗಳೇನಾದರೂ ನಾಶಮಾಡಲ್ಪಟ್ಟರೆ ಜಪಾನು ಮುಂದೆ ನುಗ್ಗಲು ಅಸಾಧ್ಯವಾಗುವುದು ಇದಲ್ಲದೆ ಪೆಸಿಫಿಕ್ ಸಾಗರದಲ್ಲಿ ಅಮೆರಿಕದ ನೌಕಾಬಲವೊಂದಿದೆ ಎಂಬುದನ್ನು ಮರೆಯುವಂತಿಲ್ಲ ಈ ಬಲವು ಜಪಾನಿನ ಎಲ್ಲ ನೌಕಾಬಲಕ್ಕಿಂತಲೂ ಹೆಚ್ಚಾಗಿರುವುದು ಗಾಮ್ ಮತ್ತು ವೇಕ್ ದ್ವೀಪಗಳಂತಹ ಮುಂಗಾವಲು ಸ್ಥಳಗಳು ಅಮೇರಿಕದ ಕೈತಪ್ಪಿ ಹೋಗದೆ ಇದ್ದಿದ್ದರೆ ಈ ವೇಳೆಗೆ ಚೀನಾಸಮುದ್ರ ಕ್ಷೇತ್ರಗಳಲ್ಲಿ ಅಮೇರಿಕವು ಶತ್ರುವಿನ ಜಲಮಾರ್ಗಗಳನ್ನು ಕತ್ತರಿಸಿ ಹಾಕುತ್ತಿತ್ತು. ಅಮೆರಿಕವೇನೋ ಇಂದಿಲ್ಲ ನಾಳೆ ತನ್ನ ಅಪಾರ ಬಲವನ್ನು ಪ್ರಯೋಗಿಸುವುದು ನಿಶ್ಚಯ ! ಈ ಭಯದಿಂದಲೇ ಜಪಾನು ಶೀಘ್ರ ಜಯಗಳಿಸಲು ತನ್ನ ಸರ್ವ ಸಾಮರ್ಥ್ಯವನ್ನೂ ವಿನಿಯೋಗಿಸುತ್ತಿದೆಯೆಂದು ಹೇಳಲಾಗಿದೆ

ಜಪಾನರ ಬೇಡಿಕೆಯನ್ನು ಲವಾಲರು ತಳ್ಳಿ ಹಾಕಿದರು

ಮೆಡಗಾಸ್ಕರಿಗೆ ಜಪಾನಿನ ಮಿಲಿಟರಿ ಮಿಷನ್ ಒಂದು ಬರಲು ಅವಕಾಶ ಕೊಡಬೇಕೆಂಬುದಾಗಿ ಜಪಾನ್ ಸರಕಾರದವರು ಫ್ರೆಂಚ್ ಸರಕಾರವನ್ನು ಕೇಳಿದ್ದರು ಎಂ ಲವಾಲರು ಈ ವಿಚಾರದಲ್ಲಿ ಬರ್ಲಿನ್ನಿನ ಸಲಹೆ ಪಡೆದು ಆಗುವುದಿಲ್ಲವೆಂದು ಉತ್ತರವಿತ್ತಿದ್ದಾರೆ. ಮೊದಲಿನ ಏರ್ಪಾಡಿನಂತೆ ಡಚ್ ಇಂಡೀಸ್‌ನಲ್ಲಿ ಸಿಕ್ಕ ವಸ್ತುಗಳನ್ನು ಜಪಾನ್ ಮತ್ತು ಜರ್ಮನಿಗಳು ಹಂಚಿಕೊಳ್ಳಬೇಕೆಂದು ತೀರ್ಮಾನವಾಗಿತ್ತೆಂದೂ ಆದರೆ ನೈರುತ್ಯ ಪೆಸಿಫಿಕ್ಕಿನಲ್ಲಿ ಜಯವಾದಮೇಲೆ ಜಪಾನರು ಏಷ್ಯವೆಲ್ಲವೂ ಜಪಾನಿಗೆ ಮೀಸಲಾಗಿದೆ, ನಾಜಿಗಳು ಬೇಕಾಗಿದ್ದರೆ ಆ ಪ್ರಕರದಿಂದ ಲಾಭ ಹೊಂದಬಹುದು ಎಂದು ಹಿಟ್ಲರರಿಗೆ ತಿಳಿಸಿದರೆಂದು ಪ್ರಕಟವಾಗಿದೆ.

ಸರಕಾರದವರು ಪ್ರಜೆಗಳ ಆಸ್ತಿಗಳನ್ನು ವಶಪಡಿಸಿಕೊಳ್ಳಬಹುದು

ಭರತಖಂಡದ ರಕ್ಷಣೆಗಾಗಿಯೂ ಸಾರ್ವಜನಿಕ ಭದ್ರತೆಗಾಗಿಯೂ, ಯುದ್ಧವನ್ನು ಯಶಸ್ವಿಯಾಗಿ ನಡೆಯಿಸುವುದಕ್ಕಾಗಿಯೂ ಪ್ರಜೆಗಳ ಚರ ಸ್ಥಿರ ಆಸ್ತಿಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದೆಂದು ಇಂಡಿಯಾ ಸರಕಾರದ ಪ್ರಕಟನೆಯು ಹೊರಟಿರುತ್ತದೆ ಈ ಆಜ್ಞೆಯು ಧಾರ್ಮಿಕ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ

ಸಿಂಗಪುರದ ಪುನರ್ನಿರ್ಮಾಣ

ಜಪಾನರು ಸಿಂಗಪುರವನ್ನು ಪುನಃ ಹಿಂದಿನಂತೆ ರಚಿಸಲು ಪ್ರಯತ್ನಪಡುತ್ತಿದ್ದಾರೆ ಇಲ್ಲಿ ದೊರೆಯುವ ತವರನ್ನೂ ರಬ್ಬರನ್ನೂ ಸ್ವಪ್ರಯೋಜನಕ್ಕೆ ಒದಗಿಸಿಕೊಳ್ಳಲು ಸಿದ್ಧತೆಗಳಾಗಿವೆ ರೈಲ್ವೆ ಮಾರ್ಗಗಳನ್ನು ಸರಿಪಡಿಸಲು ಪ್ರಯತ್ನಗಳು ನಡೆಯುತ್ತಿವೆ ಮೋಟಾರ್ ಕಾರುಗಳನ್ನು ಯಾರೂ ಉಪಯೋಗಿಸದಂತೆ ನಿರ್ಬಂಧಿಸಿದ್ದಾರೆ ಖಾಸಗಿ ಜನರ ಮೋಟಾರುಗಳನ್ನೆಲ್ಲಾ ಜಪಾನ್ ಸೈನ್ಯಶಾಖೆಯವರು ವಶಪಡಿಸಿಕೊಂಡಿದ್ದಾರೆಂದೂ ಜನರ ಸಂಚಾರಕ್ಕೆ ರಿಕ್ಷಾಗಳನ್ನು ಮಾತ್ರ ಕೊಟ್ಟಿದ್ದಾರೆಂದೂ ಸುದ್ದಿಯಿದೆ ಜಪಾನ್ ಭಾಷೆಯನ್ನು ಕಲಿಸುವ ಶಾಲೆಗಳು ಇಷ್ಟರಲ್ಲೇ ಪ್ರಾರಂಭವಾಗಲಿವೆಯೆಂದು ಹೇಳಲಾಗಿದೆ

ಈಜಿಪ್ಟ್ ಮಾಜಿಪ್ರಧಾನರ ದಸ್ತಗಿರಿ

ಈಜಿಪ್ಟಿನ ಮಾಜಿ ಮಹಾಪ್ರಧಾನರಾದ ಅಲಿ ಮೆಹರ್ ಪಾಷಾರವರನ್ನು ದಸ್ತಗಿರಿಮಾಡಿದ ವಿಷಯದಲ್ಲಿ ಮಹಾಪ್ರಧಾನರಾದ ನಹಸ್ ಪಾಷಾರವರು ಶಾಸನಸಭೆಯಲ್ಲಿ ವಿವರವನ್ನು ತಿಳಿಸುತ್ತ ಅವರನ್ನು ದಸ್ತಗಿರಿಮಾಡಬೇಕೆಂದು ಯಾವ ವಿದೇಶ ಸರ್ಕಾರವೂ ಕೇಳಲಿಲ್ಲ ದೇಶದ ಹಿತದೃಷ್ಟಿಯಿಂದ ನಾವೇ ಹಾಗೆ ಮಾಡಬೇಕಾಯಿತು ಮೆಹರ್ ಪಾಷಾರವರು ತಮ್ಮ ಎಸ್ಟೇಟಿನಲ್ಲೇ ಇರುವದಾಗಿ ಮಾತುಕೊಟ್ಟಿದ್ದರು ಆದರೂ ಅವರು ಅನೇಕಸಾರಿ ಅದಕ್ಕೆ ವ್ಯತಿರಿಕ್ತವಾಗಿ ಅಲೆಕ್ಸಾಂಡ್ರಿಯಕ್ಕೆ ಹೋಗಿದ್ದರು ಈ ವಿಷಯದಲ್ಲಿ ಅವರನ್ನು ಪ್ರಶ್ನಿಸಿದ್ದಕ್ಕೆ, ತಮ್ಮ ಇಷ್ಟಬಂದಲ್ಲಿಗೆ ತಾವು ಹೋಗುವದಾಗಿಯೂ ಅದಕ್ಕಾಗಿ ತಮ್ಮನ್ನು ಏನುಬೇಕಾದರೂ ಮಾಡಬಹುದೆಂದೂ ಉತ್ತರವಿತ್ತರು ಆದ್ದರಿಂದ ಅವರನ್ನು ಈಗ ದಸ್ತಗಿರಿಮಾಡಿ ಅವರ ಎಸ್ಟೇಟಿನಲ್ಲೇ ಪೋಲೀಸು ಕಾವಲಿನಲ್ಲಿ ಇಟ್ಟಿರಲಾಗಿದೆ ಎಂದು ಹೇಳಿದರು.

ಜರ್ಮನರ ಹೊಸ ದಾಳಿ

ಬಿಸಿಲು ಏರುತ್ತಿರುವದರಿಂದ ರಷ್ಯಾ ರಣಾಂಗಣದಲ್ಲಿ ಜರ್ಮನರು ಮತ್ತೆ ಗುಂಪು ಗುಂಪಾಗಿ ದಾಳಿ ನಡೆಸಲು ಪ್ರಾರಂಭಿಸಿದ್ದಾರೆ. ಕಳೆದ ೮ ತಿಂಗಳುಗಳಿಗಿಂತ ಈಗ ಹೆಚ್ಚು ಹೆಚ್ಚಾಗಿ ವಿಮಾನಗಳನ್ನು ಉಪಯೋಗಿಸುತ್ತಿರುವರು ಜರ್ಮನರು ತಮ್ಮ ರಿಜರ್ವ್ ಸೈನ್ಯಗಳನ್ನು ಮುಂದಕ್ಕೆ ಬಿಟ್ಟುಕೊಂಡು ಯುದ್ಧ ಮಾಡುತ್ತಿರುವುದಾಗಿಯೂ ಆದರೆ ರಷ್ಯ ಸೈನ್ಯಗಳು ಶತ್ರುಗಳನ್ನು ಹಿಮ್ಮೆಟ್ಟಿಸುತ್ತಿರುವುದಾಗಿಯೂ ತಿಳಿಯುತ್ತದೆ

ಭಾರತದಲ್ಲಿ ಅಮೆರಿಕಾ ಸೈನ್ಯಪಡೆಗಳು

ಕರ್ನಲ್ ಜಾನ್‌ಸನ್‌ರವರ ಹೇಳಿಕೆ.

ಭಾರತದಲ್ಲಿ ಅಮೆರಿಕದ ರಾಯಭಾರಿಗಳಾಗಿರುವ ಕರ್ನಲ್ ಲೂಯಿ ಜಾನ್‌ಸನ್‌ರವರು ಭಾರತದ ವೃತ್ತಪತ್ರಿಕಾಪ್ರತಿನಿಧಿಗಳಮುಂದೆ ಈ ಕೆಳಗೆ ಕಂಡಂತೆ ಹಲವು ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದರು

"ಇಂದು ನಡೆಯುತ್ತಿರುವ ಯುದ್ಧವು ವಿಶ್ವದ ಯುದ್ಧವೆಂದೂ, ಕೇವಲ ಯೂರೋಪಿನ ಯುದ್ಧವಲ್ಲವೆಂದೂ, ಅಮೆರಿಕ ದೇಶವು ಭಾರತಕ್ಕೆ ಟೆಕ್ನಿಕಲ್ ಮತ್ತು ಮಿಲಿಟರಿ ನಿಯೋಗ ಗೋಷ್ಠಿಯೊಂದನ್ನು ಕಳುಹಿಸಿರುವುದನ್ನು ಗಮನಿಸಿದರೆ ಈ ಅಭಿಪ್ರಾಯವು ಸ್ಪಷ್ಟವಾಗುವುವೆಂದೂ, ಭಾರತಕ್ಕೆ ಅಮೆರಿಕನ್ ಸೈನ್ಯಪಡೆಗಳು ಆಗಲೇ ಬಂದಿವೆಯೆಂದೂ, ಇನ್ನೂ ಅಧಿಕ ಸಂಖ್ಯೆಯಲ್ಲಿ ಬರುತ್ತಿರುವುವೆಂದೂ, 'ಲೀಸ್ ಅಂಡ್ ಲೆಂಡ್' ಶಾಸನದ ಪ್ರಕಾರ ಭಾರತಕ್ಕೆ ಇಂದು ಅಮೆರಿಕವು ವಿಶೇಷವಾಗಿ ಸಹಾಯಮಾಡುತ್ತಿರುವುದೆಂದೂ, ಭಾರತದಲ್ಲಿರುವ ಅಮೆರಿಕ ಸೈನ್ಯ ಪಡೆಗಳ ವೆಚ್ಚವೆಲ್ಲವನ್ನೂ ಅಮೆರಿಕ ಸರ್ಕಾರವೇ ವಹಿಸುವುದೆಂದೂ, ಭಾರತದ ವಿಚಾರದಲ್ಲಿ ಅಮೆರಿಕಕ್ಕೆ ದುರುದ್ದೇಶವೇನೂ ಇಲ್ಲವೆಂದೂ, ವಿಶ್ವದ ಎಲ್ಲ ರಾಷ್ಟ್ರಗಳೂ ಸ್ವತಂತ್ರವಾಗಿರಬೇಕೆಂಬುದೇ ಅಮೆರಿಕದ ಉದ್ದೇಶವೆಂದೂ, ಫಿಲಿಪೈನ್ಸ್, ಕ್ಯೂಬ, ಮೊದಲಾದ ದೇಶಗಳಿಗೆ ಅಮೆರಿಕವು ಸ್ವಾತಂತ್ರ್ಯವನ್ನು ಕೊಟ್ಟಿರುವದೆಂದೂ, ದೂರದ ಪೂರ್ವದಲ್ಲಿ, ಸ್ವತಂತ್ರವಾದ, ಮತ್ತು ಬಲಯುತವಾದ ರಾಷ್ಟ್ರಗಳು ಇರಬೇಕೆಂದು ಅಮೇರಿಕವು ಬಯಸುವುದೆಂದೂ, ಅಮೇರಿಕದಲ್ಲಿ ಇಂದು ವಿಶೇಷವಾಗಿ ಸಂಗ್ರಾಮ ಸಲಕರಣೆಗಳನ್ನು ಉತ್ಪತ್ತಿಮಾಡುತ್ತಿರಲಾಗಿದೆಯೆಂದೂ, ಹಿಂದೆ ಅಮೇರಿಕದಲ್ಲಿ ಎಷ್ಟು ಮೋಟಾರುಗಳನ್ನು ಉತ್ಪತ್ತಿ ಮಾಡುತ್ತಿರಲಾಗುತ್ತಿತ್ತೋ ಇಂದು ಅಷ್ಟು ಟ್ಯಾಂಕುಗಳನ್ನು ಉತ್ಪತ್ತಿ ಮಾಡುತ್ತಿರಲಾಗಿದೆಯೆಂದೂ, ಭಾರತದಲ್ಲಿಯೂ ಕೂಡ ವಸ್ತುಗಳನ್ನು ಹೆಚ್ಚಾಗಿ ನಿರ್ಮಾಣ ಮಾಡುತ್ತಿರುವ ಪ್ರಮಾಣವು ಇನ್ನೂ ಹೆಚ್ಚಬೇಕೆಂದೂ, ಈ ಕೆಲಸದಲ್ಲಿ ಭಾರತಕ್ಕೆ ಸಹಾಯ ಮಾಡುವುದಕ್ಕಾಗಿಯೇ ಟೆಕ್ನಿಕಲ್ ನಿಯೋಗಗೋಷ್ಠಿಯೊಂದು ಬಂದಿರುವದೆಂದೂ, ಭಾರತದಲ್ಲಿ ಹಣವನ್ನು ಸೂರೆಗೊಳ್ಳಬೇಕೆಂಬ ಉದ್ದೇಶವು ಅಮೆರಿಕಾಕ್ಕೆ ಇಲ್ಲವೆಂದೂ" ನುಡಿದರು

ಜರ್ಮನಿಗೆ ಬಹಳ ನಷ್ಟ

ಜರ್ಮನ್ ಅಧಿಕಾರಿಗಳ ಹೇಳಿಕೆ

21 ನೆಯ ತಾರೀಖಿನ ದಿವಸ ನೆರವೇರಿದ ಹೆರ್ ಹಿಟ್ಲರರ ವರ್ಧಂತೀ ಕಾಲದಲ್ಲಿ ಜ|| ಡೀಟ್‌ಮಾರ್‌ರವರು ಸಂದೇಶ ಕಳಿಸುತ್ತ "ಹಿಂದಿನ ಯುದ್ಧದಲ್ಲಿ ಮಿತ್ರಸೇನೆಗಳೆಲ್ಲ ಸೇರಿ ಎಷ್ಟಿದ್ದವೋ ಅದಕ್ಕಿಂತ ರಷ್ಯಸೇನೆಯು ಈಗ ಹೆಚ್ಚಾಗಿದೆ ರಷ್ಯದ ಮೀಸಲು ಬಲವಂತೂ ಅಪಾರವಾಗಿದೆ ರಷ್ಯದಲ್ಲಿ ಚಳಿಗಾಲ ಬಹಳ ಬೇಗ ಪ್ರಾಪ್ತವಾಯಿತು ಚಳಿಯು ಇದ್ದಕ್ಕಿದ್ದ ಹಾಗೆಯೇ ಜರ್ಮನರನ್ನು ಆವರಿಸಿತು ಹಿಂದಿನ ಗಡಿನಾಡಿನವರೆಗೆ ಹಿಮ್ಮೆಟ್ಟಬೇಕೆಂದು ನಮ್ಮ ದಂಡನಾಯಕರು ಅಭಿಪ್ರಾಯಪಟ್ಟರು ಆದರೆ ಇಂತಹ ಕಠಿನ ಪರಿಸ್ಥಿತಿಯಲ್ಲಿ ಹೆರ್ ಹಿಟ್ಲರರು ದಂಡನಾಯಕರ ಸೂತ್ರವನ್ನು ವಹಿಸಿದರು ಎಷ್ಟೇ ನಷ್ಟವಾಗಲಿ ನಾವು ಆಕ್ರಮಿಸಿರುವ ಸ್ಥಾನಗಳನ್ನು ಉಳಿಸಿಕೊಳ್ಳಬೇಕೆಂದು ಅವರು ಯತ್ನಿಸಿದರು ಅವರು ಮಾಡಿದ್ದು ಸರಿಯಾಗಿಯೇ ಇದೆ ನಮ್ಮ ಸೇನೆಗಳು ಅನುಭವಿಸಿದ ಕಷ್ಟವು ಊಹೆಗೆ ನಿಲುಕದಾಗಿದೆ ಆದರೆ ನಮ್ಮ ಸೇನೆಗಳು ಮಾತ್ರ ನಾಶವಾಗಲಿಲ್ಲ" ಎಂದು ತಿಳಿಸಿದ್ದಾರೆ

ಸ್ವೀಕಾರ.

ರಾಯಚೂರು ಡಿ|| ಬಿಚ್ಚಾಲೆ ಸಾವಿರದೇವರು ಶ್ರೀ ಮಹಾಂತೇಶ್ವರಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಚೈತ್ರ ಬ|| ೫ ಸೋಮವಾರ ದಿವಸ ಮಹಾರಥೋತ್ಸವವು ನೆರವೇರಿದ ಸಮಯದಲ್ಲಿ ಆ ಮಠಾಧಿಪತಿಗಳಾದ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯರು ಪ್ರಭಾ ಪ್ರೋತ್ಸಾಹಕ್ಕೋಸ್ಕರ 2 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೫ನೆಯ ಪುಟದಿಂದ ಮುಂದುವರಿದುದು].

ವುದಕ್ಕೂ ಅದರಿಂದ ಅಡ್ಡಿ. ಆದಕಾರಣ, ದೀಪಗಳನ್ನು ಆರಿಸಿ ಕತ್ತಲು ಕವಿದಿರುವಂತೆ ಮಾಡುವುದು ಅಪಹಾಸ್ಯಕ್ಕೂ ಗುರಿಯಾಗಿದೆ. ಈ ಸಂದರ್ಭದಲ್ಲಿ ಒಂದು ವಿನೋದವು ನನಗೆ ನೆನಪಾಗುತ್ತದೆ. "ನಿನ್ನ ಮಗುವೇಕೆ ಕಪ್ಪಾಗಿದೆ ?" ಎಂಬ ಪ್ರಶ್ನೆಗೆ ಒಬ್ಬ ಹುಡುಗಿಯು, "ಊರಿನ ದೀಪಗಳೆಲ್ಲ ಆರಿಹೋಗಿದ್ದಾಗಿನ ಕತ್ತಲೆಯೊಡನೆ ಅದಕ್ಕೂ ಕಪ್ಪುಬಣ್ಣ ಬಂದಿರಬೇಕು" ಎಂದು ಉತ್ತರ ಕೊಟ್ಟಳಂತೆ. ನಗರವು ಕತ್ತಲಾಗಿರುವುದಕ್ಕೆ ಬದಲಾಗಿ ಬಹಳ ಪ್ರಕಾಶದಿಂದ ಕೂಡಿದ ದೀಪಗಳಿಂದ ತುಂಬ ಬೆಳಕು ಬೀಳುವಂತಿದ್ದರೆ, ಶತ್ರು ವಿಮಾನಗಳ ಹಾವಳಿಯನ್ನು ಅಡಗಿಸಲು ಸಹಾಯವೆಂಬ ಅಭಿಪ್ರಾಯವೂ ಉಂಟು. ಮುಂಬಯಿ, ಕಲ್ಕತ್ತ, ಮದರಾಸು, ಮುಂತಾದ ಭರತಖಂಡದ ಭಾರಿ ಭಾರಿ ನಗರಗಳಲ್ಲಿ ಪೂರ್ತಿಯಾಗಿ ಕತ್ತಲು ಕವಿಯುವಂತೆ ಮಾಡುವ ಮಬ್ಬು ಬೆಳಕಿನ ಏರ್ಪಾಡು ನಡೆದಿದೆ. ಬೀದಿಯ ದೀಪಗಳ ಬೆಳಕು ಮೇಲ್ಭಾಗಕ್ಕೆ ಹೋಗದಂತೆ ಆವರಣಗಳನ್ನು ಕಲ್ಪಿಸಿ, ಕಟ್ಟಡಗಳೊಳಗಿನ ದೀಪಗಳಿಗೆ ಮೇಲಿನ ಮರೆಗಳನ್ನು ಹಾಕಿ, ವಿಮಾನಗಳಿಂದ ನೋಡಿದರೆ ನಗರವು ಸ್ಪಷ್ಟವಾಗಿ ಕಾಣಿಸದೆ ಮಬ್ಬು ಕವಿದಂತೆ ಕಾಣುವುದು ಅದರ ಫಲಿತಾಂಶ. ಒಳನಾಡಿನಲ್ಲಿರುವ ಬೆಂಗಳೂರಿನಂಥ ನಗರಗಳಿಗೆ ಹೊಂದುವ ಅತ್ಯುತ್ತಮವಾದ ವಿಧಾನವು, ಬೀದಿಗಳ ದೀಪಗಳನ್ನೆಲ್ಲಾ ಆರಿಸಿ, ನಗರವಾಸಿಗಳು ಮನೆಯೊಳಗಿನ ದೀಪಗಳಿಗೆ ಮೇಲ್ಭಾಗಕ್ಕೆ ಮರೆಗಳನ್ನು (ಎಂದರೆ, ಷೇಡುಗಳನ್ನು) ಹಾಕುವುದನ್ನು ಕಲಿಸುವುದು. ಇದರಿಂದ ಜನರಿಗೆ ಅಸಮಾಧಾನವಾಗುವುದೂ ಇಲ್ಲ. ಅವರು ಮನೆಯೊಳಗಿರುವಾಗಲೂ ಕತ್ತಲೆಯಲ್ಲಿರಬೇಕಾದುದು ತಪ್ಪುವುದೇ ಅದಕ್ಕೆ ಕಾರಣ

೭. ಯಾರಿಗೂ ಮೊದಲೇ ಗೊತ್ತಾಗದಂತೆ ಹಠಾತ್ತಾಗಿ ಬಂದು ಬಾಂಬುಗಳನ್ನು ಹಾಕುವುದೇ ವಿಮಾನದಾಳಿಗಳ ಅತ್ಯಂತ ಮುಖ್ಯವಾದ ಗುರಿ. ಆದರೆ, ಅದಕ್ಕೆ ಅವಕಾಶ ಹೆಚ್ಚಾಗಿದ್ದಷ್ಟೂ ಶತ್ರುಗಳ ವಿಮಾನದಾಳಿಗಳಿಗೆ ಮೇಲುಗೈ. ಆದಕಾರಣ, ದಾಳಿ ನಡೆಯಿಸಲು ವಿಮಾನಗಳು ಬರುತ್ತಿರುವುದರ ಸೂಚನೆಯನ್ನು ತಿಳಿದುಕೊಂಡು ಜನರಿಗೆ ಎಚ್ಚರಿಕೆ ಕೊಡುವ ದಕ್ಷತೆಯುಳ್ಳ ಸಿಬ್ಬಂದಿಯು ಇರಬೇಕಾದುದು ಬಹಳ ಅವಶ್ಯಕ. ಶತ್ರು ವಿಮಾನಗಳು ಬರುವ ಸೂಚನೆಯೇ ಜನರಿಗಿಲ್ಲದೆ ಅವು ಆಕಸ್ಮಿಕವಾಗಿ ಬಂದು ಬಾಂಬುಗಳನ್ನು ಹಾಕಿಬಿಟ್ಟರೆ, ಬಹಳ ನಷ್ಟಕ್ಕೆ ಕಾರಣ, ಅಲ್ಲದೆ ಸಾಮಾನ್ಯ ಪ್ರಜೆಗಳಿಗೆ ಗಾಬರಿಯಾಗಿ ಅವರು ಅಧೀರರಾಗುತ್ತಾರೆ. ಆದರೆ ಅವು ಬರುವುದರ ಸುಳಿವನ್ನರಿತು ಮೊದಲೇ ಜನರಿಗೆ ಸೂಚನೆ ಕೊಟ್ಟದ್ದಾದರೆ, ಅವರು ಆತ್ಮರಕ್ಷಣೆಮಾಡಿಕೊಳ್ಳಲು ಪ್ರಯತ್ನಿಸುವುದಕ್ಕೆ ಅನುಕೂಲ. ಅಲ್ಲದೆ, ಅವರಿಗೆ ಅಷ್ಟು ಗಾಬರಿಯಾಗುವುದಕ್ಕೂ ಅವಕಾಶವಿರುವುದಿಲ್ಲ. ಇಂಗ್ಲೆಂಡಿನಲ್ಲಿ ಜನರಿಗೆ ಹೀಗೆ ಎಚ್ಚರಿಕೆ ಕೊಡುತ್ತಿರುವುದಕ್ಕಾಗಿಯೇ ಒಂದು ಇಲಾಖೆಯು ಏರ್ಪಟ್ಟಿದೆ. ಸಮುದ್ರ ತೀರದಲ್ಲಿ ಅದಕ್ಕಾಗಿ ಕಾವಲಾಗಿದ್ದು ವಿಮಾನಗಳು ಬರುವುದನ್ನು ಅವುಗಳು ಇನ್ನೂ ಬಹು ದೂರದಲ್ಲಿರುವಾಗಲೇ ಯಂತ್ರಸಾಧನೆಗಳಿಂದ ಅರಿತು ಜನರಿಗೆ ತಿಳಿಸುವ ಅಧಿಕಾರಿ ವರ್ಗದವರು ನೇಮಕವಾಗಿದ್ದಾರೆ. ಭರತಖಂಡದಲ್ಲಿ ಕೂಡ ದೇಶರಕ್ಷಣೆ ಇಲಾಖೆಯವರು ಈ ಬಗೆಯ ಅಧಿಕಾರಿಗಳನ್ನು ಈಗಾಗಲೇ ನೇಮಕಮಾಡಿದ್ದಾರೆ. ಜೊತೆಗೆ "ಜೋನಿಂಗ್" ವಿಧಾನವನ್ನು ಅನುಸರಿಸಿ ಪ್ರದೇಶ ಪ್ರದೇಶವಾರಾಗಿ ಎಚ್ಚರಿಕೆ ಕೊಡುವ ವ್ಯವಸ್ಥೆಯು ನಡೆದಿದೆ. ಯಾವ ಯಾವ ಪ್ರದೇಶಗಳಿಗೆ ಶತ್ರು ವಿಮಾನಗಳು ಬರುತ್ತಿರುವಂತೆ ತೋರುವುದೋ ಅಲ್ಲಿಗೆ ಮಾತ್ರ ಎಚ್ಚರಿಕೆ ಕೊಡಲು ಇದರಿಂದ ಅನುಕೂಲ. ಒಂದು ನಗರವನ್ನು ಹಲವು ಭಾಗಗಳಾಗಿ ವಿಭಾಗಿಸಿ, ವಿಮಾನದಾಳಿ ನಡೆಯುವ ಸಂಭವವುಂಟಾದಾಗಲೆಲ್ಲಾ "ಸೈರನ್" ತುತೂರಿಯ ಸಂಕೇತ ಧ್ವನಿಯಿಂದ ಊರಿಗೆ ವಿಮಾನದಾಳಿಯ ಅಪಾಯವು ಒದಗುತ್ತಲಿರುವ ಸೂಚನೆಯನ್ನು ಜನರೆಲ್ಲರಿಗೂ ಕೊಡಬಹುದು. ಅದರ ಜೊತೆಗೆ ನಗರದ ನಾನಾ ಪ್ರದೇಶಗಳ ಅಧಿಕಾರಿಗಳೂ ತಮ್ಮ ತಮ್ಮ ಪ್ರದೇಶದಲ್ಲಿ ಆ ಸೂಚನೆಯನ್ನು ಜನರಿಗೆ ತಿಳಿಸಲೂಬಹುದು. ದೊಡ್ಡ ದೊಡ್ಡ ನಗರಗಳಲ್ಲಿ ಈ ವಿಧಾನವು ಅತ್ಯಂತ ಪ್ರಯೋಜನಕರವಾಗಿ ಕಂಡುಬಂದಿದೆ. ಹೀಗೆ ಕೊಡಲ್ಪಡುವ ಎಚ್ಚರಿಕೆಯ ಸಂಕೇತಗಳು ಜನರಿಗೆ ಪರಿಚಯವಾಗಿ ಜನರು ಅವುಗಳು ಬಂದಾಗ ಹೇಗೆ ವರ್ತಿಸಬೇಕೆಂಬ ವಿಷಯದಲ್ಲಿ ಮೊದಲೇ ನಿರ್ಧರವಾಗಿರುವ ವಿಧಾನಕ್ಕನುಸಾರವಾಗಿ ನಡೆದುಕೊಂಡರೆ, ಗಾಬರಿಗೂ ನಷ್ಟಕ್ಕೂ ಹೆಚ್ಚೇನೂ ಕಾರಣವಿಲ್ಲವೆಂದೂ, ನಷ್ಟವು ಅತ್ಯಂತ ಕಡಮೆಯಾಗಿರುತ್ತದೆಂದೂ ಈಗ ಕಂಡುಬಂದಿದೆ. ಆದರೆ, ಎಷ್ಟೇ ಜಾಗರೂಕತೆಯಿಂದಿದ್ದರೂ ಒಂದೊಂದು ವೇಳೆ ಶತ್ರುವಿಮಾನಗಳು ಬರುತ್ತಿರುವುದನ್ನು ಮೊದಲೇ ತಿಳಿದುಕೊಂಡು ಸೂಚನೆ ಕೊಡುವುದು ಸಾಧ್ಯವಿರುವುದಿಲ್ಲ ಹಾಗಿರುವ ಸಂದರ್ಭಗಳಿಗೂ ಸಿದ್ಧವಾಗಿರಬೇಕಾಗುತ್ತದೆ. ಶಿಕ್ಷಣ ಸಂಯಮವೂ, ಪೂರ್ವಸಿದ್ಧತೆಯೂ ಪ್ರಯೋಜನಕ್ಕೆ ಬರುವುದು ಅಂಥ ಸನ್ನಿವೇಶಗಳಲ್ಲಿ ಮಾತ್ರವೇ. ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳನ್ನು ಮಾಡುವುದರಲ್ಲಿ ಹಗಲೂ ರಾತ್ರಿಯೂ ಕಾವಲಿರುವ ವ್ಯವಸ್ಥೆಯು ನಡೆಯಬೇಕಾದುದೂ, ನಗರವನ್ನು ಬೇರೆ ಆಡಳಿತ ಪ್ರದೇಶಗಳಾಗಿ ವಿಭಾಗಿಸಿ ಕೆಲಸ ನಡೆಯಿಸಬೇಕಾದುದೂ ಅವಶ್ಯಕವಾಗಿರುವುದು ಅದರಿಂದಲೇ.

೮. ವಿಮಾನದಾಳಿ ನಡೆಯುವಾಗ ಜನರ ಕಳವಳವೂ ಗಾಬರಿಯೂ ಬಹಳ ಹೆಚ್ಚಾಗಿರುತ್ತವೆ. ಆ ಸನ್ನಿವೇಶದಲ್ಲಿ ಕೆಲಸ ಮಾಡಲು ಸ್ವಲ್ಪವೂ ಲೋಪಕ್ಕೆ ಅವಕಾಶವಿಲ್ಲದೆ ಪೂರ್ಣವಾಗಿರುವ ಸಾಧನಗಳು ಏರ್ಪಟ್ಟಿರಬೇಕು. ಮುಖ್ಯವಾಗಿ ಜನರ ಕಳವಳವನ್ನು ಹೋಗಲಾಡಿಸುವುದಕ್ಕೂ, ಬಾಂಬುಗಳಿಂದ ಬೆಂಕಿ ಹತ್ತಿಕೊಂಡರೆ ಅದನ್ನು ಆರಿಸುವುದಕ್ಕೂ ಮತ್ತು ಬಾಂಬು ಬಿದ್ದಾಗ ಗಾಜಿನ ಚೂರು ಮುಂತಾದುವು ರಭಸದಿಂದ ಸಿಡಿಯುವುದೇ ಮೊದಲಾದ ರೀತಿಗಳಿಂದ ಅನಾಹುತಕ್ಕೆ ಗುರಿಯಾದವರಿಗೆ ಅದನ್ನು ತಪ್ಪಿಸುವುದಕ್ಕೂ ತಕ್ಕ ಏರ್ಪಾಡುಗಳು ನಡೆದಿರಬೇಕಾದುದು ಅವಶ್ಯಕ. ಆದುದರಿಂದ, ಸೈನ್ಯಕ್ಕೆ ಸೇರಿದವರನ್ನು ಬಿಟ್ಟು ಇತರ ಸಾಮಾನ್ಯ ಪ್ರಜೆಗಳ ಹತೋಟಿ, ಬೆಂಕಿಯನ್ನಾರಿಸುವ ವ್ಯವಸ್ಥೆ, ಮತ್ತು ಚಿಕಿತ್ಸೆ ಏರ್ಪಾಡು-ಇವು ಬಹಳ ಮುಖ್ಯ. ಇವಕ್ಕೆ ಈಗ ನಮ್ಮ ದೇಶದ ನಾನಾ ನಗರಗಳಲ್ಲಿ ಎಷ್ಟುಮಟ್ಟಿನ ಅನುಕೂಲವಿದೆಯೆಂಬುದನ್ನು ಪರಿಶೀಲಿಸಿ ನೋಡಿದರೆ, ಸೌಕರ್ಯಗಳು ಈಗ ತೀರ ಕಡಮೆಯಾಗಿರುವುದು ಗೊತ್ತಾಗುತ್ತದೆ ಬೆಂಕಿಯನ್ನಾರಿಸ ಪ್ರದೇ ಮುಂತಾದ ಕೆಲಸಗಳಿಗೆ ಈಗಿರುವ ಸಿಬ್ಬಂದಿಯೂ ಮತ್ತು ಸಾಧನ ಸಲಕರಣೆಗಳೂ ತಕ್ಕಷ್ಟು ದಕ್ಷತೆಯುಳ್ಳವುಗಳಾಗಿರುವಂತೆ ಏರ್ಪಾಡು ಮಾಡುವುದು ಮೊದಲನೆಯ ಕೆಲಸ. ವಿಮಾನ ದಾಳಿಗಳ ವಿಪತ್ತೇನಾದರೂ ನಡೆಯುವುದಾದರೆ ಆಗ ಎಂಥೆಂಥ ಸನ್ನಿವೇಶಗಳು ಒದಗಬಹುದು, ಅವುಗಳನ್ನೆದುರಿಸಿ ಕೆಲಸ ನಡೆಯಲು ಯಾವಯಾವ ಸಿಬ್ಬಂದಿಗಳು ಬೇಕು—ಎಂಬುದನ್ನು ಪರ್ಯಾಲೋಚಿಸಿ ಸ್ವಯಂಸೇವಕರನ್ನು (ಎಂದರೆ, ವಾಲಂಟಿಯರುಗಳನ್ನು) ನೇಮಕಮಾಡಿ ಅವರು ತಮ್ಮ ತಮ್ಮ ಕರ್ತವ್ಯಗಳನ್ನು ನೆರವೇರಿಸುವಂತೆ ಶಿಕ್ಷಣಕೊಟ್ಟು, ಅವರಿಗೆ ಅವಶ್ಯವಾದ ನಾನಾ ಸಾಧನ ಸಲಕರಣೆಗಳನ್ನೂ ಒದಗಿಸುವುದು, ಅನಂತರ ನಡೆಯಬೇಕಾದ ಕೆಲಸ. ಹೀಗೆ ಸಿದ್ಧವಾದ ಸ್ವಯಂಸೇವಕರ (ಎಂದರೆ, ವಾಲಂಟಿಯರುಗಳ) ದಳಗಳನ್ನು ಒಂದು ನಗರದ ನಾನಾ ಪ್ರದೇಶಗಳಿಗೂ ನಾನಾ ಕಾರ್ಯಗಳಿಗೂ ಹಂಚಿಹಾಕಿ ಕೆಲಸಕ್ಕೆ ನೇಮಕ ಮಾಡಬೇಕು, ಹಾಗೆ ಹಂಚುವುದರಲ್ಲಿ ಆಯಾ ಪ್ರದೇಶಗಳ ಸ್ವಭಾವ ಮತ್ತು ಅವರವರ ಕರ್ತವ್ಯಗಳ ಸ್ವಭಾವವನ್ನು ಅನುಸರಿಸಿ ಆ ರೀತಿ ಮಾಡಬೇಕು ಒಂದು ದೊಡ್ಡ ನಗರದಲ್ಲಿ ಮಾಡತಕ್ಕ ವಿಮಾನ ದಾಳಿ ಎಚ್ಚರಿಕೆ ಏರ್ಪಾಡುಗಳು ಸಾರ್ಥಕವಾಗಬೇಕಾದರೆ, ಮುಖ್ಯಾಧಿಕಾರ ವರ್ಗದವರು ಸಲಹೆಗಳನ್ನು ಕೊಡುವ ಅಧಿಕಾರವನ್ನು ತಮ್ಮಲ್ಲಿಟ್ಟುಕೊಂಡು, ಕೆಲಸಮಾಡುವುದನ್ನು ನಗರದ ಆಯಾ ಪ್ರದೇಶಗಳ ಜನರ ಅಧಿಕಾರಕ್ಕೇ ಬಿಟ್ಟುಕೊಡುವುದು ತೀರ ಅಗತ್ಯ.

ಎ. ಆರ್. ಪಿ ಕಂಟ್ರೋಲರು

೯ ಪ್ರತಿಯೊಂದು ನಗರಕ್ಕೂ ವಿಮಾನದಾಳಿ ಎಚ್ಚರಿಕೆ ಏರ್ಪಾಡನ್ನು ನೋಡಿಕೊಳ್ಳಲು ಒಬ್ಬರು ಎ. ಆರ್ ಪಿ. ಕಂಟ್ರೋಲರ್ ಎಂಬ ಅಧಿಕಾರಿಯವರು ನೇಮಕವಾಗಿದ್ದು ಆತನ ಕೆಳಗೆ ಆ ನಗರದಲ್ಲಿ ಏರ್ಪಡಿಸಿರುವ ನಾನಾ ಆಡಳಿತ ಪ್ರದೇಶಗಳಲ್ಲಿ ಆ ಏರ್ಪಾಡನ್ನು ನೋಡಿಕೊಳ್ಳುವ ಪ್ರಜಾವರ್ಗದವರೆಲ್ಲರೂ ಕೆಲಸಮಾಡಬೇಕು ಹೀಗೆ ಒಂದೊಂದು ಆಡಳಿತ ಪ್ರದೇಶಕ್ಕೆ (ಎಂದರೆ, ಸೆಕ್ಟರಿಗೆ) ನೇಮಕವಾಗಿರುವವರೂ ತಮ್ಮ ತಮ್ಮ ಆಡಳಿತ ಪ್ರದೇಶಕ್ಕೆ ಸಂಬಂಧಪಟ್ಟ ಕಾರ್ಯಕಲಾಪಗಳನ್ನು ತಾವು ತಾವೇ ನಿರ್ವಹಿಸಿಕೊಂಡು ಹೋಗಬೇಕು ನಗರದ ಈ ಆಡಳಿತ ಪ್ರದೇಶಗಳಲ್ಲಿ ಕೆಲಕೆಲವು ಸೇರಿ ಒಂದೊಂದು ಡಿವಿಜನ್ ಆಗಿರುತ್ತದೆ. ಒಂದೊಂದು ಡಿವಿಜನ್ನಿನ ಮುಖ್ಯಾಧಿಕಾರಿಗೂ ವಾರ್ಡನ್ ಎಂದು ಹೆಸರು ಆತನು ವಿಮಾನದಾಳಿಗಳ ಎಚ್ಚರಿಕೆ ಏರ್ಪಾಡಿನ ಸಂಬಂಧದಲ್ಲಿ ಅತ್ಯಂತ ಮುಖ್ಯವಾದ ಅಧಿಕಾರಿ. ಆತನು ಕೆಲವರು ಹೆಡ್ ವಾರ್ಡನರುಗಳ ಅಥವಾ ಗ್ರೂಪ್ ವಾರ್ಡನರುಗಳ ಸಹಾಯದಿಂದ ಕೆಲಸ ನಡೆಯಿಸಬಹುದು. ನಗರದ ನಾನಾ ಡಿವಿಜನ್ನುಗಳ ವಾರ್ಡನರುಗಳೆಲ್ಲರ ಮೇಲೆ ಚೀಫ್ ವಾರ್ಡನ್ ಎಂಬ ಅಧಿಕಾರಿಯು ಇರುವನು. ಡಿವಿಜನ್ನುಗಳ ವಾರ್ಡನರುಗಳಲ್ಲಿ ಪ್ರತಿಯೊಬ್ಬನೂ ಚೀಫ್ ವಾರ್ಡನ್ ಹತೋಟಿಗೊಳಪಟ್ಟದ್ದರೂ, ತನ್ನ ಡಿವಿಜನ್ ಸಂಬಂಧವಾಗಿ ವಿಮಾನದಾಳಿ ಎಚ್ಚರಿಕೆಗಳ ಏರ್ಪಾಡುಗಳು ಅವಶ್ಯವಾದಮಟ್ಟಿಗೆ ದಕ್ಷತೆಯಿಂದಿರುವ ವಿಚಾರದಲ್ಲಿ ಅವನು ಜವಾಬ್ದಾರನಾಗಿರುತ್ತಾನೆ. ಅಲ್ಲದೆ, ಆ ಏರ್ಪಾಡುಗಳ ವ್ಯವಸ್ಥೆಯನ್ನು ತನಗೆ ಸೂಕ್ತತೋರಿದ ಮಾರ್ಗಗಳಲ್ಲಿ ನಡೆಯಿಸಲು ಆತನು ಸ್ವತಂತ್ರನಾಗಿರುತ್ತಾನೆ ಆದರೆ, ವಿಮಾನದಾಳಿ ನಡೆಯುವಾಗ್ಗೆ ಮಾತ್ರ ವಾರ್ಡನ್ ಕಚೇರಿಗಳು "ಕಂಟ್ರೋಲ್ ರೂಂ" ಎಂಬ ಹತೋಟಿ ಕಚೇರಿಯ ಮೂಲಕವೂ ಮತ್ತು "ರಿಪೋರ್ಟ್ ರೂಂ" ಎಂಬ ವರದಿ ಕಚೇರಿಯ ಮೂಲಕವೂ ಎ. ಆರ್. ಪಿ. ಕಂಟ್ರೋಲರವರೊಡನೆ ನೇರವಾಗಿ ವ್ಯವಹರಿಸುತ್ತ, ಅವರು ಅಪ್ಪಣೆ ಮಾಡಿದಂತೆ ಕೆಲಸಮಾಡಬೇಕು. ಎ ಆರ್. ಪಿ. ಕಂಟ್ರೋಲರವರು ವಿಮಾನದಾಳಿ ನಡೆಯುವಾಗ್ಗೆ ನಗರದಲ್ಲಿ ನೆರವೇರಬೇಕಾದ ನಾನಾ ಕಾರ್ಯಗಳ ಅಧಿಕಾರಿಗಳ ಪ್ರತಿನಿಧಿಗಳ ಒಂದು ಮಂಡಲಿಯ ("ಪ್ಯಾನೆಲ್") ಸಹಾಯದಿಂದಲೂ, ನಗರದ ನಾನಾ ಆಡಳಿತ ಪ್ರದೇಶಗಳ (ಎಂದರೆ ಸೆಕ್ಟರುಗಳ) ಕಾರ್ಯಾಲಯಗಳಿಗೆ "ಕಂಟ್ರೋಲ್ ರೂಂ" ಹತೋಟಿ ಕಚೇರಿಯಿಂದ ಟೆಲಿಫೋನ್ ಮೂಲಕ ಅನುಜ್ಞೆಗಳನ್ನು ಕಳುಹಿಸುವುದರಿಂದಲೂ ಕೆಲಸ ನಡೆಯಿಸಬೇಕು. ಒಂದು ಮುತ್ತಿಗೆಯ ಕಾಲದಲ್ಲಿ ಹೇಗೆ ಒಬ್ಬ ಸೇನಾನಾಯಕನು ತನ್ನ ಕಸಬೆಯ ಕಚೇರಿಯಿಂದ ಅನುಜ್ಞೆಗಳನ್ನು ಕಳುಹಿಸುತ್ತ ತನ್ನ ಸೈನಿಕರಿಗೆ ಸಲಹೆಗಳನ್ನು ಸೂಚಿಸುವನೋ ಅದೇ ರೀತಿ, ಎ ಆರ್. ಪಿ. ಆಫೀಸರವರೂ ಕೂಡ "ಕಂಟ್ರೋಲ್ ರೂಂ" ಎಂಬ ಹತೋಟಿ ಕಚೇರಿಯಿಂದ ಅನುಜ್ಞೆಗಳನ್ನು ಕಳುಹಿಸುತ್ತ ಕೆಲಸವನ್ನು ನಿರ್ವಹಿಸಬೇಕು. ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳು ಸರಿಯಾಗಿ ನಡೆದು ಅಭ್ಯಾಸವಾಗಿರುವ ಪಕ್ಷಕ್ಕೆ, ವಿಮಾನದಾಳಿ ನಡೆದಾಗ್ಗೆ ಹೇಗೆ ಕೆಲಸಮಾಡಬೇಕೆಂದು ಮೊದಲೇ ನಿರ್ಧರಿತವಾದ ರೀತಿಯಲ್ಲಿ ಗೊತ್ತಾಗಿರುವ ಮೇರೆಗೆ ಒಬ್ಬರೇ ಅಧಿಕಾರಿಯಂತಾಗಿ ಕೂಡಿ ನಗರ ರಕ್ಷಣೆಯ ಕಾರ್ಯವನ್ನು ನಿರ್ವಹಿಸುವುದೂ, ನಗರದ ಯಾವ ಭಾಗಕ್ಕೆ ಹೇಗೆ ಸಹಾಯವನ್ನೊದಗಿಸಬೇಕೋ ಹಾಗೆ ಸಹಾಯವನ್ನೊದಗಿಸಲು ಸಾಧನಸಂಪತ್ತುಗಳನ್ನು ವಿಹಿತರೀತಿಯಲ್ಲಿ ಉಪಯೋಗಿಸಿ ದಕ್ಷತೆಯಿಂದ ಕೆಲಸ ಮಾಡುವುದೂ ಸಾಧ್ಯವಾಗುವುದರಲ್ಲಿ ಸಂದೇಹವಿಲ್ಲ

ಎರಡು ಮುಖ್ಯ ಅಂಗಗಳು.

೧೦ ನಗರ ರಕ್ಷಣೆಯ ವ್ಯವಸ್ಥೆಗೆ ಎರಡು ಅಂಗಗಳು: ಒಂದು, ವರದಿಯ ಸಿಬ್ಬಂದಿ; ಮತ್ತೊಂದು, ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳ (ಎ. ಆರ್. ಪಿ.) ಸಿಬ್ಬಂದಿಗಳ ಸಮೂಹ. ವರದಿಯ ಸಿಬ್ಬಂದಿಯಲ್ಲಿ ವಿಮಾನದಾಳಿ ವಾರ್ಡನುಗಳೆಲ್ಲ ಸೇರಿರುತ್ತಾರೆ. ಸಾರ್ವಜನಿಕ ಮುಖಂಡರುಗಳು ಆ ವಾರ್ಡನುಗಳಾಗಿ ನೇಮಕವಾಗಿರುತ್ತಾರೆ. ತಮ್ಮ ತಮ್ಮ ಅಧಿಕಾರಕ್ಕೆ ಒಳಪಟ್ಟಿರುವ ನಗರಭಾಗಗಳಲ್ಲಿ ಅವರುಗಳೇ ವಿಮಾನದಾಳಿ ಎಚ್ಚರಿಕೆಯ ಆಡಳಿತವನ್ನು ನಿರ್ವಹಿಸತಕ್ಕವರು. ವಿಮಾನದಾಳಿಯು ನಡೆಯುವ ಸೂಚನೆ ಬಂದೊಡನೆಯೇ ಅವರೆಲ್ಲ ತಮ್ಮ ಕಚೇರಿಯಲ್ಲಿ ಸಭೆ ಸೇರಿ, ವಿಮಾನದಾಳಿಯಿಂದ ಎಲ್ಲೆಲ್ಲಿ ಯಾವ ಯಾವ ಭಾರಿ ನಷ್ಟಗಳುಂಟಾದುವೆಂಬ ಮತ್ತು ಯಾವ ಯಾವ ಭಾರಿ ಅನಾಹುತಗಳಾದುವೆಂಬ ಸಂಗತಿಗಳನ್ನು ಟೆಲಿಫೋನ್ ಮೂಲಕ ತಿಳಿದುಕೊಂಡು ಅವುಗಳನ್ನು ಹತೋಟಿ ಕಚೇರಿಗೆ (ಎಂದರೆ "ಕಂಟ್ರೋಲ್ ರೂಮಿಗೆ") ಅವರುಗಳು ಟೆಲಿಫೋನ್ ಮೂಲಕ ವರದಿ ಮಾಡುತ್ತಾರೆ ಅವರುಗಳ ಕರ್ತವ್ಯವು ನಷ್ಟಗಳನ್ನೂ ಅನಾಹುತಗಳನ್ನೂ ವರದಿಮಾಡುವುದು ಮಾತ್ರವೇ ಅಲ್ಲ. ಅವರುಗಳಿಗೆ ಬಹು ಮುಖ್ಯವಾದ ಇತರ ಕರ್ತವ್ಯಗಳೂ ಇವೆ ನಗರ ನಿವಾಸಿಗಳು ಅಪಾಯಕ್ಕೊಳಗಾಗುವುದನ್ನು ತಪ್ಪಿಸುವ ಉದ್ದೇಶದಿಂದ—ಸಿವಿಲ್ ಗಾರ್ಡುಗಳ ಮತ್ತು ಪೋಲೀಸಿನವರ ಸಹಾಯವನ್ನು ಪಡೆದು—ಅವರ ಸಂಚಾರವನ್ನು ಕ್ರಮಗೊಳಿಸುವುದು ಮತ್ತು ಪ್ರಥಮ ಚಿಕಿತ್ಸೆಯ ಸ್ವಭಾವದ ಅನೇಕ ಕಾರ್ಯಗಳನ್ನು ನೆರವೇರಿಸುವುದು—ಇವೂ ಸಹ ಅವರ ಕರ್ತವ್ಯಗಳಲ್ಲಿ ಸೇರಿವೆ. ಬಾಂಬುಗಳು ಬಿದ್ದ ಅನಾಹುತಗಳಿಂದ ಪೆಟ್ಟು ತಗಲಿದವರಿಗೆ ಪ್ರಥಮ ಚಿಕಿತ್ಸೆ ಮಾಡುವುದು, ಬೆಂಕಿಯನ್ನು ಹತ್ತಿಸುವ ಉರಿ ಬಾಂಬುಗಳು ಬಿದ್ದರೆ, ಅವುಗಳನ್ನು ನಾಶಗೊಳಿಸುವುದು ಮತ್ತು ಅವುಗಳಿಂದ ಬೆಂಕಿ ಹತ್ತಿದ ಉರಿಯನ್ನಾರಿಸುವುದು, ಸಣ್ಣ ಪುಟ್ಟ ನಷ್ಟಗಳಾಗಿದ್ದರೆ ಅವನ್ನು ದುರಸ್ತಿ ಮಾಡಿ ಸರಿಪಡಿಸಿ ನೋಡಿಕೊಳ್ಳುವುದು; ಭಾರಿ ತೊಂದರೆಗಳೇ ಸಂಭವಿಸಿದಲ್ಲಿ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳ "ಎ. ಆರ್. ಪಿ." ಸಿಬ್ಬಂದಿಯವರು ಬರುವವರೆಗೂ ಸನ್ನಿವೇಶವು ಹದಗೆಡದಂತೆ ನೋಡಿಕೊಳ್ಳುವುದು—ಇವುಗಳೆಲ್ಲಾ ಅವರ ಕರ್ತವ್ಯಗಳು. ಆದಕಾರಣ, ಅವರುಗಳು ಹೇಗೆ ಕೆಲಸ ನಡೆಯಿಸಬೇಕೆಂಬುದನ್ನು ತಾವು ತಾವೇ ನಿರ್ಧರಿಸಿಕೊಂಡು ತಮ್ಮ ತಮ್ಮ ಅಧಿಕಾರಕ್ಕೊಳಪಟ್ಟಿರುವ ನಗರ ಭಾಗಗಳಲ್ಲಿ ತಮಗೆ ಯುಕ್ತತೋರಿದಂತೆ ಕೆಲಸಮಾಡಲು ಅವರಿಗೆ ಅವಕಾಶವು ಕಲ್ಪಿತವಾಗಿರುತ್ತದೆ ಅವರುಗಳ ಕೈಕೆಳಗೆ ಕೆಲಸಮಾಡತಕ್ಕವರು ಪರಿಹಾರಮಾಡಲು ಸಾಧ್ಯವಿಲ್ಲದ ಸನ್ನಿವೇಶಗಳಲ್ಲಿ ಮಾತ್ರವೇ ವಿಮಾನದಾಳಿ ಎಚ್ಚರಿಕೆ ಸಿಬ್ಬಂದಿಗಳವರನ್ನು (ಎಂದರೆ 'ಎ ಆರ್ ಪಿ.' ಸಿಬ್ಬಂದಿಗಳವರನ್ನು) ಅವರು ಬರಮಾಡಿಕೊಳ್ಳಬೇಕಾಗಿರುವುದು. ಆ ಸಿಬ್ಬಂದಿಗಳವರು ವಾರ್ಡನುಗಳ ಕೈಕೆಳಗಿನ ಸಾಮಾನ್ಯ ಸಿಬ್ಬಂದಿಯವರಿಗೇ ಸಣ್ಣಪುಟ್ಟ ಕೆಲಸಗಳನ್ನು ಬಿಟ್ಟು ಅವರಿಂದ ಸಾಧ್ಯವಿಲ್ಲದ ದೊಡ್ಡ ದೊಡ್ಡ ಪರಿಹಾರ ಕಾರ್ಯಗಳನ್ನು ನೆರವೇರಿಸುವುದಕ್ಕೆ ಅದರಿಂದ ಅನುಕೂಲ. ನಾನಾ ನಗರ ಭಾಗಗಳ ನಿವಾಸಿಗಳೂ ತಮಗೆ ಅವಶ್ಯವಾದ ಸಹಾಯಕ್ಕೂ ಸಲಹೆಗಳಿಗೂ ವಿಮಾನದಾಳಿ ವಾರ್ಡನುಗಳ ಬಳಿಗೇ ಹೋಗಬೇಕು. ಆಯಾ ಸ್ಥಳದ ಜನರಿಗೆ ಆದರದಿಂದ ಸಹಾಯಮಾಡಿ ಶ್ರದ್ಧೆಯಿಂದ ಸಲಹೆ ಕೊಟ್ಟು ವಿವೇಕದಿಂದ ದಾರಿ ತೋರಿಸತಕ್ಕವರೇ ಆ ವಾರ್ಡನುಗಳು. ಅವರುಗಳು ಜನರಿಗೆ ಮುಖಂಡರಾಗಿ ನಿಂತು ಅವರಿಗೆ ಮಾರ್ಗದರ್ಶಿಗಳಾಗಿ ಕೆಲಸಮಾಡಬೇಕಾಗುತ್ತದೆ. ಆದಕಾರಣ, ಜನರ ಗೌರವವನ್ನು ಗಳಿಸಿ ವಿಶ್ವಾಸಪಾತ್ರರಾಗಿರುವ ದೊಡ್ಡ ಮನುಷ್ಯರುಗಳೇ ವಾರ್ಡನುಗಳ ಕೆಲಸಕ್ಕೆ ಬರಬೇಕು. ಇಂಗ್ಲೆಂಡಿನ ನಗರಗಳಲ್ಲಿ ವಿಮಾನದಾಳಿ ವಾರ್ಡನುಗಳಾಗಿ ಕೆಲಸಮಾಡತಕ್ಕವರ ಪಟ್ಟಿಯನ್ನು ನೋಡಿದರೆ, ಅಂಥ ಮಹಾಶಯರುಗಳು ಯುದ್ಧರಂಗದಲ್ಲಿ ಹೋರಾಡುವ ಶೂರರಾದ ಸುಶಿಕ್ಷಿತ ಸೈನಿಕರಂತೆಯೇ ಕೆಲಸಮಾಡುವುದು ಸಾಧ್ಯವೆಂದು ಕಂಡುಬಂದಿದೆ. ಆದರೆ ಈಗಿನ ಯುದ್ಧದ ಪ್ರಾರಂಭದಲ್ಲಿ ಮಾತ್ರ ಹಾಗಿರಲಿಲ್ಲ. ಆಗ ಈ ವಾರ್ಡನುಗಳನ್ನು ಕಂಡರೆ ಜನರಿಗೆ ಅಪಹಾಸ್ಯ. ಮೊದಲು ಮೊದಲು ಅವರಿಗೆ ಅನುಭವವಿರಲಿಲ್ಲ. ಅವರುಗಳು ಕೆಲ ದಿನ ಟೋಪಿಗಳನ್ನು ಹಾಕಿಕೊಂಡು ಹೊರಟರೆ ಜನಕ್ಕೆ ಅಪಹಾಸ್ಯ. ವಿಲಕ್ಷಣವಾಗಿದ್ದಂತೆ ಜನರಿಗೆ ತೋರುತ್ತಿದ್ದ ಆ ಟೋಪಿಗಳನ್ನು ಧರಿಸಿ, ಎಲ್ಲಾದರೂ ದೀಪದ ಬೆಳಕುಂಟೋ ಎಂದು ಕತ್ತಲೆ ಕವಿದೇ ಇದ್ದ ಪ್ರದೇಶಗಳಲ್ಲಿ ಬಗ್ಗಿ ಬಗ್ಗಿ ನೋಡುತ್ತ, ಯಾವ ದೀಪಗಳಿಗಾದರೂ ಮೇಲುಭಾಗದ ಆವರಣವಿಲ್ಲವೋ—ಎಂಬುದನ್ನು ಹುಡುಕುತ್ತ ಅವರುಗಳು ಹೊರಟರೆಂದರೆ, ಜನರು ಗಹಗಹಿಸಿನಕ್ಕು ಅಪಹಾಸ್ಯ ಮಾಡುತ್ತಿದ್ದುದು ವಾಡಿಕೆ. ಆದರೆ, ಕೆಲಸದ ಅನುಭವವನ್ನು ಪಡೆದ ಮೇಲೆ ಈಚೆಗೆ ಅವರುಗಳು ನಡೆಯಿಸುತ್ತಿರುವ ಕೆಲಸದ ಸೊಗಸನ್ನು ನೋಡಿ ಎಲ್ಲರೂ ಮೆಚ್ಚಿ ಗೌರವ ತೋರಿಸುತ್ತಿದ್ದಾರೆ; ಮೊದಲಿನಂತೆ ಅಪಹಾಸ್ಯಮಾಡಿ ನಗುವವರು ಈಗ ಹುಡುಕಿದರೂ ಒಬ್ಬರಿಲ್ಲ ಹೆಚ್ಚಿನ ಶಿಕ್ಷಣವೇನೂ ಇಲ್ಲದ ಸಾಮಾನ್ಯ ಪ್ರಜೆಗಳೇ ಆಗಿರುವ ಆ ಮಹಾಶಯರುಗಳು ಅತ್ಯಂತ ಭಾರಿ ಅಪಾಯಗಳೊದಗಿದರೂ ಸ್ವಲ್ಪವೂ ಭಯಪಡದೆ, ವಿಪತ್ತು ಬರುತ್ತಿದ್ದರೂ ಧೈರ್ಯದಿಂದ ವರ್ತಿಸುತ್ತ

ಬಂದಿದ್ದಾರೆ. ಅವರು ಮೀಸಲಿಂದೇ ಜನರ ಪ್ರಾಣ; ಅವರಲ್ಲಿ ಜನಕ್ಕೆ ಬಹಳ ಗೌರವ. ಎಷ್ಟೋ ಸಮಯಗಳ ಸ್ವಾತಂತ್ರ್ಯದಲ್ಲಿ ಕೂಡ, ಅವರು ನಗರ ರಕ್ಷಣೆಮಾಡುತ್ತ ಬಂದವರು ಪ್ರಸಿದ್ಧರು ಹೌದು. ಇಂಗ್ಲಿಷರು ಕೂಡ ಹೀಗೆ ಮಾಡುತ್ತಿದ್ದರಲ್ಲ—ಎಂದು ಶತ್ರುಗಳಿಗೆ ಭಯವು; ತಮ್ಮ ಕರ್ತವ್ಯದಂತೆ ಅವರು [illegible] ಯಂತ ಕೆಲಸ ನಡೆಯುವುದು ಸಾಧ್ಯವಿಲ್ಲವಲ್ಲ—ಎಂದು ತಿಳಿ

ಪೋಲೀಸು ಮತ್ತು ಸಿವಿಲ್ ಗಾರ್ಡುಗಳು.

ವಿಮಾನದಾಳಿ ನಡೆದರೆ ಜನರಿಗೆ ತಳಮಳವೋ ತಳಮಳ. ಅಗ್ನಿ ಜನರಿಗೆ ಧೈರ್ಯ ಹೇಳಿ ಅವರ ತಳಮಳವನ್ನು ತಪ್ಪಿಸುವ ಕಷ್ಟದ ಕೆಲಸವು ಪೋಲೀಸಿನವರಿಗೂ ಸಿವಿಲ್ ಗಾರ್ಡುಗಳಿಗೂ ಬಹಳವಾಗಿ ಒದಗುತ್ತದೆ. ಅಂಥ ಸಮಯದಲ್ಲಿ ಪ್ರಜಾಶಿಸ್ತಿನನ್ನು ಕಾಪಾಡಬೇಕಾದುದು ಪ್ರಜೆಗಳ ಹಿತಸಾಧನೆಯ ದೃಷ್ಟಿಯಿಂದಲೂ ಮುಖ್ಯವಾದ ಅಂಶ. ಅಲ್ಲದೆ, ಆ ಬಗೆಯ ದಿಕ್ಕಿಲ್ಲದ ಸಮಯದಲ್ಲಿ ವಿಮಾನದಾಳಿ ಎಚ್ಚರಿಕೆ ಇಲಾಖೆಯ "ಎ. ಆರ್. ಪಿ." ಸಿಬ್ಬಂದಿಯವರು ತಮ್ಮ ಕೆಲಸವನ್ನು ಯಾವ ಅಡ್ಡಿ ಆತಂಕಗಳೂ ಇಲ್ಲದೆ ಸಾಧಿಸಬೇಕಾದ ಅವಶ್ಯಕತೆಯ ದೃಷ್ಟಿಯಿಂದಲೂ ಮುಖ್ಯವಾದ ಅಂಶ. ಬಾಂಬುಗಳು ಬೀಳುವ ಸ್ಥಳಗಳ ಮಾರ್ಗವಾಗಿ ಕೂಡ ಹೋಗಿಬರುತ್ತ ಸುದ್ದಿಗಳನ್ನು ತಲುಪಿಸುವ ಸ್ವಯಂಸೇವಕ ದಳದ ("ವಾಲಂಟಿಯರ್" ದಳದ) ಸುದ್ದಿಗಾರರು ಕೂಡ ಅದೇ ರೀತಿ ಪ್ರಾಮುಖ್ಯವಾದ ಕೆಲಸವನ್ನು ಮಾಡತಕ್ಕವರೇ ಮೇಲೆ ಹೇಳಿದ ರೀತಿಗಳಲ್ಲಿ ಪ್ರತಿಯೊಂದು ಪ್ರದೇಶದ ಜನರೂ ತಮ್ಮ ತಮ್ಮ ಯೋಗಕ್ಷೇಮ ಸಾಧನೆ ಮಾಡಿಕೊಳ್ಳುವುದು ಮಾತ್ರವೇ ಅಲ್ಲದೆ, ತಮ್ಮ ಪ್ರದೇಶದ ಜನಸಮುದಾಯದ ಯೋಗಕ್ಷೇಮ ಸಾಧನೆಗೂ ಸಹ ತಮ್ಮ ಸಮಯಸ್ಫೂರ್ತಿಯಿಂದಲೂ ಶಾಂತಿಯಿಂದ ಮತ್ತು ಶಿಸ್ತಿನಿಂದ ಕೂಡಿದ ತಮ್ಮ ನಡೆವಳಿಕೆಯಿಂದಲೂ ಸಹಾಯಮಾಡಬೇಕು. ಉದಾಹರಣೆ, ಪ್ರತಿಯೊಂದು ನಗರದಲ್ಲಿಯೂ, ವಿಮಾನದಾಳಿ ಎಚ್ಚರಿಕೆ ಇಲಾಖೆಯ ಕಡೆಗೆ ನಗರನಿವಾಸಿಗಳ ಮನಸ್ಸು ತಿರುಗುವಂತೆ ಜನರಿಗೆ ಬೋಧಿಸಿ ತಿಳಿಸಬೇಕಾದುದು ಈಗ ಅವಶ್ಯಕವಾಗಿದೆ ಹಾಗಾದರೇ ಸಾಕು. ವಿವೇಕ ವಿಚಕ್ಷಣೆಗಳೂ ಮತ್ತು ವಿಪತ್ತು ಸನ್ನಿಹಿತವಾಗಿರುವ ಆತಂಕವೂ ಅವರಿಂದ ಉಳಿದ ಕೆಲಸಗಳನ್ನೆಲ್ಲ ತಾವೇ ಮಾಡಿಸುತ್ತವೆ

(ಸಶೇಷ)

ಪ್ರಪಂಚದ ದೊಡ್ಡ ಸಬ್‌ಮೆರೀನ್

ಸರ್‌ಕಾಫ್ ಎಂಬ ಪ್ರಪಂಚದಲ್ಲಿ ಅತ್ಯಂತ ದೊಡ್ಡದೆನಿಸಿದ ಸಬ್‌ಮೆರೀನ್ ನೌಕೆಯು ಕಣ್ಮರೆಯಾಗಿದೆ. ಅದು ಮುಳುಗಿಹೋಗಿರಬೇಕೆಂದು ಊಹಿಸಲಾಗಿದೆ. ಅದು ಸ್ವತಂತ್ರ ಫ್ರೆಂಚ್ ನೌಕಾಬಲಕ್ಕೆ ಸೇರಿತ್ತು. ಇದನ್ನು 1929 ನೆಯ ಇಸವಿಯಲ್ಲಿ ಕಟ್ಟಲಾಗಿತ್ತು. ತೂಕ 4300 ಟನ್‌ಗಳು. ಅದರಲ್ಲಿ 8 ಅಂಗುಲದ ಎರಡು ಫಿರಂಗಿಗಳು ಇದ್ದುವಲ್ಲದೆ ಒಂದು ಸಮುದ್ರವಿಮಾನವು ಸಹ ಇತ್ತು. ಇದಕ್ಕೆ ಸಾಮಾನ್ಯ ಸಬ್‌ಮೆರೀನುಗಳಿಗೆ ತಗಲುವ ವೆಚ್ಚಕ್ಕಿಂತ 5 ರಷ್ಟು ವೆಚ್ಚವಾಗಿತ್ತು. ಒಂದು ಸಾರಿ ಸಾಮಾನು ತುಂಬಿಕೊಂಡರೆ 12000 ಮೈಲು ಸಂಚರಿಸಿ ಬರುವ ಶಕ್ತಿ ಇದಕ್ಕಿತ್ತು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿವೆ, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅದರ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಸಿದ್ಧಾಂತಶಿಖಾಮಣಿ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ

ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತವಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯರೆಂಬ** ಆಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿ ನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M. F Printings ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು. ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಸಾರಿಸಾರಿ ಹೇಳಬಹುದಾಗಿದೆ ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು. ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣನಾಥನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! **ಬೆಲೆ ೨ ರೂಪಾಯಿ**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ದೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುಕ್ತಿಪದವಿಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ಸಾಹ್ವಾನದೊಂದಿಗೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೪
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೪
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೪
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೪
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೪
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೪
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೪
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೪
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೪
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೪
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೪
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೪
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೪
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೪
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೪

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುದೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ.ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[46] ಪೋ. ಬಾ ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸತ್ಯಾಸತ್ಯವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ.
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸತ್ಯಾಸತ್ಯವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮುಲು(ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವುವು)	೧॥ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೨೩ ಪುಟ)	೮ ರೂ.
A brief life sketch of Pandit Sri Kashinatha Shastriji (*English*)	**4 As.**
The Philosophical Aspect of Virasaivism (*English*)	**8 As.**
Speeches by Pandit Shri Kashinatha Shastriji *English*)	**12 As.**
लिंगधारणचन्द्रिका (संस्कृत)	१ रु.
वीरशैवरत्न (मराठी)	१ रु.
महानारायणोपनिषद् (वीरशैवभाष्य-संस्कृत)	१ रु.
पुरुषसूक्तम् (वीरशैवप्राचीनभाष्योपेतम्)	४ आ.
नंदिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಧುರೀಣಮುಖರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೨ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೪ನೇ ಮೇ ೧೯೪೨ [ಸಂಚಿಕೆ ೩

ಶ್ರೀಕಾಶೀನಾಥಗ್ರಂಥಮಾಲೆಯ—೪೦-೪೧-೪೨-೪೩ನೆಯ ಪುಷ್ಪ

ಶಿವಾಗಮಸಂಗ್ರಹಃ

ಈ ಗ್ರಂಥವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ **ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮ**ಗಳೆಂಬ ನಾಲ್ಕು ಶಿವಾಗಮಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ, ಇದಕ್ಕೆ " **ಶಿವಾಗಮಸಂಗ್ರಹ** " ಎಂಬ ಹೆಸರನ್ನಿಡಲಾಗಿದೆ. ಈ ನಾಲ್ಕು ಶಿವಾಗಮಗಳಲ್ಲಿ ವೀರಶೈವಮತದ ಪ್ರಾಚೀನ ಧರ್ಮಗಳು ಬಹು ಹೃದಯಂಗಮವಾಗಿ ವಿವರಿಸಲ್ಪಟ್ಟಿರುವವು ವೀರಶೈವಮತದ ಸರ್ವಸ್ವವೇ ಇವುಗಳಲ್ಲಿ ಅಡಗಿರುವದು. ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ವಿಶೇಷ ಪ್ರಯತ್ನದಿಂದ ಇವುಗಳನ್ನು ಸಂಗ್ರಹಿಸಿ ಚೆನ್ನಾಗಿ ಪರಿಶೋಧಿಸಿ ಅತ್ಯಂತ ಸುಂದರವಾಗಿ ಮುದ್ರಿಸಿ ಪ್ರಕಟಿಸಿದ್ದಾರೆ. ಇಂತಹ ಸರ್ವೋತ್ತಮ ಶಿವಾಗಮಗಳು ಈಗ ಪ್ರಕಾಶಕ್ಕೆ ಬಂದಿರುವುದು ಈ ಮಠದ ಪುಣ್ಯವಿಶೇಷವೆಂದೇ ಹೇಳಬೇಕಾಗಿದೆ ಈ ಶಿವಾಗಮಗಳು ಸದ್ಯಃ ಟೀಕೆಯಿಲ್ಲದೆ ಮೂಲ ಮಾತ್ರ ಮುದ್ರಿತವಾಗಿವೆ. ಪ್ರತಿಯೊಬ್ಬರೂ ಈ ಪೂಜ್ಯಗ್ರಂಥಗಳನ್ನು ತರಿಸಿಕೊಂಡು ಇವುಗಳಲ್ಲುಕ್ತವಾಗಿರುವ ಪ್ರಾಚೀನ ಪವಿತ್ರಧರ್ಮಗಳನ್ನು ತಿಳಿದು ಅದರಂತೆ ಆಚರಿಸಿ ಪರಶಿವನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ. ಮನೋಹರವಾದ ಮುದ್ರಣ ! ಸುಂದರವಾದ ಬೈಂಡು ! **ಬೆಲೆ ೨ ರೂಪಾಯಿ.**

ಪಂಚಾಚಾರಪ್ರಕಾಶಿಕಾ (೪೪ನೆಯ ಪುಷ್ಪ)

ಇದರಲ್ಲಿ ವೀರಶೈವರು ಮುಖ್ಯವಾಗಿ ಆಚರಿಸತಕ್ಕ ೬೪ ಶೀಲಗಳು ಹೃದಯಂಗಮವಾಗಿ ವರ್ಣಿತವಾಗಿವೆ. ಚಂದ್ರಜ್ಞಾನಾಗಮದ ೯ನೆಯ ಪಟಲದಲ್ಲಿ ಈ ಶೀಲಗಳು ಉಕ್ತವಾಗಿರುವುದರಿಂದ ಇದನ್ನು ಪ್ರತ್ಯೇಕವಾಗಿ ಕನ್ನಡ ಟೀಕೆಯೊಡನೆ ಮುದ್ರಿಸಿದ್ದಾಗಿದೆ. **ಬೆಲೆ ೨ ಆಣೆ**

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ನಾನಾವಿಧ ಬಣ್ಣಗಳಿಂದ ಮನೋಹರವಾಗಿ ಮುದ್ರಿತವಾಗಿರುವ

ನೂತನ ಫೋಟೋಗಳು

ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ (ಸೈಜು ೧೪×೧೦) ಬೆಲೆ ೪ ಆಣೆ
(ಅತ್ಯಂತ ಸುಂದರವಾದುದು.)
ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ಸೈಜು ೬×೧೦) ,, ೨ ಆಣೆ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸ್ವೀಕಾರ.

ಬೆಂಗಳೂರು ಸಿಟಿಯಲ್ಲಿರುವ ಲೇಟ್ ಬುಳ್ಳಪ್ಪನವರ ಪುತ್ರ ಚಿ॥ ಸ॥ ಶಿವನಂಜಪ್ಪನಿಗೆ ಬಳ್ಳಾರಿಯಲ್ಲಿರುವ ಮ॥ ರಾ॥ ಅಲ್ಲಂಬಸಪ್ಪನವರ ಪುತ್ರಿ ಚಿ॥ ಸೌ॥ ಮಲ್ಲಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಶ್ರೀಮಹಂತಿನಮಠದ ಮ್ಯಾನೇಜರ್ ಮ॥ ರಾ॥ ಸಿ. ಸಿದ್ಧಪ್ಪನವರ ದ್ವಾರಾ ತಲ್ಪಿರುತ್ತವೆ.

ತಿಪಟೂರು ಟವನ್ನಿನಲ್ಲಿರುವ ವೇ॥ ಎ. ಎಂ ಶಿವಲಿಂಗಾರಾಧ್ಯರವರ ಪುತ್ರಿ ಚಿ॥ ಸೌ॥ ಸುಶೀಲಮ್ಮನನ್ನು ತರೀಕೆರೆಯಲ್ಲಿರುವ ವೇ॥ ಬೀರೂರು ವಿ. ಆರ್. ಮುದ್ವೀರಯ್ಯನವರ ದತ್ತಪುತ್ರ ಚಿ॥ ರುದ್ರಾರಾಧ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಾರಂಭದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 4 ರೂಪಾಯಿಗಳು ವೇ॥ ಆರ್. ಎಂ ಮಲ್ಲಿಕಾರ್ಜುನಯ್ಯನವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ನಗರದಲ್ಲಿರುವ ಹಿರಿಯಮಠದ ವೇ॥ ಸೋಮನಾಥಯ್ಯನವರ ಪುತ್ರಿ ಚಿ॥ ಸೌ॥ ಶಾಂತಾಬಾಯಿಯನ್ನು ಸಂಪಗಾಂವ ತಾಲೂಕು ನಾಗನೂರು ಗ್ರಾಮದ ವೇ॥ ಶೀಲಯ್ಯನವರ ಮಠದ ಚನ್ನಬಸವಯ್ಯನವರ ಪುತ್ರ ಕಾಶಪ್ಪಯ್ಯಸ್ವಾಮಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಾರಂಭದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 3 ರೂಪಾಯಿಗಳು ವೇ॥ ಸೋಮನಾಥಯ್ಯನವರ ದ್ವಾರಾ ತಲ್ಪಿರುತ್ತವೆ.

ಉಸ್ಮಾನಾಬಾದ್ ನಗರದಲ್ಲಿರುವ ಮ॥ ರಾ॥ ಮಲ್ಲಿಕಾರ್ಜುನಪ್ಪ ಕೋಠಾರಿ ಇವರು ಹೋಟಗಿ ಶ್ರೀಗಳವರಿಂದ ಶಿವದೀಕ್ಷೆಯನ್ನು ಹೊಂದಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಸೌ॥ ಭಾಗೀರಥೀಬಾಯಿ ಚಟಾಪ ಇವರ ದ್ವಾರಾ ತಲ್ಪಿರುತ್ತವೆ.

ಮೈಸೂರು ರಾಜಧಾನಿಯಲ್ಲಿರುವ ಗಂಜಾಂಮಠದ ಮ॥ ರಾ॥ ಆರ್. ಸಿದ್ಧಲಿಂಗಯ್ಯನವರ ಪುತ್ರ ಚಿ॥ ಸ॥ ಶಿವರುದ್ರಯ್ಯನಿಗೆ ಕೆರಗೋಡುಗ್ರಾಮದ ಮ॥ ರಾ॥ ಕೆ. ಎಸ್. ಗಂಗಣ್ಣನವರ ಪುತ್ರಿ ಚಿ॥ ಸೌ॥ ಗೌರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಜಗದಾಚಾರ್ಯರ ಜಯಂತೀ ಮಹೋತ್ಸವಗಳು

ಸೊಲ್ಲಾಪುರ

ತಾ॥ ೧೮-೪-೪೨ ನೆಯ ಶನಿವಾರ ಸೊಲ್ಲಾಪುರದ ಶ್ರೀ ವೀರಶೈವಸದಾಚಾರ ಸ್ತ್ರೀಸಮಾಜದಲ್ಲಿ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀ ಮಹೋತ್ಸವವು ಒಳ್ಳೆಯ ವೈಭವದಿಂದ ಜರುಗಿತು ಆ ದಿವಸ ಬೆಳಗ್ಗೆ ಶ್ರೀ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕವಾಗಿ ಮೃಷ್ಟಾನ್ನ ಭೋಜನವಾದಮೇಲೆ ಮಧ್ಯಾಹ್ನ ೩ ಘಂಟೆಗೆ ಸದರಿ ಸಮಾಜದಲ್ಲಿ ಸಭೆಯು ಕೂಡಿತು ಮೊದಲು ಸಮಾಜದ ಕುಮಾರಿಯರು ಸ್ತೋತ್ರಪದ್ಯಗಳನ್ನು ಹಾಡಿ ಸಭಿಕರನ್ನು ಆನಂದಪಡಿಸಿದರು ತರುವಾಯ ಕು॥ ಲೀಲಾವತಿ ಪಾಟಣೆ, ಕು॥ ಗಂಗಾದೇವಿ ಕಟಾಪ, ಕು॥ ಶರದಚಂದ್ರ ಪಾಟಣೆ, ಕು॥ ಇಂದುಕಲಾ ಗಂಭೀರೆ, ಕು॥ ಶಾಂತಾದೇವಿ ಮಾಳಗೆ, ಕು॥ ಗೌರೀದೇವಿ ಕಟಾಪ ಈ ಬಾಲಿಕೆಯರ ಭಾಷಣಗಳಾದ ವೇಳೆ ಶ್ರೀ॥ ಗುರವ್ವ ಮರಶೆಟ್ಟಿ, ಸೌ॥ ಬಸವ್ವ ನಂದೀಮಠ ಇವರು ಜಗದಾಚಾರ್ಯರ ಅವತಾರದ ವಿಷಯವಾಗಿ ಭಾಷಣಮಾಡಿದರು ಆಮೇಲೆ ಸೌ॥ ಭಾಗೀರಥಿಬಾಯಿಯವರು ಜಗದಾಚಾರ್ಯರ ಪ್ರಾಚೀನತ್ವ ವಿಷಯವಾಗಿ ಅನಂತ ಉದಾಹರಣೆಗಳಿಂದ ಎಲ್ಲರಿಗೂ ತಿಳಿಯುವಂತೆ ಭಾಷಣಮಾಡಿದರು ಬಳಿಕ ಜಗದಾಚಾರ್ಯರ ಜಯಧ್ವನಿಯೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಹೋಟಗಿ

ತಾ॥ ೧೫-೪ ೪೨ ನೆಯ ಬುಧವಾರದಿಂದ ೨೦ ನೆಯ ತಾರೀಖಿನವರೆಗೆ ಜಗದಾಚಾರ್ಯರ ಜಯಂತೀ ಮಹೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು ೧೫ ನೆಯ ತಾ॥ ಬುಧವಾರದಿಂದ ಮಠದ ಕರ್ತೃಗದ್ದುಗೆಗೂ ಶ್ರೀ ಲಿಂಗೋದ್ಭವ ಮೂರ್ತಿಗೂ ರುದ್ರಾಭಿಷೇಕ, ಸಾಯಂಕಾಲ ಪೂರ್ವದ ಮಠಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಚನ್ನಬಸವ ಶಿವಯೋಗಿಗಳವರ ಕೀರ್ತನೆಯೂ, ಗಾಯನ ವಿಶಾರದ ವಿಜಗುಣಾರಾಧ್ಯರಿಂದ ಶಿವಕೀರ್ತನೆಯೂ ನಡೆಯುತ್ತಿತ್ತು ಕೀರ್ತನದ ಆದಿಯಲ್ಲಿ ಧೋತ್ರಿ ಜಗದ್ಗುರು ಪಂಚಾಚಾರ್ಯ ಭಜನಸಂಘದ ಬಾಲಕರ ಸುಶ್ರಾವ್ಯವಾದ ಸಂಗೀತ ಭಜನೆಯು ನಡೆಯುತ್ತಿತ್ತು ತಾ॥೧೮-೪-೪೨ ನೆಯ ಶನಿವಾರ ಮಹಾರುದ್ರಾಭಿಷೇಕ ಗಣಾರಾಧನೆಯಾಗಿ ರಾತ್ರಿ ಸಭೆಯು ಕೂಡಿತು ಶಿವಕೀರ್ತನೆಯಾದ ಮೇಲೆ ಶ್ರೀ॥ ಷ॥ ಬ್ರ॥ ಬಾಲತಪಸ್ವಿಗಳವರ ಸದುಪದೇಶವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು ಭಾನುವಾರ ಚಿಂಚೋಳಿ ಪಂಚಾಚಾರ್ಯ ಭಜನಸಂಘದವರು ನಂದಿಧ್ವಜದೊಡನೆ ಬಂದು ಸಭೆಯಲ್ಲಿ ಭಾಗವಹಿಸಿದ್ದರು ಆ ದಿವಸ ಸೊಲ್ಲಾಪುರದ [illegible] ಸ್ತ್ರೀಸಮಾಜದ ಕುಮಾರಿಯರು ಪಂಚಾಚಾರ್ಯ ಆಕಾಶವಾಣಿ, ಸನಾತನ ಧರ್ಮೋದ್ಧಾರಕ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಅವತಾರ ವಿಷಯಕ ಕನ್ನಡ ಆಕಾಶವಾಣಿ, ಶ್ರೀರಂಭಾಪುರೀ ಜಗದ್ಗುರುಗಳು ಮಹಾರಾಷ್ಟ್ರ ಪ್ರಾಂತಕ್ಕೆ ಆಗಮಿಸಿದ ವಿಷಯಕವಾದ ಅರ್ವಾಚೀನ ರಂಗದ ಸಂವಾದಗಳನ್ನು ಚಿಕ್ಕ ಚಿಕ್ಕ ಬಾಲಿಕೆಯರು ಮಾಡಿ ತೋರಿಸುವಾಗ್ಗೆ ನೆರೆದ ಜನರ ಆನಂದಕ್ಕೆ ಪಾರವೇ ಇರಲಿಲ್ಲ ಆಮೇಲೆ ಕು॥ ಲೀಲಾವತಿ, ಕು॥ ಶರದಚಂದ್ರ, ಕು॥ ರುದ್ರಮುನಿ ಮಾಳಗೆ, ಕು॥ ಗಂಗಾದೇವಿ ಕಟಾಪ ಇವರು ತಮ್ಮ ಬಾಲಭಾಷೆಯಿಂದ ಭಾಷಣಮಾಡಿ ಸರ್ವರನ್ನೂ ಸಂತೋಷಗೊಳಿಸಿದರು ತರುವಾಯ ಶ್ರೀ॥ ಷ॥ ಬ್ರ॥ ಗುರುಪಾದಶಿವಾಚಾರ್ಯರು ಬ್ರಹನ್ಮಠ ಮುಳ್ಳೂರು, ಸೌ॥ ಭಾಗೀರಥಿಬಾಯಿ ಕಟಾಪ ಇವರು ಜಯಂತೀ ವಿಷಯವಾಗಿ ಭಾಷಣಮಾಡಿದರು. ಆವೇಳೆ ಶ್ರೀ॥ ಷ॥ ಬ್ರ॥ ಬಾಲತಪಸ್ವಿಗಳು ಶ್ರೀಚನ್ನಬಸವಸ್ವಾಮಿಗಳ ಮಹತ್ವವನ್ನು ಎಲ್ಲರಿಗೂ ಉಪದೇಶಿಸಿದರು ಅನಂತರ ಧೋತ್ರಿ ಬಾಲಕರ ಭಜನೆಯಾಗಿ ಮಂಗಲದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಮಾರನೆಯ ದಿವಸ ಸೋಮವಾರ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ದಿವಸ ಏಕಾದಶರುದ್ರಾಭಿಷೇಕ ವ ಗಣಾರಾಧನೆಯು ಜರುಗಿ ಸಾಯಂಕಾಲ ಸಭೆಯು ನೆರವೇರಿ ಜಗದಾಚಾರ್ಯರ ಅವತಾರದ ಬಗ್ಗೆ ಭಾಷಣಗಳಾದವು ಶ್ರೀ॥ ಷ॥ ಬ್ರ॥ ಬಾಲತಪಸ್ವಿಗಳ ಕಡೆಯಿಂದ ಶಿವದೀಕ್ಷೆಯನ್ನು ಹೊಂದಬೇಕೆಂದು ಬಹಳ ದಿವಸಗಳಿಂದಲೂ ಅಪೇಕ್ಷಿಸುತ್ತಿದ್ದ ಉಸ್ಮಾನಾಬಾದ ಹೈಕೋರ್ಟ ವಕೀಲರಾದ ಶ್ರೀ ಮಲ್ಲಿಕಾರ್ಜುನಪ್ಪ ತೋಡಕರ ಇವರ ತಂದೆಯವರಾದ ಶಿವಲಿಂಗಪ್ಪ ತೋಡಕರ ಇವರು ತಮ್ಮ ಪುತ್ರಿ ಮಹಾದೇವವ್ವನೊಂದಿಗೆ, ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀ ಮಂಗಲ ದಿವಸ ಬಾಲತಪಸ್ವಿಗಳಿಂದ ಶಿವದೀಕ್ಷೆಯನ್ನು ಹೊಂದಿ ಧನ್ಯರಾದರು ಆ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ೨ ರೂಪಾಯಿಗಳನ್ನು ಸಮರ್ಪಿಸಿದರು ಇಂಥ ಗುರುಭಕ್ತಾಗ್ರಗಣ್ಯರು ಜಗತ್ತಿನಲ್ಲಿ ಹೆಚ್ಚಾಗಿ ಹರಗುರು ಭಕ್ತಿಯು ಪ್ರಕಾಶಿಸಲೆಂದು ಜಗದಾಚಾರ್ಯರ ಚರಣಸನ್ನಿಧಿಯಲ್ಲಿ ಬೇಡಿಕೊಳ್ಳುವೆನು

ಓರ್ವ ಗುರುಭಕ್ತ

ಮುದಗಲ್ಲ

ನಿಜಾಮ ಇಲಾಖಾ ರಾಯಚೂರು ಜಿ॥ ಮುದಗಲ್ಲ ಗ್ರಾಮದ ಗಂಗಾಧರ ಮಠಾಧ್ಯಕ್ಷರಾದ ಶ್ರೀ ಸಿದ್ಧರಾಮಾರ್ಯರು ತಮ್ಮ ಮಠದಲ್ಲಿ ವಾರ್ಷಿಕ ಪದ್ಧತಿಯಂತೆ ಇದೇ ವೈಶಾಖ ಶು॥ ೩ ಶನಿವಾರ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತಿಯನ್ನೂ ಹಾಗೂ ವೈಶಾಖ ಶು॥ ೫ ಸೋಮವಾರ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಯನ್ನೂ ವೈಭವದಿಂದ ನೆರವೇರಿಸಿದರು ಭಾವಚಿತ್ರಕ್ಕೆ ಷೋಡಶೋಪಚಾರ ಪೂಜೆಯು ನೆರವೇರಿದ ವೇಳೆ ಗಣಾರಾಧನೆಯಾಯಿತು.

ಓರ್ವ ಗುರುಭಕ್ತ

ಚಿಲಕನಹಟ್ಟಿ

ಬಳ್ಳಾರಿ ಜಿ॥ ಹೊಸಪೇಟೆ ತಾ॥ ಚಿಲಕನಹಟ್ಟಿಯ ಮಠದಲ್ಲಿ ವೈಶಾಖ ಶುದ್ಧ ೩ ಮತ್ತು ಶು॥ ೫ ತಿಥಿಗಳಲ್ಲಿ ಶ್ರೀಜಗದ್ಗುರುಗಳ ಭಾವಚಿತ್ರವನ್ನು ಉನ್ನತಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರರಿಗೆ ಸಂತರ್ಪಣೆಯು ನೆರವೇರಿತು ಸಾಯಂಕಾಲ 4 ಘಂಟೆಗೆ ಸಭೆಯನ್ನು ನೆರವೇರಿಸಿ ಮಠಾಧ್ಯಕ್ಷರಾದ ಸಣ್ಣಕೊಟ್ರಯ್ಯ ಶಾಸ್ತ್ರಿಗಳು ಪೂಜ್ಯಪಾದರ ಜಯಂತಿಯ ಆವಶ್ಯಕತೆ ಮುಂತಾದ ವಿಷಯಗಳನ್ನು ಕುರಿತು ಭಕ್ತಜನರ ಹೃದಯದಲ್ಲಿ ಭಕ್ತಿಯು ನೆಲೆಗೊಳ್ಳುವಂತೆ ಮನೋಹರವಾಗಿ ಬೋಧೆಮಾಡಿದರು ತರುವಾಯ ಸದರಿ ಪೂಜ್ಯಪಾದರ ಭಾವಚಿತ್ರದ ಉತ್ಸವವು ಪಂಚಾಚಾರ್ಯ ಭಜನಸಂಘದವರೊಂದಿಗೆ ಮುಖ್ಯ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಮಠಕ್ಕೆ ಬಂದು ತಲ್ಪಿತು ಆಮೇಲೆ ಮಂಗಲವಾಗಿ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಕಾರ್ಯವು ಸಮಾಪ್ತಿಗೊಂಡಿತು

ವೀರಶೈವಮಂಡಲಿ, ಚಿಲಕನಹಟ್ಟಿ

ಬೆಳಗಾಂವ

ಬೆಳಗಾಂವ ನಗರದಲ್ಲಿರುವ ಶ್ರೀವೀರಭದ್ರ ದೇವಾಲಯದಲ್ಲಿ ವೈಶಾಖ ಶು॥ ೩ ಶನಿವಾರ ದಿವಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತಿಯೂ, ವೈಶಾಖ ಶು॥ ೫ ಸೋಮವಾರ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಯೂ ವಿಶೇಷ ವೈಭವದೊಡನೆ ನೆರವೇರಿಸಲ್ಪಟ್ಟವು ಆಯಾ ದಿವಸ ಪ್ರಾತಃಕಾಲ ಜಗದಾಚಾರ್ಯರ ಮೂರ್ತಿಗೆ ರುದ್ರಾಭಿಷೇಕಾದಿ ಪೂಜೆಯು ಶ್ರೀದೇಶಿಕೇಂದ್ರಸ್ವಾಮಿ ಗುರುಮೂರ್ತಿ ಶಿವಾಚಾರ್ಯರು ಹಿರೇಮಠ A B V B, ಸಂಕೇಶ್ವರ ಇವರಿಂದ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು ಮಧ್ಯಾಹ್ನ ಗಣಸಂತರ್ಪಣೆಯು ನೆರವೇರಿತು ಸದರಿ ಸ್ವಾಮಿಗಳು ಕಳೆದ ವರ್ಷ ಈ ಎರಡೂ ಜಯಂತಿಗಳನ್ನು ಗೂಗೀಕೊಳ್ಳನಿರ್ವಾಣೇಶ್ವರ ಕ್ಷೇತ್ರದಲ್ಲಿ ೧೧ ದಿವಸ ಅನುಷ್ಠಾನವನ್ನು ಮಾಡಿ ನೆರವೇರಿಸಿದ್ದರು.

ಮಲ್ಲಪ್ಪಶೆಟ್ಟರು.

ಹಾರ್ನಹಳ್ಳಿ

ಶಿವಮೊಗ್ಗಾ ಜಿ॥ ಹಾರ್ನಹಳ್ಳಿಯಲ್ಲಿರುವ ವೇ॥ ಗುಬ್ಬಿ ಶಿವಕಥಾ ಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ವಾಸಗೃಹದಲ್ಲಿ ಇದೇ ವೈಶಾಖ ಶ॥ ೩ ಶನಿವಾರ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತಿಯನ್ನೂ ಶು॥ ೫ ಸೋಮವಾರ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಯನ್ನೂ ಪೂಜಾಸ್ಮರಣಾದಿ ಮೂಲಕ ನೆರವೇರಿಸಿ ಶ್ರೀಜಗದ್ಗುರುಗಳವರ ಅವತಾರ ಎಂಬ ವಿಷಯದಲ್ಲಿ ಭಾಷಣವನ್ನು ಮಾಡಿ ನೆರೆದ ಜನರನ್ನು ಸಂತೋಷಗೊಳಿಸಿದರು

ಓರ್ವ ಗುರುಭಕ್ತ.

ಹುಮನಾಬಾದ

ನಿಜಾಂ ಇಲಾಖಾ ಹುಮನಾಬಾದ ನಗರದಲ್ಲಿ ಶ್ರೀಜಗದ್ಗುರು ಏಕೋರಾಮಾರಾಧ್ಯರ ಮತ್ತು ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಗಳು ವೈಭವದಿಂದ ನೆರವೇರಿದವು ವೇ॥ ಸಿದ್ಧರಾಮಯ್ಯನವರು ಬಂಗಿ ಇವರು ಮಠಾಚಾರ್ಯರ ಅವತಾರದ ಬಗ್ಗೆ ಭಾಷಣ ಮಾಡಿದರು ಸಿಂಹಾಸನಾಧಿಪತಿಗಳು ಸರ್ವತ್ರ ಧರ್ಮಸಂಬಂಧಿ ಕಾನೂನುಗಳನ್ನು ರಚಿಸಿ ಮಠ ಮಠಪತಿ ಗಣಾಚಾರಿ ಮೊದಲಾದವರು ಇದೇ ರೀತಿಯಾಗಿ ನಡೆಯಬೇಕೆಂಬ ಶಾಸನವನ್ನು ಮಾಡಿದರೆ ಮಠವು ಉದ್ಧಾರವಹವೆಂದು ಹೇಳಿದರು ಬಳಿಕ ಜಗದಾಚಾರ್ಯರ ಮಂಗಲದೊಡನೆ ಸಭೆಯು ಸಮಾಪ್ತಿಗೊಂಡಿತು

ಪ್ರತ್ಯಕ್ಷದರ್ಶಿ

ಮುಳಗುಂದ

ಪ್ರತಿವರ್ಷದ ಪದ್ಧತಿಪ್ರಕಾರ ಧಾರವಾಡ ಜಿ॥ ಮುಳಗುಂದ ಗ್ರಾಮದಲ್ಲಿ ಇದೇ ವೈಶಾಖ ಶು॥ ೩ ಶನಿವಾರ ೧೮-೪-೪೨ ನೇ ದಿವಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತಿಯೂ, ವೈಶಾಖ ಶು॥ ೫ ಸೋಮವಾರ ದಾರುಕಾಚಾರ್ಯರ ಜಯಂತಿಯೂ ಒಳ್ಳೆ ವಿಜೃಂಭಣೆಯಿಂದ ನೆರವೇರಿದವು ಈ ಉತ್ಸವಗಳಲ್ಲಿ ಆಬಾಲವೃದ್ಧರಾದಿಯಾಗಿ ಸರ್ವರೂ ಭಾಗವಹಿಸಿ ಉತ್ಸವವನ್ನು ನೆರವೇರಿಸಿದರು ಇದೇ ಪ್ರಕಾರ ಶ್ರೀಜಗದಾಚಾರ್ಯರ ಜಯಂತಿಗಳನ್ನು ಆಯಾ ತಿಥಿಗಳಲ್ಲಿ ನೆರವೇರಿಸಿ ಧನ್ಯರಾಗಬೇಕೆಂದು ಪ್ರಾರ್ಥನೆ

ವಿರೂಪಾಕ್ಷಪ್ಪ ಗೋಣಿ

ವಿವಾಹಮಹೋತ್ಸವ

ಬೆಂಗಳೂರು ಸಿಟಿ ಲೇಟ್ ಬುಳ್ಳಪ್ಪನವರ ಪುತ್ರ ಚಿ॥ರಾ॥ ಶಿವನಂಜಪ್ಪನೆಂಬ ವರನಿಗೂ, ಬಳ್ಳಾರಿ ಮ॥ರಾ॥ ಅಲ್ಲಂಬಸಪ್ಪನವರ ಪುತ್ರಿ ಚಿ॥ ಸೌ॥ ಮಲ್ಲಮ್ಮನೆಂಬ ವಧುವಿಗೂ ವಿವಾಹಮಹೋತ್ಸವವು ತಾ॥ 26 4 1942 ಭಾನುವಾರದಿವಸ ಬೆಂಗಳೂರು ಸಿಟಿ ಮೈಸೂರುರೋಡಿನಲ್ಲಿರುವ ಕಂಟ್ರ್ಯಾಕ್ಟರ್ ಕೆ ಎನ್ ಗುಬ್ಬಣ್ಣನವರ ಗೃಹದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು ಈ ಮಹೋತ್ಸವಕಾಲದಲ್ಲಿ ಶ್ರೀಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ವಧೂವರರಿಗೆ ಫಲಮಂತ್ರಾಕ್ಷತೆಗಳನ್ನು ಆಶೀರ್ವಾದ ಪತ್ರದ್ವಾರಾ ದಯಪಾಲಿಸಿದ್ದರು ರಾಜಧರ್ಮಪ್ರವೀಣ ಸಿ ಮಹಾದೇವಯ್ಯನವರು, ಡಿಸ್ಟ್ರಿಕ್ಟ್ ಜಡ್ಜ್ ನಾರಾಯಣಸ್ವಾಮಿನಾಯ್ಡು ರವರು, ಲೋಕಸೇವಾನಿರತ ಚಿಕ್ಕಚನ್ನಂಜಪ್ಪಶೆಟ್ಟರು, ಡಿ ಎಸ್. ಮಲ್ಲಪ್ಪನವರು, ಎನ್ ರುದ್ರಯ್ಯನವರು ಮತ್ತು ಷರಾಫ್ ಬಿ ಬಸಪ್ಪನವರು ಮೊದಲಾದ ಅನೇಕ ದೊಡ್ಡಮನುಷ್ಯರುಗಳು ದಯಮಾಡಿಸಿ ವಧೂವರರಿಗೆ ಆಶೀರ್ವದಿಸಿ, ವಿವಾಹಮಹೋತ್ಸವವನ್ನು ಸುಗಮವಾಗಿ ನೆರವೇರಿಸಿದರು ವಿವಾಹಮಹೋತ್ಸವಕಾಲದಲ್ಲಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತಕಾಲೇಜ್ ಫಂಡಿಗಾಗಿ 5 ರೂಪಾಯಿಗಳು ಸಮರ್ಪಿಸಲ್ಪಟ್ಟವು.

ಪ್ರತ್ಯಕ್ಷದರ್ಶಿ.

ತಪೋನುಷ್ಠಾನ ಪರಿಸಮಾಪ್ತಿ, ಸಂಗಮಕ್ಷೇತ್ರ

ಅಕ್ಕಲಕೋಟೆ ಸಂಸ್ಥಾನಕ್ಕೆ ಸೇರಿದ ಕೂಡಲಸಂಗಮದಲ್ಲಿ ಅಜ್ಜನಗಿ ಹಿರೇಮಠದ ವೇ॥ ಸಂಗನಬಸಯ್ಯನವರು ಫಾಲ್ಗುಣ ಶು॥ ೧೫ ದಿವಸ ಅನುಷ್ಠಾನವನ್ನು ಆರಂಭಿಸಿ, ಚಿತ್ರಭಾನುಸಂವತ್ಸರ ವೈಶಾಖ ಶು॥ ೮ ಗುರುವಾರ ದಿವಸ ಹೋಟಗೀ ಶ್ರೀಗಳವರನ್ನು ದಯಮಾಡಿಸಿಕೊಂಡು ಅನುಷ್ಠಾನವನ್ನು ಪೂರೈಸಿದರು ಹೋಟಗಿ ಶ್ರೀಗಳನ್ನೇ ದಯಮಾಡಿಸಿಕೊಳ್ಳಬೇಕೆಂದು ಸದರಿ ಅನುಷ್ಠಾನಮೂರ್ತಿಯು ಆಗ್ರಹಪಡಲು ಕೆಲವು ಕುಹಕರು ಬರಗೊಡಬಾರದೆಂದು ವಿಶೇಷಪ್ರಯತ್ನಪಟ್ಟರು ಪರಂತು ಸಾಧ್ಯವಾಗದೆ, ಅನುಷ್ಠಾನಮೂರ್ತಿಯ ಸಂಕಲ್ಪವು ನಿರ್ವಿಘ್ನವಾಗಿ ನೆರವೇರಿತು ಈ ಅನುಷ್ಠಾನಕಾಲಕ್ಕೆ ಭೋತ್ರಿಗ್ರಾಮದ ಜಿ ಜಿ ಪಾಟೀಲರೂ, ಮಾನಾಪೂರ ಅಣ್ಣಾರಾವ ಪಾಟೀಲರೂ, ವೀರಭದ್ರಪ್ಪ ದಣೀಕರ, ಚಂದಪ್ಪಾ ಪಂಚಾಚಾರ್ಯ ಭಜನಮಾಸ್ತರರು ತಮ್ಮ ಬಾಲಭಜನೆಯೊಡನೆ ಆಗಮಿಸಿದ್ದರು ವೇ॥ ಕೀರ್ತನಕೋವಿದ ನಿಜಗುಣಸ್ವಾಮಿ ಹೊಸಪೇಟೆಕರ ಇತ್ಯಾದಿ ಜನರ ಆಗಮನದಿಂದ ವಿಶೇಷಶೋಭೆಯುಂಟಾಗಿತ್ತು ಹಿಳ್ಳಿ, ಗಬ್ಬೂರ, ಖ್ಯಾಡ, ರುದ್ರೂಡಗಿ, ಕೂಡಲ ಇತ್ಯಾದಿಗ್ರಾಮಗಳ ಜನರು ವಿಶೇಷ ಪರಿಶ್ರಮ ವಹಿಸಿ ಕಾರ್ಯವನ್ನು ನೆರವೇರಿಸಿದರು ಆ ಕಾಲಕ್ಕೆ ಸಾವಿರಾರು ಜನರು ಬಂದಿದ್ದರು ಟಂಪವರ ವ್ಯವಸ್ಥೆಯು ಚೆನ್ನಾಗಿ ಮಾಡಲ್ಪಟ್ಟಿತು 'ಅನುಷ್ಠಾನವನ್ನು ಏಕೆ ಮಾಡಬೇಕು' ಎಂಬುವ ವಿಷಯಕ್ಕೆ ಹೋಟಗೀ ಶ್ರೀಗಳ ಭಾಷಣವಾಯಿತು ಜಿ ಜಿ ಪಾಟೀಲರೂ, ಅನುಷ್ಠಾನಮೂರ್ತಿಗಳಾದ ವೇ॥ ಸಂಗನಬಸವಯ್ಯನವರೂ ಅನುಷ್ಠಾನದಿಂದ ತಮಗಾದ ಆನಂದವನ್ನು ವ್ಯಕ್ತಗೊಳಿಸಿದರು ಶ್ರೀಜಗದಾಚಾರ್ಯರ ಮಂಗಲಜಯಘೋಷದೊಡನೆ ಕಾರ್ಯಕ್ರಮವು ಸಮಾಪ್ತಿಗೊಂಡಿತು

ಚೌಡಪ್ಪಾ ಕುಂಭಾರ, ಭೋತ್ರಿ

॥ ಶ್ರೀಜಗದ್ಗುರು ದಾರುಕಾಚಾರ್ಯೋ ವಿಜಯತೇ ॥

ಶ್ರೀಕ್ಷೇತ್ರ ಸೊಗಲದಲ್ಲಿ ಉಪನಯನ ಮತ್ತು ವಿವಾಹಮಹೋತ್ಸವ

ಧಾರವಾಡ ಜಿ॥ ಹುಬ್ಬಳ್ಳಿ ಹಿರಿಯಮಠದ ವೇ॥ ಸೋಮನಾಥಯ್ಯನವರ ಸುಪುತ್ರಿ ಕು॥ ಸೌ॥ ಚಿ॥ ಶಾಂತಾಬಾಯಿಯವರಿಗೂ ಸಂಪಗಾವ ತಾ॥ ನಾಗನೂರು ಗ್ರಾಮದ ಶೀಲವಂತನವರ ಮಠದ ಚನ್ನಬಸವಯ್ಯನವರ ಸುಪುತ್ರ ವೇ॥ ಶಂಕರಯ್ಯಸ್ವಾಮಿ (ಪೋಸ್ಟ್‌ಮಾಸ್ಟರ್) ಇವರಿಗೂ ತಾ॥ ೨೦-೪-೪೨ ನೇ ದಿನ ವಿವಾಹಮಹೋತ್ಸವವೂ, ಮತ್ತು ವೇ॥ ಸೋಮನಾಥಯ್ಯನವರ ಪುತ್ರ ವೇ॥ ಬಸವಲಿಂಗಯ್ಯಸ್ವಾಮಿಗೂ, ಲಕ್ಷ್ಮೇಶ್ವರ ಹಿರಿಯಮಠದ ವಕೀಲ ವೇ॥ ಲಿಂಗಯ್ಯನವರ ಪುತ್ರ ಚನ್ನಪ್ಪಯ್ಯಸ್ವಾಮಿಗೂ, ಶಿಶುವಿನಹಳ್ಳಿ ಹಿರಿಯಮಠದ ವೇ॥ ಅಂದಾನಯ್ಯನವರ ಪುತ್ರ ಪಂಚಾಕ್ಷರ ಸ್ವಾಮಿಗೂ ಉಪನಯನಮಹೋತ್ಸವವೂ ಶ್ರೀ॥ ಷ॥ ಬ್ರ॥ ಪಟ್ಟಾಧಿಕಾರಿ ಗಂಗಾಧರ ಶಿವಾಚಾರ್ಯರು ರೊಟ್ಟಿಗವಾಡ ಇವರ ಗುರುತ್ವದಲ್ಲಿಯೂ ಮತ್ತು ವೇ॥ ಗುರುಲಿಂಗಯ್ಯನವರು ಹಿರಿಯಮಠ ಬೆಳಗಾಂವ ಶಹಪುರ, ಮುರ್ಜಿ ಹಿರಿಯಮಠದ ವೇ॥ ಷಡಕ್ಷರಶಾಸ್ತ್ರಿಗಳು ಇವರ ಪೌರೋಹಿತ್ಯದಲ್ಲಿಯೂ ವಿಧ್ಯುಕ್ತವಾಗಿ ಶ್ರೀಸೊಗಲ ಕ್ಷೇತ್ರದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿದವು ಈ ಮಂಗಲ ಕಾರ್ಯಕ್ಕೆ ಜೈನಾಪುರ ದೇಸಾಯರ ಗುರುಗಳು, ಬೆಳಗಾಂವಿ ಬಿ ಎ ಕುಲಕರ್ಣಿಯವರು, ಉಗರಗೋಳದ ದೇಸಾಯರು, ಬೈಲಹೊಂಗಲದ ಪಾಟೀಲ ವಕೀಲರು, ಮೂಗಿ ಮಾಸ್ತರು ಹುಬ್ಬಳ್ಳಿ ಮಜೇದಪುರ ಸೆಟ್ರು ಬಿ ಎ, ಮತ್ತು ಬಿ ಬಿ ಶೆಟ್ಟರು, ಕಾಣಿಶೆಟ್ಟರು, ಶಿಂದಗಿಯವರು, ಉಪ್ಪಿನವರು, ವಾಲಿಯವರು, ಟೊಪಿಗಿಯವರು, ಗೊಪ್ಪನಕೊಪ್ಪದ ಕಲ್ಲನಗೌಡರು, ನಾಗನೂರು, ಸೊಲ್ಲಾಪುರ ಮೊದಲಾದ ಅನೇಕ ಗ್ರಾಮಗಳಿಂದ ಮಹಾಜನಗಳು ಆಗಮಿಸಿದ್ದುದರಿಂದ ವಿಶೇಷ ಶೋಭೆಯುಂಟಾಗಿತ್ತು. ವಧೂವರರಿಗೂ ಈ ಮಂಗಲ ಕಾರ್ಯದಲ್ಲಿ ಭಾಗಿಗಳಾದ ಸಕಲ ಮಹಾಜನಗಳಿಗೂ ಗುರುಸಾರ್ವಭೌಮರಾದ ಶ್ರೀ ಜಗದ್ಗುರು ಪಂಚಾಚಾರ್ಯರೂ, ಶ್ರೀಸೊಗಲಕ್ಷೇತ್ರಾಧಿಪತಿಯಾದ ಶ್ರೀ ಸೋಮನಾಥನೂ ದೀರ್ಘಾಯುರಾರೋಗ್ಯ ಭಾಗ್ಯಾದಿಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ,

ಶಿವಪ್ಪ ನಿಡವಣಿ ಕುಸುಗಲ್ಲ

ಭೂದಾನ

ಶಿವಮೊಗ್ಗಾ ಜಿ॥ ಸೊರಬ ತಾ॥ ಉಳವಿ ಹೋಬಳಿ ಕುಳವಳ್ಳಿವಾಸಿ ಚಿಮನೂರ ಹಿರೇಮಠದ ಚನ್ನಪ್ಪಯ್ಯಸ್ವಾಮಿಯವರಿಗೆ ಇದೇ ತಾ॥ ಪುರದಗ್ರಾಮದ ಪಾಟೀಲ ವೀರಪ್ಪಗೌಡರು ತಾ॥ 22 4 42ನೆಯ ಸೋಮವಾರ ಪ್ರಾಣಾವಸಾನಕಾಲದಲ್ಲಿ ಮೇಲ್ಕಂಡ ತಮ್ಮ ಗುರುಗಳಿಗೆ ತಮ್ಮ ಖಾತೆಯಲ್ಲಿರುವ 47ನೇ ಸರ್ವೇನಂಬರು ಜಮೀನನ್ನು ವಾಗ್ದಾನಮಾಡಿದ ಕಾರಣ ಅವರ ಚಿ॥ ಪಾ॥ ಚನ್ನವೀರಪ್ಪಗೌಡರು ಸೊರಬದ ಕಚೇರಿಯಲ್ಲಿ ತಮ್ಮ ಗುರುಗಳಿಗೆ ರಾಜೀ ಕಬೂಲಿಯಿಂದ ಭೂದಾನಪತ್ರವನ್ನು ಒಪ್ಪಿಸಿದರು ಪಾ॥ ಚನ್ನವೀರಪ್ಪಗೌಡರಿಗೆ ಜಗದಾಚಾರ್ಯರು ಇಹದಲ್ಲಿ ಆಯುರಾರೋಗ್ಯಭಾಗ್ಯವನ್ನೂ, ಪರದಲ್ಲಿ ಸದ್ಗತಿಯನ್ನೂ ಕೊಡಲೆಂದು ಹಾರೈಸುವ,

ಹಾಲಗೇರಿ ಪಾ॥ ಬಸವಲಿಂಗಪ್ಪಗೌಡ

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥

ಸಂಸ್ಕೃತ ಕಾಲೇಜು ವಿದ್ಯಾರ್ಥಿಗಳಿಗೆ ಸೂಚನೆ

ಬಳ್ಳಾರಿ ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘವು 1940 ರಲ್ಲಿ ತನ್ನ 1 ಲಕ್ಷದ 80 ಸಾವಿರವೊಳಪಟ್ಟ ಸ್ಥಿರನಿಧಿಯ ವರಮಾನದಲ್ಲಿ 3 ನೇ ಒಂದಂಶವನ್ನು ಕೇವಲ ಮದ್ರಾಸ್ ಅಧಿಪತ್ಯಕ್ಕೆ ಸೇರಿದ ವೀರಶೈವ ವಿದ್ಯಾರ್ಥಿಗಳು ತಮ್ಮ ಅಧಿಪತ್ಯದಲ್ಲಿ ವಿಭಾಗಿಸಿದ ಮದ್ರಾಸ್, ಆಂಧ್ರ, ಅಣ್ಣಾಮಲೆ ಯೂನಿವರ್ಸಿಟಿ ಪರೀಕ್ಷೆಗಳಿಗನುಸರಿಸಿದ ನ್ಯಾಯ, ವ್ಯಾಕರಣ, ಮೀಮಾಂಸಾ, ವೇದಾಂತ ಜ್ಯೋತಿಷ, ಆಯುರ್ವೇದ, ಸಾಹಿತ್ಯ ಶಿರೋಮಣಿ ಕ್ಲಾಸುಗಳಲ್ಲಿ ಅಧ್ಯಯನಮಾಡತಕ್ಕವರಿದ್ದರೆ ಅಂಥ ವಿದ್ಯಾರ್ಥಿಗಳಿಗೆ ವೇತನರೂಪವಾಗಿ ಕೊಡಬೇಕೆಂದು ತೀರ್ಮಾನಿಸಿ ಸಂಸ್ಕೃತದಲ್ಲಿರುವ ತನ್ನ ಅತ್ಯಂತ ಪ್ರೇಮವನ್ನು ವ್ಯಕ್ತಪಡಿಸಿರುವುದು

ಇಂತಹ ಸುಸಂಧಿಯು ಈ ಸಂಘವು ಜನ್ಮವೆತ್ತಿದಂದಿನಿಂದಲೂ ಸಂಸ್ಕೃತಕ್ಕೆ ದೊರೆತಿದ್ದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಲ್ಲ ಆದುದರಿಂದ ಈ ರೀತಿಯಲ್ಲಿ ಅಭ್ಯಾಸಮಾಡತಕ್ಕ ಮದ್ರಾಸ ಅಧಿಪತ್ಯದ ವಿದ್ಯಾರ್ಥಿಗಳು ಶೀಘ್ರದಲ್ಲಿಯೇ ಸಂಘದ ಸೆಕ್ರೆಟರಿಗಳಿಂದ ಅರ್ಜಿಫಾರಂ ತರಿಸಿಕೊಂಡು ತುಂಬಿ ಇದೇ ಜೂನ್ 10 ನೇ ತಾರೀಖಿನೊಳಗೆ ಅವರಿಗೆ ಮುಟ್ಟುವಂತೆ ಕಳುಹಿಸಿ ವೇತನವನ್ನು ಮಂಜೂರಿ ಪಡೆಯಬೇಕಾಗಿ ಸೂಚಿಸುವ,

ಬಳ್ಳಾರಿ ಸಂಘದ ಮ್ಯಾನೇಜಿಂಗ್ ಬಾಡಿ ಮೆಂಬರು,
25—4—1942 ಪವಾಡಶೆಟ್ಟಿ ಮಲ್ಲಾಜಪ್ಪ

ವಿದ್ಯಾರ್ಥಿಗಳಿಗೆ ಸೂಚನೆ

ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರ ಕೃಪಾಪೋಷಿತವಾದ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತಕಾಲೇಜ್ ಮತ್ತು ವೇದಪಾಠಶಾಲಾ ಫ್ರೀ ಬೋರ್ಡಿಂಗ್ ಸಂಸ್ಥೆಯಿಂದ ಈ ಮೂಲಕ ತಿಳಿಸುವುದೇನೆಂದರೆ—

ವೇದ ಮತ್ತು ಸಂಸ್ಕೃತಾಭ್ಯಾಸವನ್ನು ಮಾಡತಕ್ಕ ಪರಸ್ಥಳದ ಬಡ ವೀರಶೈವ ವಿದ್ಯಾರ್ಥಿಗಳಿಗೆ ಮೇಲ್ಕಂಡ ಸಂಸ್ಥೆಯಲ್ಲಿ ಉಚಿತವಾಗಿ ಊಟ ಮತ್ತು ವಸತಿಗಳ ಅನುಕೂಲಪಡಿಸಲಾಗುವದು ಸೇರಲಿಚ್ಛಿಸುವ ವಿದ್ಯಾರ್ಥಿಗಳು ನಮ್ಮಲ್ಲಿ ದೊರೆಯುವ ಅಪ್ಲಿಕೇಷನ್ ಫಾರಂಗಳನ್ನು ಭರ್ತಿಮಾಡಿ ತಾ॥ 15-5-42 ರ ವರೆಗಾಗಿ ಕಳುಹಿಸತಕ್ಕದ್ದು. ಮೇಲ್ಕಂಡ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳೂ ಸಹ ಸಕಾಲದಲ್ಲಿ ಅಪ್ಲಿಕೇಷನ್‌ಗಳನ್ನು ಕಳುಹಿಸತಕ್ಕದ್ದು. ತಡವಾಗಿ ಬರುವ ಅಪ್ಲಿಕೇಷನ್‌ಗಳಿಗೆ ನಿಗಾಕೊಡಲಾಗುವುದಿಲ್ಲ 12 ವರ್ಷ ವಯಸ್ಸಿನ ಮೇಲ್ಪಟ್ಟವರು ಮಾತ್ರ ಅಪ್ಲಿಕೇಷನ್ ಕಳಿಸತಕ್ಕದ್ದು ಫಾರಂಗಳನ್ನು ಹೊಂದಲಿಚ್ಛಿಸುವ ವಿದ್ಯಾರ್ಥಿಗಳು ಈ ಕೆಳಗೆ ಕಂಡ ಅಡ್ರೆಸ್ಸಿಗೆ 0-1-0 ಆಣೆ ಸ್ಟಾಂಪನ್ನು ಕಳುಹಿಸಿದರೆ, ರವಾನಿಸಲಾಗುವುದು.

ಸೆಕ್ರೆಟರಿ,
ಎಸ್ ರುದ್ರಯ್ಯ,
ಶ್ರೀ॥ ಜ॥ ರೇ॥ ಪಂ॥ ಸಂಸ್ಕೃತಕಾಲೇಜ್,
ಮತ್ತು ವೇದಪಾಠಶಾಲಾ ಫ್ರೀ ಬೋರ್ಡಿಂಗ್,
ಮಹಂತಿನಮಠ ಅಕ್ಕಿಪೇಟೆ,
ಬೆಂಗಳೂರುಸಿಟಿ.

ವಿಮಾನದಾಳಿಯ ಸೂಚನೆ

(ಎ ಆರ್ ಪಿ ಅಧಿಕಾರಿಗಳ ವಿವರಣೆ)

(ಹಿಂದಿನಂಕದ ಮುಂದುವರಿದುದು).

ಮೊದಲನೆಯ ಅಪಾಯ

ವಿಮಾನದಾಳಿಯಿಂದ ಅತ್ಯಂತ ಹೆಚ್ಚಿನ ಸ್ವತ್ತು ನಷ್ಟದ ಅಪಾಯವಿರುವುದಕ್ಕೆ ಬೆಂಕಿ ಹೊತ್ತಿಕೊಳ್ಳುವ ಬಾಂಬುಗಳೇ ಕಾರಣ ಸಿಡಿಬಾಂಬುಗಳು ಕಾರ್ಖಾನೆ ಮುಂತಾದವುಗಳ ಮೇಲೂ ನಗರಗಳ ಮೇಲೂ ಬೀಳುವುವೆಂದು ನಿರೀಕ್ಷಿಸಬಹುದಾಗಿದೆ ಅವುಗಳಿಂದ ಉಂಟಾಗುವ ಕೇಡು ಪ್ರತ್ಯೇಕ ಪ್ರದೇಶಕ್ಕೆ ಮಾತ್ರ ಪರಿಮಿತವಾಗಿರುತ್ತದೆ ಸಿಡಿಬಾಂಬುಗಳಿಂದ ಆಗುವ ಅಪಾಯಕ್ಕಿಂತ ಬಹಳ ಹೆಚ್ಚಿನ ಅಪಾಯವು ಬೆಂಕಿಯನ್ನು ಹೊತ್ತಿಸುವ ಉರಿಬಾಂಬುಗಳಿಂದ ಆಗುತ್ತದೆ ಹೇಗೆಂದರೂ, ಆ ವಿಧದ ಉರಿಬಾಂಬುಗಳನ್ನು ತಯಾರಿಸುವುದರಲ್ಲಿ ಸಿಡಿಮದ್ದೂ ಸೇರುವುದರಿಂದ ಅದು ಸಿಡಿದು ಹೆಚ್ಚಿನ ನಷ್ಟಕ್ಕೆ ಕಾರಣವಾಗುತ್ತದೆ ಅಲ್ಲದೆ, ಹೆಚ್ಚು ಹೆಚ್ಚು ಕಡೆಗಳಿಗೆ ಉರಿಯುವ ವಸ್ತುಗಳು ಸಿಡಿದು ವಿಪರೀತವಾಗಿ ಉರಿಗಳು ಏಳುತ್ತವೆ ಒಂದು ನಗರದ ಸಾಮಾನ್ಯ ಸಿಬ್ಬಂದಿಯವರು ಅವುಗಳನ್ನು ಆರಿಸುವುದು ಸಾಧ್ಯವೇ ಇಲ್ಲದಷ್ಟು ಮಟ್ಟಿಗೆ ಅವು ಹೆಚ್ಚಾಗಿರುತ್ತವೆ ಶತ್ರುಗಳು ಈ ಬಗೆಯ ಬಾಂಬುಗಳನ್ನು ಹಾಕುವುದು, ನಗರಗಳಲ್ಲಿ ಜನಸಂದಣಿಯು ಹೆಚ್ಚಾಗಿರುವ ಸ್ಥಳಗಳಲ್ಲೇ ಈ ಬಗೆಯ ಬಾಂಬುಗಳಲ್ಲಿ ಒಂದು ಕಿಲೋಗ್ರಾಂ ಅಥವಾ ಎರಡು ಕಿಲೋಗ್ರಾಂ ತೂಕವಿರುವ "ಮ್ಯಾಗ್ನೆಟೋಬಾಂಬ್" ಮತ್ತು "ಥರ್ಮೆಟ್ ಬಾಂಬ್' ಎಂದು ಎರಡು ಜಾತಿಗಳುಂಟು ಒಂದೊಂದು ಬಾಂಬರ್ ವಿಮಾನದಲ್ಲಿ ಒಂದು ಸಲಕ್ಕೆ 1000 ದಿಂದ 2000 ಬಾಂಬುಗಳವರೆಗೂ ಒಯ್ಯಬಹುದು ಅವುಗಳನ್ನು ಬಿಡಿ ಬಿಡಿಯಾಗಿಯೂ ಹಾಕುವುದುಂಟು, ಅಥವಾ "ಮಾಲ್ಟೋವ್ ಬ್ಯಾಸ್ಕೆಟ್ಸ್" ಸಾಧನಗಳಲ್ಲಿ ಜೋಡಣೆಗೊಳಿಸಿ ಹಾಕುವುದೂ ಉಂಟು. ಆ ಬಾಂಬುಗಳು ಬಿದ್ದಾಗಿನ ಉರಿಯನ್ನು ಆರಿಸುವುದಕ್ಕಾಗಿ ತಕ್ಕಷ್ಟು ಜನಬಲವುಳ್ಳದಾಗಿ ಕಾರ್ಯದಕ್ಷತೆಯಿಂದ ಕೆಲಸ ಮಾಡುವ ಸಿಬ್ಬಂದಿಯನ್ನು ನೇಮಕಮಾಡುವುದು ಮೊಟ್ಟಮೊದಲನೆಯ ಕೆಲಸ "ಫೈರ್‌ಬ್ರಿಗೇಡ್" ಎಂಬ ಬೆಂಕಿಯನ್ನಾರಿಸುವ ವಿಶೇಷಬಗೆಯ ಸಿಬ್ಬಂದಿಯಿಲ್ಲದ ಬೆಂಗಳೂರಿನಂಥ ನಗರದಲ್ಲಿ ನಾವು ನೆರವೇರಿಸಬಹುದಾದ ಕಾರ್ಯವಿಷ್ಟು "ಉರಿಯಮೇಲೆ ರಭಸದಿಂದ ನೀರನ್ನೆರಚುವ ತಕ್ಕಷ್ಟು ಸಪ್ಲೈಯು" "ಟ್ರೇಯ್ಲರ್ ಪಂಪು" ಗಳನ್ನು ತರಿಸಿ ಅವುಗಳನ್ನು ಪ್ರಯೋಗಿಸಲು ಅವಶ್ಯವಾದಷ್ಟು ತಂಡಗಳ ಜನರಿಗೆ ಶಿಕ್ಷಣ ಕೊಡುವುದು ಈ ಏರ್ಪಾಡು ನಡೆಯದೆಹೋದರೆ ನಿರ್ವಾಹವೇ ಇಲ್ಲ ಮೇಲೆ ಹೇಳಿದ ಬಗೆಯ ಬಾಂಬುಗಳು ಬಿದ್ದಾಗ್ಗೆ ನಿಜವಾಗಿಯೂ ಆಕಾಶದಿಂದ ಬೆಂಕಿಯ ಮಳೆಯಂತೆಯೇ ಬೀಳುತ್ತವೆ, ಎಲ್ಲೆಲ್ಲಿಯೂ ಜ್ವಾಲೆಗಳೇಳುತ್ತವೆ, ಕಟ್ಟಡಗಳು ಮುಂತಾದುವು ಧಗಧಗನೆ ಉರಿಯಲು ಪ್ರಾರಂಭವಾಗುತ್ತವೆ. ಆದಕಾರಣ, ಬೆಂಕಿಯನ್ನು ಆರಿಸುವುದಕ್ಕಾಗಿ ಆ ಏರ್ಪಾಡು ನಡೆಯದೆಹೋದರೆ, ಬೆಂಕಿಯ ಅಪಾಯದಿಂದ ನಗರವನ್ನು ರಕ್ಷಿಸುವುದಕ್ಕೇ ಆಗುವುದಿಲ್ಲ

ಬೆಂಕಿಯನ್ನಾರಿಸುವ ನಗರದ ಪ್ರಧಾನ ಸಿಬ್ಬಂದಿಗಳ ಜೊತೆಗೆ ನಗರದ ನಾನಾ ಭಾಗಗಳಲ್ಲಿಯೂ ಬೀದಿಬೀದಿಗಳಲ್ಲಿ ಬೆಂಕಿಯನ್ನಾರಿಸುವ ಸಣ್ಣ ಸಿಬ್ಬಂದಿಗಳಿರಬೇಕಾದುದೂ ಅಗತ್ಯ ಆ ಸಿಬ್ಬಂದಿಗಳು ಬೆಂಕಿಯನ್ನಾರಿಸುವ

[೬ನೇ ಪುಟವನ್ನು ನೋಡಿ]

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು॥ ಪಂಚಮಿಗೆ ೧೫ ವರ್ಷಗಳು ತುಂಬಿ ೧೬ ನೆಯ ವರ್ಷವು ಪ್ರಾರಂಭವಾಗಿರುವುದು ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ ವಿ.ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ವಿ.ಪಿ. ಮಾಡಿದರೆ ೨ ರೂ ೧೪ ಆಣೆ ಬೀಳುವದು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು

ವ್ಯಾ —

ಪಂಚಾಚಾರ್ಯಪ್ರಭಾ.

೧೯೪೨ನೆಯ ಮೇ ತಾ॥ ೪ನೆಯ ಸೋಮವಾರ

ವಿದೇಶಗಳಲ್ಲಿ ಶಿವಾಲಯಗಳ ವ್ಯಾಪಕತೆ.

“ಪೋ-ನಗರ” ಎಂಬ ಗ್ರಾಮದಲ್ಲಿರುವ ಒಂದು ಶಾಸನದಲ್ಲಿ (೪೫ನೆಯ ಶಾಸನದಲ್ಲಿ) ಭದ್ರವರ್ಮಮಹಾರಾಜನ ಪುತ್ರನಾದ ಇಂದ್ರವರ್ಮಮಹಾರಾಜನ ವಿದ್ವತ್ತೆಯು ಹೀಗೆ ವರ್ಣಿಸಲ್ಪಟ್ಟಿದೆ

ಮೀಮಾಂಸಷಟ್ತರ್ಕಜಿನೇಂದ್ರಸೂರ್ಮಿಸ್ಸಕಾಶಿಕಾವ್ಯಾ
ಕರಣೋದಕೌಘಃ ।
ಆಖ್ಯಾನಶೈವೋತ್ತರಕಲ್ಪಮೀನಃ ಪಟಿಷ್ಠ ಏತೇಷ್ವಕೃತಿ
ಸತ್ಕವೀನಾಂ ॥

ಇಂದ್ರವರ್ಮಮಹಾರಾಜನು ಮೀಮಾಂಸಾ, ತರ್ಕ, ಜಿನೇಂದ್ರವ್ಯಾಕರಣ, ಪಾಣಿನೀಯವ್ಯಾಕರಣ, ಆಖ್ಯಾನ ಮತ್ತು ಶೈವೋತ್ತರತಂತ್ರಗಳಲ್ಲಿ ಜ್ಞಾನಿಯಾಗಿದ್ದನೆಂದು ಈ ಶ್ಲೋಕದ ಅಭಿಪ್ರಾಯವಿರುತ್ತದೆ ಶೈವೋತ್ತರತಂತ್ರವೆಂದರೆ ಶಿವಾಗಮಗಳ ಉತ್ತರಭಾಗವು ಶಿವಾಗಮಗಳ ಉತ್ತರಭಾಗದಲ್ಲಿ ವೀರಶೈವಮತ ವಿಷಯವು ವಿಸ್ತಾರವಾಗಿ ಹೇಳಲ್ಪಟ್ಟಿರುವುದು ಪ್ರತಿಯೊಬ್ಬರಿಗೂ ವೇದ್ಯವಾದುದಾಗಿದೆ ಈ ಶ್ಲೋಕದಲ್ಲಿ ಕೊಟ್ಟಿರುವ ವಿಶೇಷಣವನ್ನು ವಿಚಾರಮಾಡಿನೋಡಿದರೆ, ಇಂದ್ರವರ್ಮಮಹಾರಾಜನು ಶೈವಾಗಮೋತ್ತರಭಾಗದಲ್ಲಿ ಉಕ್ತವಾಗಿರುವ ವೀರಶೈವಸಿದ್ಧಾಂತವನ್ನು ಚನ್ನಾಗಿ ತಿಳಿದುಕೊಂಡಿದ್ದನೆಂದು ಸ್ಪಷ್ಟವಾಗುತ್ತದೆ

ಅಲ್ಲದೆ ಆ ದೇಶದಲ್ಲಿರುವ ಅನೇಕವಿಘ್ನೇಶ್ವರಮೂರ್ತಿಗಳ ಹಸ್ತದಲ್ಲಿ ಶಿವಲಿಂಗಧಾರಣವಿರುವುದನ್ನು ಪರಿಶೀಲಿಸಿದರೆ, ಇದಕ್ಕೆ ವೀರಶೈವಾಚಾರ್ಯರ ಉಪದೇಶವೇ ಕಾರಣವಾಗಿರಬಹುದೆಂದೂ, ಶಿವಲಿಂಗಧಾರಣವು ವೀರಶೈವಮತಕ್ಕೆ ಅಂಗವಾಗಿರುವುದರಿಂದ ವೀರಶೈವಾಚಾರ್ಯರು ಆ ಮೂರ್ತಿಗಳನ್ನು ಆ ರೀತಿ ಲಿಂಗಧಾರಣಯುತಗಳನ್ನಾಗಿ ಮಾಡಿರಬಹುದೆಂದೂ ತೋರಿಬರುತ್ತದೆ ೩೫ನೆಯ ಶಾಸನದಲ್ಲುಕ್ತವಾಗಿರುವ “ಶಿವಾಚಾರ್ಯ” ಎಂಬ ಪದದಿಂದಲೂ, ೪೫ನೆಯ ಶಾಸನದಲ್ಲುಕ್ತವಾಗಿರುವ “ಶೈವಾಗಮೋತ್ತರಭಾಗ”ವನ್ನು ತಿಳಿದ ಇಂದ್ರವರ್ಮಮಹಾರಾಜನ ವರ್ಣನೆಯಿಂದಲೂ, ಅನೇಕ ವಿಘ್ನೇಶ್ವರಮೂರ್ತಿಗಳ ಹಸ್ತದಲ್ಲಿರತಕ್ಕ “ಶಿವಲಿಂಗಧಾರಣ”ದಿಂದಲೂ ಆ ದೇಶದಲ್ಲಿ ಆ ಕಾಲಕ್ಕೆ ವೀರಶೈವರು ವಾಸಿಸುತ್ತಿದ್ದರೆಂದು ಧಾರಾಳವಾಗಿ ಹೇಳಬಹುದಾಗಿದೆ ಈ ರೀತಿಯಾಗಿ ಅಸಾಧಾರಣಶೈವಸಂಪತ್ತಿಯಿಂದೊಡಗೂಡಿದ ಅನ್ನಾಂದೇಶವು ಕಾಲಮಹಿಮೆಯಿಂದ ಈಗ ಪರದೇಶೀಯರ ಕೈಸೇರಿ ನಾಸ್ತಿಕಮಯವಾಗಿರುವುದನ್ನು ನೋಡಿದರೆ ಯಾರಿಗೆತಾನೆ ವ್ಯಸನವೆನಿಸಲಿಕ್ಕಿಲ್ಲ? ಕಾಲಾಯ ತಸ್ಮೈ ನಮಃ!

ಅನ್ನಾಂದೇಶದಂತೆ ಕಾಂಬೋಡಿಯಾದೇಶದಲ್ಲಿಯೂ ಸಹ ಶಿವಲಿಂಗಮೂರ್ತಿಗಳು ವಿರಾಜಿಸುತ್ತಿರುವುವು ಈ ಕಾಂಬೋಡಿಯಾ ದೇಶವಾದರೂ ಫ್ರೆಂಚರ ಸ್ವಾಧೀನದಲ್ಲಿರುವುದು ಈ ದೇಶಕ್ಕೆ ಪೂರ್ವದಲ್ಲಿ “ಕಂಬುಜ”ವೆಂದು ಕರೆಯುತ್ತಿದ್ದರು ಪೂರ್ವದಲ್ಲಿ ಈ ದೇಶವನ್ನಾಳುತ್ತಿದ್ದ ರಾಜೇಂದ್ರವರ್ಮಮಹಾರಾಜನೆಂಬವನು ಶಾಲಿವಾಹನಶಕ ೮೬೬ರಲ್ಲಿ ಈಗ “ಅಂಕೋರ್‌ತೋಮ್” ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ “ಯಶೋಧರಪುರ”ಯ ಕೆರೆಯ ಮಧ್ಯಭಾಗದಲ್ಲಿ ಶಿವಲಿಂಗವನ್ನು ಸ್ಥಾಪಿಸಿರುವ ವಿಷಯವು, ಆ ದೇಶದ ‘ಸಿಯಾಂರಾಪ್” ಡಿಸ್ಟ್ರಿಕ್ಟಿನಲ್ಲಿ “ಬಾತ್‌ಚೂಮ್” ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಗೋಪುರದ ಕಂಬಗಳ ಮೇಲೆ ಕೆತ್ತಲ್ಪಟ್ಟಿರುವ ಶಾಸನಗಳಿಂದ ಗೊತ್ತಾಗುತ್ತದೆ

ಅನ್ನಾಂ ಮತ್ತು ಕಾಂಬೋಡಿಯಾ ದೇಶಗಳನ್ನಾಳುತ್ತಿದ್ದ ಮಹಾರಾಜರು ಕರ್ನಾಟಕ ಅಥವಾ ಆಂಧ್ರದೇಶದವರೆಂದು ಹೇಳಬಹುದಾಗಿದೆ ಏಕೆಂದರೆ—ಆ ಎರಡೂ ದೇಶಗಳಲ್ಲಿ ದೊರೆಯುತ್ತಕ್ಕ ಪ್ರತಿಯೊಂದು ಶಾಸನದಲ್ಲಿಯೂ ಶಾಲಿವಾಹನಶಕವು ಉಲ್ಲೇಖಿಸಲ್ಪಟ್ಟಿರುವುದರಿಂದಲೂ, ಆ ಕಾಲದಲ್ಲಿ ಈ ಶಕವು ಕರ್ನಾಟಕ ಮತ್ತು ಆಂಧ್ರದೇಶಗಳಲ್ಲಿ ಮಾತ್ರ ಪ್ರಚಾರದಲ್ಲಿದ್ದು ಉಳಿದ ದೇಶಗಳಲ್ಲಿ ಇಲ್ಲದಿದ್ದುದರಿಂದಲೂ, ಆ ದೇಶದ ಮಹಾರಾಜರು ತಮ್ಮ ಜನ್ಮಭೂಮಿಯಲ್ಲಿ ಪ್ರಚಾರದಲ್ಲಿದ್ದ ಶಕವನ್ನೇ ತಾವು ಆಳತಕ್ಕ ಆ ದೇಶದಲ್ಲಿಯೂ ಸಹ ಪ್ರಚಾರದಲ್ಲಿ ತಂದಿದ್ದರೆಂದು ಸ್ಪಷ್ಟವಾಗುತ್ತದೆ ಆ ಮಹಾರಾಜರು ನಮ್ಮಾ ದೇಶದವರಾದುದರಿಂದಲೇ ಘನತರವಾದ ಶಿವಭಕ್ತಿಯಿಂದೊಡಗೂಡಿ, ವಿದೇಶಗಳಲ್ಲಿಯೂ ಸಹ ಶಿವಭಕ್ತಿಸಂಪತ್ತನ್ನು ಹೆಚ್ಚಿಸಿದರೆಂದು ಕಂಡುಬರುತ್ತದೆ

ಈಗ್ಗೆ ೫ ೬ ವಾರಗಳಿಂದ ಅನ್ನಾಂದೇಶದಲ್ಲಿರುವ ಪ್ರಾಚೀನ ಶಿವಲಿಂಗಗಳ ಮತ್ತು ಪ್ರಾಚೀನ ಶಿವಭಕ್ತರಾಜರ ವಿಷಯವನ್ನು ಶಾಸನಗಳ ಮೂಲಕ ಪ್ರತಿಪಾದಿಸಿರುವದನ್ನು ನೋಡಿ ವಾಚಕರು ಸಂತುಷ್ಟಚಿತ್ತರಾಗಿರಬಹುದು ಮುಂದಿನ ವಾರ ಡಚ್ಚರ ರಾಜ್ಯದಲ್ಲಿರುವ ಶಿವಾಲಯಗಳ ವಿಷಯವನ್ನು ಪ್ರತಿಪಾದಿಸುವದಾಗುವದು

ಯುದ್ಧವಾರ್ತೆ.

ಪ್ಯಾಸೆಂಜರ್ ಟ್ರೈನುಗಳನ್ನು ಮತ್ತಷ್ಟು ನಿಲ್ಲಿಸಿದ್ದಾರೆ

ಮೇ ತಾ॥ ೧ ರಿಂದ ಕೆಲವು ರೈಲ್ವೆಗಳಲ್ಲಿ ಮತ್ತಷ್ಟು ಪ್ಯಾಸೆಂಜರ್ ಟ್ರೈನುಗಳನ್ನು ವಜಾಮಾಡಿ ಅವುಗಳನ್ನು ಮಿಲಿಟರಿಗೆ ಉಪಯೋಗಿಸಿಕೊಳ್ಳಲಾಗುತ್ತಿದೆಯೆಂದು ಇಂಡಿಯ ಸರ್ಕಾರದ ಪ್ರಕಟನೆ ಹೊರಟಿದೆ ಇನ್ನು ಮುಂದೆ ಖಾಸಗಿ ಜನರೊಬ್ಬಬ್ಬರಿಗಾಗಿಯೇ ಸ್ಪೆಷಲ್ ಟ್ರೈನುಗಳನ್ನು ಬಿಡಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ

ಆಸ್ಟ್ರೇಲಿಯಾ ಪ್ರಧಾನರ ಹೇಳಿಕೆ

ಆಸ್ಟ್ರೇಲಿಯಾದ ಮಹಾಪ್ರಧಾನ ಶ್ರೀಕರ್ಟಿನ್ನರು ಶಾಸನಸಭೆಯಲ್ಲಿ ಮಾತನಾಡುತ್ತ—“ನ್ಯೂಗಿನಿಯಾ ಮುಂತಾದ ಪ್ರದೇಶಗಳಲ್ಲಿ ಜಪಾನರಿಗೆ ವಿಮಾನಗಳಲ್ಲೂ ಹಡಗುಗಳಲ್ಲೂ ಅಪಾರ ಹಾನಿಯಾಗಿದೆ. ಆದರೂ ಜಪಾನರು ಆಸ್ಟ್ರೇಲಿಯವನ್ನು ಮುತ್ತುವ ಭಯವು ತಪ್ಪಿಲ್ಲವೆಂದು ಸರ್ಕಾರವು ತಿಳಿದುಕೊಂಡಿದೆ.” ಎಂದು ಹೇಳಿದರು.

ಜಪಾನರನ್ನು ೧೮ ತಿಂಗಳಲ್ಲಿ ಸೋಲಿಸಬಹುದು.

ಅಮೇರಿಕದಲ್ಲಿ ಚೀನಾದೇಶದ ರಾಯಭಾರಿಗಳಾಗಿರುವ ಡಾ॥ ಹ್ಯೂಷಿಯವರು ಬುಧವಾರ ಚಿಕಾಗೋ ನಗರದಲ್ಲಿ ಭಾಷಣಮಾಡುತ್ತ ಮಿತ್ರರಾಷ್ಟ್ರಗಳು ಜಪಾ ಜಪಾನನ್ನು 18 ತಿಂಗಳಲ್ಲಿ ಸೋಲಿಸಬಹುದೆಂದು ಹೇಳಿದರು “ಚೀನಾದೇಶದ ಸೈನಿಕರಿಗೆ ಸಾಕಾದಷ್ಟು ಸಹಾಯವಿಲ್ಲ ಆಯುಧಗಳಿಲ್ಲ. ಹೀಗಿದ್ದರೂ ಕೂಡ ಅವರು ಕಳೆದ 5 ವರ್ಷಗಳಿಂದ ಜಪಾನೀಯರನ್ನು ಪ್ರತಿಭಟಿಸುತ್ತಿರುವಾಗ ತಕ್ಕಷ್ಟು ಸಾಧನಗಳನ್ನು ಪಡೆದಿರುವ ಮತ್ತು ವಿಶೇಷವಾಗಿ ಸಂಗ್ರಾಮವಸ್ತುಗಳನ್ನು ನಿರ್ಮಾಣಮಾಡುತ್ತಿರುವ ಮಿತ್ರರಾಷ್ಟ್ರಗಳು ಬೇಗನೆ ಜಪಾನರನ್ನುಸೋಲಿಸಿ ಜಯವನ್ನು ಗಳಿಸಲು ಸಾಧ್ಯವಾಗಬಹುದು.” ಎಂದು ನುಡಿದರು

ಬ್ರಿಟಿಷ್ ವಿಮಾನಗಳ ಮುತ್ತಿಗೆ

ಬ್ರಿಟಿಷ್ ವಿಮಾನಗಳು ಮಂಗಳವಾರ ರಾತ್ರಿ ಕೀಲ್ ಮತ್ತು ಟ್ರಾಂಡ್‌ಹೀಂ ಬಂದರುಗಳ ಮೇಲೆ ಮುತ್ತಿಗೆ ನಡೆಸಿ ವಿಶೇಷ ಅನರ್ಥವನ್ನುಂಟುಮಾಡಿದವೆಂದು ಅಧಿಕಾರಯುತವಾಗಿ ಪ್ರಕಟನೆಹೊರಡಿಸಲಾಗಿದೆ ಹಾಲೆಂಡ್ ಮತ್ತು ಬೆಲ್ಜಿಯಂ ದೇಶಗಳಲ್ಲಿರುವ ವಿಮಾನನಿಲ್ದಾಣಗಳ ಮೇಲೆ ಕೂಡ ವಿಮಾನ ಮುತ್ತಿಗೆಗಳನ್ನು ನಡೆಸಲಾಯಿತು ನಾರ್ವೆಯಲ್ಲಿದ್ದ ಜರ್ಮನಿ ಸಂಗ್ರಾಮನೌಕೆಗಳಿಗೆ ಪೆಟ್ಟುತಾಕಿತೆಂದು ಆ ಪ್ರಕಟನೆಯು ತಿಳಿಸುವುದು ಟ್ರಾಂಡ್‌ಹೀಂ ಬಂದರಿನಲ್ಲಿ, ಜರ್ಮನಿಯ ಮುಖ್ಯ ಮುಖ್ಯ ಸಂಗ್ರಾಮನೌಕೆಗಳಿವೆ ಆ ಸಂಗ್ರಾಮನೌಕೆಗಳಮೇಲೂ ಬ್ರಿಟಿಷ್ ವಿಮಾನಗಳು ಮುತ್ತಿಗೆ ನಡೆಸಿದವು

ಸ್ಟಾಲಿನರವರ ಸಂದೇಶ

ರಷ್ಯಾ ಸರ್ವಾಧಿಕಾರಿಗಳಾದ ಸ್ಟಾಲಿನ್‌ರವರು ಮೇ ದಿನಾಚರಣೆಯ ಸಂದರ್ಭದಲ್ಲಿ ಒಂದು ಸಂದೇಶವನ್ನು ಕಳಿಸುತ್ತ—

‘ನಾವು ನಮ್ಮ ದೇಶಕ್ಕೋಸ್ಕರ ನ್ಯಾಯಕ್ಕೂ ಮತ್ತು ಸ್ವಾತಂತ್ರ್ಯಕ್ಕೂ ಯುದ್ಧ ಮಾಡುತ್ತಿದ್ದೇವೆ. ನಾವು ಪರದೇಶವನ್ನಾಗಲೀ ಜನಗಳನ್ನಾಗಲೀ ಜಯಿಸುವ ಆಸೆಯನ್ನಿಟ್ಟುಕೊಂಡಿಲ್ಲ. ನಮ್ಮ ಧ್ಯೇಯವು ನ್ಯಾಯವಾಗಿರುವುದಲ್ಲದೆ ಎಲ್ಲರಿಗೂ ಚೆನ್ನಾಗಿ ತಿಳಿದಿರುವಂತೆ ನಮ್ಮ ದೇಶವನ್ನು ಜರ್ಮನ್ ಮೃಗಗಳಿಂದ ಪಾರುಮಾಡುವುದೇ ಆಗಿದೆ ಶತ್ರುಗಳು ತಮ್ಮ ಅಸ್ತ್ರವನ್ನು ಕೆಳಕ್ಕೆ ಇಳಿಸದಿದ್ದಲ್ಲಿ ನಾವು ಪ್ರತಿಯೊಬ್ಬನನ್ನೂ ನಿರ್ಮೂಲ ಮಾಡಬೇಕು ಇದಲ್ಲದೆ ಬೇರೆ ದಾರಿಯೇ ಇಲ್ಲ ನಮಗೆ ಇರುವ ಸಾಧನಗಳನ್ನೆಲ್ಲ ನಾವು ಪೂರ್ತಿಯಾಗಿ ಉಪಯೋಗಿಸಿಕೊಂಡಿರುವುದಿಲ್ಲ. ಆದುದರಿಂದ ರಷ್ಯ ವೈಮಾನಿಕರೂ, ಟ್ಯಾಂಕ್ ನಡೆಯುವವರೂ, ಮೆಷಿನ್‌ಗನ್, ಕುದುರೆ ಮತ್ತು ಇತರ ಪಡೆಗಳವರೂ ತಮ್ಮ ಕೆಲಸದಲ್ಲಿ ಉತ್ಸಾಹವನ್ನು ತೋರಿಸಿ ಶತ್ರುಗಳನ್ನು ಧ್ವಂಸಮಾಡುವ ಕಾರ್ಯದಲ್ಲಿ ವಿಶೇಷ ಪರಿಶ್ರಮವನ್ನು ವಹಿಸಬೇಕು ೧೯೪೨ ನೆಯ ಇಸವಿಯಲ್ಲಿ ಶತ್ರುಗಳನ್ನು ನಿಗ್ರಹಿಸಿ ದೇಶದ ಸ್ವಾತಂತ್ರ್ಯವನ್ನು ಗಳಿಸುವುದೇ ನಮ್ಮ ಮೂಲ ಮಂತ್ರವಾಗಿರಬೇಕು ”

ಶ್ರೀಮನ್ಮಹಾರಾಜರವರ ವಿವಾಹ ಮಹೋತ್ಸವ

ಶ್ರೀಮನ್ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ ದ್ವಿತೀಯ ವಿವಾಹಮಹೋತ್ಸವವು ಮೇ ೬ನೆಯ ತಾರೀಖಿನ ದಿವಸ ಲೇಟ್ ಕ॥ ಜಾನೋ ಅರಸಿನವರ ಮೊಮ್ಮಕ್ಕಳೂ ಲೇಟ್ ಲೆಫ್ಟಿನೆಂಟ್ ಬಾಳನಂಜರಾಜೇ ಅರಸಿನವರ ಜ್ಯೇಷ್ಠ ಪುತ್ರಿಯವರೂ ಆದ ಶ್ರೀಮತಿ ತ್ರಿಪುರಸುಂದರಮ್ಮಣ್ಣಿಯವರೊಡನೆ ಅರಮನೆಯ ಕಲ್ಯಾಣಮಂಟಪದಲ್ಲಿ ವೈಭವದಿಂದ ನೆರವೇರುವದು.

ಜಪಾನ್ ನೌಕಾಬಲವೆಲ್ಲಿಹೋಗಿದೆ?

ಈಗ ಕೆಲವು ವಾರಗಳ ಹಿಂದೆ ಸಿಲೋನಿನ ಮೇಲೆ ದಾಳಿ ನಡೆಸಿದ ಜಪಾನ್ ನೌಕಾಬಲವು ಈಗ ಅದೃಶ್ಯವಾಗಿದೆ ಇದು ಕೇವಲ ತಾತ್ಕಾಲಿಕವೆಂದು ನಂಬಲಾಗಿದೆ ಬಹುಶಃ ಈ ಜಪಾನ್ ನೌಕಾಬಲವೆಲ್ಲವೂ ಕಲ್ಲಿದ್ದಲು ಮೊದಲಾದ ಅವಶ್ಯವಸ್ತುಗಳನ್ನು ತುಂಬಿಕೊಂಡು ಸಜ್ಜಾಗಿ ಬರಲು ಪೋರ್ಟ್‌ಬ್ಲೇರ್ ಬಂದರಿಗೋ, ಸಿಂಗಪುರಕ್ಕೋ ಹೋಗಿರಬೇಕೆಂದೂ ಅವುಗಳ ಸಿದ್ಧತೆಗಳು ಮುಗಿದಕೂಡಲೆ ಅವು ಪಶ್ಚಿಮದ ಕಡೆಗೆ ಮುನ್ನುಗ್ಗುವ ತಮ್ಮ ಕಾರ್ಯವನ್ನು ಮುಂದುವರಿಸಬಹುದೆಂದೂ ಊಹಿಸಲಾಗಿದೆ

ಭಾರತದ ಮುತ್ತಿಗೆ ಅಸಂಭವ

ಬರ್ಮಾದಲ್ಲಿ ಜಪಾನರು ಬೇಗ ಬೇಗನೆ ಮುಂದುವರಿಯುತ್ತಿರುವುದನ್ನು ಚೀನಾ ಸಂಗ್ರಾಮ ಪ್ರಕಟನೆಯಲ್ಲಿ ಒಪ್ಪಿಕೊಳ್ಳಲಾಗಿದೆ. ಅಲ್ಲದೆ ಬರ್ಮಾವನ್ನು ಮುಗಿಸಿದ ಮೇಲೆ ಜಪಾನರು ಮುಂದೇನುಮಾಡುವರೆಂಬ ವಿಚಾರದಲ್ಲಿ ಆಗಲೇ ಚೀನಾದಲ್ಲಿ ಊಹಾಪೋಹಗಳು ನಡೆಯುತ್ತಿವೆ ಉತ್ತರ ಬರ್ಮಾವನ್ನು ಮುಟ್ಟಿದ ತರುವಾಯ ಜಪಾನರು ಭಾರತದ ಕಡೆಗೆ ತಿರುಗುವರೆಂದು ಕೆಲವು ಕ್ಷೇತ್ರಗಳಲ್ಲಿ ಅಭಿಪ್ರಾಯ ಪಡಲಾಗಿದೆ. ಆದರೆ ಪರಿಸ್ಥಿತಿಯನ್ನು ಬಲ್ಲವರು, ಭಾರತದಲ್ಲಿ ಮಳೆಗಾಲವು ಆರಂಭವಾಗುವುದರಿಂದ ಜಪಾನರು ಈಗ ಭಾರತದ ಮುತ್ತಿಗೆಯನ್ನು ಆರಂಭಿಸುವುದಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ.

ಮದ್ರಾಸ್ ಗವರ್ನರವರ ಹೇಳಿಕೆ

ಮದರಾಸ್ ಗವರ್ನರಾದ ಸರ್ ಆರ್ಥರ್ ಹೋಪ್‌ರವರು ರೇಡಿಯೋ ಮೂಲಕ ಮಾತನಾಡುತ್ತ "ಕಳೆದ ಹಲವು ವಾರಗಳಲ್ಲಿ ಭಾರತದಲ್ಲಿಯೂ, ಮುಖ್ಯವಾಗಿ ಮದರಾಸು ಅಧಿಪತ್ಯದಲ್ಲಿಯೂ, ಆತಂಕವನ್ನುಂಟುಮಾಡುವಂತಹ ಅನೇಕ ಘಟನೆಗಳು ನಡೆದವು ಏಪ್ರಿಲ್ ೧೧ನೇ ತಾರೀಖಿನ ದಿವಸ ಮದರಾಸು ಸರಕಾರದವರು ಪ್ರಜೆಗಳಿಗೆ ಎಚ್ಚರಿಕೆಯಿತ್ತಾಗ, ಜಪಾನರು ಮದರಾಸು ತೀರವನ್ನು ಮುತ್ತುವರೆಂಬ ಭಯವು ಬಲವಾಗಿತ್ತು ದೇವರ ದಯದಿಂದ ವಿಪತ್ತು ಸಂಭವಿಸಲಿಲ್ಲ ಬಂಗಾಳಾ ಕೊಲ್ಲಿಯಿಂದ ಮತ್ತು ಹಿಂದೂ ಸಾಗರದಿಂದ ಜಪಾನರನ್ನು ಓಡಿಸುವವರೆಗೆ ಈ ಮುತ್ತಿಗೆಯ ಭಯವಿದ್ದೇ ಇದೆ ನಮಗೆ ಹೆಚ್ಚಿನ ಸಹಾಯ ಬಂದಂತೆಲ್ಲ ಈ ಭಯವು ಕಡಮೆಯಾಗುತ್ತಿದೆ ವಿಶಾಖಪಟ್ಟಣ ಮತ್ತು ಕೋಕನಾಡುಗಳಲ್ಲಿ ನಡೆದಂತಹ ಮುತ್ತಿಗೆಗಳು ಸಹ ನಡೆಯುವ ಸಂಭವವಿದೆ ಅದಕ್ಕೆ ನಾವು ಸಿದ್ಧರಿರಬೇಕು ಆದರೆ ಈಗ ಬ್ರಿಟಿಷ್ ವಿಮಾನಗಳು ಜರ್ಮನ್ ನಗರಗಳ ಮೇಲೆ ನಡೆಸುತ್ತಿರುವಂತಹ ಉಗ್ರ ಮುತ್ತಿಗೆಗಳು ನಡೆಯುವುದಿಲ್ಲ. ಜಪಾನರು ಜನರಿಗೆ ಹಿಂಸೆಕೊಡುವ ದೃಷ್ಟಿಯಿಂದ ಅಲ್ಲಲ್ಲಿ ಮುತ್ತಿಗೆಗಳನ್ನು ನಡೆಸಬಹುದು. ಸಮುದ್ರ ತೀರದಲ್ಲಿ ಕೆಲಸವಿರುವವರು ಮತ್ತು ಬೇರೆ ಕಡೆ ಆ ಕೆಲಸವನ್ನು ಮಾಡಲು ಸಾಧ್ಯವಿಲ್ಲದವರು ತೀರ ಪ್ರದೇಶಗಳಲ್ಲಿಯೇ ಇರಬೇಕು, ವಿಪತ್ತಿನ ಸೂಚನೆಯನ್ನು ಆದಷ್ಟು ಮುಂಚೆಯೇ ಕೊಡಲಾಗುತ್ತದೆ ಒಳಪ್ರದೇಶಗಳಲ್ಲಿ ವಿಪತ್ತು ಹೆಚ್ಚಾಗಿರುವುದಿಲ್ಲ ಯಾರೂ ಸ್ಥಳದಿಂದ ಸ್ಥಳಕ್ಕೆ ಹೋಗಬೇಕಾಗಿಲ್ಲ ದಿನಕಳೆದಂತೆಲ್ಲ ನಾವು ಬಲಯುತರಾಗುತ್ತಿದ್ದೇವೆ ಜಲ ಮತ್ತು ವಾಯುಮಾರ್ಗಗಳಲ್ಲಿ ಶತ್ರುಗಳು ಮುತ್ತಿಗೆ ಹಾಕುವುದನ್ನು ಎದುರಿಸಲು ತಕ್ಕ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಇದು ಕಷ್ಟಕಾಲ ಆದರೆ ಪ್ರಜೆಗಳೆಲ್ಲ ಒಂದಾಗಿ ದೇಶದ ರಕ್ಷಣೆಗಾಗಿ ಹೋರಾಡುತ್ತಿರುವ ತಮ್ಮ ಬಾಂಧವರಿಗೆ ಸಹಾಯ ನೀಡಿದರೆ ಇದನ್ನು ನಿವಾರಿಸಿಕೊಳ್ಳಬಹುದು ಕೆಲವು ಸಮಯದಲ್ಲಿ ವಿಜಯದ ಭವಿಷ್ಯವು ಅಂಧಕಾರಮಯವಾಗಿ ತೋರಬಹುದು. ಕೆಲವು ವೇಳೆ ಸುಳ್ಳು ಸುದ್ದಿಗಳು ಹರಡಿ, ಜನರ ನಂಬಿಕೆಯು ಸಡಿಲವಾಗಬಹುದು ಆದರೆ ನಾವು ಗಮನಿಸಬೇಕಾದುದು ಕಟ್ಟಕಡೆಯ ಜಯವನ್ನು ಅದರ ವಿಚಾರದಲ್ಲಿ ಏನೇನೂ ಅನುಮಾನವಿಲ್ಲ" ಎಂದರು.

ಹರ್ ಹಿಟ್ಲರರ ಭಾಷಣ.

ಹರ್ ಹಿಟ್ಲರರು ರೀಷ್ ಮಹಾಸಭೆಯಲ್ಲಿ ಭಾಷಣ ಮಾಡುತ್ತ—"ಬ್ರಿಟನ್ನು ಮೊದಲಿನಿಂದಲೂ ಯೂರೋಪಿನ ಕಲಹದಿಯನ್ನು ಸಡಲಿಸುತ್ತ ಬಂದಿತೆಂದೂ, ಆದರೆ ಈ ಕೆಲಸವು ಆಚಂದ್ರಾರ್ಕವಾಗಿ ನಡೆಯದಂತೆ ಆಯಿತೆಂದೂ, ಬ್ರಿಟನ್ನಿನ ಸೂರೆಯು ಕೊನೆಗಾಣುವ ಕಾಲವು ಸನ್ನಿಹಿತವಾಗಿ ಅದು ಕದನಕ್ಕೆ ಇಳಿಯಬೇಕಾಯಿತೆಂದೂ, ಡಿಸೆಂಬರ್ ೧೧ನೇ ತಾ|| ದಿನ ನಾನು ಮಾಡಿದ ಭಾಷಣದಲ್ಲಿ ತಿಳಿಸಿರುವ ಘಟನಾವಳಿಗಳು ಇತಿಹಾಸ ಪ್ರಸಿದ್ಧವಾದವೆಂದೂ, ಈಗಲ್ಲ, ಇನ್ನೊಂದು ಸಾವಿರ ವರ್ಷಗಳ ನಂತರ ಅವುಗಳ ಪೂರ್ಣ ಮಹತ್ವವು ಬಯಲಿಗೆ ಬರುವುದೆಂದೂ, ಬೆಲ್‌ಗ್ರೇಡ್ ದಂಗೆಗಳನ್ನು ಅಡಗಿಸಿದ ಕೆಲವು ವಾರಗಳ ಮೇಲೆ ಪೂರ್ವದಿಂದ ಯೂರೋಪಿಗೆ ವಿಪತ್ತು ಸಿದ್ಧವೆಂಬುದನ್ನು ತಿಳಿಯಲಾಯಿತೆಂದೂ, ೧೯೩೯ರಲ್ಲಿ ಜರ್ಮನಿಯು ಅನಿವಾರ್ಯವಾಗಿ ಎದುರಿಸಬೇಕಾಗಿ ಬಂದ ಕದನವು ಕೇವಲ ಯೂರೋಪಿಗೆ ಮಾತ್ರ ಅನ್ವಯಿಸುವುದಿಲ್ಲವೆಂಬುದು ಗೊತ್ತಾಯಿತೆಂದೂ, ಸಾವಿರವರ್ಷಕ್ಕೊಮ್ಮೆ ಜಗತ್ತನ್ನು ಅಲ್ಲಾಡಿಸುವಂತಹ ಯುದ್ಧವಿದೆಂಬುದು ಸ್ಪಷ್ಟವಾಯಿತೆಂದೂ, ಬ್ರಿಟನ್ನು ಮತ್ತು ಫ್ರಾನ್ಸು ಪೋಲೆಂಡನ್ನು ಮುಂದಿಟ್ಟುಕೊಂಡು ಕದನವಾರಂಭಿಸಿದವೆಂದೂ, ಯೂರೋಪಿನಲ್ಲಿ ಅನೈಕಮತ್ಯವೂ, ನಿಸ್ಸಹಾಯಕತ್ವವೂ ಇರುವಂತೆ ಮಾಡುವುದೇ ಬ್ರಿಟನ್ನಿನ ಉದ್ದೇಶವೆಂದೂ, ಆದರೆ ಬ್ರಿಟನ್ನಿನ ಸಾಮ್ರಾಜ್ಯದ ಗಡಿಯಲ್ಲಿ ಅದನ್ನು ಎದುರಿಸಬಲ್ಲ ಸಮಾನರಾಷ್ಟ್ರವೊಂದು ಇಲ್ಲದೆ ಇದುವರೆಗೆ ಬ್ರಿಟನ್ನಿನ ಸ್ಥಾನವು ಭದ್ರವಾಗಿರುತ್ತದೆಂದೂ, ರಷ್ಯನರು ಪೂರ್ವ ಏಷ್ಯದ ಕಡೆಗೆ ಕಾಲಿಟ್ಟಾಗ, ಅಮೇರಿಕವು ಸಂಪೂರ್ಣವಾಗಿ ಪ್ರತ್ಯೇಕವಾದಾಗ, ಜಪಾನರು ಸಹ ಜರ್ಮನರಂತೆ ಮತ್ತು ಇಟಾಲಿಯನರಂತೆ ನಿದ್ರೆಯಿಂದ ಎದ್ದಾಗ ಬ್ರಿಟಿಷ್ ಸಾಮ್ರಾಜ್ಯದ ಇರುವಿಕೆಗೆ ತೊಂದರೆ ಬಂದಿತೆಂದೂ, ಯೂರೋಪಿನ ಸಹಕಾರದ ಮೇಲೆ ಹೊರತು ಅದಕ್ಕೆ ವಿರುದ್ಧವಾಗಿ ವರ್ತಿಸಿ ಬ್ರಿಟಿಷ್ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ಆಗಲಿಲ್ಲವೆಂದೂ, ಆದ್ದರಿಂದ ೧೯೧೪ರಲ್ಲಿ ಇಂಗ್ಲೆಂಡು ಇತರ ಬಲಯುತ ರಾಷ್ಟ್ರಗಳೊಂದಿಗೆ ಜರ್ಮನಿಯಮೇಲೆ ಸಂಗ್ರಾಮವನ್ನು ಹೂಡಿತೆಂದೂ, ಅದರ ಫಲವಾಗಿ ಜರ್ಮನಿಯನ್ನು ಬಂಧಿಸಿ ಕುಕ್ಕರಿಸಿತೆಂದೂ, ಆದರೆ ಸ್ವಲ್ಪಕಾಲದಲ್ಲಿಯೇ ಜರ್ಮನಿಯು ಈ ಬಂಧನವನ್ನು ಹರಿದುಹಾಕಿತೆಂದೂ, ಇಂಗ್ಲೆಂಡು ಅಮೇರಿಕದ ಸಹಾಯವನ್ನು ಯಾಚಿಸಿದುದರಿಂದ ಅಮೇರಿಕಕ್ಕೆ ಆರ್ಥಿಕವಾದ ಮತ್ತು ರಾಜಕೀಯ ಮಹತ್ವವನ್ನು ಕೊಟ್ಟಂತಾಯಿತೆಂದೂ, ಕಳೆದ ಸಂಗ್ರಾಮವು ಮುಗಿದ ಮೇಲೆ ಜಪಾನು ಜರ್ಮನಿಯ ಸ್ಥಾನವನ್ನೂ ಅಮೇರಿಕವು ಇಂಗ್ಲೆಂಡಿನ ಸ್ಥಾನವನ್ನೂ ಆಕ್ರಮಿಸಿತೆಂದೂ, ಕಡೆಗೆ ಇಂಗ್ಲೆಂಡಿನ ಆರ್ಥಿಕ ಶಕ್ತಿಯು ಸಂಪೂರ್ಣವಾಗಿ ನಾಶವಾಯಿತೆಂದೂ, ಇದೇ ಅನಂತರದಲ್ಲಿ ಅದರ ಸೋಲಿಗೆ ತಳಹದಿಯಾಯಿತೆಂದೂ, ಇಂದು ಬ್ರಿಟನ್ನು ಮತ್ತೊಂದು ಯುದ್ಧದಲ್ಲಿ ಕೈಹಾಕಿದೆಯೆಂದೂ, ರಕ್ಷಿಸಿಕೊಳ್ಳಲು ಅಸಾಧ್ಯವೆನಿಸಿದಂತಹ ಯೂರೋಪಿನ ಶಿಸ್ತನ್ನು ರಕ್ಷಿಸಿಕೊಳ್ಳುವುದರಲ್ಲಿ ಬ್ರಿಟನ್ನಿನ ಶಕ್ತಿಯು ಕುಂದುತ್ತಿದೆಯೆಂದೂ, ಇಂಗ್ಲೆಂಡು ಯಾವುದೇ ರಾಷ್ಟ್ರವೊಂದಿಗೆ ಸೇರಿದರೂ, ಸಂಗ್ರಾಮ ಮುಗಿದ ಮೇಲೆ ಬ್ರಿಟನ್ನಿಗಿಂತ ಅದರ ಮಿತ್ರರಾಷ್ಟ್ರಗಳೇ ಬಲಯುತವಾಗಿರುತ್ತವೆಂದೂ ಹೇಳಿದರು.

"ವಿಶ್ವದ ಇತಿಹಾಸಕ್ಕೆ ಗೋತ್ರ ಪ್ರಶ್ನೆಯೇ ಜೀವನಕ್ಕೈ ಆಗಿದೆ ಮೊದಲನೆಯ ಮಹಾಸಂಗ್ರಾಮದಲ್ಲಿ ಬ್ರಿಟನ್ನು ಸಂಗ್ರಾಮಕ್ಕೆ ತಳ್ಳಿದ ಶಕ್ತಿಯೆಂದರೆ ಯೆಹೂದ್ಯರು ನಮ್ಮನ್ನು ನಿಸ್ಸಹಾಯಕ ಸ್ಥಿತಿಗಿಳಿಸಿದವರೂ ಅವರೇ. ಬ್ರಿಟಿಷ್ ಸಾಮ್ರಾಜ್ಯಕ್ಕೆ ಯೆಹೂದ್ಯರೀಗ ವಿಪತ್ತನ್ನು ತಂದಿದ್ದಾರೆ ಬೋಲ್ಷೆವಿಕ್ ಸಾಂಕ್ರಾಮಿಕರೋಗವನ್ನು ಹರಡಿದವರು ಯೆಹೂದ್ಯರು. ಅವರಿಗೆ ಇನ್ನೇನೂ ಯೋಚನೆಯೇ ಇಲ್ಲ, ಒಬ್ಬರಮೇಲೆ ಇನ್ನೊಬ್ಬರನ್ನು ಎತ್ತಿಕಟ್ಟುವುದೇ ಕೆಲಸ. ಅಮೇರಿಕವನ್ನು ಈಗ ಯುದ್ಧಕ್ಕೆ ಯೆಹೂದ್ಯರೇ ಎಳೆದರು. ಅಮೇರಿಕದ ಅಭಿಪ್ರಾಯದಲ್ಲಿ ಇದು ಅನಾವಶ್ಯಕವಾಗಿತ್ತು. ಯೆಹೂದ್ಯರ ಈ ಸಂಗ್ರಾಮದಾಹವನ್ನು ಜರ್ಮನ್ ಯೋಧರೂ ಅವರ ಮಿತ್ರರೂ ಅರಿತಿದ್ದಾರೆ.

ಈಸಾರಿ ರಷ್ಯದಲ್ಲಿ ಆರಂಭವಾದಂತಹ ಉಗ್ರ ಚಳಿಯು ಕಳೆದ ೧೪೦ ವರ್ಷಗಳಿಂದ ಇದ್ದಿಲ್ಲ ಆದುದರಿಂದ ಜರ್ಮನಿಯ ಸೇನೆಗಳನ್ನೆಲ್ಲ ಹಿಂದಕ್ಕೆ ಕರೆಸಲಾಯಿತು. ಈ ಕಷ್ಟಕಾರ್ಯವನ್ನು ನಾವು ಬಹಳ ಧೀರತನದಿಂದ ನಡೆಸಿದೆವು ನಮ್ಮ ಮುಂದೆ ಬಹಳ ಕಷ್ಟಗಳಿದ್ದುದರಿಂದ ನನ್ನ ಹೆಸರನ್ನು ನನ್ನ ಸೇನೆಯ ಭವಿಷ್ಯದೊಂದಿಗೆ ಬೆರೆಸುವ ನಿಶ್ಚಯ ಮಾಡಿದೆನು. ದೇವರ ದಯದಿಂದ ಈ ವಿಪತ್ತನ್ನು ನಿವಾರಿಸಿದಂತಾಯಿತು. ನಮ್ಮ ಸೈನಿಕರ ಶೌರ್ಯಪ್ರತಾಪಗಳು ಮೆಚ್ಚತಕ್ಕವಾಗಿವೆ. ಶತ್ರುಗಳು ಅಪಾರ ಸಂಖ್ಯೆಯಲ್ಲಿ ಮುಂದೆ ನುಗ್ಗಿದರೂ ನಮ್ಮ ಯೋಧರು ಅವರನ್ನು ತಡೆಯಲು ಸಮರ್ಥರಾದರು ನಮಗೆ ಸಂಭವಿಸಿದ ಭಾರಿ ಕಷ್ಟವೆಂದರೆ ವಸ್ತು ಸಂಗ್ರಹ. ನಮಗೆ ವಸ್ತುಗಳು ತೀರ ಅಗತ್ಯವಾಗಿದ್ದವು. ಆಗ ಸ್ವತಃ ನಾನು ದಂಡನಾಯಕತ್ವ ವಹಿಸಿ, ಅತ್ಯುಗ್ರವಾದ ದೃಢಮನಸ್ಸಿನಿಂದ ಕಾರ್ಯಸಾಧನೆ ಮಾಡಿದ್ದನ್ನು ನೀವೆಲ್ಲ ಒಪ್ಪುವಿರೆಂದು ಭಾವಿಸುತ್ತೇನೆ

ಮುಂದಿನ ಚಳಿಗಾಲದಲ್ಲಿ ಸ್ಥಿತಿಗತಿಗಳನ್ನು ಪ್ರತಿಭಟಿಸಲು ಜರ್ಮನ್ ಸೈನ್ಯವು ಹೆಚ್ಚು ಶಕ್ತವಾಗುವುದು ಆದರೆ ಯಾವ ಕ್ಷಣದಲ್ಲೆಂದರೆ ಆ ಕ್ಷಣ ನಾನು ಮಧ್ಯದಲ್ಲಿ ಕೈಹಾಕಿ, ನನಗೆ ಸೂಕ್ತ ತೋರಿದ ರೀತಿಯಲ್ಲಿ ವರ್ತಿಸಲು ತಕ್ಕ ಅಧಿಕಾರವನ್ನು ಜನಾಂಗವು ನನಗೆ ಕೊಡಬೇಕೆಂದು ಕೇಳುತ್ತೇನೆ ಜನಾಂಗವು ಸಾವು ಜೀವದ ಪ್ರಶ್ನೆ ಬಂದಾಗ ನಾನು ನನಗೆ ಉಚಿತವೆಂದು ಕಾಣುವ ಮಾರ್ಗದಲ್ಲಿ ಕೆಲಸಮಾಡುವಂತಿರಬೇಕು ಆದ್ದರಿಂದ, ಯಾರೇ ಆಗಲಿ ತಮ್ಮ ಕರ್ತವ್ಯವನ್ನು ನೆರವೇರಿಸುವಂತೆ ಒತ್ತಾಯಪಡಿಸಬಲ್ಲ ಅಧಿಕಾರ ನನಗಿದೆಯೆಂಬುದಾಗಿ ರೀಷ್ ಮಹಾಸಭೆಯು ಒಪ್ಪಬೇಕು. ಹಾಗೆ ನನ್ನ ಸೂಚನೆಗೆ ವಿರುದ್ಧವಾಗಿ ನಡೆಯುವವರನ್ನು ಅವರು ಯಾವ ಮಹತ್ವ ಸ್ಥಾನದಲ್ಲಿಯೇ ಇರಲಿ ಕೂಡಲೆ ಮನೆಗೆ ಕಳುಹಿಸಲು ನನಗೆ ಅಧಿಕಾರವಿರಬೇಕು

ರಷ್ಯವು ನಾಶವಾಗುವವರೆಗೆ ನಾವು ಕದನವನ್ನು ನಿಲ್ಲಿಸುವುದಿಲ್ಲ ಜರ್ಮನ್ ಯು ಬೋಟ್‌ಗಳೂ ಇತರ ಸಾಧನಗಳೂ ವರ್ಷ ವರ್ಷಕ್ಕೆ ಉತ್ತಮಗೊಳ್ಳುತ್ತ ಹೋಗುವುದನ್ನು ಬ್ರಿಟನ್ನು ಕಾಣದೆ ಇರದು. ಜರ್ಮನಿಯು ಈಗಿನ ಕದನದಲ್ಲಿ ಹೆಚ್ಚಿನ ನೌಕಾಬಲವಿಲ್ಲದೆಯೇ ಹಿಂದಿನ ಕದನಕ್ಕಿಂತ ಹೆಚ್ಚು ಜಯಗಳಿಸಿದೆ ಈಗಿನ ಕದನದಲ್ಲಿ ಸತ್ಯಕ್ಕೆ ಜಯವುಂಟು ಸತ್ಯವು ನಮ್ಮ ಕಡೆಗಿದೆ ನನ್ನ ಹೆಸರನ್ನು ಜರ್ಮನ್ ಪ್ರಜೆಗಳ ಭವಿಷ್ಯದೊಂದಿಗೆ ಬಂಧಿಸಿದ್ದೇನೆ. ದೇವರಲ್ಲಿ ನನ್ನದೊಂದೇ ಪ್ರಾರ್ಥನೆ "ಜರ್ಮನ್ ಪ್ರಜೆಗಳು ನಡೆಸುತ್ತಿರುವ ಈಗಿನ ಕದನದ ದೃಷ್ಟಿಯಿಂದ ಅವಶ್ಯಕವೆನಿಸುವಷ್ಟು ಕಾಲ ನನಗೆ ಆಯಸ್ಸನ್ನು ಕೊಡಲಿ" ಎಂಬುದು ಎಂದು ನುಡಿದು ಭಾಷಣವನ್ನು ಮುಗಿಸಿದರು.

ಜರ್ಮನರು ದೊಡ್ಡ ಯುದ್ಧವನ್ನಾರಂಭಿಸುವಂತೆ ಕಾಣುವದಿಲ್ಲ

ಈಗಿನ ಯುದ್ಧಪರಿಸ್ಥಿತಿಯನ್ನು ಕಂಡು ವಿಮರ್ಶಕರು "ರಷ್ಯಾರಣರಂಗದಲ್ಲಿ ಹೊಡೆದಾಟವು ಜೋರಾಗಿದೆ. ಮುಖ್ಯ ಕೇಂದ್ರರಣರಂಗದಲ್ಲಿ ಘರ್ಷಣವು ಹೆಚ್ಚುತ್ತಿದೆ. ರಷ್ಯನರನ್ನು ಎದುರಿಸಲು ನಾಜಿಗಳು ಉಗ್ರವಾಗಿ ತಿರುಗಿಬಿದ್ದಿದ್ದರೂ ಜರ್ಮನರು ದೊಡ್ಡ ಕದನವನ್ನಾರಂಭಿಸುವ ಸೂಚನೆಯಿಲ್ಲ ಚಳಿಗಾಲದಲ್ಲಿ ಜರ್ಮನರ ಬಲವನ್ನೆಲ್ಲ ಕುಗ್ಗಿಸಲಾಗಿದೆ ಈಗ ಅವರು ಬಹಳ ಕಷ್ಟದಲ್ಲಿ ಸಿಕ್ಕಿರುವರು ಜರ್ಮನಿಯ ಮೇಲೆ ಬ್ರಿಟಿಷ್ ವಿಮಾನಗಳ ಏಟು ಜೋರಾಗಿದೆ. ಅದರಿಂದ ಜರ್ಮನಿಯು ಹೆಚ್ಚಿನ ಫೈಟರ್ ವಿಮಾನಬಲವನ್ನು ರಣರಂಗದಿಂದ ಹಿಂದಕ್ಕೆ ಕರೆಯಿಸಬೇಕಾಯಿತು" ಎಂದು ತಿಳಿಸಿದ್ದಾರೆ.

[೪ ನೆಯ ಪುಟದಿಂದ ಮುಂದುವರಿದುದು].

ವಿಷಯದಲ್ಲಿ ಪ್ರಥಮ ಪ್ರಯತ್ನಗಳನ್ನು ನೆರವೇರಿಸಬೇಕು. ಇಂಥ ಒಂದೊಂದು ಸಿಬ್ಬಂದಿಯಲ್ಲಿ ಇಬ್ಬರು ಮೂವರಿರಬೇಕು. ಅವರಿಗೆ ಒಂದೊಂದು "ಸ್ಟಿರಪ್ ಪಂಪು" ಒದಗಿಸಿರಬೇಕು. ಉರಿಬಾಂಬುಗಳು ಬಿದ್ದು ಬೆಂಕಿ ಹೊತ್ತಿಕೊಂಡಾಗ ಅದನ್ನು ಆರಿಸುವುದಕ್ಕೆ ಅದರಿಂದ ಬಹಳ ಅನುಕೂಲ. ಬಾಂಬಿನಿಂದ ಬೆಂಕಿ ಹೊತ್ತುತ್ತಿರುವಾಗಲೇ ಪ್ರಾರಂಭದಲ್ಲೇ ಅದನ್ನು ಅಡಗಿಸಿ ಮುಂದೆ ಅನರ್ಥವಾಗುತ್ತಿರುವುದನ್ನು ಸುಲಭವಾಗಿ ಅದರಿಂದ ತಪ್ಪಿಸಬಹುದು. ಎಲ್ಲೆಲ್ಲಿ ಬಾಂಬು ಬಿದ್ದರೂ ಹಾಗೆ ಮಾಡಿ, ಸ್ವತ್ತು ನಷ್ಟವಾಗದಂತೆ ರಕ್ಷಿಸಬಹುದು. ಹೀಗೆ ಬಿಡಿಬಿಡಿಯಾಗಿ ಕೆಲಸಮಾಡುವ ಬೀದಿಬೀದಿಗಳ ಸಣ್ಣ ಸಣ್ಣ ಸಿಬ್ಬಂದಿಗಳು ಅಲ್ಪಸ್ವಲ್ಪ ಪ್ರಮಾಣದ ಉರಿಗಳನ್ನು ಆರಿಸುವ ಕೆಲಸವನ್ನು ನೋಡಿಕೊಂಡರೆ ಒಟ್ಟು ನಗರದ ಪ್ರಧಾನ ಸಿಬ್ಬಂದಿಗಳವರು ದೊಡ್ಡ ದೊಡ್ಡ ಉರಿಗಳೆದ್ದ ಸ್ಥಳಗಳಿಗೆ ಹೋಗಿ ತಮ್ಮ ವಶದಲ್ಲಿರುವ ಭಾರಿಭಾರಿ ಯಂತ್ರಸಾಧನಗಳ ಸಹಾಯದಿಂದ ಅವುಗಳನ್ನಾರಿಸಲು ಗಮನಕೊಡುವುದಕ್ಕೆ ಅನುಕೂಲವಾಗುತ್ತದೆ. ಈ ಬಗೆಯ ಏರ್ಪಾಡುಗಳ ಜೊತೆಗೆ ಮತ್ತೊಂದು ಏರ್ಪಾಡೂ ನಡೆದಿರಬೇಕು. ಏನೆಂದರೆ, ಪ್ರತಿಯೊಂದು ದೊಡ್ಡ ಕಟ್ಟಡದಲ್ಲಿಯೂ ಬೆಂಕಿಯ ಅಪಾಯವಿರುವ ಪ್ರತಿಯೊಂದು ಸಾರ್ವಜನಿಕ ಪ್ರದೇಶದಲ್ಲಿಯೂ, ಮತ್ತು ಜನಸಂದಣಿಯು ಸೇರುವ ಎಲ್ಲಾ ಸ್ಥಳಗಳಲ್ಲಿಯೂ, ಬೆಂಕಿಯನ್ನಾರಿಸುವ ಸಾಧನ ಸಲಕರಣೆಗಳು ಸಿದ್ಧವಾಗಿರಬೇಕು. ಈಗ ಕೆಲವು ಕಡೆಗಳಲ್ಲಿ ಬೆಂಕಿಯನ್ನಾರಿಸುವ "ಫೈರ್ ಹೈಡ್ರೆಂಟ್" ಸಾಧನಗಳನ್ನಿಟ್ಟಿರುವುದು ಸರಿಯಷ್ಟೆ. ಅವು ಉಪಯೋಗಕ್ಕೆ ಬರಬಹುದಾದ ಇನ್ನೂ ಹೆಚ್ಚು ಹೆಚ್ಚು ಸ್ಥಳಗಳಲ್ಲಿ ಅವುಗಳನ್ನಿಡಬೇಕು. ಇದೊಂದು ಉತ್ತಮವಾದ ಕೈಗಾವಲಿನ ಏರ್ಪಾಡು. ಬೆಂಕಿಯನ್ನಾರಿಸಲು ತಕ್ಕಷ್ಟು ನೀರು ಒದಗುವಂತಿರಬೇಕಾದುದೂ ಬಹು ಮುಖ್ಯವಾದುದು. ನೀರಿನ ವಸತಿಯನ್ನು ಒದಗಿಸಿಕೊಳ್ಳುವ ಭಾಗದಲ್ಲಿ ಇರತಕ್ಕ ಅನುಕೂಲಗಳನ್ನು ಪರಿಶೀಲಿಸಿ ನೋಡಿದರೆ, ಈಗಿರುವ ನೀರಿನ ಸೌಕರ್ಯಗಳ ಜೊತೆಗೆ ಭಾವಿಗಳೇ ಮುಂತಾದುವುಗಳಿಂದ ಎಲ್ಲೆಲ್ಲಿ ನೀರನ್ನೊದಗಿಸಿಕೊಳ್ಳಬಹುದೆಂಬುದನ್ನೂ ಗೊತ್ತುಮಾಡಿಕೊಳ್ಳಬಹುದು. ನಗರಗಳಲ್ಲಿ ಜನಸಂದಣಿಯು ಹೆಚ್ಚಾಗಿರುವ ಪ್ರದೇಶಗಳಲ್ಲಿ ಮುಚ್ಚಿಬಿಟ್ಟಿರುವ ಹಳೆಯ ಬಾವಿಗಳನ್ನು ಅಗತ್ಯ ಕಂಡರೆ, ಮತ್ತೆ ತೋಡಿಸಿ ಅವಕ್ಕೆ ಪಂಪುಗಳನ್ನು ಜೋಡಿಸಿ, ಹೆಚ್ಚು ನೀರು ಬೇಕಾದ ಸಮಯಕ್ಕೆ ಒದಗುವಂತೆ ಸಿದ್ಧವಾಗಿಟ್ಟುಕೊಳ್ಳಬಹುದು. ಒಂದು ನಗರದ ಕೆಲಕೆಲವು ಮುಖ್ಯ ಪ್ರದೇಶಗಳಲ್ಲಿ ಮತ್ತು ಭಾರಿ ಕಟ್ಟಡಗಳ ಬಳಿಯಲ್ಲಿ ಬೆಂಕಿಬೀಳುವುದಾದರೆ ಒಡನೆಯೇ ಗಮನಿಸಿ ಉರಿಯು ದೊಡ್ಡದಾಗುವುದಕ್ಕೆ ಮೊದಲೇ ಅದನ್ನಾರಿಸುವ ಸಿಬ್ಬಂದಿಯವರಿಗೆ ವರ್ತಮಾನಕೊಡುವ ಕಾವಲು ಸಿಬ್ಬಂದಿಯವರೂ ನೇಮಕವಾಗಬೇಕು.

ಸ್ವಯಂಸೇವಕರು

೧೩. ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳಲ್ಲಿ ವೈದ್ಯಸಿಬ್ಬಂದಿಯ ಏರ್ಪಾಡೂ ಸೇರಿರುತ್ತದೆ. ಪೆಟ್ಟು ಬಿದ್ದವರಿಗೆ ಪ್ರಥಮ ಚಿಕಿತ್ಸೆ ಮಾಡುವವರು, ಪೆಟ್ಟು ಬಿದ್ದವರನ್ನು ಉಪಚರಿಸಿ ನೋಡಿಕೊಳ್ಳುವ ನರ್ಸುಗಳು, ಪೆಟ್ಟು ಬಿದ್ದವರನ್ನು ಸಾಗಿಸುವ ಬಂಡಿಗಳನ್ನು ನಡೆಯಿಸುವವರು ಮುಂತಾದವರು ಆ ಸಿಬ್ಬಂದಿಗೆ ಸೇರಿರುತ್ತಾರೆ. ವಿಮಾನದಾಳಿಗಳ ಸಂಬಂಧದಲ್ಲಿ ಸ್ವಲ್ಪಸ್ವಲ್ಪವಾಗಿ ಜಖಂ ಆದವರಿಗೆ ಅಲ್ಲಲ್ಲೇ ಚಿಕಿತ್ಸೆ ಮಾಡುವುದಕ್ಕೆ ಪ್ರಥಮ ಚಿಕಿತ್ಸೆಯ ಶಾಲೆಗಳೂ ಸಿಬ್ಬಂದಿಗಳೂ ಅಲ್ಲಲ್ಲಿ ಏರ್ಪಟ್ಟಿರಬೇಕಾದುದು ಅವಶ್ಯಕ. ಇದರಿಂದ ಸಣ್ಣ ಪುಟ್ಟ ಗಾಯಗಳಾದವರೆಲ್ಲರೂ ಆಸ್ಪತ್ರೆಗಳಿಗೇ ಹೋಗಿ ತುಂಬಿಕೊಳ್ಳುವುದು ತಪ್ಪುತ್ತದೆ; ಡಾಕ್ಟರುಗಳು ಅವರಿಗೆ ಚಿಕಿತ್ಸೆ ಮಾಡಬೇಕಾದುದು ತಪ್ಪಿ, ವಿಮಾನದಾಳಿಯಿಂದ ಭಾರಿ ಭಾರಿ ಜಖಂ ಆದವರಿಗೆ ಚಿಕಿತ್ಸೆಮಾಡಿ ನೋಡಿಕೊಳ್ಳಲು ಅನುಕೂಲವಾಗುತ್ತದೆ. ವಿಮಾನದಾಳಿ ನಡೆದಾಗ್ಗೆ ಬಾಂಬುಗಳಿಂದಲೂ ಇತರ ಕಾರಣಗಳಿಂದಲೂ ಆಗುವುದಕ್ಕಿಂತಲೂ ಗಾಜಿನ ಚೂರುಗಳು ಮುಂತಾದುವು ಸಿಡಿಯುವುದರಿಂದಲೇ ಹೆಚ್ಚು ಸಂಖ್ಯೆಯ ಜಖಂಗಳು ಆಗುವಂತೆ ಕಂಡುಬಂದಿದೆ. ಹಾಗೆ ಗಾಜಿನ ಚೂರುಗಳು ಸಿಡಿಯುವುದರಿಂದ ಜಖಂ ಆಗದಂತೆ ತಪ್ಪಿಸಿಕೊಳ್ಳುವ ವಿಧಾನವನ್ನು ಜನರಿಗೆ ಕಲಿಸಿಕೊಡಬೇಕಾಗಿದೆ. ದೊಡ್ಡ ನಗರಗಳಲ್ಲಿ ವಿಮಾನದಾಳಿಗಳಿಂದ ಪೆಟ್ಟುಬಿದ್ದವರನ್ನು ಆಸ್ಪತ್ರೆಗೆ ಸಾಗಿಸುವ "ಅಂಬ್ಯುಲೆನ್ಸ್" ಬಂಡಿಗಳ ಏರ್ಪಾಡೂ ಮುಖ್ಯವಾದ ಆವಶ್ಯಕತೆಗಳಲ್ಲೊಂದು; ಅದು ಉತ್ತಮ ರೀತಿಯಲ್ಲಿ ನಡೆಯುವಂತೆ ಏರ್ಪಾಡುಮಾಡಬೇಕು. ಅಪಾಯಕಾಲಗಳಲ್ಲಿ ನಗರದ ಹೊರಗೆ ದೂರದಲ್ಲಿ ಕೆಲವು ಆಸ್ಪತ್ರೆಗಳನ್ನೂ ಕಟ್ಟಡಗಳನ್ನೂ ಏರ್ಪಡಿಸಿ, ವಿಮಾನದಾಳಿಗಳಿಂದ ಬಹಳವಾಗಿ ಪೆಟ್ಟುಬಿದ್ದು ಹೆಚ್ಚು ಕಾಲ ಚಿಕಿತ್ಸೆನಡೆಯಬೇಕಾದವರಿಗೆ ಅಲ್ಲಿ ಅನುಕೂಲಮಾಡಿಕೊಡಬೇಕಾದುದೂ ಅವಶ್ಯಕ.

೧೪. ವಿಮಾನದಾಳಿಯ ಕಾಲದಲ್ಲಿ ಕಟ್ಟಡಗಳು ಉರುಳುತ್ತವೆ. ಅಗ್ಗಿ ಒಳಗೆ ಸಿಕ್ಕಿಕೊಂಡವರನ್ನೂ, ಇಟ್ಟಿಗೆ ಮಣ್ಣು ಮುಂತಾದುವುಗಳ ಮಧ್ಯದಲ್ಲಿ ಸಿಕ್ಕಿಹೋಗಿರುವವರನ್ನೂ ಹೊರಕ್ಕೆ ತಂದು ಚಿಕಿತ್ಸೆಮಾಡಿಸಬೇಕಾಗುತ್ತದೆ. ಪೂರ್ತಿಯಾಗಿ ಬಿದ್ದುಹೋಗದೆ ಅಪಾಯಕರವಾಗಿ ಪರಿಣಮಿಸಿರತಕ್ಕ ಕಟ್ಟಡಗಳನ್ನು ಕೆಡವಿಬಿಡುವುದು ಮುಂತಾದ ಕೆಲಸಗಳನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಕೆಲಸಗಾರರಾದ ಜನಗಳ ತಂಡಗಳನ್ನೂ ಸಿಬ್ಬಂದಿಗಳನ್ನೂ ನೇಮಕಮಾಡಿ, ಅವರು ನಗರದಲ್ಲಿ ಸ್ಥಳದಿಂದ ಸ್ಥಳಕ್ಕೆ ಓಡಾಡಿ ಆ ಕೆಲಸಗಳನ್ನು ಮಾಡುವಂತೆ ನೇಮಕ ಮಾಡಬೇಕಾದುದು ಅಗತ್ಯ. ವಿಮಾನದಾಳಿ ನಡೆದಾಗ ವಿದ್ಯುಚ್ಛಕ್ತಿ ತಂತಿಗಳು ಕಿತ್ತುಹೋಗಬಹುದು; ನೀರು ಸರಬರಾಯಿ ಕೊಳಾಯಿಗಳು ಒಡೆದುಹೋಗಬಹುದು; ರಸ್ತೆಗಳು ಗುಂಡಿಬೀಳಬಹುದು; ನಗರದಲ್ಲಿರುವ ಇತರ ಸೌಕರ್ಯಗಳಿಗೆ ಬಾಧಕವುಂಟಾಗಬಹುದು. ಅಂಥ ಸಂದರ್ಭಗಳಲ್ಲಿ ಅವಶ್ಯವಾದ ದುರಸ್ತಿ ಕಾಮಗಾರಿಗಳನ್ನು ಆದಷ್ಟು ಶೀಘ್ರವಾಗಿ ನೆರವೇರಿಸಿ ಮತ್ತೆ ಆ ಸೌಕರ್ಯಗಳನ್ನು ಯಥಾಪ್ರಕಾರ ಒದಗಿಸಿಕೊಡಬೇಕು. ಅದಕ್ಕಾಗಿ ಸಂಬಂಧಪಟ್ಟ ಸರಕಾರಿ ಇಲಾಖೆಗಳೂ, ಸ್ಥಳೀಯ ಸಂಸ್ಥೆಗಳೂ ಮತ್ತು ಖಾಸಗಿ ಸಂಸ್ಥೆಗಳೂ ಅವಶ್ಯವಾದ ದುರಸ್ತಿ ಸಿಬ್ಬಂದಿಗಳನ್ನು ನೇಮಕಮಾಡಿಕೊಂಡು, ಆ ಸಿಬ್ಬಂದಿಗಳವರು ಸ್ಥಳದಿಂದ ಸ್ಥಳಕ್ಕೆ ಹೋಗಿ ಕೆಲಸ ನಡೆಯಿಸಿ ನೋಡಿಕೊಳ್ಳುವಂತೆ ಗೊತ್ತುಮಾಡಬೇಕು. ಹೀಗೆ ದುರಸ್ತಿಗಳು ನಡೆಯಬೇಕಾದರೆ, ನಾಶವಾದ ತಂತಿಗಳು ಕಂಬಗಳು, ಕೊಳಾಯಿಗಳು ಮುಂತಾದುವಕ್ಕೆ ಬದಲಾಗಿ ಜೋಡಿಸುವುದಕ್ಕಾಗಿ ಬೇರೆಯವು ಅವಶ್ಯವಾಗುತ್ತವೆ. ದೀರ್ಘಕಾಲದ ಅವಧಿಗೆ ಅವುಗಳು ಎಷ್ಟೆಷ್ಟು ಬೇಕಾಗಬಹುದೆಂಬುದನ್ನು ಅಂದಾಜಿನ ಮೇಲೆ ನಿರ್ಧರಿಸಿ ಮೊದಲೇ ತರಿಸಿಟ್ಟುಕೊಳ್ಳುವ ಕಾರ್ಯನೀತಿಯನ್ನು ಕೈಕೊಳ್ಳಬೇಕು. ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಯಂತ್ರಶಾಲೆಗಾಗಲಿ, ನೀರು ಸರಬರಾಯಿ ಕಾರ್ಯಾಲಯಕ್ಕಾಗಲಿ ಬಾಂಬು ತಗಲಿದರೆ ಆ ಬಳಿಕ ಕಡಮೆಬಿದ್ದ ಪ್ರಮಾಣದಲ್ಲಿ ಎಷ್ಟು ವಿದ್ಯುಚ್ಛಕ್ತಿಯು ಅಥವಾ ಎಷ್ಟು ನೀರು ಒದಗುತ್ತದೋ, ಅಷ್ಟನ್ನೇ ಹಂಚಿ ಕ್ಲುಪ್ತವಾದ ಕಡಮೆ ಪ್ರಮಾಣಗಳಲ್ಲಿ ಒದಗಿಸಬೇಕಾಗುತ್ತದೆ. ಹಾಗೆ ಒದಗಿಸುವುದರಲ್ಲಿ ಕೆಲವು ಸನ್ನಿವೇಶಗಳಿಗೆ ಪ್ರಾಶಸ್ತ್ಯಕೊಡಲೂ ಬೇಕಾಗುತ್ತದೆ. ಇವುಗಳ ಸಂಭವವನ್ನೆಲ್ಲ ಮುಂದಾಗಿಯೇ ಆಲೋಚಿಸಿ ಯಾವ ಸಂದರ್ಭ ಒದಗಿದರೆ ಹೇಗೆ ಕೆಲಸ ನಡೆಯಬೇಕೆಂಬುದನ್ನು ಗೊತ್ತುಮಾಡಿಟ್ಟುಕೊಂಡಿರಬೇಕು. ಮೇಲೆ ಹೇಳಿದ ಸೌಕರ್ಯಗಳಿಗೆ ವಿಮಾನದಾಳಿಗಳ ದೆಸೆಯಿಂದ ಲೋಪಬಂದಾಗಲೂ ಕೂಡ ಆದಷ್ಟುಬೇಗ ದುರಸ್ತಿ ಮಾಡಿ ಮತ್ತೆ ಅವುಗಳನ್ನು ಯಥಾಪ್ರಕಾರ ಒದಗಿಸಬೇಕೆಂಬುದು ಇದರ ಆಶಯ. ವಿಮಾನದಾಳಿಗಳು ನಡೆದಾಗಲೆಲ್ಲ ಈ ಬಗೆಯ ದುರಸ್ತಿ ಕಾಮಗಾರಿಗಳು ಎಷ್ಟೆಷ್ಟು ಬೇಗ ನಡೆದರೆ ಜನರಿಗೆ ಅಷ್ಟಷ್ಟು ಹೆಚ್ಚಿನ ಸಮಾಧಾನ; ವಿಮಾನದಾಳಿಯಿಂದ ತಮ್ಮ ನಗರಕ್ಕೇನುಬಂದರೂ ತಾವು ಕಳವಳಪಡುವುದಿಲ್ಲವೆಂಬ ಧೈರ್ಯ; ಅದನ್ನೆಲ್ಲಾ ಎದುರಿಸಿ ನಗರ ರಕ್ಷಣೆಮಾಡುವ ಹುಮ್ಮಸ್ಸು.

ಮುಖ್ಯವಾದ ಪ್ರದೇಶಗಳು

೧೫. ದೊಡ್ಡ ದೊಡ್ಡ ಕಾರ್ಖಾನೆಗಳು, ಭಾರಿ ಭಾರಿ ಯಂತ್ರಸ್ಥಾಪನೆಯಾಗಿರುವ ಯಂತ್ರಶಾಲೆಗಳು ಮತ್ತು ಕೈಗಾರಿಕೆ ಪ್ರದೇಶಗಳು—ಇವುಗಳ ಮೇಲೆ ಶತ್ರುಗಳು ಬಾಂಬುಗಳನ್ನು ಹಾಕುವುದು ಹೆಚ್ಚು. ಆದಕಾರಣ, ಅವುಗಳನ್ನು ವಿಶೇಷರೀತಿಯಲ್ಲಿ ಕಾಪಾಡಿಕೊಳ್ಳಬೇಕಾಗುತ್ತದೆ. ಸಾಮಾನುಗಳ ತಯಾರಿಯು ಹೆಚ್ಚಿನ ಪ್ರಮಾಣದಲ್ಲಿ ನಡೆಯಬೇಕಾದ ಆವಶ್ಯಕತೆಯ ದೃಷ್ಟಿಯಿಂದಲೂ ಅವುಗಳನ್ನು ವಿಶೇಷ ರೀತಿಯಲ್ಲಿ ಕಾಪಾಡಿಕೊಳ್ಳಬೇಕಾದುದು ಅಗತ್ಯ. ಹೀಗೆ ಕಟ್ಟಡಗಳನ್ನೂ ಜನರನ್ನೂ ಬಾಂಬುಗಳ ಆಘಾತದಿಂದ ಕಾಪಾಡಿಕೊಳ್ಳುವುದಕ್ಕಾಗಿ ಒಂದು ವಿಶೇಷ ವಿಧಾನವೇ ಏರ್ಪಟ್ಟಿದೆ. ಕೈಗಾರಿಕೆ ಕಾರ್ಖಾನೆಗಳಿಗೆ ಬಾಂಬುಗಳು ಬಿದ್ದು ನಷ್ಟ ತಟ್ಟಿತೆಂದರೆ, ಮುಖ್ಯವಾಗಿ ಬೇಕಾದ ವಸ್ತುಗಳ ತಯಾರಿಗೇ ಕುಂದಕವುಂಟಾಗುತ್ತದೆ. ಆದಕಾರಣ, ಮೊದಲೇ ಯೋಚಿಸಿ ಜೊತೆ ಜೊತೆಗಳಲ್ಲಿ ಯಂತ್ರ ಜೋಡಣೆ ಮಾಡಿ, ದುರಸ್ತಿಗೆ ಬೇಕಾದ ಬಿಡಿ ಭಾಗಗಳನ್ನೆಲ್ಲಾ ದಾಸ್ತಾನುಮಾಡಿಟ್ಟುಕೊಂಡಿದ್ದರೆ ಹಾಗೆ ಕುಂದಕವುಂಟಾಗದಂತೆ ಮಾಡಿಕೊಳ್ಳಬಹುದು; ಕಾರ್ಖಾನೆಗಳಿಂದ ಯಥಾಪ್ರಕಾರವಾಗಿ ವಸ್ತುಗಳ ತಯಾರಿಯು ನಡೆಯುತ್ತ ಬರುವಂತೆ ನೋಡಿಕೊಳ್ಳಬಹುದು. ರೈಲ್ವೆಗಳೂ ಮತ್ತು ಭರತಖಂಡದ ಮಿಲಿಟರಿ ಪ್ರದೇಶಗಳೂ ಸಹ ವಿಮಾನದಾಳಿಗಳ ಎಚ್ಚರಿಕೆ ಏರ್ಪಾಡುಗಳನ್ನು ತಮಗೆ ಅವಶ್ಯಕಂಡಂತೆ ತಾವು ಏರ್ಪಡಿಸಿಕೊಳ್ಳುತ್ತವೆ. ಆದರೆ, ನೆರೆಹೊರೆಯ ಸಿವಿಲ್ ಪ್ರದೇಶಗಳ ಏರ್ಪಾಡುಗಳಿಗೆ ಹೊಂದಿಕೊಂಡು ಅವು ಅರೀತಿ ಮಾಡಿಕೊಂಡು ಪರಸ್ಪರವಾಗಿ ಉಭಯತ್ರರಿಗೂ ಅನುಕೂಲವಾಗಿರುವಂತೆ ವರ್ತಿಸಬೇಕೆಂದು ವಿಧಾಯಕವಾಗಿದೆ. ವಿಮಾನದಾಳಿ ನಡೆದಾಗ್ಗೆ, ನಗರದಲ್ಲಿರುವ ಕುದುರೆಗಳು, ಹಸುಗಳು, ಎಮ್ಮೆಗಳು, ಎತ್ತುಗಳು, ಕುರಿಗಳು—ಮುಂತಾದ ಪ್ರಾಣಿಗಳ ರಕ್ಷಣೆಗೂ ತಕ್ಕ ಏರ್ಪಾಡುಗಳು ನಡೆಯಬೇಕು. ಪ್ರಾಣಿಶಾಲೆ ("ಜೂ") ಮುಂತಾದುವುಗಳಲ್ಲಿರುವ ಹುಲಿ, ಸಿಂಹ ಮುಂತಾದ ಕ್ರೂರ ಮೃಗಗಳು ವಿಮಾನ ದಾಳಿಗಳು ನಡೆದಾಗ್ಗೆ ಕಬ್ಬಿಣದ ಪಂಜರಗಳಿಂದ ತಪ್ಪಿಸಿಕೊಳ್ಳಲು ಅವಕಾಶವಾಗದಂತೆಯೂ ಅವುಗಳಿಂದ ಜನಕ್ಕೆ ಅಪಾಯವುಂಟಾಗದಂತೆಯೂ, ಅವೂ ಸುರಕ್ಷಿತವಾಗಿರುವಂತೆಯೂ ತಕ್ಕ ಏರ್ಪಾಡು ಮಾಡಬೇಕು. ವಿಮಾನದಾಳಿ ನಡೆದಾಗಿನ ಕಳವಳದ ಮತ್ತು ಗಲಭೆಯ ಸನ್ನಿವೇಶವನ್ನೇ ಕೆಟ್ಟಜನರು ಉಪಯೋಗಿಸಿಕೊಂಡು ಲೂಟಿ ಮುಂತಾದ ನ್ಯಾಯವಿರುದ್ಧವಾದ ಕಾರ್ಯಗಳನ್ನು ಮಾಡಬಹುದು. ಅದಕ್ಕೆ ಅವಕಾಶವಿಲ್ಲದಂತೆ ತಕ್ಕ ಸ್ಥಳಗಳಲ್ಲಿ ಪೋಲೀಸು ಕಾವಲು ಇರಬೇಕಾಗುತ್ತದೆ. ಆದಕಾರಣ, ಪೋಲೀಸು ಸಿಬ್ಬಂದಿಯನ್ನು ಹೆಚ್ಚಿಸಬೇಕಾದುದು ಅವಶ್ಯಕ. ಇದು ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳಿಗೆ ಸಂಬಂಧಪಟ್ಟಿಲ್ಲವಾದರೂ ಆ ಏರ್ಪಾಡುಗಳ ಜೊತೆಗೆ ದಕ್ಷತೆಯಿಂದ ಕೆಲಸ ನಡೆಯಬೇಕಾದರೆ ಒಳ್ಳೆಯ ಶಿಸ್ತು ಇರಬೇಕು. ಅದಕ್ಕೆ ಪೋಲೀಸು ಸಿಬ್ಬಂದಿಯು ಅಗತ್ಯ.

೧೬. ವಿಮಾನದಾಳಿಯ ಆಘಾತದ ವಿಪತ್ತಿನಿಂದ ಒಂದು ದೇಶವನ್ನು ರಕ್ಷಿಸಬೇಕಾದರೆ, ಮೇಲೆ ವಿವರಿಸಿರುವ ತೊಡಕಿನ ವ್ಯವಸ್ಥೆಯು ನಡೆದೇ ತೀರಬೇಕು. ಅದಕ್ಕೆ ಸಂಬಂಧಪಟ್ಟ ಬಹು ಮುಖ್ಯವಾಗಿರುವ ಸಣ್ಣ ಪುಟ್ಟ ವಿಚಾರಗಳಿಗೆಲ್ಲಾ ಸೂಕ್ಷ್ಮರೀತಿಯಲ್ಲಿ ಮತ್ತೂ ಹೆಚ್ಚಿನ ಗಮನಕೊಟ್ಟು ನೋಡಿಕೊಳ್ಳಬೇಕು. ಅವೆಲ್ಲಾ ಸುಸೂತ್ರವಾಗಿ ನಡೆದರೆ, ವಿಮಾನ ದಾಳಿ ಎಚ್ಚರಿಕೆ ಏರ್ಪಾಡುಗಳ ಒಟ್ಟು ವ್ಯವಸ್ಥೆಯೂ ಸರಿಯಾಗಿರುತ್ತದೆ. ಅವೆಲ್ಲಾ ಸರಿಯಾಗಿಲ್ಲದೆ ಹೋದರೆ, ಅದೂ ಸರಿಯಾಗಿರುವುದಿಲ್ಲ. ಆದಕಾರಣ, ಯಾವುದೊಂದನ್ನೂ ಅಲ್ಪವೆಂದೆಣಿಸದೆ, ಯಾವುದೊಂದನ್ನೂ ಅಲಕ್ಷ್ಯಮಾಡದೆ ಕೆಲಸ ನಡೆಯಿಸಬೇಕು. ಯಾವ ಯಾವ ಸನ್ನಿವೇಶಗಳು ಒದಗಬಹುದೆಂಬುದನ್ನು ಮುಂದಾಗಿಯೇ ಆಲೋಚಿಸಿ ಅವುಗಳನ್ನು ಎದುರಿಸಲು ತಕ್ಕ ವಿಧಾನಗಳನ್ನು ಸಿದ್ಧಪಡಿಸಿಟ್ಟುಕೊಂಡಿರಬೇಕು. ಕಾರ್ಯ ವಿಧಾನದಲ್ಲಿ ಎಲ್ಲವೂ ಸುಸೂತ್ರವಾಗಿದ್ದು, ಯಾವ ಲೋಪದೋಷಗಳೂ ಇರದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಏಕೆಂದರೆ ಲೋಪದೋಷಗಳಿದ್ದುಬಿಟ್ಟರೆ, ಕೆಲಸವೇ ಕೆಡಗೆಟ್ಟು ಒಟ್ಟು ರಕ್ಷಣೆಯ ಕಾರ್ಯ ಕಲಾಪಗಳೇ ಮುಗ್ಗಟ್ಟಿಗೆ ಬಂದುಬಿಡುತ್ತವೆ. ಬಾಂಬುಹಾಕುವ ಬಾಂಬರ್ ವಿಮಾನಗಳು ವಾಸ್ತವವಾಗಿ ಅಂತರಿಕ್ಷದಿಂದ ಸಿಡಿಲಿನಂತೆ ತಟಕ್ಕನೆ ಎರಗುತ್ತವೆ. ಸಿಡಿಲು ಯಾರನ್ನೂ ಹೇಳಿಕೇಳಿ ಎಲ್ಲರಿಗೂ ಎಚ್ಚರಿಕೆಕೊಟ್ಟು ಬರುವುದಿಲ್ಲ. ಬಾಂಬುಹಾಕುವ ವಿಮಾನಗಳೂ ಅಷ್ಟೆ; ಎಲ್ಲರೂ ಎತ್ತಲೋ ನೋಡಿಕೊಂಡಿರುವಾಗ ತಟಕ್ಕನೆ ಎರಗಿ ಬಾಂಬುಗಳ ಮಳೆಯನ್ನು ಕರೆದು ಹೊರಟುಹೋಗುತ್ತವೆ. ಆದುದರಿಂದಲೇ ವಿಮಾನದಾಳಿ ಎಚ್ಚ

ರಿಕೆ ಏರ್ಪಾಡುಗಳು ಹಗಲೂ ರಾತ್ರಿಯೂ ಸರ್ವದಾ ಸಿದ್ಧವಾಗಿರಬೇಕು. ಅವುಗಳ ಸಂಬಂಧದ ಸಿಬ್ಬಂದಿಗಳವರು ಸದಾ ಕಾಲಕ್ಕೆ ಸಿದ್ಧನಾಗಿ, ಮೈಯೆಲ್ಲ ಕಣ್ಣಾಗಿ ನೋಡಿಕೊಳ್ಳುತ್ತ ಸಂಚರಿಸಿ ಕೆಲಸವಮಾಡಬೇಕು. ಈಗಿನ ಯುದ್ಧದಿಂದ ನಾವು ಅತ್ಯವಶ್ಯಕವಾಗಿ ಗಮನಿಸಬೇಕಾಗಿ ಅನುಭವದಿಂದ ಕಂಡುಬಂದಿರುವ ಅಂಶವೊಂದಿದೆ. ಸರ್ವದಾ ಎಚ್ಚರಿಕೆಯಿಂದಿರುವುದೇ ಭದ್ರತೆಯ ಮೂಲಾಧಾರವೆಂಬುದು ಆ ಅಂಶ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಪತಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರಿತವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇವನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇನೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅವರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಭಸ್ಮಗಳು.		
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹಿತ್ತಾಳಿಭಸ್ಮ	೧	೦—೪—೦
ಕಾಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೧—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್-ಓಖಿಮಠ, ಜಿಲ್ಲಾ-ಗಢವಾಲ್—ಯು.ಪಿ.

ಸಿದ್ಧಾಂತಶಿಖಾಮಣಿ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ

ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತವಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯರೆಂಬ** ಆಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿ ನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M. F. Printings ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು. ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಸಾರಿಸಾರಿ ಹೇಳಬಹುದಾಗಿದೆ. ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು. ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣನಾಥನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಮಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! ಬೆಲೆ ೨ ರೂಪಾಯಿ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು [illegible] ದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ, ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. [illegible] ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುಕ್ತಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ [illegible] ಕಮಿಷನ್ ವಜಾ ಹೋಗಲಾಗಿ ೭ ರೂ.ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. [illegible]

[illegible]

[illegible]

[illegible]

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪×೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೭—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೭—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೦—೪—೦
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೨—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟಿರುವ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡರ್ಜ ಒಂದಕ್ಕೆ ಕ್ರಯ ರೂ. ೨-೮-೦ ವಿ.ಪಿ ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[47] ಪೋ ಬಾ ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸಚ್ಛಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ) ...	೨ ಆಣೆ
ಬಹುವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ .	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) ...	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ..	೪ ಆಣೆ
ಸಚ್ಛಾಸ್ತ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) ..	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ...	೬ ಆಣೆ
ವೀರಶೈವಮಹಾತ್ಮರು .. .	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮುಲು(ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ .	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .. .	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೨೦ಮಹತ್ವದ ಫೋಟೋಗಳುಳ್ಳದ್ದು) ..	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾನುವಾದ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	**4 As.**
The Philosophical Aspect of Virasaivism (*English*) .	**8 As.**
Speeches by Pandit Shri Kashinatha Shastriji *English*)	**12 As.**
लिंगधारणचन्द्रिका (संस्कृत)	१ रु.
वीरशैवमत (मराठी)	१ रु
महानारायणोपनिषद् (वीरशैवभाष्य-संस्कृत)	१ रु.
पुरुषसूक्तम् (वीरशैवभाष्योपेतम्) . .	४ आ.
[illegible] (संस्कृत) ...	२ आ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಚರಣಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಕ್ಷರೀಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೨ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ನೇ ಮೇ ೧೯೪೨ [ಸಂಚಿಕೆ ೪

ಶ್ರೀಕಾಶೀನಾಥಗ್ರಂಥಮಾಲೆಯ—೪೦-೪೧-೪೨-೪೩ನೆಯ ಪುಷ್ಪ

ಶಿವಾಗಮಸಂಗ್ರಹಃ

ಈ ಗ್ರಂಥವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ **ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮ**ಗಳೆಂಬ ನಾಲ್ಕು ಶಿವಾಗಮಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ, ಇದಕ್ಕೆ "**ಶಿವಾಗಮಸಂಗ್ರಹ**" ಎಂಬ ಹೆಸರಿಡಲಾಗಿದೆ ಈ ನಾಲ್ಕು ಶಿವಾಗಮಗಳಲ್ಲಿ ವೀರಶೈವಮತದ ಪ್ರಾಚೀನ ಧರ್ಮಗಳು ಬಹು ಹೃದಯಂಗಮವಾಗಿ ವಿವರಿಸಲ್ಪಟ್ಟಿರುವವು ವೀರಶೈವಮತದ ಸರ್ವಸ್ವವೇ ಇವುಗಳಲ್ಲಿ ಅಡಗಿರುವದು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ವಿಶೇಷ ಪ್ರಯತ್ನದಿಂದ ಇವುಗಳನ್ನು ಸಂಗ್ರಹಿಸಿ ಚೆನ್ನಾಗಿ ಪರಿಶೋಧಿಸಿ ಅತ್ಯಂತ ಸುಂದರವಾಗಿ ಮುದ್ರಿಸಿ ಪ್ರಕಟಿಸಿದ್ದಾರೆ. ಇಂತಹ ಸರ್ವೋತ್ತಮ ಶಿವಾಗಮಗಳು ಈಗ ಪ್ರಕಾಶಕ್ಕೆ ಬಂದಿರುವುದು ಈ ಮತದ ಪುಣ್ಯವಿಶೇಷವೆಂದೇ ಹೇಳಬೇಕಾಗಿದೆ ಈ ಶಿವಾಗಮಗಳು ಸದ್ಯಃ ಟೀಕೆಯಿಲ್ಲದೆ ಮೂಲ ಮಾತ್ರ ಮುದ್ರಿತವಾಗಿವೆ ಪ್ರತಿಯೊಬ್ಬರೂ ಈ ಪೂಜ್ಯಗ್ರಂಥಗಳನ್ನು ತರಿಸಿಕೊಂಡು ಇವುಗಳಲ್ಲುಕ್ತವಾಗಿರುವ ಪ್ರಾಚೀನ ಪವಿತ್ರಧರ್ಮಗಳನ್ನು ತಿಳಿದು ಅದರಂತೆ ಆಚರಿಸಿ ಪರಶಿವನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ ಮನೋಹರವಾದ ಮುದ್ರಣ ! ಸುಂದರವಾದ ಬೈಂಡು ! **ಬೆಲೆ ೨ ರೂಪಾಯಿ**

ಪಂಚಾಚಾರಪ್ರಕಾಶಿಕಾ (೪೪ನೆಯ ಪುಷ್ಪ)

ಇದರಲ್ಲಿ ವೀರಶೈವರು ಮುಖ್ಯವಾಗಿ ಆಚರಿಸತಕ್ಕ ೬೪ ಶೀಲಗಳು ಹೃದಯಂಗಮವಾಗಿ ವರ್ಣಿತವಾಗಿವೆ ಚಂದ್ರಜ್ಞಾನಾಗಮದ ೯ನೆಯ ಪಟಲದಲ್ಲಿ ಈ ಶೀಲಗಳು ಉಕ್ತವಾಗಿರುವುದರಿಂದ ಇದನ್ನು ಪ್ರತ್ಯೇಕವಾಗಿ ಕನ್ನಡ ಟೀಕೆಯೊಡನೆ ಮುದ್ರಿಸಿದ್ದಾಗಿದೆ. **ಬೆಲೆ ೨ ಆಣೆ**

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ನಾನಾವಿಧ ಬಣ್ಣಗಳಿಂದ ಮನೋಹರವಾಗಿ ಮುದ್ರಿತವಾಗಿರುವ

ನೂತನ ಫೋಟೋಗಳು

ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ (ಸೈಜು ೧೪×೧೦) ಬೆಲೆ ೪ ಆಣೆ
(ಅತ್ಯಂತ ಸುಂದರವಾದುದು.)

ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ಸೈಜು ೬×೧೦) „ ೨ ಆಣೆ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸಂತೋಷ ಸಮಾಚಾರ

ನಿಜಾಮ ಇಲಾಖಾ ದೇವರಗಿ ಹಿರಿಯಮಠದ ಕೆಳಗೆ ಕುರುಂದವಾಡ ಸಂಸ್ಥಾನಕ್ಕೆ ಸೇರಿದ ದುಧನಿ, ಬೋರೋಟಿ, ಹಂಗರಗಿ, ಚಿಕ್ಕವಾಡಿ ಈ ನಾಲ್ಕು ಗ್ರಾಮಗಳಲ್ಲಿ ಶಾಖಾ ಮಠಗಳಿರುತ್ತವೆ ಈ ಶಾಖಾಮಠಗಳ ಆಸ್ತಿಗಳ ಬಗ್ಗೆ ಈಗ್ಗೆ ೧೮ ವರ್ಷಗಳಿಂದ ತಕರಾರು ನಡೆದಿದ್ದು ತಾ॥ ೧೫-೪-೧೯೪೨ನೆಯ ದಿವಸ ಈ ನಾಲ್ಕು ಮಠಗಳ ಆಸ್ತಿಯನ್ನು ದೇವರಗಿ ಹಿರಿಯಮಠದ ಶ್ರೀ ಗುರುಶಾಂತ ಶಿವಾಚಾರ್ಯರ ಸ್ವಾಧೀನಕ್ಕೆ ಕೊಡಬೇಕೆಂದು ಸರಕಾರದಲ್ಲಿ ತೀರ್ಮಾನವಾಯಿತು ಅದರಂತೆ ಎಲ್ಲವೂ ಅವರ ಸ್ವಾಧೀನಕ್ಕೆ ಬಂದವೆಂಬ ವಿಷಯವನ್ನು ತಿಳಿಸಲು ಅತ್ಯಾನಂದವೆನಿಸುತ್ತದೆ ಶ್ರೀ ದೇವರಗಿ ಸ್ವಾಮಿಗಳವರು ಮಹಾಶಾಂತ ಮೂರ್ತಿಗಳಾಗಿದ್ದು ತಪಸ್ವಿಗಳಾಗಿರುವರು ಅವರ ನಿರ್ಮಲವ ಮನೋಭಾವಕ್ಕನುಸಾರವಾಗಿ ದೇವರು ಸಹಾಯಮಾಡಿದನು ಸತ್ಯಕ್ಕೆ ಸಾವಿಲ್ಲವೆಂಬುದು ನಿಶ್ಚಯ

ದೇವರಗಿಮಠದಶಿಷ್ಯ.

ವಿವಾಹಮಹೋತ್ಸವ, ಸೊಲ್ಲಾಪುರ

ಸೊಲ್ಲಾಪುರನಗರದಲ್ಲಿರುವ ಶ್ರೀಮತಿ ಗಂಗಾಬಾಯಿ ಭ್ರತಾರ ವಿಶ್ವನಾಥಪ್ಪ ಬೆಂಬಳಗಿ ಇವರ ಪುತ್ರ ಚಿ॥ ಸಿದ್ಧಲಿಂಗಪ್ಪನ ವಿವಾಹ ಮಹೋತ್ಸವವು, ಈತಿಂಗಳು 4 ನೆಯ ತಾರೀಖಿನ ದಿವಸ ವಿಶೇಷ ವೈಭವದೊಡನೆ ಶ್ರೀಮಾನ್ ಚನ್ನಬಸಪ್ಪ ಜಿಪ್ಪಣ ಇವರ ವಾಡೆಯಲ್ಲಿ ನೆರವೇರಿತು ತಾ॥ 1ನೆಯ ಶುಕ್ರವಾರ ದಿವಸ ನೂತನ ವಧೂವರರಾದ ಚಿ॥ ಸಿದ್ಧಲಿಂಗಪ್ಪ ಮತ್ತು ಸೌ॥ ಅನ್ನಪೂರ್ಣಾದೇವಿ ಇವರ ದೀಕ್ಷಾಸಮಾರಂಭವು ಶ್ರೀ ಮುಳ್ಳೂರು ಪಟ್ಟಾಧ್ಯಕ್ಷರವರ ಮತ್ತು ಶ್ರೀ ಜೈನಾಪುರ ಚರಮೂರ್ತಿ ಸ್ವಾಮಿಗಳವರ ಗುರುತ್ವದಲ್ಲಿ ವಿಧ್ಯುಕ್ತವಾಗಿ ನೆರವೇರಿತು ತಾ॥ ೨ ನೆಯ ಶನಿವಾರ ದಿವಸ ದೇವತಾರಾಧನಾದಿ ಕಾರ್ಯಗಳು ಸಾಂಗವಾಗಿ ನೆರವೇರಿದವು. ತಾ॥ ೪ ನೆಯ ಸೋಮವಾರ ಪಂಚಬ್ರಹ್ಮಕಲಶಸ್ಥಾಪನ ಪೂರ್ವಕ ಮಾಂಗಲ್ಯಧಾರಣ ಕಾರ್ಯವು ವಿಧ್ಯುಕ್ತವಾಗಿ ನೆರವೇರಿತು ಈ ವಿವಾಹ ಸಮಾರಂಭಕ್ಕೆ ಬಂಧುಬಾಂಧವರೂ, ಆಪ್ತೇಷ್ಟರೂ, ಪ್ರಮುಖರೂ, ಮಾಹೇಶ್ವರರೂ ಆಗಮಿಸಿ ನೂತನ ವಧೂವರರಿಗೆ ಆಶೀರ್ವದಿಸಿದರು. ಈ ವಿವಾಹಸಮಾರಂಭದ ಸಮಯದಲ್ಲಿ ಶ್ರೀಮತಿ ಪಾರ್ವತೀಬಾಯಿ ಜಿಪ್ಪಣ ಇವರು ಸರ್ವ ರೀತಿಯಿಂದ ಬಹಳ ಸಹಾಯಮಾಡಿ ಸರ್ವರ ಸ್ತೋತ್ರಕ್ಕೆ ಪಾತ್ರರಾದರು. ಈ ಸಮಾರಂಭದ ಸರ್ವ ಶ್ರೇಯಸ್ಸು ಶ್ರೀಮತಿ ಪಾರ್ವತೀಬಾಯಿಯವರಿಗೆ ಸೇರಿದ್ದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನೂತನ ವಧೂವರರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯ ಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಹಾರೈಸುತ್ತ,

ಓರ್ವ ಗುರುಭಕ್ತ.

॥ ಶ್ರೀಜಗದ್ಗುರು ದಾರುಕಾಚಾರ್ಯಾಯ ನಮಃ ॥

ವೇದಾಂತದ ಉದ್ದೇಶ

ಲೇ—ಮಲ್ಲಿಕಾರ್ಜುನಾರಾಧ್ಯ, ರಾಣೇಬೆನ್ನೂರು, ಮಳೇಮಠ, ಮುದೇನೂರು

ವೇದಾಂತವು ಏನನ್ನು ಕುರಿತು ಹೇಳುವುದು? ಜಗತ್ತಿನಲ್ಲಿ ಸುಪ್ರಸಿದ್ಧವಾದ ಬಗೆಬಗೆಯ ಕಾರ್ಯಗಳಿಗೆ ಕರ್ತೃಸ್ವರೂಪವಾಗಿರುವ ಜೀವರ ವಿಷಯವನ್ನು ಹೇಳುವುದು, ಅಥವಾ ಉತ್ಕೃಷ್ಟ ಭೋಗಗಳಿಗೆ ಆಶ್ರಯವಾಗಿರುವ ದೇವತೆಗಳ ವಿಷಯವನ್ನು ಹೇಳುವುದು, ಅಥವಾ ಸೃಷ್ಟಿಲಕ್ಷಣವನ್ನು ಹೇಳುವುದು. ಹೀಗಿದ್ದರಲ್ಲನೆ ವೇದಾಂತವು ಯಾವುದಾದರೊಂದು ಬಗೆಯಲ್ಲಿ ಪ್ರಯೋಜನಕರವಾಗಿರುವುದು!

'ಈ ಸಂದೇಹವು ಸಾಮಾನ್ಯವಾಗಿ ಬರತಕ್ಕದ್ದೇ ಸರಿ. ಪೂರ್ವಾಪರ ವಿಚಾರ ಮಾಡಿದರೆ ಜೀವರ ವಿಷಯವನ್ನು ಹೇಳುವುದಾಗಲಿ, ದೇವತೆಗಳ ವಿಷಯವನ್ನು ಹೇಳುವುದಾಗಲಿ, ಸೃಷ್ಟಿಲಕ್ಷಣವನ್ನು ಹೇಳುವುದಾಗಲಿ, ವೇದಾಂತದ ಉದ್ದೇಶವಲ್ಲ. ವೇದಾಂತದಲ್ಲಿ ಮೇಲ್ಕಂಡ ವಿಷಯಗಳು ಸಂದರ್ಭಾನುಸಾರ ಗರ್ಭಿತವಾಗಿರಬಹುದು. ಆದರೆ ಬ್ರಹ್ಮವಿಷಯವನ್ನು ಹೇಳುವುದೇ ವೇದಾಂತದ ಮುಖ್ಯ ಉದ್ದೇಶವು. ಜೀವರ ವಿಷಯಗಳೂ ದೇವತೆಗಳ ವಿಷಯಗಳೂ ಸೃಷ್ಟಿಲಕ್ಷಣಗಳೂ ವೇದದ ಬೇರೆಬೇರೆ ಪ್ರಕರಣಗಳಲ್ಲಿ ಮುಖ್ಯ ವಿಷಯಗಳಾಗಿ ಉಕ್ತವಾಗಿವೆ. ವೇದಾಂತದಲ್ಲಿ ಅವುಗಳಲ್ಲಿ ಒಂದೊಂದಂಗರೂಪವಾಗಿ ಮಾತ್ರ ಅನುಪ್ರವೇಶ ಉಂಟಾಗಿರುವುದು. ಒಂದು ಪ್ರಕರಣದ ಮುಖ್ಯ ತಾತ್ಪರ್ಯವನ್ನು ನಿಶ್ಚಯಿಸಬೇಕಾದರೆ ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದ ಮತ್ತು ಉಪಪತ್ತಿ ಎಂಬ ಸಂಗತಿಗಳಿಗೆ ಗಮನಿಸಬೇಕಾಗಿರುವುದು. ಈ ಎಲ್ಲಾ ಸಂಗತಿಗಳಿಂದಲೂ ವೇದಾಂತಕ್ಕೆ ಬ್ರಹ್ಮಪರವೇ ಮುಖ್ಯ ತಾತ್ಪರ್ಯವಾಗುತ್ತದೆ. ಅದು ಹೇಗೆಂದರೆ——

ಉಪಕ್ರಮ—"ಸದೇವ ಸೋಮ್ಯೇದಮಗ್ರ ಆಸೀತ್" ಎಂಬ ಶ್ರುತಿಯಂತೆ ಸೃಷ್ಟಿಗೆ ಆದಿಯಲ್ಲಿ ಸತ್ಪದಾರ್ಥವಾದ ಬ್ರಹ್ಮವೊಂದಿತ್ತೆಂದು ಬ್ರಹ್ಮವಿಷಯವು ಉಪಕ್ರಮವಾಗಿದೆ

ಉಪಸಂಹಾರ—"ಐತದಾತ್ಮ್ಯಮಿದಂ ಸರ್ವಂ । ತತ್ಸತ್ಯಂ ಸ ಆತ್ಮಾ ತತ್ವಮಸಿ" ಎಂಬ ಶ್ರುತಿವಾಕ್ಯದಂತೆ ಈ ಕಾಣುವುದೆಲ್ಲಾ ಬ್ರಹ್ಮವೇ ಎಂದು ಬ್ರಹ್ಮವಿಷಯವೇ ಉಪಸಂಹಾರದಲ್ಲಿದೆ.

ಅಭ್ಯಾಸ—"ತತ್ವಮಸಿ" ಎಂಬ ಮಹಾವಾಕ್ಯದ ಮೂಲಕ "ನೀನೇ ಆ ಬ್ರಹ್ಮವು" ಎಂದು ಬಾರಿಬಾರಿಗೂ ಬ್ರಹ್ಮವಿಷಯವನ್ನು ಹೇಳಿರುವುದು ಅಭ್ಯಾಸ.

ಅಪೂರ್ವತಾ—ವೇದಾಂತವೊಂದು ಹೊರತು ಮತ್ತಾವುದರಿಂದಲೂ ತಿಳಿಯಲಾಗದೆ ಇರುವ ಅಸಾಧಾರಣತ್ವವೇ ಅಪೂರ್ವತಾ. ಜೀವರ, ದೇವತೆಗಳ ಮತ್ತು ಸೃಷ್ಟಿಲಕ್ಷಣಗಳ ವಿಷಯಗಳು ಬೇರೆಬೇರೆ ಪ್ರಕರಣಗಳಲ್ಲಿ ಮುಖ್ಯಾಂಶವಾಗಿ ಉಕ್ತವಾಗಿರುವುದರಿಂದ ವೇದಾಂತದಲ್ಲಿ ಅವುಗಳಿಗೆ ಅಪೂರ್ವತಾಲಕ್ಷಣ ಹೊಂದುವುದಿಲ್ಲ.

ಫಲ—ಒಂದನ್ನು ತಿಳಿಯುವುದರಿಂದ ಸರ್ವವನ್ನೂ ತಿಳಿದಂತಾಗುವುದೇ ಫಲ. ಆ ಒಂದು ಬ್ರಹ್ಮವಾದೀತೇ ಹೊರತು ಇನ್ನೊಂದಾಗಲಾರದು

ಅರ್ಥವಾದ—ಉತ್ಪತ್ತಿ, ಸ್ಥಿತಿ, ಲಯ ಮತ್ತು ಈಶ್ವರನು ಜೀವರೂಪದಿಂದ ಪ್ರವೇಶಿಸುವಿಕೆ ಮೊದಲಾದವುಗಳೆಲ್ಲಾ ಅರ್ಥವಾದಗಳು. ಈ ಅರ್ಥವಾದಗಳೆಲ್ಲ ಬ್ರಹ್ಮ ವಿಷಯದಲ್ಲಿ ಚೆನ್ನಾಗಿ ಸಮನ್ವಯವಾಗುವುವು.

ಉಪಪತ್ತಿ—ಮಣ್ಣು ಮೊದಲಾದ ದೃಷ್ಟಾಂತಗಳೇ ಉಪಪತ್ತಿಗಳು. ಈ ದೃಷ್ಟಾಂತಗಳು ಬ್ರಹ್ಮವಿಷಯ ಬೋಧನೆಗೆ ಸಾಧಕಗಳೇ ಹೊರತು ಇತರ ವಿಷಯಗಳಿಗೆ ಸರಿಯಾಗಿ ಒಪ್ಪುವುದಿಲ್ಲ.

ಆದುದರಿಂದ ವೇದಾಂತವೆಲ್ಲ ಬ್ರಹ್ಮಪರವೆಂತಲೇ ಸಿದ್ಧಾಂತವಾಯಿತು. ವೇದಾಂತವು ಬ್ರಹ್ಮಪರವೇ ಆಗಲಿ ಆ ಬ್ರಹ್ಮಪರವು ಪರೋಕ್ಷದಲ್ಲಿ ಕಾಣುತ್ತಿದೆಯೇ ಹೊರತು ಪ್ರತ್ಯಕ್ಷದಲ್ಲಿ ಶ್ರವಣಮನನ ನಿದಿಧ್ಯಾಸಗಳನ್ನು ನಿಯಮಿಸುವುದರ ಮೂಲಕ ಅದು ವಿಧಿಪರವೇ ಅಲ್ಲವೆ? "ಶಾಸನಾಚ್ಛಾಸ್ತ್ರಂ" ಎಂಬಂತೆ ಯಾವುದಾದರೊಂದನ್ನು ಲೋಕಕ್ಕೆ ವಿಧಿಸುತ್ತಿದ್ದರಲ್ಲವೆ ಅದಕ್ಕೆ ಶಾಸ್ತ್ರದ ಸಿದ್ಧಿ? ಎಂಬೀ ಅನುಮಾನಗಳು ಈಗ ಬಂದೊದಗಬಹುದು

ವೇದಾಂತವು ಏನನ್ನೂ ವಿಧಿಸುವುದಿಲ್ಲ. ವೇದಾಂತದ ಮುಖ್ಯ ವಿಷಯ ಬ್ರಹ್ಮ. ಆ ಬ್ರಹ್ಮದ ವಿಷಯವಾಗಿ ಏನನ್ನು ವಿಧಿಸಬೇಕು? ಬ್ರಹ್ಮವನ್ನು ಮಾಡಬೇಕೇ? ಬ್ರಹ್ಮಕ್ಕೆ ರೂಪಾಂತರವನ್ನು ಕೊಡಬೇಕೆ? ಬ್ರಹ್ಮವನ್ನು ಹೋಗಲಾಡಿಸಬೇಕೆ? ಈ ವಿಧಿಗಳನ್ನು ಯಾರು ಆಚರಿಸಲಾದೀತು. ಒಂದು ಕ್ರಿಯೆಯನ್ನು ಮಾಡೆಂದು ಶಾಸನ ಮಾಡಿದುದೊಂದೇ ಶಾಸ್ತ್ರವಲ್ಲ. ಇದ್ದದ್ದನ್ನು ಇದ್ದಹಾಗೆ ಹೇಳುವುದೂ ಶಾಸ್ತ್ರವೇ. ಹಾಗೆ ಸಿದ್ಧವಸ್ತು ಕಥನವನ್ನು ಶ್ರವಣ ಮಾಡಿಸಿದ ಮೇಲೆ ಅನುಭವಾತ್ಮಕವಾದ ಮನನಾದಿಗಳನ್ನು ಹೇಳುವುದಾದರೂ ಒಂದು ವಿಧಿಸುವಿಕೆಯಲ್ಲವೆ? ಎಂದರೆ, ಅಲ್ಲಿಯೂ ವಿಧಿಸುವಿಕೆಯಲ್ಲ. ವಿಹಾರಾರ್ಥವಾಗಿ ಹೋದ ಹತ್ತು ಜನರು ತಮ್ಮ ಆಟಪಾಟಗಳನ್ನು ತೀರಿಸಿಕೊಂಡು ಹಿಂದಿರುಗಿದಾಗ ಒಬ್ಬನು ತನ್ನನ್ನು ಬಿಟ್ಟು ತನ್ನ ಗುಂಪನ್ನು ಎಣಿಸಿ ಹತ್ತೆಂಬ ಎಣಿಕೆಗೆ ಬಾರದುದರಿಂದ ಬಿಕ್ಕಿಬಿಕ್ಕಿ ಅಳುತ್ತಿರುವಾಗ ಜಾಣನೊಬ್ಬನು ಬಂದು "ನೀನೇ ಹತ್ತನೆಯವನು" ಎಂದು ಹೇಳಿದರೆ ಒಡನೆಯೇ ಅವನಿಗೆ ಆ ಶಬ್ದವೇ ಪ್ರತ್ಯಕ್ಷಾನುಭವವನ್ನು ತೋರ್ಪಡಿಸುತ್ತದೆ. ಹಾಗೆ ಶಬ್ದದಿಂದಲೇ ಜ್ಞಾನವಾಗುವುದಕ್ಕೆ ಪೂರ್ವಭಾವಿಯಾಗಿ ಅಸಂಭವನಾದಿಗಳು ಹೋಗುವುದಕ್ಕೆ ಸಾಧಕವಾಗಿ ಕರ್ತವ್ಯವಿನ ಇಸ್ಯಕ್ಕೊಳಪಟ್ಟ ಮನನಾದಿಗಳು ಉಕ್ತವಾಗಿದೆಯೇ ಹೊರತು ಮೀಮಾಂಸಾ ಶಾಸ್ತ್ರದಂತೆ ವೇದಾಂತವು ಲೋಕಪಕ್ಷ ಪ್ರಾಯಶ್ಚಿತ್ತವನ್ನು ಹೇಳುವ ಮನನಾದಿಗಳನ್ನು ವಿಧಿಸುವುದಿಲ್ಲ

ಹಾಗೆ ಯಾವುದನ್ನೂ ವಿಧಿಸದೆ ಇದ್ದದ್ದನ್ನು ಇದ್ದಹಾಗೆಯೇ ಹೇಳುವುದಾದರೆ ವೇದಾಂತದಿಂದ ಪ್ರಯೋಜನವೇನು? ಎಂದರೆ ಹೂವಿನ ಸರವನ್ನು ಸರ್ಪವೆಂದು ಭ್ರಮಿಸಿ ಕಂಗೆಟ್ಟು ನಡುಗುತ್ತಿರುವವನಿಗೆ "ಇದು ಸರ್ಪವಲ್ಲ ಹೂವಿನ ಸರ" ಎಂಬ ಯಥಾರ್ಥವಾದವು ಅನರ್ಥ ನಿವೃತ್ತಿಯನ್ನು ಮಾಡುವ ಹಾಗೆ "ಇಲ್ಲಿ ಕಾಣುವದೆಲ್ಲಾ ಜಗತ್ತಲ್ಲ, ಬ್ರಹ್ಮ" ಎಂಬ ಯಥಾರ್ಥವಾದವು ಅಜ್ಞಾನ ನಿವೃತ್ತಿಯನ್ನು ಮಾಡುವುದು ಇದೇ ವೇದಾಂತದ ಉದ್ದೇಶವು

ವಾಚಕರೇ! ವೇದಾಂತವು ಎಷ್ಟೋ ಕಷ್ಟವಾದ ದರ್ಶನವೆಂದು ಅನೇಕರು ತಿಳಿದುಕೊಂಡಿರುವರು "ಇದು ಪ್ರತ್ಯಕ್ಷವಾಗಿ ಅನುಭವಕ್ಕೆ ಬರತಕ್ಕದ್ದು, ಯಾವ ಧರ್ಮಕ್ಕೂ ವಿರೋಧವಿಲ್ಲ, ಮಾಡಬೇಕಾದ ಸಾಧನವೂ ಬಹು ಸುಲಭ, ಫಲವೂ ನಾಶರಹಿತವಾದದ್ದು." ವೇದಾಂತದಿಂದ ಯಾವ ಹೆಚ್ಚಿನ ಮಹಿಮೆಯೂ ಯಾವ ಸಿದ್ಧಿಯೂ ಆಗುವುದಿಲ್ಲ; ಕೈಕಾಲುಗಳ ಸಂಖ್ಯೆಯು ಹೆಚ್ಚುಕಡಿಮೆಯಾಗುವುದಿಲ್ಲ. ಆಹಾರ ವಿಹಾರಗಳಲ್ಲಾಗಲಿ ನಡೆನುಡಿಗಳಲ್ಲಾಗಲಿ ವೇದಾಂತಿಗಳಿಗೂ ಉಳಿದವರಿಗೂ ಯಾವ ಹೆಚ್ಚುಕಡಿಮೆಯೂ ಇರುವುದಿಲ್ಲ. ವೇದಾಂತದಿಂದ ಆಯುಃಪರಿಮಿತಿಯು ಹೆಚ್ಚುವುದಿಲ್ಲ; ವಿಲಕ್ಷಣವಾದ ಜ್ಯೋತಿ ಮೊದಲಾದವು ಕಾಣಿಸುವುದಿಲ್ಲ; ಅನ್ನಪಾನಗಳನ್ನು ಬಿಟ್ಟಿರುವುದಕ್ಕೆ ಬರುವುದಿಲ್ಲ; ನೆಲದಲ್ಲಿ ಹೂಳಿಸಿಕೊಂಡು ಸಾಯದೆ ಇರುವ ಶಕ್ತಿ ಬರುವದಿಲ್ಲ; ನೀರಮೇಲೆ ನಡೆಯುವುದಕ್ಕಾಗಲಿ ಬಂಡೆಯಂತೆ ಚಳಿ, ಮಳೆ, ಗಾಳಿ, ಬಿಸಿಲು—ಇವುಗಳನ್ನು ಲೆಕ್ಕಿಸದೆ ಮಲಗಿರುವುದಕ್ಕಾಗಲಿ ಆಕಾಶದಲ್ಲಿ ಹಾರಾಡುವುದಕ್ಕಾಗಲಿ ಬರುವದಿಲ್ಲ. ಇದೆಲ್ಲ ಪುರುಷಾರ್ಥವಾಗಿರಲಿ, ಆಗದಿರಲಿ, ವೇದಾಂತದಿಂದಂತು ಇವುಗಳಲ್ಲಿ ಯಾವುದೂ ಆಗುವುದಿಲ್ಲವೆಂಬುದು ಖಂಡಿತ. 'ಹಾಗಾದರೆ ವೇದಾಂತಿಗಳಲ್ಲಿರುವ ವಿಶೇಷವೇನು?' ಎಂದು ಯಾರಾದರೂ ಕೇಳಬಹುದು. ಗಣಿತಶಾಸ್ತ್ರವನ್ನು ಬಲ್ಲವರಿಗೂ ಹುಣಿಸೇಬೀಜಗಳಿಂದ ಎಣಿಕೆಮಾಡಿ ಲೆಕ್ಕಾಚಾರ ಮಾಡಿಕೊಳ್ಳುವ ಅನಕ್ಷರಿಗೂ ತಿಳುವಳಿಕೆಯಲ್ಲಿ ಬಿಟ್ಟರೆ ಮತ್ತೇತರಲ್ಲಿ ಹೆಚ್ಚುಕಡಿಮೆ ಇರುವದು? ವೇದಾಂತಿಗಳಿಗೂ ಮಿಕ್ಕವರಿಗೂ ಇರುವ ತಾರತಮ್ಯವನ್ನೂ ಇದರಂತೆಯೇ ತಿಳಿಯಬೇಕು. ವೇದಾಂತವೆಂಬುದು ಮಾಡಬೇಕಾದ ಒಂದು ಕಾರ್ಯವಲ್ಲ; ಅಥವಾ ಆಡಬೇಕಾದ ಶಾಸ್ತ್ರದ ಮಾತೂ ಅಲ್ಲ. ವೇದಾಂತಜ್ಞಾನವೆಂಬುದು ಆತ್ಮಸ್ವರೂಪದ ಅರಿವು. ಆತ್ಮತತ್ವರತರಿಗೆ ಮಾತ್ರವೇ ವೇದಾಂತದ ಪ್ರಯೋಜನವಾಗುವುದು.

ಗುರುತತ್ವಪ್ರಕಾಶಕ

ಲೇ—ಭಾಗೀರಥೀಬಾಯಿ ಕಟಾಪ, ಸೊಲ್ಲಾಪುರ

(ಹಿಂದಿನಿಂದ ಮುಂದುವರಿದುದು)

ಹೀಗೆ ಮಾಡಿದರೆ ಮಾತ್ರ ಕೀರ್ತನದಿಂದ ಬಹು ಜನರನ್ನು ಬಹು ಅನಾಯಾಸವಾಗಿ ದಾರಿಗೆ ತರಬಹುದು. ಈ ಬಗೆಯ ಕೀರ್ತನವು ಭಕ್ತಿಯ ಒಂದು ಲಕ್ಷಣವಾಗಿರುವದು. ಕೀರ್ತನವು ಜನರಲ್ಲಿ ರೋಮಾಂಚವನ್ನು ಹುಟ್ಟಿಸಿ ಆನಂದಾಶ್ರುವಿನ ಕೋಡಿಹರಿಯುವಂತೆ ಮಾಡಬೇಕು. ಈಗ ನಡೆಯುತ್ತಿರುವ ಎಷ್ಟೋ ಕೀರ್ತನಗಳಲ್ಲಿ ಈ ಲಕ್ಷಣವನ್ನು ನಾವು ಮನಗಾಣಬಹುದು. ಆದರೆ ಭಕ್ತಿಯ ನಿಜಸ್ವರೂಪವು ಮೆಯ್ದೋರಿಕೆಂಬುದಕ್ಕೆ ಈ ಲಕ್ಷಣದ ಒಳಭೇದಗಳನ್ನು ತಿಳಿಯುವದಗತ್ಯವು. ಮಹಾಸಾಧುಗಳಾದ ಏಕನಾಥರು ಭಾಗವತದ ಏಕಾದಶಸ್ಕಂಧದ ೧೧ ನೆಯ ಅಧ್ಯಾಯದ 23 ನೆಯ ಶ್ಲೋಕಕ್ಕೆ ವಿವರಣೆಯನ್ನು ಬರೆಯುವಾಗ ಈ ವಿಚಾರವನ್ನು ಉಲ್ಲೇಖಿಸಿದ್ದಾರೆ. ಅವರ ತಾತ್ಪರ್ಯವೇನೆಂದರೆ—"ಕಥೆಯಲ್ಲಿ ಕೆಲವು ಪಾತ್ರಗಳು ವರ್ಣಿಸುವ ಪ್ರಸಂಗವನ್ನು ಸತ್ತು ಕೆಟ್ಟು ಹೋದ ಸುದ್ದಿಯನ್ನು ಬಣ್ಣಗೊಟ್ಟು ವಿವರಿಸುವಾಗ ಅನೇಕರ ಕಣ್ಣಲ್ಲಿ ನೀರಿಳಿಯುವದು. ಅನೇಕರ ಮೈ ಗಡಗಟ್ಟಿ ನಡಗುವದು. ಇದೂ ಪ್ರೇಮದ ಲಕ್ಷಣವೆ; ಆದರೆ ಅದು ತಾಮಸಪ್ರೇಮ. ಮಹಾ ವೀರಶೌರ್ಯವನ್ನೂ, ದಾರುಣವಾದ ಯುದ್ಧವನ್ನೂ ಕೇಳುವಾಗ ಮನಸ್ಸಿಗೆ ಆಗುವ ಉಲ್ಲಾಸವೂ ಪ್ರೇಮದ ಲಕ್ಷಣವೆ. ಆದರೆ ಅದು ರಾಜಸಪ್ರೇಮ. ಪರಮಾತ್ಮನ ಸಗುಣಮೂರ್ತಿಯ ವೈಭವವನ್ನೂ ಕರುಣಾಪ್ರಯತಿಯನ್ನೂ ನೆನೆನೆನೆಯುತ್ತಾ ಮನಸ್ಸು ಪರಮಾತ್ಮಮಯವಾಗುವದು ಮಾತ್ರ ಸಾತ್ವಿಕಪ್ರೇಮ. ಕೀರ್ತನಕಾಲದಲ್ಲಿ ಸಭೆಯಮೇಲೆಲ್ಲಾ ಈ ಸಾತ್ವಿಕ ಪ್ರೇಮದ ಪ್ರವಾಹವು ಹರಿದಿರಬೇಕು. ಕೀರ್ತನದ ವಿಷಯವಾಗಿ ನಾವು ಹೇಳಬೇಕಾದದ್ದು ಮುಗಿದರೂ ಇನ್ನೊಂದು ಸಂಗತಿಯನ್ನು ನಮ್ಮ ಕೀರ್ತನಕಾರರ ಕಿವಿಯಲ್ಲಿ ಹೇಳಬೇಕಾಗಿದೆ. ಕೀರ್ತನವು ಪ್ರತಿಫಲಾಪೇಕ್ಷೆಯದಾಗಬಾರದು. ತನ್ನ ಹೊಟ್ಟೆಗೇನಾಗತಿಯೆಂಬ ಯೋಚನೆಯುಂಟಾದರೆ ಅನನ್ಯಭಕ್ತಿಯುಳ್ಳವರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆಂಬ ಭಗವದ್ವಾಕ್ಯವನ್ನು ಸ್ಮರಣೆಗೆ ತಂದುಕೊಳ್ಳಬೇಕು. ಕೀರ್ತನೆಯನ್ನು ಮಾರಬಾರದು. ಕೀರ್ತನ ಕೇಳಿ ಯಾರಾದರೂ ಸಹಾಯ ಮಾಡಿದರೆ ತೆಗೆದುಕೊಳ್ಳಬಹುದು. ಆದರೆ ಅದಕ್ಕೆ ಮುಂದಾಗಿಯೇ ಬೆಲೆಯನ್ನು ಕಟ್ಟಿ ಮಾರುವದು ಸಂಪೂರ್ಣವಾಗಿ ಅದನ್ನು ದುರುಪಯೋಗಮಾಡಿಕೊಂಡಂತೆ ಆಗುವದು. ಪರಿಗ್ರಹದ ವಿಷಯದಲ್ಲಿ ನಮ್ಮವರು ಎಷ್ಟು ಎಚ್ಚರಿಕೆಯಿಂದ ಇದ್ದರೆಂಬುವದನ್ನು ಮನಸ್ಸಿಗೆ ತಂದುಕೊಳ್ಳಬೇಕು. ಒಮ್ಮೆ ಅಗಸ್ತ್ಯರಿಗೆ ಹಣವು ಬೇಕಾಗಿತ್ತು. ಆಗ ಅವರು ಶ್ರುತಶ್ವ, ಬ್ರಧ್ನಶ್ವ-ಎಂಬವರ ಬಳಿಗೆ ಹೋದರು. ಆ ಗೃಹಸ್ಥರು ಅಗಸ್ತ್ಯರಿಗೆ ಹಣವನ್ನು ಕೊಡುವದಕ್ಕೆ ಸಿದ್ಧರಾಗಿದ್ದರು. ಆದರೆ ಅಗಸ್ತ್ಯರು ನೋಡಿದಾಗ ಆ ಗೃಹಸ್ಥರ ಆಯವ್ಯಯಗಳೆರಡೂ ಸರಿಯಾಗಿದ್ದುದರಿಂದ ಅವರು ಕೊಡುವದನ್ನು ಅಗಸ್ತ್ಯರು ಪರಿಗ್ರಹಿಸಲಿಲ್ಲ. ಒಂದು ಪಕ್ಷ ಕೊಡತಕ್ಕವರು ಧನಿಕರಾಗಿದ್ದರೂ ತನಗೆ ಅಗತ್ಯವಾದಷ್ಟಕ್ಕಿಂತ ಹೆಚ್ಚನ್ನು ಪರಿಗ್ರಹಿಸುವದು ಕೂಡ ನಮ್ಮವರಿಗೆ ಯೋಗ್ಯವೆನಿಸುವದಿಲ್ಲ. ವರತಂತುಋಷಿಗಳು ತಮ್ಮ ಶಿಷ್ಯನಿಗೆ ಒಂದು ಮೊತ್ತವನ್ನು ಗುರುದಕ್ಷಿಣೆಯಾಗಿ ಕೇಳಿದ್ದರು. ಆ ಶಿಷ್ಯನು ಒಬ್ಬ ರಾಜನ ಬಳಿಗೆ ಹೋಗಿ ಯಾಚಿಸಿದಾಗ ಆ ರಾಜನು ಅವರಿಗೆ ಹೆಚ್ಚಾಗಿ ಕೊಡುವದಕ್ಕೆ ಬಂದನು. ಆಗ ಆ ಶಿಷ್ಯನು ತನ್ನ ಅಗತ್ಯಕ್ಕಿಂತ ಹೆಚ್ಚಾಗಿ ಪರಿಗ್ರಹಿಸಲಾರೆನೆಂದು ಹೇಳಿದ್ದಾನೆ. ಇಂಥ ಪುಣ್ಯಶ್ಲೋಕರ ವಂಶದಲ್ಲಿ ಹುಟ್ಟಿ ಕೀರ್ತನಕ್ಕೆ ಬೆಲೆಯನ್ನು ಕಟ್ಟಿ ಅಂಗಡಿಯಾಗಿಡುವದು ವ್ಯವಹಾರ ದೃಷ್ಟಿಯಿಂದ ಎಷ್ಟು ಸೌಕರ್ಯವಾಗಿ ಕಂಡರೂ ಧರ್ಮದೃಷ್ಟಿಯಿಂದ ನಿಂದ್ಯವೇ ಸರಿ. ತನ್ನ ಕೀರ್ತನವು ವೀರವತ್ತಾಗಬೇಕಾದರೆ ಕೀರ್ತನಕಾರರು ಅವಶ್ಯವಾಗಿ ವಿರಕ್ತರಾಗಬೇಕು. ಇಲ್ಲದಿದ್ದರೆ ನಾಟಕವನ್ನಾದರೂ ಹೂಡಬೇಕು. ಧನಾರ್ಜನೆಯ ಉದ್ದೇಶವನ್ನಿಟ್ಟುಕೊಂಡು ವೈರಾಗ್ಯವನ್ನುಪದೇಶಮಾಡುವದು "ಮಾಡುವದು ಅನಾಚಾರ ಮನೆಯ ಮುಂದೆ ವೃಂದಾವನ" ಎಂಬ ಗಾದೆಯಂತೆ ಆಗುವದು. ಕೀರ್ತನಕ್ಕೆ ಈ ದುರ್ದೆಸೆ ಬರದಂತೆ ಕೀರ್ತನಕಾರರು ರಕ್ಷಣೆಮಾಡಬೇಕು. (ಸಶೇಷ)

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ವಿವಾಹಮಹೋತ್ಸವ

ಶಿವಮೊಗ್ಗಾ ಡಿ|| ಹಾರನಹಳ್ಳಿ ನಿವಾಸಿಗಳಾದ ಗಾಜನೂರು ಸಾ|| ಮ|| ರಾ|| ತಿರುಕಪ್ಪನವರ ಗೃಹದಲ್ಲಿ ಇದೇ ವೈಶಾಖ ಬಹುಳ ೪ (ತಾ|| 4-5-1942) ಸೋಮವಾರ ಮ|| ರಾ|| ತಿರುಕಪ್ಪನವರ ದ್ವಿತೀಯಪುತ್ರಿ ಚಿ|| ಸೌ|| ಪಾರ್ವತಮ್ಮನೆಂಬ ವಧುವಿಗೂ ಶಿಕಾರಿಪುರದ ಸುರಗೀಹಳ್ಳಿ ವೀರಪ್ಪನವರ ಜ್ಯೇಷ್ಠಪುತ್ರ ಚಿ|| ರಾ|| ವೀರಸಂಗಪ್ಪನೆಂಬ ವರನಿಗೂ ಮ|| ರಾ|| ತಿರುಕಪ್ಪನವರ ಸಹೋದರರಾದ ಮ|| ರಾ|| ಚನ್ನಬಸವಪ್ಪನವರ ದ್ವಿತೀಯ ಪುತ್ರಿ ಚಿ|| ಸೌ|| ಶಾಂತಮ್ಮನೆಂಬ ವಧುವಿಗೂ ಶಿಕಾರಿಪುರದ ಸುರಗೀಹಳ್ಳಿ ವೀರಪ್ಪನವರ ದ್ವಿತೀಯಪುತ್ರ ಚಿ|| ರಾ|| ಶಂಕರಪ್ಪನೆಂಬ ವರನಿಗೂ ಪಾಣಿಗ್ರಹಣ ಮಹೋತ್ಸವವು ಪಂಚಬ್ರಹ್ಮಕಲಶಸ್ಥಾಪನಪೂರ್ವಕ ವಿಶೇಷ ವೈಭವದಿಂದ ನೆರವೇರಿಸಲ್ಪಟ್ಟಿತು. ಆ ಸಮಯದಲ್ಲಿ ನೆರೆದ ಸಹಸ್ರಾರು ಜನರ ಸಭೆಯಲ್ಲಿ ಈ ನವದಂಪತಿಗಳ ಶ್ರೇಯೋಭಿವೃದ್ಧಿಗಾಗಿ ಶ್ರೀ ರಂಭಾಪುರೀ ಜಗದ್ಗುರುಗಳವರು ದಯಪಾಲಿಸಿದ ಶುಭಾಶೀರ್ವಾದಪತ್ರವನ್ನು ಕೀರ್ತನಕೇಸರಿ ಕವಿಭೂಷಣೇತ್ಯಾದಿ ಬಿರುದಾಂಕಿತರಾದ ವೇ|| ಗುಬ್ಬೀ ಶಿವರುದ್ರಶಾಸ್ತ್ರಿಗಳವರು ಎಲ್ಲರಿಗೂ ತಿಳಿಯುವಂತೆ ಓದಿ ಹೇಳಿದರು. ತರುವಾಯ ಸಾಲಂಕೃತ ಕನ್ಯಾದಾನವನ್ನು ಮಾಡಿ ಪುಣ್ಯತರರುಗಳಾದ ಬಳಿಕ ವೀರಶೈವ ಜನಾಂಗದ ಆತ್ಮವಿಕಾಸಕ್ಕೆ ಬಹು ಮುಖ್ಯ ಹೇತುವಾದ ಪಂಚಾಚಾರ್ಯಪ್ರಭಾಪೋಷಣಕ್ಕಾಗಿ ನಾಲ್ಕು ರೂಪಾಯಿಗಳನ್ನು ಕನ್ಯಾದಾತೃಗಳು ಸಮರ್ಪಿಸಿದರು. ಇದೇದಿವಸ ಸಾಯಂಕಾಲ 6 ಘಂಟೆಯಿಂದ ವೇ|| ಶಾಸ್ತ್ರಿಗಳವರು 'ಸಾಧ್ವೀಶಿರೋರತ್ನ ಅನಸೂಯಾದೇವಿ' ಎಂಬ ಕೀರ್ತನೆಯನ್ನು ಸುಶ್ರಾವ್ಯವಾಗಿ ಅನುವಾದಮಾಡಿದರು. ಈ ಮಹೋತ್ಸವ ಸಮಾರಂಭಕ್ಕಾಗಿ ಶಿವಮೊಗ್ಗಾ, ಸಾಗರ ಶಿಕಾರಿಪುರ, ಹಿರೇಕೆರೂರು, ಬ್ಯಾಡಗಿ ತವ್ವಿನಕಟ್ಟೆ ಮಾಸೂರು, ರಟ್ಟೀಹಳ್ಳಿ, ಸಾಗನಂದ, ಆನಂದಪುರ, ಕುಂಸಿ, ಆಯನೂರು, ನೇಮತಿ, ಬೇಗತ್ತಿ ಮುಂತಾದ ಸ್ಥಳಪರಸ್ಥಳಗಳಿಂದ ಅನೇಕಜನ ಬಂಧುಮಿತ್ರರು ಆಗಮಿಸಿದ್ದರು. ಪ್ರತಿಯೊಂದು ಕಾರ್ಯವೂ ವಿಶದತೆಯಿಂದ ನಿರ್ವಿಘ್ನವಾಗಿ ಕೊನೆಗಂಡವು. ಶ್ರೀ ಜಗದ್ಗುರು ಪಂಚಾಚಾರ್ಯರು ಶ್ರೀಮಂತ ತಿರುಕಪ್ಪನವರಿಗೂ ಇವರ ಆಶೇಷ ಕುಟುಂಬವರ್ಗಕ್ಕೂ ಇತೋಽಪ್ಯತಿಶಯವಾದ ಸುಖ ಸಂಪತ್ತುಗಳನ್ನೀಯಲೆಂದು ಪ್ರಾರ್ಥಿಸುವ,

ಓರ್ವಸನಾತನ ಧರ್ಮಾಭಿಮಾನಿ

ಅಳಣಾವರ

ಶ್ರೀಮಜ್ಜಗದ್ಗುರು ದಾರುಕಾಚಾರ್ಯರ ಜಯಂತಿಯ ಪುಣ್ಯದಿನದಲ್ಲಿ ಧಾರವಾಡ ಡಿ|| ಅಳಣಾವರ ಗ್ರಾಮದಲ್ಲಿ ರಾ.ಮ ಚನ್ನಬಸವಯ್ಯ ಮಲ್ಲಯ್ಯ ಪಾಟೀಲ್ ಪ್ರೆಸಿಡೆಂಟ್ ಟಿ. ಎಲ್ ಬಿ. ಇವರು ತಮ್ಮ ಗೃಹದಲ್ಲಿ ತಮ್ಮ ಮಕ್ಕಳಿಗೆ ದೀಕ್ಷಾಸಂಸ್ಕಾರವನ್ನು ಷ|| ಬ್ರ|| ಪಟ್ಟಾಧ್ಯಕ್ಷ ಶ್ರೀ ಗುರುಲಿಂಗಶಿವಾಚಾರ್ಯರು "ಕಾವ್ಯತೀರ್ಥ" ಶಿಖರ ಮಠಾಧೀಶ ರಾಯಚೂರು ಇವರ ಆಚಾರ್ಯತ್ವದಲ್ಲಿ ದೀಕ್ಷಾಂಗಭೂತಹೋಮಹವನಾದಿ ಕಾರ್ಯಗಳೊಡನೆ ವಿಧ್ಯುಕ್ತವಾಗಿ ಬಹು ವೈಭವದಿಂದ ನೆರವೇರಿಸಿದರು

ಈ ಉತ್ಸವಕ್ಕಾಗಿ ಧಾರವಾಡ ಕರ್ನಾಟಕಕಾಲೇಜಿನ ವಿದ್ಯಾರ್ಥಿಗಳೂ ಸ್ಥಳಪರಸ್ಥಳದ ಗೌರ್ನಮೆಂಟ್ ಆಫೀಸರರೂ ದೇಸಾಯಿಯವರೂ ಆಗಮಿಸಿದ್ದರು. ಸಾಯಂಕಾಲ ನೆರೆದ ಸಭೆಯಲ್ಲಿ ಶ್ರೀ ಶಿವಾಚಾರ್ಯರು ಶ್ರೀ ರೇವಣಸಿದ್ಧರು ಸಿದ್ಧಸಂಪ್ರದಾಯದ ಪ್ರವರ್ತಕರು "ನಾಥ" "ರಸೇಶ್ವರ" ನಾಮಕಸಿದ್ಧರು ೧೧-೧೨ ಶತಮಾನದಲ್ಲಿ ಉತ್ತರದಿಂದ (ಕಾಶ್ಮೀರದಿಂದ) ಕರ್ನಾಟಕಕ್ಕೆಬಂದವರು. ಆದಿರೇವಣಸಿದ್ಧರಪೀಠಕ್ಕೆ ಬಂದ ರೇವಣಸಿದ್ಧರು ಆ ಕಾಲದಲ್ಲಿ ಪ್ರಸಿದ್ಧರಾಗಿದ್ದರು. ಮೂಲರೇಣುಕರನ್ನು ಈ ಕಾಲದಲ್ಲಿ ಸೇರಿಸುವದು ಶುದ್ಧ ಭ್ರಮೆಯು. ಮೂಲರೇಣುಕರು ಅಗಸ್ತ್ಯನ ಸಮಕಾಲೀನರು. ಅಗಸ್ತ್ಯನಿಗೆ "ಸುಸಿದ್ಧ" ಎಂದು ಉಪದೇಶಿಸಿದ ವಿಷಯವು ಕಲ್ಪಿತವಲ್ಲ. ವಿಮರ್ಶಾಂತದಲ್ಲಿ ಸಿದ್ಧವಾದ ಯಥಾರ್ಥ ಸತ್ಯ ಎಂದು ಮೊದಲಾಗಿ ಹೇಳುತ್ತ ಸಾಪು ಮಾಡಿದ ಸಿದ್ಧರಸಪೋಥೆಯಿಂದ ರೇವಣಸಿದ್ಧರು ಅಗಸ್ತ್ಯನಕಾಲದವರೆಂದೂ ಇವರು ಮಾಹೇಶ್ವರಸಿದ್ಧ ಅಥವಾ ಉಪಸಿದ್ಧರೆಂದೂ, ಅಂದಿನಿಂದಲೂ ಮಾಹೇಶ್ವರಸಂಪ್ರದಾಯವು ಧಾರಾವಾಹಿಯಾಗಿ ಬಂದಿದೆಯೆಂದೂ ಹೇಳಿ ಈ ಮತದ ಪೀಠಾಚಾರ್ಯ-ಉಪಾಚಾರ್ಯರ ದಂಡಕಮಂಡಲುಧಾರಣ ಮೊದಲಾದ ಬಾಹ್ಯಚಿಹ್ನಗಳಿಂದ ಹಿಡಿದು ತಾತ್ವಿಕಸಿದ್ಧಾಂತದವರೆಗೂ ವಿಮರ್ಶಿಸಿದರೆ ಇವರಲ್ಲಿ ಕೇವಲ ಬ್ರಾಹ್ಮಣಧರ್ಮವೇ ಮುಖ್ಯವಾಗಿರುವುದೆಂದೂ ಹೇಳಿದರು. ಆಮೇಲೆ ಜಗದಾಚಾರ್ಯರ ಜಯಘೋಷದೊಡನೆ ಪ್ರವಚನವು ಮುಗಿಯಿತು.

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಗುರುಮಹಿಮೆ

ಜೈನಾಪುರದಲ್ಲಿರುವ ರಂಗಪ್ಪ ತಮ್ಮಣ್ಣಪ್ಪ ಬಟಗುರ್ಕಿ ಇವರ ಚಿಕ್ಕಮಗುವಿಗೆ ಜ್ವರವು ಬಹಳ ಪೀಡಿಸಹತ್ತಿತ್ತು. ವೈದ್ಯರ ಕಡೆಯಿಂದ ಎಷ್ಟು ಔಷಧವನ್ನು ಕೊಡಿಸಿದರೂ ಗುಣವಾಗಲಿಲ್ಲ. ದಂಪತಿಗಳಿಗೆ ಬಹಳ ದುಃಖವಾಯಿತು. ಒಂದೇ ಮಗುವು ಅತ್ಯಂತ ಪ್ರೇಮವುಳ್ಳವರಾಗಿದ್ದರು. ಮುಂದೆ ಏನುಮಾಡಬೇಕೆಂಬ ಯೋಚನೆಯೇ ತೋರಲಿಲ್ಲ. ಸ್ವಲ್ಪ ದಿವಸಗಳಲ್ಲಿಯೇ ಇವರ ಗುರುಗಳಾದ ಶ್ರೀ|| ಷ|| ಬ್ರ|| ಗುರುಸ್ವಾಮಿ ಹಿರೇಮಠ ಇವರು ಆಕಸ್ಮಾತ್ತಾಗಿ ಸೊಲ್ಲಾಪುರದಿಂದ ಜೈನಾಪುರಕ್ಕೆ ದಯಮಾಡಿಸಲು ದಂಪತಿಗಳಿಬ್ಬರೂ ತಮಗಾದ ದುಃಖವನ್ನು ಅರಿಕೆಮಾಡಿಕೊಂಡರು. ಆಗ್ಗೆ ಶ್ರೀಗಳು ಮಮದಾಪುರದಲ್ಲಿರುವ ತಮ್ಮ ಗುರುಗಳ ಮೂಲಕರ್ತೃಗದ್ದುಗೆಗಳಿಗೆ ರುದ್ರಾಭಿಷೇಕವನ್ನು ಮಾಡಿ ಗುರುಗಳ ಹೆಸರಿನಿಂದ ಭಸ್ಮವನ್ನು ಧರಿಸೆಂದು ಆಜ್ಞೆಮಾಡಲು ಅದರಂತೆಯೇ ದಂಪತಿಗಳಿಬ್ಬರೂ ಅತ್ಯಂತ ಭಯಭಕ್ತಿಯುತರಾಗಿ ಮಮದಾಪುರಕ್ಕೆಹೋಗಿ ರುದ್ರಾಭಿಷೇಕಾದಿಗಳನ್ನುಮಾಡಿ ಗುರುವಿನ ಹೆಸರಿನಿಂದ ಭಸ್ಮವನ್ನು ಧರಿಸಲಾಗಿ ೨ ೩ ದಿವಸಗಳಲ್ಲಿಯೇ ಸಂಪೂರ್ಣ ಜ್ವರನಿಂತು ಮಗುವಿಗೆ ಸುಖವಾಯಿತು. ಈ ಸಂತೋಷಕ್ಕಾಗಿ ಶ್ರೀಗಳ ಆಜ್ಞೆಯಮೇರೆಗೆ ಪ್ರಭಾಪೋಷಣಕ್ಕಾಗಿ ೧ ರೂಪಾಯಿಯನ್ನು ಸಮರ್ಪಿಸಿದರು.

ಗಂಗಾಧರಸ್ವಾಮಿ ಮಾಂಗಿಮಠ,
ಸೊಲ್ಲಾಪುರ

ದೀಕ್ಷೋಪನಯನಸಂಸ್ಕಾರ

ರಾಯಚೂರಿನ ವೀರಶೈವ ಬೋರ್ಡಿಂಗಿಗಾಗಿ 25000 ರೂಪಾಯಿಗಳನ್ನು ದಾನಮಾಡಿರುವ ಶ್ರೀಮಂತ ಸಕ್ರಪ್ಪಗೌಡರ ಮನೆತನದ ಗುರುಗಳಾದ ವೇ|| ದಿಡ್ಡಿ ಬಸವಯ್ಯನವರಿಗೆ ದೀಕ್ಷೋಪನಯನ ಸಂಸ್ಕಾರವು ರಾಯಚೂರಿನ ಶಿಖರಮಠದಲ್ಲಿ ಅವರ ಗುರುಗಳಾದ ಶ್ರೀ|| ಷ|| ಬ್ರ|| ಗುರುಲಿಂಗಶಿವಾಚಾರ್ಯಸ್ವಾಮಿಗಳು ಕೆ ಟಿ. ಇವರ ಆಚಾರ್ಯತ್ವದಲ್ಲಿಯೂ ಶ್ರೀ ವೀರೇಶಶಾಸ್ತ್ರಿಗಳು ಬಿ ವಿದ್ವಾನ್ ಕನ್ನಡ ಪಂಡಿತರು ಶಂಕರಕಾಲೇಜ ಯಾದಗಿರಿ, ಇವರ ಪೌರೋಹಿತ್ಯದಲ್ಲಿಯೂ ವಿಧ್ಯುಕ್ತವಾಗಿ ನೆರವೇರಿತು ಈ ಸಮಾರಂಭಕ್ಕೆ ಶ್ರೀಮಂತ ಶೆಟ್ಟಿಸಿದ್ಧಪ್ಪನವರು ಶ್ರೀಮಂತ ಸಕ್ರಪ್ಪಗೌಡರೇ ಮೊದಲಾದ ಪ್ರಮುಖರು ಆಗಮಿಸಿದ್ದರು.

ಈ ಸಮಯದಲ್ಲಿ ಪ್ರಭಾಪೋಷಣೆಗಾಗಿ 1 ರೂಪಾಯಿಯನ್ನು ಹೆಸ್ಕೂರು ಅರಕೇರಿಮಠದ ದಿಡ್ಡಿ ಬಸವಯ್ಯನವರು ಸಮರ್ಪಿಸಿದರು

ಪ್ರತ್ಯಕ್ಷದರ್ಶಿ.

ಪ್ರಕಟಣೆ.

ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಛತ್ರಕ್ಕೆ ಸೇರಿದ ಉಚಿತ ವಿದ್ಯಾರ್ಥಿನಿಲಯಕ್ಕೆ ಮೈಸೂರು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಕಾಲೇಜು ತರಗತಿಗೆ ಸೇರಲು ಅರ್ಹರೆಂದು ಉತ್ತೀರ್ಣರಾಗಿರುವ ಮೈಸೂರು ಸೀಮೆಗೆ ಸೇರಿದ ವೀರಶೈವಮತದ ಬಡವಿದ್ಯಾರ್ಥಿಗಳನ್ನು ಧರ್ಮಾರ್ಥವಾಗಿ ೧೯೪೨-೪೩ ನೇ ಸಾಲಿಗೆ ಸೇರಿಸಿಕೊಳ್ಳಲಾಗುವದು. ಸೇರಲಿಚ್ಛಿಸುವ ವಿದ್ಯಾರ್ಥಿಗಳು ಅಂದರೆ ಗತಸಾಲಿನ ವಿದ್ಯಾರ್ಥಿಗಳೂ ಸಹ ಇದಕ್ಕಾಗಿ ಅಚ್ಚಾಗಿ ಗೊತ್ತುಮಾಡಲ್ಪಟ್ಟಿರುವ ಅಪ್ಲಿಕೇಷನ್ ಫಾರಂನಲ್ಲಿ ಸಂಸ್ಥೆಯ ಸೆಕ್ರೆಟರಿಯವರ ವಿಳಾಸಕ್ಕೆ ಅರ್ಜಿಗಳನ್ನು ೨೫-೫-೧೯೪೨ ನೇ ತಾರೀಖಿನೊಳಗಾಗಿ ಕಳುಹಿಸತಕ್ಕದ್ದು. ಅನಂತರ ಬರುವ ಅರ್ಜಿಗಳನ್ನು ಅಂಗೀಕರಿಸಲಾಗುವುದಿಲ್ಲ. ಅಚ್ಚುಮಾಡಲ್ಪಟ್ಟಿರುವ ಅಪ್ಲಿಕೇಷನ್ ಫಾರಂ ಒಂದಕ್ಕೆ ಎರಡಾಣೆಯಂತೆ ಪಾವತಿಮಾಡಿ ಛತ್ರದ ಮ್ಯಾನೇಜರವರ ಆಫೀಸಿನಲ್ಲಿ ಪಡೆಯಬಹುದು. ಪ್ರತಿ ದರಖಾಸ್ತಿನೊಂದಿಗೆ ಆರು ರೂಪಾಯಿಗಳನ್ನು ಅಂದರೆ ಅಪ್ಲಿಕೇಷನ್ ಫೀ (೧-೦-೦) ಮತ್ತು ಅಡ್ಮಿಷನ್ ಫೀ (೫-೦-೦) ರೂ ಕಳುಹಿಸತಕ್ಕದ್ದು. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಗೆ ಅಡ್ಮಿಷನ್ ಫೀ ೫ ರೂಗಳನ್ನು ಮಾತ್ರ ವಾಪ್ಸುಮಾಡಲಾಗುತ್ತೆ.

ಬೆಂಗಳೂರು ಡಿಸ್ಟ್ರಿಕ್ಟನವರಾಗಿರತಕ್ಕ ಅನುಕೂಲತೆಗಳಿಲ್ಲದಿರುವ ಹೈಸ್ಕೂಲ್ ತರಗತಿಗಳಲ್ಲಿ ಓದುವ ವಿದ್ಯಾರ್ಥಿಗಳೂ ಸಹ ಅರ್ಜಿಯನ್ನು ಹಾಕಿಕೊಳ್ಳಬಹುದು. ಅಲ್ಲದೆ ಸಂಸ್ಕೃತ ಮತ್ತು ವೇದಪಾಠಗಳನ್ನು ಕಲಿಯತಕ್ಕ ಬಡವಿದ್ಯಾರ್ಥಿಗಳಿಗೆ ಕೆಲವು ಸ್ಥಾನಗಳನ್ನು ಕೊಡಲಾಗುತ್ತೆ

ಅರ್ಜಿಹಾಕಿಕೊಳ್ಳುವ ಎಲ್ಲಾ ವಿದ್ಯಾರ್ಥಿಗಳೂ ಗೊತ್ತುಮಾಡಲ್ಪಡುವ ತಾರೀಖಿನಲ್ಲಿ ಪರೀಕ್ಷಾ ಬೋರ್ಡಿನ ಮುಂದೆ ಹಾಜರಾಗತಕ್ಕದ್ದು. ಬೋರ್ಡಿನವರಿಂದ ಚುನಾವಣೆಯಾದ ವಿದ್ಯಾರ್ಥಿಗಳನ್ನು ಉಚಿತ ವಿದ್ಯಾರ್ಥಿನಿಲಯಕ್ಕೆ ಸೇರಿಸಿಕೊಳ್ಳಲಾಗುತ್ತೆ. ಚುನಾವಣಾ ತಾರೀಖನ್ನು ಛತ್ರದ ನೋಟೀಸು ಬೋರ್ಡಿನಲ್ಲಿ ಪ್ರಚುರಪಡಿಸಲಾಗುತ್ತೆ.

ಬೆಂಗಳೂರು ಜಿ. ಕೆ. ರುದ್ರಾರಾಧ್ಯ,
ತಾ|| ೭-೫-೧೯೪೨ ಸೆಕ್ರೆಟರಿ.

ನೂತನ ಗ್ರಾಮದ ಶಂಕುಸ್ಥಾಪನೆ

ಮೈಸೂರು ರಾಜಧಾನಿಯಲ್ಲಿರುವ ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳವರು ತಾ|| 7—5—42 ನೆಯ ಗುರುವಾರ ಕೃಷ್ಣರಾಜ ನಗರ ತಾ|| ಬಡಗನ ಕೊಪ್ಪಲು ಗ್ರಾಮಕ್ಕೆ ಶಿಲ್ಪಸಿದ್ಧಾಂತರೀತ್ಯಾ ಶಂಕುಸ್ಥಾಪನೆಯನ್ನು ಮಾಡಿ ಆ ಗ್ರಾಮದ ಜನರನ್ನೆಲ್ಲಾ ಸಂತೋಷಪಡಿಸಿದರು. ಬಳಿಕ ಅಲ್ಲಿಯ ಜನರಿಗೆಲ್ಲಾ ಸದುಪದೇಶಮೂಲಕ ಆಶಿಷವನ್ನಿತ್ತು ಅದೇ ದಿನ ರಾಜಧಾನಿಗೆ ಪ್ರಯಾಣ ಮಾಡಿದರು

ಓರ್ವಗ್ರಾಮಸ್ಥ

ಶ್ರೀಮತಿ ಚಿಕ್ಕಬಸವಮ್ಮಯ್ಯನವರ ಛತ್ರ.

ಮೈಸೂರು ಸಿಟಿ ಚಾಮರಾಜರೋಡಿನಲ್ಲಿರುವ ಮೇಲ್ಕಂಡ ಧರ್ಮಸಂಸ್ಥೆಗೆ ಸೇರಿ ವಿದ್ಯಾಭ್ಯಾಸಮಾಡಲಿಚ್ಛಿಸುವ ವೀರಶೈವ ಬಡವಿದ್ಯಾರ್ಥಿಗಳು ಇದೇ ಮಾಹೆ ತಾರೀಖು 25 ರೊಳಗೆ ಈ ಕೆಳಗೆ ರುಜುಮಾಡಿರುವವರಿಗೆ ವಿಧಾಯಕವಾದ ಫಾರಂನಲ್ಲಿ ಅಪ್ಲಿಕೇಷನ್ ಕಳುಹಿಸಿಕೊಡತಕ್ಕದ್ದು. ಕಾಲಾತೀತವಾಗಿ ಬರುವ ಅಪ್ಲಿಕೇಷನ್‌ಗಳಿಗೆ ಗಮನಕೊಡುವದಿಲ್ಲ.

ಮೈಸೂರು ಎಂ ಪಿ. ಚನ್ನಪ್ಪ,
3—5—1942 ಕನ್ವೀನರ್.

ವಿಮಾನದಾಳಿಯ ಸೂಚನೆ

(ಎ. ಆರ್. ಪಿ. ಅಧಿಕಾರಿಗಳ ವಿವರಣೆ.)

(ಹಿಂದಿನಿಂದ ಮುಂದುವರೆದುದು).

೧೭. ವಿಮಾನದಾಳಿ ಎಚ್ಚರಿಕೆಯ ಏರ್ಪಾಡುಗಳು ಸಫಲವಾಗಬೇಕಾದರೆ ವಾರ್ಡನರುಗಳೇ ಮುಂತಾದವರಿಗೆ ಉಚಿತ ಸ್ವಾತಂತ್ರ್ಯವಿರುವಂತೆ ಬಿಟ್ಟುಕೊಡಬೇಕಾದುದು ಅವಶ್ಯಕ. ಇದರಲ್ಲಿ ಸ್ವಾವಲಂಬನವೂ ಕಾರ್ಯಪಟುತ್ವವೂ ಸಂಪೂರ್ಣವಾಗಿ ಪ್ರಕಟವಾಗಬೇಕಾದುದು ಅತಿ

[ಕೆಳಗಿನ ಪುಟವನ್ನು ನೋಡಿ.]

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮತಾಳಿ ವೈಶಾಖ ಶು|| ಪಂಚಮಿಗೆ ೧೪ ವರ್ಷಗಳು ತುಂಬಿ ೧೫ನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ.ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೩ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ.ಪಿ. ಮಾಡಿದರೆ ೩ ರೂ ೧೪ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಕಳಿಸು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ [illegible] ಮರೆಯದ ತಿಳುಹಿಸಬೇಕು. ನಂಬರು ತಿಳಿಸದಿದ್ದರೆ ತೊಂದರೆಯಾಗುವದು.

ವ್ಯಾ —

ಪಂಚಾಚಾರ್ಯಪ್ರಭಾ

೧೯೪೨ನೆಯ ಮೇ ತಾ|| ೧೧ನೆಯ ಸೋಮವಾರ

ವಿದೇಶಗಳಲ್ಲಿ ಶಿವಾಲಯಗಳ ವ್ಯಾಪಕತೆ.

ಇತಿಹಾಸಪ್ರಸಿದ್ಧವಾದ ಜಾವಾ ಮತ್ತು ಸುಮಾತ್ರಾ ದ್ವೀಪಗಳಲ್ಲಿ ಅನೇಕಾನೇಕ ಶಿವಲಿಂಗಮೂರ್ತಿಗಳು ವಿರಾಜಿಸುತ್ತಿರುವವು. ಪೂರ್ವದಲ್ಲಿ ಈ ದ್ವೀಪಗಳು 'ಯವದ್ವೀಪ ಮತ್ತು ಸುವರ್ಣದ್ವೀಪ' ಎಂಬ ಹೆಸರುಗಳಿಂದ ಪ್ರಸಿದ್ಧವಾಗಿದ್ದುವು. ಈ ದ್ವೀಪಗಳು ಈವರೆಗೆ ಡಚ್ಚರ ಸ್ವಾಧೀನದಲ್ಲಿದ್ದು ಈಗ ಜಪಾನರ ಸ್ವಾಧೀನವಾಗಿರುವವು. ಈ ದ್ವೀಪಗಳಲ್ಲಿ ಮಹಾಮಹಾಶಿವಾಲಯಗಳು ಶೋಭಿಸುತ್ತಿರುವುವು. ಹಾಲೆಂಡ್ ದೇಶದ ಲೈಡನ್ ಯೂನಿವರ್ಸಿಟಿಯ ಪ್ರೊಫೆಸರಾದ ಡಾ|| ಎನ್ ಜೆ ಕ್ರೋಮ್ ಎಂಬವರು ವಿಶೇಷ ಪ್ರಯತ್ನ ವಹಿಸಿ ಜಾವಾದ್ವೀಪದಲ್ಲಿರುವ ಸಕಲ ದೇವಾಲಯಗಳ ಫೋಟೋಗಳನ್ನು ತೆಗೆಯಿಸಿ ಆ ದೇವಾಲಯಗಳ ಪೂರ್ವವೃತ್ತಾಂತವನ್ನು Het oude Java en Zijn Kunst (ಜಾವದ್ವೀಪದ ಪ್ರಾಚೀನ ಶಿಲ್ಪಕಲಾ) ಎಂಬ ಹೆಸರಿನಿಂದ ಡಚ್‌ಭಾಷೆಯಲ್ಲಿ ದೊಡ್ಡ ಗ್ರಂಥರೂಪವಾಗಿ ಬರೆದು ಸಚಿತ್ರವಾಗಿ ಮುದ್ರಿಸಿ, ಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿರುವರು. ಆ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿರುವ ಶಿವಾಲಯಗಳ ಚಿತ್ರಗಳನ್ನು ನೋಡಿದರೆ, ಶಿವಭಕ್ತರ ಮನಸ್ಸು ಆನಂದಸಾಗರದಲ್ಲಿ ತೇಲಾಡುವಂತಿದೆ. ಶ್ರೀಜಗದ್ಗುರು ರೇಣುಕಾಚಾರ್ಯರಿಂದ ಶಿವತತ್ತ್ವೋಪದೇಶವನ್ನು ಪಡೆದ ಮಹಾಶಿವಭಕ್ತನೂ, ಅಸಾಧಾರಣಮಹಿಮಾಶಾಲಿಯೂ, ಜಗದ್ವಿಖ್ಯಾತನೂ ಆಗಿಹೋಗಿರುವ ಅಗಸ್ತ್ಯಮಹರ್ಷಿಯ ಉಪದೇಶಪ್ರಭಾವದಿಂದಲೇ ಆ ದೇಶದಲ್ಲಿ ಶಿವಭಕ್ತಿಯು ಹೆಚ್ಚುವುದಕ್ಕೆ ಕಾರಣವಾಯಿತೆಂದು ಅನೇಕಜನ ಇತಿಹಾಸಜ್ಞರು ಅಭಿಪ್ರಾಯಪಡುತ್ತಾರೆ. ಶೈವಚಿಹ್ನೆಗಳಿಂದ ರಾರಾಜಿಸುತ್ತಿರುವ ಅಗಸ್ತ್ಯಮಹರ್ಷಿಯ ಶಿಲಾವಿಗ್ರಹಗಳು ಜಾವಾ-ಸುಮಾತ್ರಾ ದ್ವೀಪಗಳಲ್ಲಿ ಈಗಲೂ ದೊರೆಯುತ್ತಿರುವುವು. ಅಗಸ್ತ್ಯಮಹರ್ಷಿಯು ಆ ದೇಶಗಳಲ್ಲಿ "ಶಿವಗುರು" ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಶೈವಶಿಖಾಮಣಿಯಾದ ಈ ಮಹರ್ಷಿಯ ವಿಗ್ರಹಗಳು ಆ ದೇಶಗಳಲ್ಲಿ ದೊರೆಯುತ್ತಿರುವುದೇ ಈ ವಿಷಯದಲ್ಲಿ ಬಲವಾದ ಸಾಕ್ಷಿಯಾಗಿದೆ. ಈ ಶಿವಗುರುವಿನ ಮೂರ್ತಿಗಳನ್ನು ಈಗಲೂ ಅಲ್ಲಿಯ ಜನರು ಪೂಜಿಸುತ್ತಿರುವರು. ಸದ್ಯಃ ಆ ದೇಶಗಳಲ್ಲಿ ವಿಶೇಷವಾಗಿ ಮಹಮ್ಮದೀಯರು ವಾಸಿಸುತ್ತಾರೆ. ಕ್ರಿ. ಶ. ೧೫ನೆಯ ಶತಮಾನದಲ್ಲಿ ಮುಸಲ್ಮಾನರು ಆ ದೇಶವನ್ನು ಪ್ರವೇಶಿಸಿ ಅಲ್ಲಿಯ ಶೈವರನ್ನು ಮುಸಲ್ಮಾನರನ್ನಾಗಿ ಮಾಡಿದ್ದಲ್ಲದೆ, ಅಲ್ಲಿದ್ದ ಅನೇಕಾನೇಕ ಶಿವಾಲಯಗಳನ್ನು ನಾಶಮಾಡಿ ಶಿವಮೂರ್ತಿಗಳನ್ನು ಒಡೆದು ಹಾಕಿರುತ್ತಾರೆ. ಮುಸಲ್ಮಾನರ ಕಾಲದಲ್ಲಿಯೇ ಅಲ್ಲಿಯ ಶೈವಸಂಪತ್ತು ನಿರ್ನಾಮವಾಯಿತೆಂದು ಹೇಳಬಹುದು. ಹಾಗಿದ್ದ ಅಲ್ಲಿಯ ಜನರು ಮುಸಲ್ಮಾನರಾಗಿದ್ದರೂ, ಈ ಹೊತ್ತಿನವರೆಗೂ ಅವರಲ್ಲಿ ಹಿಂದೂಸಂಸ್ಕೃತಿಯೇ ಸ್ಥಿರವಾಗಿ ಉಳಿದುಕೊಂಡು ಬಂದಿದೆ. ಅಲ್ಲಿ ವಾಸಿಸುವ ಮುಸಲ್ಮಾನರಲ್ಲರೂ ತಮಗೆ ಹಿಂದೂದೇವತೆಗಳ ಹೆಸರುಗಳನ್ನೇ ಇಟ್ಟುಕೊಳ್ಳುತ್ತಿರುವರಲ್ಲದೆ, ಶಿವ ಪಾರ್ವತಿ ನಂದಿ ಶಿವಗುರು ಇತ್ಯಾದಿ ಮೂರ್ತಿಗಳನ್ನು ಅಸಾಧಾರಣಭಕ್ತಿಯಿಂದ ಪೂಜಿಸುತ್ತಿರುವರು.

ಜಾವಾದ್ವೀಪದ ಮಧ್ಯಭಾಗದಲ್ಲಿರುವ "ಪ್ರಾಂಬಣಂ" ಎಂಬ ಪಟ್ಟಣದ ಸಮೀಪದಲ್ಲಿ 'ಲಾರಾ ಜೋಂಗ್ರಾಂಗ್' ಎಂಬ ಹೆಸರಿನ ಶಿವದೇವಾಲಯವಿರುವುದು. ಈ ದೇವಾಲಯವು ಆ ದೇಶದಲ್ಲಿ ಒಳ್ಳೆ ಪ್ರಸಿದ್ಧಿಯನ್ನು ಪಡೆದಿದೆ. ಈ ದೇವಾಲಯದಲ್ಲಿ ಶಿವನ ಮೂರ್ತಿಯು ಮನುಷ್ಯಾಕಾರವಾಗಿದ್ದು ಎದ್ದುನಿಂತಂತೆ ಸ್ಥಾಪಿಸಲ್ಪಟ್ಟಿರುವುದು. ಈ ಮೂರ್ತಿಯು ೧೦ ಅಡಿ ಎತ್ತರವಾಗಿರುವುದು. ಈ ಶಿವಮೂರ್ತಿಯ ಎದುರುಭಾಗದಲ್ಲಿರುವ ಒಂದು ಮಂಟಪದಲ್ಲಿ ನಂದೀಶ್ವರನ ಮೂರ್ತಿಯು ಸ್ಥಾಪಿಸಲ್ಪಟ್ಟಿರುವುದಲ್ಲದೆ, ಬಲಭಾಗದ ಮಂಟಪದಲ್ಲಿ ಬ್ರಹ್ಮನ ಮೂರ್ತಿಯೂ, ಎಡಭಾಗದ ಮಂಟಪದಲ್ಲಿ ವಿಷ್ಣುವಿನ ಮೂರ್ತಿಯೂ ಸ್ಥಾಪಿಸಲ್ಪಟ್ಟಿರುವುವು. ಶಿವನಮೂರ್ತಿಯು ಸದ್ಯಃ ಭಿನ್ನವಾಗಿದ್ದರೂ ಡಚ್ ಸರಕಾರದವರು ಭಿನ್ನವಾಗಿರುವ ಅವಯವಗಳನ್ನೆಲ್ಲ ಚೆನ್ನಾಗಿ ಸೇರಿಸಿ ಮೂರ್ತಿಯನ್ನು ಇದ್ದಕ್ಕಿದ್ದ ಹಾಗೆ ಮಾಡಿದ್ದಾರೆ. ಈ ದೇವಸ್ಥಾನದ ದಕ್ಷಿಣಭಾಗದಲ್ಲಿ ಶಿವಗುರುವಿನ ವಿಗ್ರಹವು ನಿಂತುಕೊಂಡಂತೆ ಸ್ಥಾಪಿಸಲ್ಪಟ್ಟಿದ್ದು, ಜಪಮಾಲಿಕೆಯಿಂದ ಯುಕ್ತವಾದ ಹಸ್ತವುಳ್ಳದಾಗಿದೆ. ಅಲ್ಲದೆ ಈ ದೇವಾಲಯದ ಒಂದು ಭಾಗದಲ್ಲಿ ವಿಘ್ನೇಶ್ವರನ ಮೂರ್ತಿಯೂ, ಮತ್ತೊಂದು ಭಾಗದಲ್ಲಿ ದುರ್ಗಾದೇವಿಯ ಮೂರ್ತಿಯೂ ಸ್ಥಾಪಿಸಲ್ಪಟ್ಟಿರುವುವು. ಈ ದೇವಾಲಯವು ಎರಡು ಅಂತಸ್ತುಗಳುಳ್ಳದಾಗಿದ್ದು, ೨ನೆಯ ಅಂತಸ್ತಿನಲ್ಲಿ ಶಿವನ ಮೂರ್ತಿಯು ಸ್ಥಾಪಿಸಲ್ಪಟ್ಟಿದೆ. ಈ ಶಿವದೇವಾಲಯಕ್ಕೆ ಎರಡು ಪ್ರಾಕಾರಗಳಿರುವವು. ಈ ದೇವಾಲಯವು ಸುಮಾರು ಕ್ರಿ. ಶ. ೯೦೦ರಲ್ಲಿ ಕಟ್ಟಲ್ಪಟ್ಟಿರಬಹುದೆಂದು ಇತಿಹಾಸಜ್ಞರು ನಿಶ್ಚಯಿಸಿದ್ದಾರೆ. ಜಾವಾದ್ವೀಪದ 'ಪನತರನ್' ಎಂಬ ಗ್ರಾಮದಲ್ಲಿಯೂ ಒಂದು ದೊಡ್ಡ ಶಿವಾಲಯವಿರುವುದು. ಇದರಂತೆಯೇ ಆ ದೇಶದ ಅನೇಕ ಭಾಗಗಳಲ್ಲಿ ಶಿವಾಲಯಗಳು ಶೋಭಿಸುತ್ತಿದ್ದರೂ ಅತ್ಯಂತ ಜೀರ್ಣಾವಸ್ಥೆಯಲ್ಲಿರುವುವು. ಇದೆಲ್ಲ ಕಾಲಮಹಿಮೆಯೆಂದೇ ಹೇಳಬೇಕಾಗಿದೆ. ಅಸ್ತು!

ಈಗ್ಗೆ ಕೆಲವು ವಾರಗಳಿಂದ ಪ್ರತಿಪಾದಿಸಿದ ಅನ್ನಾಂ, ಕಾಂಬೋಡಿಯಾ, ಜಾವಾ ದೇಶಗಳಲ್ಲಿ ಶಿವಭಕ್ತಿಯು ಪೂರ್ವಕಾಲದಲ್ಲಿ ಎಷ್ಟುಮಟ್ಟಿಗೆ ವ್ಯಾಪ್ತವಾಗಿದ್ದಿತೆಂಬ ವಿಷಯವನ್ನು ತಿಳಿದು ವಾಚಕರು ಸಂತುಷ್ಟಚಿತ್ತರಾಗಿರಬಹುದು. ಆದರೆ ಇಂತಹ ಶಿವಭಕ್ತಿಮಯ ದೇಶಗಳು ಸದ್ಯಃ ಪರದೇಶೀಯರ ಕೈಸೇರಿ ನಾಸ್ತಿಕಮಯವಾಗಿರುವುದನ್ನು ನೋಡಿ ವ್ಯಸನಪಡಬೇಕಾಗಿದೆ. ಒಂದು ಕಾಲದಲ್ಲಿ ಇಡೀ ಭೂಮಂಡಲವನ್ನೇ ವ್ಯಾಪಿಸಿ ಅಸಾಧಾರಣ ವೈಭವದಿಂದ ಬೆಳಗುತ್ತಿದ್ದ ಶಿವಭಕ್ತಿಯು, ಈ ಕಾಲದಲ್ಲಿ ಎಲ್ಲಿಯೋ ಮಿನುಗುಟ್ಟುತ್ತಿರುವುದನ್ನು ನೋಡಿದರೆ ಕಾಲಚಕ್ರಮಹಿಮೆಯು ವಿಲಕ್ಷಣವಾದುದೆಂದೇ ಹೇಳಕಾಗಿದೆ. ಇರಲಿ, ಶ್ರೀಜಗದೀಶ್ವರನ ಅನುಗ್ರಹದಿಂದ ಪೂರ್ವಕಾಲದಲ್ಲಿ ಸರ್ವತ್ರ ವ್ಯಾಪಿಸಿದ್ದ ಶಿವಭಕ್ತಿಯು, ಇನ್ನುಮುಂದಾದರೂ ಸರ್ವತೋಮುಖವಾಗಿ ಪ್ರಪಂಚದಲ್ಲೆಲ್ಲ ವ್ಯಾಪಿಸುವಂತಾಗಲೆಂದು ಆ ಜಗನ್ನಿಯಾಮಕನನ್ನು ಭಕ್ತಿಭಾವದಿಂದ ಭಜಿಸೋಣ !

ಯುದ್ಧವಾರ್ತೆ.

ಬ್ರಿಟಿಷ್ ಸೈನ್ಯಗಳು ಹಿಮ್ಮೆಟ್ಟುತ್ತವೆ

ಬರ್ಮಾದ ಮುಖ್ಯಪಟ್ಟಣವಾದ ಮಾಂಡಲೆ ನಗರವನ್ನು ಜಪಾನರು ಆಕ್ರಮಿಸಿದಮೇಲೆ ಬರ್ಮಾದ ಮಿಲಿಟರಿ ಪರಿಸ್ಥಿತಿಯು ಅತ್ಯುಗ್ರರೂಪವನ್ನು ತಾಳಿರುವದಾಗಿಯೂ ಆ ರಂಗದಲ್ಲಿ ಹೋರಾಡುತ್ತಿದ್ದ ಬ್ರಿಟಿಷ್ ಮತ್ತು ಭಾರತೀಯ ಯೋಧರು ಚಿಂದ್‌ವಿನ್ ಕ್ಷೇತ್ರದ ಮೂಲಕ ಭಾರತಕ್ಕೆ ಹಿಮ್ಮೆಟ್ಟಿಹೋಗುವ ಸಂಭವವಿದೆಯೆಂದೂ ಹೇಳಲಾಗಿದೆ. ಜ|| ಅಲೆಗ್ಝಾಂಡರ್‌ರವರ ಚೀಣೀ ಸೈನ್ಯಗಳು ಬರ್ಮಾದಲ್ಲಿ ನಾಲ್ಕು ತಿಂಗಳಿಂದ ಉಗ್ರಕದನವನ್ನು ನಡೆಸುತ್ತ 500 ಮೈಲಿಗಳಿಗಿಂತ ಹೆಚ್ಚು ದೂರ ಹಿಂದಕ್ಕೆ ಸರಿದಿವೆ. ಇಷ್ಟರಲ್ಲೇ ಅವು ಸಂಪೂರ್ಣ ಬರ್ಮಾವನ್ನು ಬಿಡಬೇಕಾಗಬಹುದು. ಆದರೂ ಚೀಣರು ಬರ್ಮಾಯುದ್ಧವನ್ನು ನಿಲ್ಲಿಸುವುದಿಲ್ಲೆಂದು ಹೇಳಲಾಗಿದೆ.

ಮಡಗಾಸ್ಕರ್ ಆಕ್ರಮಣ

ಆಫ್ರಿಕಾಖಂಡಕ್ಕೆ ದಕ್ಷಿಣದಲ್ಲಿ ಹಡಗು ಸಂಚಾರ ಮಾರ್ಗದಲ್ಲಿರುವ ವಿಚಿ ಸರ್ಕಾರಕ್ಕೆ ಸೇರಿದ್ದ ಫ್ರೆಂಚರ ದ್ವೀಪವಾದ ಮಡಗಾಸ್ಕರ್ ದ್ವೀಪವು ಜಪಾನರ ಕೈಗೆ ಬೀಳುವದೋ ಎಂಬ ಯೋಚನೆಯಿಂದ ಬ್ರಿಟನ್ನು ತನ್ನ ಹಡಗು ಪಡೆಯನ್ನು ೬ನೆಯ ತಾರೀಖಿನವರೆಗೆ ಕಳಿಸಿತು. ಬ್ರಿಟಿಷರು ಅಲ್ಲಿಗೆ ಬಂದಿಳಿದಲಾಗಾಯಿತು ಫ್ರೆಂಚ್ ಯೋಧರು ಉಗ್ರವಾಗಿ ಪ್ರತಿಭಟಿಸುತ್ತಿದ್ದಾರೆ. ಈ ದ್ವೀಪದ ಆಕ್ರಮಣಕ್ಕಾಗಿ ಬ್ರಿಟಿಷರು ಶಸ್ತ್ರಬಂಡಿ ಪಡೆಗಳನ್ನೂ ಪ್ಯಾರಾಚೂಟ್ ಸೈನಿಕರನ್ನೂ ಉಪಯೋಗಿಸಿದ್ದಾರೆ. ಈ ದ್ವೀಪದ ಮುಖ್ಯ ನೌಕಾಮೂಲವಾದ ಡೀಗೋಸಾರೆಜ್ ಬ್ರಿಟಿಷರ ಕೈಸೇರಿತು. ಅಲ್ಲಿನ ಫ್ರೆಂಚ್ ಯೋಧರ ಪ್ರತಿಭಟನೆ ನಿಂತಿತು. ಈ ಬಂದರಿನ ಬಳಿ ಇರುವ ಮುಖ್ಯ ನಗರವಾದ ಅಂಟ್ಸಿರೇನ್ ಎಂಬುದು ಕಳೆದ ಬುಧವಾರ ರಾತ್ರಿ ಬ್ರಿಟಿಷರಿಂದ ಆಕ್ರಮಿಸಲ್ಪಟ್ಟಿತು. ಈ ಆಕ್ರಮಣವನ್ನು ಫ್ರಾನ್ಸಿನ ಮುಕ್ತಿಗಾಗಿ ಕೈಗೊಂಡ ಪೂರ್ವಭಾವಿ ಕಾರ್ಯಕ್ರಮವೆಂದು ಫ್ರೆಂಚರು ಭಾವಿಸಬೇಕೆಂದು ಮಹಾಪ್ರಧಾನ ಶ್ರೀ ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು.

ಜಪಾನಿನ ಮುಂದಿನ ಕಾರ್ಯಕ್ರಮವೇನು ?

ಜಪಾನು ಬರ್ಮಾದಲ್ಲಿ ಭಾರಿಯುದ್ಧ ನಡೆಸುತ್ತಿರುವದಲ್ಲದೆ ಬೇರೆ ಇನ್ನಾವ ಕಾರ್ಯವನ್ನೂ ಕೈಗೊಂಡಿಲ್ಲ. ಜಪಾನಿನ ಬಲವೆಲ್ಲವೂ ಅದರ ನೌಕಾಪಡೆಯಲ್ಲಿದೆ. ಆದ್ದರಿಂದ ಅದು ಆಸ್ಟ್ರೇಲಿಯಾ ಅಥವಾ ಭಾರತದಮೇಲೆ ಬೀಳುವದಕ್ಕಿಂತ ಸಿಲೋನಿನಂತಹ ಆಯಕಟ್ಟಿನ ದ್ವೀಪಗಳನ್ನು ಆಕ್ರಮಿಸಲು ಕುತೂಹಲವುಳ್ಳದ್ದಾಗಿರಬಹುದು. ಆದರೆ ಕಾಲವು ಕಳೆದಂತೆಲ್ಲ ಸಿಲೋನ್ ಆಕ್ರಮಣವು ಕಷ್ಟತರವೆಂದು ತೋರುತ್ತಿರುತ್ತದೆ. ತನಗೆ ಜಯವು ನಿಶ್ಚಯವೆಂದು ಜಪಾನಿಗೆ ಮನದಟ್ಟಾದ ಹೊರತು ಅದು ಆಕ್ರಮಣಕಾರ್ಯಕ್ಕೆ ಕೈಹಾಕಲಾರದು. ಜಪಾನು ಜಯಿಸಬೇಕೆಂದು ಆಲೋಚಿಸಿಕೊಂಡಿದ್ದ ಭಾಗಗಳೆಲ್ಲವೂ ಈಗ ಅದರ ವಶವಾಗಿವೆ. ಅವುಗಳಲ್ಲಿ ಜಪಾನು ತನ್ನ ಸ್ಥಾನವನ್ನು ಭದ್ರಮಾಡಿಕೊಳ್ಳಬೇಕಾದರೆ ಬಹುಕಾಲಬೇಕು. ತನ್ನ ಸಾಮ್ರಾಜ್ಯವು ನೆಮ್ಮದಿಯಿಂದಿರಬೇಕಾದರೆ ರಷ್ಯದ ಕಡೆ ಗಡಿಯು ಭದ್ರವಾಗಿರಬೇಕು. ವ್ಲಾಡಿವೋಸ್ಟಾಕ್ ಪ್ರಾಂತ್ಯವು ರಷ್ಯದ ಕೈಯಲ್ಲಿರುವವರೆಗೆ ಆ ಕಡೆಯಿಂದ ಜಪಾನಿಗೆ ಭೀತಿ ಇದ್ದೇ ಇದೆ. ಜಪಾನು ತನ್ನ ಮಿಲಿಟರಿ ಚಟುವಟಿಕೆಗಳನ್ನು ಇನ್ನು ಮುಂದುವರಿಸದೆ ನಿಲ್ಲಿಸಲಿ ಅಥವಾ ಆಕ್ರಮಣಕಾರ್ಯವನ್ನು ಮುಂದುವರಿಸಲಿ, ಬಂಗಾಳಾಕೊಲ್ಲಿ, ಹಿಂದೂಸಾಗರ, ಚೀಣಾಸಮುದ್ರ, ಪೆಸಿಫಿಕ್‌ಸಾಗರ ಇಲ್ಲೆಲ್ಲ ಜಪಾನಿನ ಆಕ್ರಮಣವನ್ನು ತಡೆದು ನಿಲ್ಲಿಸಲು ಸಂಯುಕ್ತಜನಾಂಗಗಳು ಸಿದ್ಧವಾಗಿರಬೇಕೆಂದು ಅಭಿಪ್ರಾಯಪಡಲಾಗಿದೆ.

ಜಪಾನರ ದುರಾಶೆ

(ಬಿ ಶ್ರೀಕಂಠಯ್ಯ)

ಜಪಾನು ಆಂಗ್ಲ ಸಾಮ್ರಾಜ್ಯದ ದೂರ ಪ್ರದೇಶವಾದ ಮಲಯಾಪರ್ಯಾಯದ್ವೀಪವೇ ಮುಂತಾದ ಸ್ಥಳಗಳನ್ನು ಆಕ್ರಮಿಸಿರುವುದು ಸರಿಯಷ್ಟೆ! ಅದು ಈಗ ಕಂಠಪೂರ್ತಿಯಾಗಿ ಅನೇಕ ದೇಶಗಳನ್ನು ನುಂಗಿರುವುದು ಆದರೆ ಇದನ್ನು ಜೀರ್ಣಿಸಿಕೊಳ್ಳುವುದು ಅದಕ್ಕೆ ಅಸಾಧ್ಯವಾಗುವುದು. ಇಂದಿಲ್ಲ ನಾಳೆಯಾದರೂ ವಾಂತಿಯಾಗಲಿಕ್ಕೇಬೇಕು ಜಪಾನಿಗೆ ಈಗಾಗಲೇ ಅಮೇರಿಕನ್ನರಿಂದ ಬಿಸಿ ತಾಕಹತ್ತಿದೆ ಜಪಾನರ ಚಳವಳಿಯ ಪಟ್ಟಿಯಿದು —

18 10 41 ಜಪಾನರ ಸೇನಾನಿ ಟೋಜೊ ಮಂತ್ರಿತ್ವ ವಹಿಸಿದನು

28 11 41 ಅಮೇರಿಕದೊಡನೆ ನಡೆಸುತ್ತಿದ್ದ ಸಂಧಾನ ಮುರಿದು ಬಿತ್ತು

30 11 41 ಜಪಾನು ಥಾಯ್‌ಲ್ಯಾಂಡನ್ನು (ಸಯಾಂ) ಮುತ್ತಿತು

7 12 41 ಜಪಾನು ಆಂಗ್ಲರೊಡನೆ ಹಾಗೂ ಅಮೇರಿಕನ್ನರೊಡನೆ ಒಮ್ಮೆಲೇ ಯುದ್ಧ ಹೂಡಿತು

8 12 41 ಜಪಾನಿನ ಸೈನ್ಯ ಸಂಚರಣೆಗೆ ಸಯಾಂ ಅವಕಾಶ ಕೊಟ್ಟಿತು

9 12 41 ಉತ್ತರ ಮಲಯದಲ್ಲಿ ಯುದ್ಧ

10 12 41 ಫಿಲಿಪೈನ್ ದ್ವೀಪದ ಮುತ್ತಿಗೆ, "ಪ್ರಿನ್ಸ್ ಆಫ್ ವೇಲ್ಸ್" ಎಂಬ ಭಾರಿ ಯುದ್ಧದ ಹಡಗನ್ನು ಜಪಾನರು ಸಿಂಗಪುರದ ಬಳಿ ಮುಳುಗಿಸಿದರು

13 12 41 ಫಿಲಿಪೈನ್‌ಗೆ ಸೇರಿದ ಲೂಸಾನ್ ದ್ವೀಪದಲ್ಲಿ ಜಪಾನರ ಸೈನ್ಯ ಇಳಿದುಕೊಂಡಿತು

14 12 41 ಜಪಾನ್ ಸೈನ್ಯವು ಬರ್ಮಾಕ್ಕೆ ನುಗ್ಗಿತು

16 12 41 ಮಲಯಾದಲ್ಲಿ ಯುದ್ಧ

19 12 41 ಹಾಂಕಾಂಗಿಗೆ ಜಪಾನರ ಪ್ರವೇಶ

23-12 41 ರಂಗೂನಿನ ಮೇಲೆ ಗುಂಡು ಸುರಿಸಿದರು

25 12 41 ಹಾಂಕಾಂಗ್ ಶತ್ರುವಶವಾಯಿತು

28 12 41 ಫಿಲಿಪೈನಿನಲ್ಲಿ ಯುದ್ಧ ಪ್ರಾರಂಭ

1 1 42 ಮನಿಲಾ ನಗರ ಶತ್ರುವಶವಾಯಿತು

4 1 42 ಆಸ್ಟ್ರೇಲಿಯದ ವಿಮಾನ ನಿಲ್ದಾಣದಮೇಲೆ ಜಪಾನು ಗುಂಡು ಹಾರಿಸಿತು

11 1 42 ಜಪಾನು ಪೂರ್ವದಿಗ್ದ್ವೀಪದ ಹಾಲೆಂಡಿನ ಸ್ವಾಸ್ಥ್ಯಗಳನ್ನು ಮುತ್ತಿತು

13 1 42 ಶಾರವಾಕ್ ಜಪಾನರ ವಶವಾಯಿತು

22 1 42 ನ್ಯೂಗಿನಿಯ ಮುತ್ತಿಗೆ ಬಂಗಾಳ ಕೊಲ್ಲಿಯಲ್ಲಿ ಜಪಾನರ ಹಾವಳಿ.

23 1 42 ಜಪಾನು ಸಾಲೋಮನ್ ದ್ವೀಪವನ್ನು ಕಿತ್ತುಕೊಂಡಿತು

30 1 42 ರಂಗೂನಿನ ಬಳಿ ಆಕಾಶಯುದ್ಧ

31 1 42 ಮಲಯಾವನ್ನು ಬಿಟ್ಟು ಸಿಂಗಪುರ ದ್ವೀಪಕ್ಕೆ ಆಂಗ್ಲ ಸೈನ್ಯ ಬಂದಿತು.

8 2 42 ಸಿಂಗಪುರ ದ್ವೀಪಕ್ಕೆ ಶತ್ರುಗಳ ಪ್ರವೇಶ

14 2 42 ಸುಮಾತ್ರಾ ದ್ವೀಪದ ಮುತ್ತಿಗೆ.

15 2 42 ಸಿಂಗಪುರದ ಪತನ

16 2 42 ಸಿಂಗಪುರ ಬಂದರನ್ನು ಶತ್ರುಗಳು ಆಕ್ರಮಿಸಿದರು

19 2 42 ಆಸ್ಟ್ರೇಲಿಯದ ಉತ್ತರದ ಡಾರ್ವಿನ್ ಬಂದರಿನ ಮೇಲೆ ಗುಂಡು ಸುರಿಸಿದರು

21 2 42 ಜೆಸ್ಸಿನ್ ಮತ್ತು ಮಾಂಡಲೆಗಳ ಮೇಲೆ ಗುಂಡುಗಳ ವೃಷ್ಟಿ

22 2 42 ಪೆಗು ಪತನ

23 2 42 ಜಾವಾ ವಿಮಾನ ನಿಲ್ದಾಣದ ಆಕ್ರಮಣ

26 2 42 ರಂಗೂನಿನ ಮೇಲೆ ಆಕಾಶಯುದ್ಧ

27-2-42 ಅಂಡಮಾನ್ ದ್ವೀಪದ ಪೋರ್ಟ್‌ಬ್ಲೇರ್ ಮೇಲೆ ಗುಂಡು ಸುರಿಸಿದರು

1 3 42 ಶತ್ರುಗಳು ಮೂರು ಕಡೆಯಿಂದ ಜಾವಾ ಪ್ರವೇಶಮಾಡಿದರು

6 3 42 ಶತ್ರುಗಳು ಬಟೇವಿಯವನ್ನು ಆಕ್ರಮಿಸಿದರು.

9 3 42 ಮಿತ್ರ ಸೈನ್ಯವು ರಂಗೂನನ್ನು ತ್ಯಜಿಸಿತು.

10 3 42 ಶತ್ರುಗಳು ನ್ಯೂಗಿನಿಯದಲ್ಲಿ ಇಳಿದುಕೊಂಡರು

12 3 42 ರಂಗೂನು ನಗರವು ಭಸ್ಮವಾಯಿತು

23-3-42 ಅಂಡಮಾನ್ ದ್ವೀಪವನ್ನು ಶತ್ರುಗಳು ಆಕ್ರಮಿಸಿದರು

5-4 42 ಶತ್ರು ವಿಮಾನಗಳು ಕೊಲೊಂಬೊ ಮೇಲೆ ಧಾಳಿ ನಡೆಸಿದವು

6-4 42 ವಿಶಾಖಪಟ್ಟಣ ಕಾಕಿನಾಡ ಬಂದರುಗಳ ಮೇಲೆ ಜಪಾನರ ದಾಳಿ

9 4-42 ಸಿಂಹಳದ ಟ್ರಿಂಕಾಮಲಿ ಬಂದರಿನ ಮೇಲೆ ದಾಳಿ ಬಟೇವಿಯಾ ಆಕ್ರಮಣ

17 4 42 ಸಿಲಿಪೈನಿನ ಪನೆಯ ಆಕ್ರಮಣ

21 4 42 ಜಪಾನಿನ ರಾಜಧಾನಿ ಟೋಕಿಯೋ ಮತ್ತು ಯಾಕೊಹಾಮಗಳ ಮೇಲೆ ಅಮೇರಿಕನ್ನರು ಬಾಂಬಿನ ಮಳೆಗರೆದರು

5 5 42 ಮಡಗಾಸ್ಕರ್ ದ್ವೀಪವು ಶತ್ರುವಶವಾಗದಂತೆ ಮಿತ್ರಸೈನ್ಯವು ಆಕ್ರಮಿಸಿತು

6 5 42 ಮನಿಲಾ ಬಳಿಯ ಕಾರಿಗಿಡಾರ್, ಹಗ್ಸ್, ಡ್ರಂ, ಮುಂತಾದ ಪ್ರದೇಶಗಳು ಶತ್ರುವಶವಾದವು ಆಂಗ್ಲಸೈನ್ಯವು ಬರ್ಮಾವನ್ನು ತ್ಯಜಿಸಿತು

9 5 42 ಜಪಾನರ 18 ಹಡಗುಗಳು ಅಮೇರಿಕನ್ನರಿಂದ ಮುಳುಗಿಸಲ್ಪಟ್ಟವು

ಇಂಗ್ಲೀಷರಿಂದ ಮಲಯ ಬರ್ಮಗಳನ್ನೂ, ಅಮೇರಿಕರಿಂದ ಫಿಲಿಪೈನನ್ನೂ, ಡಚ್ಚರಿಂದ ಬೋರ್ನಿಯೊ ಜಾವಾ ಸುಮಾತ್ರಾದಿಗಳನ್ನೂ—(7 12 1941 ರಿಂದ) ಐದು ತಿಂಗಳುಗಳಲ್ಲಿ ಕಿತ್ತುಕೊಂಡಿರುವರು ದುರಾಶಾಪಾಶಬದ್ಧರಾಗಿರುವ ಜಪಾನರ ಒಂದು ಕಣ್ಣು ಇಂಡಿಯದ ಮೇಲೆ, ಮತ್ತೊಂದು ಕಣ್ಣು ಆಸ್ಟ್ರೇಲಿಯದ ಮೇಲೆ ಅವೆ "ಅತ್ಯಾಶೆ ಗತಿಗೇಡಿಸಿತು" ಎಂಬಂತೆ ಜಪಾನರ ಅವಸ್ಥೆಯೂ ಆಗುವುದರಲ್ಲಿ ಸಂಶಯವಿಲ್ಲ

ಯೂರೋಪಿಯನ್ನನ ಮೋಸ ಬಯಲಾಯಿತು

ಬೊಂಬಾಯಿ ಪೋಲೀಸಿನವರು ಹಡಗಿನ ಬಡಗಿಯಾದ ಯೂರೋಪಿಯನ್ನನೊಬ್ಬನನ್ನು ಮೊನ್ನೆ ದಸ್ತಗಿರಿ ಮಾಡಿ ಅವನ ಕೊಠಡಿಯನ್ನು ಶೋಧಿಸಿದಾಗ ಅವರಿಗೆ ೫೦೦ ಪತ್ತೇದಾರಿ ಕಾದಂಬರಿಗಳು ಸಿಕ್ಕವು ಈ ಕಾದಂಬರಿಗಳನ್ನು ಓದಿ ತಾನು ಕಲಿತ ವಿದ್ಯೆಯನ್ನು ಅವನು ಕಾರ್ಯರೂಪಕ್ಕೆ ತಂದುದೇ ಅವನ ದಸ್ತಗಿರಿಗೆ ಕಾರಣವಾಯಿತು ಬೊಂಬಾಯಿಯ ಒಂದು ಹೋಟಲಿನಲ್ಲಿ ಕಳ್ಳತನಗಳು ಪದೇ ಪದೇ ಆಗುತ್ತಲೇ ಇದ್ದುವು ಒಂದು ದಿವಸ ಆ ಹೋಟಲಿನಲ್ಲಿ ವಾಸವಾಗಿದ್ದ ಒಬ್ಬ ಯೂರೋಪಿಯನ್ನಳ ಅಮೂಲ್ಯವಾದ ಒಂದು ದಸ್ತಾವೇಜು ಕಳುವಾಯಿತು ಈ ವಿಷಯವನ್ನು ಆಕೆಯು ಪೋಲೀಸಿನವರಿಗೆ ತಿಳಿಸಿದಳು. ಎರಡು ದಿನಗಳ ನಂತರ ಈ ಕಳ್ಳನು ಆ ಹೆಂಗಸಿಗೆ ಒಂದು ಕಾಗದ ಬರೆದು ತನಗೆ ೫೦೦ ರೂ ಗಳನ್ನು ಕೊಡುವುದಾಗಿ ಪೇಪರಿನಲ್ಲಿ ಪ್ರಕಟಿಸಿದರೆ ಆ ದಸ್ತಾವೇಜನ್ನು ತಿರುಗಿ ಕೊಡುವೆನೆಂದು ತಿಳಿಸಿದನು ಅದರಂತೆ ಪೋಲೀಸಿನವರು ಪೇಪರಿನಲ್ಲಿ ಜಾಹೀರಾತು ಪ್ರಕಟಿಸಿದರು ಆದರೆ ಆ ಕಳ್ಳನು ಆಕೆಗೆ ಮತ್ತೊಂದು ಕಾಗದ ಬರೆದು ತಾನು ಇಂಥ ಕಡೆ ಇಷ್ಟು ಹೊತ್ತಿಗೆ ಬರುವುದಾಗಿಯೂ ಅಲ್ಲಿ ತನಗೆ ಹಣ ಕೊಟ್ಟರೆ ದಸ್ತಾವೇಜು ವಾಪಸುಕೊಡುವುದಾಗಿಯೂ ತಿಳಿಸಿದನು ಅದರಂತೆ ಪೋಲೀಸ್ ಅಧಿಕಾರಿಗಳ ಪೈಕಿ ಇಬ್ಬರು ಗೋಷಾ ಹೆಂಗಸಿನಂತೆ ಬುರ್ಖಿ ಹಾಕಿಕೊಂಡು ಅವನು ಹೇಳಿದ್ದ ಸ್ಥಳಕ್ಕೆ ಹೋಗಿ ಕಾದಿದ್ದರು ಬರೆದಂತೆ ಅವನು ಬಂದನು ಕೂಡಲೆ ಪೋಲೀಸ್ ಅಧಿಕಾರಿಗಳಿಬ್ಬರೂ ಅವನನ್ನು ಹಿಡಿದು ಬಂದೀಖಾನೆಯಲ್ಲಿಟ್ಟಿದ್ದಾರೆ

ವಿಲಕ್ಷಣವಾದ ವಿವಾಹ ವಿಚ್ಛೇದ.

ಲಕ್ನೋ ನಗರದಲ್ಲಿ ಕಳೆದ ಸೋಮವಾರ ಅತ್ಯಂತ ವಿಚಿತ್ರ ವಿವಾಹವಿಚ್ಛೇದಪ್ರಸಂಗವೊಂದು ನಡೆಯಿತು ಕಲಕತ್ತೆಯ ನಾಟಕ ಪ್ರೇಮಿಯಾದ ಮಿ|| ಯೋಗೀಂದ್ರ ಚಟರ್ಜೀ ಮತ್ತು ಅವನ ಹೆಂಡತಿ ಶ್ರೀ ದುರ್ಗಾದೇವಿ ಇವರಿಬ್ಬರೂ ನಾಲ್ಕು ವರ್ಷಗಳವರೆಗೆ ಗೃಹಸ್ಥ ಜೀವನವನ್ನು ಸಾಗಿಸಿದರು ಇಬ್ಬರೂ ಒಳ್ಳೇ ಸ್ನೇಹಿತರಾಗಿದ್ದರು ಆದಾಗ್ಯೂ ಅವರ ಸಂಸಾರ ಸುಖಕರವಾಗಿರಲಿಲ್ಲ ಆದಕ್ಕಾಗಿ ಈ ಸಂಸಾರದ ಬಂಧನವನ್ನು ತಪ್ಪಿಸಿಕೊಳ್ಳಲು ಇವರು ವಿಲಕ್ಷಣ ಮಾರ್ಗವನ್ನು ಅನುಸರಿಸಿದರು ಕಳೆದ ಸೋಮವಾರ ಪತಿಪತಿಗಳು ತಮ್ಮ ಆಪ್ತಮಿತ್ರರಿಗಾಗಿ ಲಕ್ನೋ ನಗರದಲ್ಲಿ ಒಂದು ಸಂತೋಷ ಕೂಟವನ್ನು ಏರ್ಪಡಿಸಿದರು ಉಪಹಾರವಾದನಂತರ ಅವರು ತಮ್ಮ ಮನಬಿಚ್ಚಿ ಮಾತನಾಡುತ್ತ, ತಮ್ಮ ನಾಲ್ಕುವರ್ಷದ ದಾಂಪತ್ಯವನ್ನು ಇಂದು ವಿಚ್ಛೇದನಗೊಳಿಸುವುದೇ ಈ ಸಮಾರಂಭದ ಮುಖ್ಯೋದ್ದೇಶವೆಂದು ಹೇಳಿ ಸಂಸಾರಬಂಧನದಿಂದ ಮುಕ್ತರಾದರು ಈ ಸುದ್ದಿ ಅತಿಥಿಗಳನ್ನು ಆಶ್ಚರ್ಯಗೊಳಿಸಿತು ತಾವು ಇನ್ನು ಮುಂದೆ ಪತಿಪತಿಗಳಾಗಿರದಿದ್ದರೂ ಹಿಂದಿನಂತೆಯೇ ಸ್ನೇಹಿತರಾಗಿರುವೆವೆಂದು ಹೇಳಿದರು

ಸ್ವೀಕಾರ.

ಶಿವಮೊಗ್ಗಾ ಜಿ|| ಹಾರನಹಳ್ಳಿಯಲ್ಲಿರುವ ಮ|| ರಾ|| ರಾಜನೂರು ತಿರುಕಪ್ಪನವರ ಪುತ್ರ ಚಿ|| ಸೌ|| ಪಾರ್ವತಮ್ಮನನ್ನು ಶಿಕಾರಿಪುರದ ಮ|| ರಾ|| ಸುರಗಿಹಳ್ಳಿ ವೀರಪ್ಪನವರ ಪ್ರಥಮ ಪುತ್ರ ಚಿ|| ವೀರಸಂಗಪ್ಪನಿಗೂ ಮತ್ತು ಸದರಿ ತಿರುಕಪ್ಪನವರ ಸಹೋದರರಾದ ಮ|| ರಾ|| ಚನ್ನಬಸಪ್ಪನವರ ಪುತ್ರಿ ಚಿ|| ಸೌ|| ಶಾಂತಮ್ಮನನ್ನು ಶಿಕಾರಿಪುರದ ಸುರಗಿಹಳ್ಳಿ ವೀರಪ್ಪನವರ ದ್ವಿತೀಯ ಪುತ್ರ ಚಿ|| ಶಂಕರಪ್ಪನಿಗೂ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಕನ್ಯಾಪಿತೃಗಳು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 4 ರೂಪಾಯಿಗಳು ವೇ|| ಗುಬ್ಬಿ ಶಿವಕಥಾ ಪಂಡಿತ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ

ಗದಗ ಬೆಟಗೇರಿಯಲ್ಲಿರುವ ಮ|| ರಾ|| ಲಕ್ಕುಂಡಿ ಮಹಾರುದ್ರಪ್ಪನವರ ಪುತ್ರಿ ಚಿ|| ಸೌ|| ಸಿದ್ದಮ್ಮನನ್ನು ಮಂಡಲಗೇರಿ ಮ|| ರಾ|| ಚನ್ನವೀರಪ್ಪ ಗೊಂಗಡಶೆಟ್ಟಿ ಇವರ ಪುತ್ರ ಚಿ|| ಶಿವಮೂರ್ತೆಪ್ಪನಿಗೆ ಕೊಟ್ಟು ನಿಶ್ಚಯ ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ಮ|| ರಾ|| ಬೇಲೇರಿ ಮಲ್ಲಿಕಾರ್ಜುನಪ್ಪನವರ ದ್ವಾರಾ ತಲ್ಪಿರುತ್ತವೆ

ಹಕ್ಕೂರು ಅರಕೇರಿಮಠದ ವೇ|| ದಿಡ್ಡಿ ಬಸವಯ್ಯನವರ ದೀಕ್ಷೋಪನಯನ ಸಂಸ್ಕಾರದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಗುರುಲಿಂಗಶಿವಾಚಾರ್ಯರು ಶಿಖರಮಠ ರಾಯಚೂರು ಇವರ ದ್ವಾರಾ ತಲ್ಪಿರುತ್ತದೆ

ವಿಜಾಪುರ ಡಿ|| ಜೈನಾಪುರಗ್ರಾಮದಲ್ಲಿರುವ ಮ|| ರಾ|| ರಂಗಪ್ಪ ಬಟಗುರ್ಕಿ ಇವರ ಚಿಕ್ಕಮಗುವಿಗೆ ಪ್ರಾಪ್ತವಾಗಿದ್ದ ಭಯಂಕರ ಜ್ವರವು ತಮ್ಮ ಗುರುಗಳಾದ ಜೈನಾಪುರಸ್ವಾಮಿಗಳ ಆಶೀರ್ವಾದ ಬಲದಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಸೌ|| ಭಾಗೀರಥೀಬಾಯಿ ಕಟಾಪ ಇವರ ದ್ವಾರಾ ತಲ್ಪಿರುತ್ತದೆ.

ತಿಪಟೂರಲ್ಲಿರುವ ಮ|| ರಾ|| ಮರುಳಸಿದ್ದಪ್ಪ ಚನ್ನಬಸಪ್ಪ ಸಿಂದಗಿ ಇವರು ಇದೇ ತಿಂಗಳು 2 ನೆಯ ತಾರೀಖು ಗುರುವಾರ ದಿವಸ ಕಾಯಿಕೊಬ್ಬರಿ ದಲಾಲಿ (ಖರೀದಿ) ಅಂಗಡಿಯನ್ನು ಸ್ಥಾಪಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ ಯು ವೇ|| ಆರ್ ಯಂ ಮಲ್ಲಿಕಾರ್ಜುನಯ್ಯನವರ ದ್ವಾರಾ ತಲ್ಪಿರುತ್ತದೆ

ಹಾರೇನಹಳ್ಳಿ ಮ|| ರಾ|| ಪಟೇಲ ವೆಂಕಟೇಗೌಡರ ಪುತ್ರ ಚಿ|| ಮರುಳಪ್ಪನಿಗೂ ಕೆಂಕೆರೆ ಯಜಮಾನ ಮ|| ರಾ|| ವೀರಭದ್ರೇಗೌಡರ ಮಕ್ಕಳು ಬಸಪ್ಪನವರ ಪುತ್ರಿ ಚಿ|| ಸೌ|| ಗೌರಮ್ಮನಿಗೂ ನಡೆದ ವಿವಾಹಸಮಯದಲ್ಲಿ ಸಮರ್ಪಿಸಿದ 1 ರೂ ಯು ವೇ|| ದಂಡಿನ ಶಿವರದ ಮಠದ ಸಿದ್ದಲಿಂಗಾರಾಧ್ಯರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

[೩ನೆಯ ಪುಟದಿಂದ ಮುಂದುವರಿದುದು]

ಶ್ಯಕ ಆದಾಗ್ಯೂ, ನಾನಾ ಸಿಬ್ಬಂದಿಗಳಿಗೂ ಹೊಂದಿಕೆಯಿಂದ ಅಚ್ಚುಕಟ್ಟಾಗಿ ಕೆಲಸ ನಡೆಯುವಂತೆ ಮಾಡುವುದಕ್ಕೂ, ಕಾರ್ಯ ವಿಧಾನಗಳು ಎಲ್ಲಾ ಪ್ರದೇಶಗಳಲ್ಲಿಯೂ ಒಂದೇ ರೀತಿಯಲ್ಲಿರುವಂತೆ ಮಾಡುವುದಕ್ಕೂ, ಮುಖ್ಯಾಧಿಕಾರಿಗಳ ಹತೋಟಿಯಿದ್ದು ಅವರ ಅನುಜ್ಞೆಗಳಂತೆ ಕೆಲಸ ನಡೆಯಬೇಕಾದುದೂ ಆವಶ್ಯಕ ಜನಗಳೇ ಒಳ್ಳೆಯ ಮನಸ್ಸಿನಿಂದ ತಾವೇ ಮುಂದೆ ಬಂದು ನೆರವೇರಿಸುವಂತೆ ಅವರಿಗೆ ಅನೇಕ ಕೆಲಸಗಳನ್ನು ಬಿಟ್ಟುಬಿಡಬೇಕಾದುದೇನೋ ಅಗತ್ಯ ಆದರೆ, ಇಂಥ ಕೆಲಸಗಳಿಗೆ ಎಲ್ಲರೂ ತಾವಾಗಿಯೇ ಮುಂದೆ ಬರುವುದಿಲ್ಲವಾದಕಾರಣ, ಸ್ವಲ್ಪಮಟ್ಟಿನ ನಿರ್ಬಂಧವನ್ನು ಕಲ್ಪಿಸದೆ ನಿರ್ವಾಹವೇ ಇಲ್ಲ ದೀಪಗಳ ಸಂಬಂಧವಾಗಿ ಯಾವ ನಿರ್ಬಂಧಗಳಿರಬೇಕೆಂಬ ವಿಚಾರ ವಿಮಾನದಾಳಿಯು ಅಪಾಯಪ್ರದಗಿದಾಗ ಜನರು ಹೇಗೆ ನಡೆಯಬೇಕೆಂಬ ವಿಚಾರ, ಕಟ್ಟಡಗಳಿಗೆ ರಕ್ಷಣೆಯನ್ನೊದಗಿಸುವ ವಿಚಾರ ಇವೇ ಮುಂತಾದುವುಗಳಲ್ಲಿ ಎಲ್ಲೆಲ್ಲಿಯೂ ನಿರ್ಬಂಧದ ಕಾನೂನುಗಳು ವಿಧಾಯಕವಾಗಿಯೇ ಇವೆ ಮೈಸೂರು ಸಂಸ್ಥಾನದಲ್ಲಿ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳ ಆರ್ಡಿನೆನ್ಸ್ ಕಾನೂನು ಕಳೆದ ಸಪ್ಟೆಂಬರ್ ತಿಂಗಳಲ್ಲಿ ವಿಧಾಯಕವಾಯಿತು ಅದಕ್ಕನುಸಾರವಾದ ನಿಬಂಧನೆಗಳೂ ಪ್ರಕಟವಾಗಿವೆ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳ ಸಂಬಂಧವಾಗಿ ನಾನಾಸಿಬ್ಬಂದಿಗಳೂ ತಮ್ಮ ಕರ್ತವ್ಯಗಳನ್ನು ನಡೆಯಿಸುವಲ್ಲಿ, ಜನರ ಮೇಲೆ ಅವರು ಅಧಿಕಾರ ಚಲಾಯಿಸಿ ಜನರನ್ನು ಅವಶ್ಯವಾದ ನಿರ್ಬಂಧಗಳಿಗೆ ಗುರಿಮಾಡಿದರೆ ಯಾವ ಆಕ್ಷೇಪಕ್ಕೂ ಕಾರಣವಿಲ್ಲದಂತೆ ಅವರಿಗೆ ಕಾನೂನಿನ ಮೇರೆಗೆ ರಕ್ಷಣೆ ದೊರೆಯಲು ಅವುಗಳಿಂದ ಸಹಾಯ ವಿಮಾನದಾಳಿ ಎಚ್ಚರಿಕೆ ಏರ್ಪಾಡಿನ ವಾಲಂಟಿಯರುಗಳಿಗೆ (ಎಂದರೆ ಎ ಆರ್ ಪಿ ವಾಲಂಟಿಯರುಗಳಿಗೆ) ಕಾನೂನಿನ ಮೇರೆಗೆ ಪೋಲೀಸು ಅಧಿಕಾರಗಳೇನೂ ಇಲ್ಲ ಆದಾಗ್ಯೂ, ಪ್ರಜೆಗಳ ಕ್ಷೇಮಕ್ಕಾಗಿ ಅಗತ್ಯವಾಗಿ ನಡೆಯಬೇಕಾದ ಕಾರ್ಯಗಳನ್ನು ಜನರಿಂದ ಮಾಡಿಸುವುದಕ್ಕೆ ಅವರು ಅಧಿಕಾರವನ್ನು ಚಲಾಯಿಸಲೇಬಹುದು. ನಗರರಕ್ಷಣೆಯ ಏರ್ಪಾಡುಗಳು ಸುಲಲಿತವಾಗಿ ನಡೆಯದಂತೆ ಅಡ್ಡಿಮಾಡುವ ತುಂಟರನ್ನು ಹತೋಟಿಯಲ್ಲಿಟ್ಟಿರುವುದೂ ಅವಶ್ಯಕ ಮೇಲೆ ಸೂಚಿಸಿರುವಂತೆ ನಾನಾ ವರ್ಗದವರ ಸಹಕಾರದಿಂದ ನಗರ ರಕ್ಷಣೆಯು ನಡೆಯಬೇಕು ಪ್ರಜೆಗಳ ಪೂರ್ಣ ಮನಸ್ಸಿನ ಸಹಕಾರವಿಲ್ಲದೆ ಮತ್ತು ಆಧುನಿಕ ಯಂತ್ರದ ಪೂರ್ಣ ಪ್ರಯೋಜನವನ್ನು ಪಡೆಯದೆ ಅದು ಸಾಧ್ಯವೇ ಇಲ್ಲ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳ ಸಂಬಂಧದಲ್ಲಿ ನಾನಾ ಸಿಬ್ಬಂದಿಗಳಿಗೂ ಸೇರಿ ಕೆಲಸ ಮಾಡಲು ಜನರು ಬೇಕಾಗುವುದು ಖಂಡಿತ ಅವರೆಲ್ಲರೂ ಯಾವ ಬಹುಮಾನದ ಅಥವಾ ಸಂಭಾವನೆಯ ಅಪೇಕ್ಷೆಯೂ ಇಲ್ಲದೆ ತಮ್ಮ ಕರ್ತವ್ಯಗಳನ್ನು ನೆರವೇರಿಸಬೇಕು. ಆ ಕರ್ತವ್ಯಗಳನ್ನು ನೆರವೇರಿಸುವುದೇ ಪ್ರತಿಯೊಬ್ಬ ಪ್ರಜೆಗೂ ದೊಡ್ಡ ಗೌರವವೆಂದೂ ಮತ್ತು ಸಾರ್ವಜನಿಕ ಸೇವೆಯನ್ನು ಮಾಡಲು ಒಳ್ಳೆಯ ಅವಕಾಶವೆಂದೂ ಭಾವಿಸಬೇಕು ಮನಸ್ಸಿಲ್ಲದೆ ಏನೋ ನೆಪಮಾತ್ರಕ್ಕೆ ಸೇವೆಮಾಡಕೂಡದ ವಿಮಾನದಾಳಿ ಎಚ್ಚರಿಕೆ ವ್ಯವಸ್ಥೆಯು (ಎಂದರೆ ಎ ಆರ್ ಪಿ ವ್ಯವಸ್ಥೆಯು) ರಾಜಕೀಯ ಸ್ವಭಾವವಿಲ್ಲದ ಸೇವಾ ವ್ಯವಸ್ಥೆ ಅದರಲ್ಲಿ ಸರ್ಕಾರಿ ಉದ್ಯೋಗಸ್ಥರು ಖಾಸಗಿ ದೊಡ್ಡ ಮನುಷ್ಯರೆಂಬ ಭೇದವಿಲ್ಲ ಅಲ್ಪ ಸ್ವಲ್ಪ ಸೇವೆಗೂ ಬೇರೆ ಎಲ್ಲರಿಗೂ ಸೇವೆಯ ಅವಕಾಶ ಸರ್ಕಾರಿ ಉದ್ಯೋಗಗಳಲ್ಲಿದ್ದು ವಿಶ್ರಾಂತರಾದವರು, ಲಾಯರುಗಳು, ವರ್ತಕರು, ಸರ್ಕಾರಿ ಉದ್ಯೋಗಸ್ಥರು, ಸ್ಕೂಲುಗಳ ಕಾಲೇಜುಗಳ ಮತ್ತು ಖಾಸಗಿ ವ್ಯಾಪಾರ ಮಂಡಲಿಗಳ ಸಿಬ್ಬಂದಿಯವರು—ಇವರೆಲ್ಲರೂ ಮುಂದಾಳುಗಳಾಗಿ ನಿಂತು ಕೆಲಸ ಮಾಡಬೇಕು ವಿಮಾನದಾಳಿ ವಾರ್ಡನುಗಳು, ಪ್ರಥಮ ಚಿಕಿತ್ಸೆಯವರು, ಸಹಾಯಕ ನರ್ಸುಗಳು—ಮುಂತಾದ ರೀತಿಗಳಲ್ಲಿ ಮಹಿಳೆಯರೂ ಸಹ ಕೆಲಸಮಾಡಬಹುದು ಖಾಸಗಿ ಮೆಡಿಕಲ್ ಪ್ರಾಕ್ಟೀಷನರುಗಳು, ಕಂಟ್ರಾಕ್ಟರುಗಳು, ಮೆಡಿಕಲ್ ಕಾಲೇಜಿನ ಮತ್ತು ವೈದ್ಯದ ಕಾಲೇಜಿನ ಮೇಲಿನ ತರಗತಿಗಳ ವಿದ್ಯಾರ್ಥಿಗಳು ಮತ್ತು ಇತರರು—ಅವರು ಶಿಕ್ಷಣ ಹೊಂದಿದವರಾಗಿರಲಿ ಅಥವಾ ಶಿಕ್ಷಣ ಹೊಂದದವರಾಗಿರಲಿ—ಅವರೆಲ್ಲರ ಸ್ವಭಾವಕ್ಕೂ ಶಕ್ತಿಗೂ ತಕ್ಕ ಕೆಲಸಗಳ ಕೈತುಂಬ ದೊರೆಯುತ್ತವೆ ಸ್ಕೌಟಗಳ, ಆಂಬ್ಯುಲನ್ಸ್ ಬ್ರಿಗೇಡ್, ರೆಡ್‌ಕ್ರಾಸ್ ಸಂಘ, ಇಂಜನಿಯರಗಳ ಸಂಘ—ಮುಂತಾದುವುಗಳೆಲ್ಲಾ ನಾನಾ ಶಿಕ್ಷಣ ಸಿಬ್ಬಂದಿಗಳ ಜೊತೆಗೆ ತಾವೂ ಸೇರಿ ಪಾರಿಭಾಷಿಕ ಸ್ವಭಾವದ (ಟೆಕ್ನಿಕಲ್) ವಿಚಾರಗಳಲ್ಲಿ ಜನರಿಗೆ ಶಿಕ್ಷಣಕೊಡುವ ಸಂಬಂಧವಾಗಿ ಬೇಕಾದಷ್ಟು ಕೆಲಸ ಮಾಡಬಹುದು ಪ್ರಜಾ ಸೇವೆ ಮಾಡುವ ಇಷ್ಟವೂ ಮತ್ತು ಪರೋಪಕಾರದ ಕೆಲಸ ಮಾಡುವ ಇಷ್ಟವೂ ಇದ್ದರೆ ಸಾಕು ಅಂಥವರು ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳ ವ್ಯವಸ್ಥೆಗೆ ಸೇರಲು ಪೂರ್ತಿಯಾಗಿ ಅರ್ಹರು

ಆಶ್ರಯಸ್ಥಾನ

೧೦ ವಿಮಾನದಾಳಿ ನಡೆಯುತ್ತಿರುವಾಗ ಪೆಟ್ಟು ತಗಲದಿರುವಂತೆ ತಪ್ಪಿಸಿಕೊಳ್ಳುವ ಆಶ್ರಯ ಸ್ಥಾನಗಳನ್ನೊದಗಿಸುವ ವಿಚಾರ ಇದನ್ನೂ ಮತ್ತು ವಿಮಾನದಾಳಿ ನಡೆಯಬಹುದಾದ ಪ್ರದೇಶವನ್ನು ಜನರು ಖಾಲಿ ಮಾಡಿ ಹೋಗುವ ಏರ್ಪಾಡೂ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳ (' ಎ ಆರ್ ಪಿ ') ವ್ಯವಸ್ಥೆಗೆ ಸೇರಿಲ್ಲ ಆದರೂ, ಆ ಅನುಕೂಲವನ್ನು ಭರತಖಂಡದಂಥ ದೇಶದಲ್ಲಿ ಯಾವ ಉತ್ತಮ ವಿಧದಲ್ಲಿ ಎಷ್ಟರಮಟ್ಟಿಗೆ ಕಲ್ಪಿಸುವುದು ಸಾಧ್ಯವೆಂಬುದನ್ನು ಸೂಚಿಸಬೇಕಾಗಿದೆ ದೊಡ್ಡ ನಗರಗಳಲ್ಲಿ ನಗರನಿವಾಸಿಗಳೆಲ್ಲರೂ ಆಶ್ರಯ ಹೊಂದಬಹುದಾದಷ್ಟು ಪರಿಪೂರ್ಣವಾಗಿ ಆಶ್ರಯ ಸ್ಥಾನಗಳನ್ನೇ ಏರ್ಪಡಿಸುವುದು ಕಾರ್ಯತಃ ಸಾಧ್ಯವಿಲ್ಲದ ಮಾತು ಇತರ ದೇಶಗಳಲ್ಲಿ ನಡೆದಿರುವ ಏರ್ಪಾಡುಗಳ ಆಧಾರದ ಮೇಲೆ ಇಲ್ಲಿಯದನ್ನು ನಿಷ್ಕರ್ಷೆಮಾಡುವುದಕ್ಕಾಗುವುದಿಲ್ಲ ಅಲ್ಲಿಯ ಸ್ಥಿತಿಗಳೂ ಅಲ್ಲಿಯ ಅಪಾಯ ಸನ್ನಿವೇಶವೂ ಬೇರೆ ಇಲ್ಲಿಯವೇ ಬೇರೆ ನಾನು ಆಗಲೇ ಸೂಚಿಸಿರುವಂತೆ ಭರತಖಂಡದಲ್ಲಿ ವಿಮಾನದಾಳಿ ನಡೆದರೂ ಆಗೊಂದು ಸಲ ಈಗೊಂದು ಸಲದಂತೆ ಸ್ವಲ್ಪಕಾಲಮಾತ್ರವೇ ನಡೆದೀತ ಆದಕಾರಣ ದುಬಾರಿಯಾಗಿ ವಿಪರೀತ ಹಣವನ್ನು ವೆಚ್ಚ ಮಾಡಿ ಬೆಂಗಳೂರಿನಂಥ ಸ್ಥಳಗಳಲ್ಲಿ ಜನರಿಗೆ ಆ ಬಗೆಯ ಆಶ್ರಯಸ್ಥಾನಗಳನ್ನು ನಿರ್ಮಿಸುವುದು ಸುತರಾಂ ಯುಕ್ತವಲ್ಲ ಆದಕಾರಣ ಭರತಖಂಡದಲ್ಲಿ ವಿಮಾನದಾಳಿ ನಡೆಯುವ ಸಂಭವವಿರುವ ನಗರಗಳ ಜನರು ಅವುಗಳನ್ನು ಬಿಟ್ಟು ಸುರಕ್ಷಿತವಾದ ದೂರದ ಸ್ಥಳಗಳಿಗೆ ಹೋಗುವಂತೆ ಅನುಕೂಲಮಾಡುವ ಒಂದು ವ್ಯವಸ್ಥೆ ಮಾಡುವುದೇ ಅತ್ಯುತ್ತಮ ವಿಧಾನ ಹಾಗೆ ವ್ಯವಸ್ಥೆ ಮಾಡಿಟ್ಟುಕೊಂಡಿದ್ದು ಅಪಾಯದ ಸಂಭವವುಂಟಾದೊಡನೆಯೇ ಜನರನ್ನು ಸುರಕ್ಷಿತವಾದ ಸ್ಥಳಗಳಿಗೆ ಹೊರಡಿಸುವುದೇ ಸರಿಯಾದ ಮಾರ್ಗ ಹೀಗೆ ನಗರಗಳನ್ನು ಖಾಲಿ ಮಾಡಿಸಿ ಜನರನ್ನು ಕಳುಹಿಸುವುದೇನೊ ಸ್ವಲ್ಪ ಅಸಮಾಧಾನಕ್ಕೆ ಕಾರಣವಾಗುವ ಕಷ್ಟದ ಕೆಲಸ ಆದರೆ ಅಪಾಯವನ್ನು ತಪ್ಪಿಸುವ ಅತ್ಯುತ್ತಮವಾದ ಮಾರ್ಗ ಹೀಗೆ ನಗರವನ್ನು ಬಿಟ್ಟು ಬೇರೆ ಸ್ಥಳಗಳಿಗೆ ಹೋಗುವ ಇಷ್ಟವಿಲ್ಲದವರು ತಾವು ವಾಸವಾಗಿರುವ ಮನೆಗಳಲ್ಲೇ ಸುರಕ್ಷಿತವಾಗಿರುವ ಮತ್ತು ಬಲವಾಗಿರುವ ಗಾಜು ಕಬ್ಬಿಣ ಮುಂತಾದುವುಗಳಿಂದಲೂ, ಕಟ್ಟಡದ ಭಾಗಗಳು ಅವುಗಳ ಮೇಲೆ ಉರುಳಿ ಬೀಳುವುದರಿಂದಲೂ ಅಪಾಯವಾಗದಿರುವಷ್ಟು ಮಟ್ಟಿಗೆ ಅವುಗಳನ್ನು ಬಲಪಡಿಸಿಕೊಳ್ಳಲೂ ಬಹುದು ಖಾಸಗಿ ಜನಗಳ ವಾಸದ ಮನೆಗಳಲ್ಲಿಯೂ ಸಾರ್ವಜನಿಕ ಕಟ್ಟಡಗಳಲ್ಲಿಯೂ ಜನರು ವಿಮಾನದಾಳಿಯ ಅಪಾಯಕ್ಕೆ ಸಿಕ್ಕದಂತೆ ರಕ್ಷಣೆಯನ್ನು ಕಲ್ಪಿಸಿಕೊಳ್ಳುವ ಬಗೆ ಹೇಗೆಂದು ಜನರಿಗೆ ಸಲಹೆ ಹೇಳಲು ಇಂಜನಿಯರಿಂಗ್ ಸಂಘದವರು ಒಂದು ಉಪಸಮಿತಿಯನ್ನು ನೇಮಕ ಮಾಡಬಹುದು. ಸಾರ್ವಜನಿಕ ಕಟ್ಟಡಗಳ ವಿಚಾರದಲ್ಲಿ ಆ ಸಲಹೆಯಂತೆ ನಡೆಯಲೇಬೇಕೆಂದು ಕಾನೂನನ್ನು ರಚಿಸಬಹುದು ದೊಡ್ಡ ಆಫೀಸುಗಳು, ಕಾರ್ಖಾನೆಗಳು, ಸ್ಕೂಲುಗಳು, ಮುಂತಾದುವುಗಳಲ್ಲಿ ವಿಮಾನದಾಳಿ ಅಪಾಯಒದಗಿದಾಗ ಜನರು ಆಶ್ರಯ ಹೊಂದುವ ಸ್ಥಳಗಳನ್ನು ಪ್ರತ್ಯೇಕಿಸಿಡುವಂತೆ ಕೋರಿ ವಿಧಾಯಕ ಮಾಡಬಹುದು. ಇವುಗಳಲ್ಲದೆ ಪ್ರತಿಯೊಂದು ಪ್ರದೇಶದಲ್ಲಿಯೂ, ವಿಮಾನದಾಳಿ ನಡೆಯುವಾಗ್ಗೆ ಬಯಲಿನಲ್ಲಿ ಸಿಕ್ಕಿಕೊಳ್ಳುವ ಜನರು ಓಡಿಹೋಗಿ ಆಶ್ರಯ ಪಡೆಯುವುದಕ್ಕಾಗಿ ಕೆಲಕೆಲವು ಕಟ್ಟಡಗಳನ್ನೂ ಪ್ರತ್ಯೇಕಿಸಬಹುದು ದೊಡ್ಡ ದೊಡ್ಡ ಕೈಗಾರಿಕೆ ಪ್ರದೇಶಗಳಲ್ಲಿ ಮತ್ತು ಯಂತ್ರಶಾಲೆಗಳಲ್ಲಿ ಮುಖ್ಯ ಕೆಲಸಗಾರರ ರಕ್ಷಣೆಗಾಗಿ ಸುರಕ್ಷಿತವಾದ ಸ್ಥಳಗಳಲ್ಲಿ ಸಿಮೆಂಟಿನಲ್ಲಿ ನಾನಾಬಗೆಗಳ ಆಶ್ರಯಸ್ಥಾನಗಳನ್ನು ಕಟ್ಟಬಹುದು ಅಥವಾ ತಕ್ಕಷ್ಟು ಆಳವಾದ ಕಾಲುವೆಗಳ ಆಕಾರದ ಗುಣಿಗಳನ್ನು ತೋಡಿಸಿ ಏರ್ಪಡಿಸಬಹುದು ಅಂತೂ, ವಿಮಾನದಾಳಿ ನಡೆಯುವ ಕಾಲದಲ್ಲಿ ಅಂಥ ಆಶ್ರಯ ಸ್ಥಾನಗಳಲ್ಲಿ ಅಥವಾ ಅಂಥ ಗುಣಿಗಳಲ್ಲಿ ತಲೆ ಮರೆಸಿಕೊಳ್ಳುವುದು ಅತ್ಯಾವಶ್ಯಕವೆಂಬುದನ್ನು ಜನರ ಮನಸ್ಸಿಗೆ ಹಿಡಿಯುವಂತೆ ಒತ್ತಿ ಹೇಳಬೇಕು

ವೆಚ್ಚ

೧೯ ಇನ್ನು ವೆಚ್ಚದ ವಿಷಯ. ಮೇಲೆ ಹೇಳಿದ ತಕ್ಕ ವಿಚಾರಗಳನ್ನು ಪರಿಶೀಲಿಸಿದಲ್ಲಿ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳಿಗೆ ಭಾರಿ ವೆಚ್ಚವೇನೂ ಬೀಳಲಾರದೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ ಈಗಿರತಕ್ಕ ಆಧುನಿಕ ಸಾಧನಗಳನ್ನೇ ಪೂರ್ತಿಯಾಗಿ ಉಪಯೋಗಿಸಿಕೊಳ್ಳುವುದೂ, ಪ್ರಜಾಸಮುದಾಯದಿಂದಲೇ ಜನಸಹಾಯವನ್ನು ಮತ್ತು ಸಾಧನಸಂಪತ್ತುಗಳನ್ನು ಪಡೆದು ಉಪಯೋಗಿಸಿಕೊಳ್ಳುವುದೂ ಇದಕ್ಕೆ ಕಾರಣ ವಿಮಾನದಾಳಿ ಎಚ್ಚರಿಕೆ ಏರ್ಪಾಡಿನ ಸಂಬಂಧದ ನಾನಾ ಸಿಬ್ಬಂದಿಗಳಲ್ಲಿ, ಕೆಲವರು ಹೊರತು ಉಳಿದ ಬಹುಮಂದಿಗಳೂ ಸಂಬಳವಿಲ್ಲದೆ ಗೌರವಾರ್ಥವಾಗಿ ಕೆಲಸ ಮಾಡತಕ್ಕವರೇ ಆಗಿರುವರು ಏನಿದ್ದರೂ, 'ಟ್ರೇಯ್ಲರ್' ಪಂಪುಗಳ, "ಸ್ಟಿರಪ್" ಪಂಪುಗಳು, "ಸೈರನ್" ಎಂಬ ಧ್ವನಿ ಯಂತ್ರಸಾಧನ, ಮುಂತಾದುವುಗಳನ್ನು ಕೊಳ್ಳುವುದಕ್ಕಾಗಿ ಸ್ವಲ್ಪ ಹಣವು ವೆಚ್ಚವಾಗಬೇಕಾಗುತ್ತದೆ ಈ ಬಗೆಯ ಸಾಮಾನುಗಳು ಯಾವಾಗಲೂ ಉಪಯೋಗಕರವಾಗಿಯೇ ಇರುತ್ತವೆ ವಿಮಾನದಾಳಿ ಎಚ್ಚರಿಕೆ ಏರ್ಪಾಡುಗಳೆಲ್ಲಾ ಒಟ್ಟಿಗೆ ಪ್ರಾರಂಭವಾಗುವುದಿಲ್ಲ ಕೆಲಕೆಲವು ಮೊದಲು ಪ್ರಾರಂಭವಾಗಿ ಆ ಬಳಿಕ ಮತ್ತೆ ಕೆಲಕೆಲವು ಸೇರುತ್ತಾ ಬಂದು ಮುಂದುವರಿಯುತ್ತವೆ ಆದಕಾರಣ, ಯಾವುದೊಂದು ಕಾಲದಲ್ಲಾಗಲಿ ನಡೆಯುತ್ತಿರುವ ಕೆಲಸಗಳೇ ಆಗಲಿ ತಗಲತಕ್ಕ ವೆಚ್ಚವು ಅಲ್ಪವಾಗಿಯೇ ಇರುತ್ತದೆ

ಧೈರ್ಯಸ್ಥೈರ್ಯ

೨೦ ಹೀಗೆ ವಿಶದವಾಗಿ ಏರ್ಪಾಡುಗಳನ್ನು ಮಾಡಿದಮೇಲೆ ವಿಮಾನದಾಳಿಯೇ ನಡೆಯದೆ ಹೋದರೆ ಇಷ್ಟೆಲ್ಲಾ ದಂಡವಾಗಿ, ಕಾಲವನ್ನೂ ಶ್ರಮವನ್ನೂ ವ್ಯರ್ಥಮಾಡಿದ ಹಾಗಲ್ಲವೆ—ಎಂದು ಕೇಳಬಹುದು ಆದರೆ, ಈಗಿನ ಸನ್ನಿವೇಶದಲ್ಲಿ ನೋಡಿದರೇನೋ ವಿಮಾನದಾಳಿ ನಡೆಯಲಾರದೆಂದು ನಿರ್ಧರ ಹೇಳುವಂತಿಲ್ಲ ಇಷ್ಟರಮೇಲೂ ವಿಮಾನದಾಳಿ ನಡೆಯದಿದ್ದರೆ ಸಂತೋಷವೇ ವಿಮಾನದಾಳಿ ನಡೆಯದಿದ್ದರೂ, ಜೀವನ ಸೌಕರ್ಯಗಳೆಷ್ಟಿವೆಯೆಂಬ ಪರಿಶೀಲನೆಯೂ, ನಗರರಕ್ಷಣೆಯ ಅನುಕೂಲಗಳೆಷ್ಟಿವೆಯೆಂಬುದರ ವಿಸ್ತಾರವೂ ಆಗಿರುತ್ತವೆ. ನಗರದಲ್ಲಿರತಕ್ಕ ಕುಂದುಕೊರತೆಗಳನ್ನೆಲ್ಲಾ ಸರಿಪಡಿಸಿ ಉತ್ತಮಸ್ಥಿತಿಗೆ ತರಲಾಗುತ್ತದೆ ಅಲ್ಲದೆ, ಪ್ರಜಾಸೌಕರ್ಯಕ್ಕಾಗಿ ಹೊಸ ಕೆಲಸಗಳೂ ಹೊಸ ಸಿಬ್ಬಂದಿಗಳೂ ಏರ್ಪಟ್ಟು, ನಗರ ನಿವಾಸಿಗಳಲ್ಲಿ ಬಹುಮಂದಿ ಉಪಯುಕ್ತವಾದ ಕೆಲಸಮಾಡುವುದರಲ್ಲಿ ಶಿಕ್ಷಣಪಡೆದಿರುತ್ತಾರೆ ಇವುಗಳೇ ಜನಜೀವನಕ್ಕೊಂದು ದೊಡ್ಡ ಲಾಭ ಇದರ ಮೇಲೋ, ಜನರಲ್ಲಿ ತಾವೂ ಪ್ರಜಾವರ್ಗಕ್ಕೆ ಸೇರಿದವರೆಂಬ ಭಾವನೆಯು ಬಲಿತು, ತಾವೆಲ್ಲರೂ ಒಕ್ಕಟ್ಟಾಗಿ ಕೆಲಸ ಮಾಡಬೇಕೆಂಬ ಅಭಿಪ್ರಾಯವೂ ಒಂದು ಹೊಸ ಭರವಸೆಯೂ ಉಂಟಾಗುವುವು ವಿಮಾನದಾಳಿ ಎಚ್ಚರಿಕೆ ಏರ್ಪಾಡಿನ ಸಂಬಂಧದಲ್ಲಿ ಜನರು ಪರಸ್ಪರವಾಗಿ ಸಹಕರಿಸಿ ವರ್ತಿಸುವುದು ಅಭ್ಯಾಸವಾಗುತ್ತದೆ ಅದೇ ಒಂದು ದೊಡ್ಡ ಲಾಭ ವಿಮಾನದಾಳಿ ಏರ್ಪಾಡಿನ ಸಂಬಂಧದಲ್ಲಿ ಒದಗಿಸಿಕೊಂಡ ಸಾಮಾನುಗಳೂ, ಜನರಿಗೆ ಕೊಟ್ಟ ಶಿಕ್ಷಣವೂ ವ್ಯರ್ಥವಾಗುವುದಿಲ್ಲ. ಅಪಾಯಕ್ಕೆ ಹೆದರದೆ ಜನರು ಎದೆಗೊಡುವ ಗುಣವು ಜನರಲ್ಲಿ ವೃದ್ಧಿಯಾಗುತ್ತದೆ. ಯಾರಾದರೂ ದುಷ್ಟರು ಕೈಮಾಡಿದರೆ ಅಥವಾ ನಗರದಲ್ಲಿ ಗಲಭೆಗಳು ನಡೆದು ಶಾಂತಿಗೆ ಭಂಗಬಂದರೆ ಅದನ್ನು ಪರಿಹರಿಸುವ ಸಾಮರ್ಥ್ಯವುಂಟಾಗಲು ಆ ಶಿಕ್ಷ

ಣದಿಂದ ಅನುಕೂಲವಾಗುತ್ತದೆ. ಒಂದು ಬಗೆಯ ಅನಿಷ್ಟಘಟನೆಯ ಪರಿಹಾರಕ್ಕಾಗಿ ಮಾಡಿದ ಸಿದ್ಧತೆಯೇ ಮತ್ತೊಂದು ಬಗೆಯ ಅನಿಷ್ಟಘಟನೆಯ ಪರಿಹಾರಕ್ಕೂ ಅದರಂತೆಯೇ ಸಹಾಯವಾಗುತ್ತದೆ. ಆ ಮಟ್ಟಿಗೆ ಪ್ರಜೆಗಳ ಕ್ಷೇಮಸಾಧನವನ್ನು ಹೆಚ್ಚಿಸಿದಂತೆಯೇ ಆಗುತ್ತದೆ. ಆತ್ಮರಕ್ಷಣೆ ಮಾಡಿಕೊಳ್ಳುವ ವಿಚಾರದಲ್ಲಿ ಜನರಿಗೆ ಶಿಕ್ಷಣಕೊಟ್ಟು ಅವರಿಗೆ ಆತ್ಮಾವಲಂಬನದ ಭರವಸೆಯನ್ನು ಮತ್ತಷ್ಟು ಹೆಚ್ಚುವಂತೆ ಮಾಡಿಕೊಟ್ಟಂತಾಗುತ್ತದೆ. ವಿಮಾನದಾಳಿಯ ಅಪಾಯದ ದೆಸೆಯಿಂದ, ನಮ್ಮ ನಗರರಕ್ಷಣೆಯಲ್ಲಿರುವ ನ್ಯೂನತೆಗಳೆಲ್ಲಾ ತೋರಿಬಂದು, ಅವುಗಳನ್ನು ಸರಿಪಡಿಸಿಕೊಳ್ಳುವ ಯೋಚನೆ ಹುಟ್ಟಿದೆ. ನಮ್ಮ ನಗರಗಳು ಹೇಗೆಂದರೆ ಹಾಗೆ ಬೆಳವಣಿಗೆ ಹೊಂದಲು ಅವಕಾಶವಾಯಿತು. ಅವು ಯಾವ ರೀತಿ ಅಭ್ಯುದಯವಾಗಬೇಕೆಂಬುದಕ್ಕೆ ಹೆಚ್ಚು ಗಮನ ಕೊಟ್ಟಿಲ್ಲ. ನಗರಗಳು ಯಾವ ವ್ಯವಸ್ಥೆಯಲ್ಲಿ ಹೇಗೆ ಬೆಳವಣಿಗೆಯಾಗಬೇಕೆಂಬುದನ್ನು ಜಾಗರೂಕತೆಯಿಂದ ನಿರ್ಧರಿಸಬೇಕೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಯಾವಾಗ ಶತ್ರುಗಳ ವಿಮಾನದಾಳಿಯು ನಡೆಯುವುದೋ ಎಂಬ ತಲ್ಲಣ ಹುಟ್ಟಿದೆ. ಇದರ ದೆಸೆಯಿಂದಲೇ ನಗರಗಳ ಮೇಲ್ಪಟ್ಟಿಗೂ, ನಾಗರಿಕ ಜೀವನದ ಸುಧಾರಣೆಗೂ ಕಾರಣವಾದೀತೆಂದು ಖಂಡಿತ ಹಾರೈಸಬಹುದಾಗಿದೆ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೌಲ್ಯ
ಭಸ್ಮಗಳು		
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ, ಗಢವಾಲ್ ಯು.ಪಿ.

ಸಿದ್ಧಾಂತಶಿಖಾಮಣಿ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ

ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತವಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೩ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯರೆಂಬ** ಆಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮ ವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿ ನೋಡಿದವರಿಗೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿಸ್ತುಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M F Printings ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವೆನಿಸಿಕೊಂಡ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು. ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಖಂಡಿತ ಹೇಳಬಹುದಾಗಿದೆ. ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು. ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣನಾಥನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! **ಬೆಲೆ ೨ ರೂಪಾಯಿ.**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖರಪ್ರಾಯದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿಂಗಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮೀಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಪಟ್ಟ ಸಿಂಹಾಸನಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದೇಕಡೆಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೨—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದ) ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೨—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ. ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು, ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ.—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[48] ಪೋ. ಬಾ ೫೧೦. ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೪ನೆಯ ಆವೃತ್ತಿ)	೧ ಆಣೆ
ಶಕ್ತ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೬ ಆಣೆ
ಶ್ರೀಪಶುಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶಕ್ತ್ಯಾಶಾಸ್ತ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕದು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿ ಅವರ ಭಾಷಣಗಳು (ಕನ್ನಡ)	೮ ಆಣೆ
ಸದ್ಬೋಧರತ್ನಾವಳಿ	೯ ಆಣೆ
ವೈದಿಕಶಿವಪೂಜಾವಿಧಿ (ವೈದಿಕನಿತ್ಯಕರ್ಮ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಸೋಮನಾಥಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹಾತ್ಮರ ಫೋಟೋಗಳ ಸಹಿತ)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕೆ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ ಕಾರಣಾಗಮ - ಮಕುಟಾಗಮ- ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩.೨೩. ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As.
लिङ्गधारणचन्द्रिका (संस्कृत)	१ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
[illegible]	४ आ.
[illegible] (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ.. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible]

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಳದವರಿಗೆ ೧ ರೂ. ೧೨ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ನೇ ಮೇ ೧೯೪೨ [ಸಂಚಿಕೆ ೫

ರಷ್ಯದಲ್ಲಿ ನೆಪೋಲಿಯನ್ನನಿಗಾದ ಅವಸ್ಥೆಯೇ ಹಿಟ್ಲರನಿಗೂ ಆಗುವದು.

ಹಿಟ್ಲರನು ರಷ್ಯಕ್ಕೆ ವಿಪತ್ತನ್ನು ತಂದೊಡ್ಡಿದ್ದಾನಷ್ಟೆ! ತನು ಮಾಸ್ಕೋ ನಗರವನ್ನು ಮುಟ್ಟುವನೇ ಎಂಬುದು ನುಮಾನಕರವಾಗಿದೆ ಒಂದುವೇಳೆ ಹಿಟ್ಲರನು ಮಾಸ್ಕೋವನ್ನು ಮುಟ್ಟಿದರೆ ೧೩೦ ವರ್ಷಗಳ ಹಿಂದೆ ನೆಪೋಲಿಯನ್ನನು ಕಂಡ ಚಿತ್ರವನ್ನೇ ಅವನೂ ಕಾಣುವನು

“ನನ್ನ ಕೈಗೆ ಬೀಗದಕೈಗಳನ್ನು ಒಪ್ಪಿಸಲು ನಗರದ ಧ್ಯಕ್ಷರೇಕೆ ಬಂದಿಲ್ಲ?’ ಎಂಬುದಾಗಿ ನೆಪೋಲಿಯನ್ನನು ಮಾಸ್ಕೋ ದ್ವಾರದಲ್ಲಿ ನಿಂತು ಕೇಳಿದನು. ಯುರೋ ನ ಇತರ ರಾಜಧಾನಿಗಳಲ್ಲಿ ದೊರೆತ ಸುಸ್ವಾಗತವೇ ಮಾಸ್ಕೋದಲ್ಲಿಯೂ ದೊರೆಯುವುದೆಂದು ಆತನು ಭಾವಿ ದ್ದನು ಮೆಮೆಲ್‌ನಿಂದ ಬಹಳ ದೂರದವರೆಗೆ ನೆಪೋ ಯನ್ನನು ರಷ್ಯನ್ ಸೇನೆಗಳನ್ನು ಅಟ್ಟಿಸಿಕೊಂಡು ಂದಿದ್ದನು ಆದರೆ ರಷ್ಯನ್ ಯೋಧರು ಆತನ ಕಣ್ಣಿಗೆ ಣ್ಣೆರಚಿ ಪರಾರಿಯಾಗುತ್ತಿದ್ದರು ಸ್ಮೊಲೆನ್‌ಸ್ಕ ನಗರ ಧಗಧಗನೆ ಉರಿಯುತ್ತಿದ್ದರೂ ಆತನಿಗೆ ರಷ್ಯನರ ‘ಭೂದಾಹನೀತಿ’ ಸ್ಪಷ್ಟವಾಗಲಿಲ್ಲ ಮಾಸ್ಕೋದಲ್ಲಿ ಲ್ಪಕಾಲ ಇದ್ದು ಈ ನೀತಿಯ ಭಯಂಕರ ಅನುಭವ ನ್ನು ಪಡೆಯುವುದು ಆತನ ಹಣೆಯಲ್ಲಿ ಬರೆದಿತ್ತು. ಪೋಲಿಯನ್ನನೊಮ್ಮೆ “ನಾನು ಕ್ರೆಮ್‌ಲಿನ್ನಿನಲ್ಲಿದ್ದಾಗ ಮೇಲಿನಿಂದ ಒಂದು ಗುಂಡು ಬಂದು ನನ್ನ ಜೀವತೆಗೆದಿ ದ್ದರೆ ಚೆನ್ನಾಗಿತ್ತು. ಇಲ್ಲಿಯವರೆಗೆ ನನ್ನ ಕೀರ್ತಿಯು ಕುಂದಿರಲಿಲ್ಲ. ನಾನು ನಿಶ್ಚಯವಾಗಿಯೂ ಮಾಸ್ಕೋ ಲ್ಲಿ ಸಾಯಬೇಕಾಗಿತ್ತು” ಎಂದು ನುಡಿದುದರಲ್ಲಿ ಶ್ಚರ್ಯವೇನು ?

ನೆಪೋಲಿಯನ್ನನು ೧೮೧೨ನೇ ಸೆಪ್ಟೆಂಬರ್ ೧೪ ಯ ತಾ॥ ದಿನ ಮಾಸ್ಕೋ ನಗರವನ್ನು ಹೊಕ್ಕನು ಯೂರೋಪಿಗೆ ಮುಕ್ತಿಯನ್ನು ದೊರಕಿಸಲು ಹೊರಟಿದ್ದ ತನ ಪ್ರಚಂಡ ಸೇನೆಯು ಆಗಲೇ ಕರಗುತ್ತ ಬಂ ತ್ತು. ರಷ್ಯ ರೈತರು ಈ ಉದ್ಧಾರಕರಿಗೆ ಚಿತ್ರಹಿಂಸೆ ಕೊಡುತ್ತಿದ್ದರು ಯಾವ ಪದಾರ್ಥವೂ ಅವರಿಗೆ ಸಿಗ ದಂತೆ ಮಾಡಿದ್ದರು ಆದರೆ ಮಾಸ್ಕೋ ಪ್ರವೇಶಿಸುವೆ ನೆಂಬ ಹುರುಪು ನೆಪೋಲಿಯನ್ನನ ಸೇನೆಯನ್ನು ಹುರಿ ದುಂಬಿಸಿತ್ತು ಆದರೆ ಮಾಸ್ಕೋ ನಗರದ ಗವರ್ನರ್‌ರವರು ಮಾಸ್ಕೋನಗರದಲ್ಲಿ ದಗ್ಧಭೂತಲನೀತಿಯನ್ನು ಚರಣೆಗೆ ತಂದಿದ್ದರು. ಉಪಯುಕ್ತವಾದ ಎಲ್ಲ ವಸ್ತುಗಳನ್ನೂ ಅಲ್ಲಿಂದ ಸಾಗಿಸಲಾಗಿತ್ತು. “ನೆಪೋಲಿಯನ್ನನಿಗೆ ಲ್ಲಿ ಏನೂ ಸಿಗುವುದಿಲ್ಲ ಕಲ್ಲುಮಣ್ಣುಗಳನ್ನು ಮಾತ್ರ ಟ್ಟಿದ್ದೇವೆ” ಎಂಬುದಾಗಿ ಗವರ್ನರರು ಸಾರಿದರು

ರಷ್ಯನರು ಮಾಸ್ಕೋ ನಗರದ ಪೂರ್ವಭಾಗದಿಂದ ಂದಕ್ಕೆ ಸರಿದ ಮೇಲೆ ನೆಪೋಲಿಯನ್ನನು ತನ್ನ ಸೇನೆಯೊಂದಿಗೆ ಸ್ಮಶಾನಸದೃಶವಾದ ಬೀದಿಗಳಲ್ಲಿ ಹಾದು ಮ್‌ಲಿನ್‌ಗೆ ಹೋದನು ಆದಿನ ರಾತ್ರಿ ನೆಪೋಲಿಯನ್ನನಿಗೆ ನಿದ್ದೆಯೇ ಬರಲಿಲ್ಲ ಬೆಳಗಾಗುವ ವೇಳೆಗೆ ನಗರದಲ್ಲಿ ಎದ್ದ ಬೆಂಕಿಯು ಆತನ ಕೋಣೆಯ ಕಿಟಕಿಗಳನ್ನು ಬೆಳಗಿತು

ನಗರದಲ್ಲೆಲ್ಲ ಬೆಂಕಿಯು ಧಗಧಗನೆ ಉರಿಯುತ್ತಿದೆಯೆಂದು ನೆಪೋಲಿಯನ್ನನಿಗೆ ಸುದ್ದಿ ಬಂತು ಕ್ರೆಮ್‌ಲಿನ್ ಭವನದಲ್ಲಿ ಸ್ಫೋಟಕ ವಸ್ತುಗಳನ್ನು ರಷ್ಯನರು ಇಟ್ಟಿದ್ದಾರೆಂದೂ ಅವು ಯಾವ ಕ್ಷಣದಲ್ಲಿ ಬೇಕಾದರೂ ಸಿಡಿಯಬಹುದೆಂದೂ ಸುದ್ದಿ ಹರಡಿತು ಆದರೂ ನೆಪೋಲಿಯನ್ನನು ಎದೆಗೆಡಲಿಲ್ಲ ಕಡೆಗೆ ಆತನು ಕ್ರೆಮ್‌ಲಿನ್ ಬಿಟ್ಟು ಮಾಸ್ಕೋ ನಗರದಲ್ಲಿ ಬೇರೆ ಸುರಕ್ಷಿತವಾದ ಸ್ಥಳಕ್ಕೆ ಹೋದನು. ಮಾಸ್ಕೋ ಪಕ್ಕದಲ್ಲಿದ್ದ ಸಣ್ಣ ಅರಮನೆಯಲ್ಲಿ ನೆಪೋಲಿಯನ್ನನು ಕುಳಿತು, ಬೆಂಕಿಯು ಆರುವುದನ್ನು ಎದುರು ನೋಡುತ್ತಿದ್ದನು ೬೪ ದಿನಗಳ ಕಾಲ ಏಕಪ್ರಕಾರವಾಗಿ ಬೆಂಕಿಯು ಉರಿಯಿತು

ಕಟ್ಟಕಡೆಗೆ ಆತನು ಮಾಸ್ಕೋ ಬಿಡಬೇಕೆಂದು ತನ್ನ ಸೇನೆಗೆ ಆಜ್ಞೆಯಿತ್ತನು ಕ್ರೆಮ್‌ಲಿನ್ ಭವನವನ್ನು ಧ್ವಂಸಮಾಡಬೇಕೆಂದು ಆಜ್ಞೆಮಾಡಿದನು ಸಿಡಿಮದ್ದುಗಳ ಸ್ಫೋಟನವನ್ನು ಆತನು ಮಾಸ್ಕೋದಿಂದ ಹಲವು ಮೈಲಿಗಳ ದೂರದಲ್ಲಿದ್ದು ಕೇಳಲು ಕಾತುರನಾಗಿದ್ದನು ಆದರೆ ಅದೇನು ಕಾರಣವೋ ಸಿಡಿಮದ್ದು ಸಿಡಿಯಲೇ ಇಲ್ಲ ನೆಪೋಲಿಯನ್ನನು ಜಾರ್ ಪ್ರಭುತ್ವಕ್ಕೆ ಕಾಗದ ಬರೆದ. “ಶಾಂತಿ ಸಂಧಾನಕ್ಕೆ ಬನ್ನಿ” ಎಂದನು ಅದಕ್ಕೆ ಅಲೆಗ್ಝಾಂಡರ್‌ರವರು ಉತ್ತರವೀಯುತ್ತ “ರಷ್ಯನರಿಗೆ ಈಗತಾನೇ ಯುದ್ಧವಾರಂಭವಾಗಿದೆ” ಎಂದರು

ಅನಂತರ ನೆಪೋಲಿಯನ್ನನ ಮಹಾಸೇನೆ ಹಿಂದಕ್ಕೆ ಹೊರಟಿತು ಹಸಿವಿನಿಂದ ಅನೇಕರು ಸತ್ತರು ನೆಪೋಲಿಯನ್ನನು ಸ್ಮೊಲೆನ್‌ಸ್ಕ ತಲಪಿದಮೇಲೆ ರಷ್ಯನರು ಮಾಸ್ಕೋ ಹೊಕ್ಕರು. 2,60,000 ಜನರಿದ್ದ ಮಾಸ್ಕೋದಲ್ಲಿ ೩೦೦೦ ಜನರು ಮಾತ್ರ ಹೊಟ್ಟೆಗಿಲ್ಲದೆ ನರಳುತ್ತ ಕಾಲಹಾಕುತ್ತಿದ್ದರು ಆದರೆ ರಷ್ಯನರು ಹೆದರಲಿಲ್ಲ ಮಾಸ್ಕೋನಗರವನ್ನು ಮತ್ತೆ ಕಟ್ಟಿದರು ಇದೇ ಅವಸ್ಥೆಯು ಹಿಟ್ಲರನಿಗೂ ಆಗಬಹುದಾಗಿದೆ

॥ ಶ್ರೀಗುರುಭ್ಯೋನಮಃ ॥

ನೂತನ ನಂದೀಶ್ವರ ಸ್ಥಾಪನೆಯೂ, ದಾರುಕಾಚಾರ್ಯರ ಜಯಂತಿಯೂ.

ನವಲಗುಂದ ತಾ॥ ನರಗುಂದಪೇಟಾ ಪೈಕಿ ಬನಟ್ಟಿ ಗ್ರಾಮದ ಸಮಸ್ತ ದೈವದವರು ವೈಶಾಖ ಶು॥ ೫ ಸೋಮವಾರ ನಂದೀಶ್ವರ ಪ್ರತಿಷ್ಠಾಕಾರ್ಯವನ್ನು ಶ್ರೀ ಕೊಣ್ಣೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮುರುಗೇಂದ್ರ ಶಿವಾಚಾರ್ಯಸ್ವಾಮಿಗಳವರ ಅಮೃತಹಸ್ತದಿಂದ ನೆರವೇರಿಸಿದರು ನರಗುಂದ ಪಾಠಶಾಲಾಧ್ಯಾಪಕರಾದ ವೇ॥ ಗೌರೀಶಂಕರಶಾಸ್ತ್ರಿಗಳು ಹಿರೇಮಠ ಕೊಂಗವಾಡ ಇವರು ತಮ್ಮ ಪಾಠಶಾಲೆಯ ವಿದ್ಯಾರ್ಥಿಗಳೊಂದಿಗೆ ಈ ಕಾರ್ಯವನ್ನು ವಿಧ್ಯುಕ್ತವಾಗಿ ನೆರವೇರಿಸಿದರು. ಅಂದು ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಯುದ್ದ ಮೂಲಕ ಸದರಿ ಸ್ವಾಮಿಗಳವರ ಹೇಳಿಕೆಯ ಮೇರೆಗೆ ಆಚಾರ್ಯರ ಭಾವಚಿತ್ರವನ್ನು ಉನ್ನತಪೀಠದಲ್ಲಿ ಅಲಂಕರಿಸಿ ಷೋಡಶೋಪಚಾರದಿಂದ ಪೂಜೆಯು ಮಾಡಲ್ಪಟ್ಟಿತು ಅನಂತರ ಸದರಿ ಸ್ವಾಮಿಗಳವರ ಪಾದಪೂಜೆಯಾಗಿ ಸರ್ವರೂ ಪಾದೋದಕವನ್ನು ಸ್ವೀಕರಿಸಿದರು ಬಳಿಕ ಗಣಾರಾಧನೆಯು ನೆರವೇರಿತು ೫ ಘಂಟೆಗೆ ಆಚಾರ್ಯರ ಭಾವಚಿತ್ರವನ್ನು ಅನೇಕ ವಾದ್ಯವೈಭವದೊಂದಿಗೆ ಊರೊಳಗೆ ಮೆರೆಯಿಸಲಾಯಿತು. ಆಮೇಲೆ ನೂತನ ನಂದೀಶ್ವರ ಪ್ರೀತ್ಯರ್ಥವಾಗಿ ರಾತ್ರಿ ೮ ಘಂಟೆಗೆ ತಮ್ಮ ತಮ್ಮ ಎತ್ತುಗಳನ್ನು ಶೃಂಗರಿಸಿ ಊರಲ್ಲಿ ಒಳ್ಳೇ ಆನಂದದಿಂದ ಮೆರೆಯಿಸಿದರು ಈ ಮಹಾ ಸಮಾರಂಭದಲ್ಲಿ ಧರ್ಮಜಾಗೃತಿಗಾಗಿ ಜನ್ಮವೆತ್ತಿರುವ ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣೆಕ್ಕಾಗಿ ೨ ರೂಪಾಯಿಗಳು ತೆಗೆಯಿಸಲ್ಪಟ್ಟವು ಶ್ರೀಜಗದ್ಗುರು ಪಂಚಾಚಾರ್ಯರು ಬನಟ್ಟಿಗ್ರಾಮದ ಸಮಸ್ತ ದೈವದವರಿಗೆ ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥನೆ

ಸಿ ಬಿ ಅಂಗಡಿ, ಶಾಲಾಮಾಸ್ತರ, ಬನಟ್ಟಿ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಮಾಹೇಶ್ವರದೀಕ್ಷಾ ವಿವಾಹಮಹೋತ್ಸವ

ಅನಂತಪುರ ಜಿ॥ ತಾಡಪತ್ರಿ ಗ್ರಾಮದ ಕಂಬಾಳಿಮಠದ ಚನ್ನಮಲ್ಲಯ್ಯನವರ ಮಠದಲ್ಲಿ ವೈಶಾಖ ಶು॥ ೫ ದಿವಸ ಚನ್ನಮಲ್ಲಯ್ಯನವರ ಪುತ್ರ ಚಿ॥ ಮಲ್ಲಿಕಾರ್ಜುನಯ್ಯನಿಗೂ ಬಳ್ಳಾರಿ ತಾ॥ ಮೋಕಗ್ರಾಮದ ಮದ್ದಿಕೇರಿ ಹಿರೇಮಠದ ವೀರಯ್ಯನವರ ಮಗ ಶಿವಾನಂದಶರ್ಮನಿಗೂ ಅಜುಬಾಜು ಗ್ರಾಮಗಳಿಂದ ಬಂದ ಒಂಭತ್ತು ವಟುಗಳಿಗೂ ಕೊಟ್ಟಲಕೋಟೆ ಕಂಬಾಳಿಮಠದ ಶ್ರೀಪಟ್ಟದಸ್ವಾಮಿಗಳವರು, ಮೋಕೆ ಹಿರೇಮಠದ ಪಟ್ಟದಸ್ವಾಮಿಗಳವರು, ಪಾಲ್ತೂರು ಕಲ್ಲುಹೊಳೆಮಠದ ಚರಮೂರ್ತಿಸ್ವಾಮಿಗಳವರು ಇವರ ನೇತೃತ್ವದಲ್ಲಿಯೂ ಬಳ್ಳಾರಿಯಲ್ಲಿರುವ ಶಿರೋಳ ಶ್ರೀಪಡಕ್ಷರಶಾಸ್ತ್ರಿಗಳವರ ಪೌರೋಹಿತ್ಯದಲ್ಲಿಯೂ ಮಾಹೇಶ್ವರ ದೀಕ್ಷೆಯು ನೆರವೇರಿತು ಇದೇ ಮುಹೂರ್ತದಲ್ಲಿ ಚನ್ನಮಲ್ಲಯ್ಯನವರ ಜ್ಯೇಷ್ಠ ಪುತ್ರಿ ಸೌ॥ ಸರ್ವಮಂಗಳಮ್ಮನಿಗೂ ಮೋಕೆ ಮದ್ದಿಕೇರಿ ಚರಂತಿ ಹಿರೇಮಠದ ವೀರಯ್ಯನವರ ಮಗ ಪಂಚಾಕ್ಷರಿಸ್ವಾಮಿಗೂ ಸದರಿ ಕಂಬಾಳಿಮಠದ ದೊಡ್ಡಮಲ್ಲಯ್ಯನವರ ಪುತ್ರಿ ಸೌ॥ ನಾಗಮಲ್ಲಮ್ಮನಿಗೂ ಸಂಡ್ಯಾಲ ತಾ॥ ಪೋಲೂರುಗ್ರಾಮದ ಮಠದ ಬಸಯ್ಯನವರ ಪುತ್ರ ಚಿ॥ ನಂದಯ್ಯನಿಗೂ ವಿವಾಹಗಳು ನೆರವೇರಿದವು. ವಟುಗಳಿಗೂ ನೂತನ ದಂಪತಿಗಳಿಗೂ ಶ್ರೀಜಗದ್ಗುರು ಉಜ್ಜಯಿನೀ, ಪರ್ವತ ಪೀಠಾಧಿಪತಿಗಳು ಫಲಮಂತ್ರಾಕ್ಷತೆಗಳೊಂದಿಗೆ ನೂತನಾಂಬರಗಳನ್ನು ತಮ್ಮ ಅಧಿಕಾರಿಗಳಿಂದ ದಯಪಾಲಿಸಿದ್ದರು

ಮೋಕೆ ಹಿರೇಮಠದ ಶಿವಪಂಚಾಕ್ಷರಯ್ಯ.

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ॥

ಪರೋಪಕಾರ

(ಲೇ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ,ಕೊಣ್ಣೂರು.)

ಪರೋಪಕಾರವೆಂದರೆ ಎರಡನೆಯವರಿಗೆ ಉಪಕಾರ ಮಾಡುವದೆಂದರ್ಥವು.

ಈ ಜಗತ್ತಿನೊಳಗಿನ ಮಾನವರ ನಡತೆಗಳು ಬೇರೆ ಬೇರೆ ಉಂಟು. ಆ ನಡತೆಗಳಿಂದ ಅವರವರ ಯೋಗ್ಯತೆಗಳಾದರೂ ಬೇರೆ ಬೇರೆಯಾಗಿವೆ. ಹೇಗೆಂದರೆ —— ತಮ್ಮ ಸ್ವಾರ್ಥವು ಸಾಧಿಸಲಿ ಸಾಧಿಸದಿರಲಿ, ತಮಗೆ ಲಾಭವಾಗಲಿ ಲುಕ್ಸಾನವಾಗಲಿ, ತಾವು ಮುಳುಗಲಿ ತೇಲಲಿ, ಅದನ್ನು ಎಣಿಸವೆ ಎರಡನೆಯವರಿಗೆ ಒಳಿತಾಗುವ ಕೆಲಸವನ್ನೇ ಮನಸ್ಸುಗೊಟ್ಟು ಮಾಡುವವರು ಉತ್ತಮ ತರಗತಿಯ ಮನುಷ್ಯರು. ಇಂಥವರನ್ನು ದೇವರಿಗೆ ಸಮಾನರೆಂದು ತಿಳಿಯತಕ್ಕದ್ದು. ಕೆಲವರು ಸ್ವಲ್ಪವರೂ ತಮಗೆ ಕೇಡಾಗದೆ ಎರಡನೆಯವರಿಗೆ ತಮ್ಮ ಕೈಯಿಂದ ಒಳಿತಾಗುವಹಾಗಿದ್ದರೆ ಆ ಕೆಲಸಕ್ಕೆ ತೊಡಗುತ್ತಾರೆ; ಇಲ್ಲವೆ ತಮಗೆ ಏನಾದರೂ ಲಾಭವಾಗುವಹಾಗಿದ್ದರೆ ಪರಹಿತದ ಕೆಲಸಕ್ಕೆ ತೊಡಗುತ್ತಾರೆ; ಇಲ್ಲದಿದ್ದರೆ ಇಲ್ಲ. ಇಂಥ ಸ್ವಭಾವವುಳ್ಳವರು ಮಧ್ಯಮ ತರಗತಿಯ ಮನುಷ್ಯರು. ಇವರನ್ನು ಮಾನವ ವರ್ಗಕ್ಕೆ ಸೇರಿಸಬಹುದು. ಕೆಲವರು ಎರಡನೆಯವರ ಸ್ವಾರ್ಥ ಮುಳುಗಿದಾಗ್ಯೂ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುತ್ತಾರೆ; ಇಲ್ಲವೇ ಎರಡನೆಯವರಿಗೆ ಬೇಕಂತ ಕೇಡು ಉಂಟುಮಾಡಿ ತಮ್ಮ ಒಳಿತವನ್ನು ಮಾಡಿಕೊಳ್ಳುತ್ತಾರೆ. ಇವರು ಕನಿಷ್ಠ ತರಗತಿಯ ಮನುಷ್ಯರು. ಇಂಥವರನ್ನು ರಾಕ್ಷಸರೊಳಗೆ ಎಣಿಸತಕ್ಕದ್ದು. ಈ ಮೂರು ತರದ ಸ್ವಭಾವಗಳುಳ್ಳ ಮನುಷ್ಯರ ಹೊರತು ಬೇರೆ ತರದ ಸ್ವಭಾವವುಳ್ಳವರು ಕೆಲವರಿರುತ್ತಾರೆ. ಅವರಿಗೆ ಯಾವ ಹೋಲಿಕೆಯನ್ನು ಕೊಡಬೇಕೆಂಬುದು ತಿಳಿಯುವದಿಲ್ಲ.

ಪರೋಪಕಾರಿಗಳು ಲೋಕದಲ್ಲಿ ಮಾನ್ಯರೂ, ಶಿವಪ್ರೀತಿಗೆ ಪಾತ್ರರೂ ಆಗುತ್ತಾರಲ್ಲದೆ, ಇಂಥವರ ಯೋಗಕ್ಷೇಮವನ್ನು ಪರಮಾತ್ಮನೇ ನೋಡಿಕೊಳ್ಳುವನು. ತಮ್ಮಲ್ಲಿ ಪರೋಪಕಾರಮಾಡುವ ಮನಸ್ಸು ಇಲ್ಲದಿದ್ದರೆ ಎರಡನೆಯವರಿಗೆ ಕೆಡುಕುಮಾಡುವುದರ ಬದಲು ಒಳಿತನ್ನು ಅಪೇಕ್ಷಿಸುವುದು ಇಲ್ಲವೇ ಸುಮ್ಮನಿರುವದು ಮೇಲು. ಅಜ್ಞಾನದಿಂದಾಗಲಿ, ಸಿಟ್ಟಿನಿಂದಾಗಲಿ, ಶಿವನ ಕಣ್ಣಿಗೆ ಮಣ್ಣುಹಾಕಲಿ ಎಂದು ತೂರಿದರೆ ತಮ್ಮ ಕಣ್ಣನ್ನು ಕಳೆದುಕೊಳ್ಳುವಂತೆಯೂ, ಚೆಂಡನ್ನು ತನ್ನೆದುರಿನ ಗೋಡೆಗೆ ಪುಟಿಸಿದರೆ ತಿರುಗಿ ತನ್ನ ಕಡೆಗೆ ಬರುವಂತೆಯೂ, ಕಡೆಗೆ ತಾವೇ ಕಷ್ಟನಷ್ಟಗಳನ್ನು ಅನುಭವಿಸುವರಲ್ಲದೆ ಪರಮಾತ್ಮನ ಕೃಪೆಗೆ ದೂರರಾಗಿ ಲೋಕದಲ್ಲಿ ನಿಂದಿತರಾಗುವರು. ತಮ್ಮಲ್ಲಿ ಇಲ್ಲದ ನಡತೆಯು ಹೇಗೆ ಬಂದೀತು? ಇದ್ದ ನಡತೆಯು ಹ್ಯಾಗೆ ಬದಲಾದೀತು? ಎಂದು ಯಾರಾದರೂ ಶಂಕಿಸಬಹುದು. ಅವರಿಗೆ ಉತ್ತರವೇನೆಂದರೆ:—ಅಭ್ಯಾಸದಿಂದ ಸ್ವಭಾವವು ಬದಲಾಗುತ್ತದಲ್ಲದೆ ತನ್ನಿಂದ ತಾನೇ ಬದಲಾಗುವದಿಲ್ಲ. ಅಭ್ಯಾಸದ ಯೋಗದಿಂದ ಒಳ್ಳೇ ನಡತೆಯು ಕೆಡಕಾಗುತ್ತದೆ. ಕೆಡಕು ನಡತೆಯು ಒಳ್ಳೇದಾಗುತ್ತದೆ. ಇದಕ್ಕೆ ದೃಷ್ಟಾಂತವೇನೆಂದರೆ:—ಎಳೇಗಿಡವು ಮಣಿಸಿದ ಹಾಗೆ ಮಣಿಯುತ್ತದೆ. ಬಿದಿರು ನೆಟ್ಟಗೆ ಬೆಳೆಯುವ ಸ್ವಭಾವವುಳ್ಳದ್ದಾದರೂ ಒಂದು ತರದ ಕೊಳವೆಯೊಳಗೆ ಹಾಕಿ ಬೇಕಾದಹಾಗೆ ಅದನ್ನು ಮಣಿಸಬಹುದು. ಔಷಧದ ಯೋಗದಿಂದ ಹೂವಿನ ಬಣ್ಣಗಳು-ಬೇರೆ ಬೇರೆಯಾಗುತ್ತವೆ ಮತ್ತು ಹಣ್ಣುಗಳ ರುಚಿಯು ಬದಲಾಗುವದು. (Beat the iron when it is hot) ಈ ಪ್ರಕಾರ ಇಂಗ್ಲೀಷ್ ವಾಕ್ಯವು ಸಹ ಬೋಧಿಸುತ್ತದೆ. 'ಸಂಸರ್ಗಜಾದೋಷಗುಣಾ ಭವಂತಿ' ಅಂದರೆ ಸಂಸರ್ಗದಿಂದ ಗುಣದೋಷಗಳು ಬದಲಾಗುತ್ತವೆ ಎಂದು ಆರ್ಯೋಕ್ತಿಯಿರುವುದರಿಂದ ಯಾವಾಗಲೂ ಸತ್ಪುರುಷರ ಸಹವಾಸಮಾಡಿ ಅವರ ಉಪದೇಶವನ್ನು ಕೇಳಿಕೊಂಡು ಉತ್ತಮ ನಡತೆಯು ಉಂಟಾಗುವಂತೆ ಮಾಡಿಕೊಳ್ಳುವದು ಪ್ರತಿಯೊಬ್ಬ ಸ್ತ್ರೀ-ಪುರುಷರ ಪ್ರಥಮ ಕರ್ತವ್ಯವಾಗಿದೆ.

ಎರಡನೆಯವರಿಗೆ ಒಳಿತುಯಾಕೆಮಾಡಬೇಕು? ಕೆಡಕುಯಾಕೆ ಮಾಡಬಾರದು? ಎಂದು ಯಾರಾದರೂ ಅಂದರೆ ತಮ್ಮೊಳಗೆ ತಾವೇ ಈ ಮಾತು ಅನುಭವ ಮಾಡಿ ನೋಡಿಕೊಳ್ಳಬೇಕು. ಯಾವನಾದರೂ ತನಗೆ ಒಳಿತು ಮಾಡಿದರೆ ಅದು ಎಷ್ಟು ಹಿತವಾಗಿ ತೋರುತ್ತದೆ? ಕಷ್ಟಕಾಲದಲ್ಲಿ ಯಾವನಾದರೂ ನೆರವಾದರೆ ಅವನು ತನಗೆ ಎಷ್ಟು ದೊಡ್ಡವನಾಗಿ ತೋರುತ್ತಾನೆ? ತಾನು ಅಂಥವನ ಉಪಕಾರ ನೆನೆಸಿ ಅವನಿಗೆ ಎಷ್ಟು ದೊಡ್ಡಸ್ಥನವನ್ನು ಕೊಡಬೇಕಾಗುತ್ತದೆ? ಇದರಂತೆ ತಾನು ಪರರಿಗೆ ಒಳಿತುಮಾಡಿದರೆ ಅವರಿಗೂ ಆಗುತ್ತದೆ. ಹಾಗೆಯೇ ಯಾವನಾದರೂ ತನಗೆ ಕೆಡಕುಮಾಡಿದರೆ ತನಗೆ ಕೆಡಕು ತೋರುವದೂ, ದುಃಖವಾಗುವದೂ, ತಾನು ಅವನ ಮೇಲೆ ತಪ್ಪು ಹೊರಿಸುವುದೂ, ಎಲ್ಲರಿಗೆ ತಿಳಿದದ್ದೇ ಸರಿ. "ತನ್ನ ಸುಖದುಃಖದಂತೆ ಅನ್ಯರನ್ನು ನೋಡಿದರೆ ಪನ್ನಗಧರ ತಾನೆ ನಿಜಶರಣ" ಎಂದು ಮಹನೀಯರು ಬೋಧಿಸಿರುತ್ತಾರೆ. ಆದ್ದರಿಂದ ತನ್ನಂತೆ ಅನ್ಯರನ್ನು ಕಾಣಬೇಕು. ತನಗಾದ ಹಾಗೆಯೇ ಪರರಿಗೆ ಆಗುವದು. ಜನರು ಯಾವ ರೀತಿಯಿಂದ ತನ್ನ ಕೂಡ ನಡೆಯಬೇಕೆಂದು ತಾನು ಬಯಸುತ್ತಾನೆಯೋ ಅದರಂತೆಯೇ ತಾನೂ ಅವರ ಕೂಡ ನಡೆಯಬೇಕು. ಅಣ್ಣತಮ್ಮಂದಿರು ಹಿತದಿಂದಲೂ ಒಬ್ಬರಿಗೊಬ್ಬರು ನೆರವಾಗಿಯೂ ಇದ್ದುದಾದರೆ ಅವರು ತಂದೆಗೆ ಬಹಳ ಪ್ರೀತ್ಯಾಸ್ಪದರಾಗುತ್ತಾರೆ. ಹೀಗಿರದೆ ತಮ್ಮ ತಮ್ಮೊಳಗೆ ಜಗಳಾಡಹತ್ತಿದರೆ ತಂದೆಯು ಅವರಿಗೆ ಬೇಸರ ಮಾಡುತ್ತಾನೆ. ಇದರಂತೆ ಮನುಷ್ಯರೆಲ್ಲರೂ ಪರಮೇಶ್ವರನ ಮಕ್ಕಳು ಆದುದರಿಂದ ಎಲ್ಲರೂ ಒಬ್ಬರಿಗೊಬ್ಬರು ನೆರವಾಗಿ ಹಿತದಿಂದ ನಡೆಯಬೇಕು. ಒಬ್ಬರ ಕೂಡೊಬ್ಬರು ಅನ್ಯಾಯವಾಗಿ ಜಗಳವಾಡಬಾರದು. ಕೇಡು ಬಗೆಯಬಾರದು; ತಮ್ಮ ಕೈಯಿಂದಾದಷ್ಟು ಒಳಿತನ್ನೇ ಮಾಡುತ್ತಿರಬೇಕು. ಹೀಗೆ ನಡೆದರೆ ದೇವರು ಮೆಚ್ಚುವನು; ನಡೆಯದಿದ್ದರೆ ಸಿಟ್ಟಾಗುವನು. ಎಲ್ಲರ ಎದುರಿಗೆ ಪರೋಪಕಾರವನ್ನೇ ಮಾಡುತ್ತಿರುವುದನ್ನು ನೋಡಿ ಈತನು ಆಸ್ತಿಕ ಮನುಷ್ಯನೆಂದು ಊಹಿಸಬಹುದು. ಏಕೆಂದರೆ ಆಸ್ತಿಕತ್ವವೆಂಬುದು ಕೇವಲ ಆತ್ಮನಿಷ್ಠ ಧರ್ಮವೇ ಹೊರತು ಕಣ್ಣಿಗೆ ಗೋಚರವಾಗುವ ವಸ್ತುವಲ್ಲ. ಆದುದರಿಂದ ಆಸ್ತಿಕತ್ವದ ನಿಶ್ಚಯಕ್ಕೆ ಪರೋಪಕಾರವೇ ಪ್ರತ್ಯಕ್ಷ ಹೇತುವಾದುದರಿಂದ ಮಾನವಜನ್ಮವನ್ನು ಧರಿಸಿದವನು ಪರೋಪಕಾರನಿರತನಾಗಿ ಸಚ್ಚರಿತ್ರವುಳ್ಳವನಾಗಿರುವುದೊಂದು ಮನುಷ್ಯಸಾಮಾನ್ಯ ಧರ್ಮವೇ ಹೊರತು ಕಲಿಯಬೇಕಾದ ಧರ್ಮವಲ್ಲ. ವೃಕ್ಷಗಳು ಪರೋಪಕಾರಕ್ಕಾಗಿ ಹಣ್ಣುಬಿಡುವಂತೆಯೂ, ನದಿಗಳು ಪರೋಪಕಾರಕ್ಕಾಗಿ ಹರಿಯುವಂತೆಯೂ, ಗೋವುಗಳು ಹಾಲು ಕೊಡುವಂತೆಯೂ ಮನುಷ್ಯನು ಸ್ವಾಭಾವಿಕವಾಗಿ ಪರೋಪಕಾರಿಯಾಗಿರಬೇಕು. ಇಂಥ ಸಾಮಾನ್ಯ ಧರ್ಮಗಳು ಒಂದು ಮತದವರ ಧರ್ಮವೆಂದೂ ಮತ್ತೊಂದು ಮತದವರ ಧರ್ಮವಲ್ಲವೆಂದೂ ಹೇಳಲವಕಾಶವಿಲ್ಲ. ಸಕಲ ಖಂಡಗಳಲ್ಲಿರುವ ಮಾನವರೆಲ್ಲರೂ ಈ ಸಾಮಾನ್ಯ ಧರ್ಮಗಳನ್ನು ಪಾಲಿಸುತ್ತಾರೆ. ಈ ಸಾಮಾನ್ಯ ಧರ್ಮದ ಮುಖ್ಯ ತಿರುಳನ್ನು ಭಗವಾನ್ ವ್ಯಾಸಮಹರ್ಷಿಯು ಈ ರೀತಿಯಾಗಿ ಬೋಧಿಸುತ್ತಾನೆ—

> ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ।
> ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ ॥

ಅಯ್ಯಾ ಮಹರ್ಷಿಗಳಿರಾ! ಇದುವರೆಗೆ ಅನೇಕ ಗ್ರಂಥಗಳನ್ನು ಧರ್ಮ ಸ್ವರೂಪ ನಿರ್ಣಯಕ್ಕೋಸ್ಕರ ಬರೆದೆನು; ಅವುಗಳ ಸಾರವನ್ನೆಲ್ಲಾ ಅರ್ಧ ಶ್ಲೋಕದಲ್ಲಿ ನಿಮಗೆ ತಿಳಿಸುವೆನು. ಮತ್ತೊಬ್ಬರಿಗೆ ಒಳಿತನ್ನು ಮಾಡುವುದರಿಂದ ಪುಣ್ಯವು ಬರುತ್ತದೆ. ಕೇಡನ್ನು ಮಾಡುವುದರಿಂದ ಪಾಪವುಂಟಾಗುತ್ತದೆಂದು ಹೇಳಿ ಸುಮ್ಮನಾದನು. ಈ ತತ್ವದ ತಿರುಳನ್ನು ತಿಳಿದುಕೊಂಡೇ ಪ್ರಾಚೀನ ಕಾಲದ ಮಹರ್ಷಿಗಳೂ, ರಾಜರೂ ಸಹ ಪರೋಪಕಾರಕ್ಕಾಗಿ ತಮ್ಮ ಪ್ರಾಣವನ್ನು ಬಿಟ್ಟಿದ್ದಾರಲ್ಲದೆ ಶರೀರವನ್ನು ಸಹ ಒಪ್ಪಿಸಿದ್ದಾರೆ. ದಧೀಚಿ ಮಹರ್ಷಿಯು ಪರೋಪಕಾರಕ್ಕಾಗಿ ತನ್ನ ಬೆನ್ನೆಲುಬನ್ನುಕೊಟ್ಟು ಪ್ರಾಣಬಿಟ್ಟನು. ಶಿಬಿರಾಜನು ತನ್ನ ಬೆನ್ನುಬಿದ್ದ ಕಪೋತವನ್ನು ರಕ್ಷಿಸಿ ಅದರ ಬದಲು ಬೇಡನಿಗೆ ತನ್ನ ಶರೀರವನ್ನು ಒಪ್ಪಿಸಿದನು. ಆದ್ದರಿಂದ ಪ್ರತಿಯೊಬ್ಬ ಮಾನವನು "ಪರೋಪಕಾರಾರ್ಥಮಿದಂ ಶರೀರಂ" ಎಂಬುಕ್ತಿಯನ್ನು ಅನ್ವರ್ಥಗೊಳಿಸಬೇಕೆಂದು ಬಯಸುತ್ತೇನೆ.

ಗುರುಶಿಷ್ಯ ಪ್ರಭಾಕರ

ಸ್ಮರಣ

ಲೇ—ಭಾಗೀರಥೀಬಾಯಿ ಶಿರೂರ, ಸಂಖ್ಯಾಪುರ.

ಕೇಳುವದು ಮತ್ತು ಹೇಳುವದು ಇವು ಜ್ಞಾನೇಂದ್ರಿಯದ ಕೆಲಸಗಳಾದವು. ಸ್ಮರಣೆಯು ಮನಸ್ಸಿನ ಕ್ರಿಯೆ. ಮನಸ್ಸು ಸರ್ವೇಂದ್ರಿಯಗಳಿಗೂ ಅಂತರವಾದ್ದರಿಂದ ಮನಸ್ಸಿನ ಕ್ರಿಯೆಯು ಹೆಚ್ಚು ಪರಿಣಾಮಕಾರಕವಾಗುವದು. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ।" ಎಂಬ ವಚನದಂತೆ ಈಗ ಪರತಂತ್ರಕ್ಕೆ ಸಿಕ್ಕಿರುವದೆಂಬುದು ಮನಸ್ಸೇ. ಆದ್ದರಿಂದ ಸ್ವಾತಂತ್ರ್ಯವೂ ಮನಸ್ಸಿಗೇ ಆಗಬೇಕಾಗಿರುವದು. ಆ ಪಾರತಂತ್ರ್ಯವೂ ಸ್ವಾತಂತ್ರ್ಯವೂ ಏನೆಂದರೆ "ಬಂಧಾಯ ವಿಷಯಾಸಕ್ತಿಃ ಮುಕ್ತ್ಯೈ ನಿರ್ವಿಷಯಂ ಸ್ಮೃತಂ।" ಎಂಬ ಉತ್ತರಾರ್ಧದಂತೆ ಸುಖಕ್ಕಾಗಿ ಹೊರಗಣ ಭೌತಿಕ ಸಾಧನಗಳನ್ನು ಅವಲಂಬಿಸುವದೇ ಪಾರತಂತ್ರ್ಯ; ಅವುಗಳಿಲ್ಲದಿದ್ದರೂ ಸುಖದಿಂದಿರುವದೇ ಸ್ವಾತಂತ್ರ್ಯ. ಭೌತಿಕಸಾಧನಗಳನ್ನೇ ಮನಸ್ಸಿನಲ್ಲಿ ಕನವರಿಸಿಕೊಳ್ಳುತ್ತ ಹೋಗುವದರಿಂದ ಮನಸ್ಸು ಅದರಲ್ಲಿ ಆಸಕ್ತವಾಗುವದು. ದೇವರನ್ನು ಕನವರಿಸಿಕೊಳ್ಳುತ್ತಾ ಹೋದರೆ ಮನಸ್ಸು ದೇವರಲ್ಲಿ ಆಸಕ್ತವಾಗುವದು. ದೇವರು ಸರ್ವತಂತ್ರ ಸ್ವತಂತ್ರನು. ಅಂಥವನಲ್ಲಿ ಮನಸ್ಸು ಆಸಕ್ತವಾಯಿತೆಂದರೆ ಮನಸ್ಸಿಗೂ ಅದೇ ಗುಣವು ಇಳಿದುಬಂದು ಅದಕ್ಕೂ ಸ್ವಾತಂತ್ರ್ಯಸುಖವು ದೊರೆಯುವದು. ಈ ಅರ್ಥವನ್ನೇ ಗೀತೆಯಲ್ಲಿ ಹೇಳಿರುವದೇನೆಂದರೆ—

> "ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ।
> ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ।"

ಅಂದರೆ ಮನಸ್ಸಿನಲ್ಲಿ ಇನ್ನೊಂದರಮೇಲೆ ಭಾರವನ್ನಿಡದೆ ಯಾರು ಯಾವಾಗಲೂ ನನ್ನನ್ನು ಸ್ಮರಿಸುತ್ತಾರೋ ಹಾಗೆ ಏಕಾಗ್ರಚಿತ್ತದಿಂದ ಅಖಂಡಧ್ಯಾನವನ್ನು ಮಾಡುವವರಿಗೆ ನಾನು ಸುಲಭನು.

ಸ್ಮರಣೆಗೆ ಪ್ರಲ್ಹಾದನು ಒಳ್ಳೆಯ ಉದಾಹರಣೆ. ತಂದೆಯಾದ ಹಿರಣ್ಯಕಶಿಪುವು ಮಗನಾದ ಪ್ರಲ್ಹಾದನನ್ನು ಬಗೆಬಗೆಯಿಂದ ಕೊಲ್ಲಿಸಬೇಕೆಂದು ಯತ್ನವನ್ನು ಮಾಡಿದನು. ವಿಷವನ್ನು ಕುಡಿಸುವದು, ಹಾವುಗಳಿಂದ ಕಚ್ಚಿಸುವದು, ಬೆಟ್ಟದ ಮೇಲಿಂದ ಉರುಳಿಸುವದು, ಸಮುದ್ರಕ್ಕೆ ತಳ್ಳುವದು ಹೀಗೆಲ್ಲ ಏನೇನು ಮಾಡಿದರೂ ಪ್ರಲ್ಹಾದನು ಅಖಂಡವಾಗಿ ದೇವರ ನಾಮಸ್ಮರಣೆಯನ್ನು ಮಾಡುತ್ತಿದ್ದುದರಿಂದ ಅವನಿಗೆ ಎಲ್ಲೆಲ್ಲಿಯೂ ಪರಮಾತ್ಮನ ಸಾನ್ನಿಧ್ಯವುಂಟಾಗಿ ವಿಷ ಮೊದಲಾದುವುಗಳ ವೇಗವೆಲ್ಲ ಮಾಯವಾಗಿಹೋಗುತ್ತಿತ್ತು. ದೇವರ ಮನಸ್ಸಿಗೆ ಬಂದರೆ ವಿಷ ಮೊದಲಾದುವುಗಳೇ ಅಮೃತವಾಗುವದಕ್ಕೇನು ತಡ! ಪ್ರಹ್ಲಾದನು ಪರಮಾತ್ಮನ ನಾಮವನ್ನು ಗಟ್ಟಿಯಾಗಿ ಅವಲಂಬಿಸಿಕೊಂಡು ಸ್ಮರಣೆಮಾಡುತ್ತಿದ್ದುದರಿಂದ ಈ ವಿಪತ್ತುಗಳೆಲ್ಲಾ ತಮಗೇ ವಿಪತ್ತುಗಳಾಗಿ ಪರಿಣಮಿಸಿದವು. ಯಾವ ವಸ್ತುವಿಗಾದರೂ ನಾಮ ರೂಪ——ಎಂಬೆರಡು ಅವಯವಗಳುಂಟು. ಅದರಲ್ಲಿಯೂ ನಾಮಕ್ಕೆ ಪ್ರಾಶಸ್ತ್ಯವು ಹೆಚ್ಚು. ನಾಮವು ಜುಟ್ಟಿನ ಹಾಗೆ; ರೂಪವು ಉಳಿದ ದೇಹದ ಹಾಗೆ. ನಾಮವನ್ನವಲಂಬಿಸಿದರೆ ರೂಪವು ತನಗೆ ತಾನೇ ಸಾಕ್ಷಾತ್ಕಾರವಾಗುವದು. ವಾನರರು ಸಮುದ್ರಬಂಧನವನ್ನು ಮಾಡಿದ್ದು ರಾಮಶಬ್ದವನ್ನು ಬರೆದ ಪ್ರಭಾವದಿಂದ. ಮನುಷ್ಯನು ಪಾರಾಗುವದಿನ್ನೇನು ದೊಡ್ಡ ಮಾತು! ಈ ಸ್ಮರಣೆಯು ಸಂಕಟ ಬಂದಾಗ ಶಂಕರ ಎಂಬ ಗಾದೆಯಂತೆ ಸಾಮಾನ್ಯವಾಗಿ ಕಷ್ಟಕಾಲದಲ್ಲಿ ಮಾತ್ರ ಒದಗುವ ಸಂಭವವು ಹೆಚ್ಚು. ಈ ಮರ್ಮವನ್ನರಿತೇ ಪ್ರಲ್ಹಾದನು—"ವಿಪದಸ್ಸಂತು ನಃ ಶಶ್ವದ್ಯಾಸು ಸಂಕೀರ್ತನಂ ತವ" ಎಂದು ಹೇಳಿದ್ದಾನೆ. ವಿಪತ್ಕಾಲದಲ್ಲಿ ದೇವರ ಸ್ಮರಣೆಯು ಬರುವದರಿಂದ ತನಗೆ ವಿಪತ್ತುಗಳೇ ಒಂದರಹಿಂದೊಂದು ಬರುತ್ತಿರಲೆಂದು ಅವನ ಅಭಿಪ್ರಾಯ. ಆದರೆ ಬರೀ ಕಷ್ಟಕಾಲದಲ್ಲಿ ಮಾತ್ರ ದೇವರ ಹೆಸರನ್ನು ತೆಗೆದುಕೊಳ್ಳುವದು ಹೆಚ್ಚು ಕಾರ್ಯಕಾರಿಯಲ್ಲ.

> "ಹರನಾಮ್ನೈವ ನಾಮ್ನೈವ ಸರ್ವದಾ ಮಮ ಜೀವನಮ್।
> ಕಲೌ ನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ ॥"

ಎಂದು ವಿದುರರು ಹೇಳಿರುವಂತೆ ಪರಮಾತ್ಮನ ನಾಮವೇ

ಮನುಷ್ಯನ ಜೀವನಸರ್ವಸ್ವವಾಗಬೇಕು. ಕಲಿಯುಗದಲ್ಲಿ ನಾಮದ ಹೊರತು ಬೇರೆ ಗತಿಯಿಲ್ಲವೇ ಇಲ್ಲ.

ನಾಮ ಸ್ಮರಣೆಯ ವಿಷಯವಾಗಿ ಸಮರ್ಥರು ಹೇಳುವದೇನೆಂದರೆ, ಸುಖಕಾಲದಲ್ಲಿ, ದುಃಖಕಾಲದಲ್ಲಿ, ಉದ್ವೇಗ ಕಾಲದಲ್ಲಿ, ಆನಂದ ಕಾಲದಲ್ಲಿ ಯಾವಾಗಲೂ ನಾಮಸ್ಮರಣೆ ಇಲ್ಲದೆ ಇರಬಾರದು. ಯಾವುದಾದರೊಂದು ಸಂಕಟಕಾಲದಲ್ಲಂತು ಅದನ್ನು ನೆನಪಿಗೆ ತಂದುಕೊಳ್ಳಲೇಬೇಕು. ಉಣ್ಣುವಾಗ, ತಿನ್ನುವಾಗ, ಮಲಗುವಾಗ, ನಡೆಯುವಾಗ ಕೆಲಸವನ್ನು ಮಾಡುವಾಗಲೂ ನಾಮಸ್ಮರಣೆ ನಡೆಯುತ್ತಿರಬೇಕು. ವಾಲ್ಮೀಕಿಯು ಮೊದಲು ಮೊದಲು ರಾಮನಾಮವನ್ನು ತಲೆಕೆಳಗಾಗಿ ಜಪಿಸಿಯೇ ಸಿದ್ಧಿಯನ್ನು ಪಡೆದು ಕೊನೆಗೆ ಶತಕೋಟಿ ರಾಮಾಯಣದ ಕರ್ತನಾದನು. ಆದ್ದರಿಂದ ಮನಸ್ಸಿನಲ್ಲಿ ನಾಮವನ್ನು ಸ್ಮರಿಸಬೇಕು. ರೂಪವನ್ನು ನೆನಪಿಗೆ ತಂದುಕೊಳ್ಳಬೇಕು. ನಾಮದ ಶ್ರೇಷ್ಠತೆಯನ್ನು ಕುರಿತು ಪುರಂದರದಾಸರು ಹೇಳಿರುವದೇನೆಂದರೆ—

ರಾಗ ಕಲ್ಯಾಣಿ-ಅಟತಾಳ.

ಕಲ್ಲುಸಕ್ಕರೆ ಕೊಳ್ಳಿರೋ | ನೀವೆಲ್ಲರು
ಕಲ್ಲುಸಕ್ಕರೆ ಕೊಳ್ಳಿರೋ ||ಪ||
ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು |
ಫುಲ್ಲಲೋಚನ ಶ್ರೀಹರಿನಾಮವೆಂಬ ||ಅ.ಪ||

ಎತ್ತು ಹೇರುಗಳಿಂದ ಹೊತ್ತು ಮಾರುವದಲ್ಲ |
ಒತ್ತೊತ್ತಿ ಗೋಣಿಯೊಳ್ ತುಂಬುವದಲ್ಲ ||
ಎತ್ತ ಹೋದರು ಬಾಡಿಗೆ ಸುಂಕವಿದಲ್ಲ |
ಉತ್ತಮ ಸರಕಿದು ಅತಿ ಲಾಭ ಬರುವಂಥ ||೧||

ನಷ್ಟ ಬೀಳುವದಲ್ಲ ನಾತ ಹುಟ್ಟುವದಲ್ಲ |
ಎಷ್ಟು ಒಯ್ದರು ಬೆಲೆ ಕೊಳ್ಳುವದಿಲ್ಲ ||
ಕಟ್ಟಿರುವೆಯು ತಿಂದು ಕಡಿಮೆಯಾಗುವುದಲ್ಲ |
ಪಟ್ಟಣದೊಳಗಿದು ಪ್ರಯಾಣಿಸದ ಸಾಧು ||೨||

ಸಂತೆಸಂತೆಗೆ ಹೋಗಿ ಶ್ರಮಪಡಿಸುವದಲ್ಲ |
ಸಂತೆಯೊಳಗೆ ಮಾರಲಾಗದಿದಲ್ಲ ||
ಸಂತತ ಭಕ್ತರ ನಾಲಗೆ ಸವಿಗೊಂಬ |
ಕಾಂತ ಪುರಂದರವಿಠಲನಾಮವೆಂಬ ||೩||

ಎಂಬಂತೆ ಪರಮಾತ್ಮನ ನಾಮಸ್ಮರಣೆಯೊಂದರಿಂದಲೇ ಜನ್ಮಜನ್ಮಾಂತರದ ಪಾಪವು ನಷ್ಟವಾಗುವುದು. ಅದಕ್ಕೆ ಒಬ್ಬ ಮಹಾತ್ಮರು—

ಪಂಚಾಗ್ನಿ ಮಧ್ಯದೊಳ್ ಕುಳಿತು ಬಹುಯತ್ನದಿಂದ
ಸಂಚರಿಸುವನಿಲನಂ ತಡೆವ ಕಷ್ಟವು ಬೇಡ |
ಚಂಚಲಾಯತನೇತ್ರೆಯರ ಸುಖ್ಯ ಸಂತೊರೆದು ವನದ
ನೀರಸವದು ಬೇಡ ||
ಪಂಚನಾರೀಹಸ್ತದಿಂದತುಲಸುಖ ವಸಂತಯವನೊದಗಿ
ಸುವೇಷಧನಂಗಳು ಬೇಡ |
ಪಂಚವಕ್ತ್ರನನಾಮಭಜನೆಯೊಂದಿರೆ ಸಾಕು ಭವಬಂಧವಳಿ
ಯುತಿಹುದು ||

ಹೀಗೆ ಉಪದೇಶಮಾಡಿರುವರು.

ಉಗ್ರಶಾಂತಿ

ಶಾಲಿವಾಹನಶಕ ೧೮೬೪ನೇ ಚಿತ್ರಭಾನು ಸಂ॥ ವೈಶಾಖ ಬಹುಳ ಸಪ್ತಮಿ ಗುರುವಾರ ಮೈಸೂರು ಹಳೇ ಅಗ್ರಹಾರದಲ್ಲಿರುವ ವನಸಾರೆ ಅಂಗಡಿ ಶೆಟ್ಟಿಪ್ಪ ಸಿದ್ಧಪ್ಪನವರ ಜ್ಯೇಷ್ಠಪುತ್ರ ಸುಬ್ರಹ್ಮಣ್ಯನವರ ತೃತೀಯಕುಮಾರ ಚಿ॥ ಸ॥ ಚಂದ್ರಶೇಖರನಿಗೆ ಚೌಲ ಅಕ್ಷರಾಭ್ಯಾಸವು ನೆರವೇರಿತು. ಇದೇ ಬಹುಳ ಅಷ್ಟಮಿ ಶುಕ್ರವಾರ ಸಿದ್ಧಪ್ಪನವರ ಧರ್ಮಪತ್ನಿ ಸೌ॥ ದೇವಮ್ಮನವರ ೬೦ನೇ ವರ್ಷದ ಉಗ್ರಶಾಂತಿಯು ಸ್ವಗೃಹದಲ್ಲಿ ನಾಂದಿಗ್ರಹಯಜ್ಞಪೂರ್ವಕ ಮಂಗಳಸ್ನಾನವೂ ಹವನಹೋಮಾದಿಗಳೂ ನವಗ್ರಹದಾನ ದಶದಾನಗಳೂ ವೇದೋಕ್ತಪ್ರಕಾರವಾಗಿ ಚಾಮರಾಜನಗರದ ತಾಲ್ಲೂಕು ಮಲಿಯೂರು ಮಠದ ವೇ॥ ಬಸವಾರಾಧ್ಯರ ಪುತ್ರ ವೇ॥ ಬ್ರ॥ ಶ್ರೀ ಚಂದ್ರಶೇಖರ ಶಾಸ್ತ್ರಿಗಳವರಿಂದ ನೆರವೇರಿಸಲ್ಪಟ್ಟಿತು. ಆ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ೨ರೂಪಾಯಿಗಳು ಹುಂಜನಕೆರೆ ಪಟೇಲ್ ಪಿ. ಚನ್ನಯ್ಯನವರ ಮೂಲಕ ಸಮರ್ಪಿಸಲ್ಪಟ್ಟವು.

ನಗರಾಲಂಕಾರ

(ಲೇಖಕ—ವಿ. ಶ್ರೀಕಂಠಯ್ಯ.)

ಟ್ರಸ್ಟ್ ಬೋರ್ಡ್ ಹುಟ್ಟಿದಂದಿನಿಂದ ಅಂದರೆ ೪೦ ವರ್ಷದಿಂದ ರಾಜಧಾನಿಯ ಅಲಂಕಾರ ಸಾಗುತ್ತಲಿದೆ. ಇದಕ್ಕಾಗಿ ನಗರ ಸಂಸ್ಥೆಯಿಂದ, ಸರ್ಕಾರದಿಂದ, ಅರಮನೆಯಿಂದ ಧಾರಾಳವಾಗಿ ಧನಸಹಾಯ ಒದಗುತ್ತಿದೆ. ಅಷ್ಟಾದರೂ ಲೋಪಕ್ಕೂ ವಿಚಾರಕ್ಕೂ ಚಂಚಲವ ಲಭಿಸಿರುವುದು ಅಲ್ಲಲ್ಲಿ ಗೋಚರವಾಗದಿರದು. ಆ ಲೋಪಗಳಲ್ಲಿ ಕೆಲವನ್ನಾದರೂ ನಗರಕಾರ್ಯ ನಿರ್ವಾಹಕರಿಗೆ ಮನಗಾಣಿಸುವುದು ಅಗತ್ಯವಿದೆ.

ಕೇಂದ್ರಸ್ಥಾನದಿಂದ ಉಪಕ್ರಮಿಸುವ ಮೊದಲು ದೇವರಾಜ ಮಾರ್ಕೆಟ್ಟಿನ ಮೋರೆ ನೋಡಬೇಕು.

೧. ಮುಮ್ಮಳಿಗೆಗಳು

ಮುಂಭಾಗದ ೧೬ ಅಂಗಡಿಗಳನ್ನು ಚಿನ್ನ, ಬೆಳ್ಳಿ, ಪೀತಾಂಬರಾದಿ ಸುಂದರ ವಸ್ತುಗಳ ಮಾರಾಟಕ್ಕೆ ಮಾಸಲಿಟ್ಟರೆ ಕಟ್ಟಡವನ್ನೇ ಅಲಂಕರಿಸಿದಂತಾಗುವುದು. ಅಂತೂ ಈಗಿರುವ ಹಳೆಯ ಕೊಳೆಯ (ಸೆಕೆಂಡ್ ಹ್ಯಾಂಡ್, ಥರ್ಡ್ ಹ್ಯಾಂಡ್) ಪುಸ್ತಕಗಳೂ ಸರಾಫರ ಮುರುಕು ಸಂದೂಕಗಳೂ ಹರಕು ಗೋಣೀ ತಾಟುಗಳೂ ಹೋಗಬೇಕು. ಬಿಸಿಲು ಪರ್ದಾಗಳಲ್ಲಿ ಒಂದು ಹೊಂದಿಕೆಯೂ (ಯೂನಿಫಾರ್ಮಿಟಿ) ಅಂದವೂ ಇರುವಂತಾಗಬೇಕು.

೨. ಮುಂಬೈಲು

ಅಂಗೈ ಅಗಲದ ಬೈಲಿನಲ್ಲಿ ೩೦ ಜಟಕಾಗಳಿಗೆ ವಸತಿ! ಆ ಕುದುರೆಗಳ ಲದ್ದಿಯ ರಾಶಿ, ಗಂಜಳದ ಕೊಳೆ, ಹುಲ್ಲಿನ ಚಲ್ಲಾಟ, ಹುಲ್ಲುಮಾರುವವರ ರಕ್ತ ತಂಬುಲದ ರೊಚ್ಚು, ಒರಟು ಕಲ್ಲು ಕಂಭಗಳು, ಅವಕ್ಕೆ ಸಿಕ್ಕಿರುವ ವಿಕಾರವಾದ ರೈಲುಗಳು, ಎರಡು ಹೆಮ್ಮರಗಳ ಕತ್ತಲು, ಕಸದಕೊಟ್ಟೆ ಎಲ್ಲವೂ ತಮ್ಮ ನಡುವೆ ಇರುವ ಘಟಿಕಾ ಗೋಪುರದ ಅಂದವನ್ನು ಸಂಪೂರ್ಣವಾಗಿ ಕೆಡಿಸಿವೆ. ಸುಂದರ ನಂದನವನ ಇರಬೇಕಾದ ಈ ಸ್ಥಳದಲ್ಲಿ ಎಷ್ಟು ಹೊಲಸು ?

ಬೆಂಗಳೂರು ಮಾರ್ಕೆಟ್ಟಿಗೆ ಹೋಲಿಸಿದರೆ, ನಾಚಿಕೆಯಾಗುವುದು. ಅದರ ದ್ವಾರದಲ್ಲಿ ೪೦ ಮಂದಿ ಹೂವಾಡಿಗರು ನಾಲ್ಕು ಸಾಲಿನಲ್ಲಿ ಕುಳಿತು ನೂರಾರು ಸುಂದರ ಸುಮಹಾರಗಳನ್ನು ಮಾರಲಿಕ್ಕೆ ತೂಗು ಹಾಕಿರುವುದನ್ನು ನೋಡಿದರೆ ಕಣ್ಣಿಗೆ ಹಬ್ಬವಾಗದಿರದು. ಅಲ್ಲಿ ಪರಿಮಳ, ಮೈಸೂರಿನಲ್ಲಿ ಕುದುರೆಗಳ ಜಲಮಲಗಳ ದುರ್ಗಂಧ! ಇಲ್ಲಿಂದ ಜಟಕಾ ಸ್ಟ್ಯಾಂಡನ್ನು ತೆಗೆದುಹಾಕಿದರೆ ಶನಿ ಕೊಳಕು ತಪ್ಪುವುದು.

೩. ಡಫರಿನ್ ಗಡಿಯಾರ ಮತ್ತು ಬೈಲು

೧೮೮೬ ರಲ್ಲಿ ಇದು ನಿರ್ಮಿಸಲ್ಪಟ್ಟಾಗ ಆ ಪ್ರದೇಶವು ವಿಶಾಲತೆಹೊಂದಿ ಅಂದವಾದುದೆಂದು ನಂಬಿತ್ತು. ಅಲ್ಲಿ ಬೈಲು ಬೆಳೆಯಲಿಲ್ಲ. ಎರಡು ಮರ ಬೆಳೆದು ಗಡಿಯಾರವನ್ನು ಮರೆಮಾಡಿರುವವು. ಇದರ ಕಾಲು ಕೆಳಗೆ ನಿಂತು ಧೈರ್ಯದಿಂದ ಕತ್ತೆತ್ತಿ ನೋಡಿದರೆ ಮಾತ್ರ ಗಡಿಯಾರ ಕಾಲ ತಿಳಿಸುವುದು.

ಎಷ್ಟೋ ರೊಕ್ಕ ಮುಕ್ಕಿದ ಈ ಯಂತ್ರದಿಂದ ಜನರಿಗೆ ತಕ್ಕಷ್ಟು ಪ್ರಯೋಜನವಾಗುತ್ತಿಲ್ಲ. ಸುಂದರ ಚೂಡಾಮಣಿಯನ್ನು ತುರುಬಿನಲ್ಲಿ ತುರುಕಿ ಮೇಲೆ ಮುಸುಕು ಹೊದಿಸಿದಂತಾಗಿದೆ. ಹತ್ತು ಮಾರು ದೂರಕ್ಕೆ ಸ್ವಲ್ಪ ಈಶಾನ್ಯಕ್ಕೆ ಕರ್ಜನ್ ಪಾರ್ಕಿನ ಬಾಗಿಲ ಮುಂದೆ ಒಯ್ದಿಟ್ಟಿದ್ದರೆ ನಾಲ್ಕು ರಸ್ತೆಗೆ ಗೋಚರವಾಗುತ್ತಿತ್ತು. ಸದ್ಯಃ, ಇದರ ಎಡಬಲದ ಹೆಮ್ಮರಗಳನ್ನೂ ಬುಡದ ಲದ್ದಿಯ ಲಾಯವನ್ನೂ ತೆಗೆದುಹಾಕಬಾರದೇಕೆ ? ಇರುವ ಚಿಕ್ಕ ಬೈಲನ್ನೇ ಚೊಕ್ಕಟಮಾಡಬಾರದೇಕೆ ?

೪. ಪೂರ್ವಪ್ರದೇಶ

ಡಫರಿನ್ ಸ್ಮಾರಕದ ಶುದ್ಧ ಪೂರ್ವಕ್ಕೆ ಅಂಗಡಿಗಳೆನಿಸಿಕೊಳ್ಳುವ ೩೨ ಗೂಡುಗಳ ಗುಂಪೊಂದು ಇದೆ. (ನಂ. ೧೬೧೪ ರಿಂದ ೧೬೩೩; ೧೬೭೫ ರಿಂದ ೧೬೮೨) ಇಲ್ಲಿ ಟಿನ್ನಿನವರು, ಮೋಚಿಗಳು, ಪಿಂಜಾರರು, ದರ್ಜಿಗಳು, ಪುಡಿ ಅವಲಕ್ಕಿಯವರು. ಕುವಾಲಿವಾಲರು—ಇವರ ಕ್ರಮಗೆಟ್ಟ, ಸರಕಿನ ಮಳಿಗೆಗಳಿವೆ. ಇವು ಒಂದು ವಿಧದಲ್ಲಿ ಅಪೇಕ್ಷೆಯಾಗಿರುವವು. ಇವು ಹೋಗಬೇಕು. ಆ ಸ್ಥಳವನ್ನು ಸುಂದರಗೊಳಿಸಿ ಪಕ್ಕದ ಅಂಚಿನಲ್ಲಿ ಯಾವುದಾದರೂ "ಬಜಾರ್" ಕಟ್ಟಿಸಿ ಅಲಂಕಾರ ಹೆಚ್ಚಿಸಬಹುದು. ಈ ಗೂಡುಗಳ ಗೋಡೆಗಳನ್ನು ತಪ್ಪಿಸುವುದು ಒಂದೆ ಕೋಟೆಯಲ್ಲಿದ್ದ ಸಹಸ್ರ ಕುಟುಂಬದ ಕೇರಿಯನ್ನೂ ಎತ್ತಿದಷ್ಟು ಕಷ್ಟವಾಗಲಾರದು. ಬಾಡಿಗೆ ಆಶೆಯ ಮಾಲೀಕರ ಮುಷ್ಕರವೋ ನಗರಸಂಸ್ಥೆಯಲ್ಲಿ ಧನಾಭಾವವೋ ಅಡ್ಡಿ ಬರಬಹುದು. ಇದಕ್ಕೆ ಉಪಾಯವಿದೆ. ಈಗಿನ ಮಾರ್ಕೆಟ್ಟಿನ ಪಶ್ಚಿಮದಲ್ಲಿ ಹೊರಭಾಗದಲ್ಲಿರುವ ಮಳಿಗೆಗಳ ಸಾಲು ಇದೆಯಷ್ಟೆ ? ತೆಗೆಯಬೇಕಾದ ಅಂಗಡಿಗಳಿಗೆ ಪ್ರತಿಯಾಗಿ ಅವುಗಳ ಬಾಡಿಗೆಗೆ ಸಮನಾದ ವರಮಾನದ ಮ್ಯುನಿಸಿಪಲ್ ಮಳಿಗೆಗಳ ಸ್ವಾಮಿತ್ವವನ್ನು ಅಂಗಡಿಗಳ ಮಾಲೀಕರಿಗೆ ವಹಿಸುವುದು ಒಳ್ಳೆಯದು. ಈ ಬಗೆಯ ಕಟ್ಟಡ ಪರಿವರ್ತನೆಯು ಸರ್ವೋತ್ತಮವು. ನಗರಸಂಸ್ಥೆಗೆ ನಷ್ಟವಿಲ್ಲದಾಗುವುದು.

(ಉಳಿದ ಸಲಹೆಗಳು ಕ್ರಮೇಣ ಬರುವವು.)

ನಾಟಕವಿಚಾರದರ್ಪಣ

(ಕನ್ನಡಿಸಿದ ಅಡ್ವ ನಿಪ್ರಾನ್ ಅನವಟ್ಟಿ ರಾಘವೇಂದ್ರರಾವ)

5. ನಾಟಕದಲ್ಲಿ ಬರುವ ವಿದೂಷಕ ಪಾತ್ರ ಪ್ರಯೋಜನ.

ಸಾಮಾನ್ಯವಾಗಿ ಮಹಾರಾಜರು ತಮ್ಮ ಹತ್ತಿರ ಒಬ್ಬ ಹಾಸ್ಯಗಾರನನ್ನು ಇಟ್ಟುಕೊಂಡಿರುವರು. ಅತನು ಮಾತುಗಳಲ್ಲಿಯೂ, ಕಾರ್ಯಗಳಲ್ಲಿಯೂ ಬಹು ಬುದ್ಧಿವಂತನಾಗಿ ವರ್ತಿಸುವನು. ಅತನು ಮಾಡುವ ಕಾರ್ಯಗಳು ಯಾರಿಗೂ ಏನೂ ಸಂಬಂಧವಿಲ್ಲದಂತೆ ಇರುವುದಲ್ಲದೆ, ಅತನು ಮಾಡುವ ಕಾರ್ಯಗಳು ರಾಜನಿಗೆ ಸಂತೋಷಜನಕವಾಗಿಯೂ ಅತನ ಸಮಯೋಚಿತವಾದ ಕಾರ್ಯ ಮತ್ತು ಮಾತುಗಳು ಬಹು ಮನೋಹರವಾಗಿಯೂ, ಬುದ್ಧಿಪ್ರದವಾಗಿಯೂ ಚಮತ್ಕಾರವಾಗಿಯೂ ಇರುವುವು. ಅಂತಹ ಮನುಷ್ಯನನ್ನೇ ನಾಟಕದಲ್ಲಿ ವಿದೂಷಕನೆಂದು ಹೆಸರು ಕೊಟ್ಟು ನಾಯಕನ ಹತ್ತಿರದಲ್ಲಿಯೇ ಇಟ್ಟು ನಾಯಕನ ಮನಸ್ಸಿಗೆ ಸಂತೋಷಪ್ರದವಾಗಿರಲೆಂದೇ ಕವಿಯು ನಿರ್ಮಿಸಿರುವ ಪಾತ್ರವು. ಈತನು ತನ್ನನ್ನು ಕಾರ್ಯಸಾಧನೆಗಾಗಿ ಒಬ್ಬನಿಗೆ ಮತ್ತೊಬ್ಬರ ಹೆಸರನ್ನು ಹೇಳೋಣವೂ ಮಾಡಿದ ತಪ್ಪುಗಳನ್ನು ಮರೆತು ಪುನಃ ಮಾತನಾಡುವುದೂ, ತಾನು ನಡೆಯುತ್ತಿರುವ ಕಾರ್ಯಮಾರ್ಗದಲ್ಲಿ ಅವಿವೇಕ ಮತ್ತು ಕಷ್ಟಗಳು ಒದಗಿದಾಗ್ಗೂ ಲಕ್ಷಿಸದೆ ಇರೋಣವೂ ಇವೇ ಅವನ ಕಾರ್ಯಸಾಧನೆಗಳು. ಅವನ ನಡತೆ ಎಂದರೆ ಅವಿವೇಕ, ನಿಸ್ಪೃಹತೆ, ನೀಚತ್ವ, ಬುದ್ಧಿವಂತಿಕೆ ಮತ್ತು ಬುದ್ಧಿಹೀನತೆ ಈ ಗುಣಗಳ ಸಮುದಾಯದಿಂದ ಕೂಡಿದ ಗುಣವು. ಇಂತಹ ಗುಣವುಳ್ಳ ವಿದೂಷಕ ಪಾತ್ರವನ್ನು ನಾಯಕ ಮತ್ತು ನಾಯಕಿಯರ ಬಳಿಯಲ್ಲಿದ್ದುಕೊಂಡು ಕಾಲಾನುಸಾರವಾದ ಕಾರ್ಯದಕ್ಷತೆಗಾಗಿ ಕವಿಯು ನಿರ್ಮಿಸಿರುವ ಪಾತ್ರವೆಂದು ವಾಚಕರು ತಿಳಿಯಬೇಕು. ಈತನ ಕಾರ್ಯಗಳಿಂದ ಮಿಕ್ಕ ಪಾತ್ರಗಳಿಗೆ ಯಾವ ತೊಂದರೆಯಾಗಲಿ, ಯಾವ ಬಾಧಕವಾಗಲಿ ಇರುವುದಿಲ್ಲ ಮುಖ್ಯವಾಗಿ ಈತನಿಂದ ಅನೇಕ ಬುದ್ಧಿವಾದಗಳನ್ನು ಪ್ರೇಕ್ಷಕರು ತಿಳಿದುಕೊಳ್ಳಬೇಕಾಗಿದೆ.

6. ಸಂತೋಷಾಂತ್ಯ ಮತ್ತು ವ್ಯಸನಾಂತ್ಯವಾದ ನಾಟಕಗಳೆಂದರೇನು ?

ಸಂಸ್ಕೃತದಲ್ಲಿ ಹಿಂದಣ ಕವಿಗಳು ಇಂತಹ ಅನೇಕ ನಾಟಕಗಳನ್ನು ಬರೆದಿರುವರಷ್ಟೆ. ಇವುಗಳಲ್ಲಿ ಯಾವ ವ್ಯಸನಾಂತ್ಯವಾದ ನಾಟಕವೂ ಇಲ್ಲ. ಈಗಿನ ಕವಿಗಳು ಇಂಗ್ಲಿಷು ನಾಟಕಗಳನ್ನು ನೋಡಿ, ತಾವೂ ಬರೆದಿರುವರು. ಏತಕ್ಕೆ ಹಿಂದುಗಳಲ್ಲಿ ವ್ಯಸನಾಂತ್ಯವಾದ ನಾಟಕಗಳಿಲ್ಲವೆಂದು ಕೇಳಬಹುದು. ಮುಖ್ಯವಾಗಿ ನಾಟಕವನ್ನು ಅವಲೋಕಿಸಲು ಬಂದಿರುವವರ ಮನಸ್ಸಿಗೆ ಸಂತೋಷವನ್ನುಂಟುಮಾಡಬೇಕಲ್ಲದೆ ವ್ಯಸನೋತ್ಪತ್ತಿಗಳಾಗಿ ಕಳುಹಿಸಲೇ ಕೂಡದೆಂದು ತಿಳಿಯಬೇಕು. ಹಿಂದುಗಳ ಮನಸ್ಸಾದರೋ ವ್ಯಸನವನ್ನು ಸಹಿ

[೬ನೆಯ ಪುಟವನ್ನು ನೋಡಿ.]

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ೧೫ ವರ್ಷಗಳು ತುಂಬಿ ೧೬ ನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು **ವಿ. ಪಿ.** ಮಾಡಬೇಕಾಗುತ್ತದೆ. **ವಿ.ಪಿ.** ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. **ವಿ.ಪಿ.** ಮಾಡಿದರೆ ೩ ರೂ ೧೪ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟುಗೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಲಾಭವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು.

ವ್ಯಾ—

ಪಂಚಾಚಾರ್ಯಪ್ರಭಾ.

೧೯೪೨ನೆಯ ಮೇ ತಾ|| ೧೮ನೆಯ ಸೋಮವಾರ

ವರ್ಣಾಶ್ರಮಧರ್ಮ.

ಮಾನವಪ್ರಾಣಿಯ ಉದ್ಧಾರಕ್ಕೋಸ್ಕರ ಪರಮ ದಯಾಳುವಾದ ಶ್ರೀಪರಮೇಶ್ವರನಿಂದ ವೇದಾಗಮೋಪನಿಷತ್ತುಗಳು ನಿರ್ಮಿಸಲ್ಪಟ್ಟಿವೆ. ಈ ಗ್ರಂಥಗಳಲ್ಲಿರುವ ನಿಜವಾದ ತತ್ತ್ವಗಳನ್ನು ತಿಳಿದು ಯಾರು ವರ್ತಿಸುವರೋ, ಅವರಿಗೆ ನಿತ್ಯಸುಖವು ಪ್ರಾಪ್ತವಾಗುವದೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಭರತಖಂಡದಲ್ಲಿ ವಾಸಿಸುವ ಹಿಂದೂಮತೀಯರಿಗೆಲ್ಲ ಈ ಗ್ರಂಥಗಳೇ ಅತ್ಯಂತ ಪೂಜ್ಯವಾಗಿರುತ್ತವೆ. ವೇದಾಗಮಾದಿಗಳಲ್ಲಿ ಬೋಧಿಸುವ ವಿಷಯಗಳನ್ನನುಸರಿಸಿ ವರ್ತಿಸುವವರು ಹಿಂದುಗಳೆಂದೂ, ವೇದಾಗಮಾದಿಗಳ ಅಭಿಪ್ರಾಯಕ್ಕೆ ವಿರೋಧಿಗಳಾಗಿ ವರ್ತಿಸುವವರು ಹಿಂದುಗಳಲ್ಲವೆಂದೂ ಶಾಸ್ತ್ರನಿಯಮವುಂಟು. ಹಿಂದೂಮತದಲ್ಲಿ ವರ್ಣಾಶ್ರಮ ಧರ್ಮನಿಬಂಧನವು ಮುಖ್ಯವಾದುದಾಗಿದೆ. ಈ ವರ್ಣಾಶ್ರಮಧರ್ಮನಿಬಂಧನವನ್ನು ಕುರಿತು, ಅನೇಕಾನೇಕಜನ ಮಹರ್ಷಿಗಳು ಸ್ಮೃತಿಗಳನ್ನೂ, ಪುರಾಣಗಳನ್ನೂ, ಗೀತಾದಿಗಳನ್ನೂ ಬರೆದಿರುವರು. ಮಹಾತ್ಮರಾದ ಆ ಮಹರ್ಷಿಗಳು ರಚಿಸಿರುವ ವರ್ಣಾಶ್ರಮ ಧರ್ಮನಿಬಂಧನೆಯಂತೆ ಇಂದಿನವರೆಗೂ ಹಿಂದೂಮತದಲ್ಲಿ ವರ್ಣಾಶ್ರಮ ಧರ್ಮಗಳ ಕಟ್ಟಳೆಯು ಅವಿಚ್ಛಿನ್ನವಾಗಿ ನಡೆದುಬಂದಿರುತ್ತದೆ. ಯಾರು ವರ್ಣಾಶ್ರಮಗಳ ತತ್ತ್ವಗಳನ್ನು ಮನ್ನಿಸಿ ಅದರಂತೆ ಆಚರಿಸುವರೋ ಅವರೇ ವೈದಿಕರೆಂದೂ, ಅದಕ್ಕೆ ವಿರುದ್ಧವಾಗಿ ಆಚರಿಸುವವರು ಅವೈದಿಕರೆಂದೂ ಧರ್ಮಶಾಸ್ತ್ರಗಳಲ್ಲಿ ನಿರ್ಣಯಿಸಲ್ಪಟ್ಟಿವೆ. ವೀರಶೈವಮತಕ್ಕೆ ವೇದಾಗಮಾದಿಗಳು ಪರಮಪ್ರಮಾಣೀಭೂತಗ್ರಂಥಗಳಾಗಿದ್ದರೂ, ಈ ಮತದಲ್ಲಿರತಕ್ಕ ಕೆಲವು ಜನ ವಿಚಾರಶೂನ್ಯರು, ವೀರಶೈವಮತವು ಅಪ್ರಾಕೃತವಾದುದರಿಂದ, ಈ ಮತದಲ್ಲಿ ವರ್ಣಾಶ್ರಮಧರ್ಮಗಳ ನಿಬಂಧನವೇ ಇಲ್ಲವೆಂದು ಕಂಠಶೋಷಣವನ್ನು ಮಾಡುತ್ತಿರುವರು, ಹೀಗೆ ಮಾಡುವದು ಅವರ ಅಜ್ಞಾನದ ಪ್ರಭಾವವಲ್ಲದೆ ಬೇರೊಂದಲ್ಲ. ಅನಾದಿಕಾಲದಿಂದ ವೀರಶೈವಮತದಲ್ಲಿ ಅನೇಕಾನೇಕಜನ ಆಚಾರ್ಯರೂ, ಪಂಡಿತರೂ, ಯೋಗಿಗಳೂ ಆಗಿಹೋಗಿದ್ದಾರೆ. ಅವರು ರಚಿಸಿದ ಭಾಷ್ಯಾದ್ಯುದ್ಗ್ರಂಥಗಳಲ್ಲಿ ವರ್ಣಾಶ್ರಮಧರ್ಮವಿಚಾರವು ಬಹುವಿಶದವಾಗಿ ಪ್ರತಿಪಾದಿಸಲ್ಪಟ್ಟಿರುವದು. ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರು ಲೋಕಪ್ರಸಿದ್ಧನಾದ ಅಗಸ್ತ್ಯಮಹರ್ಷಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡುವ ಸಮಯದಲ್ಲಿ—

> ವರ್ಣಾಶ್ರಮಾದಿಧರ್ಮಾಣಾಂ ವ್ಯವಸ್ಥಾ ಹಿ ದ್ವಿಧಾ ಮತಾ ।
> ಏಕಾ ಶಿವೇನ ನಿರ್ದಿಷ್ಟಾ ಬ್ರಹ್ಮಣಾ ಕಥಿತಾ ಪರಾ ।

ಬ್ರಹ್ಮನಿರ್ದಿಷ್ಟಚತುರ್ವರ್ಣಾಶ್ರಮಗಳಂತೆ, ಶಿವನಿರ್ದಿಷ್ಟ ಚತುರ್ವರ್ಣಾಶ್ರಮಗಳೂ ಉಂಟೆಂದು ಬೋಧಿಸಿದ್ದಾರೆ. ಅಲ್ಲದೆ, ಭಕ್ತಮಾರ್ಗಕ್ರಿಯಾಸ್ಥಲದಲ್ಲಿ—

> ಸ್ವಮಾರ್ಗಾಚಾರನಿರತಾಃ ಸಜಾತೀಯಾ ದ್ವಿಜಾಸ್ತು ಯೇ ।
> ತೇಷಾಂ ಗೃಹೇಷು ಭುಂಜೀತ ನೇತರೇಷಾಂ ಕದಾಚನ ।

ವೀರಶೈವಮತೀಯರಾದ ತ್ರೈವರ್ಣಿಕಸಜಾತೀಯ ದ್ವಿಜರು ಸಜಾತೀಯದ್ವಿಜರಲ್ಲಿಯೇ ಭೋಜನಾದಿಗಳನ್ನು ಮಾಡಬೇಕೆಂದೂ, ಈ ಮತೀಯರಾದಾಗ್ಯೂ ಇತರ ದ್ವಿಜರಲ್ಲಿ ಭೋಜನಾದಿಗಳನ್ನು ಮಾಡಬಾರದೆಂದೂ ಅಪ್ಪಣೆಕೊಡಿಸಿದ್ದಾರೆ. ಇದರ ಮೇಲಿಂದ ವೀರಶೈವಮತಸ್ಥಾಪನಾಚಾರ್ಯರು ವರ್ಣಾಶ್ರಮಧರ್ಮನಿಬಂಧನೆಗಳನ್ನು ಎಷ್ಟು ಪ್ರಬಲವಾಗಿ ಸ್ಥಿರಗೊಳಿಸಿರುವರೆಂಬ ವಿಷಯವು ಸರ್ವರಿಗೂ ಸ್ಪಷ್ಟವಾಗಿ ತೋರಿಬರುತ್ತದೆ.

ಲೋಕವಿಖ್ಯಾತರಾದ ವ್ಯಾಸಮಹರ್ಷಿಗಳು ಸ್ಕಂದಪುರಾಣಾಂತರ್ಗತ ಶಂಕರಸಂಹಿತೆಯಲ್ಲಿ—

> ವರ್ಣಾಶ್ರಮಸಮಾಚಾರಾಃ ಶಿವೇನ ಕಥಿತಾಃ ಪುರಾ ।
> ಯೇ ತಾನುಲ್ಲಂಘ್ಯ ವರ್ತಂತೇ ಶಿವಶಾಸ್ತ್ರಾಜ್ಞಯಾ ವಿನಾ ।
>
> ಮದಾಜ್ಞಾಭಂಗಕೃನ್ನ್ಯಾಣಾಂ ಯುಷ್ಮಾಭಿರ್ದಂಡೋ ಭವಿಷ್ಯತಿ ।
> ತೇ [illegible] ಕೃಷ್ಣ [illegible] ವೇದೋ ಹಿ [illegible]

ಈ ಪ್ರಕಾರವಾಗಿ ವರ್ಣಾಶ್ರಮಗಳು ಶಿವೋಕ್ತಗಳೆಂದೂ, ಅವುಗಳನ್ನು ಮೀರಿ ನಡೆಯುವವರು ನರಕಗಾಮಿಗಳಾಗುವರೆಂದೂ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗೂ ವೀರಶೈವಧರ್ಮಶಿರೋಮಣಿಯಲ್ಲಿ—

> ಶಿವೋಕ್ತಾಂ ಜಾತಿಮರ್ಯಾದಾಂ ಯೋಽತಿಕ್ರಮ್ಯ ಪ್ರವರ್ತತೇ ।
> ಸ ಚಾಂಡಾಲ ಇತಿ ಜ್ಞೇಯಃ ಸರ್ವಕರ್ಮಬಹಿಷ್ಕೃತಃ ।

ಈ ಪ್ರಕಾರವಾಗಿ ಶಿವೋಕ್ತವಾದ ಜಾತಿಮರ್ಯಾದೆಯನ್ನು ಯಾವನು ಮೀರಿ ನಡೆಯುವನೋ ಅವನು ಚಂಡಾಲನೆಂದೂ, ಸರ್ವಕರ್ಮಬಹಿಷ್ಕೃತನೆಂದೂ ಉಲ್ಲೇಖಿಸಲ್ಪಟ್ಟಿದೆ. ಇದೇರೀತಿಯಾಗಿ ಸಾವಿರಾರು ಧರ್ಮಗ್ರಂಥಗಳಲ್ಲಿ ವರ್ಣಾಶ್ರಮಗಳ ವಿಚಾರವು ಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ಪ್ರತಿಪಾದಿಸಲ್ಪಟ್ಟಿದ್ದರೂ, ಈ ವಿಷಯವನ್ನು ವೀರಶೈವಮತದಲ್ಲಿರತಕ್ಕ ಕೆಲಜನ ಅವೈದಿಕರು ಅಪಲಪಿಸುತ್ತ, ಮನಸ್ಸಿಗೆ ಬಂದಂತೆ ವರ್ತಿಸಹತ್ತಿರುವದನ್ನು ನೋಡಿದರೆ ಬಹು ವ್ಯಸನವೆನಿಸುತ್ತದೆ. ಈ ಕನ್ಸರ್ಟರು (ಮಿತ್ರರು) ಈ ರೀತಿಯಾಗಿ ವೀರಶೈವಮತದಲ್ಲಿ ವರ್ಣಾಶ್ರಮಧರ್ಮಗಳಿರುವುದಿಲ್ಲವೆಂದು ಅಪಲಪಿಸುತ್ತಿರುವುದನ್ನು ನೋಡಿ, ಅನ್ಯಮತೀಯರು ಈ ವಿಷಯವು ನಿಜವಿರಬಹುದೆಂದು ಭಾವಿಸಿದ್ದಾರೆ. ಅವರು ಹಾಗೆ ಭಾವಿಸಿದ್ದಲ್ಲಿ, ಅದು ಕೇವಲ ತಪ್ಪು ತಿಳುವಳಿಕೆಯಾಗಿರುವುದು. ಶ್ರೀವೈಷ್ಣವಮತದಲ್ಲಿ ಯಾವರೀತಿಯಾಗಿ ಚತುರ್ವರ್ಣಾಶ್ರಮಧರ್ಮಗಳು ಸ್ಥಾಪಿಸಲ್ಪಟ್ಟಿರುವವೋ, ಅದರಂತೆಯೇ ಈ ಮತದಲ್ಲಿಯೂ ಕೂಡ ಅನಾದಿಕಾಲದಿಂದಲೂ ಚತುರ್ವರ್ಣಾಶ್ರಮಧರ್ಮಗಳು ಸ್ಥಾಪಿಸಲ್ಪಟ್ಟಿರುವವು. ಶ್ರೀವೈಷ್ಣವಸಂಪ್ರದಾಯಕ್ಕೂ ವೀರಶೈವಸಂಪ್ರದಾಯಕ್ಕೂ ಯಾವ ವ್ಯತ್ಯಾಸವೂ ಇರುವುದಿಲ್ಲ. ಸಿದ್ಧಾಂತವಿಷಯವಾಗಲಿ, ಆಚಾರಾದಿವಿಷಯಗಳಾಗಲಿ ಎರಡೂ ಒಂದೇರೀತಿಯಾಗಿರುತ್ತವೆ. ದೇವತೋಪಾಸನಾವಿಷಯದಲ್ಲಿಯೂ ಹಾಗೂ ಕೆಲಕೆಲವು ಕರ್ಮಾದಿಗಳಲ್ಲಿಯೂ ಮಾತ್ರ ಅಲ್ಪಸ್ವಲ್ಪ ವ್ಯತ್ಯಾಸವಾಗುವುದುಂಟು. ಈ ವಿಷಯವನ್ನು ಮುಂದಿನ ಸಾರೆ ಪ್ರಕಟಿಸುವದಾಗುವದು.

ವೈಸರಾಯರ ಸಂಚಾರ

ವೈಸರಾಯ್‌ರವರು ಹಿಂದೂಸ್ಥಾನದ ಪೂರ್ವ ಸಮುದ್ರ ತೀರ ಮತ್ತು ಭೂರಕ್ಷಣ ಪ್ರದೇಶಗಳಾದ ವಿಶಾಖಪಟ್ಟಣ, ಕಲ್ಕತ್ತಾ, ಮದರಾಸ್ ಮುಂತಾದವುಗಳನ್ನು ನೋಡಿ ವಿಮಾನದಿಂದ ದೆಹಲಿಗೆ ಪ್ರಯಾಣ ಮಾಡಿದರು.

ಯುದ್ಧವಾರ್ತೆ.

ಬ್ರಿಟಿಷ್ ನೌಕೆಗಳು ಮುಳುಗಿದವು

ಕಳೆದ ಸೋಮವಾರ ಮೆಡಿಟರೇನಿಯನ್ ಸಮುದ್ರದಲ್ಲಿ 4 5 ಬ್ರಿಟಿಷ್ ಡಿಸ್ಟ್ರಾಯರ್ ನೌಕೆಗಳ ಮೇಲೆ ಜರ್ಮನ್ ವಿಮಾನಗಳು ಮುತ್ತಿಗೆ ನಡೆಸಿ ೩ ಡಿಸ್ಟ್ರಾಯರುಗಳನ್ನು ಮುಳುಗಿಸಿದವೆಂದು ಪ್ರಕಟವಾಗಿದೆ.

ಭಾರತಕ್ಕೆ ಸೈನ್ಯ

ಅಮೆರಿಕನ್ ಮತ್ತು ಬ್ರಿಟಿಷ್ ವಿಮಾನಗಳು ಭಾರತಕ್ಕೆ ಹೆಚ್ಚು ಸಂಖ್ಯೆಯಲ್ಲಿ ಬರುತ್ತಿವೆಯೆಂದೂ, ಜಪಾನರು ಒಂದುವೇಳೆ ಭಾರತವನ್ನು ಮುತ್ತಿದರೆ 10 ಲಕ್ಷಕ್ಕೆ ಮೀರಿದ ಸೈನ್ಯವು ಶತ್ರುಗಳನ್ನು ಎದುರಿಸಲು ಸಿದ್ಧವಾಗಿದೆಯೆಂದೂ, ಭರತಖಂಡದ ಸೇನೆಯು ತಿಂಗಳಿಗೆ 50 ಸಾವಿರದಷ್ಟು ಹೆಚ್ಚುತ್ತಿದೆಯೆಂದೂ ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರ ಕಾರ್ಯದರ್ಶಿಗಳು ತಿಳಿಸಿರುವರು.

ಯುನ್ನಾನ್ ಪ್ರಾಂತ್ಯದಲ್ಲಿ ಕದನ

ಜಪಾನ್ ಸೈನ್ಯವು ಯುನ್ನಾನ್ ಪ್ರಾಂತದಲ್ಲಿ ಬರ್ಮಾದ ಗಡಿಯೊಳಗೆ ೨೦೦ ಮೈಲಿಗಳವರೆಗೆ ಮುನ್ನುಗ್ಗಿದೆ. ಸಾಲ್ವಿನ್ ನದಿಯ ಮೇಲಿದ್ದ ಸೇತುವೆಗಳನ್ನು ಚೀಣೀಯರು ನಾಶಗೊಳಿಸಿದ್ದಾರೆ. ಅತ್ತ ಜಪಾನಿ ಸೈನ್ಯವೊಂದು ಥೈಲಾಂಡಿನಿಂದ ಉತ್ತರದ ಕಡೆಗೂ, ಮತ್ತೊಂದು ಇಂಡೋ ಚೀಣಾದಿಂದ ಮೆಕಾಂಗಿನ ಕಡೆಗೂ ಮುನ್ನುಗ್ಗುತ್ತಿದೆಯೆಂದು ವರದಿಯಾಗಿದೆ.

ಜಪಾನರಿಗೆ ಹೆಚ್ಚಿನ ಬಲ

ಪಶ್ಚಿಮ ಯುನಾನ್ ಪ್ರಾಂತ್ಯದಲ್ಲಿ ಹಿಮ್ಮೆಟ್ಟುತ್ತಿರುವ ಜಪಾನ್ ಸೇನೆಗೆ ಹೆಚ್ಚಿನ ಸೈನ್ಯ ಸಹಾಯವು ಬಂದಿದೆ. ಈಗ ಮತ್ತೆ ಜಪಾನ್ ಸೇನೆಗಳು ಮೇಲೆ ಬಿದ್ದಿವೆ. ದಕ್ಷಿಣ ಷಾನ್ ಸಂಸ್ಥಾನಗಳಲ್ಲಿ ಟಾಂಗಿಪೂರ್ವದಲ್ಲಿ ಚೀಣರು ಜಪಾನರನ್ನು ಎದುರಿಸುತ್ತಿದ್ದಾರೆ. ಮಿಟ್ಕಿನಾವಿಮಾನ ನಿಲ್ದಾಣದ ಮೇಲೆ ೧೨ನೇ ತಾ|| ದಿನ ಅಮೆರಿಕ ವಿಮಾನಗಳು ಮುತ್ತಿಗೆನಡೆಸಿ, ಬಾಂಬುಗಳನ್ನು ಸುರಿಸಿದವು. ಶತ್ರು ವಿಮಾನಗಳಿಗೆ ಬೆಂಕಿ ಹತ್ತಿಕೊಂಡಿತು.

ಮಡಗಾಸ್ಕರ್ ಆಡಳಿತ

ಮಡಗಾಸ್ಕರ್ ಆಡಳಿತದಲ್ಲಿ ಸ್ವತಂತ್ರ ಫ್ರೆಂಚರು ಸಹಾಯ ನೀಡುವರೆಂಬುದನ್ನು ಪ್ರಕಟಿಸಲಾಗಿದೆ. ಈ ಸಂಬಂಧವಾಗಿ ವಿದೇಶಾಂಗ ಕಚೇರಿಯವರು ಒಂದು ಪ್ರಕಟನೆ ಹೊರಡಿಸಿ "ಹಿಂದೆಯೇ ವಿವರಿಸಿರುವಂತೆ ಮಡಗಾಸ್ಕರ್ ದ್ವೀಪವು ಶತ್ರು ವಶವಾಗುವುದನ್ನು ತಪ್ಪಿಸಲು ಬ್ರಿಟಿಷರು ಅದನ್ನು ಆಕ್ರಮಿಸಿದರು. ಸ್ವತಂತ್ರ ಫ್ರೆಂಚರ ಆಡಳಿತ ಸಮಿತಿಯವರು ಅದರ ಆಡಳಿತದಲ್ಲಿ ಭಾಗವಹಿಸಬೇಕೆಂಬುದು ನಮ್ಮ ಇಷ್ಟವಾಗಿದೆ" ಎಂದು ತಿಳಿಸಲಾಗಿದೆ.

ಜಪಾನ್ ವೈಮಾನಿಕರು ಪ್ಯಾರಾಚೂಟ್ ಉಪಯೋಗಿಸುವುದಿಲ್ಲ

ಜಪಾನ್ ವೈಮಾನಿಕರು ತಮ್ಮ ವಿಮಾನಗಳು ಅಪಾಯಕ್ಕೆ ಸಿಕ್ಕರೂ ಪ್ಯಾರಾಚ್ಯೂಟ್‌ಗಳನ್ನು ಉಪಯೋಗಿಸುವದಿಲ್ಲವಂತೆ! ಜಪಾನ್ ಒಂದು ಕ್ಷೇತ್ರದಲ್ಲಿ ೪೧ ವಿಮಾನಗಳನ್ನು ಕೆಡವಿದರೂ ಒಬ್ಬ ಜಪಾನ್ ವೈಮಾನಿಕನೂ ಸಹ ಪ್ಯಾರಾಚ್ಯೂಟ್ ಸಹಾಯದಿಂದ ಇಳಿಯಲಿಲ್ಲ. ಈ ವಿಮಾನಗಳಲ್ಲಿ ೧೫೦ಕ್ಕಿಂತ ಹೆಚ್ಚು ಜನ ಜಪಾನರು ಮಡಿದರೆಂದು ತಿಳಿದುಬಂದಿದೆ. ಜೀವಸಹಿತ ಭೂಮಿಗೆ ಇಳಿದರೆ ಅಮೆರಿಕನ್ನರೂ ಆಸ್ಟ್ರೇಲಿಯನ್ನರೂ ತಮ್ಮನ್ನು ಕೊಲ್ಲುವರೆಂದು ಜಪಾನರು ವೈಮಾನಿಕರು ಹೇಳುವರಂತೆ!

ಬ್ರಿಟಿಷ್ ಸೇನೆಗಳ ಸ್ಥಾನ

ಬರ್ಮಾದಲ್ಲಿ ಬ್ರಿಟಿಷ್ ಸೇನೆಗಳು ಕಾಲೇವಾ ಕ್ಷೇತ್ರದಲ್ಲಿವೆಯೆಂದು ತಿಳಿದುಬಂದಿದೆ ಕಲೇವಾ ದಕ್ಷಿಣದಲ್ಲಿ ಶತ್ರುಗಳು ಭಾನುವಾರ ಬೆಳಿಗ್ಗೆ ಬ್ರಿಟಿಷರಮೇಲೆ ಬಿದ್ದರು ಆದರೆ ಅವರನ್ನೆಲ್ಲ ಹಿಂದಕ್ಕೆ ಅಟ್ಟಲಾಯಿತು.

೬೦೦೦೦ ಜನರು ದಿಕ್ಕು ಕಾಣದಾಗಿದ್ದಾರೆ

ಬರ್ಮಾದಲ್ಲಿ ಮೋನಿವಾ ಮತ್ತು ಕಾಲೇವಾಗಳ ಬಳಿ ಇರುವಬಿಡಾರಗಳಲ್ಲಿ ಇನ್ನೂ ೬೦೦೦೦ ಮಂದಿ ಭಾರತೀಯರು ಭಾರತಕ್ಕೆ ಹಿಂದಿರುಗಲು ಸೌಕರ್ಯಕ್ಕಾಗಿ ಕಾಯುತ್ತಿದ್ದಾರೆ ಈಗ ಪರಿಸ್ಥಿತಿ ವಿಷಮಿಸಿರುವುದರಿಂದ ಅವರನ್ನು ಹಿಂದಕ್ಕೆ ಕರೆತರುವುದು ಅನುಮಾನಕರವಾಗಿದೆ

ಚೀಣೀಯರ ವಿಜಯ

ಜಪಾನರ ಹಸ್ತಗತವಾಗಿದ್ದ ಚೀಣಾದಲ್ಲಿ ಅವರ ಕೈಗೊಂಬೆ ಸರ್ಕಾರದ ರಾಜಧಾನಿಯಾದ ಹೊಪಿನ್ ಎಂಬ ನಗರಗಳನ್ನು ಚೀಣೀ ಸೈನಿಕರು ವಶಪಡಿಸಿಕೊಂಡರು ಹಾಂಗ್‌ಚೌ ಕೊಲ್ಲಿಯಲ್ಲಿ ಜಪಾನರು 30,000 ಸೈನಿಕರನ್ನು ಜಮಾಯಿಸಿದ್ದಾರೆ ಭೂಮಿಯ ಕಡೆ ಮುನ್ನುಗ್ಗಲು ಇವರು ಸಮಯ ನಿರೀಕ್ಷಿಸುತ್ತಿದ್ದಾರೆಂದು ಹೇಳಲಾಗಿದೆ

ಅಮೆರಿಕಾದಲ್ಲಿ ಅದ್ಭುತ ವಿಮಾನ ಸೃಷ್ಟಿ

ಈವರ್ಷ ಅಮೆರಿಕೆಯಲ್ಲಿ ಒಂದು ತಾಸಿಗೆ ೭ ವಿಮಾನಗಳನ್ನು ನಿರ್ಮಿಸಬೇಕೆಂದು ಸಂಗ್ರಾಮವಸ್ತು ನಿರ್ಮಾಣ ಬೋರ್ಡಿನವರು ತಿಳಿಸಿರುತ್ತಾರೆ ವಿಶ್ವದಲ್ಲೆಲ್ಲ ಅತ್ಯಂತ ಬಲಯುತವಾದ ವಿಮಾನಬಲವನ್ನು ಅಮೆರಿಕವು ಪಡೆಯುವುದೆಂದು ಪ್ರಕಟವಾಗಿದೆ

ನಾಜಿಗಳ ಶಿರಚ್ಛೇದನ

ಯುದ್ಧಕ್ಕೆ ವಿರೋಧವನ್ನು ವ್ಯಕ್ತಪಡಿಸಿದ ೭ ಮಂದಿ ನಾಜಿಗಳನ್ನು ಮೊನ್ನೆ ನಾಜಿ ಮುಖ್ಯಾಧಿಕಾರಿಗಳು ಹಾಂಬರ್ಗಿನಲ್ಲಿ ಕೊಲೆ ಮಾಡಿಸಿದರೆಂದು ವರದಿಯಾಗಿದೆ ಹನೋವರ್, ಬ್ರೂನ್ಸ್‌ವಿಕ್ ಮುಂತಾದ ಊರುಗಳಲ್ಲೂ ಸಹ ಪ್ರಕೃತ ಯುದ್ಧಕ್ಕೆ ವಿರೋಧಿಗಳಾಗಿರುವ ಅನೇಕ ಮಂದಿ ನಾಜಿಗಳನ್ನು ದಸ್ತಗಿರಿ ಮಾಡಿದ್ದಾರೆ

ಮೆಡಿಟರೇನಿಯನ್ನಿನಲ್ಲಿ ಜರ್ಮನ್ ವಿಮಾನ ಬಲ

ಮೆಡಿಟರೇನಿಯನ್ನಿನಲ್ಲಿ ನಾಜಿ ವಿಮಾನಬಲವನ್ನು ಕಡಮೆ ಮಾಡಿದಂತಿದೆ ಆ ಕ್ಷೇತ್ರದಲ್ಲಿ ವಿಮಾನಬಲದ ಮುಖ್ಯಾಧಿಕಾರಿಗಳಾಗಿದ್ದ ಫೀಲ್ಡ್ ಮಾರ್ಷಲ್ ಕೆಸೆಲ್‌ರಿಂಗ್‌ರವರು ಇಟಲಿಯನ್ನು ಬಿಟ್ಟರೆಂದೂ, ಇತರ ಯುದ್ಧರಂಗಗಳ ಆವಶ್ಯಕತೆಯನ್ನು ಪೂರೈಸುವದಕ್ಕಾಗಿ ಮೆಡಿಟರೇನಿಯನ್ ಕ್ಷೇತ್ರದಲ್ಲಿದ್ದ ವಿಮಾನಗಳನ್ನು ಹಿಂದಕ್ಕೆ ಕರೆಯಿಸುತ್ತಿರುವರೆಂದೂ ಹೇಳಲಾಗಿದೆ

ಜರ್ಮನರ ನೂತನ ಪ್ರಯೋಗ

ಕ್ರಿಮಿಯಾದಲ್ಲಿ ನಾಜಿಗಳು ವಿಷವಾಯುವನ್ನು ಉಪಯೋಗಿಸಿದರೆಂದು ಮಾಸ್ಕೊಸುದ್ದಿಯು ತಿಳಿಸಿದ್ದಿತು ಆದರೆ ಜ॥ ವ್ಯಾನ್‌ಸ್ಪೀನ್‌ರವರು ಹೊಸಬಗೆಯ ಮೈನನ್ನು ಉಪಯೋಗಿಸುತ್ತಿರುವದೇ ಈ ಬಗೆಯ ಅಭಿಪ್ರಾಯಕ್ಕೆ ಕಾರಣವಾಗಿವೆಯೆಂದು ಈಗ ಪ್ರಕಟವಾಗಿದೆ. ಈ ಮೈನುಗಳು ಸಿಡಿಯುವ ಸ್ಥಾನದಿಂದ ಸುತ್ತಮುತ್ತ ೩00 ಗಜಗಳವರೆಗೆ ಗಾಳಿಯಲ್ಲಿರುವ ಆಮ್ಲಜನಕವನ್ನು ನಾಶಮಾಡಿಬಿಡುವವು ಕಳೆದ ಹಲವು ದಿನಗಳಿಂದ ಸತ್ತ ರಷ್ಯನ್ ಯೋಧರ ದೇಹದ ಮೇಲೆ ಗಾಯಗಳಾವುವೂ ಇಲ್ಲದ್ದರಿಂದ ಇದು ವಿಷವಾಯು ಪ್ರಯೋಗವಾಗಿರಬೇಕೆಂದು ರಷ್ಯನರು ಊಹಿಸಿದ್ದರು

ಸಂಯುಕ್ತ ರಾಷ್ಟ್ರಗಳ ಹಡಗುಗಳ ನಷ್ಟ

ಪೆರಲ್ ಬಂದರಿನ ದುರ್ಘಟನೆಯು ನಡೆದುದರಿಂದೀಚೆಗೆ ಸಂಯುಕ್ತ ರಾಷ್ಟ್ರಗಳು ಪೆಸಿಫಿಕ್ ಅಟ್ಲಾಂಟಿಕ್, ಕರೇಬಿಯನ್, ಆಫ್ರಿಕನ್ ತೀರಗಳಲ್ಲಿ ಒಟ್ಟು ೧೫೩ ಹಡಗುಗಳನ್ನು ಕಳೆದುಕೊಂಡವೆಂಬುದಾಗಿ ಅಮೆರಿಕಾ ಸರ್ಕಾರದವರು ತಿಳಿಸಿರುತ್ತಾರೆ ಅಮೆರಿಕಾ ಹಡಗುಗಳಿಗೇ ಹೆಚ್ಚಿನ ಹಾನಿಯಾಗಿರುವದು, ೯೨ ಹಡಗುಗಳು ಶತ್ರುಗಳ ಸಬ್‌ಮೇರಿನ್‌ಗಳಿಗೆ ತುತ್ತಾದವು

ಯುದ್ಧದಿಂದಾಗಿರುವ ಬ್ರಿಟಿಷ್ ಸೈನಿಕರ ನಷ್ಟ

1939 ನೆಯ ಸೆಪ್ಟೆಂಬರ್ ೩ ನೆಯ ತಾರೀಖಿನಿಂದ 1941 ನೆಯ ಸೆಪ್ಟೆಂಬರ್ 2 ನೆಯ ತಾರೀಖಿನವರೆಗೆ ಬ್ರಿಟಿಷ್ ಸಾಮ್ರಾಜ್ಯ ಸೈನಿಕರಲ್ಲಿ 183550 ಜನರಿಗೆ ಅಪಘಾತವಾಯಿತೆಂದೂ, ಅದರಲ್ಲಿ 48973 ಮಡಿದರೆಂದೂ, 46363 ಗಾಯಗೊಂಡರೆಂದೂ, 58459 ಶತ್ರುಗಳಿಗೆ ಸೆರೆಸಿಕ್ಕರೆಂದೂ, 29756 ಜನರು ಪತ್ತೆಯಿಲ್ಲವೆಂದೂ ಬ್ರಿಟಿಷ್ ಮಂತ್ರಿಗಳು ಕಾಮನ್ಸ್ ಸಭೆಯಲ್ಲಿ ಹೇಳಿಕೆಯನ್ನಿತ್ತಿರುವರು

ಅಮೇರಿಕದ ಟ್ಯಾಂಕುಗಳ ನಿರ್ಮಾಣ ಹೆಚ್ಚಿದೆ

ಅಮೆರಿಕದಲ್ಲಿ ಟ್ಯಾಂಕುಗಳ ಉತ್ಪತ್ತಿಯ ಶಕ್ತಿಯನ್ನು ಬಹಳವಾಗಿ ಹೆಚ್ಚಿಸಲಾಗಿದೆ ಆಕ್ಸಿಸ್ ರಾಷ್ಟ್ರಗಳಲ್ಲಿ ಟ್ಯಾಂಕುಗಳನ್ನು ನಿರ್ಮಾಣಮಾಡುತ್ತಿರುವುದಕ್ಕಿಂತ ಹೆಚ್ಚಾಗಿ ಅಮೆರಿಕವೊಂದರಲ್ಲಿಯೇ ನಿರ್ಮಾಣಮಾಡುತ್ತಿರಲಾಗಿದೆ ೧೯೪೧ನೇ ವರ್ಷದಲ್ಲಿ ಎಷ್ಟು ಟ್ಯಾಂಕುಗಳನ್ನು ಅಮೆರಿಕದಲ್ಲಿ ಉತ್ಪತ್ತಿಮಾಡಲಾಯಿತೋ ಅಷ್ಟು ಟ್ಯಾಂಕುಗಳನ್ನು ಈಗ ೫ ತಿಂಗಳುಗಳೊಳಗೆ ನಿರ್ಮಾಣಮಾಡಲಾಗಿದೆಯೆಂದು ಗೊತ್ತಾಗಿದೆ

ರಷ್ಯನರ ಮುಂದೋಟ

ಖಾರಕೋವ್ ಕ್ಷೇತ್ರದಲ್ಲಿ ರಷ್ಯನರು ೬೦ ೫೦ ಮೈಲಿ ಅಗಲದಲ್ಲಿ ನುಗ್ಗುತ್ತಿದ್ದಾರೆ ಶತ್ರುಗಳ ಮುಂದುಗಡೆಯ ರಕ್ಷಣೆ ವ್ಯೂಹವನ್ನು ಭೇದಿಸಿ, ಬಹಳ ದೂರ ಮುಂದೆ ನುಗ್ಗಿದ್ದಾರೆ ಜರ್ಮನರು ಅಲ್ಲಿಗೆ ಹೆಚ್ಚಿನ ಬಲವನ್ನು ಹೊಸದಾಗಿ ಕಳಿಸಿದರೂ ಕೂಡ, ರಷ್ಯನರ ಮುಂದೋಟವನ್ನು ತಡೆಯಲು ಅವರು ಶಕ್ತರಾಗಿಲ್ಲ ಈ ಕ್ಷೇತ್ರದಲ್ಲಿರುವ ಜರ್ಮನ್ ಸೇನೆಗೆ ಫೀಲ್ಡ್ ಮಾರ್ಷಲ್ ಥಿಯೋಡೋರ್‌ರವರು ದಂಡನಾಯಕರಾಗಿದ್ದಾರೆ ಕರ್ಚ್ ಪರ್ಯಾಯ ದ್ವೀಪದಲ್ಲಿ ರಷ್ಯನರು ಸ್ವಲ್ಪಮಟ್ಟಿಗೆ ಹಿಮ್ಮೆಟ್ಟಿದ್ದರೂ ಕೂಡ ಶತ್ರುಗಳು ಹೇಳುವಂತಹ ಅದ್ಭುತ ವಿಜಯವೇನೂ ಅವರಿಗೆ ದೊರೆತಿಲ್ಲ ಜರ್ಮನರಿಗೆ ರಷ್ಯನರು ಉಗ್ರನಷ್ಟವುಂಟುಮಾಡುತ್ತಿದ್ದಾರೆ ಜರ್ಮನರು ಇನ್ನೂ ಕರ್ಚ್ ಹಿಡಿದಂತೆ ಕಾಣುವದಿಲ್ಲ

ರಷ್ಯನ್ ಟ್ಯಾಂಕುಗಳ ಚಟುವಟಿಕೆ

ಲೆನಿನ್‌ಗ್ರಾಡ್ ರಂಗದಲ್ಲಿ ರಷ್ಯನರು ಬಹಳ ಬಲಯುತವಾದ ಟ್ಯಾಂಕುಗಳನ್ನು ಉಪಯೋಗಿಸುತ್ತಿದ್ದಾರೆ ಅವುಗಳನ್ನು ತಡೆಯಲು ಜರ್ಮನರು ೬ ಅಂಗುಲದ ಫಿರಂಗಿಗಳನ್ನು ಉಪಯೋಗಿಸುತ್ತಿದ್ದಾರೆ ಇವುಗಳ ಶೆಲ್‌ಗಳು ಸಿಡಿದಾಗ ಸುತ್ತಮುತ್ತಲ ವಾತಾವರಣದ ಬಿಸಿಯು ೩೦೦ ಡಿಗ್ರಿಗಳಿಗೆ ಏರುತ್ತದೆ! ರಷ್ಯದ ಈ ಬಲಯುತ ಟ್ಯಾಂಕುಗಳು ಇದುವರೆಗೆ ಶತ್ರುಗಳ ಅನೇಕ ಫಿರಂಗಿಗಳನ್ನು ನಾಶಮಾಡಿವೆ ಈಗ ಗಮನವೆಲ್ಲ ಕರ್ಚ್ ಪರ್ಯಾಯದ್ವೀಪದ ಮೇಲೆ ಕೇಂದ್ರೀಕೃತವಾಗಿದ್ದರೂ ಮತ್ತೆ ಲೆನಿನ್‌ಗ್ರಾಡ್ ಕ್ಷೇತ್ರದಲ್ಲಿ ಪರಿಸ್ಥಿತಿ ಕೆಟ್ಟಿದೆ ರಷ್ಯನರು ಹಲವು ಹೊಸ ಸ್ಥಾನಗಳನ್ನು ಆಕ್ರಮಿಸಿದ್ದಾರೆ ನಗರದಲ್ಲಿ ಆಹಾರ ವಸ್ತುಗಳ ಪರಿಸ್ಥಿತಿ ಮೇಲಾಗಿದೆ ಕ್ರಿಮಿಯಾದಲ್ಲಿ ಹರ್ ಹಿಟ್ಲರನು ಕೇವಲ ನಟನೆಗಾಗಿ ಕದನವನ್ನಾರಂಭಿಸಿದ್ದಾನೆಂದೂ ಅವನ ಉದ್ದೇಶವು ಲೆನಿನ್‌ಗ್ರಾಡ್ ಹಿಡಿಯುವುದೇ ಆಗಿದೆಯೆಂದೂ ತಿಳಿದುಬಂದಿದೆ.

ಸ್ವೀಕಾರ.

ಧಾರವಾಡ ಡಿ॥ ಗದಗ ತಾ॥ ಕೊಂಬಳಿಗ್ರಾಮದಲ್ಲಿರುವ ಮ॥ ರಾ॥ ಮುಧೋಳ ಶಿವಪ್ಪನವರ ಪುತ್ರಿ ಚಿ॥ ಸೌ॥ ಗಂಗವ್ವನನ್ನು ಲಕ್ಷ್ಮೇಶ್ವರ ತಾ॥ ವನಶಿಗ್ಗಿ ಗ್ರಾಮದಲ್ಲಿರುವ ಮ॥ರಾ॥ ಅಬ್ಬಿಗೇರಿ ಮರಿಬಸಪ್ಪನವರ ಪುತ್ರ ಚಿ॥ ಬಸಪ್ಪನಿಗೆ ಕೊಟ್ಟು ನಿಶ್ಚಯಮಾಡಿದ ಸಮಯದಲ್ಲಿ ವಧೂವರರ ಕಡೆಯವರಿಂದ ತೆಗೆಯಿಸಿದ 2 ರೂ ಗಳು ಗದಗ ಬೆಟಗೇರಿಯಲ್ಲಿರುವ ಮ॥ ರಾ॥ ಬೀಳೇರಿ ಮಲ್ಲಿಕಾರ್ಜುನಪ್ಪನವರ ದ್ವಾರಾ ತಲ್ಪಿರುತ್ತವೆ

ಮೈಸೂರು ರಾಜಧಾನಿಯಲ್ಲಿರುವ ಮ॥ ರಾ॥ ಪನಸಾರಿ ಅಂಗಡಿ ಶೆಟ್ಟಪ್ಪ ಸಿದ್ದಪ್ಪನವರ ಧರ್ಮಪತ್ನಿಯವರಾದ ಸೌ॥ ದೇವಮ್ಮನವರ 60ನೆಯ ವರ್ಷದ ಉಗ್ರಶಾಂತಿಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಗಳು ಮ॥ ರಾ॥ ಹುಂಜನಕೆರೆ ಪಟೇಲ್ ಪಿ ಚನ್ನಯ್ಯನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ॥ ನರಗುಂದಪೇಟಾ ಬನಹಟ್ಟಿ ಗ್ರಾಮದಲ್ಲಿ ನೆರವೇರಿದ ನೂತನ ನಂದೀಶ್ವರ ಪ್ರತಿಷ್ಠಾ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ಕೂಣ್ಣೂರು ಬೃಹನ್ಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಅನಂತಪುರ ಡಿ॥ ತಾಡಪತ್ರಿ ಕಂಬಾಲಮಠದ ವೇ॥ ಚೆನ್ನಮಲ್ಲಯ್ಯನವರು ತಮ್ಮ ಪುತ್ರ ಚಿ॥ ಮಲ್ಲಿಕಾರ್ಜುನಯ್ಯನ ದೀಕ್ಷೆಯ ಸಮಯದಲ್ಲಿ ಮತ್ತು ತಮ್ಮ ಪುತ್ರಿ ಚಿ॥ ಸೌ॥ ಸರ್ವಮಂಗಳಮ್ಮನಿಗೂ ಮೋಳೆ ಮದ್ದಿಕೆರೆ ಹಿರೇಮಠದ ವೇ॥ ವೀರಯ್ಯನವರ ಪುತ್ರ ಚಿ॥ ಪಂಪಾಪತಿಸ್ವಾಮಿಗೂ, ಕಂಬಾಲಮಠದ ವೇ॥ ದೊಡ್ಡಮಲ್ಲಯ್ಯನವರ ಪುತ್ರಿ ಚಿ॥ ಸೌ॥ ನಾಗಮಲ್ಲಮ್ಮನಿಗೂ ಸ್ವಾಲೂರು ಮಠದ ವೇ॥ ಬಸವಯ್ಯನವರ ಪುತ್ರ ಚಿ॥ ನಂದಯ್ಯನಿಗೂ ನೆರವೇರಿದ ವಿವಾಹಸಮಯದಲ್ಲಿ 2 ರೂ ಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಧಾರವಾಡ ಡಿ॥ ಲಕ್ಷ್ಮೇಶ್ವರ ಗ್ರಾಮದಲ್ಲಿರುವ ಮ॥ ರಾ॥ ಬಸೆಟ್ಟೆಪ್ಪ ಸಜ್ಜನಶೆಟ್ಟರ ಇವರ ತಮ್ಮಂದಿರ ಲಗ್ನದಲ್ಲಿ ತೆಗೆಯಿಸಿದ 1ರೂ ಮತ್ತು ಗುಡಿಗೇರಿ ತಾ॥ ಹುಲ್ಲಾಪುರ ಹಿರೇಮಠದ ಸಿದ್ಧರಾಮಯ್ಯನವರ ಲಗ್ನ ಸಮಯದಲ್ಲಿ ತೆಗೆಯಿಸಿದ 1ರೂ ಒಟ್ಟು 2 ರೂ ಗಳು ಕೊಟ್ಟೂರು ಹಿರೇಮಠದ ಶ್ರೀ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ॥ ಹೊಳೆ ಆಲೂರು ಗ್ರಾಮದಲ್ಲಿರುವ ಶ್ರೀ ಕಳಕಯ್ಯ ಕುರಡಗಿ ಇವರ ತಾಯಿಯವರು ಶಿವಾಧೀನರಾದ ಸಮಯದಲ್ಲಿ ತೆಗೆಯಿಸಿದ 1ರೂ ಮತ್ತು ಶ್ರೀ ಮಂಟಯ್ಯನವರು ವಿರಕ್ತಮಠ ಬೆಳವಣಿಕಿ ಇವರು ಶಿವಾಧೀನರಾದ ಕಾಲದಲ್ಲಿ ತೆಗೆಯಿಸಿದ 1ರೂ ಒಟ್ಟು 2 ರೂಪಾಯಿಗಳು ಹೊಳೆ ಆಲೂರು ಭಿಕ್ಷಾವೃತ್ತಿ ಹಿರೇಮಠದ ವೇ॥ ರೇವಣಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ

ರಾಯಚೂರು ಡಿ॥ ಹಿರೇವಂಕಲಕುಂಟೆ ಗ್ರಾಮದ ವೇ॥ ಹಿರೇಮಠದ ಶಾಸ್ತ್ರಿ ವಿರೂಪಾಕ್ಷಯ್ಯನವರು ತಮ್ಮ ತಮ್ಮಂದಿರ ಮಕ್ಕಳ ದೀಕ್ಷಾ ಮತ್ತು ವಿವಾಹ ಸಮಯದಲ್ಲಿ ತೆಗೆಯಿಸಿದ 1 ರೂ ಕೊಟ್ಟೂರು ವೇ॥ ಸಿ ಎಂ ಮರುಳಸಿದ್ಧಯ್ಯನವರ ದ್ವಾರಾ ತಲ್ಪಿರುತ್ತದೆ.

ಕಡೂರು ಡಿ॥ ಶಿವನಿಹೋಬಳಿ ನಾರಣಾಪುರಮಠದ ವೇ॥ ನಂಜುಂಡಯ್ಯನವರ ತಾಯಿಯವರು ಶಿವಾಧೀನರಾದ ಪ್ರಯುಕ್ತ ನೆರವೇರಿದ ಗಣಾರಾಧನೆಯ ಸಮಯದಲ್ಲಿ ತೆಗೆಯಿಸಿದ 1ರೂ ಎಂ ವಿ ಎಸ್ ಆರಾಧ್ಯ ಬೀರೂರು ಇವರ ದ್ವಾರಾ ತಲ್ಪಿರುತ್ತದೆ

ಶಿಕಾರಿಪುರದ ತಾ॥ ಕಡೆನಂದಿಹಳ್ಳಿ ಗ್ರಾಮದ ಹೋ॥ ಹಂ॥ ಮಠದ ಸೇವಕ ಬಿ. ಹಂಪಪ್ಪನವರು ಶಿವಾಧೀನರಾದ ಸಮಯದಲ್ಲಿ ಅವರ ಧರ್ಮಪತ್ನಿಯವರು ತೆಗೆಯಿಸಿದ 1 ರೂ ವೇ॥ ಮಾಸೂರು ಹಿರೇಮಠದ ಚನ್ನವೀರಾರಾಧ್ಯರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೪ ನೇಯ ಪುಟದಿಂದ ಮುಂದುವರಿದುದು].

ಯುಲಾರದ ಸ್ವಭಾವವುಳ್ಳದ್ದು. ಇದೇ ಮುಖ್ಯ ಕಾರಣವೇನೆಂದರೆ:–ಅವರು ತಿನ್ನುವ ಆಹಾರದ ಗುಣವೇ ಅಂತಹದು ಆಹಾರದಂತೆ ರಕ್ತ. ರಕ್ತದಂತೆಯೇ ಮಿದುಳು ಶಕ್ತಿಯು. ಇದರ ಶಕ್ತಿಯಂತೆಯೇ ಕಾರ್ಯಗಳು ಹೀಗಿರುವಲ್ಲಿ ಹಿಂದುಗಳಲ್ಲಿ, ಅದರಲ್ಲೂ ಬ್ರಾಹ್ಮಣರು ಸಾತ್ವಿಕಾಹಾರವನ್ನು ಸೇವಿಸುವವರಾದುದರಿಂದ ಭಯ, ಕ್ರೋಧ, ವ್ಯಸನ ಇವುಗಳನ್ನು ಹೆಚ್ಚು ತಡೆಯದ ಚಿತ್ತವುಳ್ಳವರಾಗಿರುವದರಿಂದ ವ್ಯಸನಾಂತ್ಯವಾದ ನಾಟಕಗಳನ್ನೇ ನಮ್ಮ ಪೂರ್ವಿಕರು ಬರೆಯಲಿಲ್ಲ. ಈಗಲಾದರೋ ದರೋಡೆ, ಖೂನಿ ಮೊದಲಾದ ಕಾರ್ಯಗಳನ್ನು ಸ್ವತಃ ಮಾಡುತ್ತಿರುವ ಸ್ವಭಾವವುಳ್ಳವರಾಗುತ್ತಾ ಬರುತ್ತಿರುವುದರಿಂದ ಇಂತಹ ನಾಟಕಗಳನ್ನೇರ್ಪಡಿಸಲುಪಕ್ರಮವಾಯಿತೆಂದೇ ಭಾವಿಸಬೇಕಲ್ಲವೆ? ಅತ್ಯುತ್ತಮವಾದ ನಾಟಕದ ಗುರಿಯು ಸತ್ಯ, ನೀತಿ, ಧರ್ಮ ದೈವಭಕ್ತಿಯೇ ಮೊದಲಾದ ಸದ್ಗುಣಗಳನ್ನು ಬೋಧಿಸಬೇಕೆಂಬ ಇಚ್ಛೆಯಿಂದ ವಿದ್ಯಾವಂತರಲ್ಲದ ತರಗತಿಯ ಜನಗಳ ಮನಸ್ಸಿನ ಅವಗಾಹನೆಗೆ ಬರಲೆಂಬುದೇ ಮುಖ್ಯಗುರಿಯಾಗಿರುವುದು. ಈ ಗುರಿಯು ತಪ್ಪಿಹೋಗಿ ಬರೆದಿರುವ ನಾಟಕಗಳು ವಿದ್ಯಾವಂತರಿಗೆ ರುಚಿಸವೆ, ಅವಿದ್ಯಾವಂತರ ಜೀವಿತಕ್ಕೆ ಅನುಕೂಲವೆಂದು ತೋರಿಸಬೇಕಾಗಿರುವ ದುರ್ಗುಣಗಳಿಂದ ತುಂಬಿತುಳುಕುವ ನಾಟಕ ಸಿನಿಮಾ ಮಂದಿರಗಳೇ ಈಗ ಹೆಚ್ಚು. ಈಗ ಈ ರೀತಿಯಾಗಿರುವುದರಿಂದಲೇ ಈಗಿನ ನಾಟಕಮಂದಿರಗಳು ಕೆಲವುಕಾಲ ಮಾತ್ರ ಜೀವಿಸಿಕೊಂಡಿದ್ದು ಕ್ಷಿಪ್ರದಲ್ಲಿಯೇ ನಾಶಹೊಂದುವದಕ್ಕೆ ಕಾರಣವೆಂದರಿಯಬೇಕು.

ಮುಖ್ಯವಾಗಿ ಪ್ರೇಕ್ಷಕರು ಬುದ್ಧಿವಾದಗಳನ್ನು ತಿಳಿದು ಜೀವಮಾನಗಳಲ್ಲಿ ಸಂತೋಷದಿಂದ ಕಾಲ ಕಳೆಯಬೇಕೆಂದು ಬುದ್ಧಿವಾದಗಳನ್ನು ಹೇಳ ನಡೆದುಕೊಂಡು ಹೋಗುತ್ತಿರುವಂತೆ ತೋರ್ಪಡಿಸಬೇಕು. ಪ್ರೇಕ್ಷಕರಿಂದ ಹಣವನ್ನು ಸುಲಿದುಕೊಂಡು ದುರ್ಗುಣದಿಂದ ಕೂಡಿದವನು ಹೀಗೆ ಪ್ರಾಣಬಿಡುವನೆಂದು ತೋರಿಸಿ, ವ್ಯಸನೋನ್ಮುಖಿಗಳಾಗಿ ಕಳುಹಿಸಬಾರದೆಂದೇ ಹಿಂದಣ ಕವಿಗಳ ಮನೋಗತವೆಂದು ತೋರಿಬರುತ್ತಿರುವುದು

ದೀಕ್ಷಾ, ವಿವಾಹ ಸಮಾರಂಭ

ರಾಯಚೂರು ಜಿ|| ಕುಷ್ಟಗಿ ತಾ|| ಹಿರೇವೊಂಕಲಕುಂಟೆ ಗ್ರಾಮದಲ್ಲಿ ವೇ|| ಹಿರೇಮಠದ ಶಾಸ್ತ್ರಿ ವಿರೂಪಾಕ್ಷಯ್ಯನವರು ತಮ್ಮ ವಂಶಗುರುಗಳಾದ ಕೊಟ್ಟೂರು ಕಲ್ಲಿಮನೆ ಬೃಹನ್ಮಠದ ಶ್ರೀ|| ಷ|| ಬ್ರ|| ಭೂತಭುಜಂಗ ಸ್ವಾಮಿಗಳವರನ್ನೂ, ಅವರ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ಪಿ. ಎಂ. ಶಿವಪ್ರಸಾದಶಾಸ್ತ್ರಿಗಳನ್ನೂ, ಕರೆದುಕೊಂಡು ಬಂದು, ತಮ್ಮ ಮಠದಲ್ಲಿ ವೈಶಾಖ ಬ|| ೩ ದಿವಸ ತಮ್ಮ ಅನುಜರಾದ ಕೈ|| ರುದ್ರಯ್ಯನವರ ತೃತೀಯ ಪುತ್ರ ಪಂಚಾಕ್ಷರಯ್ಯನೆಂಬ ವಟುವಿನ ದೀಕ್ಷಾ ಕಾರ್ಯವನ್ನು ವಿಧಿವತ್ತಾಗಿ ನಡೆಯಿಸಿದರು. ಅದೇದಿನ ಸಾಯಂಕಾಲ ರಥದಲ್ಲಿ ದೀಕ್ಷಾವಟುಗಳ ಸಹಿತ ತಮ್ಮ ಗುರುಗಳನ್ನೂ ಆರೋಹಣಮಾಡಿಸಿ, ಗ್ರಾಮದ ಮುಖ್ಯ ಮುಖ್ಯ ಬೀದಿಗಳಲ್ಲೆಲ್ಲಾ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನಡೆಯಿಸಿದರು. ಜನಸ್ತೋಮವು ದಾರಿಯುದ್ದಕ್ಕೂ ಕಿಕ್ಕಿರಿದು ನಿಂತಿದ್ದಿತು. ಎಲ್ಲಿ ನೋಡಿದರಲ್ಲಿ "ಶ್ರೀಜಗದ್ಗುರು ಪಂಚಾಚಾರ್ಯಮಹಾರಾಜಕೀ ಜೈ ಮಠೋದ್ಧಾರಕ ಪಂ|| ಶ್ರೀಕಾಶೀನಾಥಶಾಸ್ತ್ರೀ ಮಹಾರಾಜಕೀ ಜೈ! ಎಂಬ ಜಯಘೋಷವೇ ತುಂಬಿತುಳುಕುತ್ತಿದ್ದಿತು. ಹೀಗೆ ಉತ್ಸವವು ವೈಭವದಿಂದ ನಡೆದು, ೨ ಘಂಟೆಗೆ ಸ್ವಸ್ಥಾನವನ್ನು ಸೇರಿತು. ವೈಶಾಖ ಬ|| ೪ ಸೋಮವಾರ ಕೈ|| ರುದ್ರಯ್ಯನವರ ದ್ವಿತೀಯ ಪುತ್ರ ಚಿ|| ಲಿಂಗಯ್ಯನಿಗೂ, ಕೋತೀಕೊಪ್ಪದ ಗುರುವೊಡೆಯರ ಮಠದ ರುದ್ರಯ್ಯನವರ ಪುತ್ರಿ ಸೌ|| ವೀರಮ್ಮನಿಗೂ ತೃತೀಯ ಪುತ್ರ ಚಿ|| ಪಂಚಾಕ್ಷರಯ್ಯನಿಗೂ ಕೋ|| ಗು|| ಮ|| ರುದ್ರಯ್ಯನವರ ಪುತ್ರಿ ಸೌ|| ಶಿವಗಂಗಮ್ಮನಿಗೂ, ವಿವಾಹವು ವಿಧ್ಯುಕ್ತವಾಗಿ ನಡೆಯಿತು. ಈ ಮಂಗಳ ಕಾರ್ಯಕ್ಕೆ ಅಮರಗೋಳ ಬೃ|| ಮ|| ಶ್ರೀಗುರುಪಟ್ಟದ ಚಂದ್ರಶೇಖರ ಶಿವಾಚಾರ್ಯರೂ ಸಹ ಆಗಮಿಸಿದ್ದರು. ಜ್ಞಾನವೃದ್ಧರೂ, ವಯೋವೃದ್ಧರೂ ಆಜನ್ಮ ಬ್ರಹ್ಮಚಾರಿಗಳೂ ಶಿವಯೋಗಾನುಷ್ಠಾನತತ್ಪರರೂ ಆಗಿರುವ ವೇ|| ಶಾಸ್ತ್ರಿ ವಿರೂಪಾಕ್ಷಯ್ಯನವರಿಗೆ ಶ್ರೀ|| ಜ|| ಪಂಚಾಚಾರ್ಯರು ಕೈವಲ್ಯ ಸಂಪದವನ್ನು, ಅನುಗ್ರಹಿಸಲೆಂದು ಪ್ರಾರ್ಥಿಸುವ

ವೀರಶೈವಮಂಡಲಿ ಹಿರೇವೊಂಕಲಕುಂಟೆ.

ವಿವಾಹ ಮಹೋತ್ಸವ

ಧಾರವಾಡ ಜಿ|| ಲಕ್ಷ್ಮೇಶ್ವರ ಗ್ರಾಮದಲ್ಲಿರುವ ಮ|| ಬಸೆಟ್ಟೆಪ್ಪ ಸಜ್ಜನಶೆಟ್ಟರ ಇವರು ತಮ್ಮ ಅನುಜರ ಲಗ್ನವನ್ನು ವೈಶಾಖ ಶು|| ೧೧ ದಿವಸ ವಿಶೇಷ ವೈಭವದಿಂದ ನೆರವೇರಿಸಿದರು ಪ್ರತಿದಿವಸವೂ ಅನ್ನಸಂತರ್ಪಣೆಯು ವಿಶೇಷವಾಗಿ ನೆರವೇರಿತು ಇವರು ಚಿಕ್ಕವಯಸ್ಸಿನವರಿದ್ದಾಗ್ಯೂ ಪರಮ ಗುರುಭಕ್ತರೂ ಉದಾರಿಗಳೂ ಆಗಿರುವರು. ಜಗದಾಚಾರ್ಯರು ನೂತನ ವಧೂವರರಿಗೆ ಸಕಲ ಸನ್ಮಂಗಲಗಳನ್ನೀಯಲೆಂದು ಪ್ರಾರ್ಥಿಸುವ—

ಓರ್ವ ಗುರುಭಕ್ತ.

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀ ಜಗದಾಚಾರ್ಯರ ಜಯಂತೀ ಮಹೋತ್ಸವ
ಹೊಳೆಆಲೂರು

ಧಾರವಾಡ ಜಿಲ್ಲಾ ರೋಣ ತಾಲೂಕ ಪೈಕಿ ಹೊಳೆ ಆಲೂರ ಗ್ರಾಮದ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಸಂಘದವರು ವಾರ್ಷಿಕಪದ್ಧತಿಯಂತೆ ವೈ|| ಶು|| ೩ ಶನಿವಾರ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಯನ್ನೂ, ಹಾಗೂ ವೈ|| ಶು|| ೫ ಸೋಮವಾರ ದಾರುಕಾಚಾರ್ಯರ ಜಯಂತಿಯನ್ನೂ ವೈಭವದಿಂದ ನೆರನೇರಿಸಿದರು. ಶು|| ೫ ಸೋಮವಾರ ಶ್ರೀ ಜಗದಾಚಾರ್ಯರ ಭಾವಚಿತ್ರವು ಶ್ರೀರೇವಣಸಿದ್ಧಯ್ಯನವರು ಭಿ|| ಹಿರೇಮಠ ಇವರ ಮಠದಲ್ಲಿ ಷೋಡಶೋಪಚಾರದಿಂದ ಪೂಜಿಸಲ್ಪಟ್ಟಿತು. ರಾತ್ರಿ ೭ ಘಂಟೆಗೆ ಬ್ಯಾಂಡ್, ಬಾಜಾಭಜಂತ್ರಿ ಮುಂತಾದ ವಾದ್ಯಗಳಿಂದ ಉತ್ಸವ ಹೊರಟು ಪುರದ ಮುಖ್ಯ ಬೀದಿಗಳಲ್ಲಿ ಹಾಯ್ದು ಈಶ್ವರ ದೇವಾಲಯಕ್ಕೆ ತಲುಪಿತು

ಪ್ರತ್ಯಕ್ಷದರ್ಶಿ.

ಪ್ರಸಿದ್ಧಪತ್ರಿಕೆ.

ಇಂಡಿಯಾ ಸರ್ಕಾರದ ಇಂಡಿಯಾ ದೇಶದ ಹೊರಗಡೆಯ ದೇಶಗಳಲ್ಲಿರುವ ಭಾರತೀಯರಿಗೆ ಸಂಬಂಧಪಟ್ಟ ಇಲಾಖೆಯವರಿಂದ, ೧೯೪೨ನೆಯ ಇಸವಿಯ ಏಪ್ರಿಲ್ ೬ ನೆಯ ತಾರೀಖಿನಲ್ಲಿ ಸಾದರಾದ ಈ ಕೆಳಗೆ ಕಂಡ ಪ್ರಸಿದ್ಧಪತ್ರಿಕೆಯನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಪುನಃ ಪ್ರಕಟಿಸಲಾಗಿದೆ. ಈ ಕೆಳಗೆ ನಮೂದಿಸಲ್ಪಟ್ಟಿರುವ ರೀತಿಯಲ್ಲಿ ಮಿ|| ಡಬ್ಲ್ಯು. ಜೆ ಕೆ ಸ್ವಾರ್ಸ್ಕರವರ ಕರ್ತವ್ಯಗಳ ವ್ಯಾಪ್ತಿಗೊಳಪಟ್ಟ ಎಲ್ಲಾ ವಿಷಯಗಳನ್ನೂ ಅವರ ಗಮನಕ್ಕೆ ತಂದು ಇತ್ಯರ್ಥಗೊಳಿಸಿಕೊಳ್ಳಬೇಕು.

" ಕಾಲೊನಿಗಳ ಕಚೇರಿಯವರು ಇಂಡಿಯಾ ಸರ್ಕಾರದವರ ಒಪ್ಪಿಗೆಯ ಮೇಲೆ, ಮದರಾಸಿನ, ಅವರಿಕ್ಯಾಂಟಿನಲ್ಲಿರುವ ಮಲೆಯಾದ ಎಮಿಗ್ರೇಷನ್ ಕಮಿಷನರಾದ ಮಿ|| ಡಬ್ಲ್ಯು. ಜೆ. ಕೆ. ಸ್ವಾರ್ಸ್ಕರವರನ್ನು ಇಂಡಿಯಾ ದೇಶದಲ್ಲಿ, ಮಲೆಯಾದೇಶದ ಪ್ರತಿನಿಧಿಯಾಗಿ ನೇಮಕಮಾಡಿದರು. ಮಿ|| ಸ್ವಾರ್ಸ್ಕರವರು, ಈಗ ಇಂಡಿಯಾದೇಶದಲ್ಲಿ ವಾಸವಾಗಿರುವ ಮಲೆಯಾ ಸರ್ಕಾರದ ನೌಕರರುಗಳ ಮತ್ತು ಮಲೆಯಾದೇಶದಲ್ಲೇ ಉಳಿದುಕೊಂಡಿರುವ ಸರ್ಕಾರಿ ನೌಕರರುಗಳ ಆಶ್ರಿತರುಗಳಾಗಿದ್ದು, ಇಂಡಿಯಾ ದೇಶದಲ್ಲಿರುವವರ ಯೋಗಕ್ಷೇಮಗಳನ್ನು ನೋಡಿಕೊಳ್ಳುವರು. ಅವರು ಇಂಡಿಯಾದಲ್ಲಿರುವ ಮಲೆಯಾ ಸರ್ಕಾರದ ನೌಕರರುಗಳ ಸಲುಬು, ರಜದ ಸಂಬಳಗಳು, ಪೆನ್ಷನ್‌ಗಳು, ಪ್ರಾವಿಡೆಂಟ್ ಫಂಡುಗಳು, ಇವೇ ಮೊದಲಾದುವುಗಳಿಗೆ ಸಂಬಂಧಪಟ್ಟ ಮನವಿಗಳನ್ನು ಅಂಗೀಕರಿಸುವರು ಮತ್ತು ಅವುಗಳನ್ನು ಪರಿಶೀಲಿಸುವರು. ಈಗ ಶತ್ರುಗಳ ವಶವಾಗಿರುವ ಮಲೆಯಾದಲ್ಲಿರುವ ನೌಕರರುಗಳ ಆಶ್ರಿತವರ್ಗದವರಾಗಿ ಈಗ ಇಂಡಿಯಾದಲ್ಲಿರತಕ್ಕಂಥ ಜನಗಳಿಂದ ಆರ್ಥಿಕ ಸಹಾಯಕ್ಕಾಗಿ ಬರುವ ಮನವಿಗಳನ್ನು ಅವರು ಪರಿಶೀಲಿಸುವರು. ಅವರು ಈ ಕೆಲಸಗಳ ಜೊತೆಗೆ ಮಲೆಯಾದಿಂದ ಹೊರಟುಬಂದಿರುವ ಭಾರತೀಯರಲ್ಲದ ಬೇರೆ ಜನಾಂಗದ ನಿರಾಶ್ರಿತರುಗಳ ಯೋಗಕ್ಷೇಮಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವರು."

ಎನ್. ಎಸ್. ಸ್ವಾಮಿನಾಥ.
ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರು.

ನಿದ್ರೆ ಮತ್ತು ವಿಶ್ರಾಂತಿ

ನಿದ್ರೆಯಿಲ್ಲದೆ ಯಾವ ಪ್ರಾಣಿಯೂ ಬದುಕಿರಲಾರದು ನಿದ್ರೆಯನ್ನು ಬಲಾತ್ಕಾರದಿಂದ ತಡೆದಿದ್ದರೆ, ಮಾನಸಿಕ ಶಾರೀರಕ ಶಕ್ತಿಗಳೆರಡನ್ನೂ ಅದು ಮೂಲೋತ್ಪಾಟನ ಮಾಡುವುದು. ನಿದ್ರೆಯೆಂಬುದು ಮನಸ್ಸಿಗೂ, ಶರೀರಕ್ಕೂ, ಮಿದುಳಿಗೂ ಉಂಟಾಗತಕ್ಕ ಸಂಪೂರ್ಣವಾದ ವಿಶ್ರಾಂತಿಯೇ ಹೊರತು ಬೇರೆಯಲ್ಲ.

ಎಚ್ಚರದಲ್ಲಿರುವುದಕ್ಕಿಂತ ನಿದ್ರೆಯಲ್ಲಿ ಎದೆಯ ಬಡಿತದ ವೇಗವೂ, ಶಕ್ತಿಯೂ ಶಾಂತವಾಗುವುವು. ಉಸಿರಾಟವು ಮಂದವಾಗುವುದು. ಜಠರದಲ್ಲಿ ಮತ್ತು ಮೂತ್ರಕೋಶಗಳಲ್ಲಿ ನಡೆಯತಕ್ಕ ಕೆಲಸಗಳೂ ನಿದ್ರೆಯಲ್ಲಿ ದುಡಿತವಿಲ್ಲದೆ ಶಾಂತವಾಗಿ ನಡೆಯುವುವು. ಸ್ನಾಯುಗಳೆಲ್ಲಾ ಸಂಪೂರ್ಣ ವಿಶ್ರಾಂತಿಯನ್ನು ಹೊಂದುವುವು.

ನಾವು ನಿಜವಾದ ಸುಖನಿದ್ರೆಯನ್ನನುಭವಿಸಬೇಕಾದರೆ, ಮನಸ್ಸಿಗೂ ಬುದ್ಧಿಗೂ ಯಾವ ಕಳವಳವನ್ನೂ ತಂದುಕೊಳ್ಳಬಾರದು. ಅಜೀರ್ಣಕಾರಿಗಳಾದ ಆಹಾರಗಳೂ ಕೂಡ ನಿದ್ರೆಯನ್ನು ಕೆಡಿಸುವುವು. ನಿದ್ರೆಮಾಡುವುದರಿಂದ ಮುಂದಿನ ದಿವಸಕ್ಕೆ ಬೇಕಾದ ನಮ್ಮ ಕಾರ್ಯಸಾಮರ್ಥ್ಯವನ್ನು ಸಂಗ್ರಹಿಸಿಟ್ಟುಕೊಂಡಂತಾಗುವುದು. ದೇಹದ ಒಂದೊಂದು ಅವಯವವೂ ಕೆಲಕೆಲವು ಕಾಲಗಳಲ್ಲಿ ವಿಶ್ರಾಂತಿಯನ್ನೇ ಅನುಭವಿಸಬೇಕು. ಏಕೆಂದರೆ, ಕಲ್ಮಷಗಳನ್ನು ಕಳೆದು, ಹೊಸಉತ್ತೇಜನವನ್ನು ಹೊಂದುವದಕ್ಕೆ ನಿದ್ರೆಯೂ, ವಿಶ್ರಾಂತಿಯೂ ಸಹಕಾರಿಗಳು. ವಯಸ್ಕರಿಗೆ ನಿದ್ರೆಯು ಎಷ್ಟು ಅವಶ್ಯಕವೋ. ಮಕ್ಕಳ ವಿಷಯದಲ್ಲಿ ಅದರ ಅವಶ್ಯಕತೆಯು ಇನ್ನೂ ಅಧಿಕವಾಗಿರುವುದು. ಮಕ್ಕಳಿಗೆ ಬೆಳವಣಿಗೆಯೆಂಬುದು ನಿದ್ರೆಯಿಂದಲೇ ಬರಬೇಕು. ಹಗಲು ಹೊತ್ತಿನಲ್ಲಿ ಅವು ಆಹಾರವನ್ನು ತೆಗೆದುಕೊಳ್ಳುತ್ತ, ತಮ್ಮ ದೇಹಶಕ್ತಿಯನ್ನು ಉಪಯೋಗಿಸುವುವು. ರಾತ್ರಿಯಹೊತ್ತಿನಲ್ಲಿ, ಹಗಲು ಕೆಲಸಮಾಡಿ ಸವೆದುಹೋದ ಕಾರ್ಯಸಾಮರ್ಥ್ಯವನ್ನು ಆಯಾ ಅವಯವಗಳಿಗೆ ತುಂಬಿ, ನಿದ್ರೆಯಿಂದ ಹೆಚ್ಚು ಸಾಮರ್ಥ್ಯವನ್ನು ಪಡೆಯುವುವು. ಮಕ್ಕಳು ನಿದ್ರೆಮಾಡುವಾಗ ಯಾವ ಉದ್ದೇಶದಿಂದಲೇ ಆಗಲಿ ಅವುಗಳನ್ನೆಚ್ಚರಿಸುವುದು ಬಹಳ ಕಠಿಣಕೃತ್ಯವು. ವಯಸ್ಕರಿಗೆ ಬೆಳಗಿನ ಜಾವದಲ್ಲಿ ಏಳುವುದು ಆರೋಗ್ಯಕಾರಣವಾದರೂ ಮಕ್ಕಳಿಗೆ ಬೆಳಗಿನಜಾವದಲ್ಲಿ ನಿದ್ರೆಯು ದೇಹಕ್ಕೆ ಬಹಳ ಅನುಕೂಲವಾದುದು. ಆ ಕಾಲದಲ್ಲಿ ಅವುಗಳ ಸುಖನಿದ್ರೆಗೆ ಅವಕಾಶ ಕೊಟ್ಟಷ್ಟೂ ಅವುಗಳಿಗೆ ಗ್ರಹಣಶಕ್ತಿಯು ಹೆಚ್ಚುವುದು. ಆದರೆ ಹೆಚ್ಚು ವಿಷಯಗಳನ್ನು ಮಕ್ಕಳ ಮಿದುಳಿಗೆ ತುಂಬುವುದು ಯಾವಾಗಲೂ ಬಹಳ ಅಪಾಯಕಾರಣವು.

ಸುಖನಿದ್ರೆಯ ನಿಯಮವೇನೆಂಬುದನ್ನು ನಮ್ಮಲ್ಲಿ ಪ್ರತಿಯೊಬ್ಬರೂ ತಿಳಿದಿರಬೇಕಾದುದು ಅವಶ್ಯವು. ವೈದ್ಯಶಾಸ್ತ್ರೀಯವಾದ ಶೋಧನೆಗಳನ್ನು ಮಾಡಿದುದರಲ್ಲಿ, ರಾತ್ರಿಯ ಪ್ರಥಮಭಾಗದಲ್ಲಿ ಅನುಭವಿಸುವ ನಿದ್ರೆಯೇ ಉತ್ತಮವೂ, ಸುಖಕರವೂ ಆಗಿರುವುದು. ಆಗಿನ ನಿದ್ರೆಯೇ ಗಾಢನಿದ್ರೆಯೆನಿಸುವುದು. ರಾತ್ರಿಯಲ್ಲಿ ಹೊತ್ತು ಮೀರುತ್ತ ಬಂದಹಾಗೆಲ್ಲ, ನಿದ್ರೆಯಲ್ಲಿ ಚಂಚಲತೆಯು ಹೆಚ್ಚಿ ನಿಸ್ಸಾರವಾಗುತ್ತ ಬರುವುದು. ಸುಖನಿದ್ರೆಯನ್ನು ಬಯಸತಕ್ಕವರು ಹಾಸಿಗೆಯನ್ನೂ, ಮಲಗುವ ಕೋಣೆಯನ್ನೂ ಗಮನಿಸಬೇಕಾದುದವಶ್ಯವು. ರಾತ್ರಿಯ ಗಾಳಿಯು ಅಪಾಯಕರವೆಂಬ ತಪ್ಪು ತಿಳುವಳಿಕೆಯನ್ನು ಬಿಟ್ಟು, ಮಲಗುವ ಕೋಣೆಗೆ ಧಾರಾಳವಾಗಿ ಗಾಳಿಯು ಬರುವಂತೆ ಮಾಡಿಕೊಳ್ಳಬೇಕು. ಆಹಾರವನ್ನು ತೆಗೆದುಕೊಂಡಕೂಡಲೆ ನಿದ್ರೆಮಾಡಬಾರದು. ಕೊನೆಯಪಕ್ಷ ಮೂರು ಘಂಟೆಗಳ ಕಾಲವನ್ನು ಬಿಡಬೇಕು. ವಾಯುಗುಣವು ಶೀತಲವಾಗಿದ್ದಾಗ, ಮಲಗುವುದಕ್ಕೆ ಮೊದಲು

ದೇಹವನ್ನೂ, ಮುಖ್ಯವಾಗಿ ಕಾಲುಗಳನ್ನೂ ಉಷ್ಣವಾಗಿ ಇಟ್ಟುಕೊಳ್ಳಬೇಕು. ಆದರೆ ಅತ್ಯುಷ್ಣವಾಗಬಾರದು.

ನಿದ್ರೆಯ ವಿಷಯದಲ್ಲಿ ಈ ಕೆಳಗೆ ಕಂಡ ನಿಯಮಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು.

1. ನಿದ್ರೆಗೆ ಹೋಗುವಾಗ ಮನಸ್ಸು ಶಾಂತವಾಗಿರಬೇಕು.

2. ಹಾಸಿಗೆಯು ಬಹಳ ಮೃದುವೂ, ಬಹಳ ಕಠಿನವೂ ಅಲ್ಲದೆ, ಸಮತಲವಾಗಿ ಮೈಗೆ ಹಿತಕರವಾಗಿರಬೇಕು.

3. ಮಲಗುವ ಕೋಣೆಗೆ ಶುದ್ಧವಾದ ಗಾಳಿಯು ಧಾರಾಳವಾಗಿ ಬೀಸುವಂತಿರಬೇಕು. ಆದರೆ ಮೈಮೇಲೆ ನೇರವಾಗಿ ಗಾಳಿಯು ಬಡಿಯುವಂತಿರಬಾರದು. ಇದರಿಂದ ಶೈತ್ಯಕ್ಕೆ ಕಾರಣವಾಗಬಹುದು.

4. ನಿದ್ರೆಗೆ ರಾತ್ರಿಯ ಕಾಲವೇ ಉತ್ತಮವಾದದ್ದು. ಹಗಲುಹೊತ್ತು ನಿದ್ರೆಮಾಡುವುದು ಮತ್ತಷ್ಟು ಅನಾರೋಗ್ಯಕ್ಕೆ ಕಾರಣವು.

5. ಯಾವಾಗಲೂ ಬಲಮಗ್ಗುಲಾಗಿ ಮಲಗಬೇಕು. ಬೆನ್ನು ಕೆಳಗಾಗಿ ಮಲಗಲೇಬಾರದು. ಏಕೆಂದರೆ, ಇದರಿಂದ ರಕ್ತಸಂಚಾರಕ್ಕೆ ತಡೆಯುಂಟಾಗುವುದಲ್ಲದೆ ಬೆನ್ನುಹುರಿಯು ಅಮುಕಲ್ಪಡುವುದರಿಂದ ಅದಕ್ಕೆ ಕಾವೇರುವುದು. ಇದು ಮೈಗೆ ಬಹಳ ಕೆಟ್ಟುದು

6. ತಲೆಗೆ ಮುಸುಕುಹಾಕಿಕೊಂಡು ಮಲಗಬಾರದು. ಇದರಿಂದ ನಾವು ನಿಶ್ವಾಸದಿಂದ ಹೊರಗೆ ಬಿಟ್ಟ ಕೆಟ್ಟ ಗಾಳಿಯನ್ನೇ ಪುನಃಶ್ವಾಸಿಸುವಂತಾಗಿ, ಶ್ವಾಸಾಶಯಗಳನ್ನು ಕೆಡಿಸುವುದು.

7 ಸಾಧಾರಣವಾಗಿ ಪ್ರತಿ ಮನುಷ್ಯನಿಗೆ ಎಂಟು ಘಂಟೆಗಳ ಕಾಲದ ನಿದ್ರೆಯುಬೇಕು. ಆದರೆ ನಿದ್ರೆಯ ಕಾಲಪ್ರಮಾಣವು ಅವರವರ ದೇಹಪ್ರಕೃತಿಯನ್ನೂ, ಅವರು ಮಾಡತಕ್ಕ ಕಾರ್ಯದರೀತಿಯನ್ನೂ ಅನುಸರಿಸುವುದರಿಂದ, ಈ ವಿಷಯದಲ್ಲಿ ಸ್ಪಷ್ಟವಾದ ನಿಯಮವನ್ನೇನೂ ಹೇಳುವುದಕ್ಕಿಲ್ಲ. ದೇಹಶ್ರಮಪಡುವವರಿಗಿಂತಲೂ ಬುದ್ಧಿಯಿಂದ ಕೆಲಸಮಾಡತಕ್ಕವರಿಗೆ ಹೆಚ್ಚು ನಿದ್ರೆಯು ಅವಶ್ಯವು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಭಸ್ಮಗಳು		
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ಬಾಲಸಿಂಧೂರ	೧	೪—೦—೦
ಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ವಂಗ	೧	೧—೦—೦
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦–೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು.ಪಿ.

ಸಿದ್ಧಾಂತಶಿಖಾಮಣಿ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ

ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತವಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಸುಮಾರು ೫ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿ ನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M. F Printings ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು. ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಸಾರಿಸಾರಿ ಹೇಳಬಹುದಾಗಿದೆ. ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು. ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣನಾಥನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! **ಬೆಲೆ ೨ ರೂಪಾಯಿ.**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಬುದ್ಧಿಪಕ್ವತೆಗೆ ಪುಷ್ಟಿಯನ್ನು ಪಡೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಛಾರ್ಜು ೧ ರೂ. ೨ ಆಣೆ ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಪ್ರಿಂಟಾದದ್ದು) ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
[illegible] ಪೀಠಾರೋಹಣಸಮಾರಂಭಕ್ಕೆ ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯ ಮೇರೆಗೆ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೨—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾ ವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೨—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾ ವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೩—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ರೋಗ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಪೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ.ಪಿ ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[49] ಪೋ. ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ...	೧ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ) ..	೨ ಆಣೆ
ಬಸವಾದಿನಿಜತತ್ತ್ವದರ್ಶನ (೪ನೆಯ ಆವೃತ್ತಿ) ..	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ .	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ...	೨ ಆಣೆ
ಪಂಚಾಚಾರ ಪ್ರಕಾಶಿಕಾ . ..	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) ..	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) ...	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಪಾಕೆಟ್ಸೈಜು) ...	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) ...	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) .	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ ..	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೪೦ಮಹತ್ವದ ಫೋಟೋಗಳಿರುವವು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ...	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ.
A brief life sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*) .	**8 As**
Speeches by Pandit Shri Kashinatha Shastriji *English*)	**12 As.**
लिंगधारणचंद्रिका (संस्कृत)	१ रु.
वीरशैवरत्न (मराठी)	१ रु
महानारायणोपनिषद् (वीरशैवभाष्य-संस्कृत)	१ रु.
पुरुषसूक्तम् (वीरशैवप्राचीनभाष्योपेतम्)	४ आ.
नंदिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ । ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ॥
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ । ಪಂಚಾಚಾರ್ಯಜಗದ್ಗುರೂತ್ತಮವರಾನ್ ಶಾಲಿಷ್ಣುದೀಶೋಕಮಂ ॥

ಸ್ಥಳದವರಿಗೆ ೧ ರೂ ೧೨ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೫ನೇ ಮೇ ೧೯೪೨ [ಸಂಚಿಕೆ ೬

ಸ್ವೀಕಾರ.

ಬೆಳಗಾಂವ ಜಿ॥ ತೇರದಾಳ ಗ್ರಾಮದಲ್ಲಿರುವ ಚಿ॥ ಮಲ್ಲಿಕಾರ್ಜುನ ದಾನಪ್ಪ ಮೊಬಳಶೆಟ್ಟಿ ಇವರಿಗೂ ಮ॥ ರಾ॥ ಬಸವಲಿಂಗಪ್ಪ ಬಂದಿ ಬನಹಟ್ಟಿ ಇವರ ಪುತ್ರಿ ಚಿ॥ ಸೌ॥ ಗಂಗವ್ವನಿಗೂ, ಚಿ॥ ದಾನಪ್ಪಾ ಮುಗೆಪ್ಪಾ ಮೊಬಳಶೆಟ್ಟಿ ಇವರಿಗೂ ಮ॥ ರಾ॥ ರಾಮಪ್ಪಾ ಜಮಖಂಡಿ ಇವರ ಪುತ್ರಿಗೂ, ಚಿ॥ ಗುರುಬಸಪ್ಪಾ ಪರಪ್ಪಾ ಶಡಬಾಳ ಇವರಿಗೂ ಮ॥ ರಾ॥ ದುಂಡಪ್ಪನವರ ಪುತ್ರಿ ಚಿ॥ ಸೌ॥ ನಾಗವ್ವನಿಗೂ, ಚಿ॥ ಅಲ್ಲಪ್ಪಾ ಪರಪ್ಪಾ ಶಡಬಾಳ ಇವರಿಗೂ ಮ॥ ರಾ॥ ಪರಪ್ಪಾ ವಾಲಿ ಇವರ ಪುತ್ರಿ ಚಿ॥ ಸೌ॥ ಕಾಂತವ್ವನಿಗೂ, ಚಿ॥ ಮುರಿಗಯ್ಯ ಹಿರೇಮಠ ಇವರಿಗೂ ವೇ॥ ಗಂಗಯ್ಯ ಕೊಪ್ಪದ ಹಿರೇಮಠ ಇವರ ಪುತ್ರಿ ಸೌ॥ ಗೌರವ್ವನಿಗೂ, ಚಿ॥ ಗಂಗಯ್ಯ ಹಿರೇಮಠ ಇವರಿಗೂ ವೇ॥ ಬಸಯ್ಯಾ ಮಾಚಕನೂರು ಹಿರೇಮಠ ಇವರ ಪುತ್ರಿ ಚಿ॥ ಸೌ॥ ಚನ್ನವ್ವನಿಗೂ, ಚಿ॥ ಮಡಿವಾಳಯ್ಯ ಸಾವಳಗಿ ಹಿರೇಮಠ ಇವರಿಗೂ ವೇ॥ ಚನ್ನಬಸವಯ್ಯ ಹಿರೇಮಠ ಇವರ ಪುತ್ರಿಗೂ. ಚಿ॥ ಮುರಿಗಯ್ಯ ಲೋಕಾಪುರ ಹಿರೇಮಠ ಇವರಿಗೂ ವೇ॥ ಅಲ್ಲಯ್ಯ ಹಿರೇಮಠ ಇವರ ಪುತ್ರಿ ಚಿ॥ ಸೌ॥ ಗುರುಬಸವ್ವನಿಗೂ ನಡೆದ ವಿವಾಹ ಸಮಯದಲ್ಲಿ ವಧೂವರರ ಕಡೆಯಿಂದ ತೆಗೆಯಿಸಿದ 7 ರೂ ಗಳು ಶ್ರೀ॥ ಷ॥ ಬ್ರ॥ ಮುದರಖಂಡಿ ಹಿರೇಮಠದ ಚರಮೂರ್ತಿ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿ॥ ಹುವ್ವಿನಹಡಗಲಿಯಲ್ಲಿರುವ ಮ॥ ರಾ॥ ಕೊಪ್ಪಿನ ವೀರಪ್ಪನವರ ಪುತ್ರ ಚಿ॥ ಚನ್ನಬಸವಪ್ಪನಿಗೆ ಬಸಿರಲ್ಲು ನೆಲವಗಿ ಜಂತಲಿ ಮ॥ ರಾ॥ ಬಸಪ್ಪನವರ ಪುತ್ರಿ ಚಿ॥ ಸೌ॥ ಸಾವಿತ್ರವ್ವನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರಿಂದ ತೆಗೆಯಿಸಿದ 3—8—0 ಗಳು ಮತ್ತು ಹಂಪಸಾಗರದ ವೇ॥ ಅರಳೆಲೆಮಠದ ಕೊಟ್ರಯ್ಯನವರು ತಮ್ಮ ಪುತ್ರಿಯ ವಿವಾಹ ಸಮಯದಲ್ಲಿ ತೆಗೆಯಿಸಿದ 1 ರೂ. ಮತ್ತು ಹೂವಿನಹಡಗಲಿ ಕೊಬರದ ರುದ್ರಪ್ಪನವರು ಶಿವಾಧೀನರಾದ ಸಮಯದಲ್ಲಿ ತೆಗೆಯಿಸಿದ 1 ರೂ. ಒಟ್ಟು 5—8—0 ಗಳು ಮ॥ ರಾ॥ ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ಬೆಳಗಾಂವ ಜಿ॥ ಅಥಣಿ ತಾ॥ ಹುಲಗಬಾಳಗ್ರಾಮದಲ್ಲಿರುವ ಮ॥ ರಾ॥ ರಾಯಗೌಡ ಬಸಗೌಡ ಪಾಟೀಲ ಇವರ ವಿವಾಹ ಸಮಯದಲ್ಲಿ ಸದರಿಯವರು ಪ್ರಭಾಪೋಷಣಕ್ಕೋಸ್ಕರ 5 ರೂ. ಗಳನ್ನು ಕಳುಹಿಸಿರುತ್ತಾರೆ.

ಸೊಲ್ಲಾಪುರದಲ್ಲಿರುವ ಮ॥ ರಾ॥ ಮಲ್ಲಪ್ಪ ಗೊರವಳ್ಳಿ ಇವರ ಪುತ್ರ ಚಿ॥ ಶಿವಲಿಂಗಪ್ಪ ಉರ್ಫ ನಾನಾಸಾಹೇಬ ಇವರಿಗೆ ಮ॥ ರಾ॥ ಭೀಮಣ್ಣಪ್ಪ ಬಿರಾಜದಾರ್ ಸಿಂದಗಿ ಇವರ ಪುತ್ರಿ ಚಿ॥ ಸೌ॥ ಸಂಗವ್ವಾಬಾಯಿ ಉರ್ಫ ವಿಜಯಾದೇವಿಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ. ಗಳು ಶ್ರೀ॥ ಷ॥ ಬ್ರ॥ ಮೈನಾಪುರ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಜಿ॥ ಹುಲಗೂರು ಗ್ರಾಮದಲ್ಲಿರುವ ಮ॥ ರಾ॥ ಸಂಗಪ್ಪನವರು ಅತ್ತಿಗೇರಿ ಇವರ ಜ್ಯೇಷ್ಠ ಭ್ರಾತೃಗಳಾದ ಶಿವಪ್ಪನವರ ಪುತ್ರ ಚಿ॥ ವೀರಪ್ಪನಿಗೂ ಮತ್ತಿಕೋಟೆಯಲ್ಲಿರುವ ಮ॥ ಶಿವಮೂರ್ತಿಪ್ಪ ಶೆಟ್ಟರ ಇವರ ಪುತ್ರಿ ಚಿ॥ ಸೌ॥ ಬಸವ್ವನಿಗೂ ಮತ್ತು ಮ॥ ಸಂಗಪ್ಪನವರ ಹಿರೇ ಅಣ್ಣಂದಿರಾದ ಮ॥ ವೀರಪ್ಪನವರ ಪುತ್ರ ಚಿ॥ ವಿರೂಪಾಕ್ಷಪ್ಪನಿಗೂ ಬೊಮ್ಮನಹಳ್ಳಿಯಲ್ಲಿರುವ ಮ॥ ರಾ॥ ಹೋಳಲದ ಫಕೀರಪ್ಪನವರ ಪುತ್ರಿ ಚಿ॥ ಸೌ॥ ನೀಲಗಂಗವ್ವನಿಗೂ ನೆರವೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ ಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಹೊಸಪೇಟೆ ತಾ॥ ಶ್ರೋತ್ರಿಯಂಗಂಗಲಾಪುರದಲ್ಲಿರುವ ಮ॥ ರಾ॥ ಪಾಟೀಲ ಮಲ್ಲನಗೌಡರ ಪುತ್ರ ಚಿ॥ ಬಸವನಗೌಡನಿಗೆ ಪ್ರಾಪ್ತವಾಗಿದ್ದ ಜ್ವರವು ಶ್ರೀ ಜಗದ್ಗುರು ರೇಣುಕಾಚಾರ್ಯರ ಅನುಗ್ರಹದಿಂದ ಗುಣವಾದ ಸಂತೋಷಕ್ಕಾಗಿ ಸದರಿಯವರು ಪ್ರಭಾಪೋಷಣಕ್ಕೋಸ್ಕರ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಸಾಗರ ತಾ॥ ಹೊಸಮನೆ ಗ್ರಾಮದ ಮ॥ ರಾ॥ ಎಚ್ ಸಿದ್ಧಪ್ಪಗೌಡರ ತಮ್ಮ ಚಿ॥ ವೀರಭದ್ರಪ್ಪಗೌಡರಿಗೆ ಬಾಗಸಾಲೆಗ್ರಾಮದ ಮ॥ ರಾ॥ ಪುಟ್ಟಪ್ಪಗೌಡರ ಮಗ ಬಸಪ್ಪಗೌಡರ ಪುತ್ರಿ ಚಿ॥ ಸೌ॥ ಹಾಲಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ತೆಗೆಯಿಸಿದ 1 ರೂಪಾಯಿಯು ಮ॥ ರಾ॥ ಎಚ್ ಬಿ ಚನ್ನಬಸಪ್ಪಗೌಡ ಗುಳ್ಳೇಹಳ್ಳಿ, ಇವರ ದ್ವಾರಾ ತಲ್ಪಿರುತ್ತದೆ

ಸೊಲ್ಲಾಪುರದಲ್ಲಿರುವ ಮ॥ ಶಿವಬಾಳಪ್ಪ ಬಿರಾಜದಾರ್ ಇವರ ಪುತ್ರ ಚಿ॥ ಚನ್ನಪ್ಪನಿಗೂ ಲಕ್ಷ್ಮಣಪ್ಪ ಕೋರವಲಿ ವಾಡೀಕರ ಇವರ ಪುತ್ರಿ ಚಿ॥ ಸೌ॥ ಕಸ್ತೂರಿಬಾಯಿಗೂ ಮತ್ತು ಮ॥ ಗಣಪತಿ ರಾಮಪುರೆ ಧೋತ್ರೀಕರ ಇವರ ಪುತ್ರ ಚಿ॥ ಶಂಕರಪ್ಪನಿಗೂ ದಾನಪ್ಪ ಬಿರಾಜದಾರ್ ಇವರ ಪುತ್ರಿ ಚಿ॥ ಸೌ॥ ಶಿವಲಿಂಗವ್ವನಿಗೂ ನಡೆದ ವಿವಾಹಸಮಯದಲ್ಲಿ ಸಮರ್ಪಿಸಿದ 1 ರೂ. ಯು ಸೌ॥ ಭಾಗೀರಥೀಬಾಯಿ ಕಟಾಪ ಇವರ ದ್ವಾರಾ ತಲ್ಪಿರುತ್ತದೆ

ಸೊಲ್ಲಾಪುರದಲ್ಲಿರುವ ವೇ॥ ಶಿವಯ್ಯಸ್ವಾಮಿ ಜಂಬಗಿ ಇವರ ಪುತ್ರ ಚಿ॥ ಸಂಗಯ್ಯನಿಗೆ ಬಾರ್ಶಿಗ್ರಾಮದ ವೇ॥ ಜಗನ್ನಾಥಸ್ವಾಮಿ ಧಾಣೇಗಾಂವಕರ ಇವರ ಪುತ್ರಿ ಚಿ॥ ಸೌ॥ ಸುಶೀಲಾಬಾಯಿಯನ್ನು ಕೊಟ್ಟು ನಡೆಯಿಸಿದ ವಿವಾಹಸಮಯದಲ್ಲಿ ತೆಗೆಯಿಸಿದ 1 ರೂ. ಯು ಶ್ರೀ॥ ಷ॥ ಬ್ರ॥ ಬಾರ್ಶಿ ಪರಾಂಡಕರಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ರಾಯಚೂರು ಜಿ॥ ಮನ್ನಲಾಪುರ ಗ್ರಾಮದಲ್ಲಿರುವ ವೇ॥ ಮಠದ ಸಿದ್ಧಯ್ಯನವರ ಪುತ್ರ ಚಿ॥ ಮರಿಯಯ್ಯನಿಗೆ ನೆರವೇರಿಸಿದ ಮಾಹೇಶ್ವರ ದೀಕ್ಷಾಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ ಯು ರಾಯಚೂರು ಶಿಖರಮಠಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಗುರುಲಿಂಗಶಿವಾಚಾರ್ಯಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಹುಮನಾಬಾದ ಗ್ರಾಮದ ಶ್ರೀ ಸಿದ್ಧಲಿಂಗಯ್ಯನವರು ಚಕ್ಕಿಪಳ್ಳಿ ಇವರು ಶಿವಾಧೀನರಾದ ಸಮಯದಲ್ಲಿ ತೆಗೆಯಿಸಿದ 1 ರೂಪಾಯಿಯು ವೇ॥ ಬಂಗಿ ಸಿದ್ಧರಾಮಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಸಾಹಿತ್ಯವಿಶಾರದ ಷ॥ ಬ್ರ॥ ಶ್ರೀ ಗುರುಲಿಂಗಶಿವಾಚಾರ್ಯ ಸ್ವಾಮಿಗಳು.

ಇವರು ರಾಯಚೂರಿನ ಸುಪ್ರಸಿದ್ಧವೂ ಬಹು ಪುರಾತನವೂ ಆದ ಶಿಖರ ಮಠದ ಅಧ್ಯಕ್ಷರು. ಇವರು ಕಳೆದ ವರ್ಷ ಕಲ್ಕತ್ತಾ ಗವರ್ನಮೆಂಟ್ "ಕಾವ್ಯತೀರ್ಥ" ಪರೀಕ್ಷೆಗೆ ಕುಳಿತು ಫಸ್ಟ್ ಕ್ಲಾಸಿಗೆ ತೀರ ಸ್ವಲ್ಪ ಮಾರ್ಕ್ಸ್ ಕಡಿಮೆಯಾಗಿ ಉತ್ತೀರ್ಣರಾಗಿದ್ದಾರೆ. ಕರ್ನಾಟಕದಿಂದ ಈ ಪರೀಕ್ಷೆಗೆ ಕುಳಿತ ೨೨ಜನ ವಿದ್ಯಾರ್ಥಿಗಳಲ್ಲಿ ಇವರೊಬ್ಬರೇ ಉತ್ತೀರ್ಣರಾಗಿರುವದು ಕರ್ನಾಟಕಕ್ಕೂ ವೀರಶೈವ ಗುರುವರ್ಗಕ್ಕೂ ಭೂಷಣಾಸ್ಪದವಾಗಿದೆ

ಶ್ರೀಗಳು ಒಳ್ಳೇ ಮೇಧಾವಿಗಳಿದ್ದು ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಒಳ್ಳೆ ವಾಗ್ಮಿತ್ವವನ್ನು ಸಂಪಾದಿಸಿದ್ದಾರೆ. ಅಲ್ಲದೆ ಮಧುರ ಶೈಲಿಯ ಲೇಖಕರೂ ಆಗಿದ್ದಾರೆ. ಸಂಸ್ಕೃತದ ಸಂಪೂರ್ಣ ಭಕ್ತರಾಗಿದ್ದರೂ, ಕರ್ನಾಟಕದ ಉಜ್ವಲಾಭಿಮಾನಶಾಲಿಗಳಾಗಿದ್ದಾರೆ. ವೀರಶೈವ ಗುರುಕುಲದ ಪ್ರಾಚೀನ ಮಹೋಜ್ವಲ ಪ್ರಭೆಯನ್ನು ಪುನಃ ಕಾಣಲು ಅಪೇಕ್ಷಿಸುತ್ತಾರೆ. ಇವರು ಸಧ್ಯಃ ಮಂಗಳೂರು ಜಿ॥ ಕಾರ್ಕಳದಲ್ಲಿ ಹೆಚ್ಚಿನ ಅಭ್ಯಾಸ ಮಾಡುತ್ತಲಿದ್ದಾರೆ. ಕಾಲೇಜ ಶಿಕ್ಷಣವು ಮುಗಿಯುವವರೆಗೂ ಎಲ್ಲರೀತಿಯ ಸಹಾಯ ಸಹಕಾರಗಳನ್ನು ನೀಡುತ್ತಿರುವ ಶ್ರೀಮಂತ ಪಂಪನಗೌಡ ಸಕ್ರಪ್ಪಗೌಡ ರಾಯಚೂರು, ಬಿ ಎ. ಎಲ್.ಎಲ್.ಬಿ ಶ್ರೀಮಂತ ಆಲೂರು ಬಸವಪ್ಪನವರು, ಬಿ ಎ ಎಲ್ ಎಲ್ ಬಿ ತಹಸೀಲ್‌ದಾರ್ ಈ ಮಹಾಶಯರಿಗೆ ಜಗದೀಶ್ವರನು ಆಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನೀಯಲಿ.

ಗು. ಪ.

ರಾಜಧಾನಿಯ ಸಮಾಚಾರ

ಈಗ್ಗೆ ಕೆಲವು ದಿವಸಗಳಿಂದ ಮಳೆಯು ವಿಶೇಷವಾಗಿ ಬೀಳುತ್ತಿರುವುದರಿಂದ ಮೈಸೂರು ನಗರದ ಹವೆಯು ಬಹಳ ತಂಪಾಗಿರುವದು.

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಬಸವಪಂಥಿಗಳ ವ್ಯರ್ಥಪ್ರಲಾಪ

(ಲೇ—ಗಂಗಾಧರ ಶಿವಾಚಾರ್ಯರು, ಸೊರಬ.)

ವೀರಶೈವ ಮತಸಂಸ್ಥಾಪಕರಾದ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ಜಗದಾದಿಯಲ್ಲಿ ಶ್ರೀಮತ್ಪರಶಿವನ ಪಂಚವದನಸಂಭೂತರಾಗಿ ಪ್ರತಿಯೊಂದು ಯುಗದಲ್ಲಿಯೂ ಸೋಮೇಶಾದಿ ಪ್ರಸಿದ್ಧ ಪಂಚಶಿವ ಲಿಂಗಗಳಿಂದವತರಿಸಿ ವೇದಾಗಮೋಪನಿಷತ್ಪ್ರತಿಪಾದಿತವಾದ ಲಿಂಗಧಾರಣರೂಪ ಸಿದ್ಧಾಂತವನ್ನು ಸಂಸ್ಥಾಪಿಸಿ ಅದರ ಪೋಷಣೆಗೆಂದು ರಂಭಾಪುರೀ ಕೇದಾರೋಜ್ಜಯಿನೀ ಕಾಶೀ ಶ್ರೀಶೈಲಕ್ಷೇತ್ರಗಳಲ್ಲಿ ಪಂಚಪೀಠಗಳನ್ನು ನೆಲೆಗೊಳಿಸಿರುವದು ಜಗದ್ವಿದಿತವಾದ ವಿಷಯವಾಗಿದೆ. ಶಿವಾಗಮಗಳಲ್ಲಿಯಂತೂ ಈ ವಿಷಯವು ವಿಶೇಷವಾಗಿ ಹೇಳಲ್ಪಟ್ಟಿದೆ. ಸೇತುಶೀತಾಚಲಪರ್ಯಂತವಾಗಿ ವಿಸ್ತೀರ್ಣವಾದ ನಮ್ಮ ಭರತಭೂಮಿಯು ಪಂಚಾಚಾರ್ಯರ ಸಂಚಾರದಿಂದ ಪುನೀತವಾಗಿದೆ. ಅವರು ಅಡಿಯಿಡದ ಎಡೆಯಿಲ್ಲ. ಇದಕ್ಕವರ ಪವಿತ್ರನಾಮದಿಂದ ಎಲ್ಲೆಲ್ಲಿಯೂ ಕಂಗೊಳಿಸುತ್ತಿರುವ ತೀರ್ಥಗಳೂ ದೇವಾಲಯಗಳೂ ಪ್ರಬಲ ಪ್ರಮಾಣಗಳಾಗಿವೆ. ವಿಷ್ಣುಬ್ರಹ್ಮೇಂದ್ರಾದಿ ದೇವತೆಗಳಿಗೂ ಲಕ್ಷ್ಮೀಸರಸ್ವತ್ಯಾದಿ ಶಕ್ತಿಯರಿಗೂ ಈ ಆಚಾರ್ಯರೇ ಲಿಂಗಧಾರಣ ಪಂಚಾಕ್ಷರೋಪದೇಶಾದಿಗಳನ್ನು ಮಾಡಿದರೆಂದು ಪಾಶುಪತತಂತ್ರಾದಿ ಗ್ರಂಥಗಳು ಮುಕ್ತಕಂಠದಿಂದ ಉದ್ಘೋಷಿಸುತ್ತವೆ. ಶಿವಲಿಂಗಾಂಕಿತಗಳಾದ ಬಾರ್ಸಿ, ಪಂಢರಪುರ, ಅನಂತಶಯನಗಳಲ್ಲಿಯ ವಿಷ್ಣುವಿಗ್ರಹಗಳೂ ಕೊಲ್ಹಾಪುರ, ಕಾಶಿ, ಮಥುರಾ, ಕಾಶ್ಮೀರ ಪ್ರದೇಶಗಳಲ್ಲಿಯ ಶಕ್ತಿವಿಗ್ರಹಗಳೂ ಈ ಅಭಿಪ್ರಾಯವನ್ನೇ ವ್ಯಕ್ತಗೊಳಿಸುತ್ತಿರುವವು. ವ್ಯಾಸಾಗಸ್ತ್ಯ ದಧೀಚಿ ಗೌತಮ ಉಪಮನ್ಯು ಹರಕಂರ ಮುಂತಾದ ಮಹರ್ಷಿಗಳೂ ಸಹ ಪಂಚಾಚಾರ್ಯರಿಂದ ಲಿಂಗಧಾರಿಗಳಾಗಿ ಶಿವಜ್ಞಾನಸಂಪನ್ನರೆನಿಸಿ ಮುಕ್ತರಾದುದು ಕಾಶೀಖಂಡ ಕೇದಾರಖಂಡ ಶಂಕರಸಂಹಿತಾದಿ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಲಿಂಗಧಾರಣವು ವೇದೋಕ್ತವಾದುದರಿಂದ ಈ ಲಿಂಗಧಾರಣಕ್ಕೆ ಕಾರಣೀಭೂತರಾದ ಪಂಚಾಚಾರ್ಯರ ಕಾಲವೂ ವೇದಕಾಲದಷ್ಟು ಪ್ರಾಚೀನವಾದುದೆಂದು ಹೇಳಬಹುದು. ವೀರಶೈವ ಕವಿಗಳಲ್ಲಿ ಪ್ರಸಿದ್ಧನಾದ ಹರಿಹರದೇವನು ಗಿರಿಜಾಕಲ್ಯಾಣವೆಂಬ ಚಂಪೂಪ್ರಬಂಧದಲ್ಲಿ.—

ಗರಳಂ ಭದ್ರಮುಖಂ ಶುಭೋದಯನೆಳಂಗಂ ಶಂಕುಕರ್ಣಂ ಪಟು|
ಸ್ವರನುತ್ತುಂಗಶಿರಂ ವೃಕೋದರನಟುಸ್ಯಂ ದಾರುಕಂ ಸಿಂಹಕೇ |
ಸರಿ ಸಿದ್ಧಂತಿಯುದಾತ್ತನೇಕಜಟ ವಿಸ್ಮಸ್ತಾಲಿ ತಾರಾಕ್ಷನಂ |
ಬರಲಾಯುಂ ಘನಕಾಯನಪ್ರತಿಮಕಾಯಂ ನಿಸ್ತರಂ ಕುಂಭಜಂ ||

೧೦ನೆಯ ಆ, ೯೬ನೆಯ ಕಲ್ಲೀಳ.

ಜಗಜ್ಜನನಿ ಪಾರ್ವತೀ ದೇವಿಯ ವಿವಾಹಮಹೋತ್ಸವಕ್ಕಾಗಿ ಗರಳ, ಭದ್ರಮುಖ, ಶುಭೋದಯ, ಶಂಕುಕರ್ಣ, ಪಟುಸ್ವರ, ಉತ್ತುಂಗಶಿರ, ದಾರುಕ, ಅನೇಕಜಟ, ತಾರಾಕ್ಷ ಮೊದಲಾದ ಗಣಶ್ರೇಷ್ಠರು ಆಗಮಿಸಿದ್ದರೆಂದು ಹೇಳಿದ್ದಾನೆ. ಶಂಕುಕರ್ಣ-ದಾರುಕರೆಂಬ ಹೆಸರಿನ ಪ್ರಮಥರು ಪಂಚಾಚಾರ್ಯರೊಳಗಿನ ಏಕೋರಾಮ ಮರುಳಸಿದ್ಧರಲ್ಲದೆ ಬೇರೆಯಲ್ಲ. ಮತ್ತುಮದಲ್ಲದೆ ಜಗದ್ವಿಖ್ಯಾತನಾದ ಕುಮಾರವ್ಯಾಸನು ತನ್ನ ಭಾರತದಲ್ಲಿ—

ರೇವಣನುಮೊಲವಲಿ ಸಿಂದರು |
ದೇವಿಯ್ಯರು ಗುಹಗಣಪತಿಗಳಿ |
ಲ್ಲಾ ವಿನೋದವ ನೋಡಿ ಧರಿಸಿದರೊಲಿದು ಶಾಬರವ ||
ಆ ವಿಗಡ ನಂದೀಶವೀರಕ |
ದೇವಲಕರೇಣುಕ ಮಹೋದರ |
ದಾನವರಿಪು ವೀರಭದ್ರಾದ್ಯಖಿಳ ಭೂತಗಣ || ೫ ನೆಯ
ಸಂಧಿ ಆರಣ್ಯಪರ್ವ ||

ಭಕ್ತವೀರನಾದ ಪಾರ್ಥನ ಪರೀಕ್ಷಾರ್ಥವಾಗಿ ಪಾರ್ವತೀಪರಮೇಶ್ವರರು ಶಬರವೇಷವನ್ನು ಧರಿಸಿದರೆಂದೂ ಆಮೇಲೆ ನಂದೀಶ ರೇಣುಕ ಮಹೋದರ ವೀರಭದ್ರ ಷಣ್ಮುಖಗಣಪತಿಗಳೆಲ್ಲರೂ ಕಿರಾತವೇಷವನ್ನು ತಾಳಿದರೆಂದೂ ಬರೆದು ರೇಣುಕಭಗವತ್ಪಾದರ ನಾಮವನ್ನು ಉದಾಹರಿಸಿದ್ದಾನೆ. ಇವುಗಳಿಂದಲೂ ಅನಂತ ಶಾಸನಗಳಿಂದಲೂ ಆಚಾರ್ಯರ ಪ್ರಾಚೀನತ್ವವು ನಿರ್ವಿವಾದವಾಗಿ ಸಿದ್ಧವಾಗುತ್ತಿದ್ದರೂ ಕೆಲಜನ ಅಲ್ಪವಿಚಾರಿಗಳು ವಿಷಯಜ್ಞಾನದ ಅಭಾವದಿಂದಲೋ ಪಕ್ಷಾಂಧತೆಯಿಂದಲೋ ಅಥವಾ ದುರಾಗ್ರಹದಿಂದಲೋ ಶ್ರೀ ರೇಣುಕರು ೧೧ನೆಯ ಶತಮಾನದವರೆಂದೂ ಅವರು ಪ್ರಥಮದಲ್ಲಿ ಶೈವರೆಂದೂ ಕೊನೆಕೊನೆಗೆ ವೀರಶೈವರಾದರೆಂದೂ ಹೇಳುತ್ತ ತಮ್ಮ ಅಸೂಯೆಯನ್ನು ತೋರ್ಪಡಿಸುತ್ತಿರುವರು. ಹೀಗೆ ಮಾಡುವದರಿಂದ ಇವರಿಗೆ ಯಾವ ಪುರುಷಾರ್ಥವು ದೊರೆಯುವುದೋ ತಿಳಿಯದಾಗಿದೆ

ರೇಣುಕರ ಚರಿತ್ರೆಯನ್ನು ಹೇಳುವ ಗ್ರಂಥಗಳಲ್ಲಿ ಸಿದ್ಧಾಂತಶಿಖಾಮಣಿಯು ಬಹು ಪ್ರಾಚೀನವಾದದು. ವೀರಶೈವಗ್ರಂಥಕಾರರೆಲ್ಲರೂ ಈ ಗ್ರಂಥವನ್ನು ಉದಾಹರಿಸಿದ್ದಾರೆ. ಶ್ರೀಪತಿಪಂಡಿತರು ೧೦೭೦ನೆಯ ಕ್ರಿಸ್ತಶಕದಲ್ಲಿದ್ದ ಬಿಜವಾಡದ ಅನಂತಭೂಪಾಲನ ಸಭೆಯಲ್ಲಿದ್ದಂತೆ ಶಾಸನಗಳಿಂದ ತಿಳಿದುಬರುತ್ತದೆ.

ಶ್ರೀಪತಿಪಂಡಿತರು ತಮ್ಮ ಶ್ರೀಕರಭಾಷ್ಯದಲ್ಲಿ ಸಿದ್ಧಾಂತಶಿಖಾಮಣಿಯ ಶ್ಲೋಕಗಳನ್ನು ಉದಾಹರಿಸಿರುವರಲ್ಲದೆ ಆ ಗ್ರಂಥದ ನಾಮವನ್ನು ಅನೇಕಕಡೆಗೆ ಲಿಖಿಸಿದ್ದಾರೆ. ಇದರಿಂದ ರೇಣುಕರು ಸಿದ್ಧಾಂತಶಿಖಾಮಣಿಯ ಕಾಲಕ್ಕಿಂತಲೂ ಎಷ್ಟೋ ಶತಮಾನಗಳ ಮೊದಲೇ ಅವತಾರ ಮಾಡಿದ್ದಾರೆಂದು ನಿಸ್ಸಂದೇಹವಾಗಿ ಹೇಳಬಹುದು. ಶ್ರೀಪತಿಪಂಡಿತರು ತಮ್ಮ ಭಾಷ್ಯದಲ್ಲಿ ಲಿಖಿಸಿದ ರೇವಣಸಿದ್ಧ, ರೇವಣಕಲ್ಪವೃಕ್ಷ ಎಂಬ ಅಭಿಧಾನಗಳು ಕಲಿಯುಗದಲ್ಲಿ ರಂಭಾಪುರೀ ಪೀಠದ ಪ್ರಥಮಾಚಾರ್ಯರಾದ ಆದ್ಯ ರೇವಣಸಿದ್ಧರನ್ನೇ ಬೋಧಿಸುತ್ತವೆ. ಚಿತ್ರದುರ್ಗ ತಾಲೂಕ ಬೇವಿನಹಳ್ಳಿ ಗ್ರಾಮದ ಹನುಮಾನ್ ದೇವಾಲಯದ ಪ್ರಾಕಾರದಲ್ಲಿರುವ ಶಿಲಾಶಾಸನ ನಂ ೭೪ ಕ್ರಿ ಶ ೯೬೮. ಅದರಲ್ಲಿ ಚಾಲುಕ್ಯವಂಶದ ನಿತ್ಯವರ್ಷದೇವನೆಂಬ ರಾಜನು ಮಳಖೇಡದಲ್ಲಿ ರಾಜ್ಯಭಾರಮಾಡುತ್ತಿದ್ದನು ಈ ರಾಜನ ಮಂಡಲಿಕನಾದ ಪಂದಿಗನೆಂಬ ರಾಜನು ಮೈಸೂರು ದೇಶದ ಭಾಗದಲ್ಲಿ ಆಳುತ್ತಿದ್ದನು. ಅವನಿಗೆ ಜಕ್ಕಿಸುಂದರಿಯೆಂಬ ಪತ್ನಿಯಿದ್ದಳು ಆಕೆಯು ಒಂದು ಗುಡಿಯನ್ನು ಕಟ್ಟಿಸಿ ದಾನಮಾಡಿದ ವಿಷಯವಿದೆ ಪಂದಿಗರಾಜನ ೬ನೆಯ ತಲೆಯವನಾದ ರಾಜನು ತನ್ನ ಗುರುವಿನ ನಾಮವಾದ "ರೇವಣನಾಥ"ನೆಂಬ ಹೆಸರನ್ನು ಇಟ್ಟುಕೊಂಡಿದ್ದನು. ಪಂದಿಗನ ತಂದೆ, ಶೂದ್ರಕಾಂಕ, ಅವನ ತಂದೆ ಗೊಗ್ಗಿ, ಅವನ ತಂದೆ ಬಿಕ್ಕಿಯಣ್ಣ, ಅವನ ತಂದೆ ರಾಜಭೂಭುಜ, ಅವನ ತಂದೆ ರೇವಣನಾಥ. ಶ್ರೀರೇವಣನಾಥನು ಸುಮಾರು ೮ನೇ ಶತಮಾನದಲ್ಲಿ ರಾಜ್ಯಭಾರಮಾಡುತ್ತಿದ್ದನು. ಈ ಶಾಸನದ ಆಧಾರದಿಂದ ಆದ್ಯರೇಣುಕಭಗವತ್ಪಾದರು ಬಹು ಪ್ರಾಚೀನರೆಂದು ಒಪ್ಪಬೇಕಾಗುವದು. ಎಂದಮೇಲೆ ಕನ್ನಡ ಕವಿಗಳು ಹೇಳಿರುವಂತೆ ಆದ್ಯರೇಣುಕರು ೧೨ನೆಯ ಶತಮಾನದಲ್ಲಿದ್ದ ಬಿಜ್ಜಳನ ಅರಮನೆಗಾಗಲಿ ಸಿದ್ಧರಾಮನ ತಾಯಿತಂದೆಗಳ ಮನೆಗಾಗಲಿ ಬಂದಿರುವದು ಅಸಂಭವ. ರೇವಣಸಿದ್ಧರೆಂಬವರು ಅನೇಕರಾಗಿದ್ದಾರೆ. ೧೧ನೇ ಶತಮಾನದಲ್ಲಿ ಅದೇ ಹೆಸರಿನ ಬೇರೊಬ್ಬ ರೇವಣಸಿದ್ಧರು ಆ ಕಾಲದ ರಾಜರಿಗೆ ವೀರಶೈವದೀಕ್ಷೆಯನ್ನಿತ್ತು ಮಾಸೂರಲ್ಲಿಯ ಯಕ್ಷದಂಪತಿಗಳನ್ನುದ್ಧರಿಸಿ ಕಾಂಚಿಯ ವರದರಾಜನ ಶಿರಃಕಂಪನವನ್ನು ನಿಲ್ಲಿಸಿ ಖರ್ಪರನ ಗರ್ವವನ್ನು ನಾಶಮಾಡಿದರು. ಇತ್ತೀಚೆಗೆ ಬಸವಪಂಥಿಗಳು ಹೇಳುತ್ತಿರುವ ಶಿರಿವಾಳಶಾಸನವು ಕಲ್ಪಿತವಾದುದು ಅದನ್ನು ಯಾರೂ ನಂಬುವದಿಲ್ಲ. ರೇಣುಕರ ಚರಿತ್ರೆಗಳನ್ನು ಬರೆದಿರುವ ಕವಿಗಳು ೧೧ ನೇ ಶತಮಾನದ ರೇವಣಸಿದ್ಧರ ಸಂಗತಿಗಳನ್ನೇ ಆದ್ಯರೇಣುಕರಿಗೆ ಅನ್ವಯಿಸಿ ಹೇಳಿಕೊಂಡಿರಬಹುದು. ಇವೆಲ್ಲ ವಿಚಾರಗಳಿಂದ ಆದ್ಯರೇಣುಕರು ಕ್ರಿಸ್ತಪೂರ್ವ ೮ನೆಯ ಶತಮಾನದಲ್ಲಿದ್ದ ಆದ್ಯ ಶಂಕರಾಚಾರ್ಯರ ಸಮಕಾಲೀನರೆಂದು ಹೇಳಬಹುದಾಗಿದೆ. ಈ ಆದ್ಯರೇಣುಕರೇ ಆದ್ಯಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸಿರುವರೆಂಬುದು ಶೃಂಗೇರಿಪೀಠದ ಗುರುವಂಶಕಾವ್ಯದಿಂದ ವೇದ್ಯವಾಗುವದು ಇದು ಆದ್ಯರೇಣುಕರ ಅವತಾರ ಸಮಾಪ್ತಿಯ ಕಾಲವಿರಬಹುದು

ಇತ್ತೀಚೆಗೆ ಕೆಲವು ಜನ ಬಸವಪಂಥಿಗಳು ವೀರಶೈವ ಮತಸಂಸ್ಥಾಪನಾಚಾರ್ಯರಾದ ಶ್ರೀ ರೇಣುಕಾಚಾರ್ಯರು ವೀರಶೈವರಲ್ಲವೆಂದು ನುಡಿಯಲಿಕ್ಕೆ ಹತ್ತಿದ್ದಾರೆ. ಇದು ಅಸೂಯಾಬುದ್ಧಿಯ ಪ್ರಭಾವವಲ್ಲದೆ ಬೇರೊಂದಲ್ಲ. ವೀರಶೈವ ಮತಾಚಾರ್ಯರೇ ವೀರಶೈವರಲ್ಲವೆಂದಮೇಲೆ ಇನ್ನಾರು ವೀರಶೈವರೋ ತಿಳಿಯದಾಗಿದೆ. ಬಸವಪಂಥಿಗಳಲ್ಲಿಯೇ ಅನೇಕ ಜನರು ತಾವು ವೀರಶೈವರಲ್ಲವೆಂದೂ, ತಾವು ಲಿಂಗಾಯತರೆಂದೂ, ಹೇಳುತ್ತಿರುವರು. ಅಂದಮೇಲೆ ವೀರಶೈವರಾರೆಂಬುದೇ ತಿಳಿಯದಾಗಿದೆ. ವೀರಶೈವಮತದಲ್ಲಿ ವರ್ಣಾಶ್ರಮ ಧರ್ಮಗಳುಂಟೆಂದು ಧರ್ಮಶಾಸ್ತ್ರಗಳು ಸಾರುತ್ತಿರುವವು. ಬಸವಪಂಥಿಗಳು ವರ್ಣಾಶ್ರಮ ಧರ್ಮಗಳನ್ನು ಮನ್ನಿಸುವುದಿಲ್ಲ. ಅಂದಮೇಲೆ ಬಸವ ಪಂಥಿಗಳಿಗೆ ವೀರಶೈವರೆಂದು ಹೇಳಲು ಸಾಧ್ಯವಾಗುವುದೇ? ಎಂಬುದನ್ನು ಬಸವಪಂಥಿಗಳೇ ಯೋಚಿಸಬೇಕು.

ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯ ಮೇರೆಗೆ ೩ ಕೋಟಿ ಲಿಂಗಗಳನ್ನು ಸ್ಥಾಪಿಸಿರುವುದರಿಂದ, ಅವರು ಶೈವರಂತೆ! ಶಿವಲಿಂಗಗಳನ್ನು ಸ್ಥಾಪಿಸುವುದು ಶೈವಾಚರಣೆಯಂತೆ! ಆಹಾ! ಏನು ಬುದ್ಧಿಯ ಪ್ರಭಾವವೋ! ಇಂತಹ ಬುದ್ಧಿಶಾಲಿಗಳು ಭಾರತ ಭೂಮಿಯಲ್ಲಿ ಜನಿಸಿದರೆ ಭಾರತಮಾತೆಯ ಪುಣ್ಯಕ್ಕೆ ಎಣೆಯೇ? ಧರ್ಮಶಾಸ್ತ್ರಾನುಸಾರವಾಗಿ ಶಿವಲಿಂಗಗಳನ್ನು ಸ್ಥಾಪಿಸುವ ಅಧಿಕಾರವು ವೀರಶೈವ ಗುರುವರ್ಗದವರಿಗೇ ಇರುವುದೆಂಬ ಧರ್ಮಶಾಸ್ತ್ರ ವಿಷಯವು ಧರ್ಮಶಾಸ್ತ್ರದ ಗಂಧವನ್ನರಿಯದ ಬಸವಪಂಥಿಗಳಿಗೆ ಹೇಗೆ ಗೊತ್ತಾಗಬೇಕು? ಇಂದಿಗೂ ಭರತಖಂಡದಲ್ಲಿರುವ ಅನೇಕ ಜನ ಭಕ್ತರು ಶಿವದೇವಾಲಯಗಳನ್ನು ಕಟ್ಟಿಸಿ ಶಿವಲಿಂಗಗಳನ್ನು ಸ್ಥಾಪಿಸುತ್ತಿರುವರಷ್ಟೆ! ಆ ಲಿಂಗಗಳನ್ನು ಸ್ಥಾಪಿಸುವವರು ಯಾರು? ವೀರಶೈವ ಗುರುವರ್ಗದವರಲ್ಲವೇ? ಈ ವಿಷಯವು ಈ ಮತದಲ್ಲಿ ಜನಿಸಿರುವ ಚಿಕ್ಕ ಮಕ್ಕಳಿಗೂ ಸಹ ಗೊತ್ತಿರುತ್ತದೆ. ವೀರಶೈವಾಚಾರ್ಯರು ಸ್ಥಾವರ ಲಿಂಗಗಳನ್ನು ಸ್ಥಾಪಿಸಿದ್ದರೆ, ಬಸವಪಂಥಿಗಳ ಮೂಲಪುರುಷರು ಸ್ಥಾವರಲಿಂಗಗಳನ್ನೇ ತಮ್ಮ ಆರಾಧ್ಯದೇವತೆಗಳನ್ನಾಗಿ ಮಾಡಿಕೊಂಡಿರುವುದನ್ನೂ, ಆ ತಮ್ಮ ಆರಾಧ್ಯದೇವತೆಗಳ ನಾಮಗಳನ್ನೇ ತಮ್ಮ ಪ್ರತಿಯೊಂದು ವಚನದಲ್ಲಿಯೂ ಅಸಾಧಾರಣಪೂಜ್ಯ ಬುದ್ಧಿಯಿಂದ ಉಲ್ಲೇಖಿಸಿರುವುದನ್ನೂ ಬಸವಪಂಥಿಗಳು ಮರೆತಂತೆ ಕಾಣುತ್ತದೆ. ಬಸವಪಂಥಿಗಳಲ್ಲಿ ಎಷ್ಟು ಜನರು ಗ್ರಂಥಗಳನ್ನು ಬರೆದಿರುವರೋ ಅವರೆಲ್ಲರೂ ತಮ್ಮ ಗ್ರಾಮದಲ್ಲಿರುವ ಸ್ಥಾವರ ಲಿಂಗಮೂರ್ತಿಗಳನ್ನು ಕೊಂಡಾಡಿರುತ್ತಾರೆ. ಗ್ರಂಥಗಳನ್ನು ಕಣ್ತೆರೆದು ನೋಡದ ಮಂದಿಗೆ ಇದು ಹೇಗೆ ಗೊತ್ತಾಗಬೇಕು? ಬಸವನು ಕೂಡಲಸಂಗಮೇಶ್ವರನ ಆರಾಧಕನು. ಅಲ್ಲಮನು ಗುಹೇಶ್ವರನ ಆರಾಧಕನು. ಇದರಂತೆಯೇ ಪ್ರತಿಯೊಬ್ಬ ಬಸವಪಂಥಿಯೂ ತನ್ನ ವಚನದಲ್ಲಿ ಸ್ಥಾವರಲಿಂಗಗಳ ನಾಮವನ್ನು ಉಲ್ಲೇಖಿಸಿದ್ದಾನೆ. ಇದನ್ನೆಲ್ಲ ವಿಚಾರಮಾಡದೆ ಬಸವಪಂಥಿಗಳು ಸುಮ್ಮನೆ ಮನಬಂದಂತೆ ಕುಣಿದಾಡಿದರೆ ಬಂದ ಪುರುಷಾರ್ಥವೇನು? ಇವರು ಹೀಗೆ ಕುಣಿದಾಡಿದ ಮಾತ್ರದಿಂದ ರೇಣುಕರು ಶೈವರಾಗಬಲ್ಲರೇ? ಶ್ರೀರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿ ಕೇವಲ ವೀರಶೈವ ಷಟ್ಸ್ಥಲಗಳನ್ನೇ ಉಪದೇಶಿಸಿದ ವಿಷಯವು ಜಗತ್ಪ್ರಸಿದ್ಧವಾಗಿರುವುದಲ್ಲವೆ? ಹೀಗಿದ್ದರೂ ಮಹಾಚಾರ್ಯರ ವಿಷಯದಲ್ಲಿ ಮನಸ್ಸಿಗೆ ಬಂದಂತೆ ಪ್ರಲಪಿಸುವುದು ಭೂಷಣವೇ? ಶ್ರೀಮನ್ಮಹಾರಾಜರವರು ರಂಭಾಪುರೀ ಪೀಠಕ್ಕೆ ದಯಮಾಡಿಸಿದ ಸಮಯದಲ್ಲೆಲ್ಲಾ ಆ ಪೀಠಾಧಿಪತಿಗಳು ಬಾಣಲಿಂಗಗಳನ್ನು ಆಶೀರ್ವದಿಸುವುದು ಅನಾದಿಕಾಲದಿಂದ ನಡೆದು ಬಂದ ಸಂಪ್ರದಾಯವಾಗಿದೆ. ಇಷ್ಟು ಮಾತ್ರದಿಂದಲೇ ಪೀಠಾಧಿಪತಿಗಳಲ್ಲಿ ವೀರಶೈವತ್ವವಿಲ್ಲವೆಂದು ಹೇಳಲಿಕ್ಕೆ ಬರುತ್ತದೆಯೇ? ಪೂರ್ವಾಪರ ವಿಚಾರ ಮಾಡದೆ ಮನಸ್ಸಿಗೆ ಬಂದಂತೆ ನುಡಿಯುವದು ಅತ್ಯಂತ ಹೇಯವಾದುದು.

ವಿರಕ್ತಶಿಖಾಮಣಿಗಳಾದ ಅನಾದಿ ತೋಂಟದ ಸಿದ್ಧಲಿಂಗೇಶ್ವರರು ತಮ್ಮಿಂದ ರಚಿತವಾದ ಸಿದ್ಧೇಶ್ವರ ವಚನದಲ್ಲಿ—

ಆದಿಯಲ್ಲಿ ಶಿವತತ್ವದಲ್ಲಿ ರೇಣುಕನುದಯವಾಗಿ
ದಾರಿ ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿ
ಯೆಂತು? ಆ ಶಿವಲಿಂಗದಲ್ಲಿಯೇ ಹುಟ್ಟಿ ಶಿವ
ಲಿಂಗದಲ್ಲಿಯೇ ಲಯವಾದ ರೇವಣಸಿದ್ಧೇಶ್ವರನು

ಅನಾದಿಮುಕ್ತನಲ್ಲ ಅವಾಂತರ ಮುಕ್ತನೆಂದು
ಆಡುವ ಅಜ್ಞಾನಿಗಳಿಗೆ ನಾಯಕ ನರಕ ತಪ್ಪದು"

ಎಂದು ಹೇಳಿದ್ದಾರೆ.

ವಿರಕ್ತರಲ್ಲಿ ಮಹಾಪಂಡಿತರೆಂದು ಪ್ರಖ್ಯಾತರಾಗಿರುವ ಂತೋಂಟದಾರ್ಯರು ತಮ್ಮಿಂದ ವಿರಚಿತವಾದ ವೀರ ನಪ್ರದೀಪಿಕೆಯಲ್ಲಿ—

"ನೀಲಕಂಠನಾಗನಾಥಾಖ್ಯರಿಂದುಕ್ತಮಾದವೀರ
ಮಾಹೇಶ್ವರಾಚಾರ ಸಂಗ್ರಹದಲ್ಲಿಯೂ, ಶಾಕ್ತಾ
ದ್ವೀರಶೈವ ಮಹೋತ್ಸವಕರಾದ ಶ್ರೀಜಗದ್ಗುರು
ರೇಣುಕಾಚಾರ್ಯರಿಂದುಕ್ತವಾದ ಸಿದ್ಧಾಂತಶಿಖಾ
ಮಣಿಯಲ್ಲಿಯೂ ಅನುಕ್ತಮಾದುದರಿಂದ
ಸತ್ಪುರುಷರಿಂದ ಅನಾದರಿಸಲ್ತಕ್ಕದೆಂಬುದೇ
ಸಿದ್ಧವಾಕ್ಯಂ"

ಎಂದು ಉಲ್ಲೇಖಿಸಿರುವರು.

ಈಗ್ಗೆ ಸುಮಾರು ನೂರಾರುವರ್ಷಗಳ ಪೂರ್ವದಲ್ಲಿದ್ದ ಶ್ರೀ ಮುರುಗಿಸ್ವಾಮಿಗಳೆಂಬವರು ತಮ್ಮಿಂದ ರಚಿತವಾದ ಕಾಲಾಸ್ಯಪುರಾಣದ ಆದಿಯಲ್ಲಿ—

"ನಂದಿಭೃಂಗಿಪ್ರಷಂ ಮಹಾಗುರುರೇಣುಕಂ ವರ
ಕಾರುಕಂ"

ಎಂದು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರನ್ನು ಅನಿತರಸಾಧಾರಣವಾದ ಭಕ್ತಿಯಿಂದ ಸ್ತೋತ್ರಮಾಡಿರುವರು. ಬಸವಪಂಥಿಗಳು ಶರಣರಲ್ಲಿ ಪೂಜ್ಯಬುದ್ಧಿಯನ್ನಿಟ್ಟಿರುವರೋ ಆ ವಿರಕ್ತ ಶಿಖಾಮಣಿಗಳೇ ಮಹಾಚಾರ್ಯರಲ್ಲಿ ಅಸಾಧಾರಣವಾದ ಪೂಜ್ಯಬುದ್ಧಿಯನ್ನು ತೋರಿಸುವಾಗ ಅವರ ಭಕ್ತರೆನಿಸಿಕೊಳ್ಳುವವರು ಭಕ್ತಿಶೂನ್ಯರಾಗಿ ಮನಸ್ಸಿಗೆಬಂದಂತೆ ಪ್ರಲಪಿಸುತ್ತಿರುವದು ಮಹಾದೋಷವಲ್ಲವೇ? ಬಸವಪಂಥಿಗಳು ಎಷ್ಟು ಬಾಗಹೊಡೆದರೂ ಆಚಾರ್ಯರ ಕಾಲವನ್ನು ಕಂಡುಹಿಡಿಯುವದು ಅವರ ಹಣೆಯಲ್ಲಿಯೇ ಬರೆದಿಲ್ಲ. ಪ್ರಮಥಪುಂಗವರ ಕಾಲವನ್ನು ಕಂಡುಹಿಡಿಯುವದು ಯಾರಿಗೂ ಸಾಧ್ಯವಿಲ್ಲವೆಂಬುವದನ್ನು ಬಸವಪಂಥಿಗಳು ಪೂರ್ಣಲಕ್ಷ್ಯವಲ್ಲಿಡಬೇಕು. ಆದುದರಿಂದ ಅಸೂಯಾಂಧರಾದ ಬಸವಪಂಥಿಗಳು ಇನ್ನುಮೇಲಾದರೂ ಪಂಚಾಚಾರ್ಯರ ವಿಷಯದಲ್ಲಿ ತಮ್ಮ ಅಸೂಯಾಬುದ್ಧಿಯನ್ನು ಬಿಟ್ಟು ಸನ್ಮಾರ್ಗದಿಂದ ನಡೆದು ಧನ್ಯರಾಗಬೇಕೆಂದು ಕೋರುತ್ತೇವೆ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಗುರುಭಕ್ತಿ ಪ್ರಭಾಕರ

ಲೇ— ಭಾಗೀರಥೀಬಾಯಿ ಶಹಾಪ, ಕೊಲ್ಲಾಪುರ.

ಪಾದಸೇವನ

ಲೋಕದಲ್ಲಿ ಯಾರ ಅನುಗ್ರಹವು ನಮಗೆ ಬೇಕೋ ಅವರ ಕಾಲನ್ನಾದರೂ ಹಿಡಿಯಬೇಕೆನ್ನುತ್ತಾರೆ. ನಮಗೆ ದೇವರ ಅನುಗ್ರಹವು ಬೇಕಾದರೆ ನಾವು ದೇವರ ಪಾದಗಳನ್ನು ಹಿಡಿಯಬೇಕು. ಶ್ರವಣ, ಕೀರ್ತನ, ಸ್ಮರಣ—ಇವು ದೇವರಿಂದ ದೂರಾಗಿರುವಾಗ ನಡೆಸತಕ್ಕವುಗಳು. ಪಾದಸೇವನವನ್ನು ಮಾಡಬೇಕಾದರೆ ದೇವರು ಸಾಕ್ಷಾತ್ತಾಗಿರಬೇಕಾಗಿರುತ್ತದೆ. ದೇವರಿಂದ ಎಷ್ಟೋ ದೂರದಲ್ಲಿರುವ ನಾವು ಈ ಭಕ್ತಿಯನ್ನು ಹೇಗೆ ಸಲ್ಲಿಸಬೇಕೆಂಬ ವಿಷಯದಲ್ಲಿ ಶ್ರೀ ಸಮರ್ಥರು ದಾಸಬೋಧದಲ್ಲಿ ಹೇಳಿರುವ ತಾತ್ಪರ್ಯವೇನೆಂದರೆ—ಸದ್ಗತಿಯನ್ನು ಪಡೆಯಬೇಕೆಂಬ ಮನುಷ್ಯನು ತ್ರಿಕರಣಪೂರ್ವಕವಾಗಿ ಸದ್ಗುರುವಿನ ಪಾದವನ್ನು ಸೇವೆಮಾಡಬೇಕು. ಸದ್ಗುರುವಿನ ಹೊರತು ಸಂಸಾರದ ತಾಪದ ಪರಿಹಾರಕ್ಕೆ ಉಪಾಯವಿಲ್ಲವಾದ್ದರಿಂದ ಸದ್ಗುರುಗಳ ಸೇವೆಯು ಅಗತ್ಯ. ಯಾವ ವಸ್ತು ಮನಸ್ಸಿನ ಊಹೆಗೆ ಕೂಡ ನಿಲುಕುವುದಿಲ್ಲವೋ ಅಂಥದನ್ನು ಕಣ್ಣಿಗೆ ಕಟ್ಟಿದಂತೆ ಮಾಡುವ ಸದ್ಗುರುವಿನ ಸೇವೆಯು ಸಾಮಾನ್ಯವಲ್ಲ. ನಾವು ಮಾಡಬೇಕಾದ ಸದ್ಗುರುವಿನ ಸೇವೆಯೇ ಪಾದಸೇವನ.

ಅರ್ಚನ

ಪಾದಸೇವನವು ಏಕದೇಶದ ಉಪಚಾರವು. ಅದರ ಪೂರ್ಣತೆಯು ಅರ್ಚನದಿಂದ ಆಗುವುದು. ಪೂಜೆ ಮೊದಲಾದವುಗಳಲ್ಲಿರುವ ಆಸಕ್ತಿಯೇ ಭಕ್ತಿಯಾಗುವದೆಂದು ವೇದವ್ಯಾಸರ ಅಭಿಪ್ರಾಯವೆಂದು ಭಗವಾನ್ ನಾರದರು

"ಪೂಜಾದಿಷ್ವನುರಾಗ ಇತಿ ಪಾರಾಶರ್ಯಃ"

ಎಂಬ ಸೂತ್ರದಲ್ಲಿ ಹೇಳುತ್ತಾರೆ.

ಅರ್ಚನವೆಂದರೆ ಶಾಸ್ತ್ರದಲ್ಲಿ ಹೇಳಿರುವ ವಿಧಿಯಂತೆ ದೇವರನ್ನು ಪೂಜಿಸುವದು. ದೇವರ ವಿಗ್ರಹವನ್ನು ಆರಾಧಿಸುವಂತೆ, ಸಾಧುಸಂತರನ್ನು ಸತ್ಕರಿಸುವದೂ, ಗೋವನ್ನು ಪೋಷಿಸುವುದೂ ಇವೂ ಅರ್ಚನವೆ. ಮನೆಯಲ್ಲಿರುವ ಸಾಲಿಗ್ರಾಮ, ಲಿಂಗ—ಮೊದಲಾದವುಗಳನ್ನು ಪೂಜಿಸುವದೂ ಅರ್ಚನವೇ. ಕುಲಧರ್ಮವನ್ನು ನಡೆಸುವದು, ತೀರ್ಥಯಾತ್ರೆಯನ್ನು ಮಾಡುವದು, ಇವೂ ಅರ್ಚನವೆ. ದೇವರನ್ನು ಪೂಜಿಸುವಾಗ, ಅರ್ಘ್ಯ, ಪಾದ್ಯ, ಸ್ನಾನ, ವಸ್ತ್ರ, ಗಂಧ, ಆಭರಣ, ಪುಷ್ಪ, ಧೂಪ, ದೀಪ, ನೈವೇದ್ಯ, ಆರತಿ, ನಮಸ್ಕಾರ—ಮೊದಲಾದುವುಗಳನ್ನು ಒಳ್ಳೇ ವೈಭವದಿಂದ ಮಾಡುವದು, ಅರ್ಚನ. ಭಾವಿಗಳನ್ನು ತೋಡಿಸುವದು, ಕೆರೆಗಳನ್ನು ಕಟ್ಟಿಸುವದು, ದೇವರ ಪ್ರತಿಷ್ಠೆಯನ್ನು ಮಾಡುವದು ಇವೂ ಅರ್ಚನದಲ್ಲಿಯೇ ಬರುವವು. ಮುಖ್ಯವಾಗಿ ತ್ರಿಕರಣಪೂರ್ವಕವಾಗಿ ತನುಮನಧನಗಳನ್ನು ದೇವರಿಗೆ ಅರ್ಪಿಸುವದೇ ಅರ್ಚನ ಭಕ್ತಿ. ಹೀಗೆ ವೈಭವದಿಂದ ಇಷ್ಟೆಲ್ಲಾ ಮಾಡುವದಕ್ಕಾಗದಿದ್ದರೂ ಮಾನಸಪೂಜೆಯನ್ನಾದರೂ ಮಾಡಬೇಕು. ಎಂದರೆ ಮನಸ್ಸಿನಲ್ಲಿ ದೇವರ ಮೂರ್ತಿಯನ್ನು ಕಲ್ಪಿಸಿ ಅದಕ್ಕೆ ಮೇಲೆ ಹೇಳಿದ ಎಲ್ಲಾ ಬಗೆಯ ಉಪಚಾರಗಳನ್ನೂ ಛತ್ರಚಾಮರಾದಿಯಾಗಿ ಎಲ್ಲವನ್ನೂ ಕಲ್ಪಿಸಬೇಕು. ಉದಾರತೆಯು ಕಲ್ಪನೆಗಾದರೂ ಏಕೆ ಬಡತನ?

ಅರ್ಚನಭಕ್ತಿಯಲ್ಲಿ ಪೃಥುರಾಜನು ಪ್ರಸಿದ್ಧನಾಗಿದ್ದಾನೆ. ಅವನು ಒಮ್ಮೆ ಯಜ್ಞವನ್ನು ಮಾಡುತ್ತಿದ್ದಾಗ ಸನಕ, ಸನಂದನ—ಮೊದಲಾದ ಮಹಾತ್ಮರು ಅಲ್ಲಿಗೆ ಬಂದರು. ಇಂಥ ಭಗವದ್ಭಕ್ತರಿಗಿಂತ ಹೆಚ್ಚಾದ ಭಗವತ್ಸಾನ್ನಿಧ್ಯವು ಬೇರೆ ಸಿಕ್ಕಲಾರದೆಂದು ಅವನು ತನ್ನ ಸರ್ವಸ್ವವನ್ನೂ ಅವರಿಗೆ ಅರ್ಪಣಮಾಡಿ ಅವರ ಪೂಜೆಯನ್ನು ಮಾಡಿದನು. ಮಹಾವಿರಕ್ತಶಿಖಾಮಣಿಗಳಾದ ಅವರು ತಾವು ಅವನ್ನು ತಮ್ಮ ಉಪಭೋಗಕ್ಕಾಗಿ ಸ್ವೀಕರಿಸದೆ, ತಮ್ಮದಾಗಿ ಅವುಗಳನ್ನು ಮತ್ತೆ ಅವನಲ್ಲಿಯೇ ಇಟ್ಟರು.

ವಂದನ

ವಂದನವೆಂಬುದಕ್ಕೆ ಪರಮಾತ್ಮನಿಗೆ ವಂದನವೆಂಬುದು ಸ್ಪಷ್ಟವೆ. ಆದರೆ ಪರಮಾತ್ಮನ ಭಕ್ತರಾದ ಸತ್ಪುರುಷರಿಗೆ ನಮಸ್ಕಾರ ಮಾಡುವದೂ ವಂದನವೆನಿಸುವದು. ಎಲ್ಲೆಲ್ಲಿ ಗುಣವಿಶೇಷಗಳ ಶ್ರೇಷ್ಠತೆ ಕಾಣುವದೋ ಅಲ್ಲೆಲ್ಲಾ ಸದ್ಗುರುವಿನ ಸಾನ್ನಿಧ್ಯವಿರುವದೆಂದು ಭಾವಿಸಬೇಕು. ಬೇರೆ ಬೇರೆಯವರಿಗೆ ಮಾಡಿದ ನಮಸ್ಕಾರಗಳೆಲ್ಲಾ ಒಬ್ಬ ದೇವರಿಗೇ ಮುಟ್ಟುವವು. ನಮಸ್ಕಾರದ ಮೂಲಕವಾಗಿ ವಿನಯವನ್ನು ತೋರಿಸುವದರಿಂದ ಸತ್ಪಾತ್ರರಾದ ಜನರ ಅನುಗ್ರಹವು ದೊರೆಯುವದು. ನಮಸ್ಕಾರವೆಂಬುದು ಬಹು ಸುಲಭವಾಗಿರುವುದು. ಬರೀ ಇಷ್ಟರಿಂದ ದೇವರು ಹೇಗೆ ಒಲೆಯುವನೆಂದರೆ ದೇವರ ಒಲಿಮೆಗೆ ಪಾತ್ರವಾಗುವ ನಮಸ್ಕಾರದಲ್ಲಿ ಒಂದು ವಿಶೇಷವಿದೆ. ಅದೇನೆಂದರೆ ಅನನ್ಯಭಾವದಿಂದ ಯಾರಿಗೆ ನಮಸ್ಕಾರವನ್ನು ಮಾಡಿದರೂ ಅಲ್ಲಿ ಪರಮಾತ್ಮನಿರುವ ಬುದ್ಧಿಯು ಜಾಗರೂಕವಾಗಿರಬೇಕು. ಇದು ನಿಜವಾದ ನಮಸ್ಕಾರ. ಪೂಜೆಯಿಂದ ಪ್ರಸನ್ನನಾದ ಪರಮಾತ್ಮನ ಮನಸ್ಸು ನಮಸ್ಕಾರದಿಂದ ಕರಗಿ ಹೋಗುವದು. ಅದ್ದರಿಂದಲೇ ನಮಸ್ಕಾರಕ್ಕೆ ಶ್ರೇಷ್ಠತೆ.

ದಾಸ್ಯ

ದಾಸ್ಯಭಕ್ತಿ ಎಂದರೆ "ಯಾವಾಗಲೂ ಪರಮಾತ್ಮನ ಸನ್ನಿಧಿಯಲ್ಲಿದ್ದು ಬಿದ್ದ ಕೆಲಸಗಳನ್ನೆಲ್ಲ ಮಾಡುವದು ದಾಸ್ಯಭಕ್ತಿ. ದೇವಾಲಯದ ಶಿಥಿಲತೆಯನ್ನು ಸರಿಪಡಿಸಬೇಕು ಸಡಿಲಿದ ಸರೋವರಗಳನ್ನು ಬಿಗಿಮಾಡಬೇಕು. ಸುಲಭವಾಗಿ ಧರ್ಮಶಾಲೆಯನ್ನು ಸಾಗಿಸಬೇಕು. ಸಿಂಹಾಸನ, ಪಲ್ಲಕ್ಕಿ, ಮಂಚ ಮೊದಲಾದವುಗಳನ್ನು ಹೊಸದಾಗಿ ಮಾಡಿಸಬೇಕು. ಛತ್ರ, ಧ್ವಜ, ಚಾಮರ, ಸೂರ್ಯಪಾನ ಮೊದಲಾದವುಗಳನ್ನು ಆದರದಿಂದ ರಕ್ಷಿಸಬೇಕು. ದಿವ್ಯವಾದ ವಸ್ತ್ರಗಳನ್ನೂ, ದಿವ್ಯವಾದ ಆಭರಣಗಳನ್ನೂ ಯತ್ನದಿಂದ ಸಂಗ್ರಹಿಸಬೇಕು. ಹೂವಿನ ತೋಟವನ್ನೂ ಫಲವೃಕ್ಷಗಳನ್ನೂ ಚನ್ನಾಗಿ ಬೆಳೆಸಬೇಕು. ಪಶುಶಾಲೆ, ವೈದ್ಯಶಾಲೆಗಳನ್ನು ಚೊಕ್ಕಟವಾಗಿಟ್ಟಿರಬೇಕು. ಯಾವ ಕಾರ್ಯಭಾಗವನ್ನೂ ಮರೆಯಬಾರದು. ಜಯಂತಿ ಮೊದಲಾದ ಉತ್ಸವಗಳನ್ನು ಮಾಡುವಾಗ ಸಾಕ್ಷಾತ್ ಕೈಲಾಸದ ರೀತಿಯನ್ನು ತೋರಿಸಬೇಕು. ಪೂಜೆಗೆ ಬೇಕಾದ ಉಪಕರಣಗಳಲ್ಲಿ ಯಾವದಕ್ಕೂ ಕೊರತೆಯಾಗದಂತೆ ಒದಗಿಸಬೇಕು. ಎಲ್ಲರೊಡನೆಯೂ ಕರುಣಾಮಯವಾದ ಮಾತನ್ನೇ ಆಡುತ್ತಿರಬೇಕು. ಇಷ್ಟೆಲ್ಲವನ್ನು ಮಾಡುವ ಯೋಗವು ಹೊರಗೆ ದೊರೆಯದಿದ್ದರೂ ಮಾನಸಪೂಜೆಯಲ್ಲಾದರೂ ಮಾಡಬೇಕು. ಸದ್ಗುರುವಿನ ಸೇವೆಗೆ ಇದೇ ನಿಯಮಗಳು.

ದಾಸ್ಯಭಕ್ತಿಯಲ್ಲಿ ಮಾರುತಿಯು ಪ್ರಸಿದ್ಧನಾಗಿದ್ದಾನೆ. ಅವನ ದಾಸ್ಯಭಕ್ತಿಯು ಜಗತ್ತಿಗೆ ಪ್ರಸಿದ್ಧವಾಗಿರುವದು.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ವಿವಾಹಮಹೋತ್ಸವ ಸಮಾರಂಭ, ಹುಲಗೂರು.

ಧಾರವಾಡ ಜಿ॥ ಹುಲಗೂರು ಗ್ರಾಮದಲ್ಲಿ ಪಂಚಪೀಠಗಳೇ ಪಂಚಪ್ರಾಣಗಳೆಂದು ತಿಳಿದು ಮಹಾಪೀಠಗಳ ಸೇವೆಯಲ್ಲಿ ನಿರತರಾಗಿರುವ ಮ॥ ರಾ॥ ಸಂಗಪ್ಪನವರು ಅತ್ತೀಗೇರಿ ಇವರು ವಿವಿಧ ಬಣ್ಣಗಳಿಂದ ರಚಿತವಾಗಿರುವ ಶ್ರೀ ಜಗದಾಚಾರ್ಯರ ದಿವ್ಯ ಭಾವಪಟಗಳಿಂದ ವಿರಾಜಿಸುತ್ತಿರುವ ನೂತನವಾದ ಭವ್ಯಗೃಹದಲ್ಲಿ ತಮ್ಮ ಜ್ಯೇಷ್ಠ ಭ್ರಾತೃಗಳಾದ ಶಿವಪ್ಪನವರ ಜ್ಯೇಷ್ಠ ಪುತ್ರ ಚಿ॥ ವೀರಪ್ಪನಿಗೂ, ಧಾರವಾಡ ಜಿ॥ ಕಲಘಟಿಗಿ ತಾಲೂಕ ಪೈಕಿ ಮಿಶ್ರಿಕೋಟಿಯಲ್ಲಿರುವ ಮ॥ ರಾ॥ ಶಿವಮೂರ್ತಪ್ಪ ಶೆಟ್ಟರ ಇವರ ಪುತ್ರಿ ಕುಂ॥ ಸೌ॥ ಬಸಮ್ಮನಿಗೂ ಮತ್ತು ತಮ್ಮ ಖಾಸ್ ಹಿರೇಅಣ್ಣಂದಿರಾದ ವೀರಪ್ಪನವರ ಜ್ಯೇಷ್ಠಪುತ್ರ ಚಿ॥ ವಿರೂಪಾಕ್ಷಪ್ಪನಿಗೂ ಧಾರವಾಡ ಜಿ॥ ಹಾನಗಲ್ಲು ತಾ॥ ಬಮ್ಮನಹಳ್ಳಿಯ ಮ॥ ರಾ॥ ಫಕೀರಪ್ಪನವರು ಹೊಳಲದ ಇವರ ದ್ವಿತೀಯ ಪುತ್ರಿ ಕುಂ॥ ಸೌ॥ ನೀಲಗಂಗಮ್ಮನಿಗೂ ವಿವಾಹಮಹೋತ್ಸವವನ್ನು ತಾ॥ ೨೫-೪-೪೩ ನೆಯ ದಿವಸ ಅತ್ಯಂತ ವೈಭವದಿಂದ ನೆರವೇರಿಸಿದರು

ಈ ಮಂಗಲಮಹೋತ್ಸವ ಕಾರ್ಯಕ್ಕೆ ಆಪ್ತರೂ ಇಷ್ಟಮಿತ್ರರೂ ಆಗಮಿಸಿದ್ದರು. ನೂತನ-ವಧೂವರರ ಆಯುರಾರೋಗ್ಯಭಾಗ್ಯಾದಿಗಳ ಅಭಿವೃದ್ಧಿಗಾಗಿ ಶ್ರೀಜಗದ್ಗುರು ರಂಭಾಪುರೀ ಉಜ್ಜಯಿನೀ ಮೊದಲಾದ ಪೀಠಾಧಿಪತಿಗಳಿಂದಲೂ ಬೆಂಗಳೂರು ಮಹಂತಿನ ಮಠಾಧ್ಯಕ್ಷರಾದ ಶ್ರೀ ಗಂಗಾಧರಶಿವಾಚಾರ್ಯರವರಿಂದಲೂ ಬಂದಿದ್ದ ಮಂಗಲಾಶೀರ್ವಾದ ಪತ್ರಿಕೆಗಳು ವಿವಾಹಮಂಟಪದಲ್ಲಿ ಓದಲ್ಪಟ್ಟವು. ಆ ಸಮಯದಲ್ಲಿ, ವೇ॥ ಪಂ॥ ಧರ್ಮಭೂಷಣ ಹರೀಶ್ವರ ಶಾಸ್ತ್ರಿಗಳು "ಗೃಹಸ್ಥಾಶ್ರಮ" ಧರ್ಮದ ಬಗ್ಗೆ ಚಿಕ್ಕ ಭಾಷಣಮಾಡಿದರು ಸಂಗಪ್ಪನವರ ಪ್ರಾರ್ಥನೆಯಂತೆ ಸಕಲ ಮಂಗಲಕಾರ್ಯಗಳನ್ನು ನಡೆಸುವುದಕ್ಕೆ ಹುಬ್ಬಳ್ಳಿ ಹನ್ನೆರಡುಮಠದ ಶ್ರೀ ಚರಪಟ್ಟಾಧಿಕಾರಿಗಳೂ, ಮನೆಗುರುಗಳಾದ ಬೆಂಡಿಗೇರಿ ಕಂಭಾಳಿಮಠದ ಶ್ರೀ ಪಟ್ಟದಸ್ವಾಮಿಗಳೂ ಆಗಮಿಸಿದ್ದರು. ಉಭಯ ದಿವಸಗಳಲ್ಲಿ ನಡೆದ ದೀಕ್ಷಾ ವಿವಾಹ ಕಾರ್ಯಗಳನ್ನು ವೇ॥ ಪಂ॥ ಹರೀಶ್ವರಶಾಸ್ತ್ರಿಗಳು ವಿಧ್ಯುಕ್ತವಾಗಿ ನೆರವೇರಿಸಿದರು. ಜ್ಯೋತಿರ್ಮಾರ್ತಂಡ ವೇ॥ ಸಿದ್ಧಾಂತಿ ಬಸವನಾಳಮಠದ ರುದ್ರಾರಾಧ್ಯಶಾಸ್ತ್ರಿಗಳು ದಿವ್ಯವಾದ ಮುಹೂರ್ತವನ್ನು ತೆಗೆದು ಲಗ್ನಕಾರ್ಯದಲ್ಲಿ ವಿಶೇಷ ಭಾಗವಹಿಸಿ ಸರ್ವರ ಆದರಕ್ಕೆ ಪಾತ್ರರಾದರು. ಒಟ್ಟಿನಮೇಲೆ ಜಗದಾಚಾರ್ಯರ ಕೃಪಾಶೀರ್ವಾದದಿಂದ ವಿವಾಹ ಮಹೋತ್ಸವ ಕಾರ್ಯವು ಬಹು ವೈಭವದಿಂದ ನೆರವೇರಿತು.

ಶ್ರೀಜಗದ್ಗುರು ಪಂಚಾಚಾರ್ಯರು ನೂತನ ವಧೂವರರಿಗೆ ಆಯುರಾರೋಗ್ಯಭಾಗ್ಯಾದಿಗಳನ್ನುಂಟುಮಾಡಲೆಂದು ಪ್ರಾರ್ಥಿಸುವ,

ಓರ್ವ ಮಂಗಲಮಹೋತ್ಸವಭಾಗಿ.

ಪಂಚಾಚಾರ್ಯಪ್ರಭಾ.

೧೯೪೨ನೆಯ ಮೇ ತಾ|| ೨೫ನೆಯ ಸೋಮವಾರ

ವೀರಶೈವಮತ ಮತ್ತು ಶ್ರೀವೈಷ್ಣವಮತ.

ಕಳೆದವಾರದ ಪತ್ರಿಕೆಯಲ್ಲಿ ವರ್ಣಾಶ್ರಮಧರ್ಮದ ವಿಷಯವನ್ನು ಪ್ರತಿಪಾದಿಸಿ ವೀರಶೈವಮತಕ್ಕೂ ಮತ್ತು ಶ್ರೀವೈಷ್ಣವಮತಕ್ಕೂ ವಿಶೇಷವಾದ ಸಾಮ್ಯವಿರುವುದೆಂದು ಬರೆದಿರುವುದು ಸರಿಯಷ್ಟೆ! ಸದ್ಯಃ ಈ ಎರಡೂ ಮತಗಳಿಗಿರುವ ಸಾಮ್ಯವನ್ನು ಪ್ರತಿಪಾದಿಸುವದಾಗುವದು

ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ಶಿವಸೂತ್ರ ಬ್ರಹ್ಮಸೂತ್ರಗಳ ಮೇಲೆ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವನ್ನು ಸ್ಥಾಪಿಸಿರುವಂತೆ, ಶ್ರೀವೈಷ್ಣವಮತಸ್ಥಾಪಕರಾದ ರಾಮಾನುಜಾಚಾರ್ಯರಾದರೂ ಬ್ರಹ್ಮಸೂತ್ರಗಳ ಮೇಲೆ ವಿಶಿಷ್ಟಾದ್ವೈತಸಿದ್ಧಾಂತವನ್ನು ಸ್ಥಾಪಿಸಿರುವರು ಪಂಚಾಚಾರ್ಯರು ಪರಬ್ರಹ್ಮವು ಶಕ್ತಿವಿಶಿಷ್ಟನಾಗಿರುವುದೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಚಿದಚಿದ್ವಿಶಿಷ್ಟನಾಗಿರುವುದೆಂದು ಬೋಧಿಸಿರುವರು ಪಂಚಾಚಾರ್ಯರು ಪಾರಮಾರ್ಥಿಕವಾಗಿ ಭೇದಾಭೇದವನ್ನು ಒಪ್ಪುವಂತೆ ರಾಮಾನುಜಾಚಾರ್ಯರಾದರೂ ಪಾರಮಾರ್ಥಿಕವಾಗಿ ಭೇದಾಭೇದವನ್ನು ಒಪ್ಪಿರುವರು ಪಂಚಾಚಾರ್ಯರು ಪ್ರತ್ಯಕ್ಷ-ಅನುಮಾನ ಆಗಮಪ್ರಮಾಣಗಳನ್ನು ಅಂಗೀಕರಿಸಿರುವಂತೆ ರಾಮಾನುಜಾಚಾರ್ಯರಾದರೂ ಈ ಮೂರು ಪ್ರಮಾಣಗಳನ್ನೇ ಅಂಗೀಕರಿಸಿರುವರು ಈ ಉಭಯಮತಾಚಾರ್ಯರು ಜಗತ್ಸತ್ಯತ್ವವನ್ನು ಒಪ್ಪಿಕೊಳ್ಳುವರು ಅಧ್ಯಾಸವಾದವನ್ನು ಖಂಡಿಸುವರು ಉಭಯರ ಸಿದ್ಧಾಂತವೂ ವಿಶಿಷ್ಟಾದ್ವೈತವಾಗಿದ್ದು, ಅಲ್ಪಸ್ವಲ್ಪ ವ್ಯತ್ಯಾಸವಾಗಿರುವುದು ಪಂಚಾಚಾರ್ಯರು ಶಿವನೇ ಪರಬ್ರಹ್ಮನೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ವಿಷ್ಣುವೇ ಪರಬ್ರಹ್ಮನೆಂದು ಬೋಧಿಸಿದರು ಪಂಚಾಚಾರ್ಯರು ಶಿವನಿಂದಲೇ ಸಕಲಚರಾಚರಾತ್ಮಕವಾದ ಜಗತ್ತು ನಿರ್ಮಿತವಾಯಿತೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ವಿಷ್ಣುವಿನಿಂದಲೇ ನಿರ್ಮಿತವಾಯಿತೆಂದು ಬೋಧಿಸಿದರು ಪಂಚಾಚಾರ್ಯರು ಪಾರ್ವತೀಸಹಿತನಾದ ಪರಮೇಶ್ವರನನ್ನು ಪೂಜಿಸಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಲಕ್ಷ್ಮೀಸಹಿತನಾದ ನಾರಾಯಣನನ್ನು ಪೂಜಿಸಬೇಕೆಂದು ಬೋಧಿಸಿದರು ಪಂಚಾಚಾರ್ಯರು ಪರಶಿವರೂಪಿಯಾದ ಇಷ್ಟಲಿಂಗಮೂರ್ತಿಯನ್ನು ಕ್ಷಣಕಾಲವಾದರೂ ಅಗಲಿಸದೆ ಸದಾ ಶರೀರದಲ್ಲಿ ಧಾರಣಮಾಡಿಕೊಂಡಿರಬೇಕೆಂದು ಬೋಧಿಸಿದರೆ, ಅದಕ್ಕೆ ಬದಲಾಗಿ ರಾಮಾನುಜಾಚಾರ್ಯರು ವಿಷ್ಣುವಿನ ಆಯುಧರೂಪಗಳಾದ ಶಂಖಚಕ್ರಗಳನ್ನು ಶರೀರದಲ್ಲಿ ಎಡಬಿಡದೆ ಸದಾ ಧರಿಸಿಕೊಳ್ಳಬೇಕೆಂದು ತಪ್ತಮುದ್ರಾಂಕನ ಪದ್ಧತಿಯನ್ನು ನೆಲೆಗೊಳಿಸಿದರು ಪಂಚಾಚಾರ್ಯರು ಗೋಮಯದಿಂದ ಸಿದ್ಧವಾದ ಭಸ್ಮವನ್ನು ತಿರ್ಯಕ್ತ್ರಿಪುಂಡ್ರವನ್ನಾಗಿ ಧರಿಸಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಮೃತ್ತಿಕೆಯಿಂದ ಸಿದ್ಧವಾದ ನಾಮವನ್ನು ಊರ್ಧ್ವತ್ರಿಪುಂಡ್ರವನ್ನಾಗಿ ಧರಿಸಬೇಕೆಂದು ಬೋಧಿಸಿದರು ಪಂಚಾಚಾರ್ಯರು ರುದ್ರಾಕ್ಷಮಣಿಗಳನ್ನು ಧರಿಸಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ತುಲಸೀಮಣಿಗಳನ್ನು ಧರಿಸಬೇಕೆಂದು ಬೋಧಿಸಿದರು ಪಂಚಾಚಾರ್ಯರು ಪೂಜೆಗಾಗಿ ಬಿಲ್ವಪತ್ರಗಳನ್ನು ಪ್ರಧಾನವನ್ನಾಗಿಟ್ಟುಕೊಂಡು ಧರಿಸಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ತುಲಸೀಪತ್ರಗಳನ್ನು ಧರಿಸಬೇಕೆಂದು ಬೋಧಿಸಿದರು ಪಂಚಾಚಾರ್ಯರು ಶಿವಪಂಚಾಕ್ಷರೀಮಂತ್ರವನ್ನು ಜಪಿಸಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ನಾರಾಯಣಾಷ್ಟಾಕ್ಷರೀಮಂತ್ರವನ್ನು ಜಪಿಸಬೇಕೆಂದು ಬೋಧಿಸಿದರು. ಪಂಚಾಚಾರ್ಯರು ಜನಿಸಿದ ಶಿಶುವಿಗೆ ಶಿವನ ಸಂಬಂಧವಿರಬೇಕೆಂದೂ, ಅದಕ್ಕೆ ಲಿಂಗಧಾರಣ, ಪಂಚಾಕ್ಷರೀಮಂತ್ರೋಪದೇಶಾದಿಗಳನ್ನು ಮಾಡಬೇಕೆಂದೂ ಬೋಧಿಸಿದರೆ, ರಾಮಾನುಜಾಚಾರ್ಯರು ಶಿಶುವಿಗೆ ಶೀತಶಂಖಚಕ್ರಧಾರಣ, ನಾರಾಯಣಾಷ್ಟಾಕ್ಷರೀಮಂತ್ರೋಪದೇಶವನ್ನು ಮಾಡಬೇಕೆಂದು ಬೋಧಿಸಿದರು ಪಂಚಾಚಾರ್ಯರು ೮ನೆಯ ವರ್ಷದಲ್ಲಿ ಜಾತಿಸಂಸ್ಕಾರರೂಪವಾದ ಉಪನಯನವನ್ನೂ, ಮತಸಂಸ್ಕಾರರೂಪವಾದ ದೀಕ್ಷೆಯನ್ನೂ ಬೋಧಿಸಿದಂತೆಯೇ, ರಾಮಾನುಜಾಚಾರ್ಯರಾದರೂ ಈ ಉಭಯಸಂಸ್ಕಾರಗಳನ್ನೂ ಬೋಧಿಸಿದರು ಪಂಚಾಚಾರ್ಯರು ಶಿವದೀಕ್ಷಾಸಮಯದಲ್ಲಿ ದ್ವಿಜರಿಗೆ "ಷಡಧ್ವಶುದ್ಧಿಸಂಸ್ಕಾರ"ವನ್ನು ಮಾಡಬೇಕೆಂದು ಬೋಧಿಸಿದಂತೆ, ರಾಮಾನುಜಾಚಾರ್ಯರಾದರೂ ವೈಷ್ಣವದೀಕ್ಷಾಸಮಯದಲ್ಲಿ ಷಡಧ್ವಶುದ್ಧಿಸಂಸ್ಕಾರವನ್ನು ಮಾಡಬೇಕೆಂದು ಬೋಧಿಸಿದರು ಪಂಚಾಚಾರ್ಯರು ಬ್ರಾಹ್ಮಣಾದಿಚಂಡಾಲಪರ್ಯಂತವಾಗಿ ಸರ್ವರೂ ತಮ್ಮ ತಮ್ಮ ಜಾತಿಗಳಿಗನುಸಾರವಾಗಿ ಲಿಂಗಧಾರಣ ಭಸ್ಮಧಾರಣ ರುದ್ರಾಕ್ಷಧಾರಣಾದಿಗಳಿಂದ ಯುಕ್ತರಾಗಿ ವರ್ಣಾಶ್ರಮಧರ್ಮಗಳಂತೆ ವರ್ತಿಸಬೇಕೆಂದು ಬೋಧಿಸಿದಂತೆ, ರಾಮಾನುಜಾಚಾರ್ಯರಾದರೂ ಬ್ರಾಹ್ಮಣಾದಿಚಂಡಾಲಪರ್ಯಂತವಾಗಿ ಸರ್ವರೂ ಶಂಖ-ಚಕ್ರ-ಊರ್ಧ್ವಪುಂಡ್ರಾದಿಗಳಿಂದ ಯುಕ್ತರಾಗಿ ವರ್ಣಾಶ್ರಮಧರ್ಮಗಳಂತೆ ವರ್ತಿಸಬೇಕೆಂದು ಬೋಧಿಸಿದರು ಪಂಚಾಚಾರ್ಯರು ತಮ್ಮ ಮತಕ್ಕೆ "ವೀರಶೈವ"ವೆಂಬ ನಾಮವನ್ನಿಟ್ಟರೆ, ರಾಮಾನುಜಾಚಾರ್ಯರು ತಮ್ಮ ಮತಕ್ಕೆ "ವೀರವೈಷ್ಣವ ಅಥವಾ ಶ್ರೀವೈಷ್ಣವ" ಎಂಬ ನಾಮವನ್ನಿಟ್ಟರು ಪಂಚಾಚಾರ್ಯರು ಶಿವಾಗಮಗಳೇ ಪರಮಪ್ರಮಾಣೀಭೂತಗಳಾದ ಗ್ರಂಥಗಳೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಪಾಂಚರಾತ್ರಾಗಮಗಳೇ ಪರಮಪ್ರಮಾಣೀಭೂತಗ್ರಂಥಗಳೆಂದು ಬೋಧಿಸಿದರು ಪಂಚಾಚಾರ್ಯರು ವಿಧವಾಸ್ತ್ರೀಯರು ಕೇಶಗಳನ್ನು ತೆಗೆಯಿಸಕೂಡದೆಂದೂ, ಒಪ್ಪತ್ತೇ ಭೋಜನವನ್ನು ಮಾಡಬೇಕೆಂದೂ, ಕಾಷಾಯವಸ್ತ್ರಗಳನ್ನು ಧರಿಸಬೇಕೆಂದೂ, ಪತಿವಿಯೋಗಾನಂತರ ಪರಶಿವನೇ ಪತಿಯೆಂದು ಭಾವಿಸಿ ವರ್ತಿಸಬೇಕೆಂದೂ ಬೋಧಿಸಿದಂತೆ, ರಾಮಾನುಜಾಚಾರ್ಯರಾದರೂ ವಿಧವಾಸ್ತ್ರೀಯರು ಕೇಶಗಳನ್ನು ತೆಗೆಯಿಸಕೂಡದೆಂದೂ, ಒಪ್ಪತ್ತೇ ಭೋಜನವನ್ನು ಮಾಡಬೇಕೆಂದೂ, ಕೆಂಪುಬಟ್ಟೆಗಳನ್ನು ಧರಿಸಬೇಕೆಂದೂ, ಪತಿವಿಯೋಗಾನಂತರ ನಾರಾಯಣನೇ ಪತಿಯೆಂದು ಭಾವಿಸಿ ವರ್ತಿಸಬೇಕೆಂದೂ ಬೋಧಿಸಿದರು. ಪಂಚಾಚಾರ್ಯರು ಗುರುಮನೆತನದವರಿಗೆ (ಆಚಾರ್ಯಸಾಂಪ್ರದಾಯಿಕರಿಗೆ) ಮಹತ್ತ್ವವನ್ನು ಕೊಟ್ಟಿರುವಂತೆ, ರಾಮಾನುಜಾಚಾರ್ಯರಾದರೂ ಗುರುಮನೆತನದವರಿಗೆ ಮಹತ್ತ್ವವನ್ನು ಕೊಟ್ಟಿರುವರು ವೀರಶೈವಮತದಲ್ಲಿ ಬ್ರಾಹ್ಮಣಪದವಾಚ್ಯರಾದವರಿಗೆ 'ಅಯ್ಯನವರು" ಎಂದು ಕರೆದರೆ, ಶ್ರೀವೈಷ್ಣವಮತದಲ್ಲಿ "ಅಯ್ಯಂಗಾರ್" ಎಂದು ಕರೆಯುವರು ಇವೇ ಮೊದಲಾದ ವಿಷಯಗಳನ್ನು ಪರ್ಯಾಲೋಚಿಸಿ ನೋಡಿದರೆ, ಪಂಚಾಚಾರ್ಯರು ಜಗತ್ತಿನಲ್ಲಿ ಶಿವಭಕ್ತಿಯನ್ನು ಪ್ರಸಾರಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಂತೆ, ರಾಮಾನುಜಾಚಾರ್ಯರೂ ಸಹ ಜಗತ್ತಿನಲ್ಲಿ ವಿಷ್ಣುಭಕ್ತಿಯನ್ನು ಪ್ರಚಾರಪಡಿಸಬೇಕೆಂಬ ಉದ್ದೇಶದಿಂದ ವೀರಶೈವಮತದ ಸಿದ್ಧಾಂತಾಚಾರಾದಿಗಳನ್ನೇ ರೂಪಾಂತರವನ್ನಾಗಿ ಮಾಡಿ, ತಮ್ಮ ಸಿದ್ಧಾಂತವನ್ನು ನೆಲೆಗೊಳಿಸಿದರೆಂದು ಸ್ಪಷ್ಟವಾಗಿ ತೋರಿಬರುತ್ತದೆ

ರಷ್ಯದಲ್ಲಿ ಜರ್ಮನಿಗಾಗುತ್ತಿರುವ ನಷ್ಟ!

ಕಳೆದ 4 ತಿಂಗಳಲ್ಲಿ ನಡೆಸಿದ ಯುದ್ಧದಲ್ಲಿ ಜರ್ಮನರು ರಷ್ಯನ್ ರಣಾಂಗಣದಲ್ಲಿ 2 ಲಕ್ಷ ಯೋಧರನ್ನು ಬಲಿಕೊಟ್ಟಿದ್ದಾರೆ. 10 ಲಕ್ಷ ಯೋಧರು ಗಾಯಗೊಂಡಿದ್ದಾರೆ. ಕಾರ್ಖೋವ್ ರಂಗದಲ್ಲಿ ಮೇ ತಿಂಗಳು 12ನೇ ತಾರೀಖಿನಿಂದೀಚೆಗೆ ರಷ್ಯ ಸೈನಿಕರು ಜರ್ಮನರಿಂದ 365 ಫಿರಂಗಿಗಳನ್ನೂ 250 ಟ್ಯಾಂಕುಗಳನ್ನೂ 118 ಟ್ರೆಂಚ್ ಮಾರ್ಟರ್‌ಗಳನ್ನೂ 379 ಮೆಷೀನ್‌ಬಂದೂಕಗಳನ್ನೂ 23284 ಮೈನ್‌ಗಳನ್ನೂ 10 ಲಕ್ಷ ಕೋವಿಗಳನ್ನೂ 14000 ಗ್ರೆನೇಡುಗಳನ್ನೂ 90 ಲಾರಿಗಳನ್ನೂ ಕಿತ್ತುಕೊಂಡರೆಂದು ಹೇಳಲಾಗಿದೆ.

ಯುದ್ಧವಾರ್ತೆ.

ಜರ್ಮನ್ ವಿಮಾನ ತಯಾರಿಕೆ ಕಡಿಮೆಯಾಗುತ್ತಿದೆ

ಫ್ರೆಂಚ್ ಸರಹದ್ದಿನಿಂದ ತಾಟಸ್ಥ್ಯ ರಾಷ್ಟ್ರಗಳಿಗೆ ಬಂದಿರುವ ವರದಿಯಂತೆ ಜರ್ಮನಿಯಲ್ಲಿ ವಿಮಾನ ತಯಾರಿಕೆಯು ಕಡಿಮೆಯಾಗುತ್ತಿದೆ ತಿಂಗಳು ಒಂದಕ್ಕೆ ೧೬೦೦ ಅಥವಾ ೧೭೦೦ ವಿಮಾನಗಳು ತಯಾರಾಗುತ್ತಿವೆಯೆಂದು ಪ್ರಕಟವಾಗಿದೆ.

ಕೈರೋ ಮೇಲೆ ಶತ್ರುವಿಮಾನ

ಗುರುವಾರ ಸಾಯಂಕಾಲ ಒಂದು ಶತ್ರುವಿಮಾನವು ಕೈರೋವಿನ ಮೇಲೆ ಹಾರಾಡಿದುದರ ಪರಿಣಾಮವಾಗಿ ಎಚ್ಚರಿಕೆಯ ಧ್ವನಿಯನ್ನು ಕೊಡಲಾಯಿತು ಬ್ರಿಟಿಷ್ ವಿಮಾನಗಳು ಅದನ್ನು ಅಟ್ಟಿಸಿಕೊಂಡು ಹೋಗಿ ವೈಮಾನಿಕರನ್ನು ಸೆರೆ ಹಿಡಿದರು.

ಸರ್ಬಿಯನ್ನರ ಸಂಕಟ

ಹಂಗೇರಿ ಸೈನಿಕರು ಯೂಗೋಸ್ಲಾವಿಯಾವನ್ನು ಪ್ರವೇಶಿಸಿದ ಮೇಲೆ ಒಂದುಲಕ್ಷ ಸರ್ಬಿಯನ್ ಸ್ತ್ರೀಪುರುಷರೂ ಮಕ್ಕಳೂ ಕೊಲ್ಲಲ್ಪಟ್ಟಿರುವರೆಂದು ಲಂಡನ್ನಿನಲ್ಲಿರುವ ಯೂಗೋಸ್ಲೇವ್ ಸರ್ಕಾರಕ್ಕೆ ವರದಿಯಾಗಿದೆ ಇದಲ್ಲದೆ 13000 ಜನರನ್ನು ಒಂದುಕಡೆ ಕಾರಾಗೃಹದಲ್ಲಿ ಕೂಡಿದ್ದರೆಂದೂ ಅಲ್ಲಿ ಅವರಿಗೆ ಮಲಗಲು ಸಹ ಸ್ಥವಿರಲಿಲ್ಲವೆಂದೂ ಹೇಳಲಾಗಿದೆ.

ಅಸ್ಸಾಂ ದಾಳಿಯಲ್ಲಿ ಗ್ರಾಮದ ಹೆಸರನ್ನು ಏಕೆ ತಿಳಿಸಿಲ್ಲ?

ಇಂಡಿಯಾ ಸರ್ಕಾರದವರು ಒಂದು ಪ್ರಕಟನೆಯನ್ನು ಹೊರಡಿಸಿ ಅಸ್ಸಾಂ ಮೇಲೆ ನಡೆದ ದಾಳಿಯಲ್ಲಿ ಊರುಗಳ ಹೆಸರುಗಳನ್ನು ತಿಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದಲ್ಲವೆಂದೂ, ಹೆಸರನ್ನು ತಿಳಿಸುವುದರಿಂದ ಶತ್ರುಗಳಿಗೆ ಸಹಾಯವಾಗುವುದೆಂದೂ ತಿಳಿಸಿದ್ದಾರೆ.

ಮೆಕ್ಸಿಕೋ ದೇಶವು ಆಕ್ಸಿಸ್ ರಾಷ್ಟ್ರಗಳ ಮೇಲೆ ಯುದ್ಧ ಘೋಷಿಸಿತು

ಮೆಕ್ಸಿಕೋ ಸರಕಾರದವರು ಕಳುಹಿಸಿದ ಪ್ರತಿಭಟನ ಪತ್ರವನ್ನು ಜರ್ಮನಿ ಸರ್ಕಾರದವರು ನಿರಾಕರಿಸಿದುದ ಫಲವಾಗಿ ಮೆಕ್ಸಿಕೋ ರಾಷ್ಟ್ರವು ಆಕ್ಸಿಸ್ ರಾಷ್ಟ್ರಗ ಮೇಲೆ ಯುದ್ಧವನ್ನು ಘೋಷಿಸಿರುತ್ತದೆ.

ಅಟ್ಲಾಂಟಿಕ್ ಸಮುದ್ರದಲ್ಲಿ ಆಕ್ಸಿಸ್ ಸಬ್‌ಮೆರಿನ್ನುಗಳ ಹಾವಳಿ

ಮಧ್ಯ ಅಟ್ಲಾಂಟಿಕ್ ಸಮುದ್ರದಲ್ಲಿ ಹನ್ನೊಂದ ಆಕ್ಸಿಸ್ ಸಬ್‌ಮೆರಿನ್‌ಗಳು ಗುಂಪು ಗುಂಪಾಗಿ ಧಾ ನಡೆಸುತ್ತಿವೆ ಒಂದು ಮಿತ್ರಪಕ್ಷದ ಹಡಗನ್ನು ಮುಳುಗಿಸಿದವು. ಅದರಲ್ಲಿದ್ದವರ ಪೈಕಿ ೬೦ ಜನರು ಕೆನಡಾ ಪೂರ್ವ ತೀರವನ್ನು ಮುಟ್ಟಿದರು ಮೊದಲು ಟಾರ್ಪಿಡೋ ಆದಾಗ ನಾವಿಕರು ಹಡಗನ್ನು ತ್ಯಜಿಸಿದರು ಆದರೆ ಹಡಗು ಅಷ್ಟು ನಷ್ಟವಾಗಿರಲಿಲ್ಲವಾದ್ದರಿಂ ಅಲ್ಲಿಂದ ಹೆಚ್ಚಿಗೆ ಆಹಾರಪದಾರ್ಥಗಳನ್ನೂ ಬಟ್ಟೆ ಳನ್ನೂ ಸಾಗಿಸಲು ಪುನಃ ಕೆಲವು ನಾವಿಕರು ಹಡಗನ್ನು ಹತ್ತಿದರು ಕಡೆಯವನು ವಾಪಸು ಬರುವ ಹೊತ್ತಿ ೧ ಸಬ್‌ಮೆರಿನ್ ಕಾಣಿಸಿಕೊಂಡಿತು. ಮಿತ್ರ ಪಕ್ಷ ಹಡಗಿನ ಕ್ಯಾಪ್ಟನ್ನನು ತನ್ನ ಮಿಷನ್ ಗನ್ ಪ್ರಯೋ ಮಾಡಲೆತ್ನಿಸಿದನು. ಆದರೆ ಸಬ್ ಮೆರಿನ್ ಉಪಯೋ ಸಿದ ಮತ್ತೊಂದು ಟಾರ್ಪೆಡೋ ಹೊಡೆತದಿಂದ ಹಡಗು ಎರಡು ತುಂಡಾಯಿತು.

ಲಂಡನ್ನಿನ ಮೇಲೆ ೨ ಟನ್ ತೂಕದ ಬಾಂಬು

ಲಂಡನ್ನಿನ ಮೇಲೆ ನೊನ್ನೆ ನಡೆದ ದಾಳಿಯಲ್ಲಿ ಜರ್ಮನರು ೨ ಟನ್ ತೂಕದ ಒಂದು ಬಾಂಬನ್ನು ಹಾಕಿದರು. ಆದರೆ ಅದು ಸಿಡಿಯಲಿಲ್ಲ. ಆ ಬಾಂಬಿನ ಉದ್ದ ೧೩ ಪೂಟು ಇದ್ದು ಅಗಲ ೨॥ ಪೂಟು ಇತ್ತಂತೆ!

ತಿಂಗಳಿಗೆ ೮೬೦೦ ವಿಮಾನಗಳ ಸಿದ್ಧತೆ.

ಸಂಯುಕ್ತ ರಾಷ್ಟ್ರಗಳು ಈಗ ತಿಂಗಳಿಗೆ ೮೬೦೦ ವಿಮಾನಗಳನ್ನು ತಯಾರಿಸುತ್ತಿವೆಯೆಂದೂ, ಜರ್ಮನಿಯಲ್ಲಿಯೂ ಮತ್ತು ಅದು ಆಕ್ರಮಿಸಿರುವ ದೇಶಗಳಲ್ಲಿಯೂ ತಿಂಗಳಿಗೆ ೩೯೦೦ ವಿಮಾನಗಳೂ, ಇಟಲಿಯಲ್ಲಿ ೨೦೦ ವಿಮಾನಗಳೂ ಜಪಾನಿನಲ್ಲಿ ೫೦೦ ವಿಮಾನಗಳೂ ಸಿದ್ಧವಾಗುತ್ತಿವೆಯೆಂದೂ ಅಮೇರಿಕೆಯ ವಿಮಾನ ಕಾರಖಾನೆಯ ಅಧ್ಯಕ್ಷರೊಬ್ಬರು ತಿಳಿಸಿರುತ್ತಾರೆ

ದೇಶಭ್ರಷ್ಟರಾದ ಜರ್ಮನರು

ಹಿಟ್ಲರನು ತನ್ನ ಅಭಿಪ್ರಾಯವನ್ನು ವಿರೋಧಿಸಿದವರನ್ನೆಲ್ಲಾ ಜರ್ಮನಿಯಿಂದ ಓಡಿಸಿರುವನಷ್ಟೆ! ಹೀಗೆ ದೇಶಭ್ರಷ್ಟರಾಗಿ ಬಂದವರಲ್ಲಿ ಸುಮಾರು 70000 ಜನರು ಬ್ರಿಟನ್ನಿನಲ್ಲಿ ಬಂದು ಸೇರಿದ್ದಾರೆಂದೂ, ಅವರೆಲ್ಲರೂ ಬ್ರಿಟನ್ನಿನ ಯುದ್ಧೋಪಕರಣ ಕಾರ್ಖಾನೆಗಳಲ್ಲಿ ಅತ್ಯಂತ ಆಸಕ್ತಿಯಿಂದ ಕೆಲಸಮಾಡುತ್ತಿದ್ದಾರೆಂದೂ ಬ್ರಿಟಿಷ್ ಲೇಬರ್ ಶಾಖೆಯವರು ಪ್ರಕಟಿಸಿದ್ದಾರೆ.

ಸೈನ್ಯಕೆಲಸಕ್ಕಾಗಿ ಸೇರಿರುವ ಬ್ರಿಟಿಷರ ಸಂಖ್ಯೆ ೨ ಕೋಟಿ ೨೦ ಲಕ್ಷ

ಬ್ರಿಟನ್ನಿನ 3 ಕೋಟಿ 30 ಲಕ್ಷ ಪ್ರಜಾ ಸಂಖ್ಯೆಯಲ್ಲಿ ಸುಮಾರು 2 ಕೋಟಿ 20 ಲಕ್ಷ ಜನರು ಸೈನ್ಯ ಶಾಖೆಯಲ್ಲಿಯೂ, ಸಾರ್ವಜನಿಕ ರಕ್ಷಣ ಶಾಖೆಗಳಲ್ಲಿಯೂ, ಕೈಗಾರಿಕೋದ್ಯಮಗಳಲ್ಲಿಯೂ ಕೆಲಸಮಾಡುತ್ತಿರುವರೆಂದು ಕಾರ್ಮಿಕ ಮಂತ್ರಿಗಳಾದ ಮ॥ "ಬೆವಿನ್ ಅವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು ಪ್ರಪಂಚದ ಇತಿಹಾಸದಲ್ಲೇ ಯಾವ ದೇಶವೂ ಇಷ್ಟು ಜನರನ್ನು ಸೈನ್ಯದ ಕೆಲಸಕ್ಕೆ ತೆಗೆದುಕೊಂಡಿರಲಿಲ್ಲವೆಂದು ತಿಳಿದು ಬಂದಿದೆ.

ಜರ್ಮನಿಯಲ್ಲಿ ನ್ಯಾಯಾಧೀಶರ ದಸ್ತಗಿರಿ

ಜರ್ಮನಿಯ ಬರ್ಲಿನ್, ಕೋಲೋನ್, ಹಾನೋವರ್ ಮತ್ತು ಫ್ರಾಂಕ್‌ಫರ್ಟ್ ಮುಂತಾದ ಅನೇಕ ಊರುಗಳಲ್ಲಿ ಗುಪ್ತ ಪೋಲೀಸಿನವರು ಅನೇಕಮಂದಿ ನ್ಯಾಯಾಧೀಶರುಗಳನ್ನು ದಸ್ತಗಿರಿಮಾಡಿದ್ದಾರೆ ಹಿಟ್ಲರನ ಆಡಳಿತ ಮತ್ತು ಯುದ್ಧದ ವಿಷಯದಲ್ಲಿ ಅಸಮಾಧಾನ ಮತ್ತು ಅತೃಪ್ತಿಯನ್ನು ವ್ಯಕ್ತಪಡಿಸಿದವರಿಗೆ ಬಲವಾದ ಶಿಕ್ಷೆಯನ್ನು ವಿಧಿಸದೆ ಹೋದುದೇ ಅವರು ಮಾಡಿದ ಅಪರಾಧವೆಂದು ಹೇಳಲಾಗಿದೆ.

ಈ ವರ್ಷ ಜರ್ಮನಿಗೆ ಸೋಲು

1942 ರಲ್ಲಿ ಜರ್ಮನಿ ಸೇನೆಯನ್ನು ಸೋಲಿಸಲು ಬೇಕಾದ ಸಾಧನವನ್ನು ರಷ್ಯಸೇನೆಯು ಹೊಂದಿದೆಯೆಂದೂ, ಚಳಿಗಾಲದಲ್ಲಿ ಒಂದು ನಿಮಿಷವೂ ನಾಜಿಗಳಿಗೆ ವಿಶ್ರಾಂತಿ ಕೊಡಲಿಲ್ಲವೆಂದೂ, ರಷ್ಯನ್ ಸೇನೆಯು ಒಂದೇ ಸಮನೆ ಮುಂದುವರಿಯುತ್ತಲೇ ಇದೆಯೆಂದೂ, ನಾಜಿ ದರೋಡೆಕೋರರಿಂದ ರಷ್ಯವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡುವದೇ ಅವರ ಗುರಿಯೆಂದೂ, ಈ ಕೆಲಸವನ್ನು ರಷ್ಯವು ಯಶಸ್ವಿಯಾಗಿ ಮಾಡಬಲ್ಲದೆಂದೂ, ರಣರಂಗದಲ್ಲಿಯೂ ಮತ್ತು ಒಂದುಗದೆಯೂ ಕಾಣಬರುತ್ತಿರುವ ಐಕಮತ್ಯದಿಂದಲೂ ಮತ್ತು ಸಂಗ್ರಾಮವನ್ನು ಕಾರ್ಯವು ವೃದ್ಧಿಗೊಳ್ಳುತ್ತಿರುವದರಿಂದಲೂ ರಷ್ಯಕ್ಕೆ ಜಯದೊರಕುವದು ನಿಶ್ಚಯವೆಂದೂ ಮಾಸ್ಕೊ ರೇಡಿಯೋ ತಿಳಿಸಿದೆ

ಬ್ರಿಟನ್ನಿನ ಮೇಲೆ ಬಾಂಬುಗಳು

ಮಂಗಳವಾರ ಮಧ್ಯ ರಾತ್ರಿಯಲ್ಲಿ ಶತ್ರು ವಿಮಾನಗಳು ಬ್ರಿಟನ್ನಿನ ಮೇಲೆ ಭಯಂಕರವಾದ ಸಿಡಿತದ ಬಾಂಬುಗಳನ್ನೂ ಅಗ್ನ್ಯುತ್ಪಾದಕ ಬಾಂಬುಗಳನ್ನೂ ಹಾಕಿದವು. ಫಿರಂಗಿಗಳು ಶತ್ರುವಿಮಾನಗಳನ್ನು ಬಲವಾಗಿ ಎದುರಿಸಿದರೂ, ವಿಮಾನ ದಾಳಿಯು ಕೆಲವು ಕಾಲ ನಡೆಯಿತು.

ಐರ್ಲೆಂಡಿಗೆ ಅಮೇರಿಕದ ಸೈನ್ಯ

ಅಮೇರಿಕದಿಂದ ಬ್ರಿಟಿಷ್ ದ್ವೀಪಗಳಿಗೆ ಹೆಚ್ಚು ಸೈನಿಕರು ಬಂದರೆಂದು ಸಂಗ್ರಾಮಶಾಖೆಯವರು ಪ್ರಕಟಿಸಿರುವರು ಕಳೆದ 19 ನೆಯ ತಾರೀಖಿನ ದಿವಸ ಉತ್ತರ ಐರ್ಲೆಂಡಿಗೆ ಸಾವಿರಾರು ಅಮೇರಿಕನ್ ಯೋಧರು ಬಂದಿಳಿದರು ಈ ಸೇನೆಯಲ್ಲಿ ಟ್ಯಾಂಕುಗಳು, ಫಿರಂಗಿಗಳು ಮತ್ತು ಶಸ್ತ್ರಬಂಡಿಗಳ ಪಡೆಗಳು ಸೇರಿವೆ ಈ ಸೇನೆಗಳ ಮುಂದಿನ ಕಾರ್ಯಕ್ರಮವೇನೆಂಬುದನ್ನೂ ಅಮೇರಿಕನ್ ಯೋಧರು ಇಷ್ಟು ಹೆಚ್ಚು ಸಂಖ್ಯೆಯಲ್ಲಿ ಅಲ್ಲಿಗೆ ಬರುತ್ತಿರುವದರ ರಹಸ್ಯವೇನೆಂಬುದನ್ನೂ ತಿಳಿಯಲು ಎಲ್ಲರೂ ಕುತೂಹಲವುಳ್ಳವರಾಗಿದ್ದಾರೆ ಇದು ಸ್ಪಷ್ಟವಾಗಿಲ್ಲದಿದ್ದರೂ, ಉತ್ತರ ಐರ್ಲೆಂಡಿನಲ್ಲಿರುವ ಬ್ರಿಟಿಷ್ ಸೇನೆಗಳು ಮುಂದುಗಡೆಯ ಸ್ಥಾನಗಳಿಗೆ ತೆರಳಲು ಅವಕಾಶ ಕಲ್ಪಿಸುವುದು. ಮೊದಲನೆಯದೆಂದೂ, ಯೂರೋಪಿಗೆ ಮುತ್ತಿಗೆ ಹಾಕುವದು ಎರಡನೆಯದೆಂದೂ ಊಹಿಸಲಾಗಿದೆ.

ಜರ್ಮನರಿಗೆ ಗೊಯರಿಂಗರ ಎಚ್ಚರಿಕೆ

ಮಾರ್ಷಲ್ ಗೊಯರಿಂಗರು ೨೦ನೇ ತಾ॥ ದಿವಸ ಭಾಷಣ ಮಾಡುತ್ತಾ "ಮುಂದೆ ಜರ್ಮನರು ಹೆಚ್ಚಿನ ಕಷ್ಟಗಳನ್ನು ಎದುರಿಸಬೇಕಾಗಿದೆ ಜರ್ಮನಿಯು ಎದುರಿಸಬೇಕಾಗಿ ಬಂದ ಕದನಗಳಲ್ಲೆಲ್ಲ ಇದು ಕಷ್ಟತರವಾದುದು ಚಳಿಗಾಲದ ಹೋರಾಟವು ಭಯಂಕರವಾಗಿತ್ತು ಪ್ರಕೃತಿಯು ನಮಗೆ ಅನುಕೂಲವಾಗಿರಲಿಲ್ಲ ನಾವು ಹೇಳುವುದೆಲ್ಲವೂ ನಿಜವೆಂದು ನಂಬಬೇಕಿರಿ ನಿಮ್ಮ ಜೀವನವು ಕಷ್ಟವಾಗುವಂತೆ ಮಾಡಲಿಕ್ಕಾಗಿ ಮಾತ್ರವೇ ನಾವು ನಾನಾ ಶಾಸನಗಳನ್ನು ಹೊರಡಿಸಲಿಲ್ಲ ಒಂದುವೇಳೆ ಅವುಗಳಲ್ಲಿ ಯಾವುದಾದರೂ ಅಮುಖ್ಯವೆಂದು ತೋರಿಬಂದರೂ ಅವುಗಳನ್ನು ಪಾಲಿಸುವುದು ಅಗತ್ಯ. ನಾವು ಹೆಚ್ಚು ಹೆಚ್ಚು ಕಷ್ಟಗಳನ್ನು ಅನುಭವಿಸಲು ಶಕ್ತರಾಗಬೇಕು ಎಲ್ಲೋ ಅಡಗಿದ್ದಂತಹ ಹಿಟ್ಲರನನ್ನು ದೇವರು ಅತ್ಯಂತ ಉಚ್ಚಸ್ಥಾನಕ್ಕೆ ತಂದು ಕುಳ್ಳಿರಿಸಿದ್ದಾನೆ ಜರ್ಮನಿಯನ್ನು ಅಧೋಗತಿಗೆ ತಳ್ಳಲೋಸುಗವೇ ಹಾಗೆ ಮಾಡಿದ್ದಾನೆಂದು ಊಹಿಸುವುದು ಕೂಡ ಸಾಧ್ಯವಿಲ್ಲ" ಎಂದು ಹೇಳಿದರು

ರಷ್ಯದಲ್ಲಿ ಜರ್ಮನರಿಗೆ ವಿಶೇಷ ನಷ್ಟ!

೧೯ನೆಯ ತಾ॥ ದಿವಸ ಖಾರಕೋವ್ ರಂಗದಲ್ಲಿ ಟ್ಯಾಂಕ್ ಕದನವು ನಡೆಯಿತು ರಷ್ಯನ್ ಟ್ಯಾಂಕುಗಳು ಜರ್ಮನ್ ವ್ಯೂಹವನ್ನು ಭೇದಿಸಿ, ಕಾಲಾಳು ಬಲವನ್ನು ಎದುರಿಸುವುದರಲ್ಲಿದ್ದವು ಅಷ್ಟರಲ್ಲಿ ಜರ್ಮನಿಯ ಡೈವ್ ಬಾಂಬುರುಗಳು ಮುತ್ತಿಗೆ ನಡೆಸಲು ಆರಂಭಿಸಿದವು ಅಲ್ಲದೆ ಶತ್ರುಗಳ ಟ್ಯಾಂಕ್ ಪಡೆಯೊಂದು ಮೇಲೆ ಬಿತ್ತು. ರಷ್ಯ ಟ್ಯಾಂಕುಗಳು ಉಗ್ರವಾಗಿ ಗುಂಡು ಹಾರಿಸಿ, ಜರ್ಮನ್ ಟ್ಯಾಂಕುಗಳನ್ನು ಓಡಿಸಿದವು ರಷ್ಯನರು ಅರ್ಧ ಸಂಖ್ಯೆಯ ಜರ್ಮನ್ ಟ್ಯಾಂಕುಗಳನ್ನು ನಾಶಮಾಡಿದರು ಖಾರಕೋವ್ ರಂಗದಲ್ಲಿ ರಷ್ಯನರನ್ನು ತಡೆಗಟ್ಟಬೇಕೆಂದು ಜರ್ಮನರು ಹೊಸದಾಗಿ ನಡೆಸಿದ ಮುತ್ತಿಗೆಗಳೆಲ್ಲವೂ ವಿಫಲವಾದುವೆಂದು ಗುರುವಾರ ಹೊರಟ ಪ್ರಕಟನೆಯು ತಿಳಿಸುತ್ತದೆ ಜರ್ಮನರ ಕಡೆ ಅನೇಕ ಜನರು ಸತ್ತರು; ಅಪಾರ ಸಂಗ್ರಾಮ ವಸ್ತುಗಳು ರಷ್ಯನರ ಹಸ್ತಗತವಾದವು.

ಲೆನಿನ್‌ಗ್ರಾಡ್‌ರಂಗದಲ್ಲಿ ರಷ್ಯನರು ಜರ್ಮನರ ಎರಡು ಪ್ರತಿಭಟನೆಯ ಸ್ಥಾನಗಳ ಮಧ್ಯದಲ್ಲಿದ್ದ ರಸ್ತೆಯನ್ನು ಕತ್ತರಿಸಿದರು ಅದನ್ನು ಮತ್ತೆ ಹಿಡಿಯಲು ಜರ್ಮನರು ಪ್ರಯತ್ನಿಸಿ ೬೦೦ ಮಂದಿಯನ್ನು ಬಲಿಕೊಟ್ಟರು ಇನ್ನೊಂದು ಕಡೆ ಶತ್ರುಗಳು ೫೦೦ ಮಂದಿಯನ್ನು ಕಳೆದುಕೊಂಡರು. ಅನೇಕ ಲಾರಿಗಳು ರಷ್ಯನರಿಗೆದೊರೆತವು. ಖಾರಕೋವ್‌ರಂಗದ ಮೈದಾನಗಳಲ್ಲೆಲ್ಲ ಪ್ರಳಯಾಗ್ನಿಯೆದ್ದಿದೆ ಕ್ರೂರ ಯುದ್ಧವಾಗುತ್ತಿದೆ. ಆರು ದಿನಗಳಲ್ಲಿ ೬೦ ಶತ್ರು ವಿಮಾನಗಳನ್ನೂ, ೪೦೦ ಟ್ಯಾಂಕುಗಳನ್ನೂ, ೧೨೦ ಲಾರಿಗಳನ್ನೂ, ೨೦ ಫಿರಂಗಿಗಳನ್ನೂ ನಾಶಮಾಡಲಾಯಿತು ಈ ಕದನದಲ್ಲಿ ಅನೇಕ ಜರ್ಮನ್ ಅಧಿಕಾರಿಗಳೂ ೨೦೦೦೦ ಯೋಧರೂ ಸತ್ತರು

ಜರ್ಮನಿಯ ಮೇಲೆ ಉಗ್ರವಾದ ಮುತ್ತಿಗೆ

19 ನೇ ತಾರೀಖಿನ ದಿವಸ ಬ್ರಿಟಿಷ್ ವಿಮಾನಗಳು ಮ್ಯಾನ್‌ಹೀಂನಲ್ಲಿರುವ ಮಿಲಿಟರಿ ಸ್ಥಾನಗಳ ಮೇಲೆ ಉಗ್ರವಾಗಿ ಬಾಂಬುಗಳನ್ನು ಸುರಿಸಿದವು ಅನೇಕ ಬಾಂಬರುಗಳು ಮುತ್ತಿಗೆಯಲ್ಲಿ ಭಾಗವಹಿಸಿದ್ದವು ಸ್ಟರ್ಲಿಂಗ್ - ಬಾಂಬರುಗಳ ಒಂದು ಪಡೆಯು 40,000 ಅಗ್ನಿವರ್ಧಕ ಬಾಂಬುಗಳನ್ನು ಹೊತ್ತು ತಂದಿತ್ತು ಇವುಗಳಲ್ಲದೆ ಇತರ ಬಾಂಬರುಗಳು ಉಗ್ರವಾಗಿ ಸಿಡಿಯುವ ಬಾಂಬುಗಳನ್ನು ತಂದಿದ್ದವು ಟ್ಯಾಂಕುಗಳು, ಮೋಟಾರುಗಳು, ಡಿಸೇಲ್ ಎಂಜನ್ನುಗಳು, ಸ್ಫೋಟಕ ವಸ್ತುಗಳು ಮುಂತಾದುವುಗಳನ್ನು ನಿರ್ಮಿಸುವ ಅನೇಕ ಕಾರ್ಖಾನೆಗಳು ಮ್ಯಾನ್‌ಹೀಂನಲ್ಲಿರುವದರಿಂದ ಸುಲಭವಾಗಿ ಗುರಿಹಿಡಿದು ಬಾಂಬುಗಳನ್ನು ಹಾಕಲು ಸಾಧ್ಯವಾಯಿತು ಇದಲ್ಲದೆ ಅಪೂರ್ಣ ಪದಾರ್ಥಗಳನ್ನು ಪಡೆಯುವ ಬಂದರುಗಳಮೇಲೆ ಸಹ ಬಾಂಬುಗಳು ಬಿದ್ದವು. ಅನೇಕ ಕಡೆ ಬೆಂಕಿಯು ಹತ್ತಿಕೊಂಡಿತು ಈ ಮುತ್ತಿಗೆಗಳಲ್ಲದೆ ಫ್ರಾನ್ಸ್ ಮತ್ತು ಹಾಲೆಂಡ್ ವಿಮಾನ ನಿಲ್ದಾಣಗಳ ಮೇಲೆ ಸಹ ಬಾಂಬುಗಳನ್ನು ಹಾಕಲಾಯಿತು ಮುಂದೆ ಶತ್ರುದೇಶಗಳ ಮೇಲೆ ಎಷ್ಟು ಉಗ್ರವಾದ ಮುತ್ತಿಗೆಗಳು ನಡೆಯಬಹುದೆಂಬುದನ್ನು ಇದು ಸೂಚಿಸುವುದಾಗಿದೆ ಈಗ ಪ್ರತಿದಿನ 1000 ವಿಮಾನಗಳು ಹೋಗಿ ಜರ್ಮನಿಯ ಮೇಲೆ ಮುತ್ತಿಗೆ ನಡೆಸಲು ಸಾಧ್ಯವಿದೆಯೆಂದು ಹೇಳಲಾಗಿದೆ

ಜಪಾನಿನ ಮುಂದಿನ ಗುರಿ ತಿಳಿಯದಾಗಿದೆ

ಮಿ॥ ಅಟ್ಲಿಯವರು ಕಳೆದ 19 ನೆಯ ತಾರೀಖಿನ ದಿವಸ ಕಾಮನ್ಸ್ ಸಭೆಯಲ್ಲಿ ಸಂಗ್ರಾಮ ಪರಿಸ್ಥಿತಿಯ ವಿಷಯವಾಗಿ ಮಾತನಾಡುತ್ತ "ದೂರದ ಪೂರ್ವದಲ್ಲಿ ಪ್ರತಿಯೊಂದು ಸ್ಥಳದಲ್ಲಿಯೂ ಸಾಕಾದಷ್ಟು ಸೈನ್ಯಗಳನ್ನು ಒದಗಿಸುವದು ಅಸಾಧ್ಯವಾಗಿದೆ. ಇದಲ್ಲದೆ ಜಪಾನಿನ ಮುಂದಿನ ಉದ್ದೇಶವೇನೆಂಬುದು ತಿಳಿಯದೆ ಇರುವದರಿಂದ ಯಾವುದೇ ಒಂದು ಕ್ಷೇತ್ರದಲ್ಲಿ ಅಪಾರ ಬಲವನ್ನು ಶೇಖರಿಸುವದು ಜಾಣತನವಲ್ಲ ನೀರಿನಲ್ಲಿಯೂ ಆಕಾಶದಲ್ಲಿಯೂ ಮತ್ತು ಭೂಮಿಯ ಮೇಲೆಯೂ ನಾವು ಬಲವನ್ನು ಗಳಿಸುವವರೆಗೆ ಹೀಗೆಯೇ ಕಾಲಕಳೆಯಬೇಕಾಗಿದೆ ಭರತಖಂಡದಲ್ಲಿ ನಮ್ಮ ಸೈನ್ಯಗಳನ್ನು ಬಲಪಡಿಸಲು ಸಾಧ್ಯವಾದುದನ್ನೆಲ್ಲಾ ಮಾಡುತ್ತಿದ್ದೇವೆ ಸಿಲೋನಿಗೂ ಹೆಚ್ಚಿನ ಬಲವನ್ನು ಕಳಿಸಲಾಗಿದೆ ಜಪಾನು ಭಾರತವನ್ನು ಮುತ್ತುವುದೇ ಹೇಗೆಂಬುದು ಇನ್ನೂ ಸ್ಪಷ್ಟವಾಗಿಲ್ಲ ಅದು ಆಸ್ಟ್ರೇಲಿಯದ ಮೇಲೆ ಬೀಳಬಹುದು ಕೋರಲ್ ಸಮುದ್ರದಲ್ಲಿ ನಡೆದ ಯುದ್ಧದಿಂದ ಜಪಾನರ ಮುತ್ತಿಗೆಯನ್ನು ಯಶಸ್ವಿಯಾಗಿ ತಡೆದಂತಾಯಿತು ಆದರೆ ಅಪಾಯವಿನ್ನೂ ತಪ್ಪಿಲ್ಲ. ಜಪಾನರು ಆಸ್ಟ್ರೇಲಿಯವನ್ನು ಮುತ್ತಿದರೆ ಅವರಿಗೆ ಸರಿಯಾದ ಪ್ರಾಯಶ್ಚಿತ್ತವಾಗುವುದು ನಿಶ್ಚಯ!" ಎಂದು ಹೇಳಿದರು.

ತೆಂಗಿನಕಾಯಿಯಲ್ಲಿ ಮುತ್ತು

ಮುತ್ತಿನ ಚಿಪ್ಪಿನಲ್ಲಿ ಮುತ್ತು ದೊರೆಯುವುದು ಸ್ವಾಭಾವಿಕವಾದುದು ಆದರೆ ತೆಂಗಿನಕಾಯಿಯಲ್ಲಿ ಹುಟ್ಟಿದ ಒಂದು ಮುತ್ತನ್ನು ಡೇವಿಡ್ ಎಂಬವರು ಫ್ಲಾರಿಡಾದಲ್ಲಿ ಪ್ರದರ್ಶಿಸಿದ್ದರು. ಈಸ್ಟ್ ಇಂಡಿಯಾ ದ್ವೀಪದ ೯೦ ಲಕ್ಷ ತೆಂಗಿನಕಾಯಿಗಳಲ್ಲಿ ಈವರೆಗೆ ೧೨ ಮುತ್ತುಗಳು ಸಿಕ್ಕಿರುವವಂತೆ! ದೈವಸೃಷ್ಟಿಯು ವಿಚಿತ್ರವಾದುದು

ಪರೋಪಕಾರ

ಲೇಖಕ—ಬೆಳ್ಳಾವಿ ಮಠದ ಸಿದ್ಧರಾಮಯ್ಯ ತಾಳೂರು

"ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ||" ಎಂಬಂತೆ ಪರೋಪಕಾರವೆಂಬುದು ಪುಣ್ಯವನ್ನು ಕೊಡುವಂಥದಾಗಿರುವದು ಈ ಜಗತ್ತಿನಲ್ಲಿ ಜನ್ಮಧಾರಣ ಮಾಡಿದ ಮಾನವರು "ಪರೋಪಕಾರಾರ್ಥಮಿದಂಶರೀರಂ" ಎಂಬಂತೆ ತಮ್ಮ ಶರೀರವನ್ನು ಪರೋಪಕಾರಕ್ಕಾಗಿ ಸವೆಯಿಸಬೇಕಲ್ಲದೆ, ಸುಮ್ಮನೆ ಸೋಮಾರಿತನದಿಂದ ಸವೆಯಿಸಬಾರದು. ಪರೋಪಕಾರಿಗಳಾದವರು ಹಾಳುಹರಟೆಯನ್ನು ಮಾಡದೆ ದುಡಿತದ ಕಡೆಗೆ ದೃಷ್ಟಿಯನ್ನಿಟ್ಟು ಅದರಿಂದ ಬಂದ ಕಾಳುಕಡ್ಡಿ, ಹಣಕಾಸುಗಳಲ್ಲಿ ಸ್ವಲ್ಪ ಭಾಗವನ್ನಾದರೂ, ಪರೋಪಕಾರಕ್ಕಾಗಿ ವಿನಿಯೋಗಿಸುತ್ತಿರಬೇಕು

ಫಲಗಳ್ ಬಾಗುಗುಮುರುಹಲ |
ಜಲದಿಂದೆ ಮುಗಿಲ್ ನವಾಂಬುಭಾರದೆ ಜೋಲ್ಗುಂ |
ಸಿರಿಯೊಳ್ ನಯಯುತರಾರ್ಯರ್ |
ಪರಹಿತದೊಳೆ ಪರೋಪಕಾರಿಗಳ್ಗಿದು ಸಹಜಂ |

ಎಂಬಂತೆ ಗಿಡ ಮೊದಲಾದವುಗಳು ಸಹ ಪರೋಪಕಾರ ಮಾಡುತ್ತಿರುವವು ಕೆಲಜನರು ಮೂಢ ಭಾವನೆಯಿಂದ ನಾನು ಅವನಿಗೆ ಉಪಕಾರಮಾಡುತ್ತೇನೆ ಅವನು ಪುನಃ ನನಗೆ ಎಂದಾದರೂ ಉಪಕಾರವನ್ನು ಮಾಡುತ್ತಾನಲ್ಲಾ ಎಂಬ ಮನಸ್ಸಿನಿಂದ ಮಾಡುವದು ವಿಹಿತವಾದದ್ದಲ್ಲ ಒಬ್ಬನು ನಮಗೆ ಮಾಡಲಿ ಮಾಡದೆ ಇರಲಿ ನಾವು ಮಾಡುವದನ್ನು ಮಾಡಬೇಕು. ನದಿಗಳು ತಾವು ಹರಿಯುವುದು ತಮಗೋಸ್ಕರವಾಗಿ ಅಲ್ಲ, ಪರೋಪಕಾರಕ್ಕಾಗಿ ಇದರಂತೆ ಸೂರ್ಯಚಂದ್ರರು ಉದಯಿಸಿ ಪ್ರಕಾಶ ಕೊಡುವದು ತಮ್ಮ ಹಿತಕ್ಕೋಸ್ಕರವಲ್ಲ, ಸಮಸ್ತ ಪ್ರಪಂಚದಲ್ಲಿರುವ ಚರಾಚರ ಪ್ರಾಣಿಗಳ ಹಿತಕ್ಕಾಗಿ ಗೋವು ತನ್ನ ಯಜಮಾನನು ತನಗೆ ಆಹಾರವನ್ನು ಕೊಡುತ್ತಾನೆಂದು ತಿಳಿದೇನಾದರೂ ಅಮೃತದೋಪಾದಿಯಲ್ಲಿರುವ ಹಾಲನ್ನು ಕೊಡುತ್ತದೆಯೇ ? ಒಂದುವೇಳೆ ಆಹಾರವನ್ನು ಕೊಡದಿದ್ದರೆ ಹಾಲನ್ನೇನಾದರೂ ಕೊಡುವದನ್ನು ಬಿಡುತ್ತದೆಯೇ? ಇಲ್ಲ. ಕೊಡತಕ್ಕ ಪ್ರಾಣಿಯು ಸಹಜವಾಗಿ ಕೊಟ್ಟೇಕೊಡುತ್ತದೆ ಇದರಂತೆ ಮಾನವನು ಸಹಜವಾಗಿ ಪರೋಪಕಾರವನ್ನು ಮಾಡಬೇಕಲ್ಲದೆ ತನಗೆ ಪ್ರತ್ಯುಪಕಾರವನ್ನು ಮಾಡುತ್ತಾನೆಂದು ತಿಳಿದು ಎಂದೂ ಮಾಡಬಾರದು. ಉಪಕಾರವನ್ನು ಮಾಡದವನ ಜನ್ಮವು ವ್ಯರ್ಥ. ಉಪಕಾರಕ್ಕಾಗಿ ಹೆಚ್ಚು ಶ್ರಮವನ್ನು ತೆಗೆದುಕೊಂಡವರಲ್ಲಿ ಈಶ್ವರಚಂದ್ರವಿದ್ಯಾಸಾಗರರು ಮುಂದಾಳುಗಳಾಗಿದ್ದಾರೆ. ಇವರಲ್ಲಿ ಪರೋಪಕಾರ ಬುದ್ಧಿಯು ವಿಶೇಷವಾಗಿತ್ತು ಈ ಕಾಲದಲ್ಲಿ "ಪರೋಪಕಾರಾಯ ಸತಾಂ ವಿಭೂತಯಃ" ಎಂಬುಕ್ತಿಯಂತೆ ತೀರ ಹಿಂದುಳಿದ ವೀರಶೈವ ಸಮಾಜವನ್ನು ಉದ್ಧರಿಸಿ ಈ ಸಮಾಜಕ್ಕೆ ಮಹೋಪಕಾರವನ್ನುಮಾಡಿದ ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು ಚಿರಸ್ಮರಣೀಯರಾಗಿದ್ದಾರೆಂಬುದನ್ನು ಘಂಟಾಘೋಷವಾಗಿ ಹೇಳಬಹುದಾಗಿದೆ. ಪರೋಪಕಾರವು ಎಂಥ ಬೆಲೆಯುಳ್ಳುದೆಂಬುದನ್ನು ನೀತಿಕಾರರು ಹೀಗೆ ಹೇಳಿದ್ದಾರೆ.

ಧನಾನಿ ಜೀವಿತಂ ಚೈವ ಪರಾರ್ಥೇ ಪ್ರಾಜ್ಞ ಉತ್ಸೃಜೇತ್|
ತನ್ನಿಮಿತ್ತೇ ವರಂ ತ್ಯಾಗೋ ವಿನಾಶೇ ನಿಯತೇ ಸತಿ ||
ಆತ್ಮಾರ್ಥಂ ಜೀವಲೋಕೇಸ್ಮಿನ್ ಕೋ ನ ಜೀವತಿ ಮಾನವಃ |
ಪರಂ ಪರೋಪಕಾರಾರ್ಥಂ ಯೋ ಜೀವತಿ ಸ ಜೀವತಿ ||

ಶಿಬಿ ಚಕ್ರವರ್ತಿಯು ಪರೋಪಕಾರಕ್ಕಾಗಿ ಜೀವದ ಮೇಲಿನ ಆಶೆಯನ್ನು ಬಿಟ್ಟು ಪಾರಿವಾಳದ ಜೀವವನ್ನು ಕಾಪಾಡುವದಕ್ಕಾಗಿ ಅದರ ತೂಕದಷ್ಟು ತೊಡೆಯ ಮಾಂಸವನ್ನು ಗರುಡನಿಗೆ ಕೊಟ್ಟು ಕೀರ್ತಿದೇಹನಾಗಿದ್ದಾನೆ ಎಂಬ ಇತಿಹಾಸವಿದೆ. ಅಂದಮೇಲೆ ಮಹನೀಯರೇ! ತಾವು ಇನ್ನು ಮೇಲಾದರೂ, ತಮ್ಮ ತಮ್ಮ ಶಕ್ತ್ಯನುಸಾರವಾಗಿ ಪರೋಪಕಾರವನ್ನು ಮಾಡಿ ಪುಣ್ಯಭಾಗಿಗಳಾಗಿ ಬಾಳಬೇಕೆಂದು ಪ್ರಾರ್ಥಿಸುತ್ತೇನೆ

ದುಃಖವಾರ್ತೆ

ನಿಜಾಮ ಇಲಾಖಾ ಹುಮನಾಬಾದ ನಗರದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದ್ದ ಚಿಕ್ಕಪಳ್ಳಿ ಸಿದ್ಧಲಿಂಗಯ್ಯನವರು ವೈಶಾಖ ಶು|| ೧೩ ದಿವಸ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಇವರು ಹುಮನಾಬಾದ ನಗರದಲ್ಲಿ ಬಹಳ ಮುಂದಾಳುಗಳಾಗಿ ಎಲ್ಲ ಮತದವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು ಇವರು ಚಿಕ್ಕ ವಯಸ್ಸಿನವರಾಗಿದ್ದರೂ ಧಾರ್ಮಿಕ, ಸಾಮಾಜಿಕ, ರಾಜಕೀಯ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು ಇವರನ್ನು ಕಂಡರೆ ಮುಸಲ್ಮಾನರೂ ಸಹ ವಿಶೇಷವಾಗಿ ಪ್ರೀತಿಸುತ್ತಿದ್ದರು ಕೆಲಜನ ಮುಸಲ್ಮಾನರು ಇವರ ವಿಮಾನವನ್ನು ಹೊತ್ತರು ಅವರು ಇವರಲ್ಲಿ ಎಷ್ಟು ಪ್ರೇಮವನ್ನಿಟ್ಟಿದ್ದರೆಂಬುದು ಇದರಿಂದಲೇ ಗೊತ್ತಾಗುತ್ತದೆ. ಇವರ ಅಂಗಡಿಯ ಮುಂದೆ ಹೋಗುವವರೆಲ್ಲರೂ ಇಂದಿಗೂ ಕಣ್ಣೀರು ಸುರಿಸುತ್ತಿರುವರು ಈಗ ಅವರ ಮನೆತನದ ಭಾರವೆಲ್ಲವೂ ಅವರ ತಮ್ಮಂದಿರಾದ ಸಿದ್ಧರಾಮಯ್ಯನವರ ಮೇಲೆ ಬಿದ್ದಿರುವುದು. ಶ್ರೀ ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ,

ಓರ್ವ ದುಃಖಭಾಗಿ

ಆಲೂಗಡ್ಡೆಯಲ್ಲಿರುವ ಗುಣವಿಶೇಷಗಳು

1912ನೆಯ ಇಸವಿಗೆ ಮೊದಲು ಆಲೂಗಡ್ಡೆಯ ಪ್ರಯೋಜನಗಳೇನೆಂಬುದನ್ನು ಯಾರೂ ಶಾಸ್ತ್ರೀಯವಾಗಿ ಶೋಧನೆ ಮಾಡಿರಲಿಲ್ಲ ಅದೊಂದನ್ನೇ ಸೇವಿಸಿ ವರ್ಷಾಂತರದವರೆಗೆ ಮನುಷ್ಯರು ಆರೋಗ್ಯವಂತರಾಗಿ ಬಾಳಬಹುದೆಂಬ ಆಲೋಚನೆಯು ಶಾಸ್ತ್ರಜ್ಞರ ಮನಸ್ಸಿಗೆ ಹುಟ್ಟಿಯೇ ಇರಲಾರದು. ಅನೇಕರು ಈ ಅಭಿಪ್ರಾಯವು ಸುಳ್ಳೆಂದೂ ಭಾವಿಸಬಹುದು ಆದರೆ ಅದು ನಿಜವೆಂಬುದರಲ್ಲಿ ಸ್ವಲ್ಪವೂ ಸಂದೇಹಪಡಬೇಕಾದುದಿಲ್ಲ

ಆಲೂಗಡ್ಡೆಯಲ್ಲಿರುವ ಉತ್ತಮವಾದ ಆಹಾರಗುಣವು ಅನುಭವಕ್ಕೆ ಬರಬೇಕಾದರೆ, ಅದನ್ನೇ ಪ್ರತ್ಯೇಕವಾಗಿ ಸೇವಿಸಬೇಕು ಅಥವಾ ಮಾರ್ಗರೈ ಎಂಬ ಪದಾರ್ಥಗಳೊಡನೆ ಸೇವಿಸಬಹುದು ಇತರ ಪದಾರ್ಥಗಳೊಡನೆ ಸೇರಿಸಿ ಆಲೂಗಡ್ಡೆಯನ್ನು ತಿನ್ನುತ್ತಿದ್ದರೆ ಮಾತ್ರ ಅದರಲ್ಲಿರುವ ಉತ್ತಮಗುಣವೇನೂ ತಿಳಿಯಲಾರದು

1914ನೆಯ ಜನವರಿ ತಿಂಗಳಲ್ಲಿ, ನಾನೂ, ನನ್ನ ಸ್ನೇಹಿತರಿಬ್ಬರೂ ಆಲೂಗಡ್ಡೆ ಮತ್ತು ಮಾರ್ಗರೈ ಎಂಬೀ ಎರಡು ಪದಾರ್ಥಗಳನ್ನೇ ಆಹಾರವಾಗಿ ಉಪಯೋಗಿಸಲು ಪ್ರಾರಂಭಿಸಿದೆವು, ನಮ್ಮ ನಿತ್ಯಾಹಾರಕ್ಕೆ ಇವೆರಡು ಪದಾರ್ಥಗಳೇ ಸಾಕೆಂಬ ನಂಬಿಕೆಯು ಮೊದಲು ನಮಗೂ ಇರಲಿಲ್ಲ. ಅವುಗಳನ್ನೇ ಆಹಾರವಾಗಿ ಸೇವಿಸುವುದರಿಂದ ಏನಾಗುವುದೋ ನೋಡಬೇಕೆಂದು ಕುತೂಹಲ ಮಾತ್ರವಿದ್ದಿತು ಆದರೆ, ಹೀಗೆ ಕೆಲವು ಕಾಲವಿದ್ದ ಮೇಲೆ, ಶರೀರದ ಬೆಳವಣಿಗೆಗೆ ಯಾವುದಾದರೂ ಆಹಾರ ಭಾಗವು ಸಾಲದೆ ಹೋಗಿ, ಮಾಂಸವನ್ನಾಗಲಿ, ಮೊಟ್ಟೆಯನ್ನಾಗಲಿ ಸೇವಿಸಬೇಕಾಗುವುದೋ ಎಂದು ಪರೀಕ್ಷಿಸಬೇಕೆಂದೂ ಉದ್ದೇಶವಿದ್ದಿತು ಅವೆರಡು ಪದಾರ್ಥಗಳನ್ನು ಒಂದುವರ್ಷ ಕಾಲ ಸೇವಿಸಿ ನೋಡಿದುದರಲ್ಲಿ, ಯಾವ ಬಾಧಕವೂ ತೋರಲಿಲ್ಲ ಮತ್ತು ಶರೀರದ ಬೆಳವಣಿಗೆಗೆ ಬೇಕಾದ ಆಹಾರಭಾಗಗಳೆಲ್ಲ ಇವುಗಳಿಂದಲೇ ದೊರೆಯುವಂತೆಯೂ ತೋರಿತು.

ಇದಕ್ಕಾಗಿ ನನಗೆ ಕಂಡುಬಂದ ಪ್ರತ್ಯಕ್ಷ ನಿದರ್ಶನವೊಂದನ್ನು ಇಲ್ಲಿ ಕೊಡಬೇಕಾಗಿದೆ. ನನ್ನ ಕೈಕೆಳಗೆ ಕೆಲಸ ಮಾಡುತ್ತಿದ್ದ ಮಾರ್ಡ್‌ಸನೆಂಬವನೊಬ್ಬನು, ಆರು ತಿಂಗಳಕಾಲ ಆಲೂಗಡ್ಡೆ, ಮಾರ್ಗರೈ ಮತ್ತು ನೀರು, ಈ ಮೂರು ಪದಾರ್ಥಗಳನ್ನು ಮಾತ್ರ ಆಹಾರವಾಗಿ ಸೇವಿಸುತ್ತಿದ್ದನು. ಅವನು ವೃತ್ತಿಯಲ್ಲಿ ತೋಟಗಾರನಾದರೂ ಎಂಟು ಘಂಟೆಯಿಂದ ಮೂರು ಘಂಟೆಯವರೆಗೂ ಲೇಬೋರೇಟರಿ (ಶಾಸ್ತ್ರಪರಿಶೋಧನಸ್ಥಳ) ಯಲ್ಲಿ ಉದ್ಯೋಗಮಾಡುತ್ತಿದ್ದನು ಮಳೆಗಾಲದಲ್ಲಿಯೂ, ಬೇಸಿಗೆಯಲ್ಲಿಯೂ ಬೆಳಗ್ಗೆ 3 ಅಥವಾ 4 ಘಂಟೆಗೆ ಎದ್ದು, ತೋಟಗಳಲ್ಲಿ ಕೆಲಸಮಾಡಿ ಬಂದಮೇಲೆ, ನೌಕರಿಗೆ ಹೋಗಿ, ಆ ಮೇಲೆ ಪುನಃ ಮಧ್ಯಾಹ್ನ 3 ರಿಂದ 10 ಗಂಟೆಯವರೆಗೂ ಕೆಲಸಮಾಡುವನು ಸಾಧಾರಣವಾಗಿ ಎರಡಾಳುಗಳ ಕೆಲಸವನ್ನು ಆತನೊಬ್ಬನೇ ಮಾಡುವನು ಸರಾಸರಿ ದಿನವೊಂದಕ್ಕೆ 5 ಪೌಂಡುಗಳಷ್ಟು ಆಲೂಗಡ್ಡೆಯನ್ನೂ 5 ಔನ್ಸ್ ಮಾರ್ಗರೈನನ್ನೂ ಉಪಯೋಗಿಸುತ್ತಿದ್ದನು ನಾನು ಅವನನ್ನು ಆಗಿಗಾಗ್ಗೆ ಸಾಗುವಳಿ ಕೆಲಸಕ್ಕಾಗಿ ಕಳುಹಿಸುತ್ತಿದ್ದೆನು ಆ ಮೂರು ತಿಂಗಳುಗಳಕಾಲ ದಿನಕ್ಕೆ ಕನಿಷ್ಠ ಪಕ್ಷ 14 ಗಂಟೆಗಳು ಕೆಲಸಮಾಡುತ್ತಿದ್ದನು. ಇದಕ್ಕಾಗಿ ಆಹಾರವನ್ನೇನೂ ಬದಲಾಯಿಸಲಿಲ್ಲ ಆದರೆ ಆಲೂಗಡ್ಡೆಯ ಪ್ರಮಾಣವನ್ನು ಮಾತ್ರ 8ಪೌಂಡುಗಳಿಗೂ ಮಾರ್ಗರೈನಿನ ಪ್ರಮಾಣವನ್ನು 8 ಔನ್ಸುಗಳಿಗೂ ಹೆಚ್ಚಿಸಿದನು. ಅವನ ಶಕ್ತಿಸಾಮರ್ಥ್ಯಗಳು ಅಪಾರವಾದವು. ಒಂದಾನೊಂದು ಕಾಲದಲ್ಲಿ ಅವನು ಎರಡೂವರೆ ದಿವಸಗಳು ಪೂರ್ತಿಕೆಲಸಮಾಡಿದನು ಮಧ್ಯದಲ್ಲಿ ಆಲೂಗಡ್ಡೆಯ ಆಹಾರ ತಿನ್ನುವದಕ್ಕಾಗಿ ಒಂದೂವರೆ ಗಂಟೆಗಳಕಾಲ ವಿರಾಮವನ್ನುಮಾತ್ರ ತೆಗೆದುಕೊಳ್ಳುತ್ತಿದ್ದನು

ಹಾಲ್ ಎಂಬ ಸ್ಥಳದ ಪ್ರಖ್ಯಾತಶಾಸ್ತ್ರಜ್ಞರಾದ ಅಬ್ಡರ್‌ಹಾಲ್ಡರ್ ಎಂಬವರೂ ಇದೇ ಆಲೂಗಡ್ಡೆಯ ವಿಚಾರವಾಗಿ ಶೋಧನೆಗಳನ್ನು ಮಾಡಿ ಆಲೂಗಡ್ಡೆಯೊಂದನ್ನೇ ಆಹಾರವಾಗಿ ಸೇವಿಸಿ ಸುಖವಾಗಿ ಬದುಕಬಹುದೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲವೆಂದೂ, ಅದರಲ್ಲಿ ದೇಹಪುಷ್ಟಿಗೆ ಬೇಕಾದ ಸಕಲ ಪದಾರ್ಥಗಳೂ ಇರುವುವೆಂದೂ ಬರೆದಿರುವರು.

ಕೋಲೋನ್ ಎಂಬ ಸ್ಥಳದಲ್ಲಿಯೂ ಆಲೂಗಡ್ಡೆಯೊಂದನ್ನೇ ಆಹಾರವಾಗಿ ಸೇವಿಸುವುದರಿಂದಾಗುವ ಪ್ರಯೋಜನವನ್ನು ಪರಿಶೀಲಿಸಿದ ಇಬ್ಬರು ಶಾಸ್ತ್ರಜ್ಞರು "ಒಂದು ಪೌಂಡು ತೂಕದ ಮಾಂಸದಲ್ಲಿರುವ ಆಹಾರ ಗುಣವೂ, ಅದೇ ತೂಕದ ಆಲೂಗಡ್ಡೆಯಲ್ಲಿರುವ ಆಹಾರ ಗುಣವೂ ಒಂದೇ ಎಂದು ತೋರಬಂದಿದೆ" ಎಂದು ಬರೆದಿರುವರು.

ಆಲೂಗಡ್ಡೆಯಲ್ಲಿ ಆಹಾರಗುಣಮಾತ್ರವಲ್ಲ. ಅದರಲ್ಲಿ ಕೆಲವು ದಿವ್ಯೌಷಧಿಯ ಗುಣಗಳೂ ಉಂಟು

ಇದು ಅತ್ಯುತ್ತಮವಾದ ಆಹಾರವೆಂಬುದರಲ್ಲಿ ಸಂಶಯವಿಲ್ಲ ಇದರಲ್ಲಿ ರೋಗನಿವಾರಕಶಕ್ತಿಯೂ ಇರುವುದು. ಇದರಲ್ಲಿ, ಮೂತ್ರ ದ್ರಾವಕ (Uric acid)ವನ್ನೂ ಸೀಮೆಸುಣ್ಣವನ್ನೂ ಕರಗಿಸುವ ಶಕ್ತಿಯಿರುವುದರಿಂದ, ವಾತ, ಸಂಧಿವಾತ ಮುಂತಾದ ಸಕಲ ರೋಗಗಳಿಗೂ ಇದು ದಿವ್ಯೌಷಧಿಯು ಹೀಗೆ ಅನೇಕರಿಗೆ ಗುಣವಾಗಿರುವುದನ್ನೂ ಪರೀಕ್ಷಿಸಿದೆ. ರೋಗಿಗಳನ್ನು ಬೇರೆ ಪ್ರದೇಶಗಳಿಗೆ ಕಳುಹಿಸುವುದರಿಂದಲೂ, ಆಲೂಗಡ್ಡೆಯನ್ನು ತಿನ್ನುವುದರಿಂದಲೂ ಆಗುವ ಪ್ರಯೋಜನವು ಒಂದೇ ಆದರೂ, ಆಲೂಗಡ್ಡೆಯಲ್ಲಿ ವೆಚ್ಚವು ಕಡಿಮೆಯಾದುದರಿಂದ ಇವೆರಡರಲ್ಲಿ ಇದೇ ಉತ್ತಮವಾದದು

ಆಲೂಗಡ್ಡೆಯೊಂದರಿಂದಲೇ ಜೀವಿಸಿರಬೇಕೆಂಬ ಅಪೇಕ್ಷೆಯಿದ್ದಲ್ಲಿ, ಆಲೂಗಡ್ಡೆಯನ್ನು ಬೇಯಿಸಿ ನೀರನ್ನು ಬಸಿಯದೆ, ಅದನ್ನು ಕುಡಿಯಬೇಕು ಆ ನೀರಿನಲ್ಲಿ ಅನೇಕ ಸಾರವತ್ತಾದ ಪದಾರ್ಥಗಳೂ, ಲವಣಗಳೂ ಇರುವುವು ಈ ನೀರನ್ನು ಕೋಳಿಮರಿಗಳಿಗೆ ಕುಡಿಸಿದರೆ ಅವುಗಳಿಗೆ ವ್ಯಾಧಿ ಬರುವುದಿಲ್ಲ ಆದರೆ ಆ ನೀರನ್ನು ಗರ್ಭಧರಿಸಿದ ಕೋಳಿಗಳಿಗೆ ಕುಡಿಸಿದರೆ ಮಾತ್ರ, ಕೆಲವು ಸಂದರ್ಭಗಳಲ್ಲಿ ಮೊಟ್ಟೆಗಳು ಕರ ಹೋಗಬಹುದು.

ಐರ್ಲೆಂಡ್ ದೇಶದ ಪೋಲೀಸಿನವರ ಅದ್ಭುತ ಶಕ್ತಿ

ಐರ್ಲೆಂಡು ದೇಶವು ಆಲೂಗಡ್ಡೆಯ ಬೆಳೆಗೆ ಬಹ ಪ್ರಖ್ಯಾತಿಗೊಂಡುದೆಂದು ನೀವು ಕೇಳಿರಬಹುದು 1926 ನೆಯ ಇಸವಿಯಲ್ಲಿ ನಾನು ಐರ್ಲೆಂಡಿನ ಪಶ್ಚಿಮ ಭಾಗದಲ್ಲಿ ಪ್ರಯಾಣಮಾಡಿದೆನು. ಅಲ್ಲಿನ ಜನರ ಸಾಮಾನ್ಯವಾಗಿ ಬಹಳ ದಂದ್ರಸ್ಥಿತಿಯಲ್ಲಿದ್ದವರು ಅವರು ಮಧ್ಯಾಹ್ನದ ಊಟಕ್ಕೆ ಬೆಣ್ಣೆ, ಮಾಂ ಗಳೊಂದೂ ಇಲ್ಲದೆ, ಆಲೂಗಡ್ಡೆಯನ್ನು ಮಾತ್ರ ಸೇ ಸುವರು ಅವರ ರಾತ್ರಿಯ ಊಟವೂ ಅದೇ! ಅದ ಪ್ರಾತಃಕಾಲ ಮತ್ತು ಸಂಧ್ಯಾಕಾಲಗಳಲ್ಲಿ ರೊಟ್ಟಿ ಬೆಣ್ಣೆ ಮತ್ತು ಟೀಯನ್ನು ಕುಡಿಯುತ್ತಿದ್ದರು. ಕೆಲ ವೇಳೆ ಮಜ್ಜಿಗೆಯನ್ನು ಕುಡಿಯುವರು ಇದೇ ಅವ ನಿತ್ಯಾಹಾರಪದ್ಧತಿಗಳಾಗಿದ್ದುವು.

1900 ನೆಯ ಇಸವಿಯಲ್ಲಿ ಯೂರೋಪ್‌ಖಂಡ ಮಿಕ್ಕ ಎಲ್ಲಾ ಭಾಗಗಳಿಗಿಂತಲೂ ಐರ್ಲೆಂಡಿನಲ್ಲಿ ಮರ ಸಂಖ್ಯೆಯು ಬಹಳ ಕಡಿಮೆಯಾಗಿದ್ದಿತು. ಡಬ್ಲಿನ್ ನಗ ಕ್ಕಾಗಿ ಬೇಕಾದ ಪೋಲೀಸಿನವರನ್ನು ಆಲೂಗಡ್ಡೆಯ ವಿಶೇಷವಾಗಿ ಬೆಳೆಯುವ ಪ್ರದೇಶಗಳಿಂದಲೇ ಮುಖ್ಯವಾಗಿ ಆರಿಸಿರುವರು. ಡಬ್ಲಿನ್ ನಗರದಲ್ಲಿ ರಾಜಕೀಯ ಶಾಖೆಯ ಮುಖ್ಯಾಧಿಕಾರಿಗಳಾದ ಡಾಕ್ಟರ್ ಕೂಪರ್

ಟವರು, ಸುಮಾರು 97 ಆಸ್ಪತ್ರೆಗಳಲ್ಲಿ ಶೋಧನೆ ಸಿ, ಆಲೂಗಡ್ಡೆಯು ಬೆಳೆಯು ಹೆಚ್ಚಿದಂತೆಲ್ಲಾ ರಣಸಂಖ್ಯೆಯು ತಗ್ಗುವುದೆಂದು ತೀರ್ಮಾನಿಸಿರು ು ಮಿಕ್ಕದೇಶದ ಜನರಿಗಿಂತಲೂ ಐರ್ಲೆಂಡ್ ದೇಶ ರು ಹೆಚ್ಚು ದೇಹದಾರ್ಢ್ಯವುಳ್ಳವರಾದುದರಿಂದ, ರಿ ಅನೇಕ ಕಡೆ ಪೋಲೀಸು ಕೆಲಸಕ್ಕೆ ಅವರನ್ನೇ ಶೇಷವಾಗಿ ನಿಯಮಿಸುವ ಪದ್ಧತಿಯಿದೆ.

ಎಲ್ಲಾ ಆಹಾರಗಳಿಗಿಂತಲೂ ಆಲೂಗಡ್ಡೆಯು ತ್ಯಂತ ಆರೋಗ್ಯಕಾರಿಯಾದುದು, ಮತ್ತು ಸುಲಭ ಯವುಳ್ಳದ್ದು. ಒಂದು ಎಕರೆಯ ಪ್ರದೇಶದಲ್ಲಿ ಬೆಳೆದ ಲೂಗಡ್ಡೆಯಿಂದ ಆಗುವ ದೇಹಪುಷ್ಟಿಯು, ಅದೇ ತ್ತೀರ್ಣದ ಪ್ರದೇಶದಲ್ಲಿ ಬೆಳೆದ ಮತ್ತಾವ ಪದಾರ್ಥ ದಲೂ ಒದಗಲಾರದು. ಆದರೆ ಡೆನ್ಮಾರ್ಕಿನಲ್ಲಿ ಇಷ್ಟು ತ್ತಮ ವಾದ ಆಹಾರವನ್ನು ಹೆಚ್ಚಾಗಿ ಹಂದಿಗಳಿಗೆ ಡುವ ಪದ್ಧತಿ.

ಡೆನ್ಮಾರ್ಕಿಗೆ ನಾನು ಹೋದಮೇಲೆ ನನ್ನ ಪ್ರೋತ್ಸಾ ದಲೇ ಡೆನ್ಮಾರ್ಕಿನ ಜನರು ಹೆಚ್ಚಾಗಿ ಆಲೂಗಡ್ಡೆ ನ್ನು ಸೇವಿಸುವಂತಾಗಿ ಅಲ್ಲಿ ನನ್ನನ್ನು "ಆಲೂ ಡ್ಡೆಯ ವೈದ್ಯ" ನೆಂದು ಕರೆಯುವರು.

"ಗುಡ್ ಹೆಲ್ತ್"

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು.

ಭಸ್ಮಗಳು

ಔಷಧಿ ಹೆಸರು	ತೊಲೆ	ಮೌಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಿಂಧೂರ	೧	೨—೦—೦
ಲ್ಲಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ರಾಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ವಂಗ	೧	೧—೦—೦
ರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ಂಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ಕ್ತಾಭಸ್ಮ	೧	೪೦—೦—೦
ಭ್ರಕಭಸ್ಮ	೧	೩—೦—೦
ತಾಳಭಸ್ಮ	೧	೦—೮—೦
ಚಿನಭಸ್ಮ	೧	೦—೮—೦
ಸ್ಥಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦—೧೨—೦
ಕ್ತಾಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಕ್ತಿಚಿಪ್ಪಿನ ಭಸ್ಮ	೧	೦—೮—೦
ರಂಗದ ಕೋಡಿನ ಭಸ್ಮ	೧	೦—೮—೦
ದಂತಿಹರತಾಲಭಸ್ಮ	೧	೦—೮—೦
ಟ್ರಾರಿ (೧ನೇ ನಂಬರ್)	೧	೫೦—೦—೦
ರಾಜಿತ ಸೂರ್ಯಪುಟಿ	೧	೧—೦—೦
ರಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಸ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು.ಪಿ.

ಸಿದ್ಧಾಂತಶಿಖಾಮಣಿ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ

ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತಮಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿ ನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M. F Printing ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು. ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಸಾರಿಸಾರಿ ಹೇಳಬಹುದಾಗಿದೆ ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣನಾಥನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! **ಬೆಲೆ ೨ ರೂಪಾಯಿ.**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೮ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳನ್ನ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೪—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೮ ಬೆಲೆ	೦—೭—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ಖರೀದಿಸುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೮೪ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಳ್ಳಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ. ೨-೮-೦ ವಿ. ಪಿ. ೮ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[50] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಶಾಸ್ತ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಯವರ ಭಾಷಣಗಳು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅಪೂರ್ವ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩.೨೩ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastrije *English*)	12 As
लिंगधारणचंद्रिका (संस्कृत)	१ रु
वीरशैवरत्न (मराठी)	१ रु
महानारायणोपनिषत् (वीरशैवभाष्य—संस्कृत)	१ रु
पुरुषसूक्तम् (वीरशैवप्राचीनभाष्योपेतम्)	४ आ
[illegible] (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಕದವರಿಗೆ ೧ ರೂ ೧೨ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧ನೇ ಜೂನ್ ೧೯೪೨ [ಸಂಚಿಕೆ ೭

ದ್ರಾವಿಡ ದೇಶದಲ್ಲಿ ಕೀರ್ತಿಶಾಲಿಗಳಾಗಿ ಹೋದ ಶ್ರೀ ಶಿವಪ್ರಕಾಶಸ್ವಾಮಿಗಳವರ ಚರಿತ್ರ

ಸುಮಾರು ೪೨೫ ವರ್ಷಗಳ ಪೂರ್ವದಲ್ಲಿ ಕಾಂಚೀಪುರದಲ್ಲಿ ವಾಸವಾಗಿದ್ದ ವೀರಮಾಹೇಶ್ವರರೂ, ಲಿಂಗನಿಷ್ಠಾಪರರೂ ನಂದಿಗೋತ್ರ ಸಂಜಾತರೂ ಆದ ಕುಮಾರಸ್ವಾಮಿ ಅಯ್ಯರ್ ಎಂಬವರಿಗೆ ಪರಮೇಶ್ವರನ ಅನುಗ್ರಹದಿಂದ ಶಿವಪ್ರಕಾಶಸ್ವಾಮಿ, ವೇದಯ್ಯಸ್ವಾಮಿ, ಕರುಣಾಸ್ವಾಮಿ ಎಂಬ ಮೂವರು ಪುತ್ರರು ಜನಿಸಿದರು. ಇವರು ವಿದ್ಯಾಭ್ಯಾಸ ಮಾಡುವ ಕಾಲದಲ್ಲಿ ತಂದೆಯವರು ಪರಮಪದವನ್ನೈದಿದರು. ತರುವಾಯ ಶಿವಪ್ರಕಾಶಸ್ವಾಮಿಗಳವರು ತಮ್ಮ ಸಹೋದರರೊಂದಿಗೆ ತಿರುವಣ್ಣಾಮಲೆಗೆ ಹೋಗಿ ಗುರುದೇವರ ದರ್ಶನವನ್ನು ಪಡೆದು ಶೋಣಶೈಲಮಾಲಾ ಸ್ತೋತ್ರವನ್ನು ಮಾಡಿ ಆ ಸ್ಥಳವನ್ನು ಬಿಟ್ಟು ವಾಲಿಗಂಡಪುರಕ್ಕೆ ಸಮೀಪದಲ್ಲಿರುವ ವೃದ್ಧಮಂಗಲಂ ಎಂಬಲ್ಲಿ ಅಣ್ಣಾಮಲೆ ರೆಡ್ಡಿಯಾರ್ ಕಟ್ಟಿಸಿದ ಮಠದಲ್ಲಿ 3 ವರ್ಷಗಳ ಕಾಲವಿದ್ದು ತಾಮ್ರಪರ್ಣೀ ನದಿಯ ದಡದಲ್ಲಿರುವ ಸಿಂಧುಪೂಂದುರೈವಳ್ಳಿ ಎಂಬಲ್ಲಿ ತುಂಬಲಾನ್ನೈಯ್ಯನವರನ್ನು ನೋಡಿ, ದ್ರಾವಿಡ ವ್ಯಾಕರಣವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ಬಂದೆನೆಂದು ಹೇಳಲು, ಅಗ್ಗೆ ಅವರು ಪದವಾಕ್ಯಗಳನ್ನು ಪರೀಕ್ಷಿಸುವಲ್ಲಿ ಸ್ವಾಮಿಯವರು " ಕುಡಕ್ ಕೋಡು " ಎಂಬ ಶ್ಲೋಕವನ್ನು ಹೇಳಿದ್ದನ್ನು ಕಂಡು ಬಹಳ ಸಂತೋಷಪಟ್ಟು, ಅವರ ಸಹೋದರರಿಗೆ 5 ವ್ಯಾಕರಣ ಸೂತ್ರಗಳನ್ನು ಉಪದೇಶಿಸಿದರು. ತರುವಾಯ ಸ್ವಾಮಿಯವರು ತಿರಚ್ಚೆಂದೂರಿಗೆ ಹೋಗಿ ಸುಬ್ರಹ್ಮಣ್ಯಸ್ವಾಮಿಯ ದರ್ಶನವನ್ನು ತೆಗೆದುಕೊಂಡು ತುಂಬಲಾನ್ನೈಯ್ಯನವರನ್ನು ದೂಷಿಸುತ್ತಿರುವ ದ್ರಾವಿಡ ವಿದ್ವಾಂಸನನ್ನು ಜಯಿಸಿದರು. ಆ ವಿದ್ವಾಂಸನನ್ನು ತುಂಬಲಾನ್ನೈಯ್ಯನವರ ಸೇವಾವೃತ್ತಿಗೆ ನೇಮಿಸಿ ಮುಂದೆ ಅನೇಕ ಕ್ಷೇತ್ರಗಳನ್ನು ಪ್ರವೇಶಿಸಿ ತಂಗನೂರ್ ಎಂಬಲ್ಲಿಗೆ ಬಂದರು.

ಆ ಸ್ಥಳದಲ್ಲಿರುವ ಪರಮೇಶ್ವರನನ್ನು ಕುರಿತು 4 ಪ್ರಬಂಧಗಳನ್ನು ರಚಿಸಿದರು, ಒಂದು ದಿನ ವೆಂಗನೂರ್ ಅರಸರಾದ ಅಣ್ಣಾಮಲೆರೆಡ್ಡಿಯವರು ವಿವಾಹಮಾಡಿಕೊಳ್ಳಬೇಕೆಂದು ಸ್ವಾಮಿಯವರನ್ನು ಪ್ರಾರ್ಥಿಸಲು, ಅದನ್ನು ಅವರು ನಿರಾಕರಿಸಿ ತಮ್ಮ ಸಹೋದರರಿಗೆ ವಿವಾಹವನ್ನು ಮಾಡಿ ತಾವು ಚಿದಂಬರಕ್ಕೆ ಪ್ರಯಾಣಮಾಡಿದರು ಸ್ವಾಮಿಯವರು ಚಿದಂಬರದಲ್ಲಿ ಕೆಲವು ದಿನಗಳಿದ್ದು ಅಲ್ಲಿ ಮಠವನ್ನು ಕಟ್ಟಿಸಿ, ತರ್ಕಪರಿಭಾಷಾ, ಶಿವಪ್ರಕಾಶದ್ವಿಶತಂ, ಶತಮಣಿಮಾಲಾ, ಚತುರ್ಮಣಿಮಾಲಾ ಮೊದಲಾದ ಪ್ರಬಂಧಗಳನ್ನು ರಚಿಸಿದರು ಪುತ್ತುಪೇಟೆ ಎಂಬ ಗ್ರಾಮದಲ್ಲಿರುವ ದೇವಾಲಯದಲ್ಲಿ ರಾತ್ರಿ ನಿದ್ರಿಸುವ ಕಾಲದಲ್ಲಿ ಶಿವಪ್ರಕಾಶಸ್ವಾಮಿಯವರ ಸ್ವಪ್ನದಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿಯು ಪ್ರಸನ್ನನಾಗಿ ಒಂದು ಕಮಲ ಬಿಡಿ ಹೂಗಳನ್ನು ಒಂದು ಮಾಲೆಯಾಗಿ ಮಾಡಿ ಬಾಲಸಿದ್ಧರಿಗೆ ಮಾಲೆ ಹಾಕಬೇಕೆಂದು ಹೇಳಿ ಅದೃಶ್ಯನಾದನು ಶಿವಪ್ರಕಾಶಸ್ವಾಮಿಯವರು ತಾವು ಕಂಡ ಸ್ವಪ್ನವನ್ನು ತಮ್ಮ ಸಂಗಡವಿದ್ದ ಶಾಂತಲಿಂಗಸ್ವಾಮಿಯವರಿಗೆ ತಿಳಿಹಿಸಲು ಅದಕ್ಕೆ ಅವರು ಸ್ವಾಮಿಯವರೆ ? ಶ್ಲೋಕ ಮಾಲೆಯನ್ನು ಹಾಕಬಾರದೇ ? ಎಂದು ಹೇಳಿದಕಾರಣ ಶಿವಪ್ರಕಾಶಸ್ವಾಮಿಯವರು ಶಿವಜ್ಞಾನಸ್ವಾಮಿಯವರ ಮೇಲೆ ಸ್ತೋತ್ರಮಾಲೆಯನ್ನು ರಚಿಸಿದರು. ಬೊಂಮಯಪುರಿ ತಿರುಮಠಕ್ಕೆ ಬಂದು ಜ್ಞಾನಗುರುದೇವರನ್ನು ದರ್ಶನಮಾಡಿ ಆನಂದಪರವಶರಾಗಿದ್ದರು ಅನಂತರ ಕಾಂಚೀಪುರಕ್ಕೆ ಬಂದು ದ್ರಾವಿಡ ಭಾಷೆಯಲ್ಲಿ ವೇದಾಂತ ಚೂಡಾಮಣಿ ಸಿದ್ಧಾಂತಶಿಖಾಮಣಿ ಮೊದಲಾದ ಉದ್ಗ್ರಂಥಗಳನ್ನು ರಚಿಸಿ ಜ್ಞಾನಗುರುವನ್ನು ನೋಡಿ ವೃದ್ಧಾಚಲಕ್ಕೆ ಬಂದು ಸ್ವಾಮಿಯವರ ತಿರುಮಠದಲ್ಲಿ ವಾಸಮಾಡಿದರು

ಅಲ್ಲಿ ಅನೇಕ ಸ್ತೋತ್ರಗ್ರಂಥಗಳನ್ನು ವೃದ್ಧಾಚಲೇಶ್ವರನ ಮೇಲೆಯೂ ಪಾರ್ವತಿಯ ಮೇಲೆಯೂ ಮಾಡಿದರು ಶಿವಜ್ಞಾನಪಾಲೇಶ್ವರ ಸ್ವಾಮಿಯವರ ಅನುಮತಿಯನ್ನು ಪಡೆದು ಶಿವಪ್ರಕಾಶಸ್ವಾಮಿಯವರು ತಿರುವಕ್ಕರೈಸ್ಥಳಕ್ಕೆ ಉತ್ತರಭಾಗದಲ್ಲಿರುವ ಮಯೂರಾಚಲಕ್ಷೇತ್ರಕ್ಕೆ ಹೋಗಿ ಸುಬ್ರಹ್ಮಣ್ಯಸ್ವಾಮಿಯ ದರ್ಶನ ತೆಗೆದುಕೊಂಡು ನಲ್ಲಾತ್ತೂರ್ ತಿರುಮಠಕ್ಕೆ ಹೋಗಿದ್ದು ಶಿವನಾಮಮಹಿಮೆ, ಅಭಿಷೇಕಮಾಲಾ, ಕರತಲಮಾಲಾ, ಇಷ್ಟಲಿಂಗಸ್ತೋತ್ರ, ನಲ್ಲಾತ್ತೂರ್ ತಿರುಮಠದ ವಂಶಾವಳಿ ಮೊದಲಾದ ಗ್ರಂಥಗಳನ್ನು ಮಾಡಿ, ಅಲ್ಲಿಯೇ ವಾಸಮಾಡಿಕೊಂಡಿದ್ದರು. ತಮ್ಮ ಸಹೋದರರಾದ ಕರುಣಯ್ಯ, ಪ್ರಕಾಶಸ್ವಾಮಿಯವರು ತಿರುವೆಂಗನೂರ್ ಮಠದಲ್ಲಿದ್ದುಕೊಂಡು ಶ್ರೀಕಾಳಹಸ್ತಿಪುರಾಣವನ್ನು ಬರೆದು 18 ನೆಯ ವರ್ಷದಲ್ಲಿ ಪರಮಪದವನ್ನು ಹೊಂದಿದರು ಅನಂತರ ಪ್ರಸಿದ್ಧರಾದ ಶಿವಪ್ರಕಾಶಸ್ವಾಮಿಯವರು ತಮ್ಮ 32 ನೆಯ ವರ್ಷದ ಭಾದ್ರಪದ ಪೌರ್ಣಮಿ ಪೂರ್ವಾಷಾಢ ನಕ್ಷತ್ರದಲ್ಲಿ ಪರಂಧಾಮವನ್ನೈದಿದರು. ವೇಲಯ್ಯಸ್ವಾಮಿಯವರು ದ್ರಾವಿಡ ಭಾಷೆಯಲ್ಲಿ ವೀರಸಿಂಹಾಸನಪುರಾಣ ಮುಂತಾದ ಅನೇಕ ಗ್ರಂಥಗಳನ್ನು ರಚಿಸಿ ನಲ್ಲಾತ್ತೂರ್ ಅಮೃತಪಾಣಯ್ಯರಲ್ಲಿ ಸಮರ್ಪಣೆಮಾಡಿ ಒಳ್ಳೆಪಾಡಿ ಪೆರುಮುತ್ತೂರ್‌ನಲ್ಲಿ 22ನೆಯ ವರ್ಷದಲ್ಲಿ ಐಕ್ಯರಾದರು ಅನಂತರ ಅಮೃತಪಾಣಯ್ಯರು ಅನೇಕ ವೈಭವಗಳೊಂದೊಡಗೂಡಿ ತರ್ಕಾದಿಶಾಸ್ತ್ರಗಳಲ್ಲಿ ಜಯವನ್ನು ಹೊಂದಿ ಶ್ರೀರೇಣುಕಗೀತಾ ಶಕ್ತಿವಿಶಿಷ್ಟಾದ್ವೈತಸಿದ್ಧಾಂತ, ಪರಮರಹಸ್ಯಾರ್ಥಮಾಲಾ ದೀಪಿಕಾ ಮುಂತಾದ ಗ್ರಂಥಗಳನ್ನು ಮಾಡಿದರು ಕಾಶೀ, ಶ್ರೀಶೈಲ, ಕೇದಾರ ಮೊದಲಾದ ಪುಣ್ಯಕ್ಷೇತ್ರಗಳಿಗೆ ಹೋಗಿ ಅನೇಕ ಮಹಿಮೆಗಳನ್ನು ಮಾಡಿ ತಮ್ಮ ಗೋತ್ರಾಚಾರ್ಯರಾದ ಬಾಳೆಹಳ್ಳಿ ಶ್ರೀರೇಣುಕಶಿವಾಚಾರ್ಯರ ಪೀಠಕ್ಕೆ ಹೋಗಿ ಗ್ರಂಥಗಳನ್ನು ಅವರಿಗೆ ಸಮರ್ಪಣಮಾಡಿ ಅಲ್ಲೇ ಇದ್ದು ಚೈತ್ರ ಶು|| ೧೫ ದಿವಸ ಶಿವಲೋಕವನ್ನೈದಿದರು

ಸ್ವಾಮಿಭಕ್ತ.

ಸ್ವೀಕಾರ.

ಹುಬ್ಬಳ್ಳಿ ನಗರದಲ್ಲಿರುವ ದೇವನೂರು ಹಿರೇಮಠದ ವೇ|| ಫಕೀರಯ್ಯನವರ ಪುತ್ರ ಚಿ|| ಸೋಮಶೇಖರಯ್ಯ ಬಿ ಎ , ಇವರಿಗೆ ಸದಾಶಿವಪೇಟೆ ಮಠದ ವೇ|| ಶಿವರುದ್ರಯ್ಯನವರ ಪುತ್ರಿ ಚಿ|| ಸೌ|| ಪಾರ್ವತೀದೇವಿಯನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯವರು ಸಮರ್ಪಿಸಿದ 5 ರೂಪಾಯಿ, ವಧುವಿನ ಕಡೆಯವರು ಸಮರ್ಪಿಸಿದ 5 ರೂಪಾಯಿ, ಒಟ್ಟು 10 ರೂಪಾಯಿಗಳು ವೇ|| ಹುಬ್ಬಳ್ಳಿ ನಂದಿಕೇಶ್ವರ ಮಠದ ವಿರೂಪಾಕ್ಷಯ್ಯನವರ ದ್ವಾರಾ ತಲ್ಪಿರುತ್ತವೆ

ಬೆಳಗಾಂವ ಜಿ|| ಸತ್ತಿಗೇರಿ ಗ್ರಾಮದ ಚಿ|| ಬಸವನಗೌಡ ಪರ್ವತಗೌಡ ಪೋಲೀಸ್ ಪಾಟೀಲ್ ಇವರಿಗೆ ರಾವ್‌ಸಾಹೇಬ್ ಎಲ್ಲನಗೌಡರ ಪುತ್ರಿ ಚಿ|| ಸೌ|| ಅಕ್ಕಾಬಾಯಿಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶ್ರೀ|| ಷ|| ಬ್ರ|| ಸತ್ತಿಗೇರಿ ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ ಕಾಗತಿಗ್ರಾಮದ ಹಿರೇಮಠದ ವೇ|| ಶಂಕರಯ್ಯನವರ ವಿವಾಹಮಹೋತ್ಸವಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಶ್ರೀ|| ಷ|| ಬ್ರ|| ಗುರುವರ್ಯಶಿವಾಚಾರ್ಯರು ಸುತ್ತಗಟ್ಟಿ ಇವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಬ್ರಿಟನ್ನಿನಲ್ಲಿ ಭಾರಿ ವಿಮಾನ ನಿಲ್ದಾಣ

ಬ್ರಿಟನ್ನಿನಲ್ಲಿರುವ ವಿಮಾನ ನಿಲ್ದಾಣಗಳೆಲ್ಲೆಲ್ಲಾ ಅತ್ಯಂತ ಭಾರಿಯಾದ ವಿಮಾನ ನಿಲ್ದಾಣವೊಂದನ್ನು ಕಟ್ಟಲು ಕೆಲಸಗಾರರು ಹಗಲಿರುಳೂ ದುಡಿಯುತ್ತಿದ್ದಾರೆಂದು ಪ್ರಕಟವಾಗಿದೆ.

ಜಪಾನಿನ ಮಹಾಪ್ರಧಾನರಿಗೆ ಉತ್ತರ

ಆಸ್ಟ್ರೇಲಿಯಾದ ಪ್ರಧಾನ ಸಚಿವರಾದ ಮಿ|| ಕರ್ಟಿನ್‌ರವರು ಮೊನ್ನೆ ಜಪಾನಿನ ಪ್ರಧಾನ ಸಚಿವರಾದ ಜ|| ಟೋಜೋರವರು ಆಸ್ಟ್ರೇಲಿಯಕ್ಕೆ ಕೊಟ್ಟ ಎಚ್ಚರಿಕೆಗೆ ಪ್ರತ್ಯುತ್ತರವನ್ನಿತ್ತಿದ್ದಾರೆ. ಜ|| ಟೋಜೋರವರೇ ಪೆಸಿಫಿಕ್ ಸಾಗರದ ಯುದ್ಧವನ್ನು ಪುನರ್ವಿಮರ್ಶಿಸಬೇಕೆಂದೂ, ಮುಂದೆ ಉಗ್ರ ಕದನವಿನ್ನೂ ನಡೆಯಬೇಕಾಗಿದೆಯೆಂದೂ, ಈ ಯುದ್ಧವನ್ನು ಪ್ರಾರಂಭಿದವರೇ ಜಪಾನರಾದ್ದರಿಂದ ಅದರ ಫಲಿತಾಂಶವನ್ನು ನೋಡಿ ಅವರೇ ದುಃಖಿಸಬೇಕಾಗುವದೆಂದೂ ಹೇಳಿದಾರೆ

ಶ್ರೀಕೇದಾರನಾಥಕ್ಷೇತ್ರ ಮತ್ತು ಉಷಾಮಠ.

ಲೇಖಕರು —ವಜೀರ್ ಪಂಡಿತ ಹರಿಕೃಷ್ಣಜಿ ಸಾಹೇಬ್
ಒಹದ್ದಾರ್ ಟಿಹರಿ ಡಿ॥ ಗಢವಾಲ.

ಭರತಖಂಡದಲ್ಲಿ ಸುಪ್ರಸಿದ್ಧಗಳಾದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಶ್ರೀಕೇದಾರನಾಥಲಿಂಗವು ಒಂದಾಗಿರುವುದು ಲೋಕಪ್ರಸಿದ್ಧವಷ್ಟೆ! ಈ ಕೇದಾರಕ್ಷೇತ್ರದ ವಿಷಯವು ವಾಯುಪುರಾಣ, ಕೇದಾರಕಲ್ಪ, ಕೇದಾರಖಂಡಾದಿಗ್ರಂಥಗಳಲ್ಲಿ ವಿಶೇಷರೀತಿಯಿಂದ ವರ್ಣಿಸಲ್ಪಟ್ಟಿರುವುದು ಆದಾಗ್ಯೂ ವಾಚಕರ ಅವಗಾಹನಕ್ಕಾಗಿ ಇಲ್ಲಿ ಸಂಕ್ಷೇಪರೀತಿಯಾಗಿ ವಿವರಿಸುವೆನು. ಕೇದಾರಕ್ಷೇತ್ರವು ಬ್ರಿಟಿಷ್ ಗಢವಾಲ್ ಜಿಲ್ಲೆಗೆ ಸೇರಿದ ಹಿಮಾಲಯ ಪರ್ವತದಲ್ಲಿ ಪ್ರಕಾಶಿಸುತ್ತಿರುವದು. ಇದು ಸಮುದ್ರತೀರಕ್ಕಿಂತ 11750 ಅಡಿ ಎತ್ತರವಿರುವದು ಶ್ರೀಕೇದಾರನಾಥ ದೇವಾಲಯದ ಮೂರು ದಿಕ್ಕುಗಳಲ್ಲಿ ಅತ್ಯಂತ ಸುಂದರಗಳಾದ ಮಹಾ ಮಹಾ ಹಿಮಪರ್ವತಗಳು ಕೋಟೆಯ ಗೋಡೆಗಳಂತೆ ಸುತ್ತುಗಟ್ಟಿದ್ದು ನೋಡುವವರ ಮನಸ್ಸನ್ನು ಆಕರ್ಷಿಸುತ್ತಿರುವವು. ಈ ಪರ್ವತಗಳು ಗಂಜಿಮಾಡಿದ ಶ್ವೇತವಸ್ತ್ರಕ್ಕಿಂತಲೂ ಮಿಗಿಲಾದ ಶ್ವೇತವರ್ಣವುಳ್ಳವುಗಳಾದುದರಿಂದ ಇವುಗಳ ಸೊಬಗು ಬ್ರಹ್ಮನಿಂದಲೂ ಸಹ ವರ್ಣಿಸಲಶಕ್ಯವಾಗಿದೆಯೆಂದರೆ ಅತಿಶಯೋಕ್ತಿಯಾಗಲಾಗಲಾರದು. ದೇವಾಲಯದ ನಾಲ್ಕುದಿಕ್ಕುಗಳಲ್ಲಿಯೂ ಚಿಕ್ಕ ಚಿಕ್ಕ ನದಿಗಳು ಉಗಮವಾಗಿ ಆ ಯಾವತ್ತೂ ನದಿಗಳು ದೇವಾಲಯದ ಮುಂಭಾಗದಲ್ಲಿಯೇ ಸಂಗಮವಾಗಿರುವವು. ಈ ದೇವಾಲಯವು ಅತ್ಯುನ್ನತವಾಗಿಯೂ, ಅತಿ ಮನೋಹರವಾಗಿಯೂ ಸುವರ್ಣಕಲಶಯುಕ್ತವಾಗಿಯೂ ಇದ್ದು ಸಮತಲಭೂಮಿಯಲ್ಲಿ ಪ್ರಕಾಶಿಸುತ್ತಿರುವುದು ವಾಯುಪುರಾಣದಲ್ಲಿ ಈ ದೇವಾಲಯದ ವಿಷಯವು ಮುಂದೆ ಬರೆದಂತೆ ವರ್ಣಿಸಲ್ಪಟ್ಟಿರುವದು—

ಯಾವಕಾಲದಲ್ಲಿ ಪರಮಾತ್ಮನು ಮಾನವಸೃಷ್ಟಿಯನ್ನು ರಚಿಸಿದನೋ ಅದೇ ಸಮಯದಲ್ಲಿ ನರನಾರಾಯಣನನ್ನು ಅದರ ರಕ್ಷಣೆಗಾಗಿ ನಿಯಮಿಸಿದನು ಅವನು ಜಗತ್ತಿನ ಕಲ್ಯಾಣಕ್ಕಾಗಿ ಗಂಧಮಾದನಪರ್ವತದಲ್ಲಿ ಉಗ್ರವಾದ ತಪಸ್ಸನ್ನು ಮಾಡಿ ಭಗವಂತನಾದ ಆಶುತೋಷನನ್ನು ಪ್ರಸನ್ನಮಾಡಿಕೊಂಡನು. ಆಗ್ಗೆ ಶಿವನು ಪ್ರಸನ್ನನಾಗಿ ಆ ನರನಾರಾಯಣನಿಗೆ ದರ್ಶನವನ್ನು ಕೊಟ್ಟು ನಿನ್ನಿಷ್ಟವೇನೆಂದು ಪ್ರಶ್ನೆಮಾಡಲು ನರನಾರಾಯಣನು ಭಯಭಕ್ತಿಯುತನಾಗಿ ಮಹಾಪ್ರಭೋ, ನಾನು ಜಗತ್ತಿನ ಕಲ್ಯಾಣಕ್ಕಾಗಿ ಸದಾ ನಿನ್ನನ್ನು ಸ್ಮರಿಸುತ್ತೇನೆ. ಆದುದರಿಂದ ನೀನು ಯಾವಾಗಲೂ ಈ ಪರ್ವತದಲ್ಲಿ ನಿತ್ಯವಾಸವಾಗಿರಬೇಕು. ಸಾಂಸಾರಿಕಜನರು ನಿನ್ನ ದರ್ಶನವಮಾಡಿಕೊಂಡು ಪವಿತ್ರರಾಗುವರೆಂದು ಪ್ರಾರ್ಥಿಸಿಕೊಂಡ ಮೇರೆಗೆ ಭಗವಾನ್ ಭೋಲಾನಾಥನು ಆ ನರನಾರಾಯಣನ ಪ್ರಾರ್ಥನೆಯನ್ನು ಅಂಗೀಕರಿಸಿ ಅಲ್ಲಿಯೇ ವಾಸಮಾಡಲಭಿವಚನವನ್ನಿತ್ತನು. ಅಂದಿನಿಂದ ಈ ಸ್ಥಾನಕ್ಕೆ ಕೇದಾರಕ್ಷೇತ್ರವೆಂಬ ನಾಮವು ಬಂದಿತು. ಮಹಾಭಾರತದಲ್ಲಿ ಪಾಂಡವರು ತಮ್ಮ ರಾಜ್ಯವನ್ನು ಬಿಟ್ಟು ಯಾವ ಸಮಯದಲ್ಲಿ ಕೇದಾರನಾಥನ ದರ್ಶನಕ್ಕೆ ಹೋಗಿದ್ದರೋ ಆ ಸಮಯದಲ್ಲಿ ಪಾಂಡವರಿಗೆ ಗೋತ್ರಹತ್ಯಾದಿ ದೋಷಗಳು ಸಂಭವಿಸಿದ್ದರಿಂದ ಶ್ರೀಕೇದಾರನಾಥನು ಅವರಿಗೆ ತನ್ನ ಪೂರ್ಣವಾದ ದರ್ಶನವನ್ನು ಕೊಡದೆ ಭೂಮಿಯಲ್ಲಿ ಗುಪ್ತವಾಗಿ ಕೇವಲ ದೇಹದ ಹಿಂಭಾಗದ ದರ್ಶನವನ್ನು ಮಾತ್ರ ಕೊಟ್ಟನು. ಇದರಿಂದಲೇ ಪಾಂಡವರು ತಮಗೆ ಪ್ರಾಪ್ತವಾದ ದೋಷಗಳಿಂದ ಮುಕ್ತರಾಗಿ ಮುಕ್ತಿಯನ್ನು ಹೊಂದಿದರೆಂದು ಉಲ್ಲೇಖಿಸಲ್ಪಟ್ಟಿರುವುದು. ಈ ಕ್ಷೇತ್ರದಿಂದ 9 ಮೈಲು ಕೆಳಭಾಗದಲ್ಲಿ ಗೌರೀಕ್ಷೇತ್ರವಿರುವುದು. ಅಲ್ಲಿ ಬಿಸಿನೀರಿನದೊಂದು ಕುಂಡವಿರುವದು. ಯಾತ್ರಾರ್ಥಿಗಳು ಇಲ್ಲಿ ಸ್ನಾನವನ್ನು ಮಾಡುವರು. ಶ್ರೀಕೇದಾರಕ್ಷೇತ್ರದಲ್ಲಿ ಕಪಿಲಾಭ್ರಕ, ಶ್ವೇತಾಭ್ರಕ, ಲೋಹಸಾರ, ಹರತಾಳ, ಗಂಧಕ, ಶಿಲಾಜಿತ ಮೊದಲಾದ ಪದಾರ್ಥಗಳೂ ಹಾಗೂ ನಾನಾತರದ ವನಸ್ಪತಿಗಳೂ ಹೇರಳವಾಗಿ ದೊರೆಯುವವು. ಗೌರೀಕ್ಷೇತ್ರದಿಂದ 18 ಮೈಲು ದೂರದಲ್ಲಿ ಉಷಾಮಠವಿರುವದು. ಈ ಉಷಾಮಠದಲ್ಲಿಯೇ ವೀರಶೈವಮತಸ್ಥಾಪನಾಚಾರ್ಯರಾದ ಶ್ರೀಜಗದ್ಗುರು ಏಕೋರಾಮ ಶಿವಾಚಾರ್ಯರ ಧರ್ಮಪೀಠವಿರುವುದು. ಈ ಮಠವು ಮಂದಾಕಿನೀನದಿಯ ದಂಡೆಯಮೇಲೆ 5 ಅಂತಸ್ತುಗಳಿಂದ ಅತ್ಯಂತ ಮನೋಹರವಾಗಿ ಕಟ್ಟಲ್ಪಟ್ಟಿರುವುದು. ಈ ಸ್ಥಳದಲ್ಲಿ ಉತ್ತರಭಾರತ ಸಮ್ರಾಟ್ ಬಾಣಾಸುರನ ಪುತ್ರಿಯಾದ ಉಷಾದೇವಿಯು ವಿದ್ಯಾಭ್ಯಾಸಮಾಡಿದಳು ಈ ಸ್ಥಳದಲ್ಲಿಯೇ ಚಿತ್ರರೇಖಾ ಮತ್ತು ಅನಿರುದ್ಧರ ಪರಸ್ಪರ ಭೆಟ್ಟಿಯಾಗಿತ್ತು ಇಲ್ಲಿ ಮಾಂಧಾತೃ ಮಹಾರಾಜನ ಹಾಗೂ ಪಾರ್ವತೀ ಪರಮೇಶ್ವರ ಮೊದಲಾದ ದೇವತೆಗಳ ಮೂರ್ತಿಗಳಿರುವವು ಅಲ್ಲದೆ ಆ ಸ್ಥಳದಲ್ಲಿ ಅಸ್ಪತ್ರೆ, ಪೋಲೀಸು ಠಾಣಾ, ಪೋಸ್ಟಾಫೀಸು ಮೊದಲಾದುವುಗಳಿರುವವು. ಕೇದಾರನಾಥ, ಮಧ್ಯಮಹೇಶ್ವರ, ಗುಪ್ತಕಾಶೀ ಮೊದಲಾದ ದೇವಸ್ಥಾನಗಳ ಪೂಜಾರಿಗಳು ಸದಾ ಇಲ್ಲಿಯೇ ವಾಸಮಾಡುವರು. ಶ್ರೀಕೇದಾರನಾಥನ ದೇವಾಲಯದ ದ್ವಾರವು ಮೇ ತಿಂಗಳಲ್ಲಿ ತೆರೆಯಲ್ಪಟ್ಟು ನವಂಬರ್ ತಿಂಗಳಲ್ಲಿ ಮುಚ್ಚಲ್ಪಡುವದು. ಶ್ರೀ ಕೇದಾರನಾಥನ ಪೂಜೆಯನ್ನು ವೀರಶೈವಮತದ ಜಂಗಮರು ಮಾಡುವರು. ಬದರೀನಾಥನ ಪೂಜೆಯಂತೆ ಶ್ರೀಕೇದಾರನಾಥನ ಪೂಜೆಯು ಇರುವದಿಲ್ಲ. ಇದು ಶಿವಕ್ಷೇತ್ರವಾದುದರಿಂದ ಪ್ರತಿಯೊಬ್ಬ ಸ್ತ್ರೀಪುರುಷರು ಬಹುಭಕ್ತಿಯಿಂದ ಶ್ರೀಕೇದಾರನಾಥನ ಪೂಜೆಯನ್ನು ಸ್ವಹಸ್ತದಿಂದಲೇ ಮಾಡುವರು. ಕೇದಾರನಾಥಕ್ಷೇತ್ರಕ್ಕೆ ಮಧ್ಯಮೇಶ್ವರ, ತುಂಗನಾಥ, ಮಾರ್ಕಟೇಶ್ವರ, ಕಾಲೀಕ್ಷೇತ್ರ, ಗುಪ್ತಕಾಶೀ, ಮಹಿಷಮರ್ದಿನಿ, ದುರ್ಗಾ, ಶಾಕಂಬರಿ, ತ್ರಿಯುಗಿ, ಲಲಿತಾದೇವಿ, ಮಹಾಕಾಶಿ ಮೊದಲಾದ ಇಪ್ಪತ್ತೆಂಡು ಕ್ಷೇತ್ರಗಳು ಅಂಗಭೂತಗಳಾಗಿರುವವು ಈ ಯಾವತ್ತು ಕ್ಷೇತ್ರಗಳ ಸರ್ವವ್ಯವಸ್ಥೆಯು ಉಷಾಪುರದ ಶ್ರೀ ಸ್ವಾಮಿಗಳಿಂದಲೇ ನಡೆಸಲ್ಪಡುವದು ಇದಕ್ಕಾಗಿ ಅನೇಕಜನ ಪ್ರಾಚೀನ ಮಹಾರಾಜಾಧಿರಾಜರು ಅನೇಕ ಗ್ರಾಮಗಳನ್ನು ಜಹಗೀರು ಹಾಕಿಕೊಟ್ಟಿರುವರು. ಇವುಗಳಬಗ್ಗೆ ಅನೇಕ ಪ್ರಾಚೀನಶಿಲಾಶಾಸನಗಳೂ, ಹಾಗೂ ತಾಮ್ರಶಾಸನಗಳೂ ಮಠದಲ್ಲಿ ಕಂಗೊಳಿಸುವುವು. ಈ ಶಾಸನಗಳು ಅತ್ಯಂತ ಪ್ರಾಚೀನಗಳಾದುದರಿಂದ ಅಕ್ಷರಗಳು ಕೆಲಕೆಲವು ಭಾಗಗಳಲ್ಲಿ ಸವೆದುಹೋಗಿರುವವು. ಬದರೀನಾಥ ಕ್ಷೇತ್ರದ ಅಧಿಕಾರಿಗಳು ಸ್ವತಃ ನಾರಾಯಣನ ಪೂಜೆಯನ್ನು ಮಾಡುವಂತೆ ಕೇದಾರನಾಥಕ್ಷೇತ್ರದ ಅಧಿಕಾರಿಗಳು ಶ್ರೀಕೇದಾರನಾಥನ ಪೂಜೆಯನ್ನು ಮಾಡುವುದಿಲ್ಲ. ಆದರೆ ಇವರ ಶಿಷ್ಯರು ಮಾತ್ರ ಮಾಡುವರು ಶ್ರೀಕೇದಾರನಾಥನ ಪೂಜೆಯನ್ನು ಆರು ತಿಂಗಳುಗಳವರೆಗೆ ಮಾನವರು ಮಾಡುವರೆಂದೂ ಉಳಿದ ಆರು ತಿಂಗಳುಗಳವರೆಗೆ ದೇವತೆಗಳು ಮಾಡುವರೆಂದೂ ಅನಾದಿಕಾಲದಿಂದ ಕಿಂವದಂತಿಯು ಬಂದಿರುವದು. ನವಂಬರ್ ತಿಂಗಳಲ್ಲಿ ಛಳಿಯು ವಿಶೇಷವಾಗಿ ಬೀಳುವುದರಿಂದ ಕೇದಾರಕ್ಷೇತ್ರವೆಲ್ಲ ಮಂಜಿನಿಂದ ಮುಚ್ಚಿಹೋಗುವುದು. ಆ ಸಮಯದಲ್ಲಿ ಶ್ರೀಕೇದಾರನಾಥನ ಅರ್ಚಕರು ಕೊನೆಯ ಪೂಜೆಯನ್ನು ಮಾಡಿ ಬಾಗಿಲನ್ನು ಹಾಕಿಕೊಂಡು ಉಷಾಮಠಕ್ಕೆ ಹೊರಟುಬರುವರು. ಈ ಮಂಜು ಹರಿದು ಶ್ರೀಕೇದಾರನಾಥನ ದರ್ಶನವಾಗಬೇಕಾದರೆ 6 ತಿಂಗಳ ಕಾಲವು ಬೇಕಾಗುವುದು. ಮೇ ತಿಂಗಳಲ್ಲಿ ಅರ್ಚಕರು ಬಂದು ಬಾಗಿಲನ್ನು ತೆಗೆಯುವರು. ಆ ಸಮಯದಲ್ಲಿ ಶ್ರೀಕೇದಾರನಾಥನಿಗೆ ಆಗ ತಾನೇ ಪೂಜೆ ಮಾಡಿದಂತೆ ಬಾಡದ ಪತ್ರಪುಷ್ಪಗಳೂ ದೀಪಗಳೂ ಕಂಗೊಳಿಸುತ್ತಿರುವವು. ಈ ದೀಪದ ದರ್ಶನಕ್ಕಾಗಿ ಅನೇಕಾನೇಕ ಜನ ಯಾತ್ರಿಕರು "ಮಹಾಜ್ಯೋತಿದರ್ಶನ"ವೆಂದು ಅತ್ಯಂತ ಶ್ರದ್ಧೆಯಿಂದ ಬರುವರು. ಈ ಕ್ಷೇತ್ರದಲ್ಲಿ ಛಳಿಯು ಬದರೀನಾಥಕ್ಷೇತ್ರಕ್ಕಿಂತಲೂ ಅಧಿಕವಾಗಿರುವದರಿಂದ ಇಲ್ಲಿ ಯಾತ್ರಿಕರು ನಿಲ್ಲುವುದಿಲ್ಲ. ದರ್ಶನವನ್ನು ಮಾಡಿಕೊಂಡಾಕ್ಷಣವೇ ಗೌರೀಕ್ಷೇತ್ರಕ್ಕೆ ಹೊರಟುಹೋಗುವರು. ಈ ಕ್ಷೇತ್ರದಲ್ಲಿ ಯಾತ್ರಿಕರ ದೆಸೆಯಿಂದ ಸರ್ವಪ್ರಕಾರದ ಯೋಗ್ಯವ್ಯವಸ್ಥೆಯಿರುವುದು. ಪೂರ್ವಕಾಲದಲ್ಲಿ ಬದರೀನಾಥನ ಪೂಜೆಯನ್ನು ದಂಡಿಸ್ವಾಮಿಗಳು ಮಾಡುತ್ತಿದ್ದರೆಂದು ಕೆಲವು ಲೇಖಗಳಲ್ಲಿ ಉಲ್ಲೇಖವಿದೆ. ಆದರೆ ದಂಡವನ್ನು ಧರಿಸಿದ ಮೇಲೆ ನಾರಾಯಣನ ಪೂಜೆಯನ್ನು ಮಾಡುವುದು ಧರ್ಮಕ್ಕೆ ಅನುಕೂಲವೋ ಪ್ರತಿಕೂಲವೋ ತಿಳಿಯದು. ಅಸ್ತು! ಶ್ರೀಕೇದಾರಸಿಂಹಾಸನದ ಅಧಿಕಾರಿಗಳು ಸದಾ ಉಷಾಮಠದಲ್ಲಿ ವಾಸಮಾಡುವರು. ಬ್ರಿಟಿಷ್ ಗೌರ್ನಮೆಂಟಿನವರು ಶ್ರೀಕೇದಾರನಾಥನ ಅನೇಕ ಜಹಗೀರು ಗ್ರಾಮಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಯಾತ್ರಿಕ ಮತ್ತು ಬಡಬಗ್ಗರ ಹಿತಕ್ಕಾಗಿ ಪ್ರತಿಯೊಂದು ಸ್ಥಳದ ಯೂ ಆಸ್ಪತ್ರೆಗಳನ್ನು ಸ್ಥಾಪಿಸಿರುವರು. ಪೂರ್ವಕಾ ದಲ್ಲಿ ಶ್ರೀಕೇದಾರನಾಥ ಸಂಸ್ಥಾನದ ಅಧಿಕಾರಿಗಳ ಸ್ವಾಮಿಗಳೆಂದು ಕರೆಯುತ್ತಿದ್ದರು. ಕೆಲವು ಕಾಲದಿಂ ಈ ಅಧಿಕಾರಿಗಳಿಗೆ 'ರಾವಲ್' ಎಂಬ ಪದವಿಯು ಬಂ ರುವದು. ಈ ಪದವಿಯು ಯಾವ ರಾಜರ ಕಾಲದ ಪ್ರಾಪ್ತವಾಯಿತೋ ತಿಳಿಯದಾಗಿದೆ. ಈ ಸಂಸ್ಥಾನಕ್ಕೆ ಅನೇಕ ಜನ ರಾಜರು ವರ್ಷಾಶನಗಳನ್ನು ಈಗಲೂ ಕಳುಹಿಸುತ್ತಿರುವರು. ಈ ಸಂಸ್ಥಾನದ ವಾರ್ಷಿಕ ಉತ್ ತ್ತಿಯು 49-50 ಸಾವಿರದವರೆಗೆ ಇರುವದು. ಬದರೀನಾ ಕ್ಷೇತ್ರದ ಅಧಿಕಾರಿಗಳಂತೆ ಕೇದಾರನಾಥಕ್ಷೇತ್ರದ ಅಧಿ ಕಾರಿಗಳನ್ನು ಟಿಹರಿ ಮಹಾರಾಜರು ನಿಯಮಿಸುವುದಿಲ್ಲ ಆದರೆ ಸಂಸ್ಥಾನದ ಶಿಷ್ಯರಲ್ಲಿ ಯೋಗ್ಯರಾದವರನ್ನು ಶ್ರೀ ಸ್ವಾಮಿಗಳವರ ಲೇಖನದಂತೆಯೂ, ಸಂಸ್ಥಾನದ ಜಹಗೀರು ಗ್ರಾಮಗಳಲ್ಲಿ ವಾಸಮಾಡತಕ್ಕ ಪ್ರಜೆಗಳ ಒಪ್ಪಿಗೆಯಂತೆಯೂ ಗವರ್ನಮೆಂಟಿನವರ ಪತಿಯಿಂದ ಒಬ್ ಸ್ಪೆಷಲ್ ಆಫೀಸರರು ಬಂದು ನಿಯಮಿಸುವರು. ಪುನಃ ಇದು ಕಮಿಷನರ್‌ರವರಿಂದ ಸ್ಥಿರಪಡಿಸಲ್ಪಡುವದು ಬೌದ್ಧರಕಾಲದಲ್ಲಿ ಬದರೀನಾಥನ ಪೂಜೆಯು ನಡೆಯುತ್ತಿದ್ದಿಲ್ಲವೆಂಬುದು ಅನೇಕ ಲೇಖಗಳಿಂದ ತಿಳಿದುಬರುತ್ತದೆ ಏಕೆಂದರೆ ಶಂಕರಾಚಾರ್ಯರು ನಾರದ ಕುಂಡದಿಂದ ಬ ದ್ದರು. ಚಲ್ಲಿದ ನಾರಾಯಣಮೂರ್ತಿಯನ್ನು ತೆಗೆದು ಪುನಃ ಆ ದೇವಾಲಯದಲ್ಲಿಯೇ ಸ್ಥಾಪಿಸಿ ತಮ್ಮ ವಂಶದವರನ್ನು ಪೂಜೆಗೆ ನಿಯಮಿಸಿದರೆಂಬ ವಿಷಯವು ಮೊದಲಿನ ಲೇಖದಲ್ಲಿಯೇ ಬರೆಯಲ್ಪಟ್ಟಿದೆ. ಇದರಂತೆ ಕೇದಾರನಾಥನ ಸ್ಥಾಪನೆಯು ಇತ್ತೀಚೆಗೆ ಯಾರಿಂದಲೂ ಆಗಿಲ್ಲ. ಕೇದಾರನಾಥನು ನಾಲ್ಕು ಯುಗಗಳಿಂದಲೂ ಈ ಕ್ಷೇತ್ರದಲ್ಲಿಯೇ ಇದ್ದ ವಿಷಯವು ಪುರಾಣಾದಿಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ ಬದರೀನಾಥನ ಸ್ಥಾನಕ್ಕೆ ಈ ಹೊತ್ತಿನವರೆಗೆ 33 ಜನರು ಮಾತ್ರ ಅಧಿಕಾರಿಗಳಾಗಿದ್ದಾರೆಂದು ತಿಳಿದುಬರುತ್ತದೆ. ಆದರೆ ಶ್ರೀಕೇದಾರನಾಥ ಸಂಸ್ಥಾನಕ್ಕೆ ಈ ಹೊತ್ತಿನವರೆಗೆ 300 ರ ಮೇಲೆ ಅಧಿಕಾರಿಗಳಾಗಿ ಹೋಗಿರುವರೆಂದು ಪಟ್ಟಾವಲಿಯಿಂದ ತಿಳಿದುಬರುವುದು. ಇದಲ್ಲದೆ ಡೆಪ್ಯುಟಿ ಕಮಿಷನರ್ ಮಿ॥ ಸ್ಟೋವೆಲ್ ಸಾಹೇಬರೆಂಬುವರು ಈ ಸಂಸ್ಥಾನದ ಅಧಿಕಾರವು ಬಹು ಪ್ರಾಚೀನ ಕಾಲದಿಂದ ದಕ್ಷಿಣದೇಶವಾಸಿಗಳಾದ ವೀರಶೈವಮತದ ಜಂಗಮರ ಅಧೀನದಲ್ಲಿರುವದೆಂದು ತಮ್ಮ ಲೇಖನದಲ್ಲಿ ಸ್ಪಷ್ಟವಾಗಿ ಬರೆದಿರುವರು. ಏಸುಕ್ರಿಸ್ತನ ಜನನಕ್ಕಿಂತ 3101 ವರ್ಷಗಳ ಪೂರ್ವದಲ್ಲಿ ಈ ಸಂಸ್ಥಾನದಲ್ಲಿ ಅಧಿಕಾರಿಗಳಿದ್ದರೆಂದೂ ಅಂದಿನಿಂದ ಈ ಸಂಸ್ಥಾನದ ಮೇಲೆ ಜಂಗಮರ ಅಧಿಕಾರವೇ ಇರುವದೆಂದೂ ತಿಳಿದುಬರುವುದು, ಸರ್ ರಮೇಶಚಂದ್ರದತ್ತರವರಿಂದ ಬರೆಯಲ್ಪಟ್ಟ "ಭಾರತವರ್ಷದ ಪ್ರಾಚೀನ ಸಭ್ಯತಾ" ಎಂಬ ಗ್ರಂಥದಲ್ಲಿ ಮಹಾಭಾರತವು ಏಸುಕ್ರಿಸ್ತನಿಗಿಂತ 1250 ವರ್ಷಗಳ ಪೂರ್ವದಲ್ಲಿ ಆಯಿತೆಂದು ತಿಳಿದುಬರುತ್ತದೆ. ಗಢವಾಲ ದೇಶದಲ್ಲಿ ಅಥವಾ ಉತ್ತರ ಹಿಂದುಸ್ಥಾನದಲ್ಲಿ ಕೇದಾರನಾಥ ಹಾಗೂ ಬದರೀನಾಥ ಈ ಎರಡು ಕ್ಷೇತ್ರಗಳೇ ಮುಖ್ಯಕ್ಷೇತ್ರಗಳಾಗಿ ಬಹುಕಾಲದಿಂದ ಪ್ರಸಿದ್ಧಿಗೊಂಡಿರುವವು. ಶ್ರೀ ಕೇದಾರಸಂಸ್ಥಾನದ ಅಧಿಕಾರವು ಶ್ರೀ ಶಂಕರಾಚಾರ್ಯರಿಗಿಂತಲೂ ಎಷ್ಟೋ ಕಾಲ ಪೂರ್ವದ್ದೆಂಬುವದರಲ್ಲಿ ಯಾವ ಸಂಶಯವೂ ಇಲ್ಲ. ಶ್ರೀ ಕೇದಾರನಾಥನ ಅಧಿಕಾರಿಗಳಿಗೂ ಮತ್ತು ಅವರ ಶಿಷ್ಯರಿಗೂ ನಾಮದ ಅಂತ್ಯದಲ್ಲಿ "ಲಿಂಗ" ಎಂಬ ಶಬ್ದವು ಉಪಯೋಗಿಸಲ್ಪಡುವದು; ಇದು ಜ್ಯೋತಿರ್ಲಿಂಗದ ಸಂಜ್ಞೆಯಾಗಿರುವುದು.

|| ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ||

ಸುಷುತಿ

(ಲೇಖಕರು: ಶ್ರೀಪಟ್ಟದಸ್ವಾಮಿಗಳು ಹಿರೇಮಠ, ಕೊಣ್ಣೂರ.)

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯರು ತಮ್ಮ ಮಕ್ಕಳ ಮೇಲೆ ಪ್ರೀತಿಯನ್ನು ಮಾಡುತ್ತಾರೆ. ಆದರೆ ತಂದೆಗಿಂತ ತಾಯಿಯ ಪ್ರೀತಿಯು ಬಹಳವಾಗಿರುತ್ತದೆ. ಅಂತೇ ನೀತಿಕಾರರು 'ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ

ಳಿಯಲ್ಲವೆಂದ. ಹೇಳಬೇಕಾಗಿಲ್ಲದೆ ತಾಯಿಯ ಉಪಕಾರವನ್ನು ನಾನಾವಿಧವಾಗಿ ಹರ್ಷೋತ್ಸಾಹದಿಂದ ಕೊಂಡಾಡುತ್ತಾರೆ. ಆದರೆ ಇದರೊಳಗೇನೂ ವಿಶೇಷವಿಲ್ಲ. ಪಶುಗಳು ಸಹ ತಮ್ಮ ಮರಿಗಳ ಮೇಲೆ ಪ್ರೀತಿಮಾಡುತ್ತವೆ; ಅವುಗಳನ್ನು ಆಗಾಗ್ಗೆ ಮೂಸಿನೋಡುತ್ತವೆ; ನೆಕ್ಕುತ್ತವೆ; ಅವುಗಳಿಗೆ ಮೊಲೆಕುಡಿಸುತ್ತವೆ. ಯಾರಾದರೂ ಮರಿಗಳನ್ನು ಕೆಣಕಿದರೆ ಅವರ ಮೈಮೇಲೆ ಹೋಗುತ್ತವೆ ಮರಿಗಳು ಅಗಲಿದರೆ ಪಶುಗಳು ಸೈರಿಸುವದಿಲ್ಲ. ಕರುಗಳು ಇಲ್ಲದೆ ಮನೆಯಾವ ಕೂಡಲೆ ದನಗಳು ಚಟಪಡಿಸುತ್ತವೆ. ಕರುಗಳು ಯಾವಾಗಲೂ ಹತ್ತರವಿರಬೇಕೆಂದು ಅವು ಬಯಸುತ್ತವೆ. ಪಶುಗಳ ಜಾತಿಯೊಳಗಾದರೂ ಮರಿಗಳ ಮೇಲೆ ತಾಯಿಯ ಪ್ರೀತಿಯು ಇದ್ದಷ್ಟು ತಂದೆಯದಿರುವುದಿಲ್ಲ. ಈ ಶಿಶುವಾತ್ಸಲ್ಯದ ಸಂಬಂಧದಲ್ಲಿ ಪಶುಗಳಿಗಿಂತ ಪಕ್ಷಿಗಳಲ್ಲಿ ಒಂದು ಹೆಚ್ಚಿನ ಚಮತ್ಕಾರವಿದೆ. ಇತರ ಜಂತುಗಳಲ್ಲಿ ಹುಟ್ಟಿದ ಮರಿಗಳನ್ನು ನೋಡಿದ ಬಳಿಕ ಅದರಲ್ಲಿ ತಾಯಿಯು ಪ್ರೀತಿಯನ್ನು ಮಾಡುತ್ತದೆ. ಆದರೆ ಪಕ್ಷಿಗಳು ತಮ್ಮ ಮರಿಗಳನ್ನು ಹುಟ್ಟುವದಕ್ಕಿಂತ ಮುಂಚಿತವಾಗಿ ಅಂದರೆ ಅವು ಹೊಟ್ಟೆಯಲ್ಲಿರುವಾಗಲೇ ಮಮತೆಯನ್ನು ತೋರಿಸುತ್ತವೆ ಹೆಣ್ಣು ಹಕ್ಕಿಯು ಗರ್ಭವಾಯಿತೆಂದರೆ ಅದೂ ಗಂಡು ಹಕ್ಕಿಯೂ ಕೂಡಿ ತತ್ತಿಯನ್ನು ಇಡುವದಕ್ಕೂ, ಮುಂದೆ ಮರಿಗಳು ಇರುವದಕ್ಕೂ ತೊಂದರೆ ತಗಲದಂಥ ಸ್ಥಳನೋಡಿ ಅಲ್ಲಿ ಗೂಡು ಕಟ್ಟುತ್ತವೆ. ಆ ಗೂಡಿನಲ್ಲಿ ತತ್ತಿಗಳನ್ನು ಹಾಕಿ ಅವುಗಳ ಮೇಲೆ ಕುಳಿತುಕೊಂಡು ಅವುಗಳಿಗೆ ಕಾವು ಕೊಡುತ್ತವೆ. ಮತ್ತೂ ಒಂದು ಸೋಜಿಗವುಂಟು. ಅದೇನಂದರೆ— ಹೆಣ್ಣುಹಕ್ಕಿಯು ತತ್ತಿಗಳ ಮೇಲೆ ಕೂತಿರುವಷ್ಟರೊಳಗೆ ಗಂಡುಹಕ್ಕಿಯು ಮೇಯುವದಕ್ಕೆ ಹೊರಗೆ ಹೋಗಿಬರುವದು ಬಳಿಕ ಹೆಣ್ಣುಹಕ್ಕಿಯು ಎದ್ದು ಹೊರಗೆ ಹೋಗುವದು. ಆಗ ಗಂಡುಹಕ್ಕಿಯು ತತ್ತಿಗಳ ಮೇಲೆ ಕುಳಿತುಕೊಳ್ಳುವದು ಈ ಮೇರೆಗೆ ಸರತಿಯ ಮೇಲೆ ತತ್ತಿಗಳಿಗೆ ಕಾವು ಕೊಡುವ ಕೆಲಸವನ್ನು ಎರಡೂ ನಡೆಸುತ್ತವೆ. ಕೆಲವು ದಿವಸಗಳ ತರುವಾಯ ತತ್ತಿಗಳು ಒಡೆದು ಮರಿಗಳು ಹೊರ ಹೊರಟ ಬಳಿಕಾದರೂ ಎರಡೂ ಹಕ್ಕಿಗಳು ಸರತಿಯಿಂದ ಎಷ್ಟೋ ದಿವಸಗಳ ತನಕ ಮರಿಗಳನ್ನು ತಮ್ಮ ಪಕ್ಕದೊಳಗಿಟ್ಟುಕೊಂಡು ಕೂತುಕೊಳ್ಳುತ್ತವೆ. ಆ ಮರಿಗಳು ಸ್ವಲ್ಪ ದೊಡ್ಡವಾದ ಬಳಿಕ ಎರಡೂ ಹಕ್ಕಿಗಳು ಬಾಯೊಳಗೆ ಹೊರಗಿಂದ ಆಹಾರವನ್ನು ತಂದು ಮರಿಗಳ ಬಾಯೊಳಗೆ ಹಾಕುತ್ತವೆ. ಕೆಲವು ದಿವಸಗಳ ಮೇಲೆ ಆ ಮರಿಗಳು ತಿರುಗಾಡುವ ಹಾಗಾದ ಬಳಿಕ ಅವುಗಳನ್ನು ಸಂಗಡ ಕರೆದುಕೊಂಡು ಹೋಗಿ ಮೇಯಲಿಕ್ಕೆ ಕಲಿಸುತ್ತವೆ. ನೋಡಿರಿ ಹಕ್ಕಿಗಳು ಅಜ್ಞಾನಿಗಳಾಗಿದ್ದು ಮರಿಗಳಮೇಲೆ ಎಷ್ಟು ಪ್ರೀತಿ ಮಾಡುತ್ತವೆ! ಮನುಷ್ಯರು ಮಕ್ಕಳಮೇಲೆ ಪ್ರೀತಿ ಮಾಡುವದು ದೊಡ್ಡಮಾತಲ್ಲ. ಆದರೆ ಮನುಷ್ಯರ ಪ್ರೀತಿಗೂ ಪಶುಪಕ್ಷಿಗಳಪ್ರೀತಿಗೂ ಭೇದವುಂಟು. ಅದೇನಂದರೆ ಮನುಷ್ಯರ ಪ್ರೀತಿಯು ಬಹುದಿವಸವಿರುತ್ತದೆ. ಪಶುಪಕ್ಷಿಗಳ ಪ್ರೀತಿಯು ತುಸು ದಿವಸ ಇರುತ್ತದೆ. ಆದರೆ ಉಭಯ ಪಕ್ಷಗಳಲ್ಲಿಯೂ ಪ್ರೀತಿಮಾಡುವ ಕಾಲವನ್ನು ನೋಡಲಾಗಿ, ಮಕ್ಕಳು ತಮ್ಮ ಹೊಟ್ಟೆ ತಾವು ತುಂಬಿಕೊಳ್ಳುವತನಕ ಮಾತ್ರವೆಂಬುವಹಾಗೆ ತೋರುತ್ತದೆ. ಪಶುಪಕ್ಷಿಗಳ ಮರಿಗಳು ತಾವೇ ತಮ್ಮ ಕೂಳುನೀರು ದೊರಕಿಸಿಕೊಂಡು ತಮ್ಮ ಜೀವನ ಸಾಗಿಸುವಹಾಗಾದ ಬಳಿಕ ಅವು ತಾಯಿತಂದೆಗಳ ಹಂಬಲ ಬಿಡುತ್ತವೆ ಮತ್ತು ತಾಯಿತಂದೆಗಳು ಅವುಗಳ ಬಗ್ಗೆ ಮುಂದಿನ ಚಿಂತೆಯನ್ನು ಸಹ ಮಾಡುವದಿಲ್ಲ. ಬಹುತರವಾಗಿ ತಾಯಿತಂದೆಗಳದು, ಮರಿಗಳದು ಗುರುತು ತಪ್ಪಿ ನೆನಪು ಸಹ ಇಲ್ಲದಹಾಗಾಗುತ್ತದೆ. ಮನುಷ್ಯರು ತಮ್ಮ ಮಕ್ಕಳು ಪ್ರೌಢವಾಗುವತನಕ ಅವರ ಮೇಲೆ ಪ್ರೀತಿಯನ್ನು ಮಾಡುತ್ತಾರೆ. ಮುಂದೆ ಅವರು ದೊಡ್ಡವರಾಗಿ ತಮ್ಮ ಜೀವನಾರ್ಥವನ್ನು ನಡೆಸಿಕೊಳ್ಳಹತ್ತಿದ ಬಳಿಕ ಮೋಹವು ಕಡಿಮೆಯಾಗುತ್ತದೆ. ಮುಂದೆ ಮಕ್ಕಳ ಮೇಲೆ ಹಿರಿಯರು ಮಾಡುವ ಪ್ರೀತಿಯು ತುಸು ಬೇರೆಯಾಗಿರುತ್ತದೆ. ಆದಾಗ್ಯೂ ಕಡೆತನಕ ಪ್ರೀತಿಯು ತೀರ ನಷ್ಟವಾಗುವದಿಲ್ಲ. ಇದರಿಂದ ಹುಡುಗರ ವಿಷಯದಲ್ಲಿ, ತಾಯಿತಂದೆಗಳ ಮನಸ್ಸಿನೊಳಗೆ ಹುಟ್ಟುವ ಪ್ರೀತಿಯನ್ನು ಪರಮೇಶ್ವರನು ಹುಡುಗರ ಸಂರಕ್ಷಣದ ಸಲುವಾಗಿಯೂ, ನಿರ್ವಾಹದ ಸಲುವಾಗಿಯೂ, ಹುಟ್ಟಿಸುತ್ತಾನೆಂಬದು ಸಿದ್ಧವಾಗುತ್ತದೆ. ಹಡೆದಕೂಡಲೆ ತಾಯಿಯು ಮೊಲೆಯೊಳಗೆ ಹಾಲು ಹುಟ್ಟಿಸುವಂತೆಯೇ ಅವಳ ಅಂತಃಕರಣದೊಳಗೆ ಪ್ರೀತಿಯು ಹುಟ್ಟುತ್ತದೆ. ಹುಡುಗರು ಬದುಕುವದಕ್ಕೆ ಹಾಲು ಮುಖ್ಯ ಕಾರಣವಾದಾಗ್ಯೂ ಹಾಲಿಗಿಂತಲೂ ತಾಯಿಯ ಪ್ರೀತಿಯು ಬಹು ಪ್ರಯೋಜನವಾದದ್ದು. ತಾಯಿಯ ಮನಸ್ಸಿನೊಳಗೆ ಪ್ರೀತಿ ಇಲ್ಲದಿದ್ದರೆ ಕೂಸಿಗೆ ಹಾಲು ದೊರೆಯುತ್ತಿದ್ದಿಲ್ಲ ಪ್ರೀತಿ ಇರುವದರಿಂದ ಹುಡುಗರು ಸಂರಕ್ಷಣೆಯಾಗುತ್ತಾರೆ ನೋಡಿರಿ ದಯೆಯುಳ್ಳ ಪರಮಾತ್ಮನು ಎಂಥ ಸೋಜಿಗವಾದ ಯುಕ್ತಿಯನ್ನು ಯೋಚಿಸಿದ್ದಾನೆ ಅಂದ ಬಳಿಕ ಆ ಪರಮಾತ್ಮನ ಉಪಕಾರವನ್ನು ಎಷ್ಟು ಸ್ಮರಿಸಿದರೂ ತೀರದು ಸಾರಾಂಶ—ಸರ್ವ ಪ್ರಾಣಿಗಳು ತಮ್ಮ ತಮ್ಮ ಸಂತತಿಯ ಮೇಲೆ ಪ್ರೀತಿಮಾಡುವದು ಸಿದ್ಧವೇ ಸರಿ ಆದರೆ ಮನುಷ್ಯರು ಪಶುಪಕ್ಷಿಗಳ ಹಾಗೆ ಪ್ರೀತಿಮಾಡಿದರೆ ಅದರೊಳಗೇನೂ ವಿಶೇಷವಿಲ್ಲ. ಯಾಕಂದರೆ ದೇವರು ಮನುಷ್ಯನಿಗೆ ಬುದ್ಧಿಯನ್ನೂ ಸಾಮರ್ಥ್ಯವನ್ನೂ ಕೊಟ್ಟಿದ್ದಾನೆ. ಆದರಿಂದ ತಮ್ಮ ಮಕ್ಕಳಿಗೆ ಚಿಕ್ಕಂದಿನಲ್ಲಿ ಸುಖವಾಗಬೇಕೆಂದು ಅಪೇಕ್ಷಿಸಿದಂತೆಯೇ ಪ್ರಾಯದಲ್ಲಿಯೂ, ಮುಪ್ಪಿನಕಾಲದಲ್ಲಿಯೂ, ಆಗಬೇಕೆಂತಲೂ ಇಹಲೋಕದಂತೆ ಪರಲೋಕದಲ್ಲಿ ಸಹ ಕಲ್ಯಾಣವಾಗಬೇಕೆಂತಲೂ, ಇಚ್ಛಿಸಿದರೆ ಅದೇ ನಿಜವಾದ ಪ್ರೀತಿಯು. ಆದಕಾರಣ ಹುಡುಗರು ಚಿಕ್ಕವರಿರುವಾಗಿನಿಂದ ತಾಯಿತಂದೆಗಳು ಅವರಿಗೆ ದಿನಾಲು ಒಳ್ಳೇ ಉಪದೇಶಮಾಡುತ್ತಿರಬೇಕು. ತಿನ್ನೋಣ, ಉಣ್ಣೋಣ, ಮಲಗೋಣ, ನುಡಿಯೋಣ, ಆಡೋಣ, ಬರೆಯೋಣ, ಓದೋಣ, ತಿರುಗಾಡೋಣ ಮುಂತಾದ ವ್ಯಾಪಾರಗಳನ್ನು ಹುಡುಗರು ಮಾಡುವಾಗ ಆ ಆ ವ್ಯಾಪಾರಗಳಲ್ಲಿ ಅವರಿಗೆ ಸನ್ಮಾರ್ಗ ಹತ್ತುವಹಾಗೆ ಆಗಾಗ್ಗೆ ಬೋಧವನ್ನು ಮಾಡುತ್ತಿರಬೇಕು. ಮತ್ತು ಅದರಂತೆ ತಾವೂ ತಮ್ಮ ಆಚರಣೆಯಿಂದ ಅವರಿಗೆ ತೋರಿಸುತ್ತಿರಬೇಕು ಈಗ ಎಲ್ಲರ ಮನೆಯಲ್ಲಿಯೂ ಚಹಾ ಕಾಫಿ ಕುಡಿಯುವ ರೂಢಿಯು ಮಿತಿಮೀರಿಹೋಗಿದೆ. ಆಗ್ಗೆ ಅವರು ತಮ್ಮ ಮಕ್ಕಳನ್ನು ಬಿಟ್ಟು ಹೇಗೆ ಕುಡಿಯಬೇಕೆಂದು ಪ್ರೀತಿಯಿಂದ ಅವರಿಗೂ ಕುಡಿಸುತ್ತಾರೆ. ಹೀಗೆ ಕುಡಿಸುವದರಿಂದ ಅವರ ಕೋಮಲವಾದ ಎಳೆಯ ಶರೀರವನ್ನು ಕೆಡಿಸಿದಂತಾಗುತ್ತಲ್ಲದೆ ಅವರನ್ನು ದುಷ್ಟ ಚಟಕ್ಕೆ ಹಚ್ಚಿದಂತಾಗುತ್ತದೆ. ಇದು ನಿಜವಾದಪ್ರೀತಿ ಎನಿಸಲಾರದು. ದುಷ್ಟ ಮಾರ್ಗಕ್ಕೆ ಅವರನ್ನು ಎಂದೂ ಹೋಗಗೊಡಬಾರದು ಒಳ್ಳೇದು ಯಾವದು ಕೆಡಕು ಯಾವದು ಒಳ್ಳೇದರ ಪರಿಣಾಮವೇನು, ಕೆಡಕಿನ ಪರಿಣಾಮವೇನು ಇವುಗಳನ್ನು ಅವರಿಗೆ ಆಗಾಗ್ಗೆ ಹೇಳಿ ಅನುಭವಕ್ಕೆ ತಂದು ಕೊಡುತ್ತಿರಬೇಕು. ನಮ್ಮನ್ನು ಹುಟ್ಟಿಸಿ ಸಂರಕ್ಷಣೆ ಮಾಡುವಂಥ ಪರಮಾತ್ಮನ ಧ್ಯಾನ ಮಾಡುವದನ್ನೂ ಜನರ ಮಾನಕಾಯುವದನ್ನೂ, ಸತ್ಯ ಮಾತಾಡುವದನ್ನೂ, ಅವರಿಗೆ ಕಲಿಸುತ್ತಿರಬೇಕು. ಇಹ ಲೋಕದಲ್ಲಿಯೂ ಪರಲೋಕದಲ್ಲಿಯೂ ಕಲ್ಯಾಣವಾಗುವಂಥ, ಉತ್ತಮ ನಡತೆಯನ್ನು ಕಲಿಸುವುದೇ ನಿಜವಾದ ಮಮತೆ ಎನಿಸುವುದು.

ಗುರುತತ್ವ ಪ್ರಭಾಕರ

ಲೇ—ಭಾಗೀರಥೀಬಾಯಿ ಕಟಾಪ, ಸೊಲ್ಲಾಪುರ.

ದಾಸ್ಯ

ದಾಸ್ಯಭಕ್ತಿಯಲ್ಲಿ ಮಾರುತಿಯು ಪ್ರಸಿದ್ಧನಾಗಿದ್ದಾನೆ. ಅವನ ದಾಸ್ಯಭಕ್ತಿಯು ಜಗತ್ತಿಗೆ ಪ್ರಸಿದ್ಧವಾಗಿರುವದು. ಅದರಲ್ಲಿ ಒಂದು ಪ್ರಸಂಗವನ್ನು ನೆನಪಿಗೆ ಕೊಡಬಹುದು ರಾವಣನ ಸಂಹಾರವಾದ ಮೇಲೆ ಶ್ರೀರಾಮನು ಪಟ್ಟಾಭಿಷಿಕ್ತನಾದಾಗ ಅನೇಕರಿಗೆ ಅನೇಕ ಉಡುಗರೆಗಳು ಸಿಕ್ಕಿದವು ಅವುಗಳಲ್ಲೇನೂ ಹುರುಳಿಲ್ಲವೆಂದು ಮಾರುತಿಯು ತನಗೆ ದಾಸ್ಯಭಕ್ತಿಯನ್ನನುಗ್ರಹಿಸಬೇಕೆಂದು ಕೇಳಿ ಶ್ರೀರಾಮನ ಸೇವೆಯಲ್ಲಿನಿಂತನು. ಮಾರುತಿಯ ಮೇಲೆ ಶ್ರೀರಾಮನ ಅನುಗ್ರಹವು ಸಾಮಾನ್ಯವಾಗಿ ಬಹಳವಾಗಿರುವದೆಂದು ಎಲ್ಲರಿಗೂ ಗೊತ್ತಿತ್ತು. ದಾಸ್ಯಭಕ್ತಿಗೆ ಕಂಕಣವನ್ನು ಕಟ್ಟಿಕೊಂಡು ನಿಂತಮೇಲೆ ಮಾರುತಿಯ ಪ್ರತಿಷ್ಠೆಯು ಮುಗಿಲು ಮುಟ್ಟುವದೆಂದು ಯೋಚಿಸಿ ಅನೇಕ ಸಚ್ಛ್ರೇಷ್ಠರು ಪ್ರತಿಯೊಂದು ಸೇವೆಗೂ ತಾವು ತಾವಾಗಿ ಮುಂದೆ ಬಂದು ಮಾರುತಿಗೆ ಯಾವ ಕೆಲಸವೂ ಸಿಕ್ಕಗೊಡದಂತೆ ಮಾಡಿದರು. ಇದನ್ನು ತಿಳಿದು ರಾಮನು ಸೇವಾಸಕ್ತನಾದ ಮಾರುತಿಯನ್ನು ನೋಡಿ ತಾನು ಆಕಳಿಸಿದಾಗ ಒಂದು ಚುಟಿಕೆಯನ್ನು ಹೊಡೆಯಬೇಕೆಂದು ಹೇಳಿದನು. ಆಕಳಿಕೆಯು ತಮೋಗುಣದ ಲಕ್ಷಣವಾದ್ದರಿಂದ ಆ ಕಾಲದಲ್ಲಿ ಮನಸ್ಸನ್ನು ರಜೋಗುಣಕ್ಕೆ ತಿರುಗಿಸುವದಕ್ಕೋ ಏನೋ ಚುಟಿಕೆಯನ್ನು ಹೊಡೆಯುವ ಪದ್ಧತಿಯು ಈಗಲೂ ಉಂಟು. ಮಾರುತಿಯು ಅದನ್ನೇ ಸಹರ್ಷಕವಾಗಿ ನಡೆಸುತ್ತಿದ್ದನು. ಒಂದು ದಿವಸ ರಾಮನು ಸೀತಾ ಸಮೇತನಾಗಿ ಏಕಾಂತದಲ್ಲಿದ್ದನು ಮಾರುತಿಯು ತನ್ನ ಸೇವೆಯನ್ನು ನಿಲ್ಲಿಸಬಾರದೆಂದು ತಾನೂ ಒಳಕ್ಕೆ ಹೋದನು. ರಾಮನು ಆಗ ಅವನನ್ನು ಹೊರಕ್ಕೆ ಹೋಗ ಹೇಳಿದನು. ತನ್ನ ಸೇವಾವೃತ್ತಿಗೇನು ಗತಿಯೆಂದು ಮಾರುತಿಯು ಹಿಂದು ಮುಂದು ನೋಡಿದನು. ಹೊರಗಿದ್ದಾಗ ಚುಟಿಕೆಯನ್ನು ಹಾಕಿದರೆ ಆ ಚುಟಿಕೆಯ ಸದ್ದಾದಾಗಲೇ ತಾನು ಆಕಳಿಸುವೆನೆಂದು ಹೇಳಿ ಒಪ್ಪಿಸಿ ಹೊರಕ್ಕೆ ಕಳುಹಿಸಿದನು. ಮಾರುತಿಯು ಹೊರಕ್ಕೆ ಬಂದು ಸ್ವಲ್ಪ ಹೊತ್ತು ಕುಳಿತನು. ನಿಷ್ಕಾರಣವಾಗಿ ತಾನು ಚುಟಿಕೆಯನ್ನು ಹೊಡೆದು ಸ್ವಾಮಿಯನ್ನು ಆಕಳಿಸುವಂತೆ ಮಾಡುವದು ಇವನ ಮನಸ್ಸಿಗೆ ಬರಲಿಲ್ಲ ಸ್ವಾಮಿಯ ಸನ್ನಿಧಿಯನ್ನು ಬಿಟ್ಟು ವಿಷಯಗಳ ಕಡೆಗೆ ಹೊರಳುವದಕ್ಕೂ ಮನಸ್ಸು ಒಗ್ಗಲಿಲ್ಲ ಸ್ವಾಮಿಯ ನಾಮಸ್ಮರಣೆಯೇ ಸ್ವಾಮಿಯ ಸನ್ನಿಧಿಯೆಂದು ನೆನಪಾಯಿತು. ಒಡನೆ ಅವನು ರಾಮ-ರಾಮ ಎನ್ನುತ್ತ ನಾಮಸ್ಮರಣೆಯನ್ನಾರಂಭಿಸಿದನು. ಪ್ರತಿಯೊಂದು ನಾಮವನ್ನುಚ್ಚರಿಸುತ್ತಲೂ ಭಕ್ತಿಯ ಆವೇಶವು ಒಂದೊಂದು ಮೆಟ್ಟಲನ್ನು ಏರುತ್ತಾ ಬಂತು. ಸ್ವಲ್ಪಹೊತ್ತಿನಲ್ಲಿಯೇ ಹೊರಗಣ ಪ್ರಪಂಚದ ಎಚ್ಚರವೇ ಇಲ್ಲದೆ ಅಖಂಡವಾಗಿ ರಾಮನಾಮವನ್ನುಚ್ಚರಿಸುತ್ತ ಆ ಆವೇಶಭರದಲ್ಲಿ ಮಾರುತಿಯು ತನಗರಿವಿಲ್ಲದೆ ಒಂದೇಸಮನಾಗಿ ಎಡೆಬಿಡದೆ ಚುಟಿಕೆಗಳನ್ನು ಹೊಡೆಯುವುದಕ್ಕಾರಂಭಿಸಿದನು. ಮಾರುತಿಯ ಪ್ರತಿಯೊಂದು ಚುಟಿಕೆಗೂ ರಾಮನು ಒಂದೊಂದು ಸಲ ಆಕಳಿಸಬೇಕಾಗಿತ್ತು ಏಕೆಂದರೆ ಅವನ ವಾಗ್ದಾನವು ಆರೀತಿಯಾಗಿತ್ತು. ಆದರಿಂದ ರಾಮನಿಗೆ ಆಕಳಿಕೆಯಾರಂಭವಾಗಿ ಒಂದರಹಿಂದೊಂದು ಬಿಡದೆ ನುಗ್ಗಿಬಂತು. ಬಿಟ್ಟ ಬಾಯಿ ಮುಚ್ಚುವುದಕ್ಕಿಲ್ಲದೆ ಉಸಿರು ಮೇಲಮೇಲಕ್ಕೆ ಸಿಕ್ಕುತ್ತ ಕಣ್ಣುಗುಡ್ಡೆಗಳು ತಲೆಕೆಳಗಾಗುವ ಹೊತ್ತು ಬಂತು. ಮಾತಾಡುವುದಕ್ಕೆ ಕೂಡ ಆಗದಂತೆ ಉಸಿರು ಕಟ್ಟಿ ಆಕಳಿಸುತ್ತಿದ್ದ ಪತಿಯನ್ನು ನೋಡಿ ಗಾಬರಿಗೊಂಡು ಸೀತೆಯು ಒಡನೆ ಬಾಗಿಲನ್ನು ತೆರೆದು ಮಾರುತಿಯನ್ನು ಕರೆದಳು. ಮಾರುತಿಯು ಅಲ್ಲಿಗೆ ಹೋಗುವದಕ್ಕಾಗಿ ಚುಟಿಕೆಯನ್ನು ನಿಲ್ಲಿಸುತ್ತಲೇ ಒಳಗೆ ರಾಮನಿಗೆ ಸಮಾಧಾನವಾಯಿತು. ಸ್ವಾಮಿಯ ಕಣ್ಣೆದುರಿಗೆ ಪ್ರತ್ಯಕ್ಷವಾಗಿ ಮಾಡುವ ಸೇವೆಯು ದೊರೆಯದಿದ್ದರೂ ಪರೋಕ್ಷವಾಗಿ ಸ್ವಾಮಿಯ ಸ್ಮರಣೆಯನ್ನೇ ತನ್ನ ಸರ್ವಸ್ವವೆಂದು ಭಾವಿಸಿದ ಮಾರುತಿಯ ನಡವಳಿಕೆಯಿಂದ ಪ್ರೀತನಾದ ರಾಮನು ಮಾರುತಿಯ ತಲೆಯಮೇಲೆ ಕೈಯಿಟ್ಟು ಮಹದನುಗ್ರಹವನ್ನು ಮಾಡಿ ಸೀತೆಯ ಎದುರಿಗೆ ಅವನನ್ನು ಬಹಳವಾಗಿ ಶ್ಲಾಘಿಸಿದನು. ಹೀಗೆ ಪ್ರಸಂಗವು ಬಂದಾಗ ಸಾಕ್ಷಾತ್ತಾಗಿ ಸೇವೆಯನ್ನು ಮಾಡುತ್ತ ಉಳಿದ ಕಾಲದಲ್ಲಿ ಇತರ ವಿಷಯಚಿಂತನೆಗೆ ಹೋಗದೆ ಪರಮಾತ್ಮಸ್ಮರಣೆಯಲ್ಲಿರುವದೇ ನಿಜವಾದ ದಾಸ್ಯಭಕ್ತಿ. ಸತ್ಪುರುಷರಲ್ಲಿ ದಾಸ್ಯಭಕ್ತಿಯನ್ನು ಮಾಡುತ್ತಿರುವವರು ಬಹು ಜನರಿರುತ್ತಾರೆ. ಅವರು ಸತ್ಪುರುಷರ ಕಣ್ಣೆದುರಿಗೆ ಮಾಡುವ ಸೇವೆಯು ಸ್ತೋತ್ರಾರ್ಹವೇ ಆಗಿರುತ್ತದೆ. ಆದರೆ ಪರೋಕ್ಷದಲ್ಲಿ ಅವರ ಮನಸ್ಸು ಬೇರೆ ಕಡೆಗೆ ಹೊಯ್ದಾಡುವದೇ ಬಹಳ. ಅದೇ ಅವರ ಸಿದ್ಧಿಗೆ ಪ್ರತಿಬಂಧಕವು ಅವರು ತಮ್ಮ ಪರೋಕ್ಷಸ್ಥಿತಿಯು ಪ್ರತ್ಯಕ್ಷಸ್ಥಿತಿಯೆಂದು ಭಾವಿಸಿ ಅಖಂಡವಾದ ದಾಸ್ಯಭಕ್ತಿಯನ್ನು ಮೈಗೂಡಿಸಿಕೊಳ್ಳಬೇಕು. ದೇವರೂ ಸತ್ಪುರುಷರೂ ಪರೋಕ್ಷಸ್ಥಿತಿಯನ್ನು ಕೂಡ ನೋಡಬಲ್ಲವರೆಂಬುದನ್ನು ಮರೆಯಬಾರದು. ವಂದನವು ಆಗಾಗ ತಲೆಯನ್ನು ಬಗ್ಗಿಸುವಂತೆ ಮಾಡುವುದು; ದಾಸ್ಯವು ಯಾವಾಗಲೂ ತಲೆಯನ್ನು ಬಗ್ಗಿಸಿದಂತೆ ಇಡುವದು. ಇದರಿಂದ ದೇವರ ಮನಸ್ಸು ಬಹು ಬೇಗ ಕರಗುವದಕ್ಕೆ ದಾರಿಯಾಗಿರುವದು. ದಾಸ್ಯಭಕ್ತಿಯಲ್ಲಿರುವ ಈ ಸೌಕರ್ಯವನ್ನು

[೩ನೆಯ ಪುಟವನ್ನು ನೋಡಿ.]

ಪಂಚಾಚಾರ್ಯಪ್ರಭಾ

೧೯೪೨ನೆಯ ಜೂನ್ ತಾ॥ ೧ನೆಯ ಸೋಮವಾರ

ವರ್ಣಾಶ್ರಮ ವಿಚಾರ.

ವೀರಶೈವಮತವು ವರ್ಣಾಶ್ರಮಯುಕ್ತವಾಗಿಯೂ ಸನಾತನವಾಗಿಯೂ ಇರುವುದೆಂಬುದಕ್ಕೆ ಈ ಮೊದಲು ಅನೇಕ ಪ್ರಮಾಣಪೂರ್ವಕವಾಗಿ ಪ್ರತಿಪಾದಿಸಲ್ಪಟ್ಟಿರುವುದು ಸರಿಯಷ್ಟೆ! ಯಾವ ಮತಗಳು ಶ್ರುತಿ ಸ್ಮೃತಿ ಪುರಾಣಾಗಮಾದಿಗಳಲ್ಲಿ ಉಲ್ಲೇಖಿಸಲ್ಪಟ್ಟಿವೆಯೋ, ಯಾವ ಮತಗಳು ಬ್ರಹ್ಮಸೂತ್ರಾದಿಗಳ ಮೇಲೆ ಭಾಷ್ಯ ಮೂಲಕವಾಗಿ ಆಚಾರ್ಯರಿಂದ ಸ್ಥಾಪಿಸಲ್ಪಟ್ಟಿವೆಯೋ ಅವುಗಳೇ ವೈದಿಕಮತಗಳೆಂದು ಪ್ರಸಿದ್ಧಿಹೊಂದಿವೆ ಒಂದೊಂದು ಮತಕ್ಕೆ ಮೂಲಸ್ಥಾಪಕರಿರುವಂತೆ ಈ ಮತಕ್ಕೂ ಶ್ರೀಜಗದ್ಗುರು ಪಂಚಾಚಾರ್ಯರು ಸ್ಥಾಪಕರಾಗಿರುತ್ತಾರೆ ಸ್ಮಾರ್ತವೈಷ್ಣವಾದಿಗಳು ಜಾತಿಧರ್ಮವನ್ನು ಪ್ರಧಾನವಾಗಿಟ್ಟುಕೊಂಡು ಮತಧರ್ಮವನ್ನು ಗೌಣವಾಗಿ ವ್ಯವಹರಿಸುತ್ತಾರೆ ಆದರೆ ವೀರಶೈವಮತೀಯರು ಮತಧರ್ಮವನ್ನು ಮುಖ್ಯವಾಗಿಯೂ ಜಾತಿಧರ್ಮವನ್ನು ಗೌಣವಾಗಿಯೂ ಇಟ್ಟುಕೊಂಡು ವ್ಯವಹರಿಸುತ್ತಾರೆ ಆದುದರಿಂದ ಸ್ಮಾರ್ತವೈಷ್ಣವಾದಿಗಳಲ್ಲಿ ಬ್ರಾಹ್ಮಣಾದಿಜಾತಿನಾಮಗಳು ಹೆಚ್ಚುಬಳಕೆಯಲ್ಲಿ ಬಂದಿವೆ. ವೀರಶೈವರು ಮತಧರ್ಮಗಳನ್ನೇ ವಿಶೇಷವಾಗಿ ವ್ಯವಹಾರದಲ್ಲಿ ಇಟ್ಟುಕೊಂಡಿರುವದರಿಂದ ಬ್ರಾಹ್ಮಣಾದಿ ಸಕಲವರ್ಣದವರನ್ನೂ ವೀರಶೈವರೆಂದು ಕರೆಯುವುದೇ ಬಳಕೆಯಲ್ಲಿ ಬಂದಿದೆ. ಜನರು ಯಾವ ವ್ಯವಹಾರವನ್ನು ವಿಶೇಷವಾಗಿ ಮಾಡುತ್ತಾರೋ ತದನುಗುಣವಾದ ನಾಮವು ರೂಢಿಯಲ್ಲಿ ಬರುವದು ಮತಧರ್ಮಗಳನ್ನು ವಿಶೇಷವಾಗಿ ನಡೆಸಿದ ಮಾತ್ರದಿಂದ ಜಾತಿಧರ್ಮಗಳು ಇಲ್ಲವೆಂದು ಹೇಳಲು ಆಗುವದಿಲ್ಲ. ಜಾತಿಧರ್ಮಗಳು ಆಯಾಯಜಾತಿಗೆ ಮಾತ್ರ ಸಂಬಂಧಿಸಿರುತ್ತವೆ ಮತಧರ್ಮಗಳು ಮತಸಾಮಾನ್ಯಕ್ಕೂ ಸಂಬಂಧಿಸಿರುತ್ತವೆ ಮತಧರ್ಮಗಳು ಸಾಮಾನ್ಯಧರ್ಮಗಳು ಜಾತಿಧರ್ಮಗಳು ವಿಶೇಷಧರ್ಮಗಳು ಇವು ಆಯಾಯ ಜಾತಿಗಳಲ್ಲಿ ಮಾತ್ರ ವ್ಯಾಪಿಸಿರುವವು ಸಾಮಾನ್ಯಧರ್ಮವು ಎಲ್ಲರಲ್ಲಿಯೂ ವ್ಯಾಪಿಸಿರುವದು ಹೇಗೆಂದರೆ, ಮನುಷ್ಯತ್ವವೆಂಬ ಸಾಮಾನ್ಯಧರ್ಮವು ಬ್ರಾಹ್ಮಣಾದಿ ಸಮಸ್ತಮಾನವರಲ್ಲಿಯೂ ಅನುಗತವಾಗಿರುವದು ಬ್ರಾಹ್ಮಣತ್ವಾದಿ ವಿಶೇಷಧರ್ಮಗಳು ಬ್ರಾಹ್ಮಣರಲ್ಲಿ ಮಾತ್ರ ಅನುಗತವಾಗುವವು ಕ್ಷತ್ರಿಯತ್ವರೂಪ ವಿಶೇಷಧರ್ಮವು ಕ್ಷತ್ರಿಯರಲ್ಲಿ ಮಾತ್ರ ಅನುಗತವಾಗುವದು ಇದರಂತೆ ವೀರಶೈವವೆಂಬುದು ಮತದ ನಾಮವಾದುದರಿಂದ ಸಾಮಾನ್ಯಧರ್ಮವನ್ನು ಅನುಷ್ಠಿಸುವವರೆಲ್ಲರಲ್ಲಿಯೂ ವೀರಶೈವತ್ವವುಂಟು ಈ ಸಾಮಾನ್ಯಧರ್ಮವನ್ನು ಅನುಷ್ಠಿಸುವುದಲ್ಲದೆ ಬ್ರಾಹ್ಮಣಾದಿ ವಿಶೇಷಧರ್ಮವನ್ನು ಅನುಷ್ಠಿಸುವುದರಿಂದ ಇವರು ಗುರುಗಳು ಇವರು ಭಕ್ತರು ಎಂದು ವ್ಯವಹಾರವಿರುತ್ತದೆ. ವೀರಶೈವಮತದಲ್ಲಿ ಅಷ್ಟಾವರಣ ಪಂಚಾಚಾರ ಷಟ್‌ಸ್ಥಲ ಮೊದಲಾದ ಮುಕ್ತಿಸಾಧಕಗಳಾದ ಧರ್ಮಾಚರಣೆಗಳೇ ಸಾಮಾನ್ಯಧರ್ಮಗಳಾಗಿವೆ. ಯಜನ, ಯಾಜನ ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಣಗಳೇ ವಿಶೇಷ ಧರ್ಮಗಳು. ಅನಾದಿಯಿಂದ ಗುರುತ್ವವನ್ನು ವಹಿಸಿದವರಿಂದ ಯಜನಾದಿ ವಿಶೇಷಧರ್ಮಗಳು ಅನುಷ್ಠಿಸಲ್ಪಡುತ್ತವೆ. ಈ ನಾಗರಿಕತೆಯ ಕಾಲದಲ್ಲಿ ವರ್ಣಾಶ್ರಮ ಧರ್ಮಗಳೆಲ್ಲವೂ ನಶಿಸಿಹೋದವು. ಯಾವನು ಬುದ್ಧಿವಂತನೋ ಅವನೇ ಉತ್ತಮವರ್ಣದವನೆಂದೂ ಯಾವನು ದಡ್ಡನೋ ಅವನೇ ಕನಿಷ್ಠವರ್ಣದವನೆಂದೂ ವಾದಗಳು ಹುಟ್ಟಲಾರಂಭಿಸಿದವು. ಗೋ ಮೊದಲಾದ ಪಶುಗಳಲ್ಲಿಯೂ ವಜ್ರ ಮುಂತಾದ ಜಡಪದಾರ್ಥಗಳಲ್ಲಿಯೂ ಸಹ ಶಾಸ್ತ್ರಕಾರರು ಬ್ರಾಹ್ಮಣಾದಿಜಾತಿಗಳನ್ನು ಏರ್ಪಡಿಸಿರುತ್ತಾರೆ. ಇನ್ನು ವೇದಮಾರ್ಗಾವಲಂಬಿಗಳಾದ ಮಾನವವರ್ಗದಲ್ಲಿ ಇಲ್ಲವೆಂದು ಹೇಳಲು ಸಾಧ್ಯವಾದೀತೆ? ಈಗಿನವರು ವಾದಿಸುವ ಯುಕ್ತಿವಾದಗಳೆಲ್ಲವೂ ವಿತಂಡವಾದಗಳಲ್ಲಿ ಸೇರುತ್ತವೆಯೇ ಹೊರತು ಸದ್ವಾದಗಳಲ್ಲಿ ಸೇರುವದಿಲ್ಲ. ಮುಖ್ಯವಾಗಿ ವರ್ಣಾಶ್ರಮ ವ್ಯವಹಾರವು ಎಲ್ಲಿರುವುದಿಲ್ಲವೋ ಅಲ್ಲಿ ವೇದೋಪನಿಷತ್ತುಗಳ ಸುಳಿವೇ ಇರುವುದಿಲ್ಲವು ವರ್ಣಾಶ್ರಮಗಳಿಗೂ ವೇದಜನ್ಯವಾದ ಮುಕ್ತಿಗೂ ಪರಸ್ಪರ ಕಾರ್ಯಕಾರಣ ಭಾವವು ಇರಬೇಕೆಂಬುದೇ ಆರ್ಯಧರ್ಮದ ರಹಸ್ಯವು ವರ್ಣಾಶ್ರಮಧರ್ಮದಿಂದೊಡಗೂಡಿದ ವೇದಮಾರ್ಗವೇ ಪರಮ ಶ್ರೇಷ್ಠವಾದುದು ಯಾವ ಧರ್ಮಾವಲಂಬಿಗಳ ಕೂಟದಲ್ಲಿ ಯಾರು ಜನ್ಮವನ್ನು ಎತ್ತಿರುವರೋ ಅವರು ಆ ಧರ್ಮವನ್ನು ಬಿಡದೆ ಭಗವಂತನ ಅನುಗ್ರಹವನ್ನು ಪಡೆಯಬೇಕು. ಇದೇ ವಿಷಯವನ್ನು ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತಿರುವವು ಚಂದ್ರಜ್ಞಾನಾಗಮ ಕಾರಣಾಗಮಗಳಲ್ಲಿ ವೀರಶೈವಬ್ರಾಹ್ಮಣಧರ್ಮಗಳು ವಿವರವಾಗಿ ಉಕ್ತವಾಗಿರುವವು. ಸರ್ವರೂ ಆದರಂತೆ ಆಚರಿಸಿ ಧನ್ಯರಾಗಬೇಕಾಗಿದೆ ಕಲಿಕಾಲಪ್ರಭಾವದಿಂದ ಈಗ ಪ್ರತಿಯೊಂದು ಮತದಲ್ಲಿಯೂ ವೈದಿಕ ಧರ್ಮಗಳು ನಾಶವಾಗುತ್ತ ನಡೆದಿರುವವು ಧರ್ಮಬಂಧನವು ಯಾರಿಗೂ ಬೇಡವಾಗಿದೆ ಇಂತಹ ಅಧರ್ಮಮಯಕಾಲದಲ್ಲಿ ಧರ್ಮಶೀಲರು ತಮ್ಮ ಧರ್ಮಗಳನ್ನು ಕಾಪಾಡಿಕೊಳ್ಳುವುದೇ ಕಷ್ಟವಾಗಿದೆ ಧರ್ಮಕ್ಕೊದಗಿರುವ ಸಂಕಟವು ಪರಮಾತ್ಮನಿಂದಲೇ ದೂರಾಗಿ ವೀರಶೈವರ ವರ್ಣಾಶ್ರಮಧರ್ಮಗಳು ಪೂರ್ವದಂತೆ ಪ್ರಕಾಶಿಸಬೇಕಾಗಿದೆ ಅಂತಹ ಕಾಲವು ಶೀಘ್ರವಾಗಿ ಬರಲೆಂದು ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ

ಯುದ್ಧವಾರ್ತೆ.

ಫಿಲಿಪೈನ್ಸಿನಲ್ಲಿ ಇನ್ನೂ ಪ್ರತಿಭಟನೆಯದೆ

ಫಿಲಿಪೈನ್ಸ್ ದ್ವೀಪದ ಮಿಂಡನೋ ಮತ್ತು ಲೂಜಾನ್‌ನಲ್ಲಿ ಸಹಸ್ರಾರು ಮಂದಿ ಅಮೆರಿಕನ್ ಸೈನಿಕರು ಜಪಾನನನ್ನು ಇನ್ನೂ ಪ್ರತಿಭಟಿಸಿ ಯುದ್ಧಮಾಡುತ್ತಿದ್ದಾರೆಂದು ಪ್ರಕಟವಾಗಿದೆ

ಹೊಸಬಗೆಯ ಟಾರ್ಪೆಡೊ ನಿರ್ಮಾಣ

ಮೆಕ್ಸಿಕೋ ದೇಶದ ವ್ಯಾಪಾರದ ಹಡಗುಗಳನ್ನು ಮೆಕ್ಸಿಕೊ ಕೊಲ್ಲಿಯಲ್ಲಿ ಮುಳುಗಿಸಲು ಶತ್ರುಗಳು ಹೊಸಬಗೆಯ ಟಾರ್ಪೆಡೊ ಉಪಯೋಗಿಸಿರಬೇಕೆಂದು ಊಹಿಸಲಾಗಿದೆ ಟಾರ್ಪೆಡೊ ಬಡಿದ ಕೂಡಲೆ ಹಡಗು ಹತ್ತಿಕೊಂಡು 21 ಜನ ನಾವಿಕರು ಸುಟ್ಟು ಹೋದರು.

ಲಿಥುಯೋನಿಯದಲ್ಲಿ ೪೦೦ ಜನರ ಕೊಲೆ

ನಾಜಿಗಳಿಗೆ ವ್ಯತಿರಿಕ್ತವಾಗಿ ಪಿತೂರಿನಡೆಸುತ್ತಿದ್ದ ಸುಮಾರು ೨೦೦ ಜನರನ್ನು ಲಿಥುಯೋನಿಯಾದಲ್ಲಿ ನಾಜಿಗಳು ಕೊಂದರು. ಲಿಥುಯೋನಿಯಾದಲ್ಲಿ ರಚನಾತ್ಮಕ ಕೆಲಸ ಮಾಡುತ್ತಿದ್ದ ಇಬ್ಬರು ನಾಜಿ ಅಧಿಕಾರಿಗಳನ್ನು ಕೊಂದುದಕ್ಕೆ ಇದು ಪ್ರತೀಕಾರವೆಂದು ಊಹಿಸಲಾಗಿದೆ.

ಮೊದಲು ಚೀಣವನ್ನು ಗೆಲ್ಲುವ ಪ್ರಯತ್ನವೇ ?

ಮೊದಲು ಚೀಣವನ್ನು ಸಂಪೂರ್ಣವಾಗಿ ಗೆಲ್ಲುವುದಕ್ಕಾಗಿ ಜಪಾನರು ಅಸಾಧ್ಯ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆಂದೂ ಚೆಕಿಯಾಂಗ್ ಪ್ರಾಂತ್ಯದ ರಾಜಧಾನಿಯಾದ ಕೀವಾ ಎಂಬುದರ ಹೊರಗಡೆ ಯುದ್ಧವು ನಡೆಯುತ್ತಿರುವಾಗಲೇ ದೊಡ್ಡ ಮುತ್ತಿಗೆಗೆ ಬೇಕಾದ ಸಂಗ್ರಾಮನೌಕೆಗಳನ್ನೂ, ಸೈನ್ಯಗಳನ್ನು ಸಾಗಿಸುವ ನೌಕೆಗಳನ್ನೂ, ವಿಮಾನಗಳನ್ನು ಹೊರುವ ನೌಕೆಗಳನ್ನೂ ಫಾರ್ಮೋಸಾ ದ್ವೀಪದಲ್ಲಿ ಶೇಖರಿಸುತ್ತಿದ್ದಾರೆಂದೂ, ಚೆಕಿಯಾಂಗ್ ಪ್ರಾಂತದಲ್ಲಿ ಜಪಾನರು 1 ಲಕ್ಷ ಯೋಧರನ್ನು ಸೇರಿಸಿ ಯುದ್ಧ ನಡೆಸುತ್ತಿದ್ದರೂ ಇನ್ನೂ ಅದರ ರಾಜಧಾನಿಯನ್ನು ಹಿಡಿಯಲಾಗಿಲ್ಲವೆಂದೂ ಹೇಳಲಾಗಿದೆ.

ಆಸ್ಟ್ರೇಲಿಯದಲ್ಲಿ ಗೂಢಚಾರರ ದಸ್ತಗಿರಿ

ಪ್ರಮುಖ ಆಸ್ಟ್ರೇಲಿಯನ್ನರನ್ನು ಕೊಲೆಮಾಡಿ ಮುಖ್ಯ ಮುಖ್ಯ ಸ್ಥಳಗಳನ್ನು ಸ್ಫೋಟಕ ವಸ್ತುಗಳಿಂದ ನಾಶಮಾಡಿ ಜಪಾನ್ ಸೈನ್ಯಗಳು ಆಸ್ಟ್ರೇಲಿಯದಲ್ಲಿ ಬಂದಿಳಿದಾಗ ಅವರೊಡನೆ ಸೇರಿಕೊಳ್ಳಬೇಕೆಂದು ನಡೆದಿದ್ದ ಯೋಚನೆಯೊಂದನ್ನು ಸಿದ್ಧ ಅಧಿಕಾರಿಗಳು ಪತ್ತೆ ಹಚ್ಚಿದರು ಈಸಂಬಂಧವಾಗಿ 19 ಜನ ಪುರುಷರನ್ನೂ ಒಬ್ಬ ಹೆಂಗಸನ್ನೂ ದಸ್ತಗಿರಿ ಮಾಡಲಾಗಿದೆಯೆಂದು ತಿಳಿದುಬರುತ್ತದೆ.

ಇಂಡಿಯಾದ ಪರಿಸ್ಥಿತಿ

ಬ್ರಿಟನ್ನಿನಿಂದ ಎಲ್ಲಾ ವಿಧವಾದ ಯುದ್ಧೋಪಕರಣಗಳಲ್ಲದೆ ವಿಮಾನ ನಿರೋಧಕ ಫಿರಂಗಿ ಪಡೆಗಳು ಸಹ ಅನೇಕಾನೇಕವಾಗಿ ಇಂಡಿಯಾಕ್ಕೆಬಂದಿವೆ. ನಮ್ಮ ಎರಡು ಮುಖ್ಯ ಪ್ರದೇಶಗಳಾದ ಸಿಲೋನ್ ಮತ್ತು ಕಲ್ಕತ್ತಾದಲ್ಲಿ ಹೆಚ್ಚಾಗಿ ವಿಮಾನ ರಕ್ಷಣ ಬಲವನ್ನು ಸಿದ್ಧಪಡಿಸಲಾಗಿದೆ ಹಿಂದುಸ್ಥಾನದ ರಕ್ಷಣ ಬಲವು ದಿನದಿನಕ್ಕೂ ಪುಷ್ಟಿಗೊಳ್ಳುತ್ತಿದೆ ಈ ಏರ್ಪಾಡಿನಿಂದ ಮಾತ್ರವೇ ನಾವು ತೃಪ್ತರಾಗಿಲ್ಲ ಹಿಂದುಸ್ಥಾನಕ್ಕೆ ಶತ್ರುವಿನ ಭೀತಿ ಇದ್ದೇ ಇದೆ ಆದಕ್ಕಾಗಿ ನಮ್ಮ ರಕ್ಷಣ ಬಲವನ್ನು ಮತ್ತಷ್ಟು ಬಲಗೊಳಿಸಲು ನಾವು ನಿರಂತರವಾಗಿ ಪ್ರಯತ್ನಪಡುತ್ತಿದ್ದೇವೆ." ಎಂದು ಭಾರತದ ದಂಡನಾಯಕರು ಹೇಳಿರುವರು

ಜಪಾನರ ಮತ್ತು ನಾಜಿಗಳ ಹೊಸಶಸ್ತ್ರ

ಜಪಾನರು ರಾಬೂಲಿನ ಮೇಲೂ ಲೀ ಪ್ರದೇಶದ ಮೇಲೂ ತಮ್ಮ ನೂತನ ಅಸ್ತ್ರವೊಂದನ್ನು ಪ್ರಯೋಗಿಸಿದ್ದಾರೆ ಇದು ಬುಗುರಿಯಾಕಾರವುಳ್ಳ ಬಾಂಬು. ಇದನ್ನು ಮೇಲ್ಗಡೆಯಿಂದ ಹಾಕಿದಾಗ ವಾಯುಮಂಡಲದಲ್ಲೇ ಇದು ಅತ್ಯಂತ ರಭಸದಿಂದ ಸಿಡಿದು ಹರಿತವಾದ ಲೋಹದ ತುಂಡುಗಳನ್ನು ದಿಕ್ಕುದಿಕ್ಕುಗಳಿಗೆ ಸಿಡಿಸುವುದೆಂದೂ ನೀಲಿವರ್ಣದ ಹೊಗೆಯನ್ನು ಹೊರಡಿಸುವದೆಂದೂ ಹೇಳುತ್ತಾರೆ ಜರ್ಮನರೂ ಸಹ ಕಾರ್ಕೋವ್ ರಣಾಂಗಣದಲ್ಲಿ ನೂತನ ಅಸ್ತ್ರವೊಂದನ್ನು ಉಪಯೋಗಿಸುತ್ತಿದ್ದಾರೆಂದು"ಹೇಳಲಾಗಿದೆ

ಜಪಾನರ ಹೊಸ ವಿಮಾನ

ಮಿತ್ರಪಕ್ಷದ ವಿಮಾನಗಳು ನ್ಯೂಗಿನಿಯದಲ್ಲಿ ದಾಳಿ ನಡೆಸುತ್ತಿರುವಾಗ ಅತ್ತ ಜಪಾನರ ಹೋರಾಟ ಅಷ್ಟಿಲ್ಲದಿರುವುದನ್ನು ನೋಡಿ ಬಹುಶಃ ಅವರು ಫೈಟರ್ ಮತ್ತು ಬಾಂಬರ್ ವಿಮಾನಗಳನ್ನು ಶೇಖರಿಸುತ್ತಿರಬಹುದೆಂದು ಹೇಳಲಾಗಿದೆ ಮುಂದಿನ ಕೆಲವು ವಾರಗಳೊಳಗೆ ಜಪಾನರು ಆಸ್ಟ್ರೇಲಿಯದಲ್ಲಿ ಅತ್ಯಂತ ಭಾರಿ ಆಕ್ರಮಣ ಕಾರ್ಯವನ್ನು ಆರಂಭಿಸಬಹುದೆಂದು ಊಹಿಸಲಾಗಿದೆ ಜಪಾನರು ಸೊನ್ನೆ ಮಾದರಿಯ ನೂತನ ವಿಧದ ವಿಮಾನಗಳನ್ನು ತಂದಿದ್ದಾರೆಂದು ವರದಿಯಾಗಿದೆ. ಈ ವಿಮಾನಗಳು ಬಹಳ ವೇಗವಾಗಿ ಓಡಬಲ್ಲವೆಂದೂ ಭಾರೀ ಫಿರಂಗಿಗಳಿಂದ ಕೂಡಿವೆಯೆಂದೂ, ಹಿಂದೆ ತಯಾರಾದ ವಿಮಾನಗಳಲ್ಲಿರದಿದ್ದ ಭಾರಿ ಯುದ್ಧೋಪಕರಣಗಳು ಇದರಲ್ಲಿವೆಯೆಂದೂ ಹೇಳಲಾಗಿದೆ.

ಹಿಟ್ಲರನು ಸೈನ್ಯಾಧಿಕಾರವನ್ನು ಬಿಡಬೇಕು

ಈಗ ಹಿಟ್ಲರನು ನಾಜಿಸೇನೆಯ ಸರ್ವ ಸೈನ್ಯಾಧಿಕಾರಿಯಾಗಿದ್ದಾನೆ. ಈ ಪಟ್ಟವನ್ನು ಬಿಟ್ಟುಕೊಡಬೇಕೆಂದು ಇತರ ಸೈನ್ಯಾಧಿಕಾರಿಗಳು ಆತನನ್ನು ಕೇಳುತ್ತಿದ್ದಾರೆಂದು ಸುದ್ದಿಯಿದೆ. ಇದಕ್ಕಾಗಿ ಹಿಟ್ಲರನು ಆತುರವಾಗಿ ತನ್ನ ಸೇನೆಯ ಮುಖ್ಯ ಕಚೇರಿಗೆ ಬರ್ಲಿನ್ನಿನಿಂದ ತೆರಳಿದನು. ಮಹಾದಂಡನಾಯಕನ ಅಧಿಕಾರವನ್ನು ತಾನೇ ಇಟ್ಟುಕೊಳ್ಳುವದಾಗಿಯೂ, ತನ್ನ ಮಾತಿಗೆ ಪ್ರತಿಹೇಳುವದನ್ನು ತಾನು ಸಹಿಸುವುದಿಲ್ಲವೆಂದೂ, ಸೈನ್ಯಾಧಿಕಾರಿಗಳಿಗೆ ತಿಳಿಸಲು ಆತನು ಹೊರಟಿದ್ದಾನೆ.

ಕಿನ್ವಾ ನಗರದ ಮುತ್ತಿಗೆ ಸಫಲವಾಗಲಿಲ್ಲ.

೧ ಲಕ್ಷ ಮಂದಿ ಜಪಾನರು ಕಿನ್ವಾ ನಗರಕ್ಕೆ ನುಗ್ಗಲು ನಡೆಸಿದ ಹೊಸ ಪ್ರಯತ್ನವನ್ನು ಚೀನಾ ಸೇನೆಯು ನಿರರ್ಥಕಗೊಳಿಸಿತು. ಜಪಾನರು ಅಲೆ ಅಲೆಯಾಗಿ ಒಂದು ನಗರವನ್ನು ಮುತ್ತಿದರು. ಆದರೂ ವಿಶೇಷ ನಷ್ಟವನ್ನು ಅನುಭವಿಸಬೇಕಾಯಿತು. ಜಪಾನರು ಮುಂದುವರಿದಂತೆಲ್ಲ ನೆಲದೊಳಗೆ ಇಟ್ಟಿದ್ದ ಸ್ಫೋಟಕ ವಸ್ತುಗಳು ೧೫೦೦ ಜನರನ್ನು ಕೊಂದವು

ಶತ್ರುಗಳಲ್ಲಿ ಭಯೋತ್ಪಾದನ ಪ್ರಯತ್ನ

ಮೊದಲನೆಯ ವಾರದಲ್ಲಿ ಜರ್ಮನರ ಟ್ಯಾಂಕುಗಳು ವಿಶೇಷವಾಗಿ ನಷ್ಟವಾದುದರಿಂದ ಅವುಗಳನ್ನು ವಿಶೇಷ ಪ್ರಮಾಣದಲ್ಲಿ ಉಪಯೋಗಿಸುವದನ್ನು ಸ್ವಲ್ಪಕಾಲ ಬಿಟ್ಟಿದ್ದರು. ಆದರೆ ದಕ್ಷಿಣ ರಣಾಂಗಣದಿಂದ ವಿಶೇಷ ಟ್ಯಾಂಕ್ ಸೈನ್ಯದ ಸಹಾಯ ಬಂದದ್ದರಿಂದ ಅವರು ಪುನಃ ಟ್ಯಾಂಕ್ ಕದನವನ್ನಾರಂಭಿಸಿದ್ದಾರೆ ಈ ಟ್ಯಾಂಕುಗಳಿಗೆಲ್ಲಾ ಕಪ್ಪು ಬಣ್ಣವನ್ನು ಬಳಿದಿದ್ದಾರೆ. ಅಲ್ಲದೆ ಹಿಂದಿನ ಬೇಸಿಗೆಯಲ್ಲಿ ಮಾಡಿದಂತೆ ಶತ್ರು ಸೈನ್ಯದಲ್ಲಿ ಭೀತಿಹುಟ್ಟಿಸುವ ಹಂಚಿಕೆಗಳನ್ನು ಮಾಡಿದ್ದಾರೆ.

ಅಲ್ಬೇನಿಯಾ ರಾಜಧಾನಿಯಲ್ಲಿ ಉಗ್ರ ಪರಿಸ್ಥಿತಿ

ಅಲ್ಬೇನಿಯಾ ದೇಶದ ರಾಜಧಾನಿಯಾದ ಟಿರಾನಾ ಲ್ಲಿರುವ ಇಟಲಿ ಕೈಗೊಂಬೆ ಸರಕಾರದ ಮುಖ್ಯಾಧಿ ರಿಯನ್ನು ಕೊಲೆಮಾಡಲು ಪ್ರಯತ್ನ ನಡೆಸಿದುದರಿಂದ ಅಲ್ಲಿ ಉಗ್ರಪರಿಸ್ಥಿತಿಯು ಉಂಟಾಗಿದೆಯೆಂದು ಸಾರಲಾಗಿದೆ ಕರ್ಫ್ಯೂ, ಆಜ್ಞೆಯನ್ನು ಆಚರಣೆಗೆ ತರಲಾಗಿದೆ ಐದುಮಂದಿಗಿಂತ ಹೆಚ್ಚಾಗಿ ಸಾರ್ವಜನಿಕ ಸ್ಥಳದಲ್ಲಿ ಸೇರಲಾಗದೆಂದು ನಿಷೇಧಿಸಲಾಗಿದೆ

ಹೇಡ್ರಿಚ್‌ರವರ ಕೊಲೆಯ ಪ್ರಯತ್ನ !

ಜರ್ಮನರು ಆಕ್ರಮಿಸಿರುವ ದೇಶಗಳಲ್ಲಿರುವ ಜರ್ಮನ್ ಗುಪ್ತಚಾರರ ನಾಯಕರಾದ ಹೇಡ್ರಿಚ್‌ರವರನ್ನು ಕೊಲೆ ಮಾಡುವ ಪ್ರಯತ್ನವು ಪ್ರೇಗ್ ನಗರದಲ್ಲಿ ನಡೆಯಿತು ಈ ಪ್ರಯತ್ನ ಮಾಡಿದವರನ್ನು ಹಿಡಿದುಕೊಟ್ಟವರಿಗೆ ೧೦ ಮಿಲಿಯನ್ ಕ್ರೌನುಗಳನ್ನು ಬಹುಮಾನವಾಗಿ ಕೊಡಲಾಗುವುದೆಂದು ಪ್ರಕಟಿಸಲಾಗಿದೆ ಜೆಕೊಸ್ಲೊವೇಕಿಯದಲ್ಲೆಲ್ಲ ಉಗ್ರವಾದ ಪರಿಸ್ಥಿತಿಯುಂಟಾಗಿದೆಯೆಂದು ನಾಜಿಗಳು ಸಾರಿದ್ದಾರೆ. ಹೆಡ್ರಿಚ್‌ರವರ ಹಂತಕರಿಗೆ ಸಹಾಯ ಮಾಡಿದವರನ್ನು ಅವರ ಕುಟುಂಬದವರೊಂದಿಗೆ ಗುಂಡಿನ ಬಾಯಿಗೆ ಕಟ್ಟಲಾಗುವುದೆಂದು ತಿಳಿಸಲಾಗಿದೆ. ಪ್ರೇಗಿನಿಂದ ಬರ್ಲಿನ್ನಿಗೆ ಹೋಗುವ ರಸ್ತೆಯಲ್ಲಿ ಈ ಘಟನೆಯು ನಡೆಯಿತು. ಹೆಡ್ರಿಚ್‌ರವರು ಬುಧವಾರ ಮಧ್ಯಾಹ್ನ ೧ ಘಂಟೆ ಸಮಯದಲ್ಲಿ ಪ್ರೇಗ್‌ನಿಂದ ಬರ್ಲಿನ್ನಿಗೆ ಕಾರಿನಲ್ಲಿ ಹೋಗುತ್ತಿದ್ದಾಗ ಕೊಲೆಯ ಪ್ರಯತ್ನವು ನಡೆಯಿತು.

ಲಿಬಿಯಾದಲ್ಲಿ ಉಗ್ರಯುದ್ಧ

ಲಿಬಿಯಾದಲ್ಲಿ ಜರ್ಮನರು ಭಾರಿ ಮುತ್ತಿಗೆಯನ್ನು ರಂಭಿಸಿದ್ದಾರೆಂದೂ, ಬ್ರಿಟಿಷರ ಎಡಭಾಗದ ಸೇನೆಗಳಿಗೆ ದರಿಂದ ವಿಪತ್ತು ಸಂಭವಿಸಿದೆಯೆಂದೂ ಪ್ರಕಟವಾ 27ನೇ ತಾರೀಖಿನ ದಿವಸ ಲಿಬಿಯಾದಲ್ಲಿ ಆರಂಭ ದ ಶಸ್ತ್ರಬಂಡಿಗಳ ಕದನವು ದಿನವೆಲ್ಲ ನಡೆಯಿತು. ತ್ರು ಬಲವು ಎರಡು ಮುಖ್ಯ ಪಡೆಗಳಾಗಿ ವಿಂಗಡಿಸ ಟ್ಟಿದೆ ಬೀರ್‌ಹಕೀಂ ನಗರದ ಈಶಾನ್ಯದಲ್ಲಿ ಬ್ರಿಟಿಷ್ ಬಂಡಿಗಳ ಪಡೆಗಳು ಶತ್ರು ಸೇನೆಗಳನ್ನು ಎದುರಿಸಿ . ವಿಶಾಲ ಕ್ಷೇತ್ರದಲ್ಲಿ ಹೋರಾಟ ನಡೆದಿರುವುದ ದ ಅದರ ಫಲಿತಾಂಶವನ್ನು ಗೊತ್ತುಹಚ್ಚಲು ಸಾಧ್ಯ . ಬೀರ್‌ಹಕೀಂ ನಗರದ ಮೇಲೆ ಶತ್ರು ಪಡೆಗಳು ದಾಗ ಅವುಗಳನ್ನು ನಷ್ಟದೊಂದಿಗೆ ಹಿಮ್ಮೆಟ್ಟಿಸಲಾ ಘಜಾಲಾ ದಕ್ಷಿಣದಲ್ಲಿ ಶತ್ರುಗಳ ಟ್ಯಾಂಕುಗಳು ಬ್ರಿಟಿಷ್ ಸ್ಥಾನಗಳ ಮೇಲೆ ಬಿದ್ದವು. ಅವುಗಳಿಗೆ ನಷ್ಟವಾಯಿತು. ಬ್ರಿಟಿಷ್ ವಿಮಾನ ಪಡೆಯು ವಿಶೇಷ ಚಟುವಟಿಕೆ ತೋರಿಸುತ್ತ ಭೂಸೇನೆಗೆ ಬೆಂಬಲ ಕೊಟ್ಟಿತು. ಜರ್ಮನರಿಗೆ ಹೆಚ್ಚಿನ ಸೇನೆಗಳು ಬಂದಿವೆಯೆಂದು ತಿಳಿದುಬಂದಿದೆ ಮಧ್ಯಪೂರ್ವದಿಂದ ಬೇರೆಕಡೆಗೆ ಸೇನೆಗಳನ್ನು ಕಳಿಸಿದರೂ ಈಗ ಅಲ್ಲಿಯ ಬ್ರಿಟಿಷ್ ಸೇನೆಯು ಪೂರ್ಣ ಬಲಯುತವಾಗಿದೆ ಎಂದು ಹೇಳಲಾಗಿದೆ

ಲವಾಲರಿಗೆ ಹಿಟ್ಲರನ ಒತ್ತಾಯ

ಫ್ರೆಂಚರಿಗೆ ಸೇರಿದ್ದ ಮಡಗಾಸ್ಕರ್ ದ್ವೀಪವನ್ನು ಬ್ರಿಟಿಷರು ಆಕ್ರಮಿಸಿಕೊಂಡರು ಮಾರ್ಟಿನಿಕ್ ದ್ವೀಪವನ್ನು ಅಮೇರಿಕನ್ನರು ಆಕ್ರಮಿಸುವುದರಲ್ಲಿದ್ದಾರೆ ಇದಕ್ಕೆ ಪ್ರತಿಯಾಗಿ ಟೂನಿಸ್ ಪ್ರಾಂತ್ಯವನ್ನು ಆಕ್ಸಿಸ್ ರಾಷ್ಟ್ರಗಳು ಆಕ್ರಮಿಸಲು ಅವಕಾಶ ಕೊಡಬೇಕೆಂದು ಹಿಟ್ಲರನು ಲವಾಲರನ್ನು ಬಲವಂತಪಡಿಸುತ್ತಿದ್ದಾನೆ. ಇದಕ್ಕೆ ಒಪ್ಪಿಗೆಕೊಟ್ಟರೆ, ಇಡೀ ಫ್ರಾನ್ಸಿನಲ್ಲಿ ತಮ್ಮ ವಿಚಾರವಾಗಿ ಕೋಪವು ಮಿತಿಮೀರುವದೆಂದು ಲವಾಲರು ಹೆದರುತ್ತಿದ್ದಾರೆ. ಎಂ. ಲವಾಲರು ಒಪ್ಪದೆ ಹೋದರೆ ಬಲವಂತವಾಗಿ ಟ್ಯೂನಿಸ್ ಹಿಡಿಯುವೆನೆಂದು ಹಿಟ್ಲರನು ಹೆದರಿಸುತ್ತಿದ್ದಾನೆ

ಆಸ್ಟ್ರೇಲಿಯವು ಪೂರ್ವದೇಶಗಳೊಡನೆ ಸೇರಬೇಕು

ಜಪಾನ್ ಚಕ್ರವರ್ತಿಗಳು ಟೋಕ್ಯೋದ ಪಾರ್ಲಿಮೆಂಟ್ ಸಭೆಯ ಪ್ರಾರಂಭೋತ್ಸವವನ್ನು ನಡೆಸಿದ ಕಾಲದಲ್ಲಿ ಮಹಾಪ್ರಧಾನರಾದ ಜ॥ ಟೋಜೋರವರು, ಭಾಷಣ ಮಾಡುತ್ತ “ಆಸ್ಟ್ರೇಲಿಯಾದೇಶವು ತನ್ನ ಈಗಿನ ವರ್ತನೆಯನ್ನು ಪುನರ್ವಿಮರ್ಶೆಮಾಡಬೇಕು ಮತ್ತು ಮಹಾಪೂರ್ವಏಷ್ಯಾವನ್ನು ಸೃಷ್ಟಿಸುವ ಕಾರ್ಯದಲ್ಲಿ ಭಾಗವಹಿಸಬೇಕು” ಎಂದು ಎಚ್ಚರಿಸಿದರು ತಮ್ಮ ಭಾಷಣವನ್ನು ಮುಂದುವರಿಸುತ್ತ “ಜಪಾನಿನ ರಕ್ಷಣೆ ಏರ್ಪಾಡು ಅಚ್ಚಳಿಯದೆ ಇವೆ ಅಮೇರಿಕ ಮತ್ತು ಬ್ರಿಟನ್ನುಗಳ ಮೇಲೆ ಜಪಾನು ಇನ್ನು ಮುಂದೆ ಯುದ್ಧ ಮಾಡಬೇಕಾಗಿದೆ. ರಷ್ಯಾ ಜಪಾನಿನ ಬಾಂಧವ್ಯವೇನೂ ಕೆಟ್ಟಿಲ್ಲ” ಎಂದು ತಿಳಿಸಿದರು

ಜ॥ ಅಲೆಗ್ಝಾಂಡರ್‌ರವರ ಸಂದೇಶ

ಬರ್ಮಾ ಸೇನೆಯ ದಂಡನಾಯಕರಾದ ಜ॥ ಅಲೆಗ್ಝಾಂಡರ್‌ರವರು ಈ ರೀತಿ ಸಂದೇಶವನ್ನು ಕಳಿಸಿದ್ದಾರೆ. ಬರ್ಮಾ ಸೇನೆಯನ್ನು ಹಿಂದಕ್ಕೆ ಕರೆಸಿದುದರಿಂದ ಆ ದೇಶದಲ್ಲಿ ನಾನು ವಹಿಸಿದ್ದ ದಂಡನಾಯಕ ಪಟ್ಟವು ಕೊನೆಗಂಡಿತು. ನಾವು ಅನಿವಾರ್ಯವಾಗಿ ಹಿಂದಕ್ಕೆ ಬರಬೇಕಾದರೂ ಸಹ ಬ್ರಿಟಿಷ್ ಸಾಮ್ರಾಜ್ಯದ ಸಂಗ್ರಾಮ ಪ್ರಯತ್ನದಲ್ಲಿ ಸೈನಿಕರು ತೋರಿಸಿದ ಸಾಹಸಕ್ಕಾಗಿ ಹೆಮ್ಮೆಪಡಬೇಕಾಗಿದೆ. ರಂಗೂನು ಬಿದ್ದ ಕಾಲದಿಂದ ನಾವು ಚೀನಾ ಯೋಧರೊಂದಿಗೆ ಸಹಕರಿಸಿ, ಶತ್ರುಗಳ ಓಟವನ್ನು ಆದಷ್ಟು ಸಾವಕಾಶ ಮಾಡುವದರಲ್ಲಿಯೂ ಮತ್ತು ಅವರ ಸಂಗ್ರಾಮ ಸಲಕರಣೆಗಳನ್ನು ಕಳೆದುಕೊಳ್ಳದಂತೆಯೂ ಮಾಡುವ ಕಾರ್ಯವನ್ನು ಹೊತ್ತಿದ್ದೆವು ಈ ಕಾರ್ಯವನ್ನು ನಾವು ಕೇವಲ ಅಲ್ಪ ವಿಮಾನ ಸಹಾಯದೊಂದಿಗೆ ನಡೆಸಿದೆವು ಸೇನೆಗಳಿಗೆ ಸಾಮಾನು ಒದಗಿಸಲು ಸುವ್ಯವಸ್ಥಿತವಾದ ಮಾರ್ಗಸೌಕರ್ಯವಿರಲಿಲ್ಲ, ರಣರಂಗದಲ್ಲಿ ಹೋರಾಡುತ್ತಿರುವ ಸೈನಿಕರಿಗೆ ವಿಶ್ರಾಂತಿಯ ಅವಕಾಶವೇ ಇರಲಿಲ್ಲ ಹೋರಾಟವು ಬಹು ಉಗ್ರವಾಗಿತ್ತು ಆದರೂ ಶತ್ರುಗಳು ಮಳೆಗಾಲಕ್ಕೆ ಮುಂಚೆ ಭಾರತದ ಕಡೆಗೆ ಬಾರದಂತೆ ತಡೆಯಲು ನಾವು ಶಕ್ತರಾದೆವು. ನಮ್ಮ ಸೇನೆಗಳು ಸ್ವಲ್ಪವೂ ಕುಗ್ಗದೆ ಹಿಂತಿರುಗಿವೆ. ಸೈನಿಕರ ಶೌರ್ಯ ಪ್ರತಾಪಗಳೂ ಮತ್ತು ನಾನಾ ಸೈನ್ಯ ಅಧಿಕಾರಿಗಳ ದೃಢಸಂಕಲ್ಪವೂ ಇದಕ್ಕೆ ಕಾರಣವಾಗಿರಬೇಕು ಮತ್ತೆ ಶತ್ರುಗಳನ್ನು ಎದುರಿಸಲು ಶಕ್ತಸಿದ್ಧತೆಗಳನ್ನು ಈಗ ಮಾಡಿಕೊಳ್ಳಬೇಕಾದುದು ಬೇರೆಬೇರೆ ಪಡೆಗಳ ಕರ್ತವ್ಯವಾಗಿದೆ. ಕಟ್ಟಕಡೆಗೆ ಬ್ರಿಟಿಷ್ ಶಸ್ತ್ರಕ್ಕೆ ವಿಜಯವಾಗುವದೆಂಬ ದೃಢಸಂಕಲ್ಪದಿಂದ ನಾವು ಮುಂದುವರಿಯಬೇಕಾಗಿದೆ.

ಜನರಲ್ ವೇವೆಲ್‌ರವರ ಹೇಳಿಕೆ

“ಬರ್ಮಾದಲ್ಲಿ ವಿಶೇಷ ಶೌರ್ಯದಿಂದ ಕಾದಿದ ಜನರಲ್ ಅಲೆಗ್ಝಾಂಡರ್‌ರವರ ಸೇನೆಗಳು ಈಗ ಬರ್ಮಾ ಗಡಿಯನ್ನು ದಾಟಿ ಭಾರತಕ್ಕೆ ಬಂದಿವೆಯೆಂದೂ, ಜಪಾನರೇನಾದರೂ ಈಗ ಭಾರತದ ಕಡೆಗೆ ನುಗ್ಗಿದರೆ ಅವರನ್ನು ತಡೆಯುವುದು ಭಾರತದ ಪೂರ್ವ ಸೇನೆಯ ಜವಾಬ್ದಾರಿಯೆಂದೂ, ಅಸ್ಸಾಮಿನ ಪರ್ವತ ಪ್ರದೇಶಗಳಲ್ಲಿ ಸೈನಿಕರು ಸಿದ್ಧವಾಗಿ ನಿಂತಿದ್ದಾರೆಂದೂ, ಕಳೆದ ಕೆಲವು ವಾರಗಳಲ್ಲಿ ಜನರಲ್ ಅಲೆಗ್ಝಾಂಡರ್‌ರವರ ಸೇನೆಯನ್ನು ಹಿಂದಕ್ಕೆ ಕರೆಸಲಾಯಿತೆಂದೂ, ಆಹಾರ ವಸ್ತುಗಳ ಮತ್ತು ಸಂಗ್ರಾಮವಸ್ತುಗಳ ಸರಬರಾಜಿಗೆ ಅನನುಕೂಲವಾದುದರಿಂದ ಸಾವಾಗಿ ಹಿಂದೆ ಬರಬೇಕಾಯಿತೆಂದೂ, ಶ್ವೆಬೋ ನಗರದ ದಕ್ಷಿಣದಲ್ಲಿ ನಮ್ಮ ಸೇನೆಗಳು ಶತ್ರುಗಳಿಂದ ಸುತ್ತುವರಿಯಲ್ಪಡುವ ಸ್ಥಿತಿಯಲ್ಲಿದ್ದುವೆಂದೂ, ಅಲ್ಲಿಂದ ಪಾರಾದ ಮೇಲೆ ನಮಗೆ ತಪ್ಪದೆ ವಸ್ತುಗಳು ದೊರೆಯುವ ಭರವಸೆಯಿದ್ದಿದ್ದರೆ ನಾವು ಖಂಡಿತವಾಗಿಯೂ ಶತ್ರುಗಳನ್ನು ಎದುರಿಸಬಹುದಾಗಿತ್ತೆಂದೂ, ಈಗ ಮಳೆಗಾಲವು ಆರಂಭಿಸಿರುವುದರಿಂದ ಭಾರತದಿಂದ ಬರ್ಮಾಕ್ಕೆ ಸಾಮಾನುಗಳು ಬರುವುದು ಕಷ್ಟವಾಯಿತೆಂದೂ, ಭಾರತದಿಂದ ಬರ್ಮಾಕ್ಕೆ ರಸ್ತೆಯನ್ನು ಸರಿಪಡಿಸಿ, ಮಳೆಗಾಲದಲ್ಲಿ ಜಗ್ಗದಂತೆ ಮಾಡುವ ಕಾರ್ಯವು ಆರಂಭವಾಗಿತ್ತೆಂದೂ, ಆದರೆ ಅದನ್ನು ಮುಗಿಸಲು ಆಗಲಿಲ್ಲವೆಂದೂ ಆದ್ದರಿಂದ ಬರ್ಮಾಕ್ಕೆ ಹೆಚ್ಚಿನ ಸೇನೆಯನ್ನು ಕಳಿಸಿ ರಣರಂಗದಲ್ಲಿ ಹೋರಾಡುತ್ತಿರುವವರಿಗೆ ವಿಶ್ರಾಂತಿ ಕೊಡಲೋಸುಗ ಹೊಸಬರನ್ನು ಕಳಿಸಲಿಕ್ಕೂ ಸಾಧ್ಯವಾಗಲಿಲ್ಲವೆಂದೂ, ಆದ್ದರಿಂದ ನಾವು ಬರ್ಮಾದಲ್ಲಿದ್ದ ಸೇನೆಯನ್ನು ಹಿಂದಕ್ಕೆ ಕರೆಸಲು ನಿರ್ಧರಿಸಿದೆವೆಂದೂ, ಈ ಸೇನೆಯೀಗ ಭಾರತದ ಗಡಿಯೊಳಗೆ ಬಂದಿದೆಯೆಂದೂ” ಬರ್ಮಾದಲ್ಲಿ ಮಳೆಗಾಲವೇನಾದರೂ ಆರಂಭವಾಗಿದ್ದಿದ್ದರೆ ಬರ್ಮಾದೊಳಗಿರುವ ಹಲವು ರಸ್ತೆಗಳಲ್ಲ ಸಂಚರಿಸಲು ಆಗುತ್ತಲೇ ಇರಲಿಲ್ಲ. ಸೇನೆಗಳಲ್ಲಿ ಸ್ವಲ್ಪವೂ ಕಷ್ಟವಿಲ್ಲದೆ ಹಿಂತಿರುಗಿದವು. ಆಹಾರಕ್ಕೇನೂ ಕೊರತೆಯಿರಲಿಲ್ಲ. ನಮ್ಮ ಸೈನಿಕರು ಹಲವು ತಿಂಗಳಿಂದ ಅಪೂರ್ವ ರೀತಿಯಲ್ಲಿ ಹೋರಾಡಿದರು ಅವರಿಗೆ ವಿಶ್ರಾಂತಿಯೆಂಬುದೇ ಇರಲಿಲ್ಲ. ಹೊಸಸೈನ್ಯ ಸಹಾಯವೂ ಬರಲಿಲ್ಲ. ಆದ್ದರಿಂದ ಅವರು ಈಗ ವಿಶ್ರಾಂತಿ ಹೊಂದಿ ಶಕ್ತಿಗಳಿಸಲು ಅರ್ಹರಾಗಿದ್ದಾರೆ ಅವರು ಭಾರತಕ್ಕೆ ಉಂಟಾಗಬಹುದಾಗಿದ್ದ ವಿಪತ್ತನ್ನು ತಪ್ಪಿಸಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು ನಾವು ಸಿದ್ಧರಾಗುವುದರೊಳಗಾಗಿ ಶತ್ರುಗಳು ನೇರವಾಗಿ ನಮಗೆ ಏಟುಹಾಕುವಂತಹ ಸಂಭವ ಒದಗಿತ್ತು ನಮಗೆ ಬರ್ಮಾದಲ್ಲಿ ಆದ ನಷ್ಟವನ್ನು ಕುರಿತು ನಾನು ವಿವರವನ್ನು ಕೊಡಲಾರೆ. ಆದರೆ ಭಾರತದಿಂದ ಬರ್ಮಾಕ್ಕೆ ಕಳಿಸಲ್ಪಟ್ಟ ಬ್ರಿಟಿಷ್ ಮತ್ತು ಭಾರತೀಯ ಸೈನಿಕರಲ್ಲಿ ಐದನೇನಾಲ್ಕರಷ್ಟು ಮಂದಿಗಿಂತ ಹೆಚ್ಚು ಜನರು ಹಿಂದಿರುಗಿದ್ದಾರೆಂದು ಹೇಳಬಹುದಾಗಿದೆ ಗಾಯಗೊಂಡ ಮತ್ತು ರೋಗಗ್ರಸ್ತರಾದ ಎಲ್ಲ ಸೈನಿಕರನ್ನೂ ನಾವು ವಿಮಾನ ಮತ್ತು ಭೂಮಾರ್ಗದ ಮೂಲಕ ಭಾರತಕ್ಕೆ ಸಾಗಿಸಿದೆವು

ನಾವು ಬರ್ಮಾದಲ್ಲಿ ಅನೇಕ ಕಾರುಗಳನ್ನೂ, ಟ್ಯಾಂಕುಗಳನ್ನೂ ಬಿಟ್ಟು ಬರಬೇಕಾಯಿತು. ಅದಕ್ಕೆ ಶತ್ರುಗಳ ಒತ್ತಾಯವು ಜೋರಾದುದು ಕಾರಣವಲ್ಲ. ಚಿಂದ್‌ವಿನ್ ನದಿಯಲ್ಲಿ ಇದ್ದಕ್ಕಿದ್ದಹಾಗೆಯೇ ಪ್ರವಾಹ ಬಂದುದರಿಂದಲೂ ಹಡಗೋಲುಗಳ ಮೂಲಕ ಭಾರವಾದ ಸಾಮಗ್ರಿಗಳನ್ನು ಸಾಗಿಸುವುದು ಕಷ್ಟವಾದುದರಿಂದಲೂ ಹಾಗೆ ಮಾಡಬೇಕಾಯಿತು. ಟ್ಯಾಂಕುಗಳು ಉಪಯೋಗಕ್ಕೆ ಬಾರದ ಸ್ಥಿತಿಯಲ್ಲಿವೆ. ಅವುಗಳ ಶಕ್ತಿಗೆ ಮೀರಿ ಕೆಲಸ ತೆಗೆದಿದ್ದೇವೆ. ಮಧ್ಯಪೂರ್ವದಲ್ಲಿ ಬಹಳ ಕಾಲ ಹೋರಾಡಿದ ಮೇಲೆ ಈ ಟ್ಯಾಂಕುಗಳನ್ನು ಬರ್ಮಾಕ್ಕೆ ಕಳಿಸಲಾಗಿತ್ತು. ಅವುಗಳು ಹಿಂದಕ್ಕೆ ತರುವಷ್ಟು ಉತ್ತಮಸ್ಥಿತಿಯಲ್ಲಿರಲಿಲ್ಲ. ಬರ್ಮಾದಲ್ಲಿ ಅಪೂರ್ವ ರೀತಿಯಲ್ಲಿ ಹೋರಾಡಿದ ಶಸ್ತ್ರಬಂಡಿಗಳ ಪಡೆಯು ಈಗ ಭಾರತಕ್ಕೆ ಬಂದಿದೆ. ಅದಕ್ಕೆ ಹೊಸ ಟ್ಯಾಂಕುಗಳನ್ನೂ ಶಸ್ತ್ರಬಂಡಿಗಳನ್ನೂ ಒದಗಿಸಲಾಗುವುದು” ಎಂದುಹೇಳಿದರು.

[೩ನೆಯ ಪುಟದಿಂದ ಮುಂದುವರಿದುದು.]

ನೋಡಿ ಒಬ್ಬ ಭಕ್ತನು ಪ್ರಾರ್ಥಿಸಿಕೊಂಡಿರುವದೇನೆಂದರೆ —

“ ಮಜ್ಜನ್ಮನಃ ಫಲಮಿದಂ ಮಧುಕೈಟಭಾರೇ |
ಮತ್ಪ್ರಾರ್ಥನೀಯಮದನುಗ್ರಹ ಏಷ ಏವ ||
ತ್ವದ್ಭೃತ್ಯಭೃತ್ಯಪರಿಚಾರಕಭೃತ್ಯ ಭೃತ್ಯ ||
ಭೃತ್ಯಸ್ಯ ಭೃತ್ಯ ಇತಿ ಮಾಂ ಸ್ಮರ ಲೋಕನಾಥ || ”

ಎಂದರೆ ಹೇ ದೇವಾ, ನಾನು ಈ ಸಲ ಹುಟ್ಟಿದಕ್ಕೆ ನಿನ್ನನ್ನು ಬೇಡಿಕೊಳ್ಳುವದಿದೊಂದೇ ಏನೆಂದರೆ ನನ್ನನ್ನು ನಿನ್ನ ಸೇವಕರ ಸೇವಕರ ಸೇವಕರ ಸೇವಕರ ಸೇವಕನೆಂದು ತಿಳಿ

ಸಖ್ಯ

ದಾಸ್ಯದಲ್ಲಿ ಸ್ವಾಮಿಗೂ ದಾಸನಿಗೂ ಅಂತರವಿರುತ್ತದೆ ಆ ಅಂತರವನ್ನು ಕೂಡ ಕಡಿಮೆಮಾಡಿ ಸ್ವಾಮಿಯ ಮೇಲಿನ ಪ್ರೇಮವನ್ನು ಬೆಳೆಸುವದೇ ಸಖ್ಯಭಕ್ತಿ

“ ಸಮಾನಶೀಲವ್ಯಸನೇಷು ಸಖ್ಯಮ್ |

ಎಂಬ ವಾಕ್ಯದಂತೆ ಒಂದೇ ಬಗೆಯ ಶೀಲದವರಿಗೆ ಸಖ್ಯವು ಕೂಡುವುದು ನಾವು ಪರಮಾತ್ಮನೊಡನೆ ಸಖ್ಯಭಕ್ತಿಯನ್ನು ಮಾಡಬೇಕಾದರೆ ಪರಮಾತ್ಮನ ಶೀಲವನ್ನು ನಮ್ಮ ಅನುಷ್ಠಾನದಲ್ಲಿ ತಂದುಕೊಳ್ಳಬೇಕು ಸಖ್ಯಭಕ್ತಿಯ ವಿಷಯದಲ್ಲಿ ಅನೇಕ ವಿವರಗಳುಂಟು ಅವುಗಳಲ್ಲಿ ಕೆಲವನ್ನು ವಿವರಿಸುವೆನು ದೇವರಿಗೆ ಪ್ರೀತಿಯಾಗುವ ರೀತಿಯಲ್ಲಿ ನಡೆಯಬೇಕು, ದೇವರಿಗೆ ಯಾವ ಯಾವದು ಪ್ರಿಯವೋ ಅವೆಲ್ಲಾ ತನಗೂ ಪ್ರಿಯವಾಗಬೇಕು, ಹೀಗಾಗಿ ದೇವರ ಮತ್ತು ತನ್ನ ಮನಸ್ಸು ಒಂದಾಗಬೇಕು, ದೇವರ ಸಖ್ಯಕ್ಕಾಗಿ ತನ್ನ ಸೌಖ್ಯವನ್ನು ಬಿಡಬೇಕು, ಸಂಸಾರವ್ಯಥೆಯನ್ನು ಬಿಟ್ಟು ದೇವರಚಿಂತೆಯನ್ನು ಹಚ್ಚಿಕೊಳ್ಳಬೇಕು, ದೇವರಿಗಾಗಿ ತನ್ನ ಪ್ರಾಣವನ್ನಾದರೂ ಒಪ್ಪಿಸುವುದಕ್ಕೆ ಅನುವಾಗಬೇಕು, ದೇವರು ತನ್ನ ಪ್ರಾಣವಾಗಬೇಕು

“ ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್ ||

ಎಂಬಂತೆ ಭಕ್ತನ ಭಾವನೆಗೆ ತಕ್ಕಂತೆ ದೇವರು ಅನುಗ್ರಹವನ್ನು ಮಾಡುವನು ಮೇಘವು ಚಾತಕವನ್ನು ತೃಪ್ತಿಗೊಳಿಸದಿದ್ದರೂ ಚಾತಕವು ಮೇಘದಮೇಲಿನ ದೃಷ್ಟಿಯನ್ನು ತಿರುಗಿಸದಂತೆಯೂ ಚಂದ್ರನು ಹೊತ್ತಿಗೆ ಸರಿಯಾಗಿ ಹುಟ್ಟದರೂ ಚಕೋರವು ಅವನಲ್ಲಿ ಅನನ್ಯಭಾವವನ್ನು ಬಿಡದಿರುವಂತೆಯೂ ಭಕ್ತನು ಪರಮಾತ್ಮನ ಮೇಲಿನ ಮಮತೆಯನ್ನು ಬಿಡಬಾರದು ದೇವರು ಹೇಗೋ ಸದ್ಗುರುವೂ ಹಾಗೆಯೇ

|| ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ||

ವಿವಾಹ ಸಮಾರಂಭ ಕಾಗತಿ.

ಹಾಂಗಲಿಸಂಸ್ಥಾನಕ್ಕೆ ಸೇರಿದ ಕಾಗತಿ ಎಂಬ ಗ್ರಾಮವು ಬೆಳಗಾವಿಹತ್ತಿರ ಇದೆ ಆ ಊರ ಹಿರೇಮಠವು ಬಹು ಪುರಾತನವಾದುದು ಈ ಮಠಾಧಿಕಾರಿಗಳಾದ ಶ್ರೀ ರಾಚೋಟಿಸ್ವಾಮಿಗಳೆಂಬವರು ಬಹಳ ಯೋಗ್ಯರೂ, ಪೂಜಾಪಾರಾಯಣರೂ ಇದ್ದು ಅನೇಕ ಮಹತ್ವಗಳನ್ನು ತೋರಿಸಿರುತ್ತಾರೆ ಇದು ದಾಸೋಹಮಠವಾಗಿರುವುದರಿಂದ ಅನ್ನದಾನವಂತೂ ಸದಾ ನಡೆಯುತ್ತದೆ ಈ ಮಠದ ಮೂಲಪುರುಷರ ಗದ್ದಿಗೆಯ ಮಹತ್ವದಿಂದ ಭಕ್ತರ ಇಷ್ಟಾರ್ಥಗಳು ಸಿದ್ಧಿಸುತ್ತವೆ ಭೂತಾದಿಗಳ ಬಾಧೆಯು ದೂರವಾಗುತ್ತದೆ ಪ್ರತಿ ಅಮಾವಾಸ್ಯೆಗೆ ಜನರು ಜಾತ್ರೆಯಂತೆ ನೆರೆಯುತ್ತಾರೆ ಈ ಮಠಕ್ಕೆ ಅನೇಕ ದೇಸಾಯಿಯರೂ, ಇನಾಮದಾರರೂ, ಶಿಷ್ಯರಿದ್ದಾರೆ ಈ ಮಠಾಧ್ಯಕ್ಷರಾದ ಸಕಲ ಸ್ವಾಮಿಗಳೂ ಕೂಡ ಮಹಿಮಾಶಾಲಿಗಳಾಗುತ್ತಲೇ ಬಂದಿರುತ್ತಾರೆ ಈಗ ಪೀಠಾಧಿಪತಿಗಳಾಗಿದ್ದ ಶ್ರೀ ರಾಚೋಟಿಸ್ವಾಮಿಗಳು ತಾ॥ ೭ ೧ ೧೯೪೨ ನೆಯ ದಿವಸ ಶಿವ ದೀನರಾದರು ಆ ಸಮಯದಲ್ಲಿ ವಿರೋಧಿಗಳು ಮಠವನ್ನು ತಮ್ಮ ಸ್ವಾಧೀನಪಡಿಸಿಕೊಳ್ಳಬೇಕೆಂದು ವಿಶೇಷ ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ ಮಠದ ಶಿಷ್ಯರಾದ ಮ॥ ರಾ॥ ಶಿವಬಸಪ್ಪ, ಚನ್ನಬಸಪ್ಪ ಕಾರಾವಿ, ಮುಕ್ಕಾಂ ಬಾಳೇಕುಂದ್ರಿ ಮತ್ತು ಮ॥ ನಾಗಪ್ಪ ಶಿವಲಿಂಗಪ್ಪ ಕೊಡೊಳ್ಳಿ ಖಾನಾಪುರ ಮತ್ತು ಅದೇ ಮಠದ ಶಿಷ್ಯೋತ್ತಮರಾದ ಕಾಗತಿಯ ದೇಸಾಯಿಯವರಾದ ಶ್ರೀಮತಿ ಹೀರಾದೇವಿಯವರ ಪ್ರಯತ್ನ ವಿಶೇಷದಿಂದ ವಿರೋಧಿಗಳ ಸಾಹಸವು ನಿಷ್ಫಲವಾಯಿತು ಶ್ರೀಮತಿ ಹೀರಾದೇವಿಯವರ ಗುರುಭಕ್ತಿಯು ಅಸಾಧಾರಣವಾದುದು, ಗುರುಪೀಠದ ಉನ್ನತಿಯ ಸಲುವಾಗಿ ತಮ್ಮ ರಾಜಮರ್ಯಾದೆಯ ಕಡೆಗೆ ಲಕ್ಷ್ಯಕೊಡದೆ ಮಠದಲ್ಲಿ ತಾವು ಸ್ವತಃ ಸೇವೆಯನ್ನು ಮಾಡುತ್ತಿರುವದು ಹೋಳಕರ ಅಹಲ್ಯಾಬಾಯಿಯನ್ನು ಸ್ಮರಣಕ್ಕೆ ತಂದುಕೊಡುತ್ತದೆ ಇವರಿಗೆ ನಿರ್ಮಲಾದೇವಿ ಪ್ರಭಾವತಿದೇವಿಯರೆಂಬ ಇಬ್ಬರು ಕುಮಾರಿಯರಿದ್ದಾರೆ ಇವರು ಈಗಾಗಲೇ ತಾಯಿಯ ಮಾರ್ಗವನ್ನು ಭಕ್ತಿಯಲ್ಲಿ ಮೀರಿರುವರೆಂದು ಹೇಳಲು ಸಂತೋಷವೆನಿಸುತ್ತದೆ ಇಷ್ಟು! ಆ ಸಮಯದಲ್ಲಿ ಸದರಿ ಸ್ವಾಮಿಗಳ ಅನುಜರಾದ ವೇ॥ ಶಂಕರಯ್ಯನವರು ಊರಲ್ಲಿ ಇರಲಿಲ್ಲ ಅಹಮ್ಮದನಗರದಲ್ಲಿದ್ದರು ಇವರು ಬಹಳ ಚತುರರೂ ರಾಜನೀತಿಜ್ಞರೂ ಇದ್ದಾರೆ ಇವರು ಫ್ರಾನ್ಸಿನಲ್ಲಿ ೮ ೧೦ ವರುಷ ಇದ್ದರು ಮುಂಬಯಿ ಹಾಯಕೋರ್ಟಿನಲ್ಲಿ ಇವರ ಪ್ರತಿಬೆಯು ಈಗಲೂ ವಿರಾಜಿಸುತ್ತದೆ ಇವರು ಇಂಜನಿಯರ ಕಾರ್ಯದಲ್ಲಿ ಬಹಳ ಪ್ರವೀಣರಿದ್ದಾರೆ ಪರದೇಶದಲ್ಲಿದ್ದರೂ ತಮ್ಮ ಆಚಾರಾದಿಗಳಲ್ಲಿ ವ್ಯತ್ಯಾಸವಾಗದಂತೆ ಆಚರಿಸಿ ಗುರುವಂಶಕ್ಕೆ ತಿಲಕಸ್ವರೂಪರಾಗಿದ್ದಾರೆ ಇವರಿಗೆ ತಾರುಕೊಟ್ಟು ಕರೆಯಿಸಿಕೊಂಡು ಅವರು ಬಂದ ನಂತರ ಸರಕಾರದವರು ಮಠವನ್ನು ಅವರ ಸ್ವಾಧೀನಕ್ಕೆ ಕೊಟ್ಟರು ಅಮೇಲೆ ಶ್ರೀಮತಿ ಹೀರಾದೇವಿ ದೇಸಾಯಿ, ನಾಗಪ್ಪ ಕೊಡಳ್ಳಿ ಖಾನಾಪುರ ಶಿವಬಸಪ್ಪ ಕಾರಾವಿ ಬಾಳೇಕುಂದ್ರಿ ಇವರೇ ಮೊದಲಾದ ಸದ್ಭಕ್ತರ ವೇ॥ ಶಂಕರಯ್ಯನವರಿಗೆ ವಿವಾಹವನ್ನು ಮಾಡಲು ನಿಶ್ಚಯಿಸಿ ಮನವಳ್ಳಿ ಗ್ರಾಮದ ಹಿರೇಮಠದಲ್ಲಿ ಕನ್ಯೆಯನ್ನು ನಿಶ್ಚಯಿಸಿ ಇದೇ ವೈಶಾಖ ಬಹುಳ ೧೧ ಸೋಮವಾರ ದಿವಸ ವಿವಾಹ ಸಮಾರಂಭವನ್ನು ನೆರವೇರಿಸಿದರು ಸಮಾರಂಭವು ಶ್ರೀ॥ ಷ॥ ಬ್ರ॥ ಗುರುವರ್ಯ ಶಿವಾಚಾರ್ಯರು ಸುತ್ತಗಟ್ಟಿ ಇವರ ಗುರುತ್ವದಲ್ಲಿಯೂ ವೇ॥ ಸಿದ್ಧಲಿಂಗಯ್ಯನವರು ಯರಗಟ್ಟಿ ಹಿರೇಮಠ ಖಾನಾಪುರ ಇವರ ವೈದಿಕತ್ವದಲ್ಲಿಯೂ, ವಿಶೇಷ ವೈಭವದಿಂದ ನೆರವೇರಿಸಲ್ಪಟ್ಟಿತು ಅನ್ನಸಂತರ್ಪಣೆಯಂತೂ ವಿಶೇಷವಾಗಿ ನಡೆಯಿತು ಈ ಕಾರ್ಯದಲ್ಲಿ ವಿಶೇಷ ಶ್ರಮವಹಿಸಿದ ಸದ್ಭಕ್ತಮಂಡಳಿಗೂ ನೂತನ ದಂಪತಿಗಳಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನು ಕೊಡಲೆಂದು ಪ್ರಾರ್ಥನೆ

ಶಿವಬಸಪ್ಪ, ಕಾರಾವಿ

ಸುಶಿಕ್ಷಿತ ನಿರುದ್ಯೋಗಿಗಳಿಗೆ ಸುಸಂಧಿ !

ಮುಂಬಯಿ ಸರಕಾರದ ವೈದ್ಯಕ ಮಂಡಲದವರಿಂದ ಮಾನ್ಯತೆ ಹೊಂದಿದ ಕರ್ನಾಟಕದ ಒಂದೇ ಒಂದಾದ ಸಂಸ್ಥೆ

“ ಕರ್ನಾಟಕ ಆಯುರ್ವೇದ ವಿದ್ಯಾಪೀಠ, ಬೆಳಗಾಂವ”

ಸುಶಿಕ್ಷಿತರಲ್ಲಿ ನಿರುದ್ಯೋಗವು ನಷ್ಟವಾಗಿ ಗೌರವದ ಉಪಜೀವನ ಸಾಧನ ಮತ್ತು ಬಡರೋಗಿಗಳಿಗೆ ಔಷಧ ಸುಲಭವಾಗಿ ದೊರೆಯಬೇಕೆಂಬ ಉದ್ದೇಶದಿಂದ ಈ ಸಂಸ್ಥೆಯು ತಾ॥ ೧೩ ೬ ೧೯೩೩ ರಲ್ಲಿ ಹೊರಟು, ಇಲ್ಲಿಯವರೆಗೆ ಬೇರೆ ಬೇರೆ ಜಾತಿಯ ಸುಮಾರು ೧೩೫ ಜನರು ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಅನೇಕ ಭಾಗಗಳಲ್ಲಿ ಸುಖವಾಗಿ ಜೀವನವನ್ನು ಸಾಗಿಸುತ್ತ ಜನಸೇವೆಮಾಡಿ ಗೌರವಕ್ಕೆ ಪಾತ್ರರಾಗಿದ್ದಾರೆ

ಸರಕಾರದ ಹೊಸಕಾಯ್ದೆಗೆ ಅನುಸರಿಸಿ ಶಿಕ್ಷಣ ಪಡೆಯಬೇಕೆನ್ನುವವರ ಸಲುವಾಗಿ ಮೇಲಿನ ವರ್ಗ ಮತ್ತು ಮುಖ್ಯವಾಗಿ ಸ್ವತಂತ್ರ ರೀತಿಯಿಂದ ಹಳ್ಳಿಗಳಲ್ಲಿ ಉದ್ಯೋಗ ಕೈಕೊಳ್ಳುವವರ ಸಲುವಾಗಿ ಕೆಳಗಿನ ವರ್ಗಗಳು ನಡೆಯುತ್ತಿರುತ್ತವೆ

ಮೇಲಿನವರ್ಗಕ್ಕೆ ಸಂಸ್ಕೃತಸಹಿತ ಮ್ಯಾಟ್ರಿಕ್ ಪಾಸಾದವರಿಗೆ ಪ್ರವೇಶವು ದೊರೆಯುತ್ತಿದ್ದು ಅವರು ಮಾಹಿತಿಪತ್ರದ ಸಲುವಾಗಿ ೨ ಆಣೆ ಟಿಕೇಟನ್ನಿಟ್ಟು ಪತ್ರವ್ಯವಹಾರ ಮಾಡಬೇಕು ಕೆಳಗಿನ ತರಗತಿಯ ಅಭ್ಯಾಸಕ್ರಮವು ನಾಲ್ಕು ವರ್ಷದ್ದಿದ್ದು ಪ್ರವೇಶ ಫೀ ರೂ ೨, ವಾರ್ಷಿಕ ಫೀ ರೂ ೨೦ ಇರುತ್ತದೆ. ಈ ವರ್ಗದ ಪ್ರವೇಶಕ್ಕೆ ವ್ಹರ್ನ್ಯಾಕ್ಯುಲರ ಫಾಯನಲ್ ಕ್ಲಾಸ್ ಅಥವಾ ಇಂಗ್ಲೀಷ್ ೫ನೇ ಈಯತ್ತೆಯವರೆಗೆ ಅಭ್ಯಾಸಮಾಡಿದವರಿರಬೇಕು ಸಾಧಾರಣ ಈ ರೀತಿಯ ಶಿಕ್ಷಣ ಕ್ರಮವು ಮುಂಬಯಿಸರಕಾರದವರಿಂದ ಮಾನ್ಯತೆ ಹೊಂದುವಯೋಜನೆ ನಡೆದಿದೆ

ಪುಸ್ತಕ ಶಿಕ್ಷಣಕ್ಕೆ ಜೋಡಿಸಿ ಪ್ರತ್ಯಕ್ಷ ಶಿಕ್ಷಣದ ಸಲುವಾಗಿ ವನಸ್ಪತಿಯ ಉದ್ಯಾನ, ರಸಶಾಲೆ, ಧರ್ಮಾರ್ಥ ದವಾಖಾನೆ, ಹಾಸ್ಪಿಟಲ್, ಸೂತಿಕಾಗೃಹಗಳನ್ನು ಈ ಮೊದಲೇ ಜೋಡಿಸಿರುವದಲ್ಲದೆ, ಶವಚ್ಛೇದನಾಲಯ ಮತ್ತು ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದು ಭರದಿಂದ ಮುಂದೆ ಸಾಗಹತ್ತಿದೆ

ಹೊಸ ವರ್ಷದ ವರ್ಗಗಳು ತಾ॥ ೧೫ ೬ ೪೨ ರಿಂದ ಸುರುವಾಗುತ್ತದೆ ಜೂನ್ ಅಂತ್ಯದವರೆಗೆ ಶಕ್ಯವಿದ್ದರೆ ಪ್ರವೇಶ ದೊರೆಯಬಹುದು ಬೇಕಾದವರು ಕೆಳಗಿನ ಪತ್ತೆಗೆ ಉತ್ತರದ ಸಲುವಾಗಿ ಟಿಕೇಟು ಇಟ್ಟು ಅರ್ಜಿ ಮಾಡಬಹುದು

ಪ್ರಿನ್ಸಿಪಾಲ,
ಕರ್ನಾಟಕ ಆಯುರ್ವೇದ ವಿದ್ಯಾಪೀಠ
ಬೆಳಗಾಂವ

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಪುರಾಣಪ್ರವಚನ ಪ್ರಾರಂಭ, ಸೋಲಾಪುರ

ತಾ॥ 18 5 42ನೆಯ ಸೋಮವಾರ ಸಾಯಂಕಾಲ ಐದು ಗಂಟೆಗೆ ಸೋಲಾಪುರ ವೀರಶೈವಸದಾಚಾರ ಸ್ತ್ರೀ ಸಮಾಜದಲ್ಲಿ ಅಧಿಕಮಾಸ ನಿಮಿತ್ತವಾಗಿ, “ ಅಧಿಕಮಾಸದ ಮಹತ್ವ ಎಂಬ ಪುರಾಣವು ಸೌ॥ ಸುಗ್ಗಲದೇವಿತಮಶೆಟ್ಟಿ, ಇವರಿಂದ ಪ್ರಾರಂಭವಾಗಿರುವುದು ಮಧ್ಯದಲ್ಲಿ ಧಾರ್ಮಿಕ ಉಪನ್ಯಾಸಗಳು ಪ್ರತಿದಿವಸವು ಪುರಾಣದ ಆದಿಯಲ್ಲಿ ಬಾಲಿಕೆಯರಿಂದ ಜಗದಾಚಾರ್ಯರ ಸ್ತೋತ್ರಗಳೂ ನಡೆಯುವವು ಪುರಾಣ ಹೇಳುವವರ ವಯಸ್ಸು ಚಿಕ್ಕದಾಗಿದ್ದರೂ ಅವರ ಹೇಳುವ ರೀತಿಯನ್ನು ನೋಡಿ ಸ್ತ್ರೀಯರು ಆನಂದದಿಂದ ಕೇಳುವುದಕ್ಕೆ ಒದಗುವದಲ್ಲದೆ ಸದರಿ ಸಮಾಜದ ಏಳ್ಗೆಯ ಸಲುವಾಗಿ ಪ್ರಯತ್ನವನ್ನು ಮಾಡುತ್ತಿರುವರು ಜಗದಾಚಾರ್ಯರ ಕೃಪೆಯಿಂದ ಇಂಥ ಪ್ರಯತ್ನ ಶಾಲೆಗಳು ಹೆಚ್ಚಾಗಿ ತದ್ದ್ವಾರಾ ಪರಗುರುಭಕ್ತಿಯು ಪ್ರಕಾಶಿಸಲೆಂದು ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುವೆನು ಈ ಸಮಾಜಕ್ಕೆ ಸಹಾಯಕರಾಗಿರುವ ಪಂಡಿತವರ್ಯ ಶ್ರೀ॥ ಕಾಶೀನಾಥಶಾಸ್ತ್ರಿಗಳವರ ಮಹೋಪಕಾರವನ್ನು ಸ್ಮರಿಸುವೆನು

ಸೆಕ್ರೆಟರಿ,
ಸೌ॥ ಭಾಗೀರಥೀಬಾಯಿ ಕಟಾಪ್,
ಶ್ರೀ ವೀರಶೈವಸದಾಚಾರ ಸ್ತ್ರೀ ಸಮಾಜ
ಸೋಲಾಪುರ ಸಿಟಿ

೫ ವರ್ಷ ಕಠಿಣ ಶಿಕ್ಷೆ

ಶಿಟ್ಟಪ್ಪನೆಂಬಾತನ ಕತ್ತನ್ನು ಹಿಸುಕಿ ಆತನನ್ನು ಕೊಲೆಮಾಡಿದ ಅಪರಾಧಕ್ಕಾಗಿ ಆತನ ಹೆಂಡತಿ ಮತ್ತು ಮಗಳಿಗೆ ಬೆಂಗಳೂರು ಸೆಷನ್ಸ್ ನ್ಯಾಯಾಧೀಶರು ತಲಾ ೫ ವರ್ಷಗಳ ಕಠಿನ ಶಿಕ್ಷೆಯನ್ನು ಇಂಡಿಯನ್ ಪೀನಲ್ ಕೋಡಿನ ೩೦೪ ಎ ವಿಧಿ ಪ್ರಕಾರ ವಿಧಿಸಿದರು

ಮದರಾಸು ಹೈಕೋರ್ಟಿನ ಆರಂಭ

ಮದರಾಸು ಹೈಕೋರ್ಟಿಗೆ ಬೇಸಿಗೆ ರಜವು ಮುಗಿದ ಮೇಲೆ, ಅಂದರೆ ಜೂನ್ ೨೪ ನೆ ತಾ॥ ದಿನ ಅದು ಮತ್ತೆ ಮದರಾಸಿನಲ್ಲಿಯೇ ಕಾರ್ಯಾರಂಭ ಮಾಡುತ್ತದೆ ಹೈಕೋರ್ಟ್ ಕಚೇರಿಯ ಅನವಶ್ಯಕ ಭಾಗಗಳು ಕೊಯಮತ್ತೂರಿನಲ್ಲಿಯೇ ಇರುವುವು

ಶಿಷ್ಯರ ಮನೆಗಳ
ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಇರುವಾದ ಶಿಷ್ಯರ ಮನೆಗಳ ಲಿಸ್ಟು, ಆ ಮಠಾಧಿಕಾರಿಗಳು ಹಲವು ವರ್ಷಗಳಿಗೊಮ್ಮೆ ಹತ್ತು ವರ್ಷಗಳಿಗೊಮ್ಮೆ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅವರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಸ್ಪಷ್ಟವಾಗಿ ತೋರಿಸಲ್ಪಟ್ಟಿವೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅವರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಎಂಥಾ ಕೆಟ್ಟಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಭಸ್ಮಗಳು

ಔಷಧ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂದೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹರತಾಳಭಸ್ಮ	೧	೦—೮—೦
ಟಂಕಣಭಸ್ಮ	೧	೦—೮—೦
[illegible]	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಾಭಸ್ಮ	೧	೦—೧೨—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ರಾಜಿತ ಸೂರ್ಯಪುಟ	೧	೧—೦—೦
ರಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ರಸ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ, ಗಢವಾಲ್ ಯು.ಪಿ.

ಸಿದ್ಧಾಂತಶಿಖಾಮಣಿ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ

ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತವಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೫ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯರೆಂಬ** ಆಚಾರ್ಯರಿಂದ ರಚಿಸಲ್ಪಟ್ಟಿದೆ ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿ ನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M F Printings ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಸಾರಿಸಾರಿ ಹೇಳಬಹುದಾಗಿದೆ ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣಾಧಿಪನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! **ಬೆಲೆ ೩ ರೂಪಾಯಿ**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿವಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್** ಮಹಾಪ್ರಭುಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಠಿಕೇಶನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ ಗೆ ದೊರೆಯುವುದು ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀ ಪಂಚಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸನಂದ, ದೂರ್ವಾಸ ಮುನಿವರರಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
[illegible] ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರನಿವಾಸಿಗಳಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೦—೩—೦
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೨—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾಫಿದಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ.—ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು. ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲಶೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ. ಡಜನ್ ಒಂದಕ್ಕೆ ಕ್ರಯ ರೂ ೨-೮-೦. ವಿ.ಪಿ. ೬ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[51] ಪೋ. ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸತ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ...	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ) ..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಶಿವತತ್ತ್ವದರ್ಪಣ (೪ನೆಯ ಆವೃತ್ತಿ) ...	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ.
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸತ್ಯಾಶಾಸ್ತ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಪಾಕೆಟ್ಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣಗಳು (ತೆಲುಗು)	೮ ಆಣೆ
ಷಡ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅಕ್ಷರ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ...	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) .	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರವು)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೬೨. ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As.
The Philosophical Aspect of Viraśaivism (*English*)	8 As.
Speeches by Pandit Shri Kashinatha Shastriji *English*)	12 As.
लिंगधारणचंद्रिका (संस्कृत)	१ रु.
वीरशैवमत (मराठी)	१ रु.
महानारायणोपनिषत् (वीरशैवभाष्य-संस्कृत) ..	१ रु.
शुकदशकम् (वीरशैवप्राचीनभाष्योपेतम्)	४ आ.
नंदिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಸ್ಥಾನಸಪಂಚಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ದವರಿಗೆ ೧ ರೂ. ೧೨ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೮ನೇ ಜೂನ್ ೧೯೪೨ [ಸಂಚಿಕೆ ೮

ದಿವಾನರ ಭಾಷಣ

ಮೈಸೂರು ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನವು ಬೆಂಗಳೂರು ನಗರದಲ್ಲಿ ೧ನೆಯ ತಾರೀಖಿನ ದಿನ ಸರ್ ಕೆ ಪಿ ಪುಟ್ಟಣ್ಣಚೆಟ್ಟಿ ಟವನ್‌ಹಾಲಿನಲ್ಲಿ ಮಧ್ಯಾಹ್ನ ೧೨ ಘಂಟೆಗೆ ಆರಂಭವಾಯಿತು

ದಿವಾನರಾದ ರಾಜಮಂತ್ರಪ್ರವೀಣ ಶ್ರೀ ಎನ್. ಮಾಧವರಾಯರು ಪ್ರಾರಂಭ ಭಾಷಣ ಮಾಡಿದರು. ಅವರ ಭಾಷಣದ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ :—

ಪ್ರಜಾಪ್ರತಿನಿಧಿ ಸಭೆಯ ಸದಸ್ಯರೇ,

ಆಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರ ಅಪ್ಪಣೆಯ ಮೇರೆಗೆ, ಪ್ರಜಾಪ್ರತಿನಿಧಿ ಸಭೆಯ ಈ ಅಧಿವೇಶನದ ಕಾರ್ಯ ಕಲಾಪಗಳನ್ನು ನೆರವೇರಿಸುವುದಕ್ಕಾಗಿ ತಮ್ಮೆಲ್ಲರನ್ನೂ ಸ್ವಾಗತಿಸುವ ಗೌರವವು ನನಗೆ ಲಭಿಸಿದೆ. ತಮ್ಮೆಲ್ಲರಿಗೂ ತಿಳಿದೇ ಇರುವಂತೆ ಪ್ರಜಾಪ್ರತಿನಿಧಿ ಸಭೆಯು ಈಗ್ಗೆ ಅರವತ್ತೊಂದು ವರ್ಷಗಳ ಹಿಂದೆ ಸ್ಥಾಪಿತವಾದ ಮೇಲೆ ಅದರ ಅಧಿವೇಶನವು ಬೆಂಗಳೂರು ನಗರದಲ್ಲಿ ನಡೆಯುತ್ತಿರುವುದು ಇದೇ ಮೊದಲನೆಯ ಸಲವಾಗಿದೆ. ಈ ಸಭೆಯ ಒಂದು ಅಧಿವೇಶನವನ್ನು ಬೆಂಗಳೂರಿನಲ್ಲಿ ನಡೆಯಿಸಬೇಕೆಂದು ಒಟ್ಟಿನ ಮೇಲೆ ಸದಸ್ಯರಲ್ಲಿ ಅತ್ಯಂತ ಹೆಚ್ಚುಮಂದಿ ಇಚ್ಛಪಟ್ಟರು. ಆ ಅಭಿಲಾಷೆಗನುಸಾರವಾಗಿ ಬೆಂಗಳೂರಿನಲ್ಲಿ ಒಂದು ಅಧಿವೇಶನವನ್ನು ನಡೆಯಿಸುವ ವಿಷಯವನ್ನು ಪರ್ಯಾಲೋಚಿಸಲಾಗುವುದೆಂದು ನಾನು ಹಿಂದಿನ ಅಕ್ಟೋಬರ್ ತಿಂಗಳಿನಲ್ಲಿ ತಮಗೆ ಬಿನ್ನೈಸಿದ ಮೇಲೆ ಅದು ನಿರ್ಧರವಾಗಿ ಈ ಅಧಿವೇಶನವು ಇಲ್ಲಿ ಏರ್ಪಟ್ಟಿದೆ.

ಈ ಸಭೆಯ ದಸರಾ ಅಧಿವೇಶನಕ್ಕೂ ಮತ್ತು ಬಜೆಟ್ ಅಧಿವೇಶನಕ್ಕೂ ಮಧ್ಯದಲ್ಲಿ ಮತ್ತೊಂದು ಅಧಿವೇಶನವನ್ನು ಏರ್ಪಡಿಸಿ ವರ್ಷಕ್ಕೆ ಒಟ್ಟು ಮೂರು ಅಧಿವೇಶನಗಳು ನಡೆಯುವಂತೆ ಮಾಡಬೇಕೆಂಬುದಾಗಿ ಈ ಸಭೆಯ ಸದಸ್ಯರಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯ ಸದಸ್ಯರು ಒತ್ತಾಯಪಡಿಸಿ ತಿಳಿಸಿದ್ದುದು ಸರಿಯಷ್ಟೆ! ಆ ವಿಷಯವನ್ನು ನ್ಯಾಯವಿಧಾಯಕ ಸಭೆಯ ಪ್ರೆಸಿಡೆಂಟರಾದ ಶ್ರೀ ಬಿ ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಏರ್ಪಟ್ಟ ಒಂದು ಸಮಿತಿಯ ಪರ್ಯಾಲೋಚನೆಗೆ ವಹಿಸಲಾಯಿತೆಂಬ ಸಂಗತಿಯನ್ನೂ ನಾನು ಈ ಸಂದರ್ಭದಲ್ಲಿ ಸೂಚಿಸಬಹುದಾಗಿದೆ. ಆ ಸಮಿತಿಯವರು ಸೇರಿ ಆ ವಿಷಯವನ್ನು ಪರ್ಯಾಲೋಚಿಸಿ ತಮ್ಮ ವರದಿಯನ್ನು ಒಪ್ಪಿಸಿದ್ದಾರೆ ಅವರ ಸಲಹೆಗಳು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿವೆ. ಆ ಸಲಹೆಗಳನ್ನು ಕುರಿತು ಸರ್ಕಾರದವರು ಅಖೈರು ತೀರ್ಮಾನ ಮಾಡುವುದಕ್ಕಿಂತ ಮುಂಚಿತವಾಗಿ, ಅವುಗಳ ಸಂಬಂಧವಾಗಿ ಈ ಸಭೆಯ ಸದಸ್ಯರುಗಳು ತಮ್ಮ ಅಭಿಪ್ರಾಯ ಸೂಚಿಸಲು ಅವಕಾಶ ದೊರೆಯಿಸುವ ಯೋಚನೆ

ಮುಂದಿನ ಸಾಲಿನ ಬಜೆಟ್ಟಿನ ಸೇರಿಗೆ ಗೊತ್ತಾಗಿರುವ ಆಯವ್ಯಯಗಳ ಅಂದಾಜುಗಳ ವಿಚಾರವನ್ನು ವಾಡಿಕೆಯಂತೆ ತಮಗೆ ಪ್ರಸ್ತಾಪಿಸುವೆನು. ಅದಕ್ಕೆ ಮೊದಲು ಸರ್ವ ಸಾಮಾನ್ಯವಾಗಿ ಎಲ್ಲರ ಆಸಕ್ತಿಯನ್ನೂ ಸೆಳೆಯತಕ್ಕ ಸಾರ್ವಜನಿಕ ಸ್ವಭಾವದ ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುವೆನು

ಲೆ॥ ಕ॥ ಡಿ. ಡಿ. ಎಂ ಎಸ್ ಫ್ರೇಜರ್‌ರು

ಘನ ಹೊಂದಿದ ಲೆಫ್ಟಿನೆಂಟ್ ಕರ್ನಲ್ ಡಿ ಡಿ ಎಂ ಎಸ್ ಫ್ರೇಜರ್‌ರವರು ಈ ಸಭೆಯ ಅಧಿವೇಶನದಲ್ಲಿ ನೋಡಿರುವ ಸಂತೋಷವು ನಮಗೆ ಲಭಿಸುವುದು. ಇದೇ ಮೊಟ್ಟಮೊದಲನೆಯ ಸಲವಾಗಿದೆ ಅವರು ಹಿಂದಿನ ರೆಸಿಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ ಹೆಚ್. ಗೋರ್ಡನ್‌ರವರ ಸ್ಥಾನದಲ್ಲಿ ನಮ್ಮ ರೆಸಿಡೆಂಟರಾಗಿ ನೇಮಕವಾಗಿ ಕಳೆದ ನವೆಂಬರ್ ತಿಂಗಳಿನಲ್ಲಿ ನಮ್ಮ ಸಂಸ್ಥಾನಕ್ಕೆ ದಯಮಾಡಿಸಿದರು. ಇತರ ಸ್ಥಳಗಳಲ್ಲಿಯೂ ಮತ್ತು ಇತರ ಕ್ಷೇತ್ರಗಳಲ್ಲಿಯೂ ಕೆಲಸಮಾಡಿ ಅವರು ಕಾರ್ಯದಕ್ಷರೆಂದೂ, ರಾಜನೀತಿಕೋವಿದರೆಂದೂ ಖ್ಯಾತಿಯನ್ನು ಗಳಿಸಿ, ನಮ್ಮ ಸಂಸ್ಥಾನದ ಪ್ರಗತಿಗೂ, ಅಭ್ಯುದಯಕ್ಕೂ ಸಹಾಯಕರಾಗಿ ಶ್ರಮಿಸುವ ಅಭಿಲಾಷೆಯಿಂದ ಅವರು ನಮ್ಮ ಸಂಸ್ಥಾನಕ್ಕೆ ದಯಮಾಡಿದ್ದಾರೆ. ಅವರು ತಮ್ಮ ಸದ್ಗುಣಗಳಿಂದಲೂ ಮತ್ತು ಮೈಸೂರು ಸಂಸ್ಥಾನದ ಪುರೋಭಿವೃದ್ಧಿ ಸಂಬಂಧವಾದ ಸಮಸ್ತ ವಿಚಾರಗಳಲ್ಲಿಯೂ ಅವರಿಗಿರುವ ತೀವ್ರಾಸಕ್ತಿಯ ನೆಲೆಯಿಂದಲೂ ನಮ್ಮ ಅಂತಃಕರಣ ಪೂರ್ವಕವಾದ ಪ್ರೀತಿ ಗೌರವಗಳಿಗೆ ಪಾತ್ರರಾಗಿರುವುದೇನೋ ಸರಿ. ಸುಪ್ರಸಿದ್ಧರಾದ ಸರ್ ಸ್ಟುಯರ್ಟ್ ಫ್ರೇಜರ್‌ರವರ ಪುತ್ರರೆಂಬ ನಿಮಿತ್ತವಾಗಿಯೂ ಸಹ, ಅವರು ನಮ್ಮ ಅಂತಃಕರಣ ಪೂರ್ವಕವಾದ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದಾರೆ ಕೀರ್ತಿಶೇಷರಾದ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರವರ ಉಪಾಧ್ಯಾಯರು ಮತ್ತು ಗಾರ್ಡಿಯನ್‌ರವರಾಗಿಯೂ, ಮತ್ತು ಆಬಳಿಕ ರೆಸಿಡೆಂಟರಾಗಿಯೂ ಸರ್ ಸ್ಟುಯರ್ಟ್ ಫ್ರೇಜರ್‌ರವರು ಅನೇಕ ವರ್ಷಗಳ ಕಾಲ ಸಂಸ್ಥಾನದೊಡನೆ ಸಂಬಂಧವುಳ್ಳವರಾಗಿದ್ದರು. ಅವರಿಂದ ಸಂಸ್ಥಾನಕ್ಕೆ ಲಭಿಸಿದ ಉಪಕಾರಗಳ ಸವಿ ನೆನಪು ಇಂದಿಗೂ, ನಮ್ಮ ಮನಸ್ಸಿನಲ್ಲಿ ದೃಢವಾಗಿ ನೆಲಸಿದೆ. ಅವರ ಪುತ್ರರಾದ ಕರ್ನಲ್ ಫ್ರೇಜರ್‌ರವರು ನಮಗೇನೂ ಅಪರಿಚಿತರಲ್ಲ. ನಮಗೆ ಅಪರಿಚಿತರಲ್ಲದವರಾಗಿಯೂ, ಸಂಸ್ಥಾನದ ಅಭ್ಯುದಯ ಸಾಧನೆಯಲ್ಲಿ ತಮಗಿರುವ ಸೌಹಾರ್ದವನ್ನು ಮತ್ತು ತೀವ್ರಾಸಕ್ತಿಯನ್ನು ಈಗಾಗಲೇ ವ್ಯಕ್ತಪಡಿಸಿಯೂ ಇರುವವರಾದ ಕರ್ನಲ್ ಫ್ರೇಜರ್‌ರವರನ್ನು ನಾವುಗಳೆಲ್ಲರೂ ಆದರದಿಂದ ಸ್ವಾಗತಿಸುತ್ತಿದ್ದೇವೆ

ಶ್ರೀ ಮನ್ಮಹಾರಾಜರವರ ಸಂಚಾರ

ಸಂಸ್ಥಾನದ ಪ್ರಜೆಗಳು ಪ್ರಭುಗಳವರಾದ ಶ್ರೀಮನ್ಮಹಾರಾಜರವರನ್ನು ತಮ್ಮ ತಮ್ಮ ಸ್ಥಳಗಳಿಗೆ ಸ್ವಾಗತಿಸಿ, ಮಹಾಸ್ವಾಮಿಯವರಲ್ಲಿಯೂ ಮತ್ತು ಅವರ ಮಹಾರಾಜಪದವಿಯಲ್ಲಿಯೂ ತಮಗಿರುವ ರಾಜಭಕ್ತಿ ವಿಶ್ವಾಸಗಳನ್ನು ಮಹಾಸ್ವಾಮಿಯವರ ಸನ್ನಿಧಿಯಲ್ಲಿ ವ್ಯಕ್ತಗೊಳಿಸುವ ಅವಕಾಶಗಳು ದೊರೆಯಬೇಕೆಂದು ಅಭಿಲಾಷೆಪಟ್ಟರು. ಸಾರ್ವತ್ರಿಕವಾದ ಆ ಅಭಿಲಾಷೆಯನ್ನು ಚಿತ್ತಕ್ಕೆ ತಂದುಕೊಂಡು ಕಳೆದ ನವೆಂಬರ್ ತಿಂಗಳಿನಲ್ಲಿ ಕ್ಲೋಸ್‌ಪೇಟೆ, ದೊಡ್ಡಬಳ್ಳಾಪುರ, ಕೋಲಾರ, ಕೋಲಾರದ ಚಿನ್ನದಗಣಿ ಪ್ರದೇಶ-ಇವುಗಳಿಗೆ ದಯಮಾಡಿಸಿದ್ದರು ಹೀಗೆ ದಯಮಾಡಿಸಿದಾಗ ಆಯಾ ಪಟ್ಟಣದ ಮುಖ್ಯ ಮುಖ್ಯವಾದ ಬೀದಿಗಳಲ್ಲಿ ಮೆರವಣಿಗೆಯಾಗಿ ಮಹಾಸ್ವಾಮಿಯವರ ಸವಾರಿ ಚಿತ್ತೈಸಿತು. ಮಾರ್ಗಗಳ ಉಭಯ ಪಾರ್ಶ್ವಗಳಲ್ಲಿಯೂ ಪ್ರಜೆಗಳು ಕಿಕ್ಕಿರಿದು ತುಂಬಿ, ಪ್ರಭು ಸಂದರ್ಶನದಿಂದ ಹರ್ಷಿತರಾಗಿ, ಆನಂದದಿಂದ ರಾಜಭಕ್ತಿ ವಿಶ್ವಾಸಗಳನ್ನು ಸೂಚಿಸಿದರು. ಮಹಾಸ್ವಾಮಿಯವರು ಚಿತ್ತೈಸಿದ ಊರುಗಳಲ್ಲಿ ಆಯಾ ಪೌರಸಭೆಯವರೂ ಮತ್ತು ಕೋಲಾರದ ಚಿನ್ನದಗಣಿ ಪ್ರದೇಶದಲ್ಲಿ ಅಲ್ಲಿಯ ಸ್ಯಾನಿಟರಿ ಮತ್ತು ಮೈನಿಂಗ್ ಬೋರ್ಡುಗಳವರೂ ಮಹಾಸ್ವಾಮಿಯವರಿಗೆ ಸ್ವಾಗತವನ್ನು ಬಯಸಿ ಬಿನ್ನವತ್ತಳೆಗಳನ್ನು ಸಮರ್ಪಿಸಿದರು. ಮಹಾಸ್ವಾಮಿಯವರು ಯಥೋಚಿತವಾದ ಪ್ರತ್ಯುತ್ತರಗಳನ್ನು ದಯಪಾಲಿಸಿದರು. ಮೇಲೆ ಹೇಳಿದ ಸ್ಥಳಗಳಿಗೂ ಮತ್ತು ತಮ್ಮ ಸಂಸ್ಥಾನದ ಇತರ ಸ್ಥಳಗಳಿಗೂ ಮಹಾಸ್ವಾಮಿಯವರು ದಯಮಾಡಿಸಿದುದರಿಂದ, ಆಯಾ ಭಾಗಗಳ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ಪರಾಮರ್ಶಿಸಿ ಅಲ್ಲಿಯ ಜನರೊಡನೆ ಸೇರಲು ಅವಕಾಶಗಳು ದೊರೆತವು ಮಹಾಸ್ವಾಮಿಯವರು ಇದುವರೆಗೆ ಅನೇಕ ಪಟ್ಟಣಗಳನ್ನೂ, ಗ್ರಾಮಗಳನ್ನೂ ನೋಡಿದ್ದಾರೆ ಕೈಗಾರಿಕೆ ಮತ್ತು ವ್ಯಾಪಾರದ ಪ್ರಸಿದ್ಧ ಸ್ಥಳಗಳನ್ನು ಪರಾಮರ್ಶಿಸಿದ್ದಾರೆ. ಅಲ್ಲದೆ ಸಂಸ್ಥಾನದಲ್ಲಿ ಮುಂದಾಳುಗಳಾದ ಅನೇಕ ಮಹನೀಯರಿಗೆ ಸಂದರ್ಶನವನ್ನಿತ್ತು ಅವರುಗಳೊಡನೆ ಮಹಾಸ್ವಾಮಿಯವರು ಮಾತನಾಡಿದ್ದಾರೆ. ಈ ವರ್ಷದ ಪ್ರಾರಂಭದಲ್ಲಿ ಚಿತ್ತೈಸಲು ಸಾಧ್ಯವಾಗದೆ ಹೋದ ತಮ್ಮ ಸಂಸ್ಥಾನದ ಮತ್ತೆ ಕೆಲವು ಭಾಗಗಳನ್ನು ಪರಾಮರ್ಶಿಸಲು ಮಹಾಸ್ವಾಮಿಯವರು ಇಷ್ಟರಲ್ಲೇ ಸಂಚಾರಾರ್ಥವಾಗಿ ದಯಮಾಡಿಸಬೇಕೆಂದಿದ್ದಾರೆ.

ಬಜೆಟ್ ಅಂದಾಜುಗಳು
೧॥ ಲಕ್ಷ ರೂ. ಉಳಿತಾಯ

ಆಯವ್ಯಯಗಳ ವಿಚಾರದಲ್ಲಿ ತಮಗೆ ಒದಗಿಸಿರುವ ಬಜೆಟ್ಟಿನಲ್ಲಿ ಮತ್ತು ಅದರ ಮೇಲಿನ 'ಮೆಮೋರಾಂಡಂ' ವಿವರಣೆಯಲ್ಲಿ ಮೂರು ತಂಡಗಳ ಮೊಬಲಗುಗಳು ನಮೂದಾಗಿವೆ ಎಂದರೆ ೧೯೪೦-೪೧ನೆಯ ಸಾಲಿನ ಆಯವ್ಯಯಗಳ ಲೆಕ್ಕಗಳು, ಚಾಲ್ತಿಸಾಲಿನ ತಿದ್ದುಪಾಟಾದ ಅಂದಾಜುಗಳು ಮತ್ತು ಮುಂದಿನ ಸಾಲಿನ ಆಯವ್ಯಯಗಳು—ಈ ಮೂರು ತಂಡಗಳ ಮೊಬಲಗುಗಳೂ ನಮೂದಾಗಿವೆ. ಅತ್ತ ಈಗ ನಡೆಯುತ್ತಿರುವ ಯುದ್ಧದ ಅವಧಿಯಲ್ಲಿ ಯುದ್ಧದಿಂದ ಉಂಟಾಗಿರುವ ಪರಿಸ್ಥಿತಿಯ ಪರಿಣಾಮಗಳನ್ನು ಕೆಲ ಕೆಲವುಮಟ್ಟಿಗೆ ಸೂಚಿಸುವ ಕಾರಣ ಅವುಗಳನ್ನು ಒಟ್ಟಿಗೆ ಸಮಾಲೋಚನೆ ಮಾಡಿ ನೋಡ

ಬೇಕಾದುದು ಅವಶ್ಯಕ ೧೯೪೦-೪೧ನೆಯ ಸಾಲಿನಲ್ಲಿ ಬಂದ ಒಟ್ಟು ಹುಟ್ಟುವಳಿಯು ೪೭.೫ ಲಕ್ಷರೂ ಗಳು. ಹುಟ್ಟುವಳಿ ಬಾಬಿಗೆ ಖರ್ಚು ಹಾಕಿ ಹುಟ್ಟುವಳಿಯಿಂದಲೇ ಹಣವನ್ನೊದಗಿಸಿದ ವೆಚ್ಚಗಳ ಒಟ್ಟು ಮೊತ್ತವು ೪೬.೩ ಲಕ್ಷರೂ ಗಳು ಚಾಲ್ತಿ ಸಾಲಿನಲ್ಲಿ ೫ ಕೋಟಿ ೬ ಲಕ್ಷ ರೂ ಗಳ ಹುಟ್ಟುವಳಿಯು ಬರುವಂತೆ ತೋರಿ ಬಂದಿದೆ ಇಷ್ಟು ಹುಟ್ಟುವಳಿಯು ಹಿಂದೆ ಮತ್ತಾವ ವರ್ಷದಲ್ಲಿಯೂ ಬಂದಿರಲಿಲ್ಲ ಚಾಲ್ತಿ ಸಾಲಿನಲ್ಲಿ ನಾನಾ ನಿಧಿಗಳಿಗೂ ಸೇರಿದ ೫೮ ೪೩ ಲಕ್ಷರೂ ಗಳೂ ಸೇರಿ ಒಟ್ಟು ವೆಚ್ಚವು ೫ ಕೋಟಿ ೬ ಲಕ್ಷರೂ ಗಳಾಗುವಂತೆ ಅಂದಾಜಾಗಿದೆ. ಮುಂದಿನ ಸಾಲಿನ (ಎಂದರೆ ೧೯೪೨ ೪೩ನೇ ಸಾಲಿನ) ಬಜೆಟ್ಟಿನ ಮೇರೆಗೆ, ಎಲ್ಲ ಬಾಬುಗಳಿಂದಲೂ ಸೇರಿ ಒಟ್ಟು ೪೬೮-೮೦ ಲಕ್ಷ ರೂ ಗಳ ಹುಟ್ಟುವಳಿ ಬರುವಂತೆ ಅಂದಾಜು ಮಾಡಿದ್ದೇವೆ ಅಲ್ಲದೆ ಹುಟ್ಟುವಳಿ ಬಾಬಿಗೆ ಖರ್ಚು ಹಾಕಿ ಹುಟ್ಟುವಳಿಯಿಂದಲೇ ಹಣವನ್ನು ಕೊಡಬೇಕಾದ ನಾನಾ ವೆಚ್ಚಗಳಿಗೂ ಸುಮಾರು ೪೬೩ ಲಕ್ಷರೂ ಗಳನ್ನು ಬಜೆಟ್ಟಿನಲ್ಲಿ ಒದಗಿಸಿದ್ದೇವೆ ವೆಚ್ಚವು ಕಳೆದು ೧|| ಲಕ್ಷ ರೂ ಗಳ ಮಟ್ಟಿನ ಅಲ್ಪವಾದ ಉಳಿತಾಯವು ಕಂಡ ಬರುತ್ತದೆ ಮಾಮೂಲಾಗಿಲ್ಲದೆ ಅಪೂರ್ವವಾಗಿ ಹೆಚ್ಚು ಹುಟ್ಟುವಳಿ ಬರುತ್ತಿರುವ ಕೆಲವು ಬಾಬುಗಳ ಹೆಚ್ಚಿಗೆ ಹುಟ್ಟುವಳಿಗಳನ್ನೆಲ್ಲ ನಾನಾ ನಿಧಿಗಳಿಗೆ ಸೇರಿಸಲು ಉದ್ದೇಶಿಸಿದ್ದೇವೆಂಬುದನ್ನೂ ಈ ಸಂಬಂಧದಲ್ಲಿ ತಾವು ಗಮನಿಸಬಹುದಾಗಿದೆ ವರ್ಷ ವರ್ಷವೂ ನಡೆಯದೆ ಒಟ್ಟು ಮೊತ್ತಗಳಲ್ಲಿ ಒಂದೇ ಸಲ ನಡೆಯತಕ್ಕ ಅನಾವೃತ್ತ ಸ್ವಭಾವದ ವೆಚ್ಚಗಳಿಗಾಗಿ ಆ ಮೊತ್ತಗಳು ಒದಗುತ್ತವೆ ೧೯೪೦ ೪೧ನೆಯ ಸಾಲಿನಿಂದ ಮೂರು ವರ್ಷಗಳ ಅವಧಿಯಲ್ಲಿ ಹೀಗೆ ನಾನಾ ನಿಧಿಗಳಿಗೂ ಸೇರಿಸಿರತಕ್ಕ ಒಟ್ಟು ಮೊತ್ತವು ೧೬೫ ೯ ಲಕ್ಷ ರೂ ಗಳು ಆ ನಿಧಿಗಳಿಂದ ಅದೇ ಅವಧಿಯಲ್ಲಿ ವಹಿಸಿದ ಒಟ್ಟು ವೆಚ್ಚಗಳು ೧೩೮-೬೦ ಲಕ್ಷ ರೂ ಗಳು ಆ ನಿಧಿಗಳಲ್ಲಿ ೧೯೪೨ ೪೩ನೇ ಸಾಲಿನ ಕೊನೆಯಲ್ಲಿ ಉಳಿದಿರುವ ಅಖೈರು ಶಿಲ್ಕು ಮೊಬಲಗುಗಳನ್ನು ಈ ಕೆಳಗೆ ಸೂಚಿಸಲಾಗಿದೆ —

	ಲಕ್ಷ ರೂಪಾಯಿ ಗಳಲ್ಲಿ
ನೀರಾವರಿ ಅಭಿವೃದ್ಧಿನಿಧಿ	೩೦ ೫೨
ಗ್ರಾಮ ದಿಂದ ಗ್ರಾಮಕ್ಕೆ ರಸ್ತೆ ಮಾಡಿಸುವ ನಿಧಿ	೮ ೬೦
ರಸ್ತೆ ನಿಧಿ	[illegible]
ಕೈಗಾರಿಕೆ ಅಭಿವೃದ್ಧಿ ನಿಧಿ	೧೦.೦೫
ಅನಾವೃತ್ತ ಸ್ವಭಾವದ ವೆಚ್ಚಗಳಿಗಾಗಿ ವಿಶೇಷ ರೀತಿಯ ನಿಧಿ	೩೫ ೪೪

ಫಾರೆಸ್ಟ್ ಇಲಾಖೆ

ಚಾಲ್ತಿ ಸಾಲಿನ ತಿದ್ದುಪಾಟಿನ ಅಂದಾಜುಗಳನ್ನು ನೋಡಿದರೆ ಹುಟ್ಟುವಳಿಯು ಕೆಲವು ಮುಖ್ಯ ಬಾಬುಗಳಲ್ಲಿ ಬಜೆಟ್ ಅಂದಾಜುಗಳ ಮೇರೆಗೆ ಬರಬಹುದೆಂದು ಅಂದಾಜು ಮಾಡಿದ್ದುದಕ್ಕಿಂತಲೂ ಹೆಚ್ಚಾಗಿ ಹಣವು ಬರುವಂತೆ ತೋರಿಬಂದಿದೆ ಇಂಡಿಯಾ ಸರ್ಕಾರದವರು ತಮಗೆ ಚೌಬೀನೆಯನ್ನು ಸರಬರಾಯಿ ಮಾಡಬೇಕೆಂದು ಕೋರಿರುವುದರ ಪರಿಣಾಮವಾಗಿ ಫಾರೆಸ್ಟ್ ಇಲಾಖೆಯ ಹುಟ್ಟುವಳಿಯು ೩೪-೩೦ ಲಕ್ಷ ರೂಪಾಯಿಗಳಿಗೆ ಬರಬಹುದೆಂದು ಕಂಡುಬಂದಿದೆ ಎಂದರೆ ಬಜೆಟ್ ಅಂದಾಜುಗಳಲ್ಲಿ ನಮೂದಿಸಿರುವ ಮೊತ್ತಕ್ಕಿಂತಲೂ ೭.೬ ಲಕ್ಷ ರೂ ಗಳಷ್ಟು ಹೆಚ್ಚು ಹುಟ್ಟುವಳಿ ಬಂದಂತಾಗುತ್ತದೆ ಹೀಗೆ ಹುಟ್ಟುವಳಿಯು ಹೆಚ್ಚಿದಂತೆಯೇ ವೆಚ್ಚವೂ ಬಜೆಟ್ಟಿನಲ್ಲಿ ನಮೂದಾಗಿದ್ದುದಕ್ಕಿಂತಲೂ ೩|| ಲಕ್ಷ ರೂ ಗಳಷ್ಟು ಹೆಚ್ಚಿತು ಆದರೂ ಸಹ ಒಟ್ಟಿನಲ್ಲಿ ನಿವ್ವಳವಾಗಿ ೪ ಲಕ್ಷ ರೂ ಗಳ ಹೆಚ್ಚಿಗೆ ಹುಟ್ಟುವಳಿಯು ಬರುವುದಾಗಿದೆ ಇದು ಗಣನೀಯವಾದಷ್ಟು ಹೆಚ್ಚು ಹುಟ್ಟುವಳಿಯೇ ಸರಿ ಯುದ್ಧದ ದೆಸೆಯಿಂದ ಜರೂರಾದ ಸಂದರ್ಭಗಳು ಒದಗಿ, ಕಾಡುಗಳ ಒಳಾಯ ಪ್ರದೇಶಗಳಲ್ಲಿಯೂ ಇಲಾಖೆಯವರು ಕೆಲಸ ನಡೆಯಿಸಬೇಕಾಯಿತು ಆ ಸಂಬಂಧವಾಗಿ ಅವುಗಳಲ್ಲಿ ಸಂಚಾರ ಮಾರ್ಗಗಳನ್ನೂ ಏರ್ಪಡಿಸಬೇಕಾಯಿತು. ಇದುವರೆಗೆ ಗಿರಾಕಿಗಳೇ ಇಲ್ಲದೆ ಅನುಪಯುಕ್ತವಾಗಿದ್ದಂತೆ ತೋರಿ ಬರುತ್ತಿದ್ದ ಕೆಲವು ಜಾತಿಗಳ ಕಾಡುಮರಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿ ಪ್ರಯೋಜನ ಪಡೆಯುವ ನೂತನ ವಿಧಾನಗಳು ನಿರ್ಧರವಾಗಿ ಆ ಮರಗಳ ಚೌಬೀನೆಯು ವ್ಯಾಪಾರವಾಗುವುದಕ್ಕೂ ಅನುಕೂಲವಾಯಿತು ಆದರೆ ಯುದ್ಧದ ದೆಸೆಯಿಂದ ಚೌಬೀನೆಯ ಸರಬರಾಯಿಗೆ ಈಗ ದೊರೆತಿರುವ ಇದೇ ರೀತಿಯ ವಿಶೇಷ ಬಗೆಯ ಅವಕಾಶಗಳೇ ಇನ್ನು ಮುಂದೆಯೂ ಲಭಿಸುತ್ತ ಬರುವುದೆಂದು ನಿರೀಕ್ಷಿಸುವುದಕ್ಕಾಗುವುದಿಲ್ಲ ಆದಕಾರಣ ಜಂಗಲುಗಳ ಹುಟ್ಟುವಳಿಯನ್ನು ಮಾಮೂಲಾಗಿ ಬರುತ್ತಿದ್ದ ಹುಟ್ಟುವಳಿಯ ಆಧಾರದ ಮೇಲೆ ಮುಂದಿನ ವರ್ಷದ ಬಜೆಟ್ ಅಂದಾಜುಗಳಲ್ಲಿ ಪರಿಮಿತಗೊಳಿಸಿ ನಮೂದಿಸಲಾಗಿದೆ ಮತ್ತೊಂದು ವಿಷಯವನ್ನು ಇದೇ ಸಂಬಂಧದಲ್ಲಿ ಸೂಚಿಸಲಿಚ್ಛಿಸುತ್ತೇನೆ ಭದ್ರಾವತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಸೌದೆ ಮತ್ತು ಇದ್ದಿಲನ್ನು ಸರಬರಾಯಿ ಮಾಡುವುದಕ್ಕಾಗಿ ಕಾಡುಗಳಲ್ಲಿ ಸ್ವಲ್ಪಮಟ್ಟಿಗೆ ಅಲ್ಲಲ್ಲಿ ಮರಗಳನ್ನು ಕಡಿದುಹಾಕಿರುವುದು ಸರಿಯಷ್ಟೆ ಈಗ ಅಂತಹ ಪ್ರದೇಶಗಳಲ್ಲಿ ಹಾಗೆ ಕಡಿದುಹಾಕಿರುವ ಮರಗಳಿಗೆ ಪ್ರತಿಯಾಗಿ ಬೇರೆ ಮರಗಳನ್ನು ಬೆಳೆಯಿಸುವ ತ್ರೈವಾರ್ಷಿಕ ಕಾರ್ಯಕ್ರಮದ ಒಂದು ಏರ್ಪಾಡನ್ನು ಮಾಡಲಾಗಿದೆ ಅದಕ್ಕಾಗಿ ೭೫,೦೦೦ ರೂ ಗಳನ್ನು ಮಂಜೂರು ಮಾಡಲಾಗಿದೆ ಈ ಮೊಬಲಗನ್ನು ಆ ಕಾರ್ಖಾನೆಯವರೇ ಒದಗಿಸುವಂತೆ ಗೊತ್ತುಮಾಡಲಾಗಿದೆ

ಬೆಂಗಳೂರು ದಂಡಿನ ಪ್ರದೇಶದಿಂದ ಬರುವ ಹುಟ್ಟುವಳಿ

ಬೆಂಗಳೂರು ದಂಡಿನ ಪ್ರದೇಶದಿಂದ ಸಂಸ್ಥಾನಕ್ಕೆ ಬರುವ ಹುಟ್ಟುವಳಿಯ ಮೊಬಲಗು ವರ್ಷೇ ವರ್ಷೇ ಕಡಿಮೆ ಬೀಳುತ್ತ ಬಂದು ೧೯೪೦ ೪೧ ನೆಯ ಸಾಲಿನಲ್ಲಿ ಆ ಬಾಬಿನಿಂದ ಬಂದ ಹುಟ್ಟುವಳಿಯು ೧ ೫೭ ಲಕ್ಷ ರೂಪಾಯಿಗಳು ಮಾತ್ರವೇ ಆಯಿತು ಆದರೆ ಚಾಲ್ತಿ ಸಾಲಿನಲ್ಲಿ ಅದು ೪ ೧೪ ಲಕ್ಷ ರೂಪಾಯಿಗಳಾಗಬಹುದೆಂದು ಅಂದಾಜುಮಾಡಿದೆ ಮುಂದಿನ ಸಾಲಿನಲ್ಲಿ, ಎಂದರೆ ೧೯೪೨ ೪೩ ನೆಯ ಸಾಲಿನಲ್ಲಿ, ೭ ೯೭ ಲಕ್ಷ ರೂಪಾಯಿಗಳು ಬರಬಹುದೆಂದು ನಿರೀಕ್ಷಿಸಿದೆ

ಹುಟ್ಟುವಳಿ ಬಾಬುಗಳ ಪೈಕಿ, ಬಹುಶಃ ಕೆಲವು ತಾತ್ಕಾಲಿಕ ಕಾರಣಗಳಿಗಾಗಿ ಹುಟ್ಟುವಳಿಯು ಹೆಚ್ಚುವ ಸಂಭವವಿರುವ ಬಾಬುಗಳನ್ನೇ ನಾನು ಇದುವರೆಗೂ ಪ್ರಸ್ತಾಪಿಸಿರುತ್ತೇನೆ ಯುದ್ಧದ ದೆಸೆಯಿಂದಲೂ ಮತ್ತು ಇನ್ನೂ ಕೆಲವು ಕಾರಣಗಳಿಂದಲೂ ಹುಟ್ಟುವಳಿಯು ಕಡಿಮೆಬಿದ್ದಿರುವ ಕೆಲವು ಬಾಬುಗಳೂ ಇವೆ ಅವುಗಳಲ್ಲಿ ಪೆಟ್ರೋಲ್ ಬಾಬೂ ಒಂದು ಪೆಟ್ರೋಲನ್ನು ಕ್ಲುಪ್ತಪರಿಮಿತಿಯಲ್ಲಿ ಸರಬರಾಯಿಮಾಡುವ ಏರ್ಪಾಡು ಜಾರಿಗೆ ಬಂದಿರುವುದರ ಪರಿಣಾಮವಾಗಿ ಪೆಟ್ರೋಲ್ ಬಾಬಿನಿಂದ ಬರುತ್ತಿದ್ದ ಹುಟ್ಟುವಳಿಯೂ ಕಡಿಮೆಬೀಳುವುದಾಗಿದೆ ರೈಲ್ವೆಗಳ ಬಾಬಿನಿಂದ ಬರುತ್ತಿದ್ದ ನಿವ್ವಳ ಹುಟ್ಟುವಳಿಯೂ ಕಡಿಮೆಬೀಳಬಹುದಾಗಿದೆ ಸಾಮಾನು ಮುಂತಾದುವುಗಳನ್ನು ಸಾಗಿಸುವ ಪ್ರಯಾಣ ಸೌಲಭ್ಯಗಳು ದಿನೇ ದಿನೇ ಪರಿಮಿತವಾಗುವುದೂ ಮತ್ತು ಕೆಲಸ ನಡೆಯಿಸುವ ವೆಚ್ಚಗಳು ಹೆಚ್ಚುವುದೂ ಇದಕ್ಕೆ ಕಾರಣ ಚಿನ್ನದಮೇಲಿನ ಸುಂಕ, ಗಂಧದ ಎಣ್ಣೆ ಮತ್ತು ಕಾಡುಗಳು—ಈ ಬಾಬುಗಳಿಂದ ಈಗ ಬರುತ್ತಿರುವ ಹುಟ್ಟುವಳಿಗಳ ಮಟ್ಟದಲ್ಲಿಯೇ, ಹೆಚ್ಚಿನ ಹುಟ್ಟುವಳಿಗಳು ಮುಂದೆಯೂ ಬರಬಹುದೆಂದು ನಿರೀಕ್ಷಿಸುವ ಹಾಗಿಲ್ಲ ಅದನ್ನು ಮೊದಲೇ ಸೂಚಿಸಿದ್ದೇನೆ

ಆದರೆ ನಾನಾ ಕೆಲಸಗಳಿಗಾಗಿ ಮಾಡತಕ್ಕ ವೆಚ್ಚಗಳಾದರೋ, ಅನೇಕ ಮುಖವಾಗಿ ಹೆಚ್ಚುತ್ತಿವೆ ಆದುದರಿಂದ, ಆಯವ್ಯಯಗಳನ್ನು ಸರಿತೂಗಿಸುವುದಕ್ಕಾಗಿ ಹೊಸದಾಗಿ ಹುಟ್ಟುವಳಿಯ ಬಾಬುಗಳನ್ನು ಕಂಡುಹಿಡಿಯಲೇಬೇಕಾಗಿದೆ ಕಂಪೆನಿಗಳವರ ನಫೆಗಳ ಮೇಲೆ ಹಾಕತಕ್ಕ ವರಮಾನದ ತೆರಿಗೆಯನ್ನು ರೂಪಾಯಿಗೆ ೩ ಆಣೆಗಳಿಂದ ೩|| ಆಣೆಗಳಿಗೆ ಹೆಚ್ಚಿಸುವ ಏರ್ಪಾಡು ಒಂದೇ ಈ ವಿಚಾರವಾಗಿ ಸದ್ಯದಲ್ಲಿ ಸಾಧ್ಯವಿರುವ ಏರ್ಪಾಡೆಂದು ಸರಕಾರದವರು ಭಾವಿಸಿದ್ದಾರೆ ಈ ಸಂಬಂಧದಲ್ಲಿ ವರಮಾನದ ತೆರಿಗೆಯ ಆಕ್ಟನ್ನು ತಿದ್ದುಪಾಟು ಮಾಡುವುದಕ್ಕಾಗಿ ರಚಿಸಿರುವ ಒಂದು ಮಸೂದಾ ಕಾನೂನನ್ನು ಈ ಅಧಿವೇಶನದಲ್ಲಿ ತಮ್ಮ ಮುಂದೆ ತರಲಾಗುವುದು.

ಸೈನ್ಯ

೧೯೩೯ ೪೦ ನೆಯ ಸಾಲಿನ ಲೆಕ್ಕಗಳಿಗನುಸಾರವಾಗಿ ಮೈಸೂರು ಸಂಸ್ಥಾನದ ಸೈನ್ಯಕ್ಕೆ ೧೭ ಲಕ್ಷ ರೂಪಾಯಿಗಳು ವೆಚ್ಚವಾಗುತ್ತಿದ್ದುದು ಮುಂದಿನ ವರ್ಷದಲ್ಲಿ ೩೭ ಲಕ್ಷ ರೂಪಾಯಿಗಳಿಗೆ ಏರುವ ಸಂಭವವಿದೆ ಅರಮನೆಯ ಸೈನ್ಯಕ್ಕೆ (ಪದಾತಿ ಸೈನ್ಯ ಶಾಖೆಗೆ) ಈಗ ಶ್ರೀಮನ್ಮಹಾರಾಜರವರ ಖಾಸ್ ಪದಾತಿ ಸೈನ್ಯವೆಂದು ಹೆಸರಿದೆಯಷ್ಟೆ ಆ ಸೈನ್ಯಕ್ಕೆ ಸೇರಿರತಕ್ಕವರಿಗೆ ವಾಸದ ಮನೆಗಳನ್ನೂ, ಆ ಸೈನ್ಯದ ಕಚೇರಿ ಕಟ್ಟಡಗಳನ್ನೂ ಕಟ್ಟಿಸುವುದಕ್ಕಾಗಿ ವಿಶೇಷ ರೀತಿಯ ನಿಧಿಯಿಂದ ಒದಗಿಸಲ್ಪಟ್ಟಿರುವ ೪|| ಲಕ್ಷ ರೂಪಾಯಿಗಳ ಮೊಬಲಗೂ ಸಹ, ಮೇಲೆ ಕಂಡ ಆ ೩೭ ಲಕ್ಷ ರೂಪಾಯಿಗಳ ಮೊತ್ತದಲ್ಲಿ ಸೇರಿದೆ

ಒಂದನೆಯ ಪಟಾಲಮಿನ ಆಫೀಸರುಗಳೂ ಮತ್ತು ಸೈನಿಕರೂ ಸಮುದ್ರದಾಚೆ ಯುದ್ಧದಲ್ಲಿ ತಮ್ಮ ಕಾರ್ಯಗಳನ್ನು ಶೌರ್ಯದಿಂದಲೂ ಉತ್ಸಾಹದಿಂದಲೂ ಬಹಳ ಚೆನ್ನಾಗಿ ನಿರ್ವಹಿಸಿದರೆಂಬ ಅಂಶವನ್ನು ಈ ಸಂಬಂಧದಲ್ಲಿ ನಾನು ತಿಳಿಸಬಹುದಾಗಿದೆ ಅವರ ವಿಚಾರದಲ್ಲಿ ನಾವುಗಳು ಹೆಮ್ಮೆಪಡುತ್ತಿದ್ದೇವೆ ದೈವಾನುಗ್ರಹದಿಂದ, ಅವರು ಇಲ್ಲಿಗೆ ಬೇಗ ಹಿಂತಿರುಗಿ ಬರಬಹುದೆಂದು ನಿರೀಕ್ಷಿಸಬಹುದಾಗಿದೆ ಅವರ ಕುಟುಂಬಗಳ ಯೋಗಕ್ಷೇಮವನ್ನು ಸಾಧ್ಯವಾದಷ್ಟುಮಟ್ಟಿಗೂ ಚೆನ್ನಾಗಿ ನೋಡಿಕೊಳ್ಳುವಂತೆ ವ್ಯವಸ್ಥೆಮಾಡುವುದು ನಮ್ಮ ಅವಶ್ಯಕರ್ತವ್ಯವಾಗಿದೆ

ವಿದ್ಯಾಭ್ಯಾಸ

ಜನಗಳಿಗೆ ಪ್ರಯೋಜನಕರವಾದ ಆ ಬಗೆಯ ಕಾರ್ಯಕಲಾಪಗಳ ಪೈಕಿ ವಿದ್ಯಾಭ್ಯಾಸದ ಬಾಬು ಅತ್ಯಂತ ಮುಖ್ಯವಾದದು ಮುಂದಿನ ಸಾಲಿನಲ್ಲಿ ಈ ಬಾಬಿಗಾಗಿ ೬೪ ೩೫ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ ವಿದ್ಯಾಭ್ಯಾಸಕ್ಕಾಗಿ 1941 42 ನೆಯ ಸಾಲಿನಲ್ಲಿ ೫೯ ೯೬ ಲಕ್ಷ ರೂಪಾಯಿಗಳು ವೆಚ್ಚವಾಗುವ ನಿರೀಕ್ಷೆಯಿದೆ 1940 41 ನೆಯ ಸಾಲಿನಲ್ಲಿ ೫೫ ೭೩ ಲ ರೂಪಾಯಿಗಳು ವೆಚ್ಚವಾಗಿದ್ದುವು

ವೈದ್ಯ ಇಲಾಖೆ

ಇನ್ನು ಮುಂದೆ ವೈದ್ಯಶಾಖೆಯನ್ನು ಶಾಸ್ತ್ರೀಯವಾ ಮತ್ತು ಸೂಕ್ತವಾದ ಮಾರ್ಗದಲ್ಲಿ ಅಭಿವೃದ್ಧಿಗೊಳಿಸುವುದರಲ್ಲಿ ಸರ್ಕಾರದವರೇ ಪ್ರತ್ಯಕ್ಷವಾಗಿ ಇನ್ನೂ ಹೆಚ್ಚಿ ಭಾಗವನ್ನು ವಹಿಸಬೇಕಾದ ಕಾಲವು ಒದಗಿದೆಯೆಂದು ಸರ್ಕಾರದವರು ಭಾವಿಸುತ್ತಾರೆ ಸಂಸ್ಥಾನದ ಒಳಾಯ ಪ್ರದೇಶಗಳಲ್ಲಿ ಆಯಾ ಸ್ಥಳೀಯ ಸಂಸ್ಥೆಗಳ ಸಹಕಾ ದೊಡನೆ ಪ್ರತಿವರ್ಷವೂ ಕ್ಲುಪ್ತ ಸಂಖ್ಯೆಯಲ್ಲಿ ಆಯುರ್ವೇದ ವೈದ್ಯಶಾಲೆಗಳನ್ನೂ ಮತ್ತು ಯುನಾನಿ ದವಾಖಾನೆಗಳನ್ನೂ ಏರ್ಪಡಿಸುತ್ತ ಬರಬೇಕೆಂಬುದು ಸರ್ಕಾ ದವರ ಉದ್ದೇಶವಾಗಿದೆ ಇದಕ್ಕಾಗಿಯೂ ಮತ್ತು ಇದಕ್ಕೆ ಸಂಬಂಧಪಟ್ಟ ಇತರ ಕಾರ್ಯಕಲಾಪಗಳಿಗ ಗಿಯೂ ಮುಂದಿನ ವರ್ಷದ ಬಜೆಟ್ ಅಂದಾಜಿನಲ್ಲಿ ಅರ್ಧಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ

ಹೊಗದಿ

ನಮ್ಮ ಸಂಸ್ಥಾನದಿಂದ ಪ್ರತಿವರ್ಷವೂ ಇಂಡಿಯಾ ಸರ್ಕಾರಕ್ಕೆ ಪಾವತಿಯಾಗುತ್ತಿರುವ ಹೊಗದಿಯ ಹಣ ಇನ್ನೂ ೧೯ ೩೭ ಲಕ್ಷ ರೂಪಾಯಿಗಳಷ್ಟು ಭಾರಿಯಾಗಿವೆ ನಮ್ಮ ಬಜೆಟ್ಟನ್ನು ರಚಿಸಿ ಅದರ ಮೇರೆ ಕಾರ್ಯಕ್ರಮಗಳನ್ನು ಗೊತ್ತುಮಾಡುವಲ್ಲಿ ಹೊಗದಿಗಾಗಿ ವಿನಿಯೋಗವಾಗುತ್ತಿರುವ ಈ ಮೊಬಲಗನ್ನು ಕುರಿತು ಯೋಚಿಸುವುದಾಗಲಿ ಅಥವಾ ಈ ಭಾರಿ ಮೊತ್ತವನ್ನು ಪ್ರತ್ಯೇಕವಾಗಿ ತೆಗೆದಿಡಬೇಕಾಗುವ ಕಾರಣ ಅದರ ಅಭಾವದಿಂದ ನಮ್ಮ ಅಭಿವೃದ್ಧಿ ಕಾರ್ಯಗಳ ಸಂಬಂಧದಲ್ಲಿ ಆ ಮಟ್ಟಿಗೆ ಉಂಟಾಗುವ ಕೊರತೆಯನ್ನು ಸ್ಮರಣೆಗೆ ತಂದುಕೊಳ್ಳುವುದಾಗಲಿ ತಪ್ಪುವುದು ಸಾಧ್ಯವೇ ಇಲ್ಲ ಹೊಗದಿಯು ವಜಾ ಆಗಬೇಕೆಂಬುದಕ್ಕೆ ಕಾರಣಗಳೇನೆಂಬ ವಿವರವನ್ನು ಮತ್ತೆ ಈ ಸಂದರ್ಭದಲ್ಲಿ ಸೂಚಿಸುವ ಉದ್ದೇಶವು ನನಗಿಲ್ಲ ಅಥವಾ ಹಾಗೆ ಸೂಚಿಸಬೇಕಾದ ಅವಶ್ಯಕತೆಯೂ ಇಲ್ಲ ಹೊಗದಿಯು ಹೋಗಬೇಕೆಂದು ನಾವು ಕೋರುತ್ತಿರುವುದು ನ್ಯಾಯವೆಂಬುದೇನೋ ಬಹುಕಾಲಕ್ಕೆ ಹಿಂದೆಯೇ ಅಂಗಿ

ತವಾಗಿದೆ ಈ ಸಂಬಂಧದ ಪೂರ್ವೋತ್ತರ ಸಂಗತಿಗಳನ್ನು ಸಮಾಲೋಚನೆಮಾಡಿ ನೋಡಿದರೆ, ನಮ್ಮ ಸಂಸ್ಥಾನದ ಹುಟ್ಟುವಳಿಯಲ್ಲಿ ಸೇಕಡ ೫೦ ರಷ್ಟಕ್ಕಿಂತ ಹೊಗೆದಿಯ ಮೊತ್ತದಲ್ಲಿ ಹೆಚ್ಚಾಗಿರುವ ಭಾಗದ ಮೊಬಲಗು, ಸುಮಾರು ಹತ್ತು ವರ್ಷಗಳ ಹಿಂದೆಯೇ ಕಡಿಮೆಯಾಗಬೇಕಾಗಿದ್ದಿತೆಂಬುದು ವ್ಯಕ್ತವಾಗುತ್ತದೆ ಉಳಿದ ಮೊತ್ತದ ಹೊಗೆದಿಯೂ ಕೂಡ 'ನೀಮೆಯರ್ ಅವಾರ್ಡ್' ನಿರ್ಮಾಣದ ಮೇರೆಗೆ ವಿಧಾಯಕವಾಗಿದ್ದ ಪ್ರಕಾರ ಬ್ರಿಟಿಷ್ ಇಂಡಿಯಾದಲ್ಲಿ ಇಂಡಿಯಾ ಸರ್ಕಾರದಿಂದ ವರಮಾನದ ತೆರಿಗೆ ಹುಟ್ಟುವಳಿಯ ಪ್ರಾಂತೀಯ ವಿಭಾಗವು ಪ್ರಾರಂಭವಾದ ಕಾಲದಲ್ಲೇ ವಜಾ ಆಗಬೇಕಾಗಿದ್ದಿತು ಆದರೆ ಹಾಗೆ ಹೊಗೆದಿಯೇನೋ ವಜಾ ಆಗದೆ ನಿಂತೇ ಹೋಯಿತು ವಾಸ್ತವವಾಗಿ ನಡೆದಿರುವುದು ಇಷ್ಟು, ನಾವು ಈಗ ಸೂಚಿಸಿದಂತೆ ಸಂಸ್ಥಾನದ ಹುಟ್ಟುವಳಿಯಲ್ಲಿ ಸೇಕಡ ೫೦ ರಷ್ಟು ಮೊಬಲಗಿಗಿಂತ (ಎಂದರೆ ೫೦ ೩೯ ಲಕ್ಷ ರೂಪಾಯಿಗಳಿಗಿಂತ) ಹೊಗೆದಿಯಲ್ಲಿ ಹೆಚ್ಚಾಗಿರುವ ಮೊತ್ತವು ಹೊಗೆದಿಯಿಂದ ವಜಾ ಆಗುವುದೇನೋ ಅವೇರವೆ ತಡವಾಗಿಯೇ ಹೋಯಿತು ಹೊಗೆದಿಯಲ್ಲಿ ಈಗ ಕೊಡಬೇಕಾದುದೆಂದು ಉಳಿದಿರುವ ಭಾಗದ ಮೊಬಲಗೂ ಸಹ ಕ್ರಮಕ್ರಮವಾಗಿ ಕಡಿಮೆ ಮಾಡಲ್ಪಡುತ್ತ ಇರಲೂ ಇಲ್ಲ, ಆದರೆ ಈಗ್ಗೆ ಕೆಲವು ವರ್ಷಗಳಿಂದ ಬ್ರಿಟಿಷ ಇಂಡಿಯಾ ಪ್ರಾಂತ್ಯಗಳಿಗೆ ಇಂಡಿಯಾ ಸರ್ಕಾರದಿಂದ ವರಮಾನದ ತೆರಿಗೆ ಹುಟ್ಟುವಳಿಯ ವಿಭಾಗವಾಗುವ ಕೆಲಸವೇನೋ ನಡೆದೇ ನಡೆಯಿತು ಆ ವಿಭಾಗದಿಂದ ಬ್ರಿಟಿಷ್ ಇಂಡಿಯಾ ಪ್ರಾಂತ್ಯಗಳಿಗೆ ದೊರೆತ ಮೊಬಲಗುಗಳಾದರೋ ಆ ಪ್ರಾಂತ್ಯಗಳವರೇ ನಿರೀಕ್ಷಿಸಿದ್ದ ಮೊಬಲಗುಗಳಿಗಿಂತಲೂ ಬಹಳ ಹೆಚ್ಚು 1940-41 ನೆ ಸಾಲಿಗೆ ಬ್ರಿಟಿಷ್ ಇಂಡಿಯಾದ ನಾನಾ ಪ್ರಾಂತ್ಯಗಳಿಗೂ ಆದಿಯಲ್ಲಿ ಅವು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಾಗಿ ೩ ಲಕ್ಷ ರೂಪಾಯಿಗಳು ಬರುತ್ತವೆಂದು ಇಂಡಿಯಾ ಸರ್ಕಾರದ ಫೈನಾನ್ಸ್ ಮೆಂಬರವರು ಈಚಿನ ತಮ್ಮ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ 1941 42 ನೆಯ ಸಾಲಿಗೆ ಬ್ರಿಟಿಷ್ ಇಂಡಿಯಾದ ನಾನಾ ಪ್ರಾಂತ್ಯಗಳಿಗೂ ದೊರೆತ ಮೊಬಲಗಂತೂ, ಅವು ಆದಿಯಲ್ಲಿ ನಿರೀಕ್ಷಿಸಿದ್ದಕ್ಕಿಂತಲೂ 2 ಕೋಟಿ ರೂಪಾಯಿಗಳಷ್ಟು ಹೆಚ್ಚು ಮುಂದಿನ ಸಾಲಾದ 1942 43 ನೆಯ ಸಾಲಿಗೆ ಅವಕ್ಕೆ ದೊರೆಯುವದಾಗಿರುವ ಒಟ್ಟು ಮೊತ್ತವಂತೂ 837 ಲಕ್ಷ ರೂಪಾಯಿಗಳು ಇಂಡಿಯಾ ಸರ್ಕಾರದ ಫೈನಾನ್ಸ್ ಮೆಂಬರವರೇ ಹೇಳಿರುವಂತೆ ಈ ಮೊಬಲಗು "ನೀಮೆಯರ್ ಅವಾರ್ಡ್" ನಿರ್ಮಾಣ ಕಾಲದಲ್ಲಿ ಮುಂದೆ 10 ವರುಷಗಳ ಅವಧಿಯವರೆಗೂ ಪ್ರತಿ ವರ್ಷವೂ ಆ ಸಂಚಿಕೆಯ ಮೊತ್ತವು ಹೆಚ್ಚುತ್ತಾ ಹೋಗಬೇಕೆಂದು ಗೊತ್ತಾಗಿದ್ದ ಮೇರೆಗೆ ಆ ಅವಧಿಯ ಕೊನೆಯಲ್ಲಿ ಪ್ರಾಂತ್ಯಗಳಿಗೆ ದೊರೆಯುವಂತೆ ನಿರೀಕ್ಷೆ ಇದ್ದ ಒಟ್ಟು ಮೊತ್ತಕ್ಕಿಂತಲೂ ಅಧಿಕವಾಗಿದೆ ಅಲ್ಲದೆ ಪ್ರಾಂತ್ಯಗಳಿಗೆ ದೊರೆಯುವದು ಸಾಧ್ಯವೆಂದು ಯುದ್ಧಕ್ಕೆ ಮುಂಚೆ ಯಾವಕಾಲದಲ್ಲೇ ಆಗಲಿ ತೋರಿಬಂದಿರಬಹುದಾದ ಯಾವಮೊತ್ತಕ್ಕಿಂತಲೂ ಸಹ ಅಧಿಕವಾಗಿದೆ ಅಲ್ಲಿಯ ಸಂದರ್ಭಗಳು ಹೀಗಿರುವಲ್ಲಿ ನಮ್ಮ ಸಂಸ್ಥಾನದ ಹೊಗೆದಿಯ ಹಣವನ್ನು ಮಾತ್ರ ಒಡನೆಯೇ ಬಿಟ್ಟು ಕೊಡದೆ ಇನ್ನೂ ತಡಮಾಡುವದಕ್ಕೆ ಲೇಶಮಾತ್ರವೂ ಕಾರಣವಿಲ್ಲ ಆದಕಾರಣ ನಮಗೆ ಸಹಾಯ ಮಾಡಬೇಕಾದುದು ಅತಿ ಜರೂರಾಗಿ ಆವಶ್ಯಕವಾಗಿದೆ ಯೆಂಬುವದನ್ನು ನಾವು ಅನೇಕ ವರ್ಷಗಳಿಂದಲೂ ಎದುರು ನೋಡುತ್ತಿರುವಂತೆ ಈ ಹೊಗೆದಿಯ ಹೊರೆಯನ್ನು ತಪ್ಪಿಸುವದು ಕೂಡಲೆ ಅಗತ್ಯವೆಂಬುದನ್ನು ಇಂಡಿಯಾ ಸರ್ಕಾರದವರು ಮನಗಂಡು ಹೊಗೆದಿಯನ್ನು ಒಡನೆಯೇ ತೆಗೆದುಹಾಕುವರೆಂದು ನಾವುಗಳು ಮನಸಾರೆ ಹಾರೈಸುತ್ತಿದ್ದೇವೆ

ಪರಿಸಮಾಪ್ತಿ

"ಯುದ್ಧ ಸಂಬಂಧವಾಗಿ ನೋಡಿದರೆ, ಈಗಿನದೇನೊ ನಿಜಃ ಅತ್ಯಂತ ವಿಷಮ ದೆಶೆಯ ಬಿಕ್ಕಟ್ಟಿನ ಸಮಯವಾಗಿದೆ ಆತಂಕ ಜನಕವಾದ ಮತ್ತು ನಿರುತ್ಸಾಹಕರವಾದ ವೇಳೆಗಳೂ ಪ್ರಾಯಶಃ ಒದಗಿದರೂ ಒದಗಬಹುದು ಹಾಗಿದ್ದಾಗ್ಯೂ ಕೂಡ, ಮಿತ್ರರಾಷ್ಟ್ರಗಳಿಗೆ ಯುದ್ಧದಲ್ಲಿ ಸಂಪೂರ್ಣವಾಗಿ ಜಯವಾಗುವುದು ಖಂಡಿತವಾಗಿರುವುದಲ್ಲದೆ ಶೀಘ್ರವಾಗಿಯೂ ಜಯಲಾಭವಾಗುತ್ತ ಬರುವುದೆಂದು ಭಾವಿಸಿದರೆ, ಅದು ಉಚಿತವಲ್ಲದ ಉತ್ಸಾಹಭಾವನೆಯಿಂದೇನೂ ಯಾರೂ ಈಗ ಹೇಳಲು ಸುತರಾಂ ಕಾರಣವಿಲ್ಲ. ಪರಿಸ್ಥಿತಿಯು ಈ ರೀತಿ ಆಶಾಜನಕವಾಗಿದ್ದರೂ ಮುಂದಿನ ಸ್ಥಿತಿಯ ವಿಚಾರವಾದ ಆತಂಕವೇನೂ ಇಲ್ಲದೆ ಹೋಗಿಲ್ಲ ಈ ಯೋಚನೆಯು ಬಂದೊಡನೆಯೇ ನಮ್ಮ ಮನಸ್ಸಿಗೆ ಹಿಂದಿನ ಘೋರಯುದ್ಧದ ಕೊನೆಯ ವರ್ಷಗಳ ದಿನಗಳಲ್ಲಿ ಆದ ಅನುಭವವು ನೆನಪಾಗುತ್ತದೆ ಆಗ್ಗೆ ಆಹಾರವಸ್ತುಗಳು ಸಾಲದೆ ಹೋದ ಕೊರತೆಯುಂಟಾಗಿ ಅವುಗಳ ಧಾರಣೆಗಳು ಏರುತ್ತಿದ್ದುದೊಂದು, ಪ್ಲೇಗಿನ ಅಂವಾತರವೊಂದು, ಎಲ್ಲಕ್ಕೂ ಮಿಗಿಲಾಗಿ ಸಂಸ್ಥಾನದ ಯಾವುದೊಂದು ಮೂಲೆಯನ್ನೂ ಬಿಡದೆ ಸಮಸ್ತ ಪ್ರದೇಶಗಳನ್ನೂ ಆವರಿಸಿ ಜನರ ಪ್ರಾಣವನ್ನೇ ಹೀರಿ ಹಲವು ಸಾವಿರ ಮಂದಿಗಳನ್ನು ಆಹುತಿಗೊಂಡ ಇನ್‌ಪ್ಲುಯೆಂಜ ವ್ಯಾಧಿಯ ಹಾವಳಿಯೊಂದು ಇವೇ ಮುಂತಾದ ವಿಧವಿಧದ ಕಷ್ಟಗಳು ಸಂಭವಿಸಿದವು ಅವುಗಳ ದಾರುಣ ಪರಿಣಾಮವಾಗಿ ಒದಗಿದವುಗಳಿಗೆ ಪ್ರಜೆಗಳ ಯೋಗಕ್ಷೇಮಕ್ಕೇ ನಿಕಟಸಂಬಂಧವುಳ್ಳವುಗಳಾಗಿದ್ದ ಹಲವು ತೊಡಕಿನ ವಿಚಾರಗಳನ್ನು ಸರ್ಕಾರದವರು ಬಗೆಹರಿಸಿ ಇತ್ಯರ್ಥಪಡಿಸಬೇಕಾದ ಪರಿಸ್ಥಿತಿಯೊದಗಿತ

ಈಗಿನ ಯುದ್ಧವು ಕೊನೆ ಮುಟ್ಟುವಾಗ್ಗೆ ಕೂಡ ನಾವು ಅದೇ ಬಗೆಯ ದಾರುಣ ಸನ್ನಿವೇಶಗಳನ್ನು ಎದುರಿಸಬೇಕಾಗಿ ಬರಬಹುದು ಅಥವಾ ಅವಕ್ಕಿಂತಲೂ ಕ್ಲೇಶದಾಯಕವಾಗಿ ಮತ್ತಷ್ಟು ತೊಡಕಾದ ಸನ್ನಿವೇಶಗಳೇ ಒದಗಿ ಅವುಗಳಿಂದ ಉಂಟಾಗತಕ್ಕ ನಾನಾ ಸಮಸ್ಯೆಗಳನ್ನು ಬಗೆಹರಿಸುವ ಕಷ್ಟವೇ ಉಂಟಾದರೂ ಉಂಟಾಗಬಹುದು ಹಾಗೆ ಕಷ್ಟವುಂಟಾದ ಪಕ್ಷಕ್ಕೆ, ಅದು ಅನಿರೀಕ್ಷಿತವಾಗಿ ಒಂದೊದಗುವುದಕ್ಕೆ ನಾವು ಅವಕಾಶ ಕೊಡಲೂ ಕೂಡದು, ಅಥವಾ ಅದನ್ನೆದುರಿಸಲು ಪೂರ್ವಸಿದ್ಧತೆ ಮಾಡಿಕೊಳ್ಳದೆ ಸುಮ್ಮನಿರಲೂಕೂಡದು ಕಳೆದ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಸಂಸ್ಥಾನವು ಸರ್ವತೋಮುಖವಾಗಿ ವಿಶೇಷ ಮುಂಮುವರಿದಿದೆ ಆದಕಾರಣ, ನಾನು ಈಗ ಸೂಚಿಸಿದಂಥ ಕಷ್ಟಗಳೇನಾದರೂ ಈಗಿನ ಯುದ್ಧಾನಂತರ ಒದಗಿದಲ್ಲಿ ಅವುಗಳನ್ನೆದುರಿಸಲು, ಈಗ್ಗೆ ಇಪ್ಪತ್ತೈದು ವರ್ಷಗಳಹಿಂದೆ ಇದ್ದುದಕ್ಕಿಂತಲೂ ಹೆಚ್ಚಿನ ಸಾಧನೋಪಾಯಗಳನ್ನು ನಾವುಗಳು ಈಗ ಪಡೆದೇ ಇದ್ದೇವೆ ಸಾಂಕ್ರಾಮಿಕ ಜಾಡ್ಯಗಳು ಸಂಭವಿಸಿದರೆ ನಮ್ಮ ಸಂಸ್ಥಾನದ ವೈದ್ಯ ಇಲಾಖೆಯವರೂ ಜನಾರೋಗ್ಯ ರಕ್ಷಣೆ ಇಲಾಖೆಯವರೂ ಹಿಂದಿದ್ದುದಕ್ಕಿಂತ ಹೆಚ್ಚುಹೆಚ್ಚು ಜಾಗ್ರತೆಯಾಗಿಯೂ, ಹೆಚ್ಚುಹೆಚ್ಚು ಪರಿಣಾಮಕರವಾಗಿಯೂ ಅವುಗಳ ಹಾವಳಿಯನ್ನಡಗಿಸಿ ಹತೋಟಿಗೆ ತರಲು ತಕ್ಕ ಸಾಧನ ಸಲಕರಣೆಗಳಿಂದ ಸುಸಜ್ಜಿತರಾಗಿ ಹಿಂದಿದ್ದುದಕ್ಕಿಂತಲೂ ಈಗ ಹೆಚ್ಚು ಸಮರ್ಥರಾಗಿದ್ದಾರೆ ಯುದ್ಧ ಪರಿಸ್ಥಿತಿಯು ಆವಶ್ಯಕತೆಗಳಿಗೆ ತಕ್ಕಂತೆ ಅಳವಡಿಸಿರುವ ಈಗಿನ ನವ್ಯ ಕೈಗಾರಿಕೆಗಳ ಉದ್ಯಮಗಳಿಂದ ನಿರುದ್ಯೋಗ ನಿವಾರಣೆಗೆ ಸಹಾಯವಾಗುತ್ತದೆ ಯುದ್ಧ ಮುಗಿದು ಶಾಂತಿಸ್ಥಾಪನೆಯಾದಮೇಲೆ ಕೆಲವು ವರ್ಷಗಳ ಕಾಲ ಆಹಾರಧಾನ್ಯಗಳು ತಕ್ಕಷ್ಟು ಪರಿಮಾಣದಲ್ಲಿ ಒದಗದೆ ಹೋಗುವ ಕೊರತೆಯೇ ಒಂದುವೇಳೆ ಕಂಡು ಬಂದರೂ ಕೂಡ ಆಹಾರಧಾನ್ಯಗಳ ಬೆಳೆಯನ್ನು ಹೆಚ್ಚು ಮಾಡಲು ನಾವು ಈಗಿನಿಂದಲೇ ಕೈಗೊಂಡಿರುವ ಪ್ರಬಲ ಪ್ರಯತ್ನಗಳ ಪರಿಣಾಮವಾಗಿ ಸಂಸ್ಥಾನದಲ್ಲಿ ಆ ಕೊರತೆಯ ದೆಸೆಯಿಂದ ಅಷ್ಟೇನೂ ಕಷ್ಟವಾಗದಂತೆ ನಾವು ವ್ಯವಸ್ಥೆಪಡಿಸಿಕೊಳ್ಳುವುದು ಸಾಧ್ಯವಾಗುತ್ತದೆ

ಆದಕಾರಣ ಒಟ್ಟು ಪ್ರಪಂಚವನ್ನೇ ಆವರಿಸಿರುವ ಈಗಿನ ಯುದ್ಧದ ದೆಸೆಯಿಂದ ಈ ಬಗೆಯ ಪ್ರಪಂಚವ್ಯಾಪಿಯಾದ ಯಾವುದೊಂದು ಯುದ್ಧಕ್ಕೂ ಸಹಜ ಪರಿಣಾಮವೆನಿಸಿ ಅನಿವಾರ್ಯವಾಗಿರುವಂಥ ತೊಂದರೆಗಳೂ ಕ್ಲೇಶಗಳೂ ಸಂಭವಿಸಿದರೂ ಕೂಡ ಅವುಗಳನ್ನು ನಾವುಗಳು ಪರಿಹರಿಸಿಕೊಳ್ಳುವೆವೆಂಬ ಯುಕ್ತವಾದ ಭರವಸೆಯಿಂದ ಕೂಡಿ ಅವುಗಳನ್ನೆದುರಿಸಬಹುದಾಗಿದೆ ಆದರೆ, ಮುಂದೆ ಚಿರಕಾಲ ಶಾಂತಿಯು ಬೆಳಗುತ್ತ ಪ್ರಗತಿ ಸಾಧನೆಯು ಶೀಘ್ರ ಶೀಘ್ರವಾಗಿ ಶಿಸ್ತಿನಿಂದ ಮುಂದುವರಿಯುವ ಮಂಗಳ ದಿನಗಳ ನವಯುಗವನ್ನು ಕಾಣುವುದು ಸಾಧ್ಯವಾಗುವದೊಂದು. ಯುದ್ಧಾನಂತರ ಪ್ರಪಂಚದ ಪರಿಸ್ಥಿತಿಯನ್ನು ಉತ್ತಮಗೊಳಿಸಿ ಜೀವನವನ್ನು ಸುಖಮಯವಾಗಿ ಮಾಡುವ ವಿಚಾರವಾಗಿ ಜನರ ಮನಸ್ಸನ್ನು ಈಗ ಮುತ್ತುತ್ತಿರುವ ಸದ್ಭಾವನೆಗಳೆಲ್ಲ ಪೂರ್ತಿಯಾಗಲ್ಲದಿದ್ದರೆ, ಸ್ವಲ್ಪಮಟ್ಟಿಗಾದರೂ ಸಮಾಜೋನ್ನತಿಯನ್ನು ಸಾಧಿಸಿ ಜೀವನ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೆ ಸಾಧಕವಾಗುವ ಹಾಗೆ ಶೀಘ್ರವಾಗಿ ಆಚರಣೆಗೆ ಬರಲನುಕೂಲಿಸುವ ಬಹುಜನಸಮ್ಮತವಾದ ಕಾರ್ಯನೀತಿಗಳ ರೂಪಕ್ಕೆಳೆಯುವುದು ಸಾಧ್ಯವಾಗುವುದೊಂದು ಇವೆರಡೂ ನೆರವೇರುವ ನಿರೀಕ್ಷೆಯಿಲ್ಲದೆ ಹೋಗುವ ಪಕ್ಷಕ್ಕೆ ಈ ಯುದ್ಧದಲ್ಲಿ ಹೋರಾಡಿ ಹೊಡೆದಾಡಿ ಜಯಲಾಭವನ್ನು ಪಡೆದಾಗ್ಯೂ ನಿರರ್ಥಕವಾದಂತೆಯೇ ಸರಿ ಯುದ್ಧ ಸಂಬಂಧವಾದ ರಾಷ್ಟ್ರೀಯ ರಕ್ಷಣಾಬಲ ವ್ಯವಸ್ಥೆಯನ್ನು (ನ್ಯಾಷನಲ್ ವಾರ್ ಫ್ರಂಟ್) ಏರ್ಪಡಿಸಿರತಕ್ಕ ಆಶಯವು ಎಷ್ಟೇ ಸ್ವಲ್ಪವಾಗಿ ಸಿದ್ಧಿಸಿದರೂ ಸಹ. ಮುಂದೆ ಅದು ತನ್ನ ಉದ್ದೇಶಸಾಧನೆಯ ಕಾರ್ಯಕಲಾಪಗಳನ್ನು ಮತ್ತಷ್ಟು ಹೊಂದಿಕೆಯಿಂದ ಅಳವಡಿಸಿಕೊಂಡು ಸಮರ್ಪಕವಾದ ಮತ್ತು ಸಫಲವಾದ ರೀತಿಯಲ್ಲಿ ರಾಷ್ಟ್ರಹಿತವನ್ನು ಸಾಧಿಸಿ ದೇಶೋನ್ನತಿಯನ್ನುಂಟುಮಾಡುವ ಸಾಧನವಾಗಿ ಪರಿಣಮಿಸುವುದು ಖಂಡಿತವಾಗಿಯೂ ಸಾಧ್ಯವಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ

ಜಾಹೀರ ಅಭಿನಂದನ, ಹೋಟಗಿ.

ತಾ॥ ೨೭ ೫ ೪೩ ನೆಯ ಗುರುವಾರ ದಿವಸ ಸಾಯಂಕಾಲ ೬ ಘಂಟೆಗೆ ಇಲ್ಲಿಯ ಬೃಹನ್ಮಠದಲ್ಲಿ ಸದರಿ ಮಠಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆಸೇರಿ ಸೋಲಾಪುರದ ಸೌ॥ ಭಾಗೀರಥೀದೇವಿ ಕಟಾಪ ಇವರು ಮುನಿಸಿಪಲ್ ಸ್ಕೂಲ್ ಬೋರ್ಡ್ ಮೆಂಬರರಾಗಿ ಆರಿಸಿಬಂದ ಸಂತೋಷಕ್ಕೋಸ್ಕರ ಅಭಿನಂದನವು ಮಾಡಲ್ಪಟ್ಟಿತು.

ಸ್ಕೂಲ್ ಬೋರ್ಡಿನಲ್ಲಿ ಈವರೆಗೂ ವೀರಶೈವ ಸ್ತ್ರೀಯರಲ್ಲಿ ಒಬ್ಬರೂ ಮೆಂಬರರಾಗಿ ಬಂದಿರಲಿಲ್ಲ ಈಗ ಸೌ॥ ಭಾಗೀರಥೀದೇವಿ ಕಟಾಪ ಇವರು ಮುನಿಸಿಪಲ್ ಪ್ರೆಸಿಡೆಂಟರ ಅಭಿಪ್ರಾಯದ ಮೇರೆಗೆ ಆರಿಸಲ್ಪಟ್ಟದನ್ನು ಕೇಳಿ ಯಾವ ನಿಜವಾದ ವೀರಶೈವನಿಗೆ ಆನಂದವಾಗಲಿಕ್ಕಿಲ್ಲ? ಇವರು ವಿದ್ಯಾವತಿಯರೂ, ಸದಾಚಾರಸಂಪನ್ನೆಯರೂ, ಗುರುಭಕ್ತಿಪರಾಯಣೆಯರೂ ಆಗಿದ್ದಾರೆ ಇಂತಹವರನ್ನು ಮೆಂಬರರನ್ನಾಗಿ ನಿಯಮಿಸದೆ ಬೇರೆಯವರನ್ನು ನಿಯಮಿಸುವ ಬಗ್ಗೆ ಮಾಡಿದ ಆತಂಕಗಳೆಲ್ಲವೂ ಅಂತಕನ ಅಂತಃಪುರವನ್ನು ಸೇರಿದವು ಗುರುಭಕ್ತರಿಗೆ ಸರ್ವತ್ರ, ಸರ್ವದಾ ವಿಜಯವೇ ಎಂಬುವದರಲ್ಲಿ ಸಂಶಯವಿಲ್ಲ ಅಸ್ತು! ಆ ದಿವಸ ಹೋಟಗೀ ಗ್ರಾಮಕ್ಕೆ ಗುರುದರ್ಶನಕ್ಕಾಗಿ ಆಗಮಿಸಿದ ಸೌ॥ ಭಾಗೀರಥೀದೇವಿಯವರ ಬಗ್ಗೆ ಶ್ರೀ ನೀಲಕಂಠ ಕರಪೆ, ಶ್ರೀ ರೇವಣಸಿದ್ಧಪ್ಪ ಕೊಟಾಣೆ ಮಾಸ್ತರ, ಮಲ್ಲಿಕಾರ್ಜುನಪ್ಪಾ ಫತಾಟೆ ಇವರು ತಮ್ಮ ಸಂತೋಷವನ್ನು ವ್ಯಕ್ತಮಾಡಿ ಬಾಲಕ್ಕೆಯ ಮಾಲೆಯನ್ನು ಸೌ॥ ಭಾಗೀರಥೀಬಾಯಿಯವರಿಗೆ ಅರ್ಪಿಸಿದರು ಆಗ್ಗೆ ಅವರು ತಮ್ಮ ವಿನಯಕ್ಕನುಸರಿಸಿ ಯೋಗ್ಯರೀತಿಯಿಂದ ಉತ್ತರವನ್ನಿತ್ತರು ಅಧ್ಯಕ್ಷರ ಭಾಷಣವಾಗಿ ಶ್ರೀ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು ಈ ಕಾರ್ಯವನ್ನು ಅಣ್ಣಾರಾವಭಾವಿ ಭೀಮಾಶಂಕರ ಗಂಗದೆ ಇವರು ಒಳ್ಳೇಮನಃಪೂರ್ವಕ ನೆರವೇರಿಸಿದರು

ಜಿ ಜಿ ಪಾಟೀಲ ಹೋತ್ರಿ

ಸಂಸ್ಕೃತ ವಿದ್ಯಾರ್ಥಿಗಳಿಗೆ ಸೂಚನೆ

ಬಳ್ಳಾರಿ ಶ್ರೀಗುರುನಿವಾಸ ಸಂಸ್ಕೃತ ಶಾಲೆಯು ಜೂನ್ ೧ನೇ ತಾರೀಖಿನಿಂದ ಪ್ರಾರಂಭವಾಗಿದ್ದು ಮದ್ರಾಸ್ ಯುನಿವರ್ಸಿಟಿ ಎಂಟ್ರೆನ್ಸ್ ಪರೀಕ್ಷೆಯ ಪಾಠ ಕಲಿಸುವ ವ್ಯವಸ್ಥೆ ಮಾಡಲಾಗಿದೆ ಉಚ್ಚತರಗತಿಯಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳು ಇದೇ ಜೂನ್ ೧೨ನೇ ತಾರೀಖಿನೊಳಗಾಗಿ ಬರತಕ್ಕದ್ದು ಉಚಿತ ಭೋಜನ ವ್ಯವಸ್ಥೆ ಮಾಡಲಾಗಿದೆ

ಬಳ್ಳಾರಿ ಕಂಠಿ ವೀರಯ್ಯ ಬಳ್ಳಾರಿ,
೨-೬-೪೩ ವ್ಯವಸ್ಥಾಪಕ.

ಪಂಚಾಚಾರ್ಯಪ್ರಭಾ.

೧೯೪೨ನೆಯ ಜೂನ್ ತಾ|| ೮ನೆಯ ಸೋಮವಾರ

ಶಿವಸರ್ವೋತ್ತಮತ್ವ.

"ಯದಾ ತಮಸ್ತನ್ನ ದಿವಾ ನರಾತ್ರಿರ್ನಸನ್ನ ಚಾಸಚ್ಛಿವ ಏವ ಕೇವಲಃ"

"ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ"

"ಉಮಾಸಹಾಯಂ ಪರಮೇಶ್ವರಂ ಪ್ರಭುಂ"

ಇತ್ಯಾದ್ಯನೇಕಶ್ರುತಿಗಳು ಶಿವನೇ ಅನಾದಿಮೂರ್ತಿಯೆಂದೂ, ಅವನೇ ಪರಬ್ರಹ್ಮವೆಂದೂ, ಶಕ್ತಿವಿಶಿಷ್ಟನೆಂದೂ ಮುಕ್ತಕಂಠದಿಂದ ಸಾರುತ್ತಲಿರುವವು. ಶಕ್ತಿವಿಶಿಷ್ಟವಾದ ಆ ಪರಶಿವಮೂರ್ತಿಯಿಂದಲೇ ಚರಾಚರಾತ್ಮಕವಾದೀ ಜಗತ್ತು ನಿರ್ಮಿತವಾಗಿರುವದೆಂದು ತ್ರಿಕಾಲಜ್ಞಾನಿಗಳಾದ ಅನೇಕಜನಮಹರ್ಷಿಗಳು ತಮ್ಮ ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಸಿರುತ್ತಾರೆ ವಿಷ್ಣು, ಬ್ರಹ್ಮ, ಇಂದ್ರ, ಕುಬೇರ ಮೊದಲಾದ ದೇವತೆಗಳು ಆ ಪರಮಾತ್ಮನ ಉಪಾಸನೆಯಿಂದಲೇ ತಮಗೆ ಪ್ರಾಪ್ತವಾಗಿರುವ ಅಮೂಲ್ಯಸ್ಥಾನಗಳನ್ನು ಅಲಂಕರಿಸಿದರೆಂದು ವ್ಯಾಸಮಹರ್ಷಿಯು ತಾನು ರಚಿಸಿದ ಸ್ಕಾಂದಾದಿಪುರಾಣಗಳಲ್ಲಿ ಉಲ್ಲೇಖಿಸಿರುತ್ತಾನೆ ಸಮಸ್ತದೇವತೆಗಳಿಗೆಲ್ಲ ಶಿವನೇ ಉಪಾಸ್ಯಮೂರ್ತಿಯಾಗಿರುವದರಿಂದ, ಆ ಶಿವನಿಗೆ "ಮಹಾದೇವ"ನೆಂಬ ನಾಮವು ಅನ್ವರ್ಥವಾಗಿ ಪ್ರಾಪ್ತವಾಗಿರುವದು ಪೂರ್ವಕಾಲದಲ್ಲಿ ಭರತಖಂಡದಲ್ಲಿರತಕ್ಕ ಸಮಸ್ತಯೋಗಿಗಳೂ, ಚಕ್ರವರ್ತಿಗಳೂ, ಮಾನವರೂ ಶಿವನೇ ಸರ್ವೋತ್ತಮನೆಂದು ನಂಬಿ, ಆತನ ಸ್ವರೂಪವಾದ ಶಿವಲಿಂಗಮೂರ್ತಿಯನ್ನು ಪ್ರತಿಯೊಂದು ಸ್ಥಾನದಲ್ಲಿಯೂ ಸ್ಥಾಪಿಸಿ, ನಿಸ್ಸೀಮಭಕ್ತಿಯಿಂದ ಆವನ ಉಪಾಸನೆಯನ್ನು ಮಾಡಿ ಕೈವಲ್ಯಸುಖವನ್ನನುಭವಿಸಿದರು ಪ್ರಾಚೀನಮಹರ್ಷಿಗಳು ಶಿವಲಿಂಗಮೂರ್ತಿಯನ್ನು ಸ್ಥಾಪಿಸಿ ಪೂಜಿಸಿದಂತೆ, ಇನ್ನಾವ ಮೂರ್ತಿಗಳನ್ನಾಗಲಿ ಸ್ಥಾಪಿಸಲಿಲ್ಲ ಮತ್ತು ಪೂಜಿಸಲಿಲ್ಲ. ಲೋಕವಿಖ್ಯಾತನಾದ ವ್ಯಾಸಮಹರ್ಷಿಯು ತಾನು ಆದಿಯಲ್ಲಿ ವಿಷ್ಣುಭಕ್ತನಾಗಿ, ವಿಷ್ಣುವೇ ದೇವೋತ್ತಮನೆಂದು ಸಾರುತ್ತ ಕಾಶೀಕ್ಷೇತ್ರಕ್ಕೆ ಹೋಗಿ, ವಿಶ್ವನಾಥನ ದೇವಾಲಯದಲ್ಲಿಯೂ ಸಹ "ನ ದೇವಃ ಕೇಶವಾತ್ಪರಃ" ಎಂದು ವಿಷ್ಣುವಿನ ಆಧಿಕ್ಯವನ್ನು ಸಾರಲು, ಕೂಡಲೆ ವ್ಯಾಸನು ನಂದೀಶ್ವರನಿಂದ ಹಸ್ತಸ್ತಂಭನವನ್ನು ಹೊಂದಿ, ಅಸಾಧಾರಣವಾದ ದುಃಖಕ್ಕೀಡಾದನು ಆಗ್ಗೆ ವಿಷ್ಣುವು ವ್ಯಾಸನ ಹೃದಯದಲ್ಲಿ ಬಂದು, ಈ ರೀತಿಯಾಗಿ ಬೋಧಿಸಿದನು—

ಏಕ ಏವಹಿ ವಿಶ್ವೇಶೋ ದ್ವಿತೀಯೋ ನಾಸ್ತಿ ಕಶ್ಚನ ||೪೯||

ತತ್ಪ್ರಸಾದಾದಹಂ ಚಕ್ರೀ ಲಕ್ಷ್ಮೀಶಸ್ತತ್ರ ಭಾವತಃ |
ತ್ರೈಲೋಕ್ಯರಕ್ಷಾಸಾಮರ್ಥ್ಯಂ ದತ್ತಂ ತೇನೈವ ಶಂಭುನಾ ||೫೦||

ತದ್ಭಕ್ತ್ಯಾ ಪರಮೈಶ್ವರ್ಯಂ ಮಯಾ ಲಬ್ಧಂ ಪರಾಶರ |
ಇದಾನೀಂ ಸ್ತುಹಿ ತಂ ಶಂಭುಂ ಯದಿ ಮೇ ಶುಭಮಿಚ್ಛಸಿ ||೫೧||

ಕಾಶೀಖಂಡ ೯೫ನೆಯ ಅಧ್ಯಾಯ.

ಎಲೈ ವ್ಯಾಸನೇ! ಸಮಸ್ತದೇವತೆಗಳಲ್ಲಿ ವಿಶ್ವನಾಥನೇ ಮುಖ್ಯನಾಗಿದ್ದಾನೆ; ಅವನನ್ನು ಬಿಟ್ಟು ಎರಡನೆಯವನು ಯಾವನೂ ಮುಖ್ಯನಲ್ಲ, ಆ ವಿಶ್ವನಾಥನ ಪ್ರಸಾದದಿಂದಲೇ ನಾನು ಚಕ್ರಪಾಣಿಯೂ, ಲಕ್ಷ್ಮೀಪತಿಯೂ, ತ್ರೈಲೋಕ್ಯರಕ್ಷಕನೂ ಆಗಿದ್ದೇನೆ, ಅಲ್ಲದೆ ಆ ವಿಶ್ವನಾಥನಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಪರಮೈಶ್ವರ್ಯವನ್ನು ಪಡೆದಿದ್ದೇನೆ; ನೀನು ನನಗೆ ಶುಭವನ್ನು ಕೋರುವವನಾದರೆ, ಕೂಡಲೆ ಆ ವಿಶ್ವನಾಥನನ್ನು ಸ್ತುತಿಸು. ಎಂದು ಆಜ್ಞೆಮಾಡಲು, ಆಗ್ಗೆ ವ್ಯಾಸನು ಗರ್ವದಿಂದ ದೂರನಾಗಿ ಶ್ರೀವಿಶ್ವನಾಥನನ್ನು ನಾನಾರೀತಿಯಾಗಿ ಸ್ತುತಿಸಲಾರಂಭಿಸಿದನು.

ಏಕೋ ರುದ್ರೋ ನ ದ್ವಿತೀಯಾಯ ತಸ್ಥೇ
ತದ್ಬ್ರಹ್ಮೈಕಂ ನೇಹ ನಾನಾಸ್ತಿ ಕಿಂಚಿತ್ |
ಯದ್ವಕ್ಷ್ಯಂತಿ ಶೋಧಿತಾ ಶ್ರುತಿವಾಕ್ಯಾ
ವ್ಯಾಚಕ್ಷ್ಯಾಂ ತದ್ವ್ಯಕ್ತ ಶಕ್ತಿರ್ನದಗ್ರೇ ||೫೬||

ಯಃ ಕ್ಷೀರಾಬ್ಧೇರ್ಮಂದರಾಘಾತಜಾತೋ
ಜ್ವಾಲಾಮಾಲಃ ಕಾಲಕೂಟೋಽತಿಭೀಮಃ |
ತಂ ಸೋಢುಂ ವಾ ಕಃ ಪರೋಽಭೂನ್ಮಹೇಶಾ
ದ್ವಿಶ್ವಂ [illegible] ಪಾನಾದ್ವಿಭುಃ ||೫೭||

ಯದ್ವಾ ಜೋಽಭೂಚ್ಛ್ರೀಪತಿರ್ಯಸ್ಯ ಯಂತಾ
ಲೋಕೇಶೋ ಯತ್ಸ್ಯಂದನಂ ಭೂಃ ಸಮಸ್ತಾ |
ವಾಹಾ ವೇದಾ ಯಸ್ಯ ಸೃಷ್ಟಿಪಾತಾ
ದ್ದಗ್ಧಾ ಗ್ರಾಮಾಸ್ತ್ರೈಪುರಾಸ್ತತ್ಸಮಃ ಕಃ ||೫೮||

ಯಃ ಕಂದರ್ಪೋ ವೀಕ್ಷ್ಯಮಾಣಃ ಸಮಾನಂ
ದೇವ್ಯಾ ರಸ್ಯೈರ್ಭಸ್ಮಜಾತಃ ಸ್ವಯಂ ಹಿ |
ಪ್ರಾಪ್ಯೈಚಾರ್ಣ್ಯೈಃ ಸರ್ವವಿಶ್ವೈಕಜೇತಾ
ಕೋ ವಾ ಸ್ತುತ್ಯಃ ಕಾಮಜೇತುಸ್ತತೋಽನ್ಯಃ ||೫೯||

ಯಂ ನೈವೇದೋ ವೇದ ನೇಂದ್ರೋ ನ ವಿಷ್ಣು
ರ್ನೋ ವಾ ವೇಧಾ ನೋ ಮನೋ ನೈವ ವಾಣೀ |
ತಂ ದೇವೇಶಂ ಮಾದೃಶಃ ಕೋಽಲ್ಪಮೇಧಾ
ಯಾಥಾತ್ಮ್ಯಾದ್ವೈ ವೇತ್ತ್ಯಹೋ ವಿಶ್ವನಾಥಂ ||೬೦||

ಯಸ್ಮಿನ್ ಸರ್ವಂ ಯಸ್ತು ಸರ್ವತ್ರ ಸರ್ವೋ
ಯೋ ವೈ ಕರ್ತಾ ಯೋಽವಿತಾ ಯೋಽಪಹರ್ತಾ |
ನೋ ಯಸ್ಯಾದಿರ್ಯಃ ಸಮಸ್ತಾದಿರೇಕೋ
ನೋ ಯಸ್ಯಾಂತೋ ಯೋಽಂತಕೃತ್ತಂ ನತೋಽಸ್ಮಿ ||೬೧||

ಯಸ್ಯ ಶಾಖಾ ವಾಜಿಮೇಧೇನ ತುಲ್ಯಾ
ಯಸ್ಯಾ ನತ್ಯಾ ಚೈಕಯಾಽಪ್ಯೇಂದ್ರಲಕ್ಷ್ಮೀಃ |
ಯಸ್ಯ ಸ್ತುತ್ಯಾ ಲಭ್ಯತೇ ಸತ್ಯಲೋಕೋ
ತಸ್ಯಾರ್ಚಾತೋ ಮೋಕ್ಷಲಕ್ಷ್ಮೀರದೂರಾ ||೬೨||

ನಾನ್ಯಂ ದೇವಂ ವೇದ್ಮ್ಯಹಂ ಶ್ರೀಮಹೇಶಾ
ನ್ನಾನ್ಯಂ ದೇವಂ ಸ್ತೌಮಿ ಶಂಭೋರ್ಮಹೇಶಾನ್ |
ನಾನ್ಯಂ ದೇವಂ ವಾ ನಮಾಮಿ ತ್ರಿನೇತ್ರಾತ್
ಸತ್ಯಂ ಸತ್ಯಂ ಸತ್ಯಮೇತನ್ಮೃಷಾ ನ ||೬೩||

ಕಾಶೀಖಂಡ ೯೫ನೆಯ ಅಧ್ಯಾಯ.

ಈ ರೀತಿಯಾಗಿ ವ್ಯಾಸನು ಅನಿತರಸಾಧಾರಣವಾದ ಭಕ್ತಿವಿಶೇಷದಿಂದ ವಿಶ್ವನಾಥನನ್ನು ಭಜಿಸಲು, ಬಾಹುಬಂಧನದಿಂದ ಬಿಡುಗಡೆಯನ್ನು ಹೊಂದಿ, ಶಿವನಿಂದೆಯಿಂದ ತನಗೆ ಪ್ರಾಪ್ತವಾದ ದೋಷಪರಿಹಾರಕ್ಕೋಸ್ಕರ ಗಂಗಾನದಿಯತೀರದಲ್ಲಿ ತನ್ನ ಹೆಸರಿನಿಂದ "ವ್ಯಾಸೇಶ್ವರ" ಎಂಬ ಶಿವಲಿಂಗವನ್ನು ಸ್ಥಾಪಿಸಿದನು ಈ ವಿಷಯವು ಕಾಶೀಖಂಡದ ೯೫ನೆಯ ಅಧ್ಯಾಯದಲ್ಲಿ—

ಪಾರಾಶರ್ಯಸ್ತದಾರಭ್ಯ ಶಂಭುಭಕ್ತಿಪರೋಽಭವತ |
ಲಿಂಗಂ ವ್ಯಾಸೇಶ್ವರಂ ಸ್ಥಾಪ್ಯ ಘಂಟಾಕರ್ಣಪ್ರದಾಗ್ರತಃ ||೬೪||
ವಿಭೂತಿಭೂಷಣೋ ನಿತ್ಯಂ ನಿತ್ಯಂ ರುದ್ರಾಕ್ಷಭೂಷಣಃ |
ರುದ್ರಸೂಕ್ತಪರೋ ನಿತ್ಯಂ ನಿತ್ಯಂ ಲಿಂಗಾರ್ಚಕೋಽಭವತ್ ||೬೫||

ಇದಲ್ಲದೆ ಅಷ್ಟಸಿದ್ಧಿಗಳನ್ನು ಪಡೆದು ಮಹಾಮಹಿಮಶಾಲಿಯೆಂದು ಜಗತ್ಪ್ರಸಿದ್ಧನಾದ ಅಗಸ್ತ್ಯಮಹರ್ಷಿಯೂ ಸಹ ತನ್ನ ಹೆಸರಿನಿಂದ ಒಂದು ಶಿವಲಿಂಗವನ್ನು ಸ್ಥಾಪಿಸಿ, ಆ ಶಿವಲಿಂಗೋಪಾಸನೆಯಿಂದ ಸಪ್ತಸಮುದ್ರಪಾನ ಮೊದಲಾದ ಅತ್ಯದ್ಭುತಕಾರ್ಯಗಳನ್ನು ಮಾಡಿ ಲೋಕಮಾನ್ಯನಾದನು ಆ ಮಹರ್ಷಿಯಿಂದ ಸ್ಥಾಪಿಸಲ್ಪಟ್ಟ ಲಿಂಗವು "ಅಗಸ್ತ್ಯೇಶ್ವರ" ಎಂಬ ಹೆಸರಿನಿಂದ ಈಗಲೂ ಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವದು ಇದರಂತೆಯೇ ಗೌತಮ, ಕಶ್ಯಪ, ಕಪಿಲ, ಮಾರ್ಕಂಡೇಯ, ವಸಿಷ್ಠ, ವಿಶ್ವಾಮಿತ್ರ ಮೊದಲಾದ ಮಹರ್ಷಿಗಳೂ ಸಹ ತಮ್ಮ ತಮ್ಮ ಹೆಸರುಗಳಿಂದ ಶಿವಲಿಂಗಗಳನ್ನು ಸ್ಥಾಪಿಸಿ ನಿತ್ಯಸುಖವನ್ನು ಅನುಭವಿಸಿದರು. ಆ ಮಹರ್ಷಿಗಳು ಸ್ಥಾಪಿಸಿದ ಲಿಂಗಗಳು ಗೌತಮೇಶ್ವರ, ಕಶ್ಯಪೇಶ್ವರ, ಕಪಿಲೇಶ್ವರ, ಮಾರ್ಕಂಡೇಯೇಶ್ವರ, ವಿಶ್ವಾಮಿತ್ರೇಶ್ವರ ಮೊದಲಾದ ಪವಿತ್ರಾಭಿಧಾನಗಳಿಂದ ಈಗಲೂ ಕಾಶೀಕ್ಷೇತ್ರದಲ್ಲಿ ಪ್ರಕಾಶಿಸುತ್ತಿರುವವು. ಇದಲ್ಲದೆ ವಿಷ್ಣುವೂ ಸಹ ತಾನು ಧರಿಸಿದ ದಶಾವತಾರಗಳಲ್ಲಿಯೂ ಒಂದೊಂದು ಶಿವಲಿಂಗವನ್ನು ಸ್ಥಾಪಿಸಿ, ಪೂಜಿಸಿ ತನ್ನಿಷ್ಟಾರ್ಥವನ್ನು ಪಡೆದನೆಂದು, ಅನೇಕಾನೇಕಪುರಾಣಗಳಲ್ಲಿ ಉದ್ಘೋಷಿಸಲ್ಪಟ್ಟಿರುವದು ರಾಮಾವತಾರದಲ್ಲಿ ಸ್ಥಾಪಿಸಿದ "ರಾಮೇಶ್ವರ" ಲಿಂಗದ ವಿಷಯವು ಸರ್ವರಿಗೂ ವಿದಿತವಾದುದೇ ಆದೆ. ಮತ್ಸ್ಯಾವತಾರದಲ್ಲಿ "ಮತ್ಸ್ಯೇಶ್ವರ" ಎಂಬ ಹೆಸರಿನ ಶಿವಲಿಂಗವನ್ನು ಸ್ಥಾಪಿಸಿದನು. ಈ ಲಿಂಗವು ಲಂಕಾಪಟ್ಟಣದಲ್ಲಿ ವಿರಾಜಿಸುತ್ತಿರುವದು. ಕೂರ್ಮಾವತಾರದಲ್ಲಿ "ಕೂರ್ಮೇಶ್ವರ" ಎಂಬ ಹೆಸರಿನ ಶಿವಲಿಂಗವನ್ನು ಸ್ಥಾಪಿಸಿದನು. ಅಲ್ಲದೆ ಒಂದಾನೊಂದು ಸಮಯದಲ್ಲಿ ಶಿವನ ಪಾದಕಮಲಗಳನ್ನು ಸಹಸ್ರ ಕಮಲಗಳಿಂದ ಪೂಜಿಸುತ್ತಿರುವಾಗ, ಶಿವನ ಮಾಯೆಯಿಂದ ಒಂದು ಕಮಲವು ಕಡಿಮೆಯಾಗಲು, ಆಗ್ಗೆ ವಿಷ್ಣುವು ತಾನು ಕೈಕೊಂಡ ಪೂಜಾಕಾರ್ಯವು ಸಮಾಪ್ತಿಯಾಗಲಿಲ್ಲವೆಂದು ಭಾವಿಸಿ, ಕೂಡಲೇ ತನ್ನ ನೇತ್ರಕಮಲವನ್ನೇ ಸಮರ್ಪಿಸಿ ಪೂಜೆಯನ್ನು ಸಮಾಪ್ತಿಗೊಳಿಸಿದನೆಂದೂ, ಆಗ್ಗೆ ಪರಮೇಶ್ವರನು ವಿಷ್ಣುವಿನ ಅಸಾಧಾರಣವಾದ ಭಕ್ತಿಗೆ ಮೆಚ್ಚಿ ತನ್ನಲ್ಲಿದ್ದ ಚಕ್ರವನ್ನು ಅನುಗ್ರಹಿಸಿದನೆಂದೂ, ಅಂದಿನಿಂದ ವಿಷ್ಣುವು "ಚಕ್ರಪಾಣಿ" ಎಂಬ ಹೆಸರಿನಿಂದ ಪ್ರಸಿದ್ಧನಾದನೆಂದೂ ವ್ಯಾಸೋಕ್ತಪುರಾಣಾದಿಗಳಲ್ಲಿ ಸುಪ್ರಸಿದ್ಧವೇ ಆದೆ. ಅಸ್ತು!

ಲೋಕವಿಖ್ಯಾತರಾದ ಶ್ರೀಶಂಕರಾಚಾರ್ಯರು ತಮ್ಮಿಂದ ರಚಿಸಲ್ಪಟ್ಟ "ಶಿವಾನಂದಲಹರೀ" ಎಂಬ ಗ್ರಂಥದಲ್ಲಿ—

ಸಹಸ್ರಂ ವರ್ತಂತೇ ಜಗತಿ ವಿಬುಧಾಃ ಕ್ಷುದ್ರಫಲದಾ
ನ ಮನ್ಯೇ ಸ್ವಪ್ನೇ ವಾ ತದನುಸರಣಂ ತತ್ಕೃತಫಲಂ |
ಹರಿಬ್ರಹ್ಮಾದೀನಾಮಪಿ ನಿಕಟಭಾಜಾಮಸುಲಭಂ
ಚಿರಂ ಯಾಚೇ ಶಂಭೋ ಶಿವ ತವ ಪದಾಂಭೋಜಭಜನಂ |

ಈ ರೀತಿಯಾಗಿ ಸ್ತುತಿಸಿದ್ದಾರೆ. ಈ ಶ್ಲೋಕಾಭಿಪ್ರಾಯವೇನೆಂದರೆ—

ಎಲೈ ಪರಮೇಶ್ವರನೇ! ಲೋಕದಲ್ಲಿ ಸಾವಿರಾರು ಜನ ದೇವತೆಗಳಿದ್ದಾರೆ; ಆವರು ಅಲ್ಪ ಫಲವನ್ನು ಕೊಡತಕ್ಕವರಾದುದರಿಂದ, ನಾನು ಅವರ ಅನುಸರಣವನ್ನಾಗಲಿ ಅವರಿಂದ ಪ್ರಾಪ್ತವಾಗುವ ಫಲವನ್ನಾಗಲಿ ಸ್ವಪ್ನದಲ್ಲಿಯೂ ಸಹ ಸ್ಮರಿಸುವುದಿಲ್ಲ ಒಂದಾನೊಂದು ಕಾಲದಲ್ಲಿ ವಿಷ್ಣುಬ್ರಹ್ಮರೀರ್ವರೂ ತಾನು ಹೆಚ್ಚು ತಾನು ಹೆಚ್ಚು ಎಂಬ ಹೆಮ್ಮೆಯಿಂದ ಕೂಡಿದವರಾಗಿ ಶಪಥಮಾಡಿಕೊಂಡು, ಸಮೀಪದಲ್ಲಿದ್ದ ನಿನ್ನ ಪಾದಕಮಲಗಳನ್ನು ಕಾಣುವುದಕ್ಕೋಸ್ಕರ ವಿಷ್ಣುವು ವರಾಹರೂಪವನ್ನು ಧರಿಸಿ, ಸಹಸ್ರಾರುವರ್ಷಗಳವರೆಗೆ ಪಾತಾಳಲೋಕವನ್ನಗೆಯುತ್ತ ಹುಡುಕಿದರೂ ಸಹ ದೊರೆಯಲಿಲ್ಲ. ಅವರಂತೆಯೇ ನಿನ್ನ ಪವಿತ್ರಮಸ್ತಕವನ್ನು ಸಂದರ್ಶಿಸುವದಕ್ಕೋಸ್ಕರ, ಬ್ರಹ್ಮನು ಹಂಸಪಕ್ಷಿಯ ರೂಪವನ್ನು ಧರಿಸಿ, ಸಹಸ್ರಾರುವರ್ಷಗಳ ವರೆಗೆ ಹಾರುತ್ತ ಹುಡುಕಿದರೂ ದೊರೆಯಲಿಲ್ಲ. ಈ ರೀತಿಯಾಗಿ ಹರಿಹರಬ್ರಹ್ಮಾದಿಗಳಿಗೂ ಕೂಡ ದೊರೆಯದಿದ್ದ ಆ ನಿನ್ನ ಪಾದಕಮಲಗಳ ಸ್ತೋತ್ರವನ್ನೇ ನಾನು ಯಾವಾಗಲೂ ಬೇಡುತ್ತೇನೆಂದು ಕೊಂಡಾಡಿದ್ದಾರೆ. ದೇವತೆಗಳಲ್ಲಿ ಯಾವ ಭೇದವನ್ನೆಣಿಸದೆ ಸರ್ವರನ್ನೂ ಸಮತ್ವದಿಂದ ಕಾಣಬೇಕೆಂದು ಸಿದ್ಧಾಂತಗೊಳಿಸಿರುವ ಶ್ರೀಶಂಕರಾಚಾರ್ಯರೇ ಈ ರೀತಿಯಾಗಿ ಅಸಾಧಾರಣವಾದ ಭಕ್ತಿಭಾವದಿಂದ ಶಿವನನ್ನು ಕೊಂಡಾಡಿರುವುದನ್ನು ನೋಡಿದರೆ, ಶಿವಸರ್ವೋತ್ತಮತ್ವವಿಷಯವು ಎಷ್ಟರಮಟ್ಟಿಗಿರಬಹುದೆಂಬ ವಿಷಯವನ್ನು ವಾಚಕರೇ ಯೋಚಿಸಬಹುದು.

ಯುದ್ಧವಾರ್ತೆ.

ಹೇಡ್ರಿಚ್‌ರವರ ಮರಣ

ಪ್ರೇಗ್‌ನಗರದಲ್ಲಿ ಮೇ 27 ನೆಯ ತಾರೀಖಿನ ದಿವಸ ದುಷ್ಕರ ಗುಂಡಿನೇಟಿಗೆ ಗುರಿಯಾಗಿದ್ದ ಬೊಹಿಮಿಯಾದ ರಕ್ಷಕರಾದ ಹೇಡ್ರಿಚ್‌ರವರು ಇದೇ 4 ನೆಯ ತಾರೀಖಿನ ದಿನ ಮೃತರಾದರು.

ಕೊಲೋನ್‌ನಲ್ಲಿ ಬೆಂಕಿ

ಕಳೆದ 30 ನೆಯ ತಾರೀಖು ಶನಿವಾರ ರಾತ್ರಿ ಕೊಲೋನ್ ನಗರದ ಮೇಲೆ ಬ್ರಿಟಿಷ್ ವಿಮಾನಗಳು ಸುರಿಸಿದ ಬಾಂಬುಗಳಿಂದ ಪ್ರಾರಂಭವಾದ ಬೆಂಕಿಯು ಮೂರುದಿವಸವಾದರೂ ಇನ್ನೂ ಉರಿಯುತ್ತಲೇ ಇತ್ತೆಂದೂ ಅಲ್ಲಿನ ಹಲವು ಭಾರಿ ಕಾರ್ಖಾನೆಗಳು ಸಂಪೂರ್ಣವಾಗಿ ನಾಶವಾದವೆಂದೂ ಜರ್ಮನರು ಒಪ್ಪಿಕೊಂಡಿದ್ದಾರೆ

ಅಮೆರಿಕೆಯ ವಿಮಾನ ಬಲ

ಅಮೆರಿಕೆಯಲ್ಲಿ ಈಗ ವರ್ಷಕ್ಕೆ 240000 ಜ ವೈಮಾನಿಕರಿಗೆ ಶಿಕ್ಷಣ ಕೊಡುತ್ತಿರಲಾಗಿದೆ. ಈ ಸ ಖ್ಯೆಯು ದಿನದಿನಕ್ಕೆ ಬೆಳೆಯುತ್ತಲೇ ಇದೆಯೆಂದು ಅವೆ ರಿಕೆಯ ವಿಮಾನ ಬಲದ ಅಧಿಕಾರಿಗಳಾದ ಜ ಅರ್ನಾಲ್‌ರವರು ತಿಳಿಸಿದಾರೆ.

ಸಿಲೋನ್ ನೌಕಾಮೂಲವಾಗಲಿದೆ

ಸಿಲೋನು ಆತ್ಮರಕ್ಷಣೆಗೆ ಪೂರ್ಣಸಿದ್ಧವಾಗಿರುವದು ಾತ್ರವಲ್ಲದೆ ಆದಕ್ಕೂ ಒಂದಹೆಜ್ಜೆ ಮುಂದಿಹಲಿದೆ ಿಂದೂ, ಮಿತ್ರರಾಷ್ಟ್ರಗಳವರು ಜಪಾನರ ಮೇಲೆ ಬೀಲು ಅನುಕೂಲವಾಗುವಂತೆ ಸಿಲೋನು ಕೂಡ ಒಂದು ಲಮೂಲವಾಗಲಿದೆಯೆಂದೂ ಅಧಿಕಾರಿಗಳೊಬ್ಬರು ತಿಳಿಸಿದರು. ಅಲ್ಲಿ ಬಹಳ ಜಾಗ್ರತೆಯಾಗಿ ವಿಮಾನ ಫಿಲ್ಡುಗಳನ್ನು ರಚಿಸಲಾಗಿದೆಯೆಂದು ತಿಳಿದು ಬರುತ್ತದೆ.

ತುರ್ಕಿಗೆ ಜರ್ಮನಿಯ ಸಾಲ

ಜರ್ಮನಿಯಲ್ಲಿ ಸಂಗ್ರಾಮ ವಸ್ತುಗಳನ್ನು ಕೊಳ್ಳಲು ರ್ಕಿಗೆ ಜರ್ಮನ್ ಸರ್ಕಾರವು 100 ಮಿಲಿಯನ್ ಾರ್ಕುಗಳನ್ನು ಕೊಟ್ಟಿದೆಯೆಂದು ತಿಳಿದುಬಂದಿದೆ. ಸಂಬಂಧವಾಗಿ ಒಪ್ಪಂದವನ್ನು ಮಾಡಿಕೊಳ್ಳಲು ರ್ಕಿಯಿಂದ ನಿಯೋಗಗೋಷ್ಠಿಯೊಂದು ಬರ್ಲಿನ್ನಿಗೆ ರಟಿದೆ. ಈಗ ಬರ್ಲಿನ್ನಿನಲ್ಲಿರುವ ತುರ್ಕಿಯ ಟ್ರೇ ಕ್ರೆಡಿಟ್ಸ್ ಗೋಷ್ಠಿಯೊಂದು ಬಹಳ ಕಷ್ಟಗಳನ್ನು ದುರಿಸುತ್ತಿದೆ. ಆದ್ದರಿಂದ ಈ ಹೊಸ ಗೋಷ್ಠಿಯು ಕ್ಷ ಕಾರ್ಯದಲ್ಲಿ ಕೃತಕೃತ್ಯವಾಗುವುದು ಅನುಮಾನ ಂದು ಹೇಳಲಾಗಿದೆ.

ರ್ಮನಿಯಮೇಲೆ ೧೦೦೦ ವಿಮಾನಗಳ ಮುತ್ತಿಗೆ.

ಕಳೆದ 30 ನೆಯ ತಾರೀಖಿನದಿವಸ ರಾತ್ರಿ ಒಂದು ವಿರಕ್ಕಿಂತ ಹೆಚ್ಚು ಬ್ರಿಟಿಷ್ ಬಾಂಬರ್ ವಿಮಾನಗಳು ರ್ಮನಿಗೆ ಸೇರಿದ ರುಹರ್ ಮತ್ತು ರೈನ್‌ಲ್ಯಾಂಡ್ ದೇಶಗಳಮೇಲೆ ಹಾರಿ ಅಸಾಧ್ಯ ಬಾಂಬುಗಳನ್ನು ರಿಸಿದವು ಜರ್ಮನಿಯಲ್ಲಿ ಮೂರನೇ ದೊಡ್ಡನಗರ ನಿಸಿದ ಕೊಲೋನ್‌ನಗರದ ಮಧ್ಯಪ್ರದೇಶದಲ್ಲಿ ಬಾಂಗಳು ಬಿದ್ದು ಸಂಪೂರ್ಣನಾಶವಾಯಿತು ಈ ನಗರದಲ್ಲಿ ೕಕ ದೊಡ್ಡ ದೊಡ್ಡ ಸಂಗ್ರಾಮವಸ್ತುನಿರ್ಮಾಣ ರ್ಖಾನೆಗಳು ಇವೆ. ಜರ್ಮನಿಯಮೇಲೆ ಇಷ್ಟು ಭಾರಿ ಯಲ್ಲಿ ವಿಮಾನಮುತ್ತಿಗೆಯು ಹಿಂದೆಂದೂ ನಡೆದಿಲ್ಲ ಈ ಮುತ್ತಿಗೆಯಿಂದ 20 ಸಾವಿರ ಜನರು ಸತ್ತರು. ಸಾವಿರ ಜನರು ಗಾಯಗೊಂಡರು.

ಾ॥ ಚಿಯಾಂಗ್ ಕೈಷೇಕರ ಹೇಳಿಕೆ.

ಕಳೆದ ೧ನೆಯ ತಾರೀಖಿನದಿವಸ ಮಾರ್ಷಲ್ ಯಾಂಗ್ ಕೈಷೇಕರು ಅಮೇರಿಕೆಯನ್ನು ಕುರಿತು ಡಿಯೋಮೂಲಕ ಮಾತನಾಡುತ್ತ "ಅಮೇರಿಕೆಯಲ್ಲಿ ಯಾರಾಗುವ ಸಂಗ್ರಾಮವಸ್ತುಗಳಲ್ಲಿ ನೂರಕ್ಕೆ ೧೦ ನ್ನು ಮಾತ್ರ ನಮಗೆ ಕೊಟ್ಟರೆ ನಾವು ೧೦೦ ರಷ್ಟು ವನ್ನು ತೋರಿಸುತ್ತೇವೆ. ಜನರು ಕೇವಲ ವೃಥಾ ಕಲ್ಪದಿಂದ ಕೂಡಿದ್ದರೆ ಮಾತ್ರವೇ ಜಯವು ಲಭಿಸುಲ್ಲ ಅದರ ಜೊತೆಗೆ ಶಸ್ತ್ರಗಳೂ ಬೇಕು. ಕಟ್ಟಕಡೆಗೆ ಗೆ ಜಯವಾಗುವದು ನಿಶ್ಚಯ! ಚೀಣವಂತೂ ೕ ಆಗಲಿ ಶತ್ರುಗಳನ್ನು ಪ್ರತಿಭಟಿಸುವ ತೀರ್ಮಾನ ಡಿದೆ." ಎಂದು ಹೇಳಿದರು

ಮಾ॥ ಟಿಮೋಷಿಂಕೋರವರು ಅಪಾಯದಿಂದ ಪಾರಾದರು

ಾರ್ಕೋವ್ ದಕ್ಷಿಣದಲ್ಲಿ ನಡೆದ ಕದನದಲ್ಲಿ ಮಾ॥ ೂಷಿಂಕೋರವರು ಅಪಾಯಕ್ಕೆ ಸಿಕ್ಕಿದ್ದವರು ಸ್ವಲ್ಪ ಲ್ಲಿ ಉಳಿದುಕೊಂಡರು ಬಹಳ ಒತ್ತಾಯಕ್ಕೆ ಸಿಕ್ಕಿದ್ದ ನ್ ಸೇನೆಯಮಧ್ಯೆ ಅವರು ವಿಮಾನದಲ್ಲಿ ಬಂದಿ ಪರಿಶೀಲನೆ ನಡೆಸಿದರು. ಆ ಸಮಯದಲ್ಲಿ ನಾಜಿ ಾನಗಳು ಅವರ ಕಾರನ್ನು ಮುತ್ತಿದವು. ಅಕ್ಕಪಕ್ಕ ದ್ದ ಹಲವು ಕಾರುಗಳು ನಾಶವಾದವು. ಅವರು ಕುಳಿ ಕಾರಿಗೆ ಸಹಾ ಏಟುಬಿತ್ತು. ಮಾ॥ ಟಿಮೊಷಿಂಕೊ ರಿಗೂ ಅವರೊಡನಿದ್ದವರಿಗೂ ಗಾಯಗಳಾದವು. ರೆ ಅಪಾಯಕರವಾದ ಗಾಯಗಳೇನೂ ಆಗಲಿಲ್ಲ. ರು ವಿಮಾನ ಮೂಲಕ ಮುಖ್ಯ ಕಚೇರಿಗೆ ಹಿಂದಿರು ಂದು ತಿಳಿದು ಬರುತ್ತದೆ.

ಎಸ್ಸೆನ್‌ಪ್ರದೇಶದಮೇಲೆ ೧೨೦೦ ವಿಮಾನಗಳ ಮುತ್ತಿಗೆ

ಕಳೆದ ೧ನೆಯ ತಾರೀಖಿನದಿನ ರಾತ್ರಿ ಸುಮಾರು ೧೨೦೦ ಬ್ರಿಟಿಷ್ ಬಾಂಬರು ವಿಮಾನಗಳು ಪಶ್ಚಿಮ ಜರ್ಮನಿಯಮೇಲೆ ಭಾರಿ ಮುತ್ತಿಗೆ ನಡೆಸಿ ರುಹರ್‌ಕ್ಷೇತ್ರದಮೇಲೆ ಬಾಂಬುಗಳನ್ನು ಸುರಿಸಿದವು. ಎಸ್ಸೆನ್‌ಮೇಲೂ ಮತ್ತು ಕಲ್ಲಿದ್ದಲು ಮತ್ತು ಉಕ್ಕಿನ ಕೈಗಾರಿಕೆಯ ಮುಖ್ಯಸ್ಥಾನಗಳಮೇಲೂ ಬಾಂಬುಗಳು ಬಿದ್ದವು. ಈ ಎಸ್ಸೆನ್‌ಹತ್ತಿರವೇ ಜರ್ಮನಿಯ ಬಹು ಮುಖ್ಯವಾದ ಕ್ರಪ್ಸ್‌ಲೋಹದ ಕಾರ್ಖಾನೆಯಿರುವದು.

ಜರ್ಮನರ ಪ್ರತೀಕಾರ

ಕೊಲೋನ್ ನಗರದಮೇಲೆ ಬ್ರಿಟಿಷರು ಮುತ್ತಿಗೆ ನಡೆಯಿಸಿ ಉಂಟುಮಾಡಿದ ಕಷ್ಟನಷ್ಟಗಳಿಗೆ ಪ್ರತೀಕಾರ ವೆಸಗಲು ನಾಜಿ ವಿಮಾನಗಳು ಕಳೆದ ಸೋಮವಾರ ಬೆಳಗಿನ ಜಾವ ಬೆಳದಿಂಗಳಲ್ಲಿ ಸುಪ್ರಸಿದ್ಧ ಮಠವಿರುವ ಇಂಗ್ಲೆಂಡಿನ ಕ್ಯಾಂಟರ್‌ಬರಿ ನಗರದಮೇಲೆ ಅಸಾಧ್ಯ ಮುತ್ತಿಗೆ ನಡೆಸಿದವು. ಸುಮಾರು 50 ವಿಮಾನಗಳು ಇಂಗ್ಲೆಂಡಿನ ತೀರವನ್ನು ದಾಟಿಬಂದವು ಅವುಗಳಲ್ಲಿ ಅರ್ಧದಷ್ಟು ಕ್ಯಾಂಟರ್‌ಬರಿ ನಗರದಮೇಲೆ ಮುತ್ತಿಗೆ ನಡೆಸಿದವು ಮುತ್ತಿಗೆಕಾಲದಲ್ಲಿ ಕ್ಯಾಂಟರ್‌ಬರಿ ಮಠಾಧಿಪತಿಗಳೂ ಅವರ ಪತ್ನಿಯವರೂ ಮಠದಲ್ಲೇ ಇದ್ದರು. ದೈವವಶಾತ್ ಅವರಿಗೆ ಅಪಾಯವೇನೂ ಆಗಲಿಲ್ಲ. ಬಹುಕಾಲದಿಂದ ಕ್ಯಾಂಟರ್‌ಬರಿನಗರಕ್ಕೆ ಭೂಷಣವಾಗಿದ್ದ ಅನೇಕ ಭವನಗಳು ನಾಶವಾದವು.

ಲಿಬಿಯಾ ಯುದ್ಧದಲ್ಲಿ ನಾಜಿಗಳು ಹಿಂದೆ ಸರಿದರು

ಲಿಬಿಯಾದಲ್ಲಿ ಆಕ್ಸಿಸ್ ಸೇನೆಗಳನ್ನು ವೈಟ್ಸ್‌ಬ್ರಿಡ್ಜ್ ಪಶ್ಚಿಮಕ್ಕೆ 6 ಮೈಲಿ ದೂರದಲ್ಲಿರುವ ಟಿಮಾಡ್‌ನಿಂದ ಹಿಂದಕ್ಕೆ ಓಡಿಸಲಾಯಿತೆಂದು ತಿಳಿದುಬಂದಿದೆ. ಈ ಯುದ್ಧದಲ್ಲಿ ಜರ್ಮನರು ಕನಿಷ್ಠ ಪಕ್ಷ 14 ಟ್ಯಾಂಕುಗಳನ್ನು ಕಳೆದುಕೊಂಡರೆಂದು ಹೇಳಲಾಗಿದೆ ಬೀರ್ ಹಾಕಿಮ್ ಮೇಲೆ ಜರ್ಮನ ಟ್ಯಾಂಕುಗಳು ಮತ್ತೆ ಮುತ್ತಿಗೆಯನ್ನು ಆರಂಭಿಸಿದವು ಆದರೆ ಹಿಂದುಗಡೆಯಿಂದ ಬ್ರಿಟಿಷ್ ಸೇನೆಗಳು ಏಟುಹಾಕಿದ್ದರಿಂದ ಶತ್ರುಗಳು ಏನೂ ಮಾಡಲಾಗಲಿಲ್ಲ ಲಿಬಿಯಾದಲ್ಲಿ ಕದನದ ಎರಡನೇ ಮೆಟ್ಟಲು ಪ್ರಾರಂಭವಾಗಿದೆ

ಮಿಡ್ವೆ ದ್ವೀಪದ ಮೇಲಿನ ದಾಳಿ

ಮಿಡ್ವೆ ದ್ವೀಪದ ಮೇಲೆ ಜಪಾನರು ನಡೆಯಿಸಿದುದು ಅಮೇರಿಕದ ಪೆಸಿಫಿಕ್ ತೀರದಲ್ಲಿ ಅವರು ಮುಂದೆ ಭಾರಿ ಆತಿಕ್ರಮಣಕಾರ್ಯ ನಡೆಸಬಹುದೆಂಬುದನ್ನು ಸೂಚಿಸುವುದೆಂದು ಅಮೇರಿಕದ ನೌಕಾ ನಿಪುಣರು ಅಭಿಪ್ರಾಯಪಟ್ಟಿದ್ದಾರೆ. ಅಮೇರಿಕದ ಪೂರ್ವ ತೀರದಲ್ಲಿ ಶತ್ರುಗಳ ಸಮರ ನೌಕೆಗಳು ಕಂಡು ಬಂದದ್ದು ಇದೇ ಮೊದಲು. ಈ ಕಾರ್ಯಾಚರಣೆಯಲ್ಲಿ ಜಪಾನರ ನೌಕಾಬಲದ ಪೈಕಿ ಬಹು ಭಾಗದಷ್ಟು ಭಾಗವಹಿಸಿದ್ದವು ಎಂಬುದನ್ನು ಸೂಚಿಸಲು ಚಿಹ್ನೆಗಳೇನೂ ಕಂಡು ಬರದಿದ್ದಾಗ್ಯೂ ಯಾಕೋಹಾಮದಿಂದ ೨೦೦೦ ಮೈಲಿಗಳದೂರ ಜಪಾನರು ತಮ್ಮ ನೌಕಾಬಲವನ್ನು ತಂದಿರುವುದು ಪೆಸಿಫಿಕ್ ಸಾಗರದಲ್ಲಿ ಅಮೇರಿಕನ್ನರ ನೌಕಾಬಲವನ್ನು ನಷ್ಟಪಡಿಸಿ ಬಹುಶಃ ಯುದ್ಧವನ್ನು ಅಮೇರಿಕದ ಪಶ್ಚಿಮ ತೀರಕ್ಕೆ ತರುವ ಯೋಜನೆ ಹೊಂದಿದ್ದಾರೆಂದು ಅಭಿಪ್ರಾಯ ಪಟ್ಟಿದ್ದಾರೆ.

ಜಪಾನರ ಯೋಜನೆ

ಮಿಡ್ವೆ ಮತ್ತು ಅಲಾಸ್ಕದಮೇಲೆ ಜಪಾನರು ದಾಳಿ ನಡೆಸಿರುವುದು ಬಹಳ ಗುಪ್ತಯೋಜನೆಯೆಂದೂ ಅದರ ಉದ್ದೇಶವು ಈ ಮುಂದೆ ಹೇಳಿರುವುದರ ಪೈಕಿ ಒಂದಾಗಿರಬಹುದೆಂದೂ ನೌಕಾಚತುರರೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ. ಈ ದಾಳಿಯು ಸೈಬೀರಿಯದಮೇಲೆ ಮುತ್ತಿಗೆ ನಡೆಸಲು ಮತ್ತು ಅಲಾಸ್ಕದ ನೆಲೆಗಳನ್ನು ನಾಶಪಡಿಸಲು ಪ್ರಾರಂಭದ ಏರ್ಪಾಡಿರಬಹುದೆಂದೂ, ಹವಾಯ್, ಪನಾಮ ಅಥವ ಅಮೇರಿಕದ ಪಶ್ಚಿಮತೀರದ ಮೇಲೆ ಪ್ರಬಲವಾದ ದಾಳಿ ನಡೆಸಲು, ಮಿಡ್ವೆ ಮತ್ತು ಅಲಾಸ್ಕದಲ್ಲಿರುವ ಅಮೇರಿಕ ವಿಮಾನ ಬಲವನ್ನು ನಾಶಪಡಿಸಲು ಮಾಡಿದ ಯುಕ್ತಿ ಇರಬಹುದೆಂದೂ, ಮತ್ತು ಅಮೇರಿಕದ ಸೈನ್ಯಗಳು ಉತ್ತರ ಪೆಸಿಫಿಕ್ಕಿನ ಕಡೆಗೆ ಹೋಗುವಂತೆ ಮಾಡಲು, ಪೆಸಿಫಿಕ್ ಸಾಗರದ ನೈರುತ್ಯ ದಿಗ್ಭಾಗದಲ್ಲಿರುವ ಅಮೇರಿಕನ್ ಸರಬರಾಜು ಮಾರ್ಗವನ್ನು ತುಂಡರಿಸುವ ಪ್ರಯತ್ನವಿರಬಹುದೆಂದೂ ಹೇಳಿದ್ದಾರೆ.

ಚೀಣಕ್ಕೆ ಕೈಲಾದ ಸಹಾಯವನ್ನೆಲ್ಲ ಕೊಡಲಾಗುವದು

ಸಾಧ್ಯವಿರುವ ಸಹಾಯವನ್ನೆಲ್ಲಾ ಚೀಣಕ್ಕೆ ನೀಡಬೇಕೆಂದು ಬ್ರಿಟಿಷ್ ಸರ್ಕಾರದವರು ಮಾಡಿರುವ ತೀರ್ಮಾನವನ್ನು ಉಪಪ್ರಧಾನರಾದ ಶ್ರೀ ಕ್ಲೆಮೆಂಟ್ ಅಟ್ಲಿಯವರು ಕಾಮನ್ಸ್ ಸಭೆಯಲ್ಲಿ ಪುನಃ ದೃಢಪಡಿಸಿದರು. ಬರ್ಮದಿಂದ ಬ್ರಿಟಿಷರು ಹಿಮ್ಮೆಟ್ಟಿದ್ದರೂ ಕೂಡ ಚೀಣದೊಂದಿಗೆ ಸಂಬಂಧವಿಟ್ಟುಕೊಂಡು ಅವರಿಗೆ ವಿಮಾನಗಳೂ ಮತ್ತು ಇತರ ಸಂಗ್ರಾಮ ವಸ್ತುಗಳೂ ಸರಬರಾಜಾಗುವಂತೆ ನೋಡಿಕೊಳ್ಳಲು ಫಲಕಾರಿಯಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವದೇ? ಎಂದು ಕೇಳಿದ ಪ್ರಶ್ನೆಗೆ ಶ್ರೀ ಅಟ್ಲಿಯವರು ಉತ್ತರವೀಯುತ್ತ "ಸದಸ್ಯರು ತಿಳಿಸಿರುವ ರೀತಿಯಲ್ಲಿ ಮತ್ತು ಸಾಧ್ಯವಾಗಬಹುದಾದ ಮತ್ತಾವದೇ ಹೊಸ ರೀತಿಯಲ್ಲಿ ಚೀಣಕ್ಕೆ ಸರ್ವ ಸಹಾಯಗಳನ್ನು ನೀಡಬೇಕೆಂದು ಬ್ರಿಟಿಷ್ ಸರ್ಕಾರದವರು ತೀರ್ಮಾನಿಸಿದ್ದಾರೆ," ಎಂದು ತಿಳಿಸಿದರು

ಭಾರತದ ರಕ್ಷಣೆಗೆ ಬ್ರಿಟಿಷ್ ಸೈನ್ಯ

ಭಾರತದ ಸಂರಕ್ಷಣೆಗಾಗಿ ಬ್ರಿಟನ್ನಿನಿಂದ ಹಿಂದೆಂದೂ ಬಾರದಿದ್ದಷ್ಟು ಭಾರಿ ಸೈನ್ಯ ಬಂದಿರುತ್ತದೆ. ಬ್ರಿಟನ್ನಿನಿಂದ ಹೊರಟ ಅನೇಕ ಹಡಗುಗಳಲ್ಲಿ ಈ ದೇಶಕ್ಕೆ ಸೈನಿಕರನ್ನೂ ಯುದ್ಧೋಪಕರಣಗಳನ್ನೂ ತಂದ ಈ ನೌಕಾಸಮೂಹವೇ ಅತ್ಯಂತ ಭಾರಿಯಾದುದೆಂದು ಹೇಳಲಾಗಿದೆ. ಬ್ರಿಟಿಷ್ ಸೈನ್ಯದ ಎಲ್ಲಾ ಶಾಖೆಗಳಲ್ಲೂ ಶಿಕ್ಷಣ ಪಡೆದ ಸಹಸ್ರಾರು ಜನ ಪದಾತಿ ಸೈನಿಕರೂ ಫಿರಂಗಿ ದಳದವರೂ "ಶಾಕ್' ಸೈನ್ಯ ಪಡೆಯುವರೂ, ಸಹಸ್ರಾರು ಜನ ವೈಮಾನಿಕರೂ, ವಿಮಾನ, ಟ್ಯಾಂಕ್, ಆಂಟಿ ಟ್ಯಾಂಕ್‌ಗನ್ ಇತ್ಯಾದಿ ಯುದ್ಧೋಪಕರಣಗಳೂ ಅಲ್ಲದೆ ಅನೇಕ ಟನ್‌ಗಳ ಮದ್ದುಗುಂಡುಗಳೂ ಈ ದೇಶಕ್ಕೆ ಬಂದಿರುತ್ತವೆ.

ಸ್ವೀಕಾರ.

ಹುಬ್ಬಳ್ಳಿ ತಾ॥ ಬ್ಯಾಹಟ್ಟಿಗ್ರಾಮದಲ್ಲಿರುವ ವೀರನಗೌಡ ಲಿಂಗನಗೌಡ ಹಿರೇಗೌಡರ ಇವರು ತಮ್ಮ ಪುತ್ರ ಚಿ॥ ಶಿವನಗೌಡನು ೧೬ನೆಯ ವರ್ಷ ವಯಸ್ಸಿನಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾದ ಸಂತೋಷಕ್ಕೋಸ್ಕರ ಪ್ರಭಾಪೋಷಣಕ್ಕಾಗಿ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ರಾಣಿಬೆನ್ನೂರು ತಾ॥ ಮುದೇನೂರಲ್ಲಿರುವ ರಾಣಿಬೆನ್ನೂರು ಮಳೆಮಠದ ವೇ॥ ಮಹಾದೇವಯ್ಯನವರ ಪುತ್ರ ಚಿ॥ ಶಂಕರಾಧ್ಯನ ಜನನಕಾಲವು ಬಹಳ ಕಷ್ಟಕರವಾಗಿದ್ದು ಜಗದಾಚಾರ್ಯರ ಪ್ರಾರ್ಥನೆಯಿಂದ ಸುಖರೂಪವಾಗಿ ಜನನವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ. ಮತ್ತು ಗರುಗದಹಳ್ಳಿ ಗಂಗನಗಟ್ಟಿಮಠದ ವೇ॥ ರುದ್ರಯ್ಯನವರ ಪುತ್ರಿ ಚಿ॥ ಸೌ॥ ನಂಜಮ್ಮನನ್ನು ಗುರುಗದಹಳ್ಳಿ ಬಾವಿಮನೆ ಚಿ॥ ಸಿದ್ಧಲಿಂಗಯ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ 1 ರೂ. ಒಟ್ಟು 2 ರೂ. ಗಳು ವೇ॥ ಆರ್. ಯಂ. ಮಲ್ಲಿಕಾರ್ಜುನಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಶಂಕರಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ನ್ಯಾಷನಲ್ ವಾರ್‌ಫ್ರಂಟು

ರಾಷ್ಟ್ರೀಯ ಯುದ್ಧ ಸಮಿತಿ

ಇತ್ತೀಚೆಗೆ ಘನವನ್ನು ಹೊಂದಿದ ಇಂಡಿಯಾದ ವೈಸರಾಯರವರು ಸ್ಥಾಪಿಸಿದ "ನ್ಯಾಷನಲ್ ವಾರ್ ಫ್ರಂಟ್" ಸಂಸ್ಥೆಯ ಮಾದರಿಯಲ್ಲಿಯೇ ಮೈಸೂರು ಸಂಸ್ಥಾನದಲ್ಲಿಯೂ ಸಹ ಒಂದು ಸಂಸ್ಥೆಯನ್ನು ಸ್ಥಾಪಿಸುವ ವಿಷಯವನ್ನು ಪರ್ಯಾಲೋಚಿಸುವುದಕ್ಕಾಗಿ ದಿವಾನರವರ ಅಧ್ಯಕ್ಷತೆಯಲ್ಲಿ ಸಂಸ್ಥಾನದ ಪ್ರಮುಖರ ಸಭೆಯೊಂದು ಸೇರಿತ್ತು ಅಧ್ಯಕ್ಷರವರು ಆ ಸಂಸ್ಥೆಯ ಸ್ವಭಾವವನ್ನು ವಿವರಿಸಿದರು ಮತ್ತು ಜನರ ಧೈರ್ಯಸ್ಥೈರ್ಯಗಳನ್ನು ಕುಂದಿಸುವಂತಹ ವಸ್ತುಗಳನ್ನು ನಾಶಮಾಡಿ ಅದರಲ್ಲಿಯೂ ಸೋಲಿನ ಚಿತ್ತವೃತ್ತಿಯನ್ನು ನಾಶಮಾಡಿ ಜನರ ಮನಸ್ಸಿನಲ್ಲಿ ಧೈರ್ಯವನ್ನು ಮೂಡಿಸುವುದೂ ಮತ್ತು ಶತ್ರುಗಳ ದಾಳಿಯಿಂದ ನಾಡನ್ನು ಸರ್ವವಿಧದಲ್ಲಿಯೂ ಪ್ರತಿಭಟಿಸಲು ಸರ್ವರೂ ತಮ್ಮ ಕೈಲಾದ ಪ್ರಯತ್ನಗಳೆಲ್ಲವನ್ನು ಮಾಡುವಂತೆ ಜನರ ಮನಸ್ಸನ್ನು ಒಂದುಗೂಡಿಸುವುದೂ ಮೇಲ್ಕಂಡ ಸಂಸ್ಥೆಯ ಉದ್ದೇಶವೆಂದ ಹೇಳಿದರು ಈ ಸಂಸ್ಥೆಯ ವಿವರವನ್ನು ದಿವಾನರವರು ಸ್ಥೂಲವಾಗಿ ತಿಳಿಸಿ, ಈ ಸಂಬಂಧದಲ್ಲಿ ಸಭಿಕರ ಸಲಹೆಗಳನ್ನು ಅಪೇಕ್ಷಿಸಿದರು ಅಧ್ಯಕ್ಷರು ಸೂಚಿಸಿದಂತೆ ಮೇಲ್ಕಂಡ ಸಂಸ್ಥೆಯು ಒಂದು ಸಲಹಾ ಸಮಿತಿಯ ರೂಪದಲ್ಲಿರುತ್ತದೆ ಈ ಸಮಿತಿಯಲ್ಲಿ ದಿವಾನರವರೂ, ಸಚಿವರುಗಳೂ, ಕೆಲವು ಮಂದಿ ಮಹಾಜನರೂ ಇರುತ್ತಾರೆ ಈ ಸಮಿತಿಯ ಸಭೆಯು ಬೆಂಗಳೂರಿನಲ್ಲಿರುತ್ತದೆ ಈ ಸಂಸ್ಥೆಯ ಕೆಲಸಕಾರ್ಯಗಳನ್ನು ಸಭೆಗಳು, ವೃತ್ತಪತ್ರಿಕೆಗಳು, ಶಾಲೆಗಳು, ಎನ್ರೋಲ್‌ಮೆಂಟು ಮತ್ತು ಪ್ರಚಾರಕಾರ್ಯ ಎಂಬ ನಾಲ್ಕು ಶಾಖೆಗಳ ಮೂಲಕ ನಡೆಸಲಾಗುವುದು ಬೆಂಗಳೂರು ಮೈಸೂರು ನಗರಗಳಲ್ಲಿಯೂ ಚಿನ್ನದಗಣಿ ಪ್ರದೇಶದಲ್ಲಿಯೂ ಪ್ರತಿ ಜಿಲ್ಲೆಯಲ್ಲಿಯೂ ಸಲಹಾ ಸಮಿತಿಗಳನ್ನು ಸ್ಥಾಪಿಸಲಾಗುವದು ಪ್ರತಿಯೊಂದು ಜಿಲ್ಲಾ ಸಮಿತಿಯ ಕೆಲಸ ಕಾರ್ಯಗಳು ಅದಕ್ಕಾಗಿಯೇ ನೇಮಕವಾದ ಖಾಸಗೀ ಮಹನೀಯರೊಬ್ಬರ ನೇತೃತ್ವದಲ್ಲಿ ನಡೆಯುವುವು

ಶತ್ರುದೇಶಗಳವರ ಆಕಾಶವಾಣಿಯ ವಾರ್ತೆಗಳ ಪ್ರಚಾರ

ಭಾರತದ ರಕ್ಷಣಾ ಕಾನೂನಿಗೆ ವಿರುದ್ಧವಾದುದು

1940ನೇ ಇಸವಿಯ ಜೂನ್ ತಿಂಗಳಿನಲ್ಲಿ ಇಂಡಿಯಾ ಸರ್ಕಾರದವರು ಒಂದು ಪ್ರಕಟನೆಯ ಮೂಲಕ ಶತ್ರುದೇಶಗಳ ಆಕಾಶವಾಣಿಯ ಮೂಲಕ ಬರುವ ವಾರ್ತೆಗಳನ್ನು ಇತರರಲ್ಲಿ ಪ್ರಚಾರಮಾಡುವುದನ್ನು ನಿಷೇಧಿಸಿರುತ್ತಾರೆ ಆ ಪ್ರಕಟನೆಯನ್ನು ಮಹಾಜನರ ತಿಳುವಳಿಕೆಗಾಗಿ 1940ನೇ ಇಸವಿ ಜುಲೈ 11ನೇ ತಾರೀಖಿನ ದಿನ ಪ್ರಕಟವಾದ ಮೈಸೂರು ಗೆಜೆಟ್ಟಿನಲ್ಲಿಯೂ ಪ್ರಕಟಿಸಲಾಗಿದ್ದಿತು

ಶತ್ರುಗಳಿಂದ ಆಕಾಶವಾಣಿಯ ಮೂಲಕ ಬಂದ ವಾರ್ತೆಗಳನ್ನು ಇತರರಲ್ಲಿ ಪ್ರಚಾರಮಾಡುವುದು ಅಪರಾಧವೆಂದೂ, ಹಾಗೆ ಮಾಡುವದರಿಂದ ಆಕಾಶವಾಣಿಯನ್ನು ಇಟ್ಟುಕೊಳ್ಳುವವರ ರಹದಾರಿಯನ್ನು ವಜಾಮಾಡುವುದಲ್ಲದೆ ಅಂತಹವರ ಮೇಲೆ ಪ್ರಾಸಿಕ್ಯೂಷನು ಕ್ರಮಗಳನ್ನು ಸಹ ಜರುಗಿಸಲಾಗುವುದೆಂದು ಮಹಾಜನರಿಗೆ ಇನ್ನೊಮ್ಮೆ ಸೂಚಿಸುವುದು ಅವಶ್ಯಕವೆಂದು ಕೋರುತ್ತದೆ

ಮೊದಲನೆಯದಾಗಿ ಆಕಾಶವಾಣಿಯನ್ನಿಡಲು ರಹದಾರಿಯನ್ನು ಕೊಡುವುದು ಸ್ವಂತ ಉಪಯೋಗಕ್ಕಾಗಿ ಅದರ ಮೂಲಕ ತಮಗೆ ತಿಳಿದ ವಾರ್ತೆಗಳನ್ನು ಇತರರಲ್ಲಿ ಪ್ರಚಾರಮಾಡಲು ಕೊಡತಕ್ಕುದು ಅಪರಾಧವೇ ಸರಿ ಹಾಗೆ ಮಾಡಕೂಡದೆಂದು ಲೈಸೆನ್ಸಿನ 12ನೇ ನಿಯಮದಲ್ಲಿ ಸ್ಪಷ್ಟವಾಗಿ ತಿಳಿಸಿದೆ ಶತ್ರು ಆಕಾಶವಾಣಿಯ ವಾರ್ತೆಗಳನ್ನು ಕೇಳಿ ಆ ವಾರ್ತೆಗಳನ್ನು ಜನರಲ್ಲಿ ಪ್ರಚಾರಮಾಡುವವರಿಗೆ ಕೊಟ್ಟಿರುವ ಲೈಸೆನ್ಸುಗಳನ್ನು ರದ್ದುಗೊಳಿಸಬಹುದಾಗಿದೆ ಅಲ್ಲದೆ ಭಾರತದ ರಕ್ಷಣಾ ಮಸೂದೆ ಮತ್ತು ವೈರ್‌ಲೆಸ್ ಟೆಲಿಗ್ರಫಿ ಆಕ್ಟಿನ ಮೇರೆಗೆ ಅವರ ಮೇಲೆ ಪ್ರಾಸಿಕ್ಯೂಷನು ಕ್ರಮವನ್ನು ಜರುಗಿಸಬಹುದು

38 (1) (c)ನೇ ನಿಯಮದ ಪ್ರಕಾರ ಯಾರೇ ಆಗಲಿ ಪ್ರಜಾಶಾಂತಿಗೆ ಭಂಗತರುವಂತಹ ವರದಿಗಳನ್ನು ಯಾವ ರೀತಿಯಲ್ಲಿಯೂ ಪ್ರಕಟಿಸಕೂಡದೆಂದು ವಿಧಿಸಿದೆ ಶತ್ರು ದೇಶಗಳ ಆಕಾಶವಾಣಿಯ ಮೂಲಕ ಬರುವ ವಾರ್ತೆಗಳ ವರದಿಯು ಶಿಕ್ಷಾರ್ಹವೆಂದು ಆ ನಿಯಮದಲ್ಲೇ ಸೂಚಿತವಾಗಿದೆ

ಕಮರ್ಷಿಯಲ್ ಬ್ರಾಡ್‌ಕ್ಯಾಸ್ಟ್ ಲೈಸೆನ್ಸುದಾರರು ಶತ್ರುನೆಲೆಗಳ ವಾರ್ತೆಗಳನ್ನು ಆಲಿಸುವುದಾದರೆ ಅಂತಹವರ ಲೈಸೆನ್ಸನ್ನು ರದ್ದುಗೊಳಿಸಲಾಗುವುದೆಂದು ಈ ಮೂಲಕ ತಿಳಿಸಿದೆ

(ಮೈಸೂರು ಇನ್‌ಫರ್ಮೇಷನ್ ಬುಲೆಟಿನ್)

ನಾರುಹುಣ್ಣಿನ ಉಪದ್ರವವೂ ಅದರ ನಿವಾರಣೋಪಾಯಗಳೂ.

ಡೆಪ್ಯುಟಿ ಸ್ಯಾನಿಟರಿ ಕಮೀಷನರ್ ಡಾ॥ ಜೆ ವಿ ತರ್ಪಿಯವರು ಬರೆದದ್ದು

ಈ ಉಪದ್ರವದಿಂದ ಸಾಮಾನ್ಯವಾಗಿ ಪ್ರತಿವರ್ಷವೂ 3000 ಕ್ಕಿಂತ ಹೆಚ್ಚು ಜನರು ನರಳುತ್ತಾರೆ ಇದರ ಹಾವಳಿಯು ಜನವರಿಯಿಂದ ಜೂನವರೆಗೂ ಅಂದರೆ ಪುಷ್ಯದಿಂದ ಆಷಾಢದವರೆಗೆ ಬಲು ಜೋರು ಕೆಲವು ಗ್ರಾಮಗಳಲ್ಲಿ ವರ್ಷಕಾಲದಲ್ಲೂ ಕಾಣಿಸಿಕೊಳ್ಳುತ್ತದೆ ಈ ಉಪದ್ರವವು ಯಾರನ್ನೂ ಬಿಟ್ಟಿಲ್ಲ ಜಾತಿ ಪಂಗಡ, ವಯಸ್ಸು, ಹೆಣ್ಣು, ಗಂಡು ಎಂಬ ಭೇದವಿಲ್ಲದೆ, ಯಾರಿಗಾದರೂ ಬರಬಹುದು. ಆದರೆ ಸ್ತನ್ಯ ಕುಡಿಯುವ ಮಕ್ಕಳಿಗೆ ಮಾತ್ರ ಬರುವುದಿಲ್ಲ ಈ ರೋಗದಿಂದ ಸಾವು ಅಪರೂಪವಾದರೂ ಬಾಧೆ ಬಹಳ ಈ ವ್ಯಾಧಿಯು ಕಾಣಿಸಿಕೊಂಡವರಿಗೆ ಬಹಳ ದಿನಗಳು ತಿರುಗಾಡುವುದಕ್ಕೂ ಕೆಲಸಮಾಡುವುದಕ್ಕೂ ಆಗವುದಿಲ್ಲ ಕೆಲವರಿಗೆ ಹುಣ್ಣು ಕೀತು ವ್ರಣವಾಗುತ್ತದೆ ಕೀಲಿನ ಹತ್ತಿರ ಹುಣ್ಣು ಎದ್ದರೆ ಕೀಲು ಹಿಡಿದುಕೊಂಡು ಆ ಅಂಗವನ್ನು ಉಪಯೋಗಿಸುವುದಕ್ಕಾಗುವುದಿಲ್ಲ ಕೆಲವರಲ್ಲಿ ಒಂದೇ ಹುಳುವು ಇರುತ್ತದೆ ಆಗ ಬಾಧೆ ಕಡಿಮೆ ಮತ್ತೆ ಕೆಲವರಿಗೆ 10 12 ಹುಳುಗಳು ಕಾಣಿಸಿಕೊಳ್ಳುವುದೂ ಉಂಟು ಅವರು ಸಂಕಟವನ್ನು ಅನುಭವಿಸುವುದು ಬಹಳ ಕಷ್ಟ

ಈ ಹುಣ್ಣು ಒಂದು ವಿಧವಾದ ಹುಳುವಿನಿಂದ ಉಂಟಾಗುವುದು ಬಲಿತ ಹುಳುವು ಒಂದು ಅಡಿಯಿಂದ ಮೂರು ಅಡಿಗಳವರೆಗೆ ಉದ್ದವಾಗಿಯೂ, ಟ್ವೈನ್ ದಾರದಷ್ಟು ದಪ್ಪವಾಗಿಯೂ ಇರುತ್ತದೆ ಈ ರೋಗವು ಹರಡುವ ವಿಧಾನ ಹೇಗೆಂದರೆ ಮೊದಲು ಬಲಿತ ಹುಳುವು ದೇಹದಲ್ಲಿ ಚರ್ಮದ ತಳದಲ್ಲಿ ಕಾಣಿಸಿಕೊಳ್ಳುವುದು ಇದು ಹೆಣ್ಣು ಹುಳು ಇದರಲ್ಲಿ ಮರಿಗಳು ತುಂಬಿರುವುವು ಹುಳುವು ಚರ್ಮದ ತಳಕ್ಕೆ ಬಂದಾಗ್ಯೆ ಮೊದಲು ಬಾವು ಕಾಣಿಸಿಕೊಳ್ಳುವುದು ಅದರ ಮೇಲೆ ಗುಳ್ಳೆ ಎದ್ದು ಒಂದೆರಡು ದಿನಗಳಲ್ಲಿ ಒಡೆದು ನೀರು, ಕೀವು ಸುರಿಯುವುದಕ್ಕೆ ಪ್ರಾರಂಭವಾಗುವುದು ಕೀವಿನಲ್ಲಿ ಹುಳುವಿನ ಮರಿಗಳಿರುವುವು ಹೀಗೆ ಹುಣ್ಣು ಎದ್ದವನೊಬ್ಬನು ಕುಡಿಯುವ ನೀರಿರುವ ಭಾವಿಯೊಳಗೆ ಹೋದಾಗ ನೀರಿಗೆ ಈ ಹುಣ್ಣಿನ ಸಂಪರ್ಕವಾದ ಕೂಡಲೆ ಈ ಮರಿಗಳು ನೀರಿನಲ್ಲಿ ಹರಡಿಕೊಂಡು ಅಲ್ಲಿ ಒಂದು ಬಗೆಯ ನೀರಿನ ಹುಳುವಿನಲ್ಲಿ (ಬಸವನ ಹುಳುವಿನಲ್ಲಿ) ಸೇರುವುವು ಈ ಬಸವನ ಹುಳುವು ಗಾತ್ರದಲ್ಲಿ ಒಂದು ಗುಂಡುಸೂಜಿಯಷ್ಟಿದೆ ಅದು ನೀರಿನಲ್ಲಿ ಚಪ್ಪೆಯಂತೆ ಕುಪ್ಪಳಿಸುತ್ತಿರುವುದು ಇದರ ಹೊಟ್ಟೆಯನ್ನು ನಾರುಹುಣ್ಣಿನ ಮರಿಗಳು ಸೇರಿ ಅಲ್ಲಿ 40 ದಿನಗಳವರೆಗೆ ಬೆಳೆಯುತ್ತಿರುವುವು ಈ ಸಮಯದಲ್ಲಿ ಯಾರಾದರೂ ನೀರು ಕುಡಿದರೆ ನೀರಿನ ಜೊತೆಯಲ್ಲಿ ಬಸವನ ಹುಳುವೂ ಹೊಟ್ಟೆಯನ್ನು ಸೇರುವುದು ಜಠರದಲ್ಲಿ ಜನಿಸುವ ದ್ರವದಿಂದ ಹುಳುವು ಜೀರ್ಣಿಸುವುದರಿಂದ ನಾರು ಹುಣ್ಣಿನ ಮರಿಗಳು ಬಿಡುಗಡೆ ಹೊಂದುವುವು ಇವುಗಳಲ್ಲಿ ಗಂಡೂ ಹೆಣ್ಣೂ ಇರುವುದರಿಂದ ಹೆಣ್ಣು ಗರ್ಭವನ್ನು ಧರಿಸಿ ಪೂರ್ಣ ಬೆಳವಣಿಗೆಯನ್ನು ಹೊಂದುವುದು ಆಗ ಅದು ಹೊಟ್ಟೆಯನ್ನು ಬಿಟ್ಟು ದೇಹದ ಮೇಲ್ಭಾಗದಲ್ಲಿ ಚರ್ಮದ ಪ್ರದೇಶವನ್ನು ಸೇರುವುದು ಹೀಗೆ ಸೇರುವುದಕ್ಕೆ ಸುಮಾರು 10 ತಿಂಗಳು ಹಿಡಿಯುವುದು ಈ ಕಾಲದಲ್ಲಿ ಯಾವ ಚಿಹ್ನೆಗಳೂ ಕಂಡುಬರುವುದಿಲ್ಲ ಅನಂತರ ಮೇಲೆ ವರ್ಣಿಸಿದ ಚಿಹ್ನೆಗಳು ಕಾಣಿಸಿಕೊಂಡು ಪುನಃ ನೀರಿಗೆ ಸೇರಿ ಇತರರಿಗೆ ಹರಡಲು ಅವಕಾಶವಾಗುವುದು

ಚಿಕಿತ್ಸಾಕ್ರಮ

ಈ ಹುಣ್ಣು ಎದ್ದು ಹುಳುವು ತಲೆದೋರಿದ ಕೂಡಲೇ ಹತ್ತಿರದಲ್ಲಿರುವ ಆಸ್ಪತ್ರೆಗೆ ಹೋಗಿ ತೋರಿಸಬೇಕು ಅಲ್ಲಿ ಹುಳುವಿಗೆ ಒಂದು ವಿಧವಾದ ಇಂಜಕ್ಷನ್ ಮಾಡಿ ಅದನ್ನು ಸುಲಭವಾಗಿ ತೆಗೆಯುತ್ತಾರೆ ಹಾಗೆ ಆಸ್ಪತ್ರೆ ಸಮೀಪದಲ್ಲಿಲ್ಲದಿದ್ದರೆ ಈ ಕೆಳಗೆ ಹೇಳುವ ವಿಧಾನದಿಂದ ಹುಳುವನ್ನು ಹೊರಗೆ ತೆಗೆಯಬೇಕು ಮೊದಲು ಒಂದು ಹತ್ತಿಯ ಬಟ್ಟೆಯನ್ನು ಒದ್ದೆಮಾಡಿ ಹುಣ್ಣಿನಮೇಲೆ ಹಿಂಡಬೇಕು ಆಗ್ಗೆ ಹುಳುವು ಸ್ವಲ್ಪ ಹೊರಗೆ ಬರುವದು ಅದನ್ನು ಒಂದು ಕಡ್ಡಿಗೆ ನೋವಾಗದಂತೆ ಸುತ್ತಿಕೊಳ್ಳಬೇಕು ಅನಂತರ ಹುಣ್ಣಿನ ಮೇಲೆ ಚೊಕ್ಕಟವಾದ ಬಟ್ಟೆಯನ್ನು ಕಟ್ಟಬೇಕು ಪುನಃ ಇದೇ ರೀತಿ ಮಾರನೇ ದಿನವೂ ಮಾಡಬೇಕು ಹೀಗೆ ಹುಳುವು ಪೂರ್ತಿಯಾಗಿ ಹೊರಗೆ ಬರುವವರೆಗೂ ಪ್ರತಿದಿನವೂ ಕಡ್ಡಿಗೆ ಸುತ್ತುತ್ತಾ ಹೋಗಬೇಕು ಆದರೆ ಈ ಕೆಲಸವನ್ನು ಬಹಳ ಜಾಗರೂಕತೆಯಿಂದ ಮಾಡಬೇಕು ಯಾವಾಗಲೂ ಜೋರಾಗಿ ಎಳೆಯಕೂಡದು ಹಾಗೆ ಮಾಡಿದಲ್ಲಿ ಹುಳುವು ತುಂಡಾಗಿ ಹುಣ್ಣಿನ ಸುತ್ತಲೂ ವ್ರಣವಾಗುವುದು. ನೋವು ತಡೆಯುವುದಕ್ಕಾಗದ ಹಾಗಿದ್ದರೆ ಅದರ ಮೇಲೆ ರಾಗಿಯ ಅಥವಾ ಅಕ್ಕಿಯ ಹಿಟ್ಟನ್ನು ಪೋಲ್ಟೀಸ್ ಕಟ್ಟಿದರೆ ಶಮನಕ್ಕೆ ಬರುತ್ತದೆ ಕೆಲವರು ಮಾಡುವಂತೆ ಸಗಣಿಯನ್ನು ಮಾತ್ರ ಯಾವಾಗಲೂ ಕಟ್ಟಕೂಡದು ಇದರಿಂದ ವಿಷಮಿಸಿ ಅಪಾಯವು ಸಂಭವಿಸಬಹುದು

ಉಪದ್ರವವನ್ನು ತಪ್ಪಿಸುವ ಬಗೆ

ಈ ಉಪದ್ರವವು ಹಳ್ಳದ ನೀರನ್ನು ಕುಡಿಯುವವರಿಗಾಗಲೀ ಅಥವಾ ರಾಟೆ ಭಾವಿಯ ನೀರನ್ನು ಕುಡಿಯುವವರಿಗಾಗಲೀ ಬರುವುದಿಲ್ಲ ಇಳಿಯುವ ಭಾವಿಯ ನೀರನ್ನು ಕುಡಿಯುವವರಿಗೆ ಮಾತ್ರ ಬರುವುದೆಂಬುದು ನಿರ್ಧರವಾಗಿದೆ ಆದ್ದರಿಂದ (1) ಈ ಹುಣ್ಣಿನಿಂದ ನರಳುವವರು ಕುಡಿಯುವ ನೀರಿರುವ ಇಳಿಯುವ ಭಾವಿಯೊಳಗೆ ಪ್ರವೇಶಮಾಡಬಾರದು ಹಾಗೇನಾದರೂ ಒಳಗೆ ಹೋಗುವ ಸಂದರ್ಭ ಬಂದಲ್ಲಿ ಹುಣ್ಣಿನ ಮೇಲೆ ಒಂದು ಎಲೆಯನ್ನಿಟ್ಟು ಬಟ್ಟೆಯಿಂದ ಕಟ್ಟಿ ನೀರಿನೊಳಗೆ ಹೋಗಬಹುದು (2) ಇಳಿಯುವ ಭಾವಿಗಳನ್ನು ಸೇದುವ ಭಾವಿಗಳನ್ನಾಗಿ ಮಾಡಿ ಇಳಿಯುವುದಕ್ಕೆ ದಾರಿ ಇಲ್ಲದಂತೆ ಮಾಡಬೇಕು (3) ಇಳಿಯುವ ಭಾವಿ ನೀರನ್ನು ಕುಡಿಯಬೇಕಾಗಿ ಬಂದರೆ ನೀರನ್ನು ಚೆನ್ನಾಗಿ ಶುಭ್ರವಾದ ಬಟ್ಟೆಯಲ್ಲಿ ಶೋಧಿಸಿ ಕುಡಿಯಬೇಕು ಕಾಯಿಸಿ ಆರಿಸಿ ಕುಡಿಯುವುದು ಬಹಳ ಉತ್ತಮ ಶೋಧಿಸುವ ಬಟ್ಟೆಯನ್ನು ಚೆನ್ನಾಗಿ ಒಗೆದು ಒಣಗಿಸಿ ಪುನಃ ಉಪಯೋಗಿಸಬಹುದು ಹೀಗೆ ಎಲ್ಲರೂ ಮಾಡಿದಲ್ಲಿ ಈ ರೋಗವು ಪೂರ್ಣ ನಾಶವಾಗುವುದರಲ್ಲಿ ಸಂಶಯವಿಲ್ಲ

ಬರ್ಮಾ ಮೇಲೆ ವಿಮಾನದಾಳಿ

ಅಮೆರಿಕ ಯುದ್ಧ ವಿಮಾನಗಳು ಬರ್ಮಾದಲ್ಲಿ ಶತ್ರುಸ್ಥಾನಗಳಮೇಲೆ ದಾಳಿ ನಡೆಸಿದವು ಬ್ರಿಟಿಷ್ ವಿಮಾನಗಳು ಬರ್ಮಾದ ಒಂದು ಎಣ್ಣೆಯ ಬಾವಿಯಮೇಲೆ ಬಾಂಬನ್ನು ಹಾಕಿ ಹಾಳುಮಾಡಿದವು ಚಿಂಡ್ವಿನ್ ನದಿಯಲ್ಲಿ ಹೋಗುತ್ತಿದ್ದ ಜಪಾನ್ ಸಾಮಾನು ನೌಕೆಗಳ ಮೇಲೆ ಸಹ ಬ್ರಿಟಿಷ್ ವಿಮಾನಗಳು ದಾಳಿ ನಡೆಸಿದವೆಂದು ಹೇಳಲಾಗಿದೆ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಈವರೆಗೂ ಮತದಲ್ಲಿಯೂ ಹತ್ತಿರಹೊಂದು ಗುರುವರ್ಗದ ಮನೆಗಳ ವಿರಾದು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ವರುಷಕ್ಕೊಮ್ಮೆ ಹತ್ತು ವರ್ಷಕ್ಕೊಮ್ಮೆ ಒಂದುಸಾರೆ ಹೋಗಿ ಶಿಷ್ಯ ದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅವರು ತಮ್ಮ ಕರ್ತವ್ಯಕ್ಕನುಸಾರ ಶಿಷ್ಯರ ಯಾವತ್ತು ವಿವರ ನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ೋಗಿಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠಗಳಿಗೆ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವರವಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕ ನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ಸಂಗ್ರಹಣಾರ್ಥವಾಗಿ ವ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದ ದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಗಳು ಸುಲಭಕ್ರಯದಲ್ಲಿ ದೊರೆಯುವವು

ಭಸ್ಮಗಳು

ಔಷಧಿ ಹೆಸರು	ತೊಲಿ	ಮೂಲ್ಯ
ರ್ಣಮಕರಧ್ವಜ	೧	೨೦—೦—೦
ರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಿಂಧೂರ	೧	೩—೦—೦
ಲ್ಲಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ಾಸಿಂಧೂರ	೧	೪—೦—೦
ರ್ಣವಂಗ	೧	೨—೦—೦
ವಂಗ	೧	೧—೦—೦
ರ್ಣಭಸ್ಮ	೧	೪೦—೦—೦
ತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ೋಹಭಸ್ಮ	೧	೦-೧೩—೦
ಂಗಭಸ್ಮ	೧	೦—೮—೦
ಗಭಸ್ಮ	೧	೦—೮—೦
ಕ್ತಾಭಸ್ಮ	೧	೪೦—೦—೦
್ರಕಭಸ್ಮ	೧	೨—೦—೦
ಾಳಿಭಸ್ಮ	೧	೦—೮—೦
ಚನಭಸ್ಮ	೧	೦—೮—೦
ತ್ರಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦-೧೩—೦
ಕ್ತಾಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಚಿಪ್ಪಿನ ಭಸ್ಮ	೧	೦—೮—೦
ಂಗದ ಕೋಡಿನ ಭಸ್ಮ	೧	೦—೮—೦
ೀದಂತಿಹರತಾಳಭಸ್ಮ	೧	೦—೮—೦
ಾರ (೧ನೇ ನಂಬರ್)	೧	೫೦—೦—೦
ಾಜಿತ ಸೂರ್ಯಪುಟಿ	೧	೧—೦—೦
ಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ , ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಶ್ರೀಕ್ಷೇತ್ರ ಓಖಿಮಠ, ಜಿಲ್ಲಾ, ಗಢವಾಲ್ ಯು.ಪಿ.

ಸಿದ್ಧಾಂತಶಿಖಾಮಣಿ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ

ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತವಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಸುಮಾರು ೩ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದೆ ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿ ನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೨೨೩ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M F Printings ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಸಾರಿಸಾರಿ ಹೇಳಬಹುದಾಗಿದೆ ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣನಾಥನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! **ಬೆಲೆ ೩ ರೂಪಾಯಿ**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು. ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನ ಆಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೨೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೨೩೨ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ನಿಸ್ಸಂಕೋಚವಾಗಿ ಹೇಳಬಹುದಾಗಿದೆ ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್** ಮಹಾಪ್ರಭುಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವನೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೨೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವವಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುಕ್ತಿಸಾಧನೆಗೆ ದೃಷ್ಟಿಯನ್ನಿಟ್ಟು ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮುನೀಶ್ವರರಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸಮ್ಮೇ ಪೀಠಾರೋಹಣಮಾಡಿದನಂತರ ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾ ವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು, ಕಂತುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರು ರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾ ಗಳು ಯಾವವೆಂ ರೆ —ಪೀನಶಿ, ಒಂ ತಲೆನೋವು, ತಲೆಯ ಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದ ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗ ವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸ ತ್ತಾರೆ ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨ ೮ ೦. ವಿ ಪಿ ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[52] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸತ್ಯಾಸಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ) ..	೨ ಆಣೆ
ಬಸವಾದಿನಿಜತತ್ತ್ವದರ್ಶನ (೪ನೆಯ ಆವೃತ್ತಿ) .	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) .	೨ ಆಣೆ
ಪಂಚಾಚಾರ್ಯಪ್ರಭಾಕರ ...	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸತ್ಯಾಸಾಸ್ತ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) ..	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ...	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) .	೧೨ ಆ
ಶಿವಸೂತ್ರಸಿದ್ಧಾಂತದರ್ಪಣ . ..	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳುಳ್ಳದ್ದು) ...	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ...	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*) ...	**8 As**
Speeches by Pandit Shri Kashinatha Shastriji *English*)	**12 As**
लिंगधारणचंद्रिका (संस्कृत)	१ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु.
पुरुषसूक्तम् (वीरशैवप्राचीनभाष्योपेतम्) ..	४ आ.
नंदिकेश्वरकारिका (संस्कृत) ...	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ । ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ॥
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ । ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಸ್ತ್ವದೀಲೋಕಮಂ ॥

ದವರಿಗೆ ೧ ರೂ. ೧೨ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ನೇ ಜೂನ್ ೧೯೪೨ [ಸಂಚಿಕೆ ೯

ಜ್ಜಯಿನೀ ಮಹಾಕಾಳೇಶ್ವರಲಿಂಗ

ಶ್ರೀಮಹಾಕಾಳೇಶ್ವರಜ್ಯೋತಿರ್ಲಿಂಗವು ಮಾಳವ ಶದಲ್ಲಿ ಕ್ಷಿಪ್ರಾ ನದೀದಡದಲ್ಲಿರುವ ಉಜ್ಜಯಿನೀ ನಗರ ರುವುದು. ಇದಕ್ಕೆ ಅವಂತಿಕಾಪುರಿ ಎಂಬ ಬೇರೆ ಸರೂ ಇರುವುದು ಭರತಖಂಡದಲ್ಲಿರುವ ಏಳು ಪವಿತ್ರ ತ್ರಗಳಲ್ಲಿ ಇದು ಒಂದಾಗಿದೆ.

ಸ್ಕಾಂದಪುರಾಣದಲ್ಲಿರುವ ಅವಂತಿಕಾಖಂಡದಲ್ಲಿ ಈ ಂತಿಕಾನಗರದ ವಿಷಯದಲ್ಲಿ ವಿಸ್ತಾರವರ್ಣನೆಯು ತ್ತದೆ. ಮಹಾಭಾರತ, ಶಿವಪುರಾಣಗಳಲ್ಲಿಯೂ ಂತಿಕಾನಗರದ ಮಹಿಮೆಯು ಕಂಡು ಬರುತ್ತದೆ ಇಲ್ಲಿ ಮಾದಿತ್ಯ ಮಹಾರಾಜನ 24 ಕಂಬಗಳ ಸಭಾಮಂಟ , ಮಂಗಳಗ್ರಹದ ಜನ್ಮಸ್ಥಾನವೂ, ಮಂಗಳೇಶ್ವರ ರ್ತೃಹರಿ ಗುಹೆಗಳೂ, ಇರುತ್ತವೆ ಸಾಂದೀಪನೆಂಬ ಯ ಆಶ್ರಮವೂ ಇರುತ್ತದೆ ಮಹಾಪರಾಕ್ರಮ ಲಿಯಾದ ವಿಕ್ರಮಾದಿತ್ಯ ಮಹಾರಾಜನ ರಾಜಧಾನಿ ಾಗಿದ್ದುದೂ ಇದೇ ಪಟ್ಟಣವೇ. ಈತನ ಸಭಾಮಂಟಪ ಆಸ್ಥಾನ ಕವಿಶೇಖರರಾದ ಕಾಳಿದಾಸ ಮೊದಲಾದ ಳಾಕವಿಗಳಿದ್ದರು. ಬೃಹಸ್ಪತಿಯು ಕುಂಭರಾಶಿಯನ್ನು ವೇಶಿಸಿದಾಗ ಇಲ್ಲಿ ದೊಡ್ಡ ಕುಂಭಮೇಳವು ನಡೆಯು ದು ಹನ್ನೆರಡು ವರ್ಷಗಳಿಗೊಂದು ಸಾರಿ ನಡೆಯುವ ಮಹೋತ್ಸವಕ್ಕೆ ಸಾವಿರಗಟ್ಟಲೆ ಯಾತ್ರಿಕರು ಬರು ರು. ಶ್ರೀಮಹಾಕಾಳೇಶ್ವರಲಿಂಗಸ್ಥಾಪನ ಸಂಬಂಧ ದ ಕಥೆಯು ಪುರಾಣದಲ್ಲಿ ಹೀಗೆ ಹೇಳಲ್ಪಟ್ಟಿರುತ್ತದೆ.

ಪೂರ್ವಕಾಲದಲ್ಲಿ ಉಜ್ಜಯಿನೀ ನಗರವನ್ನು ಪ್ರಸಿ ನಾದ ಚಂದ್ರಸೇನನೆಂಬ ರಾಜನು ಆಳುತ್ತಿದ್ದನು. ನು ಮಹಾ ಶಿವಭಕ್ತನಾಗಿದ್ದನು. ಒಂದು ದಿನ ನು ಶಿವಭಕ್ತಿಯಲ್ಲಿ ಲೀನನಾಗಿರಲು ಆ ಸಮಯ ಶ್ರೀಕರನೆಂಬ ಐದು ವರ್ಷದ ಗೋಪಬಾಲನು ತಾಯಿಯ ಸಂಗಡ ಅಲ್ಲಿಗೆ ಬಂದನು ರಾಜನು ುತ್ತಿರುವ ಶಿವಪೂಜೆಯನ್ನು ಕಂಡು ಆ ಹುಡುಗ ವಿಶೇಷ ಕುತೂಹಲವುಂಟಾಯಿತು. ರಾಜನಂತೆ ಶಿವಪೂಜೆಯನ್ನು ಮಾಡಲು ಉತ್ಕಂಠಿತನಾ ರಾಜಮಂದಿರದಿಂದ ಮನೆಗೆ ಹೊರಟು ಮಾರ್ಗ ದಲ್ಲಿ ಒಂದು ಶಿಲೆಯನ್ನು ತೆಗೆದುಕೊಂಡು ತನ್ನ ಗೆ ಹೋಗಿ ಆ ಶಿಲೆಯನ್ನು ಒಂದು ಸ್ಥಳದಲ್ಲಿ ಸ್ಥಾಪಿ ದನ್ನು ಪುಷ್ಪ ಚಂದನಾದಿಗಳಿಂದ ಅತ್ಯಂತ ಶ್ರದ್ಧಾ ರ್ವಕವಾಗಿ ಪೂಜಿಸುತ್ತ ಮನಸ್ಸಿನಲ್ಲಿ ಪರಮೇಶ್ವರ ಧ್ಯಾನಿಸುತ್ತ ಸ್ಥಿರಮನಸ್ಕನಾಗಿದ್ದನು. ಬಹಳ ತ್ತಾಗಿರುವುದೆಂದು ತಿಳಿದು ತಾಯಿಯು ಮಗನನ್ನು ಟಕ್ಕೆ ಕರೆಯಲು ಬಂದಳು

ತಾಯಿಯು ಕುಮಾರನ ಸಮಾಧಿಸ್ಥಿತಿಯನ್ನು ಕಂಡು ಹಳಹೊತ್ತು ಅಲ್ಲಿಯೇ ನಿಂತಳು. ಕಡೆಗೆ ಅವಳು ಸಹನಪಟ್ಟು ಶಿವಲಿಂಗವನ್ನು ದೂರಮಾಡಿ ಬಾಲಕ ಬಲವಂತವಾಗಿ ಎತ್ತಿಕೊಂಡು ಬರಲು ಹೋದಳು ದರೂ ತಾಯಿಯು ಮಗನನ್ನು ಸಮಾಧಿಯಿಂದ ಎಬ್ಬಿಸಲು ಶಕ್ತಳಾಗಲಿಲ್ಲ ಸರಳಚಿತ್ತನಾದ ಶ್ರೀಕರನು "ಶಂಭೋ ಮಹಾದೇವ" ಎಂದು ಗಟ್ಟಿಯಾಗಿ ಕೂಗಹತ್ತಿದನು ತಾಯಿಯು ಹತಾಶಳಾಗಿ ಹಿಂದಿರುಗಿದಳು ಆದರೆ ಬಾಲ ಭಕ್ತನ ಪ್ರಾರ್ಥನೆಯು ಎಡೆಬಿಡದೆ ಸಾಗುತ್ತಲೇ ಇತ್ತು ಹೀಗೆ ಪ್ರಾರ್ಥನೆಯನ್ನು ಮಾಡುತ್ತ ಬಾಲಕನು ಈಶ್ವರನ ಧ್ಯಾನದಲ್ಲಿಯೇ ಲೀಲನಾಗಿ ಮೂರ್ಛಾಪರವಶನಾದನು. ಆಗ್ಗೆ ಪರಮೇಶ್ವರನು ಪ್ರತ್ಯಕ್ಷನಾದನು ಅಷ್ಟರಲ್ಲಿ ಆ ಬಾಲಕನು ಸಮಾಧಿಯಿಂದ ಎದ್ದು ಕಣ್ಣುತೆರೆದು ನೋಡಲು, ಎದುರಿಗೆ ಸ್ವರ್ಣರಂಜಿತವಾಗಿಯೂ, ರತ್ನಖಚಿತವಾಗಿಯೂ, ಇರುವ ವಿಶಾಲವಾದ ಮಂದಿರವು ಕಾಣಿಸಿತು. ಅದರಲ್ಲಿ ಅತ್ಯಂತ ಪ್ರಕಾಶಮಾನವಾದ ಜ್ಯೋತಿರ್ಲಿಂಗವು ದೇದೀಪ್ಯಮಾನವಾಗಿ ವಿರಾಜಿಸುತ್ತಲಿತ್ತು. ಆಗ್ಗೆ ಬಾಲಭಕ್ತನು ಆಶ್ಚರ್ಯಸಾಗರದಲ್ಲಿ ಮಗ್ನನಾಗಿ ಶಿವನನ್ನು ಸ್ತುತಿಸಲು ಪ್ರಾರಂಭಿಸಿದನು. ತಾಯಿಯೂ ಹಿಂದಿನಿಂದ ಈ ದೃಶ್ಯವನ್ನು ಕಂಡು ಆನಂದಾತಿಶಯದಿಂದ, ತನ್ನ ಪ್ರಿಯಪುತ್ರನನ್ನು ಮೇಲಕ್ಕೆತ್ತಿ, ಗಾಢಾಲಿಂಗನವನ್ನು ಮಾಡಿ, ಸಂತೋಷಸಾಗರದಲ್ಲಿ ಮುಳುಗಿದಳು ಈ ಅದ್ಭುತ ಘಟನೆಯನ್ನು ಚಂದ್ರಸೇನರಾಜನು ಚಾರರಿಂದ ತಿಳಿದು ಅಲ್ಲಿಗೆ ಹೋಗಿ ನಿಜಸ್ಥಿತಿಯನ್ನು ಪ್ರತ್ಯಕ್ಷವಾಗಿ ಕಂಡು, ಆಶ್ಚರ್ಯಭರಿತನಾದನು ಶ್ರೀಕರ ಗೋಪನೂ, ಚಂದ್ರಸೇನಮಹಾರಾಜನೂ ಮಹಾಕಾಳೇಶ್ವರನನ್ನು ಪೂಜಿಸುತ್ತ ಅಂತ್ಯದಲ್ಲಿ ಶಿವಸಾಯುಜ್ಯವನ್ನು ಹೊಂದಿದರು.

ಶ್ರೀ ಮಹಾಕಾಳೇಶ್ವರ ಲಿಂಗಕ್ಕೆ ಸಂಬಂಧಿಸಿದ ಇತಿಹಾಸವು ಮತ್ತೊಂದಿರುವುದು. ಒಂದಾನೊಂದು ಸಮಯದಲ್ಲಿ ಈ ಅವಂತಿಕಾನಗರದಲ್ಲಿ ಒಬ್ಬ ಆಹಿತಾಗ್ನಿಹೋತ್ರಿಯೆಂಬ ಬ್ರಾಹ್ಮಣನು ವಾಸವಾಗಿದ್ದನು. ಅವನಿಗೆ ದೇವಪ್ರಿಯ, ಪ್ರಿಯಮೇಧ, ಸುಕೃತ, ಸುವ್ರತ, ಎಂಬ ನಾಲ್ವರು ಪುತ್ರರಿದ್ದರು. ಇವರ ಖ್ಯಾತಿಯು ಎಲ್ಲೆಲ್ಲಿಯೂ ಹಬ್ಬಿತ್ತು. ಬ್ರಹ್ಮನಿಂದ ವರವನ್ನು ಪಡೆದಿದ್ದ ಮಹಾಮದಾಂಧನಾದ ರತ್ನಮಾಲ ಪರ್ವತದಲ್ಲಿ ವಾಸಿಸುವ ದೂಷಣನೆಂಬ ರಾಕ್ಷಸನು ಅವರ ಪ್ರಖ್ಯಾತಿಯನ್ನು ಕೇಳಿ, ಆ ಬ್ರಾಹ್ಮಣನಮೇಲೆ ದಂಡೆತ್ತಿಬಂದನು ಪುರವಾಸಿಗಳೆಲ್ಲರೂ ಸಮರಬಾಧೆಯಿಂದ ಪೀಡಿತರಾಗಿದ್ದರು ಕಡೆಗೆ ಬ್ರಾಹ್ಮಣನ ಶಿವಭಕ್ತಿಪ್ರಭಾವದಿಂದ ಶಂಕರನು ಪ್ರತ್ಯಕ್ಷನಾಗಿ ಮೇಘಗಂಭೀರಧ್ವನಿಗೆಯ್ಯಲು, ದಾನವನು ಮೃತನಾದನು. ಬಳಿಕ ಲೋಕಕಲ್ಯಾಣಾರ್ಥವಾಗಿ ಸದಾ ಆ ಪ್ರದೇಶದಲ್ಲಿ ವಾಸಿಸುತ್ತಲಿದ್ದ ಆ ಬ್ರಾಹ್ಮಣಶ್ರೇಷ್ಠನಿಗೆ ಮಹಾದೇವನು ವರಪ್ರದಾನವನ್ನು ಮಾಡಿ ಅಂತರ್ಹಿತನಾದನು. ಅಂದಿನಿಂದ ಮಹಾದೇವನು ಲಿಂಗರೂಪದಿಂದ ವಿರಾಜಮಾನನಾದನು. ಜ್ಯೋತಿರ್ಲಿಂಗದ ಸಮೀಪದಲ್ಲಿ ಜಗನ್ಮಾತೆಯಾದ ಪಾರ್ವತೀದೇವಿಯೂ, ಶ್ರೀಗಣೇಶನೂ ಇರುವರು ಭಗವಂತನು ಭಯಂಕರವಾದ ಗರ್ಜನೆಯನ್ನು 'ಮಾಡಿದ್ದರಿಂದಲೇ ಆ ಜ್ಯೋತಿರ್ಲಿಂಗಕ್ಕೆ ಮಹಾಕಾಳೇಶ್ವರ ಲಿಂಗವೆಂಬ ಹೆಸರು ಉಂಟಾಗಿರುತ್ತದೆ. ಈ ಮಂದಿರವು ಐದು ಅಂತಸ್ತುಗಳಿಂದ ಕೂಡಿ ಬಹು ವಿಶಾಲವಾಗಿದೆ. ಕ್ಷಿಪ್ರಾ ನದಿಗೆ ಸ್ವಲ್ಪ ದೂರದಲ್ಲಿದೆ. ಮಂದಿರದ ಊರ್ಧ್ವಭಾಗದಲ್ಲಿ ಓಂಕಾರೇಶ್ವರಮೂರ್ತಿಯಿರುತ್ತದೆ. ಕೆಳಭಾಗದಲ್ಲಿ ಭೂಮಿಯ ಒಳಗಡೆ ಮಹಾಕಾಳೇಶ್ವರನಿರುವನು ಯಾತ್ರಿಕರು ರಾಮಘಟ್ಟದಲ್ಲಾಗಲಿ ಅಥವಾ ಕೋಟಿತೀರ್ಥದಲ್ಲಾಗಲಿ ಸ್ನಾನಮಾಡಿ ಅಗಸ್ತ್ಯೇಶ್ವರ, ಕೋಟೇಶ್ವರ, ಕೇದಾರೇಶ್ವರ, ಹರಸಿದ್ಧಿದೇವಿ - ಮೊದಲಾದ ದೇವತೆಗಳನ್ನು ಸಂದರ್ಶಿಸಿ ಮಹಾಕಾಳೇಶ್ವರನ ದರ್ಶನಕ್ಕೆ ಬರುವರು ಮಹಾಕಾಳೇಶ್ವರನಿಗೆ ಪ್ರತಿದಿನ ವಿಭೂತಿಯಿಂದ ಪ್ರಾತಃಕಾಲ ಪೂಜೆಯು ನಡೆಯುವುದು. ಇಲ್ಲಿ ಅನೇಕ ಮಂದಿರಗಳಿರುವುವು. ಇವುಗಳಲ್ಲಿ ವಿಕ್ರಮಾದಿತ್ಯ ಮಹಾರಾಜನಿಂದ ನಿರ್ಮಿಸಲ್ಪಟ್ಟವೇ ಹೆಚ್ಚು ಇಲ್ಲಿ ಒಂದು ಸುಂದರವಾದ ಧರ್ಮಶಾಲೆಯಿರುವದು

ಸ್ವೀಕಾರ.

ದಾವಣಗೆರೆಯಲ್ಲಿರುವ ಮ|| ರಾ|| ತೆಳವಳ್ಳಿ ಶೆಟ್ಟರ ನಂಜುಂಡಪ್ಪನವರ ಧರ್ಮಪತ್ನಿಯವರಾದ ಸೌ|| ನಾಗಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣೆಕ್ಯೋಸ್ಕರ ಸಮರ್ಪಿಸಿದ 1 ರೂ. ಯು ಮಳೆಬೆನ್ನೂರು ಮಠದ ವೇ|| ಹಾಲಸಿದ್ಧಯ್ಯನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಆಸ್ಥಾನ ಧರ್ಮಾಧಿಕಾರಿಗಳು

ಮೈಸೂರು ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಜ್ಯೋತಿಶ್ಶಾಸ್ತ್ರ ಪ್ರಧಾನಾಧ್ಯಾಪಕರಾಗಿರುವ ಆಸ್ಥಾನ ಮಹಾವಿದ್ವಾನ್ ಜ್ಯೋತಿಷರತ್ನಂ ಶ್ರೀ ಕರೂರು ಶೇಷಾಚಾರ್ಯರವರಿಗೆ ಶ್ರೀಮನ್ಮಹಾರಾಜರವರು ಆಸ್ಥಾನ ಧರ್ಮಾಧಿಕಾರಿ ಪದವಿಯನ್ನು ದಯಪಾಲಿಸಿರುವರೆಂಬ ವಿಷಯವನ್ನು ತಿಳಿದು ಬಹು ಜನರು ಸಂತೋಷಿಸುತ್ತಿರುವರು. ಶ್ರೀ ಶೇಷಾಚಾರ್ಯರವರು ಜ್ಯೋತಿಶ್ಶಾಸ್ತ್ರದಲ್ಲಿ ಅಪಾರವಾದ ಪಾಂಡಿತ್ಯವನ್ನು ಸಂಪಾದಿಸಿಕೊಂಡಿರುವರಲ್ಲದೆ ಸಾಹಿತ್ಯ-ವೇದಾಂತ-ವ್ಯಾಕರಣಾದಿ ಶಾಸ್ತ್ರಗಳಲ್ಲಿಯೂ ಮಹಾಪಂಡಿತರಾಗಿರುವರು. ಪಾಂಡಿತ್ಯಕ್ಕನುಸಾರವಾಗಿ ಇವರಲ್ಲಿ ಸಕಲಸದ್ಗುಣಗಳೂ ಮನೆಮಾಡಿಕೊಂಡಿರುವವು ಧರ್ಮಾಧಿಕಾರಿ ಪದವಿಯು ಬಹು ದೊಡ್ಡದು ಈ ಮಹಾಪದವಿಗೆ ಇವರು ಸರ್ವ ರೀತಿಯಿಂದಲೂ ಯೋಗ್ಯರಾಗಿರುವರು. ಯಾವ ಪದವಿಗಳೇ ಆಗಲಿ, ಯೋಗ್ಯರಾದವರಿಗೆ ದೊರೆತರೆ ಕಬ್ಬಿನ ಮೇಲೆ ಜೇನಿಟ್ಟಂತಾಗಿ ಅವರು ಸರ್ವರ ಪ್ರೀತಿಗೂ ಪಾತ್ರರಾಗುವರಲ್ಲದೆ ಆ ಪದವಿಗಳಿಗೂ ಬೆಲೆಬರುವುದೆಂಬುದು ಸರ್ವರಿಗೂ ತಿಳಿದುದೇ ಆಗಿದೆ. ಈ ಮಹಾಪದವಿಯನ್ನು ಅನ್ವರ್ಥಪಡಿಸುವ ನೂತನ ಧರ್ಮಾಧಿಕಾರಿಗಳಿಗೆ ಶ್ರೀ ಜಗದೀಶ್ವರನು ಸಮಸ್ತ ಸನ್ಮಂಗಲಪರಂಪರೆಯನ್ನೀಯಲೆಂದಾಶಿಸುತ್ತೇವೆ.

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥

ಸೌ|| ಭಾಗೀರಥೀದೇವಿ ಕಟಾಪ

ಗುರಾವತ್ಯಂತಭಕ್ತಸ್ಯ ಶಿಷ್ಯಸ್ಯೇಹಪರತ್ರ ಚ ।
ನ ಕಿಂಚಿದ್ದುರ್ಲಭಂ ವಿಪ್ರೇನ್ ಸಮಸ್ತಂ ಸುಲಭಂ ಸದಾ ॥
(ಚಂದ್ರಜ್ಞಾನಾಗಮ)

ಗುರುವಿನಲ್ಲಿ ಅತ್ಯಂತ ಭಕ್ತಿಯುಳ್ಳಶಿಷ್ಯನಿಗೆ ಇಹ-ಪರಗಳಲ್ಲಿ ಯಾವುದೂ ದುರ್ಲಭವಲ್ಲ ಯಾವಾಗಲೂ ಎಲ್ಲವೂ ಸುಲಭವಾದುದೇ ಎಂಬ ಶಿವಾಗಮವಾಕ್ಯದಂತೆ ಶಿಷ್ಯನ ಕಲ್ಯಾಣವೇ ತನ್ನ ಕಲ್ಯಾಣವೆಂದು ಅಹೋರಾತ್ರ ಪರಿಶ್ರಮಪಡುವ ಆಪ್ತ ವ್ಯಕ್ತಿಯೆಂದರೆ ಗುರುವೇ. ಪ್ರಾಪಂಚಿಕವ್ಯವಹಾರಕ್ಕನುಸರಿಸಿದ ಬಂಧು ಬಾಂಧವರು ಸ್ವಹಿತಕಾಂಕ್ಷಿಗಳೇ ಹೊರತು ನಮ್ಮ ಹಿತವನ್ನಪೇಕ್ಷಿಸುವವರಲ್ಲ ಗುರುವರನು ಹಾಗಲ್ಲ ತನ್ನ ಹಿತವನ್ನೆಲ್ಲಾ ನಮಗಾಗಿಯೇ ಧಾರೆಯೆರೆಯುವನು ಪ್ರಾಣಿಗಳ ಉದ್ಧಾರಕ್ಕಾಗಿ ಪರಶಿವನು ಗುರುರೂಪವನ್ನು ತಾಳಿ ಲೋಕೋದ್ಧಾರವಮಾಡುತ್ತಿರುವದನ್ನು ನೋಡಿದರೆ ಗುರುವಿನಂತಹ ಪರಮ ಕರುಣಿಯು ಯಾರೂ ಇಲ್ಲೆಂದು ಸಾರಿ ಸಾರಿ ಹೇಳಬಹುದಾಗಿದೆ ಇಂತಹ ಗುರುವರನನ್ನು ತ್ಯಜಿಸಿ ಮಾನವರು ಸೌಖ್ಯವನ್ನು ಹೊಂದವೆನೆಂದು ನುಡಿಯುವವ ಜಿಹ್ವೆಯನ್ನುಬಿಟ್ಟು ಪಂಚಾಮೃತಾನ್ನವನ್ನು ಸವಿದಂತೆಯೇ ಸರಿ! ಮಾನವನು ತಾನೆಷ್ಟೇ ಬಲಿಷ್ಠನಾಗಲಿ, ಧನಿಕನಾಗಲಿ, ತಪಸ್ವಿಯಾಗಲಿ, ವಿದ್ಯಾವಂತನಾಗಲಿ, ಎಲ್ಲಕ್ಕೂ ಗುರುಕೃಪೆಯೇಕಾರಣವು.

ಸೊಲ್ಲಾಪುರದಲ್ಲಿರುವ **ಸೌ|| ಭಾಗೀರಥೀದೇವೀ ಕಟಾಪ**, ಇವರು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುವದನ್ನು ಕಂಡು ಸಂತೋಷವೆನಿಸುತ್ತದೆ ಗುರುಭಕ್ತಿಯಲ್ಲಿರುವ ಸಾಮರ್ಥ್ಯವನ್ನು ಜಗತ್ತಿಗೆ ತೋರ್ಪಡಿಸುವದಕ್ಕೋಸ್ಕರವೇ ಈ ತಾಯಿಯವರ ಅವತಾರವೆಂದರೂ ಅಡ್ಡಿಯಿಲ್ಲ. ಇವರಿಗೆ ಕನ್ನಡದಲ್ಲಿ ಅತ್ಯಂತ ಸರಸವೂ, ಸರಳವೂ, ಮನೋಹರವೂ ಆದ ಕವಿತ್ವಶಕ್ತಿಯಿದೆ. ಹಾಗೆಯೇ ಮರಾಠಿಯಲ್ಲಿಯೂ ಕವಿತ್ವಶಕ್ತಿಯಿದೆ. ಇಂಗ್ಲೀಷಿನಲ್ಲಿ ಮ್ಯಾಟ್ರಿಕ್ ವರೆಗೆ ಅಭ್ಯಾಸವಾಗಿದೆ. ಭಾಷಣಶೈಲಿಯು ಅತ್ಯುತ್ತಮವಾದುದು. ಪಂಚಾಚಾರ್ಯ ಪ್ರಭೆಯಲ್ಲಿ ಇವರು ಪ್ರಕಟಿಸುವ "ಗುರುತತ್ತ್ವಪ್ರಭಾಕರ" ಎಂಬ ಲೇಖನದಿಂದ ಇವರ ಲೇಖನಕಲೆಯು ವಾಚಕರ ಅವಗಾಹನೆಗೆ ಬಾರದೆ ಇರದು ಇವರ ಪುರಾಣಪ್ರವಚನ ಭಾಷಣಾದಿಗಳನ್ನು ಕೇಳಿ ಕೈ|| ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಶಿವಯೋಗಿಸಾರ್ವಭೌಮರು—ಈ ತಾಯಿಗೆ "ಅಭಿನವಶಾರದಾ" ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು ಇವರ ವಾಕ್ಪಟುತ್ವವನ್ನು ನೋಡಿ ಕೇದಾರಪೀಠಾಚಾರ್ಯರಾದ ಶ್ರೀಜಗದ್ಗುರು ಶ್ರೀ ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರು "ವ್ಯಾಖ್ಯಾನ ಕೇಸರಿಣೀ" ಎಂದು ಸುವರ್ಣಪದಕದೊಡನೆ ಆಶೀರ್ವದಿಸಿದರು. ಕಾಶೀಪೀಠಾಧೀಶ್ವರ ಶ್ರೀಜಗದ್ಗುರು ಪಂಚಾಕ್ಷರಶಿವಾಚಾರ್ಯಮಹಾಸ್ವಾಮಿಗಳವರು—"ಆಚಾರ್ಯತತ್ತ್ವಪ್ರಸಾರಿಕಾ" ಎಂಬ ಪದವಿಯನ್ನು ಅನುಗ್ರಹಿಸಿದರು. ಸದ್ಯಃ ಉಜ್ಜಯಿನೀ ಸದ್ಧರ್ಮಪೀಠಾಧೀಶ್ವರರಾಗಿರುವ ಶ್ರೀಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯಮಹಾಸ್ವಾಮಿಗಳವರು "ಆಚಾರ್ಯತತ್ತ್ವವಿಶಾರದಾ" ಎಂದೂ, ರಂಭಾಪುರೀ ವೀರಪೀಠಾಧೀಶ್ವರ ಶ್ರೀಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರು ಮಹಾಚಾರ್ಯತತ್ತ್ವಪ್ರಚಾರಿಣೀ ಎಂದೂ ಶಾಲುಜೋಡಿಗಳೊಡನೆ ಪ್ರಶಸ್ತಿಗಳನ್ನು ಆಶೀರ್ವದಿಸಿದರು ಪಂಚಾಚಾರ್ಯರ ಪಂಚಪೀಠಗಳ ದರ್ಶನವನ್ನು ಹೊಂದಿರುತ್ತಾರೆ. ಇವರು ಸೊಲ್ಲಾಪುರದಲ್ಲಿ "ವೀರಶೈವ ಸದಾಚಾರಸ್ತ್ರೀಸಮಾಜ" ವನ್ನು ಸ್ಥಾಪಿಸಿದ್ದಾರೆ ಇವರ ಕಾರ್ಯದಕ್ಷತೆಯನ್ನು ನಿರೀಕ್ಷಿಸಿ, ಗುರುವರ್ಗದ ಉನ್ನತಿಗಾಗಿ ಅಹೋರಾತ್ರ ನಿಷ್ಪ್ರಯತ್ನಪಡುತ್ತಿರುವ-ಲೋಕೈಕಬ್ರಹ್ಮಚಾರಿಗಳಾದ ಪರಮಪೂಜ್ಯ ಪ್ರಾತಃಸ್ಮರಣೀಯ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಸದರಿ ಸ್ತ್ರೀ ಸಮಾಜಕ್ಕೆ ಸಹಾಯಮಾಡುತ್ತಿರುವರು ಈರೀತಿ ಜಗನ್ಮಾನ್ಯ ಜಗದ್ವಂದ್ಯ ವಿಭೂತಿಗಳಿಂದ ಪ್ರಶಸ್ತಿಗಳನ್ನು ಪಡೆಯುವದು ಸಾಮಾನ್ಯವಲ್ಲ ಈ ಮಾತೃವು ಈಗಿನ ನೂತನ ವಾತಾವರಣಕ್ಕೆ ಶಿಲುಕದೆ ಸನಾತನ ಪದ್ಧತಿಯಂತೆ ಆಚರಿಸುತ್ತಾರೆ. ಇವರಲ್ಲಿಯ ಪತಿಭಕ್ತಿಯು ಅನಸೂಯೆಯನ್ನು ಮರೆಯಿಸುತ್ತಿದೆ ಇವರು ನಿಜವಾಗಿಯೂ ಅನಸೂಯೆಯೇ ಆಗಿದ್ದಾರೆ ಇವರ ಮೇಲ್ಮೆಯನ್ನು ನೋಡಿ ಸಹಿಸದೆ ಅಸೂಯೆಪಡುವ ಸ್ತ್ರೀಯರ ಬಗ್ಗೆ ಇವರೆಷ್ಟೂ ಅಸೂಯೆಪಡುವದಿಲ್ಲವಾದುದರಿಂದ ಅನಸೂಯಾ ಈ ಶಬ್ದವು ಈ ಮಾತೃವಿನಲ್ಲಿ ಶಬ್ದತಃ ಅರ್ಥತಃ ಅನ್ವಯಿಸುತ್ತಿದೆ. ಭಗೀರಥನ ನಿಷ್ಪ್ರಯತ್ನದಿಂದ ಪ್ರಾಪ್ತವಾದ ಭಾಗೀರಥಿಯು ಅರವತ್ತುಸಾವಿರ ಜನ ಸಗರ ಪುತ್ರರನ್ನುದ್ಧರಿಸಿದ ಹಾಗೆಯೇ ಹೋಟಗೀ ಶ್ರೀಗಳಿಂದ ಶಿವದೀಕ್ಷೆಯನ್ನು ಪಡೆದ ಈ ನಮ್ಮ ಭಾಗೀರಥೀದೇವಿಯವರಿಂದ ಅನೇಕರು ಗುರುತತ್ತ್ವವನ್ನರಿತು ಪುನೀತರಾಗಿದ್ದಾರೆ. ಆಗುವವರಿದ್ದಾರೆ ನಾಲ್ಕಕ್ಷರಗಳನ್ನು ಕಲಿತ ಹೆಂಗಸರ ವೃತ್ತಿಯೇ ಬೇರೆ ಸ್ಥಿತಿಯನ್ನು ಹೊಂದುತ್ತದೆ ಈ ತಾಯಿಯು ಇಷ್ಟು ವಿದ್ಯಾದಿಗಳಿಂದ ಪರಿಪೂರ್ಣರಾಗಿದ್ದರೂ ಗರ್ವಾದಿಗಳಿಗೆ ಇವರಲ್ಲಿ ಸ್ಥಲವಿಲ್ಲವಾಗಿದೆ ಸದ್ಯಃ ಈ ಮಾತೃವು ಸೊಲ್ಲಾಪುರದ ಮ್ಯುನಿಸಿಪಲ್ ಸ್ಕೂಲ್ ಬೋರ್ಡಿನಲ್ಲಿ "**ವ್ಹಾಯಿಸ್ ಚೇರ್‌ಮನ್**" ರಾಗಿ ನಿಯಮಿಸಲ್ಪಟ್ಟಿದ್ದಾರೆ. ಸ್ಕೂಲ್ ಬೋರ್ಡಿನಲ್ಲಿ ಈವರೆಗೂ ವೀರಶೈವಸ್ತ್ರೀಯರಲ್ಲಿ ಯಾರೂ ನಿಯಮಿಸಲ್ಪಟ್ಟಿರಲಿಲ್ಲ. ಈಗ ಈ ಮಾತೃವು ವ್ಹಾಯಿಸ್ ಚೇರಮನ್ನರಾದದ್ದನ್ನು ಕೇಳಿ ಯಾರಿಗೆ ತಾನೇ ಆನಂದವಾಗಲಿಕ್ಕಿಲ್ಲ? ಈ ಬೋರ್ಡಿನ ಸದಸ್ಯತ್ವಕ್ಕೆ ಎಷ್ಟೋಜನ ಶ್ರೀಮಂತರು ಸಾವಿರಾರುರೂಪಾಯಿಗಳನ್ನು ವೆಚ್ಚಮಾಡಿದರೂ ಆರಿಸಿ ಬರುವದು ದುರ್ಲಭ! ಆದರೆ ಇವರಿಗೆ ಅನಾಯಾಸವಾಗಿಯೇ ಪ್ರಾಪ್ತವಾದುದನ್ನು ನೋಡಿದರೆ ಗುರುಭಕ್ತಿಯ ಮಹತ್ವವು ಕಂಡುಬರುತ್ತಿದೆ. ಇವರು ಈ ಪದವಿಗಾಗಿ ಯಾವ ಪ್ರಯತ್ನವನ್ನು ಮಾಡಿರಲಿಲ್ಲ ಆ ಸ್ಥಲವು ತಾನಾಗಿಯೇ ಇವರನ್ನು ಯಾಚಿಸಿತು. ಇದಲ್ಲವೇ ಗುರುಭಕ್ತಿ ಪ್ರಭಾವ? ಇವರು ಈ ಸ್ಥಲಕ್ಕೆ ಬರುವರೆಂಬುದನ್ನರಿತು ವಿರಕ್ತಪಕ್ಷದವರು ತಮ್ಮ ಜನ್ಮಸಿದ್ಧವಾದ ದುಃಸ್ವಭಾವವನ್ನು ತೋರ್ಪಡಿಸಿದರು ಆದರೆ ಅದೆಲ್ಲವೂ ಹೊಳೆಯಲ್ಲಿ ಹೋಮಿಸಿದಂತಾಯಿತು. ಯತೋಧರ್ಮಸ್ತತೋಜಯಃ !

ಜ. ಜ ಪಾಟೀಲ, ಧೋತ್ರಿ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಅಭಿನಂದನಸಭೆ, ಸೊಲ್ಲಾಪುರ.

ಸೊಲ್ಲಾಪುರದ ಮುನಿಸಿಪಲ್ ಸ್ಕೂಲಬೋರ್ಡ ವ್ಹಾಯಿಸ್ ಚೇರಮನ್ ಸ್ಥಾನಕ್ಕೆ ಸೌ|| ಭಾಗೀರಥೀಬಾಯಿ ಕಟಾಪ ಇವರು ಸರ್ವಜನರ ಸಮ್ಮತಿಯಿಂದ ಆರಿಸಿಬಂದ ಸಂತೋಷಕ್ಕಾಗಿ ತಾ|| ೩೧-೫-೧೯೪೨ ನೇ ದಿವಸ ಶ್ರೀ ಮಲ್ಲಿಕಾರ್ಜುನದೇವಾಲಯದಲ್ಲಿ ಕಾವ್ಯತೀರ್ಥ ನ್ಯಾಯತೀರ್ಥ ಇತ್ಯಾದಿ ಪದವೀ ವಿಭೂಷಿತೆಯರಾದ ಶ್ರೀ ಸುಮತೀಬಾಯಿ ಶಹಾ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಸಭೆಗೆ ೪೦೦-೫೦೦ ಜನ ಸ್ತ್ರೀಯರು ಬಂದಿದ್ದರು ಮೊದಲು ವೀರಶೈವ ಸದಾಚಾರಸಮಾಜದ ಬಾಲಿಕೆಯರಾದ ಸೌ|| ಸುಗ್ಗಲಾಬಾಯಿ ತವಶೆಟ್ಟಿ, ಕು|| ಗೌರಾಬಾಯಿ ಕಟಾಪ, ಕು|| ಶಾಂತಾಬಾಯಿ ಮಾಳಗೆ ಇವರಿಂದ ಮಂಗಲಪದ್ಯವು ಹಾಡಲ್ಪಟ್ಟಿತು. ಬಳಿಕ ಸೌ|| ದಾನಮ್ಮಾಬಾಯಿ ಹಿರೇಮಠ, ಕು|| ಶಾಂತಾಬಾಯಿ ಮಾಳಗೆ, ಸೌ|| ಗಂಗಾಬಾಯಿ ಪಾಟೀಲ ಸೌ|| ಸರಸ್ವತೀಬಾಯಿ ಡಾಂಗೆ, ವೇ|| ಶ್ರೀ ಮಣೂರು ಮಲ್ಲಿಕಾರ್ಜುನ ಶಾಸ್ತ್ರಿಗಳು, ಶ್ರೀ ಚರಮೂರ್ತಿಸ್ವಾಮಿಗಳು ಜೈನಾಪುರ, ಶ್ರೀ ಶಂಕರರಾವ ಬಾಭುಳೆ ಪಂಢರಪೂರಕರ ಇವರೇ ಮೊದಲಾದವರು ವೀರಶೈವಸಮಾಜದಲ್ಲಿ ಇಲ್ಲಿಯವರೆಗ
ಯಾವ ಸ್ತ್ರೀಯರೂ ಇಂತಹ ಶ್ರೇಷ್ಠವಾದ ಸ್ಥಾನವನ್ನು
ಹೊಂದಿದ್ದಿಲ್ಲವೆಂದೂ, ಈ ವರ್ಷ ಈ ಸ್ಥಾನಕ್ಕೋ
ಸ್ಕರ ಅನೇಕ ಸ್ತ್ರೀಯರು ದೀರ್ಘಪ್ರಯತ್ನ ಮಾಡಿದಾಗ್ಯೂ
ದೊರಕದೆ ನಿರಾಶರಾದರೆಂದೂ, ಈ ಉಚ್ಚಸ್ಥಾನವು ಸೌ
ಭಾಗೀರಥೀಬಾಯಿ ಕಟಾಪ ಇವರಿಗೆ ದೊರೆಯಬೇಕ
ದರೆ ಇವರಲ್ಲಿರುವ ಸೌಜನ್ಯ, ವಿದ್ಯಾ, ಶಾಂತಿ ಮೊದಲಾ
ದವುಗಳೇ ಕಾರಣಗಳೆಂದೂ, ಇವರಲ್ಲಿ ಆಚಾರ
ಭಕ್ತಿಯು ಸಂಪೂರ್ಣವಾಗಿರುವದರಿಂದ ಈ ಸ್ಥಾನವು
ದೊರಕದ್ದು ಆಚಾರ್ಯರ ಕೃಪೆಯಿಂದೇ ಹೇಳಬಹ
ದೆಂದೂ ಭಾಷಣಮಾಡಿದರು. ಅನಂತರ ಶ್ರೀಮಾ
ಬಾಬಾಸಾಹೇಬ ವಾರದ ಇವರು ಸೌ|| ಭಾಗೀರಥೀಬಾ
ಯವರು ನಮ್ಮ ವೀರಶೈವಸಮಾಜದಲ್ಲಿ ಆರಿಸಿಬಂ
ಪ್ರೀತ್ಯರ್ಥವಾಗಿ ಇಂಗ್ಲೀಷಿನಲ್ಲಿ ಅಭಿನಂದನ ಪತ್ರವನ್ನು
ಕಳಿಸಿದ್ದರು. ಅದನ್ನು ಅಧ್ಯಕ್ಷಿಣಿಯರು ಓದಿ ಸಮ
ರಿಗೂ ತಿಳಿಯುವಂತೆ ಮರಾಠಿಯಲ್ಲಿ ಭಾಷಾಂತರಿಸಿ ಹೇ
ದರು. ಸೌ|| ಭಾಗೀರಥೀಬಾಯಿಯವರು ನನಗೆ ಈ
ಸ್ಥಾನವು ದೊರೆಯಬೇಕಾದರೆ ಆಚಾರ್ಯರ ಕೃಪೆಯ
ತಮ್ಮೆಲ್ಲರ ಸಹಾನುಭೂತಿಯೂ ಮೂಲಕಾರಣವೆಂದೂ
ಆಚಾರ್ಯರು ಅಲ್ಪಜ್ಞಳಾದ ನನಗೆ ಈ ಕಾರ್ಯ
ಸಮರ್ಥವಾದ ಸದ್ಬುದ್ಧಿಯನ್ನೀಯಲೆಂದೂ ಹೇಳಿದರ
ಅಧ್ಯಕ್ಷಿಣಿ ಸುಮತೀಬಾಯಿಯವರು ವೀರಶೈವರ
ಮುಂದಾಳುಗಳಾದ ತಮಗೆ ಈ ಸ್ಥಾನವು ದೊರೆತದ್ದು
ಬಹಳ ಸಂತೋಷದ ಸಂಗತಿಯಾಗಿದೆ. ಏಕೆಂದರೆ ಈ
ಸ್ಥಾನವನ್ನು ವಹಿಸಲು ಸಾಮರ್ಥ್ಯವುಳ್ಳವರು ಬೇಕ
ಮೊದಲು ನಾನಾದರೂ ಈ ಸ್ಥಾನವನ್ನು ಹೊಂದಿದ್ದೆನು
ಆ ಅನುಭವದಿಂದ ತಾವು ವಿದ್ಯಾವತಿಯರೂ ಸದಾಚಾ
ಣಿಯರೂ ಶಾಂತಸ್ವಭಾವದವರೂ ಇರುವದರಿಂದ ತಾವೆ
ಈ ಸ್ಥಾನಕ್ಕೆ ಆರಿಸಿಬಂದದ್ದು ಮಾನ್ಯವಾಗಿದೆ ಎಂದ
ಹೇಳಿದರು. ಆಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯ
ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶಂಕರಶರ್ಮಾ, ಇಲಿಕಾ

ಸದ್ಭಕ್ತರಿಗೆ ಸರ್ವದಾ ಜಯ

ಸದ್ಗುರುವನ್ನಾಶ್ರಯಿಸಿದ ಸದ್ಭಕ್ತರಿಗೆ ಸರ್ವದ
ಜಯವುಂಟು. ಇದು ಶಾಸ್ತ್ರದಿಂದಲೂ, ಅನುಭ
ದಿಂದಲೂ ಸಿದ್ಧವಿದೆ. ಸಾಧಾರಣ ಸರದಾರನ ಪು
ನಾದ ಶಿವಾಜಿಯು ಶ್ರೀ ರಾಮದಾಸರನ್ನು ಸಂಪೂ
ನಂಬಿದ ಕಾರಣ ಛತ್ರಪತಿಯಾಗಿ ಮೆರೆಯಲಿಲ್ಲವೇ
ಕರ್ನಾಟಕ ರಾಜ್ಯಾಧಿಪತಿಗಳಾದ ಹುಕ್ಕ, ಬುಕ್ಕ
ಶ್ರೀಜಗದ್ಗುರು ರೇಣುಕ ಭಗವತ್ಪಾದರು ಸ್ವಪ್ನದ
ಆಶೀರ್ವದಿಸಿದ ಮಹಾವಾಕ್ಯವನ್ನೇ ನಂಬಿ ವಿಜ
ನಗರದ ಮಹಾ ವೈಭವವನ್ನು ಮೆರೆಯಿಸಲಿಲ್ಲವೇ
ಇರಲಿ ಸೊಲ್ಲಾಪುರದಲ್ಲಿರುವ ಸಿದ್ಧರಾಮಪ್ಪವಾಕ
ಎಂಬವರು ಅನೇಕ ಸತ್ಕಾರ್ಯಗಳನ್ನು ತಮ್ಮ ಶ
ವಿಚಾರ ಮಾಡಿದರೂ, ಅದನ್ನು ತಾವು ಮಾಡಿದೆವೆಂ
ಎಂದೂ ನುಡಿಯುವದಿಲ್ಲ. ಇದೆಲ್ಲವೂ 'ಸದ್ಗುರುಕೃಪೆ
ಎಂದೇ ನುಡಿಯುವರು ಇವರು **ಹೋಟಗೀ** ಶ್ರೀ
ಗಳಿಂದ ಶಿವದೀಕ್ಷೆಯನ್ನು ಹೊಂದಿದ್ದಾರೆ. ಹೋಟಗೀ
ಶ್ರೀಗಳು ಶ್ರೀಶೈಲದಲ್ಲಿ ಅನುಷ್ಠಾನದಲ್ಲಿದ್ದಾಗ್ಗೆ ಇವ
ವಿಶೇಷವಾಗಿ ಸೇವೆಯನ್ನು ಮಾಡಿದರು. ಶ್ರೀಗ
ಯಾವಾಗಲೂ ತಮ್ಮನ್ನು ಉದ್ಧರಿಸುವದಕ್ಕೆ ಸೊಲ
ಪುರದಲ್ಲಿಯೇ ಇರಬೇಕೆಂಬ ಇಚ್ಛೆಯಿಂದ ೫ ಸಾವಿ
ರೂಪಾಯಿ ಬೆಲೆಬಾಳುವ ಅತ್ಯುತ್ತಮ ಸ್ಥಲವನ್ನು ಅ
ಸಿದ್ದಾರೆ. ಸೊಲ್ಲಾಪುರದಲ್ಲಿ ಶ್ರೀ ಸಿದ್ಧೇಶ್ವರಸಂಸ್ಥೆಯ
ಬಲವಾದದ್ದಿರುತ್ತದೆ. ಆ ಸಂಸ್ಥೆಯಲ್ಲಿ ಯೋಗ್ಯರಾ
ವರನ್ನೇ ಸದಸ್ಯರನ್ನಾಗಿ ನಿಯಮಿಸುತ್ತಾರೆ. ಈ
ವಾಕಳೆ ಶ್ರೀ ಸಿದ್ಧರಾಮಪ್ಪಣ್ಣನವರಿಗೆ ಆ ಸಂಸ್ಥೆಯ
ಅಯಾಚಿತವಾಗಿ ಸದಸ್ಯಪದವು ದೊರೆತಿದೆ.
ಸಂಸ್ಥೆಯ ಸದಸ್ಯರಾಗಲು ಅನೇಕರು ಅನೇಕ ದಿ
ಗಳಿಂದ ಪ್ರಯತ್ನಪಟ್ಟರೂ ಹತಾಶರಾಗಿರುತ್ತಾರೆ. ಶ್ರೀ
ವಾಕಳೆಯವರಿಗೆ ಅಪ್ರಾರ್ಥಿತವಾಗಿ ದೊರೆಯಬೇಕಾ
ಪುಣ್ಯ ವಿಶೇಷವಲ್ಲವೆ? ಗುರುಭಕ್ತಾಗ್ರೇಸರರಾದ
ರಿಗೆ ಜಗದೀಶ್ವರನು ಭಾಗ್ಯಪರಂಪರೆಯನ್ನೀಯಲೆಂ
ಪ್ರಾರ್ಥಿಸುವ,

N. C. KAR

ಗುರುಭಕ್ತಿ

ಲೇಖಕ:—ವೇ॥ [illegible] ಮಠದ ಶಿವಯ್ಯ, ತಾಳೂರು.

ಈ ಪ್ರಪಂಚದಲ್ಲಿ ಅನೇಕಾನೇಕ ಮತಗಳು ಬಹು ದಿಂದ ಸ್ಥಾಪಿತಗಳಾಗಿದ್ದು ಒಂದೊಂದು ಮತವನ್ನು ಬ್ಬ ಮತನೀಯರು ಸ್ಥಾಪಿಸಿರುತ್ತಾರೆ. ಆ ಮತ ರು ನೆಲೆಗೊಳಿಸಿದ ಸಿದ್ಧಾಂತದಂತೆ ವರ್ತಿಸುವುದು ಮತಾನುಯಾಯಿಗಳ ಪ್ರಥಮ ಕರ್ತವ್ಯವಾಗಿರು . ಪ್ರತಿಯೊಂದು ಮತದವರು ತಮ್ಮ ತಮ್ಮ ಮೂ ರ್ಯರು ಸ್ಥಿರಗೊಳಿಸಿರುವ ಧರ್ಮನಿಯಮಗಳನ್ನು ತಃ ಪಾಲಿಸುತ್ತ ಅಸಾಧಾರಣವಾದ ಗುರುಭಕ್ತಿಯಿಂ ಗೂಡಿ ಮೆರೆಯುತ್ತಿದ್ದಾರೆ. ಇವರ ಪ್ರಜ್ವಲತೆಗೆ ಭಕ್ತಿಯೇ ಮೂಲಕಾರಣವಾಗಿದೆ. ಗುರುವು ಸಾಮಾ ದ ವ್ಯಕ್ತಿಯಲ್ಲ! ಸಂಸಾರ ಸಮುದ್ರದಲ್ಲಿ ಬಿದ್ದು ತ್ತ ಮುಳುಗುತ್ತ ದುಃಖ ಪಡುತ್ತಿರುವ ಮಾನವ ಗಳನ್ನು ತನ್ನ ಉಪದೇಶವೆಂಬ ನೌಕೆಯಿಂದ ದಾ ತಕ್ಕ ಮಹಾನಾವಿಕನಾಗಿದ್ದಾನೆ. ಇಂಥ ಅದ್ಭುತ ರ್ಥ್ಯವುಳ್ಳ ಶ್ರೀಗುರುವನ್ನು ಬಿಟ್ಟು ಇನ್ನಾರಲ್ಲಿಯೂ ವಾಗಿರುವುದಿಲ್ಲವೆಂದು, ಘಂಟಾಘೋಷವಾಗಿ ಹೇಳ ದಾಗಿದೆ. ಆದುದರಿಂದಲೇ ಶ್ರುತಿದೇವಿಯು “ನಗು ರಧಿಕಂ” “ನಾಸ್ತಿ ತತ್ತ್ವಂ ಗುರೋಃ ಪರಂ” ಇತ್ಯಾದಿ ಗಳಿಂದ ಗುರುವಿನ ಸರ್ವೋತ್ಕೃಷ್ಟತೆಯನ್ನು, ಕ್ರೈ ಸಾರಿದ್ದಾಳೆ. ಈ ಶ್ರುತಿಜನನಿಯ ಅಭಿಪ್ರಾಯದಂತೆ ಯೊಬ್ಬ ವೈದಿಕ ಮತೀಯರು ತಮ್ಮ ತಮ್ಮ ಗುರು ಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸಿ ರಾ ಪರಮಪುರುಷಾರ್ಥವನ್ನು ಪಡೆಯಬೇಕಾಗಿದೆ ದು, ಹೇಳಲು ಕಾರಣವೇ ಇಲ್ಲ. ಸದ್ಯಃ ಭರತಖಂ ಲ್ಲಿರುವ ಯಾವತ್ತೂ ಮತದವರು ಅಸದೃಶ ಗುರುಭ ಯಿಂದ ವರ್ತಿಸುತ್ತಿದ್ದರೂ, ಕೆಲವೀರಶೈವರು ಅವಕ್ಕೆ ಂಜಲಿಯನ್ನು ಕೊಡಹತ್ತಿರುವದನ್ನು ನೋಡಿದರೆ ಂತ ವ್ಯಸನವೆನಿಸುತ್ತದೆ. ತನ್ನ ಅದ್ಭುತವಾದ ಯೋ ಸಾಮರ್ಥ್ಯದಿಂದ ಸಪ್ತಸಮುದ್ರಗಳನ್ನೇ ಒಂದು ಹನಿ ತೆ ಪಾನಮಾಡಿ ಲೋಕೋತ್ತರಕೀರ್ತಿಶಾಲಿಯಾಗಿ ಅಗಸ್ತ್ಯಮಹರ್ಷಿಯು ರಾಕ್ಷಸ ಸಮೂಹಕ್ಕೆಲ್ಲಾ ಯನಾಗಿ ಲೋಕಚಕ್ರವರ್ತಿಯೆನಿಸಿಕೊಂಡ ವಿಭಿಷ ಯಾವತ್ತು ಪ್ರಪಂಚದ ಶಕಪುರುಷರಲ್ಲಿ ಅದ್ವಿತೀಯ ಡಪನೆಂದು ಭರತಖಂಡದಲ್ಲಿ ಈ ಹೊತ್ತಿನವರೆಗೂ ಮಂಗಲನಾಮದಿಂದ ಪ್ರತಿಯೊಬ್ಬರ ಮುಖಕಮಲ ನರ್ತನ ಮಾಡುತ್ತಿರುವ ವಿಕ್ರಮ ಮಹಾರಾಜನು ಅದ್ಭುತವಾದ ವಿದ್ಯಾಪ್ರಭಾವದಿಂದ ಜಗತ್ತಿನ ಜನ ಲ್ಲಾ ಬೆರಗುಮಾಡಿ ದಶದಿಕ್ಕುಗಳಲ್ಲಿ ತನ್ನ ಯಶೋ ದುಂಭಿಯ ನಾದವನ್ನು ಪಸರಿಸಿದ ಶಂಕರಾಚಾ ರು ನಾರಕಿಗಳ ಸಮುದಾಯದಿಂದ ತುಂಬಿತುಳುಕು ಯಮಲೋಕವನ್ನು ಲೋಕಪಾವನವಾದ ಪಂಚಾ ಮಹಾ ಮಂತ್ರದ ಸಾಮರ್ಥ್ಯದಿಂದ ಹಾಳುಮಾಡಿ ದ್ದ ಸಮಸ್ತ ನಾರಕಿಗಳನ್ನುದ್ಧರಿಸಿ ದಿಗಂತ ವಿಶ್ರಾಂತ ಶಾಲಿಯಾದ ಸಾನಂದಮಹರ್ಷಿಯು ತನ್ನ ತಾಪ ಭಾವದಿಂದ ಇಂದ್ರನ ಚತುರ್ದಶ ಸಂಪತ್ತುಗಳನ್ನು ದ್ರದ ಪಾಲುಮಾಡಿ ಸಮಸ್ತ ದೇವದಾನವರನ್ನು ಕ್ಷೋಭೆಮಾಡಿ ಪರಮಾತ್ಮನಿಗೆ ವಿಷವನ್ನುಣಿಸಿ ಅವ ನೀಲಕಂಠನೆಂಬ ಪದವಿಯಿಂದ ಜಗದ್ವಿಖ್ಯಾತನ ಮಾಡಿದ ಮಹರ್ಷಿ ಪುಂಗವನಾದ ದೂರ್ವಾಸನು ಹದಿನೆಂಟು ಪುರಾಣಗಳನ್ನೂ, ಬ್ರಹ್ಮಸೂತ್ರಗ ರಚಿಸಿ ಸನಾತನ ಧರ್ಮಕ್ಕೆ ಅಸಾಧಾರಣವಾದ ಪಕಾರವನ್ನು ಮಾಡಿ ಜಗದ್ವಿಖ್ಯಾತಕೀರ್ತಿಶಾಲಿ ಗಿರುವ ವ್ಯಾಸಮಹರ್ಷಿಯು ಇವರೇ ಮೊದಲಾದ ದ್ಧ ಪುರುಷರು ಯಾವ ಮಹಾತ್ಮರ ಕೃಪಾಕಟಾಕ್ಷಕ್ಕೆ ತ್ರರಾಗಿ ಧನ್ಯರಾದರೋ, ಅಂಥ ಶ್ರೀ ರೇಣುಕಾದಿ ಚಾರ್ಯರ ನಾಮಸ್ಮರಣ ಕೀರ್ತನಾದಿಗಳನ್ನು ಮಾಡಿ ರಾಗುವುದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾ ಗ್ಯೂ ಇದನ್ನು ಮರೆತು ಕೆಲಜನರು ಮನಸ್ಸಿಗೆ ಬಂ ತೆ ಹೇಯವಾಗಿ ವರ್ತಿಸುತ್ತಿರುವದನ್ನು ನೋಡಿದರೆ ರ ದುರ್ದೈವಕ್ಕೆ ಬೆಲೆಯೇ ಇಲ್ಲವೆಂದು ಮುಕ್ತಕಂಠ ದ ಹೇಳಬಹುದಾಗಿದೆ. ವೇ॥ [illegible] ರು ಈ ಪೂಜ್ಯಪಾದರಿಂದ ಉಪದಿಷ್ಟರಾಗಿರುವಾಗ ಮಂದಮತಿಗಳು ಇದಕ್ಕೆ ವಿರುದ್ಧವಾಗಿ ವರ್ತಿಸುತ್ತಿರುವದು ತುಂಬಾ ಶೋಚನೀಯವಾದ ವಿಷಯವಾಗಿದೆ. ಇವರೀ ಆಚರಣೆಯು ಬಹು ಜನ್ಮಕೃತಪಾಪಸಮೂಹದ ಫಲವೆಂದು ಹೇಳಿದರೆ ತಪ್ಪಾಗಲಾರದು. ಆದುದರಿಂದ ಗುರುಭಕ್ತಿ ಶೂನ್ಯರಾಗಿ ವರ್ತಿಸುವ ಜನರು ಈ ವಿಷಯವನ್ನೆಲ್ಲಾ ಪೂರ್ಣವಾಗಿ ಆಲೋಚಿಸಿ ಗುರುಸಾರ್ವಭೌಮರ ನೈಜವಾದ ಚರಿತ್ರೆಯನ್ನು ತಿಳಿದುಕೊಂಡು ಅವರಲ್ಲಿ ಅಕೃತ್ರಿಮವಾದ ಭಕ್ತಿಯನ್ನಿಟ್ಟು “ಮೋಕ್ಷಮೂಲಂ ಗುರೋಃ ಕೃಪಾ” ಎಂಬೀ ಗುರುಗೀತಾ ವಾಕ್ಯದಂತೆ ಪರಮಪುರುಷಾರ್ಥವಾದ ಮೋಕ್ಷವನ್ನು ಶ್ರೀಗುರುವಿನಿಂದ ಪಡೆದು ಇಹ-ಪರಸುಖ ಭಾಗಿಗಳಾಗಲೆಂದೂ, ಜಗದೀಶ್ವರನು ಗುರುಭಕ್ತಿ ಶೂನ್ಯರಲ್ಲಿ ಈ ವಿಧವಾದ ಸದ್ಬುದ್ಧಿಯನ್ನುಂಟು ಮಾಡಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇನೆ.

ಸನ್ಯಾಸಿಗಳ ಅಸಾಧುವರ್ತನೆ

ಲೇ:—ಶಿವಶಾಸ್ತ್ರೀ [illegible] ಸಂಸ್ಕೃತ ಪಾಠಶಾಲಾ ಕೊಲ್ಲಾಪುರ

ಮನುಷ್ಯನು ಸುಖವನ್ನು ಯಾವಾಗಲೂ ಅಪೇಕ್ಷಿಸುವನು ಭೌತಿಕ ವಸ್ತುಗಳಲ್ಲಿಯೇ ನಿಜವಾದ ಸುಖವಿರುವುದೆಂದು ತಿಳಿದು ಅವನು ಅದನ್ನು ಆಶ್ರಯಿಸುವನು. ಆದರೆ ಭೌತಿಕ ವಸ್ತುಗಳು ನಿಜವಾದ ಸುಖಸಾಧನವಲ್ಲವೆಂಬುದು ಸಿದ್ಧವಿದೆ. ಹಾಗಾದರೆ ನಿಜವಾದ ಸುಖದ ಹಾದಿಯಾವುದೆಂಬುದನ್ನು ಅದರ ಪರಿಚಯವುಳ್ಳವರೇ ಹೇಳಬೇಕು. ನಿತ್ಯಸುಖಾನುಭವದ ತಿರುಳನ್ನನುಭವಿಸಿದವರು ತೋರಿಸಿರುವ ದಾರಿಯಾವುದೆಂದರೆ—

ಸುಖಂ ತು ನ ವಿನಾ ಧರ್ಮಾತ್ತಸ್ಮಾದ್ಧರ್ಮಪರೋ ಭವೇತ್

ಸುಖವೆಂಬುದು ಧರ್ಮದ ಹೊರತು ಬೇರೆಯಾವುದರಿಂದಲೂ ಸಿಕ್ಕುವುದಿಲ್ಲ ಆದುದರಿಂದ ಸರ್ವರೂ ಧರ್ಮನಿರತರಾಗಬೇಕು. ಇದನ್ನು ವ್ಯಾಸಮಹರ್ಷಿಗಳು—

“ಊರ್ಧ್ವಬಾಹುರ್ವಿರೌಮ್ಯೇಷ ನ ಚ ಕಶ್ಚಿಚ್ಛೃಣೋತಿ ಮೇ” |
“ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ ॥

ಎಲೈ ಬ್ರಾಹ್ಮಣರೇ, ನಾನು ಎರಡು ಕೈಗಳನ್ನು ಎತ್ತಿ ಸಾರುತ್ತೇನೆ. ಇದಕ್ಕೆ ಒಬ್ಬರೂ ಕಿವಿಗೊಡುವುದಿಲ್ಲ. ಧರ್ಮವನ್ನಾಶ್ರಯಿಸಿದರೆ ಅರ್ಥವೂ ಕಾಮವೂ ತಾವೇ ಇದ್ದಲ್ಲಿಗೆ ಬರುವವು. ಆದುದರಿಂದ ಧರ್ಮವನ್ನು ನೀವೇಕೆ ಆಶ್ರಯಿಸಲೊಲ್ಲಿರಿ? ಎಂದು ಅತ್ಯಂತ ಕಳಕಳಿಯಿಂದ ಹೇಳಿರುವರು. ಸ್ಮೃತಿವಾಕ್ಯವಾದರೂ “ಧರ್ಮ ಏವ ಹತೋ ಹನ್ತಿ ಧರ್ಮೋ ರಕ್ಷತಿ ರಕ್ಷಿತಃ” ಎಂದು ಉದ್ಘೋಷಿಸಿರುವುದು. ನಾವು ಧರ್ಮವನ್ನು ಕಾಪಾಡಿದರೆ ಧರ್ಮವು ನಮ್ಮನ್ನು ಕಾಪಾಡುವುದು. ಅದನ್ನು ಹಾಳುಮಾಡಿದರೆ ಅದು ನಮ್ಮನ್ನು ಹಾಳುಮಾಡುವುದು. ಹೀಗೆ ಧರ್ಮವು ಜಗತ್ತಿಗೆ ಆಧಾರ ಸ್ವರೂಪವಾದುದರಿಂದ ನಾವು ಅದನ್ನು ರಕ್ಷಿಸಿಕೊಂಡಿರಬೇಕು. ಧರ್ಮವಿಲ್ಲದಿದ್ದರೆ ಜಗತ್ತಿನ ವ್ಯವಹಾರಗಳೇ ಸಾಗುವಂತಿಲ್ಲ ಮನುಷ್ಯ ಜನ್ಮವು ಎಂದು ಬಂದಿತೋ ಅಂದೇ ಧರ್ಮವು ಗಂಟುಬೀಳುತ್ತದೆ. ಬೇಡವೆಂದರೆ ಬಿಡುವುದಿಲ್ಲ. ಆದುದರಿಂದ ಜಗತ್ತಿನಲ್ಲಿ ಧರ್ಮವೇ ಶ್ರೇಷ್ಠವಾದುದು ಈ ಧರ್ಮಕ್ಕೆ ವೇದ ಆಗಮ ಉಪನಿಷತ್ತುಗಳೇ ಮೂಲ. ಪವಿತ್ರವಾದ ನಮ್ಮೀ ಭರತ ಭೂಮಿಯಲ್ಲಿ ವೇದಾಗಮೋಪನಿಷತ್ಸಮ್ಮತಗಳಾದ ಮತಗಳನೇಕವಾಗಿರುವವು. ಅವುಗಳಲ್ಲಿ ದ್ವೈತ, ಅದ್ವೈತ ವಿಶಿಷ್ಟಾದ್ವೈತ ಶಕ್ತಿವಿಶಿಷ್ಟಾದ್ವೈತವೆಂಬೀ ನಾಲ್ಕುಮತಗಳೇ ಜಗದ್ವಿಖ್ಯಾತಗಳಾಗಿವೆ ಈ ಮತಗಳನ್ನು ಕ್ರಮವಾಗಿ ಮಧ್ವಾಚಾರ್ಯ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಪಂಚಾಚಾರ್ಯರೆಂಬ ಆಚಾರ್ಯರು ಭಾಷ್ಯಾದಿಗಳದ್ವಾರಾ ನೆಲೆಗೊಳಿಸಿರುವರು. ಆದರೆ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ಅನ್ಯ ಮತಾಚಾರ್ಯರಂತೆ ಜನನೀ ಜನಕರ ಸಂಬಂಧದಿಂದ ಅವತರಿಸದೆ ಪರಶಿವನ ಆಜ್ಞಾನುಸಾರವಾಗಿ ಕೃತಾದಿ ಚತುರ್ಯುಗಗಳಲ್ಲಿ ಶ್ರೀಸೋಮನಾಥಾದಿ ಪಂಚಲಿಂಗಗಳಿಂದ ದಿವ್ಯದೇಹಧಾರಿಗಳಾಗಿ ಅವತರಿಸಿ ವೀರಶೈವ ಸಿದ್ಧಾಂತವನ್ನು ಸ್ಥಾಪಿಸಿದರೆಂದು ಶಿವಾಗಮಾದಿಗಳು ಘಂಟಾಘೋಷವಾಗಿ ಸಾರುತ್ತವೆ. ಅನ್ಯ ಮತಾಚಾರ್ಯರಂತೆ ಈ ಮಹಾಚಾರ್ಯರ ಕಾಲನಿರ್ಣಯವನ್ನು ಮಾಡಲು ಸಾಧ್ಯವೇ ಇಲ್ಲ. ಪಂಚಾಚಾರ್ಯರು ನಾಲ್ಕು ಯುಗಗಳಲ್ಲಿಯೂ ಶಿವಲಿಂಗಮುಖದಿಂದ ಅವತರಿಸಿ ಧರ್ಮ ರಕ್ಷಣೆಗಾಗಿ ರಂಭಾಪುರೀ ಮೊದಲಾದ ಪಂಚ ಪುಣ್ಯ ಕ್ಷೇತ್ರಗಳಲ್ಲಿ ಸಿಂಹಾಸನಗಳನ್ನು ಸ್ಥಾಪಿಸಿರುವರೆಂದು ಪರಶಿವನು ಸ್ವಯಂಭುವಾಗಮದಲ್ಲಿ ಸ್ಪಷ್ಟವಾಗಿ ಅಪ್ಪಣೆಕೊಡಿಸಿರುವನು.

ಪ್ರವಕ್ಷ್ಯಾಮಿ ಧರಿತ್ರ್ಯಾಂತು ಶೃಣು ತತ್ತ್ವ ಸನತ್ಸುತಃ |
ಶ್ರೀಮದ್ರೇಣುಕಸಿದ್ಧಸ್ಯ ಕೊಲ್ಲಿಪಾಕಪುರೋತ್ತಮೇ |
ಸೋಮೇಶಲಿಂಗಾಜ್ಜನನಮಾವಾಸಃ ಕದಳೀಪುರೇ ॥
ತಥಾ ಮರುಳಸಿದ್ಧಸ್ಯ ವಟಕ್ಷೇತ್ರೇ ಮಹತ್ತರೇ |
ಸಿದ್ಧೇಶಲಿಂಗಾಜ್ಜನನಂ ಸ್ಥಾನಮುಜ್ಜಯಿನೀಪುರೇ ॥
ಸುಧಾಕುಂಡಾಖ್ಯಸುಕ್ಷೇತ್ರೇ ಮಲ್ಲಿಕಾರ್ಜುನಲಿಂಗತಃ |
ಜನನಂ ಪಂಡಿತಾರ್ಯಸ್ಯ ನಿವಾಸಃ ಶ್ರೀಗಿರೌ ಶಿವೇ ॥
ದ್ರಾಕ್ಷಾರಾಮಾಖ್ಯಸುಕ್ಷೇತ್ರೇ ಭೀಮನಾಥಾಖ್ಯಲಿಂಗತಃ |
ಏಕೋರಾಮಸ್ಯ ಜನನಮಾವಾಸಸ್ತು ಹಿಮಾಲಯೇ ॥
ಕಾಶ್ಯಾಂ ವಿಶ್ವೇಶಲಿಂಗಾಚ್ಚ ವಿಶ್ವಾರಾಧ್ಯಸ್ಯ ಸಂಭವಃ |
ಸ್ಥಾನಂ ಶ್ರೀಕಾಶಿಕಾಕ್ಷೇತ್ರೇ ಶೃಣು ಪಾರ್ವತಿ ಸಾದರಂ ॥
ಏತೇ ಯುಗಚತುಷ್ಕೇಷು ಪಂಚಾರಾಧ್ಯಾ ಯಥಾವಿಧಿ |
ಪಂಚಲಿಂಗಸಮುದ್ಭೂತಾ ಲೋಕವಿಖ್ಯಾತಕೀರ್ತಯಃ ॥

ಇತ್ಯಾದಿ ಪ್ರಮಾಣಗಳಿಂದ ಬೋಧಿಸಿರುವನು. ಹೀಗಿದ್ದರೂ ಕಲಿಮೋಹಪಾಶಬದ್ಧರಾದ ಬಸವಪಂಥಿಗಳು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲೋಸುಗ ಮತಸ್ಥಾಪನಾಚಾರ್ಯರು ಬಸವನ ಸಮಕಾಲೀನರೆಂದೂ, ಬಸವನೇ ಮೂಲಪುರುಷನೆಂದೂ, ಅವನ ಅಮಂಗಲ ಜಾತಿಸಾಂಕರ್ಯ ವಚನವೇ ಪ್ರಮಾಣವೆಂದೂ, ಅಜ್ಞಜನರನ್ನು ಮೋಹಗೊಳಿಸಿ ಮತದಲ್ಲಿ ಪಂಗಡಗಳನ್ನುಂಟುಮಾಡಿ ನಲಿದಾಡುತ್ತಿರುವುದನ್ನು ನೋಡಿದರೆ ಅತ್ಯಂತ ವ್ಯಸನವೆನಿಸುತ್ತದೆ ಆದರೆ ಇವರ ಕುಟಿಲಲೀಲಾ ತಾಂಡವನೃತ್ಯವನ್ನು ಖಂಡರಿಸಲು ಗುರುವರ್ಗವು ಸದಾ ಸಿದ್ಧವೇ ಇದೆ ಅಸ್ತು! ವೇದಾಗಮೋಪನಿಷತ್ಸಮ್ಮತವಾದ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಗಳೆಂಬ ನಾಲ್ಕು ಆಶ್ರಮಗಳನ್ನು ಇತರ ಸನಾತನ ಮತಾನುಯಾಯಿಗಳು ಪರಿಪಾಲಿಸುವಂತೆ ವೀರಶೈವ ಮತೀಯರಾದರೂ ಪರಿಪಾಲಿಸುತ್ತಿರುವರು. ಈ ಚತುರಾಶ್ರಮಗಳಲ್ಲಿ ಸದ್ಯಃ ಸನ್ಯಾಸಾಶ್ರಮ ಪದ್ಧತಿಯನ್ನು ವಿಮರ್ಶಿಸೋಣ! “ಬ್ರಹ್ಮಚಾರೀ ಭೂತ್ವಾ ಗೃಹೀ ಭವೇತ್. ಗೃಹೀಭೂತ್ವಾ ವನೀ ಭವೇತ್, ವನೀಭೂತ್ವಾ ಪ್ರವ್ರಜೇತ್” ಎಂಬ ಶ್ರುತಿವಾಕ್ಯದಂತೆ ಸನ್ಯಾಸಿ (ವಿರಕ್ತ) ಯಾಗುವವನು ಬ್ರಹ್ಮಚರ್ಯಾದಿ ಮೂರು ಆಶ್ರಮಗಳನ್ನನುಭವಿಸಿ· ಸಂಸಾರವು ನಿಸ್ಸಾರವೆಂದು ತಿಳಿದು ವೈರಾಗ್ಯವುಂಟಾದಾಗ್ಗೆ ಸನ್ಯಾಸಾಶ್ರಮವನ್ನು ಸ್ವೀಕರಿಸಬೇಕು. ಇಲ್ಲವೆ “ಯದಿ ಚೇದ್ವೈರಾಗ್ಯಂ ತದಾ ಬ್ರಹ್ಮಚರ್ಯಾದೇವ ಪ್ರವ್ರಜೇತ್” ಅಂದರೆ ಬ್ರಹ್ಮಚರ್ಯಾಶ್ರಮದಲ್ಲಿಯೇ ವೈರಾಗ್ಯವುಂಟಾದರೆ ಸನ್ಯಾಸಿಯಾಗಬಹುದು ಅಥವಾ “ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್’ ಯಾವ ಆಶ್ರಮದಲ್ಲಿದ್ದರೂ ವೈರಾಗ್ಯವುಂಟಾದರೆ ಕೂಡಲೆ ಸನ್ಯಾಸಿಯಾಗಬಹುದು ಎಂದು ಶ್ರುತಿಯು ಸಾರುತ್ತಿರುವದು. ಇದರಿಂದ ವೈರಾಗ್ಯವು ಪ್ರಾಪ್ತವಾದ ಹೊರತು ಸನ್ಯಾಸಿಯಾಗಲಿಕ್ಕೆ ಬರುವುದಿಲ್ಲವೆಂದು ಸಿದ್ಧವಾಗುವದು. ಯಾವಮತದವರೇ ಆಗಲಿ ಸನ್ಯಾಸಿಯಾಗಬೇಕಾದರೆ ಗುರುವನ್ನಾಶ್ರಯಿಸಬೇಕು ಗುರುವಿಲ್ಲದೆ ಮೋಕ್ಷವಿಲ್ಲ ವೀರಶೈವಮತದಲ್ಲಿ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಈ ಮೂರು ಆಶ್ರಮಗಳಲ್ಲಿರುವ ಯಾವನಿಗಾದರೂ ಹೇಯಬುದ್ಧಿ ಹುಟ್ಟಿ ವೈರಾಗ್ಯಶೀಲನಾಗಿ ದೀಕ್ಷೋಪದೇಶದ ಗುರುವಿನಲ್ಲಿ ಶರಣಾಗತನಾದರೆ ಆಗ್ಗೆ ಸದ್ಗುರುವು ಸನ್ಯಾಸದೀಕ್ಷೆಯನ್ನು ಕೊಡುವನು. ಈಗ್ಗೆ ೮೦೦ ವರ್ಷಗಳಿಂದೀಚೆಗೆ ವಿರಕ್ತರು ಆಶಾಪಾಶಬದ್ಧರಾಗಿ ಬ್ರಹ್ಮಚರ್ಯಾಶ್ರಮದಲ್ಲಿಯೇ ವೈರಾಗ್ಯಶೀಲರಂತೆ ನಟಿಸಿ ಹಿಂಡುಜನರ ಗುಂಪು ಕೂಡಿಸಿ ವಿರಕ್ತರಾದೆವೆಂದು ಬಡಬಡಿಸುವರು. ಇದಲ್ಲದೆ ಬಸವಪುರಾಣವನ್ನು ಬಗಲಿಗೆ ಬಿಗಿಯುವುದು ಮತ್ತು ಒಂದು ಹೊಸ ಮಣ್ಣಿನ ಪಾತ್ರೆಯಲ್ಲಿ ಅನ್ನವನ್ನು ನೀಡಿಸಿಕೊಂಡು ಕೂಡಿದ ವಿರಕ್ತರೆಲ್ಲರೂ ಊಟಮಾಡುವದು. ಇದು ಇವರ ಆಶ್ರಮದ ಅಮಂಗಲಾಚರಣೆ! ಇದನ್ನು ಕೇಳಿದರೆ ದುಃಖ

[೬ನೆಯ ಪುಟವನ್ನು ನೋಡಿ.]

ಪಂಚಾಚಾರ್ಯಪ್ರಭಾ.

೧೯೪೨ನೆಯ ಜೂನ್ ತಾ|| ೧೫ನೆಯ ಸೋಮವಾರ

ಪ್ರಾಚೀನವಿರಕ್ತರ ಗುರುಭಕ್ತಿ.

ಪರಶಿವನ ಪಂಚಮುಖಗಳಿಂದ ಅವತರಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರು ಅಸಾಧಾರಣ ಮಹಿಮಾಶಾಲಿಗಳೆಂಬ ವಿಷಯವು ಅವರ ಪವಿತ್ರ ಚರಿತ್ರಗಳಿಂದ ಕಂಡುಬರುತ್ತದೆ ಈ ಮಹಾತ್ಮರ ಅವತಾರಾದಿಸಮಸ್ತ ವಿಷಯಗಳನ್ನು ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತಿರುವವು ಪೂರ್ವಕಾಲದಲ್ಲಿ ಮಹಾಮಹಾಮಹರ್ಷಿಗಳೂ ಚಕ್ರವರ್ತಿಗಳೂ ಈ ಮಹಾತ್ಮರ ಆಶೀರ್ವಾದ ಪ್ರಭಾವದಿಂದ ಕೈವಲ್ಯಸುಖವನ್ನನುಭವಿಸಿದರು ಬ್ರಹ್ಮಚರ್ಯಾದಿ ಚತುರಾಶ್ರಮಿಗಳು ಮಠಾಚಾರ್ಯರಿಂದಲೇ ಅನುಗೃಹೀತರಾಗಬೇಕೆಂಬ ಶಾಸ್ತ್ರನಿಯಮದಂತೆ ಪೂರ್ವಕಾಲದಲ್ಲಿ ಸಕಲಾಶ್ರಮಿಗಳೂ ವರ್ತಿಸಿ ಧನ್ಯರಾಗುತ್ತಿದ್ದರು ಕಲಿಕಾಲಪ್ರಭಾವದಿಂದ ಕಲವು ದಿವಸಗಳಿಂದೀಚೆಗೆ ನಾಲ್ಕನೆಯ ಆಶ್ರಮದವರಾದ ವಿರಕ್ತರೆಂಬವರು ಶಾಸ್ತ್ರಮಾರ್ಗಕ್ಕೆ ತಿಲಾಂಜಲಿಯನ್ನಿತ್ತು ಧನಮದದಿಂದ ಉನ್ಮತ್ತರಾಗಿ ಮಠಸ್ಥಾಪಕರನ್ನು ಧಿಕ್ಕರಿಸಲು ಪ್ರಾರಂಭಿಸಿರುವರು ಹೀಗೆ ನಡೆಯುತ್ತಿರುವುದು ಅವರ ಬಹುಜನ್ಮಕೃತಪಾಪದ ಪ್ರಭಾವವೆಂದೇ ಹೇಳಬೇಕಾಗಿದೆ ಪ್ರಾಚೀನವಿರಕ್ತರು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರಲ್ಲಿ ಅನಿತರಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಿ ಹೋಗಿದ್ದಾರೆ ಅವರು ತೋರಿಸಿರುವ ಗುರುಭಕ್ತಿಯು ಅಸಾಧಾರಣವಾದುದು ಅವರಂತಹ ಗುರುಭಕ್ತಿಯು ಯಾರಲ್ಲಿಯೂ ಇಲ್ಲೆಂದರೂ ಸಲ್ಲುವದು ವಿರಕ್ತರಲ್ಲಿ ಮಹಾಮಹಿಮಾಶಾಲಿಗಳೆಂದು ಜಗದ್ವಿಖ್ಯಾತರಾಗಿರುವ ಅನಾದಿತೋಂಟದ ಸಿದ್ಧಲಿಂಗೇಶ್ವರರು ಮಠಾಚಾರ್ಯರಲ್ಲಿ ಅನ್ಯಾದೃಶವಾದ ಭಕ್ತಿಯನ್ನಿಟ್ಟಿದ್ದರೆಂಬ ವಿಷಯದಲ್ಲಿ ಅವರಿಂದ ಬರೆಯಲ್ಪಟ್ಟ ಸಿದ್ಧೇಶ್ವರವಚನವೇ ಬಲವಾದ ಸಾಕ್ಷಿಯಾಗಿದೆ ಆ ಮಹಾತ್ಮರು ತಮ್ಮ ವಚನದಲ್ಲಿ—

ನಂದೀಶ್ವರ ಭೃಂಗೀಶ್ವರ ವೀರಭದ್ರ ದಾರುಕ ರೇಣುಕ ಶಂಕುಕರ್ಣ ಗೋಕರ್ಣ ಏಕಾಕ್ಷರ, ದ್ವ್ಯಕ್ಷರ ತ್ರ್ಯಕ್ಷರ ಚತುರಕ್ಷರ ಪಂಚಾಕ್ಷರ ಷಡಕ್ಷರ ಸದಾಶಿವ ಈಶ್ವರ ಮಹೇಶ್ವರ ರುದ್ರ ಘಂಟಾಕರ್ಣ ಗಜಕರ್ಣ ವಿಕಟ [illegible] ದ್ವಿಮುಖ ತ್ರಿಮುಖ ಚತುರ್ಮುಖ ಪಂಚಮುಖ ಷಣ್ಮುಖ ಶತಮುಖ ಸಹಸ್ರಮುಖ ಮೊದಲಾದ ಗಣಾಧೀಶ್ವರರು ನಿತ್ಯಪರಿಪೂರ್ಣರಾದ ಆ ಪರಶಿವ ತತ್ತ್ವದಲ್ಲಿ ಜ್ಯೋತಿಯಲ್ಲಿ ಜ್ಯೋತಿಯುದಯವಾದಂತೆ ಉದಯಿಸಿ ಶಿವ ಚಿದ್ರೂಪರಪ್ಪ ಪ್ರಮುಖರು ಅನಾದಿಮುಕ್ತರಲ್ಲ ಆಗಂತುಕಮುಕ್ತರೆಂಬ ಅಪಲಕ್ಷಣ ನಾಯಿ ನಾಲಿಗೆ ಹಿಡಿಕೆಂಟು [illegible] ಸಿಲುಕಿತು ! ಆ ಜ್ಞಾನಜ್ಞಾನಿಗಳ [illegible] ಅಪರ ಭಗವಂತರಲಿ ನಿಮ್ಮ ಶರಣರಿಗೆ ಶಿವಗೆ ಬೇಧ ಮಾಡಿ ಸಂಕಲ್ಪಿಸಿದ ಶಿವ ಅಜ್ಞಾನಿ ಹೊಲೆಯರ ಎನಗೊಮ್ಮೆ ತೋರದಿರಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ || ಮತ್ತು—

ಆದಿಯಲ್ಲಿ ಶಿವತತ್ತ್ವದಲ್ಲಿ ರೇಣುಕನುದಯವಾದನಾಗಿ ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿಯೆಂತು ! ಆ ಶಿವನಲ್ಲಿಯೇ ಹುಟ್ಟಿ ಶಿವನಲ್ಲಿಯೇ ಲಯವಾದ ರೇವಣಸಿದ್ಧೇಶ್ವರನು ಅನಾದಿಮುಕ್ತನಲ್ಲ ಆಗಂತುಕಮುಕ್ತನೆಂಬ ಅಜ್ಞಾನಿಗಳಿಗೆ ನಾಯಕನರಕ ತಪ್ಪದು ಸಕಲಕೋಟಿ ಬ್ರಹ್ಮಾಂಡಕ್ಕಾಧಾರ ವಸ್ತುಲೋಕಂಗಳ ಪವಿತ್ರಕಾರಣವಾಗಿಯು ಪರಮೇಶ್ವರನ ನಿಜಚಿನ್ಮಯವಪ್ಪ ಊರ್ಧ್ವಮುಖದಲ್ಲಿ ಚಿತ್ಕಳಾಸ್ವರೂಪರಪ್ಪ ರುದ್ರಗಣಂಗಳುದಯವಾದರು ನೋಡ ! ಆ ರುದ್ರಗಣಂಗಳು ಮತ್ತು ಜಗತ್ಪಾವನ ಕಾರಣಮೂರ್ತ್ಯದಲ್ಲಿ ಅವತರಿಸಿದರು. ಅದೇಕಾರಣ ಉದಯವಾದರುವಾಗಿ ಸಗುಣವಿಲ್ಲದೆ ಎಂದು ಸಂದೇಹಿಸುವ ನಾಯಿ ನಾಲಿಗೆಯ ಯಮದೂತರು ಕೀಳದೆ ಹೋಗರೇ ! ಇವರಿಗೆ ನಾಯಕನರಕ ತಪ್ಪದು ಕಾಣಾ ! ಎಲೇ ಶಿವನೇ ನೀ ಸಾಕ್ಷಿಯಾಗಿ ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ ||

ಇತ್ಯಾದಿ ವಿಷಯಗಳನ್ನು ನೋಡುತ್ತಿರಲಿಕ್ಕೆ ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯರಲ್ಲಿ ಅನಾದಿ ತೋಂಟದ ಸಿದ್ಧೇಶ್ವರರು ಎಂತಹ ಅಸಾಧಾರಣವಾದ ಭಕ್ತಿಯನ್ನು ತೋರಿಸಿದ್ದಾರೆನ್ನುವದು ಸರ್ವರಿಗೂ ಸ್ಪಷ್ಟವಾಗಿ ತೋರಬರುತ್ತದೆ ಈ ಮಹಿಮರು ಶ್ರೀ ಶ. ೧೫ನೆಯ ಶತಮಾನದಲ್ಲಿದ್ದರು ಇವರ ಸಮಾಧಿಯು ಮೈಸೂರಿಗೆ ೬೦ ಮೈಲಿ ದೂರದಲ್ಲಿರುವ ಎಡೆಯೂರು ಎಂಬ ಗ್ರಾಮದಲ್ಲಿ ಉಂಟು ಸಮಾಧಿ ಸ್ಥಾನವು ಬಹು ರಮಣೀಯವಾಗಿರುತ್ತದೆ ಇವರ ಸಮಾಧಿಯಿಪ್ಪ ದೇವಸ್ಥಾನದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಪುರಾಣದಲ್ಲಿ ವರ್ಣಿಸಿದ ಯಾವತ್ತು ಲೀಲೆಗಳು ಚಿತ್ರಿಸಲ್ಪಟ್ಟಿರುತ್ತವೆ ನೋಡಲಿಚ್ಛಿಸುವವರು ಪ್ರತ್ಯಕ್ಷವಾಗಿ ಅಲ್ಲಿಗೆ ಹೋಗಿ ನೋಡಿಕೊಳ್ಳಬಹುದು

ಶ್ರೀ ಶ ೧೮ನೆಯ ಶತಮಾನದಲ್ಲಿದ್ದ ಮದಕರಿ ನಾಯಕನಿಂದ ಕಟ್ಟಿಸಲ್ಪಟ್ಟ ಚಿತ್ರಕಲ್ಲುದುರ್ಗದ ವಿರಕ್ತಮಠಕ್ಕೆ ಅಧಿಕಾರಿಗಳಾದ ಗುರುಸಿದ್ಧಸ್ವಾಮಿಗಳೆಂಬವರು ಕನ್ನಡದಲ್ಲಿ ಹಾಲಾಸ್ಯ ಪುರಾಣವನ್ನು ಬರೆದಿರುತ್ತಾರೆ ಅದರಲ್ಲಿ—

ನಂದಿ ಭೃಂಗಿ ವೃಷಭ ವೀರ [illegible] ಕಂ ನವದ [illegible] |
ಸುಂದರಂ ಕರಿಕಂಬಸುಂ [illegible] ನ ಘನುಂ ಸಿ [illegible] ನ |
ನಂದದಿಂ ಕೃಪೆಯಿಂದ ಪ [illegible] ನೆಂ [illegible] ಯ ||

ಈ ಪ್ರಕಾರವಾಗಿ ಸ್ತುತಿಸಿರುತ್ತಾರೆ ಇದರಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ ಮಹಾಗುರು ಎಂದು ಪ್ರಯೋಗವನ್ನು ಮಾಡಿ ತಮ್ಮ ಅಸಾಧಾರಣವಾದ ಭಕ್ತಿಯನ್ನು ಪ್ರಕಟಮಾಡಿದ್ದಾರೆ ಮತ್ತು—

ದೀಕ್ಷೆಯ ನೆರದಿತ್ತ [illegible]ನ
[illegible] ಶಿಕ್ಷೆಯ [illegible] ದಿತ್ತ [illegible]
ಪಕ್ಷದೆ ಸಜ್ಜನ [illegible] |
[illegible] ||

ಈ ಪದ್ಯದಿಂದ ತಮ್ಮ ದೀಕ್ಷಾಗುರುಗಳನ್ನು ಶಾಸ್ತ್ರಾನುಸಾರವಾಗಿ ಬಹುಭಕ್ತಿಯಿಂದ ಸ್ತುತಿಸಿದ್ದಾರೆ ಇದಲ್ಲದೆ ದೀಕ್ಷಾಗುರುಗಳೇ ಶಿಕ್ಷಾಗುರು ಮೋಕ್ಷಗುರು (ಜ್ಞಾನಗುರು) ಗಳಾಗುತ್ತಾರೆಂದು ತೋರಿಸಿದ್ದಾರೆ ಮಹಾತಪಸ್ವಿಗಳೂ ಜ್ಞಾನಿಗಳೂ ಜಿತೇಂದ್ರಿಯರೂ ಹಾಗೂ ಮಹಾವಿರಕ್ತರೂ ಆದ ಇವರೆಲ್ಲರೂ ಶ್ರೀರೇಣುಕಾದ್ಯಾಚಾರ್ಯರಲ್ಲಿಯೂ ಮತ್ತು ತಮಗೆ ದೀಕ್ಷೆಯನ್ನು ಕೊಟ್ಟ ಗುರುಗಳಲ್ಲಿಯೂ ಅಸಾಧಾರಣವಾದ ಗುರುಭಕ್ತಿಯನ್ನು ತೋರಿಸಿ, ಶಿಷ್ಯರಾಗಿ ನಡೆದು ಹೋಗಿದ್ದಾರೆ ಹೀಗಿದ್ದು ಅವರಂತೆ ಒಂದರಲ್ಲಿಯೂ ಕೂಡ ಸಮರ್ಥರಾಗದ ಈಗಿನ ಕಲವು ಸಣ್ಣಪಟ್ಟ ಅಜ್ಞಾನಿ ವಿರಕ್ತರು ಶ್ರುತಿಗಳ ಅಭಿಪ್ರಾಯವನ್ನು ಲಕ್ಷಿಸಿ ಅವರಂತೆ ವರ್ತಿಸದೆ ಅಥವಾ ತಮ್ಮ ಪೂರ್ವಜರ ಮಾರ್ಗವನ್ನಾದರೂ ಹಿಡಿದು ಆಚರಿಸದೆ ಮತಸ್ಥಾಪನಾಚಾರ್ಯರಲ್ಲಿಯೂ, ತಮಗೆ ದೀಕ್ಷೆಯನ್ನು ಕೊಟ್ಟ ಗುರುಗಳಲ್ಲಿಯೂ ಶಿಷ್ಯಭಾವವನ್ನು ಪ್ರಕಟಮಾಡದೆ ಶಾಸ್ತ್ರವಿರುದ್ಧವಾಗಿ ನಡೆಯಹತ್ತಿರುತ್ತಾರೆ ಇದು ಶುದ್ಧ ಅನ್ಯಾಯ ಆದುದರಿಂದ ಈಗಿನ ವಿರಕ್ತರು ತಮ್ಮ ಸಂಪ್ರದಾಯದ ಪ್ರಾಚೀನವಿರಕ್ತರ ಗುರುಭಕ್ತಿಯನ್ನು ತ್ರಿಕರಣಶುದ್ಧಿಯಿಂದ ಅವಲೋಕಿಸಿ ಆ ಮಹಾತ್ಮರಂತೆ ತಾವೂ ಸಹ ಮತಸ್ಥಾಪಕರಲ್ಲಿ ನಿಜವಾದ ಗುರುಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದಾಶಿಸುತ್ತೇವೆ

ಯುದ್ಧವಾರ್ತೆ.

ಜರ್ಮನರು ಕರ್ಚಿಗೆ ತಿರುಗಿದ್ದಾರೆ

ಕರ್ಚ್ ಜಲಸಂಧಿಯಲ್ಲೂ ಕಾಕ್ಸಸ್ ಪ್ರದೇಶದಲ್ಲೂ ಅಲ್ಪ ಪ್ರಮಾಣದಲ್ಲಿ ಸ್ಥಳ ಶೋಧನೆಯ ಕೆಲಸಗಳನ್ನು ನಡೆಸಿದ ಮೇಲೆ ಜರ್ಮನರು ಟಮಾನ್ ಪರ್ಯಾಯದ್ವೀಪದಿಂದ ತಿರುಗಿ ಕರ್ಚಿಗೆ ಬಂದಿದ್ದಾರೆಂದು ವೀಚಿ ವರದಿಯಿಂದ ಗೊತ್ತಾಗುತ್ತದೆ

ಫ್ರೆಂಚ್ ಜನರಿಗೆ ಎಚ್ಚರಿಕೆ

ಫ್ರಾನ್ಸಿನಲ್ಲಿ ಜರ್ಮನಿಯು ಆಕ್ರಮಿಸಿರುವ ಪ್ರದೇಶದ ಸಮುದ್ರ ತೀರದಲ್ಲಿ ವಾಸಿಸುವ ಪ್ರಜೆಗಳೆಲ್ಲರೂ ಆದಷ್ಟು ಬೇಗನೆ ಬೇರೆ ಕಡೆಗೆ ಹೊರಟು ಹೋಗಬೇಕೆಂದು ಲಂಡನ್ ರೇಡಿಯೋ ಯಂತ್ರವು ಫ್ರೆಂಚ್ ಭಾಷೆಯಲ್ಲಿ ಎಚ್ಚರಿಕೆ ಕೊಟ್ಟಿದೆ.

ಬ್ರಿಟನ್ನಿನಲ್ಲಿ ಅಮೆರಿಕದ ವಿಮಾನಪಡೆ

ಬ್ರಿಟನ್ನಿನಲ್ಲಿ ಅಮೆರಿಕದ ಬಲಯುತ ವಿಮಾನ ಪಡೆಗಳು ಕೆಲಸ ಮಾಡಲು ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿವೆಯೆಂದು ವಿಮಾನ ಶಾಖಾ ಸಚಿವರಾದ ಆರ್ಚಿಬಾಲ್ಡ್ ಸಿಂಕ್ಲೇರ್‌ರವರು ತಿಳಿಸಿದ್ದಾರೆ

ಸೈಬೀರಿಯಾ ಆಕ್ರಮಣಕ್ಕೆ ಹಂಚಿಕೆ

ಜಪಾನರು ಮಿಡ್ವೇ ದ್ವೀಪಗಳ ಕಡೆಗೂ ಅಲಾಸ್ಕಾದ ಕಡೆಗೂ ನುಗ್ಗಿದುದು ಅವರು ಸೈಬೀರಿಯದ ಆಕ್ರಮಣಕ್ಕಾಗಿ ಮಾಡುತ್ತಿರುವ ಹಂಚಿಕೆಯನ್ನು ಸೂಚಿಸುತ್ತದೆಂದು ಅಮೆರಿಕದಲ್ಲಿ ಅರಿತವರು ನುಡಿದಿದ್ದಾರೆ

ಸಾಮಾನು ಹಡಗುಗಳುಮುಳುಗಿದವು

ದಕ್ಷಿಣ ಆಫ್ರಿಕಾತೀರದಾಚೆ ೩ ಸಾಮಾನು ಹಡಗುಗಳು ಮುಳುಗಿಸಲ್ಪಟ್ಟವೆಂದೂ, ಮೊಜಾಂಬಿಕ್ ಕಾಲುವೆಯಲ್ಲಿ ೩ ಹಡಗುಗಳನ್ನು ಮುಳುಗಿಸಲಾಯಿತೆಂದೂ, ರೋಂ ರೇಡಿಯೋ ತಿಳಿಸಿದೆ

ಬೀರ್ ಹಕೀಮ್ ಜರ್ಮನರ ವಶವಾಯಿತು.

ಲಿಬ್ಯಾ ರಣಾಂಗಣದಲ್ಲಿ ಬೀರ್ ಹಕೀಮ್ ನಗರವನ್ನು ತಾವು ವಶಪಡಿಸಿಕೊಂಡೆವೆಂದು ಜರ್ಮನರು ಪ್ರಕಟಿಸಿದ್ದಾರೆ ಆದರೆ ಈ ಸುದ್ದಿಗೆ ಲಂಡನ್ನಿನಲ್ಲಿ ಸಮರ್ಥನ ದೊರೆತಿಲ್ಲ ಈ ಬೀರ್ ಹಕೀಂ ಆಕ್ರಮಣಕ್ಕಾಗಿ ಉಗ್ರವಾದ ಕದನ ನಡೆಯಿತು

ಕಿಯಾಂಗ್ಸಿಯಲ್ಲಿ ಉಗ್ರಯುದ್ಧ

ಚೀಣಾ ಯುದ್ಧವೆಲ್ಲವೂ ಈಗ ಕಿಯಾಂಗ್ಸಿ ಮತ್ತು ಚಕಿಯಾಂಗ್ ಪ್ರಾಂತ್ಯಗಳಲ್ಲಿ ಕೇಂದ್ರೀಕೃತವಾಗಿದೆ ನಾನ್‌ಚಾಂಗ್ ನಗರದ ಪಶ್ಚಿಮಕ್ಕಿರುವ ವುಚಾನ್ ವೂ ನಗರವನ್ನು ಚೀಣರು ಮತ್ತೆ ಹಿಡಿದಿದ್ದಾರೆ ಚಕೀನ್ ನಗರದ ಸುತ್ತಮುತ್ತ ನಡೆದ ಕದನಗಳ ಫಲವಾಗಿ ೭೦೦೦ ಜಪಾನರು ಸತ್ತರು ಮತ್ತು ಗಾಯಗೊಂಡರು

ಕಾರ್ಖೋವ್ ಯುದ್ಧ

ಕಾರ್ಖೋವ್ ರಣಾಂಗಣದಲ್ಲಿ ಈಗ ಜರ್ಮನರೇ ಯುದ್ಧವನ್ನು ಆರಂಭಿಸಿದ್ದಾರೆ ಸೆಬಾಸ್ಟಪೋಲ್ ರಂಗದಲ್ಲಿ ಯುದ್ಧವಿನ್ನೂ ಉಗ್ರವಾಗಿ ನಡೆಯುತ್ತಿದೆ ಈ ರಣಾಂಗಣಕ್ಕೆ ಜರ್ಮನರು ಹೆಚ್ಚುಸೈನ್ಯವನ್ನು ತರುತ್ತಲೇ ಇದ್ದಾರೆ ಇಲ್ಲಿ ನಡೆಯುತ್ತಿರುವ ಹೋರಾಟದಲ್ಲಿ ಜರ್ಮನರು ಪ್ರತಿದಿನವೂ 2500 ಮಂದಿ ಯೋಧರನ್ನು ಕಳೆದುಕೊಳ್ಳುತ್ತಿದ್ದಾರೆಂದು ಹೇಳಲಾಗಿದೆ

ಶತ್ರುಗಳ ಅಧೀನದಲ್ಲಿರುವ ಬ್ರಿಟಿಷ್ ನಾವಿಕರು

ಬ್ರಿಟನ್ನಿನ ನೌಕಾದಳಕ್ಕೆ ಸೇರಿದ 430 ಮಂದಿ ಅಧಿಕಾರಿಗಳೂ 7651 ಮಂದಿ ಇತರ ದರ್ಜೆಯವರೂ ಶತ್ರುವಶವಾಗಿದ್ದಾರಲ್ಲದೆ, ಬ್ರಿಟಿಷರ ವ್ಯಾಪಾರದ ಹಡಗುಗಳ 3328 ಮಂದಿ ನಾವಿಕರು ಸಹ ಶತ್ರುಗಳ ಕೈಗೆ ಸಿಕ್ಕಿದ್ದಾರೆಂದು ಹೇಳಲಾಗಿದೆ

ಜರ್ಮನರು ಕರ್ಚ್ ಜಲಸಂಧಿಯನ್ನು ದಾಟಿದರು

ಜರ್ಮನರು ಕರ್ಚ್ ಜಲಸಂಧಿಯನ್ನು ದಾಟಿ ಅದೇ ಜಲಸಂಧಿಯ ಪೂರ್ವ ತೀರದಲ್ಲಿರುವ ತಮಾನ್ ಪರ್ಯಾಯದ್ವೀಪದಲ್ಲಿ ಇಳಿದಿದ್ದಾರೆಂದೂ ಆಕ್ಸಿಸ್ ಸೈನ್ಯಗಳು ಅನ್ಸಪಾಲ್ ಎಂಬ ಆರೋಗ್ಯವಿಹಾರ ನಗರವನ್ನು ಆಕ್ರಮಿಸಿಕೊಂಡಿವೆಯೆಂದೂ ಹೇಳಲಾಗಿದೆ ತಮಾನ್ ಪರ್ಯಾಯದ್ವೀಪವು ಕಾಕ್ಸಸ್ ಭೂ ಪ್ರದೇಶದ ಒಂದು ಭಾಗ ಇದು ಕಾಕ್ಸಸ್ಸಿನ ಮುಖ್ಯ ಬಂದರಾದ ನೊವೊರೊಸ್ಸಿಗೆ ಕೇವಲ 25 ಮೈಲಿಗಳ ದೂರದಲ್ಲಿದೆ.

ಬರ್ಮಾ ಮಂತ್ರಿಗಳಬಗ್ಗೆ ಚರ್ಚೆ

ಬರ್ಮಾದ ಪ್ರಧಾನಸಚಿವರೂ ಹಣಕಾಸಿನ ಸಚಿವರೂ ಇಂಡಿಯಾದಲ್ಲಿ ಸ್ಥಾಪಿತವಾಗಿರುವ ಬರ್ಮಾಸರ್ಕಾರದ ಮುಖ್ಯಕಚೇರಿಯಲ್ಲಿದ್ದಾರೆಂದು ಮಿ|| ಎಮರಿಯರವರು ಬ್ರಿಟನ್ನಿನಕಾಮನ್ಸ್ ಸಭೆಯಲ್ಲಿ ಸದಸ್ಯರ ಪ್ರಶ್ನೆಗೆ ಉತ್ತರಕೊಟ್ಟರು. ಜಪಾನರು ಬರ್ಮಾವನ್ನು ಆಕ್ರಮಿಸಿಕೊಳ್ಳುವುದಕ್ಕೆ ಮುಂಚೆ ನಿರ್ಬಂಧಿತರಾದ ಶತ್ರುಪ್ರಜೆಗಳ ಹೊರತು ಮತ್ತಾರೂ ಬರ್ಮಾದಿಂದ ಹೊರಕ್ಕೆ ತರಲ್ಪಟ್ಟಿಲ್ಲ ಎಂದು ತಿಳಿಸಿದರು

ಸೆಬಾಸ್ಟಪೋಲ್ ಕದನ

ಕಾರ್ಕೋವ್ ಯುದ್ಧರಂಗದಲ್ಲಿ ರಷ್ಯನ್ ಸೈನ್ಯವು ಮುನ್ನುಗ್ಗಿ ಬರುತ್ತಿದ್ದ ಜರ್ಮನರ ಟ್ಯಾಂಕ್ ಮತ್ತು ಪದಾತಿ ಪಡೆಗಳನ್ನು ಪ್ರತಿಭಟಿಸಿ ಅತ್ಯುಗ್ರ ಕದನವನ್ನು ನಡೆಸಿತು ಸೆಬಾಸ್ಟಪೋಲ್ ಬಳಿಯಲ್ಲೂ ಸಹ ಕದನ ಬಿರುಸಾಗಿ ನಡೆಯಿತು ಮೂರು ದಿನಗಳ ಹೋರಾಟದಲ್ಲಿ ಜರ್ಮನರು ೧೫,೦೦೦ ಸೇನಾಧಿಕಾರಿಗಳನ್ನೂ ಯೋಧರನ್ನೂ ಕಳೆದುಕೊಂಡಿದ್ದಾರಲ್ಲದೆ ೫೦ ಟ್ಯಾಂಕುಗಳನ್ನೂ ೬೦ ಕ್ಕಿಂತಲೂ ಹೆಚ್ಚಾಗಿ ವಿಮಾನಗಳನ್ನೂ ಕಳೆದುಕೊಂಡಿದ್ದಾರೆ

ಚೀನಾದಲ್ಲಿ ಜಪಾನರ ಮುಂದೋಟ

ಚೆಷೀನ್ ನಗರದ ಉತ್ತರಕ್ಕಿರುವ ಜಪಾನಿನ ಮುಖ್ಯ ಸೇನೆಯು ಆ ನಗರದ ಪಶ್ಚಿಮಕ್ಕೆ ೨೬ ಮೈಲಿ ದೂರದಲ್ಲಿರುವ ಚಾಂಗ್‌ಷಾನ್ ಎಂಬುದರ ಕಡೆಗೆ ನುಗ್ಗುತ್ತಿದೆ ಚಾಂಗ್‌ಷಾನ್ ಪೂರ್ವದಲ್ಲಿ ಹೊಡೆದಾಟವು ನಡೆಯುತ್ತಿದೆ ಜಪಾನರಿಗೆ ಬಹಳ ಹಾನಿಯಾಗುತ್ತಿದ್ದರೂ ಹೊಸಪಡೆಗಳನ್ನವರು ಮುಂದೆ ತರುತ್ತಿದ್ದಾರೆ ಚೆಷಿ, ನಗರದ ಕದನವು ಮುಂದುವರಿಯುತ್ತಲೇ ಇದೆ ಕಿಯಾಂಗ್ಸಿ ಪ್ರಾಂತ್ಯದಲ್ಲಿ ಫೂಚ್ ನಗರವನ್ನು ಹಿಡಿದ ಜಪಾನ್ ದಳವು ಪೂರ್ವಕ್ಕೆ ತಿರುಗಿ ಕಿಂಕಿ ಎಂಬ ನಗರದ ಕಡೆ ಮುಂದುವರಿಯುತ್ತಿದೆ ಕಿಂಕಿ ನಗರದ ವಾಯುವ್ಯದಲ್ಲಿ ಕದನವಾಗುತ್ತಿದೆ.

ಆಸ್ಟ್ರೇಲಿಯಾ ನಗರಗಳ ಮೇಲೆ ಗುಂಡುಗಳು

ಕಳೆದ ಸೋಮವಾರ ಬೆಳಗ್ಗೆ ನ್ಯೂಕ್ಯಾಸಲ್ ಮತ್ತು ಸಿಡ್ನಿ ನಗರಗಳ ಸುತ್ತ ಮುತ್ತಲ ಪ್ರದೇಶಗಳ ಮೇಲೆ ಶತ್ರುಗಳು ಷೆಲ್‌ಗಳನ್ನು ಹಾರಿಸಿದರು ಶತ್ರು ಸಬ್‌ಮೆರೀನು ಈ ಕೆಲಸಮಾಡಿರಬೇಕೆಂದು ಊಹಿಸಲಾಗಿದೆ ಭಾನುವಾರ ಅರ್ಧರಾತ್ರಿಯಾದ ಮೇಲೆ ಸಿಡ್ನಿ ಮತ್ತು ನ್ಯೂಕ್ಯಾಸಲ್‌ಗಳಲ್ಲಿ ಮುತ್ತಿಗೆ ಸೂಚನೆಕೊಡಲಾಯಿತು ಯುದ್ಧಾರಂಭವಾದ ಮೇಲೆ ಈರೀತಿ ಸೂಚನೆ ಕೊಟ್ಟಿರುವದು ಇದೇ ಮೊದಲೆಂದೂ ನಗರಗಳಿಗೆ ಸರಿಯಾದ ರಕ್ಷಣೆ ಕಲ್ಪಿಸಿದ್ದರಿಂದ ಜನರು ಭಯಪಡಲಿಲ್ಲವೆಂದೂ ಹೇಳಲಾಗಿದೆ

ಜಪಾನ್ ವಿಮಾನವಾಹಕ ನೌಕೆಗಳ ನಾಶ

ಮಿಡ್‌ವೆದ್ವೀಪದ ಬಳಿ ನಡೆದ ನೌಕಾ ಮತ್ತು ವಿಮಾನ ಕದನದಲ್ಲಿ ಭಾಗವಹಿಸಿದ್ದ 29900 ಟನ್ ತೂಕದ ಎರಡು ಜಪಾನಿನ ವಿಮಾನವಾಹಕ ನೌಕೆಗಳು ಅಮೆರಿಕ ಬಾಂಬರುಗಳ ಏಟಿಗೆ ಸಿಕ್ಕಿ ಸುಟ್ಟು ಬೂದಿಯಾದವು. ನಾಶವಾದ ಒಂದೊಂದು ವಿಮಾನವಾಹಕ ನೌಕೆಯು 50 60 ವಿಮಾನಗಳನ್ನು ಹೊರಬಲ್ಲವಾಗಿದ್ದವೆಂದು ತಿಳಿದುಬರುತ್ತದೆ

ಮಿಡ್‌ವೇ ದ್ವೀಪದ ಬಳಿ ಜಪಾನಿಗಾದ ಹಾನಿ

ಮಿಡ್‌ವೇ ದ್ವೀಪದ ಹತ್ತಿರ ನಡೆದ ನೌಕಾ ಕದನದಲ್ಲಿ ಜಪಾನರ 4 ಕ್ರೂಯಿಜರುಗಳನ್ನು ಮತ್ತು ಟ್ರಾನ್ಸ್‌ಪೋರ್ಟ್‌ಗಳನ್ನು ನಷ್ಟಗೊಳಿಸಲಾಯಿತೆಂದೂ, 2-3 ವಿಮಾನವಾಹಕನೌಕೆಗಳನ್ನು ಹಾಳುಮಾಡಲಾಯಿತೆಂದೂ ಹಲವು ಹಡಗುಗಳು ಸ್ವಸ್ಥಾನವನ್ನು ತಲುಪಿರಲಾರವೆಂದೂ ಒಟ್ಟಿನಲ್ಲಿ ಜಪಾನು ಈ ಮುತ್ತಿಗೆಯಲ್ಲಿ ಕನಿಷ್ಠ ಪಕ್ಷ 13 ಅಥವಾ 15 ಸಂಗ್ರಾಮನೌಕೆಗಳನ್ನು ಮತ್ತು ಟ್ರಾನ್ಸ್‌ಪೋರ್ಟ್‌ಗಳನ್ನು ಕಳೆದುಕೊಂಡಿತೆಂದೂ ಪೆಸಿಫಿಕ್ ಸಾಗರದ ಅಮೆರಿಕ ನೌಕಾಬಲದ ಅಧಿಕಾರಿಗಳು ತಿಳಿಸಿದ್ದಾರೆ.

ಡಾ|| ಇವಾಟ್‌ರವರ ಹೇಳಿಕೆ

ಆಸ್ಟ್ರೇಲಿಯದ ವಿದೇಶಾಂಗ ಸಚಿವರಾದ ಡಾ|| ಇವಾಟ್‌ರವರು ವಾಷಿಂಗ್‌ಟನ್ನಿನಿಂದ ರೇಡಿಯೋ ಮೂಲಕ ಮಾತನಾಡುತ್ತಾ "ಮಿಡ್ವೆದ್ವೀಪದ ಕದನವೇ ಜಪಾನು ಸೋತಿತೆಂಬುದನ್ನು ನಿರ್ಧರಿಸುವುದು ತಪ್ಪೆಂದೂ ಜಪಾನು ಈಗ ತನ್ನ ಹೊಸಸಾಮ್ರಾಜ್ಯದ ಫಲವನ್ನು ಪೂರ್ಣವಾಗಿ ಅನುಭವಿಸುತ್ತಿದೆಯೆಂದೂ, ಶತ್ರು ದಿನೇದಿನೇ ಬಲನಾಗುತ್ತಿದೆಯೆಂದೂ, ಸಂಗ್ರಾಮ ವಸ್ತುಗಳ ಸೃಷ್ಟಿ ತ್ವರೆಗೊಂಡಂತೆಲ್ಲ ಜರ್ಮನಿಯ ಮೇಲೆ ವಿರುದ್ಧ ಕಾರ್ಯಕ್ರಮವನ್ನು ಹೆಚ್ಚಿಸಬೇಕೆಂಬ ಇಷ್ಟಕ್ಕೆ ಸ್ವಲ್ಪವೂ ಕುಂದು ತಾರದೆ ಜಪಾನಿನ ಮೇಲಿನ ಕದನವನ್ನು ಸಹ ವಿಸ್ತರಿಸಬೇಕಾಗಿದೆಯೆಂದೂ, ಆಕ್ಸಿಸ್ ರಾಷ್ಟ್ರಗಳೆಲ್ಲದರ ಮೇಲೂ ಹೊಡೆದಾಟವನ್ನಾರಂಭಿಸಿ, ಒಟ್ಟಿಗೆ ಅವು ನಾಶವಾಗುವಂತೆ ಮಾಡಬೇಕೆಂಬುವೇ ಆಸ್ಟ್ರೇಲಿಯದ ಅಭಿಪ್ರಾಯವೆಂದೂ, ಸೋಲಿನ ವಾಸನೆಯೇ ಮನಸ್ಸಿನಲ್ಲಿ ಇರಕೂಡದೆಂದೂ, ಶತ್ರುವಿನಮೇಲೆ ಬಿದ್ದು ಹೊಡೆಯಬೇಕೆಂಬ ತತ್ವವನ್ನೇ ಬಲವಾಗಿ ಹಿಡಿಯಬೇಕೆಂದೂ' ಹೇಳಿದರು

ಅಮೆರಿಕಾಧಿಕಾರಿಗಳ ಹೇಳಿಕೆ

ನ್ಯೂಯಾರ್ಕ್ ವಸ್ತುನಿರ್ಮಾಣ ಶಾಖೆಯ ಸಚಿವರಾದ ಕ್ಯಾ|| ಆಲಿವರ್ ಲಿಟ್ಲ್‌ರವರು ಬ್ರಿಟನ್ ಸಂಗ್ರಾಮವಸ್ತುಸೃಷ್ಟಿಕಾರ್ಯ ಕುರಿತು ಮಾತನಾಡುತ್ತ "ಬ್ರಿಟನ್ನಿನಲ್ಲಿ 5 ಮನೆಗೊಂದರಂತೆ ನಾಶವಾಗಿವೆಯೆಂದೂ, ಆದರೂ ಬ್ರಿಟಿಷರು ಎದೆಗೆಟ್ಟಿಲ್ಲವೆಂದೂ, ಬ್ರಿಟನ್ನು ವರ್ಷಕ್ಕೆ ಟ್ಯಾಂಕುಗಳೇ ಮುಂತಾದ 2,37,000 ವಾಹನಗಳನ್ನು ತಯಾರಿಸುತ್ತಿದೆಯೆಂದೂ ಹೇಳಿದರು ನಾವು ವರ್ಷಕ್ಕೆ 40,000 ಭಾರಿ ಫಿರಂಗಿಗಳನ್ನು ತಯಾರಿಸುತ್ತಿದ್ದೇವೆ ಅವುಗಳಿಗೆ ಬೇಕಾದ 250 ಲಕ್ಷ ಪೌಂಡುಗಳಷ್ಟು ಮದ್ದು ಗುಂಡನ್ನು ಸಿದ್ಧಮಾಡುತ್ತಿದ್ದೇವೆ ಈಚೆಗೆ ನಮ್ಮ ವಿಮಾನ ಸೃಷ್ಟಿಕಾರ್ಯವು ಶೇಕಡ 100 ರಷ್ಟು ಹೆಚ್ಚಿದೆ ವ್ಯಾಪಾರ ಹಡಗುಗಳ ಸೃಷ್ಟಿಯು ಶೇಕಡ 57 ರಷ್ಟುಹೆಚ್ಚಿದೆ ಕಳೆದ 12 ತಿಂಗಳಲ್ಲಿ ನಾವು ಎಲ್ಲ ಬಗೆಯ ಸಂಗ್ರಾಮವಸ್ತು ಸೃಷ್ಟಿಯನ್ನು ದ್ವಿಗುಣಪಡಿಸಿದ್ದೇವೆ ನಾವು ನಮ್ಮ ರಾಷ್ಟ್ರದ ಆದಾಯದಲ್ಲಿ ನೂರಕ್ಕ 60ರಷ್ಟನ್ನು ಸಂಗ್ರಾಮಕ್ಕಾಗಿ ವೆಚ್ಚಮಾಡುತ್ತಿದ್ದೇವೆ ಎಂದು ಹೇಳಿದರು

ಹಿಟ್ಲರನಿಗೆ ಗೆಲ್ಲುವೆನೆಂಬ ನಂಬಿಕೆಯಿಲ್ಲ

ಅಮೆರಿಕದಲ್ಲಿರುವ ಬ್ರಿಟಿಷ್ ರಾಯಭಾರಿಗಳಾದ ಲಾರ್ಡ್ ಹ್ಯಾಲಿಫ್ಯಾಕ್ಸ್‌ರವರು ಸಿರಕ್ಯೂಸ್ ವಿಶ್ವವಿದ್ಯಾನಿಲಯದಲ್ಲಿ ಭಾಷಣಮಾಡುತ್ತ "ಈಗಿನ ಯುದ್ಧದಲ್ಲಿ ತಾನು ಜಯಿಸಲಾರೆನೆಂಬುದು ಹಿಟ್ಲರನಿಗೆ ಗೊತ್ತಾಗಿಬಿಟ್ಟಿದೆಯೆಂದು ನಾನು ಖಂಡಿತ ಹೇಳಬಲ್ಲೆನು ಈ ವರ್ಷದಲ್ಲಿ ತನಗೆ ಜಯವು ಲಭಿಸದಿದ್ದಲ್ಲಿ ಮುಂದೆ ಗೆಲ್ಲುವ ಆಸೆಯೇ ಇಲ್ಲವೆಂದು ಆತನು ಗ್ರಹಿಸಿರುವವರಲ್ಲಿ ಅನುಮಾನವಿಲ್ಲ ಮಿತ್ರದೇಶಗಳ ವಿಮಾನಬಲವು ಅಪಾರವಾಗಿ ಹೆಚ್ಚಿರುವದನ್ನೂ ರಷ್ಯದಲ್ಲಿ ನಡೆಯುತ್ತಿರುವ ಸಬ್‌ಮೆರಿನುಗಳ ವಿನಾಶಕಾರ್ಯಕ್ರಮವನ್ನೂ ನೋಡಿ ನಮಗೆ ನಂಬಿಕೆಯುಂಟಾಗಿದೆ ಲ್ಯೂಬೆಕ್, ರೊಸ್ಟಾಕ್, ಕೊಲೋನ್, ಎಸ್ಸೆನ್ ಮತ್ತು ಟೋಕಿಯೊ ಇಲ್ಲೆಲ್ಲ ನಡೆದ ನಮ್ಮ ವಿಮಾನ ಮುತ್ತಿಗೆಗಳು ಶತ್ರುಗಳಿಗೆ ಪ್ರಥಮತಃ ಹಾಕಿಸಿರುವ ಬಿಸಿಯೆನ್ನಬೇಕು. ಇನ್ನು ಮುಂದೆ ನಮ್ಮ ಮತ್ತು ನಿಮ್ಮ ವಿಮಾನಗಳು ಒಟ್ಟಿಗೆ ಸೇರಿ ಜರ್ಮನಿಗೆ ಉಗ್ರಪ್ರಹಾರಮಾಡಲಿವೆ ಈಗ ಇಂಗ್ಲೆಂಡು ವಿಮಾನಬಲದಲ್ಲಿ ಜರ್ಮನಿಗೆ ಸಮಾನವಾಗಿದೆ ಈಗ ಜಪಾನು ಒಂದು ವರ್ಷದಲ್ಲಿ ತಯಾರಿಸಬಹುದಾದಷ್ಟು ವಿಮಾನಗಳನ್ನು ಅಮೆರಿಕವು ಒಂದು ತಿಂಗಳಿನಲ್ಲಿ ತಯಾರಿಸುತ್ತದೆ" ಎಂದು ಹೇಳಿದರು.

ಅಮೆರಿಕದ ಅಪಾರಬಲ

ಅಮೆರಿಕದ ವಿಮಾನ ಪಡೆಯ ಮುಖ್ಯಾಧಿಕಾರಿಗಳಾದ ಜೆಚ್.ಹೆಚ್ ಅರ್ನಾಲ್ಡ್ ರವರು ತಮ್ಮ ಸೈನ್ಯಗಳ ಶಕ್ತಿ ಸಾಮರ್ಥ್ಯಗಳನ್ನು ವಿವರಿಸುತ್ತ, "ಇಷ್ಟರಲ್ಲಿಯೇ ಮುಂದೇನು ಮಾಡಲೂ ತೋರದೆ ಜಪಾನು ಕಣ್ಣು ಕಣ್ಣು ಬಿಡುವಂತಹ ದಿನಗಳು ಬರಲಿವೆ ಜಪಾನರು ತಾವು ಉರುಳಿಸಿದ ಒಂದೊಂದು ಅಮೆರಿಕ ವಿಮಾನಕ್ಕೆ ಪ್ರತಿಯಾಗಿ ನಾಲ್ಕು ವಿಮಾನಗಳಂತೆ ಕಳೆದುಕೊಂಡಿದ್ದಾರೆ ಕೊಲೋನ್ ಮತ್ತು ಎಸ್ಸೆನ್ ಮುತ್ತಿಗೆಗಳು ಮುಂದೆ ನಡೆಯಲಿರುವ ಘಟನೆಗಳಿಗೆ ಸೂಚನೆಗಳಾಗಿವೆ ಅಮೆರಿಕನ್ ಮತ್ತು ಬ್ರಿಟಿಷ್ ವಿಮಾನಗಳು ಒಂದಾಗಿ ಇನ್ನು ಮುಂದೆ ಮುತ್ತಿಗೆಗಳನ್ನು ನಡೆಸುವವು ಅಮೆರಿಕದ "ಫ್ಲೈಯಿಂಗ್ ಫಾರ್ಟ್ರೆಸ್ ವಿಮಾನಗಳಿಗೆ ಸರಿಸಮಾನವಾದುದು ಮತ್ತೊಂದಿಲ್ಲ ಅಮೆರಿಕದ ಮಧ್ಯಮ ದರ್ಜೆಯ ಬಾಂಬರು ಕೂಡ ಶತ್ರುಗಳ ಅತ್ಯುತ್ತಮ ವಿಮಾನಗಳಿಗಿಂತ ಹೆಚ್ಚು ವೇಗವಾಗಿ ಓಡುವದಲ್ಲದೆ ಹೆಚ್ಚು ಬಾಂಬುಗಳನ್ನು ಸಹ ಹೊರಬಲ್ಲದು ಈ ವರ್ಷ ಅಮೆರಿಕವು 60 ಸಾವಿರ ವಿಮಾನಗಳನ್ನು ತಯಾರಿಸಬೇಕೆಂದಿದೆ 1942 ನೆಯ ವರ್ಷಾಂತ್ಯದ ವೇಳೆಗೆ ಅಮೆರಿಕದ ವಿಮಾನ ಬಲದಲ್ಲಿ 60 ಸಾವಿರ ಅಧಿಕಾರಿಗಳೂ 10 ಲಕ್ಷಕ್ಕೆ ಮೀರಿ ವೈಮಾನಿಕರೇ ಮುಂತಾದವರೂ ಇರುವರು ' ಎಂದು ಹೇಳಿದರು

ಚೀನಾ ಜಪಾನ್ ಯುದ್ಧ

ಬರ್ಮಾದಿಂದ ಸುರಕ್ಷಿತವಾಗಿ ಹಿಂದಿರುಗಿದ ಎಲ್ಲ ಚೀನಾ ಯೋಧರೂ ಯುನಾನ್ ಪ್ರಾಂತ್ಯದಲ್ಲಿರುವ ಮೂಲ ಸೇನೆಯೊಂದಿಗೆ ಸಂಧಿಸಿದ್ದಾರೆಂದು ಅಲ್ಲಿಯ ಗೌರ್ನರರು ತಿಳಿಸಿದ್ದಾರೆ ಬರ್ಮಾದಲ್ಲಿರುವ ಚೀನಾ ಪಡೆಯು ಹಿಂದಿರುಗದಂತೆ ಮಾಡಬೇಕೆಂದಿದ್ದ ಜಪಾನರ ಪ್ರಯತ್ನವು ವಿಫಲವಾಯಿತು ಜಪಾನರೇನಾದರೂ ಬರ್ಮಾ ರಸ್ತೆಯ ಕೊನೆಯಲ್ಲಿರುವ ಕನ್‌ಮಿಂಗ್ ನಗರವನ್ನು ಮುತ್ತುವುದಾದರೆ, ಯುನಾನ್ ಪ್ರಾಂತ್ಯದ ಎಲ್ಲ ಜನರ ಸಹಾಯ ಪಡೆದು ಕಟ್ಟಕಡೆಯವರೆಗೆ ಶತ್ರುಗಳನ್ನು ಎದುರಿಸುವುದಾಗಿ ಅಲ್ಲಿನ ಗೌರ್ನರರು ತಿಳಿಸಿದರು ಷಾಂಟಂಗ್ ಪ್ರಾಂತ್ಯದ ಪರ್ಸಿ ನಗರದ ಈಶಾನ್ಯದಲ್ಲಿ ಉಗ್ರಕದನವಾಗುತ್ತಿದೆ ದಕ್ಷಿಣ ಷಾನ್ಸಿ ಪ್ರಾಂತ್ಯದಲ್ಲಿರುವ ಜಪಾನರ ಸ್ಥಾನಗಳ ಮೇಲೆ ಚೀಣರು ಬಿದ್ದು ಪಾಂಟೋನ್ ಎಂಬುದನ್ನು ಹಿಡಿದಿರುವರು ಮಿನ್‌ನದಿಯ ಮುಖದಾಚೆ ಇರುವ ಜಪಾನ್ ಸಂಗ್ರಾಮ ನೌಕೆಗಳು ಚೀನಾ ನೌಕಾ ಮೂಲವಾದ ಮಾನೋಯಿ ಎಂಬುದರ ಮೇಲೆ ಷೆಲ್‌ಗಳನ್ನು ಹಾರಿಸುತ್ತಿವೆ

ಸರ್ಕಾರಿ ನೌಕರರು ಓಡಿಹೋಗಕೂಡದು.

ವಿಮಾನ ಮುತ್ತಿಗೆಗಳು ನಡೆಯುವಂತಹ ಸ್ಥಾನಗಳಲ್ಲಿರುವ ಸರ್ಕಾರಿ ನೌಕರರು ಮೊದಲೇ ಅನುಮತಿ ಪಡೆಯದೆ ಓಡಿಹೋದಲ್ಲಿ ಅವರುಗಳನ್ನು ತಕ್ಕ ದಂಡನೆಗೆ ಗುರಿಪಡಿಸಲಾಗುವದೆಂದು ಅಸ್ಸಾಮಿನ ಶ್ರೇಷ್ಠ ಕಾರ್ಯದರ್ಶಿಗಳು ಅಲ್ಲಿಯ ಪತ್ರಿಕಾ ಸುದ್ದಿಗಾರರ ಸಮ್ಮೇಳನದಲ್ಲಿ ತಿಳಿಸಿದರು

ಡ್ಯೂಕ್ ಆಫ್ ಗ್ಲೌಸ್ಟರ್‌ರವರ ಆಗಮನ

ಬ್ರಿಟಿಷ್ ಸಾರ್ವಭೌಮರವರ ಸಹೋದರರಾದ ಡ್ಯೂಕ್ ಆಫ್ ಗ್ಲೌಸ್ಟರ್‌ರವರು ಸದ್ಯಃ ಭಾರತಕ್ಕೆ ಆಗಮಿಸಿದ್ದು ಭಾರತದ ಯುದ್ಧೋದ್ಯಮವನ್ನೂ ಯುದ್ಧಕಾರ್ಯಗಳನ್ನೂ ಪರಿಶೀಲಿಸಲು ವಿಶೇಷ ಪ್ರವಾಸಕಾರ್ಯವನ್ನು ಇಟ್ಟುಕೊಂಡಿದ್ದಾರೆ. ಡ್ಯೂಕ್‌ರವರು ಈ ತಿಂಗಳ ಕಡೆಯ ವಾರದಲ್ಲಿ ಮೈಸೂರಿಗೂ ಬರುವರೆಂಬ ನಿರೀಕ್ಷಣೆಯಿದೆ.

[೩ನೆಯ ಪುಟದಿಂದ ಮುಂದುವರಿದುದು]

ವೆನಿಸುತ್ತದೆ ೪ ಇವರಿಗೆ ಗುರುಗಳೂ ಸಹ ಬೇಡವಾಗಿರುವರು ಶ್ರೀಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವಮತದಲ್ಲಿದ್ದರೂ ಸಹ ಅವರು ನಮಗೆ ಗುರುಗಳೇ ಅಲ್ಲವೆಂದು ಸಾಧಿಸುವರು ಇದಂತೂ ಮಹಾ ಪಾಪಕಾರ್ಯವಾಗಿರುವದು ಶಿವಾಗಮಾದಿಗಳು ಆಚಾರ್ಯರು ಲಿಂಗದಿಂದ ಅವತರಿಸಿರುವರೆಂದು ಘಂಟಾಘೋಷವಾಗಿ ಸಾರುತ್ತಿದ್ದರೂ ನಿರ್ಜೀವವಸ್ತುವಾದ ಕಲ್ಲಿನಲ್ಲಿ ಸಜೀವಿಯಾದ ಮನುಷ್ಯನು ಲೋಕವಿರುದ್ಧವಾಗಿ ಹುಟ್ಟುವುದುಂಟೆ ? ಎಂದು ಬೊಗಳುವರು ಹಾಗಾದರೆ ಈ ಮಹಾಶಯರು ಕೊರಳಲ್ಲಿ ಕಟ್ಟಿರುವುದು ಕಲ್ಲೋ ಅಥವಾ ಪಶುವೋ ! ವಿಚಾರವಿಲ್ಲದೆ ಉನ್ಮತ್ತರಂತೆ ಕೂಗುವುದು ಹಾಸ್ಯಾಸ್ಪದವಲ್ಲವೇ ? ಸದಾ ಗುರುನಿಂದಾ ನಿರತರಾದ ಇವರ ಜನ್ಮಕ್ಕೆ ಶತಶ ಧಿಕ್ಕಾರವಿರಲಿ

(ಸಶೇಷ)

|| ಶ್ರೀಜಗದ್ಗುರು ದಾರುಕಾಚಾರ್ಯಾಯ ನಮಃ ||

ಸ್ವಮತಾಭಿಮಾನ

ಲೇಖಕ—ಮಲ್ಲಿಕಾರ್ಜುನಾರಾಧ್ಯ, ರಾಣೇಬೆನ್ನೂರು, ಹಿರೇಮಠ, ಕುದೇನೂರು

ವಾಚಕರೇ ! ಪ್ರಪಂಚದಲ್ಲಿ ಮತವೆಂಬುದು ಪೂರ್ವಾಚಾರ್ಯರಿಂದ ಕಲ್ಪಿಸಲ್ಪಟ್ಟು ಪರಮಾತ್ಮನ ಉಪಾಸನೆಗೆ ಮಾರ್ಗವಾಗಿಯೂ ಮಾನವರ ಮನಸ್ಸಿಗೆ ತೃಪ್ತಿಕರವಾಗಿಯೂ ಇರುವ ಒಂದು ವಿಧವಾದ ನಿಯಮವಾಗಿರುವುದು ಇದಕ್ಕೆ ಕೆಲವು ಆಚಾರಗಳೂ, ಕೆಲವು ಧರ್ಮಗಳೂ, ಕೆಲವು ವ್ರತಗಳೂ, ಕೆಲವು ನಿಬಂಧನೆಗಳೂ ಸಹಾಯಕಗಳಾಗಿಯೂ, ಪೋಷಕಗಳಾಗಿಯೂ ಇರುವುವು ಇವು ಜಗತ್ತಿನಲ್ಲಿ ನೆಲೆಗೊಂಡಿರುವ ಎಲ್ಲಾ ಮತಗಳಿಗೂ ಸಾಮಾನ್ಯ ಧರ್ಮವಾಗಿಯೂ ಇರುವುವು ಮತ್ತು ಇವುಗಳೆಲ್ಲಕ್ಕೂ, ಸರ್ವೋತ್ತಮ ಮಹಿಮಾಯುತನಾದ ಭಗವಂತನನ್ನು ಭಜಿಸುತ್ತ, ಅವನ ಕೃಪೆಗೆ ಪಾತ್ರರಾಗುವಿಕೆಯೇ ಫಲವಾಗಿರುವುದು ಇಂತಹ ಮತಾಚಾರವು ಮನುಷ್ಯರ ಸ್ವಭಾವ ಭೇದಗಳಿಂದ ಉತ್ತಮ, ಮಧ್ಯಮ, ಅಧಮ, ಅಧಮಾಧಮವೆಂದು ನಾಲ್ಕುತೆರನಾಗಿರುವುದು ಇವುಗಳಲ್ಲಿ ಉತ್ತಮವಾವುದೆಂದರೆ—ಆಸ್ತಿಕಗಳಾದ ಸರ್ವಮತಗಳಲ್ಲಿಯೂ ಸರ್ವಜ್ಞನಾಗಿಯೂ, ಸರ್ವಶಕ್ತನಾಗಿಯೂ, ಸರ್ವವ್ಯಾಪಕನಾಗಿಯೂ, ಶುದ್ಧಾನಂದರೂಪನಾಗಿಯೂ, ಸ್ವತಂತ್ರನಾಗಿಯೂ, ಸಕಲ ಜಗತ್ಕಾರಣಭೂತನಾಗಿಯೂ ದೇವರೊಬ್ಬನಿದ್ದಾನೆಂದು ನಂಬಿ, ಅಂತಹವನಲ್ಲಿ ಕೃತಜ್ಞತೆ ಭಕ್ತಿ ವಿಶ್ವಾಸಗಳನ್ನು ದೃಢವಾಗಿಟ್ಟು, ಅನ್ಯರ ಮನಸ್ಸನ್ನು ನೋಯಿಸುವ ಎಲ್ಲಾ ವಿಷಯಗಳನ್ನೂ ಬಿಟ್ಟು, ಸಂತುಷ್ಟಚಿತ್ತದಿಂದಲೂ ಸರ್ವಸಮತೆಯಿಂದಲೂ ಸ್ವಪರವಿಷಯಗಳಲ್ಲಿ ಭೂಷಣ ದೂಷಣಗಳಿಲ್ಲದೆ ವರ್ತಿಸುವುದೇ ಉತ್ತಮಮತಾಚಾರವಾಗಿರುವುದು ಸಕಲ ಕಲ್ಯಾಣಗುಣ ಭೂಷಿತನಾದ ಪರಶಿವನ ಮಹಿಮೆಯನ್ನೂ ಅವನ ಉಪಾಸನೆಯನ್ನೂ ತಿಳಿಸುವಿಕೆಯಲ್ಲಿ ಸರ್ವಮತಗಳೂ ಐಕಕಂಠ್ಯವನ್ನು ವಹಿಸಿರುತ್ತವಲ್ಲವೆ? ಹಾಗಿದ್ದರೂ ಆಯಾಮತಪ್ರವರ್ತಕರಾದ ಮೂಲಪುರುಷರು ತಾವು ಕಲ್ಪಿಸಿರುವಂತಹ ಮತಗಳಲ್ಲಿ ಜನಗಳಿಗೆ ವಿಶೇಷ ಭಕ್ತಿ ವಿಶ್ವಾಸಗಳನ್ನು ಹುಟ್ಟಿಸುವುದಕ್ಕಾಗಿ ನಾನಾವಿಧ ವಿಷಯಗಳನ್ನು ಹೇಳಿರುವರು ಅದರೆ, ಅವುಗಳೆಲ್ಲವೂ ಸ್ವಮತಗಳಲ್ಲಿ ಭಕ್ತಿಶ್ರದ್ಧೆಗಳನ್ನು ಸ್ಥಾಪಿಸುವುದಕ್ಕೆ ವಿನಾ ಅನ್ಯರ ಮತಗಳನ್ನು ದೂಷಿಸುವುದಕ್ಕಲ್ಲವೆಂದು ಬುದ್ಧಿವಂತರು ಭಾವಿಸುವರು, ಏತಕ್ಕೆಂದರೆ ಆ ಮೂಲಪುರುಷರಿಗೆ ಪರಮತ ದೂಷಣದಲ್ಲಿ ಸತ್ಯವಾದ ಅಭಿಪ್ರಾಯವುಂಟಾಗಿದ್ದರೆ ಅಂತಹ ದೂಷಣವು ಪ್ರಪಂಚದಲ್ಲಿ ಜನಗಳಿಂದ ಕೊಂಡಾಡಲ್ಪಡುವ ಎಲ್ಲಾ ಮತಗಳಲ್ಲಿಯೂ ಪರಸ್ಪರ ಕಾಣಲ್ಪಡುವುದಾದುದರಿಂದ ಸರ್ವಮತಗಳೂ ದೂಷ್ಯಗಳೇ ಆಗುವಲ್ಲಿ ಮತಗಳೆಂಬುವುವೆಲ್ಲವೂ ಪರಿಗ್ರಹಿಸುವುದಕ್ಕೆ ಅಯೋಗ್ಯಗಳಾಗುವುವು "ನಹಿಪ್ರಾಬಲ್ಯ ದೌರ್ಬಲ್ಯೆ ವಿಷಯಾಣಾಂ ಸ್ವತಸ್ಸತಃ । ಪರಂತುವಾದಿಬುದ್ಧೀನಾಮಿತಿ ತತ್ವವಿದೋವಿದುಃ ॥' ಎಂದರೆ ಲೋಕದಲ್ಲಿ ವಿಷಯಗಳನ್ನು ಕುರಿತು ವಾದಿಗಳು ಚರ್ಚಿಸುವಾಗ ಒಂದು ಪ್ರಬಲವಾಗುವುದೂ ಮತ್ತೊಂದು ದುರ್ಬಲವಾಗುವುದೂ ಅಂತಹ ವಿಷಯಗಳ ಸ್ವರೂಪದಿಂದಲ್ಲ ಪರಂತು ವಾದಿಸುವ ಪಂಡಿತರ ಬುದ್ಧಿಯ ಗುಣಗಳಿಂದಲೇ—ಎಂದು ಅಭಿಜ್ಞರು ತಿಳಿದಿರುತ್ತಾರೆಂಬ ನ್ಯಾಯದಿಂದ ಸರ್ವಮತಗಳೂ ಪ್ರಬಲ ದುರ್ಬಲಗಳೇ ಆಗಿರುತ್ತವೆ ಆದುದರಿಂದ ಜಗತ್ತಿನಲ್ಲಿ ಜನಗಳಿಂದ ಕೊಂಡಾಡಲ್ಪಡುವ ಮತಗಳೆಲ್ಲವೂ ಗುಣದೋಷಗಳಿಂದ ಮಿಶ್ರಗಳಾಗಿಯೇ ಇರುವುವು ಇದನ್ನು ಸಮದರ್ಶಿಗಳಾಗಿಯೂ, ತತ್ವವಿಚಾರಪರರಾಗಿಯೂ ಇರುವ ಪಂಡಿತರು ಚೆನ್ನಾಗಿ ತಿಳಿದಿರುವರು

ಏವಂಚ ಸರ್ವಮತಗಳಲ್ಲಿಯೂ ದೋಷಜ್ಞಾನ ಉದಯವಾದಮೇಲೆ ಮನುಷ್ಯನು ಯಾವ ಮತವನ್ನೂ ಕೊಂಡಾಡಲಾರನಷ್ಟೆ? ಹಾಗಾದರೆ ನಾಸ್ತಿಕನಾಗಿ ವರ್ತಿಸಬೇಕು ಚಾರ್ವಾಕಮತವೇ ಸತ್ಯವಾಗಿದ್ದರೂ, ಆಸ್ತಿಕ ಮತಾನುಯಾಯಿಗಳಿಗೆ ಅದರ ಫಲವಿಲ್ಲದೆ ಹೋದಾಗ್ಯೂ ಹಾನಿಯಿಲ್ಲ ಆಸ್ತಿಕಮತವೇ ಸತ್ಯವಾಗುವ ಪಕ್ಷದಲ್ಲಿ ಚಾರ್ವಾಕರಿಗೆ ಪ್ರಬಲತರವಾದ ಪರಲೋಕಭೀತಿಯು ತಪ್ಪಲಾರದು ಆದುದರಿಂದ ಆಸ್ತಿಕರಾಗಿ ವರ್ತಿಸುವುದೇ ಉತ್ತಮಪಕ್ಷವು ಹೀಗೆ ಆಸ್ತಿಕನಾಗಿ ಸಕಲ ಜಗತ್ಕಾರಣನಾದ ಪರಮಾತ್ಮನನ್ನು ಭಜಿಸುವವನು ಆವುದಾದರೊಂದು ಮತವನ್ನೇ ಅವಲಂಬಿಸಬೇಕಾಗುವುದು ಪ್ರಪಂಚದಲ್ಲಿ ಪ್ರಚುರಗಳಾಗಿರುವ ಮತಗಳಲ್ಲಿ 'ಯೇನಾಸ್ಯಪಿತರೋಯಾತಾ ಯೇನಯಾತಾ ಪಿತಾಮಹಾ ಎಂಬ ಪ್ರಮಾಣದಿಂದ ತಂದೆ ತಾತಂದಿರಿಂದಲೂ, ಮತಸ್ಥರಿಂದಲೂ, ಸ್ವಬಂಧುಜನಗಳಿಂದಲೂ ಅನುಸರಿಸಲ್ಪಟ್ಟಿರುವ ಮತವನ್ನೇ ಅವಲಂಬಿಸಿ ದೇವರನ್ನು ಉಪಾಸನೆ ಮಾಡತಕ್ಕುದು ಸಕಲ ಸ್ವಜನಸಮ್ಮತವಾಗಿಯೂ ಮನಸ್ಸಿಗೆ ತೃಪ್ತಿಕರವಾಗಿಯೂ ಇರುವುದು ಮತ್ತು ಅದನ್ನುಪೇಕ್ಷಿಸಿ ಅನ್ಯಮತವನ್ನು ಪರಿಗ್ರಹಿಸಿದರೆ ಅವನನ್ನು ಮತಭ್ರಷ್ಟನನ್ನಾಗಿಯೂ, ಪತಿತನನ್ನಾಗಿಯೂ ಎಣಿಸಿ ಆಯಾ ಮತಸ್ಥರು ನಿಂದಿಸಿ ಬಹಿಷ್ಕರಿಸುವುದು ಸಕಲ ಮತಸ್ಥರಲ್ಲಿಯೂ ಕಾಣಬರುವುದರಿಂದ ಅಂತಹ ದೋಷಕ್ಕೆ ಅವಕಾಶವಿಲ್ಲದೆಯೂ ಇರುವುದು ಆದಪ್ರಯುಕ್ತ ಸ್ವಮತದಲ್ಲಿ ಭಕ್ತಿ ಶ್ರದ್ಧೆಗಳನ್ನಿರಿಸಿ ಇತರ ಮತಗಳಲ್ಲಿ ಈರ್ಷ್ಯಾಸೂಯಾದೂಷಣಾದಿ ದೋಷಗಳನ್ನು ಶುದ್ಧವಾಗಿ ತ್ಯಜಿಸಿ, ಸಂತುಷ್ಟನಾಗಿರುವಿಕೆಯೇ ಉತ್ತಮ ಪುರುಷಧರ್ಮವೆಂದು ತಿಳಿಯಬೇಕು

ಮಧ್ಯಮಪಕ್ಷವಾವುದೆಂದರೆ—ಒಂದು ಮತವನ್ನು ಪರಿಗ್ರಹಿಸಿರುವವರು ತಮ್ಮ ಮತವನ್ನೇ ಸರ್ವೋತ್ತಮವನ್ನಾಗಿಯೂ ಸತ್ಯವನ್ನಾಗಿಯೂ ಭಾವಿಸುತ್ತ, ಸ್ವಪ್ರಯೋಜನಕ್ಕಾಗಿ ಅನ್ಯರನ್ನು ಮರುಳುಗೊಳಿಸಿ ಜೀವಿಸುವಂತಹ ಪರವಂಚಕರಾದ ಕೆಲವು ಸ್ವಮತಸ್ಥರಿಂದ ಬೋಧಿಸಲ್ಪಟ್ಟು ತಮ್ಮ ಮತವೇ ಶ್ರೇಷ್ಠವೆಂಬದಾಗಿಯೂ, ಸ್ವಮತಸ್ಥರೇ ಪೂಜ್ಯರೆಂಬುದಾಗಿಯೂ, ಅನ್ಯಮತಸ್ಥರನ್ನು ಸರ್ವದಾ ಉಪೇಕ್ಷಿಸಬೇಕೆಂಬದಾಗಿಯೂ ನಂಬುವರು ಇನ್ನು ಕೆಲವರು ಹುಚ್ಚರಂತೆ ಬೀದಿಗಳಲ್ಲಿ ತಮ್ಮ ಮತವನ್ನು ಹೊಗಳಿಕೊಳ್ಳುತ್ತ, ಅದರಲ್ಲಿರುವ ಗುಣದೋಷಗಳನ್ನು ಸ್ವಲ್ಪವಾದರೂ ತಿಳಿಯದೆ ಪರಮತಗಳನ್ನು ದೂಷಿಸುತ, ಅನ್ಯರಿಂದ ಪ್ರಯೋಗಿಸಲ್ಪಡುವ ದುರ್ಭಾಷಣ ದೂಷಣ ತಿರಸ್ಕಾರ ಪ್ರಹಾರಗಳನ್ನು ಸಹಿಸಿಕೊಳ್ಳುವರು ಮತ್ತೆ ಕೆಲವರು, ಸ್ವಮತಾಭಿಮಾನದಿಂದ ಸ್ತ್ರೀಮೂಲಕವಾಗಿಯೂ, ಧನಮೂಲಕವಾಗಿಯೂ, ಸ್ನೇಹಮೂಲಕವಾಗಿಯೂ ಅನ್ಯರನ್ನು ಸ್ವಮತದಲ್ಲಿ ಸೇರಿಸಿಕೊಳ್ಳುವರು ಇವೆಲ್ಲವೂ ಮಧ್ಯಮಪುರುಷಕಾರ್ಯಗಳೆಂದು ತಿಳಿಯಬೇಕು

ಅಧಮಪಕ್ಷವಾವುದೆಂದರೆ—ಸ್ವಮತ ಪಕ್ಷಪಾತದಿಂದ ಅನ್ಯಮತಸ್ಥರಲ್ಲಿ ದ್ವೇಷವನ್ನು ವಹಿಸುತ್ತ ತಮಗೆ ಸಾಧ್ಯವಾದಮಟ್ಟಿಗೂ ಅವರ ಮನಸ್ಸನ್ನು ನೋಯಿಸುತ್ತ ವರ್ತಿಸುವಿಕೆಯೇ

ಅಧಮಾಧಮಪಕ್ಷವಾವುದೆಂದರೆ—ಸ್ವಮತಾಭಿಮಾನದಿಂದ ಅನ್ಯಮತಸ್ಥರಿಗೆ ಅನೇಕೋಪದ್ರವಗಳನ್ನು ಕೊಡುತ್ತ, ಕಡೆಗೆ ತಾವೂ ಕೆಡುವುದಲ್ಲದೆ ಅವರಿಗೂ ಸರ್ವನಾಶವನ್ನುಂಟುಮಾಡುವಿಕೆಯೇ

ಹೀಗೆ ನಾಲ್ಕು ಬಗೆಯಾಗಿರುವ ಸ್ವಮತಾಭಿಮಾನಿಗಳಲ್ಲಿ ಉತ್ತಮರು ಮಾಡುವ ಉಪಾಸನೆಯಿಂದಲೇ ಪರಮಾತ್ಮನು ಸಂತುಷ್ಟನಾಗಿ ಅವರನ್ನು ಅನುಗ್ರಹಿಸುವನು ಉಳಿದ ಮೂರು ಬಗೆಯವರನ್ನು ನಿಗ್ರಹಿಸುವನು ಈ ಕಾರಣಗಳಿಂದ ಸತ್ಯವಾಗಿ ದೇವರಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟು ಭಜಿಸುವಂತಹ ಆಸ್ತಿಕನು, ಯಾವ ಮತಸ್ಥನಾದರೂ ಒಳಗೂ ಹೊರಗೂ ಏಕ ಪ್ರಕಾರವಾಗಿಯೂ, ಪ್ರಸನ್ನ ಹೃದಯನಾಗಿಯೂ, ಅನ್ಯಮತವನ್ನಾಗಲಿ ಅದರ ಆಚಾರವ್ರತನಿಷ್ಠೆಗಳನ್ನಾಗಲಿ, ಅದರ ಮೂಲಪುರುಷರನ್ನಾಗಲಿ, ಯಾವಾಗ್ಯೂ ದೂಷಿಸದೆ, ಅನ್ಯಮತಸ್ಥರಿಗೆ ಯಾವವಿಧದಿಂದಲೂ ಅನಿಷ್ಟವನ್ನು ಕೋರದೆ, ಸಕಲ ಜನಗಳಿಗೂ ಹಿತಚಿಂತಕನಾಗಿಯೂ, ಸರ್ವಸಮನಾಗಿಯೂ, ವರ್ತಿಸುವನು ಇವನೇ ಸತ್ಯವಾದ ಆಸ್ತಿಕನು ಇದೇ ಉತ್ತಮವಾದ ಮತಾಚಾರವು ಇವನೇ ಸ್ವಮತದಲ್ಲಿ ಸತ್ಯವಾದ ನಂಬಿಕೆಯುಳ್ಳವನು ಇವನೇ ಭಗವಂತನ ಕೃಪೆಗೆ ಪಾತ್ರನಾಗುವನು

ಇಂತಹ ಯೋಗ್ಯವಾದ ಚರ್ಯೆಯುಳ್ಳದವರು ಒಳಗೆ ನಾಸ್ತಿಕರಾಗಿಯೂ, ಹೊರಗೆ ಆಸ್ತಿಕರಂತೆ ವೇಷ ಭಾಷಾಚಾರಗಳಿಂದ ನಟಿಸುತ್ತ ಕೇವಲ ಅರ್ಥ ಕಾಮಪರರಾಗಿ, ಪರದ್ರೋಹ, ಪರನಿಂದೆ, ಆತ್ಮಪ್ರಶಂಸೆ, ಕುಟಿಲ ಕುಯುಕ್ತಿ ಕುತಂತ್ರ ಇತ್ಯಾದಿ ಕುಮಾರ್ಗಗಳನ್ನೇ ಅಪೇಕ್ಷಿಸುವವರಾಗಿರುವರೆಂಬುದನ್ನು ಅಭಿಜ್ಞರು ತಿಳಿಯಬಹುದು ಇದಕ್ಕನುಸಾರವಾಗಿ ಆಸ್ತಿಕ ನಾಸ್ತಿಕ ತತ್ವಗಳನ್ನು ಕುರಿತು ವಿಚಾರ ಮಾಡೋಣ

ವಾಚಕ ಮಹಾಶಯರೆ ! ಈ ಸಂಸಾರ(ಲೋಕ)ದಲ್ಲಿ ಮತವೆಂಬುದು ಆಸ್ತಿಕ ನಾಸ್ತಿಕವೆಂದು ಎರಡು ವಿಧವಾಗಿರುವಿಕೆಯನ್ನು ಎಲ್ಲರೂ ಪ್ರಾಯಶಃ ತಿಳಿದೇ ಇರುತ್ತಾರೆ ಇವುಗಳಲ್ಲಿ ನಾಸ್ತಿಕ ಮತವು, ಪ್ರತ್ಯಕ್ಷವಾಗಿರುವುದೇ ಪ್ರಮಾಣ, ಇದಕ್ಕೆ ಕಾರಣವಾಗಿ ದೇವರೊಬ್ಬನಿದ್ದಾನೆಂಬುದು ಅಪ್ರಮಾಣ, ಪ್ರಪಂಚವು ಸ್ವಭಾವಸಿದ್ಧವಾದುದು ಪುಣ್ಯ ಪಾಪಗಳೂ, ಅವುಗಳ ಫಲಗಳೂ, ಪರಲೋಕವೂ ಇಲ್ಲ ಎಂದು ಹೇಳುವುದು ಆಸ್ತಿಕ ಮತವಾದರೋ ಜಗತ್ಕಾರಣನಾದ ದೇವರೊಬ್ಬನಿದ್ದಾನೆಂಬುದಾಗಿಯೂ, ಪುಣ್ಯಪಾಪಗಳು, ಧರ್ಮಾಧರ್ಮಗಳು, ಸ್ವರ್ಗನರಕಗಳು ಸಹ ಇರುತ್ತವೆಂಬುದಾಗಿಯೂ ಹೇಳುತ್ತದೆಯಾದಪ್ರಯುಕ್ತ ಅದರಲ್ಲಿ ಬಹುಭೇದಗಳುಂಟಾಗಿರುವುವು ಅಂತಹ ಭೇದಗಳನ್ನವಲಂಬಿಸಿದವರು ತಮ್ಮ ಪಕ್ಷವೇ ಸತ್ಯವು ಉತ್ತಮವು ಎಂಬುದಾಗಿ ಪರಸ್ಪರರು ವಾಗ್ವಾದ ಮಾಡುವರು, ಮತ್ತು ಅದಕ್ಕೆ ಸಾಧಕಗಳಾದ ಅನೇಕ ವಿಷಯಗಳನ್ನು ಕಲ್ಪಿಸಿಕೊಂಡೂ ಇರುವರು ಆ ವಿಷಯಗಳೆಲ್ಲವೂ ಸತ್ಯವೇ ಎಂಬುದಾಗಿ ಆಯಾಯ ಸಂಗಡದವರು ನಂಬಿರುವರು ಅಂತಹ ವಿಷಯಗಳು ಬೇರೆ ಬೇರೆಯಾಗಿ ಜನರ ವೇಷ, ಭಾಷೆ, ಅಲಂಕಾರ, ಧರ್ಮ, ಉಪಾಸನೆ ವ್ರತ ಮುಂತಾದ ಎಲ್ಲಾ ಲೌಕಿಕ ಕಾರ್ಯಗಳಲ್ಲಿಯೂ ಪರಸ್ಪರ ಭೇದವೈಷಮ್ಯಗಳನ್ನು ಪಡೆದಿರುವುವಲ್ಲದೆ, ಸರ್ವಜಗತ್ಕರ್ತನಾಗಿಯೂ, ಸರ್ವಶಕ್ತನಾಗಿಯೂ, ಅದ್ವಿತೀಯನಾಗಿಯೂ, ನಿತ್ಯಾನಂದ ಸ್ವರೂಪನಾಗಿಯೂ, ಸಕಲ ಪ್ರಾಕೃತಗುಣದೋಷರಹಿತನಾಗಿಯೂ ಇರುವ ಪರಮಾತ್ಮನಲ್ಲಿಯೂ, ತಮ್ಮ ತಮ್ಮ ಮತಾನುಸಾರಗಳಾಗಿರುವ ಗುಣಗಳನ್ನೂ, ಭೇದ ವೈಷಮ್ಯಗಳನ್ನೂ ಆರೋಪಿಸಿ, ಅದಕ್ಕೆ ತಕ್ಕ ವಿಧಾನಗಳಿಂದ ಅವನ ಉಪಾಸನೆಯನ್ನು ಮಾಡುತ್ತಾರೆ ಇಂತಹವರು ತಮ್ಮ ಪಕ್ಷಗಳಲ್ಲಿ ಸತ್ಯಜ್ಞಾನಪೂರ್ವಕವಾದ ನಂಬಿಕೆಯಿಂದ ಅನ್ಯ ಪಕ್ಷಗಳನ್ನು ಹೇಯವಾಗಿ ತಿಳಿಯುವಂತೆ, ದೇವರ ಸ್ವರೂಪ ತತ್ವವನ್ನೂ, ಲೋಕದ ಸ್ವರೂಪ ತತ್ವವನ್ನೂ ಚೆನ್ನಾಗಿ ನಿವರ್ತಮಾಡಿ, ತಿಳಿಯುತಕ್ಕ ಪಂಡಿತೋತ್ತಮರ ದೃಷ್ಟಿಗೆ ತಾವೂ ಕಾಣಲ್ಪಡುವ ಸ್ವಯಂ ಸಂಸಿದ್ಧವಾದ ಈಶ್ವರ ಸ್ವರೂಪಕ್ಕೂ, ಆಚಾರ್ಯರಿಂದ ಕಲ್ಪಿತಗಳಾದ ಮತಗಳಿಗೂ ಸಂಬಂಧವು ಹೇಗಿರುತ್ತದೋ ಅದನ್ನಂತವರೇ ಬಲ್ಲರು

ಏವಂಚ ಮತಗಳೆಲ್ಲವೂ ಪ್ರತ್ಯೇಕ ಪ್ರತ್ಯೇಕವಾದ ಕೆಲವು ಪ್ರಮಾಣಗಳಿಂದಲೂ, ಕೆಲವು ಯುಕ್ತಿಗಳಿಂದಲೂ ಕೆಲವು ಉಪಯುಕ್ತಿಗಳಿಂದಲೂ, ನಿರ್ಬಂಧಿಸಲ್ಪಟ್ಟಿರುವ ಪ್ರಯುಕ್ತ, ಅವುಗಳ ಪ್ರಾಬಲ್ಯಗಳು ಮನುಷ್ಯಬುದ್ಧಿಯ ಬಲಾಬಲಾಧೀನಗಳಾಗಿಯೂ, ಅಂತಹ ಬಲಾಬಲಗಳು ಪ್ರತಿಯೊಬ್ಬ ಮನುಷ್ಯನ ಬುದ್ಧಿಯಲ್ಲಿಯೂ ಬೇರೆಯಾಗಿರುವುದರಿಂದ ವಿಚಾರಶೀಲರಾದ ಬುದ್ಧಿವಂತರು ತಮ್ಮ ಬುದ್ಧಿಯ ಮೂಲಕ ಅವುಗಳ ಗುಣದೋಷಗಳನ್ನು ಕಂಡು ಹಿಡಿಯದೇ ಇರಲಾರರು ಅವರವುಗಳಲ್ಲಿ

ಅಭಿಮಾನಶೂನ್ಯರಾಗಿದ್ದಾರೆ. ದುರ್ಬಲವಾದವುಗಳಿಗೆ ಅಪಾರ್ಥವನ್ನು ಕಲ್ಪಿಸುವರು. ಕೆಲವರವುಗಳನ್ನೇ ತೆಗೆದು ಹಾಕಿ, ಬೇರೆ ಬಲವಾದ ವಿಷಯಗಳಿಂದ ತೃಪ್ತರಾಗುವರು. ಅಷ್ಟೇ ಹೊರತು ಅನ್ಯರಿಂದ ಹೇಳಲ್ಪಡುವ ಸರಿಯಾದ ಆಕ್ಷೇಪಕೋಟಿಗಳನ್ನು ಒಪ್ಪದೆ ಮೂರ್ಖತನದಿಂದ ಪಟ್ಟು ಹಿಡಿಯಲಾರರು. ಅಭಿಮಾನವಿಲ್ಲದ ಪಕ್ಷದಲ್ಲಿ ಮೌನವನ್ನು ಧರಿಸಿಬಿಡುವರು; ಅಥವಾ ಆಕ್ಷೇಪಕೋಟಿ ಬಲವಾಗಿದ್ದರೆ ಅದಕ್ಕೆ ಸಂತೋಷಿಸುವರು.

ಕೇವಲ ಶ್ರದ್ಧಾಜಡರಾಗಿ ಶಾಸ್ತ್ರ, ಲೋಕ, ಯುಕ್ತಿ, ನ್ಯಾಯಗಳನ್ನರಿಯದ ದುರಭಿಮಾನಿಗಳಾದ ಅವಿಚಾರಿಗಳು ತಮ್ಮ ಪಕ್ಷದ ಮೇಲೆ ಹೇಳಲ್ಪಡುವ ಆಕ್ಷೇಪಕೋಟಿಗಳಿಗೆ ಉತ್ತರ ಕೊಡಲಾರದೆ, "ಶೇಷಂ ಕೋಪೇನ ಪೂರಯೇತ್" ಎಂಬ ನ್ಯಾಯದಂತೆ ಆಕ್ಷೇಪಿಸುವವರನ್ನು ನಾಸ್ತಿಕರನ್ನಾಗಿ ಭಾವಿಸುವರು. ಸಮಂಜಸವಾದ ಯುಕ್ತಿ ನ್ಯಾಯಗಳ ಆಧಾರಗಳಿಂದ ಆಕ್ಷೇಪಿಸಿದರೆ ಆಸ್ತಿಕನು ನಾಸ್ತಿಕನಾಗಲಾರನು. ಪರಂತು ಅದಕ್ಕೆ ಉತ್ತರ ಹೇಳಲಾರದವರೇ ಅವಿಚಾರಿಗಳಾಗುವುದರಲ್ಲಿ ಸಂದೇಹವಿಲ್ಲ. ಮತವೆಂಬದರ ಸ್ವರೂಪವು ಹಿಂದೆಯೇ ನಿರೂಪಿತವಾಗಿರುವ ಕಾರಣ ಅದನ್ನು ಪರಿಭಾವಿಸಿದರೆ ಮತವನ್ನು ಕುರಿತು ವಾದಿಸುವವರ ಈರ್ಷ್ಯಾಸೂಯಾದಿಗಳಿಗವಕಾಶವಿರಲಾರದು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಭಸ್ಮಗಳು

ಔಷಧ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ ಊಖಿಮಠ, ಜಿಲ್ಲಾ, ಗಢವಾಲ್ ಯು.ಪಿ

ಸಿದ್ಧಾಂತಶಿಖಾಮಣಿ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತವಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯರೆಂಬ** ಆಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿ ನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M F Printings ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳ ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು. ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಸಾರಿಸಾರಿ ಹೇಳಬಹುದಾಗಿದೆ. ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು. ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣನಾಥನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! **ಬೆಲೆ ೨ ರೂಪಾಯಿ**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖರದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತರುಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೦೬ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು [illegible] ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ಕೊಂಡುಕೊಂಡೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್. ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದ) ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೩
ಶ್ರೀ [illegible] ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೬—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೨—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ.—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ ಪಿ ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[ಪಿ] ಪೋ ಬಾ ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಶಾಸ್ತ್ರಮವಿಮರ್ಶತತ್ತ್ವಸ್ಫುರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮುಲು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವುದು)	೧। ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩-೨೩ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	**4 As.**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As.**
लिंगधारणचंद्रिका (संस्कृत)	**१ रु.**
वीरशैवाचार (मराठी)	**१ रु.**
महानारायणोपनिषत् (वीरशैवभाष्य-संस्कृत)	**१ रु.**
पुरुषसूक्तम् (वीरशैवमार्गीयभाष्योपेतम्)	**४ आ.**
नंदिकेश्वरकारिका (संस्कृत)	**२ आ.**

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ । ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ॥
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ । ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಷ್ಯದೀಶೋಕಮಂ ॥

ಸ್ಥಳದವರಿಗೆ ೧ ರೂ ೧೨ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಜೂನ್ ೧೯೪೨ [ಸಂಚಿಕೆ ೧೦

ಮೈಸೂರು ಆಕಾಶವಾಣಿಯಿಂದ ೧೮-೬-೪೨ರಲ್ಲಿ ಮೈಸೂರು ಸ್ಟೇಟ್ ಟ್ರೂಪ್ಸ್‌ನ ರಿಕ್ರೂಟಿಂಗ್ ಆಫೀಸರವರೂ ಮತ್ತು ಚೀಫ್ ಕಮ್ಯಾಂಡೆಂಟರವರ ಪರ್ಸನಲ್ ಅಸಿಸ್ಟೆಂಟರೂ ಆದ ಶ್ರೀಮಾನ್ ಜೆ. ಬಿ. ಮಲ್ಲಾರಾಧ್ಯ, ಎಂ ಎ ಇವರು ಮಾಡಿದ ರೇಡಿಯೋ ಭಾಷಣ

೧. ರಾಷ್ಟ್ರಶಕ್ತಿ—ಕ್ಷಾತ್ರಮನೋಧರ್ಮ

ಪ್ರಪಂಚವನ್ನೇ ಆವರಿಸಿರುವ ಘೋರ ಯುದ್ಧದ ಪರಿಣಾಮವಾಗಿ ನಮ್ಮ ಈ ಮಾತೃಭೂಮಿಯ ಪರಿಸ್ಥಿತಿಯು ಯಾವ ರೀತಿ ಮಾರ್ಪಡುವುದೆಂಬುದನ್ನು ದೂರದೃಷ್ಟಿಯಿಂದ ವಿಚಾರಮಾಡಿ ನೋಡಬೇಕಾದ ವಿಶೇಷ ಸನ್ನಿವೇಶವಿದು. ಈಗಾಗಲೇ ಯುದ್ಧವು ಭರತಖಂಡವನ್ನು ವ್ಯಾಪಿಸಿರುವುದರಿಂದ, ಮುಂದೆ ಅದರಿಂದ ನಮ್ಮ ಜನಾಂಗಕ್ಕೆ ಉಂಟಾಗತಕ್ಕ ಮಹತ್ಪರಿಣಾಮಗಳನ್ನು ಎದುರಿಸಲು ನಾವು ಸಿದ್ಧರಾಗಬೇಕು. ವಿಶ್ವದ ಶಾಂತಿರಚನೆಗೆ ಸಾಧಕವಾದ ಕಾರ್ಯಕ್ರಮವನ್ನು ಕೈಕೊಂಡು ಧೈರ್ಯದಿಂದ ಎದೆಗೊಟ್ಟು ನಿಂತು ರಾಷ್ಟ್ರಶಕ್ತಿಯನ್ನು ಒಟ್ಟುಗೂಡಿಸಿ ಜನಾಂಗವನ್ನು ಹುರಿದುಂಬಿಸಿ ಸಮಯೋಚಿತವಾಗಿ ದೇಶದ ಹಿತಕ್ಕಾಗಿ ಆತ್ಮಾರ್ಪಣೆ ಮಾಡಲು ಸಿದ್ಧರಾಗಬೇಕೆಂಬ ವೀರಸಂಕಲ್ಪವನ್ನು ಮಾಡಬೇಕು. ಈ ಮಹಾಕೃತ್ಯದಲ್ಲಿ ಇಡೀ ಜನಾಂಗವೇ ಒಂದಾಗಬೇಕು. ಎಲ್ಲ ಭೇದಭಾವಗಳನ್ನೂ ಮರೆತು ಒಮ್ಮನಸ್ಸಿನಿಂದ ಕಲೆತು ಯುದ್ಧಮನೋಧರ್ಮವನ್ನು ಅವಲಂಬಿಸಬೇಕು. ಮೊಟ್ಟಮೊದಲು ಜನತೆಯಲ್ಲಿ ಯುದ್ಧ ಮನಃಪ್ರವೃತ್ತಿಯು ಬೆಳೆಯುವಂತೆ ಜಾಗರೂಕತೆಯಿಂದ ಪ್ರಯತ್ನಿಸಬೇಕು. ಭಾರತೀಯರಲ್ಲಿ, ಮೈಸೂರಿನ ಮಾನ್ಯಪ್ರಜೆಗಳಲ್ಲಿ, ರಕ್ತಗತವಾಗಿರುವ ಕ್ಷಾತ್ರ ತೇಜಸ್ಸಿನ ಕಿಡಿಗಳನ್ನು ಸ್ಫುರಿಸುವಂತೆ ಮಾಡಬೇಕು. ನಮ್ಮ ಸ್ವಾತಂತ್ರ್ಯವನ್ನು, ಅಸ್ತಿತ್ವವನ್ನು ಹಾಳುಗೆಡಹಲು ಹೊಂಚು ಹಾಕುತ್ತಿರುವ ಹಿಂಸಕರನ್ನು ನಿರ್ಮೂಲಮಾಡಬೇಕೆಂಬ ವೀರಪ್ರತಿಜ್ಞೆಯನ್ನು ಕೈಕೊಳ್ಳಬೇಕು. 'ನಮ್ಮ ಪ್ರಜೆಗಳು ಧಾರ್ಮಿಕ ಮತ್ತು ರಾಜಕೀಯ ಭೇದಗಳನ್ನೂ ಮತ್ತು ಬಡವರು ಬಲ್ಲಿದರೆಂಬ ಭೇದಗಳನ್ನೂ ಮರೆತು ದೇಶರಕ್ಷಣೆಯ ಪ್ರಯತ್ನದಲ್ಲಿ ಎಲ್ಲರೂ ಒಟ್ಟುಗೂಡಿ ಪರಿಶ್ರಮಿಸಬೇಕೆಂಬುದು ನಮ್ಮ ಅಭಿಲಾಷೆಯಾಗಿದೆ' ಎಂಬುದಾಗಿ [illegible] ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರು (ತಾ॥ 4-5-1942) ಹಾರೈಸಿರುತ್ತಾರೆ. ಮಹಾಸ್ವಾಮಿಯವರ ಈ ಪವಿತ್ರ ಸಂದೇಶವನ್ನು ನಾವು ಪಾಲಿಸಬೇಕಾದುದು ನಮ್ಮ ಆದ್ಯ ಕರ್ತವ್ಯ. ಇದಕ್ಕಾಗಿ ದೇಶದಲ್ಲೆಲ್ಲ ರಾಷ್ಟ್ರೀಯ ರಕ್ಷಣೆಗಾಗಿ ಸುವ್ಯವಸ್ಥಿತವಾದ ಯೋಜನೆಯನ್ನು ಏರ್ಪಡಿಸಿ, ಶಿಸ್ತಿನಿಂದ ಜನಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಆ ವ್ಯವಸ್ಥೆಯನ್ನು ಏರ್ಪಡಿಸಿಕೊಳ್ಳುವುದಕ್ಕೆ ಮೊದಲು, ನಾವು ಜನರ ಮನಸ್ಸಿನಲ್ಲಿ ಅಡಗಿರುವ ಭಯ-ಶಂಕೆಯನ್ನೂ ಮತ್ತು ನಿರಾಶಾ ಭಾವನೆಗಳನ್ನು ನಿರ್ಮೂಲಮಾಡಿ, ಅವರ ಹೃದಯದಲ್ಲಿ ಧೈರ್ಯಸ್ಥೈರ್ಯಗಳನ್ನು ತುಂಬಬೇಕು. ರಾಷ್ಟ್ರಶಕ್ತಿಯನ್ನು ಸದುಪಯೋಗಪಡಿಸಿಕೊಳ್ಳಬೇಕಾದರೆ ಧೈರ್ಯವೇ ಮುಖ್ಯ ಸಾಧನ. ಧೈರ್ಯವಿಲ್ಲದ ಮೇಲೆ ಎಂಥ ಶಕ್ತಿಯೇ ಆಗಿರಲಿ ಕುಸಿದು ಬಿದ್ದುಹೋಗುವುದೇ ಖಂಡಿತ. ಯಂತ್ರರಚನೆಗೆ ಉಗಿ, ಎಣ್ಣೆ ಯಾ ವಿದ್ಯುಚ್ಛಕ್ತಿಯು ಅಗತ್ಯವಿರುವಂತೆ ರಾಷ್ಟ್ರಶಕ್ತಿಗೆ ಧೈರ್ಯವೇ ಮುಖ್ಯವಾಗಿರಬೇಕು. ಅದರಿಂದಲೇ ಯುದ್ಧದ ಹಾವಳಿಯನ್ನು ಎದುರಿಸಿ ದೇಶರಕ್ಷಣೆ ಮಾಡಿಕೊಳ್ಳುವ ವಿಚಾರದಲ್ಲಿ ಜನತೆ ಸಾಮರ್ಥ್ಯವನ್ನು ಹೆಚ್ಚಿಸಿ 'ನಾಜಿ' ಗಳ ಮತ್ತು 'ಫ್ಯಾಸಿಸ್ಟ' ಗಳ ಕೇಡಿಗತನವು ಯಾವ ವಿಧಾನದಲ್ಲಿ ಅಥವಾ ಯಾವ ರೂಪದಲ್ಲಿ ತಲೆದೋರಿದರೂ ಒಟ್ಟು ಜನಾಂಗವೇ ಒಕ್ಕಟ್ಟಿನಿಂದ ಅದನ್ನು ಎದುರಿಸುವಂತೆ ಹುರಿದುಂಬಿಸುವುದೇ ಈ ರಕ್ಷಣಾಗಾರರ ಉದ್ದೇಶವಾಗಿರಬೇಕೆಂಬುದನ್ನು ನಾವೆಲ್ಲರೂ ಮನಗಾಣಬೇಕಾಗಿದೆ. ಹೀಗೆ ರಾಷ್ಟ್ರಶಕ್ತಿಯನ್ನು ಒಮ್ಮುಖವಾಗಿ ರೂಪುಗೊಳಿಸಿ ಜನತೆಯಲ್ಲಿ ಕ್ಷಾತ್ರ ಮನೋಧರ್ಮವನ್ನು ಅಭಿವೃದ್ಧಿಗೊಳಿಸಬೇಕಾದರೆ ನೆಲೆನಿಲಿಸಲು ನಾವು ಶತ್ರುಗಳು ಮಾಡತಕ್ಕ ಅಪಪ್ರಚಾರವನ್ನು ತಡೆಗಟ್ಟಬೇಕು.

೨. ಅಪಪ್ರಚಾರ ನಿವಾರಣೆ

ರಾಷ್ಟ್ರಶಕ್ತಿಯನ್ನು ಒಟ್ಟುಗೂಡಿಸಿ ದೇಶರಕ್ಷಣೆಯ ಕಾರ್ಯದಲ್ಲಿ ಫಲಪ್ರದವಾದ ಪ್ರಯತ್ನಗಳನ್ನು ನಡೆಯಿಸಬೇಕಾದರೆ "ಜನರಲ್ಲಿ ಸೋಲಿನ ಭಾವನೆ ನಿರುತ್ಸಾಹವನ್ನುಂಟುಮಾಡುವಂತೆ ತೋರುವ ಸಹಸ್ರ ವಿವಿಧ ಕೃತ್ಯಗಳಿಗೂ ಪ್ರತಿಕ್ರಿಯೆಗಳನ್ನು ಅಳವಡಿಸ [illegible]. ಮತ್ತು ನಮ್ಮ ಪಕ್ಷಕ್ಕೇ ಪರಿಣಾಮದಲ್ಲಿ ಜಯಲಾಭವೆಂಬ [illegible]ಯನ್ನಿಟ್ಟುಕೊಂಡು ಯಾವ ಕಷ್ಟಗಳು ಒದಗಿದರೂ ಜನರು ಧೈರ್ಯದಿಂದ ತ್ಯಾಗಬುದ್ಧಿಯನ್ನು ತೋರಿಸುವಂತೆ ಪ್ರೇರೇಪಿಸಬೇಕು." ಜನರ ಶಕ್ತಿಯನ್ನು ಕೇಂದ್ರೀಕರಿಸಿ ದೇಶದ ರಕ್ಷಣೆಯನ್ನು ಸಾಧಿಸಬಹುದು. ಕನ್ನಂಬಾಡಿಯಂಥ ಅಗಾಧವೂ ಮಹತ್ತರವೂ ಸುಪ್ರಸಿದ್ಧವೂ ಆದ ಜಲಾಶಯವನ್ನು ಒಂದೆರಡು ಒಡೆಕಗಳಾಗಲಿ, ಬಿರುಕುಗಳಾಗಲಿ ಕಾಲಕ್ರಮದಲ್ಲಿ ನಾಶಿಸಬಲ್ಲವು. ಅದಕ್ಕೆ ಪ್ರಯುಕ್ತ ಈ ಅಲ್ಪಕಾರಣಗಳಿಂದ ಜಲಾಶಯದ ವ್ಯವಸ್ಥೆಗೆ ಹಾನಿಯೊದಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾದುದು ಎಷ್ಟು ಅವಶ್ಯಕವೋ, ಅದೇ ರೀತಿಯಲ್ಲಿ ರಾಷ್ಟ್ರಶಕ್ತಿಯನ್ನು ಕುಂದಿಸಿ ಹದಗೆಡಿಸಬಹುದಾದ ಸಣ್ಣ ಸಂಗತಿಗಳನ್ನಾಗಲಿ ಅಪಪ್ರಚಾರವನ್ನಾಗಲಿ ನಾವು ಕಾಲಹರಣ ಮಾಡದೆ ತಡೆಗಟ್ಟಿ ನಿಲ್ಲಿಸಬೇಕು. ಯುದ್ಧವು ಪ್ರಾರಂಭವಾದಾಗಿನಿಂದಲೂ ಶತ್ರುಗಳು ಅಪಪ್ರಚಾರ ಮಾಡಿ ನಮ್ಮ ಜನಾಂಗದವರನ್ನು ಧೈರ್ಯಗೆಡಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಇದೊಂದು ನಮ್ಮ ಶತ್ರುಗಳ ಕಪಟಬುದ್ಧಿಯ ವೈಶಿಷ್ಟ್ಯ. ಅವರು ಯಾವುದೊಂದು ರಾಷ್ಟ್ರದ ಮೇಲೆಯೇ 'ಆಗಲಿ ಯುದ್ಧವನ್ನು ಹೂಡುವುದಕ್ಕೆ ಮೊದಲೇ ಈ ಅಪಪ್ರಚಾರ ಕಾರ್ಯವನ್ನು ನಡೆಯಿಸಿ ಜನತೆಯನ್ನು ಧೈರ್ಯಗೆಡಿಸಿ ಕೃತ್ರಿಮೋಪಾಯಗಳಿಂದ ಕಾರ್ಯಸಾಧನೆ ಮಾಡಿಕೊಳ್ಳುತ್ತಿದ್ದಾರೆ. ಹೀಗೆ ಜನಜೀವನದಲ್ಲಿ ಭೀತಿ, ಕಳವಳ ಮತ್ತು ನಿರುತ್ಸಾಹಗಳು ತಲೆದೋರಿದವೆಂದರೆ ಆ ಜನಾಂಗದ ಆಂತರಿಕ ಬಲವೇ ಬಿದ್ದುಹೋಗಿ ನಿತ್ಯಜೀವನದಲ್ಲಿ ಅವ್ಯವಸ್ಥೆಯೇ ತಲೆದೋರಿ, ರಾಷ್ಟ್ರಶಕ್ತಿಯು ಕುಂಠಿತವಾಗುತ್ತದೆ. ಆಗ ಶತ್ರುಗಳ ಮನೋಭಿಲಾಷೆಯು ನಿರಾಯಾಸವಾಗಿ ನೆರವೇರಲು ಅವಕಾಶವಾಗುತ್ತದೆ. ಎಲ್ಲಿಯೋ ಇರುವ ಶತ್ರುಗಳಿಗಿಂತಲೂ ನಮ್ಮ ಜನರಲ್ಲಿ ಸೇರುವ ಭೀತಿ ಕಳವಳಗಳೇ ನಿಜವಾದ ಶತ್ರುಗಳು. ಇಂಥ ಭಯಭೀತಿಗಳು ಜನರಲ್ಲಿ ತಲೆದೋರದಂತೆ ಪ್ರಯತ್ನಿಸಬೇಕಾದುದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯ. ಗುಂಡಿನೇಟಿಗೂ ಜಗ್ಗದ ಜನಾಂಗವು ಸುಳ್ಳು ವದಂತಿಯ ಬಲದಿಂದ ಕುಗ್ಗಿಹೋಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ನಾವು ಜನರಲ್ಲಿ ಸುಳ್ಳು ಸಂಗತಿಗಳು ಹರಡದಂತೆ ತಡೆಗಟ್ಟಿ ಅವರಿಗೆ ವಾಸ್ತವಾಂಶಗಳನ್ನು ತಿಳಿಸಿ ರಾಷ್ಟ್ರಶಕ್ತಿಯನ್ನು ಒಟ್ಟುಗೂಡಿಸಿ ಅವರನ್ನು ಯುದ್ಧಮನಸ್ಕರನ್ನಾಗಿ ಮಾಡಬೇಕು. ಅವರ ಹೃದಯದಲ್ಲಿ ಅಡಗಿರುವ ಕ್ಷಾತ್ರ ತೇಜಸ್ಸನ್ನು ಹೊರಹೊಮ್ಮಿಸಬೇಕು. ಈ ಉದ್ದೇಶ ಸಾಧನೆಗಾಗಿಯೇ ನಮ್ಮ ಸಂಸ್ಥಾನದಲ್ಲಿ "National War Front" ಎಂಬ ರಾಷ್ಟ್ರೀಯ ರಕ್ಷಣಾ ವ್ಯವಸ್ಥೆಯನ್ನು ಸರ್ಕಾರದವರು ಏರ್ಪಡಿಸಿರುವರು. ನಮ್ಮ ದೇಶಬಾಂಧವರಲ್ಲಿ ಪ್ರತಿಯೊಬ್ಬರೂ ಕಾರ್ಯರಂಗಕ್ಕಿಳಿದು ನಮ್ಮ ಮಾತೃಭೂಮಿಯ ಸ್ವಾತಂತ್ರ್ಯವನ್ನೂ ಗೌರವವನ್ನೂ ಉಳಿಸಲು ಈ ರಕ್ಷಣಾದಳಗಳಿಗೆ ಸೇರಿ ಅವಶ್ಯಕತೆಯೊದಗಿದಾಗ ನಮ್ಮ ನಾಡಿನ, ನಮ್ಮ ಜನತೆಯ ಮತ್ತು ನಮ್ಮ ರಾಜರ ಸೇವೆಯನ್ನು ಮಾಡಲು ಸಿದ್ಧರಾಗಬೇಕು. ಜನರೆಲ್ಲ ಬೇರೆಬೇರೆಯವರು [illegible] ದೇಶದ ರಕ್ಷಣಾ ಕಾರ್ಯದಲ್ಲಿ ಪ್ರಜಾಜನರ ಉತ್ಸಾಹ ಮತ್ತು ಶಿಸ್ತು ಇವೆರಡೂ ಅಮೂಲ್ಯವಾದ ರಕ್ಷಾಕವಚಗಳೆಂದು ಪ್ರತಿಪಾದಿಸಿದ್ದಾರೆ. ೧೯೪೦ನೇ ಇಸವಿಯಲ್ಲಿ ಬ್ರಿಟನ್ನಿನ ಸಾಮಾನ್ಯ ಜನರೂ (Civilians) ನಿರಾಯುಧರಾಗಿದ್ದರಲ್ಲದೆ ಡನ್‌ಕರ್ಕ್ ರಣಾಂಗಣದಿಂದ ಹೆಚ್ಚು ಜನ ಸೈನಿಕರು ಶಸ್ತ್ರಾಸ್ತ್ರಗಳನ್ನು ಶತ್ರುಗಳ ಪಾಲುಮಾಡಿ ಹಿಂದಿರುಗಬೇಕಾಯ್ತು. ಜರ್ಮನರು ಬ್ರಿಟನ್ನಿನ ದಂಡಯಾತ್ರೆಯನ್ನು ವಿಮಾನ ಮುತ್ತಿಗೆಯ ಮೂಲಕ ನಡೆಸಿದಾಗ ಬ್ರಿಟನರು ಅಜೇಯತೆಯನ್ನು ಸಾಧಿಸಿದುದಕ್ಕೆ ಬ್ರಿಟನ್ ವೈಮಾನಿಕ ಪಡೆಯ ಅತುಲ ಸಾಹಸವೇ ಅಲ್ಲದೆ, ಬ್ರಿಟನರ ಧೈರ್ಯೋತ್ಸಾಹಗಳೇ ಹೆಚ್ಚು ಕಾರಣವೆಂದು ಧಾರಾಳವಾಗಿ ಹೇಳಬಹುದು. ವಿಜಯ ಸಾಧನೆಯಲ್ಲಿ, ಬ್ರಿಟಿಷ್ ಸೈನಿಕರು ಅಪಜಯದಲ್ಲಿಯೂ ಕೊರಗದಿರುವರೆಂಬ ಒಂದು ದೃಢ ನಂಬಿಕೆಯೇ ಒಂದು ಕಡೆ, ಅಸಮಸಾಹಸಿಗಳಾದ ಬ್ರಿಟಿಷ್ ಯೋಧರ ಪ್ರಯತ್ನವೇ ಒಂದು ಕಡೆ. ಆದುದರಿಂದ ಯುದ್ಧವು ಮುಂದುವರಿಯುತ್ತಿರುವ ಉತ್ಕಟ ಪರಿಸ್ಥಿತಿಯಲ್ಲಿ ಸಾಮಾನ್ಯ ಜನರು ಕಳವಳಕ್ಕೀಡಾಗಿ, ನಿರಾಧಾರವಾದ ವರ್ತಮಾನಗಳಿಗೆ ಕಿವಿಗೊಟ್ಟು ತಮ್ಮ ಪರವಾಗಿ ರಕ್ತಧಾರೆಯನ್ನು ರಣಕ್ಷೇತ್ರದಲ್ಲಿ ಹರಿಸುತ್ತಿರುವ ಸೈನಿಕರ ಧೈರ್ಯವನ್ನು ಕುಗ್ಗಿಸಬಾರದು. ಅನೇಕ ಪ್ರಚಾರಕರು, "ಭಾರತೀಯರನ್ನು ಶಕ್ತಿಹೀನರನ್ನಾಗಿ ಮಾಡಿರುವಾಗ ನಾವು ಯುದ್ಧ ಮಾಡಲಾಗುವುದೆಂತು." ಎಂಬ ಒಂದು ಹುಸಿ ವಾದವನ್ನು ಹುಟ್ಟಿಸಿ ಜನರ ಮನಸ್ಸನ್ನು ಕೆಡಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಎಂಥ ವಿಪರೀತ ಭಾವನೆಯಿದು! ಯಾವ ದೇಶದಲ್ಲೂ ಯಾವ ಕಾಲಕ್ಕೂ ಇಡೀ ಜನಸಮುದಾಯವೇ ಶಸ್ತ್ರಸಜ್ಜಿತವಾಗುವಂತೆ ಮಾಡುವುದು ಅಸಾಧ್ಯವಾದ ವಿಷಯ. ಪ್ರಪಂಚದ ಇತಿಹಾಸದಲ್ಲೇ ಇದಕ್ಕೆ ನಿದರ್ಶನಗಳಿಲ್ಲ. ಆಧುನಿಕ ಯುದ್ಧಜೀವನದಲ್ಲಂತೂ ಈ ಪರಿಸ್ಥಿತಿಯೊದಗುವುದು ಸ್ವಪ್ನಪ್ರಾಯವೆನಿಸಿದೆ. ಸೈನಿಕರನ್ನು ಶಸ್ತ್ರಸಜ್ಜಿತರನ್ನಾಗಿ ಮಾಡುವುದೇ ದುಸ್ತರವಾಗಿರುವಾಗ ಕೋಟ್ಯಂತರ ಸಾಮಾನ್ಯ ಪ್ರಜೆಗಳನ್ನು ಶಸ್ತ್ರಧಾರಿಗಳನ್ನಾಗಿ ಮಾಡುವುದು ಸಾಧ್ಯವೇ ?

೩. ದೇಶಾಭಿಮಾನ

ಈಗಿನ ಯುದ್ಧವು ಪ್ರಪಂಚವನ್ನೇ ವ್ಯಾಪಿಸಿರುತ್ತದೆ. ಪ್ರತಿಯೊಂದು ಜನಾಂಗವೂ ಒಂದಲ್ಲದಿದ್ದರೊಂದು ರೀತಿಯಿಂದ ಈ ಯುದ್ಧದಲ್ಲಿ ಭಾಗ ವಹಿಸಲೇ ಬೇಕಾಗಿದೆ. ಆದಮೇಲೆ ದೇಶದ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಯಾವುದಾದರೂ ಒಂದು ರೀತಿಯಲ್ಲಿ ದೇಶರಕ್ಷಣೆಯ ಕಾರ್ಯದಲ್ಲಿ ನೆರವಾಗಿ ನಿಲ್ಲಲೇಬೇಕಾಗುತ್ತದೆ. ಯುದ್ಧ ನಡೆಯುತ್ತಿರುವ ಕಾಲದಲ್ಲಿ ಶತ್ರುಗಳು, ಸೈನಿಕರು ಯಾರೆಂಬುದನ್ನಾಗಲಿ ಅಥವಾ ಸೈನಿಕರಲ್ಲದವರು ಯಾರೆಂಬುದನ್ನಾಗಲಿ ನೋಡುವುದಿಲ್ಲ. ಗಂಡಸರು ಹೆಂಗಸರು ಮತ್ತು ಮಕ್ಕಳೆಂಬ ಭೇದ ಮಾಡುವುದಿಲ್ಲ. ಇದು ದೇವಾಲಯ, ಇದು ಮಸೀದಿ ಮತ್ತು ಇದು ಪ್ರಾರ್ಥನಾಮಂದಿರ ಎಂಬ ವ್ಯತ್ಯಾಸವನ್ನೇ ಅರಿಯುವುದಿಲ್ಲ. ಬೇರೆ ಬೇರೆ ಜಾತಿ ಮತಗಳಿಗೆ ಸೇರಿದವರೆಂದು ಅಥವಾ ಬೇರೆ ಬೇರೆ ರಾಜಕೀಯ ಪಂಗಡಗಳಿಗೆ ಸೇರಿದವರೆಂಬ ವಿವೇಚನೆಯನ್ನೂ ಮಾಡುವುದಿಲ್ಲ. ಈ ರೀತಿಯ ಯುದ್ಧದಲ್ಲಿ ತೊಂದರೆಗಳಿಗೆ ಒಳಗಾಗತಕ್ಕವರು ಯಾರಾದರೂ ಆಗಿರಬಹುದು. ಶತ್ರುಭಯವು ವಿಶ್ವವ್ಯಾಪಿಯಾಗಿ ಕಾಡಿದೆ. ಇದು [illegible] ದೇಶದಲ್ಲಿರತಕ್ಕ ಪ್ರತಿಯೊಬ್ಬರೂ ದೇಶಾಭಿಮಾನ ಪ್ರೇರಿತರಾಗಿ ರಕ್ಷಣಾ ದಳಗಳಿಗೆ ಸೇರಿಕೊಂಡು ಶಿಸ್ತಿನಿಂದ ಜನತಾ ಸೇವೆಯನ್ನು ಮಾಡಬೇಕಾಗಿದೆ. ವಿಪತ್ತು ಸನ್ನಿಹಿತವಾದ ಕಾಲದಲ್ಲಿ ಧೈರ್ಯದಿಂದ ಕೆಲಸ ಮಾಡಿ ದೇಶರಕ್ಷಣೆಗೆ ನೆರವಾಗಿ ನಿಲ್ಲಬೇಕು. ಇಂಥ ಸೇವೆಗೆ ತಕ್ಕ ಪ್ರತಿಫಲವನ್ನಾಗಲಿ, ಸೂಕ್ತವಾದ ಬೆಲೆಯನ್ನಾಗಲಿ ನಿರ್ಧರಿಸುವುದು ಅಸಾಧ್ಯ. ಮುಖ್ಯವಾಗಿ ಪ್ರತಿಯೊಬ್ಬರ ಹೃದಯದಲ್ಲಿಯೂ ದೇಶಾಭಿಮಾನವು ಹಾಲು ಉಕ್ಕುವಂತೆ ಉಕ್ಕುತ್ತಿರಬೇಕು. ದೇಶಾಭಿಮಾನವಿಲ್ಲದ ಮನುಷ್ಯನು ಬದುಕಿದ್ದರೂ ವ್ಯರ್ಥನೇ ಸರಿ. ಈ ದೇಶಾಭಿಮಾನ ಎಂಬುದೇ ಭಿನ್ನ ಭಿನ್ನ ಜಾತಿ ಮತಗಳಿಗೆ ಸೇರಿರುವವರ ಹೃದಯಗಳನ್ನು ಕೂಡಿಸಿ ಹಿಡಿಯಬೇಕು. ನಾವು ಪರಸ್ಪರ ಸಹಾಯ ಮಾಡಿ ಅನ್ಯೋನ್ಯ

ರಕ್ಷಣೆಯನ್ನು ಮಾಡಿಕೊಳ್ಳುವುದರಲ್ಲಿ ದೇಶಾಭಿಮಾನವೇ ನಮ್ಮನ್ನು ಪ್ರೇರಿಸಬೇಕು ನಮ್ಮ ದೇಶದ ಎಲ್ಲ ಪ್ರಜೆಗಳೂ ಈ ರಾಷ್ಟ್ರೀಯ ರಕ್ಷಣಾ ದಳಗಳಿಗೆ ಸೇರಿಕೊಂಡು ಸುವ್ಯವಸ್ಥಿತವಾದ ರೀತಿಯಲ್ಲಿ ದೇಶಸೇವೆಯನ್ನು ಮಾಡಲು ಸಿದ್ಧರಾಗಿ ಬರಬೇಕು. ದೇಶಾಭಿಮಾನವೇ ನಮ್ಮ ಜೀವನದ ಮುಂಬೆಳಕಾಗಿರಲಿ ! ನಮ್ಮ ಅಂತ್ಯ ಧ್ಯೇಯವಾಗಿರಲಿ ನಮಗೆ ಎಂಥ ಎಡರು ತೊಡರುಗಳು ಸಂಭವಿಸಿದರೂ, ಕಷ್ಟಕಾರ್ಪಣ್ಯಗಳು ಒದಗಿದರೂ ನಾವು ಧೈರ್ಯಗೆಡದೆ ಧೃತಿಗೆಡದೆ ದೇಶಾಭಿಮಾನದಿಂದ ಮುನ್ನುಗ್ಗಿ ದೇಶಸೇವೆ ಮಾಡಲೇಬೇಕು ದೇಶಾಭಿಮಾನವೇ ರಾಷ್ಟ್ರದ ಅಂತಃಶಕ್ತಿ ಈ ಅಂತಃಶಕ್ತಿಯೇ ಹೊರಗಡೆಯಲ್ಲಿ ಐಕಮತ್ಯವಾಗಿ ಪರಿಣಮಿಸುತ್ತದೆ ದೇಶಾಭಿಮಾನವೇ ಜನಾಂಗದ ಜೀವಾಳ ದೇಶಾಭಿಮಾನ ಹೊಂದಿದ್ದರೆ ಸಾಕು, ಯಾವ ಫಿರಂಗಿಯ ಹೊಡೆತವೂ ಅದನ್ನು ಕರಗಿಸಲಾರದು ಅದುದರಿಂದ ಈಗಿನ ಪರಿಸ್ಥಿತಿಯಲ್ಲಿ ನಾವು ಜನಗಳ ದೇಶಾಭಿಮಾನವನ್ನು ಹೊರಹೊಮ್ಮಿಸಿ ಜನತೆಯಲ್ಲಿ ಕ್ಷಾತ್ರ ಮನೋಧರ್ಮವನ್ನು ಬೆಳೆಯಿಸಬೇಕು ದೇಶಾಭಿಮಾನ ಮತ್ತು ಕ್ಷಾತ್ರ ಮನೋಧರ್ಮ—ಈ ಎರಡೂ ಜನಾಂಗದ ಶ್ರೇಯಸ್ಸಿಗೆ ಮುಖ್ಯ ಸಾಧನಗಳು ಒಂದು ಪಕ್ಷಿಗೆ ಎರಡು ರೆಕ್ಕೆಗಳಿರುವಂತೆ ಯಾವುದೊಂದು ರಾಷ್ಟ್ರದ ಶ್ರೇಯಸ್ಸಿಗೇ ಆಗಲಿ ದೇಶಾಭಿಮಾನ ಮತ್ತು ಕ್ಷಾತ್ರ ಮನೋಧರ್ಮ ಈ ಎರಡು ಗುಣಗಳೂ ಇರಬೇಕು ಯಾವುದೊಂದು ರೆಕ್ಕೆಯು ಭಗ್ನವಾದರೂ ಪಕ್ಷಿಯು ಆಕಾಶದಲ್ಲಿ ನಿರಾತಂಕವಾಗಿ ಹಾರಲಾರದು ಅದರಂತೆಯೇ ಈ ಎರಡು ಗುಣಗಳಲ್ಲಿ ಯಾವುದೊಂದು ನಮ್ಮಲ್ಲಿ ಇಲ್ಲದೆಹೋದರೂ ನಮ್ಮ ನಾಡಿನ ಉದ್ಧಾರವಾಗಲಾರದು ದೇಶಾಭಿಮಾನವಿಲ್ಲದ ಜನಾಂಗವು ಹುಳು ಹಿಡಿದ ಮರದಂತೆ ನಿಷ್ಪ್ರಯೋಜನವಾದುದು ನಿರರ್ಥಕವಾದುದು ನಮ್ಮ ನಾಡಿನಲ್ಲಿ ಇಂದು ಮಹತ್ವಸ್ಥಾನದ ಅಧಿಕಾರ ವರ್ಗದವರು, ಕಾರ್ಮಿಕರು, ಶ್ರೀಮಂತರು, ಬಡವರು, ವರ್ತಕರು, ಮಾಸ್ತರು ವಕೀಲರು, ಹೆಂಗಸರು, ಮಕ್ಕಳು ಎಲ್ಲರಲ್ಲಿಯೂ ದೇಶಾಭಿಮಾನವು ತುಂಬಿ ತೊರೆಯಂತೆ ಉಕ್ಕಿ ಹರಿಯಬೇಕು ಅಜ್ಜನ ಊರುಗೋಲು ವಜ್ರಾಯುಧವಾಗಬೇಕು ರೈತನ ನೇಗಿಲು ಹಲಾಯುಧವಾಗಬೇಕು. ಸನ್ಯಾಸಿಯ ಯೋಗದಂಡವು ಕೋದಂಡವಾಗಬೇಕು ನಮ್ಮ ಹೃದಯದಲ್ಲಿ ದೇಶಾಭಿಮಾನವು ಮೂಡಿ ಕ್ಷಾತ್ರ ಮನೋಧರ್ಮವು ಕಾರ್ಮುಗಿಲ ಮಧ್ಯೆ ಮಿಂಚು ಹೊಳೆದಂತೆ ಹೊಳೆಯಬೇಕು ನಮ್ಮ ಜನತೆಯು ರಾಷ್ಟ್ರಶಕ್ತಿಯನ್ನು ಒಂದೇ ಮುಖದ ಕಡೆಗೆ ತಿರುಗಿಸಿ ಅವರಲ್ಲಿ ಕ್ಷಾತ್ರ ಮನೋಧರ್ಮವನ್ನು ಬೆಳೆಯಿಸಿ ದೇಶಾಭಿಮಾನವನ್ನು ಉತ್ತೇಜಿಸಬೇಕಾದರೆ ನಾವೆಲ್ಲರೂ ಐಕ್ಯಕ ವೀರರಾಗಿ ನಿಂತು ರಾಷ್ಟ್ರೀಯ ರಕ್ಷಣಾದಳಗಳನ್ನು ಏರ್ಪಡಿಸಿಕೊಂಡು ಸುವ್ಯವಸ್ಥಿತವಾದ ಮಾರ್ಗದಲ್ಲಿ ನಮ್ಮ ದೇಶವನ್ನು ಕಾಪಾಡಲು ಈಗಿಂದಲೇ ಪ್ರವರ್ತಿಸಿಕೊಳ್ಳಬೇಕು ಈ ಉದ್ದೇಶಕ್ಕಾಗಿಯೇ ಸರ್ಕಾರದವರು “ National War Front ” ಎಂಬ ವ್ಯವಸ್ಥೆಯನ್ನು ಏರ್ಪಡಿಸಿರುವರು.

೪ ಸಂಚುಕೋರರ ಮತ್ತು ಹಿತಶತ್ರುಗಳ ಕಾರ್ಯಾಚರಣೆ

(Fifth Column Activities)

ಇಂದಿನ ಘೋರ ಯುದ್ಧದಲ್ಲಿ “ Fifth Column ” ಎಂಬ ಅಸಾಧಾರಣವಾದ ಶಬ್ದ ಪ್ರಯೋಗವು ವಿಶೇಷ ರೀತಿಯಲ್ಲಿ ಜಾರಿಯಲ್ಲಿದೆ ಇದರ ನಿಜವಾದ ಅರ್ಥವನ್ನು ಗ್ರಹಿಸಿದವರ ಸಂಖ್ಯೆ ಕಮ್ಮಿ ಇದನ್ನು ದುರುಪಯೋಗಪಡಿಸುತ್ತಿರುವವರ ಸಂಖ್ಯೆಯೇ ಅಪಾರ. ಇದರ ಸ್ವರೂಪ, ಉದ್ದೇಶ, ಕಾರ್ಯಕ್ರಮ, ಕಾರ್ಯಸಾಧನೆಯ ವಿಧಾನ ಇವುಗಳನ್ನೆಲ್ಲಾ ಆಮೂಲಾಗ್ರವಾಗಿ ಪರಿಶೀಲಿಸಿ ನಮ್ಮ ನಾಡಿನ ಜನರನ್ನು ಎಚ್ಚರಗೊಳಿಸುವುದು ರಾಷ್ಟ್ರೀಯ ರಕ್ಷಣಾ ವ್ಯವಸ್ಥೆಯ (National War Front) ಚಾಲಕರ ಕರ್ತವ್ಯ. ಈ ಕಾರ್ಯವು ಅಗತ್ಯವೂ, ಅನಿವಾರ್ಯವೂ ಎಂದು ಮತ್ತೆ ಹೇಳಬೇಕಾಗಿಲ್ಲ—ನಮ್ಮ ಜನರನ್ನು ಈ ಕಾರ್ಯಾಚರಣೆಯಿಂದಾಗುವ ದುಷ್ಪರಿಣಾಮಗಳಿಂದ ತಪ್ಪಿಸುವ ಸಂದರ್ಭದಲ್ಲಿ ಶತ್ರುಗಳನ್ನು ಎಚ್ಚರಗೊಳಿಸಿ, ನಮ್ಮ ಕಾರ್ಯಸಾಧನೆಗೆ ವಿಘ್ನಬರದಂತೆ ಮಾಡಿಕೊಳ್ಳಬಾರದು ಶತ್ರುಗಳು ನಮ್ಮ ರಾಷ್ಟ್ರದ ಜನರ ಉತ್ಸಾಹವನ್ನು ಕುಗ್ಗಿಸಿ, ಕೋಲಾಹಲ ಕಳವಳವನ್ನು ಉತ್ಪನ್ನಮಾಡಿ, ನಿರಾಶಾಭಾವನೆಯನ್ನು ಪ್ರಕಾಶಗೊಳಿಸಿ, ಅಪಪ್ರಚಾರದ ಮೂಲಕ ರಾಷ್ಟ್ರಬಲವನ್ನೇ ತೇಜೋವಿಹೀನವಾಗುವಂತೆ ಮಾಡುವುದೇ ಈ ಐದನೆ ಪಡೆಯ ಉದ್ದೇಶ. ಶತ್ರುಗಳ ಆಕ್ರಮಣಕ್ಕೆ ಅವಕಾಶಕೊಟ್ಟು, ಸ್ವರಾಷ್ಟ್ರವನ್ನು ಪರರಾಷ್ಟ್ರಕ್ಕೆ ಒಪ್ಪಿಸುವ ಸನ್ನಿವೇಶವೇ ಈ ಕೃತ್ರಿಮೋಪಾಯದ ಸಾರಸರ್ವಸ್ವ. ದೇಶದ್ರೋಹದಿಂದ, ವಿಶ್ವಾಸಘಾತುಕತನದಿಂದ ಪ್ರೇರಿತರಾದ ಸಂಚುಕೋರರು ಮತ್ತು ಹಿತಶತ್ರುಗಳ ಸಹಾಯದಿಂದಲೇ ಪರಕೀಯರು ಮಾತೃಭೂಮಿಯಲ್ಲಿ ಬೇರೂರಿ, ಕಾಲಕ್ರಮದಲ್ಲಿ ದೇಶವನ್ನೇ ಸೂರೆಗೊಳ್ಳುವರು. ಲಂಚ, ರುಷುವತ್ತು, ಮೋಸ, ಕುಟಿಲೋಪಾಯ ಇವೇ ಮುಖ್ಯ ಸಾಧನಗಳು.

ನಿರಾಧಾರವಾದ ಸುಳ್ಳು ವರ್ತಮಾನಗಳನ್ನು ಹಬ್ಬಿಸುವುದು, ಅಪಪ್ರಚಾರದ ಮೂಲಕ ಯುದ್ಧದ ನಿಜಾಂಶವನ್ನು ಮರೆಮಾಚಿ, ಶತ್ರುಗಳಿಗೇ ಜಯವಾಗುತ್ತಿದೆ ಎಂದು ಸಿದ್ಧಾಂತಗೊಳಿಸುವುದು, ಶತ್ರುನಿಗ್ರಹಕಾರ್ಯದಲ್ಲಿ, ದೇಶಸೇವಾನಿರತರ ಧೈರ್ಯವನ್ನು ಕುಂದಿಸಿ, ಕುಂದಿಸಿ ನಿರಾಶೆಯು ತಲೆದೋರುವಂತೆ ಮಾಡುವುದು, ರಾಷ್ಟ್ರರಕ್ಷಣೆಗೆ ಸುಸಜ್ಜಿತವಾದ ಯೋಜನೆಯನ್ನು ಕೃಶಗೊಳಿಸಿ, ಸೇನಾದಳಗಳ ರಚನೆಯನ್ನು ಸಡಿಲಿಸುವದು, ಸೈನ್ಯಕ್ಕಾಗಿ ಸೇರಲಿರುವ ಉಮೇದುವಾರರನ್ನು ಹಿಂಜರಿಯುವಂತೆ ಮಾಡಿ, ಸೈನಿಕರನ್ನು ಸಂಗ್ರಹಿಸುವ ಕಾರ್ಯಕ್ಕೆ ಅಡ್ಡಿ ಬರುವುದು—ಇವು ಈ ಪಂಗಡದವರ ಸ್ವಭಾವವೆನ್ನಬಹುದು ನಿಜವಾಗಿಯೂ ಶತ್ರುಗಳು ಬೆಂಕಿ ಬಾಂಬು, ವಿಮಾನದಾಳಿಯನ್ನು ನಡೆಸಿ,ಬಾಂಬುಗಳಿಂದ ಆಸ್ತಿಪಾಸ್ತಿಗಳನ್ನು ನಾಶಪಡಿಸುವುದಕ್ಕಿಂತಲೂ, ಪ್ರಬಲತರವಾದ ಅನಾಹುತವನ್ನು ಈ ಸುಳ್ಳು ವರ್ತಮಾನಗಳು ಉಂಟುಮಾಡಬಲ್ಲವು ಎಂಬುವದನ್ನು ಮರೆಯಲಾಗದು ಭ್ರಾಂತಿಯುತವಾದ ಸುಳ್ಳು ವದಂತಿಯು,ಜನತೆಯ ನೈತಿಕ ಬಲವನ್ನೇ ನಾಶಪಡಿಸಬಲ್ಲದು. ಧೈರ್ಯ ಸ್ಥೈರ್ಯಗಳನ್ನೇ ನಿರ್ಮೂಲಗೊಳಿಸಬಲ್ಲದು

ಅನೇಕ ಸಂದರ್ಭದಲ್ಲಿ ಈ ಪಂಗಡಕ್ಕೆ ಯಾರು ಸೇರಿದ್ದಾರೆ, ಯಾರು ಸೇರಿಲ್ಲ ಎಂದು ಹೇಳಲುಸಾಧ್ಯವಿಲ್ಲ ಶತ್ರುಪಕ್ಷದವರೇ,ಇಂಥವರೇ ಎಂದು ಹೇಳಲಾಗದ ಬೇಲಿ ಎದ್ದು ಹೊಲದಲ್ಲಿನ ಮೇವನ್ನು ಸೂರೆಗೊಂಡ ಪರಿಸ್ಥಿತಿ ಎನ್ನಬಹುದು ಅಧಿಕಾರವರ್ಗದವರು, ಸರ್ಕಾರಿ ನೌಕರರು ವರ್ತಕರು ಕೈಗಾರಿಕೆಗಳಲ್ಲಿ ನಿರತರಾದ ಕೆಲವರು, ಇನ್ನಿತರ ವಿದ್ಯಾವಂತರು,ಅವಿದ್ಯಾವಂತರಾದ ಖಾಸಗೀ ಜನರು, ಈ ಚಳವಳಿಗೆ ಬೆಂಬಲಕೊಡುತ್ತಿರಬಹುದು ಉದಾಹರಣೆಗಾಗಿ ಇರಾಕಿನಲ್ಲಿ ಸಾಬೂನಿನ ಕಾರ್ಖಾನೆಯ ಮಾಲೀಕರೊಬ್ಬರು, ಸರ್ಕಾರಿ ಆರೋಗ್ಯಶಾಖೆಯ ವೈದ್ಯರು, ಪಾಠಶಾಲೆಯ ಅಧ್ಯಕ್ಷರು, ಉಪಾಧ್ಯಾಯರುಗಳು, ವರ್ತಕರಲ್ಲಿ ಹಲವರು, ಶತ್ರುಗಳೊಡನೆ ಸಹಕರಿಸಿ, ಬೆಂಬಲಕೊಡುತ್ತಿದ್ದ ವಿಷಯವನ್ನು ಬ್ರಿಟಿಷರು ಗುರ್ತಿಸಿ ಶಿಕ್ಷೆಗೊಳಪಡಿಸಬೇಕಾಯ್ತು ಇದೇ ರೀತಿಯಲ್ಲಿ ಬರ್ಮಾ, ಮಲಯ, ಸಿಂಗಪುರ ಇತ್ಯಾದಿ ಪ್ರದೇಶಗಳಲ್ಲಿ ಶತ್ರುಗಳ ಜಯಕ್ಕೆ ಆಯಾ ಸ್ಥಳದ ಸಂಚುಕಾರರ ಕೃತ್ರಿಮವೇ ಪ್ರಬಲ ಕಾರಣವೆಂದು ನಿರ್ಧರಿಸಲಾಗಿದೆ

ಈ ಪಂಗಡದವರ ಕಾರ್ಯಾಚರಣೆಯಲ್ಲಿ ಭಾಗವಹಿಸತಕ್ಕವರು ತಿಳಿದೋ, ತಿಳಿಯದೆಯೋ ಅಲ್ಪ ಸ್ವಲ್ಪ ಆಸೆಯೋತ್ತರಗಳಿಗಾಗಿ, ತಮ್ಮ ಜನ್ಮಭೂಮಿಯ ಸ್ವಾತಂತ್ರ್ಯವನ್ನು ಶತ್ರುಗಳಿಗೆ ಮಾರಾಟ ಮಾಡಲು ಸಿದ್ಧರಾಗಿದ್ದಾರೆ ವಿದ್ಯಾವಂತರು ಚತುರರು, ಕಲ್ಪನಾಶಕ್ತಿಯುಳ್ಳವರು, ಶತ್ರುಗಳಿಗೆ ಸಹಾಯ ಮಾಡಲು ಯಾರ ಭಯವಿಲ್ಲದಂತಹ ಅನೇಕ ಮಾರ್ಗಗಳನ್ನು ತೆರೆಯಲು ಮಾಡುತ್ತಿದ್ದಾರೆ. ಅಪಪ್ರಚಾರದ ಸ್ವರೂಪವನ್ನು ಈ ಕೆಳಗೆ ಸೂಚಿಸಲಾಗಿದೆ —

ಯುದ್ಧವು ಪರಿಣಾಮಕಾರಿಯಾಗಿ ನಡೆಯುತ್ತಿರುವಾಗ, ನಮ್ಮ ಪಕ್ಷದ ನೌಕಾಬಲವಾಗಲೀ, ವಿಮಾನ ಪಡೆಯಾಗಲೀ ಪದಾತಿ ಸೈನ್ಯಗಳಾಗಲಿ ರಣಾಂಗಣದಲ್ಲಿ ಶೋಚನೀಯವಾಗಿ ಪರಾಜಯವನ್ನು ಹೊಂದಿದವು ಎಂಬ ವದಂತಿಯನ್ನು ಹಬ್ಬಿಸುವದು.

ಪ್ರಖ್ಯಾತರಾದ ಸೇನಾನಾಯಕರಾಗಲಿ, ರಾಜ ಪ್ರಮುಖರಾಗಲಿ, ಪ್ರಜಾಮುಖಂಡರಾಗಲಿ ವಿಮಾನದಾಳಿಯಲ್ಲಿ ಮಡಿದವರು, ಶತ್ರು ಪಕ್ಷವನ್ನು ಸೇರಿಕೊಂಡರು ಎಂಬ ವರ್ತಮಾನವನ್ನು ಹುಟ್ಟಿಸುವುದು ,

ಯುದ್ಧ ಸಹಾಯಕ್ಕಾಗಿ ಸಿದ್ಧರಾದವರು ಸಂಸ್ಥಾನದ ಉತ್ಪತ್ತಿಯಲ್ಲಿ ಲಕ್ಷಾಂತರ ರೂಪಾಯಿಗಳನ್ನು ಗೋಪ್ಯವಾಗಿ ಜನಾಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಖರ್ಚುಮಾಡುತ್ತಿದ್ದಾರೆ, ಕಂದಾಯವನ್ನು ಹೆಚ್ಚಿಸಿದ್ದಾರೆ, ದವಸಧಾನ್ಯಗಳನ್ನು ಬಲಾತ್ಕಾರವಾಗಿ ವಶಪಡಿಸಿಕೊಂಡಿದ್ದಾರೆ, ಗ್ರಾಮಾಂತರಗಳಲ್ಲಿ, ಪಟ್ಟಣಗಳಲ್ಲಿ ಸೈನಿಕರನ್ನು ಸಂಗ್ರಹಿಸಿ ಅವರ ಖರ್ಚುವೆಚ್ಚವನ್ನು ಸರ್ಕಾರದವರೇ ಕೊಡುತ್ತಿದ್ದಾರೆ ಎಂಬ ಸುಳ್ಳುವಾದವನ್ನು ಹೂಡುವುದು ,

ಹಿಂದೂ ಮುಸಲ್ಮಾನ್ ಬಾಂಧವರಲ್ಲಿ ವೈಮನಸ್ಸನ್ನು ಹಬ್ಬಿಸುವದು, ಸೈನಿಕರು ನಾಗರಿಕರ ಹೆಂಗಸರ ಮಾನಭಂಗಮಾಡಿದರೂ ಸರ್ಕಾರದವರಾಗಲಿ, ಸೈನ್ಯಾಧಿಪತಿಗಳಾಗಲಿ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲಿಲ್ಲ ಎಂಬ ಅಪಪ್ರಚಾರ ನಡೆಸುವದು ,

ಶತ್ರುಗಳು ಗೊತ್ತಾದ ಯಾವುದೋ ತಾರೀಖಿನ ದಿನ ವಿಮಾನದಾಳಿ ನಡೆಸುವವರಿದ್ದಾರೆ ನಾಗರಿಕರೆಲ್ಲಾ ಮನೆಮಠಗಳನ್ನು ಬಿಟ್ಟು ಹೊರಡಿ ಎಂದು ಕರಪತ್ರಿಕೆಗಳ ಮೂಲಕ ಎಚ್ಚರ ಕೊಡುವುದು ,

ಇವೇ ಈ ಪಂಗಡದವರ ಅಪಪ್ರಚಾರದ ವಿಧಾನಗಳು ಸುಳ್ಳು ಹೇಳುವುದಕ್ಕೂ ಒಂದು ಪರಿಮಿತಿ ಇರಬೇಕು ಅದರ ಕೇವಲ ಅಲ್ಪವಾದ ವಿಷಯವನ್ನೇ ಗಮನಾರ್ಹವೆಂದು ಭಾವಿಸಿ, ಮಹತ್ವವಾದುದೆಂದು ಅದಕ್ಕೆ ಬಣ್ಣಕಟ್ಟಿ ಕಲ್ಪನಾ ಪ್ರಪಂಚದ ಶಿಖರವನ್ನೇರಿಸಿ ಪ್ರಚಾರಮಾಡತಕ್ಕ ಸುಳ್ಳಿನಿಂದ ಅನರ್ಥವಾಗುವದರಲ್ಲಿ ಸಂದೇಹವಿಲ್ಲ ಈ ವಿಧವಾದ ಸುಳ್ಳಿನಿಂದಲೇ ಬೆಂಗಳೂರಿನ ಅನೇಕ ಪ್ರಜಾಜನರು ಮನೆಮಠಗಳನ್ನು ತ್ಯಜಿಸಿ, ವ್ಯಾಪಾರ ವ್ಯವಹಾರಗಳನ್ನು ನಿರ್ಲಕ್ಷಿಸಿ ಗ್ರಾಮಾಂತರ ಯಾತ್ರೆಯನ್ನು ಕೈಗೊಂಡರು.

ಈ ವಿಧವಾದ ಶತ್ರುಗಳ ಯುದ್ಧ ನೀತಿಯನ್ನು ಸೂಕ್ತರೀತಿಯಲ್ಲಿ ಎದುರಿಸಬೇಕಾದರೆ —

ಸುಳ್ಳು ವರ್ತಮಾನಗಳ ನಿಜಾಂಶವನ್ನು ನಿರ್ಧರಿಸುವವರೆಗೂ ಅವುಗಳಿಗೆ ಕಿವಿಗೊಡಬಾರದು

ಮಿತ್ರಪಕ್ಷದವರಿಗೇ ಜಯಲಾಭವು ಸಿದ್ಧವೆಂಬ ದೃಢನಂಬಿಕೆಯನ್ನು ದಿನೇದಿನೇ ಅಭಿವೃದ್ಧಿಗೊಳಿಸುವದು

ಸೈನಿಕರು, ಭಾರತೀಯರಾಗಲಿ, ಬ್ರಿಟಿಷರಾಗಲಿ, ಅಮೆರಿಕಾದವರಾಗಲಿ ಅವರೆಲ್ಲರ ವಿಷಯದಲ್ಲಿ ಸಹಾನುಭೂತಿಯನ್ನು ತೋರ್ಪಡಿಸುವದು. ಅವರ ರೀತಿನೀತಿಗಳನ್ನು ಸರಿಪಡಿಸುವ ಉಪಾಯವನ್ನು ಕಂಡುಹಿಡಿಯುವುದು.

ರಾಷ್ಟ್ರದ ಒಳರಕ್ಷಣೆಯ ಕಾರ್ಯದಲ್ಲಿ ಪ್ರತಿಯೊಬ್ಬರೂ ಭಾಗವಹಿಸಿ, ಯಥಾಶಕ್ತಿ ಸಹಾಯಮಾಡುವದು.

ದೇಶದ ಹಿತದೃಷ್ಟಿಯಿಂದ ಅನುಮಾನಾಸ್ಪದವಾದ ಯಾವ ಕಾರ್ಯಾಚರಣೆಯು ಗಮನಕ್ಕೆ ಬಂದೊಡನೆ ಸರ್ಕಾರದವರ ಗಮನಕ್ಕೆ ತರುವದು

೫ ‘ ನ್ಯಾಷನಲ್ ವಾರ್ ಫ್ರಂಟ್ ”

(ರಾಷ್ಟ್ರೀಯ ರಕ್ಷಣಾ ವ್ಯವಸ್ಥೆ).

ಯಾವ ಜನಾಂಗವೇ ಆಗಲಿ ಯಾವ ಧರ್ಮವೇ ಆಗಲಿ ಕ್ಷಾತ್ರತೇಜೋವಿಹೀನವಾಗಿಲ್ಲವೆಂಬುದನ್ನು ನಾವು ಮರೆಯಬಾರದು ಈಗ ನಾಡಿನ ಎಲ್ಲ ಪಂಗಡದವರೂ ಯುದ್ಧ ಮನಃಪ್ರವೃತ್ತಿಯನ್ನು ಬೆಳೆಯಿಸಿಕೊಳ್ಳಬೇಕು ಅದಕ್ಕಾಗಿಯೇ ದೊಡ್ಡ ದೊಡ್ಡ ನಗರಗಳಲ್ಲಿಯೂ ಸಣ್ಣ ಪುಟ್ಟ ಹಳ್ಳಿಗಳಲ್ಲಿಯೂ ಸಹ ನ್ಯಾಷನಲ್ ವಾರ್ ಫ್ರಂಟ್ ವ್ಯವಸ್ಥೆಯನ್ನು ಏರ್ಪಡಿಸಿಕೊಂಡು ಎಲ್ಲ ಜನರೂ ಏಕೀಭವಿಸಿ ಶಿಸ್ತಿನಿಂದಲೂ, ಕಾಳಜಿಯಿಂದಲೂ ದೇಶರಕ್ಷಣೆಯ ಕಾರ್ಯಗಳನ್ನು ನಡೆಯಿಸಬೇಕು. ಈ ಕಾರ್ಯದಲ್ಲಿ ಎಲ್ಲ ಜಾತಿಯವರೂ, ಎಲ್ಲ ವಯಸ್ಸಿನವರೂ, ಹೆಂಗಸರೂ ಮಕ್ಕಳೂ ಸೇರಿ ಕೆಲಸಮಾಡಲು ಅವಕಾಶವುಂಟು. ಸರ್ಕಾರಿ ಅಧಿಕಾರಿಗಳೂ, ವಕೀಲರುಗಳೂ, ವರ್ತಕರೂ, ವ್ಯವಸಾಯಗಾರರೂ ಮತ್ತು ಕೂಲಿಗಾರರೂ ಸಹ, ಹಿಂದುಗಳು—ಮುಸಲ್ಮಾನರೆಂಬ ಭಿನ್ನಭಾವನೆಯಿಲ್ಲದೆ ಸೇರಿಕೊಂಡು ರಾಷ್ಟ್ರಸೇವೆಯನ್ನು ಮಾಡಬೇಕು ಪ್ರತಿಯೊಂದು ಜಿಲ್ಲೆಯ ಕಸಬೆಯಲ್ಲಿಯೂ ತಾಲ್ಲೂಕು ಕಸಬೆಯಲ್ಲಿಯೂ ಇಂಥ ಸೇವಾದಳಗಳನ್ನು ಏರ್ಪಡಿಸಿಕೊಂಡು ಸಾಧ್ಯವಾದಷ್ಟು ಪ್ರಚಾರಕಾರ್ಯವನ್ನು ತೀವ್ರವಾಗಿ ನಡೆಯಿಸಬೇಕು. ಜನರ ಆತ್ಮಸ್ಥೈರ್ಯವನ್ನು ಹೆಚ್ಚಿಸಿ ಅವರಲ್ಲಿ ಸಂದೇಹ ಸಂಶಯಗಳಿಗೆ ಅವಕಾಶವಿಲ್ಲದಂತೆ ಮಾಡಿ ಅವರ ಮನಸ್ಸನ್ನು ಯುದ್ಧಜೀವನದಲ್ಲಿ ತೊಡಗಿಸಬೇಕು. ನಮ್ಮ ಸಂಸ್ಥಾನದಲ್ಲಿರತಕ್ಕ ಪ್ರತಿಯೊಂದು ಮಹಿಳಾಸಮಾಜದಲ್ಲಿಯೂ ಸ್ತ್ರೀಯರು ಇದೇ ರೀತಿಯ ಸೇವಾದಳಗಳನ್ನು ಏರ್ಪಡಿಸಿಕೊಂಡು ಸ್ತ್ರೀಯರ ಮನಸ್ಸಿನಲ್ಲಿರತಕ್ಕ ಭಯ ಭೀತಿಗಳನ್ನು ನಿವಾರಿಸಿ ಅವರೆಲ್ಲರೂ ಈಗಿನ ಸಂದರ್ಭದಲ್ಲಿ ವೀರವನಿತೆಯರಂತೆ ನಿಂತು ದೇಶಸೇವಾ ಕಾರ್ಯವನ್ನು ಮಾಡಲು ಸಿದ್ಧರಾಗುವಂತೆ ಹುರಿದುಂಬಿಸಬೇಕು ಇಂಥ ವೀರದಳಗಳನ್ನು ವಿದ್ಯಾರ್ಥಿಗಳು ಏರ್ಪಡಿಸಿಕೊಳ್ಳಬೇಕಾದ ಅತ್ಯಾವಶ್ಯಕತೆಯೆಂಬುದನ್ನು ನಾನು ಹೇಳಬೇಕಾಗಿಲ್ಲ ಪ್ರತಿಯೊಂದು ಕಾಲೇಜಿನಲ್ಲಿಯೂ, ಹೈಸ್ಕೂಲಿನಲ್ಲಿಯೂ, ಮಿಡ್ಲ್ ಸ್ಕೂಲಿನಲ್ಲಿಯೂ, ಸಹ ವಿದ್ಯಾರ್ಥಿಗಳು ಶಿಸ್ತಿಗೆ ಒಳಪಟ್ಟು ಇಂಥ ರಾಷ್ಟ್ರೀಯ ರಕ್ಷಣಾದಳಗಳಲ್ಲಿ ಭಾಗವಹಿಸಬೇಕು ಇದರಿಂದ ಒಟ್ಟು ಜನಾಂಗವೇ ಒಂದುಗೂಡಿ ಆಪತ್ಕಾಲದಲ್ಲಿ ಎದೆಗೆಡದೆ ದೇಶಸೇವಾ ಕಾರ್ಯವನ್ನು ನಡೆಯಿಸಲು ಸಹಾಯವಾಗುತ್ತದೆ ನಮ್ಮ ಮನಸ್ಸಿನಲ್ಲಿ ಯುದ್ಧಮನೋಧರ್ಮವು ಬೆಳೆಯಲು ಅನುಕೂಲವಾಗುತ್ತದೆ ವಿಶೇಷತಃ ಈ ಏರ್ಪಾಡು ಪ್ರಜಾಜನರ ಪ್ರಯತ್ನಪೂರ್ವಕವಾಗಿಯೇ ಮುಂದುವರಿದು ಪ್ರತಿಷ್ಠಿತವಾಗಬೇಕೆಂಬುದು ಘನಸರ್ಕಾರದವರ ಮನೋಭಾವ. ಇದು ಸಹಜವೇ ಆಗಿದೆ ಆದರೆ ಸರ್ಕಾರದವರ ಸಂಪೂರ್ಣ ಬೆಂಬಲ, ಒತ್ತಾಸೆ, ಸಹಕಾರ, ಸಹಾನುಭೂತಿಯು ಯಾವಾಗಲೂ ಈ ಕಾರ್ಯದಲ್ಲಿ ದೊರೆಯುವುದೆಂಬ ಭರವಸೆ ನಮ್ಮ ಪ್ರಜಾಮುಖಂಡರಿಗೆ ಇರಬೇಕು ಮೈಸೂರಿನ ಪ್ರಜಾವರ್ಗದವರ ಘನತರವಾದ ಸಂಘಶಕ್ತಿಯನ್ನು ದೇಶರಕ್ಷಣೆಯ ಕಾರ್ಯದಲ್ಲಿ ಕೇಂದ್ರೀಕರಿಸುವ ಈ ಯೋಜನೆಗೆ ನೈತಿಕ ಬೆಂಬಲವಿದೆ, ದೈವಿಕವಾದ ಅನುಗ್ರಹವಿದೆ. ನಮ್ಮ ಜನರು ಕುಗ್ಗದ ಮನಸ್ಸಿನಿಂದ ಜಗ್ಗದೆ ಎದೆಗಾರಿಕೆಯಿಂದ ಮುಂದೆ ಬರಬೇಕು. ದೇಶಸೇವೆಗಾಗಿ ಸ್ವಂತ ಸುಖವನ್ನು ಲಕ್ಷ್ಯಮಾಡಬಾರದು ಹಿಂದೆ ನಮ್ಮ ಹಿರಿಯರೂ ಇದೇ ರೀತಿಯಲ್ಲಿ ಸೈನ್ಯದಳಗಳನ್ನು ಪ್ರತಿಯೊಂದು ಗ್ರಾಮದಲ್ಲಿಯೂ ಏರ್ಪಡಿಸಿಕೊಂಡಿದ್ದರೆಂದು ಊಹಿಸಲು ಚರಿತ್ರೆಯಲ್ಲಿ ಆಧಾರವಿದೆ. ಈಗ್ಗೆ ಸುಮಾರು ಇನ್ನೂರು ಮುನ್ನೂರು ವರ್ಷಗಳ ಹಿಂದೆ ಯಾವುದೊಂದು ಕೇಂದ್ರ ಸರ್ಕಾರವೂ ಇಲ್ಲದೆ ಇದ್ದಾಗ್ಗೆ, ಆಗಾಗ್ಗೆ ಶತ್ರುಗಳ ಹಾವಳಿ ಒದಗುತ್ತಿತ್ತು ಆ ಶತ್ರುಗಳ ಹಾವಳಿಯನ್ನು ತಪ್ಪಿಸಿಕೊಂಡು ತಮ್ಮ ಹೆಂಗಸರು ಮಕ್ಕಳುಗಳನ್ನೂ, ದನಕರುಗಳನ್ನೂ, ಆಸ್ತಿಪಾಸ್ತಿಗಳನ್ನೂ ರಕ್ಷಿಸಿಕೊಳ್ಳುವುದಕ್ಕಾಗಿ ಪ್ರತಿಯೊಂದು ಊರಿನವರೂ ಮುದುಕರಾಗಲಿ, ತರುಣರಾಗಲಿ ಸದಾ ಸಿದ್ಧರಾಗಿರುತ್ತಿದ್ದರು. ಅವರು ತಮ್ಮ ಗ್ರಾಮದ ಹೊರವಳಯದಲ್ಲಿ ಎತ್ತರವಾದ ಅಟ್ಟಣೆಯನ್ನು ಹಾಕಿಕೊಂಡು ಅದರಲ್ಲಿ ಒಬ್ಬನನ್ನು ಕಾವಲಿರಿಸುತ್ತಿದ್ದರು ಅವನು ಸುತ್ತಮುತ್ತ ನೋಡುತ್ತಾ ದೂರದಿಂದಲಾದರೂ ಶತ್ರುಗಳು ಬರುವ ಸುಳಿವು ಬಂದಕೂಡಲೆ ರಣಕಹಳೆಯನ್ನು ಊದುತ್ತಿದ್ದನು, ಅಥವಾ ರಣಭೇರಿಯನ್ನು ಬಾರಿಸುತ್ತಿದ್ದನು ಆ ಶಬ್ದವನ್ನು ಕೇಳಿದ ತಕ್ಷಣವೇ ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ರೈತರು ತಮ್ಮ ಹೊಲಗಳ ಬದುವಿನಲ್ಲಿಟ್ಟುಕೊಂಡಿರುತ್ತಿದ್ದ ಕತ್ತಿ ಕಠಾರಿಗಳನ್ನೂ ಈಟಿ ಗುರಾಣಿಗಳನ್ನೂ ಹಿಡಿದುಕೊಂಡು ವೀರರಂತೆ ಶಿಸ್ತಿನಿಂದ ನಿಂತು ಶತ್ರುಗಳನ್ನು ಎದುರಿಸುತ್ತಿದ್ದರು. ಇದು ಆ ಕಾಲದ ರಕ್ಷಣಾದಳಗಳ ರೀತಿ ಈ ಸಂಬಂಧವಾಗಿ ಸಂಸ್ಥಾನದ ನಾನಾ ಪ್ರದೇಶಗಳಲ್ಲಿ ಈಗ ನಡೆಯುತ್ತಿರುವ ಏರ್ಪಾಡಿನಲ್ಲಿ ಒಂದೇ ವಿಷಯಕ್ಕೆ ಮಾತ್ರ ಗಮನ ಕೊಡುತ್ತಿರುವಂತೆ ಕಾಣುವುದಿಲ್ಲ ನ್ಯಾಷನಲ್ ವಾರ್ ಫ್ರಂಟಿನ ಧ್ಯೇಯಗಳು ಕೇವಲ ಮಾತಿನಲ್ಲಿ ಪರ್ಯವಸಾನವಾಗುವಂತಿಲ್ಲ ಹತ್ತಾರು ಜನರು ಕಲೆತು ಮಾಡಿಸಿ ಒಂದು ಕಮಿಟಿಯನ್ನು ರಚಿಸಿ

ಲಿಂದ ಸಾರ್ಥಕವಿಲ್ಲ. ಪ್ರತಿಯೊಬ್ಬರೂ ಪರಾಕ್ರಮಶಾಲಿ ಹೋದರೆ ಕಾರ್ಯ ಸಾಧಿಸ ಬಹುದು ಯಾರು? ದೇಶರಕ್ಷಣೆಯ ಪ್ರ ಮಾಡುವ ಯೋಧರು ಯಾರು! ಸೈನಿಕರನ್ನು ಸಜ್ಜುಗೊಳಿಸುವ ಪ್ರಯತ್ನಕ್ಕೆ ನಮ್ಮ ಕಾರ್ಯಕ್ರಮದಲ್ಲಿ ಪ್ರಧಾನಸ್ಥಾನವನ್ನು ಕೊಡಬೇಕು. ಸೈನಿಕರನ್ನು ಸಂಗ್ರಹಿಸುವ ಕಾರ್ಯದಲ್ಲಿ ಪ್ರತಿಯೊಬ್ಬ ಪ್ರಜೆಯೂ ಸೇರಬೇಕು. ಈ ಕಾರ್ಯದಲ್ಲಿ ಮೈಸೂರು ದೇಶವು ಎಷ್ಟು ಹಿಂದಿದೆ ಎನ್ನುವುದನ್ನು ಪ್ರತಿಯೊಬ್ಬರೂ ಗ್ರಹಿಸಬೇಕು; ಕಾರಣವನ್ನು ಕಂಡುಹಿಡಿಯಬೇಕು. ಪ್ರಯತ್ನ ಪೂರ್ವಕವಾಗಿ ಯೋಧ ಮನೋವೃತ್ತಿಯನ್ನು ಉತ್ತೇಜನಗೊಳಿಸಬೇಕು. ಉದಾಹರಣೆಗಾಗಿ ಬ್ರಿಟಿಷರು ಮತ್ತು ಭಾರತೀಯರು ಈ ವಿಷಯದಲ್ಲಿ ಎಷ್ಟು ಮುಂದುವರಿದಿದ್ದಾರೆ ಎಂಬುದನ್ನು ವಿಚಾರಿಸಿ ನೋಡೋಣ — ದೇಶೀಯ ಸಂಸ್ಥಾನಗಳನ್ನು ಬಿಟ್ಟು ಲೆಕ್ಕಾಚಾರ ಮಾಡಿದರೆ, ಪ್ರತಿ ತಿಂಗಳಲ್ಲಿಯೂ ಭರತಖಂಡದ ಸೈನ್ಯಕ್ಕೆ ಸರಾಸರಿ 50 ಸಾವಿರ ಜನರು ಸೇರುತ್ತಿದ್ದಾರೆ. ಜಪಾನರು ಯುದ್ಧರಂಗಕ್ಕೆ ಪ್ರವೇಶಮಾಡಿದಾಗಿನಿಂದಲೂ ಈ ಸಂಖ್ಯೆ 60 ಸಾವಿರಕ್ಕೆ ಏರಿದೆ. ಈಗಾಗಲೇ 12 13 ಲಕ್ಷ ಭಾರತೀಯರು ಸೈನ್ಯಶಿಕ್ಷಣವನ್ನು ಪಡೆದು ಪ್ರತ್ಯಕ್ಷವಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಪಂಜಾಬಿನ 500 ವಿದ್ಯಾರ್ಥಿಗಳು 1-6-1942ರಿಂದ Guerilla Warfare ಎಂಬ ಶಿಕ್ಷಣ ಪಡೆಯುತ್ತಿದ್ದಾರೆ. ಸರ್ಕಾರದವರು ಈ ವಿಷಯದಲ್ಲಿ ಸಹಾಯವನ್ನು ಒದಗಿಸುತ್ತಾರೆ. ಮದ್ರಾಸು ಪ್ರಾಂತ್ಯದ ಜನರಂತೂ ಸಂತೋಷದಾಯಕವಾಗಿ ಅತ್ಯುತ್ಸಾಹದಿಂದ, ತ್ಯಾಗಬುದ್ಧಿಯಿಂದ ಧಾರಾಳವಾಗಿ ಮುಂದೆಬಂದು ಸೈನ್ಯ ಶಾಖೆಯಲ್ಲಿ ದಾಖಲಾಗುತ್ತಿದ್ದಾರೆ. ಮದ್ರಾಸು ಪ್ರಾಂತವು ಯುದ್ಧಪ್ರಯತ್ನದಲ್ಲಿ ಧನ ಮತ್ತು ಜನಸಹಾಯವನ್ನು ಒದಗಿಸಿ ಇಡೀ ಭರತಖಂಡದಲ್ಲೇ ಅಗ್ರಸ್ಥಾನವನ್ನು ಹೊಂದಿದೆ. ಇದು ಮದರಾಸಿನ ಜನರ ಭರತಖಂಡಕ್ಕೇ ಆದರ್ಶಪ್ರಾಯವಾದ ಪರಿಸ್ಥಿತಿ. ಈ ಅಂಕಿ ಅಂಶಗಳನ್ನು ಪರಿಶೀಲಿಸುವಾಗ ಮೈಸೂರಿನ ತರುಣರ ಪಾತ್ರವೇನೆಂದು ನೋಡಿದಲ್ಲಿ ಕೇವಲ ನಿರುತ್ಸಾಹಜನಕವಾಗಿದೆ. ಎಂದು ಹೇಳಲು ವಿಷಾದವಾಗುತ್ತದೆ. ಬ್ರಿಟನ್ನಿನ ಸ್ಥಿತಿಯನ್ನು ನೀವು ಕೇಳುವುದಾದರೆ ಆಶ್ಚರ್ಯಪಡುವುದರಲ್ಲಿ ಸಂದೇಹವಿಲ್ಲ. ಹದಿನಾಲ್ಕು ವರ್ಷ ಮೊದಲುಗೊಂಡು 60 ವರ್ಷ ವಯಸ್ಸಿನೊಳಗಿನ ಗಂಡಸರ ಒಟ್ಟು 650 ಲಕ್ಷ ಪ್ರಜಾಸಂಖ್ಯೆಯಲ್ಲಿ, 270 ಲಕ್ಷ ಪ್ರಜೆಗಳು ಸೈನ್ಯಗಳ ನಾನಾ ಶಾಖೆಗಳಲ್ಲಿ ದಾಖಲಾಗಿ ಯುದ್ಧಜೀವನದಲ್ಲಿ ತೊಡಗಿದ್ದಾರೆ. ಇವರ ಜೊತೆ ಕೆಲವರು ಒಳದೇಶದ ರಕ್ಷಣಾಕಾರ್ಯದಲ್ಲಿಯೂ, ಯುದ್ಧಸಂಬಂಧವಾದ ಕೈಗಾರಿಕೆಯ ಉದ್ಯಮಗಳಲ್ಲಿಯೂ ಕೆಲಸಮಾಡುತ್ತಿದ್ದಾರೆ. ವಿಶ್ವದ ಇನ್ನಾವ ಜನಾಂಗವೂ ಇಷ್ಟು ಯೋಗ್ಯರೀತಿಯಲ್ಲಿ ತನ್ನ ಪ್ರಜಾಶಕ್ತಿಯನ್ನು ಯುದ್ಧಪ್ರಸಕ್ತಿಯಲ್ಲಿ ಉಪಯೋಗಿಸಿಕೊಂಡಿಲ್ಲವೆಂದು ಬ್ರಿಟಿಷ ಕಾರ್ಮಿಕಸಂಘದ ಮಂತ್ರಿಯವರಾದ ಆರ್ನೆಸ್ಟ್ ಬೆವಿನ್ ಸಾಹೇಬರವರು 1942ನೇ ಮೇ ತಿಂಗಳು 21ನೇ ತಾರೀಖಿನ ದಿನ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಅಪ್ಪಣೆಕೊಡಿಸಿದರು. ಈ ಜನರ ದೇಶಭಕ್ತಿಯು ಎಷ್ಟು ಉಜ್ವಲವಾದ "ರಾಷ್ಟ್ರರಕ್ಷಣೆಯು ಪ್ರತಿಯೊಬ್ಬ ನಾಗರಿಕನ ಪವಿತ್ರ ಕರ್ತವ್ಯವೆಂದು ಭಾವಿಸುವ ಈ ಆದರ್ಶಮಾನವರ ಜನ್ಮವು ಸಾರ್ಥಕವಲ್ಲವೆ? ಯುದ್ಧೋದ್ಯಮಕ್ಕೆ ಅಗತ್ಯವಾದ ಕಾರ್ಖಾನೆಗಳಲ್ಲಿ ಅಂದರೆ ಯುದ್ಧಕ್ಕೆ ಬೇಕಾದ ಉಪಕರಣಗಳನ್ನು ತಯಾರಿಸುವ ಕಾರ್ಯದಲ್ಲಿ [illegible] ಕೋಟಿ ಜನರು ನಿರತರಾಗಿದ್ದಾರೆ. ಈ ಸಂಖ್ಯೆಯು [illegible] ಕೋಟಿಗೆ ಏರುವ ಸಂಭವವಿದೆಯೆಂದು ಬ್ರಿಟಿಷ್ ಮಂತ್ರಿಗಳು ಸೂಚಿಸಿದ್ದಾರೆ.

220 ಲಕ್ಷ ಗಂಡಸರೇ ಅಲ್ಲದೆ, ಮದುವೆಯಾಗದೆ ಇರತಕ್ಕ ಹೆಂಗಸರು, ವಿದ್ಯಾರ್ಥಿಗಳು ತಮಗೆ ನಿಯಮಿತವಾದ ಕೆಲಸದ ಕಾಲವನ್ನು ಬಿಟ್ಟು ವಿರಾಮಕಾಲದಲ್ಲಿ ಕೆಲಸಮಾಡತಕ್ಕ ಸಹಸ್ರಾರು ಹೆಂಗಸರು ಗಂಡಸರು, ಇವರುಗಳ — ಸಂಖ್ಯೆಯಂತೂ ಅಪಾರವಾಗಿದೆ. ಒಟ್ಟುಕವಾಗಿ ಮುಂದೆ ಬಂದು ಧೈರ್ಯೋತ್ಸಾಹದಿಂದ ಕೆಲಸಮಾಡತಕ್ಕ ಲಕ್ಷಾಂತರ ಬ್ರಿಟಿಷ ಜನಾಂಗದ ವನಿತಾಮಣಿಯರ ಸಾಹಸವು ವರ್ಣನಾತೀತವಾಗಿದೆ. ಈ ಎಲ್ಲ ಜನರ ಸಂಖ್ಯೆಯನ್ನು ಗೊತ್ತುಮಾಡುವುದು ಕಷ್ಟವಾಗಿದೆಯೆಂದು ಸೂಚಿಸಲಾಗಿದೆ.

ನಮ್ಮ ಮೈಸೂರಿನಲ್ಲಿ ಪ್ರಾರಂಭಗೊಂಡಿರುವ ರಾಷ್ಟ್ರರಕ್ಷಣಾ ಸ್ವಯಂಸೇವಕರ ಗಮನವನ್ನು ಈ ಅಂಕಿ ಅಂಶಗಳ ಕಡೆಗೆ ಎಳೆಯಲು ಇಚ್ಛಿಸುತ್ತೇನೆ. ಯಾವ ಉದ್ಯಮಕ್ಕಾಗಲಿ ಜನ ಸಹಾಯ ಬೇಕು. ಸ್ಥಳೀಯ ಸಮಿತಿಗಳಲ್ಲಿ ಕೆಲಸಮಾಡತಕ್ಕ ವೃದ್ಧರೂ ತರುಣರೂ ಮಧ್ಯವಯಸ್ಸಿನವರೇ ಅಲ್ಲದೆ ಸಾಹಸದಿಂದ ರಣಾಂಗಣದಲ್ಲಿ ಕಾದಾಡಲು ಸದಾ ಸಿದ್ಧರಾಗಿರುವ ಯುವಕರನ್ನು ಪ್ರೇರೇಪಿಸಿ ಯುದ್ಧ ಮನಸ್ಕರನ್ನಾಗಿ ಮಾಡಬೇಕಾದುದು ಪ್ರತಿಯೊಂದು ಸಮಿತಿಯ ಕರ್ತವ್ಯವೆಂದು ಒತ್ತಿ ಹೇಳಬೇಕಾಗಿದೆ. ನಮ್ಮ ತರುಣರಿಗೆ ಆಯುಧಗಳಿಲ್ಲವಾದರೆ ಬಾಧಕವಿಲ್ಲ ಶಿಸ್ತು, ದೇಹದಾರ್ಢ್ಯಕ್ಕೆ ಬೇಕಾದ ವ್ಯಾಯಾಮ, ಅಭ್ಯಾಸ ಇವುಗಳ ಶಿಕ್ಷಣ ದೊರೆಯಲಿ. 1942 ನೇ ಇಸವಿ ಮೇ ತಿಂಗಳಲ್ಲಿ ಭಾರತೀಯರಿಗೆ ಅತಿ ಸಂತೋಷಕರವಾದ ವಿಷಯವನ್ನು ಇಂಡಿಯಾ ಸರ್ಕಾರದವರು ಸೂಚಿಸಿದ್ದಾರೆ. ಪಂಜಾಬು ದೇಶದಲ್ಲಿ ಯುದ್ಧ ಸಂಬಂಧವಾಗಿ ಪ್ರತಿಯೊಂದು ಗ್ರಾಮದಲ್ಲಿಯೂ ಗ್ರಾಮಾಂತರ ವಾಸಿಗಳು ರಕ್ಷಣಾ ಕಾರ್ಯದಲ್ಲಿ ಉದ್ಯುಕ್ತರಾಗಬೇಕೆಂಬ ಉದ್ದೇಶದಿಂದ ಗ್ರಾಮರಕ್ಷಣಾ ಸಮಿತಿ (Rural Vigilance Associations) ಗಳು ಸ್ಥಾಪಿಸಲ್ಪಡುವಂತೆ ಉತ್ತೇಜನಗೊಳಿಸಲಾಗಿದೆ. ಈ ಸಮಿತಿಯು ಸರ್ಕಾರದವರು ಮತ್ತು ಗ್ರಾಮದ ಜನರಿಗೂ ಆಯುಧಗಳನ್ನು ಒದಗಿಸುವುದಲ್ಲದೆ ಮತ್ತು ಅವುಗಳನ್ನು ಉಪಯೋಗಿಸುವ ಶಿಕ್ಷಣವನ್ನು ದೊರಕಿಸುವುದಲ್ಲದೆ, ಸಹ ಸರ್ಕಾರದವರು ಸಹಾಯಮಾಡುವವರಾಗಿದ್ದಾರೆ. ಅಲ್ಲದೆ ಇಂಡಿಯನ್ ಆರ್ಮ್ಸ್ ಆಕ್ಟಿನ (Indian Arms Act) ವಿಧಿನಿಯಮಗಳನ್ನು ಸಡಿಲಿಸಿ ಧಾರಾಳವಾಗಿ ಜನರಿಗೆ ಬಂದೂಕು ಇತ್ಯಾದಿಗಳ ಲೈಸನ್ಸನ್ನು ಕೊಡುತ್ತೇವೆಂಬ ಭರವಸೆಯನ್ನು ಸರ್ಕಾರದವರು ಕೊಟ್ಟಿರುತ್ತಾರೆ. ಈ ಸನ್ನಿವೇಶವು ಕೇವಲ ಸಮುಚಿತವಾದುದು ಮೇಲಾಗಿ, ಈ ವಿಚಾರವು ಭಾರತೀಯರಲ್ಲಿ ಸ್ವಾವಲಂಬನೆ, ಆತ್ಮಗೌರವ ಪೌರುಷ ಪ್ರತಾಪ — ಇವುಗಳನ್ನು ಅಭಿವೃದ್ಧಿಗೊಳಿಸತಕ್ಕದಾಗಿದೆ. ಈ ಸಮಯವನ್ನು ನಾವು ಉಪಯೋಗಿಸಿಕೊಂಡು, ಗ್ರಾಮನಿವಾಸಿಗಳಲ್ಲಿ ಯೋಧ ಮನೋವೃತ್ತಿಯನ್ನು ಪ್ರಕಾಶಗೊಳಿಸಬೇಕು.

ಪ್ರತಿಯೊಬ್ಬ ಪ್ರಜಾಮುಖಂಡರೂ ಪ್ರಾಪ್ತ ವಯಸ್ಕರಾದ [illegible] ತರುಣರನ್ನು ಉದ್ದೇಶಿಸಿ ಸೈನ್ಯದಲ್ಲಿ ಒಂದು ಸ್ಥಾನವನ್ನು [illegible] ಇದನ್ನು ಭರ್ತಿಮಾಡುವಂತೆ ಪ್ರೇರೇಪಿಸಬೇಕು. ಇಂದಿಗೆ ದೇಶದ ರಕ್ಷಣೆಗಾಗಿ ಸಹಸ್ರಾರು ಸ್ಥಾನಗಳನ್ನು ಕಾದಿಡಲಾಗಿದೆ. [illegible]ಗಳು, ಎ. ಆರ್. ಪಿ ಸ್ವಯಂಸೇವಕರ, ವೈದ್ಯರು, ದಾದಿಗಳು, ತಂತ್ರಿಕರ ಸಿಗ್ನಾಲರ್‌ಗಾಗಿ ಜನರು ಇತ್ಯಾದಿ — ಇತ್ಯಾದಿ. ಮುಖ್ಯವಾಗಿ ನಮ್ಮ ಸೈನ್ಯ ಜೀವನದಲ್ಲಿ ರಾಷ್ಟ್ರರಕ್ಷಣೆಗಾಗಿ ಎಲ್ಲ ವಿಧವಾದ ಆಡಂಬರಗಳನ್ನು ತ್ಯಜಿಸುವುದು, ದ್ರವ್ಯ, ಊಟ, ಉಪಚಾರ, ಉಡಿಗೆ ತೊಡಿಗೆಗಳು, ವಿದ್ಯುಚ್ಛಕ್ತಿ, ಕಟ್ಟಿಗೆ, ರೈಲ್ವೆ ಸಂಚಾರ—ಇವುಗಳಲ್ಲಿ ಮಿತವರಿತು ಖರ್ಚುಮಾಡುವುದು, ಹೆಚ್ಚು ಆಹಾರ ಸಾಮಗ್ರಿಗಳನ್ನು ಬೆಳೆಯುವುದು, ಪ್ರತಿಯೊಬ್ಬರೂ ಅವರವರ ಶಕ್ತ್ಯನುಸಾರ ದೇಹಶ್ರಮದಿಂದ ಬುದ್ಧಿಶಕ್ತಿಯಿಂದಾಗಲಿ ಮೊದಲಿಗಿಂತಲೂ ಜಾಸ್ತಿಯಾಗಿ ದುಡಿಯುವುದು — ಈ ವಿಧವಾದ ಒಂದು ಮನೋಭಾವ ಎಲ್ಲರಲ್ಲಿಯೂ ಬೇರೂರಬೇಕು. ನಮ್ಮ ಶತ್ರುಗಳು ನಮ್ಮ ಮನೆಯ ಬಾಗಿಲಿನಲ್ಲಿ ನಿಂತು ನಮ್ಮನ್ನು ಎದುರಿಸುತ್ತಿರುವಾಗ ತಕ್ಕ ಪ್ರತೀಕಾರ ಮಾಡಬೇಕೆಂಬ ಸಹಜವಾದ ಉತ್ಸಾಹವು ತೋರ್ಪಡಬೇಕು. ಈ ಯುದ್ಧವನ್ನು ಜಯಿಸಲೇಬೇಕು. ಈ ಯುದ್ಧದಲ್ಲಿ ನಮಗೆ ವಿಜಯವು ಸಿದ್ಧಿಸಲೇಬೇಕು ಎಂಬ ಆಶೋತ್ತರವು ತೋರಬೇಕಾದರೆ ಯಾರಿಂದ? ವೀರ ತರುಣರಿಂದಲ್ಲವೆ? ಯುದ್ಧಮನಸ್ಕರಾದ ಹಿರಿಯರಿಂದಲ್ಲವೆ? ಆದರ್ಶವೀರ ರಮಣಿಯರಿಂದಲ್ಲವೆ? ಏಕೆ ತಟಸ್ಥರಾಗಿರುವಿ? ರಾಷ್ಟ್ರ ರಕ್ಷಣೆಗೆ ಇವತ್ತಲ್ಲ ನಾಳೆ ಸೇರುವನೆಂಬ ಉದಾಸೀನಭಾವವನ್ನು ತೊರೆದು "ಆಲಸ್ಯಾದಮೃತಂ ವಿಷಂ" [illegible] ಕಾರ್ಯಶೀಲರಾಗಿ ನಿಮ್ಮ ಸಾಹಸ ಪ್ರತಾಪಗಳ ಪ್ರದರ್ಶನಕ್ಕೆ ಇದು ಸುಸಮಯ. ಏಳಿರಿ, ಜಾಗೃತರಾಗಿ, ಶತ್ರುನಿಗ್ರಹಕ್ಕೆ ಪಣತೊಡಿರಿ. ನಿಮಗೆ ಶಾಂತಿಯು? ಸಮಾಧಾನವೆಲ್ಲಿಯದು? ಸಂಸ್ಥಾನದ ಅಭಿಮಾನ ದೇವತೆಯಾದ ಆದಿಶಕ್ತಿ ಸ್ವರೂಪಿಣಿಯಾದ ಶ್ರೀಚಾಮುಂಡಾಂಬೆಯು ನಿಮ್ಮಲ್ಲಿ ವೀರರಸವನ್ನು ಉದ್ರೇಕಗೊಳಿಸಲಿ. ಆಳರಸರ ಸೇವೆಗಾಗಿ ಯುದ್ಧಸನ್ನದ್ಧರಾಗಿ. ಶ್ರೀಜಯಚಾಮರಾಜ ಒಡೆಯರ್ ಬಹದ್ದೂರರವರ ಆ ಘನವಾದ ಗಂಡಭೇರುಂಡ ಧ್ವಜದಡಿಯಲ್ಲಿ ನಿಂತು ವೀರರಂತೆ ರಣವ್ರತ ಕಂಕಣವನ್ನು ಧರಿಸಿರಿ. ಜಯಲಾಭವನ್ನೂ ಕೀರ್ತಿಕಳಶವನ್ನೂ ನೀವು ಪಡೆದುಕೊಳ್ಳಿರಿ. ರಾಷ್ಟ್ರರಕ್ಷಣಾ ವ್ಯವಸ್ಥೆಯ ಪವಿತ್ರಕೃತ್ಯವನ್ನೂ ಸಾರ್ಥಕಗೊಳಿಸಿ. ವಿಮಾನದಾಳಿಯಾದಾಗ ಜೀವಗಳ್ಳರಾಗಿ ಓಡದಿರುವುದೇ ಒಂದು ವಿಧವಾದ ಸಾಹಸ. ನಿಯಮಿತವಾದ ಕೆಲಸಗಳನ್ನು ಬಿಟ್ಟು ಪಲಾಯನಸೂತ್ರವನ್ನು ಕೈಗೊಳ್ಳದಿರುವುದೇ ಒಂದು ಸಾಹಸ. ಅನವಶ್ಯಕವಾದ ಕಳವಳಕ್ಕೀಡಾಗಿ ನಿಮ್ಮ ಸಹವಾಸಿಗಳನ್ನು, ನೆರೆಹೊರೆಯವರನ್ನು, ಉಲ್ಲೋಲಕಲ್ಲೋಲ ಪರಿಸ್ಥಿತಿಗೆ ಈಡುಮಾಡದಿರುವುದೇ ಒಂದು ಸಾಹಸ. ಇವು ನಿಜವಾಗಿ ಶತ್ರುನಿಗ್ರಹಕ್ಕೆ ಸಾಧಕಗಳಾದ ಪರಿಸ್ಥಿತಿ. ಈ ಉತ್ಕಟ ಸನ್ನಿವೇಶದಲ್ಲಿ ಬ್ರಿಟಿಷರೊಡನೆ ಸಹಕರಿಸಿ ಯಥಾಶಕ್ತಿ ಸಹಾಯ ಮಾಡದೆ ರಾಷ್ಟ್ರರಕ್ಷಣೆಗೆ ನೆರವಾಗದೆ ಉದಾಸೀನಭಾವವುಳ್ಳವರಾಗುವುದು ಆತ್ಮಹತ್ಯೆ ಮಾಡಿಕೊಂಡಂತೆಯೇ ಸರಿ. ಭಾರತೀಯರಾದ ನಾವು ಹೇಡಿಗಳಂತೆ ಆತ್ಮಗೌರವವನ್ನು ಲಕ್ಷ್ಯಮಾಡದೆ ನಮ್ಮ ಭರತಭೂಮಿಗೆ ಕಳಂಕವನ್ನು ತರಬಹುದೆ? ಭಗವದನುಗ್ರಹದಿಂದ ಎಂದೆಂದಿಗೂ ಹೀಗಾಗದಿರಲಿ ಎಂಬುದೇ ನನ್ನ ಪ್ರಬಲ ಆಕಾಂಕ್ಷೆ.

ಇಂದು ಘೋರವಾದ ವಿಪತ್ತಿಗೆ ಈಡಾದ ವಿಶ್ವರಚನೆಯನ್ನು ರೂಪುಗೊಳಿಸಿ ಮನೋಹರವಾದ, ಭದ್ರತರವಾದ ನೂತನ ಜಗತ್ತಿನ ಸೃಷ್ಟಿ ಕಾರ್ಯದಲ್ಲಿ ಪ್ರಧಾನ ಪಾತ್ರವು ಯಾರದು ವಿಚಾರಿಸಿ ನೋಡಿ. ಇಂದಿನ ಸುಶಿಕ್ಷಿತ ತರುಣರಿಂದಲ್ಲವೆ? ಈ ಸಾಹಸ ಕಾರ್ಯದಲ್ಲಿ ಆತ್ಮಾರ್ಪಣ ಬದ್ಧರಾದ, ನಿಸ್ವಾರ್ಥ ಜೀವನದ ಪವಿತ್ರ ಧ್ಯೇಯದಿಂದ, ನಿಮ್ಮ ತನುಮನಧನಗಳನ್ನು ದೇಶಸೇವಾ ಕಾರ್ಯದಲ್ಲಿ ಒದಗಿಸಲು ಸಿದ್ಧರಾಗಿರಿ. ಮೈಸೂರಿನ ವೀರತರುಣರ ಖ್ಯಾತಿಯು ಪ್ರಜ್ವಲಿಸಲಿ. ಗುರು ಹಿರಿಯರ ಆಶೀರ್ವಾದ ಬಲವು ಲಭಿಸಲಿ. ದೈವಾನುಗ್ರಹದಲ್ಲಿ ಪೂರ್ಣವಿಶ್ವಾಸವೂ ನಂಬಿಕೆಯೂ ವೃದ್ಧಿಯಾಗಲಿ.—

ಜಿ. ಪಿ. ಮಲ್ಲಾರಾಧ್ಯ,
ರಿಕ್ರೂಟಿಂಗ್ ಆಫೀಸರ್,
ಮೈಸೂರು ಸ್ಟೇಟ್ ಟ್ರೂಪ್ಸ್.

ಮೈಸೂರು
೧೮-೬-೧೯೪೨, ಗುರುವಾರ.

ನಾಟಕವಿಚಾರದರ್ಪಣ

೪ ನೆಯ ಅಧ್ಯಾಯ

13 ಮತ್ತು 17 ನೆಯ ಶತಮಾನಗಳ ಮಧ್ಯೆ ವರ್ತಿಸುತ್ತಿದ್ದ ನಾಟಕದ ಕಂಪೆನಿಗಳ ಸ್ಥಿತಿ

(ಕನ್ನಡಕವಿ, ಆಸ್ಥಾನವಿದ್ವಾನ್ ಅನವಟ್ಟಿ ರಾಮರಾಯರವರಿಂದ.)

ಹಿಂದುಗಳ ಶಕ್ತಿಯು ಕಮ್ಮಿಯಾಗುತ್ತಾ ಬಂದಹಾಗೆಲ್ಲಾ ಅವರು ಆಡುವ ನಾಟಕಗಳಲ್ಲಿ ಸ್ವಾರಸ್ಯವು ಕಮ್ಮಿಯಾಗಲು ಅವಿದ್ಯಾವಂತರ ಗುಂಪೇ ಹೆಚ್ಚುವುದಕ್ಕೆ ಕಾರಣವಾಗುತ್ತಾ ಬಂದಿತು. ಆ ಕಾಲದಲ್ಲಿನ ಕೆಲವು ವಿದ್ಯಾವಂತರು ಸಂಸ್ಕೃತ ಪದಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುತ್ತಾ ಬರಲು ಉಪಕ್ರಮವಾಯಿತು. ಇದರಿಂದ ಅದರ ಪೂರ್ವಸ್ವಾತಂತ್ರ್ಯವೇ ತಪ್ಪಿಹೋಗುತ್ತಾ ಬಂದಿತು. ಸಂಸ್ಕೃತದಲ್ಲಿರುವ ಅರ್ಥದ ಬಿಗಿ, ಸರಳ ಇವು ಹೀನಸ್ಥಿತಿಗೆ ಬಂದವು. ಸಂಸ್ಕೃತದ ಪದಗಳ ರಸಕ್ಕನುಗುಣವಾದ ಕನ್ನಡ ಭಾಷೆಯ ಪದಗಳನ್ನುಪಯೋಗಿಸದೆ ವಿಶೇಷ ವಾಕ್ಯಗಳೇ ಹೆಚ್ಚುವಂತಾಯಿತು. ಇಂತಹ ಕಾಲದಲ್ಲಿ ಸಂಸ್ಕೃತದಲ್ಲಿನ ವಿಶೇಷ ಪಾಂಡಿತ್ಯವುಳ್ಳ ವಿದ್ಯಾವಂತರು ಸಭಿಕರನ್ನು ಸಂತೋಷಪಡಿಸಬೇಕೆಂಬ ಬರಿ ಉತ್ಸಾಹದಿಂದ ಪ್ರಯತ್ನ ಪಡಲುಪಕ್ರಮವಾಯಿತು. ಈ ಸಮಯದಲ್ಲಿ ಮುಸಲ್ಮಾನರು ಇಂಡಿಯಾದೇಶಕ್ಕೆ ಪ್ರವೇಶಿಸಿ ಹಿಂದುಗಳಿಗೆ ವಿಪರೀತ ತೊಂದರೆಕೊಡಲುಪಕ್ರಮವಾಯಿತು. ಇಂತಹ ಕಾಲದಲ್ಲಿ ಭಾಣ ಮತ್ತು ಪ್ರಹಸನ ಮುಂತಾದ ವಿವಿಧ ನಾಟಕಗಳನ್ನು ಬರೆಯಲುಪಕ್ರಮವಾಯಿತು. ದುರ್ನೀತಿ ಜನಗಳ ಮನಸ್ಸನ್ನು ವಿನೋದಪಡಿಸಬೇಕೆಂಬ ಒಂದೇ ಉದ್ದೇಶವಿಟ್ಟು ನಾಟಕಗಳು ಬರೆಯಲಾರಂಭವಾದುದರಿಂದ ನಾಟಕದಲ್ಲಿ ಬರೀ ಮೋಹ ತಂತ್ರ ಮತ್ತು ಮೋಸ ಗುಣಗಳೇ ಕಾಣಬರುವಂತಹ ಬರವಣಿಗೆಗಳುಂಟಾಗಲು ಕಾರಣವಾಯಿತು. ಸಂಸ್ಕೃತ ಭಾಷೆಯನ್ನು ವಿಶ್ವಾಸದಿಂದ ಕಲಿಯಬೇಕೆಂಬ ಇಚ್ಛೆಯು ಜನಗಳಲ್ಲಿ ನಶಿಸುತ್ತಾ ಬರುವಂತಾಯಿತು. ಆಗ್ಗೆ ನಾಟಕಗಳನ್ನು ಬರೆಯತಕ್ಕವರಾದ ಕೆಲವರು ಆ ಕಾಲಕ್ಕೆ ಅನುಸಾರವಾದ ರೀತಿಯಲ್ಲಿ ನಡೆವ ಅವಿದ್ಯಾವಂತರಿಗೆ ಹಿತವನ್ನುಂಟುಮಾಡುವ ನಾಟಕಗಳನ್ನು ಬರೆಯಲುಪಕ್ರಮವಾಯಿತು. ಇದರಿಂದ ಕನ್ನಡ ಭಾಷಾಶೈಲಿಯ ಪೆಡಸಿಗೆ ಬಂದು ಸರಸ ಗುಣಗಳೇ ಕ್ಷೀಣವಾಗುತ್ತಾ ಬಂದವು. ಈ ಕಾರಣದಿಂದ ಜನಗಳಿಗೆ ಸಂಸ್ಕೃತ ಅಭ್ಯಾಸದಲ್ಲಿ ಕೇವಲ ಔದಾಸೀನ್ಯವುಂಟಾಗುತ್ತಾ ಬಂದಿತು. ಮೇಲೆ ಹೇಳಿದ ಕಾಲ, ಜನಗಳ ಮನೋವೃತ್ತಿಗಳಿಂದ ನಾಟಕ ವೆನ್ನುವುದು ತುಂಬ ಹೀನಸ್ಥಿತಿಗೆ ಬರಲು ಮುಖ್ಯ ಕಾರಣಗಳೆಂದು ವಾಚಕರು ತಿಳಿಯಬೇಕು.

ಮಹಮ್ಮದೀಯರ ಕಾಲದಲ್ಲಿ ಬ್ರಾಹ್ಮಣರು ಕೇವಲ ಹೀನಸ್ಥಿತಿಗೆ ಬಂದರು. ಆಗ್ಗೆ ಅವರಿಗೆ ಜೀವನಕ್ಕೆ ಮಾರ್ಗವಿಲ್ಲದೆ ಹೇಗಾದರೂ ಹಣಸಂಪಾದನೆ ಮಾಡಬೇಕಾದ ವಿಷಮಕಾಲವು ಪ್ರಾಪ್ತವಾದಾಗ್ಗೆ, ಅವರಿಗೆ ಯಾವ ಮಾರ್ಗವೂ ತೋರದೆ ಹೊಟ್ಟೆ ಪೇಚಾಟಕ್ಕೆ ಗುರಿಯಾದ ಸ್ಥಿತಿಗೆ ಬಂದರು. ಅವರಲ್ಲಿ ಯಾರ್ಯಾರಿಗೆ ನಾಟಕದ ಕುತೂಹಲವಿದ್ದಿತೋ ಅವರೆಲ್ಲಾ ಬಂದು ಸಂಘವನ್ನು ಮಾಡಿಕೊಂಡು ನಾನಾ ನಾಟಕ ಕಂಪೆನಿಗಳನ್ನೇರ್ಪಡಿಸಿಕೊಂಡು ರಾಜರುಗಳೆದುರಿಗೂ, ದೊಡ್ಡ ದೊಡ್ಡ ಅಧಿಕಾರಿಗಳೆದುರಿಗೂ ಆಟವಾಡುವುದಕ್ಕೆ ಪ್ರಾರಂಭಿಸಿದರು. ಇವರಲ್ಲಿ ವಿದ್ಯಾವಂತರುಗಳೇ ಸೇರಿದ ಸಂಘಗಳೂ ಇದ್ದವು. ಇವು ಅಕ್ಷರಸ್ಥರನ್ನೂ, ಅನಕ್ಷರಸ್ಥರನ್ನೂ ತಮ್ಮ ವಿನೋದಾಭಿನಯಗಳಿಂದ ಸಂತೋಷಗೊಳಿಸಲುಪಕ್ರಮಿಸಿದವು. ವಿದ್ಯಾವಂತರೇ ಸೇರಿದ ಕಂಪೆನಿಯವರು ಮಹಾಭಾರತದ ಕಥೆಯನ್ನು ನಾಟಕರೂಪವಾಗಿ ಏರ್ಪಡಿಸಿಕೊಂಡು 40 ನಾಟಕಗಳನ್ನು 3 ತಿಂಗಳವರೆಗೂ ನಾಟಕವಾಡಿದರೆಂದು ತಿಳಿದುಬರುವುದು. ಈ ಕಂಪೆನಿಯವರು ಯಾವ ನಾಟಕವನ್ನಾಡಬೇಕೆಂದು ಅಪೇಕ್ಷಿಸಿದರೂ ಸ್ವಲ್ಪ ದಿವಸಗಳಲ್ಲಿಯೇ ಆಡುವಷ್ಟು ಬುದ್ಧಿವಂತರಾಗಿದ್ದರೆಂದು ತಿಳಿದುಬರುವುದು. ಇವರೇ ಹೀಗಿರುತ್ತಿದ್ದುದರಿಂದ ಜನರು ಇವರ ನಾಟಕಗಳನ್ನೇ ನೋಡಲು ಬಯಸುತ್ತಿದ್ದರು. ಇವರು ವಿದ್ಯಾವಂತರಾಗಿದ್ದಾಗ್ಯೂ ದ್ರವ್ಯಾಭಾವದ ದೆಸೆಯಿಂ

[೬ನೇ ಪುಟವನ್ನು ನೋಡಿ.]

ಪಂಚಾಚಾರ್ಯಪ್ರಭಾ.

೧೯೪೨ನೆಯ ಜೂನ್ ತಾ|| ೨೨ನೆಯ ಸೋಮವಾರ

ಪೂರ್ವಕಾಲದ ವಿರಕ್ತರ ಗುರುಭಕ್ತಿ.

ಪೂರ್ವಕಾಲದ ವಿರಕ್ತರು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರಲ್ಲಿ ಅನಿತರಸಾಧಾರಣವಾದ ಗುರುಭಕ್ತಿಯನ್ನಿಟ್ಟು ವರ್ತಿಸುತ್ತಿದ್ದರೆಂಬ ವಿಷಯವನ್ನು ಆ ಮಹನೀಯರು ಬರೆದಿರುವ ಗ್ರಂಥಾಧಾರಗಳಿಂದ ಕಳೆದವಾರ ಪ್ರತಿಪಾದಿಸಿರುವುದು ಸರಿಯಷ್ಟೆ! ಈಗಲೂ ಅದೇ ವಿಷಯವನ್ನೇ ಪ್ರತಿಪಾದಿಸುವದಾಗುವದು

ವಿರಕ್ತರಲ್ಲಿ ಮಹಾಪಂಡಿತರೆಂದು ಪ್ರಸಿದ್ಧರಾಗಿರುವ ಶ್ರೀಮರಿತೋಂಟದಾರ್ಯರು ತಮ್ಮ ಗುರುಗಳಾದ ಅನಾದಿತೋಂಟದ ಸಿದ್ಧಲಿಂಗೇಶ್ವರರ ಪುರಾಣವನ್ನು ಬರೆದಿರುತ್ತಾರೆ ಆ ಪುರಾಣದಲ್ಲಿ ತೋಂಟದಸಿದ್ಧೇಶ್ವರರು ಓಸೇಶ್ವರಕ್ಕೆ ಹೋದಕಾಲಕ್ಕೆ ಅಲ್ಲಿ ಕೆಲವು ಕುಟಿಲಸಿದ್ಧರು ಅವರಿಗೆ ಮಾಟವನ್ನು ಮಾಡಿದರು ಆಗ್ಗೆ ಸಿದ್ಧೇಶ್ವರರು ಕುಟಿಲಸಿದ್ಧರನ್ನು ಕುರಿತು ನಮಗೆ ನಿಮ್ಮ ಮಾಟವು ತಗಲುವುದಿಲ್ಲ, ಹಿಂದಕ್ಕೆ ಕೊಲ್ಲಾಪುರದಲ್ಲಿ ಶ್ರೀರೇವಣಾರಾಧ್ಯರಿಗೆ ಗೋರಕ್ಷನಾಥನೆಂಬವನು ಇದೇ ಪ್ರಕಾರವಾಗಿ ಮಾಡಿದ್ದನೆಂಬ ಕಥೆಯನ್ನು ಹೇಳಿದ ವಿಷಯವನ್ನು ಮರಿತೋಂಟದಾರ್ಯರು ವರ್ಣಿಸುವಾಗ್ಗೆ ಶ್ರೀರೇಣುಕಾಚಾರ್ಯರಿಗೆ ಸಿದ್ಧೇಶ್ವರರು 'ಪರಮಗುರು" "ಗುರು' "ಜಗದೇಕವಲ್ಲಭ' ಮೊದಲಾದ ಶಿಷ್ಯಭಾವದ್ಯೋತಕವಿಶೇಷಣಗಳನ್ನು ಕೊಟ್ಟು ಸ್ತುತಿಸಿದಂತೆ ಬರೆದಿದ್ದಾರೆ ಸಿದ್ಧೇಶ್ವರಪುರಾಣದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಚರಿತ್ರದಂತೆ ಅಲ್ಲಮನ ಚರಿತ್ರವನ್ನಾದರೂ ತೋಂಟದಾರ್ಯರು ಬರೆದಿರುವರು ಅದರಲ್ಲಿ ಅಲ್ಲಮನಿಗೆ ಇಂತಹ ಮಹತ್ವವಿಶೇಷಣಗಳನ್ನು ಪ್ರಯೋಗಿಸಿಲ್ಲ ಸಿದ್ಧೇಶ್ವರಪುರಾಣದ ೬ನೆಯ ಸಂಧಿಯಲ್ಲಿ—

ಶರಣ-ಗುರು ರೇವಣಸಿದ್ಧಯತಿರಾಯನುರು |
ತರಹ-ದಿಂದೆ ಕೊಲ್ಲಾಪುರಕ್ಕೆ ಬರಲು |
ಮರುಳಸಿದ್ಧನ ಯೋಗಿಗಳು ವಟೇಶನ ಸಿದ್ಧಪ್ರಸ್ತಂಭಗಳ
ನೆಸಗಲು ||
ಶಿರುಕದಿಂದಾಸ್ತಂಭಗಳು ತಾಗದಿರೆ ವಿ ವರ್ಗ |
ಕರದೆ ಗೋರಕ್ಷನೆಡೆಗೈದಿ ಕೇಳುತ್ತಿರಲು |
ಪರಿಕಿಸದೆಯಾತನವಮಾನಗೈದುಕ ಗಣದೊಳಗೆ ಸಂಭ್ರಮಿಸುತೆ ||

ಕುಟಿಲಸಿದ್ಧರ ಗಳರ್ಕೆ ಪಲ್ಲಣಗೆ ಭಿಕ್ಷಪಾತ್ರೆ |
ಕುಟಿ ತಪಪರಾಶ್ರಮಿಗೆ ಭಿಕ್ಷ ನಿಜಲಿಂಗ ಸಂ |
ಘಟಿತಂಗೆ ಭಿಕ್ಷ ಸಪನಾಥಸಿಪ್ಪರ್ಗಳಭಿನಾಥಂಗೆ ಭಿಕ್ಷೆ ಭಿಕ್ಷ |
ಚಟುಲತರನೆಸೆವ ಕೊಲ್ಲಾಪುರದೊಳ್ ಸಿದ್ಧ |
ಲಟಪಟಿಕೆ ಸಿಲ್ಕದಾತಗೆ ಭಿಕ್ಷ ಜನನಿಯನು |
ಜತರದೊಳ್ ಬಾರದಾತಗೆ ಭಿಕ್ಷ ನಿಟಿಲನೇತ್ರಗೆ ಭಿಕ್ಷವೆಂದೆಸುತಿರೆ ||

ಗೋರಕ್ಷ ತನ್ನ ಮನೆಯೊಳಗೆ ಕುಳ್ಳಿರ್ದು ಭ |
ಕ್ತಾರವದ ಕೇಳಿ ಪಲ್ಲೊರೆದ ಕೂಡಿಭೂದಿಸಿ ಬಹ |
ಆರುಭಟೆಯಿಂದೆ ಕೂಡಿ ಕೋಪದಿಂದೆ ಬಿಡ್ಡವ ತಿರಿಯುವನಿ
ಯೆನಿಸುವ ||
ನಾರಿ ಲಕ್ಷ್ಮಿದೇವಿಯಿಂದದಂ ಭಿಕ್ಷೆಯನು |
ತೋರಲಿಕೆ ನೀಡಿಸೆ ಕರದೊಳಾಂತು ನೋಡಲದು |
ನೀರಂತೆ ಕರಗೆ ಕಾಸಂಗೈಯ್ದು ನಡುವಸು ಗುರುರೇವಣಾ
ಸಿದ್ಧೇಂದ್ರನು ||೧೪||

ಉಲ್ಲಾಸದಿಂ ರೇವಣಾಸಿದ್ಧಯತಿರಾಯ |
ನಿಲ್ಲ ಕಾಸಂಗೈಯ್ಯಲಾ ಸುರಗಿ ಜೋಗಿಯ ಪರ್ |
ಬಿಲ್ಲ ಕೀಲಿಸಿ ಬೆನ್ನಿಳಗೆ ಸಟ್ಟುಗಿಯಲಾಗಿ ಹಿರಿಯ ಲಕ್ಷ್ಮಿ
ದೇವಿಯು ||
ಶಿಲ್ಪದಾಕ್ಷಣ ಕರೆದು ನೀನಸಿದರ್ ಬುದ್ಧಿಗಳ |
ಸುಲ್ಲಾಘಿಸಿದೆನು ತಳುವದೆಯನಾಯತಿಯ ಚರಣ |
ದಲ್ಲಿ ಬೀಳ್ದನ್ನ ರಕ್ಷಿಸುವಂತೆ ಹಾಡೆಂದು ಕಳುಹಿದಂ ನಿಜಸತಿ
ಯುನು ||೧೬||

ಆಕೆಯಾಕ್ಷಣ ಪಾಲ್ಗಡಲ ಕುವರಿಯು ಮುಡದಿ |
ನಾಕರ್ಣಿಸಿ ಬೆದೊಡಂಗಾಂಡು ಬಂದು ಜಗ |
ದೇಕವಲ್ಲಭನೆನಿಪ ರೇವಣಾಸಿದ್ಧೇಂದ್ರನಡಿಗೆ ವಂದನೆಯ ಮಾಡಿ ||
ಸಾಕು ನಿನ್ನಯ ವಿನೋದಂ ದೇವ ರಕ್ಷಿಸೆನ್ನ |
ನಾಳರ ಎನಸ್ಕೆ ಖಿನ್ನಂಗೈದ ರಕವನುಗು |
ವ್ಯಾಕರಾರವನುರದ ಕಾಣದಿಂ ಜಗುಳ್ವ ಬೀಸ್ವಂತೆ ಪಸರಿಸಿ
ನಾಗಳು ||೧೭||

ಈರೀತಿಯಾಗಿ ಶ್ರೀರೇಣುಕಾಚಾರ್ಯರ ಚರಿತ್ರವನ್ನು ಮಹಾಗುರುಭಕ್ತಿಯಿಂದ ಬರೆದಿದ್ದಾರೆ ಇದಲ್ಲದೆ ಮರಿತೋಂಟದಾರ್ಯರು ತಮ್ಮಿಂದ ರಚಿಸಲ್ಪಟ್ಟ ವೀರಶೈವಪ್ರದೀಪಿಕೆಯೆಂಬ ಗ್ರಂಥದಲ್ಲಿ—

"ಮತ್ತಂಚತಿಚಪ್ಪಿ ತೀಉಾಚಾರಧುರಂಧರರಾದ ಪಾಲ್ಕುರಿಕೆ ಸೋಮನಾಥರಿಂದುಕ್ತವಾದ ಶ್ರೀಬಸವಪುರಾಣಮೆಂಬ ಗ್ರಂಥದಲ್ಲಿಯೂ ಸಮಸ್ತಶಾಸ್ತ್ರವೇತ್ತರಾದ ಶಿವಯೋಗೀಶ್ವರರಿಂದುಕ್ತವಾದ ಸೋಮಚರಿತ್ರವೆಂಬ ಗ್ರಂಥದಲ್ಲಿಯೂ, ಸಕಲ ಶೈವಾಗಮಾಭಿಜ್ಞರಾದ ಜ್ಯೋತಿರ್ನಾಥರಿಂದುಕ್ತವಾದ ಶೈವರತ್ನಾಕರವೆಂಬ ಗ್ರಂಥದಲ್ಲಿಯೂ, ನೀಲಕಂಠ ನಾಗನಾಥ ದೇಶಿಕರಿಂದುಕ್ತವಾದ ವೀರಮಾಹೇಶ್ವರಾಚಾರಸಂಗ್ರಹವೆಂಬ ಗ್ರಂಥದಲ್ಲಿಯೂ ಇಲ್ಲದೆ ವೀರಶೈವಮತೋತ್ಪಾದಕರಾದ ಶ್ರೀಜಗದ್ಗುರು ರೇಣುಕಾಚಾರ್ಯರಿಂದುಕ್ತವಾದ ಸಿದ್ಧಾಂತಶಿಖಾಮಣಿಯೆಂಬ ಗ್ರಂಥದಲ್ಲಿಯೂ, ಇನ್ನೂ ಅನೇಕ ಗ್ರಂಥಗಳಲ್ಲಿಯೂ ಅನೇಕ ರೀತಿ [illegible] ದಿಂದ ಸತ್ಪುರುಷರಿಂದ ಆಚರಿಸಲ್ಪಟ್ಟದೆಂದು ವೇದ ಪ್ರವರ್ತಕ"

ಎಂದು ಬರದಿರುತ್ತಾರೆ ಇದರಲ್ಲಿ ಶ್ರೀರೇಣುಕಾಚಾರ್ಯರಿಗೆ ಅಸಾಧಾರಣಗುರುಭಕ್ತಿಯಿಂದ 'ಜಗದ್ಗುರು ಪದವನ್ನು ಪ್ರಯೋಗಮಾಡಿ ತೋರಿಸಿದ್ದಾರೆ ಇದೇರೀತಿಯಾಗಿ ಅನೇಕಜನ ಪ್ರಾಚೀನವಿರಕ್ತರು ಸ್ವಮತಾಚಾರ್ಯರಲ್ಲಿ ನಿರತಿಶಯವಾದ ಭಕ್ತಿಯನ್ನು ತೋರಿಸಿ ಧನ್ಯರಾಗಿದ್ದಾರೆ ಆದರೆ ಈ ಕಾಲದ ಕುಟಿಲ ವಿರಕ್ತರು ಗುರುಭಕ್ತಿಗೆ ತಿಲಾಂಜಲಿಯನ್ನು ಕೊಡಹತ್ತಿ ಅವರ ವಿರುದ್ಧವಾಗಿ ವರ್ತಿಸಹತ್ತಿರುವುದನ್ನು ನೋಡಿದರೆ ಬಹು ವ್ಯಸನವೆನಿಸುತ್ತದೆ ಇದು ಯಾವ ದುಷ್ಕರ್ಮದ ಫಲವೋ ತಿಳಿಯದಾಗಿದೆ ಪರಮೇಶ್ವರನು ಇನ್ನು ಮೇಲಾದರೂ ಈ ಕಲಿಕಾಲದ ವಿರಕ್ತರಿಗೆ ಸದ್ಬುದ್ಧಿಯನ್ನುಕೊಟ್ಟು ಅವರನ್ನುಗುರುಭಕ್ತಿನಿರತರನ್ನಾಗಿ ಮಾಡಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ

ಯುದ್ಧವಾರ್ತೆ.

ಸೈಬೀರಿಯಕ್ಕೆ ಯುದ್ಧ ಭೀತಿ

ಸೈಬೀರಿಯಕ್ಕೆ ಜಪಾನರು ಮುತ್ತಿಗೆಹಾಕುವರೆಂಬ ಭಯವು ಬಹಳವಾಗಿದೆಯೆಂದೂ, ಜಪಾನ್ ಸೇನೆಗಳು ಅಪಾರವಾಗಿ ಮಂಚೂರಿಯಕ್ಕೆ ಬರುತ್ತಿವೆಯೆಂದೂ ಹೇಳಲಾಗಿದೆ ಇದನ್ನು ಪರಿಶೀಲಿಸಲೋಸುಗ ಕಳೆದ 16 ನೆಯ ತಾರೀಖಿನ ದಿವಸ ಚೀಣಾದಲ್ಲಿ ಸಭೆ ಸೇರಿತ್ತು

ಜರ್ಮನಿಯಲ್ಲಿ ದುಡಿಯಲು ವಿದೇಶೀ ಗುಲಾಮರು

ವಿದೇಶೀಯರನ್ನು ನಿರ್ಬಂಧವಾಗಿ ಜರ್ಮನಿಯಲ್ಲಿ ದುಡಿಯಲು ನಿಯೋಗಿಸುವ ಕಾರ್ಯವನ್ನು ನಾಜಿಗಳು ಬಹಳ ಚುರುಕಿನಿಂದ ನಡೆಸುತ್ತಿದ್ದಾರೆ ಈ ಗುಲಾಮರಿಂದ ತುಂಬಿದ ರೈಲುಗಳು ಫ್ರಾನ್ಸಿನಿಂದ ಜರ್ಮನಿಗೆ ತೆರಳುತ್ತಲೇ ಇವೆ ಪೋಲೆಂಡಿನ ಜನರನ್ನು ಗುಂಪುಗುಂಪಾಗಿ ಹಿಡಿದು ಜರ್ಮನಿಗೆ ರವಾನಿಸಲಾಗುತ್ತಿದೆ ನಾರ್ವೆ ಬೆಲ್ಜಿಯಂ ಮತ್ತು ಹಾಲೆಂಡಿನ ಎಲ್ಲಾ ಕಡೆಯೂ ನಾಜಿಗಳು ನಿರ್ಬಂಧವಾಗಿ ಕೂಲಿಗಾರರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಇದಕ್ಕಾಗಿ 50 ಲಕ್ಷ ಜನರನ್ನು ತೆಗೆದುಕೊಂಡಿದ್ದಾರೆಂದು ಪ್ರಕಟವಾಗಿದೆ

ಬ್ರಿಟನ್ನಿನ ಯುದ್ಧದ ಖರ್ಚು

ಬ್ರಿಟನ್ನು ಈಗಾಗಲೇ ಯುದ್ಧಕ್ಕಾಗಿ 8600 ಮಿಲಿಯ ಪೌಂಡುಗಳನ್ನು ವೆಚ್ಚಮಾಡಿದೆಯೆಂದೂ ಸರಾಸರಿ ವಾರಕ್ಕೆ 84 ಮಿಲಿಯ ಪೌಂಡುಗಳನ್ನು ಖರ್ಚುಮಾಡುತ್ತದೆಯೆಂದೂ ಸರ್ ಕಿಂಗ್ಸ್‌ಲೆವುಡ್‌ರವರು ಕಾಮನ್ಸ್ ಸಭೆಯಲ್ಲಿ ಹೇಳಿದರು

ಅಮೆರಿಕದ ನೌಕಾಬಲ ಹೆಚ್ಚಬೇಕು

ಅಮೆರಿಕದ ನೌಕಾಬಲವನ್ನು ಈಗಿರುವದಕ್ಕಿಂತ ಎರಡರಷ್ಟು ಹೆಚ್ಚಿಸುವದಕ್ಕಾಗಿ 8550 ಮಿಲಿಯ ಡಾಲರುಗಳನ್ನು ವೆಚ್ಚ ಮಾಡಲು ರೆಪ್ರೆಸೆಂಟೆಟಿವ್ ಸಭೆಯು ನೌಕಾ ಸಮಿತಿಯಲ್ಲಿ ಒಪ್ಪಿಗೆ ದೊರೆಯಿತು 1400 ನೌಕೆಗಳನ್ನು ಹೊಸದಾಗಿ ಕಟ್ಟಲಾಗುವದೆಂದು ತಿಳಿದು ಬಂದಿದೆ

ರಷ್ಯಾ ಪ್ಯಾರಾಚೂಟ್ ಸೈನಿಕರಿಗೆ ಮರಣ ದಂಡನೆ

ಸೋಫಿಯಾದಲ್ಲಿ ಕಳೆದ ವರ್ಷ ಒಂಧಿಳಿದ ಕೆಲವು ರಷ್ಯನ್ ಪ್ಯಾರಾಚೂಟ್ ಸೈನಿಕರಿಗೆ ಮರಣ ದಂಡನೆಯನ್ನೂ, ಇನ್ನು ಕೆಲವರಿಗೆ ದೀರ್ಘ ಶಿಕ್ಷೆಯನ್ನೂ ವಿಧಿಸಲಾಗಿದೆ

ಮೊರ್ಸ್‌ಬಿ ಮೇಲೆ ಶತ್ರು ಧಾಳಿ

ಮೊರ್ಸ್‌ಬಿ ಮೇಲೆ ೧೮ ಶತ್ರು ಬಾಂಬರುಗಳು ಫೈಟರ್ ವಿಮಾನಗಳ ಸಹಾಯದಿಂದ ದಾಳಿ ನಡೆಸಲು ಪ್ರಯತ್ನಪಟ್ಟು ವಿಫಲವಾದವು ಹಡಗು ನಿಲ್ದಾಣದಲ್ಲಿದ್ದ ೧ ಸಣ್ಣ ಹಡಗಿಗೆ ನಷ್ಟವಾಗಿದೆ ೩ ಶತ್ರು ವಿಮಾನಗಳನ್ನುರುಳಿಸಲಾಯಿತು.

ಪಶ್ಚಿಮದಲ್ಲಿ ನಾಜಿಗಳ ಎಚ್ಚರಿಕೆ

ಕಳೆದ ಹಲವು ವಾರಗಳ ವರೆಗೆ ಜರ್ಮನಿಯಲ್ಲಿ ಬಂಧಿಸಲ್ಪಟ್ಟಿದ್ದು ಈಗ ಲಂಡನ್ನಿಗೆ ಬಂದಿರುವ ಅಮೆರಿಕನ್ನರೊಬ್ಬರು ಹೇಳಿರುವ ಪ್ರಕಾರ ಪಶ್ಚಿಮ ಯೂರೋಪಿನಲ್ಲಿ ಮಿತ್ರ ಸೇನೆಗಳು ದಂಡೆತ್ತಿ ಬರುವವಾದರೆ ಅವರನ್ನು ಎದುರಿಸಲು ನಾಜಿಗಳು 30 40 ಡಿವಿಜನ್‌ಗಳಷ್ಟು ಸೈನ್ಯಗಳನ್ನು ಇಟ್ಟಿದ್ದಾರೆಂದು ತಿಳಿದು ಬರುತ್ತದೆ

ಅಕ್ಯಾಬ್ ಮೇಲೆ ಬ್ರಿಟಿಷ್ ವಿಮಾನ ದಾಳಿ

ಹವೆಯು ಕೆಟ್ಟಿದ್ದರಿಂದ ಬರ್ಮಾದ ಮೇಲೆ ಬ್ರಿಟಿಷ್ ವಿಮಾನ ಕಾರ್ಯಾಚರಣೆಯು ಜೋರಾಗಿಲ್ಲದಿದ್ದರೂ ಕೆಲವು ಬಾಂಬರ್ ವಿಮಾನಗಳು ಅಕ್ಯಾಬ್ ಮೇಲೆ ಬಾಂಬುಗಳನ್ನು ಹಾಕಿ ಮೆಷಿನ್ ಗನ್ನುಗಳನ್ನು ಪ್ರಯೋಗಿಸಿದವು ಈ ದಾಳಿಯು ಮಿಲಿಟರಿ ಸ್ಥಾನಗಳ ಮೇಲೆಯೇ ನಡೆಯಿತು ಬಂದರಿನಲ್ಲಿದ್ದ ಒಂದುಹಡಗಿಗೆ ನಷ್ಟವುಂಟಾಯಿತು

ಖಾರಕೋವ್ ರಣರಂಗ

ಖಾರಕೋವ್ ರಣರಂಗದಲ್ಲಿ ಮಾರ್ಷಲ್ ಟಿಮೊಷಿಂಕೋರವರ ಸೈನ್ಯಗಳು ಬಹಳ ಸಾಹಸದಿಂದ ಶತ್ರುಗಳನ್ನು ತಡೆದಿವೆ ಜರ್ಮನರ ಮುತ್ತಿಗೆಯು ಬಹಳ ಮಟ್ಟಿಗೆ ನಿಷ್ಫಲವಾಗಿದೆ ಜರ್ಮನರಿಗೆ ಅಪಾರ ಹಾನಿಯಾಗುತ್ತಿದ್ದರೂ ಅವರು ಅದನ್ನು ಲೆಕ್ಕಿಸದೆ ಹೊಸಹೊಸಸೈನ್ಯಗಳನ್ನೂ ವಿಮಾನಗಳನ್ನೂ ಟ್ಯಾಂಕುಗಳನ್ನೂ ಮೇಲಿಂದ ಮೇಲೆ ಕಳುಹಿಸುತ್ತಲೇ ಇದ್ದಾರೆ ಹೊಡೆದಾಟವು ಉಗ್ರರೀತಿಯಲ್ಲಿ ನಡೆಯುತ್ತಿದೆ ಖಾರಕೋವ್ ರಂಗದ ಹಲವು ಕಡೆಗಳಲ್ಲಿ ರಷ್ಯನರು ಶತ್ರುಗಳ ಮೇಲೆ ಬಿದ್ದು ಅವರನ್ನು ಅಪಾರನಷ್ಟದೊಡನೆ ಹಿಮ್ಮೆಟ್ಟಿಸಿದ್ದಾರೆ ಒಂದು ವಾರದಲ್ಲಿ 60 70 ಟ್ಯಾಂಕ್ ಮುತ್ತಿಗೆಗಳನ್ನು ನಿರರ್ಥಕ ಪಡಿಸಲಾಗಿದೆ ಒಂದು ಕಡೆಯಲ್ಲಿ ಜರ್ಮನರು ಉಪಯೋಗಿಸಿದ 74 ಟ್ಯಾಂಕುಗಳಲ್ಲಿ 50 ಟ್ಯಾಂಕುಗಳನ್ನು ರಷ್ಯನರು ಧ್ವಂಸಮಾಡಿದರು.

ನಾಜಿಗಳಿಗೆ ನದಿಯನ್ನು ದಾಟಲಾಗಲಿಲ್ಲ

ಖಾರಕೋವ್ ಯುದ್ಧರಂಗದಲ್ಲಿರುವ ನದಿಯೊಂದನ್ನು ದಾಟಲು ನಾಜಿಗಳು ನಡೆಸಿದ ಪ್ರಯತ್ನವು ವಿಫಲವಾಯಿತೆಂದೂ, ರಷ್ಯ ಫಿರಂಗಿ ದಳದವರೂ ಟ್ಯಾಂಕ್ ದಳದವರೂ ಮತ್ತು ಕಾಲಾಳುಗಳೂ ಶತ್ರುಗಳನ್ನು ನದಿಯ ಪೂರ್ವ ದಡಕ್ಕೆ ಕಲಸದಂತೆ ಹಿಂದೆ ತಳ್ಳಿದಾಗ 1500 ಮಂದಿ ಜರ್ಮನರು ಹತರಾದರೆಂದೂ, 14 ಟ್ಯಾಂಕ್ ಧ್ವಂಸಕ ಫಿರಂಗಿಗಳೂ ಅಪಾರ ಸಂಗ್ರಾಮ ವಸ್ತುಗಳೂ ರಷ್ಯನರ ವಶವಾದುವೆಂದೂ ಹೇಳಲಾಗಿದೆ

ಚರ್ಚಿಲ್-ರೂಜ್‌ವೆಲ್ಟರ ಸಂಭಾಷಣೆ

ವಾಷಿಂಗ್‌ಟನ್ನಿನಲ್ಲಿ ನಡೆಯುತ್ತಿರುವ ಚರ್ಚಿಲ್–ರೂಜ್‌ವೆಲ್ಟರ ಸಂಭಾಷಣೆಯಲ್ಲಿ ಮಿತ್ರ ಪಕ್ಷದವರಿಗೆ ಉಂಟಾಗುತ್ತಿರುವ ವಿಶೇಷವಾದ ಹಡಗುಗಳ ನಷ್ಟ, ಲಿಬ್ಯಾದಲ್ಲಿರುವ ಜ|| ರೋಮೆಲ್ಲರವರು ನಡೆಸುತ್ತಿರುವ ಕಾರ್ಯಾಚರಣೆಯಿಂದ ಮಿತ್ರ ಪಕ್ಷದವರಿಗೆ ಉಂಟಾಗಿರುವ ಸಂದಿಗ್ಧ ಪರಿಸ್ಥಿತಿ, ಜರ್ಮನರು ಕಾಕ್ಸಸ್ ಕಡೆಗೆ ಹೋಗುವ ಪ್ರಕರಣ, ಯೂರೋಪಿನಲ್ಲಿ 2 ನೆಯ ಯುದ್ಧರಂಗವನ್ನೇರ್ಪಡಿಸುವ ವಿಚಾರ–ಇವುಗಳು ಮುಖ್ಯವಾದುವೆಂದು ಹೇಳಲಾಗಿದೆ

ಅಮೆರಿಕದಲ್ಲಿ ಯುದ್ಧ ಸಾಮಗ್ರಿ ಸೃಷ್ಟಿ

ಬ್ರಿಟನ್ನಿನಲ್ಲಿ ತಯಾರಾಗುತ್ತಿರುವದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಾಮ ವಸ್ತುಗಳು ಅಮೆರಿಕದಲ್ಲಿ ತಯಾರಾಗುತ್ತಿವೆಯೆಂದೂ ಅಮೆರಿಕದ ಶಸ್ತ್ರಾಸ್ತ್ರಗಳು ಅಕ್ಸಿಸ್ ರಾಷ್ಟ್ರಗಳನ್ನು ಧ್ವಂಸಮಾಡಲು ಶಕ್ತವಾಗುವವೆಂದೂ, ಈಗ ಜಪಾನ್ ಜರ್ಮನಿಗಳು ನಿರ್ಮಿಸುತ್ತಿರುವದಕ್ಕಿಂತ ಹೆಚ್ಚು ಎಲಕರಣೆಗಳನ್ನು ಅಮೆರಿಕವು ತಯಾರಿಸುತ್ತಿದೆಯೆಂದೂ ಅಲ್ಲದೆ ಕಳೆದ 10 ವರ್ಷಗಳಲ್ಲಿ ಅಕ್ಸಿಸ್ ರಾಷ್ಟ್ರಗಳು ಶೇಖರಿಸಿದ್ದ ವಸ್ತು ಸಂಗ್ರಹವನ್ನು ಅಮೆರಿಕವೀಗ ಮೀರಿಸುತ್ತಿದೆಯೆಂದೂ ಶ್ರೀ ಡೊನಾಲ್ಡ್ ನೆಲ್ಸನ್‌ರವರು ತಿಳಿಸಿದರು

ಫ್ರೆಂಚ್ ತೀರಪ್ರದೇಶಗಳಿಂದ ಜನರ ರವಾನೆ

ಡಯಪ್ಪೆಯಿಂದ ಹಿಡಿದು ಬೊಲಾಯವರೆಗೆ ಫ್ರೆಂಚ್ ತೀರಪ್ರದೇಶದಲ್ಲಿರುವ ಜನರೆಲ್ಲರೂ ತಮ್ಮ ಸ್ಥಳಗಳನ್ನು ಬಿಟ್ಟು ಹೋಗಬೇಕೆಂದು ಜರ್ಮನರು ಆಜ್ಞೆ ಮಾಡಿದ್ದಾರೆ ಆ ಜನಗಳು ಬ್ರಿಟಿಷ್ ಸೈನ್ಯಾಧಿಕಾರಿಗಳಿಗೆ ಸಹಾಯ ಮಾಡಬಹುದೆಂದು ಭಾವಿಸಿ ಈ ಆಜ್ಞೆಯನ್ನು ಹೊರಡಿಸಲಾಗಿದೆ.

ಐರ್ಲೆಂಡ್ ತರುಣಿಯರಿಗೆ ಎಚ್ಚರಿಕೆ

ಉತ್ತರ ಐರ್ಲೆಂಡಿನಲ್ಲಿ ಅನೇಕ ಸೈನಿಕರು ವಿಶೇಷವಾಗಿ ಬಂದಿಳಿದಿರುವರಷ್ಟೆ! ಈ ಸಂದರ್ಭದಲ್ಲಿ "ಅಮೆರಿಕನ್ ಯೋಧರನ್ನು ಮದುವೆಮಾಡಿಕೊಳ್ಳಬೇಡಿರಿ' ಎಂಬುದಾಗಿ ಉತ್ತರ ಐರ್ಲೆಂಡಿನ ತರುಣಿಯರಿಗೆ ಎಚ್ಚರಿಕೆ ಕೊಡಲಾಗಿದೆ ಅಮೆರಿಕದ ಯೋಧರನ್ನು ಮದುವೆಯಾದ ಮಾತ್ರದಿಂದ ಅಮೆರಿಕ ಪೌರರ ಹಕ್ಕು ದೊರೆಯುವದಿಲ್ಲವೆಂದೂ, ವಿವಾಹವಿಚ್ಛೇದನವಾದರೆ ಜೀವನಾಂಶ ಕೂಡ ಸಿಗುವದಿಲ್ಲವೆಂದೂ ತಿಳಿಸಲಾಗಿದೆ

ಬರ್ಮಾದಿಂದ ಭಾರತಕ್ಕೆ ಬಂದಿರುವ ಜನಸಂಖ್ಯೆ

ಮೇ ಅಂತ್ಯದವರೆಗೆ ಬರ್ಮಾದಿಂದ 4 ಲಕ್ಷ ಜನರು ಭರತಖಂಡಕ್ಕೆ ಬಂದಿರುವರೆಂದೂ ಅವರಲ್ಲಿ ಬಹುಮಂದಿ ಭಾರತೀಯರೆಂದೂ, ಇನ್ನೂ ಅನೇಕರು ಭಾರತದ ಕಡೆಗೆ ಬರುತ್ತಿದ್ದಾರೆಂದೂ, ಅವರಿಗೆ ಸಹಾಯನೀಡಲು ಅಧಿಕಾರಿಗಳು ಸರ್ವಪ್ರಯತ್ನವನ್ನೂ ಮಾಡುತ್ತಿದ್ದಾರೆಂದೂ ಭಾರತದ ಕಾರ್ಯದರ್ಶಿಗಳಾದ ಶ್ರೀ ಅಮೆರಿಯವರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು

ಲಿಬ್ಯಾ ಕದನ

ಈಗ ಲಿಬ್ಯಾದಲ್ಲಿ ಜರ್ಮನರು ಮೇಲೆ ಬಿದ್ದು ಮುನ್ನುಗ್ಗುವ ಪ್ರಯತ್ನವನ್ನು ನಡೆಸುತ್ತಿರುವರಷ್ಟೆ! ಈಗ ಆರಂಭವಾಗಿರುವ ಈ ಕದನವು 4 ನೇ ಘಟ್ಟವೆಂದೂ 2-3 ವಾರಗಳಕಾಲ ಅದು ನಡೆಯ ಬಹುದೆಂದೂ ಜರ್ಮನ್ ಅಧಿಕಾರಿಗಳೊಬ್ಬರು ತಿಳಿಸಿರುವರು

ಕಲ್ಕತ್ತಾದಲ್ಲಿ ಸ್ಕೂಲುಗಳನ್ನು ಪ್ರಾರಂಭಿಸುವದಿಲ್ಲ

ಬೇಸಿಗೆ ರಜಾದಿನಗಳು ಕಳೆದ ಮೇಲೆ ತೆರೆಯಬೇಕಾಗಿದ್ದ ಕಲ್ಕತ್ತ ನಗರದಲ್ಲಿರುವ ಶಿಕ್ಷಣಸಂಸ್ಥೆಗಳನ್ನೂ ಚಿತ್ತಗಾಂಗಿನಲ್ಲಿರುವ ಶಿಕ್ಷಣ ಸಂಸ್ಥೆಗಳನ್ನೂ ಇನ್ನೊಂದು ಆಜ್ಞೆ ಹೊರಡುವವರೆಗೆ ತೆರೆಯಕೂಡದೆಂದು ಬಂಗಾಳಾ ಸರ್ಕಾರದವರು ಆಜ್ಞೆಮಾಡಿದ್ದಾರೆ

ಸಂಗ್ರಾಮಕ್ಕೆ ನರೇಂದ್ರರ ಸಹಕಾರ

ಭಾರತದ ರಾಜಮಹಾರಾಜರು ಈಗ ನಡೆಯುತ್ತಿರುವ ಮಹಾಯುದ್ಧಕ್ಕೆ ಅನೇಕ ಮುಖದಿಂದ ಸಹಾಯ ನೀಡುತ್ತಿದ್ದಾರೆ 1942 ನೇ ಎಪ್ರಿಲ್ ತಿಂಗಳ ಅಂತ್ಯದವರೆಗೆ 31030000 ರೂಪಾಯಿಗಳನ್ನು ಕೊಟ್ಟಿದ್ದಾರೆ ಮಯೂರ್‌ಜಂಗ್ ಮಹಾರಾಜರು ತಮ್ಮ ಎರಡು ವಿಮಾನಗಳನ್ನು ಇಂಡಿಯಾ ಸರ್ಕಾರಕ್ಕೆ ಕೊಟ್ಟಿರುತ್ತಾರೆ ನಮ್ಮ ಮಹಾರಾಜರು ನವದೆಹಲಿಯಲ್ಲಿರುವ ಮೂರು ಭವನಗಳನ್ನು ಸೈನ್ಯ ಶಾಖಾಧಿಕಾರಿಗಳ ಉಪಯೋಗಕ್ಕೆ ಕೊಟ್ಟಿರುತ್ತಾರೆ

ಪೆಸಿಫಿಕ್‌ನಲ್ಲಿ ಜಪಾನಿಗಾದ ನಷ್ಟ

ಕೋರಲ್ ಸಮುದ್ರದಲ್ಲೂ, ಮಿಡ್‌ವೇ ದ್ವೀಪದಲ್ಲೂ ನಡೆದ ಸಮುದ್ರ ಕದನದಲ್ಲಿ ಅಮೆರಿಕದಕಡೆ ಮೃತರಾದ ಯೋಧರಿಗೆ ಹತ್ತರಷ್ಟು ಜನರು ಜಪಾನರಕಡೆ ಸತ್ತಿರುವರೆಂದೂ, ಎರಡು ಕಡೆಯ ವಿಮಾನನಷ್ಟವೇನೋ ಒಂದೇ ಪ್ರಮಾಣದಲ್ಲಿತ್ತೆಂದೂ ಡಿಸೆಂಬರ್ 7 ರಿಂದೀಚೆಗೆ ಅಮೇರಿಕನ್ನರು ಜಪಾನನ್ನು ಎದುರಿಸಿದಾಗಲೆಲ್ಲ ಶತ್ರುಗಳಿಗೆ ಹೆಚ್ಚಿನ ಹಾನಿಯಾಗಿದೆಯೆಂದೂ ಪೆಸಿಫಿಕ್‌ನಲ್ಲಿರುವ ಅಮೆರಿಕ ನೌಕಾಬಲದ ದಂಡನಾಯಕರಾದ ಜ|| ನಿಮಿಟ್ಜರವರು ತಿಳಿಸಿದ್ದಾರೆ

ಆಸ್ಟ್ರೇಲಿಯದಲ್ಲಿ ಭಾರಿ ವಿಮಾನ ಯುದ್ಧ

ಅನೇಕ ವಾರಗಳಿಂದಲೂ ನಡೆಯದಿದ್ದ ಭಾರಿ ವಿಮಾನ ಯುದ್ಧವು ಮೊನ್ನೆ ಆಸ್ಟ್ರೇಲಿಯದ ಉತ್ತರ ಭಾಗದಲ್ಲಿ ನಡೆಯಿತು ಜಪಾನರು ಎರಡು ಪ್ರದೇಶಗಳಲ್ಲಿ ಪ್ರಬಲತರವಾದ ವಿಮಾನ ಬಲದಿಂದ ಕೂಡಿ ಯುದ್ಧವನ್ನು ಉಪಕ್ರಮಿಸಿದರು ಡಾರ್ವಿನ್ ಬಂದರಿನ ಮೇಲೆ ಜಪಾನರು ಭಾರಿ ಪ್ರಮಾಣದಲ್ಲಿ ವಿಮಾನದಾಳಿಯನ್ನು ನಡೆಸಿದರು ಅಲ್ಲದೆ ಅತ್ತ ನ್ಯೂಗಿನಿಯ ಮೇಲೆ ನಡೆದ ವಿಮಾನಯುದ್ಧವೂ ಸಹ ಅತ್ಯಂತ ಭಾರಿ ಯುದ್ಧವೆಂದು ಹೇಳಲಾಗಿದೆ

ಚೀಣಾ ಜಪಾನ್ ಸಂಗ್ರಾಮ

ಚೆಕಿಯಾಂಗ್ ಮತ್ತು ಚಿಯಾಂಗ್ಸಿ ಪ್ರಾಂತ್ಯಗಳಿಗೆ ಸಂಬಂಧ ಕಲ್ಪಿಸಿರುವ ಎಲ್ಲ ರಸ್ತೆಗಳನ್ನೂ ರೈಲುಮಾರ್ಗಗಳನ್ನೂ ಹಿಡಿಯಬೇಕೆಂಬ ಜಪಾನರ ಉದ್ದೇಶವು ಸದ್ಯಃ ನೆರವೇರುವದರಲ್ಲಿದೆ ಚೆಕಿಯಾಂಗ್ ಚಿಯಾಂಗ್ಸಿ ಗಡಿಯ ಪಶ್ಚಿಮಕ್ಕೆ 40ಮೈಲು ದೂರದಲ್ಲಿರುವ ಷಾಂಗೊ ಎಂಬ ಮುಖ್ಯ ರಸ್ತೆ ಮತ್ತು ರೈಲು ಇರುವ ನಗರವನ್ನು ಚೀಣರು ತ್ಯಜಿಸಿ ಹಿಂದೆ ಸರಿದರು ಆ ನಗರವನ್ನು ಗೆಲ್ಲಲು 8000 ಜಪಾನರು ತಮ್ಮ ಪ್ರಾಣಗಳನ್ನು ಬಲಿಕೊಟ್ಟರೆಂದು ಹೇಳಲಾಗಿದೆ. ಚೀಣಾ ಸೈನಿಕರು ಚೂಷೀ ನಗರದ ಪಶ್ಚಿಮಕ್ಕೆ 26 ಮೈಲು ದೂರದಲ್ಲಿರುವ ಚಾಂಗ್‌ಷಾ ನಗರವನ್ನು ಪುನಃ ಹಿಡಿದಿದ್ದಾರೆ. ಜಪಾನ್ ಸೈನ್ಯದ ಹಿಂದುಗಡೆ ಸುಮಾರು 10 ಗ್ರಾಮಗಳು ತಿರುಗಿ ಚೀಣರ ಕೈಸೇರಿವೆ ಈಗ ಚೀಣಾ ಸೇನೆಗಳು ಪೂಚಾ ಕಡೆಗೆ ನುಗ್ಗುತ್ತಿವೆಯೆಂದು ಹೇಳಲಾಗಿದೆ.

ಶ್ರೀ ಸುಭಾಷ್‌ಚಂದ್ರಬೋಸರು.

ಶ್ರೀ ಸುಭಾಷ್ ಚಂದ್ರಬೋಸರು ಇತ್ತೀಚಿಗೆ ಹರ್ ಹಿಟ್ಲರರನ್ನೂ ಮತ್ತು ಮುಸೋಲಿನಿಯವರನ್ನೂ ಭೇಟಿ ಮಾಡಿ ಈಗ ಬಲ್ಗೇರಿಯಾಕ್ಕೆ ಆಗಮಿಸಿದ್ದಾರೆಂಬುದಾಗಿ ಸುದ್ದಿ ಬಂದಿದೆ

ರೈಲಿನಲ್ಲಿ ಕೂಸು

ರಾಯಚೂರಿನಿಂದ ಬಂದ ರೈಲುಗಾಡಿಯನ್ನು ಮದರಾಸ್ ಸೆಂಟ್ರಲ್ ಸ್ಟೇಷನ್ನಿನಲ್ಲಿ ಹುಡುಕಿದಾಗ ೧೦ ತಿಂಗಳ ಗಂಡು ಮಗುವು ಆಟವಾಡುತ್ತ ಮಲಗಿತ್ತು. ಪಕ್ಕದಲ್ಲಿ ಒಂದು ರೂಪಾಯಿ ಚಿಲ್ಲರೆಯೂ ಇದ್ದಿತು. ಪೋಲೀಸರು ಆ ಮಗುವನ್ನು ಮಕ್ಕಳ ಪೋಷಣ ಸಂಘಕ್ಕೆ ಕಳುಹಿಸಿಕೊಟ್ಟಿದ್ದಾರೆ

ಮೇಲ್ಛಾವಣಿ ಕುಸಿದು ಅನಾಹುತ

ದೆಹಲಿಯಲ್ಲಿ ಕಟ್ಟಲ್ಪಡುತ್ತಿರುವ ಅಮೇರಿಕನ್ ಸೈನ್ಯದ ಮುಖ್ಯ ಕಚೇರಿಯ ಒಂದುಭಾಗದ ಮೇಲ್ಛಾವಣಿಯು ಕುಸಿದುಬಿದ್ದು ಅದರಮೇಲೆ ಕೆಲಸಮಾಡುತ್ತಿದ್ದ ಅನೇಕ ಕೂಲಿಗಾರರು ಕೆಳಗೆ ಮುಚ್ಚಿಹೋದರು. ಇದುವರೆಗೆ 6 ಜನರನ್ನು ಮಣ್ಣಿನಿಂದ ಬಿಡಿಸಿ ಮೇಲಕ್ಕೆತ್ತಿ ಚಿಕಿತ್ಸೆಗಾಗಿ ಆಸ್ಪತ್ರೆಗೆಸಾಗಿಸಿದ್ದಾರೆ ಒಬ್ಬನು ಅಲ್ಲೇ ಸತ್ತುಹೋಗಿದ್ದನು ಇನ್ನು ಕೆಲವರಿಗೆ ಗಾಯಗಳಾಗಿವೆಯೆಂದು ತಿಳಿದುಬರುತ್ತದೆ

ಡಾ|| ರಾಘವೇಂದ್ರರಾಯರ ನಿಧನ !

ವೈಸ್ರಾಯರ ಮಂತ್ರಿಮಂಡಲದಲ್ಲಿ ಸಿವಿಲ್ ರಕ್ಷಣ ಸಚಿವರಾಗಿದ್ದ ಡಾ|| ರಾಘವೇಂದ್ರರಾಯರು 15 ನೆಯ ತಾ|| ದಿವಸ ನವದೆಹಲಿಯಲ್ಲಿ ಸ್ವರ್ಗಸ್ಥರಾದರು ವೈಸರಾಯರ ಮಂತ್ರಿಮಂಡಲದಲ್ಲಿ ಸಚಿವರ ಅಧಿಕಾರವನ್ನು ವಹಿಸಲು ಅವರು ಲಂಡನ್ನಿನಿಂದ ಆಗಮಿಸಿದಂದಿನಿಂದಲೂ ಅವರ ಪ್ರಕೃತಿ ನೆಟ್ಟಗಿರಲಿಲ್ಲ ಅವರಿಗೆ 52 ವಯಸ್ಸಾಗಿತ್ತು ಇವರ ನಿಧನದ ವಾರ್ತೆಯನ್ನು ಕೇಳಿದೊಡನೆಯೇ ಶ್ರೀ ಎನ್ ಆರ್ ಸರ್ಕಾರ್, ಸರ್ ರಾಮಸ್ವಾಮಿ ಮೊದಲಿಯಾರ್ ಮುಂತಾದವರು ಅವರ ಗೃಹಕ್ಕೆ ತೆರಳಿ ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು ವೈಸರಾಯರು ರಾಘವೇಂದ್ರರಾಯರ ಪತ್ನಿಯವರಿಗೆ ಪತ್ರವನ್ನು ಬರೆದು ತಮ್ಮ ಅನುತಾಪವನ್ನು ವ್ಯಕ್ತಗೊಳಿಸಿರುವರು

ಡಾ|| ರಾಘವೇಂದ್ರರಾಯರು ಮಹಾಮೇಧಾವಿಗಳು. ಮೊದಲು ಅವರು ಬಿಲಾಸ್‌ಪುರದಲ್ಲಿ ಬ್ಯಾರಿಸ್ಟರ್ ಆಗಿದ್ದರು ಅನಂತರ ರಾಜಕಾರಣದಲ್ಲಿ ಭಾಗವಹಿಸಿ ಹೆಸರುಗಳಿಸಿದರು ಮಧ್ಯಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಸ್ವರಾಜ್ಯಪಕ್ಷದ ಪ್ರಮುಖ ನಾಯಕರಾದರು. ಕಡೆಗೆ ಅವರು ಕಾಂಗ್ರೆಸ್ಸಿನಿಂದ ಬೇರೆಯಾದರು

ಶ್ರೀ ರಾಘವೇಂದ್ರರಾಯರು ಎರಡು ಸಾರೆ ಮಧ್ಯಪ್ರಾಂತ ಸರಕಾರದ ಸಚಿವರಾಗಿದ್ದರು. ೧೯೩೬ ರಲ್ಲಿ ಸ್ವಲ್ಪ ಕಾಲ ಅವರು ಅದೇ ಪ್ರಾಂತ್ಯದ ಗವರ್ನರಾಗಿ ಕೆಲಸಮಾಡಿದರು ಅನಂತರ ಭಾರತದ ಕಾರ್ಯದರ್ಶಿಗಳ ಸಲಹೆಗಾರರಾಗಿ ಲಂಡನ್ನಿಗೆ ತೆರಳಿದರು. ಎರಡು ವರ್ಷಗಳ ಕಾಲ ಅಲ್ಲಿದ್ದರು ಅನಂತರ ಭಾರತಕ್ಕೆ ಬಂದು ಇಂಡಿಯಾ ಸರ್ಕಾರದಲ್ಲಿ ಸಚಿವರಾಗಿದ್ದರು

ಸ್ವೀಕಾರ.

ಬಳ್ಳಾರಿ ಡಿ|| ಹುವ್ವಿನಹಡಗಲಿಯಲ್ಲಿರುವ ಮ||ರಾ|| ಮುದ್ದೇಬಾಳು ಬಸಪ್ಪನವರ ಸೊಸೆ ಸೌ|| ಗಂಗಮ್ಮನು ಶಿವಾಧೀನಳಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1 ರೂ ಮತ್ತು ಹೊಸಪೇಟೆಯಲ್ಲಿರುವ ಶ್ರೀ|| ಯಂ ಥಿಂ ನಂಜುಂಡಯ್ಯನವರು ವಕೀಲ ಇವರ ಪುತ್ರನು ಶಿವಾಧೀನನಾದ ಸಮಯದಲ್ಲಿ ತೆಗೆಯಿಸಿದ 1 ರೂ. ಒಟ್ಟು 2 ರೂ ಗಳು ಮ|| ರಾ|| ಗುಗ್ರಿ ಕುಚ್ಚೆಪ್ಪನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

[೩ನೇ ಪುಟದಿಂದ ಮುಂದುವರಿದುದು]

ತಮ್ಮ ವಿದ್ಯಾವ್ಯಾಸಂಗಗಳನ್ನು ಬಿಟ್ಟು ನಾಟಕಾಭಿನಯಕ್ಕಾಗಿ ನಿಲ್ಲಲುಪಕ್ರಮಿಸಿದರು. ಆಗಿನ ಕಾಲದ ಬ್ರಾಹ್ಮಣರು ಒಂದು ತುತ್ತು ಅನ್ನ ಸಿಕ್ಕಿದರೆ ಎಂತಹ ಅಸಾಧ್ಯ ಕಾರ್ಯವನ್ನಾದರೂ ಮಾಡಲು ಸಿದ್ಧರಾಗುವ ಸ್ಥಿತಿಗೆ ಬಂದರು. ಇಂತಹವರನ್ನು ನೋಡಿ ಅವಿದ್ಯಾವಂತರಾದ ಜನರೇ ಸೇರಿ, ನಾಟಕಸಂಘಗಳನ್ನೇರ್ಪಡಿಸಿಕೊಂಡು ಅಧರ್ಮಮಾರ್ಗ ಪ್ರವೇಶಕ್ಕೆ ಅವಕಾಶ ಕೊಡುವ ನಾಟಕಗಳನ್ನೇರ್ಪಡಿಸಿಕೊಂಡು, ಅವಿವೇಕಾಭಿನಯಗಳಿಂದ ಕೂಡಿದ ನಾಟಕಗಳನ್ನಾಡಲುಪಕ್ರಮವಾಯಿತು. ಅವರು ತಾರಾಶಶಾಂಕ, ಸಾರಂಗಧರನಾಟಕ— ಮುಂತಾದವುಗಳನ್ನಾಡಲುಪಕ್ರಮವಾಯಿತು. ಇದರಿಂದ ಜನಗಳು ದುರ್ಗುಣಿಗಳಾಗಹತ್ತಿದರು.

ಇದೇ ವಿಧವಾದ ಅನೇಕ ನಾಟಕಗಳನ್ನು ಆಡುತ್ತಾ ಬಂದುದರಿಂದ ಅಭಿನಯಕಾರರ ಹೃದಯದಲ್ಲಿ ನೀತಿಮಾರ್ಗವೇ ದೂರವಾಗಿ ಹೋಯಿತು. ಅಭಿನಯವೇಳೆಯಲ್ಲಿ ರಂಗಸ್ಥಳದ ಮೇಲೆ ಮುತ್ತುಕೊಡುವುದು, ಆಲಿಂಗನ ಮಾಡಿಕೊಳ್ಳುವುದು, ನಟನ ನಟಿಯನ್ನು ತೊಡೆಯಮೇಲೆ ಕೂಡಿಸಿಕೊಳ್ಳುವುದು ಇವೇ ಮುಂತಾದವುಗಳು ನಡೆಯುತ್ತಿದ್ದವು. ಇಂತಹ ಕೃತ್ಯಗಳು ಬಹಿರಂಗವಾಗಿ ಅಭಿನಯಿಸಿ ತೋರಿಸಬಹುದೋ ಇಲ್ಲವೋ ಎಂಬುದನ್ನು ಲೇಶವೂ ಯೋಚನೆಮಾಡುತ್ತಿರಲಿಲ್ಲ. ಇವರ ಈ ವಿಚಿತ್ರ ಕಾರ್ಯಗಳು ಅನುಚಿತವೆಂದು ನಿಲ್ಲಿಸಿ, ಸನ್ಮಾರ್ಗಕ್ಕೆ ತರಲು ಯಾರೂ ಒಬ್ಬಕಂಕಣರಾಗಿ ನಿಲ್ಲದೆ ಹೋಗುತ್ತಾ ಬಂದುದರಿಂದ ಕ್ರಮೇಣ ನಾಟಕಸಂಘಗಳ ಕ್ಷೀಣದಶೆಗೆ ಬರಲು ಕಾರಣವಾಯಿತು.

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶಿವಕೀರ್ತನ

ರಾಯಚೂರು ಜಿ|| ಜಂಬಲದಿನ್ನಿ ಗ್ರಾಮದಲ್ಲಿ ತಾ|| ೧೩ ೬ ೪೨ನೆಯ ದಿವಸ ಇಮ್ಮಡಿಸ್ಕೂಲಿನಲ್ಲಿ ಸದಾಶಿವಾರ್ಯರು ಮುದ್ದಾಬಳ್ಳಿ ಇವರು ರಾಜಶೇಖರ ಎಂಬ ಶಿವಕೀರ್ತನವನ್ನು ರಸವತ್ತಾಗಿ ಮಾಡಿ ಜನರಲ್ಲಿ ಗುರುಭಕ್ತಿಯನ್ನೂ ಧರ್ಮಜಾಗೃತಿಯನ್ನೂ ಉಂಟು ಮಾಡಿದರು. ವೀರಶೈವಮತಸ್ಥಾಪನಾಚಾರ್ಯರಾದ ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರ ಜಯಂತೀ ಮಹೋತ್ಸವಗಳನ್ನು ಪ್ರತಿಯೊಬ್ಬ ವೀರಶೈವರೂ ಆಚರಿಸಬೇಕೆಂದು ಪರಿಣಾಮಕಾರಕವಾಗಿ ಹೇಳಿದರು. ಬಳಿಕ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಗುರುಭಕ್ತ

|| ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ ||

ಜಾಹೀರ ಅಭಿನಂದನ

ಗುಲ್ಬರ್ಗಾ ತಾಲೂಕಿಗೆ ಸೇರಿದ ಜಹಗೀರ ಜೇವರಗಿ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಗುರುಶಾಂತಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ತಾ|| ೩೧ ೬ ೪೨ನೇ ದಿವಸ ಬುಧವಾರ ೫ ಘಂಟೆಗೆ ಸಭೆಸೇರಿ ಸೌ|| ಭಾಗೀರಥೀಬಾಯಿ ಕಟಾಪ ಸೋಲಾಪುರ ಇವರು ಸೋಲಾಪುರ ಮುನಿಸಿಪಾಲಿಟಿ ಸ್ಕೂಲಬೋರ್ಡ ವ್ಹಾಯಿಸ್ ಚೇರ್ಮನ್ ಸ್ಥಾನವನ್ನಲಂಕರಿಸಿದುದಕ್ಕಾಗಿ ಅವರ ಅಭಿನಂದನವು ಮಾಡಲ್ಪಟ್ಟಿತು. ಆ ಸಮಯದಲ್ಲಿ ಮ|| ಸಿದ್ಧರಾಮಪ್ಪ ದೇಸಾಯಿ ಇವರೇ ಮೊದಲಾದವರು ವ್ಯಾಖ್ಯಾನ ಮಾಡಿದರು. ಅನಂತರ ಅಧ್ಯಕ್ಷರು ಸೌ|| ಭಾಗೀರಥೀಬಾಯಿಯವರು ಪೂರ್ವದಿಂದಲೂ ಸಮಾಜಸೇವೆಯಲ್ಲಿ ನಿರತರಾಗಿರುವುದು ಲೋಕಪ್ರಸಿದ್ಧವಾಗಿರುವುದೆಂದೂ, ಇಂಥವರಿಗೆ ಈ ಪದವಿಯು ದೊರೆತದ್ದು ಸರ್ವರಿಗೂ ಆನಂದವಾಗಿರುವುದೆಂದೂ, ಇಲ್ಲಿಯವರೆಗೂ ವೀರಶೈವಸ್ತ್ರೀಯರಲ್ಲಿ ಯಾರೂ ಇಂತಹ ಪದವಿಗೆ ಬಂದಿರುವದಿಲ್ಲವೆಂದೂ, ಇವರು ಆಚಾರ ಕ್ರೀಮಿಗಳೂ ಆಚಾರ್ಯರಲ್ಲಿ ಭಕ್ತಿಯುಳ್ಳವರೂ ಶಾಂತಸ್ವಭಾವದವರೂ ಆಗಿರುವರೆಂದೂ ಹೇಳಿದರು. ಮಾತೃಶ್ರೀಯವರ ಭಾವಚಿತ್ರಕ್ಕೆ ಹಾರವನ್ನರ್ಪಿಸಿದಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜನೆಯನ್ನು ಹೊಂದಿತು. ಬಳೂರಗಿ ಗ್ರಾಮದಲ್ಲಿ ತಾ|| ೪ ೬ ೪೨ನೆಯ ದಿವಸ ಗುರುಶಂಕರ ಮಂಡಲಿಂಗಪ್ಪಮಾಸ್ತರ ಇವರ ಮನೆಯಲ್ಲಿ ಸೌ|| ಭಾಗೀರಥೀಬಾಯಿ ಕಟಾಪ ಇವರ ಅಭಿನಂದನವು ಮಾಡಲ್ಪಟ್ಟಿತು.

ಸಿದ್ಧರಾಮಪ್ಪ, ಕಾರಭಾರಿ

|| ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ||

ದಮನಕನೆಂಬ ನರಿಯ ನುಡಿಗಳು

(ಲೇಖಕರು ಶ್ರೀಪಟ್ಟದಸ್ವಾಮಿಗಳು ಹಿರೇಮಠ, ಕೊಣ್ಣೂರು.)

ಈ ಲೋಕದಲ್ಲಿ ಧನವುಳ್ಳವನೇ ಬಲವಂತನು. ದರಿದ್ರನೂ, ಬುದ್ಧಿಹೀನನೂ ಆದವನ ಕಾರ್ಯಗಳು ಬೇಸಿಗೆಯಲ್ಲಿ ಕಾಲು ಹೊಳೆಗಳು ಬತ್ತಿ ಹೋಗುವಹಾಗೆ ಕೊನೆಸಾಗುವದಿಲ್ಲವು. ಧನವುಳ್ಳವನಿಗೆ ಸ್ನೇಹಿತರು ಸಿಕ್ಕುವರು. ಧನವುಳ್ಳವನ ಹತ್ತಿರ ನೆಂಟರು ಬರುವರು. ಧನವುಳ್ಳವನೇ ಗಂಡಸು. ಧನವುಳ್ಳವನೇ ತಿಳಿದವನು. ನೆಂಟರು ಇಲ್ಲದ ದೇಶವೂ, ಗಂಡು ಮಕ್ಕಳಿಲ್ಲದ ಮನೆಯೂ, ಮೂರ್ಖನ ಮನಸ್ಸೂ ಶೂನ್ಯಗಳು. ಹೀನ ದೆಸೆಯಿಂದ ವರ್ತಿಸುವ ದರಿದ್ರನು ಅದಕ್ಕಿಂತಲೂ ಶೂನ್ಯನು. ವಿಕಾರವಾಗದ ಇಂದ್ರಿಯಗಳೂ, ಅಪ್ರತಿಹತವಾದ ಬುದ್ಧಿಯೂ, ಚತುರವಾದ ವಾಕ್ಯಪದ್ಧತಿಯೂ, ಪ್ರಸಿದ್ಧವಾದ ಹೆಸರೂ, ಮುಂಚೆ ಇದ್ದಾಗ್ಯೂ, ಮನುಷ್ಯನು ಧನವನ್ನು ಕಳೆದುಕೊಂಡಾಗ ಕ್ಷಣದಲ್ಲಿ ಅನ್ಯನಾಗುತ್ತಾನೆ, ಇದು ಬಹಳ ಆಶ್ಚರ್ಯವು.

ಮಾನಕ್ಕೆ ಹಾನಿ ಇಲ್ಲದ ಸ್ಥಳದಲ್ಲಿ ಇರಬೇಕು, ಮಾನಕ್ಕೆ ಹಾನಿಯಾಗುವ ಸ್ಥಳದಲ್ಲಿ ಇರಕೂಡದು. ದೇವತೆಗಳೊಂದಿಗೆ ವಿಮಾನವು ಸಿಕ್ಕರೂ ಅದು ಮಾನಹಾನಿಕರವಾದರೆ ಅದನ್ನು ಬಿಟ್ಟು ಬಿಡಬೇಕು. ಮುಂಚೆ ತಾನಿದ್ದ ಸ್ಥಳವನ್ನು ಬಿಟ್ಟು ಬೇರೆಸ್ಥಳಕ್ಕೆ ಬಂದಾಗ್ಯೂ, ತಾನು ಒಬ್ಬರನ್ನು ಕೇಳಬಾರದು. ಒಬ್ಬರನ್ನು ಕೇಳುವವನು ಜೀವನ್ಮೃತನು. ಅದು ಹೇಗೆಂದರೆ ಕೇಳಹೋಗುವಾಗ ಕಾಲು ತಡೆಯುವುದು. ಮಾತನಾಡುವದಕ್ಕೆ ನಾಲಿಗೆ ಜೋರಿಲ್ಲದೆ ಸ್ವರಹೀನವಾಗುವದು, ಮೈ ನಡಗುವದು, ಬೆವರು ಸುರಿಯುವದು, ತಲೆಭ್ರಮೆಯುಂಟಾಗುವದು. ಇಂಥ ದುರವಸ್ಥೆಗಳೊಂದಿಗೆ ಕೇಳುವ ಯಾಚಕನಿಗೆ ಮರಣಕಾಲದಲ್ಲಿ ಸಂಭವಿಸುವ ಚಿನ್ಹೆಗಳೆಲ್ಲಾ ಉಂಟಾಗುವವು. ಉಪಚಾರದ ಮಾತುಗಳಿಲ್ಲದ ಲೋಭಿಯನ್ನು ಕೇಳುವದು ಒಳ್ಳೆಯದಲ್ಲ. ಬಡತನದಿಂದ ನಾಚಿಕೆಯುಂಟಾಗುವದು, ನಾಚಿಕೆಯಿಂದ ಸತ್ವವು ಶಿಥಿಲವಾಗುವದು, ಸತ್ವವಿಲ್ಲದ್ದರಿಂದ ತಿರಸ್ಕಾರ ಬರುವದು, ತಿರಸ್ಕಾರದಿಂದ ಬೇಸರ ಹುಟ್ಟುವದು, ಬೇಸರದಿಂದ ದುಃಖ ಸಂಭವಿಸುವದು, ದುಃಖದಿಂದ ಬುದ್ಧಿಯು ಕೆಟ್ಟು ಹೋಗುವದು, ಬುದ್ಧಿಹೀನನಾದ್ದರಿಂದ ಕೀರ್ತಿ ನಶಿಸುವದು, ಅಪಕೀರ್ತಿ ಬರುತ್ತಲೇ ಎಲ್ಲರೂ ಗೇಲಿ (ಕುಚೇಷ್ಟೆ) ಮಾಡುವರು. ಆದಕಾರಣ ಅರ್ಥಹೀನನಾದವನು ಈ ಆಪತ್ತುಗಳಿಗೆಲ್ಲಾ ಗುರಿಯಾಗುವನು, ಅವನನ್ನು ಯಾರೂ ಲಕ್ಷ್ಯಮಾಡರು.

ಅಸತ್ಯ ಮಾತುಗಳನ್ನು ನುಡಿಯುವದಕ್ಕಿಂತ ಮೌನಿಯಾಗಿರುವದೆ ಮೇಲು. ಪರಧನವನ್ನು ಅಪಹರಿಸುವದಕ್ಕಿಂತ ಭಿಕ್ಷವೆತ್ತುವದು ಒಳ್ಳೆಯದು. ಊಳಿಗ (ಸೇವೆ) ಮಾಡುವುದರಿಂದ ಮಾನವೂ, ಬೆಳದಿಂಗಳಿಂದ ಕತ್ತಲೆಯೂ, ವ್ಯಾಧಿಯಿಂದ ಚಲುವತನವೂ ಹೇಗೆ ನಶಿಸುವವೋ, ಹಾಗೆಯೇ ಒಬ್ಬರನ್ನು ಯಾಚಿಸುವದರಿಂದ ಯಾಚಕನ ಗುಣಗಳೆಲ್ಲಾ ನಶಿಸುವವು. ಅಧಮರು ಧನವನ್ನು ಕೋರುತ್ತಾರೆ. ಮಧ್ಯಮರು ಧನ ಮಾನಗಳನ್ನು ಬಯಸುತ್ತಾರೆ, ಉತ್ತಮರು ಮಾನವನ್ನೇ ಅಪೇಕ್ಷಿಸುತ್ತಾರೆ. ಮಹಾತ್ಮರಿಗೆ ಮಾನವೇ ಧನ, ಆದಕಾರಣ ಪರಾನ್ನದಿಂದ ತಾನು ಹೇಗೆ ಮೈಯನ್ನು ಬೆಳಸಲಿ, ಇದು ಒಂದು ಮೃತ್ಯುದ್ವಾರ. ರೋಗಿಯೂ, ಬಹುಕಾಲ ಪ್ರವಾಸ ಮಾಡುವವನೂ, ಪರಾನ್ನವನ್ನು ಭುಂಜಿಸುವವನೂ, ಪರಗೃಹವಾಸಮಾಡುವವನೂ ಬದುಕಿ ಇದ್ದಾಗ್ಯೂ ಸತ್ತವನಿಗೆ ಸಮಾನನು.

ಉತ್ಸಾಹವುಳ್ಳವನಿಗೆ ಎಲ್ಲಿ ಹೋದರೂ ಸಂಪತ್ತು ಉಂಟಾಗುವದು. ಪಾದರಕ್ಷೆಯನ್ನು ಮೆಟ್ಟಿದವನ ಕಾಲಿಗೆ ಭೂಮಿಯೆಲ್ಲಾ ಚರ್ಮದಿಂದ ಹೊದ್ದಿಸಿ ಹಾಗೆ ಇರುವದಷ್ಟೇ! ಸಂತೋಷವೆಂಬ ಅಮೃತದಿಂ ತೃಪ್ತಿಹೊಂದಿ ಶಾಂತವಾದ ಮನಸ್ಸುಳ್ಳವರಿಗೆ ಎಂ ಸುಖವುಂಟಾಗುವದೋ ಅಂಥ ಸುಖವು ಧನಲುಬ್ಧರಾ ಈಚೆ ಆಚೆ ಓಡುವವರಿಗೆ ಹೇಗೆ ಉಂಟಾಗುವದು. ತುಂಬಾ ಧನಾಶೆಯುಳ್ಳವನಿಗೆ ನೂರು ಗಾವುದವಾದರ ದೂರವಾಗಿ ಇರದು. ನಿತ್ಯ ಸಂತೋಷಿಯಾಗಿ ಇರುವ ನಿಗೆ ಧನ ಕೈಗೆ ಸಿಕ್ಕಿದರೂ ಅದರಲ್ಲಿ ಆದರ ಹುಟ್ಟುವ ಅಸಾಧ್ಯವಾದ ಅರ್ಥ (ದ್ರವ್ಯ)ದನಿಮಿತ್ತ ಪ್ರಯುಕ್ತವಾ ಬಾರದು. ಧನವಂತನು ವಿವೇಕಿಯಾದರೆ ರತ್ನಹೊಂದಿ ಚಿನ್ನ ಸೇರಿದಹಾಗೆ ಶೋಭಿಸುವನು. ಭೂತದಯೆಗಿಂ ಪುಣ್ಯವೂ, ರೋಗವಿಲ್ಲದೆ ಇರುವದಕ್ಕಿಂತ ಸೌಖ್ಯವೂ, ಕಪಟವಿಲ್ಲದ ಪ್ರೀತಿಗಿಂತ ಸ್ನೇಹವೂ, ವಿವೇಕಿಯಾಗ ವದಕ್ಕಿಂತ ಪಾಂಡಿತ್ಯವೂ ಇಲ್ಲ. ಆದುಕಾರಣ ನನ ಹುಟ್ಟಿದ ವ್ಯಸನದಿಂದ ನಿನ್ನ ಬಳಿಗೆ ಬಂದೆನು. ಈ ಲೋ ಕದಲ್ಲಿರುವ ಸಕಲ ಜಂತುಗಳೂ ಹೇಗಾದರೂ ಆಹಾ ವನ್ನು ಸಂಪಾದಿಸಿಕೊಳ್ಳುವವು. ಆದರೆ ವಿವೇಕವುಳ್ಳವನು ಆಹಾರಕ್ಕೋಸ್ಕರ ಅನುಚಿತವಾದ ಕೆಲಸವನ್ನು ಮಾಡನು. ನೀನು ಪರೋಪಕಾರ ಮಾಡುವದಕ್ಕಾಗಿ ಶ್ರಮ ಪಡುವದು ತಪ್ಪಲ್ಲ. ಯಾರ ಕಷ್ಟ ಪರರಿಗೆ ಉಪಯೋಗವಾ ವದೋ ಅವನೊಬ್ಬನೇ ಪುಣ್ಯವಂತನು.

ವಿವೇಕವಿಲ್ಲದವನು ಶಾಸ್ತ್ರಗಳನ್ನು ಓದಿದಾಗ್ಯೂ ಅ ಗಳಲ್ಲಿ ಹೇಳಿರುವ ಪ್ರಕಾರ ಆಚರಿಸನು. ವಿವೇಕವುಳ್ಳವ ಶಾಸ್ತ್ರಗಳನ್ನು ಓದಿ ಅವುಗಳಲ್ಲಿ ಹೇಳಿರುವ ಮೇರೆಗೆ ನಡೆ ಕೊಳ್ಳುವನು. ಶಾಸ್ತ್ರಗಳನ್ನು ಓದಿದವನು ಅವುಗ ಹೇಳಿರುವ ಪ್ರಕಾರ ಆಚರಿಸಬೇಕು, ಇಲ್ಲದಿದ್ದರೆ ಶಾ ಗಳನ್ನು ಓದುವದು ವ್ಯರ್ಥ. ಔಷಧವನ್ನು ತೆಗೆ ಕೊಂಡಲ್ಲದೆ ಔಷಧದ ಹೆಸರು ಹೇಳಿದ ಮಾ ದಿಂದಲೇ ರೋಗ ನಾಶವಾಗುವುದೋ? ಶಾಸ್ತ್ರವ ಚೆನ್ನಾಗಿ ಓದಿದಾಗ್ಯೂ ಅದರಲ್ಲಿ ಇದ ಹೀಗೆ ಸಿದ್ಧಾಂತಮಾಡುವುದಕ್ಕೆ ಹೆದರುವವನಿಗೆ ಅದನ ಓದಿದ್ದರಿಂದ ಪ್ರಯೋಜನವಿಲ್ಲ. ಕುರುಡನ ಕೈಯ ದೀಪವಿದ್ದರೆ ಪದಾರ್ಥ ಅವನಿಗೆ ಕಾಣಿಸುವದೇ ದಾತ ಒಂದುವೇಳೆ ಯಾಚಕನಾಗುವನು, ಯಾಚಕ ಒಂದುವೇಳೆ ದಾತನಾಗುವನು. ಶೂರನು ಒಂದುವೇ ಯಾಚಕನಾಗುವನು, ಶತ್ರುಗಳನ್ನು ಜಯಿಸುವನ ಒಂದುವೇಳೆ ಸೋಲುವನು. ವಿದ್ವಾಂಸನು ಪ್ರಸಂಗದ ಒಂದುವೇಳೆ ಗೆಲ್ಲುವನು, ಒಂದುವೇಳೆ ಸೋಲುವನು. ಹೀಗೆ ಹೆಚ್ಚುಕಡಿಮೆ ಯಾರಿಗಾದರೂ ಆಗುವದುಂಟು. ಒಳ್ಳೇ ಅದೃಷ್ಟವಿರುವಾಗ ಚೆನ್ನಾಗಿ ನಡೆಯುವದು, ದುರ್ದೃಷ್ಟಬಂದಾಗ ವ್ಯತ್ಯಾಸವಾಗಿ ನಡೆಯುವದು, ಆದ್ದರಿಂದ ಇವುಗಳೆಲ್ಲಕ್ಕೂ ಅದೃಷ್ಟವೇ ಕಾರಣ. ಹಲ್ಲೂ, ಕೂದಲೂ, ಉಗುರೂ, ಮನುಷ್ಯರೂ ತಮ್ಮ ತಮ್ಮ ಸ್ಥಾನಗಳು ತಪ್ಪಿದರೆ ಕೆಲಸಕ್ಕೆ ಬಾರದೆಹೋಗುವರು. ಇದನ್ನರಿತು ಬುದ್ಧಿವಂತರು ಎಷ್ಟು ಮರ್ದಕೆ ಬಂದಾಗ್ಯೂ ತಮ್ಮ ಮಾನದ ಸ್ಥಾನವನ್ನು ಬಿಡರು.

ಹಿಡಿದ ಸ್ಥಲವನ್ನು ಬಿಡಕೂಡದೆಂಬದು ಕುತ್ಸಿತರ ಮಾತು. ಸತ್ಪುರುಷರು ಸಿಂಹಗಳು, ಆನೆಗಳು, ಮುಂತಾದವು ಮತ್ತೊಂದು ಸ್ಥಲಕ್ಕೆ ಹೋಗಿ, ಸುಖದಿಂದ ಇರುವವು. ಕಾಗೆ, ಕುತ್ಸಿತಪುರುಷ ಮೃಗ ಈ ಮೊದಲಾದವು ತಮ್ಮ ಸ್ಥಳಗಳನ್ನು ಬಿಡಲಾರದೆ, ಅಲ್ಲೇ ತೀರಿಹೋಗುವವು. ಬಹಳ ಅಲ್ಪವಾದವರಿಗೇನೇ ನಿವಾಸ ಭೂಮಿಯನ್ನು ಬಿಡುವದರಿಂದ ಆಪತ್ತು ಸಂಭವಿಸುವದು. ದೊಡ್ಡವರಿಗೆ ಅಂಥದೇನೂ ಇಲ್ಲ. ಅದು ಹೇಗೆಂದರೆ—ಮಣಿಗಳು ತಾವಿರುವ ಸ್ಥಾನವನ್ನು ಬಿಟ್ಟುಬಂದರೆ, ಅರಸುಗಳ ತಲೆಗಳಮೇಲೆ ಧರಿಸಲ್ಪಡುವವು. ಕಪ್ಪೆಗಳು ತಮ್ಮ ಸ್ಥಾನವನ್ನು ಬಿಟ್ಟುಬಂದಾಗ ಕಾಗೆಗಳ ಬಾಯಿಗಳಲ್ಲಿ ಬೀಳುವವು. ಧೈರ್ಯಶಾಲಿಯೂ ವಿವೇಕಿಯೂ ಆದವನಿಗೆ ಪರದೇಶವೆಂಬ ಭಯಲೇಶವೂ ಇಲ್ಲ. ಅವನು ಎಲ್ಲಿಇದ್ದರೂ ಅದೇ ಅವನಿಗೆ ಸ್ವದೇಶ. ಅಲ್ಲಿ ತನ್ನ ಭುಜಬಲದಿಂದಲೂ ಬುದ್ಧಿಬಲದಿಂದಲೂ ಸಂಪಾದಿಸಲ್ಪಟ್ಟ ಸಂಪತ್ತನ್ನು ಅನುಭವಿಸುತ್ತಾ ಇರುವನು. ಅದೆಂತೆಂದರೆ ಸಿಂಹವು ಮುಂಚೆತಾನಿದ್ದ ವನವನ್ನು ಬಿಟ್ಟು ಮತ್ತೊಂದು ವನದಲ್ಲಿ ಪ್ರವೇಶಿಸಿದಾಗ್ಯೂ, ತನ್ನ ಪೌರುಷದಿಂದಲೂ, ಬಲದಿಂದಲೂ ಮದಿಸಿದ ಆನೆಗಳ ಕುಂಭಸ್ಥಲಗಳನ್ನು ಸೀಳಿ ರಕ್ತವನ್ನು ಹೀರಿ, ಮಾಂಸವನ್ನು ಭಕ್ಷಿಸಿ ಸುಖವಾಗಿ ಇರುವದ

. ಉದ್ಯೋಗವುಳ್ಳವನು ಧನವನ್ನಾಗಲಿ, ಯಶಸ್ಸನ್ನಾ , ಮರಣವನ್ನಾಗಲಿ, ಹೊಂದುವನು. ಉದ್ಯೋಗವಿ ದವನು ಮರಣವನ್ನು ಮಾತ್ರವೇ ಹೊಂದುವನಲ್ಲದೆ, ಧನ ನ್ನಾಗಲಿ, ಯಶಸ್ಸನ್ನಾಗಲಿ, ಹೊಂದಲಾರನು ಪಕ್ಷಿಗಳು ತುವನ್ನೂ, ಮೀನುಗಳು ಕೊಳಗಳನ್ನೂ ಹೊಂದುವ ಗೆ ಉದ್ಯೋಗವುಳ್ಳವನು ಧನವನ್ನೂ, ಸಹಾಯ ನ್ನೂ, ಹೊಂದುವನು ಹಾಲುವಣಾಂಕೆ, (ಹಿಂಜರಿ ಕೆ(ಣ)ಜನ್ಮಭೂಮಿಯಲ್ಲಿ ಆಶೆ, ರೋಗಿಯಾಗುವಿಕೆ, ಭ ಶೀಲತೆ, ಅಸಂತೋಷ, ಈ ಐದೂ ಪೂಜ್ಯತೆಗೆ ವಿಘ್ನ ಗಳು ಇವುಗಳನ್ನು ಪರಿಹರಿಸಿದ ಪುರುಷನು ಜ್ಯನಾಗುವನು ಪೂಜ್ಯತೆಯಿಂದ ಸಂಪತ್ತು ಉಂಟಾ ವದು ಸಂಪತ್ತಿನಾದ್ದರಿಂದ ಸುಖಗಳನ್ನು ಅನು ವಿಸುವನು. ಪ್ರಾಪ್ತವಾದ ಸುಖಗಳನ್ನಾಗಲಿ, ದುಃಖ ಗಳನ್ನಾಗಲಿ ಅನುಭವಿಸಿಯೇ ತೀರಬೇಕು ನಾವು ೋರದೆ ಸುಖವಾಗಲಿ, ದುಃಖವಾಗಲಿ ಬರು ದು ಸುಖಬಂತೆಂದು ಸಂತೋಷಿಸಬಾರದು ದುಃಖ ಂತೆಂದು ವ್ಯಸನಪಡಬಾರದು ಈ ನೀತಿಯ ನುಡಿಗಳು ಉಪದೇಶಪರವಿದ್ದುದರಿಂದ ಪ್ರತಿಯೊಬ್ಬ ಮಾನವನೂ, ದನ್ನು ಅಕ್ಷರಶಃ ನೆನಪಿನಲ್ಲಿಟ್ಟುಕೊಂಡು ಇದರಂತೆ ಚರಿಸಿ ಇದರ ಫಲವನ್ನು ಹೊಂದಿ, ಧನ್ಯರಾಗ ೇಕೆಂದು ಆಶಿಸುತ್ತೇವೆ

(ಪಂಚತಂತ್ರ)

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ತಿ ಸುಲಭಕ್ರಯದಲ್ಲಿ ದೊರೆಯುವವು

ಭಸ್ಮಗಳು

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ಾಲಸಿಂಧೂರ	೧	೪—೦—೦
ಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಾಭಸ್ಮ	೧	೦—೧೨—೦
ಸುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಲಾಜಿತ ಸೂರ್ಯಪುಟಿ	೧	೧—೦—೦
ಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಸ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು ಪಿ.

ಸಿದ್ಧಾಂತಶಿಖಾಮಣಿ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ

ಭಾವಪ್ರಕಾಶನಾಮಕವ್ಯಾಖ್ಯಾನದಿಂದ ಅಲಂಕೃತವಾದುದು.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹುಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೩ ಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದೆ ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನ ವರೆಗೆ ಅನೇಕರು ಅನೇಕವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿ ನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ವೇದ್ಯವಾಗುವುದು ಪಾಠಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿ, ಜಗತ್ಪ್ರಸಿದ್ಧವಾಗಿರುವ 438 M F Printings ಕಾಗದದಲ್ಲಿ ಈ ಗ್ರಂಥರತ್ನವನ್ನು ಮುದ್ರಣಮಾಡಿಸಿದ್ದಾರೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆನಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ಪಠಿಸಿಯೇ ತೀರಬೇಕು. ಈ ಗ್ರಂಥವನ್ನು ಪಠಿಸದ ಮಾನವನ ಜನ್ಮವು ವ್ಯರ್ಥವೆಂದು ಸಾರಿಸಾರಿ ಹೇಳಬಹುದಾಗಿದೆ ಆದುದರಿಂದ ಗುರುಭಕ್ತರು ಈ ಗ್ರಂಥದ ಪ್ರಚಾರದ ಬಗ್ಗೆ ವೀರಕಂಕಣವನ್ನು ಕಟ್ಟಿ ಕೆಲಸಮಾಡಬೇಕು ಇದೇ ವೈದಿಕಮತದ ಮೂಲಸ್ತಂಭ! ಇದೇ ರೇಣುಕಗಣನಾಥನ ವಿಜಯಧ್ವಜ! ಈ ವಿಜಯಧ್ವಜವು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿಯೂ ಮೆರೆಯುವಂತೆ ಮಾಡುವುದೇ ಗುರುಭಕ್ತರ ಮುಖ್ಯ ಕರ್ತವ್ಯ! ಬೆಲೆ ೩ ರೂಪಾಯಿ

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತತತ್ತ್ವಗಳೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ಶ್ರೇಷ್ಠ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಡಂಗುರಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೭೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುಕ್ತಿಪಥಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ಕರು ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮೀಷನ್ ವಜಾ ಹೋಗಲಾಗಿ ೬ ರೂ ಗೆ ದೊರೆಯುವುದು ವಿ. ಪಿ ಚಾರ್ಜು ೧ ರೂ ೫ ಅಣೆ ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ X ೧೫ ಬೆಲೆ ೧ಕ್ಕೆ	೦—೪—೦
ಶ್ರೀರೇಣುಕಾಚಾರ್ಯರ ಲಿಂಗೋದ್ಭವದ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಶಿಷ್ಯರಾದ ಅಗಸ್ತ್ಯ ದಧೀಚಿ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ X ೧೪ ಬೆಲೆ	೦—೧—೬
ಸಹ್ಯ [illegible] ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪ X ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ X ೭ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦	೦—೪—೦
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಬೆಲೆ ೧ಕ್ಕೆ	೦—೨—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮಚ್ಛಿಖರದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು

ಡಾಕ್ಟರ್ ಜೆ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನ ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂದು ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಡಬ್ಬಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ ಪಿ ೬ ಆಣೆ ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[54] ಪೋ ಬಾ ೪೧೦, ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಷಟ್ಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಷಟ್ಶಾಸ್ತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಪಾಕೆಟ್ಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) ..	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ..	೮ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣಗಳು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ . ..	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತವರ್ಣನ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೫೦ ಮಹತ್ವದ ಫೋಟೋಗಳಿರುವುದು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷ್ಯೋಪೇತವಾದ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ ಕಾರಣಾಗಮ. ಮುಕುಟಾಗಮ ಸೂಕ್ಷ್ಮಾಗಮಗಳಿವ ಸೇರಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) ..	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	१ रु
वीरशैवरत्न (मराठी)	१ रु
महानारायणोपनिषत् (वीरशैवभाष्य संस्कृत)	१ रु
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಲ್ಪಟ್ಟಿತು

EGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಳದವರಿಗೆ ೩ ರೂ ಬಿಡಿ ಪತ್ರಿಕೆ ೧ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ ೧೨ ಆಣೆ

ಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಜೂನ್ ೧೯೪೨ [ಸಂಚಿಕೆ ೧೧

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

[illegible] ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ವರ್ಧಂತೀಮಹೋತ್ಸವಗಳು,

ಸೊಲ್ಲಾಪುರ

ತಾ॥ 17 6 42 ನೆಯ ಬುಧವಾರ ಬೆಳಗ್ಗೆ ಪಂಡಿತರ ವರ್ಧಂತೀಮಹೋತ್ಸವ ನಿಮಿತ್ತವಾಗಿ ಲಿಂಗೋದ್ಭವ ಮೂರ್ತಿಗೆ ಪೂಜೆಯು ನೆರವೇರಿ ಗಣಾರಾಧನೆಯಾಯಿತು ಸಾಯಂಕಾಲ ಐದ ಘಂಟೆಗೆ ವೀರಶೈವ ಗರ್ಜನಾ ಸಂಪಾದಕರಾದ ಶ್ರೀ॥ ಷ॥ ಬ್ರ॥ ರಾಚಲಿಂಗಶಿವಾಚಾರ್ಯಸ್ವಾಮಿಗಳವರು ಪರಾಂಡಕರ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿತು ಸೌ॥ ಸುಂದರಾಬಾಯಿ ಖಾನಾಪುರೆ ಇವರು ಪರಾಂಡಕರ ಶ್ರೀಗಳು, ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಶ್ರೀಸಮಾಜದ ಪರಿಯಿಂದ ಪ್ರಾರ್ಥಿಸಿದರು ಆಮೇಲೆ ಶ್ರೀ॥ ಸಿದ್ದವ್ವ ಮುಳೆ ಇವರು ಅನುಮೋದನ ಕೊಟ್ಟರು ತರುವಾಯ ಪರಾಂಡಕರ ಶ್ರೀಗಳು ಅಧ್ಯಕ್ಷಸ್ಥಾನಾಸನ್ನರಾದರು ಅನಂತರ ಸದಾಚಾರ ಸಮಾಜದ ಬಾಲಿಕೆಯರು ಜಗದಾಚಾರ್ಯರ ಮತ್ತು ಪಂಡಿತರ ಸ್ತೋತ್ರಗಳನ್ನು ತಮ್ಮ ಮಂಜುಳವಾದ ಕಂಠದಿಂದ ಹಾಡಿ ಸಭಿಕರನ್ನು ಆನಂದಗೊಳಿಸಿದರು ಆಮೇಲೆ ಸೌ॥ ಸುಗ್ಗಲಾದೇವಿ ತಡುಕಿಷ್ಟೆ, ಕು॥ ಗೌರಾದೇವಿ ಮಾಶಾ, ಕು॥ ಶಾಂತಾದೇವಿ ವಾಗಳೆ ಇವರು ಶ್ರೀ ಪಂಡಿತರ ಅವತಾರ ವಿಷಯಕವಾದ ಆಕಾಶವಾಣಿ ಮತ್ತು ಪಂಡಿತರ ಜೀವನ ಚರಿತ್ರ ಈ ವಿಷಯಕವಾದ ಸಂವಾದವನ್ನು ಮಾಡಿ ಸಭಿಕರನ್ನು ಆನಂದಗೊಳಿಸಿದರು ತರುವಾಯ ಶ್ರೀ॥ ಗುರವ್ವಬಾಯಿ ಮಠಪತಿ, ಸೌ॥ ದಾನಮ್ಮಬಾಯಿ ಹಿರೇಮಠ, ವೇ॥ ಶಂ॥ ಧರ್ಮರತ್ನ ಮಲ್ಲಿಕಾರ್ಜುನಶಾಸ್ತ್ರಿಗಳು ಮಹೂರ, ವೇ॥ ಅಲ್ಲಮಪ್ರಭು ಬಿಲೂರು ಶ್ರೀ॥ ಷ॥ ಬ್ರ॥ ಶೈಲಾಪುರ ಗುರುಸ್ವಾಮಿಗಳವರು ಪಂಡಿತರ ಕಾರ್ಯಕಲಾಪಗಳನ್ನು ಕುರಿತು ಬಹು ಮನೋಹರವಾಗಿ ಭಾಷಣಮಾಡಿದರು ಆಮೇಲೆ ಅಧ್ಯಕ್ಷ ಮಹಾಶಯರು ಅಕಸ್ಮಾತ್ತಾಗಿ ನನಗೆ ಈ ಮಂಗಲಕಾರ್ಯ ದೊರೆತದ್ದು ಬಹಳ ಆನಂದದಾಯಕವಾಗಿದೆಯೆಂದೂ, ಉತ್ತಮವಾಗಿಷ್ಟ ಗುರುವರ್ಗದ ಅಧಿಕಾರವನ್ನು ಪ್ರಕಾಶಗೊಳಿಸಿ ಗುರುಭಕ್ತಿಯನ್ನು ಹೆಚ್ಚಿಸಿ ಶಿಕ್ಷಸ್ವರೂಪಿಯಾಗಿರುವ ಪಂಡಿತರ ಗುಣವರ್ಣನೆಯನ್ನು ಎಷ್ಟುಮಾಡಿದರೂ ಅವರ ಉಪಕಾರವು ತೀರುವುದಿಲ್ಲವೆಂದೂ ಅನೇಕ ಉದಾಹರಣೆಗಳಿಂದ ಎಲ್ಲರ ಮನಸ್ಸಿನಲ್ಲಿ ಬಿಂಬಿಸುವಂತೆ ಹೇಳಿದರು ಆಮೇಲೆ ಸೌ॥ ಭಾಗೀರಥೀಬಾಯಿಯವರು ಮಠೋದ್ಧಾರಕವೆಂಬುದರಲ್ಲಿ ಪಂಡಿತರಿಗೆ ಒದಗಿದ ಕಷ್ಟಗಳನ್ನೂ, ಅವರ ಧೈರ್ಯಸಾಹಸಗಳನ್ನೂ, ಅವರಿಂದ ಆಗಿದ ಸಮಾಜಹಿತವನ್ನೂ ಎಲ್ಲರಿಗೂ ತಿಳಿಯುವಂತೆ ಪ್ರತಿಪಾದಿಸಿದರು ಆಮೇಲೆ ಉಚ್ಚಾಸನದಲ್ಲಿದ್ದ ಪಂಡಿತರ ಭಾವಚಿತ್ರಕ್ಕೆ ಮಂಗಲವಾಗಿ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಸೌ॥ ದಾನಮ್ಮಬಾಯಿ ಹಿರೇಮಠ
ಸೆಕ್ರೆಟರಿ, ವೀರಶೈವ ಸದಾಚಾರ ಶ್ರೀ ಸಮಾಜ,

ಚಿಂಚೋಳಿ

ನಿಜಾಂ ಇಲಾಖಾ ಚಿಂಚೋಳಿಗ್ರಾಮದಲ್ಲಿರುವ ವೀರಶೈವ ತರುಣಸಂಘದವರು ತಾ॥ 17 6 42 ನೆಯ ದಿವಸ ವೀರಶೈವ ಮಠೋದ್ಧಾರಕರೂ, ಗುರುವಿರೋಧಿಜನತಮೋಭಾಸ್ಕರರೂ, ಪಂಚಪೀಠ ಪ್ರಕಾಶಕರೂ, ಕಾರ್ಯಧುರಂಧರರೂ, ಗುರುವರ್ಗಸಮುದ್ಧರಣದೀಕ್ಷಿತರೂ, ಪ್ರಾತಃಸ್ಮರಣೀಯರೂ ಆಗಿರುವ ವೇ॥ ಪಂ। ಕಾಶೀನಾಥ ಶಾಸ್ತ್ರಿಗಳವರ ವರ್ಧಂತೀಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದರು ಪ್ರಾತಃಕಾಲ 10 ಘಂಟೆಗೆ ಜಗದಾಚಾರ್ಯರ ಲಿಂಗೋದ್ಭವಮೂರ್ತಿಗೆ ಪೂಜಾದಿಗಳು ನೆರವೇರಿದವು ಸಾಯಂಕಾಲ ತರುಣಸಂಘದಲ್ಲಿ ಸಭೆಗೂಡಿತು ಪಂಡಿತರ ಭಾವಚಿತ್ರವು ಪುಷ್ಪಮಾಲೆಯಿಂದಲಂಕೃತವಾಗಿ ಉನ್ನತಾಸನದಲ್ಲಿ ಇಡಲ್ಪಟ್ಟಿತ್ತು ಜಗದಾಚಾರ್ಯರ ಸ್ತೋತ್ರವಾದಮೇಲೆ ಗುರುಬಸಯ್ಯ ಮಠಪತಿ ಇವರ ಪ್ರಾರ್ಥನೆಯಂತೆ ಶ್ರೀ॥ ಷ॥ ಬ್ರ॥ ಮಹಾಲಿಂಗಸ್ವಾಮಿಗಳು ಪಂಚಾಕ್ಷರೇಂದ್ರ ಕೋರಿಕಂಥಿಮಠ ಇವರು ಅಧ್ಯಕ್ಷಸ್ಥಾನವನ್ನಲಂಕರಿಸಿದರು ಆಮೇಲೆ ತರುಣಸಂಘದ ಬಾಲಕರು, ಪಂಡಿತಜೀಯವರ ಅವತಾರದ ಬಗ್ಗೆ ಆಕಾಶವಾಣಿ ರೂಪವಾದ ಸಂವಾದವನ್ನು ಮಾಡಿ ಸರ್ವರನ್ನೂ ಸಂತೋಷಪಡಿಸಿದರು ಆಮೇಲೆ ಗುರುಬಸಯ್ಯನವರು, ಪಂಡಿತರಿಂದ ಈವರೆಗೆ ನಮ್ಮ ಸಮಾಜಕ್ಕಾದ ಉಪಕಾರವನ್ನು ವರ್ಣಿಸಿದರು. ಬಳಿಕ ಧರ್ಮಾಭಿಮಾನಿಗಳೂ ಕಾರ್ಯದಕ್ಷರೂ ಆದ ಪರ್ವತಮಠದ ವೇ॥ ಕೊಟ್ರಪ್ಪಯ್ಯನವರು ಪಂಡಿತರ ಜೀವನ ಚರಿತ್ರವನ್ನು ಓದಿ ಹೇಳಿದರು ಶ್ರೀಜಗದ್ಗುರು ರಂಭಾಪುರೀ ಪೀಠದ ಉತ್ತರಾಧಿಕಾರ ಸಮಯದಲ್ಲಿ ಪಂಡಿತರು ಬಹಳ ಶ್ರಮವಹಿಸಿ ಕೆಲಸಮಾಡಿದರೆಂದೂ, ಆ ಸಮಯದಲ್ಲಿ ಮೈಸೂರು ಶ್ರೀಮನ್ಮಹಾರಾಜರವರಿಗೆ ಒಂದೇದಿವಸ ಒಂದುಸಾವಿರ ಟೆಲಿಗ್ರಾಮುಗಳನ್ನು ಕೊಡಿಸಿದರೆಂದೂ, ಇದನ್ನು ನೋಡಿದರೆ ರೇಣುಕರ ತ್ರಿಕೋಟಿ ಗುರುರೂಪಧಾರಣದ ಚರಿತ್ರವು ಸ್ಮರಣೆಗೆ ಬರುವದೆಂದೂ ಹೇಳಿ ಸಭಿಕರನ್ನು ಸಂತೋಷಗೊಳಿಸಿದರು ಆಮೇಲೆ ತರುಣಸಂಘದ ಉಪಾಧ್ಯಕ್ಷರಾದ ಮಠಪತಿ ಸಿದ್ಧಲಿಂಗಯ್ಯನವರಿಂದ ವಿರಚಿತವಾದ ಆಚಾರ್ಯರ ಸ್ತೋತ್ರವು ಹಾಡಲ್ಪಟ್ಟಿತು ಬಳಿಕ ಶ್ರೀಜಗದ್ಗುರು ಪಂಚಾಚಾರ್ಯಮಹಾರಾಜಕೀ ಜೈ, ಸನಾತನ ವೀರಶೈವ ಧರ್ಮೋದ್ಧಾರಕ ವಿದ್ವದ್ರತ್ನ ಪಂಡಿತ ಶ್ರೀ ಕಾಶೀನಾಥಶಾಸ್ತ್ರೀಜೀಕಿ ಜೈ ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಸೆಕ್ರೆಟರಿ, ವೀರಶೈವ ತರುಣಸಂಘ, ಚಿಂಚೋಳಿ

ಹೋಟಗಿ.

ಯಾವ ಮಹಿಮನಿಂದ ಗುರುವರ್ಗದ ಉನ್ನತಿಯಾಯಿತೋ, ಯಾವ ದಿವ್ಯಮೂರ್ತಿಯಿಂದ ವೀರಶೈವರು ತಮ್ಮ ನಿಜವಾದ ಹಿತ್ಯಗಳನ್ನು ಕಂಡರೋ, ಯಾವ ತೇಜೋಮೂರ್ತಿಯಿಂದ ಗುರುಗಳ ಭೂತಾಕಾರವು ಅಡಗಿತೋ, ಯಾವ ಪರೋಪಕಾರಿ ಪುರುಷನಿಂದ ನಮ್ಮ ಸಮಾಜವು ಜೀವಿಸಿತೋ ಆ ಪರಮಪೂಜ್ಯ ಪ್ರಾತಃಸ್ಮರಣೀಯ ವಿಭೂತಿಯಾದ, ಪಂಡಿತ **ಶ್ರೀಕಾಶೀನಾಥಶಾಸ್ತ್ರಿಗಳವರ** ವರ್ಧಂತ್ಯುತ್ಸವವು ಹೋಟಗಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ತಾ॥ ೧೭ ೬ ೪೨ ನೇ ಬುಧವಾರ ದಿವಸ ಒಳ್ಳೆ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಉಚ್ಚಾಸನದಲ್ಲಿ ಮಂಡಿಸಿದ ಪಂಡಿತರ ಭಾವಚಿತ್ರವು ಪುಷ್ಪಮಾಲೆಯಿಂದ ಅಲಂಕೃತವಾಗಿತ್ತು ಮೊದಲು ಅಂದಪ್ಪ ಭೂಸಪ್ಪ ಬಿರಾಜದಾರ ಶಿಕ್ಷಕ, ಇವರಿಂದ ಶ್ರೀಜಗದಾಚಾರ್ಯರ ಮತ್ತು ಪಂಡಿತರ ಸ್ತೋತ್ರಗಳಾದ ಮೇಲೆ, ಹೋಟಗೀ ಶ್ರೀಗಳು " **ಪಂಡಿತರಿಂದ ಸಮಾಜಕ್ಕಾದ ಮಹೋಪಕಾರ**" ಎಂಬ ವಿಷಯವನ್ನು ೧ ಘಂಟೆಯವರೆಗೆ ಉಪದೇಶಿಸಿದರು ಅನಂತರ ಶ್ರೀಜಗದಾಚಾರ್ಯರ ಮತ್ತು ಪಂಡಿತರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು

ಓರ್ವ ಗುರುಭಕ್ತ

ಕಾತರಕಿ

ನಿಜಾಮ ಇಲಾಖಾ ಕೊಪ್ಪಳ ತಾ॥ ಕಾತರಕಿಗ್ರಾಮದ ಕನ್ನಡ ಶಾಲಾ ಹೆಡ್‌ಮಾಸ್ತರರಾದ ವೇ॥ ಶಿವಯ್ಯನವರು ಬನ್ನಿಕೊಪ್ಪ ಹಿರೇಮಠ ಇವರು ತಮ್ಮ ಗೃಹದಲ್ಲಿ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ವರ್ಧಂತ್ಯುತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದರು ನಿಜ ಜ್ಯೇಷ್ಠ ಶು॥ ೪ ಬುಧವಾರ (ತಾ॥ ೧೭ ೬ ೧೯೪೨) ದಿವಸ ಪ್ರಾತಃಕಾಲ ಶ್ರೀಜಗದ್ಗುರು ಪಂಚಾಚಾರ್ಯರ, ಶ್ರೀವೀರಭದ್ರಸ್ವಾಮಿಯ ಮತ್ತು ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಪಂಡಿತರು ಕುಳಿತಿರುವ ಭಾವಚಿತ್ರಗಳು ಪುಷ್ಪಮಾಲಿಕಾದಿಗಳಿಂದ ಅಲಂಕರಿಸಲ್ಪಟ್ಟು ಪೂಜಿಸಲ್ಪಟ್ಟವು ಮಧ್ಯಾಹ್ನ ಮೃಷ್ಟಾನ್ನದಿಂದ ಮಾಹೇಶ್ವರಾರಾಧನೆಯು ನೆರವೇರಿತು ಬಳಿಕ ವೇ॥ ಗುರಮ್ಮನವರು ಗೊಂಚಾಳ, ವೇ॥ ಗುಂಡಯ್ಯನವರು ಆನವೇರಿ ಇವರೇ ಮೊದಲಾದವರು ಪಂಡಿತರ ಇಂಥ ಅನೇಕ ವರ್ಧಂತ್ಯುತ್ಸವಗಳನ್ನು ಮಾಡುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸಿದರು ಆ ಮೇಲೆ ಶ್ರೀಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ! ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾರಾಜಕೀ ಜೈ! ವೀರಶೈವ ಮಠೋದ್ಧಾರಕ ಪಂಡಿತ ಕಾಶೀನಾಥಶಾಸ್ತ್ರೀ ಮಹಾರಾಜಕೀ ಜೈ! ಎಂಬ ಜಯಘೋಷದೊಡನೆ ಕಾರ್ಯವನ್ನು ಸಮಾಪ್ತಿಗೊಳಿಸಲಾಯಿತು

ಪ್ರತ್ಯಕ್ಷದರ್ಶಿ

ಪಂಚಾಚಾರ್ಯಪ್ರಭಾ.

೧೯೪೨ನೆಯ ಜೂನ್ ತಾ॥ ೨೯ನೆಯ ಸೋಮವಾರ.

ತಿರುಪತಿ ವೆಂಕಟರಮಣಮೂರ್ತಿ

ಮದ್ರಾಸ ಇಲಾಖೆಯಲ್ಲಿರುವ ತಿರುಪತಿ ವೆಂಕಟರಮಣಮೂರ್ತಿಯ ದೇವಸ್ಥಾನವು ಜಗತ್ಪ್ರಸಿದ್ಧವಾಗಿರುವ ವಿಷಯವು ಸರ್ವರಿಗೂ ತಿಳಿದುದೇ ಆಗಿದೆ ಈ ಮೂರ್ತಿಯು ಸದ್ಯಃ ವಿಷ್ಣುಮೂರ್ತಿಯಾಗಿರುವುದು ಆದರೆ ಇದು ಪೂರ್ವಕಾಲದಲ್ಲಿ ವೀರಭದ್ರಮೂರ್ತಿಯಾಗಿತ್ತೆಂದೂ, ಶ್ರೀವೈಷ್ಣವಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರ ಕಾಲದಲ್ಲಿ ವಿಷ್ಣುಮೂರ್ತಿಯಾಯಿತೆಂದೂ ಕೆಲವು ಪ್ರಾಚೀನ ಗ್ರಂಥಗಳಿಂದ ತೋರಿಬರುತ್ತದೆ. ರಾಮಾನುಜಾಚಾರ್ಯರು ಮಹಾಪ್ರತಿಭಾಶಾಲಿಗಳು ಇವರು ದ್ರಾವಿಡದೇಶಕ್ಕೆ ಸೇರಿದ ಶ್ರೀಪೆರಂಬೂದೂರು ಎಂಬ ಗ್ರಾಮದಲ್ಲಿ ಆಸೂರಿಕೇಶವ ಸೋಮಯಾಜಿ ಎಂಬವರ ಉದರದಿಂದ ಜನಿಸಿದರು ಇವರು ಯಾದವಪ್ರಕಾಶರ ಶಿಷ್ಯರಾಗಿ ಅವರಲ್ಲಿ ವೇದಾಂತಶಾಸ್ತ್ರವನ್ನು ಅಭ್ಯಾಸಮಾಡಿ ಮಹಾವಿದ್ವಾಂಸರಾಗಿ, ಲೋಕದಲ್ಲಿ ವಿಷ್ಣುಭಕ್ತಿಯನ್ನು ವಿಶೇಷವಾಗಿ ಪ್ರಚಾರಪಡಿಸಲುದ್ಯುಕ್ತರಾದರು. ರಾಮಾನುಜಾಚಾರ್ಯರ ಜನ್ಮಕ್ಕಿಂತ ಮೊದಲು ದ್ರಾವಿಡದೇಶದಲ್ಲಿ ಎಲ್ಲಿ ನೋಡಿದರೂ ಶಿವಭಕ್ತಿಯೇ ಪ್ರಕಾಶಮಾನವಾಗಿದ್ದಿತು ಇವರು ಭೂತಪಿಶಾಚಾದಿಗಳಿಂದ ಪೀಡಿತರಾದ ಕೆಲವು ದೇಶದ ಮಹಾರಾಜರ ಪುತ್ರಿಯರನ್ನು ಉದ್ಧಾರಮಾಡಿದ್ದರಿಂದ, ಆಯಾ ರಾಜರು ಇವರಿಗೆ ಶಿಷ್ಯರಾಗಿ ಇವರ ಅಭಿಪ್ರಾಯಾನುಸಾರವಾಗಿ ಶ್ರೀವೈಷ್ಣವಮತವನ್ನಂಗೀಕರಿಸಿದರೆಂದು ಇವರ ಜೀವನಚರಿತ್ರದ ಮೇಲಿಂದ ತಿಳಿದುಬರುತ್ತದೆ. ಕೆಲವು ರಾಜರು ಶ್ರೀವೈಷ್ಣವಮತವನ್ನವಲಂಬಿಸಿದ ಮೇಲೆ, ರಾಮಾನುಜಾಚಾರ್ಯರು ಆ ರಾಜರ ಸಹಾಯದಿಂದಲೂ ಮತ್ತು ತಮ್ಮ ಬುದ್ಧಿಪ್ರಭಾವದಿಂದಲೂ ನಾನಾರೀತಿಯಾಗಿ ವಿಷ್ಣುಭಕ್ತಿಯನ್ನು ಪ್ರಚಾರಪಡಿಸುತ್ತ, ವೈಷ್ಣವಮತವನ್ನು ವಿಶೇಷವಾಗಿ ಹಬ್ಬಿಸಲು ಪ್ರಾರಂಭಿಸಿದರು. ಆ ಕಾಲದಲ್ಲಿ ಅಸಂಖ್ಯಜನರು ಶ್ರೀವೈಷ್ಣವಮತವನ್ನವಲಂಬಿಸಿದರು. ಶಿವಭಕ್ತಿಮಯವಾಗಿದ್ದ ದ್ರಾವಿಡದೇಶದಲ್ಲಿ ವೈಷ್ಣವಮತವು ಹಬ್ಬಲಾರಂಭಿಸಿತು. ಪೂರ್ವದಲ್ಲಿ ದ್ರಾವಿಡದೇಶದಲ್ಲಿ ಶಿವಭಕ್ತಾಗ್ರಗಣ್ಯರಾದ ವೀರಶೈವರು ವಿಶೇಷವಾಗಿ ವಾಸವಾಗಿದ್ದರೆಂದೂ, ರಾಮಾನುಜಾಚಾರ್ಯರ ಪ್ರಾಬಲ್ಯದಿಂದ ವೀರಶೈವರ ಸಂಖ್ಯೆಯು ಕಡಿಮೆಯಾಗುತ್ತ ಅತ್ಯಂತಕ್ಷೀಣಾವಸ್ಥೆಗೆ ಬಂದಿತೆಂದೂ ತಿಳಿದುಬರುತ್ತದೆ. ರಾಮಾನುಜಾಚಾರ್ಯರು ಕೆಲವುಜನ ರಾಜರ ಸಹಾಯವಿಶೇಷದಿಂದ ಕೆಲವು ಶೈವದೇವಾಲಯಗಳನ್ನು ತಮ್ಮ ಸ್ವಾಧೀನಮಾಡಿಕೊಂಡು, ಆ ಶೈವದೇವಾಲಯಗಳಲ್ಲಿ ವಿಷ್ಣುವಿಗ್ರಹಗಳನ್ನು ಸ್ಥಾಪಿಸಿದರೆಂದೂ, ಕೆಲವು ಶೈವವಿಗ್ರಹಗಳನ್ನೇ ವಿಷ್ಣುವಿಗ್ರಹಗಳನ್ನಾಗಿ ಮಾಡಿದರೆಂದೂ ಗ್ರಂಥಾಧಾರಗಳಿಂದಲೂ, ಪ್ರತ್ಯಕ್ಷಾನುಭವದಿಂದಲೂ ತಿಳಿದುಬರುತ್ತದೆ. ಈ ವಿಷಯದಲ್ಲಿ "ತಿರುಪತಿ"ಯಲ್ಲಿರತಕ್ಕ "ವೆಂಕಟರಮಣನ" ದೇವಸ್ಥಾನವೇ ಬಲವಾದ ಸಾಕ್ಷಿಯಾಗಿದೆ. ವೆಂಕಟರಮಣನ ವಿಗ್ರಹವು ವಿಷ್ಣುವಿಗ್ರಹವಲ್ಲವೆಂದೂ, ಆ ವಿಗ್ರಹವು "ವೀರಭದ್ರಸ್ವಾಮಿಯ" ವಿಗ್ರಹವೆಂದೂ, ವೀರಭದ್ರಸ್ವಾಮಿಯ ವಿಗ್ರಹವನ್ನೇ ರಾಮಾನುಜಾಚಾರ್ಯರು ವಿಷ್ಣುವಿಗ್ರಹವನ್ನಾಗಿ ಮಾಡಿದರೆಂದೂ ಶ್ರೀಪತಿಪಂಡಿತರು ತಾವು ಬರೆದ "ಶ್ರೀಕರಭಾಷ್ಯ"ದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಅದೇನೆಂದರೆ—

"ನನು ವೇಂಕಟೇಶ್ವರಪರ್ವತೇಶ್ವರಸ್ಯ [illegible] ವಿಷ್ಣೋ [illegible] ಶಂಖಚಕ್ರ[illegible], [illegible] ವೇಂಕಟೇಶ್ವರ [illegible] ಶಂಖಚಕ್ರಾದಿ [illegible] ವೇಂಕಟೇಶ್ವರತ್ವಂ [illegible] । [illegible] ಹಸ್ತಾಗ್ರಾಧೋದೇಶೇ ಶಿವಲಿಂಗದರ್ಶನಾದೀಶ್ವರತದ್ಬೋ ವ್ಯವಹ್ರಿಯತೇ ॥ '

ಈ ಭಾಷ್ಯಪಂಕ್ತಿಗಳನ್ನು ವಿಚಾರಮಾಡಿದ್ದಾದರೆ, ತಿರುಪತಿಕ್ಷೇತ್ರದಲ್ಲಿರುವ ಮೂರ್ತಿಯು "ವೀರಭದ್ರಮೂರ್ತಿ' ಯೆಂದೂ, ಆ ಮೂರ್ತಿಗೆ ವಿಷ್ಣುವಿನ ಮುಖ್ಯಚಿಹ್ನಗಳಾದ ಶಂಖಚಕ್ರಾದಿಗಳಿರುವದಿಲ್ಲವೆಂದೂ, ಆ ಮೂರ್ತಿಯು "ಸರ್ಪಾಭರಣಭೂಷಿತ" ವಾಗಿರುವದೆಂದೂ ಆ ಮೂರ್ತಿಯ ಹಸ್ತದ ಕೆಳಭಾಗದಲ್ಲಿ ಶಿವಲಿಂಗವಿರುವುದೆಂದೂ ಕಂಡುಬರುವುದು ಈ ಭಾಷ್ಯಕಾರರ ಮಾತುಗಳು ಸತ್ಯವೋ ಅಥವಾ ಅಸತ್ಯವೋ ಎಂದು ವಿಚಾರಮಾಡುವುದು ಪ್ರಥಮಕರ್ತವ್ಯವಾಗಿದೆ. ತಿರುಪತಿಕ್ಷೇತ್ರವನ್ನು ನೋಡಿಬಂದ ಅನೇಕ ಜನರನ್ನು ವಿಚಾರಮಾಡಿದ್ದರಲ್ಲಿ, ಅಲ್ಲಿರುವ ವೆಂಕಟರಮಣಸ್ವಾಮಿಗೆ ಬಾಹುಗಳಲ್ಲಿ ಸರ್ಪವು ಸುತ್ತಿಕೊಂಡಿರುವುದು ನಿಜವೆಂದೂ, ಹಸ್ತಗಳಲ್ಲಿ ಶಿಲೆಯಿಂದ ನಿರ್ಮಿಸಿದ ಶಂಖಚಕ್ರಾದಿಗಳಿರದೆ ಲೋಹದಿಂದ ರಚಿಸಿದ ಶಂಖಚಕ್ರಗಳನ್ನಿಟ್ಟಿರುವರೆಂದೂ, ಪ್ರತಿವರ್ಷ ಧನುರ್ಮಾಸವು ಮುಗಿಯುವವರೆಗೂ ಕೇವಲ ಬಿಲ್ವಪತ್ರಗಳಿಂದಲೇ ಪೂಜೆಯು ನೆರವೇರುತ್ತಿರುವುದೆಂದೂ ಹೇಳುತ್ತಿರುವರು ಇದರ ಮೇಲಿಂದ ಶ್ರೀಪತಿಪಂಡಿತರು ಪ್ರತ್ಯಕ್ಷವಾಗಿ ಆ ವಿಗ್ರಹದ ಸಕಲ ಸ್ವರೂಪವನ್ನು ತಿಳಿದುಕೊಂಡೇ ತಮ್ಮ ಭಾಷ್ಯದಲ್ಲಿ ಯಥಾರ್ಥವಿಷಯವನ್ನು ಬರೆದಿದ್ದಾರೆಂದು ಸ್ಪಷ್ಟವಾಗಿ ತೋರಿಬರುತ್ತದೆ ಲೋಕದಲ್ಲಿ ಅನೇಕಾನೇಕ ವಿಷ್ಣುಮೂರ್ತಿಗಳಿರುತ್ತವೆ ಯಾವ ವಿಷ್ಣುಮೂರ್ತಿಯಲ್ಲಾಗಲಿ ಸರ್ಪಾಭರಣವಿಶಿಷ್ಟತೆಯೂ, ಶಂಖಚಕ್ರಶೂನ್ಯತೆಯೂ ಕಂಡುಬರುವುದಿಲ್ಲ ಆದರೆ ವೆಂಕಟರಮಣಮೂರ್ತಿಗೆ ಸರ್ಪಾಭರಣವಿರುವದರಿಂದಲೂ, ಶಂಖಚಕ್ರಗಳಿಲ್ಲದಿರುವದರಿಂದಲೂ ಆ ಮೂರ್ತಿಗೆ ವೀರಭದ್ರಸ್ವಾಮಿಯ ಮೂರ್ತಿಯೆಂದೇ ಹೇಳಬೇಕಾಗುವದು

ಇದೇ ರೀತಿಯಾಗಿ ರಾಮಾನುಜಾಚಾರ್ಯರ ಕಾಲದಲ್ಲಿ ಜನರು ಅಭಿಪ್ರಾಯಪಡುವಂತೆ, ಅನೇಕಾನೇಕ ವ್ಯತ್ಯಾಸಗಳಾಗಿರಬೇಕೆಂದು ಊಹಿಸಬಹುದಾಗಿದೆ ಪೂರ್ವದಲ್ಲಿ ದ್ರಾವಿಡದೇಶವು ವೀರಶೈವರ ತವರುಮನೆಯಾಗಿದ್ದಿತು ಆ ದೇಶದಲ್ಲಿ ಅನೇಕಾನೇಕಜನ ಉದ್ದಾಮಪಂಡಿತರು ಜನಿಸಿ ವೀರಶೈವಮತದ ವಿಷಯದಲ್ಲಿ ಅನಂತಾನಂತ ಗ್ರಂಥಗಳನ್ನು ರಚಿಸಿರುತ್ತಾರೆ ವೀರಶೈವಮಯವಾಗಿದ್ದ ದ್ರಾವಿಡದೇಶದಲ್ಲಿ, ಸದ್ಯಃ ಎಲ್ಲಿಯೋ ಒಬ್ಬೊಬ್ಬ ವೀರಶೈವರು ವಾಸವಾಗಿರುವುದನ್ನು ನೋಡಿದರೆ ಅತ್ಯಂತ ವ್ಯಸನವೆನಿಸುತ್ತದೆ ಭರತಖಂಡದಲ್ಲಿ ಸರ್ವತೋಮುಖವಾಗಿ ವ್ಯಾಪಿಸಿದ್ದ ವೀರಶೈವಮತವು, ಕೆಲಕೆಲ ರಾಜರ ಕಾಲದಲ್ಲಿಯೂ ಹೀಗೆಯೇ ಅಪಘಾತಕ್ಕೆ ಸಿಲುಕಿ, ಕ್ಷೀಣದಶೆಯನ್ನು ಹೊಂದುತ್ತ ಬಂದಿರುವದು. ಪರಮಾತ್ಮನು ಈ ಮತಕ್ಕೆ ಪೂರ್ವಕಾಲದಂತೆ ಸಮಸ್ತವೈಭವವನ್ನು ಕೊಟ್ಟು, ಈ ಮತವನ್ನು ಸರ್ವತೋಮುಖವಾಗಿ ಪ್ರಕಾಶಪಡಿಸುವಂತೆ ಅನುಗ್ರಹಿಸಲೆಂದೂ, ಈ ಮತದ ಸರ್ವೋತ್ತಮಸಿದ್ಧಾಂತವು ಸರ್ವತ್ರ ಬೆಳಗಲೆಂದೂ ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ.

ಚರ್ಚಿಲ್‌ರವರು ಲಂಡನ್ನಿಗೆ ಬಂದರು

ಅಮೆರಿಕೆಗೆ ಪ್ರಯಾಣಮಾಡಿದ್ದ ಬ್ರಿಟಿಷ್ ಮಹಾಪ್ರಧಾನರಾದ ಶ್ರೀ ಚರ್ಚಿಲ್‌ರವರು ಲಂಡನ್ನಿಗೆ ಬಂದು ತಲ್ಪಿದರು. ಈಜಿಪ್ಟಿನ ರಕ್ಷಣೆಗಾಗಿ ಅಮೆರಿಕೆಯಿಂದ ಒಂದು ಸೈನ್ಯವು ಬರುವುದೆಂದು ಹೇಳಿರುವರು.

ರೊಮೆಲ್‌ರವರಿಗೆ ಹೊಸ ಪದವಿ

ಲಿಬಿಯಾ ಯುದ್ಧದಲ್ಲಿ ಜಯಗಳಿಸಿದುದಕ್ಕಾಗಿ ಸೈನ್ಯಾಧಿಪತಿ ರೊಮೆಲ್‌ರವರಿಗೆ ಹರ್ ಹಿಟ್ಲರ್‌ರವರು "ಫೀಲ್ಡ್ ಮಾರ್ಷಲ್" ಪದವಿಯನ್ನು ಕೊಟ್ಟರೆಂದು ಪ್ರಕಟವಾಗಿದೆ.

ರಷ್ಯ ನೌಕೆಗಳ ನಾಶ

ಕಳೆದ 15 ದಿನಗಳಲ್ಲಿ ಬಾಲ್ಟಿಕ್ ಸಮುದ್ರ ತೀರದಲ್ಲಿ ಫಿನ್ನಿಷ್ ಮತ್ತು ಜರ್ಮನ್ ನೌಕಾಬಲಗಳು ಸೇರಿ ರಷ್ಯನರ 6 ಸಬ್‌ಮೆರಿನ್ ನೌಕೆಗಳನ್ನು ಮುಳುಗಿಸಿದವೆಂದು ಫಿನ್ನಿಷ್ ಪ್ರಕಟನೆಯು ತಿಳಿಸುತ್ತದೆ.

ಕಾರ್ಖೋವ್ ಕದನ

ರಷ್ಯ ಸೈನ್ಯವು ತೀವ್ರತರವಾಗಿ ಹೋರಾಡಿದ ಮೇಲೆ ಕಾರ್ಖೋವಿಗೆ ಆಗ್ನೇಯದಲ್ಲಿ ೬೦ ಮೈಲಿ ದೂರದಲ್ಲಿರುವ ಕುಪ್ಯಾನ್ಸ್ಕ ನಿಂದ ಹಿಮ್ಮೆಟ್ಟಿದೆ. ಈ ಪ್ರದೇಶದಲ್ಲಿ ಜರ್ಮನರು ತಮ್ಮ ಟ್ಯಾಂಕ್ ಪಡೆಯನ್ನು ವಿಶೇಷವಾಗಿ ಪ್ರಯೋಗಿಸುತ್ತಾ ಅಪ್ಪರ್ ಡೋನೆಟ್ಸ್ ನದಿಯನ್ನು ದಾಟಿರುತ್ತಾರೆ.

ಅಮೆರಿಕದಲ್ಲಿ ಯುದ್ಧ ಸಾಮುಗ್ರಿಯ ಕೊರತೆ

ಅಮೆರಿಕದಲ್ಲಿ ಯುದ್ಧೋಪಕರಣಗಳನ್ನು ತಯಾರಿಸಲು ಲೋಹದ ಕೊರತೆಯುಂಟಾಗಿರುವುದರಿಂದ ಬೋರ್ಡು ಮುಂತಾದ ಲೋಹ ವಸ್ತುಗಳನ್ನೆಲ್ಲಾ ಕೇಳಿ ಯುದ್ಧೋಪಕರಣಗಳ ಕಾರ್ಖಾನೆಗೆ ರವಾನಿಸುತ್ತಾರೆ

ರುಮೇನಿಯಾ ಸೈನಿಕರ ನಷ್ಟ!

ಸೆಬಾಸ್ಟಪೋಲ್ ರಣರಂಗದಲ್ಲಿ ಇದುವರೆಗೆ ೧½ ಲಕ್ಷ ಜನ ರುಮೇನಿಯಾ ಸೈನಿಕರು ಮಡಿದಿದ್ದಾರೆ ಅಥವಾ ಗಾಯಗೊಂಡಿದ್ದಾರೆಂಬುದಾಗಿ ಬುಕಾರೆಸ್ಟ್ ರೇಡಿಯೋ ತಿಳಿಸುತ್ತದೆ.

ಈಜಿಪ್ಟಿನ ಯುದ್ಧರಂಗ

ಆಕ್ಸಿಸ್ ರಾಷ್ಟ್ರಗಳ 3 ಸೈನ್ಯಗಳು ಈಜಿಪ್ಟಿನ ಗಡಿಯಿಂದ 80 ಮೈಲು ನುಗ್ಗಿ ಸಿಡಿಬರಾನಿಗೂ ಮತ್ತು ಮರ್ಸಮತ್ರೂವಿಗೂ ನಡುವೆ ಸಂಧಿಸಿದುವು. ಬ್ರಿಟಿಷ್ ಸೈನ್ಯಗಳು ಶತ್ರು ಪ್ರತಿಭಟನೆಯನ್ನು ಮಾಡುತ್ತಿವೆ. ಯುದ್ಧಪರಿಸ್ಥಿತಿ ಬಹಳ ಉತ್ಕಟವಾಗಿದ್ದಾಗ್ಯೂ ಶತ್ರುಪಕ್ಷದವರು ಕಳೆದವರ್ಷ ಮುನ್ನುಗ್ಗಿದುದಕ್ಕಿಂತಲೂ ಹೆಚ್ಚೇನೂ ಮುಂದೆ ಹೋಗಿಲ್ಲ. ಜರ್ಮನರು ತಮ್ಮ ಸೈನ್ಯವನ್ನು ಮೂರು ಸಾಲಾಗಿ ವಿಂಗಡಿಸಿಕೊಂಡು ಫಿರಂಗಿ, ಪದಾತಿ, ಟ್ಯಾಂಕ್ ಪಡೆಗಳಿಂದ ಕೂಡಿ ಮರ್ಸಾಮತ್ರೂವಿನ ಕಡೆಗೆ ನುಗ್ಗಿಹೋಗುತ್ತಿದ್ದಾರೆ ಬ್ರಿಟಿಷ್ ಮತ್ತು ಡೊಮಿನಿಯನ್ ಸೈನ್ಯಗಳು ಶತ್ರುಗಳ ಮುಂದೋಟವನ್ನು ಪ್ರತಿಭಟಿಸಿ ಘೋರಯುದ್ಧವನ್ನು ಮಾಡುತ್ತಿವೆಯಲ್ಲದೆ ಇವರ ವಿಮಾನಗಳು ಜ॥ ರೊಮೆಲ್ಲರ ಸರಬರಾಜುಕ್ಷೇತ್ರದ ಮೇಲೆ ದಾಳಿ ನಡೆಸುತ್ತಲಿವೆ ಜರ್ಮನರು ಈಜಿಪ್ಟಿನ ಮಣಳ್ನಾಡಿನಲ್ಲಿ 80 ಮೈಲಿ ಮುನ್ನುಗ್ಗಿರುವುದು ಕೈರೋ ಜನರಿಗೆ ಗಾಬರಿಯನ್ನೇನೂ ಹುಟ್ಟಿಸಿಲ್ಲ. ಈ 80 ಮೈಲಿ ಪ್ರದೇಶದಲ್ಲಿ ಶತ್ರುಗಳಿಗೆ ಹೆಚ್ಚಿನ ಪ್ರತಿಭಟನೆ ಇರಲಿಲ್ಲವೆಂದೂ ಈಗ ಬ್ರಿಟಿಷರ 8 ನೆಯ ದಳವು ತೀವ್ರವಾಗಿ ಪ್ರತಿಭಟಿಸುತ್ತಿದೆಯೆಂದೂ ಹೇಳಲಾಗಿದೆ.

ಟೋಬ್ರುಕ್ ಯುದ್ಧದ ವಿವರ

ಬ್ರಿಟನ್ನಿನ ಉಪಮಹಾಪ್ರಧಾನರಾದ ಶ್ರೀ ಕ್ಲೆಮೆಂಟ್ ಆಟ್ಲೀಯವರು ಲಿಬಿಯದಲ್ಲಿ ಸಂಭವಿಸಿದ ಅಪಜಯದ ವಿಚಾರವಾಗಿ ಕಾಮನ್ಸ್ ಸಭೆಯಲ್ಲಿ ವಿಮರ್ಶಾತ್ಮಕವಾದ ಭಾಷಣಮಾಡುತ್ತ "ಟೋಬ್ರುಕ್ ಪತನವು ಮತ್ತು ಅಲ್ಲಿದ್ದ ಬ್ರಿಟಿಷ್ ಮತ್ತು ಸಾಮ್ರಾಜ್ಯಸೇನೆಗಳ ಸೆರೆಯೂ ಅನಿರೀಕ್ಷಿತವೂ ಮತ್ತು ಬಲವಾದುದೂ ಆದ ಪೆಟ್ಟಾಗಿದೆ. ಪರಿಸ್ಥಿತಿಯು ಈಗ ಇನ್ನೂ ವಿಷಮವಾಗಿದೆ. ಲಿಬಿಯದಲ್ಲಿ ಇನ್ನೂ ಯುದ್ಧ ನಡೆಯುತ್ತಿದೆ. ರಣಭೂಮಿಯಲ್ಲಿ ಇನ್ನೂ ಬಲಯುತವಾದ ಬ್ರಿಟಿಷ್‌ಪಡೆ ಇದೆ. ಅಲ್ಲದೆ ಇತ್ತೀಚೆಗೆ ಕಳುಹಿಸಿದ ಸೈನ್ಯಪಡೆಗಳೂ ಯುದ್ಧ ಸಲಕರಣೆಗಳೂ ಹೋಗಿ ಮುಟ್ಟಿವೆ. ಇನ್ನೂ ಹೋಗುತ್ತಲಿವೆ. ಮಧ್ಯಪೂರ್ವದ ಮಹಾದಂಡನಾಯ

ು ಜೂನ್ 1ನೆಯ ತಾರೀಖಿನವರೆಗೆ ಎಲ್ಲವೂ ಅನು ಲವಾಗಿರುವುದೆಂದೂ ಜನರಲ್ ರೋಮೆಲ್‌ರವರ ಪ್ಲಾನ್' ತಲೆಕೆಳಗಾಗಿದೆಯೆಂದೂ ತಿಳಿಸಿದ್ದರು. ಲ್ಲಿಂದೀಚೆಗೆ ಘಟನಾವಳಿಗಳು ಬ್ರಿಟನ್ನಿಗೆ ವಿರುದ್ಧ ಾಗಿ ನಡೆದಿವೆ. ಜೂನ್ 1 ನೆಯ ತಾರೀಖಿನ ದಿವಸ ದ್ದ ಅನುಕೂಲ ಪರಿಸ್ಥಿತಿಯನ್ನು ಸದುಪಯೋಗಪಡಿಸಿ ಂಡು ಆಯಾಸಗೊಂಡಿದ್ದ ಜರ್ಮನಿ ಪಡೆಗಳ ಮೇಲೆ ದ್ದಿದ್ದರೆ ಪರಿಸ್ಥಿತಿಯೇ ಬದಲಾವಣೆ ಹೊಂದು ತ್ತು. ಆದರೆ ಆಗ ಬ್ರಿಟಿಷ್ ಪಡೆಗಳೂ ತೀರ ಯಾಸಗೊಂಡಿದ್ದವು. ಟೋಬ್ರುಕ್‌ಮೇಲೆ ಜೂ ನೆಯ ತಾರೀಖಿನ ಶತ್ರುಗಳು ಮುತ್ತಿಗೆಯನ್ನು ಆರಂ ಿಸಿದರು. ಆದಿನ ಬೆಳಿಗ್ಗೆ ಭಾರಿ ವಿಮಾನಮುತ್ತಿಗೆ ರಂಭವಾಯಿತು. ಅನಂತರ ಕಾಲಾಳುದಳದವರು ಬಲ ಾದ ಮುತ್ತಿಗೆ ನಡೆಸಿ ರಕ್ಷಣವ್ಯೂಹವನ್ನು ಭೇದಿಸಿ ದರು, ಅನಂತರ ಶತ್ರುಗಳ ಟ್ಯಾಂಕುಗಳೂ ಲಾರಿಗಳೂ ಒಳನುಗ್ಗಿಬಂದವು. ನಮ್ಮ ಕಡೆ ಅನೇಕ ಟ್ಯಾಂಕುಗಳು ಷ್ಟವಾದುವು. ಪರಿಸ್ಥಿತಿಯು ಬೇಗನೆ ಕೈಮೀರಿಹೋ ಯಿತು" ಎಂದು ತಿಳಿಸಿದರು.

ಜಪಾನರು ಕಿಸ್ಕದ್ವೀಪವನ್ನು ಹಿಡಿದರು

ಅಲ್ಯೂಷಿಯನ್ ದ್ವೀಪಸ್ತೋಮಗಳಲ್ಲಿ ಒಂದಾಗಿದ್ದ ಕಿಸ್ಕ" ಎಂಬ ದ್ವೀಪವು ಜಪಾನಿನ ವಶವಾಯಿತೆಂದೂ ಅಮೆರಿಕದ ಸೈನ್ಯಶಾಖೆಯ ಬಾಂಬರುಗಳು ಜಪಾನಿನ ಹಡಗುಗಳ ಮೇಲೆ ಮುತ್ತಿಗೆ ನಡೆಸಿದ್ದರಿಂದ ಜಪಾನಿನ ಕ್ರೂಯಿಸರ್ ಒಂದಕ್ಕೆ ಪೆಟ್ಟುಬಿತ್ತೆಂದೂ ಒಂದು ಸಾಮಾನು ಹಡಗು ಮುಳುಗಿಹೋಯಿತೆಂದೂ ಅಮೆರಿಕದ ನೌಕಾಪ್ರಕಟನೆಯು ಹೊರಟಿದೆ.

ಕೊರಿಯದಲ್ಲಿ ದಂಗೆ

ಕೊರಿಯದಲ್ಲಿಯೂ ಮಂಚೂರಿಯದಲ್ಲಿಯೂ ಅಲ್ಲಿನ ಪ್ರಜೆಗಳು ದಂಗೆಯೆದ್ದಿರುವರು. ಉತ್ತರ ಕೊರಿಯದಲ್ಲಿ ದಂಗೆಕೋರರು 1000ಕ್ಕೆ ಮೇಲ್ಪಟ್ಟು ಜಪಾನ್ ಸೈನಿಕರನ್ನು ಕೊಂದಿದ್ದಾರೆ. ಮಿಲಿಟರಿ ಅಸ್ತ್ರಶಾಸ್ತ್ರಗಳಿಗೆ ವಿಶೇಷನಷ್ಟವುಂಟುಮಾಡಿದ್ದಾರೆ. ಹಿಮೋಎಂಬಲ್ಲಿ ದಂಗೆಯು ಜೋರಾಗಿದ್ದು, ಪೋಲಿಸ್ ಠಾಣೆಯನ್ನೂ 22 ವಿಮಾನಗಳನ್ನೂ 64 ಮನೆಗಳನ್ನೂ ಸುಟ್ಟು ಹಾಕಿರುವರೆಂದೂ ಪ್ರಕಟವಾಗಿದೆ.

ಜರ್ಮನರು ಈಜಿಪ್ಟ್ ದೇಶದೊಳಗೆ ನುಗ್ಗಿದ್ದಾರೆ

ಜರ್ಮನರು ಈಜಿಪ್ಟಿನಲ್ಲಿ 80 ಮೈಲಿಗಳವರೆಗೆ ದೂರ ನುಗ್ಗಿದ್ದಾರೆ. ನಷ್ಟವಾಗಲಿ ಅಥವಾ ಲಾಭವಾಗಲಿ ಎಲ್ಲೆಲ್ಲಿ ಹೋರಾಡಲು ಅನುಕೂಲವಿದೆಯೋ ಅಲ್ಲಲ್ಲಿ ಹೋರಾಡಬೇಕೆಂಬುದೇ ಬ್ರಿಟಿಷ್ ಸೈನ್ಯಪಡೆಗಳ ನೀತಿಯಾಗಿದೆ. ತಮಗೆ ಇರುವ ಸರ್ವ ಸಹಾಯವನ್ನೂ ಪಡೆದು ಅದನ್ನು ಬೇಗನೆ ನುಗ್ಗಿ ಸ್ಥಾನಗಳನ್ನು ವಶಪಡಿಸಿಕೊಳ್ಳಬೇಕೆಂಬುದೇ ಜರ್ಮನಿಯ ದಂಡನಾಯಕರಾದ ಜ|| ರೊಮೆಲ್‌ರವರ ಉದ್ದೇಶವೆಂದು ಭಾವಿಸಲಾಗಿದೆ.

ಈಜಿಪ್ಟನ್ನು ಹೇಗಾದರೂ ರಕ್ಷಿಸಬೇಕು

ಲಿಬಿಯ ಯುದ್ಧ ವಿಚಾರವಾಗಿ "ಯಾರ್ಕ್ಷೈರ್ ಪೋಸ್ಟ್" ಪತ್ರಿಕೆಯು ಬರೆಯುತ್ತ—ಜನರಲ್ ರೋಮೆಲ್‌ರವರಿಗೆ ಲಿಬಿಯಾ ಯುದ್ಧವು ಕೇವಲ ಒಂದು ಘಟ್ಟ ಮಾತ್ರ. ಅವರ ಉದ್ದೇಶವು ಅಲೆಗ್ಸಾಂಡ್ರಿಯ ಮತ್ತು ಸೂಯೆಜ್ ಕಾಲುವೆಗಳನ್ನು ವಶಪಡಿಸಿಕೊಳ್ಳುವದೇ ಆಗಿದೆ. ಆ ಉದ್ದೇಶವು ಕೈಗೂಡದಂತೆ ಅವರನ್ನು ತಡೆಯುವದಾದರೆ ಅವರಿಗೆ ಈಗ ದೊರಕಿರುವ ಜಯವು ಏನೂ ಪ್ರಯೋಜನವಿಲ್ಲದಂತಾಗುತ್ತದೆ. ರಷ್ಯದ ಯುದ್ಧಕ್ಕಿಂತ ಈ ಮಧ್ಯ ಪೂರ್ವದ ಯುದ್ಧವು ಬಹಳ ಉಗ್ರವಾಗಬಹುದು. ಹಿಟ್ಲರನ ಉದ್ದೇಶವು ಈ ಯುದ್ಧರಂಗವನ್ನು ಪ್ರಧಾನವನ್ನಾಗಿ ಮಾಡಬೇಕೆಂದಿರಬಹುದು. ಕಾಕಸಸ್ ಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳುವ ಉದ್ದೇಶವೇನೋ ಹಿಟ್ಲರನಿಗಿದ್ದೇ ಇದೆ. ದಕ್ಷಿಣದ ಕಡೆಯಿಂದಲೂ ನುಗ್ಗಿ ಆ ಪ್ರಾಂತವನ್ನು ಜಯಿಸಬೇಕೆಂದು ಅವನ ಹಂಚಿಕೆ ಇರಬಹುದು. ರಷ್ಯವನ್ನು ಮಿತ್ರರಾಷ್ಟ್ರಗಳಿಂದ ಬೇರ್ಪಡಿಸಬೇಕೆಂಬ ಉದ್ದೇಶವಿರುವಂತಿದೆ. ಈ ಉದ್ದೇಶಗಳೆಲ್ಲವನ್ನೂ ಭಂಗಪಡಿಸಬೇಕಾದರೆ ನಾವು ಈಗ ಈಜಿಪ್ಟನ್ನು ರಕ್ಷಿಸಬೇಕಾಗಿದೆ." ಎಂದು ಸೂಚಿಸಿದೆ.

ಈಜಿಪ್ಟಿನ ಯುದ್ಧನೀತಿ

ನಾಹಾಸ್ ಪಾಷಾರವರ ಹೇಳಿಕೆ

ಈಜಿಪ್ಟಿನ ಮಹಾ ಪ್ರಧಾನರಾದ ಶ್ರೀ ನಾಹಾಸ್ ಪಾಷಾರವರು ಒಂದು ಹೇಳಿಕೆ ಕೊಡುತ್ತ "ಈಜಿಪ್ಟ್ ದೇಶದ ಪ್ರಜೆಗಳು ಸೈನ್ಯಕ್ಕೆ ಸೇರಿಕೊಳ್ಳಬೇಕೆಂದು ಬ್ರಿಟಿಷ್ ಸರ್ಕಾರದವರು ಎಚ್ಚರಿಕೆ ಕೊಟ್ಟಿರುವುದಾಗಿ ಹೊರಟಿದ್ದ ವದಂತಿಗಳನ್ನು ಖಂಡಿಸಿ ಆ ವರ್ತಮಾನಗಳಿಗೆ ಸ್ವಲ್ಪವೂ ಆಧಾರವಿಲ್ಲವೆಂದು ಸೂಚಿಸಿದ್ದಾರೆ. ಅಕ್ಷಿಸ್ ರಾಷ್ಟ್ರಗಳ ಮೇಲೆ ಈಜಿಪ್ಟ್ ಯುದ್ಧ ಹೂಡುವುದಿಲ್ಲವೆಂದೂ, ಈಜಿಪ್ಟಿನಲ್ಲಿ ಸೈನ್ಯಸಿದ್ಧತೆಗಳನ್ನು ಮಾಡಿಕೊಳ್ಳುವುದಿಲ್ಲವೆಂದೂ ಈಜಿಪ್ಟನ್ನು ಯುದ್ಧದಿಂದ ದೂರವಾಗಿರಿಸಲು ಸರ್ವ ಪ್ರಯತ್ನಗಳನ್ನು ಮಾಡುವೆವೆಂದೂ, ಈಜಿಪ್ಟಿನ ಪ್ರವೇಶ ಆಸ್ತಿಪಾಸ್ತಿಗಳ ರಕ್ಷಣೆಗಾಗಿ ಸರ್ವ ಪ್ರಯತ್ನಗಳನ್ನೂ ಕೈಗೊಳ್ಳಲಾಗುವುದೆಂದೂ, ಪಿತೂರಿಗಾರರ ಮತ್ತು ಉದ್ರೇಕ ಪರಿಸ್ಥಿತಿಯನ್ನು ಹಂಬೊಬ್ಬುವವರ ಮಾತುಗಳನ್ನು ಕೇಳಬಾರದೆಂದೂ, ಗೂಢಚಾರರನ್ನೂ ಪಿತೂರಿಗಾರರನ್ನೂ ಶಿಕ್ಷೆಗೆ ಗುರಿಪಡಿಸಲಾಗುವದೆಂದೂ ಅಂಥವರನ್ನು ಜನರು ಅಧಿಕಾರಿಗಳಿಗೆ ಒಪ್ಪಿಸಬೇಕೆಂದೂ ಈರೀತಿ ಮಾಡುವುದರಿಂದ ಈಜಿಪ್ಟಿನ ರಕ್ಷಣೆಗೆ ಸಹಾಯಮಾಡಿದಂತಾಗುವುದೆಂದೂ" ಸೂಚಿಸಿರುವರು. ಪಾರ್ಲಿಮೆಂಟ್‌ಸಭೆಯಲ್ಲಿ ಪಾಷಾರವರು ಭಾಷಣಮಾಡುತ್ತ "ಈಜಿಪ್ಟನ್ನು ಶತ್ರುಗಳು ಮುತ್ತಿದರೆ ಕೊನೆಯವರೆಗೂ ಹೋರಾಡಿ ಶತ್ರುಗಳನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸುವುದಾಗಿ ಬ್ರಿಟಿಷ್ ಸರ್ಕಾರದವರು ನಮಗೆ ಭರವಸೆ ಕೊಟ್ಟಿರುವರೆಂದೂ, ಅನೇಕ ತೊಂದರೆಗಳಿದ್ದರೂ ಈ ವರ್ಷ ಬ್ರಿಟಿಷರ ಪರಿಸ್ಥಿತಿಯು ತೃಪ್ತಿಕರವಾಗಿರುವದೆಂದೂ, ಮಿತ್ರರಾಷ್ಟ್ರಗಳ ಪ್ರತಿನಿಧಿಗಳೊಡನೆ ಅನೇಕಸಾರೆ ಚರ್ಚೆ ನಡೆಸಿ ನಾನು ಈ ರೀತಿ ಹೇಳುತ್ತಿದ್ದೇನೆಂದೂ, ಅಲ್ಲದೆ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದೇನೆಂದೂ" ಸೂಚಿಸಿದರು.

ಬ್ರಿಟಿಷ್ ಸಂಗ್ರಾಮ ನೀತಿಯಲ್ಲಿ ನಂಬಿಕೆಯಿಲ್ಲವೆಂಬ ನಿರ್ಣಯವು ಬಂದಿದೆ

ಲಿಬಿಯ ಸಂಗ್ರಾಮ ಪರಿಸ್ಥಿತಿ ಕುರಿತು ಕಾಮನ್ಸ್ ಸಭೆಯಲ್ಲಿ ಚರ್ಚಿಸುವುದಕ್ಕೆ ಅವಕಾಶಕೊಡಲಾಗುವುದೆಂದೂ ಮುಂದಿನವಾರ ಚರ್ಚೆಯು ನಡೆಯಬಹುದೆಂದೂ, ಅಷ್ಟುಹೊತ್ತಿಗೆ ಬ್ರಿಟನ್ನಿನ ಮಹಾಪ್ರಧಾನರಾದ ಶ್ರೀ ಚರ್ಚಿಲ್‌ರವರು ಕೂಡ ಇಂಗ್ಲೆಂಡಿಗೆ ಆಗಮಿಸಬಹುದೆಂದೂ-ಕ್ರಿಪ್ಸ್‌ರವರು ಸೂಚಿಸಿದರು.

ಕನ್ಸರ್ವೆಟೀವ್ ಪಕ್ಷದವರು "ಬಹಳ ಕಷ್ಟಕರವಾದ ಸನ್ನಿವೇಶದಲ್ಲಿ ಬ್ರಿಟಿಷ್ ಸೈನಿಕರು ತೋರಿಸಿದ ಅದ್ಭುತ ಶೌರ್ಯ ಸಾಹಸಗಳಿಗಾಗಿ ಕಾಮನ್ಸ್ ಸಭೆಯು ತನ್ನ ಅಭಿನಂದನೆಯನ್ನು ಅರ್ಪಿಸುವುದಾದರೂ ಸಂಗ್ರಾಮದ ಮಾರ್ಗದರ್ಶಕತ್ವದ ವಿಚಾರದಲ್ಲಿ ಈ ಸಭೆಗೆ ನಂಬಿಕೆ ಇಲ್ಲ." ಎಂಬ ನಿರ್ಣಯವನ್ನು ತರುವವರಿದ್ದಾರೆ. ಈ ನಿರ್ಣಯವನ್ನು ತರಲು ೨೦ ಜನ ಸದಸ್ಯರು ರುಜುಹಾಕಿದ್ದಾರೆ. ೧೯೪೦ ನೇ ವರ್ಷದಲ್ಲಿ ಚರ್ಚಿಲ್ ಪ್ರಭುತ್ವವು ಸ್ಥಾಪಿತವಾದಮೇಲೆ ಈ ರೀತಿ ಅಪನಂಬಿಕೆ ನಿರ್ಣಯವು ತರಲ್ಪಟ್ಟಿರುವುದು ಇದೇ ಮೊದಲು.

ಟೋಬ್ರುಕ್ ಕೈತಪ್ಪಿದ ವಿಚಾರದಲ್ಲಿ ಬ್ರಿಟಿಷ್ ಪತ್ರಿಕೆಗಳ ಟೀಕೆ!

ಟೋಬ್ರುಕ್ ಕೈಬಿಟ್ಟು ಹೋದ ವಿಚಾರದಲ್ಲಿ ಬ್ರಿಟನ್ನಿನ ಪತ್ರಿಕೆಗಳು ಉಗ್ರತರವಾಗಿ ಟೀಕೆಮಾಡಿ ಬರೆಯುತ್ತಿವೆ. ಲಿಬಿಯಾ ಯುದ್ಧವು ತಮಗೆ ವ್ಯತಿರಿಕ್ತವಾಗಿ ಪರ್ಯವಸಾನ ಹೊಂದಿದಕ್ಕಾಗಿ ಅತೃಪ್ತಿಯನ್ನು ವ್ಯಕ್ತಪಡಿಸುತ್ತಿವೆ. ಟೈಮ್ಸ್ ಪತ್ರಿಕೆಯು ತನ್ನ ಅಗ್ರಲೇಖನದಲ್ಲಿ "ಅಕ್ಷಿಸ್ ರಾಷ್ಟ್ರಗಳಿಗೆ ವಿಪರೀತ ತೊಂದರೆಗಳಿದ್ದರೂ, ಭಯಂಕರ ಬಿಸಿಲಿನ ತಾಪ, ನೀರಿನ ತೊಂದರೆಯಿದ್ದರೂ, ವಾರ್ತಾ ಸೌಕರ್ಯಗಳಿಲ್ಲದಿದ್ದರೂ ಸಹ ಜರ್ಮನರು ಮುಂದೆ ನುಗ್ಗಿ ಜಯಗಳಿಸುತ್ತಿದ್ದಾರೆ. ಕ್ರೀಟಿಯಲ್ಲಿ ಜರ್ಮನರು ಬೇಕಾದಷ್ಟು ಹೋರಾಟದ ವಿಮಾನಗಳನ್ನೂ, ಸೈನ್ಯಪಡೆಗಳನ್ನು ಹೊತ್ತು ತರುವ ವಿಮಾನಗಳನ್ನೂ ಶೇಖರಿಸಿರುವರೆಂದು ತಿಳಿದುಬಂದಿದೆ. ಆದುದರಿಂದ ಈಜಿಪ್ಟಿನ ಗಡಿಯಲ್ಲಿರುವ ಬ್ರಿಟಿಷ್ ರಕ್ಷಣಾ ಪ್ರದೇಶಗಳಿಗೆ ಈಗ ಬಲವಾದ ವಿಪತ್ತು ಒದಗಿದೆ. ಅಲ್ಲದೆ ಈಜಿಪ್ಟಿಗೂ ವಿಪತ್ತು ಸನ್ನಿಹಿತವಾಗಿದೆ. ಈಗ ನಮಗೆ ಬಹಳ ನಷ್ಟವಾಗಿದೆ. ಇಂದಿನ ನಷ್ಟವನ್ನು ಸರಿಪಡಿಸಿಕೊಳ್ಳಬೇಕೆಂಬ ದೃಢ ಸಂಕಲ್ಪದಿಂದ ನಾವು ಈಗ ಹೋರಾಡಬೇಕಾಗಿದೆ. ಬ್ರಿಟಿಷರ ತೀವ್ರ ಪ್ರತಿಷ್ಠೆಗಳು ಲಿಬಿಯಾದಲ್ಲಿ ಜಾರಿಯಾಗುವಂತೆ ಕೆಲಸ ಮಾಡಬೇಕು" ಎಂದು ಬರೆದಿದೆ.

ಸೆರೆ ಸಿಕ್ಕಿರುವ ಬ್ರಿಟಿಷ್ ಸೈನಿಕರ ಸಂಖ್ಯೆ

ಲಿಬಿಯಾ ಯುದ್ಧದಲ್ಲಿ 38,000 ಜನ ಬ್ರಿಟಿಷ್ ಸೈನಿಕರನ್ನು ಸೆರೆ ಹಿಡಿದಿರುವುದಾಗಿ ಅಕ್ಷಿಸ್ ರಾಷ್ಟ್ರಗಳು ಹೇಳುತ್ತವೆ. ಈ ಸಂಖ್ಯೆಯನ್ನು ಸೇರಿಸಿದರೆ, ಕಳೆದ 3 ವರ್ಷಗಳಿಂದ ನಡೆಯುತ್ತಿರುವ ಸಂಗ್ರಾಮದಲ್ಲಿ ಒಟ್ಟು 1,75,000 ಜನ ಬ್ರಿಟಿಷ್ ಸೈನಿಕರು ಸೆರೆಸಿಕ್ಕಿರುವರೆಂದು ಗೊತ್ತಾಗುವದು

1942 ನೆಯ ವರ್ಷದ ಮಾರ್ಚ ತಿಂಗಳವರೆಗೆ ಬ್ರಿಟಿಷರು ಒಟ್ಟು 5,30,000 ಜನ ಅಕ್ಷಿಸ್ ಸೈನಿಕರನ್ನು ಸೆರೆಹಿಡಿದಿದ್ದಾರೆ. ಇವರಲ್ಲಿ ಬಹುಮಂದಿ ಇಟಾಲಿಯನ್ನರು ಮತ್ತು ಆಫ್ರಿಕ ಸೈನಿಕರು. ಕೆಲವುಮಂದಿ ಜರ್ಮನರೂ ಇದ್ದಾರೆ. ಬ್ರಿಟನ್ನಿನ ಸೈನಿಕರು ಈರೀತಿ ಸೆರೆ ಸಿಕ್ಕಿದ್ದಾರೆ. ಡನ್‌ಕರ್ಕ 40,000, ನಾರ್ವೆ 950, ಗ್ರೀಸ್ ಮತ್ತು ಕ್ರೀಟಿ 18000, ಲಿಬಿಯ (ಹಿಂದಿನ ಯುದ್ಧ) 4000, ಹಾಂಕಾಂಗ್ 10,000, ಸಿಂಗಪುರ 70,000, ಲಿಬಿಯ (ಇಂದಿನ ಯುದ್ಧ) 9000, ಟೋಬ್ರುಕ್ 25000.

ಸೆರೆಸಿಕ್ಕಿರುವ ಅಕ್ಷಿಸ್ ಸೈನಿಕರ ಸಂಖ್ಯೆ ಈ ರೀತಿ ಇದೆ—ಐರೋಪ್ಯರು (ಲಿಬಿಯದಲ್ಲಿ) 1,62,000 ಪೂರ್ವ ಆಫ್ರಿಕದಲ್ಲಿ 1,13,000 ವಸಾಹತು ಸೈನಿಕರು ಲಿಬಿಯದಲ್ಲಿ 15,000 ಪೂರ್ವ ಆಫ್ರಿಕದಲ್ಲಿ 23,000.

ವೈಸರಾಯರ ನೂತನ ಮಂತ್ರಿಮಂಡಲ

ವೈಸರಾಯರ ಮಂತ್ರಿಮಂಡಲದ ಸದಸ್ಯರಾಗಲು, ಸರ್ ಮಹಮದ್ ಉಸ್ಮಾನ್ ಸರ್ ಫೆರೋಜ್ ಖಾನ್ ನೂನ್, ಸರ್ ಎಡ್ವರ್ಡ್ ಬೆಂಥಾಲ್, ಮತ್ತು ಸರ್ ಜೋಗೇಂದ್ರಸಿಂಗ್‌ರವರಿಗೆ ಆಹ್ವಾನಗಳು ಹೋಗಿರುವುದಾಗಿ ಗೊತ್ತಾಗಿದೆ. ವೈಸರಾಯರ ನೂತನ ಮಂತ್ರಿಮಂಡಲ ಸಂಬಂಧವಾದ ಪ್ರಕಟನೆಯು ಮುಂದಿನವಾರ ಹೊರಬೀಳಬಹುದು. ಅಧಿಕೃತ ಸೂತ್ರಗಳ ವಿಭಜನೆಯ ವಿಚಾರವಾಗಿ ಉಂಟಾಗಿರುವ ತೊಂದರೆಯು ಇನ್ನೂ ನಿವಾರಣೆಯಾಗಿಲ್ಲವೆಂದು ಹೇಳಲಾಗಿದೆ. ಸರ್ ಸಿ.ಪಿ. ರಾಮಸ್ವಾಮಿ ಅಯ್ಯರವರು ವೈಸರಾಯರ ಮಂತ್ರಿಮಂಡಲದಲ್ಲಿ ಆರು ತಿಂಗಳ ಕಾಲವರೆಗು ಒಪ್ಪಿಗೆ ಇತ್ತಿದ್ದಾರೆಂದೂ ಆ ಅವಧಿಯಲ್ಲಿ ತಿರುವಾಂಕೂರಿನ ದಿವಾನರಾಗಲು ಬೇರೊಬ್ಬರನ್ನು ತಾತ್ಕಾಲಿಕವಾಗಿ ನಿಯಮಿಸಲಾಗುವುದೆಂದೂ ಗೊತ್ತಾಗಿದೆ.

ಅಭಿನಂದನ

ಪ್ರತಿಯೊಂದು ವಿಷಯದಲ್ಲಿಯೂ [illegible] ಹಿಂದುಳಿದಿದೆ. ಅದರಲ್ಲಿ ಸ್ತ್ರೀ ಸಮಾಜವಂತೂ ಹೇಳದಷ್ಟು ಹಿಂದುಳಿದಿದೆ. ಇಂತಹ ಪ್ರಸಂಗದಲ್ಲಿ ಶ್ರೀ|| ಭಾಗೀರಥೀಬಾಯಿ [illegible] ಸೊಲ್ಲಾಪುರ [illegible] ಸೊಲ್ಲಾಪುರ ಜಿಲ್ಲಾ ಸ್ಕೂಲ್ ಬೋರ್ಡಿನಲ್ಲಿ [illegible] ಚೇರಮನ್‌ರಾಗಿ ಆರಿಸಲ್ಪಟ್ಟಿದ್ದು ಸಂತೋಷದ ವಿಷಯವಾಗಿದೆ. ಈ ಸಂತೋಷ ಪ್ರದರ್ಶನಕ್ಕೋಸ್ಕರ ತಾ|| ೧೭-೬-೪೨ ನೆಯ ದಿವಸ [illegible] ಶ್ರೀಗಳ ಅಧ್ಯಕ್ಷತೆಯಲ್ಲಿ, ಸಭೆ ಮಾತೃಶ್ರೀಯವರ ಅಭಿನಂದನ ಮಾಡಲ್ಪಟ್ಟಿತು.

[illegible] ಗುರುಪುತ್ರ.

ಸ್ತ್ರೀಯರೂ ಮತ್ತು ನೌಕರಿಯೂ

ಅನುವಾದಕ:— ಪಿ ಎಂ ಗಂಗಾಧರಶರ್ಮ, ಪರಶುರಾಮಪುರ
(ಅಧ್ಯಾಪಕ ಶ್ರೀ ಮುಕ್ತಿಮಂದಿರಗುರುಕುಲಂ)

ಇತ್ತೀಚೆಗೆ ಹಿಂದುಸ್ಥಾನದಲ್ಲಿ ಸುಶಿಕ್ಷಿತ ಸ್ತ್ರೀಯರಿಗೂ ಸಹ ನೌಕರಿಯ ದೊಡ್ಡ ಹೆಚ್ಚುಹತ್ತಿದೆ ಈ ವಿಷಯದಲ್ಲಿ ಪಾಶ್ಚಾತ್ಯರ ಅನುಭವವು ಏನಿದೆ ಎನ್ನುವುದನ್ನು ಸ್ವಲ್ಪ ನೋಡಬೇಕಾಗಿದೆ ಕಳೆದ ಮಹಾಯುದ್ಧಕ್ಕೆ ಮುಂಚೆ ಪಾಶ್ಚಾತ್ಯದೇಶದಲ್ಲಿಯೂ, ದೊಡ್ಡ ಮನೆತನದ ಸ್ತ್ರೀಯರು ನೌಕರಿಯಿಂದ ಹಣವನ್ನು ಗಳಿಸುವುದು ಅಪಮಾನವೆಂದು ತಿಳಿಯುತ್ತಿದ್ದರು ಕೇವಲ ಬಡ ಸ್ತ್ರೀಯರು ಮಾತ್ರ ಮನೆಗಳಲ್ಲಿಯೋ ಅಥವಾ ಕಾರ್ಖಾನೆಗಳಲ್ಲಿಯೋ ಕೆಲಸವನ್ನು ಮಾಡಿ ತಮ್ಮ ಜೀವನವನ್ನು ಸಾಗಿಸುತ್ತಿದ್ದರು ಪರಂತು ಯುದ್ಧಕಾಲಗಳಲ್ಲಿ ಪುರುಷರೊಂದಿಗೆ ಯುದ್ಧಕ್ಕೆ ಹೋಗುವ ಕಾರಣದ ದೆಸೆಯಿಂದ ಬಹುಶಃ ಎಲ್ಲಾ ಕೆಲಸಗಳಲ್ಲಿಯೂ, ಸ್ತ್ರೀಯರು ಸಂಬಂಧಿಸಲು ಅವಕಾಶವಾಯಿತು ಈ ಪ್ರಕಾರವಾಗಿ ಅವರಿಗೆ ಆರ್ಥಿಕ ಸ್ವತಂತ್ರತೆಯು ಉಂಟಾಯಿತು ಸ್ತ್ರೀಪುರುಷರೀರ್ವರಿಗೂ ಕೆಲಸವನ್ನು ಕೊಡುವುದು ಕಠಿನವಾಯಿತು ಮತ್ತು ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚಾಯಿತು ' Our freedom and its results (ನಮ್ಮ ಸ್ವಾತಂತ್ರ್ಯ ಮತ್ತು ಅದರ ಪರಿಣಾಮ) ಎಂಬ ಗ್ರಂಥದಲ್ಲಿ ಬ್ರಿಟನ್ನಿನ ಒಬ್ಬ ಪ್ರಧಾನ ಸ್ತ್ರೀಯಾದ "ರೇಸ್ಟ್ರೇಚೀ" ಎಂಬವರ ಹೀಗೆ ಬರೆಯುತ್ತಾರೆ—ಬ್ರಿಟನ್ನಿನಲ್ಲಿ ಎಷ್ಟು ಜನ ಸುಶಿಕ್ಷಿತ ಸ್ತ್ರೀಯರಿದ್ದಾರೆ ಅವರಲ್ಲಿ ನೂರಕ್ಕೆ ಮೂವತ್ತೇಳರಷ್ಟು ಸ್ತ್ರೀಯರು ಮಾತ್ರ ಕಲಸವನ್ನು ಹೊಂದಿದವರಾಗಿದ್ದಾರೆ ಸ್ತ್ರೀಯರ ಆರ್ಥಿಕ ಸ್ವತಂತ್ರತೆಯ ಮಾರ್ಗದಲ್ಲಿ ಎಷ್ಟು ಅಡಚಣೆಗಳಿವೆ ಇವುಗಳಲ್ಲಿ ಸ್ವಲ್ಪವಾದರೋ ಪ್ರಾಕೃತಿಕಗಳಾಗಿವೆ ಇವುಗಳಲ್ಲಿ ಪರಿವರ್ತನೆಯಾಗುವ ಸಂಭವವಿಲ್ಲ ಮತ್ತೆ ಕೆಲವು ಪರಂಪರೆಯಿಂದ ಬಂದ ಸಾಮಾಜಿಕ ಪರಿಸ್ಥಿತಿಯ ಕಾರಣಗಳಾಗಿವೆ ಇವುಗಳು ದೂರಾದರೆ ಸಾಕಷ್ಟು ಸಮಯವು ದೊರೆಯುವುದು ಗರ್ಭವನ್ನು ಧರಿಸಿ ಮಕ್ಕಳನ್ನು ಹೆರುವುದು ಸ್ತ್ರೀಯರ ಪ್ರಕೃತಿ ಸಿದ್ಧವಾದ ಕಾರ್ಯವಾಗಿದೆ ಆ ಕಾರ್ಯವು ಯಾವಾಗಲೂ, ಪುರುಷರ ಮೇಲೆ ಬೀಳುವಂಥದಾಗಿಲ್ಲ ಒಂದು ಪಕ್ಷ ಇದರಲ್ಲಿ ಅಧಿಕಸಮಯವು ನಷ್ಟವಾಗದಿದ್ದರೂ ಇದು ಆಗಾಗ ಸಂಭವಿಸುವ ಕಾರಣ ಸ್ತ್ರೀಯರಿಗೆ ಕೆಲಸ ದೊರೆಯುವುದರಲ್ಲಿ ತೊಂದರೆಯು ಅವಶ್ಯವಾಗಿ ಬರುತ್ತದೆ ಈ ಭಾವನೆಯಲ್ಲಿ ಸ್ವಲ್ಪ ಪರಿವರ್ತನೆಯು ಉಂಟಾಗಿದೆ ಹೋಟೆಲ ಗಳಲ್ಲಿ ಊಟ ಮಾಡುವುದರಿಂದಲೂ, ಹೆಚ್ಚುಪರಿಶ್ರಮವಿಲ್ಲದೆ ತಯಾರಾಗುವ ಯಂತ್ರಗಳಿಂದಲೂ, ಮಾಡಿಟ್ಟ ತಿಂಡಿ ಮೊದಲಾದ ಸಾಮಾನುಗಳನ್ನು ಕೊಂಡುಕೊಳ್ಳುವ ಕಾರಣದಿಂದಲೂ, ಸ್ತ್ರೀಯರಿಗೆ ಹೆಚ್ಚು ಸಮಯವು ಮನೆಯಲ್ಲಿ ಬೇಕಾಗುವುದಿಲ್ಲ ಮಕ್ಕಳಿಗೆ ಸ್ನಾನ ಮಾಡಿಸುವುದು, ಬಟ್ಟೆಗಳನ್ನು ಹಾಕುವುದು, ಅಡಿಗೆ ಮಾಡುವುದು ಇವಿಷ್ಟು ಕಾರ್ಯಗಳ ಸಲುವಾಗಿಯೇ ಸ್ತ್ರೀಯರು ಮನೆಯಲ್ಲಿ ಕುಳಿತುಕೊಳ್ಳುವುದಿಲ್ಲ ಇದರ ಫಲವು ಹೀಗಿದೆ ಮನೆಯಲ್ಲಿರುವ ಸ್ತ್ರೀಯರಿಗಿಂತ ಹೊರಗಡೆ ಕೆಲಸ ಮಾಡುವ ಸ್ತ್ರೀಯರ ಮೇಲೆ ಎರಡರಷ್ಟು ಭಾರವು ಬೀಳುತ್ತದೆ ಇದರಲ್ಲಿ ಅವರು ತಮ್ಮ ಆರೋಗ್ಯವನ್ನೂ ಉಳಿಸಿಕೊಳ್ಳುತ್ತಾರೆ

ಸ್ತ್ರೀಯರ ಶಾರೀರಕಶಕ್ತಿಯು ಪುರುಷರ ಶಕ್ತಿಗಿಂತ ಕಡಿಮೆ ಇರುವುದೆಂದೇ ತಿಳಿಯಬೇಕಾಗುವುದು ಯಾವ ಕೆಲಸವು ಇಬ್ಬರು ಪುರುಷರಿಂದ ಆಗುತ್ತಿದ್ದಿತೋ ಆ ಕಾರ್ಯವನ್ನು ಮೂರು ಜನ ಸ್ತ್ರೀಯರು ಮಾಡುತ್ತಿದ್ದರೆಂಬುದು ಕಳೆದ ಮಹಾಯುದ್ಧದಲ್ಲಿ ನೋಡಲ್ಪಟ್ಟಿತು ಒಂದು ಮಾತು ಹೇಳಬೇಕಾಯಿತೆಂದರೆ ೪೦ ವರ್ಷಗಳು ಕಳೆದ ಮೇಲೆ ಸ್ತ್ರೀಯರಲ್ಲಿ ಶಕ್ತಿಯು ಕುಂದುತ್ತಾ ಹೋಗುತ್ತದೆ ಇಷ್ಟು ಆಯುಷ್ಯ ಕಳೆದ ಮೇಲೆ ಇಂಥವರಿಗೆ ಕೆಲಸಕೊಡುವುದರಲ್ಲಿ ಜನಗಳು ಹಿಂದುಮುಂದು ನೋಡಲು ಕಾರಣವಾಗುತ್ತದೆ ೧೮ ರಿಂದ ೩೦ ವರ್ಷದ ವಯಸ್ಸಿನ ಸ್ತ್ರೀಯರಿಗೇ ಹೆಚ್ಚು ಕೆಲಸವು ದೊರೆಯುವುದನ್ನು ನೋಡಬೇಕಾಗಿದೆ ೩೫ ವರ್ಷಗಳು ಕಳೆದ ಮೇಲೆ ನೌಕರಿ ದೊರೆಯುವುದು ಬಹಳ ಕಠಿಣವಾಗುತ್ತದೆ. ಅವರ ವೇತನವು ಪುರುಷರ ವೇತನಕ್ಕಿಂತ ಕಡಿಮೆಯಿರುತ್ತದೆ ಇವುಗಳಿಂದ ಅವರು ಉಳಿದುಕೊಳ್ಳುವುದೂ ಕಷ್ಟ ಒಂದುವೇಳೆ ಎರಡನೇ ಸ್ಥಳದಲ್ಲಿ ದೊರೆಯದೆ ಇರುವ ಭಯದಿಂದ ಅವರು ನೌಕರಿಯನ್ನು ಬಿಡಲಿಚ್ಛಿಸುವುದಿಲ್ಲ ಮತ್ತು ಅದರಲ್ಲಿಯೇ ಇದ್ದು ತಮ್ಮ ಸ್ವಾಸ್ಥ್ಯವನ್ನು ಕಳೆದುಕೊಳ್ಳುತ್ತಾರೆ ಸ್ತ್ರೀಯರಲ್ಲಿ ಇನ್ನೊಂದು ದೋಷವೇನೆಂದರೆ! ಅವರು ಯಾವ ಕೆಲಸವನ್ನು ಕೈಕೊಳ್ಳುತ್ತಾರೋ ಅದರಲ್ಲಿ ಅವರು ಬೀಳುತ್ತಲೂ ಇರುತ್ತಾರೆ ಮನಸ್ಸಿಗೆ ಅನುಕೂಲವಾದ ಕೆಲಸವು ದೊರೆತವೇಲಾದರೂ ಈ ಗುಣವಿರಬೇಕಾಗಿದೆ ಆದರೆ ಆಗ ಹೀಗಾಗದೆ ಇವರ ಪ್ರಭಾವವು ಉಂಟಾಗುತ್ತದೆ ಪುರುಷನ ಅಪೇಕ್ಷೆಗಿಂತಲೂ ಸ್ತ್ರೀಯಲ್ಲಿ ಮಮತೆಯು ಅಧಿಕವಾಗಿರುತ್ತದೆ ಮನೆ ಹುಡುಗರು ಮಕ್ಕಳು, ಮುಪ್ಪಿನವರು ಹಾಗು ರೋಗಿ ಮೊದಲಾದ ಆಶ್ರಿತ ಜನಗಳನ್ನು ಬಿಟ್ಟು ಅಪೇಕ್ಷಿಸಿದ ಕಡೆಗೆ ಹೋಗಲು ಸ್ತ್ರೀಯರಿಗೆ ಸಹಜವಾಗಿ ಆಗುವುದಿಲ್ಲ ಕೊನೆಯಲ್ಲಿ ಶ್ರೀಮತಿ ಸ್ಟ್ರೇಚೀ" ಇವರು ಸ್ತ್ರೀಯರಲ್ಲಿ ಎಷ್ಟು ಸಹಜಭಾವನೆಗಳಿವೆ ಮತ್ತು ಸಾಮಾಜಿಕ ರೂಢಿಗಳಿವೆ ಇವೆಲ್ಲವೂ ಅಭ್ಯಾಸದ ಫಲಗಳಾಗಿವೆಯೆಂದು ಅಭಿಪ್ರಾಯಪಡುತ್ತಾರೆ ಸ್ತ್ರೀಯರ ಆರ್ಥಿಕ ಸ್ವಾತಂತ್ರ್ಯದ ಪ್ರಶ್ನೆಯು ಬಹಳ ಜಟಿಲವಾದುದಾಗಿದೆ "The future of morals" (ಸದಾಚಾರದ ಭವಿಷ್ಯ) ಎಂಬ ಗ್ರಂಥದಲ್ಲಿ ಇಂಗ್ಲೆಂಡಿನ ಪ್ರಸಿದ್ಧ ವಿದ್ವಾಂಸರಾದ 'ಶ್ರೀ ಜೋಡ್' ರವರು ಹೀಗೆ ಬರೆಯುತ್ತಾರೆ —ಸ್ತ್ರೀಯರು ನೌಕರಿಯ ಮಬ್ಬಿನಲ್ಲಿ ಬಿದ್ದು ನೌಕರಿ ಮತ್ತು ವ್ಯವಸಾಯಕ್ಕೋಸ್ಕರ ಓಡುತ್ತಿದ್ದರು ಆದರೆ ಈಗ ಅವರು ಹಿಂದಕ್ಕೆ ಸರಿಯುತ್ತಿದ್ದಾರೆ ಪುನಃ ಯುದ್ಧದ ದಿನಗಳು ಒದಗಿದುದರಿಂದ ಸ್ತ್ರೀಯರ ಸಲುವಾಗಿ ಎಲ್ಲಾ ಕಾರ್ಯಗಳು ಆರಂಭವಾಗಿ ಹೋದವು ಈಗಾದರೋ ಸಮಾಜವು ಅವರಿಗೆ ಸ್ವಲ್ಪ ಸಂಬಳದಲ್ಲಿಯೇ ಜೀವನವನ್ನು ಸಾಗಿಸುವ ಕೆಲಸವನ್ನೇ ಕೊಡಲು ತಯಾರಿದೆ ದೊಡ್ಡ ದೊಡ್ಡ ಕೆಲಸಗಳಿಗ ದರೋ ಅವರನ್ನು ಕೇಳುವವರಾಗೇ ಇಲ್ಲ ಪುರುಷರ ಸ್ತ್ರೀಯರ ಅಧೀನರಾಗಿ ಕೆಲಸಮಾಡುವುದು ಅವಮಾನವೆಂದು ತಿಳಿಯುತ್ತಾರೆ ವಿಶ್ವವಿದ್ಯಾನಿಲಯಗಳಲ್ಲಿ ಪ್ರತಿವರ್ಷವೂ ಸಾವಿರಾರುಜನ ಸ್ತ್ರೀಯರು ಉಚ್ಚಶಿಕ್ಷಣದಲ್ಲಿ ಉತ್ತೀರ್ಣತೆಯನ್ನು ಹೊಂದುವವರಾಗಿದ್ದಾರೆ ಇದಕ್ಕೋಸ್ಕರ ಎಲ್ಲಿಯೂ ಉಪಯುಕ್ತವಾದ ಕೆಲಸವೇ ದೊರೆಯುವುದಿಲ್ಲ ಕೇವಲ ಲಂಡನ್ ನಗರ ಒಂದರಲ್ಲಿಯೇ ೪೩೦೦೦ ಜನ ಮಧ್ಯಮ ಶಿಕ್ಷಣದ ಸ್ತ್ರೀಯರು ಕೆಲಸವನ್ನು ಹುಡುಕುತ್ತಲಿದ್ದಾರೆ ಇದಕ್ಕೆ ಫಲವಾಗಿ ಅವರಿಗೆ ಮನೆಯ ಕಾರ್ಯಗಳು ಜ್ಞಾಪಕಕ್ಕೆ ಬರುತ್ತವೆ

ವಿವಾಹವನ್ನು ಮಾಡಿಕೊಂಡು ಮನೆಯ ಯಜಮಾನಿಯರಾಗಿ ಆಳುಗಳ ಮೇಲೆ ನೋಡಿಕೊಂಡು ಮನೆಯಲ್ಲಿರುವುದೇ ನೌಕರಿಯ ಬೆನ್ನುಹತ್ತಿ ತಿರುಗುವುದಕ್ಕಿಂತ ಒಳ್ಳೆಯದೆಂದು ಅವರು ಯೋಚಿಸುತ್ತಾರೆ ಈಗ ಪುನರ್ಜಾಗೃತಿಯು ಅವರ ಈ ಭಾವನೆಗಳಲ್ಲಿ ಅನೇಕ ಲಕ್ಷಣಗಳು ಕಂಡು ಬರುತ್ತಿವೆ ಸ್ತ್ರೀಯರಿಗೆ ತಮ್ಮ ಗೃಹಾಲಂಕಾರಗಳು ಪುನಃ ನೆನಪಿಗೆ ಬರಹತ್ತಿವೆ ಪ್ರತಿಯೊಬ್ಬ ಸ್ತ್ರೀಯು ಶೃಂಗಾರ ಸಾಮಗ್ರಿಗಳೂ ಯಾವಾಗಲೂ ಹತ್ತಿರದ ಚೀಲದಲ್ಲಿಯೇ ಇರತಕ್ಕವುಗಳಾಗಿವೆ ಸ್ವಲ್ಪ ಅವಕಾಶ ಸಿಕ್ಕರೆ ಸಾಕು ಅವಳು ತನ್ನ ಮುಖವನ್ನು ಶೃಂಗರಿಸಿಕೊಳ್ಳಲು ಪ್ರಾರಂಭಿಸುತ್ತಾಳೆ ಈ ಚಿಕ್ಕ ಚಿಕ್ಕವಿಷಯಗಳಿಂದ ಗಾಳಿಯು ಯಾವಕಡೆ ಬೀಸುತ್ತದೆಂಬುದು ಗೊತ್ತಾಗುತ್ತದೆ ಇದು ನಡೆಯುವ ಯುದ್ಧದ ಮೊದಲನೇಮಾತಾಗಿದೆ ಈಗ ಯುದ್ಧದಲ್ಲಿ ಅನೇಕ ಪುರುಷರ ಪ್ರಾಣಗಳು ಹೋಗುವ ಕಾರಣ ಸ್ತ್ರೀಯರು ಪುನಃ ದೊಡ್ಡ ಯೋಜನೆಗೊಳಗಾಗಿದ್ದಾರೆ ಬ್ರಿಟನ್ನಿನ ಬೇರೆ ಬೇರೆ ಭಾಗಗಳಲ್ಲಿ ಸ್ತ್ರೀಯರಿಂದ ಭರ್ತಿ ಆಗಲಿಕ್ಕೋಸ್ಕರ ಅಪೀಲಿನ ಜಾರಿಯಾಗುತ್ತಲಿದೆ ಪರಂತು ಯುದ್ಧ ಸಮಾಪ್ತಿಯಾದ ಮೇಲೆ ಈ ಸಾರಿಯೂ ವ್ಯತ್ಯಾಸವನ್ನು ಹೊಂದೇ ಹೊಂದುವುದು ಸ್ತ್ರೀಯರ ಆರ್ಥಿಕ ಸ್ವಾತಂತ್ರ್ಯದ ಪರಿಣಾಮವು ಏನಾಗುತ್ತದೆ ಎನ್ನುವುದರ ದಿಗ್ದರ್ಶನವನ್ನು "ಶ್ರೀಮತಿ ಐರಿನ್ ಸೋಲ್ಟ್ಸ್" ಇವರು ತಮ್ಮ "The free women" (ಸ್ವತಂತ್ರ ಸ್ತ್ರೀ) ಎಂಬ ಗ್ರಂಥದಲ್ಲಿ ತೋರಿಸಿದ್ದಾರೆ ಅವರು ಹೀಗೆ ಬರೆಯುತ್ತಾರೆ ಅಭ್ಯಾಸದ ಜೊತೆಯಲ್ಲಿಯೇ ಹುಡುಗಿಯರಿಗೆ ನೌಕರಿಯ ಚಿಂತೆಯು ಉಂಟಾಗಲು ಪ್ರಾರಂಭವಾಗುತ್ತದೆ. ಯಾರಿಗೆ ನೌಕರಿಯು ದೊರೆಯುತ್ತಾ ಇದೆ ಅವರು ಪುನಃ ಮನೆಯ ಗೊಂದಲದಲ್ಲಿ ಬೀಳಲು ಇಚ್ಛಿಸುವುದಿಲ್ಲ ನಾಲ್ಕು ಕಾಸುಗಳನ್ನು ಸಂಪಾದಿಸಲು ಯೋಗ್ಯರಾದರೊ ಇಲ್ಲವೋ ಆಗ ಅವರ ಪ್ರತಿಯೊಂದು ಮಾತಿನಲ್ಲಿಯೂ, ಅಂದರೆ ವಿವಾಹ ಸಂಬಂಧದಲ್ಲಿ ಮಕ್ಕಳನ್ನು ಹಡೆಯುವುದರಲ್ಲಿ ಅವರ ಪಾಲನ ಪೋಷಣೆಯಲ್ಲಿ, ತಮ್ಮ ಶರೀರವನ್ನು ಉಪಯೋಗಿಸುವುದರಲ್ಲಿ —ಸ್ವಾತಂತ್ರ್ಯವನ್ನು ತೋರಿಸಲು ಸ್ತ್ರೀಯರು ಪ್ರಾರಂಭಿಸುತ್ತಾರೆ ಈ ರೀತಿ ಅವರಲ್ಲಿ ಒಂದುಪ್ರಕಾರದ ವಿದ್ರೋಹ ಭಾವನೆಯು ಉಂಟಾಗುತ್ತದೆ ಅವರು ಯಾವ ಪ್ರಕಾರದ ತೊಂದರೆಗಳನ್ನೂ ಸಹಿಸಲಾರರು ಗೃಹಸ್ಥಧರ್ಮಗಳು ಅವರಲ್ಲಿ ನಷ್ಟವಾಗುತ್ತವೆ ಅವರಿಗೆ ಒಂದುಮಗುವಿಗಿಂತಲೂ ಚಿಕ್ಕ ಮೋಟಾರಿನಲ್ಲಿ ಅಧಿಕವಾಗಿ ಇಚ್ಛೆಯುಂಟಾಗಲು ಪ್ರಾರಂಭವಾಗುತ್ತದೆ ಯಾವಾಗ ಗಂಡಹೆಂಡರಿಬ್ಬರಿಗೂ ಹಣ ಸಂಪಾದಿಸುವ ವ್ಯಸನವು ಉಂಟಾಗುತ್ತದೋ ಆಗ ಮನೆಯು ಹೀನಸ್ಥಿತಿಗೆ ಬರುತ್ತದೆ ಇದರಲ್ಲಿ ಸಂದೇಹವಿಲ್ಲ ಒಂದುಸಮಯ ಗಂಡನಿಗೆ ಒಂದುಸ್ಥಳದಲ್ಲಿ ನೌಕರಿಯು ದೊರೆತರೆ ಹೆಂಡತಿಯು ಮತ್ತೊಂದು ಸ್ಥಳದಲ್ಲಿ ನೌಕರಿಯನ್ನು ಹುಡುಕುತ್ತಿರುತ್ತಾಳೆ ಇದರಿಂದ ಮನೆಯ ಕೆಲಸಗಳನ್ನು ನೋಡಿಕೊಳ್ಳಲು ಇಬ್ಬರಿಗೂ ಅವಕಾಶವೇ ದೊರೆಯುವುದಿಲ್ಲ ಮಕ್ಕಳ ಪಾಲನೆ, ಪೋಷಣವು ಆಳುಗಳ ಮೇಲೆಯೇ ಬೀಳುವದು ಈ ಜೀವನದಲ್ಲಿ ತಾನೆ ಯಾವ ಸುಖವಿದೆ ? ಮತ್ತು ಇದಾದರೊ ಪೂರಾ ಸ್ವತಂತ್ರತೆಯೋ ಅಥವಾ ಪೂರಾ ಪರತಂತ್ರತೆಯೋ ? ಮನೆಯ ಕೆಲಸ ಕಾರ್ಯಗಳನ್ನು ಮಾಡುವುದಾದರೋ ಪರಾಧೀನತೆಯಾಯಿತು, ಮತ್ತು ಆಫೀಸುಗಳಲ್ಲಿ ಅನೇಕ ಘಂಟೆಗಳವರೆಗೆ ಕೆಲಸ ಮಾಡುವುದು ಸ್ವತಂತ್ರತೆಯಾಯಿತಲ್ಲವೆ ? ತಮ್ಮ ಮಕ್ಕಳ ಪಾಲನಪೋಷಣೆಮಾಡುವುದು ಅವರಿಗೆ ಉತ್ತಮ ರೀತಿಯಿಂದ ಶಿಕ್ಷಣ ಕೊಡುವುದಾದರೋ ಸಮಯವನ್ನು ಕಳೆವಹಾಗಾಯಿತು, ಮತ್ತು ಎರಡನೆಯವರ ಮಕ್ಕಳಿಗೆ ದಾಸಿಯಾಗಿರುವುದು ಅಥವಾ ಸ್ಕೂಲುಗಳಿಗೆ ಹೋಗಿ ಅವರಿಗೆ ಕಲಿಸುವುದು ಇದಾದರೋ ಸಮಯದ ಸದುಪಯೋಗವಾದಹಾಗಾಯಿತು! ಶ್ರೀಮದ ಪತಿಯು ಅ! ಸ್ಮಾತ್ ಒಂದು ಕಠಿನ ಮಾತನ್ನಾಡಿದರೂ ಅದನ್ನು ಸಹಿಸಲಾರಳು ಆದರೆ ಆಫೀಸುಗಳಲ್ಲಿ ಮೇಲಿನ ಅಧಿಕಾರಿಗಳ ಮುಂದೆ ಒಂದು ಮಾತನ್ನೂ ಆಡಲು ಸಾಧ್ಯವಿಲ್ಲ ಇದೇ ಏನು ಸ್ವಾತಂತ್ರ್ಯತೆಯು? ಇಂಥ ಸ್ವಾತಂತ್ರ್ಯಕ್ಕೋಸ್ಕರವೇ ಇಷ್ಟು ಗೋಂದಲವೇ ? ಸ್ತ್ರೀಯರು ನೌಕರಿಯ ಬೆನ್ನುಹತ್ತುವುದರಿಂದ ಮನೆಯು ಕೆಟ್ಟುಹೋಗುತ್ತಾ ಇದೆ ಇದರ ಅನುಭವವು ಪಾಶ್ಚಾತ್ಯ ದೇಶಗಳಲ್ಲಿಯೂ ಉಂಟಾಗಿದೆ ಇಂಗ್ಲೆಂಡಿನಲ್ಲಿ ವಿವಾಹಿತ ಸ್ತ್ರೀಯರು ಶಿಕ್ಷಣ ಇಲ್ಲದೆ ಬೇರೆ ಭಾಗಗಳಲ್ಲಿ ಕೆಲಸಮಾಡಲಾರರು ಕೆಲವು ನಗರಗಳ ಮುನಿಸಿಪಾಲಿಟಿಯಲ್ಲಿ ವಿವಾಹವಾದನಂತರ ಸ್ತ್ರೀಯರನ್ನು ಕೆಲಸದಿಂದ ಹಿಂದಕ್ಕೆ ಕಳುಹಿಸುವ ನಿಯಮವು ಜಾರಿಯಲ್ಲಿದೆ ಸುಧಾರಕರ ದೃಷ್ಟಿಯಲ್ಲಿ ಇದು ಸಮಾಜದ ಸಂಕೀರ್ಣತೆ ಅಥವಾ ಕೇವಲ ರೂಢಿಪ್ರೇಮವಾಗಿದೆ (ಸಶೇಷ)

ಸಮಾಜಸುಧಾರಣೆ

ದರ್ಗನಹಳ್ಳಿ ಗ್ರಾಮದಲ್ಲಿ ಕಾರಣಾಂತರದಿಂದ ಭಕ್ತ ಮಾಹೇಶ್ವರರಲ್ಲಿ ಒಡಕು ಉತ್ಪನ್ನವಾಗಿತ್ತು ಅದನ್ನು ಹೋಟಗೀ ಶ್ರೀಗಳು ನಿವಾರಣೆಗೊಳಿಸಿದರು ಲಕ್ಷ್ಮೋ ಪಾಟೀಲ ಇವರ ಚಿ|| ಶಂಕರಪ್ಪನೆಂಬವನು ಸಮಾಜಕ್ಕೆ ಅಪಮಾನವಾಗುವ ಶಬ್ದವನ್ನು ಪ್ರಯೋಗಿಸಿದ್ದುದಕ್ಕಾಗಿ ಸದರಿ ಶಂಕರಪ್ಪನಿಗೆ ಶ್ರೀಗಳು ೧೧ ರೂ ದಂಡವನ್ನು ವಿಧಿಸಿ ಸಮಾಜದಲ್ಲಿ ಸಂಪೂರ್ಣ ಶಾಂತಿಯನ್ನು ನೆಲೆಗೊಳಿಸಿದರು ದರ್ಗನಹಳ್ಳಿಯಲ್ಲಿಯ ಸರ್ವ ಜನರೂ ಒಮ್ಮನಸ್ಸಿನಿಂದ ಈ ಕಾರ್ಯವನ್ನು ನೆರವೇರಿಸಿದರು

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯಸೇವಾಸಂಘದ,
ಸೆಕ್ರೆಟರಿ, ದರ್ಗನಹಳ್ಳಿ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.